ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

(B) 025213

ಅಧಿಕೃತ ವರದಿ

OFFICIAL REPORT

ಆರನೆಯ ಅಧಿವೇಶನ

Sixth Session

ಸಂಪುಟ ೧೧ - (ಕ್ರಮಾಂಕ ೧ರಿಂದ ೨)

Volume XI - (No. 1 to 2)

(೧೧ನೇ ಸೆಪ್ಟೆಂಬರ್ ೧೯೯೭ ಮತ್ತು ೧೨ನೇ ಸೆಪ್ಟೆಂಬರ್ ೧೯೯೭)

(11th September 1997 and 12th September 1997)

ಕರ್ನಾಟಕ ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು.
Karnataka Legislature Secretariat Bangalore

ವಿಷಯಾನುಕ್ರಮಣಿಕೆ

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

ಸಂಪುಟ ೧೧ - (ಕ್ರಮಾಂಕ ೧ರಿಂದ ೨)

(೧೧ನೇ ಸೆಪ್ಟೆಂಬರ್ ೧೯೯೭ ಮತ್ತು ೧೨ನೇ ಸೆಪ್ಟೆಂಬರ್ ೧೯೯೭)

ಗುರುವಾರ, ೧೧ನೇ ಸೆಪ್ಟೆಂಬರ್ ೧೯೯೭

ಸಾಯನ ಸೌರ ಭಾದ್ರಪದ ೧೯೧೯ (ಶಕ)

1) ಸಭೆಯ ಮುಂದಿಡಲಾದ ಕಾಗದ ಪತ್ರಗಳು

2) ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು:-

ಅ) ಹೆಲ್ಮೆಟ್ ಕಡ್ಡಾಯ ಮಾಡುವುದರಿಂದ ಆಗತಕ್ಕ ತೊಂದರೆ

- ಶ್ರೀ ಎಸ್.ಸುರೇಶ್‌ಕುಮಾರ್

ಶ್ರೀ ವಾಟಾಳ್ ನಾಗರಾಜ್

ಶ್ರೀ ಪಿ.ಜಿ.ಆರ್.ಸಿಂಧ್ಯಾ
(ಸಾರಿಗೆ ಸಚಿವರು)

ಆ) ಟ್ರಾನ್ಸ್‌ಪೋರ್ಟ್ ಸಬ್ಸಿಡಿಯನ್ನು ಕಬ್ಬು ಸರಬರಾಜು ಮಾಡಿದ ರೈತರಿಗೆ ನೀಡುವ ಬಗ್ಗೆ

- ಶ್ರೀ ಎಸ್.ಪಿ.ಮುದ್ದಹನುಮೇಗೌಡ

ಶ್ರೀ ಉಮೇಶ್ ವಿ.ಕತ್ತಿ
(ಸಕ್ಕರೆ ಸಚಿವರು)

ಇ) ಹೊಸದುರ್ಗದ ವೇದಾವತಿ ನದಿಯಿಂದ ಮರಳು ಸಾಗಿಸುತ್ತಿರುವ ಬಗ್ಗೆ

- ಶ್ರೀ ಟಿ.ಹೆಚ್.ಬಸವರಾಜ್

ಈ) ಚಿಕ್ಕೋಡಿ ಜಿಲ್ಲೆಯನ್ನಾಗಿ ಪರಿವರ್ತನೆ 8

- ಶ್ರೀ ಪ್ರಕಾಶ್ ಬಿ.ಹುಕ್ಕೇರಿ

ಉ) ತಿಪಟೂರಿನಲ್ಲಿ ಕೊಬ್ಬರಿ ವ್ಯಾಪಾರದಲ್ಲಿ ತೆರಿಗೆ ಕಳ್ಳತನವಾಗುತ್ತಿರುವುದು 12

- ಶ್ರೀ ಜೆ.ಸಿ.ಮಾಧುಸ್ವಾಮಿ

ಊ) ಹುಬ್ಬಳ್ಳಿಯ ಲ್ಯಾಮಿಂಗ್ಟನ್ ಹೈಸ್ಕೂಲಿನಲ್ಲಿ ಶಿಕ್ಷಕರಿಗೆ ಅನ್ಯಾಯ 13

- ಶ್ರೀ ಅಶೋಕ್ ಕಾಟ್ವೆ

ಎ) ರಾಜ್ಯದಲ್ಲಿ ಒಂದಂಕಿ ಲಾಟರಿ ಮತ್ತು ಮಟ್ಕಾ ನಡೆಯುವ ಬಗ್ಗೆ 13

- ಶ್ರೀ ಕೆ.ಪ್ರತಾಪ್‌ಚಂದ್ರಶೆಟ್ಟಿ

ಶ್ರೀ ಎಸ್.ಸುರೇಶ್‌ಕುಮಾರ್

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ

ಶ್ರೀ ಸಿದ್ಧರಾಮಯ್ಯ
(ಉಪಮುಖ್ಯಮಂತ್ರಿಗಳು)

ಏ) ಅರಕಲಗೂಡು ತಾಲ್ಲೂಕಿನಲ್ಲಿ ದಶಲಕ್ಷ ಬಾವಿ ಯೋಜನೆಯಲ್ಲಿ ಆಗಿರುವ ಅವ್ಯವಹಾರಗಳು 21

- ಶ್ರೀ ಎ.ಟಿ.ರಾಮಸ್ವಾಮಿ

ಐ) ವರಾಹಿ ಯೋಜನೆಯಲ್ಲಿ ಜಮೀನು ಕಳೆದುಕೊಂಡವರಿಗೆ ಪುನರ್‌ವಸತಿ 23

- ಶ್ರೀ ಅರಗ ಜ್ಞಾನೇಂದ್ರ

ಒ) ಹೊನ್ನಾವರ ತಾಲ್ಲೂಕಿನ ಆರಾಧನಾ ಸಮಿತಿಯ ಪಟ್ಟಿಯನ್ನು ತಿರಸ್ಕರಿಸಿರುವುದು 24

- ಶ್ರೀ ಶಿವಾನಂದ ನಾಯಕ್

3) ಪ್ರಕಟಣೆ:- 26

ವಿಷಯ:- ಆಂಧ್ರ ಪ್ರದೇಶ ವಿಧಾನಸಭೆಯ ಉಪಾಧ್ಯಕ್ಷರಿಂದ ಸದನದ ಕಾರ್ಯಕಲಾಪ ವೀಕ್ಷಣೆ. 26

4) ಗಮನ ಸೆಳೆಯುವ ಸೂಚನೆ: 27

ವಿಷಯ:- ದಾವಣಗೆರೆಯ ದೊಡ್ಡಬಾತಿ ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ. 27

- ಶ್ರೀ ಆಯನೂರು ಮಂಜುನಾಥ್

ಶ್ರೀ ಬಿ.ಎಸ್.ಯಡಿಯೂರಪ್ಪ

ಶ್ರೀ ಎಸ್.ಎ.ರವೀಂದ್ರನಾಥ್

ಶ್ರೀ ಉಮೇಶ್ ವಿ.ಕತ್ತಿ
(ಸಕ್ಕರೆ ಸಚಿವರು)

5) ನಿಯಮ 69ರ ಮೇರೆಗೆ: 38

ವಿಷಯ: ಅ) ರಾಜ್ಯದಲ್ಲಿ ಕಬ್ಬಿಗೆ ನ್ಯಾಯಬೆಲೆಯನ್ನು ನಿಗದಿ 38

- ಶ್ರೀ ಬಿ.ಎಸ್.ಯಡಿಯೂರಪ್ಪ

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ

ಶ್ರೀ ಎಸ್.ಎ.ರವೀಂದ್ರನಾಥ್

ಶ್ರೀ ಜಿ.ಶಂಕರೇಗೌಡ

ಶ್ರೀ ಎಸ್.ಕೃಷ್ಣಪ್ಪ

ಶ್ರೀ ಬೆಳಮಗಿ ರೇವುನಾಯಕ್

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

ಶ್ರೀ ಉಮೇಶ್ ವಿ.ಕತ್ತಿ
(ಸಕ್ಕರೆ ಸಚಿವರು)

ಅ) ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಜಲ ಮತ್ತು ವಾಯು ಮಾಲಿನ್ಯ ತಡೆ 72

- ಶ್ರೀ ಯು.ಆರ್.ಸಭಾಪತಿ

ಶ್ರೀ ಕುಂಬ್ಳೆ ಸುಂದರ್‌ರಾವ್

ಶ್ರೀ ಆರ್.ವಿ.ದೇಶಪಾಂಡೆ
(ಬೃಹತ್ ಕೈಗಾರಿಕೆ ಸಚಿವರು)

6) ಮಂತ್ರಿಗಳ ಹೇಳಿಕೆ: 102

ಹುಬ್ಬಳ್ಳಿಯ ಲೆಮಿಂಗ್‌ಟನ್ ಶಾಲೆಯಲ್ಲಿ ಶಿಕ್ಷಕರ ನೇಮಕಾತಿ 102

- ಶ್ರೀ ಎಸ್.ಎಸ್.ಪಾಟೀಲ್
(ಸಹಕಾರ ಸಚಿವರು)

7) ಶಾಸನ ರಚನೆ: 103

ಎ) ಪರ್ಯಾಲೋಚನಾ ಪ್ರಸ್ತಾವ: 103

ಅ) ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ವಿಧೇಯಕ, 1997 103

ಶ್ರೀ ಸಿದ್ಧರಾಮಯ್ಯ
(ಉಪಮುಖ್ಯಮಂತ್ರಿಗಳು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

ಶ್ರೀ ವಾಟಾಳ್ ನಾಗರಾಜ್

ಶ್ರೀ ಜಿ.ವಿ.ಶ್ರೀರಾಮರೆಡ್ಡಿ

(ಅಂಗೀಕರಿಸಲಾಯಿತು)

ಈ) ಕರ್ನಾಟಕ ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) (ತಿದ್ದುಪಡಿ) ವಿಧೇಯಕ, 1997. 117

- ಶ್ರೀ ಸಿದ್ದರಾಮಯ್ಯ
(ಉಪ ಮುಖ್ಯಮಂತ್ರಿಗಳು)

(ಅಂಗೀಕರಿಸಲಾಯಿತು)

ಇ) ಕರ್ನಾಟಕ ಪಂಚಾಯತ್‌ರಾಜ್ (3ನೇ ತಿದ್ದುಪಡಿ) ವಿಧೇಯಕ, 1997 119

- ಶ್ರೀ ಎಂ.ಪಿ.ಪ್ರಕಾಶ್
(ಗ್ರಾಮೀಣಾಭಿವೃದ್ಧಿ ಸಚಿವರು)

ಶ್ರೀ ಎಂ.ವೈ.ಘೋರ್ಪಡೆ

ಶ್ರೀ ಅರಗ ಜ್ಞಾನೇಂದ್ರ

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ

ಶ್ರೀ ಜಿ.ವಿ.ಶ್ರೀರಾಮರೆಡ್ಡಿ

ಶ್ರೀ ವಾಟಾಳ್ ನಾಗರಾಜ್

ಶ್ರೀ ಜೆ.ಸಿ.ಮಾಧುಸ್ವಾಮಿ

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ

ಶ್ರೀ ಹೆಚ್.ಶಿವಪ್ಪ

ಶ್ರೀ ಹೆಚ್.ಡಿ.ಬಸವರಾಜ್

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

ಶ್ರೀ ಬಿ.ಎಸ್.ಯಡಿಯೂರಪ್ಪ

(ಅಂಗೀಕರಿಸಲ್ಪಟ್ಟಿತು)

8) ಪ್ರಕಟಣೆಗಳು 208

ಗುರುವಾರ, ೧೧ನೇ ಸೆಪ್ಟೆಂಬರ್ ೧೯೯೭

ಸಾಯನ ಸೌರ ಭಾದ್ರಪದ ೧೯೧೮ (ಶಕ)

1) ಸಭೆಯ ಮುಂದಿಡಲಾದ ಕಾಗದ ಪತ್ರಗಳು 209

2) ವರದಿಯನ್ನೊಪ್ಪಿಸುವುದು 209

3) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು: 210

ಅ) ಅಪ್ಪರ್ ಕೃಷ್ಣಾ ಬಗ್ಗೆ 210

- ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ

ಆ) ಕೊಡಲಿಪೇಟೆ ಸೊಸೈಟಿಯಲ್ಲಿ ಅವ್ಯವಹಾರಗಳು. 211

- ಶ್ರೀ ಬಿ.ಬಿ.ಶಿವಪ್ಪ

ಶ್ರೀ ಎಂ.ಪಿ.ಅಪ್ಪಚ್ಚುರಂಜನ್

ಇ) ಹುಣಸೂರು ವಿಧಾನಸಭಾ ಕ್ಷೇತ್ರದಲ್ಲಿ ಖಾಯಂ ಸಾಗುವಳಿ ಪತ್ರವನ್ನು ನೀಡದೇ ಇರುವ ಬಗ್ಗೆ 213

- ಶ್ರೀ ಸಿ.ಹೆಚ್.ವಿಜಯಶಂಕರ್

ಈ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಜವಳಿನಗರ ಸ್ಥಾಪನೆ 215

- ಶ್ರೀ ಜಗದೀಶ್ ಶೆಟ್ಟರ್

ಶ್ರೀ ಅಶೋಕ್ ಕಾಟ್ವೆ

ಉ) ಮಹದೇವ ಜವಳಿ ಮಿಲ್ ಮುಚ್ಚದೇ ಇರಲು ಕ್ರಮ 216

- ಶ್ರೀ ಅಶೋಕ್ ಕಾಟ್ವೆ

ಊ) ಮೈಸೂರಿನಲ್ಲಿ ಒಂದು ಆಕ್ಸಿಡೆಂಟಲ್ ಆಸ್ಪತ್ರೆಯನ್ನು ತೆರೆಯುವ ಬಗ್ಗೆ. 217

- ಶ್ರೀ ಇ.ಮಾರುತಿರಾವ್ ಪವಾರ್

ಎ) ಮೈಸೂರಿನಲ್ಲಿ ಕೆ.ಆರ್.ಆಸ್ಪತ್ರೆ ಕಟ್ಟಡ ನಿರ್ಮಾಣ 217

- ಶ್ರೀ ಹೆಚ್.ಎಸ್.ಶಂಕರ್‌ಲಿಂಗೇಗೌಡ

ಏ) ಕುಣಿಗಲ್ ಪ್ರಥಮದರ್ಜೆ ಕಾಲೇಜಿನಲ್ಲಿ ವಿಜ್ಞಾನ ಉಪನ್ಯಾಸಕರ ಕೊರತೆ 218

- ಶ್ರೀ ಎಸ್.ಪಿ.ಮುದ್ದಹನುಮೇಗೌಡ

ಐ) ಕುಂದಾಪುರ ವಿಧಾನಸಭಾ ಕ್ಷೇತ್ರದಲ್ಲಿ ನಡೆದ ಕೊಲೆ ಪ್ರಕರಣಗಳ ಬಗ್ಗೆ 219

- ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ

ಒ) ರಾಜ್ಯದಲ್ಲಿ ವಿಲೇಜ್ ನೋಟಿಫೈ ಆಗದೇ ಇರುವುದರಿಂದ ಗೇಣಿದಾರರಿಗೆ, ಆಗುತ್ತಿರುವ ತೊಂದರೆ. 220

- ಶ್ರೀ ಟಿ.ಬಿ.ಜಯಚಂದ್ರ

ಓ) ಬನ್ನೇರುಘಟ್ಟ ರಸ್ತೆಯಲ್ಲಿ ಖಾಸಗಿಯವರ ಜಾಗದಲ್ಲಿ ನಿರ್ಮಿಸಿದ್ದ ಕಟ್ಟಡಗಳನ್ನು ಒಡೆದು ಹಾಕಿರುವುದು. 221

- ಶ್ರೀ ರಾಮಲಿಂಗಾರೆಡ್ಡಿ

ಶ್ರೀ ಹೆಚ್.ಎನ್.ನಂಜೇಗೌಡ

ಶ್ರೀ ವಾಟಾಳ್ ನಾಗರಾಜ್

ಶ್ರೀ ಎಂ.ಸಿ.ನಾಣಯ್ಯ
(ಕಾನೂನು ಸಚಿವರು)

ಔ) ಬೆಂಗಳೂರಿನ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಅಸರ್ಮಪಕ ನೀರುಸರಬರಾಜು 226

- ಶ್ರೀ ಪಿ.ಹೆಚ್.ಪ್ರಕಾಶ್

ಕ) ಶಿಕಾರಿಪುರ ವಿಧಾನಸಭಾ ಕ್ಷೇತ್ರದಲ್ಲಿನ ಫಸ್ಟ್ ಗ್ರೇಡ್ ಕಾಲೇಜಿನಲ್ಲಿ ಉಪನ್ಯಾಸಕರನ್ನು ನೇಮಿಸುವ ಬಗ್ಗೆ 227

- ಶ್ರೀ ಬಿ.ಎಸ್.ಯಡಿಯೂರಪ್ಪ

ಖ) ಬೈಂದೂರಿನಲ್ಲಿರುವ ವಿಜ್ಞಾನ ಕಾಲೇಜಿನಲ್ಲಿ ಉಪನ್ಯಾಸಕರುಗಳನ್ನು ನೇಮಿಸುವ ಕುರಿತು 229

- ಶ್ರೀ ಐ.ಎಂ.ಜಯರಾಮಶೆಟ್ಟಿ

ಗ) ಚಾಮರಾಜನಗರದಲ್ಲಿನ ಫಸ್ಟ್ ಗ್ರೇಡ್ ಕಾಲೀಜಿಗೆ ಉಪನ್ಯಾಸಕರ ನೇಮಕಾತಿ ಕುರಿತು 229

- ಶ್ರೀ ಎ.ಆರ್.ಕೃಷ್ಣಮೂರ್ತಿ

ಘ) ಚಿಕ್ಕೋಡಿಯನ್ನು ಜಿಲ್ಲೆಯನ್ನಾಗಿ ಪರಿವರ್ತಿಸುವ ಬಗ್ಗೆ 232

- ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ

ಶ್ರೀ ಸುಭಾಷ್ ಶ್ರೀಧರ್ ಜೋಷಿ

ಚ) ಗೋಕಾಕನ್ನು ಜಿಲ್ಲೆಯನ್ನಾಗಿ ಮಾಡುವ ಬಗ್ಗೆ. 234

- ಶ್ರೀ ಚಂದ್ರಶೇಖರ ಸದಾಶಿವ ನಾಯಕ್

ಶ್ರೀ ವಿ.ಎಸ್.ಕೌಜಲಗಿ

ಛ) ರಾಜ್ಯದ ಬಯಲುಸೀಮೆ ಹೈದರಾಬಾದ್-ಕರ್ನಾಟಕ ಮತ್ತು ಮಲೆನಾಡು ಅಭಿವೃದ್ಧಿ ಮಂಡಳಿಗಳಿಗೆ ಹೆಚ್ಚಿನ ಹಣ ಬಿಡುಗಡೆ 238

- ಶ್ರೀ ಜಿ.ವಿ.ಶ್ರೀರಾಮರೆಡ್ಡಿ

ಶ್ರೀ ಡಿ.ಆರ್.ಪಾಟೀಲ್

ಶ್ರೀ ಜೆ.ಸಿ.ಮಾಧುಸ್ವಾಮಿ

ಶ್ರೀ ಆರ್.ಜಿ.ವೆಂಕಟಾಚಲಯ್ಯ

ಶ್ರೀ ಎಸ್. ಎ. ರವೀಂದ್ರನಾಥ್

ಶ್ರೀ ಜಿ. ಚಂದ್ರಣ್ಣ

ಶ್ರೀ ಆರ್. ಶ್ರೀನಿವಾಸ್

ಶ್ರೀಮತಿ ಎನ್. ಜ್ಯೋತಿರೆಡ್ಡಿ

ಶ್ರೀ ಹೆಚ್. ಎನ್. ನಂಜೇಗೌಡ

ಶ್ರೀ ಆರ್. ನಾರಾಯಣ್

ಶ್ರೀ ಕಾಗೋಡು ತಿಮ್ಮಪ್ಪ

ಶ್ರೀ ಎಂ. ಮಲ್ಲಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

ಶ್ರೀ ಸಿದ್ಧರಾಮಯ್ಯ
(ಉಪ ಮುಖ್ಯಮಂತ್ರಿಗಳು)

ಶ್ರೀ ಕೆ. ವೆಂಕಟೇಶ್
(ಕಾಡಾ ಸಚಿವರು)

ಜ) ರಾಜ್ಯ ರಸ್ತೆ ಸಾರಿಗೆ ಬಸ್ ದರಗಳನ್ನು ಏರಿಕೆ 257

- ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

ಶ್ರೀ ಬಿ. ಎಸ್. ಯಡಿಯೂರಪ್ಪ

ಶ್ರೀ ಜಿ. ವಿ. ಶ್ರೀರಾಮರೆಡ್ಡಿ

ಶ್ರೀ ಹೆಚ್. ಎನ್. ನಂಜೇಗೌಡ

ಶ್ರೀ ಪಿ. ಜಿ. ಆರ್. ಸಿಂಧ್ಯಾ
(ಸಾರಿಗೆ ಸಚಿವರು)

ಶ್ರೀ ಜೆ. ಹೆಚ್. ಪಟೇಲ್
(ಮುಖ್ಯಮಂತ್ರಿಗಳು)

ಝ) ಕಂಠೀರವ ಸ್ಟೇಡಿಯಂ ಬಳಿ ಇರತಕ್ಕ ಜಾಗವನ್ನು ಮಲ್ಯ ಆಸ್ಪತ್ರೆಗೆ ನೀಡಿರುವ ಬಗ್ಗೆ 271

- ಶ್ರೀ ವಾಟಾಳ್ ನಾಗರಾಜ್

ಶ್ರೀ ಅಜಯಕುಮಾರ್ ಸರ್‌ನಾಯಕ್ (ಕ್ರೀಡಾ ಸಚಿವರು).

ಶ್ರೀ ಎಸ್.ಸುರೇಶ್‌ಕುಮಾರ್

ಶ್ರೀ ಬಿ.ಬಿ.ಶಿವಪ್ಪ

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು)

ಟ) ಏಕ ಹುದ್ದೆಯನ್ನು ಭರ್ತಿ ಮಾಡುವಾಗ ಮೀಸಲಾತಿಯನ್ನು ಅನುಸರಿಸುವುದು 281

- ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು)

ಶ್ರೀ ಹೆಚ್.ಡಿ.ಬಸವರಾಜ್

ಶ್ರೀಮತಿ ಪ್ರಮೀಳಾ ನೇಸರ್ಗಿ

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಸಚಿವರು)

4) ಶಾಸನ ರಚನೆ 303

ಎ) ವಿಧೇಯಕ ಮಂಡನೆ: 303

ಅ) ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳು (ತಿದ್ದುಪಡಿ) ವಿಧೇಯಕ, 1997 303

ಆ) ಕರ್ನಾಟಕ ತೆರಿಗೆ ಕಾನೂನುಗಳ (2ನೇ ತಿದ್ದುಪಡಿ) ವಿಧೇಯಕ 1997 304

ಇ) ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳು (ತಿದ್ದುಪಡಿ) ವಿಧೇಯಕ 1997. 304

ಬಿ) ಪರ್ಯಾಲೋಚನಾ ಪ್ರಸ್ತಾವ 305

ಅ) ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳು (ತಿದ್ದುಪಡಿ) ವಿಧೇಯಕ, 1997 305

- ಶ್ರೀ ಎಂ.ಸಿ.ನಾಣಯ್ಯ
(ಕಾನೂನು ಸಚಿವರು)

(ಅಂಗೀಕರಿಸಲಾಯಿತು)

ಆ) ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳು (ತಿದ್ದುಪಡಿ) ವಿಧೇಯಕ, 1997. 307

- ಶ್ರೀ ಎಂ.ಸಿ.ನಾಣಯ್ಯ
(ಕಾನೂನು ಸಚಿವರು)

(ಅಂಗೀಕರಿಸಲಾಯಿತು)

ಇ) ಕರ್ನಾಟಕ ತೆರಿಗೆ ಕಾನೂನುಗಳು (2ನೇ ತಿದ್ದುಪಡಿ) ವಿಧೇಯಕ 1997 310

- ಶ್ರೀ ಸಿದ್ಧರಾಮಯ್ಯ
(ಉಪಮುಖ್ಯಮಂತ್ರಿಗಳು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

ಶ್ರೀಮತಿ ಪ್ರಮೀಳಾ ನೇಸರ್ಗಿ

ಈ) ಕರ್ನಾಟಕ ಶಿಕ್ಷಣ (ತಿದ್ದುಪಡಿ) ವಿಧೇಯಕ, 1996 316

- ಶ್ರೀ ಹೆಚ್.ಜಿ.ಗೋವಿಂದೇಗೌಡ
(ಶಿಕ್ಷಣ ಸಚಿವರು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

ಶ್ರೀಮತಿ ಪ್ರಮೀಳಾ ನೇಸರ್ಗಿ

ಶ್ರೀ ಕಾಗೋಡು ತಿಮ್ಮಪ್ಪ

ಊ) ಕರ್ನಾಟಕ ಹೆದ್ದಾರಿಗಳ (ತಿದ್ದುಪಡಿ) ವಿಧೇಯಕ, 1997 323

- ಶ್ರೀ ಸಿ.ಎಂ.ಉದಾಸಿ
(ಲೋಕೋಪಯೋಗಿ ಸಚಿವರು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

ಶ್ರೀಮತಿ ಪ್ರಮೀಳಾ ನೇಸರ್ಗಿ

ಶ್ರೀ ವಾಟಾಳ್ ನಾಗರಾಜ್

ಶ್ರೀ ಹೆಚ್.ಎನ್.ನಂಜೇಗೌಡ

ಶ್ರೀ ಎಂ.ವೀರಪ್ಪ ಮೊಯಿಲಿ

ಶ್ರೀ ಸಿ.ಎಚ್.ವಿಜಯಶಂಕರ್

ಶ್ರೀ ಜೆ.ಹೆಚ್.ಪಟೇಲ್
(ಮುಖ್ಯಮಂತ್ರಿಗಳು)

(ಮುಂದೂಡಲಾಯಿತು)

ಎ) ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ 1997 357

ಏ) ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ 1997 359

- ಶ್ರೀ ಎಸ್.ಎಸ್.ಪಾಟೀಲ್
(ಸಹಕಾರ ಸಚಿವರು)

ಶ್ರೀ ಹೆಚ್.ಎನ್.ನಂಜೇಗೌಡ

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

ಶ್ರೀ ಪಾಟಾಳ್ ನಾಗರಾಜ್

(ಮುಂದೂಡಲಾಯಿತು)

ಐ) ಕರ್ನಾಟಕ ಗಿರವಿದಾರರ (ತಿದ್ದುಪಡಿ) ವಿಧೇಯಕ, 1997 — 370

- ಶ್ರೀ ಎಸ್.ಎಸ್.ಪಾಟೀಲ್
(ಸಹಕಾರ ಸಚಿವರು)

(ಅಂಗೀಕರಿಸಲಾಯಿತು)

ಒ) ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕ, 1997 — 374

- ಶ್ರೀ ಎಸ್.ಎಸ್.ಪಾಟೀಲ್
(ಸಹಕಾರ ಸಚಿವರು)

5) ಪ್ರಕಟಣೆ — 379

6) ಹೇಳಿಕೆ — 380

ಅ) ಶ್ರೀ ಬಿ.ಸೋಮಶೇಖರ್‌ರವರು ಉನ್ನತ ಶಿಕ್ಷಣ ಸಚಿವರ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಗ್ಗೆ — 380

ಆ) ಆರಕಲಗೂಡು ತಾಲ್ಲೂಕಿನಲ್ಲಿ ದಶಲಕ್ಷ ಬಾವಿಗಳಿಗೆ ಸಂಬಂಧಪಟ್ಟಂತೆ ಹಣ ಪಾವತಿ. — 398

- ಶ್ರೀ ಸಿ.ಭೈರೇಗೌಡ
(ಕೃಷಿ ಸಚಿವರು)

7) ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಕೈಗೊಂಡಿರುವ ವಿವಿಧ ಯೋಜನೆಗಳು — 403

- ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

ಶ್ರೀ ಕೆ.ಎನ್.ನಾಗೇಗೌಡ
(ಭಾರಿ ನೀರಾವರಿ ಸಚಿವರು)

8) ಗಮನ ಸೆಳೆಯುವ ಸೂಚನೆ 412

ಬೀದರ್ ತಾಲ್ಲೂಕಿನ ಕಸಬಾ ಹೋಬಳಿ ಹಲಗಗೇರಿ ಗ್ರಾಮದ ಸ.ನಂ.57, 57ಎ, 59, 61, 85 ಇಲ್ಲಿನ ಸರ್ಕಾರಿ ಜಮೀನನ್ನು ಪ್ರಭಾವಿ ವ್ಯಕ್ತಿಗಳು ಮಾರಾಟ ಮಾಡುತ್ತಿರುವ ವಿಷಯ. 412

- ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ

ಶ್ರೀ ಎಂ.ಸಿ.ನಾಣಯ್ಯ
(ಕಾನೂನು ಸಚಿವರು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

9) ಕೋಲಾರ ಜಿಲ್ಲೆ ಪಂಚಾಯಿತಿಯಲ್ಲಿ 1993-94, 1994-95, 1995-96 ಈ ಮೂರು ಆರ್ಥಿಕ ವರ್ಷಗಳಲ್ಲಿ ಆರೋಗ್ಯ ಇಲಾಖೆಯಲ್ಲಿ ಸುಮಾರು ಎರಡು ಕೋಟಿ ರೂಪಾಯಿಗಳ ದುರುಪಯೋಗ ಮಾಡಿರುವ ವಿಚಾರ. 426

- ಶ್ರೀ ಜೆ.ವಿ.ಶ್ರೀರಾಮರೆಡ್ಡಿ

ಶ್ರೀ ಹೆಚ್.ಸಿ.ಮಹದೇವಪ್ಪ
(ಆರೋಗ್ಯ ಸಚಿವರು)

10) ಪ್ರಕಟಣೆಗಳು 434

11) ಸದನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ 437

12) ಅನುಬಂಧ I, II, III, 440-481

ಕರ್ನಾಟಕ ವಿಧಾನಸಭೆ

ಗುರುವಾರ 11ನೇ ಸೆಪ್ಟೆಂಬರ್ 1997ರಂದು ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಗ್ಗೆ 10.40 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು: (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೇ, ನಾವು ಬಯಲು ಸೀಮೆಯ ಅಭಿವೃದ್ಧಿಯ ಬಗ್ಗೆ ಒಂದು ನಿಲುವಳಿಯ ಸೂಚನೆಯನ್ನು ಕಳುಹಿಸಿದ್ದೇವೆ. ನಮಗೆ ಚರ್ಚೆಯನ್ನು ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು: ಆಯಿತು ಆಮೇಲೆ ನೋಡೋಣ.

ಶ್ರೀ ವಾಟಾಳ್ ನಾಗರಾಜ್: ಚನ್ನರಾಯಪಟ್ಟಣದ ಬಗ್ಗೆ ಒಂದು ಹೇಳಿಕೆಯನ್ನು ಕೊಡುತ್ತೇನೆಂದು ಹೇಳಿದ್ದರು.

ಅಧ್ಯಕ್ಷರು: ನಿನ್ನೆಯ ದಿವಸವೇ ಹೇಳಿಕೆಯನ್ನು ಮಾಡಿದ್ದಾರೆ.

1) ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಕಾರ್ಯದರ್ಶಿ: ಮಾನ್ಯ ಅಧ್ಯಕ್ಷರೇ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ''ಕರ್ನಾಟಕ ಸಿನಿಮಾಗಳ (ನಿಯಂತ್ರಣ) (ತಿದ್ದುಪಡಿ) ವಿಧೇಯಕ, 1997ನ್ನು ಸಭೆಯ ಮುಂದೆ ಮಂಡಿಸುತ್ತೇನೆ.

2) ಅಧ್ಯಕ್ಷರ ಅಪ್ಪಣೆ ಮೇರೆಗೆ

ಹೆಲ್ಮೆಟ್ ಕಡ್ಡಾಯ ಮಾಡುವುದರಿಂದ ಆಗತಕ್ಕ ತೊಂದರೆ,

+ ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ ಕ್ಷೇತ್ರ): ಮಾನ್ಯ ಅಧ್ಯಕ್ಷರೇ, ಬಹಳ ಮಹತ್ವವಾದಂತಹ ವಿಷಯವನ್ನು ನಾನು ಮೂರು ನಾಲ್ಕು ನಿಮಿಷಗಳಲ್ಲಿ ಪ್ರಸ್ತಾಪವನ್ನು ಮಾಡುವುದಕ್ಕೆ ಇಷ್ಟ ಪಡುತ್ತೇನೆ. ಅಕ್ಟೋಬರ್ 2ನೇ ತಾರೀಖು ನಾವು ಗಾಂಧಿ ಜಯಂತಿಯನ್ನು ಆಚರಿಸುತ್ತೇವೆ. ಆವತ್ತೇ ಕರ್ನಾಟಕದಲ್ಲಿ ಹೆಲ್ಮೆಟ್ ಜಯಂತಿಯು ಪ್ರಾರಂಭವಾಗುತ್ತಿದೆ. ಒಂದು ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ದ್ವಿಚಕ್ರದಲ್ಲಿ ಪ್ರಯಾಣಿಸುವವರು ಎಲ್ಲರೂ ಕೂಡ ಹೆಲ್ಮೆಟನ್ನು ಧರಿಸಬೇಕೆಂದು ಆದೇಶವನ್ನು ಕೊಟ್ಟುಬಿಟ್ಟಿದ್ದಾರೆ. ಅದರಿಂದ ಬೆಂಗಳೂರು ನಗರದಲ್ಲಿಯೇ ಸುಮಾರು ಏಳೂವರೆ

ಲಕ್ಷ ಜನರು ದ್ವಿಚಕ್ರ ವಾಹನದ ಚಾಲಕರು ಒಂದು ರೀತಿಯಲ್ಲಿ ಚಿಂತಿತರಾಗಿದ್ದಾರೆ. ಇವತ್ತು ಬೆಂಗಳೂರಿನಲ್ಲಿ ಒಂದು ರೀತಿಯಲ್ಲಿ ಅಸಮರ್ಪಕ ಸಾರಿಗೆಯ ವ್ಯವಸ್ಥೆಯು ಇರುವುದರಿಂದ ನಾವೆಲ್ಲರೂ ದ್ವಿಚಕ್ರ ವಾಹನಕ್ಕೆ ಶರಣು ಹೋಗಬೇಕಾಗಿದೆ. ಹೆಲ್ಮೆಟ್ ಮತ್ತು ದ್ವಿಚಕ್ರ ವಾಹನಕ್ಕೆ ಒಂದು ತರಹ ಸಂಬಂಧ. ಒಂದು ಕಾಲದಲ್ಲಿ ಹೆಲ್ಮೆಟ್ ಬೇಕು ಎಂದು ಹೇಳುತ್ತಾರೆ. ಒಂದು ಕಾಲದಲ್ಲಿ ಬೇಡವೆಂದು ಹೇಳುತ್ತಾರೆ. ಬೇಕು ಎಂದಾಗ ನಿಮ್ಹಾನ್ಸ್ ರಿಪೋರ್ಟ್ ಎಂದು ಹೇಳುತ್ತಾರೆ. ಬೇಡ ಎಂದಾಗ ಜನರ ಅಭಿಪ್ರಾಯವೆಂದು ಹೇಳುತ್ತಾರೆ. ನಿಮ್ಹಾನ್ಸ್ ರಿಪೋರ್ಟ್ ಬಂದಾಗ ಹೆಲ್ಮೆಟ್‌ನ್ನು ಕಡ್ಡಾಯ ಮಾಡಿದರು. ಆಮೇಲೆ ಜನರ ಅಭಿಪ್ರಾಯಕ್ಕೆ ಮನ್ನಣೆಯನ್ನು ಕೊಟ್ಟು ಹೆಲ್ಮೆಟ್ ಕ್ಯಾನ್ಸಲ್ ಮಾಡಿದ್ದರು. ಈಗ ಉಚ್ಚ ನ್ಯಾಯಾಲಯ ಚಾಲಕರು ಮತ್ತು ವಾಹನ ಹಿಂಭಾಗದಲ್ಲಿ ಕುಳಿತುಕೊಳ್ಳುವವರು ಕೂಡ ಹೆಲ್ಮೆಟನ್ನು ಹಾಕಬೇಕೆಂದು ಹೇಳುತ್ತಾರೆ. ನನ್ನ ಪ್ರಶ್ನೆಯು ಏನೆಂದರೆ is it really pratical? ಉಚ್ಚ ನ್ಯಾಯಾಲಯದ ನ್ಯಾಯಧೀಶರಿಗೆ...

ಅಧ್ಯಕ್ಷರು: ಅವರು ಅಷ್ಟೇ ಮಾಡಿದರೋ, ರಸ್ತೆಯಲ್ಲಿರುವವರು ಎಲ್ಲರೂ ಹೆಲ್ಮೆಟನ್ನು ಹಾಕಿಕೊಳ್ಳಬೇಕೆಂದು ಮಾಡಿದರೋ? ಮೊದಲೇ ನ್ಯಾಯಧೀಶರು ತಾನೇ, ಏನು ಬೇಕಾದರೂ ಮಾಡಬಹುದು.

ಶ್ರೀ ಎಸ್.ಸುರೇಶ್‌ಕುಮಾರ್: ನ್ಯಾಯಾಧೀಶರ ತೀರ್ಪಿಗೆ ನಾನು ಗೌರವವನ್ನು ಕೊಡುತ್ತೇನೆ. ಆದರೆ Is it really pratical? ಉದಾಹರಣೆಗೆ ಹೇಳಬೇಕಾದರೆ ನಾನು ಸ್ಕೂಟರ್‌ನಲ್ಲಿ ಹೋಗುತ್ತಿರುವಾಗ ಮನೆಗೆ ಹೋಗುತ್ತಿರುವಾಗ ನನಗೆ ಡ್ರಾಪ್ ಕೇಳುತ್ತಾರೆ. ಅವರು ಕೇಳುತ್ತಾರೆಂದು ನನ್ನ ಸ್ಕೂಟರ್‌ನಲ್ಲಿ ಒಂದು ಹೆಲ್ಮೆಟ್‌ನ್ನು ಕ್ಯಾರಿ ಮಾಡುವುದಕ್ಕೆ ಆಗುತ್ತದೆಯೇ? ನನ್ನ ಮಗುವನ್ನು ಶಾಲೆಗೆ ಕರೆದುಕೊಂಡು ಹೋಗಬೇಕು, ಮನೆಗೆ ಕರೆದುಕೊಂಡು ಹೋಗಬೇಕು ಅದಕ್ಕೇ ಒಂದು ಚಿಕ್ಕ ಹೆಲ್ಮೆಟ್‌ನ್ನು ತೆಗೆದುಕೊಳ್ಳಬೇಕಾ? ವಯಸ್ಸಾದವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು. ಅವರಿಗೆ ಒಂದು ಹೆಲ್ಮೆಟನ್ನು ತೆಗೆದುಕೊಳ್ಳಬೇಕಾ? ಆ ಹೆಲ್ಮೆಟ್‌ಗಳನ್ನು ಎಲ್ಲಿ ಇಟ್ಟುಕೊಂಡು ಓಡಾಡಬೇಕು. ಇವತ್ತು ಪ್ರಾಯಶಃ ಬಹಳ ಸಂತೋಷವಾಗಿರುವುದು ಹೆಲ್ಮೆಟ್ ತಯಾರಿಕರಿಗೆ. ಈ ದೃಷ್ಟಿಯಿಂದ ಸರ್ಕಾರವನ್ನು ಕೇಳುವುದೇನೆಂದರೆ ವಾಸ್ತವಾಂಶವನ್ನು ಗಮನದಲ್ಲಿಟ್ಟುಕೊಂಡು ಮೋಟಾರ್ ವೈಹಿಕಲ್ ಆಕ್ಟ್ ಅದು ಸೆಂಟ್ರಲ್ ಗೌರ್ನಮೆಂಟ್ ಆಕ್ಟ್, ಅದನ್ನು ಯೋಜನೆಗೆ ತರಬೇಕಾದುದು ರಾಜ್ಯ ಸರ್ಕಾರದ್ದು. ಬೇರೆ ರಾಜ್ಯಗಳಲ್ಲಿ ಇದು ಜಾರಿಯಲ್ಲಿದೆಯಾ? ಉದಾಹರಣೆಗೆ ಸರ್ದಾರ್‌ಜಿಗಳಿಗೆ ಇದರಿಂದ ಮುಕ್ತಿಯನ್ನು ಮಾಡಿದ್ದಾರೆ. ಅವರು ಹೆಲ್ಮೆಟ್‌ಗಳನ್ನು ಹಾಕಿಕೊಳ್ಳುವ ಹಾಗೆ ಇಲ್ಲವೆಂದು. ಆ ಟರ್ಬನ್ ಅಪಾಯವನ್ನು ಎದುರಿಸುವಂತಹ ಶಕ್ತಿ ಇದೆಯಾ? ಇದೆಲ್ಲವನ್ನೂ ಯೋಚನೆಯನ್ನು ಮಾಡಿ ರಾಜ್ಯ ಸರ್ಕಾರ ವಾಸ್ತವಿಕವಾಗಿ ಯೋಚನೆಯನ್ನು ಮಾಡಿ ಇದರಿಂದ ನಾಗರಿಕರಿಗೆ ಉಂಟಾಗುವಂತಹ ಪ್ರಾಕ್ಟಿಕಲ್

ಡಿಫಿಕಲ್ಟಿ ಏನಿದೆ ಅದನ್ನು ಯೋಚನೆ ಮಾಡಿ, ತೀರ್ಪಿನ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಾ? ಇದರ ಬಗ್ಗೆ ಏನಾದರೂ ಅಪೀಲ್‌ನ್ನು ಹೋಗುತ್ತೀರಾ? ನಾಗರೀಕರ ಪರವಾಗಿ ನೀವೇನಾದರೂ ಯೋಚನೆಯನ್ನು ಮಾಡುತ್ತಿದ್ದೀರಾ ಎಂದು ನಾನು ತಮ್ಮ ಮೂಲಕ ಹೇಳುವುದಕ್ಕೆ ಇಷ್ಟ ಪಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ): ಮಾನ್ಯ ಅಧ್ಯಕ್ಷರೇ, ಅನೇಕ ಸಾರಿ ಸರ್ಕಾರದವರು ಹೆಲ್ಮೆಟನ್ನು ಹಾಕಬೇಕೆಂದು ಹೇಳುತ್ತಾರೆ. ತೆಗೆಯಬೇಕೆಂದು ಕೆಲವು ಸಾರಿ ಹೇಳುತ್ತಾರೆ. ಆದರೆ ಈಗ ಹೆಲ್ಮೆಟ್‌ಗಳನ್ನು ಹಾಕಬೇಕೆಂದು ತೀರ್ಮಾನವನ್ನು ನ್ಯಾಯಲಯವೇ ತೆಗೆದುಕೊಂಡಿರುವುದರಿಂದ ಇದರಿಂದ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಈಗ ನ್ಯಾಯಾಧೀಶರು ತೀರ್ಪನ್ನು ಕೊಟ್ಟಿದ್ದಾರೆ. ಅವರ ತೀರ್ಪನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಅದು ಸರಿಯಿಲ್ಲ ಎಂದು ಹೇಳತಕ್ಕಂತಹ ಗೋಚಿಗೆ ಹೋಗುವುದಿಲ್ಲ. ಆದರೆ ವಸ್ತು ಸ್ಥಿತಿಯನ್ನು ಅರಿತುಕೊಂಡು, ಈ ಮೂಲಕ ನಾನು ನ್ಯಾಯಾಧೀಶರಿಗೂ ಕೂಡ ಮನವಿಯನ್ನು ಮಾಡುತ್ತಿದ್ದೇನೆ. ಹೆಲ್ಮೆಟ್‌ಗಳನ್ನು ಹಾಕಿಕೊಳ್ಳುವುದರಿಂದ ಅಪಘಾತಗಳು ತಪ್ಪುತ್ತದೆಂದು ಹೇಳುತ್ತಾರಲ್ಲಾ ಇದು ನಿಜವಾಗಿಯೂ ಅರ್ಥವಿಲ್ಲದ್ದು. ಅಪಘಾತಗಳು ಆಗಿಯೇ ಆಗುತ್ತದೆ. ಅಪಘಾತಗಳು ಆಗುವುದಕ್ಕೂ ಹೆಲ್ಮೆಟ್‌ಗೂ ಸಂಬಂಧವೇ ಇಲ್ಲ. ಇದರಲ್ಲಿ ಶೇಕಡ ಒಂದು ಭಾಗ ಅನುಕೂಲವಾಗಬಹುದೇ ಹೊರತು, ಅಪಘಾತಗಳು ನಡೆಯುವುದಕ್ಕೂ ಸಂಬಂಧವಿಲ್ಲ. ಅಪಘಾತಗಳು ನಡೆಯುವುದಕ್ಕೆ ಪಾನಮತ್ತರಾಗಿ ಡ್ರೈವ್ ಮಾಡತಕ್ಕಂಥದ್ದು, ಹೆಚ್ಚಿನ ಒತ್ತಡಗಳು ಇರತಕ್ಕಂಥದ್ದು, ರಸ್ತೆಗಳು ಸರಿಯಿಲ್ಲದೇ ಇರತಕ್ಕಂಥದ್ದು, ವಾಹನಗಳ ಒತ್ತಡ ಇರತಕ್ಕಂಥದ್ದು. ಆದರೆ ಹೆಲ್ಮೆಟ್‌ನ್ನು ಹಾಕಬೇಕೆಂದಿರುವುದರಿಂದ ಲಕ್ಷಾಂತರ ಜನರಿಗೆ ತೊಂದರೆಯಾಗಿದೆ. ಜೊತೆಗೆ ಕಿವಿಯು ಕೇಳದಂತೆ ಆಗುತ್ತದೆ, ತಲೆಯ ಕೂದಲು ಉದುರುತ್ತದೆ. ಅನೇಕ ರೀತಿಯ ರೋಗಗಳು ಬರತಕ್ಕಂತಹ ಪರಿಸ್ಥಿತಿಯು ಇರುವುದರಿಂದ ಈ ಕೂಡಲೇ ಈ ಬಗ್ಗೆ ಸರ್ಕಾರ ಚಿಂತನೆಯನ್ನು ಮಾಡಿ ನ್ಯಾಯಾಲಯಕ್ಕೆ ಮತ್ತೆ ಪರಿಶೀಲನೆಯನ್ನು ಮಾಡುವುದಕ್ಕೆ ಪುನರ್ ಮನವಿಯನ್ನು ಸಲ್ಲಿಸಿ, ಇದನ್ನು ತೆಗೆಸುವಂತೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ಇದರ ಬಗ್ಗೆ ಹೇಳಿಕೆಯನ್ನು ಕೊಟ್ಟು, ಅದಾದನಂತರ ಗೌರವಾನ್ವಿತ ಸದಸ್ಯರು ಕೇಳಿರತಕ್ಕಂತಹ ವಿಷಯಕ್ಕೆ ಉತ್ತರವನ್ನು ಕೊಡುತ್ತೇನೆ.

ಅಧ್ಯಕ್ಷರು: ಹೇಳಿಕೆ ಏನೂ ಬೇಡ ಉತ್ತರವನ್ನು ಕೊಟ್ಟು ಬಿಡಿ ಸಾಕು. ಲೆಂಗ್ತಿ ಸ್ಟೇಟ್‌ಮೆಂಟ್ ಏನೂ ಬೇಡ. You make your views clear.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೇ, ದಯವಿಟ್ಟು

ಅವಕಾಶವನ್ನು ಕೊಡಬೇಕು. ಎರಡು ಪ್ಯಾರ ಇದೆ ಅದನ್ನು ಓದಿ ಬಿಡುತ್ತೇನೆ.

1988ರ ಮೋಟಾರ್ ವಾಹನ ಅಧಿನಿಯಮದ ಪ್ರಕರಣ 129 ಅಡಿಯಲ್ಲಿ ಹೇಳಿರುವಂತೆ ದ್ವಿಚಕ್ರ ವಾಹನದ ಚಾಲಕರು ಮತ್ತು ಸವಾರರು ಕಡ್ಡಾಯವಾಗಿ ಶಿರಸ್ತ್ರಾಣವನ್ನು ಕಡ್ಡಾಯವಾಗಿ ಧರಿಸಬೇಕಾಗಿರುತ್ತದೆ. ಈ ರೀತಿಯಾಗಿ ಕಡ್ಡಾಯವಾಗಿ ಶಿರಸ್ತ್ರಾಣವನ್ನು ಧರಿಸುವುದರ ವಿರುದ್ಧ ವಾಹನ ಚಾಲಕರು, ದ್ವಿಚಕ್ರ ವಾಹನ ಚಾಲಕರು, ಸಾರ್ವಜನಿಕರು, ಸಂಘ ಸಂಸ್ಥೆಗಳು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿ, ಇದನ್ನು ಪರಿಶೀಲಿಸಲಾಗಿ ಸರ್ಕಾರವು 1989ರ ಕರ್ನಾಟಕ ಮೋಟಾರ್ ವಾಹನಗಳ ನಿಯಮಾವಳಿ 230ಕ್ಕೆ ತಿದ್ದುಪಡಿಯನ್ನು ತಂದು, 11 ಮೆಟ್ರಿಕ್ ಟ್ರಾನ್ಸ್‌ಪೋರ್ಟ್ ಸಾಮಾರ್ಥ್ಯಕ್ಕಿಂತ ಹೆಚ್ಚು ಇರುವ ದ್ವಿಚಕ್ರ ವಾಹನ ಚಾಲಕರು ಶಿರಸ್ತ್ರಾಣವನ್ನು ಕಡ್ಡಾಯಗೊಳಿಸಿದ್ದನ್ನು 1995ನೇ ಆಗಸ್ಟ್ 15ರಲ್ಲಿ 11 ಮೆಟ್ರಿಕ್ ಟ್ರಾನ್ಸ್‌ಪೋರ್ಟ್ ಸಾಮಾರ್ಥ್ಯಕ್ಕಿಂತ ಕಡಿಮೆ ಸಾಮರ್ಥ್ಯ ಇರುವ ದ್ವಿಚಕ್ರ ವಾಹನ ಚಾಲಕರಿಗೆ ರಿಯಾಯ್ತಿಯನ್ನು ನೀಡಲಾಯಿತು. ಅಂದರೆ ಈ ಆದೇಶದ ಪ್ರಕಾರವಾಗಿ ನಾಲ್ಕು ಗೇರ್‌ಗಳನ್ನು ಹೊಂದಿ 250 ಸಿಸಿ ಇರತಕ್ಕಂತಹ 250 ಹೆಚ್.ಪಿ.300 ಘನ ಸಾಮರ್ಥ್ಯ ಮೋಟಾರ್ ವಾಹನ ಚಾಲಕರು ಕಡ್ಡಾಯವಾಗಿ ಹೆಲ್ಮೆಟ್‌ನ್ನು ಧರಿಸಬೇಕಾಗಿತ್ತು. ಇತರೆ ದ್ವಿಚಕ್ರ ವಾಹನದ ಚಾಲಕರಿಗೆ ಶಿರಸ್ತ್ರಾಣಗಳನ್ನು ಧರಿಸುವ ಬಗ್ಗೆ ವಿವೇಚನೆಗೆ ಬಿಡಲಾಗಿತ್ತು. ಇತ್ತೀಚೆಗೆ ಉಚ್ಚ ನ್ಯಾಯಾಲಯದ ಶ್ರೀ ಎಸ್.ಆರ್.ಭಟ್ ವಕೀಲರು ಸಾರ್ವಜನಿಕರ ಹಿತಾಸಕ್ತಿಯ ಮೇಲೆ ಸಲ್ಲಿಸಿದ ರಿಟ್ ಅರ್ಜಿಯಮೇಲೆ ತೀರ್ಪು ನೀಡಿದ ಮಾನ್ಯ ನ್ಯಾಯಾಧೀಶರು 1986ರ ಮೋಟಾರ್ ವಾಹನದ ಕಾಯಿದೆ ಪ್ರಕರಣ 181ರ ನಿಯಮದಲ್ಲಿ ಹೇಳಿರುವಂತೆ ದ್ವಿಚಕ್ರ ವಾಹನದ ಚಾಲಕ ಮತ್ತು ಸವಾರನು ಶಿರಸ್ತ್ರಾಣವನ್ನು ಕಡ್ಡಾಯಗೊಳ್ಳಿಸುವಂತೆ ಪುನರ್ ಉಚ್ಚರಿಸಿ ಆದೇಶವನ್ನು ನೀಡಿದ್ದಾರೆ. ಕಡ್ಡಾಯವಾಗಿ ಶಿರಸ್ತ್ರಾಣವನ್ನು ಧರಿಸುವುದರಿಂದ ಚಾಲಕ ಮತ್ತು ಸವಾರರಿಗೆ ಅಪಘಾತಗಳು ಉಂಟಾದಾಗ ತಲೆ ಪೆಟ್ಟು ಬಿದ್ದು ಸಾವನ್ನು ಅಪ್ಪುವುದನ್ನು ತಪ್ಪಿಸಲು, ಪ್ರಾಣಹಾನಿಗಳನ್ನು ತಡೆಯಲು ಅದಷ್ಟು ಸಹಕಾರಿಯಾಗುವುದೆಂದು ಹೇಳಲಾಗಿದೆ. ಉಚ್ಚನ್ಯಾಯಾಲಯದ ತೀರ್ಪನ್ನು ಸರ್ಕಾರ ಇತ್ತೀಚೆಗೆ ಸ್ವೀಕರಿಸಲಾಗಿದೆ. ಆದೇಶಗಳ ಅಂಶಗಳನ್ನು ಪರಿಶೀಲಿಸಿ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು. ಮಾನ್ಯ ನ್ಯಾಯಾಧೀಶರು ಇತ್ತೀಚಿನ ದಿನಗಳಲ್ಲಿ ಮೂರು ಆಜ್ಞೆಗಳನ್ನು ಮಾಡಿದ್ದಾರೆ. ಒಂದು ಹೆಲ್ಮೆಟ್‌ನ್ನು ಧರಿಸತಕ್ಕಂತಹ ವಿಚಾರದಲ್ಲಿ. ಮತ್ತೊಂದು ಪೆಟ್ರೋಲಿಯಂ ಸ್ಕ್ಯಾಡ್ ಅನ್ನು ಸರ್ಕಾರ ನಿಯುಕ್ತಿ ಮಾಡುವಂತಹ ವಿಚಾರದಲ್ಲಿ ಮತ್ತೆ ಪಲ್ಯೂಷನ್ ಮಿಷನ್ ಅನ್ನು ಗೌರ್ನಮೆಂಟ್ ವೆಹಿಕಲ್‌ಗಳಲ್ಲಿ ಚೆಕ್ ಮಾಡಬೇಕೆಂದು ಆರ್ಡರ್‌ಗಳನ್ನು ಮಾಡಿದ್ದಾರೆ. ಈ ಆರ್ಡರ್ ಕಾಪಿಗಳನ್ನು ನಾನು ತರಿಸಿಕೊಂಡಿದ್ದೇನೆ. ಅಧಿವೇಶನದ ಸಮಯ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಇರುವುದರಿಂದಾಗಿ ನಾನು ಅಧಿಕಾರಿಗಳ ಜೊತೆಯಲ್ಲಿ ಮತ್ತು ಇತರ ಮುಖಂಡರುಗಳ ಜೊತೆಯಲ್ಲಿ ಕುಳಿತುಕೊಂಡು ಇದರ ಬಗ್ಗೆ

ವಿಚಾರವನ್ನು ಮಾಡುವುದಕ್ಕೆ ಆಗಿಲ್ಲ. ಆದರೆ ಲಕ್ಷಾಂತರ ಜನ ದ್ವಿಚಕ್ರ ವಾಹನದ ಚಾಲಕರು ಇದಕ್ಕೆ ವಿರುದ್ಧ ಇದ್ದಾರೆ, ಸಾರ್ವಜನಿಕರ ಅಭಿಪ್ರಾಯ ವಿರುದ್ಧ ಇದೆ ಎನ್ನುವಂತಹ ಅರಿವು ಸರ್ಕಾರಕ್ಕೆ ಇದೆ. ಎಲ್ಲವನ್ನೂ ಸಹ ಗಮನದಲ್ಲಿಟ್ಟುಕೊಂಡು ಇನ್ನು 4-5 ದಿವಸಗಳಲ್ಲಿ, ಏಕೆಂದರೆ ಅಕ್ಟೋಬರ್ 2ರಿಂದ ಜಾರಿಗೆ ತರಲು ಹೇಳಿರುವುದರಿಂದ, ನಾಳೆಯ ದಿವಸ ನಮ್ಮ ಅಧಿವೇಶನ ಮುಗಿಯುತ್ತದೆ. ಆದ್ದರಿಂದ ಸಂಬಂಧಪಟ್ಟಂತಹ ಅಧಿಕಾರಿಗಳ, ತಜ್ಞರ, ವಿರೋಧ ಪಕ್ಷದ ಎಲ್ಲಾ ಮುಖಂಡರುಗಳನ್ನು ಕರೆದು ಸಮಾಲೋಚನೆಯನ್ನು ನಡೆಸಿ..

ಅಧ್ಯಕ್ಷರು: ನಾಣಯ್ಯನವರೆ, Public Interest Litigation-what are all the matters that constitute a public interest ಎನ್ನುವ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ಒಂದು ಡೆಫನೆಷನ್ ಆಗಿರಬಹುದು I think the Government representatives should take it up in the High Court. ಯಾರಿಗೋ ಮನೆಯನ್ನು ಕೊಡುವುದು, ಯಾರಿಗೋ ಸೈಟ್ ಕೊಡುವುದು, ಹೆಲ್ಮೆಟ್ ಹಾಕಿಕೊಳ್ಳುವುದು ಇದಲ್ಲಾ ಪಬ್ಲಿಕ್ ಇಂಟರೆಸ್ಟ್?

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ಈಗ ಏನಾಗಿದೆ ಸುಪ್ರೀಂ ಕೋರ್ಟ್‌ನ ಒಂದು ಆದೇಶದ ಪ್ರಕಾರವಾಗಿ Any public interest litigation, it has to go before the Division Bench from Single bench, ಡಿವಿಜನಲ್ ಬೆಂಚ್‌ಗೆ ಹೋಗಬೇಕೆಂದು ಮಾಡುತ್ತಾರೆ. If they take cognisance of it, nobody can help.

ಶ್ರೀ ಎಸ್.ಸುರೇಶ್ ಕುಮಾರ್ (ಅಪೀಲ್ ಹೋಗುವುದಕ್ಕೆ 16ನೇ ತಾರೀಖು ಕೊನೆಯ ದಿನಾಂಕ ಇದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ನಾನು ಇಷ್ಟೇ ಹೇಳತಕ್ಕದ್ದು, ಅಪೀಲು ಹಾಕುವುದಕ್ಕೆ 16ನೇ ತಾರೀಖು ಕೊನೆಯ ದಿನ ಇದೆ. ಬಹಳಷ್ಟು ಜನ ದ್ವಿಚಕ್ರ ವಾಹನ ಚಾಲಕರು ಬಂದು ನನ್ನನ್ನು ಭೇಟಿ ಮಾಡಿ ಪತ್ರ ಬರೆದು ತಮ್ಮ ಆತಂಕವನ್ನು ವ್ಯಕ್ತ ಮಾಡಿದ್ದಾರೆ. ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಮಂತ್ರಿಮಂಡಲ ವಿಚಾರ ಮಾಡುತ್ತದೆ. ವಿರೋಧ ಪಕ್ಷದ ನಾಯಕರು, ಸಾರ್ವಜನಿಕ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಈ ವಿಚಾರದಲ್ಲಿ ಅಪಘಾತಗಳು ಹೆಚ್ಚಾಗುತ್ತವೆ, ಸಾವುಗಳು ಹೆಚ್ಚಾಗುತ್ತವೆ, ಅಂಗವಿಕಲರು ಹೆಚ್ಚಾಗುತ್ತಾರೆಂಬ ಅಭಿಪ್ರಾಯ ಕೊಡತಕ್ಕಂಥವರಿದ್ದಾರೆ. ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ಇನ್ನು 2-3 ದಿನಗಳಲ್ಲಿ ನಾವು ಸರ್ಕಾರದವರು ಒಂದು ತೀರ್ಮಾನಕ್ಕೆ ಬರುತ್ತೇವೆ.

ಆ) ಟ್ರಾನ್ಸ್‌ಪೋರ್ಟ್ ಸಬ್ಸಿಡಿಯನ್ನು ಕಬ್ಬು ಸರಬರಾಜು ಮಾಡಿದ ರೈತರಿಗೆ ನೀಡುವ ಬಗ್ಗೆ.

+ ಶ್ರೀ ಎಸ್.ಪಿ.ಮುದ್ದುಹನುಮೇಗೌಡ (ಕುಣಿಗಲ್): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕಳೆದ ವರ್ಷ ಕಬ್ಬನ್ನು ಹೊರಗಡೆ ಸರ್‌ಪ್ಲಸ್ ಏರಿಯಾದಿಂದ ಸಕ್ಕರೆ ಕಾರ್ಖಾನೆಗೆ ರೈತರು ಸರಬರಾಜು ಮಾಡಿದರು. ಉದಾಹರಣೆಗೆ, ಕುಣಿಗಲ್ ತಾಲ್ಲೂಕಿನಿಂದ ಹಿರಿಯೂರು ಕಾರ್ಖಾನೆಗೆ, ಗೌರಿಬಿದನೂರು ಕಾರ್ಖಾನೆಗೆ ಸರಬರಾಜು ಮಾಡಿದರು. ಅಲ್ಲಿ ಅವರಿಗೆ ಕಬ್ಬು ಇರಲಿಲ್ಲ. ಆದುದರಿಂದ ಅವರೇ ಫಾಲಂಟರಿಯಾಗಿ ಬಂದು ನಮಗೆ ಕಬ್ಬು ಸರಬರಾಜು ಮಾಡಿ, ನಾವು ಟ್ರಾನ್ಸ್‌ಪೋರ್ಟ್ ಸಬ್ಸಿಡಿ ಕೊಡುತ್ತೇವೆಂದು ರೈತರಿಗೆ ಆಶ್ವಾಸನೆ ಕೊಟ್ಟಿದ್ದರು. ಅದರ ಪ್ರಕಾರ ನಮ್ಮ ತಾಲ್ಲೂಕು ಮತ್ತು ಚನ್ನರಾಯಪಟ್ಟಣ ತಾಲ್ಲೂಕು ಹೀಗೆ ಎಲ್ಲಾ ಕಡೆ ಕೂಡ ಕಾರ್ಖಾನೆಗೆ ಕಬ್ಬನ್ನು ಸರಬರಾಜು ಮಾಡಿದರು. ಈಗ ಏನಾಗಿದೆ ಎಂದರೆ ಅವರಿಗೆ ಟ್ರಾನ್ಸ್‌ಪೋರ್ಟ್ ಸಬ್ಸಿಡಿ ಕೊಡುತ್ತಿಲ್ಲ. ಒಂದು-ಒಂದೂವರೆ ವರ್ಷವಾದರೂ ಟ್ರಾನ್ಸ್‌ಪೋರ್ಟ್ ಸಬ್ಸಿಡಿ ಕೊಡುತ್ತಿಲ್ಲ. ಕಿಲೋಮೀಟರ್‌ಗೆ 50 ಪೈಸೆ ಒಂದು ಟನ್ನಿಗೆ ಎಂದು ಏನು ಆಶ್ವಾಸನೆ ಕೊಟ್ಟಿದ್ದರು ಅದನ್ನು ಕೊಡುತ್ತಿಲ್ಲ. ದಯಮಾಡಿ ಮಾನ್ಯ ಸಕ್ಕರೆ ಸಚಿವರು ಟ್ರಾನ್ಸ್‌ಪೋರ್ಟ್ ಸಬ್ಸಿಡಿಯನ್ನು ಕಬ್ಬು ಸರಬರಾಜು ಮಾಡಿದ ರೈತರಿಗೆ ಕೊಡಿಸುವ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಸಭಾಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಉಮೇಶ್ ವಿ.ಕತ್ತಿ (ಸಕ್ಕರೆ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ್ದು ನಿಜ ಇದೆ. 1995-96ನೇ ಸಾಲಿನಲ್ಲಿ ಎಕ್ಸ್‌ಸ್ ಕಬ್ಬು ಆದಕಾರಣ ತಮಗೆ ಬೇಕಾದ ಕಾರ್ಖಾನೆಗಳಿಗೆ ಕೊಡಬಹುದೆಂದು ಸರ್ಕಾರ ಆದೇಶ ಹೊರಡಿಸಿ ಪ್ರತಿ ಕಿಲೋಮೀಟರ್‌ಗೆ 50 ಪೈಸೆ ಯಂತೆ ಪ್ರತಿ ಟನ್ನಿಗೆ ಕೊಡಲು ಸರ್ಕಾರ ಆದೇಶ ಹೊರಡಿಸಿತ್ತು. ಈ ಮಾಹಿತಿ ಪ್ರಕಾರ ಮೂರುವರೆ ಕೋಟಿ ರೂಪಾಯಿಗಳನ್ನು ರಾಜ್ಯದಲ್ಲಿರತಕ್ಕ ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ಸಬ್ಸಿಡಿ ಕೊಡಬೇಕಾಗಿದೆ. ಆದರೆ ನಮಗೆ ಮಾಹಿತಿ ಲಭ್ಯವಾದ ಪ್ರಕಾರ ಈಗಾಗಲೇ ಒಂದು ಕೋಟಿ 25 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಈಗ ಇನ್ನೊಂದು ಮಾಹಿತಿ ಬಂದಿದೆ, ಸದನ ಮುಗಿದ ತಕ್ಷಣ ಉಳಿದ ಹಣ 2 ಕೋಟಿ 25 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುವಂಥ ವ್ಯವಸ್ಥೆ ಮಾಡುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಇ) ಹೊಸ ದುರ್ಗದ ವೇದಾವತಿ ನದಿಯಿಂದ ಮರಳು ಸಾಗಿಸುತ್ತಿರುವ ಬಗ್ಗೆ

ಶ್ರೀ ಟಿ.ಹೆಚ್.ಬಸವರಾಜ್ (ಹೊಸದುರ್ಗ): ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದ ಹೊಸದುರ್ಗಕ್ಕೆ 5 ಕಿಲೋಮೀಟರ್ ದೂರದಲ್ಲಿ ವೇದಾವತಿ ನದಿ ಹರಿಯುತ್ತದೆ. ಹೊಸದುರ್ಗಕ್ಕೆ ನೀರನ್ನು ಕೊಡುವ ಸೌಲಭ್ಯ ಮಹಾರಾಜರ ಕಾಲದಲ್ಲಿ ಆಗಿರತಕ್ಕದ್ದು. ಅದಕ್ಕೆ ಮೀನಾಕ್ಷಿ ದೇವಿಯವರ ನೀರು ಸರಬರಾಜು ಯೋಜನೆ ಎಂದು ಹೆಸರು. ಈಗ 2-3 ತಿಂಗಳುಗಳಿಂದ ಸದರಿ ನದಿಯಲ್ಲಿ ನೀರು ಒಣಗಿರುವುದು ನೋಡಿದ್ದೇವೆ.

ಸುಮಾರು ಎರಡು ವರ್ಷಗಳಿಂದ ಅವ್ಯಾಹತವಾಗಿ ಅಲ್ಲಿರತಕ್ಕ ಮರಳನ್ನು ಪ್ರತಿದಿವಸ ನೂರಾರು ಲಾರಿಗಳಲ್ಲಿ, ಟ್ರಕ್ಕುಗಳಲ್ಲಿ ಸಾಗಿಸುವುದರಿಂದ ಬಹಳಷ್ಟು ಗುಣಿಗಳು ಬಿದ್ದು ಈಗಾಗಲೇ ಮಣ್ಣಿನ ಅಂಶ ಮೇಲೆ ಬಂದಿದೆ; ಮರಳಿನ ಅಂಶ ಕಡಿಮೆಯಾಗಿ ನೀರು ಹರಿಯುವುದು ನಿಂತಿದೆ. ಹೀಗಾಗಿ ಗಣಿ ಮತ್ತು ಭೂಗರ್ಭ ಇಲಾಖೆಯವರಿಗೆ ಬಹಳಷ್ಟು ಸಾರಿ ಮನವಿ ಸಲ್ಲಿಸಿದ್ದೇನೆ. ಅಲ್ಲಿ ಶ್ರೀ ಕೃಷ್ಣರಾಜೇಂದ್ರ ಒಡೆಯರ ಕಾಲದಲ್ಲಿ ಕಟ್ಟಿದ ದೊಡ್ಡ ಸೇತುವೆ ಇದೆ. ಆ ಸೇತುವೆಯ ಅಕ್ಕಪಕ್ಕಗಳಲ್ಲಿ, ಎಡಬದಿಯಲ್ಲಿ ಒಂದು ಕಿಲೋಮೀಟರ್ ಅಂತರದಲ್ಲಿ ಯಾವುದೇ ಮರಳು ತುಂಬುವ ಅವಕಾಶ ಕೊಡಬೇಡಿ ಎಂದು ಈಗಾಗಲೇ ಸರ್ಕಾರವನ್ನು ಕೇಳಿಕೊಂಡಿದ್ದೇನೆ. ಆದರೆ ನಮ್ಮ ಚಿತ್ರದುರ್ಗಕ್ಕೆ ಸುಮಾರು 65 ಕಿಲೋಮೀಟರ್ ದೂರದಲ್ಲಿ ಇಲಾಖೆ ಇರುವುದರಿಂದ ನಮ್ಮ ಕೂಗು ಅವರಿಗೆ ತಟ್ಟಿಲ್ಲವೆಂದು ಕಾಣುತ್ತದೆ. ಈಗಾಗಲೇ ಹೊಸದುರ್ಗ ಪಟ್ಟಣದಲ್ಲಿ ಮತ್ತು ಸುತ್ತಮುತ್ತಲ ಹಳ್ಳಿಗಳಲ್ಲಿ ಜನರು ದಂಗೆ ಎದ್ದಿದ್ದಾರೆ. ಅಲ್ಲಿ ಮರಳನ್ನು ತುಂಬುವುದನ್ನು ನಿಲ್ಲಿಸಬೇಕೆಂದು ನನಗೆ ಹಲವಾರು ಜನ ಅರ್ಜಿಗಳನ್ನು ಕೊಟ್ಟಿದ್ದಾರೆ. ಈಗಾಗಲೇ ನಾನು ಈ ವಿಷಯವನ್ನು ಇಲಾಖೆಗೆ ತಿಳಿಸಿದ್ದೇನೆ. ಹೊಸದುರ್ಗಕ್ಕೆ ನೀರು ಸರಬರಾಜು ಮಾಡತಕ್ಕ ನದಿಯ ಎರಡು ಬದಿಗಳಲ್ಲಿ ಒಂದೊಂದು ಕಿಲೋಮೀಟರ್ ದೂರದಲ್ಲಿ, ಆ ಸೇತುವೆಯ ಎಡಬದಿಯಲ್ಲಿ ಒಂದು ಕಿಲೋಮೀಟರ್ ದೂರದಲ್ಲಿ ಯಾವುದೇ ಮರಳನ್ನು ತುಂಬದಂತೆ ಸಂಬಂಧಪಟ್ಟ ಮಂತ್ರಿಗಳು ಇಲಾಖೆಗೆ ತಿಳಿಸಬೇಕೆಂದು ನಾನು ಈ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆಸಚಿವರು): ಮಾನ್ಯ ಅಧ್ಯಕ್ಷರೆ, ಮರಳು ಎತ್ತತಕ್ಕ ವಿಚಾರದಲ್ಲಿ ಮೊನ್ನೆ ತಾನೇ ವಿಧಾನಸಭೆಯಲ್ಲಿ ಚರ್ಚೆಯಾಗಿದೆ. ಇದನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳಬೇಕಾಗಿದೆ, ತೆಗೆದುಕೊಳ್ಳುತ್ತದೆ. ಕಾರಣ ತಮಗೆ ಗೊತ್ತಿದೆ, ಅನೇಕ ಕಡೆಗಳಲ್ಲಿ ಮರಳನ್ನು ಕಟ್ಟಡಗಳನ್ನು ಕಟ್ಟಲಿಕ್ಕೆ, ಮತ್ತು ಬೇರೆ ಉದ್ದೇಶಗಳಿಗೆ ಸಾಗಿಸತಕ್ಕ ಲಾರಿ ಮಾಲೀಕರು ಅಥವಾ ಮರಳು ಬೇಕಾದವರು ಹೊಳೆಗಳಿಗೆ ಹೋಗುತ್ತಾರೆ. ದುರಾದೃಷ್ಟದಿಂದ ಏನಾಗಿದೆ ಎಂದರೆ ಸೇತುವೆಗಳಿಂದ 100-200 ಅಡಿ ದೂರದಲ್ಲಿ ಆದರೂ ಎತ್ತಿಕೊಂಡು ಹೋದರೆ ಒಂದು ತರಹ. ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಕಟ್ಟಿರತಕ್ಕ ಸೇತುವೆಗಳು ಇವತ್ತು ಅಪಾಯದ ಅಂಚಿನಲ್ಲಿರತಕ್ಕದ್ದನ್ನು ಗಮನದಲ್ಲಿಟ್ಟುಕೊಂಡಿದ್ದೇವೆ, ಮತ್ತು ಹೊಳೆಗಳ ಪಕ್ಕದಲ್ಲಿರತಕ್ಕ ತೋಟಗಳು ಏನಿವೆ ಆ ತೋಟಗಳು ಕುಸಿದು ಕುಸಿದು ಬಂದು ಹೊಳೆ ಅಗಲವಾಗುತ್ತಿದೆ. ಇದರಿಂದ ಸಹ ರೈತರಿಗೆ ತೊಂದರೆಯಾಗುತ್ತಿದೆ. ಇದರಿಂದಾಗಿ ನಮ್ಮ ಸರ್ಕಾರದ ಅಭಿಪ್ರಾಯದಲ್ಲಿ, ಇದರ ಬಗ್ಗೆ ನಾವು ದೀರ್ಘವಾಗಿ ಯೋಚನೆ ಮಾಡಿ ಕಟ್ಟಾಜ್ಞೆ ಮಾಡಬೇಕಾಗುತ್ತದೆ, ಇದನ್ನು ಪರಿಪಾಲನೆ ಮಾಡಬೇಕಾಗುತ್ತದೆ. ರಾಜ್ಯದಲ್ಲಿರತಕ್ಕ ಅನೇಕ ಪ್ರದೇಶಗಳಲ್ಲಿ ಇದರ ತೊಂದರೆ ಇದೆ. ಮಾನ್ಯ ಬಸವರಾಜು ಅವರು ಹೊಸದುರ್ಗದಲ್ಲಿರತಕ್ಕ ಸೇತುವೆ ವಿಚಾರದಲ್ಲಿ ಏನು ಹೇಳಿದ್ದಾರೆ ಆ ಬಗ್ಗೆ ನಾನು ಇವತ್ತೇ

ಜಿಲ್ಲಾಧಿಕಾರಿಗಳಿಗೆ ಮಾತನಾಡಿ ಅದರ ಬಗ್ಗೆ ಈಗಿರತಕ್ಕ ಆಜ್ಞೆಯನ್ನು ಪರಿಪಾಲಿಸುವುದಕ್ಕೆ ಆದೇಶ ಕೊಡುವುದಕ್ಕೆ ಅವರ ಕೆಳಮಟ್ಟದ ಅಧಿಕಾರಿಗಳಿಗೆ ಸೂಚನೆ ಕೊಡುವುದಕ್ಕೆ ಹೇಳುತ್ತೇನೆ. ಇಡೀ ರಾಜ್ಯದ ಬಗ್ಗೆ ಸಹ ಇನ್ನು ಒಂದು ವಾರ, 15 ದಿನಗಳೊಳಗೆ ಗಂಭೀರವಾಗಿ ಚಿಂತನೆ ಮಾಡಿ ಎಲ್ಲಾ ಕಡೆ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ.

(ಈ) ಚಿಕ್ಕೋಡಿ ಜಿಲ್ಲೆಯನ್ನಾಗಿ ಮಾಡುವುದರ ಬಗ್ಗೆ

+ ಶ್ರೀ ಪ್ರಕಾಶ್ ಬಿ.ಹುಕ್ಕೇರಿ (ಸದಲಗಾ): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಬೆಳಗಾಂ ಜಿಲ್ಲೆಯನ್ನು ವಿಂಗಡಣೆ ಮಾಡುವುದಿಲ್ಲವೆಂದು ಹೇಳಿದ ಮೇಲೆ ಎಲ್ಲಾ ಕಡೆ ಪತ್ರಿಕೆಗಳಲ್ಲಿ ವಿಷಯ ಬಂತು. ಚಿಕ್ಕೋಡಿ ಜಿಲ್ಲೆಯನ್ನು ಮಾಡಲಿಕ್ಕೆ ನಮ್ಮ ಪಕ್ಷದ ನಾಯಕರಾದ ಶ್ರೀ ಖರ್ಗೆಯವರು, ಶ್ರೀ ಯಡಿಯೂರಪ್ಪನವರು ಮತ್ತು ಶ್ರೀ ವಾಟಾಳ್ ನಾಗರಾಜು ಅವರು ವಿರೋಧ ವ್ಯಕ್ತ ಮಾಡಿದ್ದಾರೆಂದು ಎಲ್ಲಾ ಸ್ಥಳೀಯ ಪತ್ರಿಕೆಗಳಲ್ಲಿ ಬಂದು ಅದನ್ನು ಎಲ್ಲಾ ಕಡೆ ತಂದು ಹಂಚಿ ಸಂಕಷ್ಟದಲ್ಲಿರುವ ಪರಿಸ್ಥಿತಿಯನ್ನು ನಮ್ಮ ಚಿಕ್ಕೋಡಿ ತಾಲ್ಲೂಕಿಗೆ ಮಾಡಿದ್ದಾರೆ. ಈಗಾಗಲೇ ಬಹಳಷ್ಟು ಜನತಾ ದಳದ ಶಾಸಕರು ಆಮರಣ ಉಪವಾಸ ಚಾಲು ಮಾಡಿದ್ದಾರೆ; ನಾವು ಮಾಡುತ್ತಿದ್ದೇವೆ, ನಮ್ಮ ಪಕ್ಷದವರು ಮಾಡುವುದಕ್ಕೆ ತಯಾರಿದ್ದಾರೆ. ಆದರೆ ವಿರೋಧ ಪಕ್ಷದವರು ಚಿಕ್ಕೋಡಿ ಜಿಲ್ಲೆ ಮಾಡುವುದಕ್ಕೆ ವಿರೋಧ ವ್ಯಕ್ತ ಮಾಡಿದರು ಎಂದು ಈ ಸಭೆಯಲ್ಲಿ ಹೇಳಿಕೆ ಕೊಟ್ಟು ಇವತ್ತು ನಮಗೆ ಬಹಳ ಸಂಕಷ್ಟದಲ್ಲಿ ಸಿಕ್ಕುವಂಥ ವ್ಯವಸ್ಥೆ ಮಾಡಿದ್ದಾರೆ. ಇವತ್ತು ಚಿಕ್ಕೋಡಿ ತಾಲ್ಲೂಕು, ಅಥಣಿ ತಾಲ್ಲೂಕು ಮತ್ತು ರಾಯಬಾಗ್ ತಾಲ್ಲೂಕು 3 ಕಡೆ...

ಶ್ರೀ ಬಿ.ಎಸ್.ಯಡಿಯೂರಪ್ಪ: ನಾವು ಎಲ್ಲಿ ಹೇಳಿದ್ದೇವೆ? ಚಿಕ್ಕೋಡಿ ಜಿಲ್ಲೆ ಮಾಡಬೇಡಿ ಎಂದು ನಾವು ಹೇಳಲಿಲ್ಲ. ಬೆಳಗಾಂ ಜಿಲ್ಲೆಯ ಸಮಸ್ಯೆಯನ್ನು ಒಟ್ಟಾಗಿ ಬಗೆಹರಿಸಿ ಎಂದು ಹೇಳಿದೆವು. ಬೇಕಾದರೆ ರೆಕಾರ್ಡ್‌ನಲ್ಲಿ ಇದೆ ನೋಡಿ.

ಶ್ರೀ ಪ್ರಕಾಶ್‌ಬಿ.ಹುಕ್ಕೇರಿ: ಮಹಾಜನ್ ವರದಿ ಪ್ರಕಾರ ಚಿಕ್ಕೋಡಿ ಜಿಲ್ಲೆ ಆಗಲಿಕ್ಕೆ ಯಾವುದೋ ಸಂಬಂಧ ಇಡುತ್ತಾರೆ. ಮಹಾಜನ್ ವರದಿ ಬೆಳಗಾಂ ಜಿಲ್ಲೆಗೆ ಮಾತ್ರ. ಆ ದೃಷ್ಟಿಯಿಂದ ಒತ್ತಾಯ ಮಾಡುತ್ತಿದ್ದೇವೆ; ಚಿಕ್ಕೋಡಿ ಜಿಲ್ಲೆ ಆಗುವುದಕ್ಕೆ 3 ತಾಲ್ಲೂಕಿನವರು, ಅಥಣಿ ತಾಲ್ಲೂಕು, ರಾಯಬಾಗ್ ತಾಲ್ಲೂಕು ಮತ್ತು ಚಿಕ್ಕೋಡಿ ತಾಲ್ಲೂಕಿನವರು ಸಂಪೂರ್ಣ ಒಪ್ಪಿಗೆ ಕೊಟ್ಟಿದ್ದೇವೆ. ಅಥಣಿ ತಾಲ್ಲೂಕು ಬಾರ್ಡರ್‌ನಿಂದ ನಮ್ಮ ಬೆಳಗಾಂಗೆ ಬರಬೇಕಾದರೆ 210 ಕಿಲೋಮೀಟರ್ ಅಂತರವನ್ನು ಕ್ರಮಿಸಿ ಬೆಳಗಾಂ ಹೆಡ್‌ಕ್ವಾರ್ಟರ್‌ಗೆ ಬರುವ ವ್ಯವಸ್ಥೆ ಇದೆ. ದಯಮಾಡಿ ಮುಂದೆ ಹಾಕುವ ಕಾರ್ಯಕ್ರಮ ಕೈಗೊಂಡಿದ್ದರೆ ಕೂಡಲೇ ರದ್ದು ಮಾಡಿ. ಬೆಳಗಾಂ ಪಾರ್ಲಿಮೆಂಟಿಗೆ ಹೋದರೂ ನಾವು ಮಾತನಾಡುವುದಿಲ್ಲ. ಎಲ್ಲಿ ಬೇಕಾದರೆ ಮಾಡಿ, ಬೈಲಹೊಂಗಲ ಜಿಲ್ಲೆ ಮಾಡಿ. ಆದರೆ ಚಿಕ್ಕೋಡಿ ಜಿಲ್ಲೆ ಆಗುವುದಕ್ಕೆ ಎಲ್ಲಾ ವ್ಯವಸ್ಥೆ ಇದೆ. ಅಲ್ಲಿ ಸಬ್-ಡಿವಿಜನ್ ಆಫೀಸರ್

ಇದ್ದಾರೆ, ಕೆ.ಇ.ಬಿ.ಯ ಎಕ್ಸಿಕ್ಯೂಟೀವ್ ಇಂಜಿನಿಯರ್ ಆಫೀಸ್ ಇದೆ. ಪಿ.ಡಬ್ಲ್ಯು.ಡಿ. ಇದೆ. ಆ ದೃಷ್ಟಿಯಿಂದ ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿಸುತ್ತೇನೆ, ಮಾನ್ಯ ಅಧ್ಯಕ್ಷರು ನಮ್ಮ ನೆರವಿಗೆ ಬರಬೇಕು. ಆ ಭಾಗದಲ್ಲಿ ಶಾಂತ ವಾತಾವರಣ ಇದೆ. ಈ ದೃಷ್ಟಿಯಿಂದ ಕಳಕಳಿಯಿಂದ ವಿನಂತಿಸುತ್ತೇನೆ, ಮಹಾಜನ್ ವರದಿ ಪ್ರಕಾರ ಚಿಕ್ಕೋಡಿ ಜಿಲ್ಲೆ ಆಗಬೇಕು.

ಅಧ್ಯಕ್ಷರು: ಈ ಸದನದ ಮೂಲಕ ಪತ್ರಿಕೆಗಳಲ್ಲಿ ವಿನಂತಿಸುತ್ತೇನೆ; ವಿರೋಧ ಪಕ್ಷದ ನಾಯಕರಾಗಲಿ, ಶ್ರೀ ಯಡಿಯೂರಪ್ಪನವರಾಗಲಿ, ಯಾರೂ ಕೂಡ ಚಿಕ್ಕೋಡಿ ಜಿಲ್ಲೆ ಮಾಡುವುದನ್ನು ವಿರೋಧ ಮಾಡಲಿಲ್ಲ. ಸರ್ಕಾರದ ನಿಲುವು, ಈ ಸದನದ ನಿಲುವು ಏನೆಂದರೆ, ಅದು ಒಂದು ಗಡಿ ಭಾಗದಲ್ಲಿರತಕ್ಕದ್ದು. ಆದುದರಿಂದ ರಾಜ್ಯದ ಸಮಗ್ರ ಹಿತ ದೃಷ್ಟಿಯಿಂದ ಆ ಜಿಲ್ಲೆಯನ್ನು ಸಧ್ಯಕ್ಕೆ ವಿಭಜನೆ ಮಾಡತಕ್ಕದ್ದು ಕೂಡದು ಎಂಬ ಅಭಿಪ್ರಾಯಕ್ಕೆ ಸರ್ಕಾರದವರು ಮಾನ್ಯತೆ ಕೊಟ್ಟು ಮಾನ್ಯ ಮುಖ್ಯ-ಮಂತ್ರಿಗಳು ಆ ನಿಲುವನ್ನು ತಾಳಿದ್ದಾರೆ. ಆ ನಿಲುವನ್ನು ನೀವು ಹೇಳತಕ್ಕ ಕಾರಣಕ್ಕೆ ಪುನರ್ ವಿಮರ್ಶೆ ಮಾಡುವುದಾದರೆ ಮಾನ್ಯ ಮುಖ್ಯ-ಮಂತ್ರಿಗಳು ಸದನದಲ್ಲಿದ್ದಾಗ ಆ ವಿಚಾರವನ್ನು ತೆಗೆದುಕೊಳ್ಳೋಣ. ದಯಮಾಡಿ ಕುಳಿತುಕೊಳ್ಳಿ; ಈ ರೀತಿ ಆದರೆ ನಾನು ರೆಗ್ಯುಲೇಟ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ನಿನ್ನೆ ಮೇಲ್ಮನೆಯ ವಿರೋಧ ಪಕ್ಷದ ನಾಯಕರಾದ ಶ್ರೀ ಹೆಚ್.ಕೆ.ಪಾಟೀಲರು ಹೇಳಿದ್ದಾರೆ. ಆದ್ದರಿಂದ ದಯಮಾಡಿ ನಮ್ಮ ಚಿಕ್ಕೋಡಿಯನ್ನು ಒಂದು ಜಿಲ್ಲೆಯಾಗಿ ಮಾಡಬೇಕು.

ಅಧ್ಯಕ್ಷರು: ನಾನಲ್ಲ ಮಾಡುವುದು; ಮಾನ್ಯ ಮುಖ್ಯಮಂತ್ರಿಗಳು ತಮ್ಮ ನಿಲುವನ್ನು ಪ್ರಕಟಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾಗ ಆ ವಿಚಾರ ತೆಗೆದುಕೊಳ್ಳಿ. If you (referring to Hon'ble Leader of the Opposition) don't advice your members, it would be difficult for me. How I should regulate the business you tell me. I am getting irritated day by day. I also want the cooperation of members.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ಅಲ್ಲಿ ಏನಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

MR. SPEAKER: No matter can be taken up for the second time when the member is absent.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಯಾರೂ ಕೂಡ ಚಿಕ್ಕೋಡಿ ಜಿಲ್ಲೆ ಮಾಡಬಾರದೆಂದು ಪ್ರತಿಪಾದನೆ ಮಾಡಿದವರಲ್ಲ. ಇಲ್ಲಿ ಬೆಳಗಾಂ ಜಿಲ್ಲೆಯ ಬಗ್ಗೆ ಮಹಾಜನ್ ವರದಿ ಜಾರಿಯಲ್ಲಿದ್ದ ಕಾರಣ ಅದರ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡಿ ನಿರ್ಧಾರ ತೆಗೆದುಕೊಳ್ಳಬೇಕು. ಆದರೆ ತರಾತುರಿಯಲ್ಲಿ ಒಂದು ಜಿಲ್ಲೆಯನ್ನು 3 ಜಿಲ್ಲೆ ಮಾಡತಕ್ಕದ್ದು, 4 ಜಿಲ್ಲೆ ಮಾಡತಕ್ಕದ್ದು ಸಧ್ಯಕ್ಕೆ ಸೂಕ್ತವಲ್ಲವೆಂಬ ಅಭಿಪ್ರಾಯ ಮೂಡಿದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಸಧ್ಯಕ್ಕೆ ನಾವು ಅದನ್ನು ಕೈಬಿಟ್ಟಿದ್ದೇವೆ ಎಂದು. ಆದರೆ ಅಲ್ಲ ನೀವು ರಾಜ್ಯದ ಹಿತದೃಷ್ಟಿಯಿಂದ, ನಾವು ಮಾತನಾಡಿದ್ದನ್ನು ಚಿಕ್ಕೋಡಿ ಜಿಲ್ಲೆ ಬೇಡ ಅಂದಿದ್ದೇವೆಂಬ ಪ್ರಚಾರ ಮಾಡಿದ್ದರೆ, ಅದು ಸರಿಯಲ್ಲ, ಯಾರೂ ಕೂಡ ಈ ರೀತಿ ತಮ್ಮ ವ್ಯಕ್ತಿಗತವಾದ ಅಭಿಪ್ರಾಯವನ್ನು ನಮ್ಮ ಬಾಯಲ್ಲಿ ಹಾಕತಕ್ಕ ಪ್ರಯತ್ನ ಮಾಡಿದ್ದರೆ ಅದು ಸರಿಯಲ್ಲ. ಅದಕ್ಕಾಗಿ ನಾಳೆ ಸರ್ಕಾರದವರು 3ಜಿಲ್ಲೆ ಅಥವಾ 4 ಜಿಲ್ಲೆ ಎಂದು ಹೇಳುವುದು ಅವರ ವಿವೇಚನೆಗೆ ಬಿಟ್ಟದ್ದು. ಏಕೆಂದರೆ ಧಾರವಾಡದಲ್ಲಿ 2ಜಿಲ್ಲೆ ಆಗಬೇಕಾದುದು 3 ಜಿಲ್ಲೆ ಆಯಿತು. ನಮ್ಮಲ್ಲಿ ಇನ್ನೂ ಎರಡು ಮಾಡಬೇಕೆಂಬುದು ಆಗಲಿಲ್ಲ.

MR. SPEAKER: That, we can take up later. I only wanted to advice. Let the time of the House be made better use. ಸಮಯ ಬಹಳ ಕಡಿಮೆ ಇದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸನ್ಮಾನ್ಯ ಅಧ್ಯಕ್ಷರೆ ನಾನು ತಮ್ಮ ಮುಖಾಂತರ ಜನತಾದಳ ಶಾಸಕರಿರಬಹುದು, ಯಾರು ಅಲ್ಲಿ ಇವತ್ತಿನ ದಿವಸ ಸತ್ಯಾಗ್ರಹ ಮಾಡುತ್ತಿದ್ದಾರೆ, ಅವರಿಗೂ ಕೂಡ ನಾನು ಅಪೀಲು ಮಾಡುತ್ತಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಹೇಳಿಕೆ ಕೊಟ್ಟಿದ್ದಾರೆ. ಅವರಿಗೇನಾದರೂ ಸಂಶಯವಿದ್ದರೆ, ಪುನಃ ಬೇಕಾದರೆ ಮುಖ್ಯಮಂತ್ರಿಗಳು ಬಂದಾಗ ಭೇಟಿಯಾಗಿ ತಮ್ಮ ಸಂಶಯವನ್ನು ನಿವಾರಣೆ ಮಾಡಿಕೊಳ್ಳಬೇಕು. ಇವತ್ತು ಅಲ್ಲಿ ಉಪವಾಸ ಕುಳಿತ ಶಾಸಕರಿರಬಹುದು, ಸೋಷಿಯಲ್ ವರ್ಕರ್ಸ್ ಇರಬಹುದು, ಕಾರ್ಯಕರ್ತರಿರಬಹುದು, ಯಾವುದೇ ಪಕ್ಷದವರಿರಬಹುದು, ಅವರೆಲ್ಲರಿಗೂ ಕೂಡ ನಾನು ಅಪೀಲು ಮಾಡುವುದೇನೆಂದರೆ, ಈ ತರಹ ಯಾವುದನ್ನೂ ನಾವು ಹೇಳಿಲ್ಲ. ಅದಕ್ಕೆ ಅವರು ಆ ಪ್ರಕಾರ ನಡೆದುಕೊಳ್ಳುವ ಅವಶ್ಯಕತೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ನಾವು ಯಾರೂ ಚಿಕ್ಕೋಡಿಯನ್ನು ವಿರೋಧ ಮಾಡಲಿಲ್ಲ. ಕನ್ನಡದ ಮತ್ತು ಕರ್ನಾಟಕ ಹಿತದೃಷ್ಟಿಯಿಂದ, ಮಹಾಜನ್ ವರದಿಯ ಹಿತದೃಷ್ಟಿಯಿಂದ ಅದು ಭಾಗವಾಗಬಾರದೆಂಬುವ ಒಂದೇ ಒಂದು ಉದ್ದೇಶವೇ ಹೊರತು, ಚಿಕ್ಕೋಡಿಗೆ ವಿರೋಧ ಮಾಡಬೇಕೆಂದು ನಮಗ್ಯಾರಿಗೂ, ನನಗಾಗಲೀ, ಶ್ರೀ ಯಡಿಯೂರಪ್ಪನವರಿಗಾಗಲೀ ಇಲ್ಲ.

ಅಧ್ಯಕ್ಷರು: ಈ ಸದನದಲ್ಲಿ ಯಾರಿಗೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಇವತ್ತೂ ಸಹ ಮಹಾಜನ್ ವರದಿಯನ್ನು ಆಧಾರವಾಗಿಟ್ಟುಕೊಳ್ಳಬೇಕು. ಆ ದೃಷ್ಟಿಯಿಂದ ಕರ್ನಾಟಕ ಹಿತವನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ಮಹಾಜನ್ ವರದಿ ಬಗ್ಗೆ ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದರು, ಆದರೆ ಚಿಕ್ಕೋಡಿ ಪಾರ್ಲಿಮೆಂಟ್ ಕ್ಷೇತ್ರ ಮತ್ತು ಮಹಾಜನ್ ವರದಿಗೆ ಏನೂ ಸಂಬಂಧವಿಲ್ಲ.

ಅಧ್ಯಕ್ಷರು: ರಾಜ್ಯದ ಹಿತದೃಷ್ಟಿಯಿಂದ, ಇದು ಗಡಿ ಭಾಗದಲ್ಲಿರುವ ಜಿಲ್ಲೆಯಾದ್ದರಿಂದ ಅನೇಕ ಅಂಶಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಇಡೀ ಸದನ ಮತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಒಂದು ನಿರ್ಣಯಕ್ಕೆ ಬಂದಿದ್ದಾರೆ. ಅದೊಂದೇ ಕಾರಣವಲ್ಲ. ಆದ್ದರಿಂದ, ದಯಮಾಡಿ ಅದರಲ್ಲಿ ಚರ್ಚೆಗೆ ತೆಗೆದುಕೊಳ್ಳುವುದು ಬೇಡ. ಎಲ್ಲರೂ ಸಹಕರಿಸಬೇಕೆಂದು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ. None of these leaders has any hold over his members. What kind of arrangement you have? I am sorry, I cannot run the House like this.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಮನಸ್ಸಿಗೆ ನೋವುಂಟುಮಾಡಬೇಕೆಂದು ಯಾರಿಗೂ ಉದ್ದೇಶವಿಲ್ಲ.

MR. SPEAKER: There should be some discipline. I cannot run the House like this.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಿಮಗೆ ಎಲ್ಲಾ ಸಹಕಾರವನ್ನೂ ನಾವು ಕೊಡುತ್ತೇವೆ. ಈಗ ಬೆಳಗಾವಿ ವಿಚಾರದಲ್ಲಿ ಬಹಳ ಚೆನ್ನಾಗಿ ಸರ್ಕಾರದ ಅಭಿಪ್ರಾಯವನ್ನು, ಸದನದ ಅಭಿಪ್ರಾಯವನ್ನು, ನಮ್ಮೆಲ್ಲರ ಚಿಂತನೆಯನ್ನೂ ಸಹ ತಾವು ತಿಳಿಸಿದ್ದೀರಿ. ನಾನೇಕೆ ಎದ್ದು ನಿಂತೆ ಅಂದರೆ, ತಾವು ಮನಸ್ಸಿಗೆ ನೋವು ಮಾಡಿಕೊಳ್ಳಬೇಡಿ. ಬಾಳಾಸಾಹೇಬ್ ವಡ್ಡರ್‌ರವರು ಆಮರಣಾಂತ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿರುವುದರಿಂದ, ಈ ಸದನದ ಅನಿಸಿಕೆಯನ್ನು, ಅಭಿಪ್ರಾಯವನ್ನು, ರಾಜ್ಯದ ಒಟ್ಟಾರೆ ಹಿತದೃಷ್ಟಿಯಿಂದ ಅವರು ಗಮನದಲ್ಲಿಟ್ಟುಕೊಂಡು ತಮ್ಮ ಮುಷ್ಕರವನ್ನು ನಿಲ್ಲಿಸಬೇಕೆಂಬ ಮನವಿಯನ್ನು ನಾನು ಈ ಸಂದರ್ಭದಲ್ಲಿ ಮಾಡಿಕೊಳ್ಳುತ್ತಿದ್ದೇನೆ. ಸದನದ ಅಭಿಪ್ರಾಯವನ್ನು ತಾವು, ನಮ್ಮ ಸಭಾನಾಯಕರು, ಮುಖ್ಯಮಂತ್ರಿಗಳು, ವಿರೋಧಪಕ್ಷದ ನಾಯಕರು ಎಲ್ಲರೂ ಸಹ ಬೆಳಗಾವಿಯ ವಿಭಜನೆಯ ಪ್ರಶ್ನೆ ರಾಜ್ಯದ ಹಿತದೃಷ್ಟಿಯಿಂದ ಉದ್ಭವವಾಗುವುದಿಲ್ಲವೆಂದು ನಾವೀಗಾಗಲೇ ತಿಳಿಸಿದ್ದೇವೆ. ತುಂಬಾ ಧನ್ಯವಾದಗಳು.

ಶ್ರೀ ಜೆ.ಸಿ.ಮಾಧುಸ್ವಾಮಿ: ಸನ್ಮಾನ್ಯ ಅಧ್ಯಕ್ಷರೆ, ತಿಪಟೂರು ಕೊಬ್ಬರಿ ಮಾರಾಟದ ಪ್ರಮುಖ ಕೇಂದ್ರವಾಗಿದ್ದು...

(ಗೊಂದಲ)

ಅಧ್ಯಕ್ಷರು: ಮಾನ್ಯ ಉಪಾಧ್ಯಕ್ಷರೆ, ದಯವಿಟ್ಟು ಒಂದು ಹತ್ತು ನಿಮಿಷ ಈ ಪೀಠವನ್ನಲಂಕರಿಸಿ.

ಶ್ರೀ ವಾಟಾಳ್ ನಾಗರಾಜ್: ನೀವು ಕುಳಿತುಕೊಳ್ಳಿ. ಹೋಗಬಾರದು.

ಅಧ್ಯಕ್ಷರು: ಆ ಕಾರಣಕ್ಕಾಗಿ ಅಲ್ಲ. 10 ನಿಮಿಷ ದಯಮಾಡಿ ಸಹಕರಿಸಿ.

ಶ್ರೀ ವಾಟಾಳ್ ನಾಗರಾಜ್: ದಯಮಾಡಿ ಕ್ಷಮಿಸಿ. ಒಳ್ಳೆಯ ಸಂಪ್ರದಾಯವಲ್ಲ ಅದು. ದಯಮಾಡಿ ಕುಳಿತುಕೊಳ್ಳಿ. ಹಿಂದೆ ಹೇಳಿದ್ದಿರಿ, ನಾನು ಯಾವತ್ತೂ ಎದ್ದು ಹೋಗುವುದಿಲ್ಲವೆಂದು.

MR. SPEAKER: ಇಷ್ಟು ಪೆಂಡಿಂಗ್ ಇಟ್ಟುಕೊಂಡು... I cannot waste the time of the House.

ಶ್ರೀ ಬಿ.ಎಸ್.ಯಡಿಯೂರಪ್ಪ: ಸಾಕಷ್ಟು ಅವಕಾಶವನ್ನು ತಾವು ಕೊಟ್ಟಿದ್ದೀರಿ. ಅವರು ಇತಿಮಿತಿಗಳನ್ನು ಅರ್ಥಮಾಡಿಕೊಳ್ಳಬೇಕು. ನಾವು ಕೋ-ಆಪರೇಟ್ ಮಾಡದಿದ್ದರೆ ಆಗುವುದಿಲ್ಲ.

(ಉ) ತಿಪಟೂರಿನಲ್ಲಿ ಕೊಬ್ಬರಿ ವ್ಯಾಪಾರದಲ್ಲಿ ತೆರಿಗೆ ಕಳ್ಳತನವಾಗುತ್ತಿರುವುದು.

+ ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ): ತಿಪಟೂರು ಕೊಬ್ಬರಿ ಮಾರಾಟದ ಪ್ರಮುಖ ಕೇಂದ್ರವಾಗಿದ್ದು, ಕೊಬ್ಬರಿಗೆ ಒಳ್ಳೆಯ ಧಾರಣೆ ಕೂಡ ಇರುವ ಕಾಲದಲ್ಲಿ ತಿಪಟೂರಿನಲ್ಲಿ ಏನು ಕೊಬ್ಬರಿ ಮಾರಾಟವಾಗುತ್ತಿದೆ ಸರಿಸುಮಾರು 70 ರಷ್ಟು ಕೊಬ್ಬರಿ ತೆರಿಗೆ ವಂಚನೆಯಿಂದ ಆಚೆ ಹೋಗುತ್ತಿದೆ. ತಿಪಟೂರಿನಲ್ಲಿ ನಾವು ಸನ್ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಕೇಳಿ, ಒಂದು ಹಂತಕ್ಕೆ ಅವರು ನಮಗೆ ಸಹಾಯ ಮಾಡಿದ ಮೇಲೆ, ತೆರಿಗೆ ಚೆನ್ನಾಗಿ ವಸೂಲಾಗುತ್ತಿತ್ತು. ತಿಪಟೂರು ಎ.ಪಿ.ಎಂ.ಸಿ. ವ್ಯಾಪ್ತಿಗೆ ಕೊಬ್ಬರಿ ಬರದೆ, ಅನೇಕ ಕಡೆ ತಿಪಟೂರು ಆಚೆ ಭಾಗ ಅರಸೀಕೆರೆ, ಚಿಕ್ಕನಾಯ್ಕನಹಳ್ಳಿ, ತುರುವೇಕೆರೆ, ಚನ್ನರಾಯಪಟ್ಟಣ ತಾಲ್ಲೂಕುಗಳಿಗೆ ಕೊಬ್ಬರಿಯನ್ನು ರವಾನಿಸುತ್ತಿದ್ದಾರೆ. ಹಾಗಾಗಿ, ಏನಾಗಿದೆಯೆಂದರೆ, ತಿಪಟೂರಿನಲ್ಲಿ ನಿಜವಾಗಿ ಟ್ಯಾಕ್ಸ್ ಕಟ್ಟಿ ವ್ಯಾಪಾರ ಮಾಡುತ್ತಿರುವ ವರ್ತಕರು ಒಂದು ಕಡೆ ಕ್ಷೀಣಿಸುತ್ತಿದ್ದಾರೆ. ಒಂದು ಕ್ವಿಂಟಾಲ್ ಕೊಬ್ಬರಿಗೆ 200-210 ರೂಪಾಯಿಗಳಿಗೆ ಏನು ಟ್ಯಾಕ್ಸ್ ಬರುತ್ತಿತ್ತು, ಅದನ್ನು ತಪ್ಪಿಸಿ ಮಾರುವವರಿಗೆ ಇವರು ಸ್ಪರ್ಧೆ ಮಾಡಲಾರದ ಸ್ಥಿತಿ ಬಂದಿದೆ. ನಮಗೆ ಎ.ಪಿ.ಎಂ.ಸಿ.ಗೆ ಬರಬೇಕಾದ

ಹಣ ಕೂಡ ಜಮಾ ಆಗುತ್ತಿಲ್ಲ. 70, 80 ಲಕ್ಷ ವಸೂಲಾಗುತ್ತಿದ್ದ ಹಣ ಇವತ್ತು 20, 30 ಲಕ್ಷ ಕಡಿಮೆಯಾಗುವ ಸ್ಥಿತಿಗೆ ಬಂದಿದೆ. ಇದೇನಾದರೂ ಸರಿಯಾದರೆ ರೈತರಿಗೆ ಇನ್ನೂ 100-200 ರೂಪಾಯಿಗಳವರೆಗೆ ಜಾಸ್ತಿಯಾಗುವುದರಲ್ಲಿ ಅನುಮಾನವಿಲ್ಲ. ನಾನು ಸನ್ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಕೇಳುವುದೇನೆಂದರೆ, ಬೇಕಾದರೆ ನಾನು ಬಂದು ತಮಗೆ ಬರೆದುಕೊಡುತ್ತೇನೆ, ಅಂಥ ಕಡೆ ಸ್ವಲ್ಪ ಸ್ಕ್ವಾಡ್ ಹಾಕಿ ಏನಾದರೂ ನಂ (2)ನಲ್ಲಿ ಹೋಗುವ ಕೊಬ್ಬರಿಯನ್ನು ಸ್ವಲ್ಪ ತಹಬಂದಿಗೆ ತಂದು ನಿಜವಾಗಿ ಟ್ಯಾಕ್ಸ್ ಕಟ್ಟಿ ವ್ಯಾಪಾರ ಮಾಡುವ ವರ್ತಕರು ಮತ್ತು ರೈತರಿಬ್ಬರ ರಕ್ಷಣೆಯನ್ನು ಮಾಡಬೇಕೆಂದು ತಮ್ಮ ಮೂಲಕ ಹೇಳಬಯಸುತ್ತೇನೆ.

+ ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಸದಸ್ಯರು ನಂ(2)ರಲ್ಲಿ ಹೋಗುತ್ತಿರುವ ಕೊಬ್ಬರಿ ತೆರಿಗೆ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ. ಅವರು ಹೇಳಿದಂತೆ ಈಗಾಗಲೇ ಸ್ಕ್ವಾಡ್ ಹಾಕಲಿಕ್ಕೆ ನಾನು ಸೂಚಿಸಿದ್ದೇನೆ. ಅದನ್ನು ಬಿಗಿ ಮಾಡಲಿಕ್ಕೆ ಎಷ್ಟು ಸಾಧ್ಯವೋ ಅಷ್ಟು ಮಾಡುತ್ತೇನೆ. ಇದು ಬಹಳ ದಿನಗಳಿಂದ ನಡೆಯುತ್ತಿದೆ. ಬಹಳಷ್ಟು ಕೊಬ್ಬರಿ ವ್ಯಾಪಾರದಲ್ಲಿ ತೆರಿಗೆ ಕಳ್ಳತನವಾಗುತ್ತಿರತಕ್ಕದ್ದನ್ನು ನಾವು ಅನೇಕ ಸಾರಿ ಚರ್ಚೆ ಮಾಡಿದ್ದೇವೆ. ಎಷ್ಟು ಸಾಧ್ಯವೋ ಅಷ್ಟು ಬಿಗಿ ಮಾಡುತ್ತೇನೆ.

(ಊ) ಹುಬ್ಬಳ್ಳಿಯ ಲ್ಯಾಮಿಂಗ್ಟನ್ ಹೈಸ್ಕೂಲಿನಲ್ಲಿ ಶಿಕ್ಷಕರಿಗೆ ಅನ್ಯಾಯ.

ಶ್ರೀ ಅಶೋಕ್ ಕಾಟ್ವೆ (ಹುಬ್ಬಳ್ಳಿ): ಹುಬ್ಬಳ್ಳಿಯ ಲ್ಯಾಮಿಂಗ್ಟನ್ ಹೈಸ್ಕೂಲ್‌ನಲ್ಲಿ, ಶಿಕ್ಷಕರಿಗೆ ಅನ್ಯಾಯವಾಗಿದ್ದರ ಬಗ್ಗೆ ರಾಜ್ಯ ಸರ್ಕಾರಕ್ಕೆ ತಪ್ಪು ಕಲ್ಪನೆ ಕೊಟ್ಟಿದ್ದ ಕಮಿಷನರ್‌ರವರ ಬಾಬ್ತು ವಿವರಣೆ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್: ಅವರು ಹೇಳುವಂಥ ವಿಚಾರ ಮೇಲ್ಮನೆಯಲ್ಲಿ ಕೂಡ ಚರ್ಚೆಗೆ ಬಂದಿತ್ತು.

ಅಧ್ಯಕ್ಷರು: ನಾಳೆ ಸದನ ಮುಗಿಯುದರೊಳಗೆ, ಇವತ್ತು ಸಂಜೆ ಅಥವಾ ನಾಳೆಯೊಳಗೆ ಮಾಹಿತಿ ತರಿಸಿಕೊಡಿ.

(ಎ) ರಾಜ್ಯದಲ್ಲಿ ಒಂದಂಕಿ ಲಾಟರಿ ಹಾಗೂ ಮಟ್ಕಾ ಹಾವಳಿ.

+ ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ (ಕುಂದಾಪುರ): ಸನ್ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಒಂದಂಕಿ ಲಾಟರಿ ಮತ್ತು ಮಟ್ಕಾ ನಡೆಯತಕ್ಕದ್ದು ತಮಗೆಲ್ಲಾ ಗೊತ್ತಿದೆ. ಯಾವ ಕ್ಷೇತ್ರವೂ ಅದಕ್ಕೆ ಹೊರತಾಗಿಲ್ಲ. ಆದರೆ, ಅದನ್ನು ನಿಲ್ಲಿಸುವಂಥ ಪ್ರಾಮಾಣಿಕ ಪ್ರಯತ್ನ ಸಹ ನಮ್ಮ ಪೊಲೀಸ್ ಇಲಾಖೆಯಿಂದ ಆಗುತ್ತಿಲ್ಲ. ಅದಕ್ಕೆ ತಾವು ಬೇರೆ ಬೇರೆ ಸಂದರ್ಭಗಳಲ್ಲಿ, ಕಾನೂನಿನ ನೆರವನ್ನು ಅಥವಾ ತಾಂತ್ರಿಕ ಕಾರಣಗಳನ್ನೋ ಕೊಡುತ್ತಿದ್ದೀರಿ. ಈ ಮಟ್ಕಾ ಏಕೆ ನಡೆಯುತ್ತಿದೆ? ಇದನ್ನು ನಿಲ್ಲಿಸಲಿಕ್ಕೆ ಏಕೆ ಆಗುತ್ತಿಲ್ಲ?

ತಮ್ಮಲ್ಲಿರುವ ಇಂಟೆಲಿಜೆನ್ಸ್ ವೀಕ್ ಆಗಿದೆಯೇ ಅಥವಾ ತಮ್ಮ ಇಲಾಖೆ ಇದರಲ್ಲಿ ಶಾಮೀಲಾಗಿದೆಯೇ ಎನ್ನುವುದೇ ನನ್ನ ಪ್ರಶ್ನೆ. ಒಂದು ವೇಳೆ ಅದನ್ನು ನಿಲ್ಲಿಸಲಾಗದಿದ್ದರೆ, ಏನು ಅನಾಹುತವಾಗಬಹುದೆಂಬುದು ತಮ್ಮ ಮನಸ್ಸಿನಲ್ಲಿದೆಯೇ? ಒಂದಂಕಿ ಲಾಟರಿ ಮತ್ತು ಮಟ್ಕಾ ಯಾವ ರೀತಿಯಲ್ಲಿ ನಡೆಯುತ್ತಿದೆ ಎನ್ನತಕ್ಕದ್ದಕ್ಕೆ ನನ್ನ ಕ್ಷೇತ್ರದ ಮಟ್ಟಿಗೆ ಹೇಳುವುದಾದರೆ, ಸಿಂಗಲ್ ನಂಬರ್ ಲಾಟರಿ ಷಾಪ್‌ನಿಂದ 28 ಸಾವಿರ ರೂಪಾಯಿ ಆದಾಯ ಪೊಲೀಸ್ ಠಾಣೆಗೆ ಬರುತ್ತದೆ, ಮಟ್ಕಾ ಮತ್ತು ಓ.ಸಿ.ಬಿಡ್‌ನಲ್ಲಿ 19 ಜನ ಇದ್ದರೆ, 2,500,47,500 ರೂಪಾಯಿ ಬರುತ್ತದೆ, ವೈನ್ ಷಾಪ್‌ನಿಂದ 5 ಸಾವಿರ ರೂಪಾಯಿ ಈಚ್ ಆಕ್ಸಿಡೆಂಟ್ ಮತ್ತು ಅಸಾಲ್ಟ್ ಕೇಸಸ್‌ನಿಂದ ಬರುತ್ತದೆ. ಯಾವ ರೀತಿಯಾಗಿ ಅದು ಹಂಚಲ್ಪಡುತ್ತದೆಂದರೆ, ಸರ್ಕಲ್ ಇನ್ಸ್‌ಪೆಕ್ಟರ್ ಆಫೀಸಿಗೆ 15,000, ಸಬ್-ಇನ್ಸ್‌ಪೆಕ್ಟರ್‌ಗೆ 10,000 ಎ.ಎಸ್.ಐ.ಗೆ 6,000 ಎಚ್.ಸಿ.ಗೆ 5,000 ಪಿ.ಸಿ.ಗೆ 2,500. ಇದು ಯಾವ ರೀತಿಯಲ್ಲಿ ನಡೆಯುತ್ತಿದೆಯೆಂದರೆ ನಮ್ಮ ಕ್ಷೇತ್ರದ ಶಂಕರನಾರಾಯಣ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಈ ಮಟ್ಕಾ ನಡೆಸುತ್ತಿರುವವರು ಯಾರು ಗೊತ್ತೇ? ಕೊಲೆ ಆಪಾದಿತರು ದರೋಡೆಕೋರರು ಕೆಲಸದಲ್ಲಿರುವವರು ಮತ್ತು ಕಳ್ಳಸಾಗಾಣಿಕೆದಾರರು. ನಾನು ಈ ಬಗ್ಗೆ ಹಲವಾರು ಬಾರಿ ಈ ವಿಧಾನಸಭೆಯ ಮುಖಾಂತರ ತಮ್ಮ ಗಮನಕ್ಕೆ ತರಲು ಪ್ರಯತ್ನಪಟ್ಟೆ. ತಾವು ಮಟ್ಕಾ ನಡೆಯುತ್ತಿಲ್ಲವೆಂದು ಉತ್ತರ ಕೊಡುತ್ತಿದ್ದೀರಿ. ಮಟ್ಕಾ ನಡೆಯದೇ ಇದ್ದರೆ, ಆ ಜವಾಬ್ದಾರಿಯನ್ನು ನಾನು ಹೊರುತ್ತೇನೆ. ಒಂದು ವೇಳೆ ಮಟ್ಕಾ ನಡೆಯುವುದಾದರೆ ಆ ಜವಾಬ್ದಾರಿಯನ್ನು ನೀವು ಹೊರುತ್ತೀರಾ ಎನ್ನುವ ಪ್ರಶ್ನೆಯನ್ನು ನಾನು ನೇರವಾಗಿ ಸದನದ ಮೂಲಕವಾಗಿ ತಮಗೆ ಕೇಳುತ್ತೇನೆ. ಏಕೆಂದರೆ, 2-3 ಸಾರಿ ಈ ಪ್ರಶ್ನೆ ವಿಧಾನಸಭೆಯಲ್ಲಿ 351ರ ಮೇಲೆ ಬಂದಿದೆ. ಆದ್ದರಿಂದ, ನಾನು ಕೇಳುವುದೇನೆಂದರೆ, ಕೊಲೆಗಾರರು ಅಥವಾ ದರೋಡೆಕೋರರು ಅಥವಾ ರಾಬರೀಸ್ ಅವರ ಸಂಪರ್ಕ ಪೊಲೀಸರಿಗೆ ಇರುವುದಾದರೆ ಜನಸಾಮಾನ್ಯರಿಗೆ ಯಾವ ರೀತಿ ನ್ಯಾಯ ಸಿಗುತ್ತದೆನ್ನುವುದನ್ನು ತಾವು ಚಿಂತನೆ ಮಾಡಬೇಕಾಗುತ್ತದೆ.

11.10 ಎ.ಎಂ

ನೇರವಾಗಿ ಇಂಥವರ ಸಂಪರ್ಕ ಪೊಲೀಸರಿಗೆ ಇರುವುದಾದರೆ ಎಲ್ಲರೂ ಪೊಲೀಸರ ಹತ್ತಿರ ಹೋಗಬೇಕಾದರೆ ಶಾಸಕರ ಹತ್ತಿರ ಅಥವಾ ಯಾರ ಹತ್ತಿರವಾದರೂ ನ್ಯಾಯ ಕೇಳುವುದಕ್ಕೆ ಬರುವುದಿಲ್ಲ. ನೇರವಾಗಿ ಮರ್ಡರರ್ಸ್ ಹತ್ತಿರ ರಾಬರರ್ಸ್ ಹತ್ತಿರ ಕಾಳಸಂತೆಕೋರರ ಹತ್ತಿರ ಹೋಗಿ ನ್ಯಾಯ ಕೇಳತಕ್ಕೆ ಕೆಳಮಟ್ಟದ ಪರಿಸ್ಥಿತಿಯಲ್ಲಿ ನಾವಿದ್ದೇವೆ ಎಂಬ ವಿಚಾರವನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು: ಈ ವಿಚಾರವನ್ನು ನಾಲ್ಕೈದು ಸಾರಿ ಮಾನ್ಯ ಸದಸ್ಯರು ಪ್ರಸ್ತಾಪ

ಮಾಡಿದ್ದಾರೆ. ಸುಮಾರು ಕಾಗದಗಳು ನಮಗೆ ನೇರವಾಗಿ ಬರುತ್ತಿವೆ. ತುಮಕೂರಿಗೆ ಯಾವುದೋ ಒಂದು ಸಭೆಗೆ ಹೋದಾಗ ಅಲ್ಲೂ ಹೇಳಿದರು. ಸನ್ಮಾನ್ಯ ಸುರೇಶ್‌ಕುಮಾರ್ ಅವರು ಹಾಗೂ ಚಿಕ್ಕಪೇಟೆ ಕ್ಷೇತ್ರದ ಸದಸ್ಯರಾದ ಪ್ರಕಾಶ್ ಅವರು ಹೇಳಿದ್ದಾರೆ. ಅನೇಕ ಜನ ಸದಸ್ಯರು ಹೇಳಿದ್ದಾರೆ. ಅನೇಕ ಜನ ಮಧ್ಯಮ ವರ್ಗದ ಕುಟುಂಬಗಳು ಕೆಳಹಂತದ ಕುಟುಂಬಗಳು ಸರ್ವನಾಶವಾಗುತ್ತಿವೆ ಒಂದಂಕಿ ಲಾಟರಿಯಿಂದ ಎಂದು ಹೇಳುತ್ತಿದ್ದಾರೆ. ದಯಮಾಡಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಿ. Please make a detailed statement.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅವರನ್ನೆಲ್ಲಾ ಕರೆಸಿ ಮೀಟಿಂಗ್ ಮಾಡುತ್ತೇವೆಂದು ಮಾನ್ಯ ಸಿದ್ದರಾಮಯ್ಯನವರು ಹೇಳಿದರು. ಮೀಟಿಂಗೂ ಮಾಡಲಿಲ್ಲ, ಕರೆಸಲೂ ಇಲ್ಲ.

ಅಧ್ಯಕ್ಷರು: ಸರ್ಕಾರದ ಪರವಾಗಿ ಉಪಮುಖ್ಯಮಂತ್ರಿಗಳು ಏನು ಹೇಳುತ್ತಾರೆ ಕೇಳೋಣ.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಸುರೇಶ್‌ಕುಮಾರ್ ಅವರು ಪ್ರಸ್ತಾಪ ಮಾಡಿದಾಗ ಮಾನ್ಯ ರೆಡ್ಡಿಯವರು ಪ್ರಸ್ತಾಪ ಮಾಡಿದಾಗ ನಾನು ಮೀಟಿಂಗ್ ಮಾಡಿ ಪೊಲೀಸಿನವರಿಗೆ ಸೂಚನೆಗಳನ್ನು ಕೊಟ್ಟಿದ್ದೇನೆ. ಈ ಮಧ್ಯೆ ಏನಾಗಿದೆ ಎಂದರೆ ಹೈಕೋರ್ಟಿನಿಂದ ಕೆಲವರು ಸ್ಟೇ ತೆಗೆದುಕೊಂಡುಬಿಟ್ಟಿದ್ದಾರೆ. A batch of writ petitions.. ಅಲ್ಲಿ ಏನಾಗಿದೆ, ಪೊಲೀಸಿನವರು ಇಂಟರ್‌ಫಿಯರ್ ಆಗಬಾರದು ಎಂದು ಆಗಿದೆ. ಅದಕ್ಕೆ ನಾವೇನು...

ಅಧ್ಯಕ್ಷರು: ಸಿಂಗಲ್ ಡಿಜಿಟ್ ಲಾಟರೀ?

ಶ್ರೀ ಸಿದ್ದರಾಮಯ್ಯ: ಸಿಂಗಲ್ ಡಿಜಿಟ್ ಎಂದು ಹೇಳುವುದಿಲ್ಲ ಅವರು. ಎರಡಂಕಿ ಎಂದು ಮಾಡುತ್ತಾರೆ. ಕೊನೇ ಅಂಕಿ ಬಿಟ್ಟುಬಿಡುತ್ತಾರೆ, ಆಲ್‌ಮೋಸ್ಟ್ ಸಿಂಗಲ್ ಡಿಜಿಟ್ಟೇ ನಡೆಸುವುದು. ಡಬ್ಬಲ್ ಡಿಜಿಟ್ಟನ್ನೇ ಸಿಂಗಲ್ ಡಿಜಿಟ್ ಎಂದು ಮಾಡಿಕೊಳ್ಳುತ್ತಾರೆ ಅವರು. ಅಂಡರ್‌ಸ್ಟ್ಯಾಂಡಿಂಗ್ ಅದು. ಆ ತರಹ ಮಾಡಿಕೊಂಡು ನಡೆಸತಕ್ಕದ್ದನ್ನು ಮಾಡುತ್ತಾ ಇದ್ದಾರೆ. ಅದಕ್ಕೆ ನಾವು ಇಲ್ಲೀಗಲ್ ಆಕ್ಟಿವಿಟೀಸ್ ಇದ್ದರೆ ಪೋಲೀಸಿನವರು ಇಂಟರ್‌ಫಿಯರ್ ಆಗಬಹುದು ಎಂಬುದನ್ನು ತೆಗೆದುಕೊಂಡು ಅವು ಇಲ್ಲೀಗಲ್ ಆಕ್ಟಿವಿಟೀಸ್ ಎಂತಲೇ ಮಾಡಿ ಅದಕ್ಕೆ ನೀವು ಇಂಟರ್‌ಫಿಯರ್ ಆಗಬೇಕು ಎಂದು ಡಿ.ಜಿ.ಪಿ. ಕೂಡ ಬೆಂಗಳೂರಿನಲ್ಲಿರತಕ್ಕ ಎಲ್ಲಾ ಡಿ.ಸಿ.ಪಿ.ಗಳಿಗೆ ಮತ್ತು ಬೇರೆ ಎಸ್.ಪಿ.ಗಳಿಗೆ ಈಗಾಗಲೇ ಸುತ್ತೋಲೆಗಳನ್ನು ಕೊಟ್ಟು ಇದನ್ನು ತಿಳಿಸಬೇಕು ಎಂದು ಮಾಡಿದ್ದಾರೆ. ಕೆಲವು ಕಡೆ ನಿಂತಿದೆ, ಇನ್ನು ಕೆಲವು ಕಡೆ ಇದು ನಡೆಯುತ್ತಾ ಇದೆ. ಅದಕ್ಕೆ ನಾನು ಅವತ್ತು ಕೂಡ ಹೇಳಿದ್ದೇನೆ, ಇವತ್ತೂ ಹೇಳುತ್ತಿದ್ದೇನೆ. ನಾವು ಒಂದ ಸಾರಿ ಡೆಲ್ಲಿಗೆ ಹೋಗಿ ಪೂರಾ ಲಾಟರಿಯನ್ನೇ ನಿಲ್ಲಿಸದೇ ಹೋದರೆ ಈ ರೋಗ

ಸಂಪೂರ್ಣವಾಗಿ ನಿಲ್ಲುವುದು ಭಾರಿ ಕ: ಗುತ್ತದೆ. ಈ ದೇಶದ ಪ್ರಧಾನಿಗಳಾದ ಗುಜ್ರಾಲ್ ಅವರೂ ಕೂಡ ಒಂದು ಸಾರಿ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ ಈ ಲಾಟರಿ ನಿಲ್ಲಿಸಬೇಕಾಗುತ್ತದೆ ಎಂದು. ಯಾಕೆಂದರೆ ಇವರು ಆರ್ಗನೈಸ್ಡ್ ಲಾಟರಿ ಹೆಸರಿನಲ್ಲಿ ತ್ರಿಬಲ್ ಡಿಜಿಟ್, ಡಬ್ಬಲ್ ಡಿಜಿಟ್ ಎಂದು ಮಾಡಿಕೊಂಡು ಜನರಿಗೆ ಮೋಸ ಮಾಡತಕ್ಕಂಥದ್ದು, ಅನೇಕ ಜನ ಬಡವರು, ಸಾಮಾನ್ಯವಾಗಿ ಕೆಳಹಂತದಲ್ಲಿರತಕ್ಕ ಸಾಮಾನ್ಯ ಜನ ಇದಕ್ಕೆ ಬಲಿಯಾಗಿದ್ದಾರೆ. ಅದರ ಜೊತೆಗೆ ಕ್ರಿಮಿನಲ್ ಆಕ್ಟಿವಿಟೀಸ್ ಕೂಡ ಹೆಚ್ಚಾಗಿಬಿಡುತ್ತವೆ. ರಾತ್ರಿ ಹೊತ್ತು ದಾರಿಯಲ್ಲಿ ಚೈನ್ ಕಳೆದುಕೊಂಡು ಬಿಡುವುದು ಮಟ್ಕಾ ಆಡುವುದು, ಸಿಂಗಲ್ ಡಿಜಿಟ್ ಲಾಟರಿ ಮಾಡುವುದು ಇವೆಲ್ಲಾ ನಡೆಯುತ್ತಾ ಇದೆ. ಸರ್ಕಾರ ಎಷ್ಟು ಕ್ರಮ ತೆಗೆದುಕೊಳ್ಳಬೇಕು ಎನ್ನುವುದನ್ನೆಲ್ಲಾ ಪೊಲೀಸಿನವರಿಗೆ ಹೇಳಿದ್ದೇವೆ. ಮತ್ತು ಇದರ ಜೊತೆಗೆ ಸಂಪೂರ್ಣ ಲಾಟರಿಯನ್ನೇ ನಿಲ್ಲಿಸಬೇಕು. ಯಾಕೆಂದರೆ ಸರ್ಕಾರಕ್ಕೆ ಇದರಿಂದ ನಾಲ್ಕೈದು ಕೋಟಿ ರೂಪಾಯಿ ಒಂದು ವರ್ಷಕ್ಕೆ ಬರುತ್ತದೆ. ಇದಕ್ಕೆ ದೊಡ್ಡ ಸಿಬ್ಬಂದಿ ಎಲ್ಲಾ ಇಟ್ಟುಕೊಂಡು ನಡೆಸಬೇಕಾಗುತ್ತದೆ. ನಾನೂ ಕೂಡ ಎರಡು ಕಾಗದಗಳನ್ನು ಬರೆದಿದ್ದೇನೆ ಪ್ರಧಾನ ಮಂತ್ರಿಗಳಿಗೆ ಮತ್ತು ಕೇಂದ್ರ ಹಣಕಾಸುಮಂತ್ರಿಗಳಿಗೆ. ನಾವು ಒಂದು ಸಾರಿ ಹೋಗಿ ಅಲ್ಲಿ ಕುಳಿತುಕೊಂಡು ಏನಾದರೂ ಮಾಡಿ ಒಂದು ಆರ್ಡಿನೆನ್ಸಾದರೂ ಹೊರಡಿಸಿ ಇದನ್ನು ಸಂಪೂರ್ಣವಾಗಿ ನಿಲ್ಲಿಸಬೇಕು.

ಶ್ರೀ ವಾಟಾಳ್ ನಾಗರಾಜ್: ಕರ್ನಾಟಕ ಸರ್ಕಾರ ಮಾಡುತ್ತದೆ ಎಂದು ಹೇಳಿ.

ಶ್ರೀ ಸಿದ್ಧರಾಮಯ್ಯ: ಹಾಗೆ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ನಾವು ಲಾಟರಿ ನಿಲ್ಲಿಸಿದ್ದೇವೆ ಎಂದು ಕರ್ನಾಟಕ ಸರ್ಕಾರದ ನಿಲುವನ್ನು ಕೇಂದ್ರಸರ್ಕಾರಕ್ಕೆ ತಿಳಿಸುವುದು ಒಳ್ಳೆಯದು.

ಶ್ರೀ ಸಿದ್ಧರಾಮಯ್ಯ: ನಾವು ನಿಲ್ಲಿಸುವುದಕ್ಕೆ ತಯಾರಾಗಿದ್ದೇವೆ. ಆದರೆ ಲಾಟರಿ ನಡೆಸುವುದು ಕೇಂದ್ರ ಸರ್ಕಾರದ ಕಾನೂನಿನಲ್ಲಿ ಬರುತ್ತದೆ. ಸುಪ್ರೀಂ ಕೋರ್ಟಿನವರು ಒಂದು ಜಡ್ಜ್‌ಮೆಂಟಿನಲ್ಲಿ ಬೇರೆ ರಾಜ್ಯಗಳಿಗೆ ಈ ರಾಜ್ಯದಲ್ಲಿ ಲಾಟರಿ ಟಿಕೇಟ್ ಮಾರಾಟ ಮಾಡಲಿಕ್ಕೆ ಅವಕಾಶ ಕೊಡಬೇಕೆಂದು ಹೇಳಿದ್ದಾರೆ. ಆ ರೀತಿ ಸುಪ್ರೀಂ ಕೋರ್ಟ್ ಡಿಸಿಷನ್ ಇದೆ. ಆ ಡಿಸಿಷನ್‌ಗೆ ಅನುಗುಣವಾಗಿ ಬೇರೆ ರಾಜ್ಯದವರು ಒಂದಂಕಿ ಲಾಟರಿ ನಡೆಸಬಾರದು ಎಂದು ಅವರಿಗೆ ಬಹಳ ಸ್ಪಷ್ಟವಾದಂಥ ಲಿಖಿತಮೂಲಕ ಕೊಟ್ಟು ಅವರಿಗೆ ಮಾರಾಟ ಮಾಡುವುದಕ್ಕೆ ಅನುಮತಿ ಕೊಡುತ್ತೇವೆ. ಅವರೇನು ಮಾಡುತ್ತಾರೆ, ಒಂದಂಕಿ ಬಿಟ್ಟು ಎರಡಂಕಿ ತೆಗೆದುಕೊಂಡು ಮಾಡುತ್ತಿದ್ದಾರೆ.

ಅಧ್ಯಕ್ಷರು: ನಾನೇನು ಹೇಳುತ್ತೇನೆ ಅಂದರೆ ಬಹಳ ಸುಲಭವಾದ ಸಲಹೆ ನಾನು ಕೊಡುವುದು. ನಮ್ಮ ಪೊಲೀಸ್ ಅಧಿಕಾರಿಗಳು ಕೆಳಹಂತದಲ್ಲಿ ಬೇರೆ ವಿಚಾರದಲ್ಲೆಲ್ಲಾ

ಸ್ವಲ್ಪ ರೂಲ್ಸ್ ಬಿಟ್ಟು ಆಚೆ ಈಚೆ ಹೋಗುತ್ತಾರಲ್ಲಾ ಅಂಥ ಕೆಲಸವನ್ನು ಇದರಲ್ಲಿ ಮಾಡಬಹುದು. ಇಂಥ ವಿಚಾರದಲ್ಲಿ ರೂಲ್ಸ್ ಪ್ರಕಾರ ಸ್ಟ್ರಿಕ್ಟಾಗಿ ಹೋಗದೆ ಸ್ವಲ್ಪ ತಮ್ಮ ಕೈ ಕಾಲು ಆ ಕಡೆ ಈ ಕಡೆ ಜೋರಾಗಿ ಬೀಸಿದರೆ ತಮ್ಮಷ್ಟಕ್ಕೆ ತಾವೇ ಅವರೇ ಮುಚ್ಚುತ್ತಾರೆ. ಇಂಥವರ ವಿಚಾರದಲ್ಲಿ ರೂಲ್ಸ್ ಅಬ್ಸರ್ವ್ ಮಾಡುತ್ತಾರೆ ಅಸಹಾಯಕರಿದ್ದರೆ ಅವರ ಮೇಲೆ ರೂಲ್ಸ್ ಅಬ್ಸರ್ವ್ ಮಾಡುವುದಿಲ್ಲ.

ಶ್ರೀ ವಾಟಾಳ್‌ನಾಗರಾಜ್: ಆ ಕೆಲಸ ಮಾಡುವುದು ಒಳ್ಳೆಯದು. ಅಧ್ಯಕ್ಷರ ಸಲಹೆಯಂತೆ ಸ್ವಲ್ಪ ಬುದ್ಧಿ ಉಪಯೋಗಿಸಿ ಬಿಟ್ಟರೆ ಎಲ್ಲಾ ನಿಂತುಹೋಗುತ್ತವೆ. ಇದು ಒಂದು. ಎರಡನೆಯದು ಕರ್ನಾಟಕ ಸರ್ಕಾರ ನೇರವಾಗಿ ಹೇಳಿಬಿಡಿ. ಇನ್ನು ಮುಂದೆ ನಮ್ಮ ಸರ್ಕಾರದ ನೀತಿ ಇದು, ನಾವು ಲಾಟರಿ ನಿಲ್ಲಿಸುತ್ತೇವೆ ಎಂದು ಕೇಂದ್ರಸರ್ಕಾರಕ್ಕೆ ಹೇಳಿಬಿಡಿ.

ಶ್ರೀ ಸಿದ್ಧರಾಮಯ್ಯ: ವಾಟಾಳ್ ನಾಗರಾಜ್ ಅವರೇ, ;ನಾವು ನಮ್ಮ ರಾಜ್ಯದ ಲಾಟರಿಯನ್ನು ನಿಲ್ಲಿಸಿಬಿಡುತ್ತೇವೆ. ನಾವು ನಿಲ್ಲಿಸಿಬಿಡೋಣ. ಆದರೆ ಬೇರೆ ರಾಜ್ಯದವರು ಇಲ್ಲಿ ತಂದು ಮಾರುವುದನ್ನು ನಿಲ್ಲಿಸುವುದಕ್ಕಾಗುವುದಿಲ್ಲ ಕಾನೂನು ರೀತ್ಯಾ.

ಅಧ್ಯಕ್ಷರು: ಅದಕ್ಕೆ ನಾನು ಏನು ಹೇಳುವುದು ಎಂದರೆ ಅವರು ಆ ಲಾಟರಿ ಮಾರುವುದಕ್ಕೆ ಆಗದೇ ಇರುವ ವ್ಯವಸ್ಥೆಯನ್ನು ಇವರು ಮನುಸ್ಸು ಮಾಡಿದರೆ ಮಾಡಬಹುದು.

ಶ್ರೀ ಸಿದ್ಧರಾಮಯ್ಯ: ಅದಕ್ಕೇನು ಮಾಡುತ್ತಾರೆ, ಅಲ್ಲಿನ ಹಣಕಾಸಿನ ಮಂತ್ರಿಗಳಿಗೆ ಕೇಂದ್ರಸರ್ಕಾರಕ್ಕೆ ಬರೆಯುತ್ತಾರೆ ಇಲ್ಲಿಗೆ ಬರೆಯುತ್ತಾರೆ. ಇವೆಲ್ಲಾ ತಾಪತ್ರಯಗಳಿವೆ. ಉಡುಪಿಯಲ್ಲಿ ಮಟ್ಕಾ ನಡೆಯುತ್ತಿದೆ ಎನ್ನುವುದನ್ನು ಹೇಳಿದ್ದಾರೆ. ಪೊಲೀಸಿನವರಿಗೆ ಹೇಳಿ ಅದನ್ನು ನಿಲ್ಲಿಸುವುದಕ್ಕೆ ಎಲ್ಲಾ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್.ಸುರೇಶ್ ಕುಮಾರ್: ಅಧ್ಯಕ್ಷರೇ....

ಅಧ್ಯಕ್ಷರು: ಚರ್ಚೆ ಬೇಡ.

ಶ್ರೀ ಎಸ್.ಸುರೇಶ್ ಕುಮಾರ್: ಚರ್ಚೆ ಅಲ್ಲ. ಎರಡೇ ಎರಡು ಪಾಯಿಂಟ್ ಹೇಳಬೇಕು ಅಂತ ಇದ್ದೇನೆ.

ಅಧ್ಯಕ್ಷರು: ಸಿದ್ಧರಾಮಯ್ಯನವರೇ, ತಮ್ಮ ವಿಚಾರ ನಮಗೆ ಗೊತ್ತಿದೆ. ನಿಮ್ಮ ನಿಲುವೆಂಥದ್ದು ಇಂಥ ವಿಚಾರಗಳಲ್ಲಿ ಎಂಬುದು ಗೊತ್ತಿದೆ. ನಾನು ಇಷ್ಟೇ ವಿನಂತಿ ಮಾಡಿಕೊಳ್ಳುತ್ತೇನೆ ತಮ್ಮಲ್ಲಿ ಸಾರ್ವಜನಿಕರ ಹಿತಕ್ಕಾಗಿ ಅಧಿಕಾರ ದುರುಪಯೋಗ ಆದರೆ

ಸಾರ್ವಜನಿಕರು ನಮ್ಮ ಮೇಲೆ ಬೇಸರಪಟ್ಟುಕೊಳ್ಳುವುದಿಲ್ಲ. ಅಧಿಕಾರದ ಇತಿಮಿತಿಯನ್ನು ಮೀರಿ ಅವರ ಮೇಲೆ ಅಧಿಕಾರ ಚಲಾಯಿಸಿದರೂ ಕೂಡ ಚಿಂತೆ ಇಲ್ಲ. ಅವರಿಗೆ ಭಯ ಬರಬೇಕು. ಅವರಿಗೆ ನಾವು ಉಳಿಯುವುದಿಲ್ಲ ಎಂಬ ಭಯ ಬರಬೇಕು. ಹೇಳಿ ನಿಮ್ಮ ಅಧಿಕಾರಿಗಳಿಗೆ. ಯಾರೂ ಇಲ್ಲಿ ಒಂದಂಕಿ ಲಾಟರಿ ನಡೆಸುವವರಿಗೆ ಏತಕ್ಕೆ ಹೊಡೆದಿರಿ ಎಂದು ಕೇಳುವುದಿಲ್ಲ. ದಯಮಾಡಿ ಸ್ವಲ್ಪ ನೋಡಿ.

ಶ್ರೀ ಸಿದ್ಧರಾಮಯ್ಯ: ಆ ಸೂಚನೆ ಕೊಡುತ್ತೇನೆ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ಸಿಂಗಲ್ ನಂಬರ್ ಲಾಟರಿ ನಿಲ್ಲಿಸುವುದಕ್ಕೆ ಕೇಂದ್ರದಿಂದ ಅನುಮತಿ ಬೇಕು, ಅದನ್ನು ತೆಗೆದುಕೊಳ್ಳಿ. ಆದರೆ ಮಟ್ಕಾಕ್ಕೆ ಏನು ಸಂಬಂಧ ಇದೆ? ಮಟ್ಕಾ ನಿಲ್ಲಿಸುವುದಕ್ಕೆ ಏನು ಸಂಬಂಧ ಇದೆ?

ಶ್ರೀ ಸಿದ್ಧರಾಮಯ್ಯ: ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡಲೇ ಸೂಚನೆ ಕೊಟ್ಟು ಯಾವ ಊರಿನಲ್ಲಿ ಅದು...

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ಶಂಕರನಾರಾಯಣ ಮತ್ತು ಕುಂದಾಪುರ ತಾಲ್ಲೂಕಿನಲ್ಲಿ ಲಿಸ್ಟ್ ಕೊಟ್ಟಿನಲ್ಲಾ ನಾನೀಗ.

ಶ್ರೀ ಸಿದ್ಧರಾಮಯ್ಯ: ಕುಂದಾಪುರದಲ್ಲಿ ನಡೆಯುತ್ತಿದ್ದರೆ ಕೂಡಲೇ ನಿಲ್ಲಿಸುತ್ತೇವೆ.

ಅಧ್ಯಕ್ಷರು: ಹಷ್ಮಿ ಅವರು ಗಲಾಟೆ ಮಾಡುತ್ತಿದ್ದಾರೆ. ಬೀದರ್‌ನಲ್ಲಿದೆ ನಿಲ್ಲಿಸಿ ಎಂದು. ಎಲ್ಲಾ ಕಡೆ ಇದು ಇದೆ. ಇಲ್ಲಿದೆ, ಇಲ್ಲಿಲ್ಲ ಎಂದು ಇಲ್ಲ. ತುಮಕೂರಿನಲ್ಲಿ ಬಸ್‌ಸ್ಟ್ಯಾಂಡಿನಲ್ಲೇ ನಡೆಸುತ್ತಾರಂತೆ.

ಶ್ರೀ ಸಿದ್ಧರಾಮಯ್ಯ: ಅಧ್ಯಕ್ಷರೇ, ಈಗ ಮೈಸೂರಿನಲ್ಲಿ ನಿಂತುಹೋಗಿಬಿಟ್ಟಿದೆ. ಒಂದಂಕಿ ಲಾಟರಿ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಈ ವಿಚಾರದಲ್ಲಿ ಉಪಮುಖ್ಯಮಂತ್ರಿಗಳು ಪೊಲೀಸ್ ಅಧಿಕಾರಿಗಳನ್ನು ಕರೆದು ಇಡೀ ರಾಜ್ಯದಲ್ಲಿ ಮಟ್ಕಾ ನಿಲ್ಲಿಸುವುದಕ್ಕೆ, ಲಾಟರಿ ನಿಲ್ಲಿಸುವುದಕ್ಕೆ ಕ್ರಮ ಕೈಗೊಳ್ಳಿ.

ಶ್ರೀ ಸಿದ್ಧರಾಮಯ್ಯ: ಅದನ್ನು ಕಾನೂನು ಪ್ರಕಾರ ಲಿಖಿತ ಮೂಲಕ ಮಾಡುವುದಕ್ಕಾಗುವುದಿಲ್ಲ. ಅಧ್ಯಕ್ಷರು ಹೇಳಿದರಲ್ಲಾ, ಅದನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತೇನೆ.

ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ: ಅಧ್ಯಕ್ಷರೇ, ಒಂದೇ ಒಂದು ಹೇಳುತ್ತೇನೆ.

ಅಧ್ಯಕ್ಷರು: ಇಲ್ಲಿಗೆ ಈ ವಿಚಾರ ಮುಕ್ತಾಯವಾಗಿದೆ.

ಶ್ರೀ ಕೆ.ಪ್ರತಾಪಚಂದ್ರ: ಇದರಲ್ಲಿ ಸಮಸ್ಯೆ ಏನಾಗಿದೆ ಎಂದರೆ ಇವರೇನು ಮಾಡುತ್ತಾರೆ ಗೊತ್ತಾ ಯಾರೋ ಅಂಗಡಿಯವರನ್ನು ಹಿಡಿದುಕೊಂಡು ಬರುತ್ತಾರೆ. ಯಾರು ಮಟ್ಕಾ ನಡೆಸುತ್ತಿದ್ದಾರೆ ಆ ಮಟ್ಕಾ ದೊರೆಗಳನ್ನು ಇವರು ಹಿಡಿಯುವುದಿಲ್ಲ. ಅವರನ್ನು ಹಿಡಿಯಿರಿ.

ಅಧ್ಯಕ್ಷರು: ಇನ್‌ಫರ್ಮೇಷನ್ ಕೊಡಿ. ಅದನ್ನು ಡಿಬೇಟ್ ಏತಕ್ಕೆ ಮಾಡುತ್ತೀರಿ?

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ಇದರಲ್ಲಿ ಪೊಲೀಸರೂ ಇನವಾಲ್ವ್ ಆಗಿದ್ದಾರೆ. ನನ್ನ ಆಪಾದನೆ ಇದೇ. ನಿಮ್ಮ ಪೊಲೀಸರೂ ಅವರ ಜೊತೆ ಶಾಮೀಲಾಗಿರುವುದರಿಂದ ಹಿಡಿಯುವುದಕ್ಕೆ ಆಗುತ್ತಿಲ್ಲ.

ಅಧ್ಯಕ್ಷರು: ಅದಕ್ಕೆ ಸಲ್ಯೂಷನ್ನಾದರೂ ಹೇಳಿ. ನಿಮ್ಮ ಸಲಹೆ ಏನು?

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ನಮ್ಮನ್ನು ಕೇಳಿದರೆ ಏನು ಮಾಡುವುದು ಹೇಳಿ. ನೀವೇ ಹೇಳಬೇಕು.

MR. SPEAKER: This Assembly is to discuss, debate and find a solution to a problem. You just cannot raise a problem for the sake of raising. He has said. ಏನು ಮಾಡಬೇಕು ಎಂಬ ಬಗ್ಗೆ ಸಲ್ಯೂಷನ್ ಕೂಡ ನಾನು ಆಫರ್ ಮಾಡಿದ್ದೇನೆ. He is doing something.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನನ್ನ ಸಲಹೆ ಇದೆ. ಯಾವರೀತಿಯಾಗಿ ಡೆಪ್ಯುಟಿ ಚೀಫ್ ಮಿನಿಸ್ಟರ್ ಜಿಲ್ಲೆಯಲ್ಲಿ ಮಟ್ಕಾನೂ ಇಲ್ಲ ಸಿಂಗಲ್ ಡಿಜಿಟ್ ಲಾಟರೀನೂ ಇಲ್ಲ, ಅಲ್ಲಿ ಯಾವರೀತಿಯಾಗಿ ನಿಲ್ಲಿಸಿದ್ದಾರೆ, ಅಲ್ಲಿ ಏನು ಕಾರ್ಯಕ್ರಮ ಹಾಕಿಕೊಂಡಿರಿ, ಅದೇ ಕಾರ್ಯಕ್ರಮವನ್ನು ಇಡೀ ರಾಜ್ಯಕ್ಕೆ ಹಾಕಿಕೊಳ್ಳಿ.

MR. SPEAKER: That's a good suggestion. I compliment the Leader of the Opposition.

ಶ್ರೀ ಎಸ್.ಸುರೇಶ್ ಕುಮಾರ್: ಮೂರು ದಿವಸಗಳ ಹಿಂದೆ ಮೊನ್ನೆ ನಾನು ಡಿ.ಜಿ.ಪಿ.ಯವರ ಜೊತೆ ಫೋನಿನಲ್ಲಿ ಮಾತನಾಡಿದೆ. ಬೆಂಗಳೂರಿನ ಡಿ.ಸಿ.ಪಿ.ಗಳು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಿದ್ದಾರೆ, ಸರ್ಕಾರದಿಂದ ನೀವು ಕಾನೂನು ಕೊಟ್ಟರೆ ನಾವು ಮಾಡುತ್ತೇವೆ ಎಂದು ಹೇಳಿದರು ಎಂದು ಹೇಳಿದೆ. ಅಧ್ಯಕ್ಷರೆ, ತಾವು ಹೇಳಿದಹಾಗೆ Let them use anything. Let them stop this.

MR. SPEAKER: Mr. Sureshkumar, if the conscience is clean, there is nothing like helplessness. If one is not clear in his intentions, then all these problems arises. This is the problem concerning the lives of the poor people. That is why I have told the Hon'ble Deputy Chief Minister that he is known for his commitment, and dedication for the cause of poor. I am sure he would take it up with all seriousness. Let's close it. There is nothing like any DCP feeling his helplessness.

ಶ್ರೀ ಸಿದ್ಧರಾಮಯ್ಯ: ಅದನ್ನು ನಾನು ಮಾಡುತ್ತೇನೆ. ನಾವು ಪ್ರಯತ್ನ ಮಾಡುತ್ತಿದ್ದೇವೆ. ಕೆಲವು ಕಡೆ ನಿಂತಿದೆ, ಇನ್ನು ಕೆಲವು ಕಡೆ ನಿಂತಿಲ್ಲ. ಸಂಪೂರ್ಣವಾಗಿ ನಿಲ್ಲಿಸುವುದಕ್ಕೆ ಡಿ.ಜಿ.ಪಿ.ಯವರು ಲಿಖಿತದ ಮೂಲಕ ಎಲ್ಲಾ ಡಿ.ಸಿ.ಪಿಗಳಿಗೆ ಎಸ್.ಪಿಗಳಿಗೆ ಸೂಚನೆ ಕೊಟ್ಟಿದ್ದಾರೆ.

ಶ್ರೀ ಎಸ್.ಸುರೇಶ್‌ಕುಮಾರ್: ಉಮಾ ಟಾಕೀಸ್ ಎಂದು ಒಂದಿದೆ. ಈಗ ಐದು ಸಾವಿರ ಜನ ಬೀದಿಯಲ್ಲಿ ನಿಂತಿದ್ದಾರೆ. ಪ್ರತಿದಿನ ಇದು ಸ್ಟಾರ್ಟ್ ಆಗುತ್ತಿದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಸನ್ಮಾನ್ಯ ಅಧ್ಯಕ್ಷರೆ, ಕೇಂದ್ರಸರ್ಕಾರದಿಂದ ನವದೆಹಲಿಯಿಂದ ಒಂದು ಆದೇಶವನ್ನು ಕೊಟ್ಟಿದ್ದಾರೆ. ಲಾಟರಿ ಟಿಕೆಟ್ ನಡೆಸುವುದರ ಜೊತೆಗೆ ಡಬ್ಬಲ್ ಡಿಜಿಟ್ ಲಾಟರಿ ನಡೆಸಬೇಕಾದರೆ ನಿಯಮ ಇಟ್ಟುಕೊಂಡಿದ್ದೇವೆ ಇಷ್ಟರ ಮೇಲೆ ಪ್ರಿಂಟ್ ಮಾಡಬಾರದು ಎಂದು ಡೂಪ್ಲಿಕೇಟ್ ಮಾಡಿಸಿದ್ದಾರೆ. ಕೇಂದ್ರಸರ್ಕಾರದಿಂದ ಕೆಲವು ವಿಷಯ ಹೇಳಿದ್ದಾರೆ. ವಿಶೇಷವಾಗಿ ಬಡ ಮತ್ತು ದಮನಕ್ಕೆ ಒಳಗಾದ ವರ್ಗಕ್ಕೆ ಸೇರಿದ ಬಹುಮಂದಿ ಜನರಿಗೆ ಆತಂಕಕಾರಿ ಮತ್ತು ಸಮಾಜದ ಮೇಲೆ ಬಲಹೀನಗೊಳಿಸುವ ಪ್ರಭಾವ ಹೊಂದಿರುವುದಾಗಿ ಹೇಳಲಾಗಿರುವ ಲಾಟರಿಗಳನ್ನು, ಅದರಲ್ಲೂ ಒಂದಂಕಿ ಮತ್ತು ದಿಢೀರ್ ಲಾಟರಿಗಳನ್ನು ರಾಜ್ಯ ಸರ್ಕಾರಗಳು ನಡೆಸುವುದರ ಸೂಕ್ತತೆಗೆ ಸಂಬಂಧಿಸಿದಂತೆ ಈಗಿನ ದಿನಗಳಲ್ಲಿ ವ್ಯಾಪಕವಾದ ಸಾರ್ವಜನಿಕ ಚರ್ಚೆಯು ನಡೆಯುತ್ತಿರುವುದು. ಲಾಟರಿಗಳ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಬೇಕೆಂದು ಸಹಾ, ಕೆಲವು ಸ್ವಯಂಸೇವಾ ಸರ್ಕಾರಿಯೇತರ ಸಂಸ್ಥೆಗಳು ಆಗ್ರಹಪಡಿಸಿರುವುವು. ಈ ವಿಷಯದ ಬಗೆಗಿನ ಸಾರ್ವಜನಿಕ ಪ್ರಾಮುಖ್ಯತೆಯನ್ನು ಮನಗಂಡು ಗೃಹ ವಿದ್ಯಾಮಾನಗಳಿಗೆ ಸಂಬಂಧಿಸಿದ ಸಂಸದೀಯ ಸ್ಥಾಯೀ ಸಮಿತಿಯು, ಲಾಟರಿ ವ್ಯಾಪಾರಕ್ಕೆ ಸಂಬಂಧಿಸಿದ ವಿಷಯಗಳನ್ನು ಅದರಲ್ಲೂ, ಸಂವಿಧಾನದ ಏಳನೇ ಷೆಡ್ಯೂಲಿನಲ್ಲಿನ ಕೇಂದ್ರದ ಪಟ್ಟಿಯ ಎಂಟ್ರಿ 40ರ ಪ್ರಕಾರ, ಕೇಂದ್ರದ ಕಾನೂನೊಂದರ ಮುಖೇಣ ಆ ವ್ಯಾಪಾರವನ್ನು ನಿಯಂತ್ರಿಸುವ

ಅಥವಾ ಲಾಟರಿಗಳನ್ನು ನಿಷೇಧಿಸುವುದಕ್ಕೂ ಸಂಬಂಧಿಸಿದ ವಿಷಯವನ್ನು ಈಗ ಪರಿಶೀಲಿಸುತ್ತಿರುವುದು. ಸಮಿತಿಯು 11 ಜುಲೈ 1997ರಂದು ಶ್ರೀ ಸೋಮ್‌ಪಾಲ್, ಎಂ.ಪಿ. ಇವರ ಅಧ್ಯಕ್ಷತೆಯಲ್ಲಿ ನಡೆದ ತನ್ನ ಸಭೆಯಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ, ಸಾರ್ವಜನಿಕರಿಂದ ಸಲಹೆಗಳನ್ನು ಆಹ್ವಾನಿಸಲು ನಿರ್ಧರಿಸಿತು.''

2. ಈ ವಿಷಯದಲ್ಲಿ ಆಸಕ್ತಿಹೊಂದಿರುವಂಥ ವ್ಯಕ್ತಿಗಳು, ಸಂಸ್ಥೆಗಳು ಮತ್ತು ವ್ಯವಸ್ಥೆಗಳು ತಮ್ಮ ಅಭಿಪ್ರಾಯಗಳು ಮತ್ತು ಸಲಹೆಗಳನ್ನು ಮೆಮೊರ್ಯಾಂಡಂ ಸ್ವರೂಪದಲ್ಲಿ ಶ್ರೀ ಜಿ.ಸಿ.ಮಿಗ್ಲಾನಿ, ಡೆಪ್ಯುಟಿ ಸೆಕ್ರೆಟರಿ, ರಾಜ್ಯಸಭಾ ಸೆಕ್ರೆಟರಿಯೇಟ್, ರೂಮ್ ನಂ. 127, ಪಾರ್ಲಿಮೆಂಟ್ ಹೌಸ್ ಅನೆಕ್ಸ್, ನವದೆಹಲಿ 110001 (ಟೆಲಿಫೋನ್ ನಂ. 30 34 166) ಇವರನ್ನು 26 ಆಗಸ್ಟ್ 1997ರಂದು ಅಥವಾ ಅದಕ್ಕಿಂತ ಮುಂಚೆ ತಲುಪುವಂತೆ ಕಳುಹಿಸಿಕೊಡಬೇಕು. ಈ ರೀತಿಯಲ್ಲಿ ಸ್ವೀಕರಿಸಿದ ಮೆಮೊರಾಂಡಂ ಸಮಿತಿಯ ದಾಖಲೆಗಳ ಭಾಗವಾಗುವುದು ಮತ್ತು ಕಟ್ಟುನಿಟ್ಟಾಗಿ ಗೋಪ್ಯವಾಗಿ ಪರಿಗಣಿಸಲಾಗುವುದು. ಆದ್ದರಿಂದ ಸಮಿತಿಗೆ ಕಳುಹಿಸಿಕೊಡಲಾದ ಯಾವುದೇ ಸಲಹೆಗಳು ಅಥವಾ ಹೇಳಿಕೆಗಳಿಗೆ ಯಾವುದೇ ರೀತಿಯ ಪ್ರಚಾರ ನೀಡಕೂಡದು. ಪ್ರಚಾರ ನಡೆಸಿದ್ದೇ ಆದಲ್ಲಿ ಅಂತಹ ಸಲಹೆಗಳು, ಅಥವಾ ಹೇಳಿಕೆಗಳನ್ನು ಸಮಿತಿಯು ಸ್ವೀಕರಿಸುವುದಿಲ್ಲ.

3. ಮೆಮೊರಾಂಡಾವನ್ನು ಕಳುಹಿಸುವಂಥವರು ಮತ್ತು ವಿಷಯಗಳ ಬಗ್ಗೆ ಸಮಿತಿಯು ಮುಂದೆ ಸಾಕ್ಷ್ಯ ನೀಡಲು ಹಾಜರಾಗಲೂ ಸಹ ಆಸಕ್ತಿ ಹೊಂದಿರುವಂಥವರು ತಮ್ಮ ಸಮ್ಮತಿಯನ್ನು ಸಹಾ ಸೂಚಿಸಬಹುದಾಗಿರುವುದು. 17 ಜುಲೈ 1997.

ಅಧ್ಯಕ್ಷರು: ಈಗ ಅದರ ಅಗತ್ಯ ಏನಿದೆ?

ಶ್ರೀ ಕೆ.ಎಸ್.ಪುಟ್ಟಣ್ಣ: ಕೇಂದ್ರಸರ್ಕಾರ ಇದರಲ್ಲಿ ರೆಡಿ ಆಗಿದೆ. ಸರ್ಕಾರ ಅಹವಾಲನ್ನು ಮಂಡಿಸಿದರೆ ಅದು ಆಗುತ್ತದೆ.

ಅಧ್ಯಕ್ಷರು: ಕೇಂದ್ರಸರ್ಕಾರ ರೆಡಿಯಾಗಲೀ, ಆಗದೇ ಹೋಗಲಿ, ನೀವು ರೆಡಿಯಾಗಿ ಡೀಲ್ ಮಾಡಿ. ನಮಗೆ ಅವರಲ್ಲಿ ವಿಶ್ವಾಸ ಇದೆ. ಅವರು ಮಾಡುತ್ತಾರೆ. ಅವರಿಗೆ ಬಡವರ ಪರವಾಗಿ ಕಾಳಜಿ ಇದೆ.

(ಏ) ಅರಕಲಗೂಡು ತಾಲ್ಲೂಕಿನಲ್ಲಿ ದಶಲಕ್ಷ ಬಾವಿ ಯೋಜನೆಯಲ್ಲಿ ಆಗಿರುವ ಅವ್ಯವಹಾರಗಳು

ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು): ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಅರಕಲಗೂಡು ತಾಲ್ಲೂಕಿನ ದೊಡ್ಡಮಗ್ಗೆ ಮತ್ತು ಚಿಕ್ಕಮಗ್ಗೆ ಎಂಬ ಗ್ರಾಮಗಳಲ್ಲಿ

1995-96ರಲ್ಲಿ ಕೃಷಿ ಇಲಾಖೆ ವತಿಯಿಂದ ನಾಲ್ಕು ಜನ ಪರಿಶಿಷ್ಟ ಜನಾಂಗದವರಿಗೆ ದಶಲಕ್ಷ ಬಾವಿ ಯೋಜನೆಯಲ್ಲಿ ಬಾವಿಗಳನ್ನು ಕೊಟ್ಟರು. ನಾನು ಅವರ ಹೆಸರುಗಳನ್ನು ಕೂಡ ಹೇಳುತ್ತೇನೆ. 1. ಜವರಮ್ಮ ಕೋಮ್ ಹುಚ್ಚಯ್ಯ 2. ಜಯಮ್ಮ ಕೋಮ್ ಪುಟ್ಟಸ್ವಾಮಿ 3. ಕಮಲಮ್ಮ ಕೋಮ್ ಸಂತಿಗಯ್ಯ 4. ಹನುಮಯ್ಯ ಬಿನ್ ಸಂತಿಗಯ್ಯ. ಈ ನಾಲ್ಕು ಜನಕ್ಕೆ ದಶಲಕ್ಷ ಬಾವಿಯಡಿ ಸೌಲಭ್ಯವನ್ನು ಒದಗಿಸಿ ಕೊಟ್ಟರು. ಹಣ ಕೂಡ ಪಾವತಿಯಾಯಿತು. ಈಗ ಅದೇ ಜಾಗದ, ಅದೇ ಸ್ಥಳದ ಅದೇ ಬಾವಿಗಳಿಗೆ ಬೇರೆಯವರ ಹೆಸರಿನಲ್ಲಿ ಬಿ.ಡಿ.ಓ. ಕಚೇರಿಯಿಂದ ಕಳೆದ ತಿಂಗಳು ಹಣ ಪಾವತಿಯಾಗಿದೆ. ಇದು ಸರ್ಕಾರಿ ಹಣದ ಲೂಟಿಯಾಗಿದೆ. ಅದಕ್ಕೆ ತಾವು ಅದು ನಿಜವಾಗಿದ್ದರೆ ಸರ್ಕಾರ ತನಿಖೆ ಮಾಡಿ ಕ್ರಮ ಕೈಗೊಳ್ಳುತ್ತದೆಯೇ? ಅದನ್ನು ಸದನಕ್ಕೆ ದಯಮಾಡಿ ತಿಳಿಸುತ್ತೀರಾ?

ಶ್ರೀ ಸಿ.ಬೈರೇಗೌಡ (ಕೃಷಿಮಂತ್ರಿ): ಮಾನ್ಯ ಸಭಾಧ್ಯಕ್ಷರೇ, ಈ ದಿವಸದ ಸಂಜೆಯೊಳಗಾಗಿ ಸ್ಥಳದ ಪರಿಶೀಲನೆ ನಡೆಸಿ ಮತ್ತೆ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಂಡು, ಕ್ರಮಕೈಗೊಂಡ ಬಗ್ಗೆ ನಾಳೆದಿವಸ ಹೇಳಿಕೆಯ ಅವಶ್ಯಕತೆ ಇದ್ದರೆ ನಾನು ಹೇಳಿಕೆ ಕೊಡುವುದಕ್ಕೆ ತಯಾರಿದ್ದೇನೆ.

ಶ್ರೀ ಎ.ಟಿ.ರಾಮಸ್ವಾಮಿ: ಅವಶ್ಯಕತೆ ಇದ್ದರೆ ಅಂತಲ್ಲ, ಅವಶ್ಯಕತೆ ಇದೆ. ಇದನ್ನು ಬಹಳ ಲಘುವಾಗಿ ತೆಗೆದುಕೊಳ್ಳಬೇಡಿ.

ಶ್ರೀ ಸಿ.ಬೈರೇಗೌಡ: ನೀವು ಅಪೇಕ್ಷಿಸಿದರೆ ನಾಳೆ ಕೊಡುತ್ತೇನೆ.

ಅಧ್ಯಕ್ಷರು: ಕೊಡುತ್ತಾರೆ. ಅವರು ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ಎ.ಟಿ.ರಾಮಸ್ವಾಮಿ: ದಯವಿಟ್ಟು ಉತ್ತರ ಕೊಡಬೇಕು ಎಂದು ಹೇಳಿ ನಾನು ಅಪೇಕ್ಷೆ ಮಾಡುತ್ತಿದ್ದೇನೆ. ಅಲ್ಲಿ ಹಣದ ಲೂಟಿಯಾಗಿದೆ....

ಶ್ರೀ ಸಿ.ಬೈರೇಗೌಡ: ಆಯಿತು. ಆ ಮಾಹಿತಿಯನ್ನು ದಯಮಾಡಿ ಈ ಕಡೆಗೆ ಪಾಸ್‌ಆನ್ ಮಾಡಿ. ಈಗಲೇ ಅದನ್ನು ಕೊಡಿ. ಮಾನ್ಯ ಅಧ್ಯಕ್ಷರೇ, ಇವತ್ತು ಈ ಇಲಾಖೆಯಲ್ಲಿ ನಾನಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಒಂದು ಕಡೆ ಇದ್ದು ನಡೆದಿರಬಹುದು. ಅದು ನಡೆದಿದೆಯೋ, ನಡೆದಿಲ್ಲವೋ ಎಂಬುದು ತನಿಖೆ ನಂತರ ಗೊತ್ತಾಗುತ್ತದೆ. ಬೇರೆ ಮಾನ್ಯ ಸದಸ್ಯರುಗಳಲ್ಲಿ ನಾನು ವಿನಂತಿಸಿಕೊಳ್ಳತಕ್ಕದ್ದು ಏನೆಂದರೆ, ತಮ್ಮತಮ್ಮ ಕ್ಷೇತ್ರಗಳಲ್ಲಿ ಈ ರೀತಿಯಾಗಿ ನಡೆದಿರತಕ್ಕಂಥಾದ್ದು ಇದ್ದರೆ ತಕ್ಷಣ ನನ್ನ ಗಮನಕ್ಕೆ ದಯವಿಟ್ಟು ತನ್ನಿ. ನನಗೆ ಒಂದು ಸಂತೋಷ ಏನೆಂದರೆ ಕೆಲವು ಮಾನ್ಯ ಸದಸ್ಯರುಗಳಾದರೂ ಸಹ ಅವರವರ ಕ್ಷೇತ್ರಗಳಲ್ಲಿ ಈ ಕೆಲಸಕಾರ್ಯಗಳು ಯಾವರೀತಿ ನಡೆಯುತ್ತಿವೆ ಎನ್ನತಕ್ಕಂಥಾದ್ದನ್ನು ಗಮನಿಸುತ್ತಿದ್ದಾರೆ. ಇದು ನನಗೆ

ಸಂತೋಷವನ್ನುಂಟು ಮಾಡಿದೆ. ನಾವು ಪ್ರತಿಯೊಂದು ವರ್ಷದಲ್ಲಿ ಯಾವ್ಯಾವ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ, ಅದರಲ್ಲೂ ಮುಖ್ಯವಾಗಿ ಭೂಸಾರ ಸಂರಕ್ಷಣೆ ಕೆಲಸವನ್ನು ಎಲ್ಲೆಲ್ಲಿ ಮಾಡುತ್ತಿದ್ದೇವೆ ಎನ್ನತಕ್ಕಂಥಾದ್ದನ್ನು ಒಂದು ನಕ್ಷೆ ಮೂಲಕ ಪ್ರತಿ ಮಾನ್ಯ ಸದಸ್ಯರಿಗೂ ಕೂಡ ತಿಳಿಸತಕ್ಕಂಥ ಏರ್ಪಾಡನ್ನು ಅವರವರ ಕ್ಷೇತ್ರಗಳಲ್ಲಿ ಮಾಡಿದ್ದೇವೆ. ಏಕೆಂದರೆ ಇದು ನಿಗಾವಹಿಸಲಿ ಎನ್ನುವ ಕಾರಣಕ್ಕೋಸ್ಕರ. ಈ ಕೆಲಸ ಕಾರ್ಯಗಳು ಸಾರ್ವಜನಿಕರ ಉಸ್ತುವಾರಿಯಲ್ಲಿ ನಡೆಯಬೇಕಾಗಿರತಕ್ಕಂಥಾದ್ದು ಅತಿ ಅವಶ್ಯಕತೆ ಇದೆ. ಆದ್ದರಿಂದ ಎಲ್ಲಾ ಮಾನ್ಯ ಸದಸ್ಯರುಗಳಲ್ಲಿ ನಾನು ಮನವಿ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಈ ಕೆಲಸವನ್ನು ತಾವು ಮಾಡಬೇಕೆಂದು ಹೇಳುತ್ತೇನೆ.

(ಐ) ವರಾಹಿ ಯೋಜನೆಯಲ್ಲಿ ಜಮೀನು ಕಳೆದು ಕೊಂಡವರಿಗೆ ಪುನರ್‌ವಸತಿ

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಸನ್ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ವರಾಹಿ ಯೋಜನೆ ಪ್ರದೇಶ ಇದೆ. ಇದರ ಪರಿಹಾರ ಮತ್ತು ಅಲ್ಲಿರತಕ್ಕಂಥ ರೈತರ ಮತ್ತು ಕೃಷಿಕಾರ್ಮಿಕರ ಪರಿಹಾರ-ಪುನರ್‌ವಸತಿಗೆ ನಿರ್ಧಾರ ಮಾಡುವುದಕ್ಕೋಸ್ಕರ ಮಾನ್ಯ ಉಪಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಹೈಪವರ್ ಕಮಿಟಿ ಕಾರ್ಯನಿರ್ವಹಿಸುತ್ತಿದೆ. ಈ ಹಿಂದೆ ಇದ್ದಂಥ ಎಸ್.ಎಂ.ಕೃಷ್ಣ ಅವರ ಕಾಲದಲ್ಲಿ ಆದಂಥ ಆ ಹೈಪವರ್ ಕಮಿಟಿಯ ನಿರ್ಣಯಗಳು ಮತ್ತು ಈಗ ಹೊಸ ಸರ್ಕಾರ ಬಂದಾಗ ಮುಖ್ಯಮಂತ್ರಿಗಳು ಯಾರು ಆಗಿದ್ದಾರೆ ಶ್ರೀಮಾನ್ ಜೆ.ಎಚ್.ಪಟೇಲರು ಅವರು ಉಪಮುಖ್ಯಮಂತ್ರಿಗಳಾಗಿದ್ದಾಗ ಆಗಿರತಕ್ಕಂಥ ಹೈಪವರ್ ಕಮಿಟಿಯ ನಿರ್ಣಯಗಳು. ಯಾವುದಕ್ಕೂ ಕೂಡ ಸರ್ಕಾರಿ ಆದೇಶ ಆಗಲಿಲ್ಲ. ವರಾಹಿ ಯೋಜನೆಯಲ್ಲಿ ನೀರು ಬಂದು ಆ ರೈತರ ಜಮೀನು ಮತ್ತು ಮನೆಗಳು ಮುಳುಗಿಹೋಗಿ ಏಳೆಂಟು ವರ್ಷಗಳಾದವು. ಇದರಲ್ಲಿ ಸಾಕಷ್ಟು ಜನರಿಗೆ ಪರಿಹಾರ-ಪುನರ್‌ವಸತಿಯನ್ನು ಕೊಡುವುದಕ್ಕೆ ಬಾಕಿ ಇದ್ದರೂ ಕೂಡ ಸರ್ಕಾರಿ ಆದೇಶಕ್ಕೋಸ್ಕರ ನಿರ್ಣಯಗಳು ಇವತ್ತು ಕಾಯುತ್ತಿವೆ. ನನಗೆ ದುಃಖ ಆಗತಕ್ಕಂಥಾದ್ದು ಏನೆಂದರೆ, ಮಾನ್ಯ ಉಪಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಆಗಿರತಕ್ಕಂಥ ಈ ನಿರ್ಣಯಕ್ಕೆ ನಮ್ಮ ಕೆ.ಪಿ.ಸಿ.ಯಿಂದ ಇದು ಸರ್ಕಾರಿ ಆದೇಶಕ್ಕೋಸ್ಕರ ರೆವಿನ್ಯೂ ಇಲಾಖೆಗೆ ಬಂದಿದೆ. ಐದು ವರ್ಷಗಳಿಂದ ಎಂ.ಎಸ್.ಬಿಲ್ಡಿಂಗ್‌ನಲ್ಲಿರುವ ನಿಮ್ಮ ರೆವಿನ್ಯೂ ಇಲಾಖೆಯಲ್ಲಿ ಆ ರೆಕಾರ್ಡುಗಳು ಧೂಳು ಹಿಡಿಯುತ್ತಾ ಬಿದ್ದಿವೆ. ಆದರೂ ಅದನ್ನು ಮಾಡುತ್ತಿಲ್ಲ. ಪರಿಹಾರ-ಪುರ್‌ವಸತಿ ಸಿಗದೆ ನನ್ನ ಕ್ಷೇತ್ರದ ಜನ ಕಣ್ಣೀರಿಡುತ್ತಿದ್ದಾರೆ. ನಾನು ಒಬ್ಬ ಶಾಸಕನಾಗಿ ಅಲ್ಲಿ ಕೆಲಸ ಮಾಡುವುದಕ್ಕೆ ತುಂಬ ತೊಂದರೆಯಾಗಿದೆ. ವರಾಹಿ ಜಲವಿದ್ಯುತ್ ಯೋಜನೆ ಊರಿಗೆ ಬೆಳಕು ಕೊಟ್ಟರೂ ಕೂಡ ನಮ್ಮ ಜನರ ಕಣ್ಣೀರು ಒರೆಸುವುದರಲ್ಲಿ ವಿಫಲವಾಗಿದೆ. ದಯವಿಟ್ಟು ಈ ಸರ್ಕಾರ ತತ್‌ಕ್ಷಣವೇ ಅದು ಪರಿಹಾರ-ಪುನರ್‌ವಸತಿ ಕೊಡುವುದಕ್ಕೆ ಸರ್ಕಾರಿ

ಆದೇಶಕ್ಕಾಗಿ ಎಲ್ಲಿ ಆ ಕಡತಗಳು ಇವೆ, ಅದನ್ನು ಏಕೆ ಇಟ್ಟಕೊಂಡಿದ್ದಾರೆ ಮತ್ತು ಇದನ್ನು ಇಟ್ಟುಕೊಂಡಿರತಕ್ಕಂಥ ಉದಾಸೀನ ಮಾಡಿರತಕ್ಕಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಮತ್ತೆ ಪುನರ್‌ವಸತಿ-ಪರಿಹಾರವನ್ನು ಕೊಡುವುದಕ್ಕಾಗಿ ಸರ್ಕಾರದ ಆದೇಶವನ್ನು ಹೊರಡಿಸಬೇಕೆಂದು ಹೇಳಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿ ಮಾಹಿತಿ ಪಡೆದು ನಂತರ ಹೇಳಿಕೆ ಕೊಡುತ್ತೇನೆ. ಇವರು ಏನು ಹೇಳಿದ್ದಾರೆ ಎಂದರೆ, ನಾಲ್ಕು ವರ್ಷಗಳಿಂದ, ಪುನರ್‌ವಸತಿ ಆಗಿಲ್ಲ, ಸರ್ಕಾರಿ ಆಜ್ಞೆ ಆಗಿತ್ತು, ಒಂದು ಹೈಪವರ್ ಕಮಿಟಿ ಇದೆ ಎಂದು ಹೇಳಿದ್ದಾರೆ. ನಾನು ಅದರ ಬಗ್ಗೆ ವಿಚಾರಣೆ ಮಾಡಿ ಇವತ್ತು ಅಥವಾ ನಾಳೆ ಒಳಗಡೆ ಸಮರ್ಪಕವಾದಂಥ ಉತ್ತರವನ್ನು ಕೊಡುತ್ತೇನೆ.

(ಒ) ಹೊನ್ನಾವರ ತಾಲ್ಲೂಕಿನ ಆರಾಧನಾ ಸಮಿತಿಯ ಪಟ್ಟಿಯನ್ನು ತಿರಸ್ಕರಿಸುವುದು.

ಶ್ರೀ ಶಿವಾನಂದ ನಾಯಕ್ (ಭಟ್ಕಳ್): ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಜರಾಯಿ ಸಚಿವರು ಇಲ್ಲ. ಆದರೂ ಸಹ ಸರ್ಕಾರದ ಪರವಾಗಿ ಯಾರಾದರೂ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಸರ್ಕಾರದ ಆದೇಶದಂತೆ ಶಾಸಕರನ್ನು ಆರಾಧನಾ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಆ ಉದ್ದೇಶ ಇಟ್ಟುಕೊಂಡು ನಮ್ಮ ಹೊನ್ನಾವರ ತಾಲ್ಲೂಕಿನ ಆಶ್ರಯ ಸಮಿತಿಯ ಸಭೆಯನ್ನು 12.5.97ಕ್ಕೆ ಕರೆದು ಸಾರ್ವಜನಿಕರಿಂದ ಬಂದಿರತಕ್ಕಂಥ ಅರ್ಜಿಗಳನ್ನು ಪರಿಶೀಲನೆ ಮಾಡಿ ಆಯ್ಕೆ ಮಾಡಿ ಒಂದು ಯಾದಿಯನ್ನು ಕಳುಹಿಸಿಕೊಟ್ಟಾಯಿತು. ನಾವು ಕಳುಹಿಸಿದ ಯಾದಿಯನ್ನು ತಿರಸ್ಕಾರ ಮಾಡಿ 24.5.97ಕ್ಕೆ ಬೇರೆ ಯಾದಿಯನ್ನು ರಚನೆಮಾಡಿ ಅದಕ್ಕೆ ಹಣವನ್ನು ಮಂಜೂರು ಮಾಡಿಕೊಟ್ಟಿದ್ದಾರೆ. ನನಗೆ ಈ ರೀತಿಯ ಅನ್ಯಾಯವಾಗಿದೆ ಎಂದು ತಮಗೂ ಸಹ ಪತ್ರಬರೆದಿದ್ದೇನೆ ಮತ್ತು ಮಾನ್ಯ ಮುಜರಾಯಿ ಸಚಿವರಿಗೂ ಸಹ ಪತ್ರ ಬರೆದಿದ್ದೇನೆ. ತಮ್ಮಿಂದ ನನಗೆ ಉತ್ತರ ಬಂದಿದೆ. ಆದರೆ ಮುಜರಾಯಿ ಮಂತ್ರಿಗಳು ಉತ್ತರ ಕೊಡುವಂಥ ಸೌಜನ್ಯವನ್ನೂ ಮಾಡಲಿಲ್ಲ. ಈ ರೀತಿ ಶಾಸಕರಿಗೆ ಒಂದು ಅಧಿಕಾರವನ್ನು ಕೊಟ್ಟು ನಂತರ ಅಗೌರವ ಮಾಡುವುದು ಯಾಕೆ? ಏಕೆ ಇದನ್ನು ಮಾಡುತ್ತಿದ್ದಾರೆ? ನಾನು ಒಂದು ಪತ್ರ ಕೊಟ್ಟರೂ ಸಹಿತ ನಮಗೆ ಸರಿಯಾಗಿ ಉತ್ತರ ಕೊಡುವುದಿಲ್ಲ. ಈ ರೀತಿ ಆಗಬಾರದು ಮತ್ತು ಇದಕ್ಕೆ ಸರಿಯಾದ ಉತ್ತರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ತಾವೇಹೇಳಿ, ಸರ್ಕಾರದ ಪರವಾಗಿ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೇ, ಅದರ ಬಗ್ಗೆ ಮಾಹಿತಿ ಪಡೆದು ಉತ್ತರ ಒದಗಿಸಿಕೊಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅದು ಅವರು ಏನು ಹೇಳುತ್ತಿದ್ದಾರೆ, ಇದು ಕೇವಲ ಅಲ್ಲಿ ಅಲ್ಲ. ನನ್ನ ಕ್ಷೇತ್ರದಲ್ಲಿ ಮೂರು-ನಾಲ್ಕು ಕಡೆ, ಕೆಲವು ಶಾಸಕರು ಬಂದು ನನ್ನನ್ನು ಕಂಡಿದ್ದಾರೆ. ಒಂದು ಗೌರವಾನ್ವಿತ ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿದ್ದಾರೆ, ಅಲ್ಲಿ ಬೇರೆ ಪ್ರತಿನಿಧಿಗಳೂ ಇದ್ದಾರೆ. ಆದರೆ ಒಂದು ಸಲ ತೀರ್ಮಾನವನ್ನು ಮಾಡಿ ಜಿಲ್ಲಾಧಿಕಾರಿಗಳಿಗೆ ಕಳಿಸಿದಮೇಲೆ ಅವರು ಯಾವುದೋ ಪಟ್ಟಿಮಾಡಿ ಕಳುಹಿಸುವುದು ಅದು ಶಾಸಕರಿಗೆ ಮಾಡಿದಂಥ ಅಪಮಾನ. ಇಲ್ಲದಿದ್ದರೆ ಸಮಿತಿ ಬೇಕಾದರೆ ರದ್ದು ಮಾಡಿಬಿಡಿ. ಇಲ್ಲವಾದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸಮಿತಿ ಕೊಟ್ಟಂಥ ಶಿಫಾರಸ್ಸು ಪ್ರಕಾರವೇ ತೆಗೆದುಕೊಳ್ಳುವುದಕ್ಕೆ ಇವತ್ತೇ ತಾವು ಡೈರೆಕ್ಷನ್ ಕೊಡಿ.

ಶ್ರೀ ಸಿದ್ದರಾಮಯ್ಯ: ಶಾಸಕರು ಅಧ್ಯಕ್ಷರಾಗಿ ಅಲ್ಲಿ ಸಭೆ ಸೇರುತ್ತದೆ. ಆರಾಧನಾ ಸಮಿತಿ ಶಿಫಾರಸ್ಸು ಮಾಡಿ ಕಳುಹಿಸದಮೇಲೆ ಅದು ಕಾನೂನಿನ ಚೌಕಟ್ಟಿನೊಳಗಡೆ ಅಲ್ಲಿರತಕ್ಕಂಥ ಅಧಿಕಾರದ ಇತಿಮಿತಿಯೊಳಗೆ ಇದ್ದರೆ ಯಾವುದೇ ಜಿಲ್ಲಾಧಿಕಾರಿಗಳು ಅದನ್ನು ಬದಲಾಯಿಸಕೂಡದು. ಆ ತರಹ ಇದ್ದರೆ ನಾನು ಆ ಜಿಲ್ಲಾಧಿಕಾರಿಗಳಿಗೆ, ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿ ಸೂಚನೆಯನ್ನು ಕೊಡಿಸಲಿಕ್ಕೆ ಹೇಳುತ್ತೇನೆ.

ಶ್ರೀ ಯು.ಆರ್.ಸಭಾಪತಿ: ಅಧ್ಯಕ್ಷರೇ....

ಅಧ್ಯಕ್ಷರು: ಇದರ ಬಗ್ಗೆ ಚರ್ಚೆ ಅಗತ್ಯ ಇಲ್ಲ. ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಅವರು ಹೇಳಿದ್ದಾರೆ.

ಶ್ರೀ ಯು.ಆರ್.ಸಭಾಪತಿ: ಅವರದ್ದು ಒಂದು ಪರಿಸ್ಥಿತಿ ಇದ್ದರೆ, ನಮ್ಮದು ಇನ್ನೊಂದು ಪರಿಸ್ಥಿತಿ. ನಮ್ಮಲ್ಲಿ ಒಂದು ವರ್ಷದಿಂದ ಆರಾಧನಾ ಸಮಿತಿಯನ್ನು ಮಾಡದೆ ಬಿಡುಗಡೆಯಾದ ಹಣ ಕೂಡ ಲ್ಯಾಪ್ಸ್ ಆಗಿದೆ. ಪದೆಪದೇ ನಾನು ಸದನದಲ್ಲಿ ಇದರ ಬಗ್ಗೆ ಹೇಳಿದ್ದೆ....

ಅಧ್ಯಕ್ಷರು: ಈ ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ತಕ್ಷಣವೇ ಗಮನಹರಿಸುತ್ತೇನೆ ಎಂದ ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ: ಅದು ಡಿ.ಸಿ. ಹತ್ತಿರ ಇರುತ್ತದೆ. ನಿಮ್ಮಲ್ಲಿ ಸಮಿತಿ ರಚನೆ ಮಾಡಿಲ್ಲವೆ? ರಚನೆ ಮಾಡಿಸಲಿಕ್ಕೆ ಹೇಳುತ್ತೇನೆ.

ಶ್ರೀ ಯು.ಆರ್.ಸಭಾಪತಿ: ಅರ್ಜಿಗಳು ಬಂದಿವೆ. ಆದರೆ ಇತ್ಯರ್ಥ ಮಾಡುವುದಕ್ಕೆ ಆಗಿಲ್ಲ.

ಅಧ್ಯಕ್ಷರು: ಬೇಗ ಮಾಡಿಸಿ ಸ್ವಾಮಿ.

ಶ್ರೀ ಸಿದ್ಧರಾಮಯ್ಯ: ಮಾಡಿಸೋಣ ಬಿಡಿ.

3. ಪ್ರಕಟಣೆ

ಆಂಧ್ರ ಪ್ರದೇಶ ವಿಧಾನ ಸಭೆಯ ಉಪಾಧ್ಯಕ್ಷರಿಂದ ಸದನದ ಕಾರ್ಯಕಲಾಪ ವೀಕ್ಷಣೆ.

ಅಧ್ಯಕ್ಷರು: ಸದನದ ಕಲಾಪಗಳನ್ನು ವೀಕ್ಷಿಸಲು ಆಂಧ್ರ ವಿಧಾನಸಭೆಯ ಸನ್ಮಾನ್ಯ ಗೌರವಾನ್ವಿತ ಉಪಾಧ್ಯಕ್ಷರಾದ ಶ್ರೀ ಮಹಮ್ಮದ್ ಫಾರೂಕ್ ಅವರು, ಸರ್ಕಾರಿ ಮುಖ್ಯ ಸಚೇತಕರಾದ ಶ್ರೀ ಆರ್.ಚಂದ್ರಶೇಖರ ರೆಡ್ಡಿಯವರು ಮತ್ತು ಗೌರವಾನ್ವಿತ ಸದಸ್ಯರುಗಳಾದ ಶ್ರೀ ಕೋದಂಡರೆಡ್ಡಿಯವರು, ಪುರುಷೋತ್ತಮರಾವ್ ಅವರು ಮತ್ತು ಅಲ್ಲಿನ ವಿಧಾನಸಭೆಯ ವಿಶೇಷ ಕಾರ್ಯದರ್ಶಿಗಳಾದ ಶ್ರೀ ವೆಂಕಟೇಶನ್ ಅವರು ನಮ್ಮ ಗ್ಯಾಲರಿಯಲ್ಲಿ ಉಪಸ್ಥಿತರಿದ್ದಾರೆ. ಅವರನ್ನು ನಾನು ಸ್ವಾಗತ ಮಾಡುತ್ತೇನೆ. ಈಗ ಗಮನ ಸೆಳೆಯುವ ಸೂಚನೆಗಳು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗ ಹೇಗೆ ಮಾಡುತ್ತೀರಿ? ಚರ್ಚೆ ನಂತರ ತೆಗೆದುಕೊಳ್ಳುತ್ತೀರೋ?

ಅಧ್ಯಕ್ಷರು: ನಾಣಯ್ಯನವರು ಇಲ್ಲ. I will find some time. I will take it up.. ನಾಣಯ್ಯನವರು ಬರಲಿ, ನಾನು ಅವರಿಗೆ ಹೇಳಿ ಕಳಿಸಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಏಕೆಂದರೆ ನಾನು ಮೂರು ಸಲ ಈ ಸದನದಲ್ಲಿ ಕಂಟಿನ್ಯೂಸ್ ಆಗಿ ಮುಖ್ಯಮಂತ್ರಿಗಳ...

MR. SPEAKER: I realise the importance of the issue. Hon'ble Parliamentary affairs Minister is not there,

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸಿಂಗಲ್ ಪೋಸ್ಟ್ ರಿಸರ್ವೇಷನ್ ಬಗ್ಗೆ... ಬ್ಯಾಕ್‌ವರ್ಡ್ ಕ್ಲಾಸಸ್.... ರಿವೈಸ್ ಮಾಡತಕ್ಕಂಥದ್ದು...

MR. SPEAKER: I will accommodate. We will take up that issue. ಏನು ರಾಮ ಸ್ವಾಮಿಯವರೇ ಎಲ್ಲಾ ಮುಗಿಯಿತು ಅಲ್ವೆ?.. ಇಲ್ಲ ನಿನ್ನೆ ಎಲ್ಲಾ ಹೇಳಿದ್ದಾರೆ, let us not raise that issue again. ಕೊಡುತ್ತಾರೆ, ಆಮೇಲೆ ತರಿಸೋಣ. ಸನ್ಮಾನ್ಯ ಶ್ರೀ ಯಡಿಯೂರಪ್ಪನವರು, ಎಸ್.ವಿ.ರವೀಂದ್ರ ನಾಥ್, ಆಯನೂರು ಮಂಜುನಾಥ್‌ರವರು ಗಮನ ಸೆಳೆಯುವುದು.

(4) ಗಮನ ಸೆಳೆಯುವ ಸೂಚನೆ:

ವಿಷಯ: ದಾವಣಗೆರೆಯ ದೊಡ್ಡ ಬಾವಿ ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯ.

+ ಶ್ರೀ ಆಯನೂರು ಮಂಜುನಾಥ್ (ಹೊಸನಗರ): ಅಧ್ಯಕ್ಷರೆ, ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಯಾವುದೇ ಒಂದು ಕಾನೂನು ಆಡಳಿತ ನಡೆಯುತ್ತಿಲ್ಲ, ಅಲ್ಲಿ ತೋಳುಲ್ಕರುಗಳೇ ಸೇರಿರುವುದರಿಂದ ಅವರ ದರ್ಬಾರು ನಡೆಯುತ್ತಿದೆ. ಅಲ್ಲಿರುವ ಕಾರ್ಮಿಕರನ್ನು ಯಾವುದೇ ರೀತಿಯ ನೋಟೀಸ್ ಇಲ್ಲದೆ, ಎನ್‌ಕ್ವೈರಿ ಇಲ್ಲದೆ ಸಕಾರಣ ಇಲ್ಲದೆ ಕೆಲಸದಿಂದ ತೆಗೆಯುವ ಕ್ರಮನಡೆಯುತ್ತಿದೆ. 1992 ರಿಂದ ಸುಮಾರು 123 ಜನ ಕಾರ್ಮಿಕರನ್ನು ಬೀದಿ ಪಾಲು ಮಾಡಿದ್ದಾರೆ.

ಅಧ್ಯಕ್ಷರು: ನೋಡಿ ಮಂಜುನಾಥರವರೆ, ಇಲ್ಲಿ ಪ್ರೊಸೀಜರ್ ಏನಿದೆ ಎಂದರೆ, ತಾವು ಈ ವಿಷಯಕ್ಕೆ ಗಮನ ಸೆಳೆಯುತ್ತೇವೆ ಎಂದು ಅಷ್ಟೇ ಹೇಳಿ ನಂತರ ಅವರು ಒಂದು ಹೇಳಿಕೆಯನ್ನು ಕೊಡುತ್ತಾರೆ, ಆ ಹೇಳಿಕೆಯನ್ನು ಓದುವಾಗ ತಮಗೆ ಕೂಡ ಒಂದು ಹೇಳಿಕೆಯ ಪ್ರತಿಯನ್ನು ಕೊಟ್ಟಿರುತ್ತಾರೆ, ತಾವು ಆ ಹೇಳಿಕೆಯನ್ನು ನೋಡಿಕೊಂಡು ಅದರ ಮೇಲೆ ಸ್ಪಷ್ಟೀಕರಣಕ್ಕೆ ನಂತರ ಕೇಳಬೇಕು, that is the scope of this rule.. ತಾವು ಗಮನ ಸೆಳೆಯುತ್ತೇನೆಂದು ಅಷ್ಟು ಹೇಳಿಬಿಡಿ.

ಶ್ರೀ ಆಯನೂರು ಮಂಜುನಾಥ್: ಈ ವಿಷಯದಲ್ಲಿ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

+ ಶ್ರೀ ಉಮೇಶ್ ವಿ.ಕತ್ತಿ (ಸಕ್ಕರೆ ಸಚಿವರು): ಮಾನ್ಯ ಅಧ್ಯಕ್ಷರೆ,

ಭದ್ರಾ ಸಹಕಾರ ಸಕ್ಕರೆ ಕಾರ್ಖಾನೆ ದೊಡ್ಡಬಾವಿ ಇದರಲ್ಲಿನ ಖಾಯಂ ಹಂಗಾಮಿ ಖಾಯಂ ಹಾಗೂ ಗುತ್ತಿಗೆ ಮತ್ತು ದಿನಗೂಲಿ ಸುಮಾರು 123 ಕಾರ್ಮಿಕರನ್ನು 1992ರಿಂದ ಕಾರ್ಖಾನೆಯ ನೌಕರಿಯಿಂದ ತೆಗೆದು ಹಾಕಿ ಅನ್ಯಾಯವಾಗಿದೆ ಎಂಬ ಸಮಸ್ಯೆ ಬರುವುದು ನಿಜ. ಈ ಸಮಸ್ಯೆಯ ಬಗ್ಗೆ ಹಲವಾರು ಬಾರಿ ವಿವಿಧ ಹಂತಗಳಲ್ಲಿ ಸಂಧಾನಗಳು ಏರ್ಪಟ್ಟಿವೆ. ಈ ಕಾರ್ಮಿಕ ಸಮಸ್ಯೆಗೆ ಸಂಬಂಧಪಟ್ಟಂತೆ ಈಗಾಗಲೇ ಕಾರ್ಮಿಕ ನ್ಯಾಯಾಲಯ ಹುಬ್ಬಳ್ಳಿ ಇಲ್ಲಿ ಮೊಕದ್ದಮೆ ದಾಖಲಾಗಿದ್ದು ಇತ್ಯರ್ಥಕ್ಕೆ ಬಾಕಿ ಉಳಿದಿದೆ.

ಇದೇ ವಿಷಯಕ್ಕೆ ಸಂಬಂಧಿಸಿದಂತೆ ವಿಧಾನ ಪರಿಷತ್ತಿನಲ್ಲಿ ವಿಷಯ ಪ್ರಸ್ತಾಪವಾಗಿದ್ದುದೂ ನಿಜ. ಈ ವಿಷಯವನ್ನು ಸಂಬಂಧಪಟ್ಟ ಕಾರ್ಮಿಕ ವರ್ಗ ಹಾಗೂ ಆಡಳಿತ ವರ್ಗವನ್ನು ಕರೆದು ಇತ್ಯರ್ಥಕ್ಕಾಗಿ ಕ್ರಮವಿಡಲಾಗುವುದು ಎಂದು ಉತ್ತರಿಸಿದ್ದುದು ನಿಜ. ಈ ಸಮಸ್ಯೆ ಪರಿಹಾರಕ್ಕಾಗಿ ತೀವ್ರ ಕಾಳಜಿಯನ್ನಿಟ್ಟುಕೊಂಡು

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಮತ್ತು ನಾನು ಹಲವಾರು ಸಭೆಗಳನ್ನು ನಡೆಸಿದ್ದೇವೆ. ಅನೇಕ ಸದರಿ ಸಭೆಗಳಲ್ಲಿ ಮಾನ್ಯ ಶಾಸಕರುಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ, ಶ್ರೀ ಎಸ್.ಎ.ರವೀಂದ್ರನಾಥ, ಶ್ರೀ ಈಶ್ವರಪ್ಪ ಹಾಗೂ ಡಾ|| ಶಿವಯೋಗಿ ಸ್ವಾಮಿಯವರು ಭಾಗವಹಿಸಿರುತ್ತಾರೆ. ಇದರ ಫಲವಾಗಿ ಸಮಸ್ಯೆಯ ಪರಿಹಾರದಲ್ಲಿ ಸಾಕಷ್ಟು ಸುಧಾರಣೆಯಾಗಿದೆ. ಆದರೆ ನೌಕರರ ಸಂಖ್ಯೆಯ ಬಗ್ಗೆ ಆಡಳಿತ ವರ್ಗ ಮತ್ತು ಸಂಬಂಧಪಟ್ಟ ನೌಕರರ ಸಂಘದ ನಡುವೆ ಸ್ಪಷ್ಟ ಒಮ್ಮತ ಮೂಡಬೇಕಾಗಿದೆ. ಇದೇ ರೀತಿ ಹಿಂದಿನ ಅವಧಿಯ ವೇತನ ಬಾಕಿಯ (ಬ್ಯಾಕ್ ವೇಜಸ್) ಬಗ್ಗೆಯೂ ಪರಸ್ಪರ ಒಮ್ಮತ ಮೂಡಬೇಕಾಗಿದೆ. ಅಂದರೆ ಕೆಲಸಕ್ಕೆ ತೆಗೆದುಕೊಳ್ಳಬೇಕಾದ ನೌಕರರ ಸಂಖ್ಯೆ, ವೇತನ ಬಾಕಿ ಹಾಗೂ ಕಾರ್ಮಿಕ ನ್ಯಾಯಾಲಯದಲ್ಲಿರುವ ಮೊಕದ್ದಮೆಗಳನ್ನು ವಾಪಸ್ಸು ಪಡೆಯಬೇಕೆಂಬ ವಿಷಯದಲ್ಲಿ ಸ್ಪಷ್ಟ ಒಮ್ಮತ ಆಗಬೇಕಾಗಿದೆ. ಇತ್ತೀಚೆಗೆ ಮಾನ್ಯ ಸದಸ್ಯರಾದ ಶ್ರೀ ಬಿ.ಎಸ್.ಯಡಿಯೂರಪ್ಪ, ಶ್ರೀ ಎಸ್.ಎ.ರವೀಂದ್ರನಾಥ ಕಾರ್ಖಾನೆಯ ಅಧ್ಯಕ್ಷರಾದ ಶ್ರೀ ಹೆಚ್.ಶಿವಪ್ಪನವರು ಹಾಗೂ ಸಕ್ಕರೆ ನಿರ್ದೇಶಕರೊಡನೆ ಚರ್ಚಿಸಲಾಗಿದೆ. ಸದರಿ ಚರ್ಚೆಯಲ್ಲಿ ಮತ್ತೊಮ್ಮೆ ಸೇರಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕೆಂಬುದಾಗಿ ಪರಸ್ಪರ ತೀರ್ಮಾನಿಸಲಾಗಿದೆ.

ಈ ಕಾರ್ಖಾನೆಯ ಕಾರ್ಮಿಕರ ಸಮಸ್ಯೆ ಪರಿಹಾರಕ್ಕೆ ಮತ್ತೊಮ್ಮೆ ತೀವ್ರ ಪ್ರಯತ್ನ ಮುಂದುವರೆಸಲಾಗುವುದು. ವಿಷಯ ಈಗಾಗಲೇ ನ್ಯಾಯಾಲಯದ ಮುಂದಿರುವುದರಿಂದ ಸರ್ಕಾರ ಸಂಧಾನದ ಮೂಲಕ ಇತ್ಯರ್ಥ ಪಡಿಸಲು ಪ್ರಯತ್ನಿಸಬಹುದೇ ಹೊರತು ನೇರವಾಗಿ ಆದೇಶವನ್ನು ಹೊರಡಿಸಲು ಅವಕಾಶ ಕಂಡು ಬರುತ್ತಿಲ್ಲ. ಆದುದರಿಂದ ಆಡಳಿತ ವರ್ಗ ಮತ್ತು ನೌಕರ ವರ್ಗ ಈ ಎರಡೂ ಪರಸ್ಪರ ವಿಶ್ವಾಸದಿಂದ ಸಮಸ್ಯೆ ಪರಿಹಾರಕ್ಕಾಗಿ ಸಹಕರಿಸಬೇಕಾಗಿದೆ. ಒಂದುವೇಳೆ ಸಂಧಾನ ಮುರಿದಲ್ಲಿ ನ್ಯಾಯಾಲಯದ ಆದೇಶಕ್ಕಾಗಿ ನೀರಿಕ್ಷಿಸಬೇಕಾಗುತ್ತದೆ. ಆದುದರಿಂದ ಕಾರ್ಮಿಕರ ಮತ್ತು ಕಾರ್ಖಾನೆಯ ಈ ಎರಡರ ಹಿತದೃಷ್ಟಿಯನ್ನಿಟ್ಟುಕೊಂಡು ಸಧ್ಯದಲ್ಲಿಯೇ ಸಭೆಯನ್ನು ಕರೆದು ಸಮಸ್ಯೆ ಪರಿಹಾರಕ್ಕೆ ಪ್ರಯತ್ನ ಮಾಡಲಾಗುವುದು.

ಅಧ್ಯಕ್ಷರು: ಈಗ ತಾವು ಸ್ಪಷ್ಟೀಕರಣ ಕೇಳಬಹುದು.

+ ಶ್ರೀ ಆಯನೂರು ಮಂಜುನಾಥ್: ಅಧ್ಯಕ್ಷರೆ, ಇಲ್ಲಿ 123 ಜನರನ್ನು ಕೆಲಸಕ್ಕೆ ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ಈ ಸಂಧಾನದ ಮಾತುಕತೆಯನ್ನು ಆಡುತ್ತಿದ್ದೇವೆ. ಇದರಿಂದ ಆಡಳಿತ ವರ್ಗ ಕಾರ್ಮಿಕರ ಮೇಲೆ ತಮ್ಮ ಚೇಲಾಗಳನ್ನು ಸೃಷ್ಟಿ ಮಾಡುತ್ತಿದೆ, ಸುಮಾರು 21 ಜನರ ಕೇಸು ಕೋರ್ಟಿನಲ್ಲಿ ಪೆಂಡಿಂಗ್‌ನಲ್ಲಿದ್ದರೂ ಕೂಡ ಅವರಿಗೆ ಬೇಕಾಗಿರುವಂತಹವರನ್ನು ಆಯ್ಕೆ ಮಾಡಿಕೊಂಡು, 100 ಪರ್ಸೆಂಟ್ ಬ್ಯಾಕ್ ವೇಜಸ್ ಕೂಡ ಕೊಟ್ಟಿದೆ, 21 ಜನಕ್ಕೆ ಕೆಲಸ ಕೊಟ್ಟಿದ್ದೀರಿ, ಇನ್ನುಳಿದ ಸುಮಾರು 123 ಜನಕ್ಕೆ

ನೀನು ಬಾ, ನೀನು ಬಾ ಎಂದು ಕಾರ್ಮಿಕರ ಒಗ್ಗಟನ್ನು ಹೊಡೆಯುವಂತಹ ಕೆಲಸ ಮಾಡುತ್ತಿದ್ದೀರಿ, ಇದೊಂದು ಸಹಕಾರಿ ಸಕ್ಕರೆ ಕಾರ್ಖಾನೆ, ಅಲ್ಲಿ ಒಬ್ಬರು ಸರ್ಕಾರದ ಎಂಡಿ ಇದ್ದಾರೆ. ಅಲ್ಲಿ ಕಾರ್ಮಿಕ ನ್ಯಾಯಾಲಯದಲ್ಲಿ ಆಗಿರುವ ಯಾವುದೇ ಆಜ್ಞೆಗಳು ಜಾರಿಯಾಗುವುದಿಲ್ಲ. ವಿತ್‌ಔಟ್ ಎನ್‌ಕ್ವೈರಿ ಡಿಮೋಷನ್ ಮಾಡುತ್ತೀರಿ, ಕೆಲಸದಿಂದ ತೆಗೆದುಹಾಕುತ್ತೀರಿ, ಈ ರೀತಿ ಅಲ್ಲಿ ಹುಚ್ಚಾಬಟ್ಟೆ ನಡೆಯುತ್ತಿದೆ, ಆದ್ದರಿಂದ ಇದರ ಮೇಲೆ ಸರ್ಕಾರ ಸಂಪೂರ್ಣವಾದ ನಿಯಂತ್ರಣ ಹೊಂದಬೇಕು. ತಾವು ಮಾತುಕತೆ ಮಾಡುವಂಥದ್ದು ಹಾಗೂ ಈ ಪ್ರೊಸೆಸ್‌ನ್ನು ಯಾರಾದರೂ ಒಪ್ಪಿಕೊಳ್ಳುತ್ತೇವೆ, ಇತ್ಯರ್ಥ ಮಾಡುವಂತಹ ವಿಚಾರದ ಸಂದರ್ಭದಲ್ಲಿ ತಾವು ತೆಗೆದುಕೊಳ್ಳುವ ಉತ್ಸಾಹಕ್ಕೆ ನಮ್ಮ ಸಂಪೂರ್ಣ ಬೆಂಬಲವನ್ನು ನಾವು ಈ ಸಂದರ್ಭದಲ್ಲಿ ಕೊಡುತ್ತೇವೆ. ಆದರೆ ಈಗಾಗಲೇ 21 ಜನರನ್ನು ಆಯ್ಕೆ ಮಾಡಿಕೊಂಡು ಬ್ಯಾಕ್ ವೇಜಸ್ ಕೊಡುತ್ತಿದ್ದೀರಲ್ಲಾ, ಅದು ಯಾವ ಇತ್ಯರ್ಥದ ಸಂಧಾನ? ಅದೇ ರೀತಿಯಲ್ಲಿ ಉಳಿದಿರುವ 123 ಜನರನ್ನು ಕೆಲಸಕ್ಕೆ ತೆಗೆದುಕೊಂಡು ಬ್ಯಾಕ್ ವೇಜಸ್ ಕೊಡುತ್ತೇವೆ ಎನ್ನುವಂತಹ ಮಾತನ್ನು ತಾವು ಹೇಳಬೇಕು. ಬೇಕಾದರೆ ಉಳಿದಂಥ ಕಂಡೀಷನ್ ಬಗ್ಗೆ ನಂತರ ನಾವು ನೀವು ಮಾತನಾಡೋಣ. ಹೇಗೆ 21 ಜನರನ್ನು ಅನ್‌ಕಂಡೀಷನರ್ ಆಗಿ ವಾಪಸು ತೆಗೆದುಕೊಂಡಿದ್ದಾರೋ ಅದೇ ರೀತಿಯಲ್ಲಿ ಇವರನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ: ಅಧ್ಯಕ್ಷರೆ, ಇಲ್ಲಿ ಚರ್ಚೆ ಮಾಡುವಂತಹ ವಿಷಯ ಏನಿಲ್ಲ... ನಾವು ಮಾನ್ಯ ಸಚಿವರ ಹಾಗೂ ಆಡಳಿತ ವರ್ಗದವರ ಜೊತೆಯಲ್ಲಿ ಅನೇಕ ಸಲ ಮಾತನಾಡಿದ್ದೇವೆ. ದಿನಾಂಕ: 12-8-96ರಲ್ಲಿ ವಿಧಾನ ಪರಿಷತ್‌ನಲ್ಲಿ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಆ ಸಮಯದಲ್ಲಿ ಮಾನ್ಯ ಸಭಾಪತಿಗಳು ಹೇಳಿರುವುದು ಏನೆಂದರೆ, ಕೋರ್ಟಿಗೆ ಹೋಗಿರುವ ಎಲ್ಲರಿಗೂ ಒಂದೇ ರೀತಿಯ ವ್ಯವಹಾರವನ್ನು ನೀವು ನಡೆಸಬೇಕಾಗುತ್ತದೆ, ಈಗಾಗಲೇ ನೀವು 21 ಜನರನ್ನು ಅಲ್ಲಿ ಕೆಲಸಕ್ಕೆ ತೆಗೆದುಕೊಂಡಿದ್ದೀರಿ. why do you make discrimination for others? When you have given for 15-20 persons as per the order of the court, you have to give to others also. ಎಂದು ಹೇಳಿದ್ದಾರೆ. ಈ ಸಮಯದಲ್ಲಿ ಮಾನ್ಯ ಉಮೇಶ್ ಕತ್ತಿಯವರು ಉತ್ತರಿಸುತ್ತಾ, ನ್ಯಾಯಾಲಯದ ಆದೇಶದಂತೆ 21 ಜನರಿಗೆ ಹಿಂದೆ ಯಾರನ್ನು ತೆಗೆದುಕೊಂಡಿದ್ದಾರೆ, ಇದರ ಬಗ್ಗೆ ನಮಗೆ ವರದಿ ಇದೆ, ಈ ರೀತಿ ಕೊಟ್ಟಿರುವುದರಿಂದ ನಾವು ಉಳಿದಿರುವವರಿಗೆ ಕೂಡ ಕೊಡುತ್ತೇವೆ ಎಂದು ಆ ದಿವಸ ಸದನದಲ್ಲಿ ಆಶ್ವಾಸನೆ ಕೊಟ್ಟಿದ್ದಾರೆ. ಆದರೆ ಇಲ್ಲಿ ಪ್ರಶ್ನೆ ಏನೆಂದರೆ, ಆಡಳಿತ ವರ್ಗದವರು ಜನವರಿ 1992ರಲ್ಲಿ 123 ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಿದ್ದಾರೆ. ಇಲ್ಲಿ 1982 ರಿಂದ 1992ರವರೆಗೆ ಕಾರ್ಖಾನೆ ಸೂಪರ್ ಸೀಡ್ ಆಗಿದೆ. ಈ ಸಮಯದಲ್ಲಿ ಅಲ್ಲಿರುವ ವಿಶೇಷ ಅಧಿಕಾರಿ,

ಎಂ.ಡಿ.ಹೇಳಿದಂತೆ ಆ ನೌಕರರು ಕೇಳಿದರು ಇಷ್ಟೇ ಅವರು ಮಾಡಿರುವ ಅಪರಾಧ. ನೀವು ಯಾವುದೋ ಕಾರಣಕ್ಕೆ ತೆಗೆದುಹಾಕಿದ್ದೀರಿ. ಈಗ 1982ರಿಂದ 1992ರವರೆಗೆ ಕೆಲಸದಿಂದ ಹೊರಗಿದ್ದಂತಹ 20 ಜನಕ್ಕೆ ನೀವು ನೇಮಕ ಮಾಡಿಕೊಂಡು, ಅವರಿಗೆ ಕೊಡಬೇಕಾದ ಎಲ್ಲಾ ಬ್ಯಾಕ್‌ವೇಜಸ್ ಕೊಟ್ಟು, ಅವರನ್ನು ಗೌರವದಿಂದ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿದ್ದೀರಿ, ಹಾಗೂ ಸ್ವಲ್ಪ ಹೆಚ್ಚಿನ ಪ್ರಮಾಣದ ಸಂಬಳವನ್ನೂ ಕೂಡ ಕೊಟ್ಟಿದ್ದೀರಿ ನಾವು ಇದನ್ನು ಪ್ರಶ್ನೆ ಮಾಡುವುದಿಲ್ಲ. ತಾವು ನೇರವಾಗಿ ಹೇಳಬೇಕು ಏನೆಂದರೆ, ಆ ದಿನ ವಿಧಾನ ಪರಿಷತ್ತಿನಲ್ಲಿ ಒಪ್ಪಿಕೊಂಡಿರುವಂತೆ ಈಗಾಗಲೇ ಕೋರ್ಟಿನಲ್ಲಿ ಕೇಸು ವಿತ್‌ಡ್ರಾ ಮಾಡಿಕೊಳ್ಳುವುದಕ್ಕಿಂತ ಮುಂಚೆ ಅವರಿಗೆ ಅನುಕೂಲ ಮಾಡಿ ಕೊಟ್ಟು, ನಂತರ ಕೋರ್ಟಿಗೆ ಕಾಂಪ್ರಮೈಸ್‌ಗೆ ಅರ್ಜಿ ಹಾಕಿ ಇತ್ಯರ್ಥ ಮಾಡಿದ್ದೀರಿ. ನಮ್ಮದು ಏನು ಪ್ರಶ್ನೆ ಎಂದರೆ ಉಳಿದಿರುವ 123 ಜನರನ್ನು ಆಯ್ಕೆ ಮಾಡಿಕೊಂಡು ಬ್ಯಾಕ್ ವೇಜಿಸ್ ಕೊಡಿ, ಏಕೆಂದರೆ 21 ಜನಕ್ಕೆ ಕೊಟ್ಟ ರೀತಿಯಲ್ಲಿ ಇವರಿಗೆ ಕೊಡಿ. ಹಾಗೂ ಕೋರ್ಟಿನಲ್ಲಿ ಅವರು ಎಲ್ಲರೂ ಕೂಡ ಕೇಸನ್ನು ವಿತ್ ಡ್ರಾ ಮಾಡಿಕೊಳ್ಳುವುದಕ್ಕೆ ಸಿದ್ಧವಾಗಿದ್ದಾರೆ. ಇದರ ಜೊತೆಗೆ ಆ ಕಾರ್ಮಿಕರು ಹಗಲು ರಾತ್ರಿ ಆ ಕಾರ್ಖಾನೆಯ ಹಿತಕೋಸ್ಕರ ದುಡಿಯುವುದಕ್ಕೆ ಸಿದ್ಧವಾಗಿದ್ದಾರೆ. ಈ ಬಗ್ಗೆ ನಾವು ತಮ್ಮ ಹತ್ತಿರ ಚರ್ಚೆ ಮಾಡಿದ್ದೇವೆ. ಆದರೆ ಇಲ್ಲಿ ಏನಾಗಿದೆ ಎಂದರೆ ನೀವು 20 ಜನರನ್ನು ಆಯ್ಕೆ ಮಾಡಿಕೊಂಡು, ಬ್ಯಾಕ್ ವೇಜಸ್ ಕೊಡುವುದಕ್ಕೆ ಯಾವುದೇ ಕಾನೂನು ನಿಮಗೆ ಅಡ್ಡಿ ಬರಲಿಲ್ಲ. ಇದಕ್ಕೆ ತಾವು ಏನು ಹೇಳುತ್ತೀರಿ ಎಂದರೆ ಉಳಿದಿರುವ 123 ಕಾರ್ಮಿಕರಲ್ಲಿ ಸುಮಾರು 85-90 ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತೇವೆ, ಆದರೆ ಇವರಿಗೆ ಬ್ಯಾಕ್‌ವೇಜಸ್ ಕೊಡುವುದಕ್ಕೆ ಬರುವುದಿಲ್ಲ, ಕಾರಣ ಕಾರ್ಖಾನೆ ಲಾಸ್‌ನಲ್ಲಿ ಇದೆ, ಹಾಗೂ ಸರ್ಕಾರಕ್ಕೆ ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತೀರಿ. ಆದರೆ ನೀವು ಹೇಳುತ್ತಿರುವ ಯಾವ ಕಾರಣವು ಸಕಾರಣವಲ್ಲ. ಇವತ್ತು ಇದನ್ನು ಒಂದು ನಿಮಿಷದಲ್ಲಿ ಮುಗಿಸೋಣ, ದಯಮಾಡಿ ಇವತ್ತು ಕಾರ್ಮಿಕರೂ ಉಳಿಯಬೇಕು ಹಾಗೂ ಕಾರ್ಖಾನೆಯೂ ಕೂಡ ಉಳಿಯಬೇಕು, ಏಕೆಂದರೆ, ಆ ಕಾರ್ಮಿಕರದ್ದು ಏನೂ ತಪ್ಪಿಲ್ಲ, ಒಂದು ಪಕ್ಷ ತಪ್ಪಿದ್ದರೆ, ಏನು ಕಾರಣವೆಂದರೆ ಆ ವಿಶೇಷ ಅಧಿಕಾರಿ, ಎಂಡಿಯವರ ಮಾತನ್ನು ಈ ನೌಕರರು ಕೇಳಿರುವುದು, ಎನ್ನತಕ್ಕಂಥದ್ದು ಒಂದೇ ಒಂದು ಆರೋಪ. ಆದ್ದರಿಂದ ದಯಮಾಡಿ ತಾವು ಯಾರ್ಯಾರನ್ನು ತೆಗೆದುಕೊಳ್ಳಬೇಕು ಅವರನ್ನು ತೆಗೆದುಕೊಂಡು, ಅವರಿಗೆ ಬ್ಯಾಕ್‌ವೇಜಸ್ ಕೊಟ್ಟು ಬಿಡಿ. ಯಾರನ್ನು ನೀವು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೋ ಅದು ಕೋರ್ಟಿನಲ್ಲಿ ಇತ್ಯರ್ಥವಾಗಲಿ. ಕೇಸನ್ನು ಮುಂಚಿತವಾಗಿ ವಿತ್‌ಡ್ರಾ ಮಾಡಿಕೊಳ್ಳುವುದಕ್ಕೆ ಕೂಡ ನಾವು ರೆಡಿ ಇದ್ದೇವೆ ಹಾಗೂ ಅಧ್ಯಕ್ಷರ ಕೊಠಡಿಗೆ ಬಂದು, ತಾವು ಹೇಳಿದಂತೆ ಕೇಳುವುದಕ್ಕೆ ನಾವು ಸಿದ್ಧರಿದ್ದೇವೆ. ಆದ್ದರಿಂದ ದಯಮಾಡಿ, ಕಾರ್ಮಿಕರನ್ನು ಈ ರೀತಿ ಗೋಳು ಹುಯ್ಯಿಕೊಳ್ಳುವುದು, ಮ್ಯಾನೇಜ್‌ಮೆಂಟ್‌ನವರಿಗೆ ಶೋಭೆ ತರುವುದಿಲ್ಲ, ಇದನ್ನು ನೋಡಿ ಸರ್ಕಾರ ಸುಮ್ಮನೆ ಕುಳಿತುಕೊಂಡರೆ ಸರ್ಕಾರಕ್ಕೂ ಶೋಭೆ ತರುವಂಥದ್ದಲ್ಲ. ಮೇಲ್ಮನೆಯಲ್ಲಿ ನೀವು

ಒಪ್ಪಿಕೊಂಡಿರುವ ರೀತಿಯಲ್ಲಿ ಕ್ರಮವನ್ನು ಇವತ್ತು ಅಥವಾ ನಾಳೆ ಕಾರ್ಯರೂಪಕ್ಕೆ ತರುತ್ತೇವೆಂದು ತಾವು ಸ್ಪಷ್ಟವಾಗಿ ನಮಗೆ ಹೇಳಬೇಕು.

ಶ್ರೀ ಉಮೇಶ್ ವಿ.ಕತ್ತಿ: ಅಧ್ಯಕ್ಷರೆ, ಹಲವಾರು ಬಾರಿ ಮೀಟಿಂಗ್ ಕರೆದು, ಅಲ್ಲಿ ಚರ್ಚೆಯಾಗಿ, 123 ಕಾರ್ಮಿಕರಲ್ಲಿ ಎಷ್ಟು ಜನ ಕೆಲಸಕ್ಕೆ ಪುನಃ ತೆಗೆದುಕೊಳ್ಳಬೇಕು, ಬ್ಯಾಕ್ ವೇಜಸ್ ಬಗ್ಗೆ ಏನು ಮಾಡಬೇಕು ಎಂಬ ವಿಷಯವಾಗಿ ಮಾನ್ಯ ಯಡಿಯೂರಪ್ಪನವರು, ರವಿಂದ್ರನಾಥರವರು, ಎಲ್ಲರೂ ಸೇರಿ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಆ ಕಾರ್ಖಾನೆಯ ಆರ್ಥಿಕ ಪರಿಸ್ಥಿತಿ ನೋಡಿಕೊಂಡು, ಬ್ಯಾಕ್‌ವೇಜಸ್, ಕೊಡಬೇಕು ಎನ್ನುವ ತೀರ್ಮಾನವನ್ನು ನಾನಾಗಲೀ, ಶುಗರ್ ಡೈರೆಕ್ಟರ್‌ರಾಗಲಿ, ಕಾರ್ಖಾನೆಯ ಅಧ್ಯಕ್ಷರು ಎಲ್ಲರೂ ಕೂಡಿ ಮಾನ್ಯ ಯಡಿಯೂರಪ್ಪನವರಿಗೆ ಹೇಳಿದ್ದೇವೆ. ಹಾಗೂ ಇದರ ಬಗ್ಗೆ ಮಾತನಾಡಿ ಕೊನೆಯ ಹಂತಕ್ಕೆ ಬಂದು ತಲುಪಿದ್ದೇವೆ. ಈಗ ಉಳಿದಿರುವುದು ಏನೆಂದರೆ ಅವರು ಕೊರ್ಟಿನಲ್ಲಿ ಹಾಕಿರುವ ಕೇಸನ್ನು ವಿತ್‌ಡ್ರಾ ಮಾಡಿಕೊಳ್ಳಬೇಕು. ನಾವು ಈಗಾಗಲೇ ಮಾನ್ಯ ಯಡಿಯೂರಪ್ಪನವರಿಗೆ ಎಷ್ಟು ಜನರನ್ನು ಆಯ್ಕೆ ಮಾಡಿಕೊಳ್ಳಬಹುದೆಂದು ಒಂದು ಫಿಗರ್ಸ್ ಕೂಡ ಕೊಟ್ಟಿದ್ದೇವೆ. ಈ ರೀತಿ ಫಿಗರ್ಸ್ ಕೊಟ್ಟಾಗ, ಇದರಲ್ಲಿ ಸ್ವಲ್ಪ ಹೆಚ್ಚಿಗೆ ಮಾಡಿ ಎಂದು ಮಾನ್ಯ ಸದಸ್ಯರು ಹೇಳಿದರು, ಆಯಿತು ಅದನ್ನು ಕುಳಿತುಕೊಂಡು ಮುಗಿಸೋಣ ಎಂದು ನಾವು ಈಗಾಗಲೇ ಹೇಳಿದ್ದೇವೆ... ಎರಡು ದಿನದಲ್ಲಿ ಒಂದು ಮೀಟಿಂಗ್‌ನ್ನು ಕರೆದು, ಇತ್ಯರ್ಥ ಮಾಡುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ, ಇದಕ್ಕೆ ಹಿರಿಯ ಸದಸ್ಯರೆಲ್ಲರೂ ಕೂಡ ಸಹಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಮಾನ್ಯ ಮಂತ್ರಿಗಳೇ ಅವರು ಹೇಳತಕ್ಕ ಮಾತಿನ ಸಾರಾಂಶ ಏನೆಂದರೆ ಕಾರ್ಮಿಕರ ಐಕ್ಯಮತ್ಯವನ್ನು ಒಡೆಯುವ ಪ್ರಯತ್ನ ಮಾಡುತ್ತಿದ್ದಾರೆ; ಒಡೆದು ಆಳತಕ್ಕಂಥ ನೀತಿಯನ್ನು ಅವರು ಅನುಸರಿಸುತ್ತಿದ್ದಾರೆ; ಮತ್ತೊಂದು ವಿಷಯ ಏನೆಂದರೆ ಕಾರ್ಮಿಕರನ್ನು ಹಿಂತೆಗೆದುಕೊಳ್ಳುವ ಸಮಯದಲ್ಲಿ ತಾರತಮ್ಯ ಮಾಡುತ್ತಿದ್ದಾರೆ. ಆದ್ದರಿಂದ ಮೇಲ್ಕಂಡ ಎರಡು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ತಾವು ಅದಕ್ಕೆ ಅವಕಾಶ ಆಗದಂತೆ, ತಾವು ಈಗಾಗಲೇ ಮೇಲ್ಮನೆಯಲ್ಲಿ ಹೇಳಿರುವಂತೆ ಅದಕ್ಕೆ ಹೊಂದಿಕೊಂಡು you please take a decision as a special case.

11.40 ಎ.ಎಂ.

ಶ್ರೀ ಹೆಚ್.ಶಿವಪ್ಪ (ಹರಿಹರ): ಈಗ ನಮ್ಮ ಮಾನ್ಯ ಸ್ನೇಹಿತರಾದಂತಹ ಆಯನೂರು ಮಂಜುನಾಥ್ ಅವರು ಬಹಳ ಗಂಭೀರವಾದ ಆಪಾದನೆಯನ್ನು ಆಡಳಿತ ವರ್ಗದ ಮೇಲೆ ಮಾಡಿದರು. ಅಲ್ಲಿ ಏನೂ ಕಾನೂನು ಜಾರಿಗೆ ಬರುವುದಿಲ್ಲ ಮತ್ತು ಯಾವುದೇ ಸರಕಾರದ ನೀತಿಯನ್ನು ಅನುಸರಿಸುವುದಿಲ್ಲ ಎಂದು ಅವರು ಮಾಡಿರತಕ್ಕಂತಹ ಆಪಾದನೆ ಏನು ಇದೆ ಇದು ಸತ್ಯಕ್ಕೆ ದೂರವಾಗಿದೆ. ಮಾತನಾಡುವುದಕ್ಕೆ ಬರುತ್ತದೆಂದು

ಏನು ಬೇಕಾದರೂ ಹೇಳುವುದು ಸರಿಯಲ್ಲ. ನಾನು ಆ ಕಾರ್ಖಾನೆಯ ಅಧ್ಯಕ್ಷನಿದ್ದೇನೆ. ಯಾವ ಕಾರ್ಮಿಕರ ಮೇಲೆ ಹಲ್ಲೆ ಏನೂ ಮಾಡಿಲ್ಲ. ಅದರ ಬಗ್ಗೆ ಇಲ್ಲಿ ಕಾಮೆಂಟ್ ಮಾಡುವುದಕ್ಕೆ ನಾನು ಬರುತ್ತಿಲ್ಲ. It amounts to subjudice.

ಶ್ರೀ ಬಿ.ಎಸ್.ಯಡಿಯೂರಪ್ಪ: ಅಧ್ಯಕ್ಷರು ಎಂದು ಹೇಳುತ್ತಾರೆ. ಮಂತ್ರಿಗಳು ಹೇಳುತ್ತಾರೆ. ನೀವು ಕಾರ್ಮಿಕ ಸಂಘದ ಅಧ್ಯಕ್ಷರಾಗಿದ್ದೀರಿ. ಆ ಕಾರ್ಖಾನೆಯ ಅಧ್ಯಕ್ಷರಾಗಿದ್ದೀರಿ. ನೀವು ರೈತರ ಪರವೋ ಇಲ್ಲವೇ ಕಾರ್ಮಿಕರ ಪರವೋ ತಿಳಿಸಬೇಕು.

ಶ್ರೀ ಹೆಚ್.ಶಿವಪ್ಪ: ಈಗಾಗಲೇ ಅನೇಕ ಬಾರಿ ಸೇರಿಕೊಂಡು ಚರ್ಚೆ ಮಾಡಿದ್ದೇವೆ.

(INTERRUPTIONS)

MR. SPEAKER: Please be seated.

(INTERRUPTIONS)

ಅಧ್ಯಕ್ಷರು: ಮಾನ್ಯ ಸದಸ್ಯರುಗಳು ಒಂದು ನಿಮಿಷ ಸಹಕರಿಸಬೇಕಾಗುತ್ತದೆ. You must hear my observation. ಮೊನ್ನೆ ಕೆ.ಎಂ.ಎಫ್. ಅಧ್ಯಕ್ಷರ ವಿಚಾರಕ್ಕೆ ಒಂದು ಪ್ರಸ್ತಾಪ ಇಲ್ಲಿ ಬಂದಾಗ ಮಾನ್ಯ ಎ.ಟಿ.ರಾಮಸ್ವಾಮಿ ಯವರು ಒಂದು ಕ್ರಿಯಾಲೋಪವನ್ನು ಎತ್ತಿದ್ದರು. ಅದೇ ಸಮಯಕ್ಕೆ ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಅದೇ ವಿಚಾರವನ್ನು ಪ್ರಸ್ತಾಪ ಮಾಡಿದರು. ಇಂದು ಮಾನ್ಯ ಸದಸ್ಯರುಗಳಾದ ಯಡಿಯೂರಪ್ಪನವರು ಶ್ರೀ ರವೀಂದ್ರನಾಥ್ ಹಾಗೂ ಮಾನ್ಯ ಆಯನೂರು ಮಂಜುನಾಥ ಅವರು ಗಮನ ಸೆಳೆಯುವ ಸೂಚನೆಯ ಮುಖಾಂತರ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅವರ ಒತ್ತಾಯ ಇರತಕ್ಕಂಥಾದ್ದು ಸರಕಾರದ ಮೇಲೆ. ಉತ್ತರ ಕೊಡುವುದಕ್ಕೆ ಸರಕಾರದಲ್ಲಿ ಮಂತ್ರಿಗಳು ನಿಯುಕ್ತರಾಗಿದ್ದಾರೆ. ಆ ಕೆಲಸವನ್ನು ಅವರು ಮಾಡಿದ್ದಾರೆ. ಇದಕ್ಕೆ ಸಹಕರಿಸಿ ತಾವೇನಾದರೂ ಹೇಳುವುದು ಇದ್ದರೆ, ತಾವು ಆ ಸಕ್ಕರೆ ಕಂಪನಿಗೆ ಸಂಬಂಧಿಸಿದವರು ಆ ಕ್ಷೇತ್ರದಲ್ಲಿ ಇರತಕ್ಕಂತಹವರು ಎಂದು ನಾನು ತಮಗೆ ಅವಕಾಶ ಕೊಡುತ್ತಿದ್ದೇನೆ. ಈ ಆಪಾದನೆಗಳನ್ನು ನೇರವಾಗಿ ಮಾನ್ಯ ಹೆಚ್ ಶಿವಪ್ಪನವರ ಮೇಲೆ ಅವರ ಮಾಡಿದ್ದಿದ್ದರೆ, since Sri H.Shivappa is an hon'ble Member of this House, ಆಗ ತಮಗೆ ಎಲ್ಲಾ ಹಕ್ಕು ಬರುತ್ತಿತ್ತು. ತಾವು ಮತ್ಯಾವುದಾದರೂ ರೂಪದಲ್ಲಿ ತರಬಹುದು. ಇಲ್ಲವೇ ನಾಳೆ you can come and give a notice to me. ನಾನು ತಮಗೆ ಅವಕಾಶ ಮಾಡಿಕೊಡುತ್ತೇನೆ. You can place your views on the record. But, this is not ocassion for you to contradict what the Hon'ble Member has said. You are a very learned Member.

SRI H.SHIVAPPA: I entirely agree with the observations of the Hon'ble Speaker. But, a mention has been made of mine.

MR. SPEAKER: I have been cautiously listening to the speeches made by the Hon'ble Members. Sri Ayanur Majunath did not take your name. There is nothing by way of reference to Sri H. shivappa, hon'ble Member of this House. If there is anything in the record I will give an opportunity to you and call you to give explanation.

ಶ್ರೀ ಬಿ.ಎಸ್.ಯಡಿಯೂರಪ್ಪ: ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ಅಥವಾ ದೊಡ್ಡ ಬಾತಿ ಕಾರ್ಖಾನೆ ಯಾವುದೇ ಇರಲಿ. ಮಾನ್ಯ ಅಧ್ಯಕ್ಷರೇ ತಾವು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೀರಿ 1988 ಮತ್ತು 1992ರಲ್ಲಿ ಯಾರನ್ನು ತೆಗೆದು ಹಾಕಿದ್ದೀರಿ ಅವರು ಕೋರ್ಟಿನಲ್ಲಿ ಕೇಸ್ ವಿತ್‌ಡ್ರಾ ಮಾಡಿಕೊಳ್ಳುವುದಕ್ಕೆ ಮೊದಲೇ ಮುಂಚೆಯೇ ಅವರನ್ನು ತೆಗೆದುಕೊಂಡಿದ್ದೀರಿ. ಇಲ್ಲಿ ನಾವು ಅದನ್ನು ಹೇಳುವುದಿಲ್ಲ. ತೆಗೆದುಕೊಂಡು ಬ್ಯಾಕ್ ವೇಜಸ್ ಎಲ್ಲವನ್ನೂ ಕೊಟ್ಟಿದ್ದೀರಿ. ಕಾರ್ಮಿಕರನ್ನು ತೆಗೆದುಕೊಳ್ಳುತ್ತೇವೆಂದು ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ಹೇಳುತ್ತೀರೋ ಅವರು ಮುಂಚೆಯೇ ಕೇಸ್ ವಿತ್‌ಡ್ರಾ ಮಾಡಿಕೊಳ್ಳುತ್ತಾರೆ. ನೀವು ಸ್ಪಷ್ಟವಾಗಿ ಅವರಿಗೆ ಹೇಗೆ ಬ್ಯಾಕ್ ವೇಜಸ್ ಕೊಟ್ಟಿರಿ ಅದೇ ರೀತಿ ಇವರನ್ನೂ ನೋಡುತ್ತೇವೆಂದು ಹೇಳಿದರೆ ಕೇಸ್ ಅನ್ನು ವಿತ್‌ಡ್ರಾ ಮಾಡಿಸುತ್ತೇವೆ. ನಮಗೆ ಮಾನ್ಯ ಮಂತ್ರಿಗಳ ಮೇಲೆ ವಿಶ್ವಾಸ, ಸರಕಾರದ ಮೇಲೆ ವಿಶ್ವಾಸ ಇದೆ. ಕಾರ್ಮಿಕರು ಯಾರ ಹತ್ತಿರ ಹೋಗಬೇಕು. ಈಗಾಗಲೇ ಏನೂ ಅಪರಾಧ ಮಾಡದೇ ಕಷ್ಟವನ್ನು ಅನುಭವಿಸಿದ್ದಾರೆ. ಅವರ ಹೆಂಡತಿ ಮಕ್ಕಳು ಬೀದಿ ಪಾಲಾಗಿದ್ದಾರೆ.

ಶ್ರೀ ಎಸ್.ಎ.ರವೀಂದ್ರನಾಥ್ (ಮಾಯಕೊಂಡ): ಹಿಂದೆ 7-8 ಕೋಟಿ ರೂಪಾಯಿ ಲುಕ್ಸಾನ್ ಇದ್ದಾಗ ಆಡಳಿತ ಮಂಡಲಿಯವರು 20 ಜನರಿಗೆ ಫುಲ್ ಬ್ಯಾಕ್ ವೇಜಸ್ ಕೊಟ್ಟು ತೆಗೆದುಕೊಂಡಿದ್ದಾರೆ. ಈ 123 ಜನ ಕೇಳತಕ್ಕಂಥಾದ್ದು ತಪ್ಪೇನೂ ಅಲ್ಲ. ಈಗ ಲಾಸ್ ಬಹಳ ಕಡಿಮೆ ಒಂದು ಕೋಟಿ ರೂಪಾಯಿ ಒಳಗೆ ಇದೆ. ಹೀಗಾಗಿ ಬ್ಯಾಕ್‌ವೇಜಸ್ ಕೊಡಲಿಕ್ಕೆ ಯಾವ ತೊಂದರೆಯೂ ಇಲ್ಲ. ಈ ವರ್ಷ 2 ಕೋಟಿ ರೂಪಾಯಿ ಲಾಭ ಬರುತ್ತಿದೆ. ಆಡಳಿತ ಮಂಡಲಿಯವರು ಕೊಡಬೇಕು ಮಂತ್ರಿಗಳು ಒತ್ತಾಯ ಮಾಡಿ ಇವರನ್ನು ತೆಗೆದುಕೊಳ್ಳಬೇಕು. ಆ 123 ಜನರ ಸ್ಥಿತಿ ಬಹಳ ಚಿಂತಾಜನಕ ಇದೆ. ಮಾನವೀಯ ದೃಷ್ಟಿಯಿಂದ ಬೇಗನೆ ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ಉಮೇಶ್ ವಿ.ಕತ್ತಿ: ಈಗಾಗಲೇ ಇದರ ಬಗ್ಗೆ ಹಲವು ಬಾರಿ ಚರ್ಚೆಯಾಗಿದೆ. ಕೊನೆ ಹಂತದಲ್ಲಿ ಅದರ ಬಗ್ಗೆ ನಾವು ಬಂದಿದ್ದೇವೆ. ಮಾನ್ಯ ಯಡಿಯೂರಪ್ಪನವರಿಗೆ

ತಿಳಿದಿದೆ. ಅವರು ನಾವು ಮತ್ತು ಮಾನ್ಯ ಶಿವಪ್ಪನವರು ಹಾಗೂ ಇನ್ನು ಉಳಿದ ಎಲ್ಲಾ ಸದಸ್ಯರನ್ನು ಕರೆದು ಚರ್ಚೆ ಮಾಡಿ ಹಣಕಾಸು ಪರಿಸ್ಥಿತಿಯನ್ನು ನೋಡಿಕೊಂಡು ಮಾಡಬೇಕಾಗುತ್ತದೆ. ಕಾರ್ಖಾನೆ ಹಾಗೂ ಕಾರ್ಮಿಕರೂ ಉಳಿಯಬೇಕು ಆ ರೀತಿಯಲ್ಲಿ ಅವರೇನು ಸಲಹೆ ಕೊಡುತ್ತಾರೆ ಆ ಸಲಹೆಗೆ ಬದ್ಧವಾಗಿ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ತಿಳಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರಿಗೆ ಬ್ಯಾಕ್ ವೇಜಸ್ ಕೊಡುತ್ತೇವೆಂದರೆ ಸಾಕು. ಗೊಂದಲ ಇರುವುದು ಇಷ್ಟೆ.

ಅಧ್ಯಕ್ಷರು: ಯಾವುದೇ ಸರಕಾರ ಇರಲಿ ಯಾವುದೇ ಮಂತ್ರಿಗಳೂ ಕೂಡ ಉತ್ತರ ಕೊಡುವ ವೇಳೆಗೆ ಖಚಿತವಾಗಿ ಹಾಗೆ ಹೇಳುವುದಿಲ್ಲ. ಡೆಫನೆಟ್ ಆಗಿ ಅವರು ಮಾಡುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: 20 ಜನರನ್ನು ತೆಗೆದುಕೊಂಡಾಗ ನಾವು ಯಾವುದನ್ನು ಮಾಡಿದ್ದೇವೆ ಅದನ್ನು ಇದಕ್ಕೂ ಅನ್ವಯಿಸುತ್ತೇವೆಂದು ಹೇಳಿದರೆ ಸಾಕು.

ಅಧ್ಯಕ್ಷರು: ಅವರು ಏನು ಹೇಳಿದರು ಎಂದರೆ ಕಾರ್ಖಾನೆಯ ಹಿತ ಕಾರ್ಮಿಕರ ಹಿತ ಎಲ್ಲವನ್ನೂ ನೋಡಬೇಕಾಗುತ್ತದೆಂದು. ಮಾನ್ಯ ರವೀಂದ್ರನಾಥ ಅವರು ಈಗ ಆ ಕಾರ್ಖಾನೆ ಚೆನ್ನಾಗಿ ನಡೆಯುತ್ತಿದೆ ಹಣಕಾಸಿನ ತೊಂದರೆ ಇಲ್ಲವೆಂದು ಹೇಳಿದರು. ಆದ್ದರಿಂದ ಅವರು ಮಾಡಿಕೊಡುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಶಿವಪ್ಪನವರು ಕಾರ್ಖಾನೆಯನ್ನು ಚೆನ್ನಾಗಿ ನಡೆಸುತ್ತಿದ್ದಾರೆ ನಾವು ಅಭಿನಂದನೆ ಸಲ್ಲಿಸುತ್ತೇವೆ. ಕೋಟಿಗಟ್ಟಲೆ ಲಾಭವಾಗಲಿ. ರೈತರು ನಮ್ಮ ಕಾರ್ಮಿಕರು ಎಲ್ಲಾ ರೀತಿಯಿಂದ ನಾವು ಅವರಿಗೆ ಸಹಕಾರ ಕೊಡುವುದಕ್ಕೆ ಸಿದ್ಧರಿದ್ದೇವೆ ಅವರು ನಮ್ಮ ಸ್ನೇಹಿತರು. ಆ 20 ಜನರಿಗೆ ಕೊಟ್ಟಂತಹ ಸವಲತ್ತನ್ನು ಇವರಿಗೂ ಕೊಡುತ್ತೇವೆಂದು ಹೇಳಿದರೆ ತಕ್ಷಣ ಕುಳಿತುಕೊಳ್ಳುತ್ತೇವೆ. ನಾವೂ ನೀವೂ ಎಲ್ಲರೂ ಸೇರಿ ಮಾಡಬೇಕಾಗುತ್ತದೆ. ಧಾರಾಳತನ ತೋರಿಸಬೇಕಾಗುತ್ತದೆ.

ಶ್ರೀ ಎಸ್.ಎಸ್.ಪಾಟೀಲ್: ಅಲ್ಲಿ ಅದು ಬೋರ್ಡ್ ಇರುವುದರಿಂದ ಅದು ಸ್ವಾಯತ್ತ ಸಂಸ್ಥೆಯಾಗಿದೆ. ಸರಕಾರವೇ ನಾವು ಎಲ್ಲದಕ್ಕೂ ನಿರ್ದೇಶನ ಕೊಡುವುದಕ್ಕಾಗುವುದಿಲ್ಲ. ಅವರೇನಾದರೂ ಪ್ರಪೋಸಲ್ ಕಳುಹಿಸಿದರೆ ನಾವು ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು: ಹಾಗೇ ಏನೂ ಬೇಡ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಸರಕಾರದ ಪರವಾಗಿ ಸಂಬಂಧಪಟ್ಟ ಮಂತ್ರಿಗಳೇ ಉತ್ತರ ಕೊಟ್ಟರೆ ಸರಿ ಹೋಗುತ್ತದೆ.

ಶ್ರೀ ಹೆಚ್.ಶಿವಪ್ಪ: ಮಾನ್ಯ ಶ್ರೀ ರಾಮರೆಡ್ಡಿಯವರು ತಪ್ಪು ತಿಳಿದುಕೊಳ್ಳುತ್ತಿದ್ದಾರೆ.

ಅಧ್ಯಕ್ಷರು: ಮಾನ್ಯ ಮಂತ್ರಿಗಳು ಒಂದು ಹೇಳಿಕೆ ಮಾಡಿದ್ದಾರೆ. ಮಾನ್ಯ ಶಿವಪ್ಪನವರೂ ಕೂಡ ಕಾರ್ಮಿಕರ ಪರವಾಗಿಯೇ ಇದ್ದಾರೆ.

ಶ್ರೀ ಹೆಚ್.ಶಿವಪ್ಪ: ನಾವು ಕಾರ್ಮಿಕರ ವಿರೋಧಿಗಳೇನೂ ಅಲ್ಲ. ನಾವೂ ಒಂದು ಅರ್ಥದಲ್ಲಿ ಕಾರ್ಮಿಕರೇ. ಇವರು ಸುಮ್ಮನೆ ಆಪಾದನೆ ಮಾಡುವುದು ಸರಿಯಲ್ಲ. ಈಗಾಗಲೇ ನಾವು ಮಾನ್ಯ ಯಡಿಯೂರಪ್ಪನವರೂ ಕುಳಿತು ಚರ್ಚೆ ಮಾಡಿ....

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಾನು ಆಪಾದನೆ ಮಾಡಲಿಲ್ಲ. ಸಂಬಂಧಪಟ್ಟ ಮಂತ್ರಿಗಳು ಸರಕಾರದ ಪರವಾಗಿ ಉತ್ತರ ಕೊಡಲಿ ಎಂದು...

(INTERRUPTIONS)

SRI H.SHIVAPPA: Thank you for the compliments.

(INTERRUPTIONS)

ಅಧ್ಯಕ್ಷರು: ತೊಂದರೆ ಇಲ್ಲ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಸಂಬಂಧಪಟ್ಟ ಮಂತ್ರಿ ಇದ್ದಾರೆ. ಅವರು ಉತ್ತರ ಕೊಡುತ್ತಾರೆ ತಾವು ಕುಳಿತುಕೊಳ್ಳಿ. ನೀವು ಕೇಳುತ್ತಲೇ ಇಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಕಾಯಿದೆ ಬದ್ಧವಾಗಿ ಎಲ್ಲರೂ ಹೋಗಬೇಕಾಗುತ್ತದೆ. ಸರಕಾರವೇನಾದರೂ ಸದನದಲ್ಲಿ ಹೇಳಿಕೆ ಕೊಟ್ಟಾಗ ನಾವು ಅದರಂತೆ ನಡೆಯಬೇಕಾಗುತ್ತದೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: 20 ಜನರನ್ನು ತೆಗೆದುಕೊಳ್ಳುವಾಗ ನಿಮ್ಮ ಕಾನೂನು ಏನಾಗಿತ್ತು, ನೀವು ಆವತ್ತು ಕಾನೂನು ಹೇಳಿದ್ದೀರೇನು? ನೀವು ಕುಳಿತುಕೊಳ್ಳಿ ಮಂತ್ರಿಗಳು ಹೇಳುತ್ತಾರೆ. 20 ಜನರನ್ನು ತೆಗೆದುಕೊಂಡು ಬ್ಯಾಕ್‌ವೇಜೆಸ್ ಕೊಟ್ಟಾಗ ನಿಮ್ಮ ಕಾನೂನು ಎಲ್ಲಿ ಹೋಗಿತ್ತು? ಮಹಾ ದೊಡ್ಡದಾಗಿ ನೀವೊಬ್ಬರೇ ಕಾನೂನು ಓದಿರುವುದು. ಒಬ್ಬ ಮಂತ್ರಿಗಳು ಹೇಳುವಾಗ ಮತ್ತೊಬ್ಬ ಸಚಿವರು ಎದ್ದು ನಿಂತು ಮಾತನಾಡುವುದು...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಸಂಬಂಧಪಟ್ಟ ಸಚಿವರು ಉತ್ತರ ಕೊಡುವಾಗ ಮಾನ್ಯ ಎಸ್.ಎಸ್.ಪಾಟೀಲರು ಎದ್ದು ನಿಂತು ಅವರು ಉತ್ತರ ಕೊಡತಕ್ಕಂತಹಾದ್ದು ಸರಿಯಲ್ಲ. ಅವರಿಗೆ ಶಕ್ತಿ ಇದೆ ಅವರೇ ಉತ್ತರ ಕೊಡುತ್ತಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸಂಬಂಧಪಟ್ಟ ಮಂತ್ರಿಗಳು ಇಲ್ಲಿಯೇ ಇದ್ದಾರೆ. ಅವರು ಈಗಾಗಲೇ ಉತ್ತರ ಕೊಡುತ್ತಿದ್ದಾರೆ. ಆದರೆ ಮಧ್ಯದಲ್ಲಿ ಸಹಕಾರ ಮಂತ್ರಿಗಳು ಎದ್ದು ಯಾವುದಾದರೊಂದು ಹೇಳಿಕೆ ಕೊಟ್ಟರೆ ಅದು ಹೇಗಾಗುತ್ತದೆ. ಎಂದರೆ ಅವರು ಜವಾಬ್ದಾರಿಯಿಂದ ಉತ್ತರ ಕೊಡುತ್ತಿಲ್ಲವೆಂಬ ಅರ್ಥ ಬರತಕ್ಕಂತಹ ರೀತಿಯಲ್ಲಿ ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಇದರ ಅರ್ಥವೇನು?

ಶ್ರೀ ಎಸ್.ಎಸ್.ಪಾಟೀಲ್: ಹಾಗೇನೂ ಹೇಳಲಿಲ್ಲ.

SRI H.SHIVAPPA: We are in democracy. Collective responsibility is there. We are not questioning his ability.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಕಾನೂನು ಏನೆಂದು ಅವರು ತಿಳಿದುಕೊಂಡಿಲ್ಲವೇ? ಕಾನೂನು ಆ ರೀತಿಯಾಗಿದೆ ಎಂದು ಇವರು ಹೇಳುತ್ತಿದ್ದಾರೆ....

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಸಹಕಾರ ಸಚಿವರ ಉತ್ತರ ಬೇಕಾಗಿಲ್ಲ. ಮಾನ್ಯ ಸಕ್ಕರೆ ಮಂತ್ರಿಯವರು ಉತ್ತರ ಕೊಡುವುದಕ್ಕೆ ಶಕ್ತರಾಗಿದ್ದಾರೆ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಸಕ್ಕರೆ ಮಂತ್ರಿಯವರಿಗೆ ಕಾನೂನು ಗೊತಿಲ್ಲವೆಂದು ಇವರು ಹೇಳಿದ ಹಾಗಾಗುತ್ತದೆ. ಅವರಿಗೆ ಅವಮಾನ ಮಾಡಿದ ಹಾಗಾಗುತ್ತದೆ. ಅವರು ಹೇಳಿದ್ದನ್ನು ವಾಪಸ್ ತೆಗೆದುಕೊಳ್ಳಬೇಕು.

ಅಧ್ಯಕ್ಷರು: ಹಾಗೇನೂ ಇಲ್ಲ. ಎಲ್ಲ ಮಂತ್ರಿಗಳಿಗೂ ಸಾಮೂಹಿಕ ಜವಾಬ್ದಾರಿ ಇದೆ. ನಾನು ನಿಮ್ಮ ಎಲ್ಲರ ಹಿತ ಕಾಪಾಡುವ ಜವಾಬ್ದಾರಿಯನ್ನು ನಾನು ತೆಗೆದುಕೊಂಡಿದ್ದೇನೆ ಅವರದ್ದು ನಿಮ್ಮದು ಎಲ್ಲರದ್ದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇವತ್ತು ಈ ವಿಷಯ ನಿಮಗೆ ಗೊತ್ತೇ ಇಲ್ಲ ಅಂದರೆ ಹೇಗೆ? ಗೊತ್ತಿಲ್ಲದೇ ಮಾತನಾಡುತ್ತಾರೆಯೇ?

ಶ್ರೀ ಎಸ್.ಎಸ್.ಪಾಟೀಲ್: ಅಲ್ಲ ಅಲ್ಲ. ಬೇರೆ ರೀತಿಯಲ್ಲಿ ಹೇಳುವುದು ಬೇಡ.

ಅಧ್ಯಕ್ಷರು: ಏಕೆ ಎದ್ದು ನಿಲ್ಲುತ್ತೀರಿ ರೆಡ್ಡಿಯವರೇ? ಸಮಯ ಬಹಳ ಕಡಿಮೆ ಇದೆ. ಇರುವ ಸಮಯವನ್ನು ಸ್ವಲ್ಪ ಸದುಪಯೋಗ ಮಾಡಿಕೊಳ್ಳೋಣ, ಇವತ್ತು ನಾಳೆಗೆ. ಸಹಕಾರ ಮಂತ್ರಿಗಳು ಹೇಳಿದ್ದುದು ಇಷ್ಟೇ. ಅದೊಂದು ಸ್ವಾಯತ್ತ ಸಂಸ್ಥೆ ಅಲ್ಲಿ ಚುನಾಯಿತ ಬೋರ್ಡ್ ಇರುವುದರಿಂದ ಆ ನಿರ್ಣಯವನ್ನು ಬೋರ್ಡ್‌ನವರು ತೆಗೆದುಕೊಳ್ಳಬೇಕಾಗುತ್ತದೆ. ನಾವು ಆದೇಶ ಕೊಡತಕ್ಕಂಥಾದ್ದು ಸಾಧುವಲ್ಲ ಎನ್ನತಕ್ಕಂಥ ಮಾತನ್ನು ಹೇಳಿದರೇ ಹೊರತು ಅವರಿಗೆ ತಿಳುವಳಿಕೆ ಇಲ್ಲ, ಅವರಿಗೆ ಗೊತ್ತಿಲ್ಲ ಎನ್ನತಕ್ಕಂಥ ಮಾತನ್ನು ಅವರೇನೂ ಹೇಳಲಿಲ್ಲ ಸನ್ಮಾನ್ಯ ಸಕ್ಕರೆ ಸಚಿವರು ಏನು ಹೇಳಬೇಕೆಂದು ಅಪೇಕ್ಷೆಪಡುತ್ತಾರೋ ಅದನ್ನು ಒಂದು ವಾಕ್ಯದಲ್ಲಿ ಹೇಳಿ ಮುಗಿಸಿ. ಮುಗಿಸೋಣ.

ಶ್ರೀ ಉಮೇಶ್ ವಿ.ಕತ್ತಿ: ಮಾನ್ಯ ಅಧ್ಯಕ್ಷರೇ ಭದ್ರಾ ಸಕ್ಕರೆ ಕಾರ್ಖಾನೆ ಇರಲಿ ಯಾವುದೇ ಸಕ್ಕರೆ ಕಾರ್ಖಾನೆಗಳು ಇರಲಿ ಸೀಜನ್‌ನಲ್ಲಿ ನಡೆಯುವ ಸಕ್ಕರೆ ಕಾರ್ಖಾನೆಗಳು, ಇವು ರೈತರಿಗೂ ಬೇಕು ಕಾರ್ಮಿಕರಿಗೂ ಬೇಕು, ಬಹುತೇಕವಾಗಿ ಎಲ್ಲರಿಗೂ ಬೇಕಾಗಿರುವಂತಹ ಕಾರ್ಖಾನೆ. ಇದರಲ್ಲಿ ಎಲ್ಲರೂ ಕೂಡಿಕೊಂಡು ಹೋದರೆ ಮಾತ್ರ ಆ ಸಕ್ಕರೆ ಕಾರ್ಖಾನೆ ಉಳಿಯುವುದಕ್ಕೆ ಸಾಧ್ಯ ಇಲ್ಲದಿದ್ದರೆ ಉಳಿದಂತೆ ಬೇರೆ ಇಂಡಸ್ಟ್ರೀಗಳು ಯಾವುವು ಇವೆ ಆ ರೀತಿ ಇವುಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ಕಾರ್ಮಿಕರು ಆಡಳಿತ ಮಂಡಲಿ ರೈತರು ಎಲ್ಲರೂ ಒಟ್ಟಿಗೆ ಇದ್ದರೆ ಮಾತ್ರ ಈ ಕಾರ್ಖಾನೆ ಉಳಿಯುತ್ತದೆ. ಇಲ್ಲದಿದ್ದರೆ ಆಗುವುದಿಲ್ಲ. ಏಕೆಂದರೆ ನಾನೂ ಸಹ ಒಂದು ಕಾರ್ಖಾನೆಯನ್ನು ನಡೆಸುತ್ತಿದ್ದೆ. ಅದರ ಅನುಭವದಿಂದ ನಾನು ಈ ವಿಚಾರವನ್ನು ಹೇಳುತ್ತಿದ್ದೇನೆ. ಇವೆಲ್ಲವನ್ನೂ ನಾವು ಗಮನದಲ್ಲಿ ಇಟ್ಟುಕೊಂಡು ಕಾರ್ಮಿಕರಲ್ಲಿ ಮತ್ತು ಆಡಳಿತ ಮಂಡಲಿಯಲ್ಲಿ ಭಿನ್ನಾಭಿಪ್ರಾಯ ತಂದು ಆ ಕಾರ್ಖಾನೆಯನ್ನು ಹಾಳು ಮಾಡುವ ವಿಚಾರ ಬೇಡ. ಆ ಕಾರ್ಖಾನೆ ಚೆನ್ನಾಗಿ ನಡೆಸುವ ರೀತಿಯಲ್ಲಿ, ಕಾರ್ಮಿಕರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಿ, ಆ ಕಾರ್ಖಾನೆಯ ಆರ್ಥಿಕ ಪರಿಸ್ಥಿತಿ ಸರಿಪಡಿಸಲು ನಾವೆಲ್ಲಾ ಪ್ರಯತ್ನ ಮಾಡೋಣ. ಹಿರಿಯ ಸದಸ್ಯರು ಏನು ಸಲಹೆಗಳನ್ನು ಕೊಟ್ಟಿದ್ದಾರೆ, ಆ ಸಲಹೆಯನ್ನು ಗಮನದಲ್ಲಿ ಇಟ್ಟುಕೊಂಡು ಕಾರ್ಮಿಕರಿಗೆ ಆಗಲಿ ಕಾರ್ಖಾನೆಯವರಿಗೆ ಆಗಲೀ ಏನು ಮಾಡುವುದಕ್ಕೆ ಸಾಧ್ಯವಿದೆ ಅದನ್ನೆಲ್ಲಾ ಸಹಾಯ ಮಾಡುತ್ತೇವೆ ಎನ್ನುವ ಮಾತನ್ನು ತಮ್ಮ ಮುಖೇನ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು: ಗಮನ ಸೆಳೆಯುವ ವಿಷಯ. ಮಾನ್ಯ ರೆವಿನ್ಯೂ ಮಂತ್ರಿಗಳಿಗೆ ಆರೋಗ್ಯ ಸರಿ ಇಲ್ಲ. ಆದ್ದರಿಂದ ನಾನೇ ಅವರನ್ನು ಮನೆಗೆ ಕಳುಹಿಸಿಕೊಟ್ಟೆ. ಅದಕ್ಕೆ ಸಂಸದೀಯ ಸಚಿವರು ಉತ್ತರ ಕೊಡಬೇಕಾಗಿತ್ತು. ಮಾನ್ಯ ಖರ್ಗೆಯವರು ಮತ್ತು ಜುಲ್ಫಿಕರ್ ಹಶ್ಮಿಯವರು ಆ ಬಗ್ಗೆ ಮಾನ್ಯ ಪ್ರಕಾಶ್ ಅವರಿಗೆ ಈಗತಾನೇ ಫೈಲ್ ಬಂದಿದೆ. ಅವರು ಸ್ವಲ್ಪ ಅಭ್ಯಾಸ ಮಾಡಲಿ. ಆಮೇಲೆ ತೆಗೆದುಕೊಳ್ಳೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ ಗಮನ ಸೆಳೆಯುವ ಸೂಚನೆ ಬಂದಾಗ ಆ ಮಂತ್ರಿಗಳು ಇಲ್ಲ. ಶೂನ್ಯ ವೇಳೆಯಲ್ಲಿ ಮೀಸಲಾತಿ ಪ್ರಶ್ನೆ ಬಂದಾಗ ಮುಖ್ಯ ಮಂತ್ರಿಗಳು ಇಲ್ಲ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಇಲ್ಲ.

ಅಧ್ಯಕ್ಷರು: ನಿಯಮ 69ರ ಅಡಿಯಲ್ಲಿ ಇರುವ ವಿಷಯ ತೆಗೆದುಕೊಳ್ಳೋಣ. ತಮ್ಮ ವಿಷಯವನ್ನು ಆಮೇಲೆ ಖಂಡಿತ ತೆಗೆದುಕೊಳ್ಳೋಣ. ಅಪ್ಪಚ್ಚುರಂಜನ್, ಏನು ವಿಚಾರ?

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೇ, ನಾನು ಈ ಹಿಂದೆ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಆ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕಾಗಿತ್ತು ಕೊಟ್ಟಿಲ್ಲ.

ಅಧ್ಯಕ್ಷರು: ಸ್ವಲ್ಪ ಸಮಯ ಕೊಡಿ ನಂತರ ಸಂಸದೀಯ ವ್ಯವಹಾರಗಳ ಮಂತ್ರಿಗಳು ಬರುತ್ತಾರೆ. ಹೇಳಿಕೆ ಕೊಡಿಸುತ್ತೇನೆ. ಮಾನ್ಯ ಇಂಡಸ್ಟ್ರೀ ಮಂತ್ರಿಗಳು ವಿಧಾನ ಪರಿಷತ್ತಿನಲ್ಲಿ ಇದ್ದಾರೆ. ಅವರು ಬರಲಿ ಆಮೇಲೆ ತೆಗೆದುಕೊಳ್ಳೋಣ. ಈಗ ಮಾನ್ಯ ಯಡಿಯೂರಪ್ಪನವರು ಪ್ರಸ್ತಾಪ ಮಾಡಲಿ. ನಾವು ಒಂದು ಗಂಟೆಯಲ್ಲಿ ಚರ್ಚೆ ಮತ್ತು ಉತ್ತರ ಮುಗಿಸೋಣ.

5) ನಿಯಮ 69ರ ಮೇರೆಗೆ

ವಿಷಯ: ಅ) ರಾಜ್ಯದಲ್ಲಿ ಕಬ್ಬಿಗೆ ನ್ಯಾಯ ಬೆಲೆ ನಿಗದಿ.

+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಅಧ್ಯಕ್ಷರೇ ನಮ್ಮ ರಾಜ್ಯದಲ್ಲಿ ಇವತ್ತು ಸುಮಾರು ಒಂದು ಕೋಟಿ ಟನ್ ಕಬ್ಬನ್ನು ನಮ್ಮ ಸಕ್ಕರೆ ಕಾರ್ಖಾನೆಗಳಲ್ಲಿ ನಾವು ಅರಿಯುತ್ತಿದ್ದೇವೆ. ಈ ಕಾರ್ಖಾನೆಗಳಿಗೆ ಪೂರೈಸುವಂತಹ ಕಬ್ಬಿಗೆ ಯಾವ ದರವನ್ನು ನಿಗದಿ ಮಾಡಬೇಕು ಎನ್ನುವುದನ್ನು ಪ್ರತಿ ವರ್ಷ ನಮ್ಮ ರಾಜ್ಯ ಸರ್ಕಾರ ಮಾಡಿಕೊಂಡು ಬರುತ್ತಿದೆ. ಅಲ್ಲಿ ಕಾರ್ಖಾನೆ ಪ್ರತಿನಿಧಿಗಳು ಹಾಗೂ ಕಬ್ಬು ಬೆಳೆಗಾರರ ಪ್ರತಿನಿಧಿಗಳು, ಉನ್ನತ ಅಧಿಕಾರಿಗಳ ಸಭೆಯಲ್ಲಿ ಒಮ್ಮತದಿಂದ ಎಲ್ಲರೂ ಸೇರಿ ನಿಗಧಿಪಡಿಸಿದಂತಹ ಒಂದು ಬೆಲೆಯನ್ನು ಸಕ್ಕರೆ ಕಾರ್ಖಾನೆಗಳ ಮಾಲೀಕರು ಕಬ್ಬನ್ನು ಬೆಳೆದಂತಹ ರೈತರಿಗೆ ಬಹಳ ವರ್ಷಗಳಿಂದ ಕೊಡುತ್ತಾ ಬಂದಿದ್ದಾರೆ. ಮಾನ್ಯ ಅಧ್ಯಕ್ಷರೇ, ಇಲ್ಲಿ ಕಳೆದ ಡಿಸೆಂಬರ್ ತಿಂಗಳಲ್ಲಿ ಅಲಹಾಬಾದ್ ಹೈಕೋರ್ಟಿನಲ್ಲಿ ಉತ್ತರ ಪ್ರದೇಶದ ಸಕ್ಕರೆ ಕಾರ್ಖಾನೆಯ ಮಾಲೀಕರು ರಾಜ್ಯ ಸರ್ಕಾರ ಗೊತ್ತುಪಡಿಸಿದ ಬೆಂಬಲ ಬೆಲೆಯನ್ನು ಪ್ರಶ್ನಿಸಿದ ಕಾರಣ ಅಲಹಾಬಾದ್ ಹೈಕೋರ್ಟ್ ರಾಜ್ಯ ಸರ್ಕಾರ ಈ ಬೆಲೆಯನ್ನು ನಿಗದಿ ಮಾಡುವಂತಹ ಅಧಿಕಾರ ಇಲ್ಲ ಎಂದು ಒಂದು ತೀರ್ಪು ಕೊಟ್ಟಿದೆ. ಇದರ ಪ್ರೇರಣೆಯನ್ನು ನಮ್ಮ ರಾಜ್ಯದ ಸಕ್ಕರೆ ಕಾರ್ಖಾನೆಯ ಮಾಲೀಕರು ಪಡೆದು ನಮ್ಮ

ರಾಜ್ಯದ ಹೈಕೋರ್ಟಿನಲ್ಲಿ ಹೋಗಿ ಒಂದು ರಿಟ್ ಅರ್ಜಿಯನ್ನು ಸಲ್ಲಿಸಿ 1996-97ರ ಸಾಲಿನ ಸಲಹಾ ಬೆಲೆ ಏನು ನಿಗಧಿಪಡಿಸಿದ್ದಾರೆ ಅದನ್ನು ಜಾರಿ ಮಾಡುವುದನ್ನು ಪ್ರಶ್ನೆ ಮಾಡಿದ್ದಾರೆ. 1997-98ನೇ ಸಾಲಿನಲ್ಲಿ ರಾಜ್ಯ ಸಲಹಾ ಮಂಡಲಿ ಬೆಲೆ ನಿಗದಿ ಮಾಡುವ ಕೆಲಸವನ್ನು ತಡೆಹಿಡಿಯುವ ಒಂದು ಕೆಲಸ ಸಹ ಆಗಿದೆ. 1997-98ನೇ ಸಾಲಿನಲ್ಲಿ ಯಾವ ಬೆಲೆಯನ್ನು ನಿಗದಿ ಮಾಡಬೇಕು ಎನ್ನುವ ಬಗ್ಗೆ ಚರ್ಚೆ ಮಾಡಲು ಸರ್ಕಾರ ಒಂದು ಸಭೆಯನ್ನು ಕರೆದಿದ್ದರು. ಈ ಕಾರಣಕೋಸ್ಕರ ಅದನ್ನು ರದ್ದು ಮಾಡಿದರಿ. ಇವತ್ತು ಉದ್ದೇಶ ಬಹಳ ಸ್ಪಷ್ಟ ಇದೆ; ಕೇಂದ್ರ ಸರ್ಕಾರ ಸರಿಯಾದ ಬೆಲೆಯನ್ನು ನಿಗದಿ ಮಾಡುತ್ತಿಲ್ಲ. ಲೆವಿ ಸಕ್ಕರೆ ಬೆಲೆ ಹೆಚ್ಚಾಗುತ್ತದೆ. ಅದು ಒಂದೇ ಒಂದು ಕಾರಣಕೋಸ್ಕರ ಅವಾಸ್ತವಿಕವಾದಂತಹ ಬೆಲೆಯನ್ನು ನಿಗದಿ ಮಾಡಿ ರೈತ ಈಗಾಗಲೇ ಬೀದಿ ಪಾಲಾಗಿದ್ದಾನೆ. ಒಂದು ರೀತಿಯಲ್ಲಿ ಕಬ್ಬಿನ ಕಾರ್ಖಾನೆಗಳು ಬಾಗಿಲು ಹಾಕಿ ಕೂರುವಂತಹ ಸ್ಥಿತಿಗೆ ಬಂದಿವೆ, ರೈತರು ಕೂಡ ಕಬ್ಬು ಬೆಳೆಯುವುದು ಬೇಡ ಎನ್ನುವಂತಹ ಸ್ಥಿತಿಗೆ ಬಂದಿದ್ದಾರೆ. ಕೊನೆಯ ಪಕ್ಷ ನಮ್ಮ ಸರ್ಕಾರ ನಮ್ಮ ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳನ್ನು ನಡೆಸುತ್ತಿರುವಂತಹ ಕಾರ್ಖಾನೆಯ ಮಾಲೀಕರನ್ನು ಕರೆದು ಅವರ ಉದ್ದಿಮೆ ಉಳಿಯಬೇಕು ಕಬ್ಬನ್ನು ಬೆಳೆಯುವಂತಹ ರೈತರು ಉಳಿಯಬೇಕು ಎಂದು ಇದ್ದರೆ ಕೋರ್ಟಿನ ಆದೇಶ ಏನೇ ಇರಲಿ ನಾವು ಪರಸ್ಪರ ಆತ್ಮೀಯತೆಯಿಂದ ಮೊದಲಿನಿಂದಲೂ ಹೇಗೆ ನಡೆದುಕೊಂಡು ಬಂದಿದ್ದೇವೆ ಆ ರೀತಿ ನಾವು ಒಂದು ಬೆಲೆಯನ್ನು ನಿಗದಿ ಮಾಡಿ, ಕಾರ್ಖಾನೆಯನ್ನು ಉಳಿಸುವ ಮತ್ತು ಕಬ್ಬನ್ನು ಬೆಳೆಯುವ ರೈತರನ್ನು ಉಳಿಸುವ ಒಂದು ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ಮಾಡಬೇಕಾಗಿತ್ತು. ಕೋರ್ಟಿನಿಂದ ಏನೇ ಆದೇಶ ಬಂದರೂ ಸಹ 1997-98ನೇ ಸಾಲಿನ ಬೆಲೆಯನ್ನು ನಿಗದಿ ಮಾಡಲು ಏನು ಸಭೆ ಕರೆದಿದ್ದಿರಿ ಅದನ್ನು ಮುಂದೂಡುವಂತಹ ಪ್ರಶ್ನೆಯೇ ಇರಲಿಲ್ಲ. ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರ ಜೊತೆ ಮಾತನಾಡುವಂತಹ ಪ್ರಯತ್ನ ಆಗಬೇಕಾಗಿತ್ತು. ಸಂಪ್ರದಾಯದ ಪ್ರಕಾರ ರಾಜ್ಯ ಸಲಹಾ ಮಂಡಲಿ ನಿಗದಿ ಮಾಡಿದ ಬೆಲೆಯನ್ನು ಪರಿಗಣಿಸಿ ನ್ಯಾಯಾಲಯಕ್ಕೆ ನಾವು ಮನವರಿಕೆ ಮಾಡಿಕೊಡುವ ಪ್ರಯತ್ನವನ್ನು ಮಾಡಿದರೆ ನಾವು ಇದನ್ನು ಪ್ರಶ್ನೆ ಮಾಡುವುದಿಲ್ಲ ಎಂದು ಮಾಡಿದರೆ ಬಹುಶಃ ಈ ಸಮಸ್ಯೆಗೆ ಒಂದು ಪರಿಹಾರ ಸಿಗುತ್ತದೆ ಎಂಬುದು ನನ್ನ ಭಾವನೆ. ಮೊನ್ನೆ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಒಕ್ಕೂಟ ನಮ್ಮ ಬೆಂಗಳೂರಿನ ಸಂಸತ್ ಸದಸ್ಯರಾದ ಅನಂತಕುಮಾರ್ ಅವರ ಜೊತೆಗೆ ಅಲ್ಲಿ ಕೇಂದ್ರ ಸರ್ಕಾರದ ಆಹಾರ ಸಚಿವರನ್ನು ಮತ್ತು ಇನ್ನೂ ಹಲವು ಮಂತ್ರಿಗಳನ್ನು ಕಂಡು ಅವರ ಮನವೊಲಿಸುವಂತಹ ಪ್ರಯತ್ನವನ್ನು ಮಾಡಿದ್ದಾರೆ. ರಾಜ್ಯ ಸರ್ಕಾರಗಳು ರೈತರಿಗೆ ಯೋಗ್ಯ ಬೆಲೆ ದೊರೆಯುವಂತೆ ಒಂದು ಬೆಲೆಯನ್ನು ಗೊತ್ತು ಪಡಿಸುತ್ತಿದ್ದಾರೆ, ಅದನ್ನು ಕೊಡಿಸುವಂತಹ ವ್ಯವಸ್ಥೆಯನ್ನು ತಾವು ಮುಂದುವರಿಸಬೇಕು ಈ ವ್ಯವಸ್ಥೆಯನ್ನು ಕಾನೂನುಬದ್ಧಗೊಳಿಸಲು ಕಬ್ಬು ನಿಯಂತ್ರಣ ಆಜ್ಞೆಗೆ ಒಂದು ತಿದ್ದುಪಡಿ ಅವಶ್ಯಕ ಎನ್ನುವ ಒಂದು ಸಲಹೆಯನ್ನೂ ಸಹ ಅವರು ಕೊಟ್ಟಿದ್ದಾರೆ. ಆಗ ಸಂಬಂಧಪಟ್ಟ ಸಚಿವರು ನಿಮ್ಮ ನಿಮ್ಮ ರಾಜ್ಯಗಳಿಂದ ಈ ರೀತಿಯ

ಸಲಹೆಗಳನ್ನು ಕಳುಹಿಸಿಕೊಡುವುದಾದರೆ ಆ ರೀತಿಯಲ್ಲಿ ನಾವು ತಿದ್ದುಪಡಿಯನ್ನು ತರುವುದಕ್ಕೆ ಸಿದ್ಧರಿದ್ದೇವೆ ಎನ್ನುವ ಮಾತನ್ನು ಕಬ್ಬು ಬೆಳೆಗಾರರ ಒಕ್ಕೂಟಕ್ಕೆ ತಿಳಿಸಿದ್ದಾರೆ. ಜವಾಬ್ದಾರಿ ಇರುವಂತಹ ಯಾವುದೇ ಸಕ್ಕರೆ ಕಾರ್ಖಾನೆ ಮಾಲೀಕ ಇವತ್ತು ನಾವು ರಾಜ್ಯ ಸರ್ಕಾರ ನಿಗಧಿ ಮಾಡುವಂತಹ ಬೆಲೆ ದುಬಾರಿ ಇಲ್ಲ ಅತ್ಯಂತ ಕಡಿಮೆ ಆಗಿರುವಂಥಾದ್ದು, ಅದನ್ನೇ ಪ್ರಶ್ನೆ ಮಾಡುವಂತಹ ಪ್ರಯತ್ನವನ್ನು ಸಕ್ಕರೆ ಕಾರ್ಖಾನೆಯ ಮಾಲೀಕರು ಮಾಡಿದ್ದಾರೆ. ಇದರ ಪರಿಣಾಮ ಏನಾಗಬಹುದು ರೈತ ಕಬ್ಬನ್ನು ಬೆಳೆಯುವುದೇ ನಿಲ್ಲಿಸಬಹುದು. ಈ ಉದ್ದಿಮೆ ಬಂದ್ ಆಗಬಹುದು. ಇಂತಹ ಒಂದು ದಾರುಣ ಸ್ಥಿತಿ ಇರುವಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೆ ಇದನ್ನು ಕಾನೂನು ಬದ್ಧಗೊಳಿಸಲು ಕಬ್ಬು ನಿಯಂತ್ರಣ ಆಜ್ಞೆಗೆ ಒಂದು ತಿದ್ದುಪಡಿಯನ್ನು ಮಾಡುವುದು ಅವಶ್ಯಕ ಇದೆ ಎಂದು ನಾವು ಒಂದು ನಿರ್ಣಯವನ್ನು ಮಾಡಬೇಕು. ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಬೇಕು. ಎರಡನೆಯದು ತಕ್ಷಣ ಸಂಬಂಧಪಟ್ಟ ಸಕ್ಕರೆ ಕಾರ್ಖಾನೆಯ ಮಾಲೀಕರು ರೈತ ಮುಖಂಡರು, ಅಧಿಕಾರಿಗಳನ್ನು ಕರೆದು ಪ್ರತಿವರ್ಷ ಸರ್ಕಾರ ಯಾವ ರೀತಿ ಒಂದು ಬೆಲೆಯನ್ನು ನಿಗದಿ ಮಾಡುತ್ತಿತ್ತು, ಆ ಬೆಲೆಯನ್ನು ನಿಗದಿ ಮಾಡಬೇಕು. ಇಲ್ಲದಿದ್ದರೆ ಈಗಾಗಲೇ ಒಬ್ಬಿಬ್ಬರು ಹೈಕೋರ್ಟಿನಲ್ಲಿ ಪ್ರಶ್ನೆ ಮಾಡಿದ್ದಾರೆ. ಮುಂದೆ ಎಲ್ಲರೂ ಪ್ರಶ್ನೆ ಮಾಡಬಹುದು. ಈಗಾಗಲೇ ಸರ್ಕಾರಕ್ಕೆ ಗೊತ್ತಿರುವಂತೆ ರೈತರಿಗೆ ಸುಮಾರು 30-31 ಕೋಟಿ ರೂಪಾಯಿಗಳು ಬಾಕಿ ಬಂದಿಲ್ಲ, ರೈತ ಕೊಟ್ಟಂತಹ ಕಬ್ಬಿಗೆ. ಇನ್ನೊಂದು ಕಡೆ ಕಾರ್ಖಾನೆಗೆ ಅಗತ್ಯ ಇರುವಷ್ಟು ಕಬ್ಬು ಸಿಗದೇ ಇರುವಂತಹ ಪರಿಸ್ಥಿತಿ ಬಂದಿದೆ. ಈಗ ನಾವು ನಿಗದಿ ಮಾಡಿರುವ ಬೆಲೆಯನ್ನು ಕೊಡದೇ ಕೋರ್ಟಿಗೆ ಹೋಗಿ ರಕ್ಷಣೆ ತೆಗೆದುಕೊಳ್ಳುವುದಾದರೆ ಬಹುಶಃ ರಾಜ್ಯದಲ್ಲಿ ಅಶಾಂತಿ ವಾತಾವರಣ ಬರಬಹುದು ಈ ಕಾನೂನಿನ ಗೊಂದಲದಿಂದ.

(ಉಪಾಧ್ಯಕ್ಷರು (ಶ್ರೀ ಚಂದ್ರ ಶೇಖರ ಎಂ.ಮಾಮನಿರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ತಕ್ಷಣ ಕಾರ್ಖಾನೆಯ ಮಾಲೀಕರನ್ನು ಕರೆಯಿರಿ. ರೈತಮುಖಂಡರನ್ನು ಕರೆಯಿರಿ. ಅಧಿಕಾರಿಗಳ ಜೊತೆ ಪ್ರತಿ ವರ್ಷ ಬೆಲೆ ನಿಗಧಿ ಮಾಡಿದಂತೆ ಈ ವರ್ಷ ಸಹ ಕಬ್ಬಿನ ಬೆಲೆ ನಿಗಧಿ ಮಾಡಿ. ಅಲ್ಲಿ ಏನಾದರೂ ಅವರು ಅದು ಸಾಧ್ಯವಿಲ್ಲ ಎಂದು ಹೇಳಿದಾಗ ಮುಂದೆ ಏನು ಮಾಡಬೇಕು, ಕಾನೂನಿನ ಅಡಿಯಲ್ಲಿ ಅಶಾಂತಿ ವಾತಾವರಣ ಉಂಟಾಗುತ್ತದೆಯೋ ಏನಾಗುತ್ತದೆಯೋ ಅದನ್ನು ಆಮೇಲೆ ನೋಡೋಣ. ತಾವು ಸಭೆಯನ್ನು ಏನು ಮುಂದೂಡಿದ್ದೀರಿ ತಕ್ಷಣ ಸಭೆ ಕರೆದು ಬೆಲೆ ನಿಗಧಿ ಮಾಡಿ. ಮತ್ತು ಈಗ ಯಾರು ಹೈಕೋರ್ಟಿಗೆ ಹೋಗಿದ್ದಾರೆ, ಅವರು ತಕ್ಷಣ ಕೇಸನ್ನು ವಿತ್‌ಡ್ರಾ ಮಾಡಿಕೊಳ್ಳುವ ಒತ್ತಾಯ ತನ್ನಿ. ತಾವು ಉತ್ತರ ಕೊಟ್ಟ ನಂತರ ಇನ್ನು ಕೆಲವು ಮಾಹಿತಿ ಕೇಳುತ್ತೇನೆ.

+ ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಸನ್ಮಾನ್ಯ ಉಪಾಧ್ಯಕ್ಷರೆ, ರಾಜ್ಯ ಸರ್ಕಾರದ ಮುಂದೆ ಕಬ್ಬಿನ ವಿಷಯ ಹೇಗಾಗಿದೆ ಎಂದರೆ ರೈತರ ಪರವಾಗಿ ''ಹಾಡಿದ್ದೇ ಹಾಡೊ ಕಿಸಬಾಯಿ ದಾಸಾ'' ಎಂದು ಇವತ್ತು ಖಾಸಗಿ ಕಾರ್ಖಾನೆಯವರು ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತರುವವರೆಗೆ ರಾಜ್ಯ ಸರ್ಕಾರ ಏನು ಮಾಡುತ್ತಿತ್ತು? ರಾಜ್ಯದಲ್ಲಿ ಮೂರು ಭಾಗವಾಗಿ ಕಬ್ಬಿನ ಬೆಲೆಯನ್ನು ನಿಗಧಿ ಪಡಿಸಿದಿರಿ, ರೈತರನ್ನು ಕರೆದು ಚರ್ಚೆ ಮಾಡಬೇಕು. ಜೂನ್ ಜುಲೈನಲ್ಲಿ ಮೈಸೂರು, ಮಂಡ್ಯ ಕಾರ್ಖಾನೆಗಳವರನ್ನು ಕರೆಯಿಸಿ ಬೆಲೆ ಬಗ್ಗೆ ಚರ್ಚೆ ಮಾಡಬೇಕಾಗಿತ್ತು. ಅಕ್ಟೋಬರ್, ನವಂಬರ್, ಡಿಸೆಂಬರ್‌ನಲ್ಲಿ ಕೆಲವು ಕಾರ್ಖಾನೆಗಳು. ಫೆಬ್ರವರಿ, ಮಾರ್ಚ್ ಇನ್ನು ಕೆಲವು ಕಾರ್ಖಾನೆಗಳು. ಆದರೆ ಸರ್ಕಾರ ಹೈಕೋರ್ಟಿನಿಂದ ತಡೆಯಾಜ್ಞೆ ತರುವವರೆಗೂ ಕೂಡ ಸುಮ್ಮನೆ ಏಕೆ ಇದ್ದರು ಗೊತ್ತಿಲ್ಲ. ಅವರು ತಡೆಯಾಜ್ಞೆ ಯಾವತ್ತು ತರುತ್ತಾರೆ ಅವತ್ತೇ ನೀವು ಕರೆಕ್ಟಾಗಿ ಮೀಟಿಂಗ್ ಕರೆದಿದ್ದೀರಿ. ನನಗೆ ಅನಿಸುತ್ತದೆ ಅವರು ತಡೆಯಾಜ್ಞೆ ತಂದು ಬಿಟ್ಟರೆ ನಮ್ಮ ತಲೆನೋವು ಕಡಿಮೆಯಾಗುತ್ತದೆ. ಯಾವ ವ್ಯವಹಾರವು ಬೇಡ ಅವರು ತಡೆಯಾಜ್ಞೆ ತಂದು ಅವರ ಪಾಡಿಗೆ ಅವರು ಇರಲಿ ಎಂದು ರಾಜ್ಯ ಸರ್ಕಾರ ಯೋಚನೆ ಮಾಡಿದೆಯೇ? ಸರ್ಕಾರ ಒಂದು ಸುತ್ತೋಲೆ ಹೊರಡಿಸಿ ಆಯಾಯಾ ಭಾಗದ ರೈತರು, ಆಯಾಯಾ ಭಾಗದ ಶಾಸಕರು, ಆಯಾಯಾ ಭಾಗದ ಕಬ್ಬು ಬೆಳೆಗಾರರನ್ನು ಕರೆಯಿಸಿ ಬೆಲೆಯನ್ನು ನಿಗಧಿ ಮಾಡತಕ್ಕಂಥ ಒಂದು ನಿಯಮಾವಳಿ ಬಗ್ಗೆ ಒಂದು ಸರ್ಕ್ಯೂಲರ್ ಕಳುಹಿಸಿದ್ದು ರಾಜ್ಯ ಸರ್ಕಾರ. ಉದಾಹರಣೆಗೆ ಮಂಡ್ಯ ಜಿಲ್ಲೆಯಲ್ಲಿ 750 ರೂಪಾಯಿಗಳನ್ನು ಫಿಕ್ಸ್ ಮಾಡಿದ್ದಾರೆ. ಅಲ್ಲಿಯ ಮ್ಯಾನೇಜಿಂಗ್ ಡೈರೆಕ್ಟರ್ ಯಾವುದೇ ಮಂಡ್ಯ ಜಿಲ್ಲೆಯ ಶಾಸಕರಾಗಬಹುದು, ಯಾವುದೇ ಕಬ್ಬು ಬೆಳೆಗಾರರನ್ನು ಕರೆಯದೆ, ಯಾವ ವೈಜ್ಞಾನಿಕ ಅಳತೆಗೋಲಿನ ಮೇಲೆ, ಯಾವ ಕಬ್ಬಿನ ವಿಚಾರದ ಆಧಾರದ ಮೇಲೆ ಕಾರ್ಖಾನೆಯ ಆದಾಯ, ನಷ್ಟದ ಆಧಾರದ ಮೇಲೆ 750 ರೂಪಾಯಿಗಳ ಬೆಲೆಯನ್ನು ನಿಗದಿ ಮಾಡಿದ್ದಾರೆ ಎಂಬುದು ಗೊತ್ತು. ಅಂದರೆ ನಾನು ಕೇಳುವುದು, ಒಂದು ಸರ್ಕಾರದ ಸುತ್ತೋಲೆ ಅದಕ್ಕೆ ಎಷ್ಟು ಗೌರವ ಇರಬೇಕು ಎಷ್ಟು ಜವಾಬ್ದಾರಿ ಇರಬೇಕು, ಎಷ್ಟು ಹೊಣೆಗಾರಿಕೆ ಇರಬೇಕು ಅದನ್ನು ಟಾಯಿಲೆಟ್‌ಗೆ ಉಪಯೋಗ ಮಾಡುವ ಪೇಪರ್ ಎಂದು ತಿಳಿದುಕೊಂಡಿದ್ದಾರಾ? ಸರ್ಕಾರದ ಸುತ್ತೋಲೆ ಅಂದರೆ ಏನು? ತಾವು ಮಂತ್ರಿಗಳು ಕೇಳಬೇಕು ತಮ್ಮಿಂದ ಒಂದು ಸುತ್ತೋಲೆ ಹೋದರೆ, ಆ ಸಂಬಂಧಪಟ್ಟ ಸಿ.ಎಂ.ಡಿ. ಜವಾಬ್ದಾರಿಯಿಂದ ಕೆಲಸ ಮಾಡದೇ ಹೋದರೆ, ಏನು ಕ್ರಮ ತೆಗೆದುಕೊಳ್ಳುತ್ತೀರಿ? ಕಾರ್ಖಾನೆ ಶುರು ಮಾಡುವುದಕ್ಕಿಂತ ಮುಂಚೆ ರೈತರ ಬಾಕಿ ಕೊಡಬೇಕು. ಕಾಳಮುದ್ದನದೊಡ್ಡಿ ಮುಂದಿನ ತಿಂಗಳು ಶುರು ಮಾಡುತ್ತಾರೆ. 1995-96ನೇ ಸಾಲಿನಲ್ಲಿ ಉಳಿಸಿಕೊಂಡಿರುವ ಬಾಕಿ ಒಂದು ಟನ್‌ಗೆ 110 ರೂಪಾಯಿ. 1996-97ನೇ ಸಾಲಿಗೆ ಸರಬರಾಜು ಮಾಡಿರುವ ಕಬ್ಬಿನ ಬಾಕಿ ಸುಮಾರು 80 ರೂಪಾಯಿ. ಅಂದರೆ ಒಟ್ಟು 8 ಕೋಟಿ ರೂಪಾಯಿ, ತಾವು ಏನು ಹೇಳುತ್ತೀರಿ ಕೋರ್ಟಿನಿಂದ ಆದೇಶ ತಂದಿರುವುದರಿಂದ, ಖಾಸಗಿ

ಕಾರ್ಖಾನೆಯವರನ್ನು ಕರೆದು ಮಾತನಾಡುವ ಹಕ್ಕಿಲ್ಲವೆಂದು ತಾವು ಏನು ಹೇಳುತ್ತೀರಿ, ತಮ್ಮನ್ನು ಒಂದು ಪ್ರಶ್ನೆ ನಾನು ಕೇಳುವುದು ತಾವು ರೈತರಿಗೆ ಕೊಡಬೇಕಾದ ಕಬ್ಬಿನ ಬಾಕಿಯ ಬಗ್ಗೆ ಶುಗರ್‌ಕೇನ್ ಕಂಟ್ರೋಲ್ ಆರ್ಡರ್ ಆಧಾರದ ಮೇಲೆ ಬಡ್ಡಿ ಸೇರಿಸಿ ಕೊಡುತ್ತೀರಾ ಎಂಬುದನ್ನು ಹೇಳಬೇಕು. ಅವರು ಹೇಗೆ ಕೋರ್ಟಿಗೆ ಹೋದರು ಒಂದು ಸರ್ಕಾರದ ವಿರುದ್ಧ? ಆದ್ದರಿಂದ ನೀವು ಅಷ್ಟೇ ಜವಾಬ್ದಾರಿಯಿಂದ ರೈತರಿಗೆ ಕೊಡಬೇಕಾದ ಬಾಕಿ ಬಡ್ಡಿ ಸೇರಿಸಿ ಕೊಡಿಸತಕ್ಕಂಥ ಕೆಲಸವನ್ನು ತಾವು ದಯವಿಟ್ಟು ಮಾಡಿಸಬೇಕು. ಇನ್ನೊಂದು ತಾವು ಉತ್ತರ ಕೊಟ್ಟಿದ್ದೀರಿ ಆಗಲೆ, (Transportation) ಟ್ರಾನ್ಸ್‌ಪೋರ್ಟೇಷನ್ ಸಬ್ಸಿಡಿಯಾಗಿ ನಾವು ಹಣಕೊಡುತ್ತೇವೆಂದು ದಯವಿಟ್ಟು ಇದರ ಬಗ್ಗೆ ತೀರ್ಮಾನ ಮಾಡಬೇಕು. ನಾವು ಆಗಲೇ ತಮ್ಮನ್ನು ಕೇಳಿಕೊಂಡಿದ್ದೇವೆ. ಖಾಸಗಿಯ 9 ಕಾರ್ಖಾನೆಯವರು ಈ ರಾಜ್ಯದಲ್ಲಿ ಹೈಕೋರ್ಟಿಗೆ ಹೋಗಿದ್ದಾರೆ. ಅದರಲ್ಲಿ 17 ಸಹಕಾರಿ ಕ್ಷೇತ್ರ, ಎರಡು ಸರ್ಕಾರಿ ಕ್ಷೇತ್ರ, ಎರಡು ಜಂಟಿ ಕ್ಷೇತ್ರಗಳ ಕಾರ್ಖಾನೆಗಳವರು ಇದ್ದಾರೆ, ಅವರನ್ನಾದರೂ ಕರೆದು ಮಾತನಾಡಬೇಕು. ಅದಕ್ಕೇನು ರಿಸ್ಟ್ರಿಕ್ಷನ್ ಇದೆ, ನನಗೆ ಗೊತ್ತಿಲ್ಲ ಕೋರ್ಟಿನ ಆದೇಶ ಏನು ಎಂಬುದು ಗೊತ್ತಿಲ್ಲ. ಆಮೇಲೆ ಬಾಕಿ ವಸೂಲಿ ಮಾಡುವುದಕ್ಕೂ ಕೋರ್ಟಿನ ಆದೇಶ ಏನಾದರೂ ಇದೆಯೇ ಎಂಬುದನ್ನು ತಾವು ಹೇಳಬೇಕು. ಕೇಂದ್ರ ಸರ್ಕಾರ ಎಲ್ಲವನ್ನೂ ಮಾಡುವುದು ಇದ್ದರೆ, 30 ಕಾರ್ಖಾನೆಗಳನ್ನು ನಮ್ಮ ರಾಜ್ಯದಲ್ಲಿ ಹಾಕಿ, ರಾಜ್ಯ ಸರ್ಕಾರದ ನಿಯಂತ್ರಣವೇ ಇಲ್ಲ. ಕಬ್ಬಿನ ವಿಷಯ ಚರ್ಚೆ ಮಾಡುವುದಿಲ್ಲವೆಂದು ಹೇಳಿ ಕೋರ್ಟ್ ಆದೇಶ ಕೊಡುವುದಿದ್ದರೆ ಆ ಆದೇಶದ ವಿರುದ್ಧ ತಾವು ಏನು ಮಾಡುತ್ತಿದ್ದೀರಿ? ಆ ಆದೇಶದ ವಿರುದ್ಧ ತಾವೇಕೆ ಸುಪ್ರೀಮ್ ಕೋರ್ಟಿಗೆ ಹೋಗಲಿಲ್ಲ ದಯವಿಟ್ಟು ಹೇಳಬೇಕು. ತಾವು ಇದಕ್ಕೆ ಸಂಬಂಧಪಟ್ಟ ಮಂತ್ರಿಗಳಾಗಿದ್ದೀರಿ, ಪ್ರತಿವರ್ಷ ನಿಯಮಾವಳಿ ಪ್ರಕಾರ ಕರೆದು ಬೆಲೆ ನಿಗದಿ ಮಾಡತಕ್ಕಂಥ ವಿಚಾರವನ್ನು ಸರ್ಕಾರದ ಸಕ್ಕರೆ ಮಂತ್ರಿಗಳು ಅತ್ಯಂತ ಜವಾಬ್ದಾರಿಯಿಂದ ನಿರ್ವಹಣೆ ಮಾಡುವುದರಲ್ಲಿ ಫೈಲ್ಯೂರ್ ಆಗಿದ್ದಾರೆ. ಆದ್ದರಿಂದ ಈ ಆಜ್ಞೆಯನ್ನು ತಂದು ನಮಗೆ ತೊಂದರೆ ಕೊಡುವುದಕ್ಕೆ ಇವರೇ ಹೊಣಗಾರರು. ಆದ್ದರಿಂದ ಅತ್ಯಂತ ಜವಾಬ್ದಾರಿಯಿಂದ ನಡೆದುಕೊಳ್ಳಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎಸ್.ಎ.ರವೀಂದ್ರನಾಥ್ (ಮಾಯಕೊಂಡ): ಸನ್ಮಾನ್ಯ ಉಪಾಧ್ಯಕ್ಷರೆ, ಪ್ರತಿವರ್ಷಕ್ಕಿಂತ ಈ ವರ್ಷ ಅರ್ಧದಷ್ಟು ಸಹ ಕಬ್ಬಿನ ಬೆಳೆ ಇಲ್ಲ. ಇದಕ್ಕೆ ಮುಖ್ಯವಾಗಿ ಸರ್ಕಾರದ ಧೋರಣೆ ಎಂಬುದು ನನ್ನ ಭಾವನೆ. ಪ್ರತಿವರ್ಷ ಹಿಂದೆ ಎಲ್ಲಾ ರೈತರಿಗೆ ಸಭೆ ಕರೆದು ಫ್ಯಾಕ್ಟರಿ ಮಾಲೀಕರ ಜೊತೆ ಈ ವರ್ಷದ ಇಳುವರಿಯ ಮೇಲೆ ಧಾರಣೆ ಕೊಡುತ್ತೇವೆಂದು ಹೇಳುತ್ತಿದ್ದರು. ಹಿಂದಿನ ವರ್ಷದಿಂದ ಈ ಯಾವ ಕೆಲಸವನ್ನೂ ಮಾಡಿಲ್ಲ. ಹಿಂದಿನ ವರ್ಷ ಮುಖ್ಯಮಂತ್ರಿಗಳು ಒಂದು ಸಭೆಯನ್ನು ಕರೆದು ವಿಡಿಯೋ

ತೆಗೆಸಿದರು, ನಮಗೆಲ್ಲಾ ತಿಂಡಿ ತಿನ್ನಿಸಿ ಕಳುಹಿಸಿದರೇ ವಿನಃ ಅಲ್ಲಿಂದ ಇಲ್ಲಿಯವರೆಗೆ ಯಾವ ಸಭೆಯನ್ನೂ ಕರೆಯಲಿಲ್ಲ. ಇವತ್ತೂ ಸಹ ಸರ್ಕಾರ ಯಾವುದೋ ಖಾಸಗಿ ಮಾಲೀಕರ ಏನೋ ಒಂದು ಸ್ಟೇ ಕೋರ್ಟಿನಿಂದ ಮಾಡಿಸಿರುವ ಒಂದು ನೆವದಿಂದ ಇವತ್ತಿನವರೆಗೂ ರೈತರ ಬಗ್ಗೆ ಯಾವುದೇ ರೀತಿಯ ಇಂತಹ ಒಂದು ಧಾರಣೆ ಕೊಡಬೇಕು ಇಷ್ಟಕ್ಕೆ ಕಡಿಮೆ ಇಲ್ಲದಂತೆ ಮುಖ್ಯವಾಗಿ ಕೊಡಬೇಕಾದದ್ದನ್ನು ಮಾಡಲಿಲ್ಲ. ಇವತ್ತು ಏನು ಇವರು ಮಾಡತಕ್ಕಂಥ ದೃಷ್ಟಿಯಿಂದ ಅದರ ಹಿಂದಿನ ವರ್ಷ ಲಕ್ಷ ಟನ್ ಕಬ್ಬಿನ ಮೇಲೆ ಹಾಕತಕ್ಕದ್ದನ್ನು ನೂರು ಲಕ್ಷ ಟನ್ ಮೇಲೆ ಹಾಕತಕ್ಕದ್ದನ್ನು ಈ ವರ್ಷ 57-60ಲಕ್ಷ ಟನ್ ಮಾತ್ರ ಕಬ್ಬು ಇರತಕ್ಕಂಥದ್ದು. ಮುಂದೆ ಸಹ ಸಾಕಷ್ಟು ಸಕ್ಕರೆ ಕೊರತೆಯಾಗಿ ನಮ್ಮ ಜನಗಳಿಗೆ ಕಬ್ಬನ್ನು ಜಾಸ್ತಿ ಹಾಕಬೇಕು, ಕಬ್ಬನ್ನೂ ಜಾಸ್ತಿ ಬೆಳೆಯಬೇಕೆಂದರೆ ಇವತ್ತಿನ ಪರಿಸ್ಥಿತಿಯಲ್ಲಿ ಹೆಚ್ಚಿನ ಧಾರಣೆಯ ಕೊಡುವುದರ ಜೊತೆಗೆ ರೈತರ ಸಮಾಲೋಚನೆ ಅವರ ಕಷ್ಟ ಸುಖಗಳನ್ನು ಕೇಳಿದರೆ, ಇದನ್ನು ಬಗೆಹರಿಸತಕ್ಕಂಥದ್ದು ಆಗುತ್ತದೆ. ಸಾಧ್ಯವಾದಷ್ಟು ಜಾಗ್ರತೆಯಿಂದ ಮಂತ್ರಿಗಳು ಮತ್ತು ಸರ್ಕಾರ ಮಾಡಬೇಕೆಂದು ನಾನು ಕೇಳುತ್ತೇನೆ. ಇವತ್ತು ನಮ್ಮ ಬಳ್ಳಾರಿ ಭಾಗದಲ್ಲಿರುವ ಜಾಲಿ ಕಟ್ಟಿಗೆ ಕೂಡ ಇವತ್ತು 1000 ರೂ.ಯಿಂದ 1200 ರೂ.ಗಳವರೆಗೆ ಒಂದು ಟನ್ ಇದೆ. ನಾವು ಇವತ್ತು ಬೆಳೆದಿರುವಂಥ ಕಬ್ಬಿಗೆ ಸಾಕಷ್ಟು ಗೊಬ್ಬರ 12 ರಿಂದ 15 ತಿಂಗಳು ನೀರನ್ನು ಹಾಯಿಸಿ ಅದರ ಬೆಲೆ 450 ರೂಪಾಯಿಗಳನ್ನು ಕೊಡಬೇಕೆಂದು ಕೋರ್ಟ್ ಆದೇಶ ಮಾಡಿದೆ. ಅದರ ಬಗ್ಗೆ ವೆಕೇಟ್ ಆದಷ್ಟು ಬೇಗ ಮಾಡಿಸಿ ನಮ್ಮ ರೈತರಿಗೆ ಅನುಕೂಲವಾದ ರೇಟನ್ನೂ ಕೊಡತಕ್ಕಂಥ, ಈ ರಾಜ್ಯದ ರೈತರ ಹಿತ ಕಾಪಾಡಬೇಕೆಂದು ತಮ್ಮ ಮೂಲಕ ಹೇಳುತ್ತಾ ಹೆಚ್ಚಿನ ಬೆಲೆ ಸರ್ಕಾರ ಕೊಡಲಿ ಎಂದು ಕೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಜೆ.ಶಂಕರೇಗೌಡ (ಹೊಸಪೇಟೆ): ಸನ್ಮಾನ್ಯ ಉಪಾಧ್ಯಕ್ಷರೆ, ಈ ಕಬ್ಬು ವಾಣಿಜ್ಯ ಬೆಳೆಯಾಗಿದ್ದು, ಇದರಿಂದ ಸರ್ಕಾರಕ್ಕೆ ಸಾಕಷ್ಟು ಆದಾಯ ಇರುವುದರಿಂದ ಈ ಒಂದು ಕಬ್ಬಿನ ಬೆಲೆ ನಿಗದಿಯನ್ನು ಈ ಕೇಂದ್ರ ಸರ್ಕಾರ ಏನು ನಿಗದಿಪಡಿಸುತ್ತದೆ, ಆ ಒಂದು ಕೇಂದ್ರ ಸರ್ಕಾರ ನಿಗದಿ ಪಡಿಸಿರತಕ್ಕಂಥ ಬೆಲೆ ಅವೈಜ್ಞಾನಿಕ ಎಂದು ನಾನು ತಮ್ಮ ಮುಂದೆ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಏತಕ್ಕೆಂದರೆ ಈಗ ಕಬ್ಬು ಬೆಳೆಯಲಿಕ್ಕೆ ಎಷ್ಟು ಖರ್ಚು ಬರುತ್ತದೆ ಎನ್ನತಕ್ಕಂಥ ವಿಚಾರ ಆ ಸಂಬಂಧಪಟ್ಟ ಇಲಾಖೆಯವರಿಗೆ ಗೊತ್ತಿರುತ್ತದೆ. ಆ ಇಲಾಖೆಯಿಂದ ಮಾಹಿತಿ ಪಡೆದು ಒಂದು ಎಕರೆಗೆ ಕಬ್ಬು ಬೆಳೆಯುವುದಕ್ಕೆ ಅವನಿಗೆ ಅದರ ಮೇಲೆ ಎಲ್ಲಾ ಖರ್ಚನ್ನು ತೆಗೆದು ಏನು ಉಳಿಯಬೇಕು ಆ ರೈತ ಜೀವನ ಮಾಡುವುದಕ್ಕೆ ಕೇಂದ್ರ ಸರ್ಕಾರದವರು ಯೋಚನೆ ಮಾಡಿ ಸರಿಯಾದ ಬೆಲೆಯನ್ನು ನಿಗದಿ ಪಡಿಸತಕ್ಕಂಥ ಒಂದು ವಿಚಾರ ಬರಬೇಕಾಗಿತ್ತು. ಆದರೆ ಕೇಂದ್ರ ಸರ್ಕಾರದವರು ಪ್ರತಿವರ್ಷ ಏನು ಕೇಂದ್ರ ಸರ್ಕಾರ ಸಲಹಾ ಬೆಲೆ ನಿರ್ಧಾರ ಮಾಡುತ್ತಾರೆ ಆ ಒಂದು ಬೆಲೆಗೆ ಯಾವ ಒಬ್ಬ ರೈತನು ಕಬ್ಬು ಬೆಳೆದು ಕೊಡಲಿಕ್ಕೆ ಸಾಧ್ಯವಿಲ್ಲದ ಧಾರಣೆ ಪ್ರತಿವರ್ಷ ಅವರು ಪ್ರಚುರ ಪಡಿಸುತ್ತಿದ್ದಾರೆ. ಇದರ ಮೇಲೆ

ಅಷ್ಟಷ್ಟು ನಮ್ಮ ರಾಜ್ಯ ಸರ್ಕಾರವನ್ನು ನಾವು ಇವತ್ತು ಮನಸಾರೆ ಹೊಗಳಬೇಕಾಗುತ್ತದೆ. ಏತಕ್ಕೆಂದರೆ ಆ ಒಂದು ಕೇಂದ್ರ ಸಲಹಾ ಬೆಲೆ ಮೇಲೆ ರಾಜ್ಯ ಸರ್ಕಾರ ಸಲಹಾ ಬೆಲೆ ನಿಗದಿ ಪಡಿಸಿರುವುದರಿಂದ ರೈತ ಹೆಚ್ಚಿನ ಲಾಭ ಇಲ್ಲದಿದ್ದರು, ನಷ್ಟಕ್ಕೆ ಗುರಿಯಾಗದಂತೆ ಧಾರಣೆಯನ್ನು ಕಬ್ಬಿಗೆ ಪಡೆದು ನಾವು ಕಬ್ಬನ್ನು ಸರಬರಾಜು ಮಾಡತಕ್ಕಂಥ ಒಂದು ರಾಜ್ಯ ಸಲಹಾ ಬೆಲೆ ಮಾಡುತ್ತಿದ್ದರು, ಅದಕ್ಕೆ ಸಹಿತವಾಗಿ ಈ ವರ್ಷದ ಏಪ್ರಿಲ್ ತಿಂಗಳಲ್ಲಿ ಅಲಹಾಬಾದ್ ಹೈಕೋರ್ಟ್‌ನಲ್ಲಿ ಉತ್ತರ ಹಿಂದುಸ್ಥಾನದ ಮಾಲೀಕರೆಲ್ಲರೂ ಭಿನ್ನವಿಸಿಕೊಂಡು ಕೇಂದ್ರ ಸಲಹಾ ಬೆಲೆ ನಿಗದಿ ಮತ್ತು ಕಾಯಿದೆ ಕಾನೂನು ಪ್ರಕಾರ ರಾಜ್ಯ ಸರ್ಕಾರಕ್ಕೆ ಕಬ್ಬು ಬೆಲೆ ನಿಗದಿ ಮಾಡಲಿಕ್ಕೆ ಅವರಿಗೆ ಅಧಿಕಾರವಿಲ್ಲವೆಂದು ಹೋಗಿದ್ದರಿಂದ ಸ್ಟೇ ಸಿಕ್ಕಿತು. ಅದೇ ಒಂದು ದಾರಿ ಹಿಡಿದು ನಮ್ಮ ಕರ್ನಾಟಕ ರಾಜ್ಯದ ಕಾರ್ಖಾನೆಗಳ ಮಾಲಿಕರು ಸಹಿತ ಎಲ್ಲರೂ ಸೇರಿ ಮೊನ್ನೆ ಈ ಕರ್ನಾಟಕ ರಾಜ್ಯದ ಉಚ್ಚನ್ಯಾಯಾಲಯದಲ್ಲಿ ಅವರು ಇದೇ ಒಂದು ಸೇಮ್‌ಗ್ರೌಂಡ್ಸ್ ಮೇಲೆ ಸ್ಟೇ ತೆಗೆದುಕೊಂಡು ಏನು ನಮ್ಮ ರಾಜ್ಯ ಸರ್ಕಾರದವರು ಕಬ್ಬಿನ ಬೆಲೆಯನ್ನು ನಿಗದಿ ಮಾಡಲಿಕ್ಕೆ ಕರೆದಂತ ಒಂದು ಸಭೆಯನ್ನು ರದ್ದುಗೊಳಿಸಿದ್ದಾರೆ. ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಕೆಲವು ಕಾರ್ಖಾನೆಗಳು ಜೂನ್ ತಿಂಗಳಲ್ಲಿ ಆಗಲೇ ಕೆಲಸವನ್ನು ಪ್ರಾರಂಭ ಮಾಡಿವೆ.

12. 10 ಪಿ.ಎಂ

ಕರ್ನಾಟಕ ರಾಜ್ಯದಲ್ಲಿ, ಸಾಕಷ್ಟು ಸಕ್ಕರೆ ಕಾರ್ಖಾನೆಗಳು ಜೂನ್, ಜುಲೈ ತಿಂಗಳಿನಲ್ಲೇ ಕೆಲಸವನ್ನು ಪ್ರಾರಂಭ ಮಾಡಿವೆ. ಅಕ್ಟೋಬರ್ ಮತ್ತು ನವೆಂಬರ್ ತಿಂಗಳಿನಲ್ಲೂ ಕೆಲವು ಸಕ್ಕರೆ ಕಾರ್ಖಾನೆಗಳು ಕೆಲಸವನ್ನು ಪ್ರಾರಂಭ ಮಾಡುತ್ತವೆ. ಕಬ್ಬಿಗೆ ಸರಿಯಾದ ಬೆಲೆ ಸಿಗದೇ ಇರುವುದರಿಂದ ರೈತರುಗಳು ಬಹಳ ಕಳವಳಕಾರಿಯಾಗಿದ್ದಾರೆ. 1993-94ರಲ್ಲಿ ಹೆಚ್ಚಿನ ಸಂಖ್ಯೆಯ ರೈತರುಗಳು ಕಬ್ಬನ್ನು ಬೆಳೆಯುತ್ತಿದ್ದರು. ಕಬ್ಬಿಗೆ ಸರಿಯಾದ ಬೆಲೆ ಕೊಡದೆ ರೈತರುಗಳನ್ನು ಸಕ್ಕರೆ ಕಾರ್ಖಾನೆಯವರು ಶೋಷಣೆ ಮಾಡುತ್ತಿರುವುದರಿಂದ ಕಬ್ಬು ಬೆಳೆಯುವುದನ್ನು ರೈತರು ಕಡಿಮೆ ಮಾಡಿದ್ದಾರೆ. 1997-98ರಲ್ಲಿ ಕೇವಲ 60ರಿಂದ 70 ಲಕ್ಷ ಟನ್ ಮಾತ್ರ ಕಬ್ಬು ಬೆಳೆಯಲಾಗಿದೆ ಎಂಬ ಬಗ್ಗೆ ಮಾಹಿತಿ ದೊರಕಿದೆ. ಕಬ್ಬಿನ ಬೆಲೆ ನಿಗದಿ ಮಾಡಿರುವ ವಿರುದ್ಧವಾಗಿ ಸಕ್ಕರೆ ಕಾರ್ಖಾನೆಗಳ ಮಾಲೀಕರುಗಳು ಹೈಕೋರ್ಟ್‌ನಿಂದ ಸ್ಟೇ ತಂದಿದ್ದಾರೆ. ಈ ಸ್ಟೇ ವೆಕೇಟ್ ಮಾಡಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆ ಸರ್ಕಾರ ಗಮನ ಹರಿಸಬೇಕೆಂದು ನಾನು ಆಗ್ರಹಪಡಿಸುತ್ತೇನೆ. ಅದೂ ಅಲ್ಲದೆ, ಈ ಹಿಂದೆ ಸಪ್ಲೈ ಮಾಡಿದಂಥ ಕಬ್ಬಿಗೆ, ರಾಜ್ಯ ಸರ್ಕಾರ ನಿಗಧಿಪಡಿಸಿರುವಂಥ ಸಲಹಾ ಬೆಲೆಯನ್ನು ಯಾವ ಸಕ್ಕರೆ ಕಾರ್ಖಾನೆಯವರೂ ರೈತರುಗಳಿಗೆ ಪೂರ್ಣ ಕೊಟ್ಟಿಲ್ಲ. ಹೊಸಪೇಟೆ ಸಕ್ಕರೆ ಕಾರ್ಖಾನೆಯವರು ಪ್ರತಿ ಟನ್‌ಗೆ 100 ರೂಪಾಯಿಗಳನ್ನು ಇನ್ನೂ ಕೊಡಬೇಕಾಗಿದೆ. ಆದರೆ, ಅವರು ಆಗಿಷ್ಟು ಈಗಿಷ್ಟು ಕೊಡುತ್ತಿದ್ದಾರೆ. ಈ ರೀತಿ ಮಾಡುವುದರಿಂದ, ಸಹಕಾರ ಸಂಘಗಳಿಂದ ಸಾಲ

ತೆಗೆದುಕೊಂಡು ಕಬ್ಬು ಬೆಳೆದ ರೈತನು ಸಕಾಲದಲ್ಲಿ ಸಾಲವನ್ನು ಮರುಪಾವತಿ ಮಾಡುವುದಕ್ಕೆ ಸಾಧ್ಯವಿಲ್ಲದೆ ಡಿಫಾಲ್ಟರ್ ಆಗುತ್ತಾನೆ. ಮಾರ್ಚ್ 31 ರೊಳಗೆ ಸಾಲ ತೀರಿಸುವ ರೈತರುಗಳಿಗೆ 5 ಪರ್ ಸೆಂಟ್ ಬಡ್ಡಿ ಮನ್ನಾ ಮಾಡಲಾಗುತ್ತದೆಂದು ಸರ್ಕಾರ ಮಾಡಿರುವ ಸವಲತ್ತಿನಿಂದಲೂ ಇಂಥಾ ರೈತರುಗಳು ವಂಚಿತರಾಗುತ್ತಾರೆ. ಆದುದರಿಂದ ಆದಷ್ಟು ಬೇಗ ಸಕ್ಕರೆ ಕಾರ್ಖಾನೆಯ ಮಾಲೀಕರುಗಳನ್ನು, ಆಯಾ ಭಾಗದ ಶಾಸಕರುಗಳನ್ನು ಹಾಗೂ ರೈತ ಮುಖಂಡರುಗಳನ್ನು ಕರೆಸಿ ಅನೌಪಚಾರಿಕ ಸಭೆಯನ್ನು ನಡೆಸಿ ಕಬ್ಬಿನ ಬೆಲೆಯನ್ನು ನಿಗದಿ ಮಾಡಿ ಸಕ್ಕರೆ ಕಾರ್ಖಾನೆಗಳು ನಡೆಯುವ ಹಾಗೆ ಮಾಡಬೇಕೆಂದು ತಮ್ಮ ಮೂಲಕ ಈ ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

+ ಶ್ರೀ ಉಮೇಶ್ ವಿ.ಕತ್ತಿ (ಸಕ್ಕರೆ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಕಬ್ಬಿನ ಬೆಲೆ ವಿಷಯವಾಗಿ ಮಾನ್ಯ ಹಿರಿಯ ಸದಸ್ಯರುಗಳು ಮಾತನಾಡಿದ್ದಾರೆ. ಕಬ್ಬಿಗೆ ರಾಜ್ಯ ಸಲಹಾ ಬೆಲೆ ನಿಗದಿ ಮಾಡುವ ಪದ್ಧತಿ ಮೊದಲನಿಂದಲೂ ನಡೆದುಕೊಂಡು ಬಂದಿದೆ. ಅದೇ ರೀತಿ ಕೇಂದ್ರ ಸರ್ಕಾರವು ಕಬ್ಬಿಗೆ ಬೆಲೆ ನಿಗದಿಪಡಿಸಿದ ಮೇಲೆ ಸಭೆ ಕರೆಯುವ ಪದ್ಧತಿಯೂ ನಡೆದುಕೊಂಡು ಬಂದಿದೆ. ಕೇಂದ್ರ ಸರ್ಕಾರವು ನಿಗದಿಪಡಿಸುವ ಕಬ್ಬಿನ ಬೆಲೆಯು ಇವತ್ತಿನ ದಿವಸಗಳಲ್ಲಿ ಬೆಳೆದಂಥ ಕಬ್ಬಿಗೆ ಯೋಗ್ಯವಾದುದಲ್ಲವೆಂದು ರಾಜ್ಯ ಸರ್ಕಾರದ ಗಮನದಲ್ಲೂ ಇದೆ. ಕೇಂದ್ರ ಸರ್ಕಾರ ನಿಗದಿಪಡಿಸಿರುವ ಬೆಲೆ ನೋಡಿದರೆ ಯಾವ ರೈತನೂ ಕಬ್ಬು ಬೆಳೆಯುವುದಕ್ಕೆ ಪ್ರಯತ್ನ ಮಾಡುವುದಿಲ್ಲವೆಂದು ನಮಗೆ ತಿಳಿಯುತ್ತದೆ. ಆದಕ್ಕಾಗಿಯೇ ಪ್ರತಿ ವರ್ಷವೂ ಸರ್ಕಾರ, ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ, ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ಮಾಲೀಕರುಗಳನ್ನು, ರೈತ ಪ್ರತಿನಿಧಿಗಳನ್ನು, ಆ ಭಾಗದ ಶಾಸಕರು ಮತ್ತು ಲೋಕ-ಸಭಾ ಸದಸ್ಯರುಗಳನ್ನು ಕರೆದು ಒಂದು ಮೀಟಿಂಗ್ ಮಾಡಿ ಕಬ್ಬಿಗೆ ರಾಜ್ಯ ಸಲಹಾ ಬೆಲೆಯನ್ನು ನಿಗಧಿಪಡಿಸುವ ಪದ್ಧತಿ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಈ ಸಾರಿ ಜುಲೈ ತಿಂಗಳ ಕೊನೆಯಲ್ಲಿ ಕೇಂದ್ರ ಸರ್ಕಾರವು ಎಸ್.ಎಂ.ಪಿ.ಯನ್ನು ನಿಗದಿ ಮಾಡದೇ ಇರುವ ಕಾರಣ, ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳವರು ಅಡ್ವಾನ್ಸಾಗಿ ರೈತರುಗಳಿಗೆ ಇಂತಿಷ್ಟು ಹಣ ಕೊಡಿ, ಮುಂದಿನ ತಿಂಗಳು ಮೀಟಿಂಗ್ ನಡೆದ ನಂತರ ಎಸ್.ಎಂ.ಪಿ, ಫಿಕ್ಸ್ ಆದ ಮೇಲೆ ಉಳಿದ ಹಣವನ್ನು ಕೊಡಬಹುದೆಂದು ತಿಳಿಸಿದ್ದೇವೆ. ಈ ರೀತಿ ಅಡ್ವಾನ್ಸ್ ಆಗಿ ಹಣವನ್ನು ಕೊಡಿ ಎಂದು ರಾಜ್ಯ ಸರ್ಕಾರ ಸುತ್ತೋಲೆ ಕಳುಹಿಸಿರುವ ಬಗ್ಗೆ ಖಾಸಗಿ ಸಕ್ಕರೆ ಕಾರ್ಖಾನೆಗಳವರು ಹೈಕೋರ್ಟ್‌ಗೆ ಹೋಗಿ ಸ್ಟೇ ತಂದಿರುವುದರಿಂದ, ಅದನ್ನು ಜಾರಿ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಆದರೂ ಸಹಾ ಮತ್ತೊಂದು ಸುತ್ತೋಲೆಯನ್ನು ಹೊರಡಿಸಿ, ಆದಷ್ಟು ಬೇಗ, ಲೋಕಲ್ ರೈತ ಪ್ರತಿನಿಧಿಗಳು, ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಯವರು, ಆ ಭಾಗದ ಶಾಸಕರು ಮತ್ತು ಲೋಕಸಭಾ ಸದಸ್ಯರುಗಳು ಸೇರಿ ಒಂದು ಮೀಟಿಂಗ್ ಮಾಡಿ ಕಬ್ಬಿನ ಬೆಲೆಯನ್ನು ನಿಗದಿಪಡಿಸಬೇಕೆಂದು ಸೂಚಿಸಿದ್ದೇವೆ. ಇದರ ಜೊತೆಗೆ ಖಾಸಗಿ ಮತ್ತು ಸಹಕಾರಿ ಸಕ್ಕರೆ ಕಾರ್ಖಾನೆಯವರ ಆಡಳಿತ ಮಂಡಳಿಯವರನ್ನು 22ನೇ ತಾರೀಖು ಚರ್ಚೆ ಮಾಡಿ ತೀರ್ಮಾನ

ಮಾಡಲಾಗುತ್ತದೆ. ಖಾಸಗಿ ಸಕ್ಕರೆ ಕಾರ್ಖಾನೆ ಮಾಲೀಕರುಗಳು ತಮ್ಮ ಫ್ಯಾಕ್ಟರಿ ವ್ಯಾಪ್ತಿಯಲ್ಲಿ ಬರುವ ಕಬ್ಬು ಬೆಳೆಯತಕ್ಕಂಥ ರೈತರುಗಳನ್ನು ಕರೆದು ಚರ್ಚೆ ಮಾಡಿಕೊಂಡು ಬೆಲೆಯನ್ನು ನಿಗದಿಪಡಿಸಿಕೊಳ್ಳುವುದಕ್ಕೂ ಇದರಲ್ಲಿ ಅವಕಾಶವಿದೆ. ಆಮೇಲೆ, ಸನ್ಮಾನ್ಯ ಸದಸ್ಯರಾದ ಪುಟ್ಟಣ್ಣಯ್ಯನವರು ಮಾತನಾಡುತ್ತಾ, ಕೆಲವು ಖಾಸಗಿ ಸಕ್ಕರೆ ಕಾರ್ಖಾನೆಗಳವರು ಕಬ್ಬು ಪೂರೈಸಿರುವಂಥ ರೈತರುಗಳಿಗೆ ಬಾಕಿ ಕೊಡಬೇಕಾಗಿದೆಯೆಂದೂ, ಇಂಥಾ ಬಾಕಿ ಕೊಡಬೇಕಾದ ಕಾರ್ಖಾನೆಯವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆಯೆಂದು ಕೇಳಿದ್ದಾರೆ. ಖಾಸಗಿ ಸಕ್ಕರೆ ಕಾರ್ಖಾನೆ ಇರಬಹುದು, ಸಹಕಾರಿ ರಂಗದ ಸಕ್ಕರೆ ಕಾರ್ಖಾನೆ ಇರಬಹುದು, ಯಾವುದೇ ಕಾರ್ಖಾನೆಯವರು, ಕಬ್ಬು ಪೂರೈಸಿದ ರೈತರುಗಳಿಗೆ ಬಾಕಿಯನ್ನು ಪೂರ್ಣವಾಗಿ ಚುಕ್ತಾ ಮಾಡದೇ ಇದ್ದರೆ, ಅಂಥಾ ಫ್ಯಾಕ್ಟರಿಗಳಿಗೆ ಪುನಃ ಕೆಲಸ ಮಾಡಲು ಪರ್ಮಿಷನ್ ಕೊಡುವುದಿಲ್ಲವೆಂದು ಈ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲು ಬಯಸುತ್ತೇನೆ. ಶುಗರ್ ಕೇನ್ ಕಂಟ್ರೋಲ್ ಆ್ಯಕ್ಟ್ ಪ್ರಕಾರ ಮತ್ತು ಎಸ್.ಎಂ.ಪಿ.ಪ್ರಕಾರ ಕಬ್ಬು ಪೂರೈಸಿದಂಥ ರೈತರುಗಳಿಗೆ 15 ದಿವಸಗಳೊಳಗೆ ಪೂರ್ತಾ ಹಣವನ್ನು ಕೊಡಬೇಕಾಗುತ್ತದೆ. ಒಂದು ಪಕ್ಷ 15 ದಿವಸಗಳೊಳಗೆ ಹಣವನ್ನು ಕೊಡದೆ ಹೋದರೆ, ನಿಧಾನ ಮಾಡಿದ ಸಮಯಕ್ಕೆ ಬಡ್ಡಿ ಹಾಕಿ ಕಾರ್ಖಾನೆಯವರು ಕೊಡಬೇಕಾಗುತ್ತದೆ. ಹೈಕೋರ್ಟ್‌ನಲ್ಲಿ ಎಸ್.ಎಂ.ಪಿ.ರೇಟ್ ಬಗ್ಗೆ ತಡೆ ಆಜ್ಞೆ ಇರುವುದರಿಂದ ಪುನಃ ಚರ್ಚೆ ಮಾಡುವುದಕ್ಕೆ ಸಾಧ್ಯವಾಗದೇ ಇರುವುದರಿಂದ ಆದಷ್ಟು ಬೇಗ ಸ್ಟೇ ವೆಕೇಟ್ ಮಾಡಿಸಬೇಕೆಂಬ ಬಗ್ಗೆ ಸೂಚನೆ ಕೊಡಲಾಗಿದೆ. ಇದರ ಜೊತೆಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು, ರಾಜ್ಯ ಸರ್ಕಾರವು ಸಲಹಾ ಬೆಲೆಯನ್ನು ನಿಗದಿಪಡಿಸುವುದಕ್ಕೆ ಅನುಮತಿ ಕೊಡಬೇಕೆಂದು ಸಹ ನಾವು ಕೇಳಿಕೊಳ್ಳುತ್ತಿದ್ದೇವೆ. ಈ ಸೆಷನ್ ಮುಗಿದ ತಕ್ಷಣ ನಾನು ದೆಹಲಿಗೆ ಹೋಗಿ ಕೇಂದ್ರ ಆಹಾರ ಮತ್ತು ಇಂಡಸ್ಟ್ರೀ ಮಿನಿಸ್ಟರ್ ಅವರನ್ನು ಭೇಟಿ ಮಾಡಿ ಚರ್ಚೆ ಮಾಡುತ್ತೇನೆ ಹಾಗೂ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಎಲ್ಲಾ ರೀತಿಯಿಂದಲೂ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಸ್ಟೇಟ್ ಗೌರ್ನಮೆಂಟ್ ಫಿಕ್ಸ್ ಮಾಡುವಂಥ ಕಬ್ಬಿನ ರೇಟನ್ನು ಕಾನೂನುಬದ್ಧಗೊಳಿಸಲು, ಕಬ್ಬು ಬೆಲೆ ನಿಯಂತ್ರಣ ಮಾಡುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ತಿಳಿಸಲಾಗುವುದೆಂದು ಮಾನ್ಯ ಸಚಿವರು ಹೇಳಿದ್ದಾರೆ. ಕೇಂದ್ರ ಸರ್ಕಾರಕ್ಕೆ ಬರೆಯುವ ಪತ್ರದ ಒಂದು ಕಾಪಿಯನ್ನು ನಮಗೆ ಕೊಡಬೇಕೆಂದು ನಾನು ಕೇಳುತ್ತೇನೆ. ಈ ಬಗ್ಗೆ ಮಾನ್ಯ ಸಚಿವರೇ ದೆಹಲಿಗೆ ಹೋಗಿ ಸಂಬಂಧಪಟ್ಟ ಮಂತ್ರಿಯವರೊಡನೆ ಮಾತನಾಡಿ ಸಮಸ್ಯೆಯನ್ನು ಇತ್ಯರ್ಥಪಡಿಸುತ್ತೇನೆಂದು ಹೇಳಿರುವುದು ಸರಿಯಾಗಿದೆ, ಮೊದಲು ಅವರು ಆ ಕೆಲಸವನ್ನು ಮಾಡಬೇಕು. ಕಬ್ಬು ಬೆಳೆಯುವಂಥ ರೈತರುಗಳು ಮತ್ತು ಕಾರ್ಖಾನೆಗಳು ಉಳಿಯುವ ದೃಷ್ಟಿಯಿಂದ ನಾನು ಒಂದು ಸಲಹೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಯಾರೋ ಖಾಸಗಿ ಸಕ್ಕರೆ ಕಾರ್ಖಾನೆ ಅಡಳಿತ ಮಂಡಳಿಯವರು

ಕೋರ್ಟ್‌ಗೆ ಹೋಗಿ ಸ್ಟೇಟ್ ಗೌರ್ನಮೆಂಟ್ ಕರೆಯತಕ್ಕಂಥ ಕಬ್ಬು ಸಲಹಾ ಬೆಲೆ ಮೀಟಿಂಗ್ ಮಾಡದಂತೆ ಸ್ಟೇ ತಂದಿದ್ದಾರೆ. ಈ ಸ್ಟೇ ವೆಕೇಟ್‌ನ್ನು ತಾವು ಮಾಡಿಸಬೇಕು, ಇಲ್ಲವೆಂದರೆ, ಕಬ್ಬು ಬೆಳೆದಂಥ ರೈತರುಗಳು ತಮಗೆ ಖುಷಿ ಬಂದ ಕಡೆ ಮಾರಾಟ ಮಾಡಿಕೊಳ್ಳುವುದಕ್ಕೆ ಸರ್ಕಾರ ಅನುಮತಿ ಕೊಡಬೇಕು. ಇದರಿಂದ ಅಲ್ಲಿನ ಖಾಸಗಿ ಕಾರ್ಖಾನೆಯವರು ಕಬ್ಬು ಸಿಗದೆ ಫ್ಯಾಕ್ಟರಿಗೆ ಬೀಗ ಹಾಕಿಕೊಂಡು ಹೋಗಲಿ. 1995-96ರಲ್ಲಿ ಎಸ್.ಎಂ.ಪಿ,ಯನ್ನು ಎಷ್ಟು ಫಿಕ್ಸ್ ಮಾಡಿದ್ದಾರೆ ಸ್ವಾಮಿ? ಒಂದು ಕ್ವಿಂಟಾಲ್‌ಗೆ 458 ರೂಪಾಯಿಯನ್ನು ಮಾತ್ರ ಫಿಕ್ಸ್ ಮಾಡಿದ್ದಾರೆ. ಈ ಕಬ್ಬಿನಲ್ಲಿ 8.5 ನಷ್ಟು ಇಳುವರಿ ಇದೆ. 1996-97ನೇ ಸಾಲಿನಲ್ಲಿ ಡಿಸ್ಟಿಲರಿ ಇರುವ ಕಡೆ 700 ರೂಪಾಯಿಗಳನ್ನು ಒಂದು ಕ್ವಿಂಟಾಲ್‌ಗೆ ಕೊಟ್ಟಿದ್ದಾರೆ, ಡಿಸ್ಟಿಲರಿ ಇಲ್ಲದೇ ಇರುವ ಕಡೆ ಒಂದು ಕ್ವಿಂಟಾಲ್‌ಗೆ 625 ರೂಪಾಯಿಗಳನ್ನು ಕೊಡಲಾಗಿದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಬೆಲೆ ನಿಗದಿಗೆ ಮಾತ್ರ ವಿಷಯ ಇದೆ. ಬೈಫರ್‌ಕೇಟ್ ಮಾಡುವ ಹಕ್ಕಿಲ್ಲ. ಹಾಕದೇ ಇರುವುದು ಹೀಗೆ ಡಿಸ್ಟಲರಿ ಮತ್ತು ನಾನ್ ಡಿಸ್ಟಿಲರಿ ಎಂದು ಬೈಫರ್‌ಕೇಷನ್ ಮಾಡಬಾರದು ಎಂದು ಹೇಳಬಯಸುತ್ತೇನೆ. ಆ ರೀತಿ ಮಾಡುವುದಕ್ಕೆ ಅವರಿಗೆ ಹಕ್ಕಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಪುಟ್ಟಣ್ಣಯ್ಯನವರು ಸಲಹೆ ಕೊಟ್ಟಂತೆ ಅದು ಅವರ ಬಾದರೇಶನ್. ಇದರಲ್ಲಿ ರೈತರದ್ದೇನು ತಪ್ಪು?• ಅವನು ಕಬ್ಬು ಹಾಕಿದ್ದಾನೆ, ಗೊಬ್ಬರ ಹಾಕಿ ಬೆಳೆದಿದ್ದಾನೆ, ದುಡಿದಿದ್ದಾನೆ. ಕಬ್ಬು ಕೊಟ್ಟವನಿಗೆ ಡಿಸ್ಟಿಲರಿ ಇರುವ ಕಡೆಗಳಲ್ಲಿ 700 ರೂ.ಗಳು ಡಿಸ್ಟಿಲರಿ ಇಲ್ಲದ ಕಡೆಗಳಲ್ಲಿ 625 ರೂ.ಗಳು ಅಂದರೆ ಇದು ಯಾವ ಧರ್ಮ? ಆದ್ದರಿಂದ ಈ ಒಂದು ವ್ಯತ್ಯಾಸ ಮಾಡುವ ಅಗತ್ಯವಿಲ್ಲ. ಮೂರನೆದಾಗಿ ಅತ್ಯಂತ ಪ್ರಮುಖವಾಗಿ ಹೇಳುವಂಥಾದ್ದು ಅಂದರೆ, ದಯಮಾಡಿ ಸರಕಾರದವರು, ಮಂತ್ರಿಯವರು ರೈತರು ಮತ್ತು ಕಾರ್ಖಾನೆಯವರು ಕುಳಿತು ಬೆಲೆ ನಿಗದಿ ಮಾಡಿಕೊಳ್ಳಿ ಎಂದು ಹೇಳುವುದು ಬೇಡ. ಮುಖ್ಯಮಂತ್ರಿಗಳು ಯಾವಾಗಲೂ ಕರೆಯುವಂತೆ ಕಾರ್ಖಾನೆಗಳ ಮುಖ್ಯಸ್ಥರುಗಳ ಮತ್ತು ರೈತ ಮುಖಂಡರುಗಳ ಸಭೆಯನ್ನು ಕರೆದು ಕೂಡಲೇ 1997-98ನೇ ಸಾಲಿಗೆ ಒಂದು ಬೆಲೆಯನ್ನು ನಿಗದಿ ಮಾಡಿ. ಹಾಗೆ ನಿಗದಿ ಮಾಡಿ ಅದು ಪರಸ್ಪರ ಅಗ್ರೀಡ್‌ಪೈಸ್ ಎಂಬ ಒಂದು ತೀರ್ಮಾನಕ್ಕೆ ಬನ್ನಿ. ಹಾಗೆ ಮಾಡಿದರೆ ಯಾರೂ ಕೋರ್ಟ್‌ಗೆ ಅಪ್ರೋಚ್ ಆಗುವ ಪ್ರಶ್ನೆ ಬರುವುದಿಲ್ಲ. ಅಗ್ರೀಡ್‌ಪೈಸ್ ಮಾಡಿಕೊಂಡರೆ ಅನುಕೂಲವಾಗುತ್ತದೆ. ಇದಕ್ಕೆ ಯಾವ ಕಾರ್ಖಾನೆಯವರು ಒಪ್ಪಿಕೊಳ್ಳುತ್ತಾರೋ ಅವರ ಕಾರ್ಖಾನೆಯು ಉಳಿಯುತ್ತದೆ. ಇಲ್ಲವಾದರೆ ರೈತರು ಬರುತ್ತಾರೆ, ಬೀಗ ಹಾಕಿ ತಮ್ಮ ಕಬ್ಬನ್ನು ಎಲ್ಲಿ ಮಾರಿಕೊಳ್ಳಬೇಕೋ ಅಲ್ಲಿಗೆ ಮಾರಿಕೊಳ್ಳುತ್ತಾರೆ. ಅಥವಾ ಬೆಲ್ಲವನ್ನಾದರೂ ಮಾಡಿಕೊಳ್ಳುತ್ತಾರೆ. ದಯಮಾಡಿ ಅದಕ್ಕಾದರೂ ಅನುಮತಿ ಕೊಡಿ. ಲೇಟ್ ಮಾಡಿದರೆ ಸರ್ವನಾಶವಾಗುತ್ತದೆ. ಅದಕ್ಕೆ ಒಂದು ಡೇಟ್ ಫಿಕ್ಸ್ ಮಾಡಿ. ಕಾರ್ಖಾನೆಗಳ

ಮಾಲೀಕರು, ರೈತರ ಮುಖಂಡರುಗಳು ಮ[illegible]ಧಿಕಾರಿಗಳನ್ನು ಕರೆದು ಈ ರೀತಿಯಲ್ಲಿ ಒಂದು ರೇಟ್‌ನ್ನು ಫಿಕ್ಸ್ ಮಾಡಿ ಅದನ್ನು [illegible]ಡ್‌ಪೈಸ್ ಎಂದು ಮಾಡುತ್ತೀರೊ? ಅದನ್ನು ಯಾವಾಗ ಮಾಡುತ್ತೀರಿ? ಇನ್ನು ನಾಳೆ ಸದನವು ಮುಗಿಯುತ್ತದೆ. ನಾಳೆಗೆ ಸಾಧ್ಯವಾದರೆ ಆ ಸಭೆಯನ್ನು ಕರೆಯುವಂಥ ವ್ಯವಸ್ಥೆಯನ್ನು ಮಾಡುತ್ತೀರಾ?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೇ, ಮಾನ್ಯ ಉಪ-ಮುಖ್ಯಮಂತ್ರಿಯವರು ಈ ವಿಷಯದಲ್ಲಿ ಗಂಭೀರವಾಗಿ ಚಿಂತನೆ ಮಾಡುತ್ತಾರೆ. ಮೈಸೂರಿನಲ್ಲಿರುವ ಫ್ಯಾಕ್ಟರಿಯವರನ್ನೂ ಕರೆದು ಮಾತನಾಡಬೇಕು. ತಾವು ಮೀಟಿಂಗ್ ಮಾಡಬೇಕು. ಎರಡನೇದಾಗಿ ಸುಪ್ರಿಂಕೋರ್ಟ್ ಆದೇಶದ ವಿರುದ್ಧ ರಾಜ್ಯ ಸರಕಾರಕ್ಕೆ ಹಕ್ಕಿಲ್ಲ ಎಂದು ಹೇಳುವ ವಿಷಯದಲ್ಲಿ ನಮ್ಮ ಸರಕಾರ ಸುಪ್ರೀಂಕೋರ್ಟ್‌ಗೆ ಹೋಗಿ ಮಾಹಿತಿಗಳನ್ನು ಕೊಟ್ಟು ರಾಜ್ಯ ಸರಕಾರಕ್ಕೆ ಹೇಗೆ ಮೊದಲು ಇತ್ತೋ ಎಸ್.ಎ.ಪಿ ಪವರ್, ಅದನ್ನು ವಾಪಸ್ಸು ತೆಗೆದುಕೊಂಡು ಬರಬೇಕು. ಇದರ ಬಗ್ಗೆ ಕೇಂದ್ರ ಸರಕಾರದ ಜೊತೆಯಲ್ಲಿ ಚರ್ಚೆ ಮಾಡಬೇಕು. ಮೂರನೇದಾಗಿ ತಮ್ಮನ್ನು ಸ್ವಾಗತ ಮಾಡುತ್ತೇನೆ. ತಾವು ಮಾತನಾಡುವಾಗ ರೈತರಿಗೆ ಯಾವ ಯಾವ ಬಾಕಿಗಳನ್ನು ಕೊಡಬೇಕು ಅದನ್ನು ಬಡ್ಡಿ ಸಮೇತ ಕೊಡಿಸುತ್ತೇವೆಂದು ಹೇಳಿದ್ದೀರಿ. ಈಗ ಮಂಡ್ಯ ಕಾರ್ಖಾನೆಯಲ್ಲಿ ಬೆಲೆ ನಿಗದಿ ಮಾಡಿರುವುದನ್ನು ದಯವಿಟ್ಟು ವಾಪಸ್ ತೆಗೆದುಕೊಳ್ಳಬೇಕು. ಎಲ್ಲಾ ಶಾಸಕರು ಮತ್ತು ಅಲ್ಲಿನ ಕಬ್ಬು ಬೆಳೆಗಾರರನ್ನು ಕರೆದು ಮಾತನಾಡಿ ಆ ಮೇಲೆ ಬೆಲೆ ನಿಗದಿ ಮಾಡಬೇಕು. ನಮಗೆ ಸರಕಾರದ ಸುತ್ತೋಲೆಯ ಬಗ್ಗೆ ಗೌರವವಿದೆ. ಹೀಗೆ ಸುತ್ತೋಲೆಯನ್ನು ತಾವು ಕಳುಹಿಸಿದಾಗ, ಆ ಸುತ್ತೋಲೆಯ ನಿಯಮಾವಳಿಗಳ ಪ್ರಕಾರ ನಡೆದುಕೊಳ್ಳದಿದ್ದವರಿಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಮಂಡ್ಯದಲ್ಲಿ ಸುತ್ತೋಲೆಯ ನಿಯಮಗಳನ್ನು ಪಾಲನೆ ಮಾಡಿಲ್ಲ. ಆದ್ದರಿಂದ 750 ರೂ.ಗಳ ರೇಟ್‌ನ್ನು ವಾಪಸ್ ತೆಗೆದುಕೊಂಡು ಎಲ್ಲರನ್ನೂ ಕರೆದು ಮೀಟಿಂಗ್ ಮಾಡಿ ಒಂದು ಬೆಲೆ ನಿಗದಿ ಮಾಡಿ ಅನುಕೂಲ ಮಾಡಿಕೊಡಬೇಕು.

ಶ್ರೀ ಜೆ.ಶಂಕರೇಗೌಡ (ಹೊಸಪೇಟೆ): ಮಾನ್ಯ ಸಚಿವರ ಹೇಳಿಕೆಯಲ್ಲಿ ಈ ಒಂದು ಕಬ್ಬಿನ ಬಟವಾಡೆ ತಡವಾದಾಗ ಅದಕ್ಕೆ ಬಡ್ಡಿ ಹಾಕಿಕೊಡುತ್ತೇವೆಂದು ಹೇಳಿದರು. ಆದರೆ ಆ ಕಂಡೀಷನ್ ಇದ್ದರೂ ಕೂಡ ಯಾವ ಫ್ಯಾಕ್ಟರಿಯವರೂ ಕೂಡ ಕಬ್ಬಿನ ಬಟವಾಡೆ ತಡವಾದಾಗ ಯಾರೂ ಇದುವರೆಗೆ ಬಡ್ಡಿ ಸೇರಿಸಿಕೊಟ್ಟಿಲ್ಲ. ಅವರು ಬಡ್ಡಿಕೊಡುತ್ತಾರೆಂದು ಅದನ್ನು ತಡಕೊಳ್ಳುವಷ್ಟು ಶಕ್ತಿ ರೈತರಲ್ಲಿ ಇಲ್ಲದಿದ್ದುದರಿಂದ ದಯಮಾಡಿ ಅದಕ್ಕೆ ಆಸ್ಪದ ಕೊಡದೇನೆ ಅವರಿಗೆ ಕೇನ್‌ಕಂಟ್ರೋಲ್ ಆರ್ಡರ್ ಪ್ರಕಾರ ಒಂದು ತಿಂಗಳಲ್ಲಿ ಪೂರ್ಣಧಾರಣೆ ಕೊಡಬೇಕೆಂದು ಇದೆ, ಅದನ್ನು ಕೊಡಲು ಒತ್ತಾಯ ಮಾಡಿ ಪೂರ್ಣ ಹಣ ರೈತರಿಗೆ ಸಿಗುವಂತೆ ಮಾಡಬೇಕು. ಇನ್ನೊಂದು ವಿಚಾರ ಅಂದರೆ ಕಾರ್ಖಾನೆಗಳವರು ಕಬ್ಬನ್ನು ತೆಗೆದುಕೊಂಡ ಮೇಲೆ ಪಾವತಿಯನ್ನು ಸಕಾಲದಲ್ಲಿ ಮಾಡುವುದಿಲ್ಲ. ಹಾಗಿದ್ದಾಗ ಲೆವಿಶುಗರ್ ಮತ್ತು ಫ್ರೀಶುಗರ್ ಎಂದೇನು ಇದೆ,

ಲೆವಿಶುಗರ್‌ನ್ನು 40 ಪರ್‌ಸೆಂಟ್ ಕೇಂದ್ರ ಸರಕಾರದವರು ಕಾದಿರಿಸಿಕೊಳ್ಳುತ್ತಾರೆ, ಅದರ ಪ್ರಕಾರ ಕೇಂದ್ರ ಸರಕಾರದವರಾದರೂ ಆ 40 ಪರ್‌ಸೆಂಟ್ ಸಕ್ಕರೆಗೆ ಅವರ ಹಣವನ್ನು ಕೊಟ್ಟರೆ ಆ ಕಾರ್ಖಾನೆ ಮಂಡಳಿಯವರು ಅದನ್ನು ರೈತರಿಗೆ ಕೊಡಲು ಅನುಕೂಲವಾಗುತ್ತದೆ. ಅದನ್ನಾದರೂ ಸರಕಾರದವರು ಪ್ರಯತ್ನ ಮಾಡಿಸಿ ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎ.ರವೀಂದ್ರನಾಥ್ (ಮಾಯಕೊಂಡ): ಮಾನ್ಯ ಅಧ್ಯಕ್ಷರೇ, ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ರೈತರಿಗೆ ಟನ್‌ಗೆ 8 ರೂ.ಗಳಂತೆ 1975ರಿಂದ ಇಲ್ಲಿಯ ತನಕ ಮುರಿದುಕೊಂಡು ಬಂದಿದ್ದಾರೆ. ಆ ಹಣವು ಹೆಚ್ಚುಕಡಿಮೆ 1.5 ಕೋಟಿ ರೂ.ಗಳಷ್ಟು ಆಗಿದೆ. ಆ ಹಣಕ್ಕೆ ಇಲ್ಲಿಯವರೆಗೆ ಬಡ್ಡಿ ಇಲ್ಲ ಅಥವಾ ಆ ಹಣವನ್ನು ವಾಪಸ್ ಕೊಡತಕ್ಕಂಥದ್ದನ್ನೂ ಕೂಡ ಮಾಡಿಲ್ಲ. ದಯಮಾಡಿ ರೈತರಿಗೆ ಆ ಹಣವನ್ನು ಬಡ್ಡಿ ಸಮೇತ ವಾಪಸ್ ಕೊಡತಕ್ಕಂಥದ್ದನ್ನು ಮಾಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಇಲ್ಲವಾದರೆ ಆ ಹಣವನ್ನು ಶೇರ್‌ನ್ನಾಗಿಯಾದರೂ ಪರಿವರ್ತಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಸಹಕಾರಿ ಸಕ್ಕರೆ ಕಾರ್ಖಾನೆಗಳ ಮುಖಾಂತರ ನಾನ್ ರಿಫಂಡಬಲ್ ಡಿಪಾಸಿಟ್ ಎಂದು 8 ರೂ.ಗಳಂತೆ ಒಂದು ಟನ್‌ಗೆ ತೆಗೆದುಕೊಳ್ಳಬೇಕೆಂದು ಒಂದು ಕಾಯಿದೆ ಮಾಡಿಕೊಂಡು ಇಲ್ಲಿಯವರೆಗೆ ತೆಗೆದುಕೊಳ್ಳುತ್ತಾ ಇದ್ದಾರೆ. ಪ್ರತಿಟನ್‌ಗೆ 8 ರೂ.ಗಳನ್ನು ಹೆಚ್ಚಿಗೆ ಕೊಟ್ಟಿದ್ದೇವೆ ಎಂದು ಮಾಡಿ ಮುರಿದುಕೊಳ್ಳುತ್ತಾ ಇದ್ದರು. ಅದು 1.5 ಕೋಟಿ ರೂ.ಗಳು ಆಗಿವೆ. ಹಿಂದೆ ಪ್ರಶ್ನೆ ಮಾಡಿದಾಗ 6 ರೂ.ಗಳಷ್ಟು ಬಡ್ಡಿ ಕೊಡುತ್ತೇವೆಂದು ಹೇಳಿದ್ದರೂ ಕೂಡ ಯಾವುದನ್ನೂ ಕೊಟ್ಟಿಲ್ಲ. ಆದ್ದರಿಂದ ಅಲ್ಲಿರುವ 1.5 ಕೋಟಿ ರೂ.ಗಳು ಏನಿದೆ, ಅದನ್ನು ಬಡ್ಡಿ ಸಮೇತ ರೈತರುಗಳಿಗೆ ವಾಪಸ್ ಕೊಡಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೇ, ಒಂದು ಸಹಕಾರ ಸಕ್ಕರೆ ಕಾರ್ಖಾನೆ ಮಾರಾಟವಾಗಿ ಎರಡು ವರ್ಷಗಳು ಆಯಿತು. ಇವ್ವೊತ್ತಿನ ವರೆಗೂ ಚಾಲೂ ಆಗಿಲ್ಲ. ಅಲ್ಲಿನ ಕಬ್ಬಿನ ಬೆಳೆಗಾರರು ಕಳವಳಕ್ಕೀಡಾಗಿದ್ದಾರೆ. ಅದರ ಬಗ್ಗೆ ಏನಾಗಿದೆ ಎಂದು ಮಾನ್ಯ ಸಚಿವರು ತಿಳಿಸಬೇಕು. ಅವರು ಸರಕಾರಕ್ಕೆ ತುಂಬ ಬೇಕಾದ ಹಣವನ್ನು ಇನ್ನೂ ತುಂಬಿಲ್ಲ. ಅದಕ್ಕೆ ಸೆಪ್ಟೆಂಬರ್ ವರೆಗೆ ಸಮಯ ಕೇಳಿದ್ದಾರೆಂದು ಹೇಳಿದ್ದಾರೆ. ಅದನ್ನು ತುಂಬಿದ್ದಾರೋ? ಅದನ್ನು ಆದಷ್ಟು ಬೇಗ ತುಂಬಿಸಿಕೊಂಡು ಆ ಕಾರ್ಖಾನೆಯನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಬಿ.ಶಿವಕುಮಾರ್ (ಕೆರಗೋಡು): ಮಾನ್ಯ ಅಧ್ಯಕ್ಷರೇ, ನಿನ್ನೆ ಕಲಾಪಗಳ ಮಧ್ಯೆ ಶೂನ್ಯವೇಳೆಯಲ್ಲಿ ನಮ್ಮ ಮೈಸೂರು ಸಕ್ಕರೆ ಕಾರ್ಖಾನೆಯ ವಿಚಾರವನ್ನು ಪ್ರಸ್ತಾಪಮಾಡಿದ್ದೆ. ಇವ್ವೊತ್ತು ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಇನ್ನಿತರ

ಸದಸ್ಯರು ಮಾನ್ಯ ಸಕ್ಕರೆ ಸಚಿವರ ಗಮನವನ್ನು ಸೆಳೆದಾಗ ನಾನು ತಮ್ಮ ಮೂಲಕ ಕೆಲವು ವಿಚಾರಗಳನ್ನು ತಿಳಿಸಲು ಇಚ್ಛೆಪಡುತ್ತೇನೆ. ಇಡೀ ರಾಜ್ಯದಲ್ಲಿ ಮೊದಲು ಕಬ್ಬು ಅರೆಯಲು ಪ್ರಾರಂಭ ಮಾಡತಕ್ಕಂಥಾದ್ದು ಸರಕಾರಿ ಸ್ವಾಮ್ಯದ ಮೈಸೂರು ಸಕ್ಕರೆ ಕಾರ್ಖಾನೆ - ಎಂಬುದು ಅವರಿಗೆ ತಿಳಿದಿದೆ. ಕೆಲವು ವರ್ಷಗಳಿಂದ ಈಚೆಗೆ ಒಂದು ಪರಿಪಾಠ ಬಂದಿದೆ. ಮೊದಲು ಆಡಳಿತಮಂಡಳಿಯವರು ಅಲ್ಲಿಯ ಜನಪ್ರತಿನಿಧಿಗಳು, ರೈತರ ಮುಖಂಡರುಗಳನ್ನು ಕರೆದು ಕಾರ್ಖಾನೆ ಪ್ರಾರಂಭವಾಗುವುದಕ್ಕೆ ಮೊದಲೇ ಒಂದು ಆರೋಗ್ಯಕರವಾದ ವಾತಾವರಣದಲ್ಲಿ ಕಾರ್ಖಾನೆಯನ್ನು ಪ್ರಾರಂಭಿಸತಕ್ಕಂಥ ಪರಿಸ್ಥಿತಿ ಇತ್ತು. ಇತ್ತೀಚೆಗೆ ಕಳೆದ ನಾಲ್ಕೈದು ವರ್ಷಗಳಿಂದ, ರೈತರ ಪ್ರತಿನಿಧಿಗಳು ಜನಪ್ರತಿನಿಧಿಗಳು ಬಂದು ಕೇಳುವವರೆಗೂ ಆ ಗೊಂದಲ ಉಂಟುಮಾಡಿಕೊಂಡು ಹಲವಾರು ತಿಂಗಳು ಈ ರೀತಿಯಾಗಿ ತಳ್ಳುವುದರಿಂದ ಏನಾಗುತ್ತದೆ ಅಂದರೆ, ಕಾರ್ಖಾನೆಯು ನಿಗದಿತ ವೇಳೆಯಲ್ಲಿ ಪ್ರಾರಂಭವಾಗಲು ಆಗುವುದಿಲ್ಲ. ಜೊತೆಗೆ ಒಂದೊಂದು ತಿಂಗಳಲ್ಲಿ ಇಷ್ಟಿಷ್ಟು ಕಬ್ಬನ್ನು ಅರೆಯಬೇಕೆನ್ನುವಂಥ ಟಾರ್ಗೆಟ್ ಕೂಡ ಹಾಕಿಕೊಂಡಿರುತ್ತಾರೆ. ಅದಕ್ಕೆ ಸರಿಯಾದ ರೀತಿಯಲ್ಲಿ ಸಮರ್ಪಕವಾಗಿ ಕೆಲಸ ಮಾಡಲು ಆಗುವುದಿಲ್ಲ. ಆದ್ದರಿಂದ ನಾನು ತಮ್ಮ ಮೂಲಕ ಮಾನ್ಯ ಸಕ್ಕರೆ ಸಚಿವರಲ್ಲಿ ವಿನಂತಿಸಿಕೊಳ್ಳುವುದು ಇಷ್ಟೇ, ನಿನ್ನೆ ಕೂಡ ಅವರು ಆಶ್ವಾಸನೆ ಕೊಟ್ಟಿದ್ದಾರೆ ಮೈಸೂರು ಸಕ್ಕರೆ ಕಾರ್ಖಾನೆಗೆ, ನಮ್ಮ ಶಾಸಕ ಪ್ರತಿನಿಧಿಗಳನ್ನು, ರೈತ ಪ್ರತಿನಿಧಿಗಳನ್ನು ಕರೆದು ಒಂದು ಸಭೆ ಮಾಡಿದರು. ಮತ್ತೆ ಸರಕಾರದ ಮುಂದೆ ಎರಡು ಸಭೆ ಬಂದಾಗ ಕಾರಣಾಂತರಗಳಿಂದ ಅದನ್ನು ಮುಂದೂಡಲಾಯಿತು. ಈಗ ಆ ಕಾರ್ಖಾನೆಯ ಆಡಳಿತಮಂಡಳಿಯವರು ನಾಳೆ ಸದನ ಮುಗಿಯುವುದರೊಳಗಡೆ ನಮ್ಮ ಶಾಸಕರನ್ನು ಮತ್ತು ರೈತ ಪ್ರತಿನಿಧಿಗಳನ್ನು ಕರೆದು ಅಲ್ಲಿ ಕಬ್ಬಿನ ಬೆಲೆಯನ್ನು ನಿಗದಿ ಮಾಡಬೇಕು. ಈ ಸಾರಿ ಅಲ್ಲಿ ಕಬ್ಬಿನ ಬೆಳೆಯ ಪ್ರಮಾಣ ಕೂಡ ಬಹಳ ಕಡಿಮೆ ಇದೆ. ನಮ್ಮಲ್ಲಿ ಬೆಲ್ಲಕ್ಕೂ ಕೂಡ ಒಂದು ಆಕರ್ಷಕವಾದಂಥ ಬೆಲೆ ಇದೆ. ಬೆಲ್ಲದ ಬೆಲೆಯು ಹೆಚ್ಚಾದಾಗ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡುವುದು ಕಡಿಮೆ ಆಗುತ್ತದೆ. ಕನಿಷ್ಟ ನಾವು 6 ಲಕ್ಷ ಟನ್‌ಗಳನ್ನು ಮೈಸೂರು ಸಕ್ಕರೆ ಕಾರ್ಖಾನೆಯವರು ಅರೆಯದೆ ಹೋದರೆ ಬ್ರೇಕ್‌ಈವನ್ ಪಾಯಿಂಟ್ ಬರುವುದಿಲ್ಲ. ಸಕ್ಕರೆ ಕಾರ್ಖಾನೆಯು ನಷ್ಟ ಅನುಭವಿಸಬೇಕಾಗಿ ಬರುತ್ತದೆ. ಅಕ್ಕಪಕ್ಕದಲ್ಲಿರುವಂಥ ವ್ಯಾಪ್ತಿಯಲ್ಲಿ ಬರತಕ್ಕಂಥ ಕಬ್ಬನ್ನು ನಾವು ಪಡೆದುಕೊಳ್ಳಬೇಕಾದರೆ ಪ್ರೋತ್ಸಾಹದಾಯಕವಾದ ಬೆಲೆಯನ್ನು ನಾವು ನಿಗದಿ ಮಾಡಬೇಕು, ಮಾನ್ಯ ಸಚಿವರು ಆಡಳಿತಮಂಡಳಿಯವರಿಗೆ ಆದೇಶ ಕೊಟ್ಟು ನಾಳೆ ನಮ್ಮ ಸದನ ಮುಗಿಯುವುದರೊಳಗಡೆ ಅಲ್ಲಿನ ಪರಿಸ್ಥಿತಿಯನ್ನು ಸರಿಪಡಿಸ ಬೇಕು, ಹೆಚ್ಚಿನ ರೀತಿಯಲ್ಲಿ ಕಬ್ಬು ಆ ಕಾರ್ಖಾನೆಗೆ ಬರುವ ರೀತಿಯಲ್ಲಿ ಅವರು ಸಹಾಯ ಮಾಡಬೇಕೆಂದು ತಮ್ಮ ಮೂಲಕ ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಕೃಷ್ಣಪ್ಪ (ಬನ್ನೂರು): ಸನ್ಮಾನ್ಯ ಉಪಾಧ್ಯಕ್ಷರೆ, ನನ್ನ ಕ್ಷೇತ್ರಕ್ಕೆ ಸೇರಿರುವ ಈ ಮೈಸೂರು ಜಿಲ್ಲೆಯಲ್ಲಿ ಸುಮಾರು 3 ಕಾರ್ಖಾನೆಗಳಿವೆ. ಅದರಲ್ಲಿ ಈಗಾಗಲೇ ಬಳ್ಳಾರಿ

ಮತ್ತು ಮಹದೇಶ್ವರ ಕಾರ್ಖಾನೆ ಮತ್ತು ಚುಂಚನಗಿರಿ ಕಾರ್ಖಾನೆ ಇದೆ. ಬಹುಶಃ ಈಗಾಗಲೇ ಮಂಡ್ಯ ಫ್ಯಾಕ್ಟರಿ ಕೂಡ ಕ್ರಷನ್ನು ಪ್ರಾರಂಭ ಮಾಡಿದೆ, ಬಳ್ಳಾರಿ ಫ್ಯಾಕ್ಟರಿ ಕೂಡ ಕ್ರಷನ್ನು ಪ್ರಾರಂಭ ಮಾಡಿದೆ. ಆದರೆ ಮಹದೇಶ್ವರ ಫ್ಯಾಕ್ಟರಿ ಮಾತ್ರ ಇನ್ನೂ ಕ್ರಷನ್ನು ಪ್ರಾರಂಭ ಮಾಡಿಲ್ಲ. ಕೊನೆಗೆ ಪ್ರಾರಂಭ ಮಾಡುವುದು ಬೇಡ ಎಂದರೆ ಕಳೆದ 2 ವರ್ಷಗಳಿಂದ ಕಬ್ಬನ್ನು ಸರಬರಾಜು ಮಾಡಿದಂಥವರಿಗೆ ಇವೊತ್ತು ಹಣವನ್ನೂ ಕೂಡ ಕೊಟ್ಟಿಲ್ಲ. ಈಗ ಮಾನ್ಯ ಸಕ್ಕರೆ ಮಂತ್ರಿಗಳು ಹೇಳಿದ ಪ್ರಕಾರ ಬಳ್ಳಾರಿ ಫ್ಯಾಕ್ಟರಿ ಮತ್ತು ಬೇರೆ ಫ್ಯಾಕ್ಟರಿಗಳಲ್ಲಿ ಅದಕ್ಕೆ ಬಡ್ಡಿಯನ್ನೂ ಸೇರಿಸಿ ಕೊಡುತ್ತಿದ್ದಾರೆ. ಆದರೆ ಇವರಲ್ಲಿ ಅಸಲು ಕೂಡ ಗತಿ ಇಲ್ಲ. ಈಗ ಫ್ಯಾಕ್ಟರಿಯಲ್ಲಿ ಕ್ರಷನ್ನಾದರೂ ಪ್ರಾರಂಭ ಮಾಡುತ್ತಾರೆ ಎಂದರೆ ಅದರ ಸೂಚನೆ ಕೂಡ ಇಲ್ಲ. ಅದನ್ನು ಯಾವಾಗ ಪ್ರಾರಂಭ ಮಾಡುತ್ತಾರೆ, ಅದಕ್ಕೆ ಜನ ಪ್ರತಿನಿಧಿಗಳನ್ನು ಅಥವಾ ರೈತರನ್ನೇನಾದರೂ ಕರೆಯಿಸಿ ಬೆಲೆ ನಿಗದಿ ಮಾಡುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆಯೆ? ಒಂದು ವೇಳೆ ಮಾಡದಿದ್ದರೆ ಕಳೆದ ಬಾರಿ ಒಂದು ಟನ್‌ಗೆ 710 ರೂಪಾಯಿ ಕೊಟ್ಟರು, ನಮಗೆ ಟನ್‌ಗೆ 650 ರೂಪಾಯಿ ರೇಟಿನಲ್ಲೇ ಕೊಟ್ಟಿದ್ದಾರೆ. ಆ ಹಣವನ್ನೂ ಇನ್ನೂ ಪೂರ್ಣವಾಗಿ ಚುಕ್ತಾ ಮಾಡಿಲ್ಲ. ಅಲ್ಲಿ ಕಬ್ಬನ್ನು ಬೆಳೆದಂಥ ರೈತರು ಎಲ್ಲಿ ಹೋಗಬೇಕು? ಆದುದರಿಂದ ಸಂಬಂಧಪಟ್ಟ ಜನರನ್ನು ಮತ್ತು ಆ ಭಾಗದ ರೈತಾಪಿ ಜನರನ್ನು ಕರೆಸಿ ಒಂದು ಬೆಲೆಯನ್ನು ತಕ್ಷಣ ನಿಗದಿ ಮಾಡಿಕೊಡಬೇಕು. ಅಕಸ್ಮಾತ್ ಅವರು ಫ್ಯಾಕ್ಟರಿಯನ್ನು ಕಮೆನ್ಸ್ ಮಾಡದಿದ್ದರೆ ಬೇರೆ ಫ್ಯಾಕ್ಟರಿಗೆ ಸಾಗಿಸುವಂಥ ಸಂದರ್ಭದಲ್ಲಿ ಅಂದರೆ ಮಂಡ್ಯ ಮತ್ತಿತರ ಫ್ಯಾಕ್ಟರಿಗಳಲ್ಲಿ ಕಬ್ಬನ್ನು ಪೂರೈಕೆ ಮಾಡುವವರಿಗೆ ಟ್ರಾನ್ಸ್‌ಪೋರ್ಟೇಷನ್ ಸಬ್ಸಿಡಿಯನ್ನು ಆಯಾಯಾ ಫ್ಯಾಕ್ಟರಿಯವರು ಕೊಡಲಿ ಅಥವಾ ಬೇರೆ ಯಾರಾದರೂ ಮಾಡಲಿ. ಏಕೆಂದರೆ ಬೆಲೆಯನ್ನು ಸಮತೋಲನ ಮಾಡಬೇಕಾದರೆ ನಮಗೆ ಸಬ್ಸಿಡಿ ರೂಪದಲ್ಲಿ ಟ್ರಾನ್ಸ್‌ಪೋರ್ಟೇಷನ್ ಚಾರ್ಜ್‌ನ್ನು ಸರ್ಕಾರ ಕಟ್ಟಿಕೊಡಬೇಕಾಗುತ್ತದೆ, ಇಲ್ಲದಿದ್ದರೆ ಫ್ಯಾಕ್ಟರಿಯವರು ಕಟ್ಟಿಕೊಡಬೇಕಾಗುತ್ತದೆ. ಆದುದರಿಂದ ದಯಮಾಡಿ ಆ ಕಾರ್ಖಾನೆಯನ್ನು ತಕ್ಷಣ ಚಾಲೂ ಮಾಡುವಂಥ ವ್ಯವಸ್ಥೆ ಮಾಡಿ ಆ ಭಾಗದ ರೈತರಿಗೆ ಒಳ್ಳೆಯ ಬೆಲೆಯನ್ನು ಕೊಡಿಸಿ ಕೊಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬೆಳಮಗಿ ರೇವುನಾಯಕ್ (ಕಮಲಾಪುರ): ಸನ್ಮಾನ್ಯ ಉಪಾಧ್ಯಕ್ಷರೆ ಅಳಂದ ತಾಲ್ಲೂಕಿನಲ್ಲಿ ಬೂಸನೂರು ಎಂದು ಒಂದು ಸಕ್ಕರೆ ಕಾರ್ಖಾನೆ ಇದೆ. ಆದರೆ ಅದು 1994-95ನೇ ಸಾಲಿನಲ್ಲಿ ನಾಲ್ಕೂವರೆ ಕೋಟಿ ರೂಪಾಯಿ ರೈತರ ಬಾಕಿ ಮೀರಿದೆ. ಇಲ್ಲಿಯವರೆಗೆ ಸರ್ಕಾರ ಮರುಪಾವತಿ ಮಾಡಿಲ್ಲ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ 1994-95ರಲ್ಲಿ ಎಷ್ಟು ಕಬ್ಬು ಅರೆದಿತ್ತೋ ಅಷ್ಟು ಕಬ್ಬು 1995-96ರಲ್ಲಿ ಬರಲಿಲ್ಲ. ಏಕೆಂದರೆ ಆ ರೈತರ ಹಣ ಮರುಪಾವತಿ ಆಗಿಲ್ಲ. ಈ ವರ್ಷ ರೈತರು ಕಬ್ಬನ್ನು ಫ್ಯಾಕ್ಟರಿಗೆ ಹಾಕಿಲ್ಲ. ಅವರು ಕಬ್ಬನ್ನು ಮಹಾರಾಷ್ಟ್ರಕ್ಕೆ ಒಯ್ದರು, ಬೆಲ್ಲ ಮಾಡಿದರು. ಈ ರೀತಿಯಾಗಿ ಆ ಫ್ಯಾಕ್ಟರಿ ಬಂದ್ ಆಗತಕ್ಕಂಥ ಪರಿಸ್ಥಿತಿ ಬಂದಿದೆ. ಅದು ಕೋಟ್ಯಾಂತರ

ರೂಪಾಯಿ ಖರ್ಚು ಮಾಡಿ ಸ್ಥಾಪಿಸಿರುವಂಥ ಒಳ್ಳೆಯ ಕಾರ್ಖಾನೆ. ರೈತರಿಗೆ ಹಣ ಮರುಪಾವತಿಯಾಗದೆ ರೈತರು ಕಬ್ಬು ಹಾಕುತ್ತಿಲ್ಲ, ಇದರಿಂದ ಫ್ಯಾಕ್ಟರಿ ಬಂದ್ ಆಗುತ್ತದೆ ಮತ್ತು ಕೂಲಿ ಕಾರ್ಮಿಕರಿಗೆ ಕೆಲಸ ಕೂಡ ಹೋಗುತ್ತದೆ. ಇಂಥ ಒಂದು ಒಳ್ಳೆಯ ಫ್ಯಾಕ್ಟರಿ ಉಳಿಯಬೇಕಾದರೆ ಮತ್ತು ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕಾದರೆ ರೈತರ ಹಣ ಮರುಪಾವತಿಯಾಗಬೇಕು ಎಂದು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಜನತಾದಳ ಸರ್ಕಾರ ಎಂದರೆ ಅದು ರೈತರ ಸರ್ಕಾರ ಎಂದು ಜನ ಹೇಳಿಕೊಳ್ಳುತ್ತಾರೆ. ಆದರೆ ಜನತಾದಳ ಸರ್ಕಾರ ರೈತರ ವಿರೋಧಿ ಸರ್ಕಾರ ಎಂದು ಕೆಲವು ಜನ ಮಾತನಾಡಿಕೊಳ್ಳುತ್ತಿದ್ದಾರೆ. ಏನೇ ಮಾಡಬೇಕಾದರೂ ತಕ್ಷಣವೇ ಸರ್ಕಾರ ಆ ರೈತರ ಹಣ ಮರುಪಾವತಿ ಮಾಡಬೇಕು ಮತ್ತು ಆ ಕಾರ್ಖಾನೆ ಚಾಲನೆಯಾಗುವಂತೆ ನೋಡಿಕೊಳ್ಳಬೇಕು ಎಂದು ತಮ್ಮ ಮುಖಾಂತರ ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಶ್ರೀಮಾನ್ ಯಡಿಯೂರಪ್ಪನವರು, ಪುಟ್ಟಣ್ಣಯ್ಯನವರು ಹಾಗೂ ನಮ್ಮ ಅನೇಕ ಮಿತ್ರರು ಇದರ ಮೇಲೆ ಮಾತನಾಡಿದ್ದಾರೆ. ನಾನು ಈ ವಿಷಯವಾಗಿ ಪ್ರಸ್ತಾಪ ಮಾಡತಕ್ಕಂಥದ್ದು ಏನೆಂದರೆ ಈಗ ತಾವು ನಿಗದಿ ಮಾಡತಕ್ಕಂಥ ಬೆಲೆ ಏನಿದೆ ಅನೇಕ ಸಾರಿ ಈ ಗಡಿ ಪ್ರದೇಶದಲ್ಲಿರತಕ್ಕಂಥ ರೈತರಿಗೆ ಅದರಿಂದ ಅನ್ಯಾಯವಾಗತಕ್ಕಂಥದ್ದೂ ಕೂಡ ಆಗುತ್ತದೆ. ಇದು ತಮಗೂ ಗೊತ್ತಿದೆ. ವಿಶೇಷವಾಗಿ ಗುಲ್ಬರ್ಗಾ, ಬಿಜಾಪುರ, ಬೆಳಗಾಂ ಈ ಭಾಗದಲ್ಲಿರತಕ್ಕಂಥ ಕಬ್ಬು ಬೆಳೆಗಾರರು ಅನೇಕ ಬಾರಿ ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಕಾರಣ ಮಹಾರಾಷ್ಟ್ರದಲ್ಲಿರತಕ್ಕಂಥ ಸಕ್ಕರೆ ಕಾರ್ಖಾನೆಯಲ್ಲಿ ಅರೆಯತಕ್ಕಂಥ ಕಬ್ಬನ್ನು ಮತ್ತು ಅವರು ನಿಗದಿ ಮಾಡತಕ್ಕಂಥ ಬೆಲೆ ಹಾಗೂ ಇದರ ಜೊತೆಗೆ ಅನೇಕ ಕಾರ್ಖಾನೆಗಳಲ್ಲಿ ಕಬ್ಬಿನ ಕೊರತೆ ಇದ್ದಾಗ ಅವರು ನೇರವಾಗಿ ಲಾರಿಗಳನ್ನು ಕಳುಹಿಸಿ ಇಲ್ಲಿಂದ ಕಬ್ಬನ್ನು ತೆಗೆದುಕೊಂಡು ಹೋಗಿ ಅರೆಯತಕ್ಕಂಥದ್ದು ತಮ್ಮೆಲ್ಲರಿಗೂ ಗೊತ್ತಿದೆ, ಮಾನ್ಯ ಮಂತ್ರಿಗಳಿಗೂ ಕೂಡ ಗೊತ್ತಿದೆ. ಏಕೆಂದರೆ ಇದರ ಬಗ್ಗೆ ಅವರಿಗೆ ಸಾಕಷ್ಟು ಅನುಭವ ಇದೆ. ಅದರಿಂದ ಏನಾಗುತ್ತಿದೆ ಎಂದರೆ ಕೆಲವು ಸಲ ಗಡಿ ಭಾಗದಲ್ಲಿರುವ ಕಾರ್ಖಾನೆ ಅದು ಹಳ್ಳಿಖೇಡ್ ಫ್ಯಾಕ್ಟರಿ ಇರಬಹುದು ಅಥವಾ ಅಳಂದ ಸಕ್ಕರೆ ಕಾರ್ಖಾನೆ ಇರಬಹುದು ಅಥವಾ ಈಗ ಹೊಸದಾಗಿ ಬೀದರ್‌ನಲ್ಲಿ ಸ್ಥಾಪನೆ ಮಾಡಿರುವಂಥ ಸಕ್ಕರೆ ಕಾರ್ಖಾನೆ ಕುಸಿದು ಬಿದ್ದಿದೆ. ಎಷ್ಟೇ ಪ್ರಯತ್ನ ಮಾಡಿದರೂ ಅದು ಮೇಲೇಳುತ್ತಿಲ್ಲ. ಸರ್ಕಾರ ಹಣ ಕೊಟ್ಟರೂ ಕೂಡ ಅದಕ್ಕೆ ಆಸಕ್ತಿ ವಹಿಸಿ ಇವ್ವೊತ್ತು ಡೆಪ್ಯುಟಿ ಕಮಿಷನರ್‌ರವರು ಕೆಲಸ ಮಾಡುತ್ತಿಲ್ಲ. ಸರ್ಕಾರ ಕೂಡ ಆ ಕಡೆ ಮನಸ್ಸು ಮಾಡುತ್ತಿಲ್ಲ. ನಾವು ನಮ್ಮ ಕಬ್ಬು ಹೆಚ್ಚಾಗಿದೆ ಎಂದು ಹೇಳಿ ಅದನ್ನು ಒಯ್ದು ಮಹಾರಾಷ್ಟ್ರಕ್ಕೆ ಹಾಕುತ್ತೇವೆ, ಲಾತ್ತೂರಿಗೆ ಕಳುಹಿಸುತ್ತೇವೆ, ಉಸ್ಮಾನಾಬಾದ್‌ಗೆ, ಸಾಂಗ್ಲಿಗೆ, ಕೊಲ್ಲಾಪುರಕ್ಕೆ ಕೂಡ ಕಳುಹಿಸುತ್ತೇವೆ. ಆದರೆ ಅಲ್ಲಿರತಕ್ಕಂಥ ಕಾರ್ಖಾನೆಗೆ ಇವ್ವೊತ್ತು 10 ಕೋಟಿ ರೂಪಾಯಿಯನ್ನು ಸರ್ಕಾರದವರು

ಕೊಟ್ಟರೂ ಕೂಡ ಅದಕ್ಕೆ ಸರ್ಕಾರದ ವತಿಯಿಂದ ನಮ್ಮ ನಬಾರ್ಡ್ ಆಗಲೀ ಅಥವಾ ಯಾವುದೇ ಒಂದು ಬ್ಯಾಂಕ್‌ನಿಂದ ಸಾಲವನ್ನು ಪಡೆದುಕೊಂಡು ಆ ಕಾರ್ಖಾನೆಯನ್ನು ಕಟ್ಟಿ ಮುಗಿಸಬೇಕು ಎನ್ನತಕ್ಕಂಥ ಪ್ರಯತ್ನ ಇವೊತ್ತು ಡೆಪ್ಯುಟಿ ಕಮಿಷನರ್ ವತಿಯಿಂದ ಆಗುತ್ತಿಲ್ಲ. ಇದು ಏತಕ್ಕೆ ಆಗುತ್ತಿಲ್ಲ ಎಂದು ಗೊತ್ತಿಲ್ಲ. ಆ ಪ್ರಯತ್ನವನ್ನು ಶ್ರೀ ಗುರುಪಾದಪ್ಪ ನಾಗಮಾರಪಲ್ಲಿಯವರೂ ಆಸಕ್ತಿ ವಹಿಸಿ ಮಾಡಬಹುದಾಗಿತ್ತು. ಇದರಿಂದ ಏನಾಗಿದೆ ಎಂದರೆ ನಮ್ಮ ಕಬ್ಬು ಹೊರಗಡೆ ಹೋಗತಕ್ಕಂಥದ್ದು ಮತ್ತು ಆಮೇಲೆ ನಮ್ಮ ರೈತರು ಯಾವ ರೀತಿ ಅವರ ಮೇಲೆ ಅವಲಂಬಿತರಾಗುತ್ತಾರೆ ಎಂದರೆ ಮಹಾರಾಷ್ಟ್ರದ ಕಾರ್ಖಾನೆಗಳು ಒಂದು ವೇಳೆ ಅವರ ಹತ್ತಿರ ಕಡಿಮೆ ಕಬ್ಬು ಇದ್ದಾಗ ಮಾತ್ರ ನಮಗೆ ಅನುಮತಿ ಕೊಟ್ಟು ಕಬ್ಬನ್ನು ಖರೀದಿ ಮಾಡುತ್ತಾರೆ. ಅವರಲ್ಲಿ ಸರ್‌ಪ್ಲಸ್ ಇತ್ತು ಎಂದರೆ ಇದನ್ನು ಕಡೆಗಣಿಸುತ್ತಾರೆ. ಅದರಿಂದ ಏನಾಗಿದೆ ಎಂದರೆ ಈ ಭಾಗದಲ್ಲಿ ಸಾಕಷ್ಟು ಅನ್ಯಾಯವಾಗುವ ಸಾಧ್ಯತೆ ಇದೆ. ಅದು ತಮಗೂ ಕೂಡ ಗೊತ್ತಿದೆ. ಅತ್ಯಂತ ಕಡಿಮೆ ಕಬ್ಬನ್ನು ಬೆಳೆಯತಕ್ಕಂಥ ಉಡುಪಿ ಕ್ಷೇತ್ರದಲ್ಲಿರುವ ಕಾರ್ಖಾನೆ ಅತ್ಯಂತ ಲಾಸ್‌ನಲ್ಲಿ ಮೊದಲು ನಡೆಯುತ್ತಿತ್ತು ಅದು ಇವೊತ್ತು ನಷ್ಟವೂ ಇಲ್ಲ, ಲಾಭವೂ ಇಲ್ಲದ ಮಟ್ಟದಲ್ಲಿ ನಡೆಯುತ್ತಿದೆ. ಅವರು ಶಿವಮೊಗ್ಗದಿಂದ ಕಬ್ಬನ್ನು ಒಯ್ಯುತ್ತಾರೆ, ಬೇರೆ ಬೇರೆ ಪ್ರದೇಶಗಳಿಂದ ಕಬ್ಬನ್ನು ಒಯ್ದು ಅರೆದು ಆ ಕಾರ್ಖಾನೆ ಇವೊತ್ತು ಲಾಭದಲ್ಲಿ ನಡೆಯಬೇಕು ಎಂದಾಗ ನಮ್ಮಲ್ಲಿ ಹೆಚ್ಚಿನ ಕಬ್ಬನ್ನು ಬೆಳೆದು ಅನೇಕ ರೈತರು ಸುಟ್ಟು ಹಾಕಿ ಅಥವಾ ಅದಕ್ಕೆ ಸರಿಯಾದ ಬೆಲೆ ಸಿಗಲಿಲ್ಲ ಎಂದು ಬೆಲ್ಲ ಮಾಡಿಕೊಂಡು ಕೆಲವು ಸಲವಂತೂ ಖಂಡಸಾರಿಯವರಿಗೆ ಕೊಟ್ಟಿದ್ದಾರೆ. ಅವರು ಯಾವ ರೀತಿ ತೂಕದಲ್ಲಿ ಮೋಸ ಮಾಡುತ್ತಾರೆ ಎಂಬುದು ತಮಗೆ ಗೊತ್ತಿದೆ. ನಿರ್ದಿಷ್ಟವಾಗಿ ಗಡಿ ಭಾಗದಲ್ಲಿ ಈ ಖಂಡಸಾರಿಯವರು ಬೀದರ್‌ನ ಹುಮ್ನಾಬಾದ್, ಹಳ್ಳಿಖೇಡ್, ಮಾನಹಳ್ಳಿಯಲ್ಲಿ ಈ ರೀತಿ ಮಾಡುತ್ತಿದ್ದಾರೆ. ಅದಕ್ಕೆ ಅವರಿಗೆ ಕೂಡ ನೀವು ಕಡಿವಾಣ ಹಾಕಬೇಕಾಗುತ್ತದೆ. ಅಲ್ಲದೆ ಅವರಿಗೂ ಕೂಡ ಒಂದು ಬೆಲೆಯನ್ನು ನಿಗದಿ ಮಾಡಿ ಇದೇ ಬೆಲೆಗೆ ನೀವು ತೆಗೆದುಕೊಳ್ಳಬೇಕು, ಇಲ್ಲದಿದ್ದರೆ ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ನಿಯಮ ಮಾಡದೆ ಹೋದರೆ ರೈತರಿಗೆ ತೊಂದರೆಯಾಗುತ್ತದೆ. ಇಲ್ಲದಿದ್ದರೆ ಅವರು ಖಂಡಸಾರಿಯನ್ನು ಮುಚ್ಚಿಕೊಳ್ಳಲಿ. ಅವರು ಏನು ಮಾಡುತ್ತಾರೆ ಎಂದರೆ ಅವರ ತೂಕದಲ್ಲೂ ಮೋಸ ಜೊತೆಗೆ ವಿಶೇಷವಾಗಿ ಅಕ್ಕಪಕ್ಕದ ಹಳ್ಳಿಯವರು ಎತ್ತಿನ ಗಾಡಿಯ ಮೇಲೆ ಕಬ್ಬನ್ನು ತರುತ್ತಾರೆ, ಅವರನ್ನು ಅಲ್ಲಿ ಎರಡು ಮೂರು ದಿವಸ ಅಲ್ಲೇ ಇಟ್ಟುಕೊಂಡು ನಂತರ ಕಬ್ಬು ಒಣಗಿ ಹೋದ ಮೇಲೆ ತೂಕವೂ ಕಡಿಮೆಯಾಗುತ್ತದೆ. ಹೀಗಾಗಿ ಅವರಿಗೆ ಖಂಡಸಾರಿಯವರು ತೊಂದರೆ ಕೊಡುತ್ತಿದ್ದಾರೆ. ಅದಕ್ಕೆ ದಯಮಾಡಿ ಇದರ ಬಗ್ಗೆ ಪ್ರತಿ ಸಲ ಒಂದು ಮೀಟಿಂಗ್ ಮಾಡಿ. ಪ್ರತಿ ಸಲ ನಾವೂ ಸಹ ಈ ಸದನದಲ್ಲಿ ಅನೇಕ ಸಲ ಈ ಪ್ರಸ್ತಾವವನ್ನು ಎತ್ತಿದ್ದೇವೆ. ಆದರೆ ಒಂದು ಟೈಮ್ ಫಿಕ್ಸ್ ಮಾಡಿ ನೀವು ಯಾವ ರೀತಿ ವೃತ್ತಿಪರ ಕಾಲೇಜು ಅಥವಾ ಬೇರೆ ಕಾಲೇಜುಗಳಲ್ಲಿ ಅಡ್ಮಿಷನ್ ಮಾಡುವುದಕ್ಕಾಗಿ ಸಿ.ಇ.ಟಿ ಪರೀಕ್ಷೆಯನ್ನು ಮೊದಲೇ ನಡೆಸುತ್ತೀರೋ ಅದೇ

ರೀತಿ ಇದನ್ನೂ ಕೂಡ ಈ ವರ್ಷ, ಈ ತಿಂಗಳಿನ ಈ ಡೇಟ್‌ಗೆ ಎಂದು ಅಥವಾ ಜೂನ್ ತಿಂಗಳ ಮೊದಲ ವಾರದಲ್ಲಿ ಯಾವುದೋ ಒಂದು ದಿನಾಂಕ ನಿಗದಿ ಮಾಡಿ ಅದರೊಳಗಾಗಿ ಈ ರೇಟನ್ನು ಕೊಡಲೇಬೇಕು ಎನ್ನುವುದನ್ನು ಫಿಕ್ಸ್ ಮಾಡಿ ನೋಟಿಫಿಕೇಷನ್ ಮಾಡಿದರೆ ಈ ತೊಂದರೆಯೂ ಇರುವುದಿಲ್ಲ ಮತ್ತು ಹಣದ ವ್ಯವಸ್ಥೆಯನ್ನೂ ಕೂಡ ಕಾರ್ಖಾನೆಯವರು ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಅನೇಕ ಕಾರ್ಖಾನೆಯವರು ಏನು ಮಾಡುತ್ತಾರೆ ಎಂದರೆ ಅವರು ನೋಡುತ್ತಿರುತ್ತಾರೆ, ಸರ್‌ಪ್ಲಸ್ ಆದಾಗ ರೇಟನ್ನು ಮತ್ತೆ ಡೌನ್ ಮಾಡುತ್ತಾರೆ. ಆಗ ರೈತರು ನಿರ್ವಾಹವಿಲ್ಲದೆ ಕಬ್ಬನ್ನು ಸುಡುವುದಕ್ಕಿಂತಲೂ ಸುಮ್ಮನೆ ಪುಕ್ಕಟೆಯಾಗಿ ತೆಗೆದುಕೊಳ್ಳಿ ಎಂದು ಹೇಳಿ ಅವರಿಗೆ ಕಬ್ಬನ್ನು ಕೊಟ್ಟು ಎರಡೆರಡು ವರ್ಷ ತಿರುಗಿ ಅವರ ಹತ್ತಿರ ದುಡ್ಡು ತೆಗೆದುಕೊಂಡಂಥ ಉದಾಹರಣೆಗಳಿವೆ. ವಿಶೇಷವಾಗಿ ಗಡಿ ಭಾಗದಲ್ಲಿ ಇರುವ ರೈತರಿಗೆ ಈ ರೀತಿ ಸಾಕಷ್ಟು ತೊಂದರೆ ಇದೆ. ಆ ತೊಂದರೆಯನ್ನು ದಯಮಾಡಿ ನಿವಾರಣೆ ಮಾಡಲು ಸರ್ಕಾರ ನೇರವಾಗಿ ಮಹಾರಾಷ್ಟ್ರ ಸರ್ಕಾರದ ಜೊತೆಯಲ್ಲಿ ಮಾತನಾಡಿ ಅಲ್ಲಲ್ಲಿ ನಮ್ಮ ಕಬ್ಬನ್ನು ನೇರವಾಗಿ ಅವರಿಗೆ ಸಮೀಪವಾಗತಕ್ಕಂಥ ಜಾಗಕ್ಕೆ ತೆಗೆದುಕೊಂಡು ಹೋಗಿ ಕಡಿಮೆ ಖರ್ಚು ಬೀಳುವ ಜಾಗದಲ್ಲಿ ಬೇಕಾದರೆ ಅದೇ ರೇಟ್‌ನಲ್ಲಿ ತೆಗೆದುಕೊಳ್ಳುವಂಥದನ್ನು ಕೂಡ ಮಾಡಿದರೆ ನಮ್ಮ ಜನರಿಗೆ ತಾಪತ್ರಯ ಇಲ್ಲ. ಏಕೆಂದರೆ ರೈತರಿಗೆ ಒಂದು ನಿಗದಿತ ಬೆಲೆ ಸಿಗಬೇಕು. ಅದನ್ನು ದಯಮಾಡಿ ತಾವು ಮಾಡಬೇಕು ಎಂದು ಈ ಸಂದರ್ಭದಲ್ಲಿ ಕೇಳುತ್ತಾ ಖಂಡಸಾರಿ ಫ್ಯಾಕ್ಟರಿಯವರ ಮೇಲೆ ಕೂಡ ತಮ್ಮ ನಿಗಾ ಇರಬೇಕು. ಅದರ ಬಗ್ಗೆ ಕೂಡ ಖಂಡಿತವಾಗಿ ಕಾರ್ಯಕ್ರಮವನ್ನು ಹಾಕಿಕೊಂಡು ಅವರ ಮೇಲೆ ಕಟ್ಟುನಿಟ್ಟಿನ ಕಾನೂನನ್ನು ಆಚರಣೆ ಮಾಡದೆಹೋದರೆ ಅವರು ಮೋಸ ಮಾಡುವುದು ಸಹಜ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಬೀದರ್‌ನ ನಾರಂಜ ಸಹಕಾರಿ ಸಕ್ಕರೆ ಕಾರ್ಖಾನೆ ತಮ್ಮ ಅಧೀನದಲ್ಲಿದೆ ಅದನ್ನು ಪ್ರಾರಂಭ ಮಾಡುವುದಕ್ಕೆ ಸರ್ವ ಪ್ರಯತ್ನವನ್ನೂ ತಾವು ಮಾಡಬೇಕು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು): ಈಗ ಸಕ್ಕರೆ ಕಾರ್ಖಾನೆಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಇಲ್ಲಿ ಚರ್ಚೆ ಮಾಡಲಾಗಿರುವ ವಿಚಾರ ಶೇಕಡ 40 ರಷ್ಟು ಸಕ್ಕರೆಯನ್ನು ಕೇಂದ್ರ ಸರ್ಕಾರದವರು ಲೆವಿ ಎಂದು ನಿಗದಿಪಡಿಸುತ್ತಾರೆ. ಅದನ್ನು ಕಾರ್ಖಾನೆಯವರು ಸರ್ಕಾರದ ಪರವಾಗಿ ಸ್ಟಾಕ್ ಇಟ್ಟುಕೊಳ್ಳುತ್ತಾರೆ. ಅವರಿಗೆ ಅದಕ್ಕೆ ಬೇಕಾಗಿರುವಂಥ ಬಂಡವಾಳ ಅಥವಾ ಬಂಡವಾಳದ ಮೇಲಿನ ಬಡ್ಡಿಯನ್ನು ಸರ್ಕಾರ ಸಕ್ಕರೆ ಕಾರ್ಖಾನೆಗಳಿಗೆ ಸಂದಾಯ ಮಾಡುತ್ತದೆಯೋ ಇಲ್ಲವೋ ಗೊತ್ತಿಲ್ಲ. ಏಕೆಂದರೆ ನಮ್ಮ ಕಡೆ ಸಕ್ಕರೆ ಕಾರ್ಖಾನೆಗಳಿಲ್ಲ. ಆ ಕಾರಣದಿಂದ ನನಗೆ ಗೊತ್ತಿರುವ ಪ್ರಕಾರ ಇವೊತ್ತು ಸಕ್ಕರೆ ದಾಸ್ತಾನನ್ನು ಕೇಂದ್ರ ಸರ್ಕಾರದ ಪರವಾಗಿ ಇಟ್ಟುಕೊಂಡಿರುವ ಕಾರಣದಿಂದ ಸಕ್ಕರೆ ಕಾರ್ಖಾನೆಗಳು ನಷ್ಟವನ್ನು ಅನುಭವಿಸಬಹುದು ಎಂಬುದು ನನ್ನ ಭಾವನೆ.

12.40 ಪಿ.ಎಂ

ಇದರಿಂದ ರೈತರಿಗೂ ಸಹ, ಅವರೇನು ಕಬ್ಬಿನಬೆಲೆಯನ್ನು ನಿಗದಿಪಡಿಸುತ್ತಾರೆ, ಅದನ್ನೂ ಸಹ ನಿಗದಿಪಡಿಸುತ್ತಾರೆ. ಸಕ್ಕರೆ ಕಾರ್ಖಾನೆಯವರು ಲಾಭ ನಷ್ಟ ನೋಡಿಕೊಂಡು, ಕಬ್ಬಿನ ಬೆಲೆಯನ್ನು ನಿಗದಿಪಡಿಸುತ್ತಾರೆ. ಈ ಸಮಸ್ಯೆ ದೇಶವ್ಯಾಪ್ತಿಯಾಗಿರತಕ್ಕಂಥ ಸಮಸ್ಯೆ. ಇದರಿಂದ ಅಂತಿಮವಾಗಿ ಯಾರಿಗೆ ತೊಂದರೆಯಾಗುತ್ತದೆ, ಯಾರಿಗೆ ಅನಾನುಕೂಲವಾಗುತ್ತದೆ, ಯಾರು ನಷ್ಟ ಅನುಭವಿಸುತ್ತಾರೆಂದರೆ, ರೈತ. ಇದೇ ಮಾನದಂಡದ ಪ್ರಕಾರ ದೇಶಾದ್ಯಂತ ಭತ್ತದ ಮೇಲೆ ಕೂಡ ಲೆವಿ ಹಾಕತಕ್ಕಂಥ ಪದ್ಧತಿ ಇವತ್ತಿನ ದಿವಸ ಇದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಲೆವಿ ಪದ್ಧತಿ, ಅದು ಗುಲಾಮಗಿರಿ ಪದ್ಧತಿ...

ಶ್ರೀ ಸಿ.ಬೈರೇಗೌಡ: ಅದನ್ನು ಆಮೇಲೆ ಮಾತನಾಡೋಣ. ಅದರಿಂದ ಇದರ ಬಗ್ಗೆ ತಮ್ಮ ಅನಿಸಿಕೆ ಏನು ಎನ್ನತಕ್ಕಂಥಾದ್ದನ್ನು ಹೇಳಬೇಕು. ಏಕೆಂದರೆ, ಯಾವ ರಂಗದಲ್ಲೂ ಇಲ್ಲದೇ ಇರತಕ್ಕಂಥಾದ್ದು. ಯಾವ ರಂಗದಲ್ಲೂ ಇಲ್ಲದೇ ಇರತಕ್ಕಂಥಾದ್ದನ್ನು, ಕೃಷಿ ರಂಗದಲ್ಲಿ ಈ ಲೆವಿ ಪದ್ಧತಿಯನ್ನು ಜಾರಿ ಮಾಡತಕ್ಕ ನೀತಿ ಸರಿಯೇ ಅಥವಾ ಏನು ಎಂಬ ಬಗ್ಗೆ ತಮ್ಮ ಅಭಿಪ್ರಾಯವನ್ನು ವಯವಿಟ್ಟು ವ್ಯಕ್ತಪಡಿಸಿದರೆ, ದೇಶದ ರೈತರ ದೃಷ್ಟಿಯಿಂದ ವ್ಯಕ್ತಪಡಿಸಿದರೆ, ನಾನು ತಮಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದು ಎರಡೂ ಕೂಡ ಇದೆ. ಒಂದು ಕಡೆ ರೈತರದು ಇದೆ, ಇನ್ನೊಂದು ಕಡೆ ಕನ್‌ಸ್ಯೂಮರ್‌ದ್ದೂ ಇದೆ. ಸರ್ಕಾರದ ಮೇಲೆ, ಎರಡೂ ಬ್ಯಾಲೆನ್ಸ್ ಮಾಡತಕ್ಕಂಥಾದ್ದು ಆಗಲೇಬೇಕು. ಲೆವಿ ಮಾಡತಕ್ಕಂಥಾದ್ದು, ಏಕೆ ಮಾಡುತ್ತೇವೆ? ಈಗ ಪ್ಯಾಡಿ ಕಲೆಕ್ಷನ್ ಮಾಡುತ್ತೇವೆ. ಪಿ.ಡಿ.ಎಸ್. ಏಕೆ ಇಡುತ್ತೇವೆ. ನ್ಯಾಚುರಲಿ ಪಿ.ಡಿ.ಎಸ್.ಗೆ ಎಲ್ಲಿಂದ ಬರುತ್ತದೆ? ಲೆವಿಯಿಂದ ಕಲೆಕ್ಟ್ ಮಾಡಿದಂಥ ನಮ್ಮ ಪ್ಯಾಡಿಯಾಗಲೀ, ಜೋಳವಾಗಲೀ ಅಥವಾ ಸಕ್ಕರೆಯಾಗಲೀ, ಅದರ ಮುಖಾಂತರ ನಾವು ಹಂಚುತ್ತೇವೆ. ಅಂದರೆ, ನಾವು ರೈತರ ದೃಷ್ಟಿಯನ್ನೂ ನೋಡಿಕೊಳ್ಳಬೇಕು, ಅದೇ ವೇಳೆಯಲ್ಲಿ ಈ ದೇಶದಲ್ಲಿರತಕ್ಕ ಬಡ ಜನರ ಬಗ್ಗೆಯೂ ಅನುಕಂಪ ಇಟ್ಟುಕೊಂಡು ಕೆಲಸ ಮಾಡಬೇಕು. ನಿಮ್ಮ ಒಂದು ಮಾತನ್ನು ಒಪ್ಪುತ್ತೇನೆ. ಕೇಂದ್ರಸರ್ಕಾರದವರು ಏನು ಮಾಡುತ್ತಾರೆಂದರೆ, ಷುಗರ್ ಫ್ಯಾಕ್ಟರಿಗಳಿಗೆ ಲೆವಿ ಕಲೆಕ್ಟ್ ಮಾಡುವಂಥಾದ್ದು, ಇಡೀ ಸಕ್ಕರೆಯನ್ನು ಅವರ ಹತ್ತಿರ ಹೆಚ್ಚುಕಡಿಮೆ ಮಾರ್ಟಗೇಜ್ ಮಾಡಿದಹಾಗೆ. ಅವರು ಯಾವಾಗ, ಯಾವಾಗ ಪರ್ಮಿಷನ್ ಕೊಡುತ್ತಾರೋ, ಆಗ ತೆಗೆದುಕೊಂಡು ಇವರು ಮಾರಾಟ ಮಾಡಬೇಕು ಇಲ್ಲವೇ ಹಣ ಬರಬೇಕು. ಆಗ ಮಾತ್ರ ಅನೇಕ ಕಾರ್ಖಾನೆಗಳಿಗೆ ಕೊಡುವುದಕ್ಕೆ ಅವಕಾಶವಾಗುತ್ತದೆ. ಇಲ್ಲದೇಹೋದರೆ, ಅವರು ವರ್ಷಾನುಗಟ್ಟಲೆ ಅನುಮತಿ ಕೊಡಲಿಲ್ಲವೆಂದರೆ, ಬ್ಯಾಂಕಿನಿಂದ ಬಡ್ಡಿಯ ಮೂಲಕ ತಂದಂಥ ಹಣ ರೈತರಿಗೆ ಕೊಟ್ಟು, ಆಮೇಲೆ ಅದು

ಹೊರಕ್ಕೆ ಬಿಟ್ಟರೂ ಕೂಡ, ಆ ಬಡ್ಡಿಗೆ ಮತ್ತು ಈಗ ಇದ್ದಂಥ ಬೆಲೆಗೆ ಹೋಲಿಸಿದಾಗ ಅನೇಕಸಾರಿ ಲಾಸ್ ಆಗುತ್ತದೆ. ಆದರೆ, ಇದರ ಬಗ್ಗೆ ರಾಷ್ಟ್ರಮಟ್ಟದಲ್ಲಿ ಯೋಚನೆ ಮಾಡಲೇಬೇಕಾಗುತ್ತದೆ. ಮತ್ತು ಕಟ್ಟುನಿಟ್ಟಾಗಿ ಇದರ ಬಗ್ಗೆ ನಾವು ಸೆಂಟ್ರಲ್ ಅಗ್ರಿಕಲ್ಚರ್ ಮಿನಿಸ್ಟರಿಗೂ ಹೇಳಬೇಕು. ಕೇಂದ್ರದಲ್ಲಿ ಪ್ರಗತಿಪರವಾದ ಪಕ್ಷದಿಂದ ಬಂದಂಥ ಮಂತ್ರಿಗಳು ಇದ್ದಾರೆ; ಸನ್ಮಾನ್ಯ ಮಿಶ್ರಾರವರು. ಬಹುಶಃ ಇದರ ಬಗ್ಗೆ ಅವರು ಚಿಂತನೆ ಮಾಡಬಹುದು ಎಂದು ತಿಳಿದುಕೊಂಡಿದ್ದೇನೆ. ಏಕೆಂದರೆ, ಅವರಿಗೂ ಕೂಡ ಎರಡೂ ಲಕ್ಷ್ಯದಲ್ಲಿರುತ್ತದೆ. ಕಮ್ಯುನಿಸ್ಟ್ ಪಾರ್ಟಿ ಬ್ಯಾಕ್‌ಗ್ರೌಂಡ್‌ನಿಂದ ಒಂದು ಕಡೆ ಕನ್ಸ್ಯೂಮರ್ ಅಥವಾ ಏನು ಬಡವರಿದ್ದಾರೆ ಅವರ ಬಗ್ಗೆ ಚಿಂತನೆಯೂ ಇರುತ್ತದೆ, ಇನ್ನೊಂದು ಕಡೆ ರೈತರ ಬಗ್ಗೆ ಚಿಂತನೆ ಮಾಡತಕ್ಕ ಸಾಮರ್ಥ್ಯ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕೆ ರಾಜ್ಯಸರ್ಕಾರದವರೂ ಕೂಡ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ, ಡೆಲಿಗೇಷನ್ ಮುಖಾಂತರ ಹೋಗಿ ಅಥವಾ ತಾವು ಅನೇಕಸಾರಿ ಡೆಲ್ಲಿಗೆ ಹೋಗುತ್ತೀರಿ. ಆಗ, ಇದರ ಬಗ್ಗೆ ಒತ್ತಾಯ ಮಾಡಿ, ಏಕೆಂದರೆ, ಇದು ಇಡೀ ದೇಶದ ಸಮಸ್ಯೆ ಇದೆ. ಇದನ್ನು ಬಗೆಹರಿಸತಕ್ಕ ಪ್ರಯತ್ನ ಮಾಡಬೇಕು, ಅದನ್ನು ನಾನು ಒಪ್ಪುತ್ತೇನೆ. ಆದರೆ, ಇದರ ಜೊತೆಯಲ್ಲಿ ನಮ್ಮ ಜವಾಬ್ದಾರಿಯನ್ನು ಕೂಡ ನಿರ್ವಹಿಸಬೇಕಲ್ಲಾ. ಈ ಖಂಡಸಾರಿಗಳಿಗೆ ಬೆಲೆ ಇಲ್ಲ ಎಂದು ನೂರಾರು ಜನ ನಮ್ಮ ಕಡೆ ಹೋಗುತ್ತಾರೆ; ನಿಮ್ಮ ಕಡೆ ಇಲ್ಲ. ನಮ್ಮ ಕಡೆ ಎಂದರೆ, ವಿಶೇಷವಾಗಿ ಬೀದರ್‌ನಲ್ಲಿ, ಭಾಲ್ಕಿಯಲ್ಲಿ, ಹುಮ್ನಾಬಾದ್ ತಾಲ್ಲೂಕಿನಲ್ಲಿ, ಖಂಡಸಾರಿ ಎಷ್ಟೊಂದು ಇವೆ, ನೀವು ಹೇಳುವುದಕ್ಕೆ ಸಾಧ್ಯವಿಲ್ಲ. ಅವರೇನು ಮಾಡುತ್ತಾರೆಂದರೆ, ಕೆಲವುಸಾರಿ ಟೆಮ್ಪ್ ಮಾಡಿ ಅಡ್ವಾನ್ಸ್ ಕೊಡುತ್ತಾರೆ. ಆದರೆ, ಅವರ ತೂಕ ನೋಡಿದಾಗ ನಾವು 10 ಟನ್ ತೆಗೆದುಕೊಂಡು ಹೋದರೆ, ಅಲ್ಲಿ 9 ಟನ್ನೇ ಆಗುತ್ತದೆ. ಅವರು ಎಲ್ಲದರಲ್ಲೂ ಮೋಸ ಮಾಡುತ್ತಾರೆ. ಅದಕ್ಕಾಗಿ ದಯವಿಟ್ಟು, ಅದನ್ನು ಸರಿಪಡಿಸುವುದಕ್ಕೆ ಮಾಡತಕ್ಕಂಥಾದ್ದು ಒಂದು ಕೇಂದ್ರಸರ್ಕಾರದ ಜೊತೆಯಲ್ಲೂ ನಾವು ಸಮಾಲೋಚನೆ ಮಾಡಿ, ಈ ಪ್ರಶ್ನೆಯನ್ನು ಬಗೆಹರಿಸಬೇಕು. ಇಲ್ಲವಾದರೆ ಒಳ್ಳೆಯರೀತಿಯಲ್ಲಿ ನಡೆದಂಥ ಕಾರ್ಖಾನೆಗಳಿಗೂ ತೊಂದರೆಯಾಗುತ್ತದೆ. ಇವತ್ತು ನಾಳೆ ಲಾಭ ನಷ್ಟ ಇಲ್ಲದೇ ನಡೆಯುವ ಕಾರ್ಖಾನೆಗಳಿಗಂತೂ ಇನ್ನೂ ತೊಂದರೆ. ಯಾರ ಹತ್ತಿರ ಸ್ವಲ್ಪ ಡಿಪಾಸಿಟ್ ಇದೆ, ಬ್ಯಾಂಕ್ ಬ್ಯಾಲೆನ್ಸ್ ಇದೆ, ಸಂಕೇಶ್ವರ ಫ್ಯಾಕ್ಟರಿ, ನಡೆಯಬಹುದು. ಸ್ವಲ್ಪ ಸಸ್ಟೈನ್ ಮಾಡುವ ಶಕ್ತಿ ಇದೆ. ಚಿಕ್ಕೋಡಿ ಫ್ಯಾಕ್ಟರಿ ನಡೆಯಬಹುದು. ಆ ಭಾಗದಲ್ಲಿ ಸ್ವಲ್ಪ ನಡೆಯಬಹುದು. ಆದರೆ, ನಮ್ಮ ಹಳ್ಳಿಖೇಡ್ ಷುಗರ್ ಫ್ಯಾಕ್ಟರಿ ತೆಗೆದುಕೊಳ್ಳಿ, ಈ ಕಡೆಯ ಫ್ಯಾಕ್ಟರಿಗಳಂತೂ ಮುಳುಗಿಯೇ ಹೋಗಿವೆ. ಯಾವುವು ಎಂದರೆ, ಚಿಕ್ಕಬಳ್ಳಾಪುರ, ಗೌರಿಬಿದನೂರು, ಹಿರಿಯೂರು, ಕೊಳ್ಳೇಗಾಲ ಇವೆಲ್ಲಾ ಮುಳುಗಿಹೋಗಿವೆ. ಬಾಕಿ ಷುಗರ್ ಫ್ಯಾಕ್ಟರಿಗಳು ಚೆನ್ನಾಗಿ ನಡೆಯುತ್ತವೆ ಎಂದು ಯಡಿಯೂರಪ್ಪನವರು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಬಹುಶಃ ಅವುಗಳನ್ನು ನೋಡಬೇಕು ಎಷ್ಟರಮಟ್ಟಿಗೆ ನಡೆಯುತ್ತಿವೆ ಎಂದು. ಇವತ್ತಿನದಿವಸ ನಡೆದಂಥ

ಫ್ಯಾಕ್ಟರಿಗಳು ಲಾಸ್ ಆಗದ ರೀತಿಯಲ್ಲಿ ನೋಡಿಕೊಳ್ಳಬೇಕು. ಒಂದು ಮಾತನ್ನು ಹೇಳುತ್ತೇನೆ. ಕೇಂದ್ರ ಸರ್ಕಾರದವರು ಬೇಗನೆ ಷುಗರನ್ನು ಬಿಡುಗಡೆ ಮಾಡದೇ ಇದ್ದಾಗ, ಲಾಸ್ ಖಂಡಿತವಾಗಿಯೂ ಆ ಫ್ಯಾಕ್ಟರಿಗೆ ಆಗುತ್ತದೆ. ಅದು ಹ್ಯೂಮನ್ ಮೇಡ್ ಲಾಸ್. ನಮ್ಮ ವತಿಯಿಂದ ಆಗಿದ್ದು. ಅದು ರೈತರ ವತಿಯಿಂದ ಅಲ್ಲ, ಅಥವಾ ಫ್ಯಾಕ್ಟರಿ ವತಿಯಿಂದ ಅಲ್ಲ. ಏಕೆಂದರೆ, ನಾವು ತೀರ್ಮಾನ ತೆಗೆದುಕೊಳ್ಳತಕ್ಕಂಥಾದ್ದನ್ನು ವಿಳಂಬ ಮಾಡುತ್ತೇವೆ. ಕೇಂದ್ರಸರ್ಕಾರದವರು ಬಿಡುಗಡೆ ಮಾಡುವುದರಲ್ಲಿ ತಡ ಮಾಡುತ್ತಾರೆ. ಹೀಗಾಗಿ ಆಗುತ್ತದೆ. ಆದರೆ, ಇದನ್ನು ಸರಿಪಡಿಸತಕ್ಕ ಒಂದು ವ್ಯವಸ್ಥೆ ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಭೈರೇಗೌಡರು ಸ್ವಲ್ಪ ತಡವಾಗಿ ಬಂದು, ಲೆವಿ ಬಗ್ಗೆ ಹೇಳಿದ್ದಾರೆ. ನಾನು ಒಂದೇ ಮಾತನ್ನು ಹೇಳುತ್ತೇನೆ. ಲೆವಿ ನೀತಿ ನಿಲ್ಲಬೇಕು. ಯಾರೋ ಬಡಬಗ್ಗರಿಗೋಸ್ಕರ ಅನುಕೂಲ ಮಾಡಲು ಹೋಗಿ ರೈತರಿಗೆ ಶೋಷಣೆಯಾಗಬಾರದು. ರೈತ ಬೆಳೆದಂಥ ಬೆಳೆಗೆ, ನೀವು ಯಾವುದೇ ಒಂದು ಪೈಸೆ ಸಬ್ಸಿಡಿ ಕೊಡಬೇಡಿ. ಸರ್ಕಾರದಿಂದ, ಅವನಿಗೆ ಏನೂ ಸಹಾಯ, ಉಪಕಾರ ಬೇಡ. ಅವನು ಬೆಳೆದಂಥ ಬೆಳೆಗೆ, ಸರಿಯಾದಂಥ, ವೈಜ್ಞಾನಿಕ ಬೆಲೆ ಕೊಡಿ. ಲೆವಿ ರೂಪದಲ್ಲಿ ಅಕ್ಕಿ, ಸಕ್ಕರೆ ಮತ್ತೊಂದು ಕೊಡಬೇಕಾದರೆ, ಕೇಂದ್ರ ಸರ್ಕಾರ, ರಾಜ್ಯಸರ್ಕಾರ ಸಬ್ಸಿಡಿ ಕೊಟ್ಟು, ಆ ಬಡವನನ್ನು ಉಳಿಸಿ. ಅದಕ್ಕೆ ನಮ್ಮ ವಿರೋಧ ಇಲ್ಲ. ನೀವು ಓಪನ್ ಮಾರ್ಕೆಟ್‌ನಲ್ಲಿ ಖರೀದಿ ಮಾಡಿ ಅಥವಾ ಏನಾದರೂ ಮಾಡಿ. ಆದರೆ, ಈ ಅನಿಷ್ಟ ಪದ್ಧತಿ ಏನಿದೆ, ಈ ಶೋಷಣೆ ಸ್ವಾತಂತ್ರ್ಯ ಪೂರ್ವದಲ್ಲಿಯೂ ಇತ್ತು, ಈಗಲೂ ಇದೆ. ಬ್ರಿಟೀಷರ ಕಾಲದಲ್ಲಿ ಉತ್ತಮವಾಗಿತ್ತೋ ಏನೋ. ಈ ಅನಿಷ್ಟ ಲೆವಿ ಪದ್ಧತಿ, ರೈತರನ್ನು ಶೋಷಣೆ ಮಾಡುವಂತಾದ್ದು ನಿಲ್ಲಬೇಕು. ಬೇಕಾದರೆ ಒಕ್ಕೊರಲಿನ ಒಂದು ನಿರ್ಣಯ ಮಾಡಿ ಕಳುಹಿಸೋಣ. ಓಪನ್ ಮಾರ್ಕೆಟ್ಟಿನಲ್ಲಿ ಖರೀದಿ ಮಾಡಿ, ಯಾರಿಗೆ ಬೇಕಾದರೂ ಉಪಕಾರ ಮಾಡಿ, ನಮ್ಮದೇನೂ ಅಭ್ಯಂತರ ಇಲ್ಲ. ಆದರೆ, ಮೂಲ ಕಬ್ಬು ಒಣಗಿ ಹೋಗುತ್ತಾ ಇದೆ. ಬೆಂಬಲ ಬೆಲೆಯನ್ನು ಸರ್ಕಾರ ತಕ್ಷಣ ಘೋಷಣೆ ಮಾಡಬೇಕು. ಇದರ ಬಗ್ಗೆ ದಯಮಾಡಿ ಉತ್ತರ ಕೊಡಿ.

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು): ಸನ್ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಏನು ಹೇಳಿದರು, ಈಗ ಲೆವಿ ಬೆಲೆಯನ್ನು ಗೊತ್ತುಪಡಿಸುವುದರಿಂದ, ಅಲ್ಲಿ ಹಾನಿಯಾಗುತ್ತಿರತಕ್ಕ ಹಣದಿಂದ, ಕಬ್ಬು ಬೆಳೆಗಾರರಿಗೆ ನಾವು ಕಡಿಮೆ ದರ ಕೊಡಬೇಕಾಗಿದೆ. ಅದಕ್ಕೆ ಲೆವಿ ಬೆಲೆಯನ್ನು ಗೊತ್ತುಪಡಿಸುವುದಕ್ಕಿಂತ, ಮಾರುಕಟ್ಟೆಯಲ್ಲಿ ಪಿ.ಡಿ.ಎಸ್.ಗೆ ಸಕ್ಕರೆ ಬೇಕಾಗಿದ್ದರೆ, ಓಪನ್ ಮಾರ್ಕೆಟ್‌ನಲ್ಲಿ ಅವರೂ ಖರೀದಿ ಮಾಡಲಿ. ಖರೀದಿ ಮಾಡಿ, ಸಬ್ಸಿಡಿ ಕೊಡುವಂಥ ವ್ಯವಸ್ಥೆ ಮಾಡಿದರೆ, ಇವತ್ತು ರೈತರಿಗೆ ಹೆಚ್ಚಿನ ಬೆಲೆಯನ್ನು ಕೊಡಲಿಕ್ಕೆ ಸಾಧ್ಯತೆ ಆಗುತ್ತದೆ. ಇದರಲ್ಲಿ ಒಂದು ತೊಂದರೆಯಾಗಬಹುದು. ಹೊಸ ಕಾರ್ಖಾನೆಗಳನ್ನು ಪ್ರಾರಂಭ

ಮಾಡುವಾಗ, ಲೆವಿಯಿಂದ ವಿನಾಯಿತಿ ಕೊಡುವ ವ್ಯವಸ್ಥೆ ಏನಿದೆ, ಆ ವ್ಯವಸ್ಥೆ ಬರದಿದ್ದರೆ ಹೊಸ ಕಾರ್ಖಾನೆಗಳಿಗೆ ಈ ಸಮಸ್ಯೆ ಆಗುತ್ತಾ ಇದ್ದರೂ ಸಹಿತ, ಅದಕ್ಕೆ ಬೇಕಾದ ಇನ್‌ಸೆಂಟೀವ್ ಕೊಡಬೇಕಾಗುತ್ತದೆ. ಅದನ್ನು ಕ್ಯಾಷ್ ರೂಪದಲ್ಲಿ ಕೊಡಬಹುದು ಇದನ್ನು ಅವರು ಹೇಳುತ್ತಾರೆ, ಈ ವ್ಯವಸ್ಥೆ ಬಂದನಂತರ ಈ ರೀತಿಯಲ್ಲ ಜನಕ್ಕೆ ಸಮಜಾಯಿಷಿ ಹೇಳಲು ಹೊರಟಾಗ, ಅವರೇನು ಹೇಳಬಹುದೆಂದರೆ, ಹೊಸದಾಗಿ ಪ್ರಾರಂಭವಾಗತಕ್ಕ ಕಾರ್ಖಾನೆಗಳಿಗೆ, ಶೇಕಡ 60-40ರಂತೆ ಅವರಿಗೆ ಕೊಡುವ ವಿನಾಯಿತಿಯನ್ನು, 5 ವರ್ಷ 8 ವರ್ಷ ಏನು ವಿನಾಯಿತಿ ಕೊಡುತ್ತೀರಿ, ಈ ವಿನಾಯಿತಿ ನಿಂತುಹೋದರೆ, ಹೊಸ ಕಾರ್ಖಾನೆ ಬರುವುದಕ್ಕೆ ಸಾಧ್ಯತೆ ಆಗದೇ ಹೋಗಬಹುದು ಎಂಬ ಭಾವನೆ ಕೆಲವರು ವ್ಯಕ್ತಪಡಿಸಬಹುದು. ಇದಕ್ಕೆ ಪೂರಕವಾಗಿ ಹಣಕಾಸಿನ ನೆರವನ್ನು ಕೊಡುವಂಥ ವ್ಯವಸ್ಥೆಯನ್ನು ಹೊಸ ಕಾರ್ಖಾನೆಗೆ ಮಾಡಿ. ಆದರೆ, ಇವತ್ತು ಓಪನ್ ಮಾರ್ಕೆಟ್ಟಿನಲ್ಲಿ ಸಕ್ಕರೆಯನ್ನು ಖರೀದಿ ಮಾಡಿ, ಲೆವಿಗಾಗಿ ಕೊಡುವಂಥ ಸಕ್ಕರೆಯನ್ನು ಪಿ.ಡಿ.ಎಸ್.ಗೆ ಬೇಕಾದ ಸಕ್ಕರೆಯನ್ನು ಸಂಗ್ರಹ ಮಾಡುವಂಥ ವ್ಯವಸ್ಥೆ ಮಾಡಿದ್ದೇ ಆದರೆ, ಇವತ್ತು ಹೆಚ್ಚಿನ ಬೆಲೆಯನ್ನು ರೈತರಿಗೆ ಕೊಡುವುದಕ್ಕೆ ಸಾಧ್ಯತೆ ಆಗುತ್ತದೆ. ಆ ರೀತಿಯ ವ್ಯವಸ್ಥೆ ಬರಬೇಕೆಂಬುದನ್ನು ನಾನು ಹೇಳುತ್ತೇನೆ.

ಶ್ರೀ ಸುಭಾಶ್ ಗುತ್ತೇದಾರ್ (ಆಳಂದ): ಸನ್ಮಾನ್ಯ ಉಪಾಧ್ಯಕ್ಷರೆ, ನಮ್ಮ ರೇವುನಾಯಕ್‌ರವರು ಹೇಳಿದ ಹಾಗೆ, ಆಳಂದ ಸಕ್ಕರೆ ಕಾರ್ಖಾನೆ 1994-95ರಲ್ಲಿ ಸುಮಾರು ನಾಲ್ಕು-ನಾಲ್ಕೂವರೆ ಕೋಟಿ ರೂಪಾಯಿಗಳನ್ನು ರೈತರಿಗೆ ಪಾವತಿ ಮಾಡುವುದಿದೆ. ಇದನ್ನು ಯಾವರೀತಿ ಮಾಡಬೇಕೆಂಬುದಕ್ಕೆ ನಮ್ಮ ಉಪ ಮುಖ್ಯಮಂತ್ರಿಗಳು ಗಮನ ಕೊಟ್ಟರೆ, ಒಳ್ಳೆಯದು. ಏಕೆಂದರೆ, ಪರ್ಚೇಸ್ ಟ್ಯಾಕ್ಸ್ ಏನಿದೆ, 10 ವರ್ಷದಿಂದ ಕಟ್ಟಬಾರದೆಂದು ಏನು ರೂಲ್ಸ್ ಮಾಡಿದೆ, ನಮ್ಮ ಆಳಂದ್ ಷುಗರ್ ಫ್ಯಾಕ್ಟರಿಯವರು ಈಗಾಗಲೇ ಮೂರು ಮೂರೂವರೆ ಕೋಟಿ ರೂಪಾಯಿ ಕಟ್ಟಿದ್ದಾರೆ. ಅದೇ ಒಂದು ಅಸೆಸ್‌ಮೆಂಟ್ ನಾವು ಕೊಟ್ಟಿದ್ದೆವು ಆ ಮೂರು ಮೂರೂವರೆ ಕೋಟಿ ರೂಪಾಯಿಗಳನ್ನು ಪರ್ಚೇಸ್ ಟ್ಯಾಕ್ಸ್‌ನಿಂದ ರೀಫಂಡ್ ಮಾಡಿದರೆ, ರೈತರಿಗೆ ಕೊಡುವುದಕ್ಕೆ ಅನುಕೂಲವಾಗುತ್ತದೆ. ಏಕೆಂದರೆ, ನಮ್ಮ ಸಕ್ಕರೆ ಮಂತ್ರಿಗಳು ಮೇಲ್ಮನೆಯಲ್ಲಿ ಹೇಳಿದ್ದಾರೆ. 3 ಕೋಟಿ ಕೊಟ್ಟಿದ್ದೇವೆಂದು ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ. ನಾನು ಆ ಆಳಂದ್ ಷುಗರ್ ಫ್ಯಾಕ್ಟರಿ ಅಧ್ಯಕ್ಷನಾದುದರಿಂದ ಎಲ್ಲರೂ ಕೇಳುತ್ತಿದ್ದಾರೆ. ದುಡ್ಡು ಬಂದಿದೆ, ಏಕೆ ಕೊಡುವುದಿಲ್ಲ, ದುಡ್ಡು ಬಂದಿದೆ ಏಕೆ ಕೊಡುವುದಿಲ್ಲವೆಂದು ಕೇಳುತ್ತಿದ್ದಾರೆ. ಅವರು ಮೊದಲು ಕೊಟ್ಟಿದ್ದನ್ನು ಹೇಳಿದ್ದಾರೆ. ಅದಕ್ಕೆ, ಈಗ ಮೂರೂವರೆ ಕೋಟಿ ರೂಪಾಯಿಗಳನ್ನು ಪರ್ಚೇಸ್ ಟ್ಯಾಕ್ಸ್‌ನಿಂದ ವಾಪಸ್ ಕೊಟ್ಟರೆ, ಆ ಹಣವನ್ನು ನಾವು ರೈತರಿಗೆ ಪಾವತಿ ಮಾಡಬಹುದು. ಮತ್ತೆ ಈ ವರ್ಷ ನಮಗೆ 2 ಕೋಟಿ ರೂಪಾಯಿ ಖರ್ಚಾಗಿದೆ. ಅದರಲ್ಲಿ ಒಂದು ಕೋಟಿ ರೂಪಾಯಿ ಸೇರಿಸಿ, ಒಟ್ಟು ನಾಲ್ಕೂವರೆ ಕೋಟಿ ರೂಪಾಯಿಗಳನ್ನು ಕೊಡಿಸಬೇಕು.

ದಯವಿಟ್ಟು ಉಪ ಮುಖ್ಯಮಂತ್ರಿಗಳು ಇದಕ್ಕೆ ಉತ್ತರ ಕೊಡಬೇಕು ಮತ್ತು ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ (ಬೀದರ್): ಸನ್ಮಾನ್ಯ ಉಪಾಧ್ಯಕ್ಷರೇ, ನಮ್ಮ ಕ್ಷೇತ್ರದಲ್ಲಿ ಏಳು ಖಂಡಸಾರಿ ಫ್ಯಾಕ್ಟರಿಗಳು ಇವೆ. ಅಲ್ಲಿ ತೂಕ ಮಾಡುವುದನ್ನು ನಾನು ಪರ್ಸನಲ್ ಆಗಿ ರಾತ್ರಿಯಲ್ಲಿ ನೋಡಿದ್ದೇನೆ. ಅಲ್ಲಿ ವೈಟ್ ಅಂಡ್ ಮೆಷರ್‌ಮೆಂಟ್ ಡಿಪಾರ್ಟ್‌ಮೆಂಟ್‌ನವರ ಕಂಟ್ರೋಲ್ ಇಲ್ಲ. ಇದರ ಬಗ್ಗೆ ತಾವು ಗಮನದಲ್ಲಿಟ್ಟುಕೊಳ್ಳಬೇಕು. ನಮ್ಮಲ್ಲಿ ಬೀದರ್ ಸಹಕಾರ ಸಕ್ಕರೆ ಕಾರ್ಖಾನೆ ಲಿಮಿಟೆಡ್ ಇದೆ, ಎರಡು ಮೂರು ವರ್ಷದಿಂದಲೂ ರೈತರು ನಷ್ಟವನ್ನು ಅನುಭವಿಸುತ್ತಿದ್ದಾರೆ. ಅಲ್ಲೊಂದು ಕಡೆ ಬಿ.ಎಸ್.ಎಸ್. ಫ್ಯಾಕ್ಟರಿಯಲ್ಲಿ ಸಿ.ಓ.ಡಿ. ಎನ್‌ಕ್ವೈರಿ ಆಗಿದೆ. ಎರಡು ವರ್ಷದಿಂದಲೂ ಸಿ.ಓ.ಡಿ. ಎನ್‌ಕ್ವೈರಿ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಅಲ್ಲಿ ಯಾರು ಯಾರು ಅಧಿಕಾರಿಗಳು ಇದರಲ್ಲಿ ಇನ್‌ವಾಲ್ವ್ ಇದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಮತ್ತು ನಮ್ಮ ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆ ಇದೆ. ನಮ್ಮ ಬೀದರ್‌ಗೆ ಇರುವುದು ಎರಡೇ ಅಸೆಟ್ಸ್. ಒಂದು ಕಾರಂಜಾ ಪ್ರಾಜೆಕ್ಟ್ ಎರಡನೆಯದು ಸಕ್ಕರೆ ಫ್ಯಾಕ್ಟರಿ. ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆಗೆ ಬೋರ್ಡ್ ಮಾಡಿ ಪ್ರಾರಂಭ ಮಾಡಬೇಕಾಗಿದೆ, ಮತ್ತು ಸಿ.ಓ.ಡಿ. ಎನ್‌ಕ್ವೈರಿ ಬಗ್ಗೆಯೂ ಆದಷ್ಟು ಬೇಗನೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಮಂಜುನಾಥ್ ಸಿ.ಕುನ್ನೂರ್ (ಶಿಗ್ಗಾಂವ್): ಮಾನ್ಯ ಉಪಾಧ್ಯಕ್ಷರೆ, ಹಾವೇರಿ ಜಿಲ್ಲೆ ಮತ್ತು ಧಾರವಾಡ ಜಿಲ್ಲೆಯಲ್ಲಿ ಸಂಗೂರು ಸಕ್ಕರೆ ಕಾರ್ಖಾನೆ ಒಂದೇ ಇದೆ. ಅಲ್ಲಿ ಕಬ್ಬು ಅರೆಯುವ ಮಿತಿ ಎಂದರೆ ಕೇವಲ 1250 ಟಿ.ಸಿ.ಬಿ. ಸಾಮರ್ಥ್ಯವುಳ್ಳದ್ದು ಇದೆ. ಇದರಿಂದ ಆ ಭಾಗದ ಜನರಿಗೆ ಬಹಳಷ್ಟು ತೊಂದರೆಯಾಗಿದೆ ಮತ್ತು ಬೆಳೆದಂಥ ಕಬ್ಬು ಬೆಳೆಗಾರರು ಕಳೆದ ವರ್ಷ ಅಲ್ಲಿ ಕಬ್ಬು ಬೆಳೆಯನ್ನು ಅಲ್ಲಿ ಸಾಗಿಸಿದರೆ ಆ ರೈತರಿಗೆ ಬಾಕಿ ಹಣ ಪಾವತಿ ಮಾಡಬೇಕಾಗಿದೆ ಮತ್ತು ಗಂಗಾವತಿ ಕುಕ್ಕುವಾಡಕ್ಕೂ ಕೂಡ ಕೆಲವು ಜನರು ತೆಗೆದುಕೊಂಡು ಹೋಗಿ ಹಾಕಿದ್ದಾರೆ, ಆ ಮರುಪಾವತಿಯೂ ಮಾಡಿಲ್ಲ ಎಂದು ಹೇಳಿದ್ದಾರೆ.

ಉಪಾಧ್ಯಕ್ಷರು: ಪಾವತಿ ಇಲ್ಲ ಎಂದು ಹೇಳುತ್ತಾರೆ. ಬಾಕಿ ಕೊಡುವುದು ಏನೂ ಇಲ್ಲ ಎಂದು ಹೇಳುತ್ತಾರೆ.

ಶ್ರೀ ಮಂಜುನಾಥ್ ಸಿ.ಕುನ್ನೂರ್: ಆಯಿತು Let it be recorded. ಸಂಗೂರು ಮತ್ತು ಕುಕ್ಕುವಾಡ್, ಮತ್ತು ಗಂಗಾವತಿ ಮೂರು ಕಡೆಯಲ್ಲೂ ನಮ್ಮ ರೈತರಿಗೆ ಬಾಕಿ ಬರಬೇಕಾಗಿದೆ ಎಂದು ಹೇಳಿದ್ದಾರೆ. ಅದು ಆಗಬೇಕು. ಮತ್ತು ಲೆವಿಯಂಥ ಅನಿಷ್ಟ ಪದ್ಧತಿಯನ್ನು ತೊಡೆದುಹಾಕಬೇಕು. ಮತ್ತು ಬೆಲೆಯನ್ನು ನಿಗದಿ ಮಾಡುವಾಗ ಮುಖ್ಯಮಂತ್ರಿಗಳು ಕಳೆದ ವರ್ಷ ಒಂದು ಸಭೆಯನ್ನು ಕರೆದಿದ್ದರು. ಆ

ಸಭೆಯಲ್ಲಿ ರೈತ ಮುಖಂಡರು, ರೈತರು ಶಾಸಕರು ಎಲ್ಲಾ ಕರೆದರೆ ಬಹಳ ಅವಸರದಲ್ಲಿ ಬೆಲೆ ನಿಗದಿಪಡಿಸುವುದಕ್ಕಾಗುವುದಿಲ್ಲ. ಸಾಕಷ್ಟು ಸಮಯವನ್ನು ಎಲ್ಲರಿಗೂ ಕೊಟ್ಟು ತಾವು ಈ ಒಂದು ನಿಗದಿಪಡಿಸುವ ಕೆಲಸವನ್ನು ಮಾಡಬೇಕೆಂದು ತಮ್ಮಿಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಉಪಾಧ್ಯಕ್ಷರೆ, ಇದು ಏನಾಗಿದೆ, ಇದು ಹುಚ್ಚು ತೀರ್ಮಾನವೋ ಗೊತ್ತಿಲ್ಲ. ತಾವು ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾತನಾಡಬೇಕಾದರೆ ಬೆಳಗಾಂ ಕಾರ್ಖಾನೆಯಿಂದ ಉತ್ಪಾದನೆ ಮಾಡಿದಂಥ ಸಕ್ಕರೆ ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಗೆ ಬರುತ್ತದೆ. ಪಾಂಡವಪುರದಲ್ಲಿ ಉತ್ಪಾದನೆ ಮಾಡಿದ ಸಕ್ಕರೆ ಬೆಳಗಾಂ ಸೊಸೈಟಿಗೆ ಹೋಗುತ್ತಿದೆ. ಈ ಪಾಲಿಸಿಯನ್ನು ದಯವಿಟ್ಟು ಬದಲಾವಣೆ ಮಾಡುವುದಕ್ಕೆ ಏನಾದರೂ ಮಾಡಬೇಕು ಇಲ್ಲದಿದ್ದರೆ ನಾಲ್ಕು ಸಾವಿರ, ಐದು ಸಾವಿರ ರೂಪಾಯಿ ಹೆಚ್ಚಿಗೆ ಬಾಡಿಗೆ ಕೊಡುತ್ತಿದ್ದೇವೆ ಸ್ವಾಮಿ. ದಯವಿಟ್ಟು ಪಾಂಡವಪುರದಲ್ಲೇ ಸಕ್ಕರೆ ತರಿಸಿಕೊಂಡರೆ ನಮಗೆ ಒಂದು ಸಾವಿರ ರೂಪಾಯಿ ಬಾಡಿಗೆಯಲ್ಲಿ ಆಗುತ್ತದೆ. 7500 ರೂಪಾಯಿ ಬಾಡಿಗೆ ಕೊಟ್ಟು ತರಿಸುತ್ತಿದ್ದೇವೆ. ಈ ಒಂದು ನೀತಿಯ ಕೇಂದ್ರಸರ್ಕಾರದ್ದು ಆಗಿದೆ ಇದನ್ನು ಬದಲಾವಣೆ ಮಾಡುವುದಕ್ಕೆ ಏನಾದರೂ ಪ್ರಯತ್ನಪಡಿ ಎಂದು ಹೇಳುತ್ತೇನೆ.

ಶ್ರೀ ಉಮೇಶ್ ವಿ.ಕತ್ತಿ (ಸಕ್ಕರೆ ಮಂತ್ರಿಗಳು): ಮಾನ್ಯ ಉಪಸಭಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಈ ಸದನದ ಗಮನಕ್ಕೆ ತಂದಂತೆ ಈ ಲೆವಿ ಪದ್ಧತಿ, ಷುಗರ್ ಕಂಟ್ರೋಲ್ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಸರ್ಕಾರದ ಹೇಳಿಕೆಯ ಪ್ರಕಾರ ಲೆವಿ ಪದ್ಧತಿಯನ್ನು ತೆಗೆಯಬೇಕು. ಷುಗರ್ ಕಂಟ್ರೋಲ್ ಪದ್ಧತಿಯನ್ನೂ ತೆಗೆಯಬೇಕು. ಯಾರು ಎಲ್ಲಿ ಯಾವಾಗ ಬೇಕಾದರೂ ಮಾರಿಕೊಂಡು ಕಾರ್ಖಾನೆಗಳನ್ನು ನಡೆಸುವ ಪದ್ಧತಿ ಬಂದರೆ ರೈತರಿಗೆ, ಕಾರ್ಖಾನೆಗಳಿಗೆ ಯಾವುದೇ ರೀತಿ ತೊಂದರೆಯಾಗುವುದಿಲ್ಲ ಎಂದು ಹೇಳಿ ಸರ್ಕಾರದ ಪರವಾಗಿ ಹೇಳುತ್ತಿದ್ದೇನೆ. ಈಗ ಗೋಧಿಯನ್ನು ಓಪನ್ ಮಾರ್ಕೆಟ್‌ನಲ್ಲಿ ಖರೀದಿ ಮಾಡಿ ಲೆವಿ ರೂಪದಲ್ಲಿ ತೆಗೆದುಕೊಳ್ಳುತ್ತಾರೆ. ಅದೇ ರೀತಿ ಬೇರೆ ಬೇರೆ ಅಕ್ಕಿಯನ್ನು ಓಪನ್ ಮಾರ್ಕೆಟ್‌ನಲ್ಲಿ ಖರೀದಿ ಮಾಡಿ ಮಾರುತ್ತಾರೆ. ಆ ರೀತಿ ಸಕ್ಕರೆ ಕಾರ್ಖಾನೆಗೆ ಮಾತ್ರ ತಮಗೆ ಯಾವಾಗ ಬೇಕೂ ಆಗ ರಿಲೀಸ್ ಕೊಟ್ಟು ಆಗ ದುಡ್ಡನ್ನು ಕಟ್ಟಿ ಸಕ್ಕರೆಯನ್ನು ತರುವ ಪದ್ಧತಿಯನ್ನು ಜಾರಿಗೆ ತರಲು ಕೂಡಲೇ ಕೇಂದ್ರಸರ್ಕಾರಕ್ಕೆ ಎಲ್ಲರೂ ಈ ಸದನದಿಂದ ಒತ್ತಾಯ ಮಾಡಬೇಕೆಂದು ಹೇಳಿ ಈಗಾಗಲೇ ಕೇಂದ್ರ ಸರ್ಕಾರದ ಕೃಷಿ ಮಂತ್ರಿಗಳಿಗೆ, ಆಹಾರ ಮಂತ್ರಿಗಳಿಗೆ ಇಂಡಸ್ಟ್ರೀ ಮಿನಿಸ್ಟರ್‌ಗೆ ಮೂರು ಬಾರಿ ದೆಹಲಿಗೆ ಹೋಗಿ ಇದರ ಬಗ್ಗೆ ಸಾಕಷ್ಟು ಚರ್ಚೆಮಾಡಿ ಸವಿಸ್ತಾರವಾದ ಮಾಹಿತಿಯನ್ನು ಕೊಟ್ಟಿದ್ದೇನೆ. ಅದರ ಬಗ್ಗೆ ಕೇಂದ್ರಸರ್ಕಾರದಿಂದ ಇನ್ನೂ ಯಾವುದೇ ಕ್ರಮವಾಗಿಲ್ಲ. ಅದು ಆಗಬೇಕು ಎಂದು ಹೇಳಿ ಇನ್ನೂ ನಾನು ಹೆಚ್ಚಿನ ಒತ್ತಾಯವನ್ನು ಮಾಡುತ್ತೇನೆ. ಅದರ ಬಗ್ಗೆ ನಮ್ಮ ರಾಜ್ಯದ ಲೋಕಸಭಾ

ಸದಸ್ಯರ ಮೀಟಿಂಗನ್ನೂ ಕರೆದು ಸಹಾ ಅವರನ್ನು ಕರೆದುಕೊಂಡು ಹೋಗಿ ಒತ್ತಾಯ ತರುವ ಪ್ರಯತ್ನವನ್ನು ನಾನು ಮಾಡುತ್ತೇನೆ ಎಂದು ತಮ್ಮೂಲಕ ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಎರಡನೆಯದಾಗಿ ಗಡಿ ಭಾಗದಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಹೋಗುವುದಿಲ್ಲ, ಮಹಾರಾಷ್ಟ್ರದಲ್ಲಿ ಏಕೆ ಕಬ್ಬು ಹೋಗುತ್ತದೆ, ನಮ್ಮ ಕರ್ನಾಟಕದಲ್ಲಿ ಏಕೆ ಕಬ್ಬು ಹೋಗುವುದಿಲ್ಲ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಸದನದ ಗಮನಕ್ಕೆ ತಂದಿದ್ದಾರೆ. ಕಳೆದ ಎರಡು ಮೂರು ವರ್ಷಗಳಿಂದ ಮಹಾರಾಷ್ಟ್ರದ ರೇಟುಗಳನ್ನು ನೋಡಿದರೆ ಅಂದರೆ ಮೊದಲನೆ ಅಡ್ವಾನ್ಸ್, ಸೆಕೆಂಡ್ ಅಡ್ವಾನ್ಸ್, ಮಹಾರಾಷ್ಟ್ರದಲ್ಲಿ ನಮ್ಮ ರೀತಿ ಒಂದೇ ಸಾರಿ ದರ ಕೊಡುವ ಪದ್ಧತಿ ಇಲ್ಲ. ಮೊದಲನೆ ಅಡ್ವಾನ್ಸ್, ಎರಡನೇಯ ಅಡ್ವಾನ್ಸ್, ಮೂರನೇ ಅಡ್ವಾನ್ಸ್, ನಾಲ್ಕನೇ ಸಾರಿ ಫೈನಲ್, ಈ ರೀತಿ ನಾಲ್ಕು ಕಂತುಗಳ ರೂಪದಲ್ಲಿ ಹಣ ಕೊಡುವ ಪದ್ಧತಿ ಅಲ್ಲಿ ಇದೆ. ಮಹಾರಾಷ್ಟ್ರದಲ್ಲಿ 140 ಸಕ್ಕರೆ ಕಾರ್ಖಾನೆಗಳಿದ್ದು ಅವೆಲ್ಲಕ್ಕೂ ಬೇಕಾಗುವಷ್ಟು ಮಹಾರಾಷ್ಟ್ರದಲ್ಲಿ ಕಬ್ಬು ಪೂರೈಕೆಯಾಗುವ ಸಂಭವ ಬಹಳ ಕಡಿಮೆ. ಆದರೂ ಮಹಾರಾಷ್ಟ್ರ ಸರ್ಕಾರ ಏನು ಮೊದಲನೇ ಅಡ್ವಾನ್ಸ್‌ನ್ನು ನಿಗದಿಪಡಿಸಿದರೋ ಸಾಧಾರಣ 140 ಸಕ್ಕರೆ ಕಾರ್ಖಾನೆಗಳೂ ಸಹಾ ಒಂದೇ ಅಡ್ವಾನ್ಸ್‌ನ್ನು ಎಲ್ಲಾ ಭಾಗದಲ್ಲೂ ಕೊಡುತ್ತಾ ಒಂದು ಪದ್ಧತಿಯನ್ನು ಇಟ್ಟುಕೊಂಡು ಬಂದಿವೆ. ಅದೇ ರೀತಿ ಕಳೆದ ಎರಡು ವರ್ಷ ಸಹ ಗಡಿ ಭಾಗದಲ್ಲಿ ಬರುವ ಸಕ್ಕರೆ ಕಾರ್ಖಾನೆಗಳಿಗೆ 4500 ಫಸ್ಟ್ ಅಡ್ವಾನ್ಸ್, 1500 ಸೆಕೆಂಡ್ ಅಡ್ವಾನ್ಸ್ ಈ ರೀತಿ ಎರಡು ಬಿಲ್‌ಗಳನ್ನು ಕಳೆದ ಎರಡು ವರ್ಷಗಳಿಂದ ಕೊಟ್ಟಿವೆ. ಈ ರೀತಿ ನಮಗಿಂತ ಹೆಚ್ಚಿಗೆ ರೇಟು ಕೊಡುವ ಪದ್ಧತಿ ಅವರಲ್ಲಿಲ್ಲ. ಆದರೂ ಅಟ್ರಾಕ್ಟ್ ಮಾಡುವ ಚಾಣಾಕ್ಷತನ ಬುದ್ಧಿ ಅವರಲ್ಲಿದೆ ಎಂದು ಹೇಳುತ್ತೇನೆ. ಏಕೆಂದರೆ ಕರ್ನಾಟಕಕ್ಕಿಂತ ಹೆಚ್ಚು ರೇಟು ಕೊಡುತ್ತೇವೆ ಎಂದು ಹೇಳಿ ಕೇಳುವ ಪದ್ಧತಿ ಇದೆ, ಗಡಿ ಭಾಗದಿಂದ ನಾನು ಬರುವುದರಿಂದ ಸಾಧಾರಣ ಕೊಲ್ಲಾಪುರ್, ಸಾಂಗ್ಲಿ, ಸೊಲ್ಲಾಪುರ್ ಈ ಭಾಗದಲ್ಲಿ ಬರುವ ಕಾರ್ಖಾನೆಗಳ ಬಗ್ಗೆ ಸಾಕಷ್ಟು ನನಗೆ ಮಾಹಿತಿ ಇದ್ದ ಪ್ರಕಾರ ಯಾವುದೇ ಸಕ್ಕರೆ ಕಾರ್ಖಾನೆಗಳು ಕರ್ನಾಟಕದಲ್ಲಿ ಅತಿ ಕಡಿಮೆ ಕೊಟ್ಟಂಥ ಕಾರ್ಖಾನೆಗಿಂತ ಅವರು ಕಡಿಮೆ ಕೊಟ್ಟಿದ್ದಾರೆಯೇ ವಿನಃ ಹೆಚ್ಚಿಗೆ ರೇಟನ್ನು ಕೊಟ್ಟಿಲ್ಲ ಎಂದು ಹೇಳಿ ತಮ್ಮ ಮುಖಾಂತರ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ಮಹಾರಾಷ್ಟ್ರದಲ್ಲಿರುವ ಒಂದು ಸಕ್ಕರೆ ಕಾರ್ಖಾನೆಯ ಹೆಸರನ್ನು ಹೇಳುತ್ತೇನೆ. ಅಲ್ಲಿ 1996-97ನೇ ಸಾಲಿನಲ್ಲಿ ಯಾವ ರೇಟನ್ನು ಕೊಟ್ಟಿದ್ದಾರೋ ಅದನ್ನೂ ಹೇಳುತ್ತೇನೆ.

ಉಪಾಧ್ಯಕ್ಷರು: ಅವರು ಉತ್ತರ ಮುಗಿಸಲಿ. ನಡುವೆ ಏಕೆ ತೊಂದರೆ ಮಾಡುತ್ತೀರಿ?

(ಗೊಂದಲ)

ಶ್ರೀ ಉಮೇಶ್ ವಿ.ಕತ್ತಿ: ಮಾನ್ಯ ಉಪಾಧ್ಯಕ್ಷರೇ, ಒಂದೊಂದು ಸಕ್ಕರೆ ಕಾರ್ಖಾನೆ

ಹೆಚ್ಚು ಕೊಟ್ಟಿರಬಹುದು. ಕಿಸಾನ್ ಸಹಕಾರ ಸಕ್ಕರೆ ಕಾರ್ಖಾನೆ ಇದೆ, ಅದು ನನಗೂ ಗೊತ್ತು. ಅದು ಮಹಾರಾಷ್ಟ್ರದಲ್ಲಿ ಹೆಚ್ಚಿನ ರೇಟನ್ನು ಸರ್ಕಾರದ ಆದೇಶ ಮೀರಿಯೂ ಸಹ ಅವರು ಕೊಟ್ಟಿದ್ದಾರೆ ನನಗೂ ಗೊತ್ತಿದೆ. ಮಹಾರಾಷ್ಟ್ರದಲ್ಲಿ ಏನು ರೇಟನ್ನು ಕೊಟ್ಟಿದ್ದಾರೋ ಅದಕ್ಕಿಂತ ಹೆಚ್ಚು ಕರ್ನಾಟಕದಲ್ಲಿ ಕಳೆದ ಎರಡು ವರ್ಷಗಳಿಂದ ಕೊಟ್ಟಿದ್ದೇವೆ ಎಂದು ಹೇಳುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಖಂಡಸಾರಿ ಬಗ್ಗೆ ಮಾತನಾಡಿದ್ದಾರೆ, ಕಬ್ಬು ಬೆಳೆಗಾರರ ಬಗ್ಗೆ ಕೃಷಿ ಇಲಾಖೆಯ ಮೇಲೆ ಚರ್ಚೆ ಮಾಡಬೇಕಾಗುತ್ತದೆ. ಏಕೆಂದರೆ ಕಬ್ಬನ್ನು ಬೆಳೆಯುವ ಪದ್ಧತಿ ಸಾಧಾರಣ ಐದು ವರ್ಷಗಳಲ್ಲಿ ಮೂರು ವರ್ಷ ಅತಿ ಹೆಚ್ಚು ಕಬ್ಬು ಬೆಳೆಯುತ್ತಾರೆ. ಎರಡು ವರ್ಷ ರಾಜ್ಯಾದ್ಯಂತ ಇರುವ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸಿಗಬಾರದು ಎನ್ನುವ ಪರಿಸ್ಥಿತಿಯಲ್ಲಿ ರೈತರು ಕಬ್ಬನ್ನು ಬೆಳೆಯುತ್ತಾರೆ. ಅದರ ಬಗ್ಗೆ ಪ್ರತ್ಯೇಕವಾದ ಚರ್ಚೆಯಾಗಬೇಕಾಗುತ್ತದೆ. ಕೃಷಿ ಇಲಾಖೆಯ ಬಗ್ಗೆ ಮಾತನಾಡುವಾಗ ಮಾತನಾಡಿ ಸಮಸ್ಯೆಯನ್ನು ಬಗೆಹರಿಸಬಹುದು. ಏಕೆಂದರೆ ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ 200 ಲಕ್ಷ ಟನ್ ಕಬ್ಬು ಉತ್ಪಾದನೆಯಾಯಿತು. 200 ಲಕ್ಷ ಟನ್ ಕಬ್ಬು ಉತ್ಪಾದನೆಯಾಗಿ ನಮ್ಮ ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಯನ್ನು ನಾವು ಅತೀ ಹೆಚ್ಚಿಗೆ ಅಂದರೆ 120 ಲಕ್ಷ ಟನ್‌ನ್ನು ನುರಿಸುವ ಕೆಪ್ಯಾಸಿಟಿ ನಮಗೆ ಇದೆ. ಅದಕ್ಕಿಂತ ಹೆಚ್ಚು ನುರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದಕಾರಣ ಹೆಚ್ಚಿಗೆ ಕಬ್ಬು ಬೆಳೆದಂಥ ಟೈಮ್‌ನಲ್ಲಿ ಈ ಖಂಡಸಾರಿಗಳು ಬೇಕಾಗುತ್ತದೆ. ಆಗ ನಾವು ಖಂಡಸಾರಿಗಳಿಗೆ ಎಲ್ಲಾ ರೀತಿ ಅನುಕೂಲತೆಗಳನ್ನು ಕೊಟ್ಟು ಖಂಡಸಾರಿಗಳನ್ನು ತಗೆಯಲಿಕ್ಕೆ ಪ್ರಯತ್ನಮಾಡಬೇಕು. ಏಕೆಂದರೆ ರೈತ ಬೆಳೆದಂಥ ಕಬ್ಬು, ರೈತರಿಗೆ ಅನುಕೂಲವಾಗುವ ರೀತಿಯಿಂದ ಪ್ರಯತ್ನಮಾಡಿದ್ದೇವೆಯೇ ವಿನಃ ಖಂಡಸಾರಿಯವರ ಪರವಾಗಿ ನಾವು ಸರ್ಕಾರದವರು ವಿಚಾರ ಮಾಡಿಲ್ಲ. ಈ ವರ್ಷ ಸಾಧಾರಣವಾಗಿ ರಾಜ್ಯದಲ್ಲಿ ಬೆಳೆಯುವಂತಹ ನೂರು ಲಕ್ಷ ಟನ್‌ನಲ್ಲಿ, ಬೆಲ್ಲದ ಬೆಲೆ ಹೆಚ್ಚಾದ ಕಾರಣ ಬೆಲ್ಲಕ್ಕೆ ಹೆಚ್ಚಿನ ಕಬ್ಬು ಹೋಗಿ ಈಗ ರಾಜ್ಯಾದ್ಯಂತ ಇರುವಂತಹ ಕಬ್ಬು ನೋಡಿದರೆ ಅರವತ್ತು ಲಕ್ಷ ಟನ್ ಕಾರ್ಖಾನೆಯಲ್ಲಿ ಸಿಗುತ್ತದೆ. ಅಂದರೆ ನಮಗೆ ಬೇಕಾಗಿರುವಂತಹ ಐವತ್ತರಷ್ಟು ಮಾತ್ರ ಸಕ್ಕರೆ ಕಾರ್ಖಾನೆಗಳಲ್ಲಿ ಸಿಗುತ್ತದೆ. ಈ ರೀತಿ ಆದರೆ ಕಾರ್ಖಾನೆಗಳು ಲಾಭದಾಯಕವಾದ ಪ್ರಸಂಗದಲ್ಲಿ ಉಳಿಯುವುದಿಲ್ಲವೆಂದು ತಮ್ಮ ಮುಖಾಂತರ ಹೇಳಿ, ಎಲ್ಲರ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಏಕೆಂದರೆ ಒಂದು ಸಕ್ಕರೆ ಕಾರ್ಖಾನೆ ವೈಯೆಬಲ್ ಆಗುವುದಾದರೆ ಮಿನಿಮಂ ಅವರು ಎರಡೂವರೆ ಸಾವಿರ ಕೆಪ್ಯಾಸಿಟಿ ಇದ್ದರೆ, ನಾಲ್ಕು ಸಾವಿರ ಟನ್ ನುರಿದರೇನೇ ಆ ಸಕ್ಕರೆ ಕಾರ್ಖಾನೆ ವಯೆಬಲ್ ಆಗುತ್ತದೆ. ಮತ್ತು ರೈತರಿಗೆ ಅನಕೂಲವಾಗುತ್ತದೆ. ಕಾರ್ಖಾನೆಗಳಿಗೂ ಅನುಕೂಲವಾಗುತ್ತದೆ ಎಂದು ತಮ್ಮ ಮುಖಾಂತರ ಎಲ್ಲಾ ಸದಸ್ಯರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಎಲ್ಲಾ ಸದಸ್ಯರು ಮಾತನಾಡಿದ ಹಾಗೆ ಕಬ್ಬಿನ ಸಲಹಾ ಬೆಲೆಯ ಬಗ್ಗೆ ಪ್ರತಿ ವರ್ಷ ಸಭೆ ಕರೆಯುವ ಪದ್ಧತಿಯನ್ನು ಅದೇ ರೀತಿ ಮುಂಬರುವಂತೆ ಮಾಡಿಕೊಂಡು ನೋಡಬೇಕೆಂದು

ವಿರೋಧ ಪಕ್ಷದ ಹಿರಿಯ ನಾಯಕರಾದಂತಹ ಸನ್ಮಾನ್ಯ ಶ್ರೀ ಯಡಿಯೂರಪ್ಪನವರು ಹೇಳಿದ್ದಾರೆ. ಕಾನೂನಿನ ರೀತಿಯಲ್ಲಿ ಉಚ್ಚನ್ಯಾಯಾಲಯ ತಡೆ ಆಜ್ಞೆ ನೀಡಿರುವುದರಿಂದ ಈ ಸಭೆಯನ್ನು ಅಫಿಷಿಯಲ್ ಆಗಿ ಕರೆಯುವುದಕ್ಕೆ ಆಗುವುದಿಲ್ಲ. ರೈತರಿಗೆ ನೀವು ಸಹಕರಿಸಬೇಕೆಂದು ನಾನು ಈಗಾಗಲೇ ಎಲ್ಲಾ ಸಕ್ಕರೆ ಕಾರ್ಖಾನೆಗಳ ಆಡಳಿತ ಮಂಡಳಿಯವರಿಗೆ ಸೂಚನೆ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಸಲಹೆ ಕೊಟ್ಟಂತೆ.....

ಶ್ರೀ ಬಿ.ಎಸ್.ಯಡಿಯೂರಪ್ಪ: ನಿಮ್ಮ ಹತ್ತಿರ ನಾನು ಎರಡೇ ಎರಡು ಕ್ಲಾರಿಫಿಕೇಷನ್ ಕೇಳುತ್ತೇನೆ. ನೀವು ಸಮಂಜಸವಾದ ಉತ್ತರವನ್ನು ಕೊಟ್ಟದ್ದೀರಿ. ಉಚ್ಚ ನ್ಯಾಯಾಲಯ ಏನೇ ಹೇಳಲಿ ಅಫೀಷಿಯಲ್ಲೋ, ಅನ್‌ಅಫೀಷಿಯಲ್ಲೋ ನೀವು ಯಾವ ರೀತಿಯಲ್ಲಾದರೂ ಸಭೆ ಕರೆಯಿರಿ. ನಿಗದಿ ಮಾಡಿದಂತೆ ಸಕ್ಕರೆ ಕಾರ್ಖಾನೆ ಮಾಲೀಕರು, ರೈತ ಮುಖಂಡರ ಅಧಿಕಾರಿಗಳ ಸಭೆ ಕರೆಯಿರಿ, ಪರಸ್ಪರ ಒಪ್ಪಂದದ ಮುಖಾಂತರ ಬೆಲೆ ನಿಗದಿ ಮಾಡಿ. ಆ ಒಪ್ಪಂದದ ಬೆಲೆ ನಿರ್ಣಯ ಆದಮೇಲೆ ಅದನ್ನು ಜಾರಿಗೆ ತರಬೇಕೆಂದು ಪರ್ಸನಲ್ ಒಪ್ಪಂದ ಮಾಡಿಕೊಂಡರೆ ಒಂದು ಸಮಸ್ಯೆ ಬಗೆಹರಿಯುತ್ತದೆ. ಇಲ್ಲ ಅಂದರೆ ನಾವು ಅಧಿವೇಶನ ಮುಗಿಸಿಕೊಂಡು ಹೊರಗೆ ಹೋದಾಗ ರೈತರಿಗೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಇನ್ನು ಎರಡನೆಯದು, ಯಾವ ಒಬ್ಬ ಸಕ್ಕರೆ ಕಾರ್ಖಾನೆ ಮಾಲೀಕ ಹೈಕೋರ್ಟ್ ಆರ್ಡರ್ ಆಶ್ರಯ ತೆಗೆದುಕೊಂಡು, ನಾವು ಇವತ್ತು ಮೀಟಿಂಗ್ ಮಾಡುವುದು ಬೇಡ, ಸರ್ಕಾರ ನಿಗಧಿ ಮಾಡಿದ ಬೆಲೆಯನ್ನು ಕೊಡುವುದು ಬೇಡ ಎಂದು ಹೇಳುವುದಕ್ಕೆ ಹೊರಟಿದ್ದಾರೆ. ಅದಕ್ಕೆ ತಾವು ದಯಮಾಡಿ ಸರಿಯಾದಂತಹ ಉತ್ತರ ಕೊಡಬೇಕು. ಇಲ್ಲಾ, ಆ ಭಾಗದ ರೈತ ತನಗೆ ಖುಷಿ ಕಂಡ ಕಡೆ ಕಬ್ಬನ್ನು ಮಾರುವ ಅನುಮತಿ ಕೊಡಿ. ನಮಗೆ ಇನ್ನೇನೂ ಬೇಡ. ನಾವು ಬೆಲ್ಲವನ್ನು ಮಾಡಿಕೊಳ್ಳುತ್ತೇವೋ, ಬೆಂಕಿಗೆ ಹಾಕಿ ಸುಟ್ಟುಹಾಕುತ್ತೇವೋ, ಅದೆಲ್ಲಾ ನಮಗೆ ಬಿಡಿ. ಹೇಗಿದ್ದರೂ ಸುಟ್ಟು ಹಾಕುವವರಿಗೆ ರಕ್ಷಣೆ ಕೊಡುವುದಿಲ್ಲ, ನಮಗೆ ಏನೂ ನಿಮ್ಮ ಸಹಾಯ ಬೇಡ. ಯಾರು ನಮ್ಮ ಬೆಲೆಯನ್ನು ಒಪ್ಪಿಕೊಳ್ಳುತ್ತಾರೋ ಅವರಿಗೆ ಕಬ್ಬನ್ನು ಕೊಡುತ್ತೇವೆ. ಯಾರು ಒಪ್ಪುವುದಿಲ್ಲ ಅದನ್ನು ಬೇರೆ ಕಡೆ ಮಾರಿಕೊಂಡು ಗೌರವದಿಂದ ಬದುಕುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಇಷ್ಟೇ ನಮ್ಮ 69ರ ಸೂಚನೆಯಡಿಯಲ್ಲಿರುವ ಮೂಲ ಪ್ರಶ್ನೆ.

ಶ್ರೀ ಉಮೇಶ್ ವಿ.ಕತ್ತಿ (ಸಕ್ಕರೆ ಸಚಿವರು): ಸನ್ಮಾನ್ಯ ಉಪಸಭಾಪತಿಯವರೇ, ಈಗಾಗಲೇ ಸನ್ಮಾನ್ಯ ಶ್ರೀ ಯಡಿಯೂರಪ್ಪನವರು ಹೇಳಿದ ಹಾಗೆ ಹೈಕೋರ್ಟ್ ಸ್ಟೇ ಇದ್ದ ಕಾರಣ ಈ ಸಭೆಯನ್ನು ಕರೆಯುವುದಕ್ಕೆ ಆಗಲಿಲ್ಲ. ಆದರೂ ಸಹ ಸುಷ್ಮಾ ಹಾಗೂ ಶುಗರ್ ಫೆಡರೇಷನ್‌ನಲ್ಲಿ, ಇವೆರಡರಡಿಯಲ್ಲಿ ರಾಜ್ಯದಲ್ಲಿ ಸಹಕಾರಿ ರಂಗದಲ್ಲಿ ಬರುವಂತಹ ಸಕ್ಕರೆ ಕಾರ್ಖಾನೆಗಳು ಬರುತ್ತವೆ. ಸುಷ್ಮಾದಲ್ಲಿ, ರಾಜ್ಯದಲ್ಲಿ ಖಾಸಗಿ ರಂಗದಲ್ಲಿ ಬರುವಂತಹ ಸಕ್ಕರೆ ಕಾರ್ಖಾನೆಗಳು ಬರುತ್ತವೆ. ಇವೆರೆಡರ, ಸಕ್ಕರೆ ಕಾರ್ಖಾನೆ

ಮಾಲೀಕರು ಹಾಗೂ ಸಹಕಾರ ಸಕ್ಕರೆ ಕಾರ್ಖಾನೆಗಳ ಅಧ್ಯಕ್ಷರನ್ನು ಮೀಟಿಂಗ್‌ಗೆ ಕರೆದು, ಇದರ ಬಗ್ಗೆ ಇತ್ಯರ್ಥ ಮಾಡಿ, ಇದಕ್ಕೆ ಏನಾದರೂ ಒಂದು ದಾರಿಯನ್ನು ಹುಡುಕಬೇಕೆಂದು ಹೇಳಿ 23ನೇ ತಾರೀಖು ಮೀಟಿಂಗ್ ಕರೆದಿದ್ದೇನೆ. ಆಗ ಅವರ ಜೊತೆ ಚರ್ಚೆ ಮಾಡಿ, ಅದಕ್ಕೆ ಏನಾದರೂ ಒಂದು ದಾರಿ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಅವರು ಒಪ್ಪದೇ ಇದ್ದರೆ ಅವರ ಮೇಲೆ ಸಾಕಷ್ಟು ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇದೆ. ಆ ರೀತಿಯಾದಂತಹ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ. ಇದರ ಬಗ್ಗೆ ತಾವು ಚಿಂತೆ ಮಾಡುವುದು ಬೇಡ ಎಂದು ತಮಗೆ ಹೇಳುತ್ತೇನೆ. ಮೂರನೆಯದಾಗಿ ಮಾನ್ಯ ಶ್ರೀ ಯಡಿಯೂರಪ್ಪನವರು ಹೇಳಿದ ಹಾಗೆ ಕಬ್ಬಿನ ಬೆಲೆ ನಿಗದಿ ಮಾಡುವುದರಲ್ಲಿ, ಡಿಸ್ಟಲರಿ ಮತ್ತು ನಾನ್ ಡಿಸ್ಟಿಲರಿ ಇವೆರಡಕ್ಕೂ ಬೆಲೆ ನಿಗದಿ ಮಾಡಿದ್ದೀರಿ, ಈ ರೀತಿ ಮಾಡಿರುವುದು ತಪ್ಪು ಎಂದು ಹೇಳಿದ್ದಾರೆ. ಸರ್ಕಾರ ನಾನ್ ಡಿಸ್ಟಿಲರಿ ಎಂದು ಕಾರ್ಖಾನೆಗಳಿಗೆ 625 ರೂ., ಡಿಸ್ಟಿಲರಿ ಸಕ್ಕರೆ ಕಾರ್ಖಾನೆಗಳಿಗೆ 700 ರೂ.ನಿಗದಿ ಮಾಡಿದ್ದೇವೆ. ಇದು ರೈತರಿಗೆ ಅನುಕೂಲ ಆಗುವ ದೃಷ್ಟಿಯಲ್ಲಿ ಮಾಡಿದ್ದೇವೆಯೇ ಹೊರತು ಬೇರೆ ಏನೂ ಮಾಡಿಲ್ಲ. ಅವರು ಸಲಹೆ ಕೊಟ್ಟರೆ ನಾನ್ ಡಿಸ್ಟಿಲರಿ ಮತ್ತು ಡಿಸ್ಟಲರಿಗಳನ್ನು ಒಂದು ಮಾಡಿ ಒಂದೇ ರೀತಿಯಾದಂತಹ ಬೆಲೆಯನ್ನು ನಿಗದಿ ಮಾಡುವಂತಹ ಪ್ರಯತ್ನ ನಾವು ಮಾಡುತ್ತೇವೆ ಎಂದು ತಿಳಿಸುತ್ತೇನೆ. ರೈತರಿಗೆ ಅನುಕೂಲ ಇದ್ದರೆ, ಡಿಸ್ಟಿಲರಿ ಇದ್ದರೆ ಅವರಿಗೆ ಆದಾಯ ಹೆಚ್ಚು ಬರುತ್ತದೆ. ಆ ಭಾಗದಲ್ಲಿ ಬರುವಂತಹ ರೈತರಿಗೆ ಉತ್ಪಾದನೆಯಲ್ಲಿ ಹೇಳಬೇಕು ಎಂದರೆ, ಸಂಕೇಶ್ವರ ಇರಬಹುದು, ಉಗಾರ್ ಇರಬಹುದು, ಶಮೀರ್ ವಾಣಿ ಇರಬಹುದು, ಎಂ.ಕೆ.ಹುಬ್ಬಳಿ ಇರಬಹುದು, ಈ ಎಲ್ಲಾ ಕಾರ್ಖಾನೆಗಳು ಡಿಸ್ಟಿಲರಿ ಇರುವಂತಹ ಕಾರ್ಖಾನೆಗಳು. ಈ ಭಾಗದ ರೈತರಿಗೆ ಅನುಕೂಲ ಆಗಲಿ ಎಂದು ಈ ರೀತಿ ಮಾಡಿದ್ದು ನಿಜ. ನೀವು ಬೇಡ ಎಂದು ಸಲಹೆ ಕೊಟ್ಟರೆ, ರಾಜ್ಯದಲ್ಲಿ ಒಂದೇ ರೀತಿ ಮಾಡುವಂತಹ ಪ್ರಯತ್ನ ನಾವು ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೆ, ಡಿಸ್ಟಿಲರಿ ಇರತಕ್ಕಂತಹ ಸಕ್ಕರೆ ಕಾರ್ಖಾನೆಗಳು ಎಲ್ಲಿ ಇದೆ, ಆ ಭಾಗದಲ್ಲಿ ಇರತಕ್ಕಂಥ ರೈತರಿಗೆ ಅನುಕೂಲ ಆಗುತ್ತದೆ. ಡಿಸ್ಟಿಲರಿ ಇರತಕ್ಕಂತವರಿಗೆ ಹೆಚ್ಚು ಹಣ ಬರುತ್ತದೆ, ಆದರೆ ಅವರಿಗೆ ಹೆಚ್ಚು ಆದಾಯ ಬರುವುದಿಲ್ಲ. ನಿರ್ವಹಣೆ ವೆಚ್ಚ ಜಾಸ್ತಿ ಇರುತ್ತದೆ. ಡಿಸ್ಟಿಲರಿ ಇಲ್ಲದೇ ಇರುವವರಿಗೆ ಆದಾಯ ಕಡಿಮೆ ಇರುತ್ತದೆ. ನಾವು ಎರಡನ್ನು ಒಂದು ಮಾಡಿದರೆ ಈ ಭಾಗದ ರೈತರಿಗೆ ಅನ್ಯಾಯಯವಾಗುತ್ತದೆ. ಆದುದರಿಂದ ಡಿಸ್ಟಿಲರಿ ಇರುವರಿಗೂ, ಇಲ್ಲದವರಿಗೂ ಒಂದೇ ಬೆಲೆ ನಿಗದಿ ಮಾಡುವುದಕ್ಕೆ ಆಗುವುದಿಲ್ಲ. ಆ ರೀತಿ ಮಾಡಿದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಉಮೇಶ್ ವಿ.ಕತ್ತಿ: ಸನ್ಮಾನ್ಯ ಉಪಸಭಾಪತಿಯವರೆ, ರೈತರಿಗೆ ಅನುಕೂಲ ಆಗುವ ದೃಷ್ಟಿಯಿಂದ....

ಶ್ರೀ ಬಿ.ಎಸ್.ಯಡಿಯೂರಪ್ಪ: ಡಿಸ್ಟಿಲರಿ ಆಗದೇ ಇರುವುದಕ್ಕೆ ರೈತ ಏಕೆ ಸಫರ್ ಆಗಬೇಕು ಎಂಬುದೇ ನಮ್ಮ ಉದ್ದೇಶ. ಅವನು ಡಿಸ್ಟಿಲರಿ ಹಾಕಿಕೊಳ್ಳುವುದಕ್ಕೆ ನಮ್ಮ ಅಭ್ಯಂತರ ಇಲ್ಲ. ಡಿಸ್ಟಿಲರಿ ಇರುವವರಿಗೆ ಯಾವ ಬೆಲೆ ನಿಗದಿ ಮಾಡುತ್ತೀರೋ ಅದೇ ಬೆಲೆಯನ್ನು ಇವನಿಗೆ ನಿಗದಿ ಮಾಡಿ, ಇವನು ಡಿಸ್ಟಿಲರಿ ಹಾಕಿಕೊಳ್ಳಲಿ, ನಮ್ಮದು ಏನೂ ಅಭ್ಯಂತರ ಇಲ್ಲ.

ಶ್ರೀ ಸಿದ್ಧರಾಮಯ್ಯ: ಡಿಸ್ಟಿಲರಿ ಹಾಕುವುದಕ್ಕೆ ಪರ್ಮಿಷನ್ ಕೊಡಬೇಕು. ಅದು ತಕ್ಷಣವೇ ಆಗುವುದಿಲ್ಲ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಅವರು ಹೇಳುತ್ತಿರುವುದು ಸಹಕಾರಿ ಕ್ಷೇತ್ರಕ್ಕೆ ಅನುಕೂಲವಾಗುತ್ತದೆ, ಖಾಸಗಿ ಕ್ಷೇತ್ರಕ್ಕೆ ಅನಾನುಕೂಲವಾಗುತ್ತದೆ ಎಂದು.

ಶ್ರೀ ಉಮೇಶ್ ವಿ.ಕತ್ತಿ: ಸನ್ಮಾನ್ಯ ಉಪಸಭಾಪತಿಯವರೆ, ರೈತರಿಗೆ ಅನುಕೂಲ ಆಗಲೆಂದು ಸರ್ಕಾರ ಈ ಹೆಜ್ಜೆಯನ್ನು ಇಟ್ಟಿದೆ. ಅದು ಬೇಡ ಎಂದರೆ ಅದರ ಬಗ್ಗೆ....

ಉಪಾಧ್ಯಕ್ಷರು: ಬೇಡ ಅಲ್ಲ ರೀ, ಅಲ್ಲ ನೀವು...

ಶ್ರೀ ಉಮೇಶ್ ವಿ.ಕತ್ತಿ: ರೈತರಿಗೆ ಅನುಕೂಲವಾಗುವ ದೃಷ್ಟಿಯಲ್ಲಿ ವಿಚಾರ ಮಾಡುತ್ತಾ ಇದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾವು ಬೇಡ ಎಂದು ಹೇಳುತ್ತಿಲ್ಲ. ಡಿಸ್ಟಿಲರಿ ಅವರಿಗೆ ಏನು ನಿಗದಿ ಮಾಡಿದ್ದಾರೆ, ಅದೇ ಬೆಲೆಯನ್ನು ಬೇರೆ ಕಾರ್ಖಾನೆಗಳಿಗೂ ಕೊಡುವ ಹಾಗೆ ಮಾಡಿ.

ಶ್ರೀ ಉಮೇಶ್ ವಿ.ಕತ್ತಿ: ಸನ್ಮಾನ್ಯ ಉಪಸಭಾಪತಿಯವರೆ, ಯಾವುದೇ ಸಕ್ಕರೆ ಕಾರ್ಖಾನೆ ಡಿಸ್ಟಿಲರಿ ಬೇಡ ಎಂದು ಮುಂದೆ ಬರುವುದಾದರೆ, ಸರ್ಕಾರಕ್ಕೆ ಪ್ರಪೋಸಲ್ ಬರುವ ಹಾಗೆ ವ್ಯವಸ್ಥೆ ಮಾಡುತ್ತೇನೆ ಎಂದು ನಾನು ತಮ್ಮ ಮುಖೇನ ತಿಳಿಸಲು ಇಷ್ಟಪಡುತ್ತೇನೆ.

ಉಪಾಧ್ಯಕ್ಷರು: ಅವರು ಕೇಳುವುದಕ್ಕೆಲ್ಲಾ ಒಪ್ಪಿಕೊಳ್ಳಬೇಡಿ, ಇದ್ದದ್ದು ಇರಲಿ ಎಂದು ಎಲ್ಲರಿಗೂ ತಮ್ಮ ಅಭಿಪ್ರಾಯ ತಿಳಿಸಿ. ಅವರು ಹೇಳಲಿ,

ಶ್ರೀ ಉಮೇಶ್ ವಿ.ಕತ್ತಿ: ನಿನ್ನೆ ದಿವಸ ಹಿರಿಯರಾದಂತಹ ಮಾನ್ಯ ಶ್ರೀ ಪುಟ್ಟಣ್ಣಯ್ಯನವರು ಹೇಳಿದ ಹಾಗೆ ರಾಜ್ಯದ ಉಚ್ಚನ್ಯಾಯಾಲಯ ಏನು ತಡೆ ಆಜ್ಞೆ ಕೊಟ್ಟಿದ್ದಾರೆ ಅದಕ್ಕೆ ಶೇಷ್ಮ ನ್ಯಾಯಾಲಯಕ್ಕೆ ಹೋಗಬೇಕು ಎಂದು ಸಲಹೆ ಕೊಟ್ಟಿದ್ದಾರೆ. ಈಗಾಗಲೇ ನಾನು ಹೇಳಿದ್ದೇನೆ, ಅಲಹಾಬಾದ್ ಹೈಕೋರ್ಟ್ ಕೊಟ್ಟಂತಹ ತೀರ್ಪಿನ ಮೇಲೆ ಶೇಷ್ಮ ನ್ಯಾಯಾಲಯ ಇದಕ್ಕೆ ತಡೆ ಆಜ್ಞೆ ಕೊಟ್ಟಿಲ್ಲ. ಆದಕಾರಣ ಶೇಷ್ಮ

ನ್ಯಾಯಾಲಯದಲ್ಲಿ ಈಗಾಗಲೇ ಇದರ ಬಗ್ಗೆ ತೀರ್ಮಾನವಾಗಿದೆ. ಆದಕಾರಣ ನಾವು ಇಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ. ಖಾಸಗಿ ಕಾರ್ಖಾನೆ ಹಿಂದೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮತ್ತು ಅದರ ಜೊತೆಗೆ ಮಂಡ್ಯ ಸಕ್ಕರೆ ಕಾರ್ಖಾನೆ ಅವರು ಏನು ಹೇಳಿದ್ದಾರೆ, ಆ ರೀತಿ ಸಿ.ಎಂ.ಡಿ. ಅವರಿಗೆ ಆದೇಶ ಕೊಟ್ಟು, ಅಲ್ಲಿ ಬರುವಂತಹ ರೈತ ಪ್ರತಿನಿಧಿಗಳು ಮತ್ತು ಶಾಸಕರನ್ನು ಕರೆದು ಮೀಟಿಂಗ್ ಮಾಡಿ ಒಂದು ತೀರ್ಮಾನಕ್ಕೆ ಬರೋಣ ಎಂದು ತಮ್ಮ ಮುಖಾಂತರ ಹೇಳುತ್ತೇನೆ. ಇನ್ನು ಮೂರನೆಯದಾಗಿ ಭದ್ರಾ ಸಕ್ಕರೆ ಕಾರ್ಖಾನೆಯಲ್ಲಿ ಪರ್ ಟನ್‌ಗೆ ಎಂಟು ರೂ. ಹಿಡಿದ ಬಗ್ಗೆ ತಾವು ತಿಳಿಸಿದಿರಿ, ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಒಂದೇ ಅಲ್ಲ, ರಾಜ್ಯದಲ್ಲಿ ಬರುವಂತಹ ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಜನರಲ್ ಬಾಡಿಯಲ್ಲಿ ಏನು ರೆಸಲ್ಯೂಶನ್ ಆಗುತ್ತದೆಯೋ ಆ ರೀತಿ ಎಲ್ಲಾ ಕಾರ್ಖಾನೆಗಳಲ್ಲೂ ಹಿಡಿಯುತ್ತೇವೆ. ರೈತರಿಗೆ ಆ ಕಾರ್ಖಾನೆ ಇರುವುದರಿಂದ, ರೈತರೇ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ಹೆಚ್.ಶಿವಪ್ಪ: ಉಪಾಧ್ಯಕ್ಷರೆ, ಒಂದು ನಿಮಿಷ....

ಉಪಾಧ್ಯಕ್ಷರು: ಶ್ರೀ ಶಿವಪ್ಪನವರೇ ಅವರು ಉತ್ತರ ಮುಗಿಸಲಿ.

ಶ್ರೀ ಹೆಚ್.ಶಿವಪ್ಪ: ನನಗೆ ಸಂಬಂಧ ಪಟ್ಟಿದ್ದರಿಂದ ಕ್ಲಾರಿಫಿಕೇಷನ್ ಕೊಡಬೇಕು. ಅವರಿಗೆ ಇನ್‌ಫರ್‌ಮೇಷನ್ ಇಲ್ಲದೆ ತಪ್ಪು ಮಾಹಿತಿ ಕೊಡಬಾರದು.

(ಗೊಂದಲ)

ಶ್ರೀ ಹೆಚ್.ಶಿವಪ್ಪ: ಎಂಟು ರೂಪಾಯಿ ಕಡಿತ ಮಾಡಿಕೊಳ್ಳುವಂತಹದ್ದು ಜನರಲ್ ಬಾಡಿ ತೀರ್ಮಾನ ಅಲ್ಲ, ನಾವು ಫೈನಾನ್‌ಷಿಯಲ್ ಇನ್ಸ್‌ಟಿಟ್ಯೂಷನ್ ಏನಿದೆ ಅವುಗಳಿಗೆ ಅಂಡರ್ ಟೇಕಿಂಗ್ ಕೊಟ್ಟಿರುತ್ತೇವೆ. ಸಾಲ ಕೊಡಬೇಕಾದರೆ ಆ ಷರತ್ತಿನ ಆಧಾರದ ಮೇಲೆ ಅವರು ಸಾಲ ಕೊಟ್ಟಿರುತ್ತಾರೆ. ಅದನ್ನು ನಾವು ಕಡಿತ ಮಾಡಿಕೊಳ್ಳುತ್ತೇವೆ. ಇಟ್ ಇಸ್ ಬೈಂಡಿಂಗ್.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಯಾರಿಗೆ ಬೈಂಡಿಂಗ್? ರೈತರಿಗೋ...

ಉಪಾಧ್ಯಕ್ಷರು: ಒಂದು ನಿಮಿಷ, ಅವರು ಹೇಳುವಾಗ ಮಧ್ಯದಲ್ಲಿ ತೊಂದರೆ ಮಾಡಿದರೆ ಅವರು ಹೇಗೆ ಹೇಳಬೇಕು?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಯಾವುದೇ ಕಾರ್ಖಾನೆಯಲ್ಲಿ ಸಾಲ ಕೊಡಬೇಕಾದರೆ ಎಂಟು ರೂಪಾಯಿ ಬಡ್ಡಿ ಹಿಡಿದುಕೊಳ್ಳುವುದು ಎಲ್ಲೂ ಇಲ್ಲ. ಇವರು ಬೈಡಿಂಗ್ ಎಂದು ಹೇಳುತ್ತಾರೆ, ರೈತರ ಬೈಂಡಿಗೋ ಅಥವಾ....

ಉಪಾಧ್ಯಕ್ಷರು: ಶ್ರೀರಾಮರೆಡ್ಡಿ ಅವರೇ ಸಚಿವರು ಉತ್ತರ ಹೇಳಿ ಮುಗಿಸಲಿ, ಮಂತ್ರಿಗಳು ಉತ್ತರ ಮುಗಿಸಿ.

ಶ್ರೀ ಉಮೇಶ್ ವಿ.ಕತ್ತಿ: ಸಹಕಾರಿ ರಂಗದಲ್ಲಿ ಬರುವಂತಹ ಸಕ್ಕರೆ ಕಾರ್ಖಾನೆಗಳು ರೈತರದೇ ಇರುವುದರಿಂದ ಸಾಲ ತೆಗೆದುಕೊಳ್ಳುವುದಕ್ಕೆ ಜನರಲ್ ಬಾಡಿ ಅಪ್ರೂವಲ್ ಕೇಳಬೇಕಾಗುತ್ತದೆ, ರೈತರ ಪರ್ಮಿಷನ್ ಕೇಳಬೇಕಾಗುತ್ತದೆ. ಆ ಕಾರಣಕ್ಕಾಗಿ ಸಾಲ ತೆಗೆದುಕೊಳ್ಳುವುದಕ್ಕೆ ರೈತರು ಪರ್ಮಿಷನ್ ತೆಗೆದುಕೊಳ್ಳುತ್ತಾರೆ, ಅದರ ಜೊತೆಯಲ್ಲೇ ಇದೆಲ್ಲಾ ಬರುತ್ತದೆ. ಆದಕಾರಣ ಇದರ ಬಗ್ಗೆ ಹೆಚ್ಚಿನ ಚರ್ಚೆ ಬೇಡ.

ಉಪಾಧ್ಯಕ್ಷರು: ತಾವು ಒಳ್ಳೆಯ ರೀತಿಯಿಂದ ಉತ್ತರ ಕೊಟ್ಟಿದ್ದೀರಿ, ತಮಗೆ ಧನ್ಯವಾದಗಳು. ತಾವು ಕುಳಿತುಕೊಳ್ಳಬೇಕು. ಈಗ ಯು.ಆರ್.ಸಭಾಪತಿಯವರು ಅವರು ಎಲ್ಲಾ ಪ್ರಶ್ನೆಗಳಿಗೂ ಉತ್ತರ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರಿಗೆ ಮಾತ್ರ ನೀವು ಸರ್ಟಿಫಿಕೇಟ್ ಕೊಟ್ಟಿರಿ. ನಮ್ಮ ಗತಿ ಏನು?

ಉಪಾಧ್ಯಕ್ಷರು: ನೀವು ಕೇಳಿದ್ದಕ್ಕೆ ಅವರು ಒಳ್ಳೆಯ ಉತ್ತರ ಕೊಟ್ಟಿದ್ದಕ್ಕೆ ನಿಮಗೂ ಸರ್ಟಿಫಿಕೇಟ್ ಕೊಡುತ್ತೇನೆ. ವಿಸ್ತಾರವಾಗಿ ಎಲ್ಲಾ ಸದಸ್ಯರಿಗೂ ಉತ್ತರ ಕೊಟ್ಟಿದ್ದಾರೆ.

ಮಾನ್ಯ ಸದಸ್ಯರು: ಸನ್ಮಾನ್ಯ ಉಪಾಧ್ಯಕ್ಷರೆ, ಸಕ್ಕರೆ ಸಹಕಾರ ಸಚಿವರು ಸರಿಯಾಗಿ ಉತ್ತರ ಕೊಟ್ಟಿಲ್ಲ.

1.10 ಪಿ.ಎಂ

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ನಿನ್ನೆಯ ದಿವಸ ಮಾನ್ಯ ಉಪ ಮುಖ್ಯಮಂತ್ರಿಗಳು ಅಲ್ಲೇ ಇದ್ದರು, ತಾವು ಸಹ ಇದ್ದಿರಿ. ಬರಗಾಲ, ಅತಿವೃಷ್ಟಿ ಬಗ್ಗೆ ಹೇಳಿಕೆ ಹೇಳಬೇಕಿತ್ತು.

(ಗೊಂದಲ)

ಉಪಾಧ್ಯಕ್ಷರು: ಈಗ ನಿಯಮ 69ರ ಅಡಿಯಲ್ಲಿ ಇನ್ನೊಂದು ವಿಚಾರ ಇದೆ. ಸಭಾಪತಿಯವರೇ ತಾವು ಮಾತನಾಡಿ

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಕಂದಾಯ ಮಂತ್ರಿಗಳು ಇಲ್ಲ ನೀವ್ಯಾರಾದರೂ ಉತ್ತರ ಕೊಡಿ.

ಉಪಾಧ್ಯಕ್ಷರು: ಕರೆಸುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಕಂದಾಯ ಮಂತ್ರಿಗಳಿಗೆ ಅನಾರೋಗ್ಯ ಇದೆ, ಅವರು ಬಂದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅರಣ್ಯ ಸಚಿವರಿಗೂ ಅನಾರೋಗ್ಯ....

ಉಪಾಧ್ಯಕ್ಷರು: ಈಗ ಉತ್ತರ ಮುಕ್ತಾಯವಾಗಿದೆ. ಸಭಾಪತಿಯವರೇ ತಾವು ಮಾತನಾಡಿ.

ಶ್ರೀ ಎಸ್.ಎ.ರವೀಂದ್ರನಾಥ್: ಒಂದೂವರೆ ಕೋಟಿ ರೂಪಾಯಿ ವ್ಯವಹಾರ ಸ್ವಾಮಿ.

ಉಪಾಧ್ಯಕ್ಷರು: ತಾವು ಕೂಡಿ ರವೀಂದ್ರನಾಥ್. ಯಡಿಯೂರಪ್ಪನವರು ಹೇಳಿದ್ದಾರೆ.

ಶ್ರೀ ಎಸ್.ಎ.ರವೀಂದ್ರ ನಾಥ್: ಉತ್ತರವನ್ನೇ ಕೊಡದಿದ್ದರೆ ಹೇಗೆ? ಉತ್ತರವನ್ನೇ ಕೊಡದಿದ್ದರೆ ನಾವು ಪ್ರಶ್ನೆ ಹೇಗೆ ಹಾಕಬೇಕು?

ಉಪಾಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೇ, ನೀವು ಮುಕ್ತಾ, ಸಾಕು ಎಂದು ಹೇಳಿದ ಮೇಲೆ ನಾವು ಮುಗಿಸಿದ್ದೇವೆ. ನಿಮ್ಮ ಸದಸ್ಯರಿಗೆ ಹೇಳಿ. ರವೀಂದ್ರನಾಥ್‌ಗೆ ಹೇಳಿ. ಬೇರೆ ವಿಷಯ ತೆಗೆದುಕೊಳ್ಳಿ ಎಂದು ಹೇಳಿದ ಮೇಲೆ ನಾನು ಮಾನ್ಯ ಸಭಾಪತಿಯವರನ್ನು ಕರೆದಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರು ಪ್ರಾರಂಭ ಮಾಡಲಿ. ಕೊನೆಗೆ ಏನು ಅಂದರೆ ಬಿಲ್‌ಗಳು ರಾತ್ರಿ ಪಾಸ್ ಆಗುತ್ತವೆ.

ಉಪಾಧ್ಯಕ್ಷರು: ಟೈಮ್ ಬಹಳ ಆಗುತ್ತದೆ, ನಿನ್ನೆ ರಾತ್ರಿ 9.15 ಆಗಿದೆ. ತಾವು ಸಭಾಪತಿಯವರು ಪ್ರಾರಂಭ ಮಾಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇವತ್ತು 8ರೊಳಗೆ ಮುಗಿಸಬೇಕಾಗುತ್ತದೆ.

ಶ್ರೀ ಎಸ್.ಎ.ರವೀಂದ್ರನಾಥ್: ಸನ್ಮಾನ್ಯ ಉಪಾಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರ ಕೊಡಬೇಕು.

ಉಪಾಧ್ಯಕ್ಷರು: ನಿಮ್ಮ ಲೀಡರ್ ಹೇಳಿದ ಮೇಲೆ ನಾವು ಅದನ್ನು ಮುಕ್ತಾಯ ಮಾಡಿದ್ದೇವೆ. ತಾವು ದಯಮಾಡಿ ಕೂಡಿ.

ಶ್ರೀ ಎಸ್.ಎ.ರವೀಂದ್ರ ನಾಥ್: ನಾವು ಕೇಳಿದ್ದಕ್ಕೆ ಹೇಳಲೇ ಇಲ್ಲ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಉಪಾಧ್ಯಕ್ಷರೆ, ತಾವು ಸಾಕಷ್ಟು ಸಮಯ ಕೊಟ್ಟಿದ್ದೀರಿ. ನಮ್ಮ ಅಭ್ಯಂತರ ಇಲ್ಲ. ಒಂದೊಂದೇ ನಿಮಿಷದಲ್ಲಿ ಮುಗಿಸುತ್ತಾರೆ.

ಉಪಾಧ್ಯಕ್ಷರು: ಇದು ಎಷ್ಟು ಸಾರಿ ಆಗಿದೆ?

ಶ್ರೀ ಬಿ.ಎಸ್.ಯಡಿಯೂರಪ್ಪ: ತಾವು ಸಾಕಷ್ಟು ಸಮಯ ಕೊಟ್ಟಿದ್ದೀರಿ. ಮಂತ್ರಿಗಳು ಒಂದು ನಿಮಿಷದಲ್ಲಿ ಹೇಳಲಿ. ಅವರದ್ದು ಬಹಳ ಮುಖ್ಯವಾದ ವಿಷಯ ಇದೆ ಐದು ನಿಮಿಷದಲ್ಲಿ ಮುಗಿಸೋಣ. ನಾವ್ಯಾರೂ ಕ್ಲಾರಿಫಿಕೇಶನ್ ಕೇಳುವುದಿಲ್ಲ.

ಉಪಾಧ್ಯಕ್ಷರು: ಈಗಾಗಲೇ ಹೇಳಿದ್ದಾರೆ. ಮತ್ತೆ ಎಷ್ಟು ಸಲ ಹೇಳುವುದು?

ಶ್ರೀ ಎಸ್.ಎ.ರವೀಂದ್ರನಾಥ್: ನನ್ನ ಪ್ರಶ್ನೆಗೆ ಏನೂ ಉತ್ತರ ಹೇಳಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನೇ ಮಧ್ಯದಲ್ಲಿ ಅಡ್ಡಿ ಮಾಡಿದೆ.

ಉಪಾಧ್ಯಕ್ಷರು: ತಾವೇ ಮುಕ್ತಾಯ ಮಾಡಿ ಎಂದು ಹೇಳಿದಿರಿ.

ಶ್ರೀ ಎಸ್.ಎ.ರವೀಂದ್ರನಾಥ್: ಒಂದೂವರೆ ಕೋಟಿ ರೂಪಾಯಿ ವ್ಯವಹಾರ ಅದು.

ಉಪಾಧ್ಯಕ್ಷರು: ತಾವು ಕೂಡಿ. ಮಾನ್ಯ ಸಕ್ಕರೆ ಸಚಿವರೇ, ಒಂದ ನಿಮಿಷದಲ್ಲಿ ಹೇಳಿ.

ಶ್ರೀ ಸುಭಾಷ್ ಗುತ್ತೇದಾರ್: ನಮ್ಮ ಪರ್ಚೇಸ್ ಟ್ಯಾಕ್ಸ್ ವಾಪಸ್ ಕೊಡುತ್ತೇನೆ ಎಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ್ದರು.

ಉಪಾಧ್ಯಕ್ಷರು: ಇವತ್ತೇನು ವಿಷಯ ಇದೆ, ಅದರ ಮೇಲೆ ಮಾತನಾಡಿ. ವಿಷಯ ಬಿಟ್ಟು ವಿಷಯಾಂತರ ಮಾಡುತ್ತಿದ್ದೀರಿ; ಹೇಗೆ? ತಾವು ಕೂಡಿ.

ಶ್ರೀ ಸುಭಾಷ್ ಗುತ್ತೇದಾರ್: ರೀಫಂಡ್ ಕೊಡಬೇಕಾಗಿದೆ. ಉಪ ಮುಖ್ಯಮಂತ್ರಿಗಳು ಕೊಡಬೇಕು. ನಮಗೆ ಉಪ ಮುಖ್ಯಮಂತ್ರಿಗಳು ಒಪ್ಪಿಕೊಳ್ಳಬೇಕು.

ಶ್ರೀ ಉಮೇಶ್ ವಿ.ಕತ್ತಿ: ಮಾನ್ಯ ಉಪಾಧ್ಯಕ್ಷರೆ, ಭದ್ರಾ ಸಕ್ಕರೆ ಕಾರ್ಖಾನೆ ಪರ್ ಟನ್ 8 ರೂಪಾಯಿ ಬಗ್ಗೆ ಈಗಾಗಲೇ.

ಉಪಾಧ್ಯಕ್ಷರು: ಅವರು ಮಾತನಾಡುವಾಗ ನೀವು ಎದ್ದು ನಿಂತರೆ ಹೇಗೆ? ತಾವು ಕೂಡಿ. ಮಾನ್ಯ ಸಚಿವರು ಉತ್ತರ ಕೊಡುವಾಗ ತಾವು ಕೂಡಿ ಎಂದರೂ ಕೂಡುವುದಿಲ್ಲವಲ್ಲಾ. ಮಾನ್ಯ ಸಿದ್ಧರಾಮಯ್ಯನವರು ನಂತರ ಹೇಳುತ್ತಾರೆ ಕೂಡಿ.

ಶ್ರೀ ಉಮೇಶ್ ವಿ.ಕತ್ತಿ: ಕಂಪ್ಲಿ ಸಕ್ಕರೆ ಕಾರ್ಖಾನೆ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ. ಕಂಪ್ಲಿ ಸಕ್ಕರೆ ಕಾರ್ಖಾನೆಯ 6.5 ಕೋಟಿ ರೂಪಾಯಿಯನ್ನು ಸರ್ಕಾರ ಕಟ್ಟಿದ್ದಾರೆ. ಇನ್ನು ಎರಡು ಕೋಟಿ ರೂ.ಗಳನ್ನು ಈ ತಿಂಗಳ ಅಂತ್ಯದೊಳಗೆ ಕಟ್ಟುತ್ತೇವೆಂದು ಮಾಲೀಕರು ಆಶ್ವಾಸನೆ ಕೊಟ್ಟಿದ್ದಾರೆ. ಈಗಾಗಲೇ ಕಾರ್ಮಿಕರ ಅರಿಯರ್ಸ್ ಎಲ್ಲಾ ಕೊಟ್ಟು ಮುಗಿಸಿದ್ದಾರೆ. ಇನ್ನು ಎರಡು ಕೋಟಿ ರೂಪಾಯಿ ಸರ್ಕಾರಕ್ಕೆ ಕಟ್ಟಬೇಕಾಗಿದೆ. ಕಟ್ಟಿದ ತಕ್ಷಣ ಅವನ್ನು ವಸೂಲಿ ಮಾಡಿಕೊಂಡು ಕಾರ್ಖಾನೆ ಪ್ರಾರಂಭ ಮಾಡುವ ಪ್ರಯತ್ನ ಸರ್ಕಾರ ಮಾಡುತ್ತದೆ ಎಂದು ತಮಗೆ ತಿಳಿಸುತ್ತೇವೆ. ಇನ್ನು ಮಹದೇಶ್ವರ ಸಕ್ಕರೆ ಕಾರ್ಖಾನೆ ಬಗ್ಗೆ ಮಾನ್ಯ ಸದಸ್ಯರು ತಿಳಿಸಿದ್ದಾರೆ. ಅದರ ಬಗ್ಗೆ ಒಂದು ಸಭೆಯನ್ನು ಕರೆಯುತ್ತೇನೆ. ಸಂಬಂಧಪಟ್ಟಂತಹ ಎಲ್ಲಾ ಶಾಸಕರನ್ನೂ, ರೈತ ಪ್ರತಿನಿಧಿಗಳ ಸಭೆ ಕರೆದು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ತಮ್ಮ ಮುಖೇಣ ತಿಳಿಸುತ್ತೇನೆ.,

ಶ್ರೀ ಎಸ್.ಎ.ರವೀಂದ್ರ ನಾಥ್: ಸನ್ಮಾನ್ಯ ಉಪಾಧ್ಯಕ್ಷರೆ, 1977ನೇ ಇಸವಿಯಿಂದ ಮುಂದಿರಿತಕ್ಕ ಹಣ 1.5 ಕೋಟಿ ರೂಪಾಯಿ.

ಉಪಾಧ್ಯಕ್ಷರು: ಇದೇನು ಈ ತರಹ? ನೀವು ರೂಲ್ಸನ್ನು ಓದಿಕೊಂಡು ಬರಬೇಕು.

ಶ್ರೀ ಉಮೇಶ್ ವಿ.ಕತ್ತಿ: ಭದ್ರಾ ಸಕ್ಕರೆ ಕಾರ್ಖಾನೆ ಸಹಕಾರಿ ರಂಗದಲ್ಲಿರುವ ಸಕ್ಕರೆ ಕಾರ್ಖಾನೆ. ಆ ಸಕ್ಕರೆ ಕಾರ್ಖಾನೆ ಸಾಲ ಪಡೆಯಬೇಕಾದರೆ ಜನರಲ್ ಬಾಡಿ ಪರ್ಮಿಷನ್ ತೆಗೆದುಕೊಳ್ಳಬೇಕಾಗುತ್ತದೆ. ಆ ಜನರಲ್ ಬಾಡಿಯಲ್ಲಿ ಪರ್ಮಿಷನ್ ತೆಗೆದುಕೊಳ್ಳಬೇಕಾದರೆ, ಸಾಲ ಪಡೆಯಬೇಕಾದಂತಹ ಕಂಡೀಷನ್ಸ್ ಏನು ಇರುತ್ತದೆ, ಅದನ್ನೆಲ್ಲಾ ಒಪ್ಪ ಬೇಕಾಗುತ್ತದೆ. ಆ ಕಾರಣ ಆ ಜನರಲ್ ಬಾಡಿ ರೈತರು ಒಪ್ಪಿದ ಮೇಲೆ ಆ ಎಂಟು ರೂಪಾಯಿ ಮುರಿದಿರುತ್ತಾರೆಯೇ ವಿನಃ ಜನರಲ್ ಬಾಡಿ ಪರ್ಮಿಷನ್ ಇಲ್ಲದೇ ಯಾವುದೂ ಮಾಡುವುದಕ್ಕೆ ಆಗುವುದಿಲ್ಲ ಎಂದು ತಮ್ಮ ಮುಖೇನ ಮಾನ್ಯ ರವೀಂದ್ರನಾಥ್ ಅವರ ಗಮನಕ್ಕೆ ತರಲು ಇಚ್ಛೆ ಮಾಡುತ್ತೇನೆ. ಮತ್ತೆ ಹೆಚ್ಚಿನ ಮಾಹಿತಿ ಬೇಕಾದರೆ ಅವರು ಕೇಳಲಿ. ಸವಿಸ್ತಾರವಾದ ಮಾಹಿತಿಯನ್ನು ಕೊಡುವ ಪ್ರಯತ್ನ ಮಾಡುತ್ತೇವೆ. ಅದರ ಜೊತೆಗೆ ಅಳಂದ್ ಸಕ್ಕರೆ ಕಾರ್ಖಾನೆ ಬಗ್ಗೆ ಈಗಾಗಲೇ ಹಿಂದಿನ ಸಭೆಯಲ್ಲಿ ಸಹ ಸಾಕಷ್ಟು ಚರ್ಚೆ ಆಗಿದೆ.

ಶ್ರೀ ಸಿದ್ಧರಾಮಯ್ಯ: ಆಳಂದ್ ಸಕ್ಕರೆ ಕಾರ್ಖಾನೆಯ ವಿಚಾರ. ಮಾನ್ಯ ಸದಸ್ಯರಾದ ಸುಭಾಷ್ ಗುತ್ತೇದಾರರು ಪರ್ಚೇಸ್ ಟ್ಯಾಕ್ಸ್ ಕೊಡಬೇಕು, ಅದು ಗವರ್ನಮೆಂಟಿನಿಂದ ರೀಫಂಡ್ ಆಗಬೇಕು ಎಂದು ಹೇಳಿದ್ದಾರೆ. ಅದನ್ನು ನಾನು ತರಿಸಿ ಎಷ್ಟು ಕೊಡಬೇಕಾಗಿದೆ ಎಂಬುದನ್ನು ಪರಿಶೀಲನೆ ಮಾಡಿ ಕೊಡಬೇಕಾಗಿತ್ತು ಎಂದರೆ ಕೊಡತಕ್ಕ ಪ್ರಯತ್ನ ಮಾಡುತ್ತೇನೆ.

ಉಪಾಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೇ, ನೀವು ಈಗ ಹೇಳಿ. ಎಷ್ಟು ಸಾರಿ

ಪ್ರಶ್ನೆ ಕೇಳಿದ್ದಾರೆ. ಅವರು ಉತ್ತರ ಹೇಳಿದರೂ ಹೀಗೆ ಮಾಡಿದರೆ ಹೇಗೆ? ಯಾವ ರೀತಿ ಮಾಡುವುದು?

ಶ್ರೀ ಎಸ್.ಎ.ರವೀಂದ್ರನಾಥ್: ಉತ್ತರ ಹೇಳುತ್ತಿಲ್ಲ.

ಉಪಾಧ್ಯಕ್ಷರು: ಅವರು ಹೇಳಿದ್ದಾರೆ, ಮತ್ತೆ ಮತ್ತೆ ನೀವು ಕೇಳುತ್ತಿದ್ದೀರಿ.

(ಗೊಂದಲ)

ಶ್ರೀ ಎಸ್.ಎ.ರವೀಂದ್ರನಾಥ್: 1977ನೆಯ ಇಸವಿಯಿಂದ ಅದು ಒಂದೂವರೆ ಕೋಟಿ ಆಗಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದು ಒಳ್ಳೆಯ ಸಂಪ್ರದಾಯ ಆಗುವುದಿಲ್ಲ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಚರ್ಚೆ ಮಾಡುವುದೇ ಬೇಡ. ಏನು ಇದು?

ಉಪಾಧ್ಯಕ್ಷರು: ಸಭೆ ನಿಯಮವನ್ನು ಪಾಲಿಸಬೇಕು.

(ಗೊಂದಲ)

ಶ್ರೀ ಎಚ್.ಶಿವಪ್ಪ: ಅದಕ್ಕೇ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಬೇಕು ಎಂದು ಹೇಳಿದ್ದು. ಏನು ಸಾರ್ ಇದು? ನೀವು ಲೀಡರ್.

(ಗೊಂದಲ)

ಉಪಾಧ್ಯಕ್ಷರು: ಇದು ರೈತರ ಪ್ರಶ್ನೆ ಇದೆ, ಎಲ್ಲರಿಗೂ ಅವಕಾಶ ಕೊಡಬೇಕು ಎಂಬ ಒಳ್ಳೆಯ ಉದ್ದೇಶದಿಂದ ಎಲ್ಲಾ ಸದಸ್ಯರಿಗೂ ನಾವು ಅವಕಾಶ ಕೊಟ್ಟಿದ್ದೇವೆ. ಮತ್ತೆ ಅದನ್ನು ದುರುಪಯೋಗ ಮಾಡಿಕೊಂಡರೆ ನಾವೇನು ಮಾಡಬೇಕು? ಇದು ಒಳ್ಳೆಯದಲ್ಲ.

(ಗೊಂದಲ)

ಶ್ರೀ ಎಚ್.ಶಿವಪ್ಪ: ರೂಲ್ಸ್ ಆಫ್ ಪ್ರೊಸೀಜರ್ ಏನೂ ಇಲ್ಲವಾ?

(ಗೊಂದಲ)

ಶ್ರೀ ಎಸ್.ಎ.ರವೀಂದ್ರನಾಥ್: ಕಾನೂನು, ಕಟ್ಟಳೆ, ರೂಲ್ಸ್ ಇವರಿಂದ ಕಲಿಯಬೇಕಾಗಿಲ್ಲ. ನನಗೂ ಚೆನ್ನಾಗಿ ಗೊತ್ತಿದೆ.

ಶ್ರೀ ಎಚ್.ಶಿವಪ್ಪ: ನಾನು ಯಾವ ಸದಸ್ಯರಿಗೂ ಹೇಳುತ್ತಾ ಇಲ್ಲ. ಅಧ್ಯಕ್ಷರ ಗಮನಕ್ಕೆ ತರುತ್ತಿದ್ದೇನೆ. I am bringing this to the notice of the chair.

(ಗೊಂದಲ)

ಉಪಾಧ್ಯಕ್ಷರು: ತಾವಿಬ್ಬರೂ ದಯಮಾಡಿ ಕೂಡಿ. ಸಭಾಪತಿಯವರು ಪ್ರಾರಂಭ ಮಾಡಿ.

ವಿಷಯ: ದಕ್ಷಿಣ ಕನ್ನಡ ಜಿಲ್ಲೆ ಹಾಗು ಉಡುಪಿ ಜಿಲ್ಲೆಯಲ್ಲಿ ಜಲ ಮತ್ತು ವಾಯು ಮಾಲಿನ್ಯ ತಡೆಗಟ್ಟುವ ಬಗ್ಗೆ

+ ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಉಪಾಧ್ಯಕ್ಷರೆ, ಕಳೆದ 15 ದಿನಗಳಿಂದ ಅವಿರತವಾಗಿ ಸದನದಲ್ಲಿ ತಮ್ಮ ಗಮನವನ್ನು ಸೆಳೆಯಲು ಪ್ರಯತ್ನ ಪಟ್ಟು ಪಟ್ಟು ಇವತ್ತು ಬಹಳ ತಡವಾಗಿಯಾದರೂ ನನಗೆ ಅವಕಾಶ ಕೊಟ್ಟಿದ್ದೀರಿ. ಅದಕ್ಕೆ ನಿಮಗೆ ಮೊದಲನೆಯಾಗಿ ಅಭಿನಂದನೆ ಕೊಡುತ್ತೇನೆ. ಆಲೂಗೆಡ್ಡೆ ಚರ್ಚೆ ಆಯಿತು. ಟೊಮ್ಯಾಟೋ ಚರ್ಚೆ ಆಯಿತು. ಕಬ್ಬು ಚರ್ಚೆ ಆಯಿತು. ಮೀನಿನ ಬಗ್ಗೆ ಯಾರೂ ಚರ್ಚೆ ಮಾಡುವುದಕ್ಕೆ ಬಿಡುವುದಿಲ್ಲ. ಅದು ನಮ್ಮ ದುರಾದೃಷ್ಟ. ಇವತ್ತು ಮೀನುಗಾರರ ಸಮಸ್ಯೆಗಿಂತಲೂ ಮೀನು ತಿನ್ನುವ ಜನ ಯಾರು ಇದ್ದಾರೆ, ಅವರ ಸಮಸ್ಯೆ ಬಗ್ಗೆ ನಾನು ಪ್ರಸ್ತಾವಿಸಬೇಕಾಗಿದೆ. ಹೊಟ್ಟೆ ಹಾಳು ಮಾಡಿಕೊಳ್ಳುವಂತಹ ಪರಿಸ್ಥಿತಿ ಉದ್ಭವ ಆದರೂ ಕೂಡ ಇವತ್ತು ಈ ಸಮಸ್ಯೆಯನ್ನು ಕೂಲಂಕಷವಾಗಿ ಅಧ್ಯಯನ ಮಾಡಬೇಕಾಗಿದೆ. ಇವತ್ತು ಸರ್ಕಾರವನ್ನು ಇರಿಸುಮುರಿಸುಗೊಳಿಸುವುದಕ್ಕೆ ಆಗಲೀ ಹೇಳುತ್ತಿಲ್ಲ ಮೂರು ಇಲಾಖೆಗಳು ಇದರಲ್ಲಿ ಸಂಬಂಧಪಟ್ಟಿವೆ. ಬೃಹತ್ ಕೈಗಾರಿಕೆ, ಮೀನುಗಾರಿಕೆ ಇಲಾಖೆ ಹಾಗೂ ಪರಿಸರ ಇಲಾಖೆ. ಇದರ ಬಗ್ಗೆ ಸಾಕಷ್ಟು ಗಮನ ಕೊಡಬೇಕು. ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಸ್ಥಾಪಿಸಲ್ಪಟ್ಟಿರತಕ್ಕಂಥ ಬೃಹತ್ ಕೈಗಾರಿಕೆಗಳು ಸಮುದ್ರಕ್ಕೆ ಬಿಡತಕ್ಕಂತಹ ತ್ಯಾಜ್ಯ ವಸ್ತುಗಳ ಮೇಲೆ ಸಂಸ್ಕರಣಗೊಳಿಸಬೇಕು ಎಂಬ ನಮ್ಮ ವಾದ ಏನು ಎಂಬುದನ್ನು ಕಳೆದ ಎರಡು ವರ್ಷದಲ್ಲಿ ಈ ಸದನದಲ್ಲಿ ನಾನು ಮಾಡಿಕೊಂಡು ಬಂದಿದ್ದೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ಶಾಸಕರುಗಳೂ ಕೂಡ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ನಾವು ಈ ಬೃಹತ್ ಕೈಗಾರಿಕೆಗಳು ಏನು ನಮ್ಮ ಈ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗಿದೆ, ಇದರ ಬಗ್ಗೆ ಸಾಕಷ್ಟು ಪ್ರಶ್ನೆಯನ್ನು ನಾನು ಕೇಳಿದ್ದೆ. ಆದರೆ ನಮ್ಮ ದುರಾದೃಷ್ಟ ಏನು ಎಂದರೆ ನಾನು 14.8, 8.8.96, 19.7.96, 25.7.96, 31.7.96, 14.8.97 ಈ ವಿವಿಧ ಅಧಿವೇಶನದಲ್ಲಿ ಜರುಗಿದಾಗ ನಾನು ಕೇಳಿದಂತಹ ಪ್ರಶ್ನೆಗಳಿಗೆ ಬೃಹತ್ ಕೈಗಾರಿಕಾ ಸಚಿವರೇ ಆಗಲಿ ಪರಿಸರ ಇಲಾಖೆಯ ಸಚಿವರಾಗಲೀ ಉತ್ತರವನ್ನೇ ಕೊಡುವ ಗೋಜಿಗೆ ಹೋಗಲಿಲ್ಲ. ಇದರ ಬಗ್ಗೆ ನಾನು ಸಾಕಷ್ಟು ಪ್ರಶ್ನೆ ಕೇಳಿದಾಗಲೂ ನಮ್ಮ ಇತರ ಸದಸ್ಯರುಗಳೂ ಸಹ ಇದರ ಬಗ್ಗೆ ಪ್ರಶ್ನೆ ಕೇಳಿದರೂ ಕೂಡ ಅದಕ್ಕೆ ಸಮಂಜಸವಾದ ಉತ್ತರವನ್ನು ನೀಡದೆ, ಅಧಿವೇಶನ ಮುಗಿದ

ಮೇಲೆ ಎಲ್ಲೋ ಒಂದು ಹಾರಿಕೆಯ ಉತ್ತರ ಒಂದೆರಡಕ್ಕೆ ಬಂದಿದೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ ಸರ್ಕಾರದ ಇಲಾಖೆಗಳು, ಇವತ್ತು ಬೃಹತ್ ಕೈಗಾರಿಕೆಗಳು ಬರಬಾರದು ಎಂದು ಹೇಳಿ ನಮ್ಮ ಉದ್ದೇಶವೇನೂ ಇಲ್ಲ. ಬೃಹತ್ ಕೈಗಾರಿಕೆಗಳನ್ನು ನೀವು ಸ್ಥಾಪನೆ ಮಾಡಿದ ಮೇಲೆ ಅದನ್ನು ನೀವು ಹದ್ದುಬಸ್ತಿನಲ್ಲಿಡುವಂತಹ ಕೆಲಸ ಮಾಡಬೇಕಾಗುತ್ತದೆ. ಇವತ್ತು ಸಣ್ಣ ಪುಟ್ಟ ಕೈಗಾರಿಕೆಗಳು, ಏನೋ ಒಂದು ಬಣ್ಣ ಬಣ್ಣದ ಕಾರ್ಖಾನೆ ಹಾಕಿದರೆ ಅವನ ಮೇಲೆ ಪರಿಸರ ಇಲಾಖೆಯವರು ಸವಾರಿ ಮಾಡಿಕೊಂಡು ಅದನ್ನು 24 ಗಂಟೆಯೊಳಗೆ ಮುಚ್ಚುವ ಕೆಲಸ ಮಾಡಿದರೆ, ಇವತ್ತು ದೊಡ್ಡ ದೊಡ್ಡ ಬೃಹತ್ ಕೈಗಾರಿಕೆಗಳವರ ಜೊತೆಯಲ್ಲಿ ಅಧಿಕಾರಿಗಳು ಶಾಮೀಲಾಗಿ ಹೋಗಿರತಕ್ಕಂಥಹ ಉದಾಹರಣೆಗಳನ್ನು ನಾನು ಕೊಡುತ್ತೇನೆ. ಇವತ್ತು 1994ರ ಜುಲೈನಲ್ಲಿ ಕೊಚ್ಚಿನ್‌ನಲ್ಲಿರತಕ್ಕ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಓಷಿಯೋನೋಗ್ರಫಿ ಸಂಸ್ಥೆ ದಕ್ಷಿಣ ಕನ್ನಡ ಜಿಲ್ಲೆಯ ಜಲ ಹಾಗೂ ವಾಯು ಮಾಲಿನ್ಯದ ಬಗ್ಗೆ ಸಮಗ್ರವಾದಂತಹ ಒಂದು ವರದಿಯನ್ನು ಕೊಟ್ಟಿದ್ದರು. ಆ ವರದಿಯ ಪ್ರಕಾರ ಬೃಹತ್ ಕೈಗಾರಿಕಾ ಇಲಾಖೆಯಾಗಲೀ ಅಥವಾ ಪರಿಸರ ಇಲಾಖೆಯವರಾಗಲೀ ಬಹಳ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಬೇಕು. ಅದನ್ನು ಅವರು ಮಾಡಲೇ ಇಲ್ಲ ಎನ್ನುವಂತಹ ಮಾತನ್ನು ನಾನು ಇಲ್ಲಿ ಪ್ರಸ್ತಾಪಿಸಬೇಕಾಗಿದೆ. ನಾನು ಕೇಳುವುದು ಇಷ್ಟೆ: ನಮ್ಮ ಜಿಲ್ಲೆಯಲ್ಲಿ ಕುದುರೆಮುಖ ಕಬ್ಬಿಣ ಕಾರ್ಖಾನೆ ಸ್ಥಾಪನೆಯಾಗಿದೆ. 7.5 ಮೆಟ್ರಿಕ್‌ಟನ್ ಕಬ್ಬಿಣದ ಉಂಡೆ ಉತ್ಪಾದಿಸುವಂತಹ ಕಾರ್ಖಾನೆಗೆ ಪರವಾನಗಿ ಇತ್ತು. ಈಗ ಅದನ್ನು 25 ಮೆಟ್ರಿಕ್‌ಟನ್ ಕಬ್ಬಿಣದ ಉಂಡೆ ಉತ್ಪಾದಿಸಲು ಪರವಾನಿಗೆ ನೀಡಲಾಗಿದೆ. ವಿಸ್ತರಣೆ ಕೂಡ ಆಗುತ್ತಿದೆ. 7.5 ಮೆಟ್ರಿಕ್ ಟನ್ ಉತ್ಪಾದಿಸುತ್ತಿದ್ದಾಗ ದಿನಕ್ಕೆ 40 ಸಾವಿರ ಕ್ಯೂಬಿಕ್ ಮೀಟರ್‌ನಷ್ಟು ತ್ಯಾಜ್ಯವಸ್ತುವನ್ನು ಯಾವುದೇ ಸಂಸ್ಕರಣೆ ಇಲ್ಲದೆ ಸಮುದ್ರಕ್ಕೆ ಬಿಡುತ್ತಿದ್ದಾರೆ. ಇದು ಕಬ್ಬಿಣದ ಸಣ್ಣಪುಡಿರೂಪದಲ್ಲಿ ಹೋಗಿ ಸಮುದ್ರಾದ್ಯಂತ ಪೌರೆ ರೂಪದಲ್ಲಿ ನಿಂತುಕೊಂಡಿದೆ. ಇನ್ನು 25 ಮೆಟ್ರಿಕ್‌ಟನ್ ಉತ್ಪಾದನೆ ಮಾಡುವಾಗ ಸುಮಾರು 1.20 ಲಕ್ಷ ಕ್ಯೂಬಿಕ್‌ಮೀಟರ್‌ನಷ್ಟು ಸಂಸ್ಕರಣ ಮಾಡದ ತ್ಯಾಜ್ಯವಸ್ತು ಸಮುದ್ರ ಸೇರುತ್ತದೆ. ಇನ್ನೊಂದು ಕಡೆ ಎಂ.ಸಿ.ಎಫ್ ಸಂಸ್ಥೆ ಇದೆ. ಇದು ದಿನಕ್ಕೆ ಸುಮಾರು 13 ಸಾವಿರ ಕ್ಯೂಬಿಕ್ ಮೀಟರ್‌ನಷ್ಟು ತ್ಯಾಜ್ಯವಸ್ತು ಚೆಲ್ಲುತ್ತಿದೆ. ಟ್ರೀಟ್‌ಮೆಂಟ್ ಪ್ಲಾಂಟ್ ಬೇರೆ ಸಂಸ್ಕರಣಾ ಘಟಕ ಬೇರೆ. ಟ್ರೀಟ್‌ಮೆಂಟ್ ಪ್ಲಾಂಟ್ ಹಾಕಿದ್ದೇವೆ ಎಂದು ಹೇಳಿಕೊಂಡು ಸಂಸ್ಕರಣಕ್ಕೊಳಪಡಿಸದೆ ತ್ಯಾಜ್ಯವನ್ನು ಸಮುದ್ರಕ್ಕೆ ಬಿಟ್ಟರೆ ಅದರ ಪರಿಣಾಮ ಸಮುದ್ರದಲ್ಲಿರುವ ಜಲಚರ ವಸ್ತುಗಳ ಮೇಲೆ ನೇರವಾಗಿ ಆಗುತ್ತದೆ ಎಂದು ಒಷಿಯೋನೊಗ್ರಫಿ ಸಂಸ್ಥೆ ಸ್ಪಷ್ಟವಾಗಿ ಹೇಳಿದೆ. ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಓಷಿಯೋನೋಗ್ರಫಿ ಕೊಟ್ಟಿರುವ ವರದಿಯನ್ನು ಪ್ರಾಯಶಃ ಪರಿಸರ ಇಲಾಖೆ ಮಂತ್ರಿಗಳು ಸಮಗ್ರವಾಗಿ ಅಧ್ಯಯನ ಮಾಡಬೇಕಿತ್ತು. ಬೃಹತ್ ಕೈಗಾರಿಕೆ ಸಚಿವರೂ ಕೂಡ ಅಧ್ಯಯನ ಮಾಡಬೇಕಾಗಿತ್ತು. ಪಾಪ, ಪರಿಸರ ಇಲಾಖೆ ಮಂತ್ರಿಗಳು ಏನೂ ಮಾಡುವುದಕ್ಕೆ ಆಗುವುದಿಲ್ಲ ಅಧಿಕಾರಿಗಳು ಹೇಳಿದ್ದನ್ನೇ ಹೇಳಿಕೆ

ಕೊಡುತ್ತಾರೆ ವಿನಾ ಅದರ ಸಮಗ್ರ ಅಧ್ಯಯನ ಮಾಡಿಯೇ ಇಲ್ಲವೆಂಬ ನೇರ ಆರೋಪ ನಾನು ಹಾಕಲೇಬೇಕಾಗುತ್ತದೆ. ಎಂ.ಪಿ.ಎಫ್ ಹೊರಚೆಲ್ಲುವ 12 ಸಾವಿರ ಮೆಟ್ರಿಕ್ ಟನ್ ತ್ಯಾಜ್ಯದಲ್ಲಿ ಯೂರಿಯಾ, ಅಮೋನಿಯಂ ಬೈಕಾರ್ಬೈಟ್‌ನಂತಹ ವಸ್ತುಗಳು ಸೇರಿ ಸಮುದ್ರಕ್ಕೆ ಸೇರುತ್ತಿವೆ. ಆಮೇಲೆ ಮಂಗಳೂರು ನಗರ ಕೊಳಚೆ ಸುಮಾರು 5 ಸಾವಿರ ಕ್ಯೂಬಿಕ್ ಮೀಟರ್‌ನಷ್ಟು ಸಮುದ್ರಕ್ಕೆ ಹೋಗುತ್ತದೆ. ಅದರ ಜೊತೆಗೆ ಕೈಗಾರಿಕೆ ಕೊಳಚೆ ಸುಮಾರು 2 ಸಾವಿರ ಕ್ಯೂಬಿಕ್ ಮೀಟರ್‌ನಷ್ಟು ಸಹ ಹೋಗುತ್ತದೆ. ಇದೆಲ್ಲ ಯಾವುದೇ ರೀತಿಯಲ್ಲಿ ಸಂಸ್ಕರಣವಾಗದೆ ಹೋಗುತ್ತಾ ಇದೆ. ಇದರ ಬಗ್ಗೆ ಪರಿಸರ ಮಾಲಿನ್ಯ ಇಲಾಖೆಯಾಗಲಿ, ಬೃಹತ್ ಕೈಗಾರಿಕಾ ಇಲಾಖೆಯಾಗಲಿ, ಯಾವರೀತಿ ಪರಿಹಾರ ಕ್ರಮ ತೆಗೆದುಕೊಂಡಿದ್ದಾರೆಂದು ಉತ್ತರದಲ್ಲಿ ಸ್ಪಷ್ಟಪಡಿಸಬೇಕು. ಇನ್ನು ಎಂ.ಆರ್.ಪಿ.ಎಲ್. ಸಂಸ್ಥೆ ಇದು ಈಗಾಗಲೇ ಜಿಲ್ಲೆಯ ಜನರಲ್ಲಿ ಬಹಳಷ್ಟು ಆತಂಕವನ್ನುಂಟು ಮಾಡಿದೆ. ಜಿಲ್ಲೆಯ ಜನ ಪ್ರತಿನಿಧಿಗಳು ಸಾಕಷ್ಟು ಸಲ ಸರ್ಕಾರದ ಗಮನ ಸೆಳೆದಿದ್ದಾರೆ. ಇವತ್ತು ಅವರು ಮೂರು ಮಿಲಿಯನ್ ಟನ್ ಕ್ರೂಡ್ ಆಯಿಲನ್ನು ಉಪಯೋಗಿಸಿಕೊಂಡು ಸುಮಾರು 52 ವಿಧದ ಪೆಟ್ರೋಲಿಯಂ ಉತ್ಪನ್ನಗಳನ್ನು ತಯಾರಿಸುತ್ತಿದ್ದಾರೆ. ಇದರಲ್ಲಿ ಪೆಟ್ರೋಲ್ ಡೀಸೆಲ್ ಟಾರು ಪೊಲಿಪ್ರೋಪ್ಲಿನ್ ಮುಂತಾದ ಅನೇಕ ವಿಧದ ಉತ್ಪನ್ನಗಳನ್ನು ತಯಾರಿಸುತ್ತಾರೆ. ದಿನಕ್ಕೆ 6 ಮಿಲಿಯನ್ ಗ್ಯಾಲನ್ನು ನೇತ್ರಾವತಿ ನದಿಯಿಂದ ಎತ್ತಿಕೊಳ್ಳುತ್ತಿದ್ದಾರೆ. ಹಾಗೆಯೇ ದಿನಕ್ಕೆ ಸುಮಾರು 7200 ಕ್ಯೂಬಿಕ್ ಮೀಟರ್ ತ್ಯಾಜ್ಯವನ್ನು ಸಂಸ್ಕರಣ ಮಾಡದೆ ಸಮುದ್ರಕ್ಕೆ ಬಿಡುತ್ತಿದ್ದಾರೆ. ಆ ತ್ಯಾಜ್ಯದಲ್ಲಿ ಏನೆಲ್ಲಾ ಅಂಶಗಳು ಇವೆ ಎಂದು ಓಷಿಯೋನೊಗ್ರಫಿ ವರದಿ ತಿಳಿಸುತ್ತದೆ ಅಂದರೆ ಒಂದು ಲೀಟರ್ ತ್ಯಾಜ್ಯದಲ್ಲಿ .01 ಮಿಲಿಗ್ರಾಂ ಮರ್ಕ್ಯುರಿ, 0.2 ಮಿಲಿಗ್ರಾಂ ಆರ್ಸೆನಿಕ್, .1 ಮಿಲಿಗ್ರಾಂ ಸೀಸ, 2 ಮಿಲಿಗ್ರಾಂ ಕ್ಯಾಡ್ಮಿಯಂ 2 ಮಿಲಿಗ್ರಾಂ ಕ್ರೋಮಿಯಂ, 2 ಮಿಲಿಗ್ರಾಂ ಸಯನೈಡ್ 5.0 ಮಿಲಿಗ್ರಾಂ ನಿಕ್ಕಲ್ 15 ಮಿಲಿಗ್ರಾಂ ಜಿಂಕ್, 3 ಮಿಲಿಗ್ರಾಂ ಕಾಪರ್, ಆಯಿಲ್ ಮತ್ತು ಗ್ರೀಸ್ 10 ಮಿಲಿಗ್ರಾಂ ಈ ಒಂದೊಂದು ಮಿಶ್ರಣ ಪ್ರತ್ಯೇಕ ಸಮುದ್ರಕ್ಕೆ ಸೇರುವಾಗ ಅದರ ಪರಿಣಾಮ ಬೇರೆ. ಈ ಎಲ್ಲಾ ರಸಾಯನಿಕಗಳು ಒಟ್ಟಾಗಿ ಹೋದರೆ ಅದರ ಪರಿಣಾಮವೇ ಬೇರೆ. ನಾನು ಸದನದ ಮುಂದಿಟ್ಟಿರುವುದು ಅವರೇ ಕೊಟ್ಟಿರುವ ಅಂಕಿಅಂಶಗಳು. ಇದು 3 ಮಿಲಿಯಟನ್ ಕ್ರೂಡ್ ಆಯಿಲ್ ಉಪಯೋಗಿಸುವಾಗ ಬಿಡುವ ತ್ಯಾಜ್ಯ. ಈಗ 9 ಮಿಲಿಯಟನ್‌ಗೆ ಇಡೀ ಕಾರ್ಖಾನೆ ವಿಸ್ತರಣೆ ಹೊಂದಿದೆ. ಆಗ 28 ಸಾವಿರ ಕ್ಯೂಬಿಕ್ ಮೀಟರ್‌ನಷ್ಟು ತ್ಯಾಜ್ಯ ಹೋಗುವುದಾದರೆ ಇನ್ನು ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಮೀನುಗಾರಿಕೆ ಯಾವರೀತಿ ಮಾಡಬೇಕು? ಈ ಮರ್ಕ್ಯುರಿ ಆರ್ಸೆನಿಕ್ ಕ್ರೋಮಿಯಂ, ನಿಕ್ಕಲ್ ಕಾಪರ್ ಐರನ್‌ಗಳನ್ನು ತಿಂದ ಮೀನುಗಳನ್ನು ನಾವು ತಿನ್ನುತ್ತೇವಲ್ಲಾ, ಅದರ ಪರಿಣಾಮ ಏನಾಗಬಹುದು? ಇದರ ನಿಷ್ಪಕ್ಷಪಾತ ಹಾಗೂ ವೈಜ್ಞಾನಿಕ ವರದಿಯನ್ನು ಬೃಹತ್ ಕೈಗಾರಿಕಾ ಸಚಿವರು ದಯವಿಟ್ಟು ತರಿಸಬೇಕು. 1995ರಲ್ಲಿ ಇವರು ತ್ಯಾಜ್ಯ ಬಿಡಲಿಕ್ಕೆ ಎಂದು ಪೈಪ್‌ಲೈನ್ ಹಾಕಲು ಹೊರಟರು. ಆಗ ಇಡೀ ಜಿಲ್ಲೆಯಾದ್ಯಂತ ಲಕ್ಷಾಂತರ

ಮೀನುಗಾರರು ಒಂದೆಡೆ ಸೇರಿ ಪ್ರತಿಭಟನೆ ಮಾಡಿದಾಗ ಮೂರು ದಿವಸ ದಕ್ಷಿಣಕನ್ನಡ ಜಿಲ್ಲೆ ಬಂದ್ ಆಯಿತು. ಆಗ ನಮ್ಮ ಮೇಲೆ ಪೊಲೀಸ್ ಲಾಠಿಚಾರ್ಜ್ ಮಾಡಿ ಜೈಲಿಗೆ ನಮ್ಮನ್ನು ಹಾಕಿದರು. ಇರಲಿ, ಆದರೆ ಅದರ ಪರಿಣಾಮವಾಗಿ ಏನಾದರೂ ಒಂದು ಒಳ್ಳೆಯ ಕಾರ್ಯಕ್ರಮವನ್ನು ಸರ್ಕಾರ ರೂಪಿಸಬಹುದು ಎಂದು ತೀರ್ಮಾನಕ್ಕೆ ಬಂದಿದ್ದೆವು. ನಮ್ಮ ದುರಾದೃಷ್ಟ. ಅಂದಿನ ಮುಖ್ಯಮಂತ್ರಿ ದೇವೇಗೌಡರು ದಕ್ಷಿಣ ಕನ್ನಡದ ಎಲ್ಲಾ ಶಾಸಕರನ್ನು ಸೇರಿಸಿ ಸಭೆ ನಡೆಸಿದರು, ಆಮೇಲೆ ಸರ್ಕಾರದ ಆಜ್ಞೆ 29 ಡಿಸೆಂಬರ್‌ನಲ್ಲಿ ಬಂತು. ಅದರಲ್ಲಿ ಸ್ಪಷ್ಟವಾಗಿ ಉಲ್ಲೇಖ ಮಾಡಿದ್ದಾರೆ. ಹಾಗೆ ಉಲ್ಲೇಖಿಸಿದ 9ರಲ್ಲಿ ಒಂದು ಅಂಶವನ್ನೂ ಇವರು ಕಾರ್ಯಗತ ಮಾಡಲಿಲ್ಲ. ಇದು ಬಹಳ ಖೇದಕರವಾದ ವಿಚಾರ. ಇದರಲ್ಲಿ ಪ್ರಪ್ರಥಮವಾಗಿ ಹೇಳುವುದಾದರೆ Citizenship Committee under the Chairmanship of the Deputy Commissioner, South Kanara District, would be constituted to ensure proper monitoring of implementation of socio-economic and infrastructure development works and also monitoring the implementation of Government guidelines and to discuss the order relating to this Mega Project.... ಇದರ ಬಗ್ಗೆ ಯಾವುದೇರೀತಿಯ ಕಮಿಟಿಯೂ ರಚನೆಯಾಗಲಿಲ್ಲ. ಒಂದು ವೇಳೆ ರಚನೆಯಾಗಿದ್ದರೂ ಅದರ ಸಭೆಗಳ, ತೀರ್ಮಾನಗಳ ಮಾಹಿತಿ ಚುನಾಯಿತ ಪ್ರತಿನಿಧಿಗಳು ನಮಗೆ ಇನ್ನೂವರೆಗೆ ಮಾಹಿತಿ ಸಿಕ್ಕಲಿಲ್ಲ. ಎಲ್ಲದಕ್ಕಿಂತ ಮುಖ್ಯವಾಗಿ A Committee of Experts with the latest technology including Computer Modelling shall be constituted to study proper implementation of Pollution Control measures, ಏನು ತ್ಯಾಜ್ಯ ಸಮುದ್ರಕ್ಕೆ ಬಿಡುತ್ತಿದ್ದಾರೆ ದಿನನಿತ್ಯ ಅದನ್ನು ಸೈಂಟಿಫಿಕಾಗಿ ರಿಸರ್ಚ್ ಮಾಡಬೇಕು, ಅದರ ಪರಿಣಾಮಗಳೇನು ಎಂಬ ಬಗ್ಗೆ ಅತ್ಯಾಧುನಿಕ ಜ್ಞಾನ ಉಪಯೋಗಿಸಿಕೊಂಡು ಒಂದು ಸಮಿತಿ ಮಾಡಬೇಕು ಎಂಬ ತಿರ್ಮಾನಕ್ಕೆ ಬಂದಿದ್ದರೆ ಅದರ ಬಗ್ಗೆ ಇವತ್ತಿಗೂ ಪ್ರಸ್ತಾವನೆ ಇಲ್ಲ. ಇನ್ನು A Regional Office of the Karnataka State Pollution Control Board, Mangalore, will be strengthened suitably, ಆದರೆ ಸ್ಟ್ರೆಂಗ್ತನ್ ಮಾಡುವುದು ಬಿಡಿ, ಅಲ್ಲಿ ಇಬ್ಬರು ಇಂಜಿನಿಯರ್ಸ್ ಇದ್ದಾರೆ ಆರು ಸಾವಿರ ಕೈಗಾರಿಕೆಗಳ ಬಗ್ಗೆ ಅವರು ಮಾಹಿತಿ ಪಡೆಯಬೇಕು. ಅವರು ಸ್ವಂತ ಬೋಟ್ ಬಿಟ್ಟುಕೊಂಡುಹೋಗಿ ಏನು ತ್ಯಾಜ್ಯ ಬಿಡುತ್ತಿದ್ದಾರೆಂದು ಅಧ್ಯಯನ ಮಾಡುವ ಸ್ಥಿತಿಯಲ್ಲಿಲ್ಲ. ಸಾಕಷ್ಟು ಸಿಬ್ಬಂದಿವರ್ಗವೂ ಇಲ್ಲ, ಈವರೆಗೂ ಅದನ್ನು ಸ್ಟ್ರೆಂಗ್ತೆನ್ ಮಾಡಲೂ ಇಲ್ಲ. ಏನೋ ತರಾತುರಿಯಲ್ಲಿ ಸಿಬ್ಬಂದಿ ಸಿಗಲಿಲ್ಲ ಎಂದು ಅದನ್ನೂ ಬಿಡೋಣ, ಇನ್ನೊಂದು ಬಹಳ ಮುಖ್ಯ ವಿಚಾರ

ಏನೆಂದರೆ ಡಿಸೆಂಬರ್ 97ರವರೆಗೆ ಎಂ.ಆರ್.ಪಿ.ಎಲ್. ತನ್ನ ತ್ಯಾಜ್ಯವನ್ನು ಸಂಪೂರ್ಣವಾಗಿ ಸಂಸ್ಕರಣಗೊಳಿಸಲು ರೀಸೈಕ್ಲಿಂಗ್ ಯೂನಿಟನ್ನು ಸ್ಥಾಪನೆ ಮಾಡಬೇಕೆಂಬ ಆದೇಶ ಮಾಡಿದ್ದಾರೆ. ಮೂರು ಮಿಲಿಯ ಟನ್‌ನಿಂದ 9 ಮಿಲಿಯಟನ್‌ಗೆ ವಿಸ್ತರಣೆಯಾದರೂ ಕೂಡ ಆ ಯೂನಿಟ್ ಇನ್ನೂ ಸ್ಥಾಪನೆಯಾಗಿಲ್ಲ. ಯಾಕೆ ಇದು ಮಾಡಲಿಲ್ಲ ಈ ಅವ್ಯವಸ್ಥೆ ಯಾಕೆ ನಡೆದಿದೆ? ಇದು ನನಗೆ ಗೊತ್ತಾಗುತ್ತಿಲ್ಲ. ಆದ್ದರಿಂದ ಅಷ್ಟು ದೊಡ್ಡ ಚಳುವಳಿ ಮಾಡಿದ ಮೇಲೆ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಾವು ಸಭೆ ಸೇರಿ ತೆಗೆದುಕೊಂಡ ನಿರ್ಣಯವನ್ನು ಕಾಯಿದೆ ರೂಪದಲ್ಲಿ ಜಾರಿಗೆ ತಂದರೂ ಕೂಡ ಅದನ್ನು ಜಾರಿಗೆ ತರಲು ಎಂ.ಆರ್.ಪಿ.ಎಲ್. ಸಂಸ್ಥೆ ವಿಫಲವಾದಾಗ ಇಲಾಖೆ ಸ್ಪಷ್ಟ ಕ್ರಮ ಇವತ್ತು ತೆಗೆದುಕೊಳ್ಳಬೇಕಾಗಿತ್ತು. ಯಾರೋ ಒಬ್ಬ ಸಣ್ಣ ಕೈಗಾರಿಕಾ ಘಟಕ ಏನೋ ಒಂದು ಮಾಡಿದರೆ ಅವನ ಮೇಲೆ ನೀವು ಬಹಳ ದೊಡ್ಡ ಕ್ರಮ ತೆಗೆದುಕೊಂಡು, ಅಲ್ಲಿಗೆ ಪರಿಸರ ಸಂರಕ್ಷಣ ಮಂಡಲಿ ಅಧಿಕಾರಿಗಳು ಹೋಗಿ ಗಲಾಟೆ ಮಾಡಿ ಏನೇನೋ ಗಲಾಟೆ ಮಾಡುತ್ತಾರೆ. ನಾನು ಇಲ್ಲಿ ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ನಮ್ಮ ಬೃಹತ್ ಕೈಗಾರಿಕ ಮಂತ್ರಿಗಳ ಕೈಕೆಳಗಿರತಕ್ಕ ಅಧಿಕಾರಿಗಳು ಸರಿಯಾಗಿ ಅವರನ್ನು ಗಮನಿಸುವುದಿಲ್ಲವೋ ಅದನ್ನು ಕಾರ್ಯರೂಪಕ್ಕೆ ತರಲು ಏಕೆ ವಿಫಲರಾಗುತ್ತಿದ್ದಾರೆಂಬುದು ನನಗೆ ಗೊತ್ತಾಗಲಿಲ್ಲ. ಇದಕ್ಕೆ ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ನಮ್ಮ ಮಣಿಪಾಲದಲ್ಲಿ ಅಮುಂಜೆ ರೈಸ್‌ಮಿಲ್ ಎಂಬ ಒಂದು ರೈಸ್ ಮಿಲ್ ಇದೆ. ಆ ರೈಸ್‌ಮಿಲ್‌ಗೆ ಬೋರ್‌ವೆಲ್ ಹಾಕಿಸುವುದಕ್ಕೆ ಹಿಂದಿನ ಸರ್ಕಾರದವರೇ ಆದೇಶ ಕೊಟ್ಟರು. ಹಿಂದೆ ಮಾಜಿ ಮಂತ್ರಿಗಳಾಗಿದ್ದ ವೀರಪ್ಪಮೊಯ್ಲಿಯವರು ಅಲ್ಲಿ ಬೋರ್‌ವೆಲ್ ಹಾಕಲಿಕ್ಕೆ ಅನುಮತಿ ನೀಡಿ ಆದೇಶವನ್ನೂ ಸಹ ಕೊಟ್ಟರು. ರೈಸ್‌ಮಿಲ್‌ನವರು ಅವರ ಸ್ವಂತ ಖರ್ಚಿನಲ್ಲಿ ಬೋರ್‌ವೆಲ್‌ಅನ್ನು ಹಾಕಿಸಿದರು. ಆ ಬೋರ್‌ವೆಲ್ ಹಾಕಿದ ಎರಡು ವರ್ಷಗಳ ನಂತರ ಅದನ್ನು ವಾಪಸ್ಸು ಕೊಡಿ ಎಂದು ಹೇಳುತ್ತಿದ್ದಾರೆ. ಇದು ಯಾವ ನ್ಯಾಯ? ಇದರ ಬಗ್ಗೆ ಮಾನ್ಯ ಉಡುಪಿ ಲೋಕಸಭಾ ಅಧ್ಯಕ್ಷರಾದಂತಹ ಆಸ್ಕರ್ ಫರ್ನಾಂಡಿಸ್ ಮತ್ತು ನಾನು ಸ್ವತಃ ನಮ್ಮ ಮೇಜರ್ ಇಂಡಸ್ಟ್ರೀಸ್ ಮಿನಿಸ್ಟರ್‌ರವರ ಮನೆಗೆ ಹೋಗಿ ಹೇಳಿದ್ದೇವೆ. ಅದು ವಾಪಸ್ಸು ಕೊಡಲು ಬರುವುದಿಲ್ಲ. ಏಕೆಂದರೆ ಅದಕ್ಕೆ ಅವರು ದುಡ್ಡನ್ನು ಖರ್ಚು ಮಾಡಿದ್ದಾರೆ, ಅದರಲ್ಲೂ ಅವರ ಕೈಗಾರಿಕ ಘಟಕದ ಮಧ್ಯದಲ್ಲಿರುವ ಬೋರ್‌ವೆಲ್ ಅನ್ನು ಹಿಂದಕ್ಕೆ ಕೊಡಬೇಕು ಅಂದರೆ ನಿಮಗೆ ನಾವು ಹಣ ವಾಪಸ್ಸು ಕೊಡುತ್ತೇವೆ ಎಂದು ಹೇಳಿದರೆ ಇದಕ್ಕೆ ಏನು ಅರ್ಥ? ನಾನು ಸಾರಿ ಸಾರಿ ಹೇಳಿದ್ದೇನೆ. ಆದರೂ ಏಕೆ ನಿಮ್ಮ ಅಧಿಕಾರಿಗಳು ಇದನ್ನು ಸ್ಪಷ್ಟವಾಗಿ ಪರಿಗಣಿಸುವುದಿಲ್ಲ, ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಅನಿಲ್‌ಕುಮಾರ್‌ರವರು ಸರ್ಕಾರಕ್ಕೆ ಈ ರೀತಿ ಒಂದು ಪತ್ರ ಬರೆಯುತ್ತಾರೆ.

"Please refer my D.O. letter cited in reference wherein I have requested to restore that allotment of borewells

located in plot No.84 in favour M/s Ammunje Rice Mill, Shivalli, industrial area, Manipal. So far, we have not received any communication in this regard. The said matter is being continuously reviewed in the District level Single Window Agency meeting". ಎಂದು ಹೇಳಿಕೊಂಡು ಪತ್ರ ಬರೆದರೆ ಇವರು ಬರೀಮಾಡುತ್ತೇವೆ ಎಂದು ಮಾತ್ರ ಹೇಳುತ್ತಾರೆ, ಆದರೆ ಅಧಿಕಾರಿಗಳು ಅದನ್ನು ಮಾಡುವುದಕ್ಕೆ ಬಿಡುವುದಿಲ್ಲ. ಆದುದರಿಂದ ಈ ಅಧಿಕಾರಿಗಳು ಪ್ರಾಮಾಣಿಕವಾಗಿದ್ದಾರಾ? ಈ ಬೃಹತ್ ಕೈಗಾರಿಕೆ ಜನಗಳೊಂದಿಗೆ ಶಾಮೀಲಾಗಿದ್ದಾರಾ, ಎನ್ನುವ ಸಂಶಯ ನಮಗೆ ಬರುತ್ತದೆ. ನಾವು ಇಷ್ಟೆಲ್ಲಾ ಗಲಾಟೆ ಮಾಡಿಕೊಂಡು ಹೋದರೂ ಕೂಡ ಬಹಳ ಸುಲಭವಾಗಿ ಜಾರಿಕೊಂಡವರು ಅಂದರೆ ಬಾಸ್ಫ್ ಕಂಪನಿ ಅಂದುಕೊಂಡು ಇನ್ನೊಂದು ಕಂಪನಿ. ಬಿ.ಎ.ಎಸ್.ಎಫ್ ಎನ್ನುವ ಒಂದು ಕಂಪನಿಯಿದೆ. ಇವರು ಎಂ.ಆರ್.ಪಿ.ಎಲ್.ರವರ ಜೊತೆ ನುಸುಳಿಕೊಂಡು ಹೋಗಿಬಿಟ್ಟರು. ಅವರಿಗೆ ಹೇಗೆ ಪರವಾನಗಿ ಸಿಕ್ಕಿತು, ಮತ್ತು ಅವರಿಂದ ಹೊರಬರತಕ್ಕ ವಿಷ ರಾಸಾಯನಿಕಗಳು ಮತ್ತು ತ್ಯಾಜ್ಯದ ಬಗ್ಗೆ ಇವತ್ತಿಗೂ ಕೂಡ ಇನ್‌ಫಾರ್ಮೇಶನ್ ಇಲ್ಲ. ಇವತ್ತೇನಾದರೂ ಅವರು ಬಿ.ಎ.ಎಸ್.ಎಫ್.ನಿಂದ ಇಷ್ಟು ತ್ಯಾಜ್ಯ ವಸ್ತುಗಳು ಬರುತ್ತವೆ ಎಂದು ಅವರು ಕೊಡಲಿ, ಆದರೆ ಒಂದು ಸೂಕ್ಷ್ಮವಾದಂತಹ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಈ ಬಿ.ಎ.ಎಸ್.ಎಫ್ ಪಾಶ್ಚಾತ್ಯದೇಶದಿಂದ ಗಡಿಪಾರಾದಂತಹ ಒಂದು ಸಂಸ್ಥೆ. ಜರ್ಮನಿ ಈ ಕಂಪನಿಯನ್ನು ಬ್ಯಾನ್ ಮಾಡಿ ಓಡಿಸಿದಾಗ ಈ ಘಟಕ ಯಾರಿಗೂ ಗೊತ್ತಿಲ್ಲದ ಹಾಗೆ ದಕ್ಷಿಣ ಕನ್ನಡಕ್ಕೆ ಬಂದು ನುಸುಳಿದ್ದಾರೆ. ಈ ಸಂಸ್ಥೆಯಿಂದ ಬರುವ ವಿಷ ರಾಸಾಯನಿಕಗಳ ಬಗ್ಗೆ ಸ್ವಲ್ಪ ಬಿಸಿ ಮುಟ್ಟಿಸಬೇಕು, ಏಕೆಂದರೆ ಇವರು ಒಂದು ವರ್ಷಕ್ಕೆ ಆಗುವಷ್ಟು ತಲೆಗೆ ಮತ್ತು ಬಟ್ಟೆಗೆ ಹಾಕುವ ಬಣ್ಣವನ್ನು ತಯಾರು ಮಾಡುತ್ತಾರೆ, ವರ್ಷಕ್ಕೆ 10 ಟನ್ ಚರ್ಮ ಹದ ಮಾಡುವ ರಾಸಾಯನಿಕವನ್ನು ತಯಾರು ಮಾಡುತ್ತಾರೆ. ಒಂದು ವರ್ಷಕ್ಕೆ 1,500 ಟನ್ ಆಗ್ರೋ ಕೆಮಿಕಲ್ಸ್ ಅಂದರೆ ಪೆಸ್ಟಿಸೈಡ್ಸ್‌ಗೆ ಬೇಕಾಗುವ ರಾಸಾಯನಿಕವನ್ನು ತಯಾರು ಮಾಡುತ್ತಾರೆ. ಒಂದು ವರ್ಷಕ್ಕೆ 500 ಟನ್ ಮಧ್ಯಂತರ, ರಾಸಾಯನಿಕವನ್ನು ತಯಾರು ಮಾಡುತ್ತಾರೆ. ಇಂತಹ ಒಟ್ಟು 21 ರಾಸಾಯನಿಕಗಳನ್ನು ತಯಾರು ಮಾಡುವಂತಹ ಈ ಘಟಕ, ಇವರು ಏನು ಉಪಯೋಗಿಸುತ್ತಾರೆ ಎಂಬುದನ್ನು ನಾನು ಹೇಳುತ್ತೇನೆ; ಒಂದು ತಿಂಗಳಿಗೆ ಈ ಸಂಸ್ಥೆ ಎರಡು ಟನ್‌ಗಳಷ್ಟು ನೈಟ್ರೋ ಅಮೋನಿಯಾಫೀನಲ್ ಸಲ್ಫೋನಿಕ್ ಆಸಿಡ್ ಮತ್ತು ತಿಂಗಳಿಗೆ 11 ಟನ್‌ಗಳಷ್ಟು ಡಯಾಸ್ಕೊ ನಾಪ್ತಾಲ್ ಮತ್ತು 17 ಟನ್‌ನಷ್ಟು ಅನಿಲೀನ್ ರಾಸಾಯನಿಕ ಮತ್ತು 20 ಟನ್‌ನಷ್ಟು ಮೆಟರ್ ಸಾಲ್ಟ್, 52 ಟನ್‌ನಷ್ಟು ಹೈಡ್ರೋಕ್ಲೋರಿಕ್ ಆಸಿಡ್ ತಯಾರಿಸುವ ಈ ಸಂಸ್ಥೆ ಎಷ್ಟು ವಿಷ ರಾಸಾಯನಿಕ ತ್ಯಾಜ್ಯ ವಸ್ತುಗಳನ್ನು ಬಿಡುತ್ತದೆ? ಅದರಿಂದ ಏನು ಪರಿಣಾಮಗಳು ಆಗುತ್ತವೆ, ಇದನ್ನೆಲ್ಲಾ ನಾವು ಸಮುದ್ರಕ್ಕೆ ಬಿಟ್ಟು ಆ ಸಮುದ್ರವನ್ನೆಲ್ಲಾ ಕೊಳಚೆ ಮಾಡಿ, ಇದರಿಂದ

ಮೀನುಗಾರರಿಗೆ ಕಳೆದ ಜೂನ್ ತಿಂಗಳಿನಿಂದ ಆಗಸ್ಟ್‌ರವರೆಗೆ ನಾಡದೋಣಿ ಮೀನುಗಾರರಿಗೆ ಮೀನು ಇಲ್ಲ. ಕೊನೆ ಗಳಿಗೆಯಲ್ಲಿ ಒಂದು ಮೂರ್ನಾಲ್ಕು ದಿವಸ ಸ್ವಲ್ಪ ಮೀನು ಸಿಕ್ಕಿದೆ. ಇವತ್ತಿಂದ ಸೆಪ್ಟಂಬರ್ 11ರವರೆಗೆ ಬಂಪರ್ ಕ್ರಾಫ್ಸ್ ಇಲ್ಲ. ಎಲ್ಲೋ ಅಲ್ಲಿ ಇಲ್ಲಿ ಒಂದೊಂದು ಪರ್ಸಿನ್‌ಗಳಿಗೆ ಮೀನು ಸಿಗುತ್ತಿದೆ. ಹಾಗಾಗಿ ಇದು ವರ್ಷವರ್ಷಕ್ಕೆ ಕ್ಷೀಣಿಸುತ್ತಾ ಬರುತ್ತಿದೆ. ಒಂದು ಕಡೆ ಈ ಮೀನುಗಾರರ ಜನಾಂಗ ಉದ್ಯೋಗರಹಿತವಾಗಿ ಹೋಗತಕ್ಕ ಒಂದು ಪರಿಸ್ಥಿತಿ. ನೀವು ಏನು ಉದ್ಯೋಗ ಕೊಡುತ್ತೇವೆ ಎಂದು ಹೇಳುತ್ತೀರಿ, ಆದರೆ ಈ ಸಂಸ್ಥೆಗಳಿಂದ ಬೃಹತ್ ಕೈಗಾರಿಕೆಗಳ ಬರುವ ವಿಷ ರಾಸಾಯನಿಕ ತ್ಯಾಜ್ಯ ವಸ್ತುಗಳಿಂದ ನಾಲ್ಕೂವರೆ ಲಕ್ಷ ಸಮಸ್ತ ಮೀನುಗಾರರನ್ನು ಕೊಚ್ಚಿ ಹೋಗತಕ್ಕ ಪರಿಸ್ಥಿತಿ ಬರುತ್ತಿದೆ. ಇದು ಇವತ್ತು ನಾಳಿನ ಪ್ರಶ್ನೆ ಅಲ್ಲ. ಇನ್ನೊಂದು ಹತ್ತು ವರ್ಷಗಳ ನಂತರ, ಇನ್ನೊಂದು 25 ವರ್ಷಗಳ ನಂತರ ದೇಶಪಾಂಡೆಯವರ ಹೆಸರು ಇತಿಹಾಸದಲ್ಲಿ ಇರಬೇಕು. ಪರಿಸರ ಇಲಾಖೆಯ ಮಂತ್ರಿಗಳಾದ ಶಿವಣ್ಣನವರ ಹೆಸರು ಇರಬೇಕು, ಪರಿಸರ ಮಂತ್ರಿಗಳಾಗಿ ತಾವು ಕೈಗೊಂಡ ಕ್ರಮಗಳೇನು? ಪರಿಸರ, ಮೀನುಗಾರಿಕೆ ಇಲಾಖೆಯವರು ಮೀನುಗಾರಿಕೆಗೆ ಕೊಟ್ಟ ರಕ್ಷಣೆ ಏನು ಎನ್ನುವುದು ಇತಿಹಾಸದಲ್ಲಿ ಬರಬೇಕು. ಆದರೆ ನಿಮ್ಮ ಕಾಲದಲ್ಲಿ ಈ ದುರಂತ ಆಯಿತು, ಮೇಜರ್ ಇಂಡಸ್ಟ್ರೀಸ್‌ಗೆ ಸಾರ್ವಜನಿಕರಿಂದ ಪ್ರತಿಭಟನೆ ಇದ್ದರೂ ಕೂಡ ನಾವು ತಂದೆವು. ಇವರೆಲ್ಲಾ, ಸುಮ್ಮನೆ ಉದ್ಯೋಗ ಇಲ್ಲದವರು ಮಾತನಾಡುತ್ತಿದ್ದಾರೆ, ಪರಿಸರದ ಹೆಸರಿನಲ್ಲಿ ಜನರನ್ನು ಎತ್ತಿ ಕಟ್ಟುತ್ತಾರೆ ಎಂದು ಹೇಳದೆ ಇದರಲ್ಲಿ ಇರತಕ್ಕಂಥ ನ್ಯಾಯೋಚಿತವಾದ ವಿಚಾರಗಳನ್ನು ತಾವು ದಯವಿಟ್ಟು ಪರಿಶೀಲಿಸಬೇಕೆಂದು ಹೇಳಿ, ನನ್ನ ಕಳಕಳಿಯ ವಿನಂತಿ. ಮಾನ್ಯ ಸಭಾಧ್ಯಕ್ಷರೆ, ಇವತ್ತು ಸೆಂಟ್ರಲ್ ಮೆರೈನ್ ಫುಡ್ ರಿಸರ್ಚ್ ಸಂಸ್ಥೆ ಇದೆ. ಇದನ್ನು ನಾವು ಸಾಕಷ್ಟು ಬಲಪಡಿಸಬಹುದು. ಆದರೆ ನಾವು ಅದನ್ನು ಅಲ್ಲಿಗೆ ಬಿಟ್ಟಿದ್ದೇವೆ, ಇವತ್ತು ಯಾವುದೇ ರೀತಿಯಲ್ಲಿ ಈ ಸೆಂಟ್ರಲ್ ಮರೈನ್ ಫುಡ್ ರಿಸರ್ಚ್ ಸಂಸ್ಥೆ ಕೆಲಸ ಮಾಡುತ್ತಿಲ್ಲ. ಇದರ ಕೆಲಸ ಏನು ಎಂದರೆ ಇವತ್ತು ಸಮುದ್ರದಲ್ಲಿ ಮೀನು ಏನಿವೆ ಮತ್ತು ಸಮುದ್ರದ ಒಳಗಿರತಕ್ಕ ಜಲಚರ ಸಸ್ಯಗಳು ಅವೆಲ್ಲಾ ಸರ್ವ ನಾಶ ಆಗಿ ಹೋಗಿದೆ. ನಾವು ಸುಂದರವಾದಂತಹ ಕರಾವಳಿಯನ್ನು ಹೊಂದಿದ್ದೇವೆ. ನಾವು ಸಮುದ್ರದಲ್ಲಿ ಹೋಗಿ ಸ್ನಾನ ಮಾಡಿ ಬಂದರೆ, ಎಣ್ಣೆ ಬರುವಂತಹ ಸ್ಥಿತಿ ಆಗಿದೆ. ಇದರ ಬಗ್ಗೆ ಸಾಕಷ್ಟು ಸಾರಿ ಬೃಹತ್ ಕೈಗಾರಿಕಾ ಸಚಿವರ ಗಮನಕ್ಕೆ ತಂದಿದ್ದೇವೆ. ಆದರೆ ದುರಾದೃಷ್ಟವಶಾತ್ ನಿಮ್ಮ ಮೇಲೆ ಯಾವ ಆರೋಪವನ್ನು ನಾವು ಮಾಡುವುದಿಲ್ಲ, ನಿಮ್ಮ ಮೇಲೆ ನಮಗೆ ಹೊಟ್ಟೆಕಿಚ್ಚು ಇಲ್ಲ. ಅಲ್ಲದೆ ನಮಗೆ ಉದ್ಯೋಗ ಬೇಡ ಅದು ಬೇಡ ಇದು ಬೇಡ ಎಂದು ಹೇಳುವ ಹಾಗೆ ಇಲ್ಲ. ನ್ಯಾಷನಲ್ ಇನ್ಸ್‌ಟ್ಟ್ಯೂಟ್ ಆಫ್ ಓಷಿಯೊನೋಗ್ರಫಿಯಲ್ಲಿ ಒಂದು ಕಡೆ ಹೇಳುತ್ತಾರೆ, "The odour oil emulsions spreads on the water surface and the effects of the eco system mainly as follows: Photo synthetic

activities of the phytho planton is reduced. The sub surface dwelling planton is reduced including fish eggs are likely to get entangled with the thin film of oil and grease and perish. Some of the fish and shell fishes can accumulate the petroleum Hydro carbon in their body tissue causing damage." ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಇದರ ಜೊತೆಗೆ ಒಂದು ವರದಿಯಲ್ಲಿ ಅವರು ಸ್ಪಷ್ಟವಾಗಿ ಕೈ ಚಾಚಿಕೊಂಡಿರುವ ಅಂಶ, "Monitoring of water quality and environment at regular interval in the vicinity of the sea at least foir 2 years from the commencement of effluent release in the sea is essential to assess the real impact of effluent discharge on environment" ಕನಿಷ್ಟ ಎರಡು ವರ್ಷಗಳ ಕಾಲಾವಧಿಯವರೆಗೆ ಈ ತ್ಯಾಜ್ಯವಸ್ತುಗಳ ಅವಿರತವಾದಂತಹ ಪರಿಶೀಲನೆ ಅಗತ್ಯ ಎಂದು ಅವರು ಹೇಳಿದ್ದಾರೆ. ಅದರ ಜೊತೆಗೆ, "However, it may be stated that all these conclusions are based on the assumption that prescribed quality and quantity of treated effluents given in the report will be strictly adhered to" ಎಂದು ಕೊನೆಗೆ ಹೇಳಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ನಾನು ಬೇರೆ ಏನೂ ಹೇಳುತ್ತಿಲ್ಲ, ಬೃಹತ್ ಕೈಗಾರಿಕೆ ಮಂತ್ರಿಗಳು, ಪರಿಸರ ಮಂತ್ರಿಗಳು, ಮೀನುಗಾರಿಕೆ ಮಂತ್ರಿಗಳು ನಮಗೆ ದಯವಿಟ್ಟು ಮಾಹಿತಿಯನ್ನು ಕೊಡಲಿ. ಬೃಹತ್ ಕೈಗಾರಿಕಾ ಸಚಿವರು ನಮಗೆ ರಕ್ಷಣೆಯನ್ನು ಕೊಡಬೇಕು. ನೀವು ತಂದದ್ದು ಆಗಿದೆ. ಇನ್ನೊಂದು ಹೊಸದು ಕೊಜೆಂಟ್ರಿಕ್ಸ್ ಅನ್ನು ನೀವೆಲ್ಲಾ ಸಾಹಸಮಾಡಿ ತರುತ್ತಿದ್ದೀರಿ. ಅದರಿಂದ ಆಗುವ ಅನಿಷ್ಟಗಳನ್ನು ಈ ಎರಡು ವರ್ಷಗಳಿಂದ ಹೇಳಿ ಸಾಕಾಯ್ತು. ಆದರೆ ಕಡೆಗೆ ನಿಮಗೆ ವಿದ್ಯುತ್ ಬೇಡವೇ ಉದ್ಯೋಗ ಬೇಡವೇ ಎನ್ನುವ ವಿಚಾರದಲ್ಲಿ ನಮ್ಮನ್ನು ಎಲ್ಲಿಯೋ ದೂರ ಸಾಗಿಸಿ ಬಿಡುತ್ತೀರಿ. ಇನ್ನು ಒಂದುಸಾವಿರ ಮೆಗಾವ್ಯಾಟ್‌ನಷ್ಟು ಥರ್ಮಲ್‌ಪ್ಲಾಂಟ್ ಅನ್ನು ನೀವು ನಾಗಾರ್ಜುನದವರಿಗೆ ಕೊಟ್ಟಿದ್ದೀರಿ. ಇನ್ನೊಂದು ನಾರ್ಗಾಜುನ ಸ್ಟೀಲ್ ಪ್ಲಾಂಟ್ ಬರುತ್ತದೆ ಎಂದು ಹೇಳುವಾಗ ನಾವು ಇಲ್ಲಿಂದ ಅಂದರೆ ದಕ್ಷಿಣ ಕನ್ನಡದಿಂದ ಓಡಿ ಹೋಗುವಂತೆ ಆಗಿದೆ ಅಂತಹ ಪರಿಸ್ಥಿತಿ ಬಂದಿದೆ. ಮೊದಲು ಇದ್ದಂತಹ ತಾಜ್ಯವಸ್ತುಗಳ ಮೇಲೆ ನಿಮ್ಮ ನಿಯಮಾವಳಿಗಳ ಪ್ರಕಾರ ಒಂದು ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳುವುದಾಗಿ ನಮಗೆ ಮಾಹಿತಿ ಕೊಡಿ. ಕುಂಬ್ಳೆ ಸುಂದರ್‌ರಾವ್‌ರವರ ಕ್ಷೇತ್ರದಲ್ಲಿ ಇಂಡಸ್ಟ್ರೀಸ್‌ಗಳು ಬರುತ್ತವೆ. ಕರಾವಳಿಯುದ್ದಕ್ಕೂ ನಮ್ಮ ಪ್ರತಾಪ್‌ಚಂದ್ರ ಶೆಟ್ಟರು ಮತ್ತು ಐ.ಎಂ.ಜಯರಾಮ್‌ಶೆಟ್ಟರು ಬೇಕಾದಷ್ಟು ಜನ ಇದ್ದಾರೆ. ಉತ್ತರಕನ್ನಡಕ್ಕೆ ಹೋದರೆ ಅಲ್ಲಿ ವಿಶ್ವೇಶ್ವರ ಹೆಗಡೆರವರ ಕ್ಷೇತ್ರದಲ್ಲಿ ಕೂಡ ಬೇಕಾದಷ್ಟು ಕಾರ್ಯಕ್ರಮಗಳು ಬರುತ್ತಿವೆ; ಮುಖ್ಯವಾಗಿ ಉಡುಪಿ ದಕ್ಷಿಣಕನ್ನಡ

ಜಿಲ್ಲೆಯಲ್ಲಿರತಕ್ಕ ಜನಪ್ರತಿನಿಧಿಗಳಾದ ನಮಗೆ ಆಗಿಂದಾಗ್ಗೆ ಸೂಕ್ತ ಮಾಹಿತಿಗಳನ್ನು ಕೊಡಿ. ನಮ್ಮನ್ನೂ ಸಹ ಆ ಕಮಿಟಿಯಲ್ಲಿ ಸೇರಿಸಿ. ಪೇಪರ್‌ನಲ್ಲಿ ನಮ್ಮ ಹೆಸರು ಬರಬೇಕೆನ್ನುವ ಚಟಕ್ಕೆ ನಾವಿಲ್ಲಿ ವಿಧಾನಸಭೆಯಲ್ಲಿ ಮಾತನಾಡುವುದಿಲ್ಲ. ಸಾಕಷ್ಟು ಅಂಕಿಅಂಶಗಳ ಬಗ್ಗೆ ಅಧ್ಯಯನ ಮಾಡಿ ನಾವಿಲ್ಲಿ ಮಾತನಾಡುತ್ತಿದ್ದೇವೆ. ನಮಗೆ ಇದರ ಬಗ್ಗೆ ಸ್ಪಷ್ಟೀಕರಣ ಕೊಡಿ. 29-12-95ರಲ್ಲಿ ತೆಗೆದುಕೊಂಡಂತಹ ನಿರ್ಧಾರದಲ್ಲಿ ಎಂ.ಆರ್.ಪಿ.ಎಲ್. ಇದರ ಬಗ್ಗೆ ಎಷ್ಟರಮಟ್ಟಿಗೆ ಕಾಳಜಿಯನ್ನು ವಹಿಸಿದ್ದಾರೆ. ಮಂಗಳೂರು ಸಿಟಿ ಕಾರ್ಪೋರೇಷನ್‌ಗೆ ಬರಬೇಕಾಗಿದ್ದ 6 ಕೋಟಿಗೆ ಸ್ಟೇ ತಂದು, ನಮಗೆ ಬರಬೇಕಾಗಿದ್ದಂತಹ ಹಣವನ್ನು ಅವರು ಕೊಡುತ್ತಿಲ್ಲ. ಈ ರಾಜ್ಯದಲ್ಲಿ ಎಂ.ಆರ್.ಪಿ.ಎಲ್.ನ ಕೊಳವೆ 275 ಮೀಟರ್ ಇರುವಂಥಾದ್ದು ಇದು ಅತ್ಯಂತ ಉದ್ದದ ಕೊಳವೆ ಎಂದು ಉತ್ತರದಲ್ಲಿ ಬಂದಿದೆ. ಆದರೆ ನಾನು ಹೇಳುವುದೇನೆಂದರೆ ನಮ್ಮ ಪಶ್ಚಿಮ ಘಟ್ಟದ ಪ್ರದೇಶದ ಎತ್ತರ ಒಂದು ಸಾವಿರ ಮೀಟರ್ ಇದೆ. ಈ 275 ಮೀಟರ್ ಕೊಳವೆಯಿಂದ ಬರುವಂತಹ ಹೊಗೆ ನೇರವಾಗಿ ಪಶ್ಚಿಮ ಘಟ್ಟಕ್ಕೆ ಹೋಗಬೇಕು. ಅಲ್ಲಿ ಪಶ್ಚಿಮಘಟ್ಟದಲ್ಲಿ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಸಾಕಷ್ಟು ಸಸ್ಯಸಂಪತ್ತನ್ನು ಅಭಿವೃದ್ಧಿ ಪಡಿಸುವುದಕ್ಕೆ ಕೋಟ್ಯಾಂತರ ರೂಪಾಯಿಗಳು ಕೇಂದ್ರಸರ್ಕಾರದಿಂದ, ರಾಜ್ಯ ಸರ್ಕಾರದಿಂದ ಇನ್‌ವೆಸ್ಟ್ ಆಗಿದೆ. ಆದರೆ ನಮ್ಮ ಪರಿಸ್ಥಿತಿ ಎಷ್ಟು ಚಿಂತಾಜನಕವಾಗಿದೆ ಎಂದರೆ ಡೀಸಲ್, ಟಾರ್, ಗ್ಯಾಸ್ ಇವುಗಳಿಂದ ಬರುವಂಥಾದ್ದಕ್ಕೆ ಮಾರ್ಗ ಕೂಡ ಇಲ್ಲ. ನೀವು ಉಡುಪಿಗೆ ಬರುವುದು ಸ್ವಲ್ಪ ತಡಮಾಡಿದರೆ ಒಳ್ಳೆಯದು. ಏಕೆಂದರೆ ಬರುವಾಗ ಹೋಗುವಾಗ ಕನಿಷ್ಟ ನೂರು ಟ್ಯಾಂಕರ್‌ಗಳು ದೊಡ್ಡ ದೊಡ್ಡ ಎಲ್.ಪಿ.ಜಿ.ಗ್ಯಾಸ್ ಅನ್ನು ಹೊತ್ತುಕೊಂಡು ಓಡಾಡುತ್ತಿರುತ್ತವೆ. ಅದೇ ಹಳೆಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಅದನ್ನು ಯಾವ ಕಾಲದಲ್ಲಿ ಮಾಡಿದ್ದೇವೆ, ಆ ಟಾರಿನ ಸ್ಟ್ರೆಂಗ್ತ್ ಎಷ್ಟು? ಆ ರಸ್ತೆಯ ಮೇಲೆ ಎಷ್ಟು ಭಾರದ ಸರಕುಗಳನ್ನು ಸಾಗಾಣಿಕೆ ಮಾಡಬಹುದೆಂಬ ಚಿಂತನೆ ಇಲ್ಲದೆ ನಿರ್ದಾಕ್ಷಿಣ್ಯವಾಗಿ ಟ್ಯಾಂಕರ್‌ಗಳು ಹೋಗುತ್ತಿವೆ. ನಾವು ವಾರಕ್ಕೆ ಎರಡು ಮೂರು ದಿವಸಗಳು ಬೆಂಗಳೂರಿಗೆ ಬರುವಾಗ ಒಂದು ದಿವಸವಾದರೂ ತಡ ಆಗುತ್ತದೆ. ಒಂದಲ್ಲ ಒಂದು ಟ್ಯಾಂಕರ್‌ಗಳು ಘಾಟ್ ಸೆಕ್ಷನ್‌ನಲ್ಲಿ ಬಿದ್ದುಬಿಟ್ಟಿರುತ್ತದೆ. ಎಂ.ಆರ್.ಪಿ.ಎಲ್. ಸಂಸ್ಥೆ, ಬಿ.ಎ.ಎಸ್.ಎಫ್. ಸಂಸ್ಥೆ, ನಿಮ್ಮ ನಿಯಮಾವಳಿಯ ಪ್ರಕಾರ ಅವುಗಳ ಕೆಲಸವನ್ನು ಮಾಡಿಸಬೇಕು. ಆದುದರಿಂದ ದಯವಿಟ್ಟು ಇದರ ಬಗ್ಗೆ ನಿಗಾ ಇಟ್ಟುಕೊಂಡು ಮಾರ್ಗದರ್ಶನವನ್ನು ಕೊಡಿ. ನೀವು ಕಮಿಟಿಯನ್ನು ಮಾಡುವಾಗ ಏಕೆ ಅದರ ಬಗ್ಗೆ ನಮಗೆ ಮಾಹಿತಿಯನ್ನು ಕೊಡುವುದಿಲ್ಲ. ನಾವು ಏನಾದರೂ ಪ್ರಶ್ನೆಯನ್ನು ಕೊಟ್ಟರೆ ಅದಕ್ಕೆ ಏಕೆ ಉತ್ತರವನ್ನು ಕೊಡುವುದಿಲ್ಲ? ಚುಕ್ಕೆ ರಹಿತ ಪ್ರಶ್ನೆಗಳಿಗೆ ನಮಗೆ ಉತ್ತರ ಬರುತ್ತದೆ. ಅದು ಯಾವಾಗ ಎಂದರೆ ಅಧಿವೇಶನ ಕಳೆದ ಮೂರು ತಿಂಗಳಿಗೆ ಬರುತ್ತದೆ. ನೀವು ಅಧಿವೇಶನವನ್ನು ಆರು ತಿಂಗಳಿಗೆ ಒಮ್ಮೆ ಕರೆಯುವುದು. ಈ ಮಧ್ಯಂತರದ ಅವಧಿಯಲ್ಲಿ ಈ ವಿಷಯ ಅವರು ಮರೆಯುತ್ತಾರೆಂದು ನಾವು ಆ ರೀತಿಯೇ ಭಾವಿಸುತ್ತೇವೆ. ನಾನು ಮೊನ್ನೆ ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪ

ಮಾಡಿದಾಗ ಮಾನ್ಯ ಕಾನೂನು ಸಚಿವರು ಈ ವಿಚಾರ ಸಾಕಷ್ಟು ಸಾರಿ ಚರ್ಚೆಯಾಗಿದೆ, ಇದರ ಬಗ್ಗೆ ಒಂದು ಸ್ಟೇಟ್‌ಮೆಂಟ್ ಕೊಡಿಸೋಣವೆಂದು ಹೇಳಿದರು. ನಾನು ಕೇಳುವಂಥಾದ್ದು ಇವತ್ತು ಮೀನುಗಾರರಿಗೆ ಎಷ್ಟು ಗೊಂದಲವಾಗಿದೆ, ಅಷ್ಟೇ ಗೊಂದಲ ಮೀನು ತಿನ್ನುವವರಿಗೂ ಆಗಿದೆ. ಇವತ್ತು ನಮ್ಮದು ಎಕ್ಸ್‌ಪೋರ್ಟ್ ಓರಿಯಂಟಲ್ ಬಿಸಿನೆಸ್ ಫೀಷರಿಸ್‌ದು ಎಂದು ಇದೆ. ನಾವು ಇದನ್ನು ರಫ್ತು ಮಾಡಿದಾಗ ಪಾಶ್ಚಾತ್ಯ ದೇಶಗಳು ಆಯಿಲ್ ರಿಫೈನರಿ ಪ್ರದೇಶಗಳು ಎಲ್ಲೆಲ್ಲಿ ಬರುತ್ತದೋ ಅಲ್ಲಿಂದ ಬರುವಂತಹ ಮೀನುಗಳನ್ನು ಕೊಂಡುಕೊಳ್ಳುವುದಕ್ಕೆ ಅವರು ಕಟ್ಟುನಿಟ್ಟಿನ ನಿಬಂಧನೆಗಳನ್ನು ಹಾಕುತ್ತಾರೆ. ಈ ರೀತಿ ನಿಬಂಧನೆಗಳನ್ನು ಹಾಕಿರುವಂಥ ಸಾಕಷ್ಟು ಮಾಹಿತಿಗಳು ಇದೆ. ಅದುದರಿಂದ ನಾನು ಸ್ಪಷ್ಟವಾಗಿ ಸರ್ಕಾರಕ್ಕೆ ಹೇಳುವುದೇನೆಂದರೆ ಈ ಸರ್ಕಾರದಿಂದ ಯಾವುದೇ ರೀತಿಯಿಂದ ಮೀನುಗಾರರ ಜನಾಂಗಕ್ಕೆ ತೊಂದರೆ ಆಗಬಾರದು. ಅವರು ಅವರ ಹೊಟ್ಟೆಪಾಡಿಗೋಸ್ಕರ ದುಡಿಯುತ್ತಿದ್ದಾರೆ. ಅವರು ಸಾಕಷ್ಟು ಪ್ರಕೃತಿಯೊಡನೆ ಹೋರಾಟ ಮಾಡಿ, ಅದರಿಂದ ಪಡೆದುಕೊಂಡು ಬರುವಂತಹ ಮೀನಿನಿಂದ ಮಧ್ಯವರ್ತಿಗಳ ಶೋಷಣೆಯು ಇಲ್ಲಿ ಆಗುತ್ತದೆ. ಮತ್ತೆ ಇದು ಕೂಡ ಆದರೆ....

ಉಪಾಧ್ಯಕ್ಷರು: ಇನ್ನು ನಾಲ್ಕು ಜನರು ಮಾತನಾಡುವವರು ಇದ್ದಾರೆ. ನೀವು ಈಗಾಗಲೇ ಅರ್ಧ ಗಂಟೆ ಕಾಲ ಮಾತನಾಡಿದ್ದೀರಿ. ಇದು ಒಂದ ಗಂಟೆಗೆಲ್ಲಾ ಮಾತನಾಡಿದ್ದು ಮತ್ತು ಉತ್ತರವೂ ಮುಗಿಯಬೇಕು.

ಶ್ರೀ ಯು.ಆರ್.ಸಭಾಪತಿ: ಮಾನ್ಯ ಉಪಸಭಾಧ್ಯಕ್ಷರೆ, ಕಬ್ಬಿನ ಬಗ್ಗೆ ಇಪ್ಪತ್ತೈದು ಜನರು ಮಾತನಾಡಿದರು, ಟೊಮ್ಯಾಟೋದ ಬಗ್ಗೆ ಮಾತನಾಡುವಾಗ ಇಪ್ಪತ್ತೈದು ಜನರು ಮಾತನಾಡಿದರು. ಮೀನಿನ ಬಗ್ಗೆ ಮಾತನಾಡುವುದು ನಾವು ಮೂರು ಜನರು ಮಾತ್ರ ಇರುವುದು. ನಾವು ನಾಲ್ಕು ಜನರು ಇಲ್ಲ. ಈಗ ಇದರ ಬಗ್ಗೆ ನಾನು ಸಾಕಷ್ಟು ಮಾಹಿತಿಯನ್ನು ಒದಗಿಸಿದ್ದೇನೆ. ಇದೊಂದು ಗಂಭೀರವಾದಂತಹ ವಿಚಾರವೆಂದು ಸರ್ಕಾರ ತಿಳಿದುಕೊಂಡು ಇದರ ಬಗ್ಗೆ ಒಂದು ಸಭೆಯನ್ನು ಕರೆಯಬೇಕು. ಇದರ ಬಗ್ಗೆ ನಮಗೆ ಸಂಪೂರ್ಣವಾದ ಮಾಹಿತಿಯನ್ನು ಕೊಡಬೇಕು. ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಿರುವಂಥಾದ್ದು ಯಾವುದೇ ರೀತಿಯಾದಂತಹ ನಿಯಮಗಳನ್ನು ಶಿಸ್ತು ಪಾಲನೆಯನ್ನು ಉಲ್ಲಂಘನೆ ಮಾಡಿದ್ದಾರೆಂದು ಆದರೆ ಅದನ್ನು ಕೂಡಲೇ ನಿಲ್ಲಿಸಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ.ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ಉಪಾಧ್ಯಕ್ಷರೆ, ಕರಾವಳಿ ಪ್ರದೇಶಗಳಲ್ಲಿ ಬೃಹತ್ ಉದ್ಯಮದಿಂದ ಏನು ಜಲಮಾಲಿನ್ಯವಾಗುತ್ತಿದೆ. ಇದರಿಂದ ಮೀನುಗಳ ಕ್ಷಾಮ ಉಂಟಾಗುತ್ತದೆಂಬ ಗೊಂದಲ ಕರಾವಳಿ ಪ್ರದೇಶದಲ್ಲಿದೆ. ಈ

ವಿಷಯದ ಬಗ್ಗೆ ಯಾರೂ ಸ್ಪಷ್ಟೀಕರಣವನ್ನು ಕೊಡುವಂತಹ ಪ್ರಯತ್ನವನ್ನು ಮಾಡಲಿಲ್ಲ. ಈ ಬಗ್ಗೆ ಬೃಹತ್ ಕೈಗಾರಿಕಾ ಸಚಿವರಾದ ಶ್ರೀ ದೇಶಪಾಂಡೆಯವರಾಗಲೀ, ಅಥವಾ ಪರಿಸರ ಖಾತೆಯ ಸಚಿವರಾಗಲಿ, ಮೀನುಗಾರಿಕೆಯ ಸಚಿವರಾಗಲಿ ಈ ಬಗ್ಗೆ ಚಕಾರವೆತ್ತಲಿಲ್ಲ. ಮೀನಿನ ಕ್ಷಾಮ ಬಂದಿದೆ ಎಂದು ಹೇಳಿದರೆ ಅದು ಮೈ ಮೇಲೆ ಬರುತ್ತದೆಂದು ಕ್ಷಾಮ ಬಂದಿಲ್ಲವೆಂದು ಹೇಳಿಕೆಯನ್ನು ಕೊಟ್ಟು ಅಲ್ಲಿಗೆ ಆ ವಿಚಾರವನ್ನು ಮುಚ್ಚಿಡುವಂತಹ ಪ್ರಯತ್ನಗಳು ಆಗುತ್ತಿವೆ. ಇವತ್ತು ಮಾನ್ಯ ಸಭಾಪತಿಯವರು ಏನು ಆಪಾದನೆಯನ್ನು ಮಾಡಿದ್ದಾರೆ, ಅದಕ್ಕೆ ಸ್ಪಷ್ಟೀಕರಣವನ್ನು ಕೊಡುವಂತಹ ವ್ಯವಸ್ಥೆ ನಮ್ಮಲ್ಲಿ ಇದೆಯಾ? ಇದಕ್ಕೆ ಏನಾದರೂ ಪರಿಹಾರವನ್ನು ಹೇಳಿ, ಇಲ್ಲಿ ಏನು ಆಗಿದೆ, ಮತ್ತು ಸಮುದ್ರಕ್ಕೆ ತ್ಯಾಜ್ಯವಸ್ತುಗಳನ್ನು ಹಾಕುತ್ತಿದ್ದಾರೆ. ಅದನ್ನು ವಿಷಪೂರಿತವಲ್ಲವೆನ್ನುವುದನ್ನು ಯಾವುದೇ ದಾಖಲಾತಿಗಳನ್ನು, ಸ್ಪಷ್ಟೀಕರಣ ಕೊಡುವಂತಹ ದಾಖಲಾತಿಗಳು ಈ ರಾಜ್ಯದಲ್ಲಿ ಅಥವಾ ಮೀನುಗಾರಿಕೆಯ ಇಲಾಖೆಯಲ್ಲಿ ಅಥವಾ ನಿಮ್ಮ ಇಲಾಖೆಯಲ್ಲಿ ಇದೆಯಾ? ತಾವು ಇವತ್ತು ಅನುಮತಿಯನ್ನು ಕೊಡುವಂತಹ ಸಂದರ್ಭದಲ್ಲಿ ಬೃಹತ್ ಉದ್ಯಮಗಳಿಂದ ತ್ಯಾಜ್ಯ ವಸ್ತುಗಳು ಹೊರಹೋಗುತ್ತಿವೆ. ಅದರಿಂದ ಮೀನುಗಳ ಮೇಲೆ ಏನು ಪರಿಣಾಮವಾಗುತ್ತದೆ, ಸಮುದ್ರದಲ್ಲಿ ಏನಾಗುತ್ತದೆಂಬ ಎಂಬ ಬಗ್ಗೆ ಏನಾದರೂ ಚಿಂತನೆಯನ್ನು ಮಾಡಿದ್ದೀರಾ? ಇವತ್ತು ಸಮುದ್ರವೆನ್ನುವುದು ಏನಾಗಿದೆ ಎಂದರೆ ಇಲ್ಲಿ ಎಲ್ಲಾ ತ್ಯಾಜ್ಯ ವಸ್ತುಗಳು ಎಸೆಯುವಂತಹ ಸ್ಥಳವಾಗಿದೆ. ಇವತ್ತು ಅದು ಮೀನುಗಾರಿಕೆಗಾಗಿ ಉಪಯೋಗಿಸುವಂತಹ ಸ್ಥಳವಲ್ಲ. ಇವತ್ತು ಆ ಬೃಹತ್ ಉದ್ಯಮಗಳ ತ್ಯಾಜ್ಯವಸ್ತುಗಳನ್ನು ಆ ಸಮುದ್ರಕ್ಕೆ ಹಾಕಿಬಿಟ್ಟರೆ ಇವರಿಗೆ ಸಮಸ್ಯೆಗಳು ಇಲ್ಲವೆನ್ನುವ ಇವರ ವಾದದ ಹಿನ್ನೆಲೆಯಲ್ಲಿ ಈ ಎಲ್ಲಾ ತ್ಯಾಜ್ಯ ವಸ್ತುಗಳನ್ನು ಸಮುದ್ರಕ್ಕೆ ಇವತ್ತು ಬಿಡುತ್ತಿದ್ದಾರೆ. ನಾನು ನೇರವಾಗಿ ಬೃಹತ್ ಸಚಿವರನ್ನು ಕೇಳುವುದೇನೆಂದರೆ ಇದನ್ನೆಲ್ಲಾ ತಮ್ಮೂರಿಗೆ ಏಕೆ ತೆಗೆದುಕೊಂಡು ಹೋಗಲಿಲ್ಲ? ನೀವು ನಮಗೆ ಉಪಕಾರವನ್ನು ಮಾಡುವುದಕ್ಕೆ ಬಂದಿರಾ, ಅಥವಾ ಇದನ್ನು ತಮ್ಮ ಊರಿಗೆ ಏಕೆ ತೆಗೆದುಕೊಂಡು ಹೋಗಲಿಲ್ಲ? ಇವತ್ತು ಬಹಳಷ್ಟು ಹೊರಾಟ ನಡೆಯಿತು. ನಾವು ಬೃಹತ್ ಉದ್ಯಮಗಳು ಬೇಡವೆಂದು ಹೇಳುವುದಿಲ್ಲ. ನಾವು ಬೃಹತ್ ಉದ್ಯಮಗಳು ಬೇಕೆಂಬ ವಾದವನ್ನು ಮಾಡಿದ್ದೇವೆ, ನಾವು ಏಕೆ ಮಾಡಿದೆವೆಂದರೆ ನಮ್ಮ ಯುವಕರಿಗೆ ಉದ್ಯೋಗವನ್ನು ಕಲ್ಪಿಸಬೇಕು, ಅವರು ತಮ್ಮ ಸ್ವಂತ ಕಾಲ ಮೇಲೆ ನಿಲ್ಲಬೇಕೆಂಬ ಉದ್ದೇಶದಿಂದ ಈ ಬೃಹತ್ ಉದ್ಯಮಗಳು ಬೇಕೆಂದು ಕೇಳಿದ್ದೇವೆಯೇ ಹೊರತು ಇದರಿಂದ ನಮಗೆ ಕೆಲಸವನ್ನು ಕೊಡುವುದಕ್ಕೆ ಆಗಲಿಲ್ಲ. ಮನೆಗೊಂದು ಉದ್ಯೋಗವನ್ನು ಕೊಡುತ್ತೇವೆಂದು ಸರ್ಕಾರ ಹೇಳಿದೆ. ಅದರ ಪ್ರಕಾರ ಕೆಲಸವನ್ನು ಕೊಡುವುದಕ್ಕೆ ಆಗಲಿಲ್ಲ. ಆದರೆ ಈ ಬೃಹತ್ ಉದ್ಯಮದಿಂದ ತ್ಯಾಜ್ಯ ವಸ್ತುಗಳನ್ನು ಸಮುದ್ರಕ್ಕೆ ಬಿಡಲಿ ಎನ್ನುವ ಉದ್ದೇಶದಿಂದ ನಾವು ಬೃಹತ್ ಉದ್ಯಮಗಳನ್ನು ಕೇಳುತ್ತಾ ಇಲ್ಲ. ಇವತ್ತು ದಕ್ಷಿಣ ಕನ್ನಡ ಜಿಲ್ಲೆಯ ಬಹಳಷ್ಟು ಜನರು ಮೀನುಗಾರಿಕೆಯನ್ನು

ಮಾಡಲು ಸಂಪೂರ್ಣವಾಗಿ ಸಮುದ್ರವನ್ನು ಅವಲಂಬಿಸಿದ್ದಾರೆ. ಆ ಸಮುದ್ರದಲ್ಲಿ ಏನೇ ಏರುಪೇರುಗಳು ನಡೆದರೂ ಕೂಡ ಅವರ ಜೀವನದಲ್ಲಿ, ಅವರ ಆರ್ಥಿಕ ಪರಿಸ್ಥಿತಿಯಲ್ಲಿ ಏರುಪೇರಾಗುವುದು ಸ್ವಾಭಾವಿಕ, ಆ ಹಿನ್ನೆಲೆಯಲ್ಲಿ ಬಹಳಷ್ಟು ಗೊಂದಲಗಳು ಆಯಿತು. ನಮ್ಮ ಉಸ್ತುವಾರಿ ಸಚಿವರಾದಂತಹ ಶ್ರೀ ಮೊಯಿದ್ದೀನ್‌ರವರು, ಹಾಗೂ ಜಯಪ್ರಕಾಶ್ ಹೆಗಡೆಯವರು ಇವರು ಇರುವಂತಹ ಸಂದರ್ಭದಲ್ಲಿ ಟಾರು ಸಮುದ್ರದಲ್ಲಿ ತೇಲಿ ಹೋಗುತ್ತಿದೆ ಎನ್ನುವಂತಹ ದೂರುಗಳು ಜಿಲ್ಲಾ ಪಂಚಾಯತ್ ಸಭೆ ನಡೆಯುವಂತಹ ಸಂದರ್ಭದಲ್ಲಿ ಬಂತು. ಗದ್ದೆಗಳಲ್ಲಿ, ಬಾವಿಗಳಲ್ಲಿ ಈ ಟಾರು ಇದೆ ಎನ್ನುವಂತಹ ವಿಚಾರ ಬಂತು. ಆದರೆ ನಿಮ್ಮ ಹತ್ತಿರ ಬಂದಿರುವಂತಹ ವರದಿಯಲ್ಲಿ ಹೇಳುವುದಾದರೆ ಯುನಿವರ್ಸಿಟಿ ಆಫ್ ಅಗ್ರಿಕಲ್ಚರ್, ಬೆಂಗಳೂರು, ಕಾಲೇಜ್ ಆಫ್ ಫೀಷರೀಸ್ ಬೆಂಗಳೂರು, ಇವರು ಇಡುವಂತಹ ವಾದ ನೌಕೆ ಮುಳುಗಿ ಅದರಲ್ಲಿರುವಂತಹ ಎಣ್ಣೆ ಈ ಸಮುದ್ರದಲ್ಲಿ ಪ್ರಸರಿಸಿ ಈ ಸಮುದ್ರದಲ್ಲಿ ಎಣ್ಣೆ ಮಿಶ್ರಿತವಾಗಿದೆ ಎಂಬ ಹೇಳಿಕೆಯನ್ನು ಏನು ಕೊಟ್ಟಿದ್ದಾರೆ, ಇದು ಸಮಂಜಸವಾದುದಲ್ಲವೆಂದು ಹೇಳುತ್ತೇನೆ. ಯಾವಾಗಲೋ 1983-93 ನಡುವೆ ಒಂದು ನೌಕೆ ಮುಳುಗಿ ಎಣ್ಣೆ ಆಗಿದ್ದರೆ ಅದು 1997ರವರೆಗೆ ಇರುವುದಿಲ್ಲ. ತಾವು ಈ ನೌಕೆ ಮುಳುಗಿ ಎಣ್ಣೆಯಾಗಿದೆ ಎಂಬ ವಾದವನ್ನು ತಾವು ಮಾಡುವುದಾದರೆ ಇದಕ್ಕೆ ಕೋಸ್ಟಲ್ ಗಾರ್ಡ್‌ನವರ ಹೇಳಿಕೆಯೂ ಬೇಕಾಗಿತ್ತು. ಇದನ್ನು ಅವರು ಎಲ್ಲಾದರೂ ಹೇಳಿದ್ದರೆ ಅದನ್ನು ಹೇಳಿ. ಯಾವ ನೌಕೆ ಎಲ್ಲಿ ಮುಳುಗಿದೆ ಎಂಬ ಅಂಕಿಸಂಖ್ಯೆಯನ್ನು ಅವರು ಕೊಡಬೇಕಾಗಿತ್ತು. ಇದು ಯಾವುದನ್ನೂ ಕೊಡದೆ ಮಾನ್ಯ ಮೀನುಗಾರಿಕೆಯ ಸಚಿವರು ಆಗಿರುವಂತಹವರಿಗೆ ನಾನು ಕೇಳುವುದೇನೆಂದರೆ ಸಮಸ್ಯೆಗಳು ಬಹಳಷ್ಟು ಬರುತ್ತದೆ. ಅದನ್ನು ತಾವು ತೆಗೆದುಕೊಳ್ಳುವುದರ ಮೇಲೆ ಇರುತ್ತದೆ. ನೀವು ಇದನ್ನು ನಿಮ್ಮ ಮೇಲೆ ಹಾಕಿಕೊಳ್ಳುತ್ತೀರಾ ಅಥವಾ ಇದಕ್ಕೆ ಯಾವ ರೀತಿಯಾಗಿ ಪರಿಹಾರವನ್ನು ಕಂಡುಕೊಳ್ಳುತ್ತೀರೆಂಬ ವಿಚಾರ ನಿಮಗೆ ಸೇರಿದ್ದು. ಇನ್ನು ಸನ್ಮಾನ್ಯ ಸದಸ್ಯರಾದ ಸಭಾಪತಿಯವರು ಎಂ.ಆರ್.ಪಿ.ಎಲ್. ಸಂಸ್ಥೆಯ ವಿಚಾರವಾಗಿ ಪ್ರಸ್ತಾಪ ಮಾಡಿದರು. ಎಂ.ಆರ್.ಪಿ.ಎಲ್.ನ ತ್ಯಾಜ್ಯ ವಸ್ತುಗಳ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯ ಮೀನುಗಾರರರಲ್ಲಿ ಆಗಿರುವಂತಹ ಗೊಂದಲದ ಬಗ್ಗೆ ಅದನ್ನು ಪರಿಹಾರ ಮಾಡುವ ಬಗ್ಗೆ ಅಂದಿನ ಮುಖ್ಯಮಂತ್ರಿಯಾಗಿದ್ದಂತಹ ಸನ್ಮಾನ್ಯ ದೇವೆಗೌಡರು ಒಂದು ಸಭೆಯನ್ನು ಕರೆದರು. ಆ ಸಭೆಯಲ್ಲಿ ಏನು ತಿರ್ಮಾನವಾಯಿತು? ಅದಕ್ಕೆ ಯಾರು ಜವಾಬ್ದಾರರು? ಆ ಜವಾಬ್ದಾರಿಯನ್ನು ಇವತ್ತು ಯಾರು ಹೊತ್ತುಕೊಳ್ಳುತ್ತೀರಿ? ಆವರು ರಿ ಸೈಕಲಿಂಗ್ ಪ್ಲಾಂಟ್ ಆಗಬೇಕೆಂಬ ಮಾತನ್ನು ಹೇಳಿದರು. ಇದರ ಬಗ್ಗೆ ಏನೆಲ್ಲಾ ಆಗಬೇಕೆಂಬ ಬಗ್ಗೆ ಸರ್ಕಾರದ ಸ್ಪಷ್ಟವಾದಂತಹ ಆರ್ಡರ್ ಇದೆ. ಇದು ಇಂಪ್ಲಿಮೆಂಟ್ ಆಗದೇ ಇರುವುದಕ್ಕೆ ಕಾರಣವೇನು? ಈ ಜವಾಬ್ದಾರಿಯನ್ನು ಯಾರು ತೆಗೆದುಕೊಳ್ಳುತ್ತೀರಿ? ಇದಕ್ಕೆ ಸಮರ್ಪಕವಾದಂತಹ ಉತ್ತರ ಇಲ್ಲಿ ಸಿಗದೇ ಇದ್ದರೆ ನಾವು ಚರ್ಚೆ ಮಾಡುವಂಥಾದ್ದು, ಮಾತನಾಡುವುದಕ್ಕೆ ಏನೇ ಪರಿಹಾರವೂ ಇಲ್ಲ. ಇದಕ್ಕೆ ತಾವು ಇದು ನಮಗೆ

ಸಂಬಂಧಪಟ್ಟದ್ದಲ್ಲವೆಂದು ಹೇಳಬಹುದು, ಮೀನುಗಾರಿಕೆ ಮಂತ್ರಿಯವರು ನಮಗೆ ಸಂಬಂಧಪಟ್ಟದ್ದಲ್ಲವೆಂದು ಹೇಳಬಹುದು., ಪರಿಸರ ಇಲಾಖೆಯು ತಮಗೆ ಸಂಬಂಧಪಟ್ಟದ್ದಲ್ಲವೆಂದು ಹೇಳಬಹುದು. ಇದಕ್ಕೆ ಬೃಹತ್ ಉದ್ದಿಮೆ ಇಲಾಖೆಯಿಂದ ಲೈಸೆನ್ಸ್ ಕೊಟ್ಟಿರುವಂಥಾದ್ದು ಆಯಿತು ಇನ್ನು ಜವಾಬ್ದಾರಿ ಇರುವಂಥಾದ್ದು ಛಿವರದ್ದು ಎಂದು ಅವರು ವಾದವನ್ನು ಮಾಡಿಕೊಂಡು ಹೋಗಬಹುದು. ಎಂ.ಆರ್.ಪಿ.ಎಲ್.ನ ತ್ಯಾಜ್ಯವಸ್ತುಗಳಿಂದೇನು ಸಮುದ್ರಮಾಲಿನ್ಯ, ಪರಿಸರ ಮಾಲಿನ್ಯವಾಗಿದೆಯೆಂಬ ಭೀತಿ ಜನರಲ್ಲಿ ಇದೆ. ಅದನ್ನು ಹೋಗಲಾಡಿಸಬೇಕಾಗುತ್ತದೆ. ಇದರ ಜೊತೆಗೆ ಬೃಹತ್ ಉದ್ದಿಮೆಗಳೇನು ತ್ಯಾಜ್ಯವಸ್ತುಗಳನ್ನು ಸಮುದ್ರಕ್ಕೆ ಬಿಡುತ್ತಿವೆ ಅದರಿಂದ ಸಮುದ್ರ ಮಾಲಿನ್ಯವಾಗುವುದಿಲ್ಲವೆನ್ನತಕ್ಕ ಸ್ಪಷ್ಟವಾದ ಉತ್ತರವನ್ನು ಸರ್ಕಾರದಿಂದ ನಿರೀಕ್ಷೆ ಮಾಡುತ್ತೇವೆ. ಅದರ ಬಗ್ಗೆ ನಮಗೆ ಸರ್ಕಾರದಿಂದ ಉತ್ತರ ಕೊಡಲು ಜನರಿಲ್ಲ. ಯಾರ್ಯಾರು ಒಂದನ್ನು ಹೇಳಿದರೆ ಅದನ್ನೇ ಕೇಳಿಕೊಂಡಿರಬೇಕಾಗುತ್ತದೆ. ಮಾಲಿನ್ಯವಾಗುವುದಿಲ್ಲವೆಂದು ಸರ್ಕಾರದಿಂದ ಸ್ಪಷ್ಟವಾದ ಉತ್ತರವನ್ನು ಕೊಟ್ಟು ಜನರನ್ನು ಸಮಾಧಾನಪಡಿಸತಕ್ಕ ಯಾವುದೇ ವ್ಯವಸ್ಥೆ ಇಲ್ಲ. ಮಾನ್ಯ ಸಭಾಪತಿಯವರು ಎತ್ತಿರುವ ವಿಚಾರದ ಬಗ್ಗೆ ತಂತ್ರಜ್ಞಾನವನ್ನು ಹೊಂದಿರುವ, ಪರಿಣತಿಯನ್ನು ಹೊಂದಿರುವ ಹೇಳಿಕೆಯ ವ್ಯವಸ್ಥೆ ಸರ್ಕಾರದಿಂದೇನಾದರು ಇದೆಯೇ? ಯಾವುದೇ ಹೇಳಿಕೆಗಳು ಇದರ ಬಗ್ಗೆ ಸರ್ಕಾರದಿಂದ ಇಲ್ಲ. ಕರಾವಳಿಯುದ್ದಕ್ಕೂ ಗೊಂದಲದ ಪರಿಸ್ಥಿತಿ ಇಂದು ಇದೆ. ಈ ರೀತಿ ಇದ್ದರೂ ಸಹ ಬೃಹತ್‌ಉದ್ದಿಮೆಗಳಿಗೆ ಅನುಮತಿಯನ್ನು ಕೊಡುತ್ತಿದ್ದೀರಿ, ಇದರಿಂದ ಸಮುದ್ರ ಮಾಲಿನ್ಯವಾಗುವ ಸಾಧ್ಯತೆಗಳಿವೆ. ದಕ್ಷಿಣ ಕನ್ನಡ ಜಿಲ್ಲೆಯ ಶಾಂತಿಪ್ರಿಯ ಕರಾವಳಿ ಮೀನುಗಾರರೇನಿದ್ದಾರೆ ಅವರ ಬದುಕಿನೊಂದಿಗೆ ಚೆಲ್ಲಾಟವನ್ನು ಮಾಡಬೇಡಿ. ತಾವು ಬೃಹತ್ ಉದ್ದಿಮೆಗಳಿಗೆ ಪರವಾನಗಿ ಕೊಡಬೇಕಾದರೆ ಅಲ್ಲಿ ಏನು ಉತ್ಪಾದನೆಯಾಗುತ್ತದೆ, ಮತ್ತು ಎಷ್ಟು ತ್ಯಾಜ್ಯವಸ್ತು ಸಮುದ್ರಕ್ಕೆ ಸೇರುತ್ತದೆ ಅದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಇವತ್ತು ಭೂಮಿಗೋಸ್ಕರ ಉದ್ದಿಮೆಗಳನ್ನು ಮಾಡತಕ್ಕದ್ದನ್ನು ನಾವು ನೋಡುತ್ತಿದ್ದೇವೆ. 600-800 ಎಕರೆ ಭೂಮಿಯನ್ನು ಖರೀದಿಸಿ ಮಾಡಿ ಅದರಲ್ಲಿ ಉದ್ದಿಮೆಗಳಿಗೆ 10-15 ಎಕರೆ ಕೊಟ್ಟು ಉಳಿದುದನ್ನೆಲ್ಲಾ ಮಾರಾಟ ಮಾಡುವ ಪ್ರವೃತ್ತಿ ನಡೆಯುತ್ತಿದೆ. ನಮ್ಮ ದಕ್ಷಿಣ ಕನ್ನಡವು ಪಶ್ಚಿಮ ಘಟ್ಟಗಳಿಂದ ಸುತ್ತವರೆದಿದ್ದು ಸಂಪೂರ್ಣವಾಗಿ ಹಸಿರಾಗಿರುವ ಪ್ರದೇಶದಲ್ಲಿ ತಾವು ಗ್ರೀನ್‌ಬೆಲ್ಟ್‌ಗೋಸ್ಕರ ಜಾಗವನ್ನು ಕಾಯ್ದಿರಿಸುವ ಅವಶ್ಯಕತೆ ಇಲ್ಲ. ಎಲ್ಲಾ ಮೂಲಗಳಿಂದ ತಿರಸ್ಕರಿಸಲ್ಪಟ್ಟ ಬೃಹತ್ ಉದ್ದಿಮೆಗಳು ದಕ್ಷಿಣ ಕನ್ನಡ ಜಿಲ್ಲೆಗೆ ಬರುತ್ತಿವೆ. ಇದರಿಂದಾಗುವ ಸಮಸ್ಯೆಗಳ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಸರ್ಕಾರದಿಂದ ಬಯಸುತ್ತೇನೆ. ಮೀನುಗಾರರಲ್ಲಿರುವ ಗೊಂದಲವನ್ನು ನಿವಾರಣೆ ಮಾಡಿ ಮೀನಿನ ಕ್ಷಾಮದಿಂದ ಮೀನುಗಾರರಿಗೆ ಆಗಿರುವ ತೊಂದರೆಗಾಗಿ ಮೀನುಗಾರರಿಗೆ ಪರಿಹಾರವನ್ನು ಕೊಡಬೇಕಾಗಿದೆ. ಮಾನ್ಯ ಸಚಿವರ ಕಛೇರಿಗೆ ನಾನು, ಸಭಾಪತಿಯವರು ಮತ್ತು ಸಂಬಂಧಪಟ್ಟ ಶಾಸಕರೆಲ್ಲಾ ಹೋಗಿ ವಿಚಾರವನ್ನು ಮಂಡಿಸಿದ್ದೆವು; ಸಮಸ್ಯೆಯ

ಬಗೆಹರಿಸುತ್ತೇವೆ ಎಂದು ಭರವಸೆ ಕೊಟ್ಟಿದ್ದರು. ಆದರೆ ಇಲ್ಲಿಯವರೆಗೆ ಯಾವುದೇ ಆ ಭರವಸೆ ಈಡೇರಿಸಿಲ್ಲ. ತಾವೇನು ಭರವಸೆಯನ್ನು ಕೊಟ್ಟಿದ್ದೀರಿ ಅದನ್ನು ಆದಷ್ಟು ಬೇಗ ಈಡೇರಿಸಬೇಕೆಂದು ಮನವಿ ಮಾಡಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

+ ಶ್ರೀ ಕುಂಬ್ಳೆ ಸುಂದರ್‌ರಾವ್ (ಸೂರತ್ಕಲ್): ಮಾನ್ಯ ಉಪಾಧ್ಯಕ್ಷರೆ, ನಿತ್ಯ ಸಾಯುವವರಿಗೆ ಅಳುವವರ್ಯಾರು ಎಂದು ಗಾದೆ ಮಾತೊಂದಿದೆ. ನಮ್ಮ ಜಿಲ್ಲೆಯ ಕೈಗಾರಿಕೆಯ ಮಟ್ಟಿಗೆ ಈ ಗಾದೆ ಅನ್ವಯಿಸುತ್ತದೆ. ನಮ್ಮ ಸಮಸ್ಯೆ ಪರಿಹಾರವಾಗುವುದೂ ಇಲ್ಲ, ಅದರ ಬಗ್ಗೆ ಹೇಳಿ ಮುಗಿಸಲು ಆಗುವುದಿಲ್ಲ, ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಲೂ ಇಲ್ಲ. ನಮ್ಮ ಜಿಲ್ಲೆಗೆ ಬಂದರು ಬಂದಾಗ ಜನರು ನಾವು ಸ್ವರ್ಗವನ್ನು ಕಾಣುತ್ತೇವೆ ಎಂದು ತಿಳಿದುಕೊಂಡರು. ಬಂದರು, ಆನಂತರ ಇವರು ಏನೇನು ತಂದರು, ನಮ್ಮ ಜನರನ್ನೆಷ್ಟು ಕೊಂದರು ಎಂಬ ಬಗ್ಗೆ ಯೋಚನೆ ಮಾಡುವ ಸ್ಥಿತಿ ಬಂದಿದೆ. ಕೈಗಾರಿಕೆ ಬಂದಾಗ ಜನರಿಗೆ ಉದ್ಯೋಗ ದೊರೆಯುತ್ತದೆ, ಊರಿನ ಅಭಿವೃದ್ಧಿಯಾಗುತ್ತದೆಂದು ಹಿಂದಿನ ಅಭಿಪ್ರಾಯವಾಗಿತ್ತು. ಇಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅದರಲ್ಲೂ ನನ್ನ ಕ್ಷೇತ್ರದಲ್ಲಿ ಬರತಕ್ಕಂಥ ಬೃಹತ್ ಕೈಗಾರಿಕೆಗಳೇನಿದೆ ಅವುಗಳು ಒಂದೊಂದೂ ಒಂದೊಂದು ಸಮಸ್ಯೆಯನ್ನು ಸೃಷ್ಟಿಮಾಡಿ ಇಟ್ಟಿವೆ. ಎಂ.ಆರ್.ಪಿ.ಎಲ್. ಬಗ್ಗೆ, ನಾವು ಶಾಸಕರ ದಿನಾಚರಣೆ ಮಾಡಿದ್ದಾಗ ಸದಸ್ಯರಾದ ಯೋಜಗಿಶ್ ಭಟ್‌ರವರು ಪಾತ್ರ ಮಾಡಿ ಅದನ್ನು ಮಾರ್ಪಾಸುರವೆಂದು, ಬಿ.ಎಸ್.ಎಫ್. ಅನ್ನು ಭಸ್ಮಾಸುರವೆಂದು ಕರೆದರು, ಕೊಜೆಂಟ್ರಿಕ್ಸ್‌ನ್ನು ಕೊಜೆಂಟ್ರಾಸುರವೆಂದು ಕರೆದರು. ಅವರೇನು ಇವುಗಳನ್ನು ಆಸುರೀಶಕ್ತಿಯೆಂದು ಹೇಳಿದರು ಎಂಬ ಬಗ್ಗೆ ದಯವಿಟ್ಟು ತಾವು ಯೋಚನೆ ಮಾಡಬೇಕು. ದಕ್ಷಿಣ ಕನ್ನಡ ಜಿಲ್ಲೆಯ ಜನರು ಶಾಂತ ಮತ್ತು ಬುದ್ಧಿವಂತ ಜನ. ಅನ್ಯಾಯವಾದಾಗ ನಾವು ಅದನ್ನು ಪ್ರತಿಭಟಿಸುತ್ತೇವೆ ಆನಂತರ ಸಹಿಸುವ ಸ್ವಭಾವ ಬೆಳೆಸಿಕೊಂಡಿರುವುದರಿಂದ ಮತ್ತೆ ತಣ್ಣಗೆ ಕುಳಿತುಕೊಂಡುಬಿಡುತ್ತೇವೆ. ಎಂ.ಆರ್.ಪಿ.ಎಲ್. ಪೈಪ್‌ಲೈನ್ ಹಾಕಬೇಕಾದರೆ ಮೂರು ದಿನ ಇಡೀ ಜಿಲ್ಲೆಗೆ ಬೆಂಕಿ ಬಿತ್ತು. ಒಂದು ಮನೆಯಲ್ಲೂ ನೆಮ್ಮದಿ ಇರಲಿಲ್ಲ, ಯಾವ ಹೊತ್ತಿಗೆ ಏನಾಗುತ್ತದೋ ಗೊತ್ತಿರಲಿಲ್ಲ, ಯಾವ ರಸ್ತೆಯಲ್ಲಿ ನೋಡಿದರೂ ಪೊಲೀಸ್ ವ್ಯಾನ್, ಯಾವ ರಸ್ತೆಯಲ್ಲಿ ಹೋದರೂ ಸಹ ಜನರ ಗುಂಪು, ಲಾಠಿಚಾರ್ಜ್ ನಡೆಯಿತು, 25-12-95ರಂದು ನಡೆದಂಥ ಘಟನೆಯಲ್ಲಿ ಭಾಗವಹಿಸಿದ್ದಂಥ ನಾನು ಮತ್ತೆ ಸಭಾಪತಿಯವರು ಸೆರೆಹಿಡಿಯಲ್ಪಟ್ಟಿವು, ಆಸ್ಪತ್ರೆಯಲ್ಲಿ ಬಿದ್ದೆವು, ಉಪವಾಸಸತ್ಯಾಗ್ರಹ ಮಾಡಿದೆವು, ಕೊನೆಗೆ ಸರ್ಕಾರದಿಂದ ಬಂದ ಆದೇಶದಂತೆ ಅದು ಕಾರ್ಯರೂಪಕ್ಕೆ ಬರುತ್ತದೆ ಎನ್ನತಕ್ಕ ನಿರೀಕ್ಷೆಯಿಂದ ನಾವು ಇದ್ದೆವು, ಆದರೆ ಆದದ್ದೇನೆಂದರೆ ನಮ್ಮ ಮೇಲೆ ಕೇಸು, ಆ ಕೇಸು ಇನ್ನು ಮುಗಿದಿಲ್ಲ, ಪೈಪ್‌ಲೈನ್ ಹಾಕುವ ವಿಚಾರದಲ್ಲಿ ಸಿಟಿಜನ್ ಕಮಿಟಿಯನ್ನು ನೇಮಕ ಮಾಡಿ ಅದರ ನೇತೃತ್ವದಲ್ಲಿ ಟ್ರೀಟ್‌ಮೆಂಟ್ ಪ್ಲಾಂಟ್‌ನ್ನು ಹಾಕಿ ಕೆಲಸ ಪ್ರಾರಂಭ ಮಾಡುತ್ತೇವೆಂದು ಸರ್ಕಾರದ ಭರವಸೆ ಇತ್ತು, ಮಾಡಬೇಕೆಂದು ಆದೇಶವೇನಿತ್ತು ಅದು ಇದುವರೆಗೆ ಸಹ

ಕಾರ್ಯಗತವಾಗಿಲ್ಲ. ನಾನು ಆ ಕ್ಷೇತ್ರದ ಶಾಸಕನಾಗಿದ್ದೇನೆ. ಅಲ್ಲಿ ಎಂ.ಆರ್.ಪಿ.ಎಲ್. ಎನ್ನತಕ್ಕ ಬೃಹತ್ ಕೈಗಾರಿಕೆ ಬಂದಾಗ, ಅದರ ಬಗ್ಗೆ ಅಲ್ಲಿನ ಜನರಲ್ಲಿ ಅಸಮಾಧಾನ ಇದ್ದಾಗ ಸರ್ಕಾರ ಆ ಉದ್ದಿಮೆಯಲ್ಲಿ ಏನು ಮಾಡಿಸುತ್ತದೆ ಎಂಬ ಬಗ್ಗೆ ಶಾಸಕನಾದ ನನಗೆ ಮಾಹಿತಿ ಬರಬೇಕಾಗಿತ್ತು. ಬರುತ್ತಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರಾದ ಜಯಪ್ರಕಾಶ್ ಹೆಗಡೆಯವರಿಗೆ, ಮೊಹಿದ್ದೀನ್‌ರವರಿಗೆ ನನ್ನ ಬಗ್ಗೆ ನೆನಪಾಗುತ್ತದೆ. ಆದರೆ ಕರ್ನಾಟಕ ಸರ್ಕಾರದ ಮಿಕ್ಕ ಯಾವುದೇ ಸಚಿವರು ಅಲ್ಲಿಗೆ ಬಂದಾಗ ಎಂ.ಆರ್.ಪಿ.ಎಲ್.ಗೆ ಭೇಟಿ ನೀಡಿದಾಗ, ಬಾಜಾಬಜಂತ್ರಿಗಳ ಸಮೇತ ಮೆರವಣಿಗೆ ಮಾಡಿಸಿಕೊಂಡಾಗ, ಅವರ ಊಟೋಪಚಾರಕ್ಕೆ ಅವರು ಸಿದ್ಧರಾದಾಗ, ಅಲ್ಲಿನ ಶಾಸಕರಿದ್ದಾರೆ, ಅವರನ್ನೂ ಕರೆಯಬೇಕು, ಅವರದ್ದೂ ಅಂಗತ್ವವಿದೆಯೆನ್ನತಕ್ಕ ಕಲ್ಪನೆಯೇ ಅವರಿಗೆ ಬರುತ್ತಿಲ್ಲ. ಊರಿನಲ್ಲಿರುವ ಗದ್ದೆಯಲ್ಲೆಲ್ಲಾ ಕಾರ್ಖಾನೆಯ ಎಣ್ಣೆ ಬಿದ್ದಿದೆ, ಬೆಳೆಯಾಗುತ್ತಿಲ್ಲವೆಂಬುದನ್ನು ನೋಡಲು ಪರಿಸರ ಖಾತೆಯ ಸಚಿವರು ಬಂದಿದ್ದರು, ಆ ಪುಣ್ಯಾತ್ಮ ನನಗೆ ಕರೆಯಲಿಲ್ಲ, ಅಧಿಕಾರಿಗಳು ಹೇಳಲಿಲ್ಲ, ನನ್ನನ್ನೇಕೆ ಕರೆಯಲಿಲ್ಲವೆಂದು ನಾನು ಅಲ್ಲಿ ಹೋಗಿ ಜಗಳ ಮಾಡಬೇಕಾಗಿತ್ತು, ಆದರೆ ಅದು ನನ್ನ ಸಂಸ್ಕೃತಿಯಲ್ಲ, ನಾನೇ ಒತ್ತಾಯದಲ್ಲಿ ಔತಣಕ್ಕೆ ಹೇಳಿಕೆ ಇಲ್ಲದಿದ್ದರೂ ಊಟ ಮಾಡದೆ ವೇದಿಕೆಯಲ್ಲಿ ಹೋಗಿ ಕುಳಿತುಕೊಂಡೆ, ಸಚಿವರು ಎದ್ದು ಹೊರಟುಹೋದರು. ಆನಂತರ ಒಬ್ಬ ಪಂಚಾಯಿತಿಯ ಅಧ್ಯಕ್ಷ ಮಂತ್ರಿಗಳು ಬರುವ ಬಗ್ಗೆ ನನಗೇಕೆ ಹೇಳಲಿಲ್ಲವೆಂದು ಜಗಳವನ್ನು ಉಂಟು ಮಾಡಿದ. ಶಾಸಕರಾದ ನಾನೇ ಬಾಯಿಮುಚ್ಚಿಕೊಂಡಿದ್ದರು ಒಬ್ಬ ಪಂಚಾಯಿತಿಯ ಅಧ್ಯಕ್ಷ ನನಗೇಕೆ ಇದರ ಬಗ್ಗೆ ಹೇಳಲಿಲ್ಲವೆಂದು ಗಲಾಟೆ ಮಾಡುತ್ತಾನೆ. ಮಂತ್ರಿಮಹೋದಯರು ನನ್ನನ್ನು ನೋಡಿಕೊಳ್ಳುವ ಸ್ಥಿತಿ ಇದಾಗಿದೆ. ಹಿಂದೊಮ್ಮೆ ಮಾನ್ಯ ದೇಶ್‌ಪಾಂಡೆಯವರಲ್ಲಿ ಇದರ ಬಗ್ಗೆ ಹೇಳಿಕೊಂಡಿದ್ದೆ. ನನ್ನನ್ನು ಕಡೆಕಣಿಸಲ್ಪಡುತ್ತಿದ್ದಾರೆ, ನಿಮ್ಮ ಪ್ರತಿನಿಧಿ ನಾನು, ನಿಮಗಾಗಿ ನಾನಿದ್ದೇನೆಂದು ಜನರಿಗೆ ಹೇಳುವ ಅವಕಾಶ ಕಸಿಯಲ್ಪಡುತ್ತಿದೆಯೆಂದು ಹೇಳಿದಾಗ, ದೇಶಪಾಂಡೆಯವರು, ಸುಂದರ್‌ರಾವ್‌ರವರೇ, ಇನ್ನು ನೀವು ಯೋಚನೆ ಮಾಡಬೇಡಿ ನಿಮಗೆ ಚೆಂದ ಮಾಡೋಣವೆಂದು ಹೇಳಿದ್ದರು. ನನಗೆ ಹೆಸರು ಸುಂದರವೆಂದು ಇದೆ ಆದರೆ ಅಲ್ಲಿ ಸುಂದರ ಇಲ್ಲ ನೋಡಿ, ನನ್ನ ಕ್ಷೇತ್ರ ಕುರೂಪವಾಗುತ್ತಿದೆ, ವಿರೂಪ ಆಗುತ್ತಿದೆ ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಎಂ.ಆರ್.ಪಿ.ಎಲ್.ನ ಬಗ್ಗೆ ನಿಮ್ಮ ಪ್ರಕ್ರಿಯೆ ಸರಿಯಾಗಿ ನಡೆಯಬೇಕಾಗಿದೆ. ಕೇಂದ್ರ ಸರ್ಕಾರದ ಮಾರ್ಗಸೂಚಿಯೇನಿದೆ ಅದನ್ನು ಇಷ್ಟೂ ಅಲಕ್ಷ್ಯಮಾಡಿ ಕರ್ನಾಟಕ ಸರ್ಕಾರ ಮುಂದೆ ಹೋಗಬಹುದೆ? ಒಂದು ಬೃಹತ್ ಕೈಗಾರಿಕೆ ನಗರ ಪ್ರದೇಶದಿಂದ 25 ಕಿ.ಮೀ. ದೂರದಲ್ಲಿರಬೇಕೆಂದು ಮಾರ್ಗಸೂಚಿಯಲ್ಲಿದೆ. ಭೂಪಾಲ್ ದುರಂತವಾದ ಮೇಲೆ ಈ ಮಾರ್ಗ ಸೂಚಿ ಜಾರಿಗೆ ಬಂತು. ಮಂಗಳೂರಿನಿಂದ ಎಂ.ಆರ್.ಪಿ.ಎಲ್. ಸಮುಚ್ಚಯಕ್ಕೂ ಕೇವಲ 8 ಕಿ.ಮೀ. ಇದೆ. ಆ ಸುತ್ತಮುತ್ತಲ ಭಾಗವೆಲ್ಲಾ ಕಾರ್ಪೊರೇಷನ್‌ಗೆ ಸೇರಿದೆ. ತಾವು ಈಗ ಏನು ಮಾಡುತ್ತೀರಿ? ಮಂಗಳೂರನ್ನು ತೆಗೆದುಕೊಂಡು ಬೇರೆ ಕಡೆ ಇಡುತ್ತೀರೋ

ಅಥವಾ ಎಂ.ಆರ್.ಪಿ.ಎಲ್.ನ್ನು ಹೊರಕ್ಕೆ ಸಾಗಿಸುತ್ತೀರೋ? ನಗರಪ್ರದೇಶದಿಂದ 25 ಕಿ.ಮೀ. ದೂರದಲ್ಲಿ ಬೃಹತ್ ಉದ್ದಿಮೆ ಇರಬೇಕೆಂದೇನು ಮಾರ್ಗಸೂಚಿ ಇದೆ ಅದನ್ನು ಕರ್ನಾಟಕ ಸರ್ಕಾರ ಅನುಸರಿಸುತ್ತಿಲ್ಲ, ಇದರ ಬಗ್ಗೆ ನನಗೆ ವಿವರಣೆ ಕೊಡಬೇಕು. ಬೆಳಗಾಗುವುದರೊಳಗಾಗಿ ಎಂ.ಆರ್.ಪಿ.ಎಲ್, ಬಿ.ಎಸ್.ಎಫ್.ಗಳು ಬರಲಿಲ್ಲ. ಬಿ.ಎಸ್.ಎಫ್.ನವರು ಶಾಸಕರನ್ನು ಮಾತನಾಡಿಸುತ್ತಿಲ್ಲ, ಮಂತ್ರಿಮಹೋದಯರು ಸಂಬಂಧ ಮಾಡಿಕೊಂಡು ಜನರ ಸಮಸ್ಯೆಗಳೇನಿದೆ ಅದನ್ನು ಕೇಳಲು ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಕೆಲಸ ಮಾಡುತ್ತಿಲ್ಲ. ಅಲ್ಲಿ ನಡೆಯುತ್ತಿರುವ ಅನರ್ಥದ ಪರಿಣಾಮವಾಗಿ ಹೊಸ ಸಮಸ್ಯೆ ಈಗ ಎದ್ದಿದೆ. ನಾಲ್ಕು ಲಕ್ಷಕ್ಕಿಂತ ಹೆಚ್ಚಾಗಿರುವ ಮೀನುಗಾರ ಕುಟುಂಬದವರಿಗೆ ಸಿಗಬೇಕಾದ ಉತ್ಪಾದನೆ ಕಡಿಮೆಯಾಗಿದೆ. ಮೀನುಗಾರರ ಬಂಧುಗಳ 4 ಲಕ್ಷಕ್ಕಿಂತ ಹೆಚ್ಚು ಕುಟುಂಬಗಳಿಗೆ ಸಿಗಬೇಕಾದಂತಹ ಉತ್ಪತ್ತಿ ಕಡಿಮೆಯಾಗಿದೆ. ಮೊನ್ನೆ ಮೀನುಗಾರರ ಸಂಘದವರು ಪಡುಬಿದ್ರೆಯಲ್ಲಿ ಸಭೆ ಸೇರಿದ್ದರು, ಪರಿಹಾರವನ್ನು ಕೊಡಿಸಿ ಎಂದು ಕೇಳಿದರು. ಗದ್ದೆಗೆ ನೀರು ಬಂದು ಬೆಳೆ ಹಾಳಾದರೆ ಪರಿಹಾರ ಸಿಗುತ್ತದೆ. ಎಂ.ಆರ್.ಪಿ.ಎಲ್.ನಿಂದ ಮತ್ತು ಇತರ ಸಂಸ್ಥೆಗಳಿಂದ ಬಿಟ್ಟಂತಹ ನೀರು; ಆ ನೀರಿನ ಪರಿಣಾಮವಾಗಿ ಆ ಮೀನಿನ ಬೆಳೆ ಕಡಿಮೆಯಾದರೆ ಅವರಿಗೆ ಪರಿಹಾರ ಬೇಕೋ ಬೇಡವೋ? ಆ ಎಲ್ಲಾ ಜನರನ್ನು ಕರೆದುಕೊಂಡು ಮುಖ್ಯಮಂತ್ರಿಯವರ ಬಳಿಗೆ ಹೋಗಿದ್ದೆವು. ಹಾಗಾದರೆ ಈ ಸಮಸ್ಯೆ ಸಭಾಪತಿ ಹಾಗೂ ಕುಂಬ್ಳೆ ಸುಂದರ್‌ರಾವ್‌ನ ಸೃಷ್ಟಿಯಲ್ಲ. ಮಾನ್ಯ ಜಯಪ್ರಕಾಶಹೆಗ್ಡೆಯವರ ಹತ್ತಿರ ಅವರು ಬಂದಿದ್ದರು, ಅವರಿಗೂ ಸಹ ಗೊತ್ತಿದೆ. ನಮ್ಮ ಮೀನಿನ ಬೆಳೆ ಕಡಿಮೆಯಾಗಿದೆ, ಏಕೆ ಕಡಿಮೆಯಾಯಿತು? ಸಮುದ್ರದಲ್ಲಿ ಒಂದು ಪದರ ನಿರ್ಮಾಣವಾಗಿದೆ, ಅದರಲ್ಲಿ ಏನೆಲ್ಲಾ ಇದೆ ಎಂದು ವಿವರಣೆಯನ್ನು ಕೊಡುತ್ತಾ ಇದ್ದಾರೆ. ಮೀನಿನ ಮರಿ ಮೊಟ್ಟೆ ಎಲ್ಲವೂ ಸತ್ತು ಮೀನಿನ ವಂಶ ನಿರ್ನಾಮವಾಗುವ ಸ್ಥಿತಿ ಬಂದಿದೆ. ಅದನ್ನು ನೋಡಿಕೊಂಡು ನಾವು ಸುಮ್ಮನೇ ಇರುವುದಕ್ಕೆ ಸಾಧ್ಯವೇ? ಸರ್ಕಾರ ಈ ಬಗ್ಗೆ ಏಕೆ ಯೋಚನೆ ಮಾಡುವುದಿಲ್ಲ? ಎಂ.ಆರ್.ಪಿ.ಎಲ್. ಆಗಲಿ ಬಿ.ಎಸ್.ಎಫ್. ಆಗಲಿ, ಅವರು ಸಮುದ್ರಕ್ಕೆ ನೀರು ಬಿಡುವ ಹೋತ್ತಿಗೆ ಟ್ರೀಟ್‌ಮೆಂಟ್ ಪ್ಲಾಂಟ್ ಎಂದು ಏನು ಮಾಡಿದ್ದಾರೆ, ಅದು ಸರಿಯಾದಂಥ ರೀತಿಯಲ್ಲಿದೆ, ವೈಜ್ಞಾನಿಕವಾಗಿ, ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿದ್ದಾರೆ, ಅದರಿಂದ ಬರುವ ನೀರಿನಲ್ಲಿ ದೋಷ ಇಲ್ಲ ಎಂದು ಎದೆತಟ್ಟಿಕೊಂಡು ಹೇಳುವುದಕ್ಕೆ ಈ ಸರ್ಕಾರಕ್ಕೆ ಸಾಧ್ಯವಿದೆಯೇನು? ಮಾನ್ಯ ಮಂತ್ರಿಗಳು ಆ ಬಗ್ಗೆ ವರದಿಯನ್ನು ತರಿಸುತ್ತಿದ್ದೀರಾ? ಒಂದು ಪ್ಲಾಂಟ್ ಎಂ.ಆರ್.ಪಿ.ಎಲ್.ನವರದ್ದು, ಪಣಂಬೂರಿನಲ್ಲಿ ಮಾಡಿದ್ದಾರೆ, ಅದನ್ನು ನಾನು ನೋಡಿದ್ದೇನೆ. ಅಲ್ಲಿ ಒಬ್ಬ ಕಾವಲುಗಾರನಿದ್ದಾನೆ. ಅಲ್ಲಿ ಏನು ನಡೆಯುತ್ತಿದೆ, ಅಲ್ಲಿಂದ ನೀರು ಹೊರಗೆ ಹೇಗೆ ಬರುತ್ತದೆ ಎಂದು ನೋಡುವುದಕ್ಕೆ ವ್ಯವಸ್ಥೆ ಇಲ್ಲ. ಜನರ ಸಂಶಯ, ಸಂಶಯವಾಗಿ ಉಳಿದಿದೆ. ಜನರಿಗೆ ಆಗುತ್ತಿರುವ ಅನ್ಯಾಯ ಹಾಗೆಯೇ ಉಳಿದಿದೆ. ಆದ್ದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏನು ನಡೆಯುತ್ತಿದೆ ಎಂದು ನಾನು

ಕೇಳುತ್ತಿದ್ದೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇವತ್ತು ಬರಲಿರುವ ಕೈಗಾರಿಕೆಗಳ ಸಂಖ್ಯೆಯನ್ನು ಕೇಳಿದಾಗ ನನಗೆ ಉತ್ತರ ಬಂದಿದೆ. 37 ಕೈಗಾರಿಕೆಗಳು ಸ್ಥಾಪನೆಯಾಗುತ್ತದೆ ಎಂದು, 37 ಕೈಗಾರಿಕೆಗಳನ್ನು ಸ್ಥಾಪಿಸಿದರೆ ನಾವು ಅರಬ್ಬಿಸಮುದ್ರಕ್ಕೆ ಬೀಳೋಣವೇ? ಈಗಲೇ ನಮಗೆ ಒಳ್ಳೆಯ ಗಾಳಿ ಇಲ್ಲ, ಬದುಕಲು ಸ್ಥಳವಿಲ್ಲ, ಒಳ್ಳೆಯ ನೀರಿಲ್ಲ, ಜಲಚರಗಳು, ಭೂಚರಗಳು, ಪ್ರಾಣಿಗಳು ನಮಗೂ ಬದುಕಲು ಸಾಧ್ಯವಿಲ್ಲ ಎನ್ನುವಂತಹ ಸ್ಥಿತಿ ಇದೆ. ಉದ್ದಕ್ಕೂ ನೀವು ಫ್ಯಾಕ್ಟರಿಯನ್ನು ಮಾಡುತ್ತಾ ಹೋಗಿ ನಮ್ಮನ್ನು ನೀವು ಎಲ್ಲಿಗೆ ಕಳುಹಿಸುವವರು? ಕರ್ನಾಟಕ ರಾಜ್ಯದಲ್ಲಿ ಒಟ್ಟು 50 ಸಾವಿರ ಕೋಟಿ ರೂಪಾಯಿ ಹಣದ ಹೂಡಿಕೆ ಇದೆಯೆಂದು ಪತ್ರಿಕೆಯಲ್ಲಿ ನಾನು ಓದಿದ್ದೇನೆ. ಅದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಸಾವಿರ ಹೂಡಿಕೆ ಎಂದು ಗೊತ್ತಿದೆಯೆ ನಿಮಗೆ? ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 25 ಸಾವಿರ ಕೋಟಿರೂಪಾಯಿ ಹೂಡಿದೆ ಇದೆ. ಉಳಿದ 19 ಜಿಲ್ಲೆಗಳಿಗಿಂತ ಜಾಸ್ತಿಯಾಗಿದೆ. ಅದಕ್ಕೂ ಸ್ವಲ್ಪ ಸ್ವಲ್ಪ ಹಾಕಬಹುದಲ್ಲಾ. ನೀವು ಕಳುಹಿಸಿ ಅಂದರೆ ಅವರು ಕಳುಹಿಸಬೇಕಲ್ಲವೇ? ಏಕೆಂದರೆ ಅವರಿಗೆ ಚೆನ್ನಾಗಿ ಗೊತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಗೆ ಏಕೆ ಕೈಗಾರಿಕೆಗಳು ಬರುತ್ತವೆ ಅಂದರೆ ಅವರು ಕೊಡುವ ಉತ್ತರ....

ಶ್ರೀ ಎಂ.ಪಿ.ಪ್ರಕಾಶ್: ಸಗೀರ್ ಅಹಮದ್ ಅವರೆ, ನೀವೂ ಸಹ ಸಮುದ್ರವನ್ನು ತಂದು ಇಟ್ಟುಕೊಳ್ಳಿ, ಆಗ ಅವರು ಬರುತ್ತಾರೆ.

ಶ್ರೀ ಸಿ.ಆರ್.ಸಗೀರ್ ಅಹಮದ್: ಇವರು ಹೇಳುವಂತಹ ಮಾಹಿತಿ ಪ್ರಕಾರ ಮಂಗಳೂರು ಮುಳುಗಿ ಹೋಯಿತೆಂದು ಕಾಣುತ್ತದೆ.

ಶ್ರೀ ಕುಂಬ್ಳೆ ಸುಂದರ್‌ರಾವ್: ನಮ್ಮ ಮಂಗಳೂರಿಗೆ ದೊಡ್ಡ ಮಂಗಳೂರು ಎಂದು ಹೆಸರು ಇದೆ. ಕೈಗಾರಿಕೆಗಳು ಹೆಚ್ಚಾದಾಗ, ಜನಗಳಿಗೆ ಬದುಕುವುದಕ್ಕೆ ಕಷ್ಟವಾದಾಗ ಅದು ಚಿಕ್ಕಮಂಗಳೂರು ಆಗುತ್ತದೆ. ಮಾತ್ರವಲ್ಲ ದುಃಖದ ಮಂಗಳೂರು ಆಗುತ್ತದೆ. ಚಿಕ್ಕಮಂಗಳೂರು ಚೊಕ್ಕಮಂಗಳೂರು ಆದರೆ ಅಡ್ಡಿಯಿಲ್ಲ. ಆದರೆ ಅದು ದುಃಖದ ಊರಾಗಿ ಪರಿಣಮಿಸುತ್ತಿದೆ. ಈ ಸಂದರ್ಭದಲ್ಲಿ ಒಂದು ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. 20 ಜಿಲ್ಲೆಗಳಲ್ಲಿ ನಮ್ಮ ಜಿಲ್ಲೆಯನ್ನೇ ಆರಿಸಿಕೊಳ್ಳುವುದಕ್ಕೆ ಕಾರಣ ಬಹಳ ಸ್ಪಷ್ಟ ಇದೆ. ಕಚ್ಚಾ ವಸ್ತುಗಳನ್ನು ತರಿಸಿಕೊಳ್ಳುವುದಕ್ಕೆ ಬಂದರು ಇದೆ, ರೈಲುಮಾರ್ಗವಿದೆ. ಕಳುಹಿಸುವುದಕ್ಕೆ ಹಡಗಿನ ವ್ಯವಸ್ಥೆ ಇದೆ. ಯಾವುದು ದೂಷಿತ ಪದಾರ್ಥಗಳು ಇವೆ, ಕಶ್ಮಲ ಪದಾರ್ಥಗಳು ಇವೆ ಅವನ್ನು ಬಿಡುವುದಕ್ಕೆ ಸಮುದ್ರವಿದೆ, ಹಿಂದಿನ ವರ್ಷ ಮಾನ್ಯ ಜಾಲಪ್ಪನವರು ಮಂತ್ರಿಯಾಗಿದ್ದಾಗ ಒಂದು ಮಾತನ್ನು ಹೇಳಿದ್ದರು. ನೀವು ಅಲ್ಲಿ ಕೈಗಾರಿಕೆ ಬರಬಾರದೆಂದು ಹೇಳುತ್ತಿದ್ದೀರಲ್ಲಾ, ಅದಕ್ಕೊಂದು ಉಪಾಯ ಮಾಡೋಣ. ನಿಮ್ಮ ಸಮುದ್ರವನ್ನು ನಮ್ಮಲ್ಲಿಗೆ ಕಳುಹಿಸಿ ಎಂದು ಹೇಳಿದ್ದರು. ಒಬ್ಬ ಬಡವನಿಗೆ ಚಂದದ ಹೆಂಡತಿ ಇದ್ದಳಂತೆ. ಕಂಡವರೆಲ್ಲ ಅವಳ ಕಡೆ

ಕಣ್ಣು ಹಾಕುತ್ತಿದ್ದರಂತೆ, ಕೀಟಲೆಯನ್ನು ಮಾಡುತ್ತಿದ್ದರಂತೆ, ಅವಳ ಗಂಡ ಊರಿನವರಿಗೆ ದೂರಿತ್ತ. ಆ ಊರಿನ ಯಜಮಾನ ನ್ಯಾಯ ಹೇಳಬೇಕಾದವನು ಹೇಳಿದನಂತೆ, ನಿನ್ನ ಹೆಂಡತಿ ಅಷ್ಟು ಚೆಂದವಾಗಿರುವುದು ಏತಕ್ಕೆ ಎಂದು? ಹಾಗೆ ನಮ್ಮ ಹತ್ತಿರ ಸಮುದ್ರ ವಿರುವುದು ಏತಕ್ಕೆ ಎಂದು ಹೇಳಿ ನಮ್ಮಲ್ಲಿಗೆ ಕಳುಹಿಸಿ ಅನ್ನುತ್ತಿದ್ದಾರೆ. ನಮ್ಮಲ್ಲಿ ಸಮುದ್ರ ವಿರುವುದೇ ತಪ್ಪಾ, ಅದನ್ನು ನಾವು ನಮ್ಮ ಭಾಗ್ಯ ಎಂದು ತಿಳಿದುಕೊಂಡಿದ್ದೇವೆ. ಈಗ ನಮಗೆ ಸಮುದ್ರ ಶಾಪವಾಗಿ ಪರಿಣಮಿಸಿ ಈ ರೀತಿಯಾಗಿದೆ. ಆದ್ದರಿಂದ ನಾನು ಹೇಳುತ್ತಿದ್ದೇನೆ, ಜನರು ಎದ್ದು ನಿಲ್ಲುವ ಮೊದಲು ಮೀನುಗಾರರ ಹೊಟ್ಟೆಯ ಮೇಲೆ ಹೊಡೆಯುವ ಮೊದಲು, ಮೀನುಗಾರರು ಬಂದು ನಮ್ಮ ಹೊಟ್ಟೆಗೆ ಹೊಡೆಯುತ್ತಿದ್ದಾರೆ ಎಂದು ಹೇಳುವ ಮೊದಲು ಈ ಕೈಗಾರಿಕೆಗಳಿಂದ ಮೀನಿನ ಮರಿ ಉತ್ಪತ್ತಿ ಆಗುವ ಬದಲು ನಾಶವಾಗುತ್ತಿವೆ ಎಂದು ದುಃಖಿಸುವ ಮೊದಲು ಕೈಗಾರಿಕೆಗಳು ಬರುವುದನ್ನು ತಡೆಯುವುದಕ್ಕೆ ನೀವು ಏನು ಕರ್ತವ್ಯ ಮಾಡಬೇಕಾಗಿದೆಯೋ, ಅದನ್ನು ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿಸುತ್ತಿದ್ದೇನೆ. ಇದಕ್ಕೆ ಸಂಬಂಧಪಟ್ಟಂತೆ ವಿವರಣೆಯನ್ನು ಕೊಡುತ್ತಾ ಈಗ ಇರುವಂತಹ ಕೈಗಾರಿಕೆಗಳ ತ್ಯಾಜ್ಯ ವಸ್ತುಗಳಲ್ಲಿ ಅಪಾಯವಿಲ್ಲ ಎಂಬ ಭರವಸೆಗಳನ್ನು ಕೊಡಿ ಎಂದು ನಾನು ತಮ್ಮಲ್ಲಿ ಒಂದು ಮಾತನ್ನು ಹೇಳುತ್ತಿದ್ದೇನೆ. ಇನ್ನು ಮುಂದೆ ಕೈಗಾರಿಕೆಗಳನ್ನು ಸ್ಥಾಪಿಸುವಾಗ ಉಡುಪಿಯ ಮಠಾಧಿಪತಿಗಳೂ ಸೇರಿ ದಕ್ಷಿಣ ಕನ್ನಡ ಜಿಲ್ಲೆಯ ಧಾರಣ ಶಕ್ತಿಯನ್ನು ಅಧ್ಯಯನ ಮಾಡಿ ಈ ಕೈಗಾರಿಕೆಗಳಿಂದ ಬಿಡುವಂತಹ ಕಲುಷಿತ ನೀರನ್ನು ತಡೆದುಕೊಳ್ಳುವಂತಹ ಶಕ್ತಿ ದಕ್ಷಿಣ ಕನ್ನಡ ಜಿಲ್ಲೆಯ ಪರಿಸರಕ್ಕೆ ಇದೆಯೇ ಎಂಬುದನ್ನು ಅಧ್ಯಯನ ಮಾಡಿ, ಅದನ್ನು ಮಾಡುವಂತೆ ಮನಸ್ಸು ಮಾಡಿ ಈಗ ಬಂದಿರುವುದನ್ನು ಉಳಿಸುವುದಕ್ಕೆ ಏನು ಬೇಕೋ ಅದನ್ನು ಮಾಡಿ, ಮುಂದೆ ಬರುವುದನ್ನು ತಡೆಯುವುದಕ್ಕೆ ಏನು ಬೇಕೋ ಅದನ್ನು ಮಾಡಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಕೈಗಾರಿಕಾ ಸಚಿವರು): ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು, ಮಾನ್ಯ ಸುಂದರ್‌ರಾವ್‌ರವರು ನಿಜವಾಗಿ ಈ ಸದನದ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಏನು ಕೈಗಾರಿಕೆಗಳು ಬರುತ್ತವೆ, ಅದರಿಂದಗಾಗುವ ಪರಿಣಾಮದ ಬಗ್ಗೆ ಸವಿಸ್ತಾರವಾಗಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಪರಿಸರದ ಬಗ್ಗೆ ಎಲ್ಲರಿಗೂ ಚಿಂತನೆ ಇರಬೇಕಾಗುತ್ತದೆ. ಎಕಾಲಜಿ ಮತ್ತು ಎನ್‌ವಿರೋನ್ಮೆಂಟ್ ಬಗ್ಗೆ ನಾವು ಇವತ್ತು ಚಿಂತನೆ ಮಾಡಲಿಲ್ಲವೆಂದರೆ ಮುಂದೆ ನಮಗೆ ಭವಿಷ್ಯ ಸರಿಯಿಲ್ಲ ಎಂದು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ನಮ್ಮ ಭವಿಷ್ಯ ನಿಜವಾಗಿಯೂ ಒಳ್ಳೆಯದಾಗಬೇಕಾದರೆ ಎಕಾಲಜಿ ಮತ್ತು ಎನ್‌ವಿರೋನ್ಮೆಂಟ್ ಬಗ್ಗೆ ಹೆಚ್ಚಿನ ಆಸಕ್ತಿ ಇರಬೇಕಾಗುತ್ತದೆ. ಸರ್ಕಾರ ಎಕಾಲಜಿ ಮತ್ತು ಎನ್‌ವಿರೋನ್ಮೆಂಟ್ ಬಗ್ಗೆ ಹೆಚ್ಚಿನ ಚಿಂತನೆಯನ್ನು ಮಾಡುತ್ತಿದೆ. ಹಾಗಾಗಿ ನಮ್ಮ ಸ್ಟೇಟ್ ಪಲ್ಯೂಷನ್ ಕಂಟ್ರೋಲ್ ಬೋರ್ಡ್‌ನ್ನು ಇನ್ನೂ ಸ್ಟ್ರೆಂಗ್ತನ್

ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಇನ್ನೂ ಕೆಲಸವಾಗಬೇಕಾಗಿದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಮುಖ್ಯವಾಗಿ ಇವತ್ತು ಮಾನ್ಯ ಸಭಾಪತಿ ಅವರು ಈ ತ್ಯಾಜ್ಯದ ಪರಿಣಾಮದ ಬಗ್ಗೆ ಹಲವಾರು ವಿಚಾರಗಳನ್ನು ಹೇಳಿದ್ದಾರೆ. ನಾನು ಬಹಳ ವಿನಯವಾಗಿ ಹೇಳುತ್ತೇನೆ. I am not an expert. ನಾನು ಇಲ್ಲಿ ಉತ್ತರ ಕೊಡಬೇಕಾದರೆ I am guided by the opinion of the experts. I cannot be faulted. ಎಷ್ಟು ತ್ಯಾಜ್ಯ ವಸ್ತು ಇದೆ, ಅದರಿಂದ ಏನು ಪರಿಣಾಮವಾಗುತ್ತದೆ ಎಂದು ನಾನು ಹೇಳಬೇಕಾದರೆ ನನಗೆ ಕೊಟ್ಟ ಮಾಹಿತಿಯ ಪ್ರಕಾರ ನಾನು ಹೇಳಬೇಕಾಗುತ್ತದೆ. ಇವತ್ತು ಎಂ.ಸಿ.ಎಫ್, ಕುದುರೆಮುಖ, ಬಿ.ಎಸ್.ಎಫ್, ಎಂ.ಆರ್.ಪಿ.ಎಲ್. ಇಂತಹ ಕೈಗಾರಿಕೆಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿವೆ ನಿಜ. ಕೊಜೆಂಟ್ರಿಕ್ಸ್ ಪ್ರಾಜೆಕ್ಟ್, ನಾಗಾರ್ಜುನ ಸ್ಟೀಲ್ ಕಾರ್ಖಾನೆ ಇವುಗಳಿಗೆ ಸರ್ಕಾರದಿಂದ ಪರವಾನಗಿ ಕೊಟ್ಟಿದ್ದು ನಿಜ. ನಾವು ತಿಳಿದುಕೊಳ್ಳಬೇಕಾಗಿದೆ, ಇವತ್ತು ಈ ಅನುಮತಿಯನ್ನು ಕೇವಲ ಸರ್ಕಾರದ ಕ್ಯಾಬಿನೆಟ್ ಡಿಸಿಷನ್ ಏನಿದೆ ಅದರಿಂದ ಇಂಥ ಕೈಗಾರಿಕೆಗಳು ಬರುವುದಕ್ಕೆ ಸಾಧ್ಯವಿಲ್ಲ. ನಾವು ಯಾವುದೇ ಒಂದು ಪ್ರಾಜೆಕ್ಟ್‌ಗೆ ಕ್ಲಿಯರೆನ್ಸ್ ಕೊಡುವಾಗ ಬಹಳ ಸ್ಪಷ್ಟವಾಗಿ ಹೇಳುತ್ತೇನೆ. This is subject to clearance by Ecology and Environment Department. ಹಾಗಾಗಿ ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದಕ್ಕೆ ಮುಂಚಿತವಾಗಿ ಯಾವ ಸ್ಥಳದಲ್ಲಿ ಆ ಕೈಗಾರಿಕೆಗಳನ್ನು ಸ್ಥಾಪಿಸಬೇಕು ಎಂಬುದರ ಬಗ್ಗೆ ಪರಿಶೀಲನೆ ನಡೆಯುತ್ತದೆ, ನಿವೇಶನದ ಬಗ್ಗೆ ಪರಿಶೀಲನೆ ನಡೆಯುತ್ತದೆ. ಕೈಗಾರಿಕೆಗಳು ಪ್ರಾರಂಭವಾಗುವುದಕ್ಕೆ ಮುಂಚೆ ಮೆಷಿನರಿಗಳು ಎಕ್ವಿಪ್‌ಮೆಂಟ್ಸ್ ಎಲ್ಲಾ ಇನ್‌ಸ್ಟಾಲ್ ಆಗಬೇಕಾದರೆ ಪ್ರೊಡೆಕ್ಷನ್ ಆಗುವುದಕ್ಕಿಂತ ಮುಂಚೆ ಯಾವ ತರಹದ ಎಕ್ವಿಪ್‌ಮೆಂಟ್ಸ್ ಉಪಯೋಗಿಸಬೇಕೆಂಬ ಬಗ್ಗೆ ಎಕಾಲಜಿ ಡಿಪಾರ್ಟ್‌ಮೆಂಟ್ ಅಥವಾ ಕೇಂದ್ರ ಪಲ್ಯೂಷನ್ ಕಂಟ್ರೋಲ್ ಡಿಪಾರ್ಟ್‌ಮೆಂಟ್‌ನವರು ಅದರ ಮೇಲೆ ಇಂಥ ಎಕಾಲಜಿ ಇರಬೇಕು, ಇಂಥ ಎನ್‌ವಿರನ್‌ಮೆಂಟ್ ಇರಬೇಕು, ಇಂಥ ಮೆಷಿನರಿಗಳನ್ನು ಹಾಕಬೇಕೆಂದು ಏನು ಕಂಡೀಷನ್‌ಗಳನ್ನು ಹಾಕುತ್ತಾರೆ, ಅದನ್ನು ಹಾಕುವವರೆಗೆ ಯಾರೂ ಪರ್ಮಿಷನ್ ಕೊಡುವುದಿಲ್ಲ. ಹಾಗಾಗಿ ಒಂದುಕಡೆ ನಮ್ಮ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನವರು ಅನುಮತಿ ಕೊಟ್ಟರೂ ಸಹ 50 ಕೋಟಿ ಮೇಲೆ ಇನ್‌ವೆಸ್ಟ್‌ಮೆಂಟ್ ಇದೆ ಎಂದು ಬಂದಾಗ ಕೇವಲ ರಾಜ್ಯಸರ್ಕಾರ ಕೇಂದ್ರ ಸರ್ಕಾರದ ಎಕಾಲಜಿ ಮತ್ತು ಎನ್‌ವಿರೋನ್ಮೆಂಟ್ ಇಲಾಖೆಯ ಅನುಮತಿ ಪಡೆದುಕೊಳ್ಳುತ್ತಾರೆ. ಹಾಗಾಗಿ ಈ ನಾಲ್ಕು ಕೈಗಾರಿಕೆಗಳು ಏನು ಬಂದಿವೆ, ಇವು ಪರಿಸರದ ಬಗ್ಗೆ ಎಕಾಲಜಿ ಎನ್‌ವಿರೋನ್ಮೆಂಟ್ ಬಗ್ಗೆ ಯಾವ ತರಹದ ಎಕ್ವಿಪ್‌ಮೆಂಟ್‌ನ್ನು ಅಲ್ಲಿ ಇನ್‌ಸ್ಟಾಲ್ ಮಾಡಬೇಕು ಎಂಬುದರ ಬಗ್ಗೆ ಸಮೀಕ್ಷೆ ನಡೆದು ಚಿಂತನೆ ನಡೆದು ಆ ಪ್ರಕಾರ ಇನ್‌ಸ್ಟಾಲ್ ಮಾಡಿ ಪ್ರಾರಂಭವಾಗುತ್ತದೆ. ಇವತ್ತು ನಮ್ಮ Institute of Oceanography, Goa, ಇವರು ಈ 4 ಕೈಗಾರಿಕೆಗಳು ಯಾವ ಪ್ರಕಾರ ಇದನ್ನು ಡಿಸ್‌ಚಾರ್ಜ್ ಮಾಡಬೇಕು ಎಂಬ ಬಗ್ಗೆ

ಗೈಡ್‌ಲೈನ್ಸ್ ಕೊಟ್ಟಿದ್ದಾರೆ. ಆ ಗೈಡ್‌ಲೈನ್ಸ್ ಪ್ರಕಾರ ಅವರು ಇವತ್ತು ಡಿಸ್‌ಚಾರ್ಜ್ ಮಾಡುತ್ತಿದ್ದಾರೆ. ಅಷ್ಟೇ ಅಲ್ಲ, ಇವತ್ತು ನಮ್ಮ Central Marine Fisheries Research Institute, Fisheries College, ಮತ್ತು ಎನ್‌ಐಯು ಇವರು ರೆಗ್ಯುಲರ್ ಮಾನಿಟರಿಂಗ್ ಮಾಡುತ್ತಿದ್ದಾರೆ. ಈ ಎಲ್ಲಾ ಟ್ರೀಟ್‌ಮೆಂಟ್ ಆದನಂತರ ಸಮುದ್ರಕ್ಕೆ ಏನು ಬಿಡುತ್ತಾರೆ, ಅದಕ್ಕಿಂತ ಮುಂಚೆ ಇದರ ರೆಗ್ಯುಲರ್ ಆಗಿ ಮಾನಿಟರಿಂಗ್ ನಡೆಯುತ್ತದೆ. ಇವತ್ತು ಮೀನುಗಾರರ ಜೀವನದ ಮೇಲೆ, ಸಾಮಾನ್ಯ ಜನರ ಜೀವನದ ಮೇಲೆ, ದಕ್ಷಿಣಕನ್ನಡ ಜನರ ಜೀವನದ ಮೇಲೆ, ಸುಂದರರಾಯರ ಜೀವನದ ಮೇಲೆ ಪರಿಣಾಮ ಮಾಡುವಂಥ ಯಾವ ಕೈಗಾರಿಕೆಯನ್ನೂ ತರಲು ನಮಗೆ ಇಚ್ಛೆಯಿಲ್ಲ. ಇವತ್ತು ನಾನು ತಮ್ಮ ಮುಖಾಂತರ ಈ ಸದನಕ್ಕೆ ಭರವಸೆ ಕೊಡುತ್ತಿದ್ದೇನೆ, ಒಂದು ವೇಳೆ ಈ ಕೈಗಾರಿಕೆಯಿಂದ ಮೀನುಗಾರರ ಮೇಲೆ ಅಥವಾ ಮೀನಿನ ಉತ್ಪಾದನೆ ಮೇಲೆ, ಮೀನು ತಿನ್ನುವವರ ಮೇಲೆ ಅಥವಾ ಸಾಮಾನ್ಯ ಜನರ ಮೇಲೆ ಪರಿಣಾಮವಾಗಿದ್ದರೆ, we will not hesitate to close these industries. ಆದರೆ ಇದಕ್ಕೆ ನಾವು ಸರ್ಕಾರದಲ್ಲಿ ಯಾವುದೇ ಒಂದು ನಿರ್ಣಯ ಮಾಡಬೇಕಾದರೆ, ಮೀನಿನ ಉತ್ಪಾದನೆ ಕಡಿಮೆಯಾಗಿದೆ ಎಂದು ನಾನು ಹೇಳುವುದಕ್ಕೆ ಆಗುವುದಿಲ್ಲ. ಮೀನಿನ ಉತ್ಪಾದನೆ ಹೆಚ್ಚು ಅಥವಾ ಕಡಿಮೆಯಾಗುವ ಬಗ್ಗೆ ಮೀನುಗಾರಿಕೆ ಸಚಿವರು ಹೇಳುತ್ತಾರೆ. ಈ ಕೈಗಾರಿಕೆಯಿಂದ, ಈ ಕೈಗಾರಿಕೆ ಬಿಡುವ ತ್ಯಾಜ್ಯ ವಸ್ತುವಿನಿಂದ ಇವತ್ತು ಮೀನಿನ ಉತ್ಪಾದನೆ ಕಡಿಮೆಯಾಗಿದ್ದರೆ ನಿಜವಾಗಲೂ ನಾವು ಅದನ್ನು ಪರಿಗಣಿಸಬೇಕಾಗುತ್ತದೆ. ಆದರೆ ಆ ವರದಿ ಇವತ್ತು ನಮ್ಮ ಮುಂದೆ ಇಲ್ಲ. ಇವತ್ತು ನಮ್ಮ ಸ್ನೇಹಿತರು, ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಓಷಿಯೊಗ್ರಫಿ ಕೊಚ್ಚಿನ್, ಇವರ ವರದಿ ಇದೆ ಎಂದು ಹೇಳಿದರು. ಅವರು ಅದನ್ನು ನಮಗೆ ಕಳುಹಿಸಿದರೆ, ನಾನು ಅದನ್ನು ನಮ್ಮ ಎನ್‌ವಿರೋನ್ಮೆಂಟ್ ಸೆಕ್ರೆಟರಿಯವರಿಗೆ ಕಳುಹಿಸಿ ಖಂಡಿತವಾಗಿ ಅದನ್ನು ಪರಿಶೀಲನೆ ಮಾಡಿಸುತ್ತೇನೆ. ಆ ವರದಿ ಅವರ ಹತ್ತಿರ ಇಲ್ಲ ಎಂದು ಅವರು ಹೇಳಿದರು. ಹಾಗಾಗಿ ಅಲ್ಲಿ ಇವತ್ತು ಯಾವ ಕೈಗಾರಿಕೆಗಳು ಬರುತ್ತಿವೆ, ಅವುಗಳಿಗೆ ನಮ್ಮ ಮನಸ್ಸಿನ ಇಚ್ಛೆಯಂತೆ ಮನ್ನಣೆ ಕೊಡುತ್ತಿದ್ದೇವೆ. ಇವತ್ತು ದಕ್ಷಿಣ ಕನ್ನಡ ಜಿಲ್ಲೆಯ ಮೇಲೆ ಕೈಗಾರಿಕೆಗಳ ಒತ್ತಡ ಬಂದಿದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲ ಎಂದು ಹೇಳುವುದಿಲ್ಲ. ಒಂದು ಕೈಗಾರಿಕೆ ಬಂದಾಗ ಅದರಿಂದ ಅನುಕೂಲತೆಗಳೂ ಇವೆ, ಕೆಲವು ಅನಾನುಕೂಲತೆಗಳೂ ಇವೆ. ಇವತ್ತು ಗುಲ್ಬರ್ಗಾದವರು ನಮ್ಮ ಜಿಲ್ಲೆಗೆ ಕೈಗಾರಿಕೆಗಳನ್ನು ಕೊಡಿ ಎಂದು ಹೇಳುತ್ತಾರೆ. ಅದೇ ರೀತಿ ಬೀದರ್‌ನವರು ಮತ್ತು ರಾಯಚೂರಿನವರು ನಮ್ಮ ಕಡೆಗೆ ಕೈಗಾರಿಕೆಗಳನ್ನು ಕಳುಹಿಸಿ ಎಂದು ಹೇಳುತ್ತಾರೆ. ಆದರೆ ಅಲ್ಲಿಗೆ ಜನ ಹೋಗುವುದಿಲ್ಲ. ನಮ್ಮ ಕಡೆಯೂ ಕೆಲವು ಪ್ರಾಜೆಕ್ಟ್‌ಗಳನ್ನು ಕ್ಲಿಯರ್ ಮಾಡಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏನಾಗಿದೆ ಎಂದರೆ ಅಲ್ಲಿ ಬಂದರು ಇದೆ. ಮಂಗಳೂರು ರಿಫೈನರಿ ಕೇವಲ ಮಂಗಳೂರಿನಲ್ಲಿ ಮಾತ್ರ ಇಲ್ಲ. ಕೊಚ್ಚಿನ್‌ನಲ್ಲಿ ಇದೆ, ಬಾಂಬೆಯಲ್ಲಿ ಇದೆ, ಎಲ್ಲಾ ಕಡೆ ಇದೆ. ಇದೇನೂ ಮೊದಲನೇ ರಿಫೈನರಿ ಅಲ್ಲ. ಒಂದು ಕಡೆ ನಾವು

ಕೈಗಾರಿಕೆ ಬರಬೇಕು ಎಂದು ಹೇಳುತ್ತೇವೆ. ಒಂದು ರಾಜ್ಯ ಆರ್ಥಿಕವಾಗಿ ಬೆಳೆಯಬೇಕಾದರೆ,. ಅದರ ಶಕ್ತಿ ಹೆಚ್ಚಾಗಬೇಕಾದರೆ, ರಾಜ್ಯದ ಜನರ ಆರ್ಥಿಕ ಶಕ್ತಿ ಹೆಚ್ಚಾಗಬೇಕಾದರೆ, ಪರ್ಚೇಸಿಂಗ್ ಪವರ್ ಕೆಪ್ಯಾಸಿಟಿ ಹೆಚ್ಚಾಗಬೇಕಾದರೆ ಅದು ಕೈಗಾರಿಕೆಗಳಿಂದಲೇ ಸಾಧ್ಯ. ಹಾಗೆಂದು ಸರ್.ಎಂ.ವಿಶ್ವೇಶ್ವರಯ್ಯನವರು, 'Industrialise of perish.' ಎಂದು ಹೇಳಿದ್ದರು. ಹಾಗಾಗಿ ಇವತ್ತು ಕೈಗಾರಿಕೆ ಮತ್ತು ಕೃಷಿ ಇವು ಬೆಳೆಯಲೇ ಬೇಕಾಗುತ್ತದೆ. ಆದರೆ ನಾನು ಒಪ್ಪಿಕೊಳ್ಳುತ್ತೇನೆ, ಇದರ ಬಗ್ಗೆ ಎಕಾಲಜಿ ಎನ್‌ವಿರೋನ್ಮೆಂಟ್‌ನಿಂದ ನಾವು ಚಿಂತನೆ ಮಾಡುತ್ತೇವೆ. ಎಲ್ಲಾ ಕಾನೂನುಗಳನ್ನು ಗಾಳಿಗೆ ತೂರಿ ಮಾಡುವ ಇಚ್ಛೆ ನಮಗೆ ಇಲ್ಲ. ಸರ್ಕಾರ ಈ ಕೆಲಸವನ್ನು ಮಾಡುತ್ತಲೂ ಇಲ್ಲ. ಈಗ 10-4-97ರ ನಂತರ ಮತ್ತೊಂದು ವ್ಯವಸ್ಥೆ ಮಾಡಿದ್ದೇವೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದೊಂದು ಸಮಿತಿ ಮಾಡುತ್ತಿದ್ದೇವೆ. ಯಾವುದೇ ಕೈಗಾರಿಕೆಯನ್ನು ನಾವು ಕೈಗಾರಿಕೆ ಇಲಾಖೆಯಿಂದ ಮಂಜೂರು ಮಾಡಿದರೂ ಸಹ, ಜನರ ಅಭಿಪ್ರಾಯವನ್ನು ಕೇಳಿ, ಜನರ ಮುಂದೆ ನಮ್ಮ ಅಧಿಕಾರಿಗಳು ಹೋಗಿ ಅಲ್ಲಿ ಒಂದು ಸಮಿತಿ ಮಾಡಿ, ಚರ್ಚೆ ಮಾಡಿ ಅದರ ನಂತರ ಮುಂದಿನ ಮನ್ನಣೆಯನ್ನು ಸ್ಟೇಟ್ ಪೊಲ್ಯೂಷನ್ ಕಂಟ್ರೋಲ್ ಡಿಪಾರ್ಟ್‌ಮೆಂಟಿಗೆ ಕೊಡಬೇಕು. Public hearing will be done. ಆ ವ್ಯವಸ್ಥೆಯನ್ನೂ ಇವತ್ತು ಮಾಡಿದ್ದೇವೆ. ಅಷ್ಟೇ ಅಲ್ಲ. ಎಕಾಲಜಿ ಮತ್ತು ಎನ್‌ವಿರೋನ್ಮೆಂಟ್ ಸಚಿವರು ಇದರ ಬಗ್ಗೆ ಹೇಳಬಹುದು. ಆದರೆ ನಮ್ಮ ಪೊಲ್ಯೂಷನ್ ಕಂಟ್ರೋಲ್ ಡಿಪಾರ್ಟ್‌ಮೆಂಟ್ ಇನ್ನೂ ಸ್ಟ್ರೆಂಗ್ತನ್ ಆಗಬೇಕು, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅದು ಆಗುತ್ತಿಲ್ಲ. ಕಂಪ್ಯೂಟರೈಸ್ ಮಾಡಿದ್ದೇವೆ, ಬಹಳಷ್ಟು ಟೆಕ್ನಿಕಲ್ ಜನರನ್ನು ತೆಗೆದುಕೊಂಡಿದ್ದೇವೆ. ಆದರೂ ಸಾಕಾಗುತ್ತಿಲ್ಲ. ರೀಜನಲ್ ಆಫೀಸ್ ನಿಮ್ಮ ಊರುಗಳಲ್ಲಿದೆ. ಅದು ಸ್ಟ್ರೆಂಗ್ತನ್ ಆಗಬೇಕು ಎನ್ನುವ ಒಂದು ಮಾತನ್ನು ತಾವು ಹೇಳಿದಿರಿ. ಅದು ನಿಜ. ಅದು ಎಷ್ಟು ಸ್ಟ್ರೆಂಗ್ತನ್ ಆಗಬೇಕಾಗಿತ್ತೋ ಅಷ್ಟು ಆಗಲಿಲ್ಲ. ಅಲ್ಲಿ ಸಿಬ್ಬಂದಿಯ ಕೊರತೆ ಇದೆ. ಹಾಗಾಗಿ ರಾಜ್ಯದಲ್ಲಿ ಎಲ್ಲೆಲ್ಲಿ ನಮ್ಮ ಪೊಲ್ಯೂಷನ್ ಕಂಟ್ರೋಲ್ ಆಫೀಸ್‌ಗಳಿವೆ, ಇದು ಬೀದರ್ ಇರಬಹುದು, ಮಂಗಳೂರು ಇರಬಹುದು, ಅವನ್ನು ಸ್ಟ್ರೆಂಗ್ತನ್ ಮಾಡಲು ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ ಎಂದು ಭರವಸೆ ಕೊಡುತ್ತೇನೆ. ಇವತ್ತು ತಾವು ಕೆಲವು ಸಮಸ್ಯೆಗಳನ್ನು ಹೇಳಿದ್ದೀರಿ. ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ದೇವೇಗೌಡರು ಇಲ್ಲಿದ್ದಾಗ ಕೆಲವು ನಿರ್ಣಯಗಳು ಆದವು. ಸಿಟಿಜನ್ಸ್ ಕಮಿಟಿ ಈಗಾಗಲೇ ಆಗಿದೆ. ನಾನು ಇವತ್ತು ತಕ್ಷಣವೇ ನಿಮಗೆ ಸರ್ಕಾರದ ಆದೇಶವನ್ನು ಕೊಡುತ್ತೇನೆ. ಪ್ರತಿ ಜಿಲ್ಲೆಯಲ್ಲಿ ಸಿಟಿಜನ್ಸ್ ಕಮಿಟಿ ಇದೆ.

ಶ್ರೀ ಯು.ಆರ್.ಸಭಾಪತಿ: ಚುನಾಯಿತ ಪ್ರತಿನಿಧಿಗಳನ್ನು ಬಿಟ್ಟು ನೀವು ಸಿಟಿಜನ್ಸ್ ಕಮಿಟಿ ಮಾಡುತ್ತೀರಾ?

ಶ್ರೀ ಆರ್.ವಿ.ದೇಶಪಾಂಡೆ: ನಾನು ಇದರ ಸರ್ಕಾರಿ ಆದೇಶವನ್ನು ಕೊಡುತ್ತೇನೆ.

ನಾನು ಒಂದು ಅಥಾರಿಟಿಯಾಗಿ ಮಾತನಾಡುತ್ತಿದ್ದೇನೆ. ನಾನೇ ಸ್ವತಃ ಫೈಲ್ ಅಪ್ರೂವ್ ಮಾಡಿದ್ದೇನೆ. ಆಗ ಮುಖ್ಯ ಮಂತ್ರಿಗಳಿಂದ ಅಪ್ರೂವಲ್ ತೆಗೆದುಕೊಂಡು, Citizens 'Committee has been constituted under the Chairmanship of the Deputy Commissioner. ಅದನ್ನು ಮಾಡಿದ್ದೇವೆ. ಬೇಕಾದರೆ ಇವತ್ತು ಸಂಜೆಯೊಳಗೇ ಆದೇಶವನ್ನು ಕೊಡುತ್ತೇನೆ. ಇದನ್ನು ಮಾಡಿ ಹಲವಾರು ತಿಂಗಳುಗಳಾದವು. ಆದರೆ ಅದು ಎಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ.

ಶ್ರೀ ಕುಂಬ್ಳೆ ಸುಂದರ್‌ರಾವ್: ಸ್ಥಳೀಯ ಶಾಸಕರನ್ನು ಬಿಟ್ಟು ಸಿಟಿಜನ್ ಕಮಿಟಿ ಮಾಡಿದ್ದೀರಿ.

ಶ್ರೀ ಆರ್.ವಿ.ದೇಶಪಾಂಡೆ: ನನ್ನ ದೃಷ್ಟಿಯಲ್ಲಿ ಶಾಸಕರೂ ಅಲ್ಲಿ ಸದಸ್ಯರಾಗಿದ್ದಾರೆ. ಅದನ್ನು ನಾನು ನೋಡಿ ಹೇಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ತಾವು ಸಿಟಿಜನ್ಸ್ ಕಮಿಟಿಯನ್ನು ಸ್ಥಳೀಯ ಶಾಸಕರಿಲ್ಲದೆ ಮಾಡಿದ್ದೀರಿ ಎಂದು ಹೇಳುತ್ತಿದ್ದಾರೆ. ಅದನ್ನು ನೋಡಿ ಹೇಳುತ್ತೇನೆ ಎಂದರೆ, ಆ ಕಮಿಟಿಯನ್ನು ಮಾಡಿದಂಥ ನಿಮ್ಮ ಕಲ್ಪನೆ ಏನು? ಹೇಗೆ ಶಾಸಕರನ್ನು ಹಂತಹಂತವಾಗಿ ಪ್ರತಿಕ್ಷಣದಲ್ಲಿ ಅವರನ್ನು ಹ್ಯುಮಿಲಿಯೇಷನ್ ಮಾಡುತ್ತಿದ್ದೀರಿ. ಅವನು ಇಲ್ಲದೇ ಅಲ್ಲೊಂದು ಸಿಟಿಜನ್ಸ್ ಕಮಿಟಿ.

ಶ್ರೀ ಆರ್.ವಿ.ದೇಶಪಾಂಡೆ: ಯಡಿಯೂರಪ್ಪನವರೇ, ನನಗೆ ಜ್ಞಾಪಕವಿರುವ ಪ್ರಕಾರ ಅಲ್ಲಿ ಶಾಸಕರೂ ಇದ್ದಾರೆ. ನಾನು ನೋಡಿ ಹೇಳುತ್ತೇನೆ ಎಂದು ಹೇಳಿದ್ದು ಏಕೆಂದರೆ, ಇದು ಸುಮಾರು ಒಂದೂವರೆ ವರ್ಷಗಳ ಹಿಂದೆ ಆಗಿರುವಂಥಾದ್ದು. ನನ್ನ ದೃಷ್ಟಿಯಲ್ಲಿ ಶಾಸಕರೂ ಅದರಲ್ಲಿದ್ದಾರೆ. ಇಲ್ಲವೆಂದರೆ ನಾನು ಸೇರಿಸುವ ವ್ಯವಸ್ಥೆಯನ್ನು ಮಾಡುತ್ತೇನೆ. ಇದ್ದಾರೆ ಎನ್ನುವ ವಿಶ್ವಾಸ ನನಗೆ ಇದೆ. ಆದರೂ ಸಹ ಒಂದು ವೇಳೆ ಇಲ್ಲದಿದ್ದರೆ ಅವರನ್ನೂ ಸೇರಿಸುವ ವ್ಯವಸ್ಥೆ ಮಾಡುತ್ತೇನೆ. ಏಕೆಂದರೆ ಲೋಕಸಭಾ ಸದಸ್ಯರಾಗಲೀ, ಸ್ಥಳೀಯ ಶಾಸಕರಾಗಲೀ ಅಲ್ಲಿ ಇರಬೇಕು. ಎಂ.ಆರ್.ಪಿ.ಎಲ್.ನವರು ಈಗಾಗಲೇ ರೀಸೈಕ್ಲಿಂಗ್ ಪ್ಲಾಂಟನ್ನು ಹಾಕಿದ್ದಾರೆ. ಜಿಲ್ಲಾಧಿಕಾರಿ ನಮಗೆ ವರದಿಯನ್ನೂ ಕಳುಹಿಸಿದ್ದಾರೆ. ಇವತ್ತು ಅಲ್ಲಿ ತ್ಯಾಜ್ಯವಿರುವಂಥಾದ್ದರಲ್ಲಿ ಶೇ.70ರಷ್ಟನ್ನು ರಿಸೈಕ್ಲಿಂಗ್ ಮಾಡಿ ಅವರೂ ಉಪಯೋಗ ಮಾಡುತ್ತಿದ್ದಾರೆ. ಉಳಿದ ಶೇ.30ರ ಬಗ್ಗೆ ಅವರು ಮೊದಲಿನಿಂದ ವಾದ ಮಾಡುತ್ತಿದ್ದರು, ಇದನ್ನು ಮಾಡುವುದು ಬಹಳ ಕಷ್ಟ ಇದೆ ಎಂದು. ಆದರೆ ನಾವು ಅವರಿಗೆ, ನೀವು ಆ ಶೇ.30ರಷ್ಟನ್ನೂ ಮಾಡಬೇಕಾಗುತ್ತದೆ ಎಂದು ಒತ್ತಾಯ ಮಾಡಿದೆವು. ಆಗಲೂ ಅವರು ಸ್ಪಷ್ಟವಾಗಿ ಹೇಳಿದ್ದರು. 1995ನೇ ಇಸವಿಯಲ್ಲಿ ಸಭೆ ಆದಾಗಲೂ, ಇದನ್ನು ಮಾಡುವುದು ಬಹಳ ಕಷ್ಟ ಇದೆ ಎಂದು ಹೇಳಿದ್ದರು. ಆಗ ಒಂದು ವಿಚಾರ ಬಂತು. ಇದನ್ನು ಕೃಷಿಗೆ ಉಪಯೋಗ ಮಾಡಲು ಸಾಧ್ಯವೇ ಎಂದು. ಅದರ ಬಗ್ಗೆ ಇವತ್ತು ನಮ್ಮ ಜಂಟಿ ನಿರ್ದೇಶಕರು ಒಂದು ವರದಿ

ಕೊಟ್ಟಿದ್ದಾರೆ. ಅದರಲ್ಲಿ ತೇಗ, ಗೋಡಂಬಿ, ಕಬ್ಬು ಇಂಥ ಬೆಳೆಗಳನ್ನು ಬೆಳೆಯಲು ಅದನ್ನು ನಾವು ಉಪಯೋಗ ಮಾಡಬಹುದು. ಆದರೆ ಶೇ.30ರಿಂದ ಕೇವಲ 42 ಹೆಕ್ಟೇರ್ ಭೂಮಿಯಷ್ಟೇ ನೀರಾವರಿಯಾಗಬಹುದು ಎಂದು ಅವರು ಹೇಳಿದ್ದಾರೆ. ಹಾಗಾಗಿ 19ನೇ ತಾರೀಖು ನಮ್ಮ ಎಕಾಲಜಿ ಎನ್‌ವಿರಾನ್ಮೆಂಟ್ ಕಾರ್ಯದರ್ಶಿಯವರು ಮಂಗಳೂರಿಗೆ ಹೋಗುತ್ತಿದ್ದಾರೆ. ಈಗಾಗಲೇ ಇದರ ಬಗ್ಗೆ ಕೆಲವು ಸಭೆಗಳು ನಡೆದಿವೆ. ಮಂಗಳೂರಿಗೆ ಹೋಗಿ, ಸಂಬಂಧಿಸಿದವರ ಜೊತೆ ಚರ್ಚೆ ಮಾಡುತ್ತಾರೆ. ಶಾಸಕರ ಜೊತೆಯಲ್ಲೂ ಚರ್ಚೆ ಮಾಡಲು ಹೇಳುತ್ತೇವೆ. ಚರ್ಚೆ ಮಾಡಿ, ಇದಕ್ಕೆ ಒಂದು ಪರಿಹಾರ ಕಂಡುಹಿಡಿಯಲು ಸರ್ಕಾರ ಪ್ರಯತ್ನ ಮಾಡುತ್ತದೆ. ಇವತ್ತು ಮೀನುಗಾರರ ಜೀವನದ ಮೇಲೆ, ಮೀನಿನ ಉತ್ಪಾದನೆ ಮೇಲೆ ಪರಿಣಾಮ ಮಾಡಿ, ಅವರಿಗೆ ತೊಂದರೆ ಕೊಟ್ಟು ಯಾವ ಕೈಗಾರಿಕೆಯನ್ನೂ ತರಲೂ ಸರ್ಕಾರಕ್ಕೆ ಇಚ್ಛೆಯಿಲ್ಲ. ಅದನ್ನು ತರಲೂ ಬಾರದು. ಆ ಶಾಪ ನಮಗೆ ಬೇಡ. ಜನತಾ ಸರ್ಕಾರದ ಕಾಲದಲ್ಲಿ ಒಳ್ಳೆಯ ಕೈಗಾರಿಕೆಗಳು ಬಂದವು, ಜನರಿಗೆ ಒಳ್ಳೆಯದು ಆಯಿತು, ರಾಜ್ಯಕ್ಕೆ ಒಳ್ಳೆಯದಾಯಿತು ಎನ್ನುವ ಆಶೀರ್ವಾದ ನಮಗೆ ಬೇಕೇ ವಿನಃ ತಾವು ಏನು ಹೇಳಿದ್ದೀರಿ ಆ ಪ್ರಕಾರ ಯಾವ ಕೆಲಸವನ್ನೂ ಸರ್ಕಾರ ಮಾಡುವುದಿಲ್ಲ ಎನ್ನುವ ಭರವಸೆಯನ್ನು ತಮಗೆ ಕೊಡುತ್ತೇನೆ.

ಶ್ರೀ ಶ್ರೀರಂಗದೇವರಾಯಲು: ತಾವು ಕೈಗಾರಿಕೆಗಳ ವಿಚಾರ ಮಾತನಾಡುತ್ತಿದ್ದೀರಿ. ನಾನು ಒತ್ತಾಯ ಮಾಡಿ ಕೇಳುತ್ತಿದ್ದೇನೆ, ತುಂಗಭದ್ರಾ ಲೆಫ್ಟ್ ಬ್ಯಾಂಕ್ ರಿಸರ್ವಾಯರ್‌ನಿಂದ ಕೈಗಾರಿಕೆಗೆ ತಾವು ನೀರನ್ನು ಕೊಡುತ್ತಿದ್ದೀರಿ. ಆ ರೈತರ ಬಗ್ಗೆ ತಾವು ಏನು ಆಲೋಚನೆ ಮಾಡಿದ್ದೀರಿ?

ಶ್ರೀ ಆರ್.ವಿ.ದೇಶಪಾಂಡೆ: ಸುಂದರರಾಯರು ಹೇಳಿದ ಹಾಗೆ ಮಂತ್ರಿಗಳು ಹೋದಾಗ, ಶಾಸಕರಿಗೆ ತಿಳಿಸಬೇಕು ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ಲೋಪವು ಇನ್ನು ಮುಂದೆ ಆಗುವುದಿಲ್ಲ ಎನ್ನುವ ಭರವಸೆಯನ್ನು ನಾನು ಕೊಡುತ್ತೇನೆ. ಏಕೆಂದರೆ, ನನಗೆ ಗೊತ್ತು, ತಾವು ಸಜ್ಜನರು, ನೀವು ಯಾವಾಗಲೂ ಕಂಪ್ಲೇಂಟ್ ಮಾಡುವುದಿಲ್ಲ ಎಂದು ನನಗೆ ಗೊತ್ತಿದೆ. ಆದರೂ ನಾವು ಭೇಟಿ ಕೊಡುವಾಗ ಸ್ಥಳೀಯ ಶಾಸಕರಿಗೆ ಮುಂಚಿತವಾಗಿ ತಿಳಿಸಬೇಕು ಎನ್ನುವುದು ನಮ್ಮ ಜವಾಬ್ದಾರಿಯಾಗಿದೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಎಕಾಲಜಿ ಎನ್‌ವಿರೋನ್ಮೆಂಟ್ ಮಿನಿಸ್ಟರ್ ಅಲ್ಲಿ ಬಂದಾಗ ಹಾಗೆ ಆಗಿದ್ದರೆ, ಆ ರೀತಿ ಇನ್ನು ಮುಂದೆ ಆಗುವುದಿಲ್ಲ ಎನ್ನುವ ಭರವಸೆಯನ್ನು ತಮಗೆ ಕೊಡುತ್ತೇನೆ. ಸಭಾಪತಿಯವರು ಮತ್ತೊಂದು ಸಲಹೆ ಕೊಟ್ಟಿದ್ದಾರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಸಭೆಯನ್ನು ಕರೆಯಬೇಕು ಎಂದು. ಖಂಡಿತವಾಗಿ ನಾನು ಎಕಾಲಜಿ ಮಿನಿಸ್ಟರ್, ಫಿಷರೀಸ್ ಮಿನಿಸ್ಟರ್ ಮತ್ತು ನಿಮ್ಮೆಲ್ಲರನ್ನೂ ಕರೆಸಿ ಒಂದು ಸಭೆಯನ್ನೂ ಮಾಡುತ್ತೇನೆ. ತಾವು ಇಲ್ಲಿ ಎನ್.ಐ.ಓ ಕೊಚ್ಚಿನ್ ಬಗ್ಗೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ, ಅದರ ಬಗ್ಗೆಯೂ ನಾವು ಚಿಂತನೆ ಮಾಡುತ್ತೇವೆ. ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗಾರಿಕೆಗಳು ಬಂದಾಗ ಸ್ವಲ್ಪ ಕಷ್ಟವಾಗುತ್ತದೆ ಎನ್ನುವುದನ್ನು ನಾನು

ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆ. ಇದರಿಂದ ನೂರಕ್ಕೆ ನೂರರಷ್ಟು ಪರಿಸರದ ಮೇಲೆ ಪರಿಣಾಮವಾಗುವುದಿಲ್ಲ ಎಂದು ನಾನು ಹೇಳಲು ಸಾಧ್ಯವಿಲ್ಲ. ಒಂದು ಟೂರಿಸಂ ಪ್ರಾಜೆಕ್ಟ್ ಮಾಡಿದಾಗಲೂ ಸಹ ಪರಿಣಾಮವಾಗುತ್ತದೆ. ಒಂದು ಹೋಟೆಲ್ ಪ್ರಾಜೆಕ್ಟ್ ಮಾಡಿದಾಗಲೂ ಸಹ ಪರಿಸರದ ಮೇಲೆ ಪರಿಣಾಮವಾಗುತ್ತದೆ. ಒಂದು ಸೈಕಲ್, ಒಂದು ಕಾರು ರಸ್ತೆಯ ಮೇಲೆ ಹೋಗುವಾಗಲೂ ಪರಿಸರದ ಮೇಲೆ ಪರಿಣಾಮವಾಗುತ್ತದೆ. ಆದರೆ ಅದು ಕಡಿಮೆಯಾಗಬೇಕು. ಅದರ ಪರಿಣಾಮ ಕಡಿಮೆಯಿರಬೇಕು, ಹೆಚ್ಚಿನ ಲಾಭವಿರಬೇಕು. ಅಂಥ ಕೈಗಾರಿಕೆಗಳನ್ನು ನಾವು ತರಬೇಕಾಗುತ್ತದೆ. ಆ ತರಹದ ಕೈಗಾರಿಕೆಗಳನ್ನು ತರಲು ಸರ್ಕಾರ ಪ್ರಯತ್ನ ಮಾಡುತ್ತದೆ ಮತ್ತು ಇದರ ಬಗ್ಗೆ ನಿಮ್ಮೆಲ್ಲರ ಸಲಹೆಯನ್ನು ಗಮನದಲ್ಲಿಟ್ಟುಕೊಂಡು, ಸರ್ಕಾರ ಸಮಗ್ರವಾಗಿ ಚಿಂತನೆ ಮಾಡಿ ಕ್ರಮ ತೆಗೆದುಕೊಳ್ಳುತ್ತದೆ ಎಂದು ತಮಗೆ ನಾನು ಭರವಸೆ ಕೊಡುತ್ತೇನೆ.

ಶ್ರೀ ಯು.ಆರ್.ಸಭಾಪತಿ: ಈಗ ಮಂತ್ರಿಗಳು ಬಹಳಷ್ಟು ವಿಚಾರವನ್ನು ನಮ್ಮ ಮುಂದಿಟ್ಟಿದ್ದಾರೆ. ನಾನು ಹೇಳುವುದೇನೆಂದರೆ ಟ್ರೀಟ್‌ಮೆಂಟ್ ಪ್ಲಾಂಟ್ ಬೇರೆ, ರೀ ಸೈಕ್ಲಿಂಗ್ ಯುನಿಟ್ ಬೇರೆ. ಇವೊತ್ತು ರೀ ಸೈಕ್ಲಿಂಗ್ ಯುನಿಟ್ ಏನು ಇದೆ ಅದರ ಸ್ಥಾಪನೆಗೆ ಬದಲಾಗಿ ಮೂರು ಮಿಲಿಯನ್‌ನಿಂದ ಒಂಭತ್ತು ಮಿಲಿಯನ್‌ಗೆ ವಿಸ್ತರಣೆಯಾಗಿದೆ. ಎಷ್ಟು ಕ್ಯೂಬಿಕ್ ಮೀಟರ್ ಬರುತ್ತದೆ ಎಂದು ನಮಗೆ ಸ್ಪಷ್ಟವಾಗಿ ಕೊಟ್ಟಿಲ್ಲ. ಅದರ ಬಗ್ಗೆ ಅಧಿಕಾರಿಗಳು ಹೇಳಿದ್ದಾರೆ, ರಿಪೋರ್ಟ್ ಬಂದಿದೆ ಎಂದು ಹೇಳಿದರು. ಇನ್ನು ಅವರು ಕಮಿಟಿ ಮಾಡಿದ್ದೇವೆ ಎಂದು ಹೇಳಿದ್ದಾರೆ. ಅದು ಕಮಿಟಿ ಯಾರೋ ಅವರ ಪಕ್ಷದ ಸದಸ್ಯರನ್ನು ಸೇರಿಸುವ ಕಮಿಟಿ ಅಲ್ಲ.

ಉಪಾಧ್ಯಕ್ಷರು: ಸ್ಥಳೀಯ ಶಾಸಕರನ್ನೊಳಗೊಂಡಂತೆ ಎಂದು ಹೇಳಿದ್ದಾರೆ.

ಶ್ರೀ ಆರ್.ವಿ.ದೇಶಪಾಂಡೆ: ಇಲ್ಲಿ ಪಕ್ಷದ ಸದಸ್ಯರ ಪ್ರಶ್ನೆ ಬರುವುದಿಲ್ಲ. ಎಲ್ಲರ ಬಗ್ಗೆ ಚಿಂತನೆ ಇರಬೇಕಾಗುತ್ತದೆ. ನಾವು ಪಕ್ಷಾತೀತವಾಗಿ ಚಿಂತನೆ ಮಾಡಿದರೆ ಅದಕ್ಕೆ ಪರಿಹಾರವನ್ನು ಕಂಡುಹಿಡಿಯಬಹುದು. ನಾನು ಪಕ್ಷದ ದೃಷ್ಟಿಯಿಂದ ಚಿಂತನೆ ಮಾಡುವುದಕ್ಕೆ ಹೋದರೆ ನಮ್ಮ ಸರ್ಕಾರಕ್ಕೆ ಸಮಸ್ಯೆ ಹೆಚ್ಚಾಗುತ್ತದೆ ವಿನಃ ಅದಕ್ಕೆ ಪರಿಹಾರ ಕಂಡುಹಿಡಿಯುವುದಕ್ಕೆ ಆಗುವುದಿಲ್ಲ. ನೀವು ನಮ್ಮ ಕಚೇರಿಗೆ ಮೂರು ಗಂಟೆಗೆ ಬನ್ನಿ ನಾನು ನಿಮಗೆ ಸರ್ಕಾರೀ ಆದೇಶವನ್ನು ತೋರಿಸುತ್ತೇನೆ. ಅದು ಸರಿ ಇಲ್ಲ ಎಂದರೆ I will see that within the next 48 hours that G.O.is amended. I assure you that. ಎಲ್ಲಾ ಪಕ್ಷದವರೂ ನಮಗೆ ಮಾರ್ಗದರ್ಶನ ಕೊಟ್ಟರೆ ನಾವು ಒಳ್ಳೆಯ ನಿರ್ಧಾರವನ್ನು ತೆಗೆದುಕೊಳ್ಳಲಿಕ್ಕೆ ಅನುಕೂಲವಾಗುತ್ತದೆ.

ಶ್ರೀ ಯು.ಆರ್.ಸಭಾಪತಿ: ಪಕ್ಷದ ಬಗ್ಗೆ ನಾನು ಹೇಳಲಿಲ್ಲ. ನಿಜವಾಗಿ ಅಲ್ಲಿ

ಚುನಾಯಿತ ಪ್ರತಿನಿಧಿಗಳು ಇರಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಗುಲ್ಬರ್ಗಾಕ್ಕೆ ಹಾಗೂ ಹುಬ್ಬಳ್ಳಿ ಧಾರವಾಡಕ್ಕೆ ಇಂಡಸ್ಟ್ರೀಸ್ ಕೊಡುತ್ತೀನೆಂದು ಹೇಳಿದ್ದೀರಿ. ಅಲ್ಲಿ ಟೆಲ್ಕೊ ಕಳುಹಿಸುತ್ತೀರಾ? ಇದು ಅಲ್ಲಿ ಬರುವುದಿಲ್ಲ, ಇದು ಕಾರವಾರದಲ್ಲಿ ಸಮುದ್ರ ತೀರದಲ್ಲಿ ಬರುತ್ತದೆ. ಇಲ್ಲವೆಂದರೆ ಮಂಗಳೂರಿಗೆ ಬರುತ್ತದೆ. ಹಾಗಾದರೆ ಟೆಲ್ಕೊ ಮಾತ್ರ ನಮ್ಮಲ್ಲಿ ಬರಬಹುದಲ್ಲಾ, ಅದಕ್ಕೆ ನೀರು ಕೂಡ ಹೆಚ್ಚು ಬೇಕಾಗುವುದಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ: ಇನ್ನೊಂದು ಉಡುಪಿಯಲ್ಲಿ ಬೋರವೆಲ್ ಹಾಕುವ ವಿಚಾರದ ಬಗ್ಗೆ ಹೇಳಿದ್ದರು. ತಾವು ತಿಳಿದುಕೊಳ್ಳಬೇಕು ನಾವು ಕೆ.ಐ.ಎ.ಡಿ.ಬಿ.ಯಿಂದ ಏನು ಇಂಡಸ್ಟ್ರೀಯಲ್ ಎಸ್ಟೇಟನ್ನು ಡೆವಲಪ್ ಮಾಡುತ್ತೇವೆ. ಸನ್ಮಾನ್ಯ ಖರ್ಗೆಯವರಿಗೆ ಈ ವಿಚಾರ ಗೊತ್ತು ಏಕೆಂದರೆ ಅವರು ಈ ಇಲಾಖೆಯ ಮಂತ್ರಿಗಳಾಗಿದ್ದರು. ಆ ಇಂಡಸ್ಟ್ರೀಯಲ್ ಎಸ್ಟೇಟ್ ನೀರು ಸರಬರಾಜು ಮಾಡುವುದು ಸರ್ಕಾರದ ಜವಾಬ್ದಾರಿ. ನಾವು ಪ್ರತಿಯೊಬ್ಬರಿಗೆ ಒಂದೊಂದು ಬೋರ್‌ವೆಲ್‌ನ್ನು ಡ್ರಿಲ್ ಮಾಡಲಿಕ್ಕೆ ನಾವು ಪರ್ಮಿಷನ್ ಕೊಟ್ಟರೆ ಆ ಇಂಡಸ್ಟ್ರೀಯಲ್ ಎಸ್ಟೇಟ್‌ನಲ್ಲಿ 50 ಇಂಡಸ್ಟ್ರೀಸ್‌ಬಂದು 50 ಬೋರ್‌ವೆಲ್‌ಗಳು ಆದರೆ ವಾಟರ್ ಲೆವೆಲ್ ಕೆಳಗೆ ಹೋಗುತ್ತದೆ. ಹಾಗಾಗುವುದರಿಂದ ಯಂಟೈರ್ ಏರಿಯಾ ಡ್ರೈ ಆಗುತ್ತದೆ. ಆದಕಾರಣ ನಾವು ಏನು ಮಾಡುತ್ತೇವೆ ಎಂದರೆ we don't permit to drill borewell. It is the responsibility of the KAIDB to supply water. ಆದರೆ ಈ ಕೇಸ್‌ನಲ್ಲಿ ಕೆ.ಎ.ಐ.ಡಿ.ಬಿ.ನವರು ಒಂದು ತಪ್ಪು ಮಾಡಿದ್ದಾರೆ. ಅಮ್ಮುಂಜೆರವರ ಕಡೆಯಿಂದ ಹಣವನ್ನು ತೆಗೆದುಕೊಂಡಿದ್ದಾರೆ. ಅವರು ಹಣವನ್ನು ತೆಗೆದುಕೊಂಡನಂತರ ಅದನ್ನು ಜಾರಿಗೆ ತರುವುದು ನಮ್ಮ ಕರ್ತವ್ಯ. ಅದರ ಬಗ್ಗೆ ಈಗಾಗಲೇ ಡೈರೆಕ್ಷನ್ ಕೊಟ್ಟಿದ್ದೇನೆ. ಆ ಕೆಲಸ ಆಗುತ್ತದೆ. ಅದರ ಬಗ್ಗೆ ಪ್ರಶ್ನೆ ಇಲ್ಲ. It is my responsibility. I have also issued direction. ಅದನ್ನು ಸ್ಪೆಶಲ್ ಕೇಸ್ ಎಂದು ಮಾಡಿದ್ದೇನೆ. ನಿಜವಾಗಲೂ ಮಾಡಬಾರದು. But we have made a mistake because we have taken the money from him. That is a mistake made by KAIDB. I have given a direction and the problem will be solved. ಮತ್ತೊಂದು ಎಂ.ಆರ್.ಪಿ.ಎಲ್.ದಲ್ಲಿ ಉದ್ಯೋಗಾವಕಾಶ ವಿಷಯದ ಬಗ್ಗೆ. ಎಷ್ಟು ಸಾಧ್ಯವಿದೆ ಅಷ್ಟನ್ನು ಮಾಡಲಿಕ್ಕೆ ಪ್ರಯತ್ನವನ್ನು ಮಾಡಿದ್ದೇವೆ. ನಮ್ಮ ಸ್ನೇಹಿತರು ಕೂಡ ಸಹಕಾರ ಮಾಡಿದ್ದಾರೆ. ಅದರ ಬಗ್ಗೆ ಹಲವಾರು ಎಜಿಟೇಷನ್ಸ್ ಆಗಿದ್ದಾವೆ. ಬಹಳಷ್ಟು ಚರ್ಚೆ ಮಾಡಿದ್ದಾರೆ. ಅಸ್ಕರ್‌ರವರೂ ಕೂಡ ಬಂದು ಚರ್ಚೆ ಮಾಡಿದ್ದಾರೆ. ವರ್ಕ್‌ಲೋಡ್ ಬಗ್ಗೆ ಕೂಡ ಚರ್ಚೆ ಮಾಡಿದ್ದೇವೆ. ವರ್ಕ್‌ಲೋಡ್ ಸ್ಟಡಿ ಮಾಡಿದ ನಂತರ ಆ ಕ್ವಾಲಿಫಿಕೇಷನ್ ಜನ ಇಲ್ಲ ಆದಕಾರಣ ಅವರು ಒಂದು ಟ್ರಸ್ಟ್ ಮಾಡಿ ಜನ ತೆಗೆದುಕೊಳ್ಳುತ್ತೇವೆ ಎಂದು

ಹೇಳಿದರು. ನಮ್ಮ ಕೆಲವು ಸ್ನೇಹಿತರು ಅದಕ್ಕೆ ಒಪ್ಪಿಕೊಳ್ಳಲಿಲ್ಲ. ಇಲ್ಲ ನಮಗೆ ಟ್ರಸ್ಟ್ ಬೇಡ ನಮಗೆ ಡೈರೆಕ್ಟ್ ಎಂಪ್ಲಾಯಮೆಂಟ್ ಬೇಕು ಎಂದು ಹೇಳಿದರು. ಆಗ ಅವರು ಡೈರೆಕ್ಟ್ ಎಂಪ್ಲಾಯ್‌ಮೆಂಟ್‌ಗೆ ನಮಗೆ ಸ್ಕೋಪ್ ಇಲ್ಲ ಎಷ್ಟು ಮ್ಯಾಕ್ಸಿಮಮ್ ಕೊಡಬೇಕೋ ಅಷ್ಟನ್ನು ಕೊಟ್ಟಿದ್ದೇವೆ. ಈಗ ಇನ್ನು ಸಾಧ್ಯವಿಲ್ಲ ಎಂದು ಅವರು ಹೇಳಿದಾಗ ಸರ್ಕಾರದಿಂದ for the first time in the country ಒಂದೂವರೆ ಲಕ್ಷ ರೂಪಾಯಿಯನ್ನು ಪ್ರತಿ ಕುಟುಂಬಕ್ಕೆ ಕೊಡಿಸಿದ್ದೇವೆ. We have paid. ಹಾಗಾಗೀ ಸರ್ಕಾರ ಕಣ್ಣು ಮುಚ್ಚಿ ಕೆಲಸ ಮಾಡುತ್ತಿಲ್ಲ. We are also concerned. ಜನರ ಬಗ್ಗೆ ನಾವೂ ಕೂಡ ಚಿಂತನೆ ಮಾಡಬೇಕಾಗುತ್ತದೆ. ಅದರ ಮಾಲೀಕರು ನಮ್ಮನ್ನು ಸಹ ಕರೆಯಿಸಿದ್ದರು, ಅವರ ಬಗ್ಗೆ ಕೂಡ ನಾವು ಚಿಂತನೆ ಮಾಡಬೇಕಾಗುತ್ತದೆ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ನಾನೂ ಕೂಡ ಒಂದೂವರೆ ಲಕ್ಷ ರೂಪಾಯಿ ಕೊಡುತ್ತೇನೆ. ಒಂದು ಕೆಲಸವನ್ನು ಕೊಡುತ್ತೀರಾ?

ಶ್ರೀ ಆರ್.ವಿ.ದೇಶಪಾಂಡೆ: ನಾನೇನಾದರೂ ಹೇಳಿದರೆ ನೀವು ಬೇಜಾರು ಮಾಡಿಕೊಳ್ಳುತ್ತೀರಿ. ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ. ನಾನು ಹೇಳಿರಲಿಲ್ಲ. ನೀವು ವಿಚಾರ ಎತ್ತಿದ್ದಕ್ಕೆ ನಾನು ಹೇಳಬೇಕಾಗಿ ಬಂದಿದೆ. ಎಂ.ಆರ್.ಪಿ.ಎಲ್. ಪ್ರಾರಂಭ ಆಗಿದ್ದು ನಿಮ್ಮ ಕಾಲದಲ್ಲಿ, ನೀವು ಆವಾಗ ಕೆಲಸ ಕೊಡುವಾಗ ಮಾನಿಟರಿಂಗ್ ಮಾಡಲಿಲ್ಲ. ಅವರು ಹಲವಾರು ಜನರಿಗೆ ನೌಕರಿಯನ್ನು ಕೊಟ್ಟರು. ನೀವು ಸುಮ್ಮನೆ ಇದ್ದೀರಿ. ಈಗ ನಾವು ಬಂದ ನಂತರ ನಮ್ಮ ಬೆನ್ನು ಹತ್ತಿದ್ದೀರಿ ಮಾನಿಟರಿಂಗ್ ಮಾಡಿ ಎಂದು. ಯಾರಿಗೆ ನೌಕರಿ ಕೊಟ್ಟಿದ್ದಾರೆ ಅವರಿಗೆ ತೆಗೆಯಲು ಆಗುತ್ತದಾ?

(ಗೊಂದಲ)

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ- ದಾಖಲೆ ಸಹಿತ ಹೇಳಿ ನಾನು ಒಪ್ಪುತ್ತೇನೆ.

ಶ್ರೀ ಯು.ಆರ್.ಸಭಾಪತಿ: ಅಪಾಯಿಂಟ್‌ಮೆಂಟ್ ಅನ್ ಆವೆಲಿಬಿಲಿಟಿ ಎಂದು ಪ್ರೊಸೀಡಿಂಗ್ಸ್‌ಗೆ ಸಹಿ ಮಾಡಿದ್ದಾರೆ.

ಶ್ರೀ ಆರ್.ವಿ.ದೇಶಪಾಂಡೆ: ನಾನು ಇಷ್ಟೂ ಮಾಡುತ್ತಿಲ್ಲ. ನೀವು ಕೇಳಿದ್ದಕ್ಕೆ ಹೇಳುತ್ತಿದ್ದೇನೆ. ಆವಾಗ ನೀವು ಮಾನಿಟರಿಂಗ್ ಮಾಡಬೇಕಾಗಿತ್ತು. But you were silent. Government is a continuous body. ನಾನು ಯಾರದಾದರ ಮೇಲೆ ಜವಾಬ್ದಾರಿಯನ್ನು ಹೊರಿಸಿ ಓಡಿ ಹೋಗುವುದಕ್ಕೆ ತಯಾರು ಇಲ್ಲ. ಆದರೂ ಸಹಿತ ಎಷ್ಟು ಜನರಿಗೆ ನೌಕರಿ ಕೊಡುವುದಕ್ಕೆ ಸಾಧ್ಯವಿದೆ ಅಷ್ಟು ವ್ಯವಸ್ಥೆಯನ್ನು ಮಾಡಿದ್ದೇವೆ. ಅವರು ಟ್ರಿಸ್ಟ್ ಮಾಡಿ ಕೊಡಲು ಒಪ್ಪಿಕೊಂಡಿದ್ದರು. ಆದರೆ ಅದಕ್ಕೆ ನಮ್ಮ ಕೆಲವು ಸ್ನೇಹಿತರು ಒಪ್ಪಲಿಲ್ಲ. ಟ್ರಸ್ಟ್ ಬೇಡ ಎಂದು ಹೇಳಿದರು.

ಅವರು ನಾವು ಟ್ರಸ್ಟ್‌ದಿಂದ ಜಾಬ್‌ಗೆ ತೆಗೆದುಕೊಳ್ಳುತ್ತೇವೆ ಹೆಚ್ಚು ಕಮ್ಮಿ ಅಷ್ಟೇ ಸ್ಯಾಲರಿ ಕೊಡುತ್ತೇವೆ, ಸುಮಾರು 10-20 ರೂಪಾಯಿ ಕಡಿಮೆ ಕೊಡುತ್ತೇವೆ ಎಂದು ಹೇಳಿದ್ದರು. ಅದಕ್ಕೆ ನಮ್ಮ ಸ್ನೇಹಿತರು ಒಪ್ಪಿಕೊಳ್ಳಲಿಲ್ಲ. ಎಷ್ಟು ಜನರಿಗೆ ಸಾಧ್ಯವಿದೆ ಅಷ್ಟು ಜನರಿಗೆ ನೌಕರಿಯನ್ನು ಕೊಡಿಸಿದ್ದೇವೆ, ಟ್ರೇನಿಂಗ್ ಕೊಡಿಸಿದ್ದೇವೆ, ರೀಹ್ಯಾಬಿಲಿಟೇಶನ್ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಅಷ್ಟನ್ನು ಮಾಡಿ ಒಂದೂವರೆ ಲಕ್ಷ ರೂಪಾಯಿಯನ್ನು ಪರ್‌ಪರ್ಸನ್ we have paid, who could not get employment. ಅಷ್ಟು ಕೆಲಸವನ್ನು ಮಾಡಿದ್ದಕ್ಕೆ ನೀವು ಮೆಚ್ಚುಗೆಯನ್ನು ಮಾಡಬೇಕು. ಅದನ್ನು ಬಿಟ್ಟು ಏನೂ ಮಾಡಲಿಲ್ಲ ಎಂದು ಹೇಳಿದರೆ ಹೇಗೆ?

ಶ್ರೀ ಯು.ಆರ್.ಸಭಾಪತಿ: ಎಂಪ್ಲಾಯ್‌ಮೆಂಟ್ ಬಗ್ಗೆ ಚರ್ಚೆ ಮಾಡಬೇಕಾದರೆ ನಮಗೆ ಒಂದು ದಿವಸ ಬೇಕು. ಅಷ್ಟು ಇದೆ. ನಾವು ಏನೂ ಮಾಡಲಿಲ್ಲ ಎಂದು ಹೇಳುತ್ತಿಲ್ಲ ಮಾಡಿದ್ದು ಸಾಲಲಿಲ್ಲ ಎಂದು ಹೇಳುತ್ತಿದ್ದೇವೆ. ಇನ್ನು ಯಾವುದಾದರೂ ಇಂಡಸ್ಟ್ರೀಗೆ ಪರವಾನಿಗೆ ಕೊಡಬೇಕಾದರೆ ಧಾರಣ ಶಕ್ತಿಯನ್ನು ಅಧ್ಯಯನ ಮಾಡಿ ಪರವಾನಿಗೆಯನ್ನು ಕೊಡುತ್ತೇವೆಂದು ಹೇಳಿದ್ದೀರಿ. ಈಗಾಗಲೇ ಎರಡು ವರ್ಷವಾಯಿತು ಆ ಧಾರಣ ಶಕ್ತಿಯನ್ನು ಅಧ್ಯಯನ ಮಾಡುವ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ? ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕ್ಯಾರೀಯಿಂಗ್ ಕೆಪ್ಯಾಸಿಟಿಯನ್ನು ಅಧ್ಯಯನ ಮಾಡುವುದರ ಬಗ್ಗೆ ತಾವು ಇದರಲ್ಲಿ ಮೆನಶನ್ ಮಾಡಲಿಲ್ಲ. ಇವೊತ್ತು ಧಾರಣ ಶಕ್ತಿ ಅಧ್ಯಯನದ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಕ್ಯಾರಿಯಿಂಗ್ ಕೆಪ್ಯಾಸಿಟಿಯನ್ನು ಸ್ಟಡಿ ಮಾಡಲಿಕ್ಕೆ ಒಂದು ಕಮಿಟಿಯನ್ನು ಅಪಾಯಿಂಟ್ ಮಾಡಿದ್ದೇವೆ. ಆದರೆ ಅದರ ರಿಪೋರ್ಟ್ ಇನ್ನೂ ಬಂದಿಲ್ಲ.

ಉಪಾಧ್ಯಕ್ಷರು: ಎಲ್ಲಾ ವಿಷಯಕ್ಕೆ ಸಂಬಂಧಪಟ್ಟಂತೆ ಮತ್ತೊಮ್ಮೆ ತಮ್ಮನ್ನು ಕರೆದು ಸಭೆ ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಯು.ಆರ್.ಸಭಾಪತಿ: ಒಂದೇ ಒಂದು ನಿಮಿಷ ಉಪಾಧ್ಯಕ್ಷರೆ, ಬೃಹತ್ ಕೈಗಾರಿಕೆ ಸಚಿವರು ಹಾಗೂ ಮೀನುಗಾರಿಕೆ ಸಚಿವರು ನಮ್ಮ ಜಿಲ್ಲೆಯವರೇ ಮುಖ್ಯವಾಗಿ ಯಾವುದೇ ರೀತಿಯಲ್ಲಿ ಬೃಹತ್ ಕೈಗಾರಿಕೆಗಳ ಚಟುವಟಿಕೆಗಳ ಬಗ್ಗೆ ತ್ಯಾಜ್ಯ ವಸ್ತುಗಳು ಬಿಡುವುದರ ಬಗ್ಗೆಯಾಗಲೀ, ಅಲ್ಲಿ ಏನೆಲ್ಲಾ ನಡೆಯುತ್ತದೆ ಎನ್ನುವುದರ ಬಗ್ಗೆಯಾಗಲೀ ಸಂಪೂರ್ಣ ಮಾಹಿತಿಯನ್ನು ಆಗಿಂದಾಗ್ಗೆ ಚುನಾಯಿತ ಪ್ರತಿನಿಧಿಗಳಿಗೆ ಅವರು ತಿಳಿಸಬೇಕು. ಇಲ್ಲಿ ನಮ್ಮ ಮುಖ್ಯವಾದ ಆಪಾದನೆ ಏನು ಎಂದರೆ ಪರಿಸರ ಇಲಾಖೆಯ ಅಧಿಕಾರಿಗಳು ಉದ್ಯಮಶೀಲಿಗಳ ಜೊತೆ ಶಾಮೀಲಾಗಿದ್ದಾರೆ. ಈ ಉದ್ಯಮಪತಿಗಳು [illegible]ಗಳನ್ನು ವಕೀಲರನ್ನು ಕ್ರಯಕ್ಕೆ ತೆಗೆದುಕೊಳ್ಳುತ್ತಾರೆ. ಅವರು ದೆಹಲಿಯಿಂದ ಕರೆಯಿಸಿ ವಾದ ಮಾಡುತ್ತಾರೆ. ಲಕ್ಷಾಂತರ ರೂ. ಕೊಟ್ಟು

ಸೈಂಟಿಸ್ಟ್‌ರವರಿಂದ ರಿಪೋರ್ಟ್ ರೆಡಿ ಮಾಡಿಸುತ್ತಾರೆ.

ಉಪಾಧ್ಯಕ್ಷರು: ಮಂತ್ರಿಗಳು ಏನು ಹೇಳಿದ್ದಾರೆಂದರೆ ನಿಮ್ಮೆಲ್ಲರನ್ನೂ ಕರೆದು ಸಭೆಯನ್ನು ಕರೆಯುತ್ತೇನೆಂದು ಹೇಳಿದ್ದಾರೆ.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಮಾಧವ ಗಾಡ್ಗಿಳ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿ ಒಂದು ಸಭೆ ಕೂಡ ಆಗಿದೆ. ಅವರು ಒಂದು ಕಮಿಟಿಯನ್ನು ಕಾನ್ಸಿಟಿಟ್ಯೂಟ್ ಮಾಡಿದ್ದಾರೆ. ಕೆಲಸ ನಡೆದಿದೆ. ಅದು ಇನ್ನೂ ಶೀಘ್ರಗತಿಯಿಂದ ಮಾಡಲು ಸರ್ಕಾರ ಎಲ್ಲಾ ರೀತಿಯ ಕ್ರಮವನ್ನು ತೆಗೆದುಕೊಳ್ಳುತ್ತದೆ.

ಶ್ರೀ ಯು.ಆರ್.ಸಭಾಪತಿ: ಈ ಮೂರು ಇಲಾಖೆಯವರು ಸ್ವಲ್ಪ ಗಂಭೀರವಾಗಿ ಪರಿಶೀಲನೆಯನ್ನು ಮಾಡಿ ಸಮಗ್ರ ಅಧ್ಯಯನದ ಬಗ್ಗೆ ಚಿಂತನೆ ಮಾಡಲಿ. ನಮ್ಮ ಎಲ್ಲಾ ಚುನಾಯಿತ ಪ್ರತಿನಿಧಿಗಳಿಗೆ ಸಂಪೂರ್ಣ ಮಾಹಿತಿಯನ್ನು ಅವರು ಕೊಡಲಿ. ಹಾಗೆ ಮಾಡಿದರೆ ಇನ್ನೊಮ್ಮೆ ಈ ವಿಷಯವನ್ನೇ ನಾವು ಎತ್ತುವುದಿಲ್ಲ.

ಉಪಾಧ್ಯಕ್ಷರು: ಮೂರು ಇಲಾಖೆಯವರನ್ನು ಕರೆಸಿ ಆ ಕ್ಷೇತ್ರದ ಶಾಸಕರನ್ನೆಲ್ಲಾ ಕರೆಯಿಸಿ ಸಭೆಯನ್ನು ಮಾಡುತ್ತೇನೆಂದು ಈಗಾಗಲೇ ಮಂತ್ರಿಗಳು ಹೇಳಿದ್ದಾರೆ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ: ನಾನೇನು ಹೇಳಿದ್ದು ಎಂದರೆ ಮೂವರು ಮಂತ್ರಿಗಳನ್ನು ಕರೆದು ನಿಮ್ಮನ್ನೆಲ್ಲಾ ಕರೆಯಿಸಿ ಸಭೆಯನ್ನು ಮಾಡುತ್ತೇನೆಂದು ನಾನು ಈಗಾಗಲೇ ರಿಪ್ಲೈಯಲ್ಲಿ ಹೇಳಿದ್ದೇನೆ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ಮಾನ್ಯ ಅಧ್ಯಕ್ಷರೆ, ಪರಿಸರದಿಂದ ಅನುಮತಿ ಪಡೆದರೆ ಆಗುತ್ತದೆಂದು ತಾವು ಹೇಳಿದ್ದೀರಿ. ಇವೊತ್ತು ಗಲಾಟೆ ಏಕೆ ಆಗುತ್ತಿದೆ ಎಂದರೆ ಎಲ್ಲಾ ಜನಪ್ರತಿನಿಧಿಗಳನ್ನು ತಾವು ಕತ್ತಲಲ್ಲಿ ಇಡುತ್ತೀರಿ. ಬೃಹತ್ ಉದ್ಯಮಗಳು ಬರುವಾಗ ಅದರ ಪ್ರಾಜೆಕ್ಟ್ ರಿಪೋರ್ಟ್ ಏನು? ಅವರು ಏನು ಉತ್ಪಾದನೆ ಮಾಡುತ್ತಾರೆ? ಅವರು ಏನು ತ್ಯಾಜ್ಯವಸ್ತುಗಳನ್ನು ಬಿಡುತ್ತಾರೆ ಎನ್ನತಕ್ಕಂಥದ್ದನ್ನು ನೀವು ಸ್ಪಷ್ಟವಾಗಿ ಹೇಳಿದರೆ ತಿಳಿಯುತ್ತದೆ. ನೀತಿ ನಿಯಮಗಳ ಪ್ರಕಾರ ಏನು ಎಷ್ಟೆಷ್ಟನ್ನು ಬಿಡಬೇಕು ಎಂದು ಇದೆ ಅಷ್ಟನ್ನು ಬಿಡುತ್ತಿದ್ದಾರೋ ಹೆಚ್ಚಿಗೆ ಬಿಡುತ್ತಾರೋ ಎಂಬುದು ಯಾರಿಗೆ ಗೊತ್ತು? ತಮಗೆ ಗೊತ್ತಿದೆಯಾ? ಯಾರಾದರೂ ಜನರಿಗೆ ಗೊತ್ತಿದೆಯಾ? ಯಾವ ವ್ಯವಸ್ಥೆಯಲ್ಲಿ ನಾವು ತಿಳಿದುಕೊಳ್ಳಬೇಕು? ಇವೊತ್ತು ಪತ್ರಿಕೆಗಳಲ್ಲಿ ಬಂದ ಆಧಾರದ ಮೇಲೆ ತಿಳಿದುಕೊಳ್ಳತಕ್ಕಂಥ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಅದರಿಂದಲೇ ಇವೊತ್ತು ಗೊಂದಲ ಉಂಟಾಗುತ್ತಿದೆ. ನಾನು ಇದನ್ನೆಲ್ಲಾ ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಅಲ್ಲಿ ಏನು ನಡೆಯುತ್ತದೆ ಎಂದು ಯಾವುದೇ ಜನ ಪ್ರತಿನಿಧಿಗಳಿಗೆ ಗೊತ್ತಿಲ್ಲ. ಯಾವುದೇ

ಸ್ಥಳೀಯ ಆಡಳಿತದವರಿಗೂ ಗೊತ್ತಿಲ್ಲ. ನೀವು ಸಿಟಿಜನ್ಸ್ ಕಮಿಟಿ ಮಾಡಿದ್ದೇವೆ ಎಂದು ಹೇಳುತ್ತೀರಿ. ಸಿಟಿಜನ್ಸ್ ಕಮಿಟಿ ಮಾಡಿದ್ದು ನಮಗೇ ಗೊತ್ತಿಲ್ಲ, ಇಲ್ಲಿದ್ದವರಿಗೆ ಯಾರಿಗೂ ಗೊತ್ತಿಲ್ಲ. ನಮ್ಮಲ್ಲಿ ಯಾರನ್ನು ಸದಸ್ಯರನ್ನಾಗಿ ಮಾಡಿದ್ದೀರಿ ಎಂದು ಇಲ್ಲಿದ್ದವರಿಗೆ ಯಾರಿಗೂ ಗೊತ್ತಿಲ್ಲ. ಮತ್ತೊಂದು ರೀ ಸೈಕ್ಲಿಂಗ್ ಪ್ಲಾಂಟ್ ಮಾಡುತ್ತೇವೆಂದು ಹೇಳಿದ್ದೀರಿ. ರೀ ಸೈಕ್ಲಿಂಗ್ ಮಾಡಿದೆ ಎನ್ನತಕ್ಕಂಥದ್ದು ಯಾರಿಗೆ ಗೊತ್ತಿದೆ? ನಾವು ಅಲ್ಲಿ ಹೋಗಿ ನೋಡುವುದಕ್ಕಾಗುತ್ತದಾ? ಏನು ಆಗಿದೆ ಎಂದಾದರು ಗೊತ್ತಾಗಬೇಕಲ್ಲ. ಮತ್ತೊಂದು ಧಾರಣ ಶಕ್ತಿಯ ಬಗ್ಗೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಧಾರಣ ಶಕ್ತಿ ಎಷ್ಟು ಇದೆ? ಎಷ್ಟು ಮಾಡಲಿಕ್ಕೆ ಸಾಧ್ಯ ಇದೆ ಎಂದು ಏನಾದರೊಂದು ವರದಿ ಇದೆಯಾ? ಈಗ ಉದ್ದಿಮೆಗಳು ಬರಬಾರದು ಎನ್ನತಕ್ಕಂಥ ವಾದ ನಮ್ಮದಲ್ಲ. ಉದ್ದಿಮೆಗಳು ಬೇಕು ಎನ್ನತಕ್ಕಂಥ ವಾದವನ್ನು ನಾವು ಮಾಡಿದ್ದೇವೆ. ಆದರೆ ಉದ್ದಿಮೆಗಳು ಬೇಡ ಎನ್ನತಕ್ಕಂಥ ಪರಿಸ್ಥಿತಿಗೆ ನೀವು ನಮ್ಮನ್ನು ತಳ್ಳಿದ್ದೀರಿ. ಆ ಹಂತಕ್ಕೆ ನಾವು ಬಂದಿರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಯವರು ಪ್ರತಿಯೊಂದಕ್ಕೂ ಸಹ ಬೆಚ್ಚಿ ಬೀಳತಕ್ಕಂಥ ಪರಿಸ್ಥಿತಿ ಉದ್ಭವವಾಗಿದೆ. ಏಕೆಂದರೆ ಏನೋ ನೋಡಿದರೆ ಏನೋ ಆದಂತೆ ಆಗುತ್ತದೆ ಎನ್ನುವಂಥ ಭಾವನೆಗಳು ಉದ್ಭವವಾಗುತ್ತವೆ. ನೀವು ಮತ್ತೊಂದು ಜಾಬಿನ ವಿಷಯ ಹೇಳಿದ್ದೀರಿ. ಇವೊತ್ತು ದಕ್ಷಿಣ ಕನ್ನಡದಲ್ಲಿ ಸಮಸ್ಯೆ ಉಂಟಾಗಲು ಮೊದಲು ಈ ಎಂ.ಆರ್.ಪಿ.ಎಲ್. ಕಾರಣ. ಏಕೆಂದರೆ 200-300 ಜನರಿಗೆ ಕೆಲಸ ಕೊಟ್ಟಿದ್ದರೆ ಈ ಸಮಸ್ಯೆ ಉದ್ಭವವಾಗುತ್ತಿರಲಿಲ್ಲ. ಆ ಕಂಪನಿ ಎಷ್ಟು ದೊಡ್ಡದು ಎಂದರೆ ಅದರ ಒಂದು ಸುತ್ತು ಹಾಕಬೇಕಾದರೆ ಸುಮಾರು ಒಂದು-ಒಂದೂವರೆ ಗಂಟೆ ಬೇಕಾಗುತ್ತದೆ. ಅಂತಹ ಒಂದು ಕಂಪನಿ ಇರಬೇಕಾದರೆ 200-300 ಜನರಿಗೆ ಕೆಲಸಕ್ಕೆ ಹಚ್ಚಲು ಆಗಲಿಲ್ಲ ಎಂದರೆ ಹೇಗೆ? ಏನಾದರು ಹೇಳಿದರೆ ನಮ್ಮ ಸರ್ಕಾರ ಮಾಡಿದೆ ಎಂದು ನೀವು ಹೇಳುತ್ತೀರಿ. ಹಾಗಾದರೆ ಉದ್ಯೋಗವನ್ನು ತಾವು ಕೊಡಿಸಬೇಕಾಗಿತ್ತು. ಏಕೆ ಕೊಡಿಸಲಿಕ್ಕಾಗಲಿಲ್ಲ? ಸರ್ಕಾರವು ಆದೇಶ ಮಾಡಿದ್ದರೂ ಕೊಡಿಸಲಿಕ್ಕಾಗಲಿಲ್ಲ. ಕೊನೆಗೆ ಅವರ ಮಾತಿಗೆ ತಾವು ಒಪ್ಪಿಕೊಂಡು ಒಂದೂವರೆ ಲಕ್ಷ ಕೆಲಸಕ್ಕೆ ಬದಲಿ ಕೊಡುತ್ತೇವೆ ಎಂದು....

ಉಪಾಧ್ಯಕ್ಷರು: ಟೈಮಿಗೆ ನೀವು ಮಹತ್ವ ಕೊಡಬೇಕು. ಈಗ ಒಂದೂವರೆ ಗಂಟೆಯಿಂದ ಚರ್ಚೆಯಾಗುತ್ತಿದೆ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ನಾವು ಆಗಲೇ ಹೇಳಿದ್ದೆವು ಊಟಕ್ಕೆ ಬಿಡಿ, ಊಟವಾದ ನಂತರ ಚರ್ಚೆ ಮಾಡೋಣ ಎಂದು.

ಉಪಾಧ್ಯಕ್ಷರು: ಈಗಾಗಲೇ ಅವರು ಹೇಳಿದ್ದಾರೆ ಮೂರು ಜನ ಮಂತ್ರಿಗಳು ಕುಳಿತುಕೊಂಡು ತಮ್ಮ ಸ್ಥಳೀಯ ಶಾಸಕರನ್ನು ಕರೆದುಕೊಂಡು ಒಂದು ಸಮಿತಿ ಮಾಡಿ ನಿರ್ಧಾರ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ನಾವು ಕ್ವಾಮದ ಬಗ್ಗೆ ಕೇಳಿದ್ದೇವೆ ಅದಕ್ಕೆ ಉತ್ತರವನ್ನೇ

ಕೊಟ್ಟಿಲ್ಲ. ಊಟವಾದ ಮೇಲೆ ಉತ್ತರವನ್ನು ಕೊಡುತ್ತೀರಾ? ಹಾಗಾದರೂ ನಮಗೆ ತೊಂದರೆ ಇಲ್ಲ. ಎಲ್ಲರಿಗೂ ಉಪದ್ರ ಕೊಡುವ ಮನಸ್ಸು ನಮಗಿಲ್ಲ.

ಉಪಾಧ್ಯಕ್ಷರು: ಬೇರೆ ವಿಷಯಗಳು ಬಹಳ ಇವೆ. ನಾಳೆ ಅಧಿವೇಶನದ ಕೊನೆಯ ದಿವಸ. ಇನ್ನೂ ಬಿಲ್ಸ್ ಇವೆ. ಸಾಕಷ್ಟು ಕಾರ್ಯಕಲಾಪಗಳು ಇವೆ.

ಶ್ರೀ ಯು.ಆರ್.ಸಭಾಪತಿ: ನೀವು ಸಾರ್ವಜನಿಕರಿಗೆ ವಿಶ್ವಾಸಕ್ಕೆ ತೆಗೆದುಕೊಂಡು ಬೃಹತ್ ಕೈಗಾರಿಕೆಗಳನ್ನು ಮಾಡುತ್ತೇವೆಂದು ಹೇಳಿದ್ದೀರಿ. ನಂದಿಕೂರ್‌ನಲ್ಲಿ ಗ್ರಾಮಪಂಚಾಯ್ತಿ ಉಡುಪಿ ತಾಲ್ಲೂಕು ಪಂಚಾಯಿತಿ, ದಕ್ಷಿಣ ಕನ್ನಡ ಜಿಲ್ಲಾಪಂಚಾಯಿತಿ, ಸಾರ್ವಜನಿಕ ಚುನಾಯಿತ ಪ್ರತಿನಿಧಿಗಳೆಲ್ಲರೂ ಎಲ್ಲರೂ ಕೋಜೆಂಟ್ರಿಕ್ಸ್ ನಮಗೆ ಬೇಡ ಎಂದು ನಿರ್ಣಯ ಮಾಡಿದ್ದರು. ಎಲ್ಲರೂ ಸರ್ವಾನುಮತದಿಂದ ನಿರ್ಣಯ ಮಾಡಿದರೆ ನೀವು ಏನು ಮಾಡಿದ್ದೀರಿ? ಚುನಾಯಿತ ಪ್ರತಿನಿಧಿಗಳನ್ನು ಕೇಳುತ್ತೇವೆ ಎಂದು ಹೇಳುತ್ತೀರಲ್ಲಾ, ಗ್ರಾಮ ಮಟ್ಟದಲ್ಲೂ ಕೂಡ ಕೋಜೆಂಟ್ರಿಕ್ಸ್ ಬೇಡ ಎಂದು ಹೇಳಿದರಲ್ಲಾ, ಯುನಾನಿಮಸ್ ಆಗಿ ಎಲ್ಲಾ ಪಾರ್ಟಿಯವರು ಸೇರಿಕೊಂಡು ನಿರ್ಣಯ ಮಾಡಿದರಲ್ಲಾ ಆಗ ನೀವು ಏನು ಹೇಳಿದಿರಿ ಜಿಲ್ಲಾ ಪಂಚಾಯತ್‌ಗೆ ನಿರ್ಣಯ ಮಾಡಲು ಅಧಿಕಾರ ಇಲ್ಲ ಎಂದು ತಾಲ್ಲೂಕು ಪಂಚಾಯತ್‌ನವರು ಮೇಜರ್ ಇಂಡಸ್ಟ್ರೀಸ್ ಬಗ್ಗೆ ಹೇಳುವವರು ಅವರು ಯಾರು ಎಂದು ಹೇಳಿದ್ದೀರಿ. ಹಾಗಾದರೆ ಸಾರ್ವಜನಿಕರಿಗೆ ವಿಶ್ವಾಸಕ್ಕೆ ತೆಗೆದುಕೊಂಡು ಬಂದಿದ್ದೇವೆ ಎನ್ನತಕ್ಕಂಥ ಪ್ರಶ್ನೆ ಇಲ್ಲಿ ಎಲ್ಲಿ ಬಂತು?

ಶ್ರೀ ಕೆ.ಜಯಪ್ರಕಾಶ್ ಹೆಗಡೆ (ಮೀನುಗಾರಿಕಾ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಈ ಮೀನಿನ ಕ್ಷಾಮದ ಬಗ್ಗೆ ಮತ್ತು ಸಿ.ಎಂ.ಎಫ್.ಆರ್.ಐ. ಸ್ಟೆಂಗ್ತನ್ ಮಾಡಲಿಲ್ಲ ಎಂದು ಮಾನ್ಯ ಸಭಾಪತಿಯವರು ಹೇಳಿದರು. ಆದರೆ ಸಿ.ಎಂ.ಎಫ್.ಆರ್.ಐ. ಕೇಂದ್ರದ ವ್ಯಾಪ್ತಿಗೆ ಬರುವಂಥದ್ದು. ಅವರು ನಮ್ಮ ಸರ್ಕಾರಕ್ಕೆ ಸ್ಥಳವನ್ನು ಕೇಳಿದ್ದಾರೆ. ಅದನ್ನು ನಾವು ಒದಗಿಸಿದ್ದೇವೆ. ಹಾಗೆ ಮೀನಿನ ಬಗ್ಗೆ 1996-97 ಹಾಗೂ 1997-98ನೇ ಸಾಲಿನ ಕೆಲವು ಅಂಕಿ ಅಂಶಗಳನ್ನು ನಾನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ದಕ್ಷಿಣ ಕನ್ನಡದಲ್ಲಿ 1996-97ನೇ ಸಾಲಿನಲ್ಲಿ ಒಟ್ಟು 2.619 ಮೆಟ್ರಿಕ್ ಟನ್ ಮೀನು ಹಿಡಿದಿದ್ದಾರೆ. ಉತ್ತರ ಕನ್ನಡದಲ್ಲಿ 1,326 ಮೆಟ್ರಿಕ್ ಟನ್ ಹೀಗೆ ಒಟ್ಟು 3.992 ಮೆಟ್ರಿಕ್ ಟನ್ ಮೀನು ಉತ್ಪಾದನೆ ಆಗಿದೆ. ಹಾಗೆ 1997-98ರಲ್ಲಿ ದಕ್ಷಿಣ ಕನ್ನಡದಲ್ಲಿ 1911 ಮೆಟ್ರಿಕ್ ಟನ್, ಉತ್ತರ ಕನ್ನಡದಲ್ಲಿ 1192 ಮೆಟ್ರಿಕ್ ಟನ್ ಒಟ್ಟಿಗೆ 3103 ಹೀಗೆ ಇದು ವರ್ಷ ವರ್ಷಕ್ಕೆ ಫ್ಲಕ್ಚುಯೇಟ್ ಆಗುತ್ತದೆ. 1992ನೇ ಸಾಲಿನಿಂದ ನೋಡಿದರೆ ಆ್ಯವರೇಜ್ 3015 ಮೆಟ್ರಿಕ್ ಟನ್ ಪ್ರತಿವರ್ಷ ಬರುತ್ತದೆ. ಈ ವರ್ಷ ಮೀನಿನ ಕ್ಷಾಮ ಎಂದು ಹೇಳುತ್ತಾರೆ ಆದರೆ ನಮ್ಮ ಇಲಾಖೆಯ ವರದಿಯ ಪ್ರಕಾರ ಅದು ಮೀನಿನ ಕ್ಷಾಮ ಆಗುವುದಿಲ್ಲ. ಏಕೆಂದರೆ ಈ ಮೂರು ತಿಂಗಳು ಮಳೆಗಾಲದಲ್ಲಿ ಸಾಂಪ್ರದಾಯಿಕ

ಮೀನುಗಾರಿಕೆಯನ್ನು ಮಾಡುವಂಥದ್ದು. ಈ ಸಾಂಪ್ರಾದಾಯಿಕ ಮೀನುಗಾರಿಕೆ ಮಾಡುವಾಗ ಮಳೆ ಬಂದನಂತರ ಮಾಡುವಂಥದ್ದು. ಮೆಕನೈಸ್ಡ್ ಬೋಟ್ ಮಳೆಗಾಲದಲ್ಲಿ ಫಿಷಿಂಗ್ ಮಾಡುವಂಥದ್ದು ನಿಷೇಧ ಮಾಡಿದ್ದೇವೆ. ಕೇವಲ ಸಾಂಪ್ರದಾಯಿಕ ಮೀನುಗಾರಿಕೆಯನ್ನು ನೋಡಿದಾಗ ಈ ಬಾರಿ ಸ್ವಲ್ಪ ಕಡಿಮೆ ಯಾಗಿದೆ. ಈ ಬಾರಿ 800 ಮೆಟ್ರಿಕ್ ಟನ್ ಕಡಿಮೆಯಾಗಿದೆ. ಆದರೆ ಹಿಂದೆ ಪ್ರತಿ ವರ್ಷ ನೋಡಿದಾಗ ಪ್ರತಿ ವರ್ಷ ಫ್ಲಕ್ಚುಯೇಷನ್ ಇದೆ. ಅದಕ್ಕೆ ಕಾರಣ ಏನು ಗೊತ್ತಿಲ್ಲ. ಇನ್ನು ಮುಂದಿನ ದಿನಗಳಲ್ಲಿ ಮೆಕನೈಸ್ಡ್ ಬೋಟ್ ಫಿಷಿಂಗ್ ಅಂದರೆ ಮಳೆಗಾಲದಲ್ಲಿ ಮೀನನ್ನು ಹಿಡಿದರೆ ಮೀನಿನ ಉತ್ಪಾದನೆ ಮುಂದಿನ ದಿನಗಳಲ್ಲಿ ಕಡಿಮೆ ಆಗಬಹುದು ಎಂದು ಇದೆ. ಮಳೆಗಾಲದಲ್ಲಿ ಕಡಿಮೆಯಾದರೆ ಇನ್ನು ಬೇರೆ ದಿನಗಳಲ್ಲಿ ಸೀಜನ್‌ನಲ್ಲಿ ಉತ್ಪಾದನೆ ಜಾಸ್ತಿ ಆಗಬಹುದು ಎಂದು ಅಭಿಪ್ರಾಯ ಮೀನುಗಾರಿಕೆ ಇಲಾಖೆಯದ್ದು ಇದೆ. ಆದಕಾರಣ ಮುಂದಿನ ದಿನಗಳಲ್ಲಿ ಯಾವ ರೀತಿ ಆಗಬಹುದು ಎನ್ನುವ ವರದಿಯನ್ನು ನಾನು ಮಾನ್ಯ ಸದಸ್ಯರಿಗೆ ಒಪ್ಪಿಸುತ್ತೇನೆ.

ಉಪಾಧ್ಯಕ್ಷರು: ಈಗ ಚರ್ಚೆ ಮುಕ್ತಾಯವಾಯಿತು. ಈಗ ಸದನವನ್ನು ಒಂದು ಗಂಟೆ ಮುಂದೆ ಹಾಕಿ ಪುನಃ ಮೂರೂವರೆ ಗಂಟೆಗೆ ಸದನ ಸೇರುವುದು.

(ಸದನವು 2.35 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 3.30ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

(ಸದನವು ಮಧ್ಯಾಹ್ನ 3.40 ನಿಮಿಷಕ್ಕೆ ಸೇರಿತು. ಉಪಾಧ್ಯಕ್ಷರಾದ ಶ್ರೀ ಚಂದ್ರಶೇಖರ್ ಎಂ.ಮಾಮನಿಯವರು ಪೀಠವನ್ನು ಅಲಂಕರಿಸಿದರು)

6) ಮಂತ್ರಿಗಳ ಹೇಳಿಕೆ

ವಿಷಯ: ಹುಬ್ಬಳ್ಳಿಯ ಲೆಮಿಂಗ್ಟನ್ ಶಾಲೆಯಲ್ಲಿ ಶಿಕ್ಷಕರ ನೇಮಕಾತಿ ಬಗ್ಗೆ.

+ ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು): ಸನ್ಮಾನ್ಯ ಉಪಾಧ್ಯಕ್ಷರೆ, ಬೆಳಿಗ್ಗೆ ಶ್ರೀ ಕಾಟ್ಟೆಯವರು ಎತ್ತಿದ್ದ ವಿಚಾರದ ಬಗ್ಗೆ ಸಂಜೆ ಉತ್ತರಿಸುತ್ತೇನೆಂದು ತಿಳಿಸಿದ್ದೆ. ಈಗ ಅದರ ಬಗ್ಗೆ ಉತ್ತರ ನೀಡುತ್ತಿದ್ದೇನೆ. ಅದು ಈ ರೀತಿ ಇದೆ:

ಹುಬ್ಬಳ್ಳಿಯ ಲೆಮಿಂಗ್ಟನ್ ಶಾಲೆಯು ಹುಬ್ಬಳ್ಳಿ ಧಾರವಾಡ ಕಾರ್ಪೊರೇಷನ್ ಆಡಳಿತಕ್ಕೊಳಪಟ್ಟ ಒಂದು ಅನುದಾನಿತ ಸಂಸ್ಥೆಯಾಗಿದ್ದು, ಇದರಲ್ಲಿ 12 ಶಿಕ್ಷಕರ ಹುದ್ದೆ ಖಾಲಿ ಇದ್ದು, ಅವುಗಳನ್ನು ತುಂಬಿಕೊಳ್ಳಲು ಸಹ ನಿರ್ದೇಶಕರು, ಬೆಳಗಾಂ ಅವರು ಅನುಮತಿ ನೀಡಿದ್ದು, ಇದರಲ್ಲಿ 12 ಶಿಕ್ಷಕರನ್ನು ಭರ್ತಿ ಮಾಡಿಕೊಳ್ಳಲಾಗಿದೆ. ಇದರಲ್ಲಿ 11 ಜನ ಶಿಕ್ಷಕರು ಕೆಲಸಕ್ಕೆ ಹಾಜರಾಗಿರುತ್ತಾರೆ. ಈ ಮೊದಲು ಅಲ್ಲಿ 5 ಜನ ಶಿಕ್ಷಕರು ಗುತ್ತಿಗೆ ಆಧಾರದ ಮೇಲೆ ಕೆಲಸದಲ್ಲಿದ್ದರೆಂದು ಹೇಳಿಕೊಳ್ಳುತ್ತಿದ್ದು, ಅವರುಗಳು

ತಮ್ಮನ್ನೇ ನೇಮಕ ಮಾಡಿಕೊಳ್ಳಬೇಕೆಂದು ಒತ್ತಾಯಿಸುತ್ತಿದ್ದಾರೆ. ಈ 5 ಜನರಲ್ಲಿ ಒಬ್ಬರನ್ನು ರೋಸ್ಟರ್ ನಿಯಮದಂತೆ ನೇಮಕ ಮಾಡಿಕೊಳ್ಳಲಾಗಿದೆ. ಇನ್ನು 4 ಜನರು ವಯಸ್ಸು ಹಾಗೂ ರೋಸ್ಟರ್ ನಿಯಮಕ್ಕೆ ಒಳಪಡದೇ ಇದ್ದುದ್ದರಿಂದ ಅವರನ್ನು ನೇಮಕ ಮಾಡಿಕೊಂಡಿರುವುದಿಲ್ಲ ಮತ್ತು ಸಂದರ್ಶನಕ್ಕೆ ಕೂಡ ಕರೆದಿರುವುದಿಲ್ಲ. ಇವರುಗಳನ್ನು ಕಾರ್ಪೊರೇಷನ್‌ನವರು ನೇಮಕಾತಿ ಮಾಡಿಕೊಂಡು ಅನುಮೋದನೆಗೆ ಸಹ ನಿರ್ದೇಶಕರಿಗೆ ಕಳುಹಿಸಿರುತ್ತಾರೆ. ಇನ್ನೂ ಕೂಡ ಅನುಮೋದನೆಯಾಗಿರುವುದಿಲ್ಲ. ಇದು ಸರ್ಕಾರದ ಅನುದಾನಿತ ಸಂಸ್ಥೆಯಾಗಿದೆ. ಈ ಬಗ್ಗೆ ಕಾರ್ಪೊರೇಷನ್ನಿನವರ ಸ್ಪಷ್ಟ ಅಭಿಪ್ರಾಯ ಪಡೆದು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಅಶೋಕ್ ಕಾಟ್ಟೆ: ಕಾರ್ಪೊರೇಷನ್‌ನವರು ಒಂದು ಅನುಮತಿ ತೆಗೆದುಕೊಂಡು ಮಾಡುತ್ತೇವೆಂದು ಹೇಳಿದ್ದಾರೆ. ಕಾರ್ಪೊರೇಷನ್ ಅಂದರೆ ಮ್ಯಾನೇಜ್‌ಮೆಂಟ್ ಬಾಡಿಯೋ ಅಥವಾ ಅಧಿಕಾರಿಗಳ ಬಾಡಿಯೋ? ಇದು ಅನುದಾನಿತ ಸಂಸ್ಥೆ ಇರುವುದರಿಂದ, ಇದು ಮ್ಯಾನೇಜ್‌ಮೆಂಟ್‌ಗೆ ಸಂಬಂಧಪಟ್ಟಿರುತ್ತದೆ. ಮ್ಯಾನೇಜ್‌ಮೆಂಟ್ ಎಂದರೆ ಯಾರು ಆರಿಸಿ ಬಂದಿರುತ್ತಾರೆ ಕಾರ್ಪೊರೇಟರ್‌ಗಳು ಹಾಗೂ ಅಲ್ಲಿರುವ ಸೋಷಿಯಲ್ ಜಸ್ಟೀಸ್ ಹಾಗೂ ಎಜ್ಯುಕೇಷನ್ ಸಮಿತಿ ಇದೆ. ಆ ಸಮಿತಿಯೊಳಗೆ ಬಂದು, ನಂತರ 12 ಜನರನ್ನು ತೆಗೆದುಕೊಳ್ಳುವ ಅವಕಾಶವಿದೆ. ಕಾರ್ಪೊರೇಷನ್ ಮ್ಯಾನೇಜ್‌ಮೆಂಟ್ ಬಾಡಿ....

ಶ್ರೀ ಎಸ್.ಎಸ್.ಪಾಟೀಲ್: ಅದನ್ನೇ ನಾವು ಹೇಳಿದ್ದು. ಕಾರ್ಪೊರೇಷನ್‌ನ ಅಭಿಪ್ರಾಯ ಪಡೆದುಕೊಂಡು ಹೇಳಿದ್ದೇವೆ. ಆ ಒಂದು ನೇಮಕ ಮಾಡಿಕೊಳ್ಳುವ ಅಧಿಕಾರ ಯಾರಿಗಿದೆ ಎನ್ನುವ ಬಗ್ಗೆ ನಿರ್ಣಯವನ್ನು ಅವರು ಮಾಡಿ, ನಮಗೆ ತಿಳಿಸುತ್ತಾರೆ. ಅವರು ತಿಳಿಸಿದನಂತರ ನಾವು ಅಪ್ರೂವಲ್ ಮಾಡುತ್ತೇವೆ.

7) ಶಾಸನ ರಚನೆ

ಅ) ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ವಿಧೇಯಕ, 1997.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, 1997ರ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕ್ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

+ ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು): ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಕಾಯ್ದೆ 1961ಕ್ಕೆ ಕೆಲವು ತಿದ್ದುಪಡಿಗಳನ್ನು ಸೂಚಿಸಿದ್ದೇವೆ. ಇದಕ್ಕೆ ಕಾರಣವೆಂದರೆ, ನಮ್ಮ ಸ್ಟೇಟ್ ಆಕ್ಟ್‌ನಲ್ಲಿ ಚೈಲ್ಡ್ ಅನ್ನುವುದಕ್ಕೆ ಡೆಫನೆಷನ್ 12 ವರ್ಷಕ್ಕೆ ಒಳಪಟ್ಟವರು ಎಂದಿದೆ. ಸೆಂಟ್ರಲ್ ಆಕ್ಟನಲ್ಲಿ ಅದು 14 ವರ್ಷ ಎಂದಿದೆ. ಯೂನಿಫಾರ್ಮಾಗಿ ಇರಬೇಕೆನ್ನುವ ಕಾರಣಕ್ಕೆ 14 ವರ್ಷಕ್ಕೆ ಮಾಡಬೇಕೆಂದು ಈ ತಿದ್ದುಪಡಿ ಒಂದನ್ನು ತಂದಿದ್ದೇವೆ. ಹಾಗೆಯೇ, ಯಂಗ್ ಪರ್ಸನ್ ಎನ್ನತಕ್ಕ ಒಂದು ಡೆಫನೇಷನ್ ಇದೆ. ಅದು ಮೊದಲು 12- 18 ವರ್ಷ ಎಂದಿತ್ತು, ಈಗ ಅದನ್ನು 15- 18 ವರ್ಷವೆಂದು ಮಾಡತಕ್ಕದ್ದಕ್ಕೆ ತಿದ್ದುಪಡಿ. ಆಮೇಲೆ, 6(ಎ) ಎನ್ನುವ ಹೊಸ ಸೆಕ್ಷನ್‌ನ್ನು ಅಳವಡಿಸಲಿಕ್ಕೊಂದು ತಿದ್ದುಪಡಿ ತಂದಿದ್ದೇವೆ. ಅದರಲ್ಲಿ ಏನೆಂದರೆ ನೇಮಕ ಮಾಡಿಕೊಂಡಾಗ ಅಂಗಡಿಗಳಾಗಲೀ ಮತ್ತೆ ಹೋಟೆಲ್‌ಗಳಾಗಲೀ ಬೇರೆ ಯಾವುದೇ ಸಂಸ್ಥೆಗಳು ಅವರು ನೌಕರರನ್ನು ನೇಮಕ ಮಾಡಿಕೊಂಡ ಒಂದು ತಿಂಗಳೊಳಗೆ ಅವರಿಗೆ ಹುದ್ದೆ ಏನು ಕೊಟ್ಟಿರುತ್ತಾರೆ, ಆ ಹುದ್ದೆಯ ಹೆಸರು, ಅವರಿಗೆ ಎಷ್ಟು ಸಂಬಳ ಕೊಡುತ್ತಾರೆ ಇದನ್ನೆಲ್ಲಾ ನಮೂದಿಸಿ ಒಂದು ತಿಂಗಳೊಳಗೆ ಅವರಿಗೆ ಆಜ್ಞೆ ಕೊಡಬೇಕೆಂಬುದು ಒಂದು ತಿದ್ದುಪಡಿ. ಮೊದಲು ಇದು ಇರಲಿಲ್ಲ. ಈಗಿರತಕ್ಕವರಿಗೆ ಮತ್ತು ಮುಂದೆ ಆಗತಕ್ಕವರಿಗೆ ಇದು ಅನ್ವಯವಾಗುತ್ತದೆ. ಇನ್ನೊಂದು ತಿದ್ದುಪಡಿ ಏನು ತಂದಿದೆ ಎಂದರೆ ಪ್ರತಿವರ್ಷ ಕೂಡ ಈ ಅಂಗಡಿಗಳು, ಹೋಟೆಲ್‌ಗಳು, ಕಮರ್ಷಿಯಲ್ ಎಸ್ಟಾಬ್ಲಿಷ್‌ಮೆಂಟ್‌ಗಳು ಪ್ರತಿವರ್ಷ ಕೂಡ ರಿಜಿಸ್ಟ್ರೇಷನ್ ನವೀಕರಣ ಮಾಡಬೇಕೆಂದಿದೆ. ಇದನ್ನು ಐದು ವರ್ಷಕ್ಕೊಮ್ಮೆ ಮಾಡಿದೆ. ಏಕೆಂದರೆ ಅವರಿಗೆ ಹೆರಾಸ್ಮೆಂಟ್ ಆಗುತ್ತದೆ ಎನ್ನತಕ್ಕ ದೂರುಗಳಿದ್ದವು. ಪ್ರತಿ ವರ್ಷ ಬರಬೇಕು, ಅದನ್ನು ನವೀಕರಿಸಬೇಕು ಎಂದು. ನವೀಕರಿಸತಕ್ಕ ಫೀಸ್ ಕೂಡ ಹೆಚ್ಚು ಮಾಡಿ 25 ರೂಪಾಯಿ ಇರುವುದನ್ನು ಹೆಚ್ಚು ಮಾಡಿ ಐದು ವರ್ಷಕ್ಕೊಮ್ಮೆ ಅದನ್ನು ನವೀಕರಣ ಮಾಡಬೇಕೆಂದು ಮಾಡಿದ್ದೇವೆ. ಹೀಗೆ ಕೆಲವು ಸೆಕ್ಷನ್‌ಗಳಿಗೆ ತಿದ್ದುಪಡಿಯನ್ನು ನಾವು ತಂದಿರತಕ್ಕದ್ದು. ಆಮೇಲೆ ವಾರದ ರಜಾ ಫಿಕ್ಸ್ ಮಾಡುವಾಗ ಎಸ್ಟಾಬ್ಲಿಷ್‌ಮೆಂಟ್, ಆಫೀಸ್ ಶುರುವಾದಮೇಲೆ 30 ದಿನಗಳೊಳಗೆ ಅದನ್ನು ಘೋಷಣೆ ಮಾಡಬೇಕೆಂದು ಇದೆ. ಆಮೇಲೆ ಇವರಿಗೆ ರಜಾ ಕೊಡಬೇಕಾದರೆ 240 ದಿವಸ ಕೆಲಸ ಮಾಡಬೇಕೆಂದಿತ್ತು. ಇದನ್ನು ತೆಗೆದುಹಾಕಿದೆ. 20 ದಿವಸ ಕೆಲಸ ಮಾಡಿದರೆ ಒಂದು ದಿವಸ ರಜಾ ಕೊಡಬೇಕೆಂದು ಮಾಡಿದೆ. ಅದನ್ನು ಅವರು ಆ ವರ್ಷವೇ ಉಪಯೋಗಿಸಿಕೊಳ್ಳಬಹುದು ಅಥವಾ ಅಕ್ಯೂಡ್ ಹಾಲಿಡೇಸ್ ಆಮೇಲೆ ಬೇಕಾದರೂ ಉಪಯೋಗಿಸಿಕೊಳ್ಳಬಹುದು. ಅದು ನೌಕರರಿಗೆ ಬಿಟ್ಟ ವಿಚಾರ. ಮೊದಲು ಮೊದಲನೇ ವರ್ಷ ರಜಾಗಳಿರಲಿಲ್ಲ. 240 ದಿವಸ ಆದಮೇಲೆ 20 ದಿನಗಳಿಗೆ ಒಂದು ದಿನ ರಜಾ ಎಂದು ಮಾಡಿ ಅದನ್ನು ಮುಂದಿನ ವರ್ಷ ಉಪಯೋಗಿಸಿಕೊಳ್ಳಬೇಕು ಎಂದು ಇತ್ತು. ಇದು ಮೊದಲನೇ ವರ್ಷ ಸೇರಿದ ವರ್ಷದಲ್ಲಿ 20 ದಿನಗಳಿಗೆ ಒಂದು ದಿನ ರಜಾ ಇರಬೇಕು ಎಂದು ಅದನ್ನು ಕೂಡ ಒಂದು ತಿದ್ದುಪಡಿ ಮಾಡಿದೆ. ಸೆಕ್ಷನ್ 3,

ಸೆಕ್ಷನ್5, ಸೆಕ್ಷನ್ 6 ಇದನ್ನು ಉಲ್ಲಂಘನೆ ಮಾಡಿದವರಿಗೆ ಶಿಕ್ಷೆಯನ್ನು ಹೆಚ್ಚು ಮಾಡಿದ್ದೇವೆ. ಮೊದಲು ಇದ್ದಂಥ ಶಿಕ್ಷೆಯನ್ನು ಹೆಚ್ಚು ಮಾಡತಕ್ಕ ತಿದ್ದುಪಡಿಯನ್ನು ಮಾಡಿದ್ದೇವೆ. ಆಮೇಲೆ ಯಾರನ್ನಾದರೂ ನೌಕರರನ್ನು ದುರ್ನಡತೆ ಮೇಲೆ ಅದು ಪ್ರೂವ್ ಆಗಿ ಅವರನ್ನು ರಿಮೂವ್ ಮಾಡಿದರೆ ಅವನಿಗೆ ಮ್ಯಾಗ್ನಿಮಂ 6 ತಿಂಗಳ ಪೇ ಕೊಡಬೇಕೆಂದಿತ್ತು. ಇದನ್ನು ತೆಗೆದುಹಾಕಿದ್ದೇವೆ. ಏಕೆಂದರೆ ಒಂದು ವರ್ಷಕ್ಕೆ ಒಂದು ತಿಂಗಳು ಪೇ ಕೊಡಬೇಕೆಂದು ಮಾಡಿ ಅವರು ಎಷ್ಟು ವರ್ಷ ಇದ್ದರೋ ಅಷ್ಟು ವರ್ಷದ ಪೇ ಕೊಡಬೇಕೆಂದು ಮಾಡಿದೆ. ಇದು ನೌಕರರ ಹಿತದೃಷ್ಟಿಯಿಂದ ಮಾಡಿದೆ. ಚೈಲ್ಡ್ ಲೇಬರ್ ಇದೆಲ್ಲಾ ಬರುತ್ತದಲ್ಲಾ ಇವರ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಮಾಡಿರತಕ್ಕ ತಿದ್ದುಪಡಿಗಳು. ಇದಕ್ಕೆ ಮಾನ್ಯ ಸದಸ್ಯರು ಒಪ್ಪಿಗೆ ಕೊಡಬೇಕೆಂದು ಅವರನ್ನು ಕೇಳಿಕೊಳ್ಳುತ್ತೇನೆ.

+ ಶ್ರೀ ಎಂ.ಮಲ್ಲಿಕಾರ್ಜುನಪ್ಪಗೆ (ಮಾನ್ಯ ವಿರೋಧಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕ ಷಾಪ್ಸ್ ಅಂಡ್ ಕಮರ್ಷಿಯಲ್ ಎಸ್ಟಾಬ್ಲಿಷ್ಮೆಂಟ್ ಅಮೆಂಡ್‌ಮೆಂಟ್ ಬಿಲ್ 1997 ಇದೊಂದು ಒಳ್ಳೆಯ ಕಾನೂನಿದೆ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಇದರ ಜೊತೆಯಲ್ಲಿ ಕೆಲವು ಸಲಹೆಗಳನ್ನು ಕೂಡ ನಾನು ಕೊಡಬೇಕಾಗುತ್ತದೆ. ಮತ್ತು ಕೆಲವು ಕಿವಿಮಾತನ್ನು ಕೂಡ ಹೇಳಬೇಕಾಗುತ್ತದೆ. ಇದು ಸರ್ವಸಾಧಾರಣವಾಗಿ 12 ವರ್ಷದಿಂದ 14 ವರ್ಷಕ್ಕೆ ಅಂದರೆ ಚೈಲ್ಡ್ ಡೆಫನಿಷನ್ ಏನು ಎಂಬುದನ್ನು 12ರಿಂದ 14ಕ್ಕೆ ಮಾಡುವುದಕ್ಕೆ ನಮ್ಮ ಅಭ್ಯಂತರ ಏನೂ ಇಲ್ಲ. ಆಮೇಲೆ ಅದೇರೀತಿಯಾಗಿ ಯೂತ್ ಎನ್ನತಕ್ಕದ್ದು ಅಥವಾ ಯಂಗ್ ಎಂಬುದಕ್ಕೆ 15ರಿಂದ 18ಕ್ಕೆ ಏರಿಸತಕ್ಕ ಒಂದು ಪ್ರಯತ್ನ ಕೂಡ ಆಗಿದೆ. ಇದರ ಬಗ್ಗೆಯೂ ಕೂಡ ಆಕ್ಷೇಪಣೆ ಇಲ್ಲ. ಉಳಿದ fixing of weekly holidays within 30 days from the date of commencement of new establishment ಇದೂ ಕೂಡ ಕಾರ್ಮಿಕರಿಗೆ ಅನುಕೂಲವಾಗತಕ್ಕದ್ದು ಇದೆ. ಪ್ರತಿ ವರ್ಷಕ್ಕೆ ಒಂದು ತಿಂಗಳಂತೆ ಕಾಂಪೆನ್‌ಸೇಷನ್ ಕೊಡಬೇಕು, ಹಿಂದೆ ಆರು ತಿಂಗಳು ಮ್ಯಾಗ್ನಿಮಂ ಲಿಮಿಟ್ ಇತ್ತು. ಇದನ್ನು ಏರಿಸತಕ್ಕದ್ದನ್ನು ಮಾಡಿದ್ದಾರೆ. ಇದು ಕೂಡ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಆದರೆ ನನ್ನ ಕಾಳಜಿ ಎಲ್ಲಿದೆ ಎಂದರೆ ಅಥವಾ ನಿಮ್ಮ ಗಮನಕ್ಕೆ ಏನು ತರುತ್ತಿದ್ದೇನೆ ಅಂದರೆ renewal of registration certificate once in five years insead of every year ಐದು ವರ್ಷಗಳಿಗೊಮ್ಮೆ ಅಂಗಡಿಗಳ ರಿಜಿಸ್ಟ್ರೇಷನ್ ರಿನ್ಯೂಯಲ್ ಮಾಡಬೇಕೆಂದು ತಾವು ಮಾಡುತ್ತಾ ಇದ್ದೀರಿ. ಉದ್ದೇಶ ಏನೆಂದರೆ ಪದೇಪದೇ ವರ್ಷಕ್ಕೊಮ್ಮೆ ಬಂದು ಅವರಿಗೆ ಹೆರಾಸ್ಮೆಂಟ್ ಆಗಬಾರದು ಎಂಬ ದೃಷ್ಟಿಯಿಂದ ಈ ಒಂದು ಸವಲತ್ತನ್ನು ಇದರಲ್ಲಿ ಕೊಟ್ಟಿದ್ದೀರಿ. ಆದರೆ ನನ್ನ ಅನಿಸಿಕೆ ಏನೆಂದರೆ ನೀವು ಅವರಿಗೆ ಒಂದು ವರ್ಷ ಎರಡು ವರ್ಷ ಹೆಚ್ಚಿಗೆ ಆದರೆ, ಇದನ್ನು ಕಡಿತಗೊಳಿಸಲಿಲ್ಲ ಎಂದರೆ ನಾಳೆ ಅನೇಕ ಅಂಗಡಿಗಳು ಕೆಲವು ರಿಜಿಸ್ಟ್ರೇಷನ್ ಮಾಡಿ ಒಂದೇ ವರ್ಷದಲ್ಲಿ ದಿವಾಳಿಯಾಗಿ ಮುಚ್ಚಿಬಿಡುತ್ತವೆ. ವಿಶೇಷವಾಗಿ ಈ ಬಟ್ಟೆ

ಅಂಗಡಿಗಳು ಕಮಿಷನ್ ಏಜೆನ್ಸಿ ಇವರು ಸ್ವಲ್ಪ ಮೈಮೇಲೆ ಬಂತು ಎಂದರೆ ಅಲ್ಲಿ ದೀಪ ಹಚ್ಚಿ ಕ್ಲೋಸ್ ಮಾಡಿ ಇನ್ನೊಂದು ಹೆಸರಿನಲ್ಲಿ ಇನ್ನೊಂದು ಅಂಗಡಿ ತೆಗೆಯುತ್ತಾರೆ. ಆ ಬಾಕಿಸಾಕೀನೂ ಹೋಯಿತು, ಮತ್ತೆ ಅಲ್ಲಿ ಕೆಲಸ ಮಾಡುವವರ ವಿಚಾರ ಕೂಡ ಹೋಗಿಬಿಡುತ್ತದೆ. ಹೋದಾಗ ಅವನು ಎಲ್ಲಿ ಹುಡುಕಬೇಕು? ಲೇಬರ್ ಕೋರ್ಟಿನಲ್ಲಿ ಹೋಗಿ ಬಡಿದಾಡುವುದಕ್ಕೆ ಟೈಮಿರುವುದಿಲ್ಲ. ಟೈಮ್ ಅಂದರೆ ಲೇಬರ್ ಕೋರ್ಟಿನಲ್ಲಿ ಯಾವುದೇ ಡಿಸ್‌ಪ್ಯೂಟ್ ಸಾಲ್ವ್ ಆಗಬೇಕಾದರೆ ನಾಲ್ಕೈದು ವರ್ಷಕ್ಕಿಂತ ಕಡಿಮೆ ಆಗುವುದಿಲ್ಲ. ಅಷ್ಟೊಂದು ಕಷ್ಟ ಇದೆ. ಇದಕ್ಕೆ ಚೆಕ್ ಅಂಡ್ ಬ್ಯಾಲೆನ್ಸ್ ಇರಬೇಕಾದರೆ ಇದರ ಪೀರಿಯಡ್ ಐದು ವರ್ಷ ಬಹಳ ಲೆಂಗ್ತಿ ಆಯಿತು. ಇದನ್ನು ಸ್ವಲ್ಪ ಕಡಿಮೆ ಮಾಡಿದರೆ ನಮ್ಮ ಹಿಡಿತದಲ್ಲಿ, ಆ ಒಂದು ಅಂಗಡಿಯವರಿಗೆ ನಾವು ಇಷ್ಟೊಂದು ಹೇಳುವಾಗ ನಮ್ಮ ಕಂಟ್ರೋಲ್‌ನಲ್ಲಿರುತ್ತಾರೆ. ಇಲ್ಲದಿದ್ದರೆ ನಾಳೆ ದಿವಸ ಯಾವ ಇನ್‌ಸ್ಪೆಕ್ಷನ್ಸ್ ಕೂಡ ಫಾಲೋ ಮಾಡದೇ ಇರತಕ್ಕವರು, ಅಥವಾ ಲೇಬರ್ ಲಾಸ್ ಫಾಲೋ ಮಾಡದೇ ಇರತಕ್ಕವರು, ಲೇವಾದೇವಿ ಮಾಡಿ ಹಣವನ್ನು ತಿಂದಿದ್ದೇ ಇರಬಹುದು ಅಥವಾ ಕೊಡತಕ್ಕದ್ದಿರಬಹುದು, ನಾಳೆ ಅಂಗಡಿಗಳನ್ನು ಹುಡುಕುವುದೇ ಕಷ್ಟವಾಗುತ್ತದೆ ಐದು ವರ್ಷ ಟೈಮ್ ಕೊಟ್ಟರೆ. ಐದು ವರ್ಷದಲ್ಲಿ ಐದು ಅಂಗಡಿ ತೆಗೆಯುವವರು ಬಹಳ ಜನ ಇದ್ದಾರೆ. ಆದ್ದರಿಂದ ಇದರ ಬಗ್ಗೆ ಪುನರ್‌ಪರಿಶೀಲನೆ ಮಾಡಬೇಕು. ಈ ಒಂದು ಟೈಮ್ ಲಿಮಿಟ್ಟನ್ನು ಸ್ವಲ್ಪ ಕಡಿಮೆ ಮಾಡಿ ಆದಷ್ಟು ಅಂದರೆ ಪದೇ ಪದೇ ಇಲಾಖೆಯವರು ವಿಸಿಟ್ ಮಾಡುವುದು ಇದ್ದರೂ ಕೂಡ ಅಲ್ಲಿ ನಡೆದಂಥ ಲೇಬರ್ ಲಾಸ್ ಪ್ರಕಾರ ಷಾಪ್ಸ್‌ನಲ್ಲಿ ಕಮರ್ಷಿಯಲ್ ಎಸ್ಟಾಬ್ಲಿಷ್ಮೆಂಟಿನಲ್ಲಿ ಫಾಲೋ ಮಾಡುತ್ತಾರೋ ಇಲ್ಲವೋ ಎಂಬುದು ಗೊತ್ತಾಗುತ್ತದೆ. ಈಗಾಗಲೇ ಲೇಬರ್ ಇನ್‌ಸ್ಪೆಕ್ಟರ್‌ಗೆ ರೆಸ್ಪೆಕ್ಟ್ ಇಲ್ಲ. ಪೊಲೀಸ್ ಇನ್‌ಸ್ಪೆಕ್ಟರ್‌ಗೆ ರೆಸ್ಪೆಕ್ಟ್ ಇದೆ. ಎಕ್ಸೈಜ್ ಇನ್‌ಸ್ಪೆಕ್ಟರ್‌ಗೆ ದುಡ್ಡಿ ಕೊಟ್ಟು ರೆಸ್ಪೆಕ್ಟ್ ಕೊಡುತ್ತಾರೆ. ಆದರೆ ಲೇಬರ್ ಇನ್‌ಸ್ಪೆಕ್ಟರ್‌ಗೆ ಮಾತ್ರ ಎಲ್ಲೂ ಯಾರೂ ಕೂಡ ಕೇಳುವುದಿಲ್ಲ. ಅವರನ್ನು ಕೇಳಬೇಕು ಎಂದು ಅಲ್ಲ. ನನ್ನ ಉದ್ದೇಶ ಏನೆಂದರೆ ಲೇಬರ್ ಲಾಸ್ ಸ್ಟ್ರಿಕ್ಟಾಗಿ ಇಂಪ್ಲಿಮೆಂಟ್ ಮಾಡಬೇಕಾದರೆ ಖಂಡಿತ ಸ್ವಲ್ಪ ಹಿಡಿತ ಇರಬೇಕಾದರೆ ನಿಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಅಟ್‌ಲೀಸ್ಟ್ ವರ್ಷಕ್ಕೊಮ್ಮೆ ಇತ್ತು. ಅದನ್ನು ಐದು ವರ್ಷಮಾಡಿದ್ದೀರಿ. ಈಗ ಐದು ವರ್ಷದ ಬದಲು ಅದನ್ನು ಮೂರು ವರ್ಷವಾದರೂ ಮಾಡಿ ಅಥವಾ ಎರಡು ವರ್ಷವಾದರೂ ಮಾಡಿ ಅದಕ್ಕೆ ಲಿಮಿಟ್ಟನ್ನು ಹಾಕಬೇಕು ಎಂಬುದು ಒಂದು. ಎರಡನೆಯದು compulsory issue of appointment orders by the employers to the employees in writing indicating the name designation and terms of conditions etc of appointment within thirty days from the date of appointment 6 ಎ-ಗೆ ಇದೊಂದು ತಿದ್ದುಪಡಿ ಏನು ತಂದಿದ್ದೀರಿ ಒಳ್ಳೆಯ ತಿದ್ದುಪಡಿಯನ್ನು ತಂದಿದ್ದೀರಿ. ಆದರೆ ಇದರ ನೆಪದಲ್ಲಿ ಈ ಅಂಗಡಿಗಳಿಗೆ ಸ್ವಲ್ಪ ಲೇಬರ್ ಡಿಪಾರ್ಟ್‌ಮೆಂಟಿನವರು ಕಾಟ

ಕೊಡಬಾರದು. ಕೆಲವು ಸಾರಿ ತಾತ್ಕಾರ್ತಿಕವಾಗಿ ಅವನು ಅಪಾಯಿಂಟ್‌ಮೆಂಟ್ ಮಾಡಿದಾಗ ನ್ಯಾಚುರಲ್ಲಾಗಿ ಏನು ಹೇಳುತ್ತಾರೆಂದರೆ ಅಪಾಯಿಂಟ್‌ಮೆಂಟ್ ಆರ್ಡರ್ ಕೊಡಿ ಎಂದು ಹೇಳುತ್ತಾರೆ. ಕೆಲವು ಸೀಸನಲ್ ಇಂಡಸ್ಟ್ರೀಸ್ ಇರುತ್ತದೆ. ಕೆಲವು ಸೀಸನಲ್ ಕ್ಯಾಂಟೀನ್ಸ್, ಕೆಲವು ಎಗ್ಸಿಬಿಷನ್ಸ್ ಇರುತ್ತವೆ. ಅಂಥ ಕಡೆ 15 ದಿವಸಕ್ಕೋ ತಿಂಗಳಿಗೋ 8 ದಿವಸಕ್ಕೋ ನೇಮಕಾತಿ ಮಾಡಿಕೊಳ್ಳುತ್ತಾರೆ. ಅಥವಾ ಎರಡು ತಿಂಗಳವರೆಗೂ ನಡೆಯಬಹುದು. ಅಂಥ ಕಡೆ ನಿಮ್ಮ ಲೇಬರ್ ಡಿಪಾರ್ಟ್‌ಮೆಂಟಿನವರು ಹೋಗಿ ಹೆರಾಸ್ಮೆಂಟ್ ಮಾಡತಕ್ಕ ಸಾಧ್ಯತೆ ಇದೆ. ನಾವು ಚೈಲ್ಡ್ ಲೇಬರ್ ಬಗ್ಗೆ ಇಷ್ಟೊಂದೆಲ್ಲಾ ಮಾತನಾಡಿದರೂ ನಾವು ಇಲ್ಲೇ ನೋಡುತ್ತೇವೆ. ನಾವು ಎಲ್ಲಿ ಕಾನೂನು ಇಂಪ್ಲಿಮೆಂಟ್ ಮಾಡುತ್ತೇವೆ ನಮ್ಮ ಪಕ್ಕದಲ್ಲೇ ಕ್ಯಾಂಟೀನ್‌ನಲ್ಲಿ ಹುಡುಗರೇ ಬಂದು ಟೀ ಕೊಡತಕ್ಕದ್ದು, ಕಾಫಿ ಕೊಡತಕ್ಕದ್ದು ಟೇಬಲ್ ಕ್ಲೀನ್ ಮಾಡತಕ್ಕದ್ದು ನಮ್ಮ ಕಣ್ಣೆದುರು ನಾವೇ ನೋಡುತ್ತೇವೆ. ಅದೇ ರೀತಿ ನಮ್ಮ ಲೆಜಿಸ್ಲೇಟರ್ಸ್ ಹೋಮಿನಲ್ಲಿ... ನೀವು ಎಲ್ಲೇ ಹೋಗಿ, ಏರ್‌ಪೋರ್ಟ್‌ನಲ್ಲಿ ಹೋಗಿ ಬಸ್‌ಸ್ಟ್ಯಾಂಡ್‌ನಲ್ಲಿ ಹೋಗಿ, ಯಾವ ಕಡೆ ಹೋದರೂ ಕೂಡ ಸಣ್ಣಸಣ್ಣ ಮಕ್ಕಳು ಇವತ್ತು ಹೋಟೇಲುಗಳಲ್ಲಿ, ಅಂಗಡಿಗಳಲ್ಲಿ ಕೆಲಸ ಮಾಡುತ್ತಿರುತ್ತಾರೆ. ಎಲ್ಲಾ ಕಡೆ ಕೂಡ ಸಣ್ಣ ಮಕ್ಕಳು ಇರುತ್ತಾರೆ. The Department of Women and Child Welfare ಅವರ ನಜರಿಗೆ ಬಂದರೂ ಕೂಡ ಏನೂ ಪ್ರಯೋಜನ ಇಲ್ಲ. ಮತ್ತೆ ಕಾನೂನು ತಂದು ಏನು ಉಪಯೋಗ? ಕಾನೂನು ಇದು ಪುಸ್ತಕದಲ್ಲಿ ಇರುತ್ತದೆ. ಕಾನೂನು ಎಷ್ಟೇ ಒಳ್ಳೆಯದಿದ್ದರೂ ಕೂಡ ಕಾನೂನನ್ನು ನಡೆಸಿಕೊಂಡುಹೋಗತಕ್ಕಂಥ ಜನರು ಒಳ್ಳೆಯವರು ಇರಲಿಲ್ಲವೆಂದರೆ ಆ ಕಾನೂನಿನ ಪ್ರಯೋಜನ ಆಗುವುದಿಲ್ಲ. ಯಾವುದೇ ಕಾನೂನು, ಯಾರೇ ಇರಬಹುದು. ಕಾನೂನನ್ನು ನಡೆಸಿಕೊಂಡು ಹೋಗತಕ್ಕಂಥವರು ಬಿಗಿಯಾಗಿರಬೇಕಾಗುತ್ತದೆ. ಅಂದಾಗ ನೀವು ಇಂಪ್ಲಿಮೆಂಟ್ ಮಾಡುವುದಕ್ಕಾದರೂ ಮನಸ್ಸು ಮಾಡಬೇಕಲ್ಲಾ? ಏಕೆಂದರೆ ಇವತ್ತು ತಮ್ಮ ಕಣ್ಣೆದುರಿಗೇ, ಎಲ್ಲಾ ಲೆಜಿಸ್ಲೇಟರ್ಸ್‌ಗೆ ಗೊತ್ತು, ಎಲ್ಲಾ ಪತ್ರಿಕಾಮಿತ್ರರಿಗೆ ಗೊತ್ತಿದೆ. ಎಲ್ಲರಿಗೂ ಗೊತ್ತಿರುತ್ತದೆ. ಕಣ್ಣೆದುರಿಗೇ ಇದ್ದರೂ ಕೂಡ ನಾವು ಮಾತನಾಡುವ ಹಾಗಿಲ್ಲ. ಮತ್ತೆ ಬಯ್ಯುತ್ತೇವೆ. ಯಾವುದೇ ಒಬ್ಬ ಸಣ್ಣ ಹುಡುಗ ಇದ್ದರೂ ಕೂಡ ಬಯ್ದು ಕಳುಹಿಸುತ್ತೇವೆ. 'ಹೋಗೋ, ಬಾರೋ' ಎಂದು ಈ ಶಬ್ದ ಹೇಳಿ ಕಳುಹಿಸುತ್ತೇವೆ. ಆದರೆ ಇಂತಹ ಒಂದು ಕಾನೂನು ಇದೆ, ಇಂತಹ ಪನಿಷ್‌ಮೆಂಟ್ ಕೊಡುತ್ತಾರೆ ಎನ್ನತಕ್ಕಂಥಾದ್ದು ಇನ್ನೂ ಯಾರಿಗೂ ಅರಿವು ಆಗಿಲ್ಲ ಎನ್ನತಕ್ಕಂಥಾದ್ದಕ್ಕೆ ಇದು ಒಂದು ಉದಾಹರಣೆ ಸಾಕು. ಅದಕ್ಕೆ ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುತ್ತೇವೆ ಎನ್ನತಕ್ಕಂಥ ಒಂದು ಉತ್ಸಾಹ ನಿಮಗೆ ಇದ್ದರೆ, ನಂಬಿಕೆ ಇದ್ದರೆ ಈ ಸೆಕ್ಷನ್ 6(ಎ) ಯನ್ನು ಜಾರಿಯಲ್ಲಿ ತನ್ನಿ. ಇಲ್ಲವೆಂದರೆ ಉದ್ದೇಶವೇನೋ ಒಳ್ಳೆಯದು ಇದೆ. ಮತ್ತೆ ಈ ಉದ್ದೇಶದಿಂದ ಲೇಬರರ್ಸ್‌ಗೆ ಕೂಡ ಅನುಕೂಲವಾಗುತ್ತದೆ. ಆದರೆ ಮಕ್ಕಳಿಗೆ ಮಾತ್ರ ನೀವು ಇವತ್ತು ಬಹಳ ಜವಾಬ್ದಾರಿಯಿಂದ ನೋಡಬೇಕು. ಅವರಿಗೆ ಯಾವ ದೇಶದ

ಸಂವಿಧಾನದಲ್ಲಿ ನಾವು ಒಂದುಕಡೆ ಡೈರೆಕ್ಟೀವ್ ಪ್ರಿನ್ಸಿಪಲ್ಸ್‌ನಲ್ಲಿ ಕಂಪಲ್ಸರಿ ಎಜ್ಯುಕೇಷನ್ ಕೊಡಬೇಕು ಎನ್ನತಕ್ಕಂಥ ಕಲಮನ್ನು ಅಳವಡಿಸಿಕೊಂಡು ಅದರ ಬಗ್ಗೆ ಇಡೀ ದೇಶದಲ್ಲಿ ಸಾಕಷ್ಟು ಮಾತನಾಡುತ್ತೇವೆ. ಆದರೆ ಈ ದೇಶದ ಜನ, ಸರ್ಕಾರ ಒಂದೇ ಅಲ್ಲ, ಇಡೀ ದೇಶದ ಜನ ಇದರ ಬಗ್ಗೆ ಕಾಳಜಿವಹಿಸಿ ಕಂಪಲ್‌ಸರಿ ಎಜ್ಯುಕೇಷನ್‌ಗೆ ಅಷ್ಟೇ ಮಹತ್ವ ಕೊಡಬೇಕು ಎಂದು ಹೇಳಿ ಈ ಶಿಕ್ಷಣಸಂಸ್ಥೆಯವರೂ ಮಾಡುವುದಿಲ್ಲ, ಮಠಾಧಿಪತಿಗಳೂ ಮಾಡುವುದಿಲ್ಲ, ಅನೇಕ ಸೋಷಿಯಲ್ ವರ್ಕರ್ಸ್ ಆ ಕಡೆಗೆ ಗಮನ ಕೊಡುವುದಿಲ್ಲ, ಇವತ್ತು ಯಾವರೀತಿಯಾಗಿ ಎಜ್ಯುಕೇಷನ್ ನಡೆದಿದೆ ಎನ್ನತಕ್ಕಂಥಾದ್ದು ಗೊತ್ತಿದೆ. ಅದಕ್ಕೆ ದಯವಿಟ್ಟು ಯಾವಾಗ ನಾವು ಈ ಮಕ್ಕಳಿಗೆ ಅವರನ್ನು ಈ ಕೆಲಸದಿಂದ ಬಿಡಿಸಬೇಕು ಎನ್ನತಕ್ಕಂಥ ಉದ್ದೇಶದಿಂದ ಈ ಕಾನೂನನ್ನು ತಂದಿದ್ದೇವೆ ಎಂದಾಗ ಈ ಮಕ್ಕಳ ರಕ್ಷಣೆ ಮಾಡತಕ್ಕಂಥಾದ್ದು, ಅವರಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡತಕ್ಕಂಥಾದ್ದು ಅಥವಾ ಈ ಮಕ್ಕಳ ಬಗ್ಗೆ ಬಹಳ ಕಾಳಜಿವಹಿಸಿ ಒಳ್ಳೆಯ ಹೊಸ ಕಾರ್ಯಕ್ರಮಗಳನ್ನು ಹಾಕತಕ್ಕದ್ದೂ ಕೂಡ ಅಷ್ಟೇ ಮುಖ್ಯವಾಗಿ ಬೇಕಾಗುತ್ತದೆ. ಇಲ್ಲದಿದ್ದರೆ ಇವತ್ತು ಈ ಮಕ್ಕಳ ತಂದೆತಾಯಿಗಳ ಬಗ್ಗೆ ತಮಗೆ ಗೊತ್ತಿದೆ. ಅವರು ಯಾಕೆ ಮಕ್ಕಳನ್ನು ಹೀಗೆ ಬಿಡುತ್ತಾರೆ ಎಂದರೆ, ಅವರು ಕೆಲಸ ಮಾಡಿದರೂ ಹೊಟ್ಟೆ ತುಂಬುವುದಿಲ್ಲ, ಮನೆಯ ಹೆಣ್ಣುಮಕ್ಕಳು ಕೆಲಸ ಮಾಡಿದರೂ ಹೊಟ್ಟೆ ತುಂಬುವುದಿಲ್ಲ. ಇಷ್ಟೊಂದು ಕೂಲಿಕೆಲಸ ಮಾಡಿ ಕಷ್ಟಪಟ್ಟರೂ ಕೂಡ ಎರಡು ಹೊತ್ತು ಕೂಳು ಅವರಿಗೆ ಸಿಗುವುದಿಲ್ಲ ಅಂದಾಗ ಮಕ್ಕಳನ್ನು ಕೂಡ ಹಳ್ಳಿಗಳಲ್ಲಿ ದನಕುರಿಗಳನ್ನು ಕಾಯುವುದಕ್ಕೆ ಕಳುಹಿಸುತ್ತಾರೆ. ಇಲ್ಲಿ ಪಟ್ಟಣದಲ್ಲಿ ಇದ್ದರೆ ಹೋಟೇಲುಗಳಿಗೆ ಕಳುಹಿಸುತ್ತಾರೆ, ಕಸ ಬಳಿಯುವುದಕ್ಕೆ ಕಳುಹಿಸುತ್ತಾರೆ, ಸಣ್ಣಪುಟ್ಟ ಕೆಲಸಗಳಿಗೆ ಕಳುಹಿಸುತ್ತಾರೆ. ಅದಕ್ಕೆ ಇದರ ಬಗ್ಗೆ ಸರ್ಕಾರ ಸಮಗ್ರವಾಗಿ ಏನಾದರೂ ಒಂದು ಈ ಮಕ್ಕಳ ಬಗ್ಗೆ ಕಡ್ಡಾಯ ಶಿಕ್ಷಣ ಕೊಡತಕ್ಕಂಥಾದ್ದು ಅಲ್ಲದೆ, ಅವರ ಬಗ್ಗೆ ಒಂದು ಹೆಚ್ಚಿನ ಚಿಂತನೆಯನ್ನೂ ಕೂಡ ಮಾಡಬೇಕಾಗುತ್ತದೆ. ಇವತ್ತು ನಾನು ಹೇಳುತ್ತೇನೆ ಏನೆಂದರೆ ನಮ್ಮ ಹಳ್ಳಿಗಳಲ್ಲಂತೂ ನೂರಕ್ಕೆ 75 ಪರ್ಸೆಂಟ್ ಜನ ಅಲ್ಲಿ ವಾಸವಾಗಿರುತ್ತಾರೆ. ಅಲ್ಲಿರತಕ್ಕಂಥ 70-75 ಪರ್ಸೆಂಟ್ ಜನ, ಅದರಲ್ಲೂ ವಿಶೇಷವಾಗಿ ರೈತರು ಕೂಡ ತಮ್ಮತಮ್ಮ ಮನೆಗಳಲ್ಲಿ ಒಂದಿಬ್ಬರು ಹುಡುಗರನ್ನು ಕುರಿಕಾಯುವುದಕ್ಕೆ, ದನ ಕಾಯುವುದಕ್ಕೆ ಇಟ್ಟುಕೊಂಡಿರುತ್ತಾರೆ. ಎಲ್ಲರೂ 18 ವರ್ಷ ವಯಸ್ಸಿನೊಳಗೆ ಇರತಕ್ಕಂಥವರು, ಕೆಲವು ಸಲ 14 ವರ್ಷ ಒಳಗೆ ಇರತಕ್ಕಂಥವರು ಕೆಲಸಕ್ಕೆ ಹೋಗುತ್ತಾರೆ. ಹತ್ತು-ಹನ್ನೆರಡು ವರ್ಷ ಆದರೂ ಕೆಲಸಕ್ಕೆ ಹೋಗುತ್ತಾರೆ. ಇಲ್ಲವೆಂದರೆ ಎಂಟು-ಹತ್ತು ವರ್ಷ ಒಳಗಿನ ಹುಡುಗರು ತಾಯಿ ಜೊತೆಯಲ್ಲಿ ಕೂಸನ್ನು ಎತ್ತಿಕೊಂಡು ಹೋಗುತ್ತಾರೆ. ಇಂತಹ ಒಂದು ಪರಿಸ್ಥಿತಿ ನಮ್ಮಲ್ಲಿ ಇದ್ದಾಗ ನಾವು ಇದರ ಬಗ್ಗೆ ಕಾನೂನು ತರುವುದರ ಜೊತೆಯಲ್ಲಿ ಒಂದು ಯೋಜನೆಯನ್ನು ಕೂಡ ಇದರ ಬಗ್ಗೆ ರೂಪಿಸಬೇಕಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆ? ನಾವು ಎಷ್ಟೇ ಒತ್ತಾಯ ಮಾಡಿದರೂ ಕೂಡ ಈ ಒಂದು ಆರ್ಥಿಕ ಒತ್ತಡದಿಂದ ಅವರೆಲ್ಲರೂ ಕೂಡ ಇಂತಹ ಕೆಲಸ ಮಾಡಿಯೇ ಮಾಡುತ್ತಾರೆ.

ಕೊನೆಗೆ ಏನು ಪರಿಸ್ಥಿತಿ ಬರುತ್ತದೆ? ನಿಮ್ಮ ಕಾನೂನು ಇರಬಹುದೀರಿ, ನಿಮ್ಮ ಕಾನೂನಿನಿಂದ ನಮ್ಮ ಹೊಟ್ಟೆ ತುಂಬುತ್ತದಾ? ನಾವು ಏನು ಮಾಡೋಣ ಎನ್ನತಕ್ಕಂಥ ಮಾತು ತಂದೆತಾಯಿಗಳ ಬಾಯಿಯಿಂದ ಬರಬಹುದು. 18 ವರ್ಷ ಮಗುವಿಗೆ ಏನು ಪ್ರಾಹಿಬಿಶನ್ ಮಾಡುತ್ತಿದ್ದೇವೆ, ಅಥವಾ 14 ವರ್ಷ ವಯಸ್ಸಿನ ಮಗುವಿಗೆ ಏನು ನಿರ್ಬಂಧ ಮಾಡುತ್ತಿದ್ದೇವೆ, ಅವನ ಬಾಯಿಂದ ಕೂಡ ಈ ಮಾತು ಬರಬಹುದು. ಮೊದಲು ನಮಗೆ ಹೊಟ್ಟೆಗೆ ಬೇಕು. ಆಮೇಲೆ ನಿಮ್ಮ ಕಾನೂನನ್ನು ಜಾರಿಗೆತನ್ನಿ ಎಂಬ ಮಾತನ್ನು ಅವರು ಹೇಳಬಹುದು. ಆದ್ದರಿಂದ ದಯವಿಟ್ಟು ಇದರ ಬಗ್ಗೆ ಕೂಡ ತಾವು ಕಾಳಜಿವಹಿಸಿ ಯಾವುದಾದರೂ ಒಂದು ಕಾರ್ಯಕ್ರಮವನ್ನು ಈ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದಲಾದರೂ, ಅಥವಾ ಲೇಬರ್ ಇಲಾಖೆಯಿಂದಲಾಗಲೀ, ಈ ಕಾರ್ಯಕ್ರಮವನ್ನು ತಾವು ಜಾರಿಗೆತರಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತಾ, ಈ 6 (ಎ) ಏನು Issue of appointment orders ಎನ್ನತಕ್ಕಂಥ ಒಂದು ಸೆಕ್ಷನ್‌ನ್ನು ತಾವು 6 (ಎ)ಗೆ ತಾವೇನು ಸೇರಿಸುತ್ತಿದ್ದೀರಿ, ಇದರಿಂದ ಹೆರಾಸ್‌ಮೆಂಟ್ ಕೂಡ ಆಗದ ರೀತಿಯಲ್ಲಿ ತಾವು ನೋಡಿಕೊಳ್ಳಬೇಕು. ಇಲ್ಲದಿದ್ದರೆ ಲೇಬರ್ ಇನ್‌ಸ್ಪೆಕ್ಟರ್‌ಗೆ ಪ್ರತಿಯೊಂದು ಅಂಗಡಿಗೆ ಹೋಗಿ ವಿವರಣೆಗಳನ್ನು ಕೇಳಿ ಅವರು ವಸೂಲಿ ಮಾಡಿಕೊಂಡು ಅವರು ಓಡಾಡಿ ಬರುತ್ತಾರೆ. ಇದರಿಂದ ಎಲ್ಲಿ ಅವರಿಗೆ ಇನ್‌ಕಮ್ ಸ್ವಲ್ಪ ಕಡಿಮೆ ಇದೆ, ಅಲ್ಲಿ ಸ್ವಲ್ಪ ಜಾಸ್ತಿ ಮಾಡುವ ಹಾಗೆ ಆಗುತ್ತದೆ. ಅದಕ್ಕೆ ದಯವಿಟ್ಟು ಇದರ ಬಗ್ಗೆ ತಾವು ಗಮನಹರಿಸಬೇಕೆಂದು ಹೇಳಿ ತಮ್ಮ ಗಮನಕ್ಕೆ ನಾನು ತರುತ್ತೇನೆ. ಇದರ ಜೊತೆಯಲ್ಲಿ ಸೆಕ್ಷನ್ 15 ಅಲ್ಲೂ ಕೂಡ ಒಂದು ವಿಶೇಷವಾದಂಥ ಸವಲತ್ತುಗಳನ್ನು ಕೊಡಿಸತಕ್ಕಂಥ ವ್ಯವಸ್ಥೆ ಮಾಡಿದ್ದೀರಿ. ಒಂದು ಏನೆಂದರೆ

"Every employee in an establishment shall be entitled to leave with wages and shall be allowed to avail such leave for the number of days calculated at the rate of:

i) one day for every twenty days work performed by him, in case of an adult" ಆದರೆ ಅಲ್ಲಿ ತಾವು ಹೇಳಿದ್ದೀರಿ, ಮೂವತ್ತು ದಿವಸ ಕೆಲಸ ಮಾಡಿದರೆ ಅವನಿಗೆ ವೀಕ್ಲಿ ಹಾಲಿಡೇ ಕೊಡಬೇಕು ಎನ್ನತಕ್ಕಂಥಾದ್ದನ್ನು ತಾವು ಹೇಳಿದ್ದೀರಿ. ಆದರೆ ಇಲ್ಲಿ one day for every 20 days work performed by him ಆಮೇಲೆ-(ii) one day for every fifteen days of work performed by him, in case of young person"

Explanation: for the purpose of this sub-section,-

a) any day of lay-off, by agreement or contract as

permissible under the standing order or for any other reasons beyond the employer's control;

b) in the case of female employee, maternity leave for any number of days not exceeding twelve weeks; and

c) the leave earned in the year prior to that in which the leave is enjoyed" ಎನ್ನತಕ್ಕಂಥ ಮಾತನ್ನು ಇಲ್ಲಿ ಹೇಳಿದ್ದೀರಿ. ಅಂದರೆ ಇಲ್ಲಿ 20 ದಿವಸಕ್ಕೆ ಹಾಲಿಡೇ ಕೊಡುವುದು ಯಾವ ಪ್ರಕಾರ ಮಾಡುತ್ತೀರಿ ಅಥವಾ ಅವರು 30 ದಿವಸ ಕೆಲಸ ಮಾಡಿದರೆ ಒಂದು ತಿಂಗಳಲ್ಲಿ ನಾಲ್ಕು ಬಾರಿ, ಹೆಚ್ಚುಕಡಿಮೆ ಸೂಟಿಗಳು ಬರುತ್ತವೆ. ಇಲ್ಲಿ 15-20 ದಿವಸಕ್ಕೆ ಒಂದು ದಿವಸ ರಜೆ ಕೊಡತಕ್ಕಂಥ ವ್ಯವಸ್ಥೆ ಏನು ಮಾಡಿದ್ದೀರಿ, ಇದು ಯಾವರೀತಿ ಎನ್ನತಕ್ಕದ್ದು ಸ್ವಲ್ಪ ಇದರ ಬಗ್ಗೆ ತಾವು ತಿಳುವಳಿಕೆ ಕೊಡಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಕೊನೆಗೆ ಸೆಕ್ಷನ್ 30-ಇದರಲ್ಲಿ ಕೂಡ ಪನಿಷ್‌ಮೆಂಟ್ ತಾವು ಏನು ಈಗ ಇಂಪೋಸ್ ಮಾಡಿದ್ದೀರಿ-

"for the words "two hundred and fifty rupees" and "five hundred rupees" the words "one thousand rupees" and "two thousand rupees" shall respectively be substituted" ಅದು ಕರೆಕ್ಟ್. ಇನ್ನೂ ಹೆಚ್ಚುಮಾಡಿದರೂ ಏನೂ ತಾಪತ್ರಯ ಇಲ್ಲ. ಆದರೆ ಸಬ್‌ಸೆಕ್ಷನ್ 30ರಲ್ಲಿ ಸಬ್‌ಸೆಕ್ಷನ್ 3 ಇದೆ. ನೋಡಿ-

"Whoever contravenes the provisions of Section 24, shall be punishable with imprisonment for a term which shall not be less than three months but which may extend to six months or with fine which shall not be less than ten thousand rupees but which may extend to twenty thousand rupees or with both, for the first offence and for thte second and subsequent offences, he shall be punishable with imprisonment of a term which shall not be less than six months but which may extend to one year" ಇದು ಸ್ವಲ್ಪ ಹಾರ್ಷ್ ಆಯಿತು ಎನ್ನತಕ್ಕಂಥಾದ್ದು. ಏಕೆಂದರೆ ಕೆಲವು ಜನ ಯಾರೋ ವ್ಯಾಪಾರಸ್ತರ ಮೇಲೆ ಕಣ್ಣಿಟ್ಟು ಅವನಿಗೆ ಪಾಠ ಕಲಿಸಬೇಕು ಎಂದರೆ ಇದರ ದುರುಪಯೋಗ ಕೂಡ ಮಾಡಿಕೊಳ್ಳಬಹುದು. ನಾನು ವ್ಯಾಪಾರಸ್ತರ ಪರವಾಗಿ ಮಾತನಾಡುತ್ತೇನೆ ಎನ್ನತಕ್ಕಂಥ ಅಭಿಪ್ರಾಯ ಬೇಡ. ಈಗಾಗಲೇ ನಾನು ಈ ಬಿಲ್‌ನ್ನು ವೆಲ್‌ಕಮ್ ಮಾಡಿ ಹೇಳಿದ್ದೇನೆ. ಎಲ್ಲೆಲ್ಲಿ ಉತ್ತಮವಾದಂಥ ಕ್ಲಾಸ್‌ಗಳು ಇವೆ,

ಸಬ್‌ಕ್ಲಾಸ್ ಇದೆ, ಏನು ಸಹಾಯ ಮಾಡಬೇಕೆಂಬ ಉದ್ದೇಶದಿಂದ ತಂದಿದ್ದೀರಿ, ಅದನ್ನು ನಾನು ಸ್ವಾಗತ ಮಾಡಿದ್ದೇನೆ. ಆದರೆ 30 ಸಬ್‌ಕ್ಲಾಸ್ (3)ರಲ್ಲಿ ತಾವು ಇದರ ಬಗ್ಗೆ ಹೇಳಬೇಕಾಗುತ್ತದೆ. ಏಕೆಂದರೆ 24 ಸೆಕ್ಷನ್ ವಯಲೇಟ್ ಮಾಡಿದರೆ ತಾವು ಇಂತಹ ದೊಡ್ಡ ಶಿಕ್ಷೆಯನ್ನು ಕೊಡತಕ್ಕಂಥಾದ್ದು ಮಾಡಿದರೆ ಬಹುಶಃ ಇದು ಹೆರಾಸ್‌ಮೆಂಟ್ ಆಗುತ್ತದೆ ಏನೋ ಎನ್ನತಕ್ಕಂಥ ಮಾತನ್ನು ಇವತ್ತು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

4.10 ಪಿ.ಎಂ

Section 25-"prohibition of employment of women and young persons during night. No women or young person between the age of 12 and 15 shall be required or allowed to word whether as an employee or otherwise in any establishment during night." ಎನ್ನತಕ್ಕಂಥದ್ದು ಒಂದು ಇದೆ. ನಂತರ ಇಂತಹ ವೈಯೊಲೇಷನ್ ಎಂದರೆ ಒಂದೊಂದು ಸಲ ಏನಾಗುತ್ತದೆ ಎಂದರೆ, ನೀವೇ ಇಲ್ಲಿ ರಾತ್ರಿ 10-11ರವರೆಗೆ ಅಧಿವೇಶನದಲ್ಲಿ ಭಾಗವಹಿಸಿದಾಗ, ನಾಳೆ ಏನಾದರೂ ಸ್ವಲ್ಪ ವ್ಯತ್ಯಾಸ ಉಂಟಾದರೆ ಇದನ್ನು ನೇರವಾಗಿ ಸಣ್ಣಪುಟ್ಟ ಜನರ ಮೇಲೆ ಕೂಡ ಇದರ ಪರಿಣಾಮ ಬೀರಿ, ಕಾನೂನನ್ನು ಕೈಯಲ್ಲಿ ತೆಗೆದುಕೊಂಡು ಶಿಕ್ಷೆ ಕೊಡತಕ್ಕಂಥದ್ದೂ ಕೂಡ ಆಗುತ್ತವೆ. ಆದ್ದರಿಂದ ದುರ್ಬಳಕ್ಕೆ ಆಗಬಾರದು ಎನ್ನುವ ರೀತಿಯಲ್ಲಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ದಯಮಾಡಿ, ನಾನು ಕೆಲವು ಕ್ಲಾರಿಫಿಕೇಷನ್ ಕೇಳಿದ್ದೇನೆ, ಹಾಗೂ ಈ ಬಿಲ್ ಕೂಡ ಒಳ್ಳೆಯ ಬಿಲ್ ಎನ್ನುವ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಉಪಾಧ್ಯಕ್ಷರೆ, ಸ್ವಾಗತಾರ್ಹ ಮಾಡುವಂತಹ ವಿಷಯಗಳು ಇದರಲ್ಲಿ ಅನೇಕ ಇವೆ. ಟೀಕೆ ಮಾಡುವಂತಹ ವಿಶೇಷ ಅಂಶ ನನಗೇನೂ ಕಾಣಿಸುತ್ತಿಲ್ಲ. ಅದರಲ್ಲೂ ವಿಶೇಷವಾಗಿ ಚೈಲ್ಡ್ ಲೇಬರ್‌ಗೆ 12 ವರ್ಷ ಇದ್ದದ್ದನ್ನು 14 ವರ್ಷ ಎಂದು ಮಾಡಿದ್ದೀರಿ, ಅಂದರೆ ಇದರಿಂದ 14 ವರ್ಷದವರೆಗೆ ಈ ರೀತಿ ಮಾಡಿದರೆ ಪನಿಷ್‌ಮೆಂಟ್ ಎಂದಾಗುತ್ತದೆ, ಹಾಗೂ ಇದರಿಂದ ಹೆಚ್ಚು ಮಕ್ಕಳಿಗೆ ರಕ್ಷಣೆ ಕೂಡ ದೊರಕುತ್ತದೆ. ಮತ್ತೊಂದು ಸ್ವಾಗತಾರ್ಹವಾದ ಸಂಗತಿ ಏನೆಂದರೆ, ಈ ಮೊದಲು ರಾತ್ರಿ ವೇಳೆಯಲ್ಲಿ ಕೆಲಸ ಮಾಡುವ ಹುಡುಗ ಅಥವಾ ಹುಡುಗಿ 12 ರಿಂದ 15ರ ವಯೋಮಿತಿ ಇತ್ತು. ಇದನ್ನು ತೆಗೆದು ಹಾಕಿ, ಯಾವುದೇ ವಯಸ್ಸಿಗೆ ಬಂದಂಥ ಯುವಕ ಅಥವಾ ಯುವತಿಯನ್ನು ರಾತ್ರಿ ವೇಳೆ ಕೆಲಸ ಮಾಡುವಂತೆ, ಹಿಂಸೆ ಮಾಡುವಂತೆ... ಯಂಗ್‌ಸ್ಟರ್‌ಗೆ ತೊಂದರೆ ಮಾಡುವಂತಹ ಪ್ರಶ್ನೆ ಇಲ್ಲಿ ಬರುವುದಿಲ್ಲ. ಇದನ್ನು ಡ್ರಾಪ್ ಮಾಡಿದ್ದೀರಿ ಹಾಗೂ ಇದನ್ನು ಸುಧಾರಿಸಿ ಬಹಳ ಒಳ್ಳೆಯ ಸ್ವಾಗತ ಮಾಡುವ ಕಾರ್ಯವನ್ನು ಮಾಡಿದ್ದೀರಿ. ಮತ್ತೊಂದು, ಒಂದುಕಡೆ

ಕೆಲಸ ಮಾಡುವಂತಹ ಕಾರ್ಮಿಕರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ, ರಜೆ ಹಾಗೂ ಇತರ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೆ ತಾವು ತೆಗೆದುಕೊಂಡಿರುವ ತೀರ್ಮಾನ, ಹಾಗೂ ಚೈಲ್ಡ್ ಲೇಬರ್‌ಗೆ ಆಗುವಂತಹ ಕಿರುಕುಳವನ್ನು ತಪ್ಪಿಸುವಂತಹ ಪ್ರಯತ್ನ, ಮತ್ತು ರಾತ್ರಿ ವೇಳೆ ಯಂಗ್‌ಸ್ಟರ್ಸ್ ಕಂಪಲ್‌ಸರಿ ಕೆಲಸ ಮಾಡದೇ ಇರತಕ್ಕಂಥದ್ದು ಹಾಗೂ ತೊಂದರೆಯನ್ನು ತಪ್ಪಿಸತಕ್ಕಂಥದ್ದು ಇವು ಎಲ್ಲಾ ತುಂಬಾ ಸ್ವಾಗತಾರ್ಹ ಸಂಗತಿ. ಹಾಗೂ ನೋಂದಾವಣಿ ಪ್ರಮಾಣ ಪತ್ರದ ಅವಧಿಯನ್ನು ಒಂದು ವರ್ಷದಿಂದ ಐದು ವರ್ಷದವರೆಗೆ ಹೆಚ್ಚು ಮಾಡಿರುವುದು ಒಳ್ಳೆಯ ಸಂಗತಿ. ಏಕೆಂದರೆ ಪ್ರತಿ ವರ್ಷ ಅವನು ಅಲ್ಲಿ ಹೋಗಿ ಕೈ ಕಟ್ಟಿಕೊಂಡು ನಿಂತುಕೊಂಡು, ಅದೇ ಕೆಲಸವಾಗಿ ಪರಿಣಮಿಸಿದೆ. ಇದರಿಂದ ವ್ಯವಹಾರಗಾರರಿಗೆ ಹಾಗೂ ಎಲ್ಲರಿಗೂ ಸಹ ಇದೇ ಕೆಲಸವಾಗಿದೆ. ಸ್ವಲ್ಪ ಸರಳೀಕರಣ ಮಾಡಿರುವುದರಿಂದ ಇದರಿಂದಾಗತಕ್ಕ ಸ್ವಲ್ಪ ಕಿರುಕುಳವನ್ನು ತಪ್ಪಿಸತಕ್ಕಂಥದ್ದಾಗಿರುವುದರಿಂದ ಇದನ್ನು ಸ್ವಾಗತ ಮಾಡುತ್ತೇನೆ. ಮೋಸ ಮಾಡುವವರು ಬೋರ್ಡ್ ಹಾಕುತ್ತಾರೆ, ನಂತರ ಮೂರು ತಿಂಗಳಾದ ಮೇಲೆ ಬಾಗಿಲು ಹಾಕುತ್ತಾರೆ. ಇದು ಎಲ್ಲಾ ಸಾಮಿರಕೊಬ್ಬ ಮಾಡುತ್ತಾನೆ, ಈಗಲೂ ಮಾಡುತ್ತಾನೆ ನೀವು ಯಾವುದೇ ರೂಲ್ ತಂದರೂ ಸಹ ಮೋಸ ಮಾಡುತ್ತಾನೆ, ಅವನಿರುವುದೇ ಮೋಸ ಮಾಡುವುದಕ್ಕೆ ಎನ್ನುವಂತಹ ಪ್ರವೃತ್ತಿ ಇರುವವನಿಗೆ ಬೇರೆ ರೀತಿಯ ಪನಿಷಮೆಂಟ್ ಆಗಬೇಕೇ ವಿನಾ ಬೇರೆ ಏನೂ ಕಾರಣ ಆಗಲಿಕ್ಕಿಲ್ಲ. ಅದನ್ನು ತಂದಿರುವಂತಹ ಎಲ್ಲಾ ಸಂಗತಿಗಳು ಕೂಡ ಸ್ವಾಗತಾರ್ಹವಾಗಿವೆ. ಆದರೆ ಇದನ್ನು ಕಟ್ಟು ನಿಟ್ಟಾಗಿ ಜಾರಿಗೆ ಬರುವಂತೆ, ಲೇಬರ್ ಇಲಾಖೆ ಅಧಿಕಾರಿಗಳು, ಹಾಗೂ ಬೇರೆಯವರು ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಹೇಳಿ, ಸಂಪೂರ್ಣವಾಗಿ ನಾನು ಇದನ್ನು ಸ್ವಾಗತ ಮಾಡುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಉಪಾಧ್ಯಕ್ಷರೆ, ಇದು ಒಳ್ಳೆ ಆದರ್ಶವಾದಂಥ ಮಸೂದೆಯಾಗಿದೆ. ಆದರೆ ನನಗೆ ಒಂದು ಸಂಶಯ ಏನೆಂದರೆ, ವಯೋಮಿತಿ 12 ರಿಂದ 14 ರವರೆಗೆ ಎಂದು ತಾವು ಏನು ಮಾಡಿದ್ದೀರಿ.. ಆದರೆ ಅವರ ಕೆಲಸದ ಭದ್ರತೆ ಬಗ್ಗೆ.. ಕೆಲವು ಕಡೆ ಏನಾಗಿದೆ ಎಂದರೆ, ಸಣ್ಣ ಮಕ್ಕಳನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ, ಇನ್ನು ಮೂರು ದಿನಗಳಲ್ಲಿ ಅವರನ್ನು ಹೊರಗಡೆ ಹಾಕುತ್ತಾರೆ. ಆದ್ದರಿಂದ ಆ ಕೆಲಸದ ಭದ್ರತೆಯ ಬಗ್ಗೆ ತಾವು ಸ್ವಲ್ಪ ಗಮನಹರಿಸಿದರೆ ಒಳ್ಳೆಯದು. ನೀವು ತಂದಿರುವಂತಹ ಮಸೂದೆ ಬಹಳ ಚೆನ್ನಾಗಿದೆ, ಕ್ರಾಂತಿಕಾರಕ ಹೆಜ್ಜೆ ಎಂದು ನಮಗೆ ಸಂತೋಷ ಆಗಿರುವುದರಿಂದ, ನಾವು ಸ್ವಾಗತ ಮಾಡುತ್ತೇವೆ. ಆದರೆ ಆ ಕೆಲಸದ ಭದ್ರತೆಯ ಬಗ್ಗೆ ಹೇಳಿಲ್ಲ. ಏಕೆಂದರೆ ಅನೇಕ ಕಡೆ ಮಕ್ಕಳನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ, ಅಲ್ಲಿ ಅವರಿಗೆ ನರಕಯಾತನೆ... ಬಹುಶಃ ಈ ವಿಷಯ ತಮಗೆ ಗೊತ್ತಿರಬಹುದು, ಒಂದು ವರ್ಷದ ಹಿಂದೆ ಕಲಾಸಿಪಾಳ್ಯದ ಹತ್ತಿರ ಒಂದು ಹೋಟೆಲ್‌ನಲ್ಲಿ ಮಕ್ಕಳನ್ನೆಲ್ಲಾ ಹೊರಗೆ ಹಾಕಿ, ಅದು ಒಂದು ದೊಡ್ಡ ದುರಂತವಾಗಿ,

ಕೊನೆಗೆ ಪೊಲೀಸ್ ಹಾಗೂ ನೀವುಗಳು ಎಲ್ಲಾ ಸೇರಿ ಕೊನೆಗೆ ಅವರನ್ನು ಸೇರಿಸಿದ ಹಾಗೆ ಆಯಿತು. ಕೆಲಸಕ್ಕೆ ಇವತ್ತು ತೆಗೆದುಕೊಳ್ಳುತ್ತಾರೆ ಇನ್ನು ಮೂರುದಿವಸಕ್ಕೆ ಹೊರಗೆ ಹಾಕುತ್ತಾರೆ, ಈ ರೀತಿ ಅನೇಕ ಕಡೆ ನಡೆಯುತ್ತಿವೆ. ಇದನ್ನು ತಪ್ಪಿಸುವುದಕ್ಕೆ ತಾವು ಏನಾದರೂ ಈ ಮಸೂದೆಯಲ್ಲಿ ಅವರ ಭದ್ರತೆಯ ಬಗ್ಗೆ ಪ್ರಾಮಾಣಿಕವಾಗಿ ಚಿಂತನೆ ಮಾಡಿ ಹಾಕಿದರೆ ಇದರಿಂದ ಬಹಳ ಅನುಕೂಲವಾಗುತ್ತದೆ ಹಾಗೂ ಇನ್ನು ಹೆಚ್ಚಿನ ಬೆಂಬಲವನ್ನು ಕೊಡುವುದಕ್ಕೆ ಅನೂಕೂಲವಾಗುತ್ತದೆ, ಹಾಗೂ ಮಕ್ಕಳ ಕಲ್ಯಾಣದ ಬಗ್ಗೆ, ಮಕ್ಕಳ ಹಿತದೃಷ್ಟಿಯಿಂದ ಇದು ಒಳ್ಳೆಯದಾಗುತ್ತದೆ ಎನ್ನುವ ಮಾತನ್ನು ತಮ್ಮ ಗಮನಕ್ಕೆ ನಾನು ಈ ಸಂದರ್ಭದಲ್ಲಿ ತರುತ್ತಿದ್ದೇನೆ. ದಯಮಾಡಿ ತಾವು ಇದನ್ನು ಸಂಪೂರ್ಣವಾಗಿ ತೆಗೆದುಕೊಳ್ಳಬೇಕಾದರೆ ಈ ಮಾತನ್ನು ಯಾವ ರೀತಿ ಹೇಳುತ್ತೀರಿ, ಏಕೆಂದರೆ ಅದಕ್ಕೆ ಒಂದು ಭದ್ರತೆ ಇರಬೇಕು. ಉದಾಹರಣೆಗೆ ಹೋಟಲ್ ಇರಬಹುದು, ಅಂಗಡಿ ಇರಬಹುದು, ವಾಣಿಜ್ಯ ಇರಬಹುದು, ಯಾವುದೇ ಒಂದು ಇದ್ದಾಗ ಆ ಮಕ್ಕಳಿಗೆ ಸೆಕ್ಯುರಿಟಿ, ಆ ಮಕ್ಕಳ ಕೆಲಸದ ಭದ್ರತೆ ಎನ್ನತಕ್ಕಂಥದ್ದು ಇವತ್ತು ಇಲ್ಲ. ಎಲ್ಲೂ ಕೆಲಸದ ಭದ್ರತೆ ಇಲ್ಲ,... ತಕ್ಷಣ ಬರುತ್ತಾರೆ ಅವರಿಗೆ ಹಿಂಸೆ ಕೊಡುತ್ತಾರೆ, ಹಾಗೂ ಯಾವ ಯಾವ ಕೆಲಸ ಮಾಡಬೇಕು ಎನ್ನುವ ಒಂದು ವ್ಯವಸ್ಥೆ ಇರಬೇಕು, ಈ ವಯಸ್ಸಿನ ಮಕ್ಕಳು ಏನು ಕೆಲಸ ಮಾಡಬೇಕು ಎನ್ನುವುದು ನಿಖರವಾಗಿರಬೇಕು. ಇದು ಮುಖ್ಯವಾದ ಕರ್ತವ್ಯ. ಮತ್ತೊಂದು ಅಂಶ ಏನೆಂದರೆ, ಈ ಕೆಲಸ ಜವಾಬ್ದಾರಿ ಗ್ಯಾರಂಟಿ, ಇವೆರಡನ್ನೂ ಸೇರಿಸಿದರೆ ಇದು ಬಹಳ ಒಳ್ಳೆಯ ಮಸೂದೆಯಾಗುತ್ತಿದೆ ಎಂದು ಹೇಳಿ ನಾವು ಸ್ವಾಗತ ಮಾಡುತ್ತಿದ್ದೇವೆ.

+ ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಉಪಾಧ್ಯಕ್ಷರೆ, ನಾನೂ ಕೂಡ ಮಾನ್ಯ ಸಿದ್ಧರಾಮಯ್ಯನವರನ್ನು ಈ ಕಾಯಿದೆ ತಂದಿದ್ದಕ್ಕಾಗಿ ಅಭಿನಂದನೆ ಮಾಡಬೇಕಾಗಿದೆ. ಬಾಲ ಕಾರ್ಮಿಕರ ದುರುಪಯೋಗವನ್ನು ತಡೆಯುವುದಕ್ಕೆ ಇದು ಹೆಚ್ಚಿನ ಮಟ್ಟಿಗೆ ಸಹಕಾರಿಯಾಗುತ್ತದೆ. ಆದರೆ ಇದನ್ನು ಅಧಿಕಾರಿಗಳು ಇಂಪ್ಲಿಮೆಂಟ್ ಮಾಡುವ ಹಂತದ್ದಲ್ಲಿ ಸರಿಯಾದ ರೀತಿಯಲ್ಲಿ ವ್ಯವಸ್ಥೆ ಆಗಬೇಕು. ಈ ದಂಡ ವಿಧಿಸತಕ್ಕಂಥದ್ದು ಒಂದು,.. ಆದರೆ ಕೆಲವು ಸಂದರ್ಭಗಳಲ್ಲಿ ಇದರ ದುರುಪಯೋಗವಾಗುತ್ತದೆ. ಹೆಚ್ಚಿನ ದಂಡ ಎಂದು ಹೇಳತಕ್ಕಂಥದ್ದು ಹೆಚ್ಚಿನ ದುರುಪಯೋಗವಾಗುತ್ತದೆ. ಇದರ ಜೊತೆಗೆ ಬೇರೆ ಏನಾದರೂ ಅದನ್ನು ರೆಗ್ಯುಲೇಟ್ ಮಾಡುವುದಕ್ಕೆ, ದುರುಪಯೋಗ ಆಗದ ಹಾಗೆ ನೋಡಲಿಕ್ಕೆ ಏನಾದರೂ ಒಂದು ಕ್ರಮವನ್ನು ಮಾಡತಕ್ಕಂಥದ್ದು ಒಳ್ಳೆಯದು ಎಂದು ಈ ಸಂದರ್ಭದಲ್ಲಿ ಮಾನ್ಯ ಸಿದ್ಧರಾಮಯ್ಯನವರನ್ನು ವಿನಂತಿಸುತ್ತೇನೆ, ಬೆಂಗಳೂರು ಮಹಾನಗರದಲ್ಲಿ ಲಕ್ಷಾಂತರ ಮಹಿಳಾ ಕಾರ್ಮಿಕರಿರುವುದರಿಂದ ಅವರ ಕೆಲಸದ ಭದ್ರತೆಗಾಗಿ ತಾವು ಒಂದು ಕಾನೂನನ್ನು ತಂದರೆ, ಲೇಬರ್ ಆ್ಯಕ್ಟ್‌ಲ್ಲಿರುವುದಲ್ಲದೆ ಪ್ರತ್ಯೇಕವಾಗಿ ಒಂದು ಕಾನೂನನ್ನು ತರಬೇಕು, ಏಕೆಂದರೆ ಮಹಿಳಾ ಕಾರ್ಮಿಕರು ಹೆಚ್ಚಾಗಿ ದುಡಿಯುವುದು ಗಾರ್ಮೆಂಟ್ಸ್‌ಗಳಲ್ಲಿ, ಅಲ್ಲಿ ಮಹಿಳೆಯರಿಗೆ ಬಹಳ ಕಿರುಕುಳ

ಕೊಡುತ್ತಾರೆ, ಈ ಒಂದು ದೃಷ್ಟಿಯಿಂದ ಆ ಹಿಂದೆ ಕಿರುಕುಳವನ್ನು ತಪ್ಪಿಸುವುದಕ್ಕೆ, ಬಾಲಕಾರ್ಮಿಕರಿಗೆ ಯಾವ ರೀತಿ ಒಂದು ಕಾನೂನು ತಂದಿದ್ದೀರೋ ಅದೇ ಮಾದರಿಯಲ್ಲಿ ಮಹಿಳೆಯರಿಗೆ ಪ್ರತ್ಯೇಕವಾಗಿ ಒಂದು ಕಾನೂನು ತಂದರೆ, ನಿಜವಾಗಲೂ ಮಹಿಳೆಯರಿಗೆ ಉಪಕಾರ ಮಾಡಿದ ಹಾಗೆ ಆಗುತ್ತದೆ, ಆದ್ದರಿಂದ ದಯಮಾಡಿ ಇದನ್ನು ತಾವು ಪರಿಗಣಿಸುತ್ತೀರೆಂದು ನಾನು ನಂಬಿ ಮತ್ತೊಮ್ಮೆ ಈ ಬಿಲ್ಲನ್ನು ಸ್ವಾಗತ ಮಾಡುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಉಪಾಧ್ಯಕ್ಷರೆ, ಈ ಮಸೂದೆಯನ್ನು ಸ್ವಾಗತ ಮಾಡುತ್ತಾ, ಇದರ ಜೊತೆಯಲ್ಲಿ ತಾವು ಆ ಮಸೂದೆಯಲ್ಲಿ ಏನೇನು ಅಳವಡಿಸಿದ್ದೀರಿ, ಅವರ ಭದ್ರತೆ ಬಗ್ಗೆ ತಾವು ಜವಾಬ್ದಾರಿಯಿಂದ ಕೆಲಸ ಮಾಡಿದರೆ ಈ ಮಸೂದೆಯನ್ನು ತಾವು ತಂದಿದ್ದಕ್ಕೆ ಸಾರ್ಥಕವಾಗುತ್ತದೆ. ಹಾಗೂ ಇದರ ಜೊತೆಗೆ ಬಾಲ ಕಾರ್ಮಿಕರ ಜೀವನ ಭದ್ರತೆ ಬಗ್ಗೆ ಸರ್ಕಾರದಿಂದ ಏನಾದರೂ ಕಾರ್ಯಕ್ರಮಗಳನ್ನು ಹಾಕಬೇಕೆಂದು ಮಾನ್ಯ ಉಪಾಧ್ಯಕ್ಷರ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

+ ಶ್ರೀ ಸಿದ್ಧರಾಮಯ್ಯ: ಉಪಾಧ್ಯಕ್ಷರೇ, ಈ ಮಸೂದೆಯನ್ನು ಮಾನ್ಯ ಎಲ್ಲಾ ವಿರೋಧ ಪಕ್ಷದ ನಾಯಕರು ಸ್ವಾಗತ ಮಾಡಿದ್ದಾರೆ, ಇದಕ್ಕಾಗಿ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಮಸೂದೆ ಕೆಲವು ಸುಧಾರಣೆಗಳನ್ನು ಮಾಡುವುದಕ್ಕೋಸ್ಕರ ತಂದಿರತಕ್ಕಂಥದ್ದು. ಈ ಚೈಲ್ಡ್ ಲೇಬರ್ ಇದು ಒಂದು ದೊಡ್ಡ ಪಿಡುಗು. ಇದರಿಂದಾಗಿ ಸುಮಾರು ಮಕ್ಕಳು 12 ರಿಂದ 15 ವರ್ಷದ ವಯೋಮಿತಿಯವರು ಕೆಲಸ ಮಾಡುತ್ತಾರೆ. ಈ ರೀತಿ 12 ವರ್ಷದ ಒಳಗೆ ಇರುವವರು ಕೆಲಸವನ್ನು ಮಾಡಬಾರದು ಎನ್ನುವುದೇ ಕಾನೂನು. ಏಕೆಂದರೆ 12 ವರ್ಷದ ಒಳಗಿರುವ ಮಕ್ಕಳನ್ನು ನೌಕರಿಗೆ ಆಯ್ಕೆ ಮಾಡಿಕೊಂಡರೆ ಅದು ಕಾನೂನು ಬಾಹಿರ; ಶಿಕ್ಷಾರ್ಹ, ಎನ್ನುವುದು ಕಾನೂನಿನಲ್ಲಿದೆ, ಆದರೂ ಕೂಡ ಇವು ಎಲ್ಲಾ ನಡೆಯುತ್ತಿವೆ. ಆದ್ದರಿಂದ ಈಗಿರುವ 12 ವರ್ಷವನ್ನು 14 ವರ್ಷ ಎಂದು ಮಾಡಿರುವುದು. 14 ವರ್ಷದ ಒಳಗಡೆ ಇರುವ ಯಾವುದೇ ಗಂಡು ಅಥವಾ ಹೆಣ್ಣು ಮಕ್ಕಳನ್ನು ಕೆಲಸಕ್ಕೆ ತೆಗೆದುಕೊಂಡರೆ ಅದು ಶಿಕ್ಷಾರ್ಹ, ಕಾನೂನಿಗೆ ವಿರೋಧವಾಗಿರುವುದು ಎಂದು ನಾವು 2 ವರ್ಷ ಹೆಚ್ಚು ಮಾಡಿ ಈ ಮಸೂದೆಯನ್ನು ತಂದಿರುವುದು. ಹಾಗೂ ಇದರಲ್ಲಿ ಬೇರೆ ಪ್ರಾವಿಷನ್ ಕೂಡ ಮಾಡಿದ್ದೇವೆ. ನಾವು ಏಕೆ ಈ ಮಸೂದೆಯನ್ನು ತರಬೇಕಿದ್ದೇವೆಂದರೆ, ಹೆರಾಸ್‌ಮೆಂಟ್ ಇರಬಾರದು ಎನ್ನುವ ಕಾರಣಕೋಸ್ಕರ ಈ ಬಿಲ್ಲನ್ನು ತಂದಿರುವುದು, ಹಾಗೂ ಇದರ ಜೊತೆಗೆ ಫೀ ಕೂಡ ಹೆಚ್ಚು ಮಾಡಿದ್ದೇವೆ. ಒಂದು ವರ್ಷದಲ್ಲಿ ನವೀಕರಣಕ್ಕೆ ಬರತಕ್ಕಂಥ ಫೀ ಅನ್ನು 5 ವರ್ಷಕ್ಕೆ ಮಾಡಿರುವುದು. ನಾವು ಇದನ್ನು ಏನು ಮಾಡುತ್ತಾರೆ, ಎನ್ನುವ ವಿಚಾರವನ್ನು ಲೇಬರ್ ಇಲಾಖೆಯು ಕೊಟ್ಟಿರುವ ಇನ್‌ಸ್ಟ್ರಕ್ಷನ್ ಪಾಲಿಸುತ್ತಿದೆಯೇ ಹೇಗೆ ಎನ್ನುವ ವಿಚಾರಗಳನ್ನು ಕೂಡ ಪರಿಶೀಲಿಸತಕ್ಕಂಥದ್ದು, ಏನು ಮಾಡುತ್ತಿದ್ದಾರೆ ಎನ್ನುವುದನ್ನೂ ಕೂಡ ನೋಡಿಕೊಳ್ಳುತ್ತೇವೆ. ಆದ್ದರಿಂದ ಅದನ್ನು ಒಂದು ವರ್ಷ ಅಥವಾ ಮೂರು

ವರ್ಷ ಅಥವಾ ಐದು ವರ್ಷ ಎಂದು ಮಾಡಿದರೆ ಏನೂ ವ್ಯತ್ಯಾಸವಾಗುವುದಿಲ್ಲ. ಫೀ ಹೆಚ್ಚು ಮಾಡಿದ್ದರೂ ಅವರು 5 ವರ್ಷ ರೀನ್ಯೂವಲ್ ಪೂರ್ತಿ ಹಣ ಸರ್ಕಾರಕ್ಕೆ ಕಟ್ಟಿರುವುದರಿಂದ ಒಂದು ಪಕ್ಷ ಅವರು ಎರಡು ವರ್ಷಕ್ಕೆ ಅಂಗಡಿಯನ್ನು ಮುಚ್ಚಿಕೊಂಡು ಹೋದರೂ ನಮಗೆ ಏನೂ ನಷ್ಟವಾಗುವುದಿಲ್ಲ ಏಕೆಂದರೆ ಅವನು ಈಗಾಗಲೇ 5 ವರ್ಷದ ಫೀಯನ್ನು ಮೊದಲೇ ಸರ್ಕಾರಕ್ಕೆ ಪಾವತಿ ಮಾಡಿರುತ್ತಾನೆ. ಹೀಗಿದ್ದರೂ ಕಾನೂನಿನ ಚೌಕಟ್ಟಿನಲ್ಲಿ ಅವನ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶಗಳು ಇರುತ್ತವೆ, ಆದ್ದರಿಂದ ಏನೂ ವ್ಯತ್ಯಾಸವಾಗಲಾರದು ಎನ್ನುವ ವಿಷಯವನ್ನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಿಳಿಸುತ್ತಾ... ಮಾನ್ಯ ಯಡಿಯೂರಪ್ಪನವರು ಹಾಗೂ ಬೇರೆಯವರೂ ಕೂಡ ಇದನ್ನು ಸ್ವಾಗತ ಮಾಡಿದ್ದಾರೆ. ಹಾಗೂ ಇವರು ಪ್ರಸ್ತಾಪ ಮಾಡಿರುವ ಭದ್ರತೆಗಳಿಗೆ ಬೇರೆ ಬೇರೆ ಕಾಯಿದೆಗಳು, ಲೇಬರ್ ಲಾಗಳು ಇವೆ. ಆದ್ದರಿಂದ ಇದು ಯಾವುದೇ ರೀತಿಯಿಂದ ತೊಂದರೆಯಾಗುವುದಿಲ್ಲ...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಉಪಾಧ್ಯಕ್ಷರೆ, ಒಂದು ಇಲಾಖೆಯಲ್ಲಿ ಏಕೆ ರಿನೀವಲ್ ಪದ್ಧತಿ ಇರುತ್ತದೆ ಎಂದರೆ To make up to-date records, to know the things. ತಮಗೆ ಗೊತ್ತಿರುವ ಹಾಗೆ ರೋಡ್ ಟ್ರಾನ್ಸ್‌ಪೋರ್ಟ್‌ನಲ್ಲಿ ಕೂಡ ಮಾಡುತ್ತಾರೆ. ಈಗ ಲೈಫ್ ಟ್ಯಾಕ್ಸ್ ಮತ್ತೊಂದು ಮಾಡುತ್ತಾರೆ. ಏಕೆಂದರೆ ಒಂದು ಸಂಸ್ಥೆಯ ಮೇಲೆ ಹಿಡಿತ ಇರಬೇಕು ಎನ್ನುವ ಒಂದು ದೃಷ್ಟಿಯಿಂದ ಎಲ್ಲಾ ಇಲಾಖೆಗಳಲ್ಲೂ ಈ ರೀನಿವಲ್ ಪದ್ಧತಿ ಇದೆ.

ಶ್ರೀ ಸಿದ್ಧರಾಮಯ್ಯ: ಸಂಸ್ಥೆಯ ಮೇಲೆ ಹಿಡಿತ ಇದ್ದೇ ಇರುತ್ತದೆ. ಇಲಾಖೆ ಇನ್ಸ್‌ಪೆಕ್ಷನ್ ಮಾಡುವುದು, ರೇಕಾರ್ಡ್ಸ್ ಮೆಂಟೇನ್ ಮಾಡುವುದನ್ನು ನೋಡುವುದು ಇವು ಎಲ್ಲಾ ಇದ್ದೇ ಇರುತ್ತದೆ. ಇವು ಎಲ್ಲಾ ಕಾರ್ಯವನ್ನು ಇಲಾಖೆ ಮಾಡುತ್ತದೆ. ತಾವು ಹೇಳುತ್ತಿರುವುದು ಇಲಾಖೆ ಪ್ರತಿ ವರ್ಷ ರಿನೀವಲ್ ಮಾಡುವುದನ್ನು 5 ವರ್ಷಕ್ಕೆ ಮಾಡುವುದು ಆಲ್ವೇ? ಇದರಿಂದಾಗಿ ಇಲಾಖೆ ಡಿಬಾರ್ ಏನು ಆಗುವುದಿಲ್ಲ. ಏಕೆಂದರೆ ಸರ್ಕಾರ ಇದ್ದೇ ಇರುತ್ತದೆ ಅದನ್ನು ಮಾಡೇ ಮಾಡುತ್ತೇವೆ. ಆದರೆ ಈ ಭದ್ರತೆಗೆ ಬೇರೆ ಬೇರೆ ಕಾನೂನುಗಳನ್ನು ಮಾಡಬೇಕಾಗುತ್ತದೆ. ಮತ್ತೊಂದು ತಾವು ಮಕ್ಕಳ ಕಲ್ಯಾಣದ ಬಗ್ಗೆ ಹೇಳಿದಿರಿ, ಇದಕ್ಕಾಗಿ ಈಗಾಗಲೇ ನಾವು ಸರ್ವೆ ಮಾಡಿದ್ದೇವೆ. ಸುಪ್ರೀಂ ಕೋರ್ಟ್‌ನವರು ಡಿಸಿಷನ್ ಕೊಟ್ಟ ಮೇಲೆ ಎಲ್ಲಾ ಹೆಸಾರ್ಡಸ್ ಫ್ಯಾಕ್ಟರಿಗಳಲ್ಲಿ ಎಷ್ಟು ಜನ ಮಕ್ಕಳು ಕೆಲಸ ಮಾಡುತ್ತಿದ್ದಾರೆ? ಹಾಗೂ ನಾನ್ ಹೆಸಾರ್ಡಸ್ ಫ್ಯಾಕ್ಟರಿಗಳಲ್ಲಿ ಎಷ್ಟು ಜನ ಮಕ್ಕಳು ಕೆಲಸ ಮಾಡುತ್ತಿದ್ದಾರೆ ಎನ್ನುವ ವಿಷಯವನ್ನು ನಾವು ಇವತ್ತು ಸರ್ವೆ ಮಾಡಿ ಸುಮಾರು ಎರಡು ವರ್ಗೀಕರಣ ಮಾಡಿದ್ದೇವೆ. ಹೆಜಾರ್ಡ್‌ಸ್‌ನಲ್ಲಿರತಕ್ಕಂಥವರು 11,159 ಅಂದರೆ ಪ್ರಾಣಾಪಾಯವಾಗತಕ್ಕಂಥಾದ್ದರಲ್ಲಿ ಇರತಕ್ಕಂಥಾದ್ದು. ಬೇರೆ ನಾನ್ ಹೆಜಾರ್ಡ್‌ಸ್‌ನಲ್ಲಿ 82 ಸಾವಿರ ಇದೆ. ಇವುಗಳಿಗೆ, ಪ್ರತಿ

ಜಿಲ್ಲೆಯಲ್ಲೂ ಕೂಡ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿ, ಇವರಿಗೆಲ್ಲಾ ಪುನರ್ ವ್ಯವಸ್ಥೆ ಮಾಡಬೇಕು ಎಂಬತಕ್ಕಂತಾದ್ದು. ಇವರಿಗೆ ಶಾಲೆಗೆ ಸೇರಿಸತಕ್ಕಂತಾದ್ದು, ಮತ್ತು ಬೇರೆ ಬೇರೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳತಕ್ಕಂತಾದ್ದು ಅದು ಬೇರೆ ನಡೆಯುತ್ತಾ ಇದೆ. ಅದಕ್ಕೆ ಅವರಿಗೆ ಭದ್ರತೆ ಸಿಗತಕ್ಕಂತಾದ್ದು ಕೂಡ ಆಗುತ್ತಾ ಇದೆ. ಇದನ್ನು ಎಲ್ಲರೂ, ಒಮ್ಮತದಿಂದ ಒಪ್ಪಿಗೆ ಕೊಡಬೇಕೆಂದು ಮನವಿ ಮಾಡುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, ''1997ನೇ ಸಾಲಿನ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ರಿಂದ 12ರ ವರೆಗೆ:

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, ''ಖಂಡ 2ರಿಂದ 12ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತವೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2ರಿಂದ 12ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, ''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾಪದ ಅಂಗೀಕಾರ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೇ, 1997ನೇ

ಸಾಲಿನ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, 1997ನೇ ಸಾಲಿನ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಆ) ಕರ್ನಾಟಕ ಕೈಗಾರಿಕಾ ಸ್ಥಾಪನೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾದಿನಗಳು) (ತಿದ್ದುಪಡಿ) ವಿಧೇಯಕ-1997

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೇ, 1997ರ ಕರ್ನಾಟಕ ಕೈಗಾರಿಕಾ ಸ್ಥಾಪನೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೇ, ಇದು ಬಹಳ ಸರಳವಾದಂಥ ತಿದ್ದುಪಡಿ. ಚುನಾವಣಾ ಆಯೋಗದವರು ಒಂದು ಸೂಚನೆಯನ್ನು ಕೊಟ್ಟಿದ್ದರು. ಚುನಾವಣಾ ದಿನಗಳಲ್ಲಿ ಕೈಗಾರಿಕೆಗಳಲ್ಲಿ ಮತ್ತು ಬೇರೆ ಬೇರೆ ಎಸ್ಟಾಬ್ಲಿಷ್‌ಮೆಂಟ್‌ನಲ್ಲಿ ಕೆಲಸ ಮಾಡತಕ್ಕ ಜನರು ಮತ ಹಾಕುವುದಕ್ಕೆ ಹೋದರೆ, ಅದು ಸಾರ್ವಜನಿಕ ಚುನಾವಣೆ ಇರಲಿ ಅಥವಾ ಉಪ ಚುನಾವಣೆ ಇರಲಿ, ಲೋಕಸಭೆಗೆ ಅಥವಾ ಅಸೆಂಬ್ಲಿಗೆ ನಡೆಯತಕ್ಕ ಚುನಾವಣೆಗಳಲ್ಲಿ ಅದನ್ನು ವೇತನಸಹಿತ ರಜಾ ದಿನವೆಂದು ಕೊಡಬೇಕೆಂದು ಮಾಡತಕ್ಕಂತಾದ್ದು. ಇನ್ನೊಂದು ಇವರಿಗೆ ಒಟ್ಟು ರಜಾ ದಿನಗಳು, ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯದಿನಾಚರಣೆ, ಮತ್ತು ಗಾಂಧಿ ಜಯಂತಿ ಈ ಮೂರು ರಜಾ ದಿನಗಳೂ ಕಡ್ಡಾಯವಾಗಿ ಇರುತ್ತವೆ. ಇದು ಬಿಟ್ಟು, ಇನ್ನು 6 ರಜಾ ದಿನಗಳು ಇವೆ. ಈ ರಜಾ ದಿನದ ಜೊತೆಗೆ ನವೆಂಬರ್ 1ನೇ ತಾರೀಖಿನ್ನೂ ಸೇರಿಸುತ್ತಿದ್ದೇವೆ. ಈ 7 ರಜಾ ದಿನಗಳನ್ನು ಎಂಪ್ಲಾಯರ್ ಮತ್ತು ಎಂಪ್ಲಾಯಿಗಳು ಕುಳಿತುಕೊಂಡು, ಎಷ್ಟು ರಜಾದಿನಗಳನ್ನು ಸರ್ಕಾರ ಘೋಷಣೆ ಮಾಡಿದೆ. ಸುಮಾರು 52 ಈಗ ಷೆಡ್ಯೂಲ್‌ನಲ್ಲಿ ಇವೆ. ಅದರೊಳಗೆ ಈ 7 ರಜಾ ದಿನಗಳು ಯಾವುವು ಎಂದು ಮಾಡಿಕೊಳ್ಳತಕ್ಕಂತಾದ್ದು. ಇದನ್ನು ಟ್ರೇಡ್ ಯೂನಿಯನ್‌ನವರು ಮತ್ತು ಎಂಪ್ಲಾಯರ್ ಕುಳಿತುಕೊಂಡು ಮಾಡಿಕೊಳ್ಳತಕ್ಕಂತಾದ್ದು. ಸರ್ಕಾರದ ಹತ್ತಿರ ಬಂದು ಇದು ಮಾಡಿಕೊಳ್ಳಬೇಕಾದಂಥ ಅಗತ್ಯ ಇಲ್ಲ. ಇದನ್ನು ಅವರೇ ಮಾಡಿಕೊಳ್ಳಬಹುದು. ಒಂದುವೇಳೆ, ಅಲ್ಲಿ ಬಗೆಹರಿಯದೇ ಹೋದರೆ, ನಮ್ಮ ಹತ್ತಿರ ಬರಬೇಕಾಗುತ್ತದೆ.

ಆದ್ದರಿಂದ, ಬಹಳ ಸರಳವಾದ ತಿದ್ದುಪಡಿ ತಂದಿರತಕ್ಕಂತಾದ್ದು. ಬಹುಶಃ ಇದರ ಬಗ್ಗೆ ಚರ್ಚೆ ಅಗತ್ಯವಿಲ್ಲವೆಂದು ಭಾವಿಸಿಕೊಂಡಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಹಾಲಿಡೇಗೋಸ್ಕರ ಸೆಪರೇಟಾಗಿ, ಚುನಾವಣಾ ಆಯೋಗದವರ ಶಿಫಾರಸ್ಸಿನ ಮೇಲೆ, ಯಾವ ದಿವಸ ಚುನಾವಣೆ ಇರುತ್ತದೆ, ಅದನ್ನು ವೇತನ ಸಹಿತ ರಜೆ ಎಂದು ಮಾಡಬೇಕು, ಆ ಎಂಪ್ಲಾಯರ್‌ಗೆ ಕೊಡಬೇಕು ಎನ್ನತಕ್ಕಂಥಾದ್ದು. ಷಾಪ್ಸ್ ಅಂಡ್ ಎಸ್ಟಾಬ್ಲಿಷ್‌ಮೆಂಟ್‌ನಲ್ಲಿರತಕ್ಕವರೂ ಮತ ಹಾಕುವುದಕ್ಕೆ ಹೋದದಿವಸ, ಚುನಾವಣೆ ಇದ್ದ ದಿವಸ ಅವರಿಗೆ ಇದು ಅಪ್ಲೈ ಆಗುತ್ತದೆಂದು ಹೇಳಬೇಕು.

ಶ್ರೀ ಸಿದ್ಧರಾಮಯ್ಯ: ಇದು ಜನರಲ್ ಲೆಜಿಸ್ಲೇಷನ್, ಎಲ್ಲರಿಗೂ ಅಪ್ಲೈ ಆಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅದರೊಳಗೆ ಆ ರೀತಿ ಇಲ್ಲ 8 ದಿವಸಕ್ಕೆ ಒಂದು ರಜೆ, 15 ದಿವಸಕ್ಕೆ ಒಂದುರಜೆ ಕೊಡಬೇಕೆಂದು ಇದೆ. ಇದು ಷಾಪ್ಸ್ ಅಂಡ್ ಎಸ್ಟಾಬ್ಲಿಷ್‌ಮೆಂಟಿಗೂ ಅಪ್ಲೈ ಆಗುತ್ತದೆಯೇ ಎಂಬುದನ್ನು ಹೇಳಬೇಕು.

ಶ್ರೀ ಸಿದ್ಧರಾಮಯ್ಯ: ಇದು ಜನರಲ್ ಇರತಕ್ಕಂಥ ಒಂದು ಕಾಯಿದೆ. ಇದಕ್ಕೆ ಅಡಿಷನಲ್ ಆಗಿ ನವೆಂಬರ್ 1ನ್ನು ಸೇರಿಸುವುದನ್ನು ಬಿಟ್ಟರೆ, ಮತ್ತು ಚುನಾವಣೆಯಲ್ಲಿ ವೋಟು ಮಾಡುವುದಕ್ಕೆ ಹೋದವರಿಗೆ ಸಂಬಳ ಸಹಿತ ರಜೆ ಕೊಡಬೇಕೆಂಬುದನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಇದೊಂದು ಸಾಮಾನ್ಯವಾದಂಥ ಕಾಯಿದೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, ''1997ನೇ ಕರ್ನಾಟಕ ಕೈಗಾರಿಕಾ ಸ್ಥಾಪನೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ರಿಂದ 7ರ ವರೆಗೆ:

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, ಖಂಡ 2ರಿಂದ 7ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತವೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 7 ರ ವರೆಗೆ ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, ''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೇ, 1997ನೇ ಕರ್ನಾಟಕ ಕೈಗಾರಿಕೆಗಳ ಸ್ಥಾಪನೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, ''1997ನೇ ಕರ್ನಾಟಕ ಕೈಗಾರಿಕಾ ಸ್ಥಾಪನೆಗಳ (ರಾಷ್ಟ್ರೀಯ ಮತ್ತು ಹಬ್ಬ ರಜಾ ದಿನಗಳು) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಇ) ಕರ್ನಾಟಕ ಪಂಚಾಯತ್‌ರಾಜ್ (ಮೂರನೇ ತಿದ್ದುಪಡಿ) ವಿಧೇಯಕ, 1997 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೇ, ''1997ನೇ ಸಾಲಿನ ಕರ್ನಾಟಕ ಪಂಚಾಯತ್‌ರಾಜ್ (ಮೂರನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.''

ಪ್ರಸ್ತಾವವನ್ನು ಮಂಡಿಲ್ಪಟ್ಟಿತು

+ ಶ್ರೀ ಎಂ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ರಾಜ್ಯ ಪಂಚಾಯತ್‌ರಾಜ್ ಕಾನೂನು 1993, ಅದನ್ನು ಬಹಳ ವ್ಯಾಪಕವಾಗಿ, ನಿಜವಾದ ರೀತಿಯ ಅಧಿಕಾರ ವಿಕೇಂದ್ರೀಕರಣ ಮಾಡುವಂಥ ಸಂದರ್ಭದಲ್ಲಿ, ಅದು ಇನ್ನೂ ಸ್ವಲ್ಪಮಟ್ಟಿಗೆ ಅಧಿಕಾರವನ್ನು ಕುಂಠಿತಗೊಳಿಸಿದೆ. ನಿಜವಾದಂಥ ವಿಕೇಂದ್ರೀಕರಣ, ಅರ್ಥವತ್ತಾಗಿ ಆಗಬೇಕು

ಎನ್ನುವಂಥ ಅಭಿಪ್ರಾಯ ಇದೆ. ಆ ಸಂದರ್ಭದಲ್ಲಿ ಕರ್ನಾಟಕ ಪಂಚಾಯತ್‌ರಾಜ್ ಕಾನೂನಿನಲ್ಲಿ ಇದ್ದಂಥ ಕೆಲವು ಅಡೆತಡೆಗಳು, ನ್ಯೂನತೆಗಳು ಇವುಗಳನ್ನು ಸರಿಪಡಿಸಬೇಕೆಂಬ ಉದ್ದೇಶಕ್ಕಾಗಿ ಮಾನ್ಯ ನಾಯಕ್‌ರವರ ಅಧ್ಯಕ್ಷತೆಯಲ್ಲಿ ಒಂದು ಪರಿಣಿತರ ಸಮಿತಿಯನ್ನು ಏರ್ಪಾಡು ಮಾಡಿದೆ. ಈ ಪರಿಣಿತರ ಸಮಿತಿಯ ಜೊತೆ ಜೊತೆಗೇ, ಈ ಕಾರ್ಯವನ್ನು ನಿರ್ವಹಿಸಿದಂಥ ಸಂದರ್ಭದಲ್ಲಿ ಜಿಲ್ಲಾ ಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿಗಳು ಅನುಭವಿಸಿದಂಥ ಕಷ್ಟನಷ್ಟಗಳು ಅಥವಾ ಅವರಿಗೆ ಎದುರಾದಂಥ ಕೆಲವು ಸವಾಲುಗಳು ಮತ್ತು ಸಂಧಿಗ್ದತೆಗಳು, ಬೇರೆ ಬೇರೆ ಸಂದರ್ಭಗಳಲ್ಲಿ ಶಾಸಕರುಗಳು ಮಾಡಿದಂಥ ಸೂಚನೆಗಳು ಪತ್ರಿಕೆಗಳ ಸಂಪಾದಕೀಯದಲ್ಲಿ ಬಂದಂತಾದ್ದು ಅಥವಾ ವರದಿಗಳಲ್ಲಿ ಬಂದಂಥ ಹಿನ್ನೆಲೆಯಲ್ಲಿ ಒಂದು ವ್ಯಾಪಕವಾದ ತಿದ್ದುಪಡಿಯವನ್ನು ಮಾಡುವಂಥ ಪ್ರಯತ್ನ ಮಾಡಿದ್ದೇವೆ. ಅದರಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾಗಿರತಕ್ಕಂತಾದ್ದು, ಕರ್ನಾಟಕ ಪಂಚಾಯತ್‌ರಾಜ್ ಕಾನೂನನ್ನು, ಒಂದು ಪಂಚಾಯ್ತಿ ಅಥವಾ ಒಂದು ಸ್ವಯಂ ಆಡಳಿತಾತ್ಮಕ ಘಟಕಗಳಾಗಬೇಕು ಎಂದು ಸಂವಿಧಾನದ 40ನೇ ಪರಿಚ್ಛೇದದಲ್ಲಿ ವ್ಯಕ್ತ ಮಾಡಿದೆ. ಆದರೆ, ಈ ಕಾನೂನಿನಲ್ಲಿ ಅದು ಇಲ್ಲದೇ ಇದ್ದುದರಿಂದ, ಇದು ಸ್ವಯಂ ಆಡಳಿತಾತ್ಮಕ ಘಟಕ ಎನ್ನುವಂಥ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಹಾಗೆಯೇ ಬೇರೆ ರೀತಿಯಲ್ಲಿ, ಚುನಾವಣೆ ನಡೆಯುವಾಗ, ಅವ್ಯವಹಾರಗಳನ್ನು ಮಾಡಿದರೆ, ಮತಗಟ್ಟೆಗಳನ್ನು ವಶಪಡಿಸಿಕೊಳ್ಳತಕ್ಕ ಪ್ರಯತ್ನ ಮಾಡಿದರೆ, ಅಲ್ಲಿ ಮತದಾರರು ಮತಹಾಕುವುದಕ್ಕೆ ಬಂದಂಥ ಸಂದರ್ಭದಲ್ಲಿ, ಅದನ್ನು ತಡೆಹಿಡಿಯುವ ಪ್ರಯತ್ನ ಮಾಡಿದರೆ, ಖೋಟಾ ಮತದಾನದ ಚಲಾವಣೆಗಳನ್ನು ಮಾಡಿದರೆ, ಬೇರೆಯವರಿಗೆ ಬೆದರಿಕೆ ಒಡ್ಡುವುದನ್ನು ಮಾಡಿದರೆ, ಅವರಿಗೆ ಎರಡು ವರ್ಷದವರೆಗೆ ಶಿಕ್ಷೆಯನ್ನು ವಿಧಿಸತಕ್ಕಂತಾದ್ದು, (6 ತಿಂಗಳಿಂದ ಎರಡು ವರ್ಷದವರೆಗೆ) ಮತ್ತು ದಂಡ ವಿಧಿಸತಕ್ಕಂಥ ಕಾನೂನನ್ನು ಇದರಲ್ಲಿ ತರತಕ್ಕಂಥ ತಿದ್ದುಪಡಿಯನ್ನು ತಂದಿದ್ದೇವೆ. ಚುನಾವಣೆಯ ಅಥವಾ ಮತಗಟ್ಟೆಗಳಲ್ಲಿ ಏಜೆಂಟರ್‌ಗಳಾಗಿ ಅನೇಕ ಸಂದರ್ಭದಲ್ಲಿ ನಮ್ಮ ಸರ್ಕಾರಿ ನೌಕರರು ಪಾಲ್ಗೊಳ್ಳುತ್ತಿದ್ದಾರೆ ಎನ್ನುವಂತಹ ಅನೇಕ ಆಪಾದನೆಗಳೂ ಸಹ ಬಂದಿದೆ. ಸರ್ಕಾರಿ ನೌಕರರು ಯಾರ ಪರವಾಗಿ ಆದರೂ ಏಜೆಂಟರು ಆಗಿ ಕೆಲಸ ಮಾಡಿದರೆ ಅಥವಾ ಅವರು ಮತಗಳ ಎಣಿಕೆ ಏಜೆಂಟರಾಗಿ ಕೆಲಸ ಮಾಡಿದ್ದು ಇದ್ದರೆ ಅವರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುವಂತಹ, ಮತ್ತು ಅವರಿಗೆ ಮೂರು ತಿಂಗಳ ಸಜೆ, ಮತ್ತು ಅವರನ್ನು ನೌಕರಿಯಿಂದ ತೆಗೆದುಹಾಕುವಂಥಾದ್ದು ಇದರಲ್ಲಿ ಸೇರಿಸಿದ್ದೇವೆ. ಪಂಚಾಯತ್ ಸಂಸ್ಥೆಗಳ ಪ್ರಾದೇಶಿಕ ಕ್ಷೇತ್ರದ ಪುನರ್ ವಿಂಗಡಣೆ ಮಾಡುವಂತಹ ಸಂದರ್ಭದಲ್ಲಿ, ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರಬಹುದು, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾಪಂಚಾಯತಿ ಚುನಾವಣೆಗಳನ್ನು ಮಾಡುವಂತಹ ಸಂದರ್ಭದಲ್ಲಿ, ಈ ಕ್ಷೇತ್ರಗಳ ಪುನರ್ ವಿಂಗಡಣೆಯನ್ನು ಸರ್ಕಾರದವರು ಮಾಡಿದ್ದಾರೆ, ಜಿಲ್ಲಾಧಿಕಾರಿಗಳ ಮೂಲಕ ಮಾಡಿಸಿದ್ದು ಎಲ್ಲವೂ ಕೂಡ ವಸ್ತುನಿಷ್ಠವಾಗಿಲ್ಲ,

ಆಯಾಯಾ ಆಡಳಿತ ಪಕ್ಷಕ್ಕೆ ಅನುಕೂಲವಾಗುವಂತಹ ರೀತಿಯಲ್ಲಿ ಭೌಗೋಳಿಕವಾಗಿರತಕ್ಕಂಥ ಅನುಕೂಲಗಳ ವ್ಯವಸ್ಥೆಯನ್ನು ನೋಡದೇ ಅದರ ಸರಿ ಹೊಂದಾಣಿಕೆಯನ್ನೂ ಕೂಡ ಯೋಚನೆ ಮಾಡದೆ ತಮಗೆ ಎಲ್ಲಿ ಹೆಚ್ಚು ಮತಗಳು ಬರಬಹುದು ಎನ್ನುವಂತಹ ರೀತಿಯಲ್ಲಿ ಏನು ಈ ರೀತಿಯಲ್ಲಿ ಮತಕ್ಷೇತ್ರಗಳನ್ನು ಪುನರ್ ವಿಂಗಡಣೆ ಮಾಡಿದ್ದಾರೆ ಇದು ಆಯಾಯಾ ಆಳುವ ಪಕ್ಷಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿ, ನಾವು ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ನಮ್ಮ ಶಾಸಕರು ಮತ್ತು ಬೇರೆಯವರೂ ಕೂಡ ಹಿಂದಿನ ಸರ್ಕಾರದ ಮೇಲೆ ಇಂತಹ ಅಭಿಪ್ರಾಯವನ್ನು ವ್ಯಕ್ತಮಾಡಿದರು. ನಾಳೆ ನಮಗೂ ಕೂಡ ಇಂತಹ ಒಂದು ಪ್ರಶ್ನೆ ಬರಬಹುದು, ಮುಂದೆ ಯಾರೇ ಅಧಿಕಾರಕ್ಕೆ ಬಂದರೂ ಕೂಡ ಇವತ್ತು ಆಳುವ ಪಕ್ಷ ನಾಳೆ ಚುನಾವಣೆ, ಮಾಡತಕ್ಕಂಥ ಸಂದರ್ಭದಲ್ಲಿ ಇಂತಹ ತಪ್ಪನ್ನು ಮಾಡಿದ್ದೇವೆ ಎನ್ನುವಂತಹ ಒಮ್ಮೆ ಸಕಾರಣವಾದುದ್ದು ಅಥವಾ ನಿರಾಧಾರವಾದಂತಹ ಆಪಾದನೆಗಳು ಬರಬಹುದು ಎನ್ನುವ ಕಾರಣಕ್ಕಾಗಿಯೇ ಒಂದು ನಿಷ್ಪಕ್ಷಪಾತವಾದಂತಹ ಚುನಾವಣಾ ಆಯೋಗ ಏನು ಇದೆ ಆ ಚುನಾವಣಾ ಆಯೋಗವೇ ಈ ಮತದಾರರ ಕ್ಷೇತ್ರಗಳ ಪುನರ್ ವಿಂಗಡಣೆ ಮಾಡತಕ್ಕಂಥ ಅಧಿಕಾರವನ್ನು ಅವರಿಗೆ ಕೊಡತಕ್ಕಂಥಾದ್ದನ್ನು ನಾವು ಮಾಡಿದ್ದೇವೆ. ಇದು ಬಹಳ ವ್ಯಾಪಕವಾದಂತಹ ಮತ್ತು ಪರಿಣಾಮಕಾರಿಯಾಗಿರತಕ್ಕಂಥ ಒಂದು ಪ್ರಯತ್ನ. ಚುನಾವಣೆಗಳಲ್ಲಿ ಗೆದ್ದಿರತಕ್ಕಂಥ ಅಭ್ಯರ್ಥಿಗಳನ್ನು ಸರ್ಕಾರದವರು ಸಾಧ್ಯವಾದಷ್ಟು ಬೇಗನೇ ಎನ್ನುವಂತಹ ಮಾತು ಇದೆ. ಸಾಧ್ಯವಾದಷ್ಟು ಬೇಗನೇ ಎನ್ನುವುದಕ್ಕೆ ಬದಲಾಗಿ ಚುನಾಯಿತರಾದ ಒಂದು ತಿಂಗಳೊಳಗಾಗಿ ಎನ್ನುವಂತಹ ಪದವನ್ನು ಸೇರಿಸುತ್ತಾ ಚುನಾವಣಾ ಗೆಜಿಟ್‌ನಲ್ಲಿ ಅವರ ಹೆಸರು ಪ್ರಕಟವಾದ ಒಂದು ತಿಂಗಳ ಒಳಗಾಗಿ ಚುನಾವಣಾ ಆಯೋಗವೇ ಈ ಕರ್ತವ್ಯವನ್ನು ನಿರ್ವಹಿಸಬೇಕು ಎನ್ನುವಂತಹ ಒಂದು ಕಾನೂನು ಕೂಡ ಇದರಲ್ಲಿ ತಂದಿದ್ದೇವೆ. ಪ್ರತ್ಯಕ್ಷವಾಗಿ ಆಗಲಿ, ಪರೋಕ್ಷವಾಗಿ ಆಗಲಿ ಈಗ ಇರತಕ್ಕಂಥ ಕಾನೂನಿನಲ್ಲಿ ತಾಲ್ಲೂಕು ಪಂಚಾಯತಿಯ, ಜಿಲ್ಲಾ ಪಂಚಾಯತಿಯ ಹಾಗೂ ಗ್ರಾಮ ಪಂಚಾಯತಿ ಸದಸ್ಯರು ಅವರು ಏನಾದರೂ ತಮ್ಮ ಹಿತಾಸಕ್ತಿಗಳನ್ನು ನಡೆಸಿಕೊಳ್ಳುವಂಥಾದ್ದು ಆದರೆ ಅಥವಾ ಆ ಸಂಘಸಂಸ್ಥೆಗಳಿಗೆ ವಿರುದ್ಧವಾಗಿ ಕೆಲಸ ಮಾಡಿದರೆ ಅವರು ಅಲ್ಲಿ ಗುತ್ತಿಗೆಗಳನ್ನು ತೆಗೆದುಕೊಂಡು ಗುತ್ತಿಗೆ ಕೆಲಸಗಳನ್ನು ನಿರ್ವಹಿಸುವುದಾಗಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಇದೆ ಆದರೆ ಅದರಲ್ಲಿ ನಿರ್ದಿಷ್ಟತೆ ಇರಲಿಲ್ಲ. ಆ ನಿರ್ದಿಷ್ಟತೆಯನ್ನು ತರಲಿಕ್ಕಾಗಿ ಅವರಾಗಲಿ, ಅವರಿಗೆ ಸಂಬಂಧಿಸಿದವರು ಆಗಲಿ ಅವರಿಂದ ಅಧಿಕಾರ ಹೊಂದಿದಂತಹವರೇ ಆಗಲೀ ಏಜೆಂಟರುಗಳು ಆಗಲಿ ಇಂಥಾದ್ದು ಏನಾದರೂ ಮಾಡಿದ್ದರೆ ಸಪ್ಲೈ ಮಾಡುವಂಥಾದ್ದು ಆಗಬಹುದು, ಅಥವಾ ಸಾಮಗ್ರಿಗಳ ಪೂರೈಕೆ ಮಾಡುವಂಥಾದ್ದು ಆಗಬಹುದು, ಅಥವಾ ಆತ ನಿರ್ವಹಿಸುವಂತಹ ಕರ್ತವ್ಯಗಳನ್ನು ಗುತ್ತಿಗೆಗೆ ತೆಗೆದುಕೊಳ್ಳುವಂಥಾದ್ದು ಆದರೆ ಅವರನ್ನು ಅನರ್ಹಗೊಳಿಸುತ್ತೇವೆ ಎನ್ನುವಂತಹ ಮಾತನ್ನೂ ಸಹ ಇದರಲ್ಲಿ ಹಾಕಿದ್ದೇವೆ. ಹಾಗೆಯೇ ನಿರ್ಮಲ ಕರ್ನಾಟಕಕ್ಕೆ ಒತ್ತು ಕೊಡಬೇಕು ಎನ್ನುವಂಥ ಒಂದು ಕಾರಣ

ಇದ್ದಿದ್ದರಿಂದ ಮತ್ತು ನಮ್ಮ ಗಾಂಧೀಜಿಯವರೂ ಸಹ ತಮ್ಮ ಆತ್ಮ ಕತೆಯಲ್ಲಿ ಅನೇಕ ಸಂದರ್ಭಗಳಲ್ಲಿ ಬರೆದುಕೊಳ್ಳುತ್ತಾರೆ, ಇಷ್ಟು ಕೊಳಕರಾದಂತಹ ಭಾರತ ದೇಶದ ಜನ ನಾವು ತಲೆ ತಗ್ಗಿಸಬೇಕಾದಂತಹ ಪರಿಸ್ಥಿತಿ ಇದೆ. ವೈಯಕ್ತಿಕವಾಗಿ ಸಾಮೂಹಿಕವಾಗಿ ಕೊಳಕರಾಗಿರುವಂತಹ ನಮ್ಮ ಬಗ್ಗೆ ನಾವು ಸ್ವಲ್ಪಮಟ್ಟಿಗಾದರೂ ಎಚ್ಚರ ಮತ್ತು ಕಾಳಜಿಯನ್ನು ವಹಿಸಿಕೊಳ್ಳಬೇಕು ಎನ್ನುವಂತಹ ಮಾತು ಗಾಂಧೀಜಿಯವರು ತಮ್ಮದೇ ಆದ ಕಾರ್ಯಕ್ರಮದಲ್ಲಿ ಪದೇ ಪದೇ ಹೇಳಿದ್ದಾರೆ. ರಚನಾತ್ಮಕ ಕಾರ್ಯಕ್ರಮವಾಗಿ ಪಕ್ಷದ ಮೂಲಕ ಭಾರತೀಯರಿಗೆ ಆ ಒಂದು ಕಾರ್ಯಕ್ರಮವನ್ನು ಕೊಟ್ಟಿದ್ದಾರೆ. ಇಷ್ಟೆಲ್ಲಾ ಪ್ರಯತ್ನಗಳು ಆಗಿದ್ದರೂ ಕೂಡ ನಮ್ಮ ಹಳ್ಳಿಗಳು ಇನ್ನೂ ಕೂಡ ದುರ್ಗಂಧಮಯವಾಗಿರುವಂತಹ ಮತ್ತು ಅನಾರೋಗ್ಯದ ವಾಸದ ಪ್ರದೇಶಗಳು ಆಗಿರುವುದರಿಂದ ನಿರ್ಮಲ ಕರ್ನಾಟಕ ಕಾರ್ಯಕ್ರಮಕ್ಕೆ ಒತ್ತು ಕೊಟ್ಟಿದ್ದೇವೆ. ಆದರೆ ಸರ್ಕಾರಿ ಕಾರ್ಯಕ್ರಮದಿಂದಲೇ ಇಂತಹ ಒಂದು ಪರಿಣಾಮಕಾರಿಯಾದಂತಹ ಬದಲಾವಣೆ ಆಗುವುದಿಲ್ಲ. ಆ ಕಾರಣಕ್ಕಾಗಿಯೇ ಕನಿಷ್ಟ ಯಾರು ಚುನಾಯಿತ ಪ್ರತಿನಿಧಿಗಳಾಗಿದ್ದಾರೆ ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗೆ ಅವರು ಚುನಾಯಿತರಾದ ಸಂದರ್ಭದಿಂದ ಹಿಡಿದು 6 ತಿಂಗಳೊಳಗಾಗಿ ಅವರು ಕುಟುಂಬ ಶೌಚಾಲಯಗಳನ್ನು ಕಟ್ಟಬೇಕು ಎಂದು ಹೇಳಿ ಇದು ಒಂದು ಸಾಂಕೇತಿಕವಾಗಿರತಕ್ಕಂಥಾದ್ದು ಆಗಬಹುದು, ಆದರೂ ಕೂಡ ಸುಮಾರು 80 ಸಾವಿರಕ್ಕಿಂತಲೂ ಹೆಚ್ಚು ಸದಸ್ಯರು ನಮ್ಮ ಗ್ರಾಮ ಪಂಚಾಯತಿಗಳಲ್ಲಿ ಇದ್ದಾರೆ ಸುಮಾರು 913ಕ್ಕಿಂತ ಹೆಚ್ಚು ಜನ ಜಿಲ್ಲಾ ಪಂಚಾಯತಿ ಸದಸ್ಯರು ಇದ್ದಾರೆ. 3400ಕ್ಕಿಂತಲೂ ಹೆಚ್ಚು ಜನ ತಾಲ್ಲೂಕು ಪಂಚಾಯತಿ ಸದಸ್ಯರು ಇದ್ದಾರೆ. ಸ್ವಲ್ಪ ಹೆಚ್ಚು ಕಡಿಮೆ ಒಂದು ವರ್ಷದಲ್ಲಿ 90 ಸಾವಿರ ಕುಟುಂಬ ಶೌಚಾಲಯಗಳು ಬಂದರೆ ಅದೊಂದು ಪರಿಣಾಮಕಾರಿಯಾದ ಕೆಲಸ ಆಗಬಹುದು ಎನ್ನುವುದರ ಮೂಲಕ ಅನರ್ಹರನ್ನಾಗಿ ಮಾಡುತ್ತೇವೆ ಸದಸ್ಯರು 6 ತಿಂಗಳ ಒಳಗಾಗಿ ಮಾಡಿಕೊಳ್ಳದೇ ಇದ್ದರೆ ಎನ್ನುವಂತಾದ್ದನ್ನು ಇದರಲ್ಲಿ ಸೇರಿಸಿದ್ದೇವೆ. ಹಾಗೆಯೇ ಗ್ರಾಮ ಪಂಚಾಯಿತಿಗಳು ನಿರ್ವಹಿಸಬೇಕಾಗಿರತಕ್ಕಂಥ ಕರ್ತವ್ಯದಲ್ಲಿ ನಿರ್ಮಲವಾದ ಗ್ರಾಮದ ವಾತಾವರಣವನ್ನು ಇಟ್ಟುಕೊಳ್ಳಬೇಕಾದರೆ ರಸ್ತೆಬದಿಗಳಲ್ಲಿ ಇರತಕ್ಕಂಥ ತಿಪ್ಪೇಗುಂಡಿಗಳಿಗೆ ಬದಲಾಗಿ ಬೇರೆ ಒಂದು ಜಮೀನುಗಳನ್ನು ಖರೀದಿ ಮಾಡಿ ಅವರಿಗೆ ಕೊಡತಕ್ಕಂಥಾದ್ದು ಮತ್ತೆ ಅದನ್ನು ನಿರ್ವಹಣೆ ಮಾಡುವಂತಹ ಸಂದರ್ಭದಲ್ಲಿ ಚರಂಡಿಗಳನ್ನು ಮಾಡುವಂತಾದ್ದು, ಒಳ್ಳೆಯ ರಸ್ತೆಗಳನ್ನು ಮತ್ತು ಸಾಮಾಜಿಕ ಅರಣ್ಯವನ್ನು ಬೆಳೆಸಿ ಅದನ್ನು ಮಾಡುವಂತಹ ಕರ್ತವ್ಯಗಳನ್ನೂ ಕೂಡ ನಾವು ಇದರಲ್ಲಿ ಕಾಣಿಸಿದ್ದೇವೆ. ಅಂದರೆ ಈ ಕರ್ತವ್ಯಗಳನ್ನು ಮಾಡದೇ ಇದ್ದರೆ ಆ ಗ್ರಾಮ ಪಂಚಾಯಿತಿಯನ್ನು ನಾವು ಅನರ್ಹಗೊಳಿಸುವಂತಹ ಒಂದು ಅಧಿಕಾರವನ್ನು ಕೂಡ ಜಿಲ್ಲಾಪಂಚಾಯತಿಯ ಉದ್ದೇಶಿತ ತಿದ್ದುಪಡಿಗಳಲ್ಲಿ ನಾವು ತಂದಿದ್ದೇವೆ. ಈಗ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಮತ್ತು ಜಿಲ್ಲಾ ಪಂಚಾಯತಿಯ ಸದಸ್ಯರು ಅಥವಾ ಗ್ರಾಮ ಪಂಚಾಯತಿಯ ಸದಸ್ಯರು ಅಧ್ಯಕ್ಷರಿಗೆ

ತಮ್ಮ ರಾಜೀನಾಮೆಗಳನ್ನು ಕೊಡುತ್ತಾರೆ. ಆಕಸ್ಮಾತ್ ಯಾವುದೋ ಕಾರಣಗಳಿಗೆ ರಾಜೀನಾಮೆ ಕೊಟ್ಟರೆ ಈಗ ಇರತಕ್ಕಂಥ ಕಾನೂನಿನಲ್ಲಿ ಅನೇಕ ದೂರುಗಳು ನಮಗೆ ಬಂದಿರತಕ್ಕಂಥಾದ್ದು ಮತ್ತು ಶಾಸಕರೂ ಕೂಡ ನಮ್ಮ ಗಮನಕ್ಕೆ ತಂದಿದ್ದಾರೆ, ಅಧ್ಯಕ್ಷರು ರಾಜೀನಾಮೆಯನ್ನು ಕೊಟ್ಟಿರುವಂತಾದ್ದನ್ನು ತಮ್ಮ ಜೇಬಿನಲ್ಲಿಯೇ ಇಟ್ಟುಕೊಂಡು ಅದನ್ನು ಮರೆತಿರತಕ್ಕಂಥಾದ್ದು ಅಂದರೆ ಜಾಣ ಮರುವಿನ ಮೂಲಕ ಇಟ್ಟುಕೊಳ್ಳತಕ್ಕಂಥ ಪ್ರಯತ್ನ ಮಾಡುತ್ತಾರೆ. ಅವರು ನಮಗೆ ಬೆಂಬಲವನ್ನು ಕೊಡುತ್ತಾರೆ ಎನ್ನುವಂತಹ ಸಂದರ್ಭದಲ್ಲಿ ಆ ರಾಜೀನಾಮೆಯನ್ನು ಮುಂದೆ ತರುವುದಿಲ್ಲ, ಅವರು ಏನಾದರೂ ತಮ್ಮ ವಿರುದ್ಧ ಇದ್ದಾರೆ ಅವರು ಏನಾದರೂ ಅವಿಶ್ವಾಸ ನಿರ್ಣಯ ತರುತ್ತಾರೆ ಅವರ ವಿರುದ್ಧವಾಗಿ ಮಾತನಾಡುತ್ತಾರೆ ಅಂದರೆ ಆ ಸಂದರ್ಭದಲ್ಲಿ ಆ ರಾಜೀನಾಮೆ ಪತ್ರವನ್ನು ದುರುಪಯೋಗಪಡಿಸಿಕೊಳ್ಳುವಂತಹ ಕಾರಣ ಕೂಡ ಇರುತ್ತದೆ. ಇಲ್ಲದೇ ಇದ್ದರೆ ಕೆಲವು ಸಂದರ್ಭಗಳಲ್ಲಿ ಯಾವುದೋ ಕಾರಣವನ್ನು ಹೇಳಿ ಯಾವುದೋ ಕಾರಣ ಹೇಳಿ ಬಿಳಿ ಹಾಳೆಯ ಮೇಲೆ ಸಹಿ ಮಾಡಿಸಿಕೊಂಡು ಅದರಲ್ಲಿ ಇಂತಹ ಪತ್ರವನ್ನು ಬರೆದಿದ್ದಾರೆ ಎನ್ನುವಂತಹ ಆಪಾದನೆಗಳು ಇರುವುದರಿಂದ ಈ ರೀತಿಯಾಗಿ ರಾಜೀನಾಮೆ ಕೊಟ್ಟಿರತಕ್ಕಂಥ ಸದಸ್ಯರ ವಿಷಯವನ್ನು ಮುಂದಿನ ಸಭೆಯಲ್ಲಿ ತಂದೇ ತೀರಬೇಕು, ಮುಂದಿನ ಸಭೆಯಲ್ಲಿ ಆ ವಿಚಾರವನ್ನು ಸಭೆಗೆ ತಿಳಿಸಬೇಕು. ಆಗ ಅಲ್ಲಿ ಇರತಕ್ಕಂಥ ಒಬ್ಬ ಸದಸ್ಯನಿಗೆ ಗೊತ್ತಾಗುತ್ತದೆ ನನ್ನ ರಾಜೀನಾಮೆ ಪತ್ರವನ್ನು ನಾನು ಕೊಟ್ಟಿಲ್ಲ ಎನ್ನುವುದು ಆಗಿದ್ದರೆ ಸುಳ್ಳು ಇದೆ ಎನ್ನುವ ಮಾತನ್ನು ಹೇಳಬಹುದು ಅಥವಾ ಕೊಟ್ಟಿದ್ದರೆ ಅದನ್ನು ಅಂಗೀಕಾರ ಮಾಡಿ ಎಂದು ಹೇಳುವಂತಾದ್ದು ಆದರೂ ಆಗಬಹುದು, ಆದ್ದರಿಂದ ದುರುದ್ದೇಶ ಆಗುವಂತಾದ್ದು ಅಥವಾ ಅದನ್ನು ದುರುಪಯೋಗಪಡಿಸಿಕೊಳ್ಳುವಂತಾದ್ದು ತನ್ನ ಸ್ವಂತ ಕಾರಣಗಳಿಗಾಗಿ ಎನ್ನುವುದನ್ನು ತಡೆಹಿಡಿಯಬಹುದು ಇದು ಒಂದು ನಿರುಪದ್ರವ್ಯ ಆದರೆ ಪರಿಣಾಮಕಾರಿಯಾದಂತಹ ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಈಗ ವಿವಿಧ ವರ್ಗಗಳಿಗೆ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳಲ್ಲಿ ಮೀಸಲಾತಿಯನ್ನು ಮಾಡಿದಾಗ ಇದೇ ಸದನದಲ್ಲಿ ನಮ್ಮ ಮೇಲೆ ಅನೇಕ ಸಾರಿ ಆಪಾದನೆಗಳು ಬಂದಿವೆ. ಈಗ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸಂಬಂಧಪಟ್ಟಂತೆ ಅವರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಇರುತ್ತದೆ. ಯಾವ ಯಾವ ತಾಲ್ಲೂಕು, ಯಾವ ಯಾವ ಜಿಲ್ಲೆ ಅಧ್ಯಕ್ಷರನ್ನು ಯಾವ ಪಂಗಡಕ್ಕೆ ವಹಿಸಿಕೊಡಬೇಕು ಎನ್ನತಕ್ಕಂಥಾದ್ದು ಬಂದಾಗ ಸರ್ಕಾರ ತನಗೆ ಅನುಕೂಲವಾಗುವಂತಹ ರೀತಿಯಲ್ಲಿ ಮಾಡಿದೆ ತಮ್ಮ ಪಕ್ಷದವರಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಮಾಡಿದೆ ಅಥವಾ ನಿರ್ದಿಷ್ಟವಾಗಿ ಒಬ್ಬ ವ್ಯಕ್ತಿಯ ಗುರುತು ಇಟ್ಟುಕೊಂಡು ಈ ರೀತಿಯಾದ ಮೀಸಲಾತಿಗಳನ್ನು ಮಾಡಿದ್ದಾರೆ ಎನ್ನುವಂತಹ ಆಪಾದನೆಗಳು ಬಂದಿದ್ದರಿಂದ ಇದಕ್ಕೆ ನಿಷ್ಪಕ್ಷಪಾತವಾದಂತಹ ನಮ್ಮ ಚುನಾವಣಾ ಆಯೋಗ ಏನು ಇದೆ ಈ ಚುನಾವಣಾ ಆಯೋಗವೇ ಇದರ ಒಂದು ನಿರ್ಧಾರವನ್ನು ತೆಗೆದುಕೊಳ್ಳಲಿ, ಯಾವ ತಾಲ್ಲೂಕು ಪಂಚಾಯತಿ ಅಧ್ಯಕ್ಷರು ಯಾವ ವರ್ಗದವರು

ಆಗಬೇಕು ಯಾವ ಜಿಲ್ಲಾ ಪಂಚಾಯತಿ ಅಧ್ಯಕ್ಷರು ಯಾವ ಮೀಸಲಾತಿ ಪರವಾಗಿ ಇರಬೇಕು ಎಂದು ನಿರ್ಣಯ ಮಾಡಿದರೆ ಸರ್ಕಾರ ಆಪಾದನೆಗಳಿಂದ ಮುಕ್ತವಾಗುತ್ತದೆ ಮತ್ತು ಅದು ನಿಷ್ಪಕ್ಷಪಾತವಾದ ರೀತಿಯಲ್ಲಿ ಕೂಡ ಆಗಬಹುದು ಎನ್ನುವ ರೀತಿಯ ಒಂದು ತಿದ್ದುಪಡಿಯನ್ನು ನಾವು ಈ ಸಂದರ್ಭದಲ್ಲಿ ತಂದಿದ್ದೇವೆ. ಮಾನ್ಯ ಅಧ್ಯಕ್ಷರೇ, ಈಗ ಇರುವಂತಹ ಕಾಯ್ದೆಯಲ್ಲಿ ದುರ್ನಡತೆ ಮಾಡಿದಂತಹ, ಕರ್ತವ್ಯವನ್ನು ನಿರ್ವಹಿಸದೇ ಇರುವಂತಹ ಗ್ರಾಮ ಪಂಚಾಯತಿ ಸದಸ್ಯರಿಗೆ ಏನು ಕ್ರಮ ಕೈಗೊಳ್ಳಬೇಕು ಎನ್ನುವಂತಾದ್ದು ಇಲ್ಲ. ಗುಬ್ಬಿಯಲ್ಲಿ ಆದ ಒಂದು ಪ್ರಕರಣವನ್ನು ಮಾನ್ಯ ಶಿವನಂಜಪ್ಪನವರು ನನ್ನ ಗಮನಕ್ಕೆ ತಂದಿದ್ದರು. ಅಲ್ಲಿ ಒಬ್ಬ ಸದಸ್ಯರು ಕುಡಿದು ಬಂದು ಅಧ್ಯಕ್ಷರನ್ನು ಹೊಡೆದಿದ್ದರು. ಆದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಕಾನೂನಿನಲ್ಲಿ ಮೌನವಾಗಿದೆ. ಆದ್ದರಿಂದ ಈ ರೀತಿ ದುರ್ನಡತೆ ಮಾಡಿದಾಗ ಮತ್ತು ನಿಯಮಾವಳಿಗಳ ಪ್ರಕಾರ ವರ್ತನೆ ಮಾಡದೇ ಇರುವಂತಹ ಸದಸ್ಯರು ಯಾರಾದರೂ ಇದ್ದರೆ ಅವರನ್ನು ಅನರ್ಹಗೊಳಿಸುವಂತಹ ತಿದ್ದುಪಡಿಯನ್ನು ಈ ಮೂಲಕ ತಂದಿದ್ದೇವೆ. ಇದು ಉದಾಹರಣೆಗಳ ಮೂಲಕ ಆಗಿರತಕ್ಕಂಥಾದ್ದು. ಮತ್ತು ಅವಿಶ್ವಾಸ ಗೊತ್ತುವಳಿ ತರತಕ್ಕಂಥಾದ್ದರಲ್ಲಿ ಗ್ರಾಮ ಪಂಚಾಯತಿಯಲ್ಲಿ ಮಾತ್ರ ಎರಡನೇ ಮೂರು ರಷ್ಟು ಸದಸ್ಯರ ಒಪ್ಪಿಗೆ ಬೇಕಾಗುತ್ತದೆ. ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗೆ ಕೇವಲ ಒಂದು ಸರಳ ಬಹುಮತ ಇದ್ದರೆ ಸಾಕಾಗಿದೆ. ಆದರೆ ಪದೇ ಪದೇ ಆ ಒಂದು ಅಸ್ತ್ರವನ್ನು ಉಪಯೋಗಿಸಿ ಅಸ್ಥಿರತೆಯನ್ನು ತರಬಾರದು ಅಲ್ಲಿರತಕ್ಕಂಥ ಆಡಳಿತದಲ್ಲಿ ಎನ್ನುವ ಕಾರಣಕ್ಕಾಗಿಯೇ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅವಿಶ್ವಾಸ ನಿರ್ಣಯವನ್ನು ತರುವಾಗ ಕನಿಷ್ಟ ಒಂದು ವರ್ಷದ ಅವಧಿ ಆಗಿರಬಹುದು, ಅವರು ಚುನಾಯಿತರಾದ ಒಂದು ವರ್ಷದೊಳಗಾಗಿ ತರುವುದಕ್ಕೆ ಸಾಧ್ಯವಿಲ್ಲ ಅಥವಾ ಅವಿಶ್ವಾಸ ನಿರ್ಣಯ ಬಿದ್ದು ಹೋದ ಮೇಲೆ ಮತ್ತು ಒಂದು ವರ್ಷದೊಳಗಾಗಿ ತರಬಾರದು ಎನ್ನುವಂತಾದ್ದು, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗೆ ಸಂಬಂಧಪಟ್ಟಂತೆ ಅಲ್ಲಿ ಒಂದು ಸ್ಥಿರತೆಯನ್ನು ತರಲಿಕ್ಕೆ ಆಡಳಿತದಲ್ಲಿ ಒಂದು ಭದ್ರತೆಯನ್ನು ತರಲಿಕ್ಕೆ 6 ತಿಂಗಳವರೆಗೆ ಎನ್ನತಕ್ಕಂಥಾದ್ದನ್ನು ಇದರಲ್ಲಿ ಸೇರಿಸಿದ್ದೇವೆ. ಏಕೆಂದರೆ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಇರುವಂತಹ ಈ ಪ್ರಜಾಪ್ರಭುತ್ವದ ಸ್ವಯಂ ಆಡಳಿತಾತ್ಮಕ ಘಟಕಗಳು ಏನು ಇವೆ ಇವು ಅಸ್ಥಿರತೆಗೆ ಒಳಪಡಬಾರದು ಅಥವಾ ಯಾವುದಾದರೂ ಒಂದು ಗುಂಪಿಗೆ ಒಳಪಡಬಾರದು ಎನ್ನುವ ಉದ್ದೇಶದಿಂದ ಕೂಡ ಇದರಲ್ಲಿ ನಾವು ಅಳವಡಿಸಿದ್ದೇವೆ.

4.40 ಪಿ.ಎಂ

ನೀರು ಸರಬರಾಜು ಮತ್ತು ನೈರ್ಮಲ್ಯದ ಯೋಜನೆಗಳಿಗಿಂತ, ನಿರ್ವಹಣೆಗೆ ಸಮಿತಿಗಳನ್ನು ರಚಿಸುವಾಗ ಇದರಲ್ಲಿ ಒಂದು ವಿಧೇಯಕದಲ್ಲಿ ಬರೀ ನಮ್ಮ ಗ್ರಾಮಪಂಚಾಯಿತಿ ಸದಸ್ಯರಿಗೆ ಸಂಬಂಧಪಟ್ಟಂತೆ ಮಾತ್ರ ಒಂದು ಸಮಿತಿಯನ್ನು ರಚಿಸಬಹುದು. ಆದರೆ ಈ ಒಂದು ನೀರು ಸರಬರಾಜು ಯೋಜನೆಗೆ ಇಡಿ ಒಂದು

ಗ್ರಾಮ ಸಮುಚ್ಚಯವನ್ನು ತೆಗೆದುಕೊಂಡು, ರಾಜೀವ್ ಗಾಂಧಿ ಟೆಕ್ನಿಕಲ್ ಮಿಷನ್ ಎನ್ನುವುದರ ಅಥವಾ ಒಂದು ಹತ್ತಾರು ಹಳ್ಳಿಗಳನ್ನು ಸೇರಿಸಿ, ಒಂದು ಕುಡಿಯುವ ನೀರಿನ ಯೋಜನೆಯನ್ನು ಮಾಡಿದಂಥ ಸಂದರ್ಭದಲ್ಲಿ, ಅದರ ನಿರ್ವಹಣೆ ಮಾಡಿದಂಥ ಸಂದರ್ಭದಲ್ಲಿ ತಂತ್ರಜ್ಞಾನವನ್ನು ಹೊಂದಿದವರು ಬೇಕಾಗುತ್ತದೆ. ಅದಕ್ಕೆ ಅವರ ಸಲಹೆ ಮತ್ತು ಸಹಕಾರ ಬೇಕಾಗುತ್ತದೆ. ಈ ಕಾರಣಕ್ಕಾಗಿ, ಆ ಗ್ರಾಮಗಳಲ್ಲಿ ಪರಿಣಿತರಿದ್ದರೆ ಅವರ ನಿರ್ವಹಣೆ ವಿಚಾರದಲ್ಲಿ ಆ ಪರಿಣಿತರನ್ನು ಸೇರಿಸಿ ಒಂದು ವಿಶೇಷ ಸಮಿತಿಯನ್ನು ಮಾಡಲಿಕ್ಕೆ ಗ್ರಾಮಪಂಚಾಯಿತಿಗೆ ಅಧಿಕಾರ ಇದೆ ಎನ್ನತಕ್ಕಂಥದ್ದೇ ಈ ಉದ್ದೇಶಿತ ತಿದ್ದುಪಡಿಯ ಕಾರಣ. ಸನ್ಮಾನ್ಯ ಅಧ್ಯಕ್ಷರೆ, ಇದರಲ್ಲಿ ಅವರಿಗೆ ಹೆಚ್ಚಿನ ಅಧಿಕಾರವೇನೂ ಇರುವುದಿಲ್ಲ. ಒಂದು ವಿಶೇಷ ಸಂದರ್ಭ ಬಂದಾಗ ಗ್ರಾಮದ ಹಿತದೃಷ್ಟಿಯಿಂದ ಮತ್ತು ಅದರ ನಿರ್ವಹಣೆಯ ಹಿತದೃಷ್ಟಿಯಿಂದ ಒಂದು ಸ್ಥಾಯಿ ಸಮಿತಿಯ ತರಹದಲ್ಲಿ ವಿಶೇಷ ಸಮಿತಿಯನ್ನು ರಚನೆ ಮಾಡತಕ್ಕ ಅಧಿಕಾರವನ್ನು ನಾವು ಕೊಟ್ಟಿದ್ದೇವೆ; ಈಗಿರತಕ್ಕಂಥ ನಮ್ಮ ಸಾಮಾಜಿಕ ನ್ಯಾಯ ಸಮಿತಿ ಏನಿದೆ, ಇದರಲ್ಲಿ ಪರಿಶಿಷ್ಟಪಂಗಡಕ್ಕೆ ಸೇರಿದ ಒಬ್ಬ ಮಹಿಳೆ ಇರಬೇಕೆಂದು ಇದೆ. ಆದರೆ ಇದು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲಿ ಇಲ್ಲ. ಆದುದರಿಂದ ಸಧ್ಯದಲ್ಲಿ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲಿರುವ ಸಾಮಾಜಿಕ ನ್ಯಾಯ ಸಮಿತಿಯಲ್ಲಿ ಕಡ್ಡಾಯವಾಗಿ ಒಬ್ಬ ಮಹಿಳೆ ಮತ್ತು ಕಡ್ಡಾಯವಾಗಿ ಪರಿಶಿಷ್ಟ ಪಂಗಡ ಮತ್ತು ವರ್ಗಕ್ಕೆ ಸೇರಿದ ಒಬ್ಬ ಸದಸ್ಯ ಇರಲೇಬೇಕೆಂಬ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಐದು ಇದ್ದಂತಹ ಸದಸ್ಯರ ಸಂಖ್ಯೆಯನ್ನು ಏಳು ಮಾಡಿದ್ದೇವೆ, ಇದಕ್ಕೂ ಸಹ ನನ್ನ ಶಾಸಕ ಮಿತ್ರರು ಹಾಗೂ ಬಿಜೆಪಿ ಮಿತ್ರರು, ನಿಮಗೆ ಬಹುಮತ ಇದೆ ಎನ್ನುವ ಕಾರಣಕ್ಕಾಗಿ ನಿಮ್ಮ ಸಮಿತಿಯಲ್ಲಿ ಎಲ್ಲರನ್ನೂ ಸೇರಿಸಿಕೊಂಡು ಬಿಟ್ಟಿದ್ದೀರಿ, ಅಲ್ಲಿ ವಿರೋಧ ಪಕ್ಷದವರಿಗೂ ಅವಕಾಶ ಇರಬೇಕು ಎಂದು ಹೇಳಿದ್ದಾರೆ, ಮಾನ್ಯ ವಿರೋಧ ಪಕ್ಷದ ನಾಯಕರು ಇನ್ನೂ ಸ್ವಲ್ಪ ದೂರಹೋಗಿ ಹೇಳಿದರು ಸಿಂಗಲ್ ಟ್ರಾನ್‌ಫರ್‌ಬಲ್ ಓಟ್ ಏನಾದರೂ ಮಾಡಲಿಕ್ಕೆ ಸಾಧ್ಯವಿದ್ದರೆ ಮಾಡಿ, ಅಥವಾ ಅವರಿಗೆ ಅಷ್ಟು ಕಡ್ಡಾಯವಾಗಿ ಕೊಡಬೇಕು ಎಂದು ಇದ್ದರೆ ಅದನ್ನು ದೂರ ಮಾಡಿಕೊಂಡು ಹೋಗಿ ಅಥವಾ ಅದನ್ನು ಸಂಕೀರ್ಣವಾಗಿ ಮಾಡುವುದಕ್ಕಿಂತಲೂ ಹೆಚ್ಚಾಗಿ ಐದು ಇರುವುದನ್ನು ಏಳು ಮಾಡುವುದರಿಂದ ಎಲ್ಲರನ್ನೂ ಸದಸ್ಯರನ್ನಾಗಿ ಸೇರಿಸಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ ಎನ್ನುವ ಕಾರಣಕ್ಕಾಗಿಯೇ ಐದು ಇದ್ದ ಸದಸ್ಯರ ಸಂಖ್ಯೆಯನ್ನು ಏಳಕ್ಕೆ ಏರಿಸಿದ್ದೇವೆ. ಉಪಾಧ್ಯಕ್ಷರಿಗೆ ಅಧ್ಯಕ್ಷರು ಇಲ್ಲದಂತಹ ಸಮಯದಲ್ಲಿ ಕರ್ತವ್ಯ ನಿರ್ವಹಣೆ ಎಂದು ಮಾತ್ರ ಹೇಳಿದ್ದೇವೆ. ನಮಗೆ ಎಲ್ಲಾ ಸೌಲಭ್ಯಗಳನ್ನು ಕೊಟ್ಟಿದ್ದೀರಿ, ಆದ್ದರಿಂದ ನಮಗೆ ಜನರಲ್ ಸ್ಟಾಂಡಿಂಗ್ ಕಮಿಟಿ ಏನಿದೆ, ಸಾಮಾನ್ಯ ಸ್ಥಾಯಿ ಕಮಿಟಿ ಏನಿದೆ ಅದರ ಅಧ್ಯಕ್ಷತೆಯನ್ನಾದರೂ ಕೊಟ್ಟರೆ ಕರ್ತವ್ಯದ ನಿರ್ವಹಣೆಗೆ ಅನುಕೂಲವಾಗುತ್ತದೆ ಎಂದು ಹೇಳಿ ಈಗಿರತಕ್ಕ ಅಧ್ಯಕ್ಷ, ಎಂದರೆ ಸಾಮಾನ್ಯ ಸ್ಥಾಯಿ ಕಮಿಟಿಯ ಅಧ್ಯಕ್ಷರಿಗೆ ಬದಲು ಈ ಉಪಾಧ್ಯಕ್ಷರನ್ನು ಅದರ ಅಧ್ಯಕ್ಷರನ್ನಾಗಿ ಮಾಡಿ, ಅವರನ್ನು ಹೆಚ್ಚು ದುಡಿಸಿಕೊಳ್ಳಲಿಕ್ಕೆ ಮತ್ತು ಅವರ ಪ್ರತಿಭೆಯನ್ನು

ಉಪಯೋಗ ಮಾಡಿಕೊಳ್ಳುವುದಕ್ಕೆ ಇದರಲ್ಲಿ ಅವಕಾಶವನ್ನು ತಂದು ಕೊಟ್ಟಿದ್ದೇವೆ. ಈಗ ಕಾನೂನು ಬಾಹಿರವಾಗಿ ಠರಾವ್‌ಗಳನ್ನು ಗ್ರಾಮಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳು ತೆಗೆದುಕೊಂಡಂಥ ಸಂದರ್ಭದಲ್ಲಿ ಅಲ್ಲಿಯ ಕಾರ್ಯನಿರ್ವಾಹಕ ಅಧಿಕಾರಿ ಅದಕ್ಕೆ ತಡೆಹಿಡಿಯಬಹುದು. ಇದಕ್ಕೆ ವ್ಯಾಪಕವಾದಂಥ ಟೀಕೆಗಳು, ಇದು ಒಂದು ಸರ್ಕಾರಿ ಇದ್ದಂತೆ ಸ್ವಯಂ ಆಡಳಿತಾತ್ಮಕ ಘಟಕ ಇದ್ದಾಗ, ಜನಪ್ರತಿನಿಧಿಗಳು ಮಾಡಿರತಕ್ಕಂಥ ಒಂದು ತೀರ್ಮಾನವನ್ನು ಇವರು ತಡೆಹಿಡಿಯತಕ್ಕಂಥ ಅಧಿಕಾರವನ್ನು ಒಬ್ಬ ಅಧಿಕಾರಿಗೆ ಏಕೆ ಕೊಡಬೇಕು ಎಂದು ಒಂದು ವ್ಯಾಪಕವಾದ ಟೀಕೆ ಇರುವುದರಿಂದ ಆ ಗ್ರಾಮಪಂಚಾಯಿತಿಯ ನಿರ್ಣಯಗಳು ಕಾನೂನು ಬಾಹಿರ ಎಂದು ಕಂಡುಬಂದಲ್ಲಿ ತಾಲ್ಲೂಕು ಪಂಚಾಯಿತಿಯವರ ವರದಿಯನ್ನು ತರಿಸಿಕೊಂಡು ಜಿಲ್ಲಾ ಪಂಚಾಯಿತಿಯವರು ಮಾಡತಕ್ಕಂಥದ್ದು, ಜಿಲ್ಲಾ ಪಂಚಾಯಿತಿಯವರು ಮಾಡಿದಂಥ ಠರಾವ್ ಕಾನೂನು ಬಾಹಿರ ಎಂದು ಕಂಡು ಬಂದರೆ ಅವರ ವರದಿಯನ್ನು ತರಿಸಿಕೊಂಡು ಸರ್ಕಾರದವರು ನಿರ್ಣಯ ಕೈಗೊಳ್ಳಬಹುದು ಎಂದು ಹೇಳಿ, ಇದರ ಅಧ್ಯಕ್ಷರುಗಳಿಗೆ ಈ ಅಧಿಕಾರವನ್ನು ಕೊಡತಕ್ಕಂಥ ಅಧಿಕಾರವನ್ನು ತಿದ್ದುಪಡಿಯಲ್ಲಿ ನಾವು ತಂದಿದ್ದೇವೆ. ಮತ್ತೆ ಪ್ರತಿ ಮೂರು ತಿಂಗಳಿಗೊಮ್ಮೆ ಕನಿಷ್ಟಪಕ್ಷ ಒಂದು ಪಂಚಾಯತ್ ಪರಿಷತ್ ಮಾಡಿ ಎಲ್ಲಾ ಜಿಲ್ಲಾ ಪಂಚಾಯತ್ ಅಧ್ಯಕ್ಷರುಗಳು ಅದರ ಸದಸ್ಯರಾಗಿ, ಮತ್ತು ಮಾನ್ಯ ಮುಖ್ಯಮಂತ್ರಿಗಳು ಅದರ ಅಧ್ಯಕ್ಷರಾಗಿರುವುದು ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು ಅದರ ಉಪಾಧ್ಯಕ್ಷರಾಗಿರುವಂತೆ ಒಂದು ಸಮಿತಿಯನ್ನು ರಚನೆ ಮಾಡುತ್ತೇವೆ. ಅದರಲ್ಲಿ ಐದು ಸಚಿವರನ್ನು ಸದಸ್ಯರಾಗಿ ಮುಖ್ಯಮಂತ್ರಿಗಳು ನೇಮಕ ಮಾಡತಕ್ಕ ಒಂದು ತಿದ್ದುಪಡಿಯನ್ನೂ ಸಹ ತಂದಿದ್ದೇವೆ. ಇದು ಹಿಂದೆ 87ರ ಕಾನೂನಿನಲ್ಲಿ ಸಹ ಇದ್ದು, ನಡುವೆ ಕೈಬಿಟ್ಟು ಹೋಗಿದ್ದರಿಂದ ಮತ್ತೆ ಅದನ್ನು ಮಾಡಿದ್ದೇವೆ. ಈ ಜಿಲ್ಲಾ ಯೋಜನಾ ಸಮಿತಿಗಳಿಗೆ ಯಾರು ಅಧ್ಯಕ್ಷರಾಗಬೇಕು ಎನ್ನುವ ವಿಚಾರದಲ್ಲಿ ಬಹಳ ಭಿನ್ನಾಭಿಪ್ರಾಯಗಳು ಇವೆ. ಕೆಲವರು ಉಸ್ತುವಾರಿ ಮಂತ್ರಿಗಳಾಬೇಕು ಎಂದು, ಕೆಲವರು ಅಲ್ಲಿಯ ಜನರನ್ನು ಆಯ್ಕೆ ಮಾಡಬೇಕೆಂದು ಹೇಳಿದ್ದಾರೆ. ನಾವು ತಾಲ್ಲೂಕು ಪಂಚಾಯಿತಿಯ ಚುನಾಯಿತ ಸದಸ್ಯರಲ್ಲದೆ, ಜಿಲ್ಲಾ ಪಂಚಾಯತ್ ಅಧ್ಯಕ್ಷರು ಅದರ ಅಧ್ಯಕ್ಷರಾಗಬೇಕು ಎನ್ನುವುದನ್ನು ನಾವು ಮಾಡಿದ್ದೇವೆ, ಈಗ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರೇ ಜಿಲ್ಲಾ ಯೋಜನಾ ಸಮಿತಿಯ ಅಧ್ಯಕ್ಷರಾಗಬೇಕೆಂದು, ಮತ್ತು ಅಲ್ಲಿಯ ಕೇಂದ್ರ ಸ್ಥಾನದಲ್ಲಿರತಕ್ಕ ನಗರಪಾಲಿಕೆಯಾಗಬಹುದು, ನಗರಸಭೆಯಾಗಬಹುದು ಅದರ ಅಧ್ಯಕ್ಷರು ಯಾರು ಇರುತ್ತಾರೆ ಅವರು ಉಪಾಧ್ಯಕ್ಷರಾಗಬೇಕೆಂದು ನಾವು ವ್ಯಾಪಕವಾದಂಥ ತಿದ್ದುಪಡಿಯನ್ನು ತಂದಿದ್ದೇವೆ. ಇವು ಯಾವುವೂ ವಿವಾದಾತ್ಮಕವಾಗಿರತಕ್ಕ ತಿದ್ದುಪಡಿಗಳು ಅಲ್ಲ, ಅನೇಕ ಸಂದರ್ಭಗಳಲ್ಲಿ, ಅನೇಕ ಜನ, ಈ ಕಾನೂನು ಬಹಳ ವ್ಯಾಪಕವಾಗಿ ಅಧಿಕಾರದ ವಿಕೇಂದ್ರಿಕರಣದ ನಿಜವಾದಂಥ ಹೆಜ್ಜೆ ಇಡಬೇಕು ಎನ್ನುವ ಕಾರಣಕ್ಕಾಗಿ ಮಾಡಿದಂಥ ಸಲಹೆ ಸೂಚನೆಗಳನ್ನು ನಾವು ಇದಕ್ಕೆಲ್ಲಾ ಸೇರಿಸುವಂತಹ ಪ್ರಯತ್ನವನ್ನು ನಾವು

ಮಾಡಿದ್ದೇವೆ. ಇದರಲ್ಲಿ ಮುಖ್ಯವಾಗಿ ನ್ಯಾಯ ಪಂಚಾಯಿತಿಯನ್ನು ತರಬೇಕೆಂದು ಅನೇಕ ಸಂದರ್ಭದಲ್ಲಿ ನಾವು ಪ್ರಕಟಣೆಯನ್ನು ಮಾಡಿದ್ದೇವೆ. ಈ ಪರಿಣಿತ ಸಮಿತಿಯವರು ಮತ್ತು ನಾಯಕ್ ಸಮಿತಿಯವರೂ ಸಹ ನ್ಯಾಯ ಪಂಚಾಯಿತಿಯನ್ನು ತರಬೇಕೆನ್ನುವ ಮಾತನ್ನು ಹೇಳಿದ್ದಾರೆ. ನ್ಯಾಯ ಪಂಚಾಯಿತಿಯ ತಿದ್ದುಪಡಿ ಆದ ಮೇಲೆ, ಅದೂ ಕೂಡ ರಾಷ್ಟ್ರಪತಿಗಳ ಅಂಗೀಕಾರಕ್ಕೆ ಹೋಗಬೇಕಾಗುತ್ತದೆ. ಈ ತಿದ್ದುಪಡಿಗಳಾದರೆ ಅದನ್ನು ನಮ್ಮ ರಾಜ್ಯಪಾಲರ ಅಂಗೀಕಾರಕ್ಕೆ ಕಳುಹಿಸಿ ಕೊಡಬಹುದು. ಈ ಎರಡನ್ನು ಒಟ್ಟಿಗೆ.ಕಳುಹಿಸಿ ಈ ವ್ಯಾಪಕವಾದಂಥ ತಿದ್ದುಪಡಿಗಳು, ಅಥವಾ ಬೇರೆ ಬೇರೆ ಕಾರಣಗಳಿಗಾಗಿ ಈ ನ್ಯಾಯಪಂಚಾಯಿತಿಗಳು ನಿಂತು ಹೋದರೆ, ಅಥವಾ ರಾಷ್ಟ್ರಪತಿಗಳ ಅಂಕಿತ ಆಗುವುದಕ್ಕೆ ಸ್ವಲ್ಪ ಸಮಯ ಹಿಡಿದರೆ, ಇದರಿಂದ ತೊಂದರೆ ಆಗಬಹುದು ಎನ್ನುವ ಕಾರಣಕ್ಕಾಗಿಯೇ ನಾವು ಅದನ್ನು ಪ್ರತ್ಯೇಕವಾಗಿ ನಾಳೆ ನಡೆಯತಕ್ಕ ಸಚಿವ ಸಂಪುಟ ಸಭೆಯಲ್ಲಿ ಅದು 12 ಅಥವಾ 13ನೇ ತಾರೀಖು ನಡೆಯುತ್ತದೆ, ಆ ದಿವಸ ಸಚಿವ ಸಂಪುಟದ ಒಪ್ಪಿಗೆಯನ್ನು ಪಡೆದ ಮೇಲೆ ಮತ್ತೆ ಶಾಸನ ಸಭೆಯ ಮುಂದೆ ನ್ಯಾಯ ಪಂಚಾಯಿತಿಯ ತಿದ್ದುಪಡಿಯನ್ನು ತರುತ್ತಿದ್ದೇನೆ. ಸನ್ಮಾನ್ಯ ಅಧ್ಯಕ್ಷರೆ, ಈ ಎಲ್ಲಾ ಜನಗಳು ಒಪ್ಪಿಕೊಂಡಿರತಕ್ಕ ಈ ವಿಚಾರಗಳ ಬಗ್ಗೆ, ಕ್ರಾಂತಿಕಾರಕ ಬದಲಾವಣೆಯ ಒಂದು ಹೊಸ ಹೆಜ್ಜೆಯನ್ನು ಮತ್ತು 1987ರಲ್ಲಿ ದಿವಂಗತ ನಜೀರ್ ಸಾಬ್‌ರವರು ಮಾಡಿದಂಥ ಒಂದು ಕ್ರಾಂತಿಕಾರಕ ಬದಲಾವಣೆಯ ಅನುಷ್ಠಾನದಲ್ಲಿ ತೆಗೆದುಕೊಂಡಂತಹ ಅನುಭವಗಳ ಹಿನ್ನೆಲೆಯಲ್ಲಿ ತಂದಿರತಕ್ಕ ತಿದ್ದುಪಡಿಗಳಿಗೆ ಸದನದಲ್ಲಿ ಒಪ್ಪಿಗೆ ಕೊಡಬೇಕೆಂದು ತಮ್ಮ ಮೂಲಕ ಅವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

+ ಶ್ರೀ ಎಂ.ವೈ.ಘೋರ್ಪಡೆ (ಸಂಡೂರು): ಸನ್ಮಾನ್ಯ ಅಧ್ಯಕ್ಷರೆ, ಇದು ನಮ್ಮ 1993ರ ಆಕ್ಟ್‌ಗೆ ಮೂರನೇ ಬಾರಿ ತಿದ್ದುಪಡಿಯನ್ನು ತರುತ್ತಿದ್ದೇವೆ, ಇದರ ಬಗ್ಗೆ ನಾನು ಹೇಳಿದ್ದೆ. ಏನೆಂದರೆ 1992ರ ಆಕ್ಟ್ ಏನಿದೆ ಅದು ಪಯೋನಿಯರಿಂಗ್ ಆಕ್ಟ್ ಅನ್ನುವ ಮಾತನ್ನು ಹೇಳಿದ್ದಾರೆ, ಅದಕ್ಕಾಗಿ ನನ್ನ ಧನ್ಯವಾದಗಳು. ಏಕೆಂದರೆ 1993 ಆಕ್ಟ್ ಯಾರೇ ಮಾಡಿರಲಿ ಇದು ಕರ್ನಾಟಕ ಗೌರವವನ್ನು ಎತ್ತಿ ಹಿಡಿಯುವ ಒಂದು ಪ್ರಯತ್ನ. ಅವರು ಪಯೋನಿಯರಿಂಗ್ ಎಂದು ಹೇಳಿದ್ದನ್ನು ನಾನು ಸ್ವಾಗತಿಸುತ್ತೇನೆ. ಈಗ ಸಂಬಂಧಪಟ್ಟ ವಿಷಯಗಳ ಬಗ್ಗೆ ಮಾತನಾಡುವುದಕ್ಕೆ ಮುಂಚೆ ನೀವೇನು ಹಲವಾರು ತಿದ್ದುಪಡಿಗಳನ್ನು ತಂದಿದ್ದೀರಿ, ಅದರಲ್ಲಿ ಎಷ್ಟೋ ಕಾನ್ಸಿಕ್ವೆನ್‌ಷಿಯಲ್ ಅಮೆಂಡ್‌ಮೆಂಟ್ಸ್ ಇದೆ. ಎಷ್ಟೋ ವಿಷಯಗಳು ಅದರಲ್ಲಿ ಸೇರಿಲ್ಲ. ಅಮೆಂಡ್‌ಮೆಂಟ್ಸ್ ನಂಬರ್ ಇದ್ದಷ್ಟು ಅದರಲ್ಲಿ ಹೊಸ ವಿಷಯಗಳು ಸೇರಲಿಕ್ಕೆ ಸಾಧ್ಯವಿಲ್ಲ. ಆದರೆ ಒಂದು ಮಾತನ್ನು ನಾನು ಸ್ಪಷ್ಟವಾಗಿ ಹೇಳಲಿಕ್ಕೆ ಇಷ್ಟಪಡುತ್ತೇನೆ, ಕರ್ನಾಟಕದ 1993ರ ಆಕ್ಟ್‌ಗೆ ನಮ್ಮ ಯಾವುದೇ ತಿದ್ದುಪಡಿಯಿಂದ ಧಕ್ಕೆ ಬಂದಿಲ್ಲ ಎಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇಷ್ಟು ಹೇಳಿದ ಮೇಲೆ, ಈ ಮಾತನ್ನು ಹೇಳುವುದಕ್ಕೆ ಕಾರಣವನ್ನೂ ಸಹಿತ ಹೇಳಬೇಕಾಗುತ್ತದೆ 1993ರ ಆಕ್ಟ್‌ನಲ್ಲಿ ಇರತಕ್ಕಂಥ ಮುಖ್ಯಾಂಶಗಳು ಯಾವುವು? ಒಂದು ತ್ರೀ-ಟೈಯರ್

ಸಿಸ್ಟಂ ಮೂರು ಹಂತದಲ್ಲಿ ಎಲೆಕ್ಟೆಡ್ ಬಾಡಿಗಳು ಇರತಕ್ಕಂಥದ್ದು; ಅದಕ್ಕೆ ಧಕ್ಕೆ ಬರಲಿಕ್ಕೆ ಸಾಧ್ಯವಿಲ್ಲ. ನೀವು ಅಂತಹ ಪ್ರಯತ್ನವನ್ನು ಮಾಡಲಿಲ್ಲ. ಮಾಡುವುದಕ್ಕೂ ಆಗುವುದಿಲ್ಲ. ಮತ್ತೆ ತ್ರೀ-ಬಾಡೀಸ್‌ಗಳ ಡ್ಯೂಟೀಸ್ ಏನು? ಇದಕ್ಕೂ ಕೂಡ ಕಾನ್‌ಸ್ಟಿಟ್ಯೂಷನಲ್ ಅಮೆಂಡ್‌ಮೆಂಟ್ ಮಾಡಿ ಏನು ಪಟ್ಟಿಯನ್ನು ಮಾಡಿದ್ದರು, ಅದನ್ನು ನಾವು 1-2-3 ಎಂದು ಷೆಡ್ಯೂಲ್ ಮಾಡಿ, 1993ರ ಆ್ಯಕ್ಟ್‌ನಲ್ಲಿ ನಾವು ಸೇರಿಸಿದ್ದೇವೆ. ಅದಕ್ಕೂ ಸಹ ಈಗ ಮಾಡಿರತಕ್ಕ ತಿದ್ದುಪಡಿಯಿಂದ ಯಾವುದೇ ಧಕ್ಕೆ ಬಂದಿಲ್ಲ. ಬರಲಿಕ್ಕೂ ಸಾಧ್ಯವಿಲ್ಲ. ಒಂದೇ ಒಂದು ಅಮೆಂಡ್‌ಮೆಂಟ್ ನೀವು ಮಾಡಿರುವುದು ಏನು ಎಂದರೆ Performance of any function specified in the schedule and performance of such functions shall be according to the guidelines prescribed by the Government. ನಾನು ಇದನ್ನು ಪದೇ ಪದೇ ಹೇಳುತ್ತಿದ್ದೆ, ಏಕೆಂದರೆ ಕೇಂದ್ರ ಸರ್ಕಾರವೇ ಆಗಲಿ ರಾಜ್ಯ ಸರ್ಕಾರವೇ ಆಗಲಿ ಈ ಒಂದು ಯೋಜನೆಯನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಕೊಟ್ಟಾಗ ನಿಮ್ಮ ಗೈಡ್‌ಲೈನ್ಸ್ ಪ್ರಕಾರವೇ ಅವರು ಅದನ್ನು ಉಪಯೋಗಿಸಬೇಕು. ಅದರಲ್ಲಿ ನಾವು ಸ್ವತಂತ್ರ್ಯವಾಗಿ ಮಾಡುತ್ತೇವೆ ಎಂದು ಹೇಳುವುದಕ್ಕೆ ಅವಕಾಶ ಇಲ್ಲ. ಏಕೆಂದರೆ ಮೇಲ್ಮಟ್ಟದಿಂದ ರಾಜ್ಯಮಟ್ಟದಿಂದ, ಕೇಂದ್ರ ಮಟ್ಟದಿಂದ ಬಂದಿರತಕ್ಕ ಸ್ಕೀಮ್ಸ್ ಅನ್ನು ಅವರು ಗೈಡ್‌ಲೈನ್ಸ್ ಪ್ರಕಾರ ಮಾಡಬೇಕು. ಇದನ್ನು ಹಲವಾರು ಸಲ ನಾನು ವಾದ ಮಾಡಿದ್ದೇನೆ. ನೀವು ಅದೇ ಮಾತನ್ನು ಸ್ಪಷ್ಟವಾಗಿ ಬರೆದರೆ ನಾನು ಇಲ್ಲಿ ನಿಂತು ವಿರೋಧ ಮಾಡಲಿಕ್ಕೆ ಸಾಧ್ಯವಿಲ್ಲ. ಆಮೇಲೆ ರಿಸರ್ವೇಷನ್ಸ್, ಇದೂ ಕೂಡ 1993ರ ಆ್ಯಕ್ಟ್‌ನಲ್ಲಿ ಮೂಲಭೂತವಾದಂಥ ಬದಲಾವಣೆ. ಎಸ್.ಸಿ., ಎಸ್.ಟಿ, ರಿಸರ್ವೇಷನ್, ಹೆಣ್ಣು ಮಕ್ಕಳಿಗೆ ರಿಸರ್ವೇಷನ್ಸ್ ಅಷ್ಟೇ ಅಲ್ಲ, ಓ.ಬಿ.ಸಿ. ಅಂದರೆ ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ನಾವು ಕರ್ನಾಟಕದಲ್ಲಿ ರಿಸರ್ವೇಷನ್ ಕೊಟ್ಟಿದ್ದೇವೆ. ಅದರಲ್ಲೂ ಓ.ಬಿ.ಸಿ. ರಿಸರ್ವೇಷನ್ ಮಾಡಿದ ಶ್ರೇಯಸ್ಸು ಪ್ರಥಮವಾಗಿ ಕರ್ನಾಟಕಕ್ಕೆ ಬರುತ್ತದೆ. ಅದರಲ್ಲೂ ಕೂಡ ಮಾನ್ಯ ಮಂತ್ರಿಯವರು ಮಂಡಿಸಿದ ಅಮೆಂಡ್‌ಮೆಂಟನಲ್ಲಿ ಯಾವ ಬದಲಾವಣೆಯೂ ಇಲ್ಲ. ಆಮೇಲೆ ಸ್ಟೇಟ್ ಎಲೆಕ್ಷನ್ ಕಮಿಷನ್, ಫೈನಾನ್ಸ್ ಕಮಿಷನ್, ಡಿಸ್ಟ್ರಿಕ್ಟ್ ಪ್ಲಾನಿಂಗ್ ಕಮಿಟಿ, ಈ ಮೂಲಭೂತವಾದ ಅಂಶಗಳು ನಮ್ಮ 1983 ಆ್ಯಕ್ಟನಲ್ಲಿ ಇದೆ. ಇದಕ್ಕೂ ಕೂಡಾ ಯಾವ ರೀತಿಯಿಂದಲೂ ಧಕ್ಕೆ ಬಂದಿಲ್ಲ. ಸ್ಟೇಟ್ ಎಲೆಕ್ಷನ್ ಕಮಿಷನ್‌ಗೆ ಇನ್ನಷ್ಟು ಜವಾಬ್ದಾರಿ ಕೊಟ್ಟಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದರು. ಅದನ್ನು ಸ್ವಾಗತ ಮಾಡುತ್ತೇನೆ, ಏಕೆಂದರೆ, ಅದು ಅಡ್ಮಿನಿಸ್ಟ್ರೇಟಿವ್ ಒತ್ತಡಕ್ಕೆ ಒಳಗಾಗದೆ ನ್ಯಾಯಸಮ್ಮತವಾಗಿ ಮಾಡಲಿಕ್ಕೆ ಸಾಧ್ಯವೆಂದು ನಾನು ಒಪ್ಪುತ್ತೇನೆ. ಏಕೆಂದರೆ, ಸ್ಟೇಟ್ ಎಲೆಕ್ಷನ್ ಕಮಿಷನ್ ಕೆಲಸವನ್ನು ಏನು ಜಾಸ್ತಿ ಮಾಡಿದ್ದೀರಿ, ಅದರಿಂದ ನಮ್ಮ 93 ಆ್ಯಕ್ಟ್‌ನ ಸ್ಪಿರಿಟ್ ಏನಿದೆ, ಅದನ್ನು ಬಲಪಡಿಸಿದಂತೆ ಆಯಿತೇ ಹೊರತು ಅದಕ್ಕೆ ವಿರೋಧವಾಗಿ ಇದು ಹೋಗಿಲ್ಲ. ನಾನೂ ಸಹ ಮಂತ್ರಿಯಾಗಿ, ಆ ಸಂದರ್ಭದಲ್ಲಿ ಎಷ್ಟು ಒತ್ತಡಗಳು ಬರುತ್ತವೆ ಎಂಬುದನ್ನು

ಅನುಭವಿಸಿದ್ದೇನೆ. ಅದೇ ರೀತಿ ಮಾನ್ಯ ಪ್ರಕಾಶ್‌ರವರೂ ಅನುಭವಿಸಿದ್ದಾರೆ. ಆ ಕಾರಣದಿಂದ ಎಲೆಕ್ಷನ್ ಕಮಿಷನ್ ಕೆಲಸದ ವ್ಯಾಪ್ತಿಯನ್ನು ಜಾಸ್ತಿ ಮಾಡಿದ್ದನ್ನು ನಾನು ಸ್ವಾಗತ ಮಾಡುತ್ತೇನೆ. ಈಗ ಪವರ್ಸ್ ಅಂಡ್ ಡ್ಯೂಟೀಸ್, ಇದೂ ಕೂಡ ಒಂದು ಮೂಲಭೂತವಾದಂಥ ಬದಲಾವಣೆ; ನಮ್ಮ ಪಂಚಾಯತ್ ರಾಜ್‌ದಲ್ಲಿ. ಕರ್ನಾಟಕ 93 ಆ್ಯಕ್ಟ್‌ನಲ್ಲಿ ಸೆಕ್ಷನ್ 193 'ಸಿ' ಜಡ್.ಪಿ.ಗೆ ಸಂಬಂಧಪಟ್ಟ ಹಾಗೆ, ಸೆಕ್ಷನ್ 152 'ಸಿ', ತಾಲ್ಲೂಕು ಪಂಚಾಯಿತಿಗೆ ಸಂಬಂಧಪಟ್ಟ ಹಾಗೆ, ಸೆಕ್ಷನ್ 62 'ಸಿ' ಗ್ರಾಮ ಪಂಚಾಯಿತಿಗೆ ಸಂಬಂಧಪಟ್ಟ ಹಾಗೆ ಏನಿದೆ, ಅದರಲ್ಲಿ ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಚುನಾಯಿತ ಸಂಸ್ಥೆ ಏನಿದೆ? ಅದು ಸಂಪೂರ್ಣವಾದಂಥ ಸೂಪರ್‌ವಿಷನ್ ಮತ್ತು ಕಂಟ್ರೋಲ್ ಅಧಿಕಾರಸ್ಥರ ಮೇಲೆ ಇರತಕ್ಕಂಥಾದ್ದು ಎಂದು ಇದೆ. ಇದು ಮೊದಲನೇ ಸಲ ಕರ್ನಾಟಕದಲ್ಲಿ ಇಷ್ಟು ಸ್ಪಷ್ಟವಾಗಿ, ಜನರಿಂದ ಆರಿಸಲ್ಪಟ್ಟ ಸಮಿತಿಗೆ ಅಧಿಕಾರಸ್ಥರ ಮೇಲೆ ಸಂಪೂರ್ಣವಾದ ಅಧಿಕಾರ ಇದೆಯೆಂದು ಹೇಳಿ ಈ ಹಿಂದೆ ಇಷ್ಟು ಸ್ಪಷ್ಟವಾಗಿ ಹೇಳಲಿಲ್ಲ. ಈ ಮಾತನ್ನು ಎಕ್ಸ್‌ಪರ್ಟ್ ಕಮಿಟಿಯವರೇ ಹೇಳಿದ್ದಾರೆ. ಇದಕ್ಕೂ ಈ ಅಮೆಂಡ್‌ಮೆಂಟ್‌ನಿಂದ ಯಾವ ರೀತಿಯಾದ ಧಕ್ಕೆ ಬಂದಿಲ್ಲ. Section 197(2)-the powers and duties of the Chief Executive Officer-it has remained the same.

"It shall be the duty of Chief Executive Officer to bring to the notice of the Zilla Panchayat or Taluka Panchayat any resolutions, orders or proposals if he considers as violative of law or rule etc."

The amendment now proposed only modifies to the extent that the Chief Executive Officer should render such advise to Zilla Panchayat or Taluka Panchayat through a written Note. ಅಂದರೆ, ಯಾವುದಾದರೂ ಒಂದು ಕಾನೂನಿಗೆ ವಿರೋಧವಾಗಿರತಕ್ಕಂಥ ಕೆಲಸ ಮಾಡಲಿಕ್ಕೆ ಹೊರಟರೆ, ಆಗ ಜಡ್.ಪಿ.ಅಧ್ಯಕ್ಷರಿಗೆ, ನೀವು ಇಂಥಾ ತಪ್ಪು ಮಾಡುತ್ತಿದ್ದೀರಿಂದು ಹೇಳುವಂಥ ಕರ್ತವ್ಯವನ್ನು ಚೀಫ್ ಎಕ್ಸಿಕ್ಯುಟಿವ್ ಆಫೀಸರ್‌ಗೆ ವಹಿಸಿರುವುದರಲ್ಲೂ ಸಹಾ ಈ ಅಮೆಂಡ್‌ಮೆಂಟ್‌ನಲ್ಲಿ ಯಾವುದೇ ಬದಲಾವಣೆ ಇಲ್ಲ. ಅದರಲ್ಲಿ ಒಂದು ಸಣ್ಣ ಬದಲಾವಣೆ ಮಾತ್ರ ಮಾಡಿದ್ದಾರೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ''ಅದನ್ನು ಟಿಪ್ಪಣಿ ಮಾಡುವಾಗ ಬರೆದು ಕೊಡಬೇಕು'' ಎಂದು ಇದೆ. ಅದರಲ್ಲಿ ತಪ್ಪೇನೂ ಇಲ್ಲ. ಅಂಥಾ ಪ್ರಸಂಗ ಬಂದರೆ ಗೌರ್ನಮೆಂಟ್ ಆಫೀಸರ್ ವಿಷಯ ತಿಳಿಸಬೇಕಾಗುತ್ತದೆ. ನಾವು ಮಾಡಿದ್ದಂಥ ಅಮೆಂಡ್‌ಮೆಂಟ್ ನಲ್ಲಿ 2 ತಿಂಗಳಿನಲ್ಲಿ ಸರ್ಕಾರ ತೀರ್ಮಾನ ಕೊಡಬೇಕೆಂದು ಇತ್ತು, ಈಗ ಅದನ್ನು 15 ದಿವಸ ಎಂದು ಮಾಡಿದ್ದಾರೆ. ಅಂದರೆ, ಏನಾದರೂ ಅಕ್ರಮ

ನಡೆದಾಗ ಸಂಬಂಧಪಟ್ಟ ಸಿ.ಇ.ಓ., ಅವರು ಸರ್ಕಾರಕ್ಕೆ ತಿಳಿಸಿದರೆ, ಸರ್ಕಾರದ ಪ್ರತಿಕ್ರಿಯೆಯನ್ನು 15 ದಿವಸಗಳೊಳಗೆ ತಿಳಿಸಬೇಕೆಂದು ಮಾಡಿದ್ದಾರೆ. ಇದನ್ನು ನಾನು ಅಪೋಸ್ ಮಾಡುವುದಿಲ್ಲ. ಆದರೆ, ನಮ್ಮ ಅಡ್ಮಿನಿಸ್ಟ್ರೇಷನ್ ಅಷ್ಟು ಚುರುಕಾಗಿ ನಡೆಯುತ್ತಿದೆಯೇ ಅಥವಾ ಇಲ್ಲವೇ ಎಂದು ಮಾನ್ಯ ಮಂತ್ರಿಗಳು ಯೋಚನೆ ಮಾಡಬೇಕು. ಏಕೆಂದರೆ, ಅಕಸ್ಮಾತ್ 15 ದಿವಸಗಳೊಳಗೆ ಗೌರ್ನಮೆಂಟಿನಿಂದ ತೀರ್ಮಾನ ಕೊಡಲಿಕ್ಕಾಗದೇ ಇದ್ದರೆ ಆವಾಗ ಮಾಡಿದ ತಪ್ಪನ್ನೇ ಮುಂದುವರಿಸಿಕೊಂಡು ಹೋಗುತ್ತಾರೆ. ಆ ಕಾರಣ, ನಾವು ಎರಡು ತಿಂಗಳು ಏನು ಮಾಡಿದ್ದೆವು, ಅದರಲ್ಲಿ ಏನೂ ತಪ್ಪು ಇರಲಿಲ್ಲವೆಂದು ನನಗನಿಸುತ್ತದೆ. 15 ದಿವಸಗಳೊಳಗೆ ಸರ್ಕಾರ ತೀರ್ಮಾನ ಮಾಡುವುದಾದರೆ ಆ ಬಗ್ಗೆ ಯಾರೂ ಆಕ್ಷೇಪಣೆ ಮಾಡುವುದಿಲ್ಲ. 2 ತಿಂಗಳು ಸಮಯ ಇದ್ದರೆ ಒಳ್ಳೆಯದು, ತಾವು ಬೇಕಾದರೆ 15 ದಿವಸಗಳಲ್ಲೇ ಬೇಕಾದರೆ ಉತ್ತರ ಕೊಡಿ, ಅಥವಾ ಹತ್ತೇ ದಿವಸಗಳಲ್ಲಿ ಬೇಕಾದರೂ ಕೊಡಿ. ಆದರೆ, ಕಾನೂನಿನಲ್ಲಿ 2 ತಿಂಗಳು ಟೈಮ್ ಇಟ್ಟುಕೊಳ್ಳುವುದು ಒಳ್ಳೆಯದು. ಈ ಸಲಹೆ ಸರ್ಕಾರಕ್ಕೆ ಹಿಡಿಸಿದರೆ, ಆ ಅಮೆಂಡ್‌ಮೆಂಟನ್ನು ಕೈ ಬಿಡಬಹುದು. ಇನ್ನು 7ನೇ ವಿಷಯ, ನಾಮಿನೇಷನ್‌ದ್ದು, 1983 ಆ್ಯಕ್ಟ್ ಪ್ರಕಾರ ಇಬ್ಬರನ್ನು ಬ್ಯಾಕ್‌ವರ್ಡ್ ಕ್ಲಾಸ್ ಹೆಸರಿನಲ್ಲಿ ನಾಮಿನೇಟ್ ಮಾಡಿ ಅವರಿಗೆ ವೋಟಿಂಗ್ ಪವರ್ಸ್ ಕೊಡಲಾಗಿತ್ತು. ಅಂದರೆ, ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಆರಿಸುವಾಗ ಆ ನಾಮಿನೇಟ್ ಆದಂಥ ಸದಸ್ಯರುಗಳು ಓಟು ಮಾಡಬಹುದಾಗಿತ್ತು. ಈ ವಿಷಯ ತಮಗೂ ಗೊತ್ತಿದೆ. ಇದರ ಬಗ್ಗೆ ಆ ಕಾಲದಲ್ಲೂ ಕೂಡಾ ನಾನು ತೀವ್ರವಾಗಿ ವಿರೋಧಮಾಡಿದ್ದೆ. ಇದು ಪ್ರಜಾಪ್ರಭುತ್ವದ ಕೊಲೆ ಮತ್ತು ವಿರುದ್ಧವಾದುದು, ಇದನ್ನು ಬದಲಾಯಿಸಬೇಕೆಂದು ಹೇಳಿದ್ದೆ. ಏಕೆಂದರೆ, ಇದರ ಪರಿಣಾಮವನ್ನು ನಾವೆಲ್ಲರೂ ಅನುಭವಿಸಿದ್ದೇವೆ. ಪಕ್ಷದ ರಾಜಕಾರಣದ ವಾತಾವರಣದಲ್ಲಿ ನಾವು ಇದ್ದೇವೆ. ಸ್ವಾಭಾವಿಕವಾಗಿ ಯಾವುದೇ ಸರ್ಕಾರ ಆಡಳಿತದಲ್ಲಿ ಇದ್ದರೂ ನಾಮಿನೇಟೆಡ್ ಮೆಂಬರ್ಸ್‌ಗೆ ವೋಟಿಂಗ್ ರೈಟ್ಸ್ ಕೊಟ್ಟರೆ ಬೇರೆ ಪಕ್ಷಕ್ಕೆ ಮೆಜಾರಿಟಿ ಇದ್ದರೂ ಅದನ್ನು ತಿರುವಿ ಇಡಲಿಕ್ಕೆ ಈ ನಾಮಿನೇಷನ್ ಮಾಡುವುದರಿಂದ ಸಾಧ್ಯವಾಗುತ್ತದೆ. It amounts to murder of Democracy and it should not be there. ಇದನ್ನು ನಾನು ಆ ಕಾಲಕ್ಕೂ ಹೇಳಿದ್ದೇನೆ. 1993ರಲ್ಲಿ ಆ್ಯಕ್ಟ್ ಮಾಡುವಾಗ ಈ ನಾಮಿನೇಷನ್ಸ್‌ನ್ನು ತೆಗದು ಹಾಕಿ ನೇರವಾಗಿ ರಿಸರ್ವೇಷನ್ ಕೊಟ್ಟಿದ್ದೇವೆ. ರಿಸರ್ವೇಷನ್ ಹೆಸರಿನಲ್ಲಿ ರಾಜಕೀಯವಾಗಿ ನಾಮಿನೇಷನ್ ಮಾಡುವುದನ್ನು ಬಿಟ್ಟು, ರಿಸರ್ವೇಷನ್ ಕೊಡುವುದಿದ್ದರೆ ಓಪನ್ ಆಗಿ ಕೊಡೋಣವೆಂದು ನಾವು ಓ.ಬಿ.ಸಿ. ರಿಸರ್ವೆಷನ್ ಅನ್ನು ನಾವು ಕಾನೂನಿನಲ್ಲಿ ಸೇರಿಸಿ ನಾಮಿನೇಷನ್ ಮಾಡುವ ಪದ್ಧತಿಯನ್ನು ಕೈಬಿಟ್ಟಿದ್ದೆವು. ಈ ವಿಷಯ ಕೂಡಾ ಈ ಸರ್ಕಾರ ಬದಲಾಯಿಸಲಿಕ್ಕೆ ಹೋಗಲಿಲ್ಲ. ಅದನ್ನು ಹಾಗೆ ಬಿಟ್ಟಿರುವುದರಿಂದ ಧನ್ಯವಾದಗಳು. ಏಕೆಂದರೆ ಕೋ-ಆಪರೇಟಿವ್ ಸೊಸೈಟೀಸ್‌ನಲ್ಲಿ ಏನು ವಾದ ನಡೆಯಿತು? ಮತ್ತು ಅದರ ಬಗ್ಗೆಯೇ ಎ.ಪಿ.ಎಂ.ಸಿ, ಎಲೆಕ್ಷನ್‌ನಲ್ಲಿ ಏನು ವಾದ

ನಡೆಯಿತು? ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರೇ ಮಾತನಾಡತಕ್ಕಂಥ ಸಂದರ್ಭದಲ್ಲಿ ಈ ರೀತಿ ನಾಮಿನೇಷನ್ ಮಾಡತಕ್ಕಂಥ ಕಲ್ಚರ್ ಹೋಗಬೇಕೆಂದು ಏನು ಹೇಳಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆ ಧೈರ್ಯವನ್ನು ನಾವು ಆಗಲೇ ಮಾಡಿದ್ದೆವು. ನೀವು ಅದನ್ನು ಬದಲಾಯಿಸದೇ ಇದ್ದರೆ ಸಂತೋಷ. ಎಕ್ಸ್ ಅಫಿಷಿಯೋ ಮೆಂಬರ್‌ಗೆ ವೋಟಿಂಗ್ ಪವರ್ ಕೊಡುವ ಬಗ್ಗೆ ಕೆಲವು ಮುಖ್ಯಾಂಶಗಳನ್ನು ನಾನು ಹೇಳುತ್ತಿದ್ದೇನೆ. ಯಾವ ರೀತಿಯಾಗಿ ಸ್ಪಿಕ್ಚರಲ್ ಸ್ಪಿರಿಟ್ ಆಫ್ 93 ಆ್ಯಕ್ಟ್, ಇದರಿಂದ ಅಫೆಕ್ಟ್ ಆಗುವುದಿಲ್ಲವೆಂದು. ಸಣ್ಣ ಪುಟ್ಟ ವಿಷಯಗಳು ಇದ್ದರೆ ಅದನ್ನು ಬಿಡೋಣ. ಎಕ್ಸ್-ಆಫಿಷಿಯೋ ಮೆಂಬರ್ಸ್‌ಗೆ ವೋಟಿಂಗ್ ಪವರ್ ಕೊಡುವ ಬಗ್ಗೆ 1983 ನೇ ಆ್ಯಕ್ಟ್‌ನಲ್ಲಿ, Voting power of ex-officio members.... ಎಕ್ಸ್ ಅಫಿಷಿಯೋ ಮೆಂಬರ್ಸ್ ಅಂದರೆ, ಎಂ.ಪಿ; ಎಂ.ಎಲ್.ಎ; ಎಂ.ಎಲ್.ಸಿ; had power to vote in the election of Adhyaksha. ಅಧ್ಯಕ್ಷರ ಚುನಾವಣೆಯಲ್ಲಿ ಎಕ್ಸ್ ಅಫಿಷಿಯೋ ಮೆಂಬರ್ಸ್ ಓಟ್ ಹಾಕುವ ಪವರ್ ಇತ್ತು, 1983ರಲ್ಲಿ. ಅದು ಪ್ರಜಾಪ್ರಭುತ್ವಕ್ಕೆ ತದ್ವಿರುದ್ಧ ಆದಕಾರಣ ನಾವು 1993ರ ಆಕ್ಟ್‌ನಲ್ಲಿ ಎಕ್ಸ್‌ಅಫಿಷಿಯೋ ಮೆಂಬರ್ಸ್ ಇದ್ದರೂ ಅವರಿಗೆ ಓಟಿಂಗ್ ರೈಟ್ಸ್ ಇರಕೂಡದು ಎಂದು ಮಾಡಿದ್ದೆವು. ಅದು ಮೂಲಭೂತವಾಗಿರತಕ್ಕಂಥ ಒಂದು ಬದಲಾವಣೆ, ನಾವು ಮಾಡಿರತಕ್ಕಂಥಾದ್ದು. ಅದನ್ನು ಕೂಡ ತಾವು ಹಾಗೆಯೇ ಉಳಿಸಿದ್ದೀರಿ. ಅದನ್ನು ಬದಲಾಯಿಸಲು ಹೋಗಲಿಲ್ಲ ಧನ್ಯವಾದಗಳು. 9ನೇಯದು ನೋ-ಕಾನ್ಫಿಡೆನ್ಸ್, 1993ರ ಆಕ್ಟ್‌ನಲ್ಲಿ ಮೂರನೇ ಎರಡರಷ್ಟು ಒಟ್ಟು ಮೆಂಬರ್ಸ್ ಇದ್ದರೆ ನೋ-ಕಾನ್ಫಿಡೆನ್ಸ್ ತರಬಹುದು ಎಂದು ಇತ್ತು. 1993ರ ಆಕ್ಟ್‌ನಲ್ಲಿ ನಾವು ಸಿಂಪಲ್ ಮೆಜಾರಿಟಿ ಎಂದು ಮಾಡಿದ್ದೆವು. ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್‌ಗಳಲ್ಲಿ ಸಿಂಪಲ್ ಮೆಜಾರಿಟಿ ಇಂದ ನೋ-ಕಾನ್ಫಿಡೆನ್ಸ್ ಮೋಷನ್ ತರಬಹುದು ಎಂದು ಮಾಡಿದ್ದೆವು. ಆದರೆ ಗ್ರಾಮಮಟ್ಟದಲ್ಲಿ ಮೂರನೇ ಎರಡರಷ್ಟು ಕಾಪಾಡಿಕೊಂಡು ಬಂದೆವು. ಯಾಕೆಂದರೆ ಅಲ್ಲಿ ದಿನಾಲೂ ಇಲೆಕ್ಷನ್ ಆಗಬಾರದು ಎಂದು. ಇವೊತ್ತಿನ ಅಮೆಂಡ್‌ಮೆಂಟ್‌ನಲ್ಲಿ ಅದರ ಬಗ್ಗೆ ಕೂಡ ಪ್ರಸ್ತಾಪ ಇಲ್ಲ. ಇನ್ನೊಂದು ಅಂಶ ಏನೆಂದರೆ ನೋ-ಕಾನ್ಫಿಡೆನ್ಸ್ ಮೋಷನ್ ಪದೇ ಪದೇ ತರಬಾರದು. ಇದು ನಮ್ಮ ವಿಚಾರವೂ ಕೂಡ ಆಗಿದೆ. ಅದಕ್ಕೋಸ್ಕರ 1993ರ ಆಕ್ಟ್‌ನಲ್ಲಿ ವರ್ಷಕ್ಕೊಂದು ಸಲ ಮಾತ್ರ ನೋ-ಕಾನ್ಫಿಡೆನ್ಸ್ ಮೋಷನ್ ತರಬಹುದು ಎಂದು ಇತ್ತು. ಇದನ್ನು ಈಗ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್ ಮಟ್ಟಿಗೆ ಆರು ತಿಂಗಳು ಎಂದು ಮಾಡಿದ್ದಾರೆ. ಏಕೆಂದರೆ ಲಾಜಿಕ್ ಆಗಿ ಸರಿಯಾಗಿ ಇರಲಿ. ಇವರು ಟರ್ಮ್ 20 ತಿಂಗಳು ಇರುವುದರಿಂದ ಆರು ತಿಂಗಳು ಮಾಡಿದ್ದಾರೆ. ಹಾಗೆ ಏಕೆ ಮಾಡಿದ್ದಾರೆ ಎಂಬುದು ನನಗೆ ಅರ್ಥವಾಗುತ್ತದೆ. ಇಷ್ಟು ಮಾತ್ರ ಆ ಬಗ್ಗೆ ಹೇಳಲು ಇಷ್ಟಪಡುತ್ತೇನೆ. ಗ್ರಾಮಪಂಚಾಯತ್ ಮಟ್ಟಿಗೆ ಅದು ಐದು ವರ್ಷಗಳು ಇರುವುದರಿಂದ ಅದಕ್ಕೆ ಒಂದು ವರ್ಷ ಎಂದು ಇದೆ. ಪ್ರತಿಯೊಂದು ವಿಷಯದಲ್ಲಿ ಮೂಲಭೂತವಾದ ಬದಲಾವಣೆಯು 1993ರ ಆ್ಯಕ್ಟ್‌ನಲ್ಲಿ ಆಯಿತು,

ಅದನ್ನು ಮುಟ್ಟಲಿಕ್ಕೆ ಮಾನ್ಯ ಸಚಿವರು ಪ್ರಯತ್ನ ಮಾಡಿಲ್ಲ. ಇನ್ನೊಂದು ಮಾತು ಅವರಿಗೆ ಆಶ್ಚರ್ಯವಾಗಬಹುದು. ಈ ಅಮೆಂಡ್‌ಮೆಂಟ್ಸ್ ಬಗ್ಗೆ ಒಂದು ಮಾತು ಹೇಳುತ್ತೇನೆ. ಅದು ತಮಗೆ ಗೊತ್ತಿರಲಿಕ್ಕಿಲ್ಲ. ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ನಮ್ಮ 1993ರ ಅಮೆಂಡ್‌ಮೆಂಟ್, ಅಸೆಂಬ್ಲಿಯಲ್ಲಿ ನಾವು ಮೆಜಾರಿಟಿ ಇಂದ ಪಾಸ್ ಮಾಡಿಕೊಂಡೆವು. ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಏಪ್ರಿಲ್ 13, 1993ರಂದು ಒಮ್ಮತದಿಂದ ನಾವು ಪಾಸ್ ಮಾಡಿಕೊಂಡಿದ್ದೇವೆ. ಯಾಕೆಂದರೆ ಪಂಚಾಯತ್‌ರಾಜ್ ಕೆಲಸಗಳೆಲ್ಲವೂ ಒಮ್ಮತದಿಂದಲೇ ಕೆಲಸಗಳನ್ನು ಮಾಡಬೇಕು. ಮಾನ್ಯ ಕಾನೂನು ಸಚಿವ ನಾಣಯ್ಯನವರು ಆವಾಗ ವಿಧಾನಪರಿಷತ್ತಿನಲ್ಲಿ ವಿರೋಧಪಕ್ಷದ ನಾಯಕರಾಗಿದ್ದರು. ಅವರು ಮತ್ತು ನಾನು ಕುಳಿತು ಇದರಲ್ಲಿ ಏನು ಆಕ್ಷೇಪಣೆ ಇದೆ, ಇದ್ದರೆ ಅದನ್ನು ಸರಿಪಡಿಸೋಣ, ಆದರೆ ಯೂನಾನಿಮಸ್ ಆಗಿ ಪಾಸ್ ಮಾಡೋಣ ಎಂದು ಹೇಳಿದ್ದಕ್ಕೆ, ಆಗ ಆರು ಅಮೆಂಡ್‌ಮೆಂಟ್‌ಗಳನ್ನು ಅಲ್ಲಿ ಯುನಾನಿಮಸ್ ಆಗಿ ಒಪ್ಪಿ, ಸಚಿವನಾಗಿ ನಾನು ಉತ್ತರ ಹೇಳುವಾಗ ಈ ಅಮೆಂಡ್‌ಮೆಂಟ್‌ನ್ನು ಮಂಡಿಸಿ, ಆ ಕಾನೂನನ್ನು ಯುನಾನಿಮಸ್ ಆಗಿ ಪಾಸ ಮಾಡಿದೆವು. ಅಂದರೆ ಕಾಂಗ್ರೆಸ್, ಜನತಾ, ಎಲ್ಲರೂ ಒಟ್ಟಾಗಿ 1993ರಲ್ಲಿ ಯುನಾನಿಮಸ್ ಆಗಿ ಕಾನೂನು ಪಾಸ್ ಮಾಡಿದ್ದು. ಆದರೆ ಇಲ್ಲಿ ಮೆಜಾರಿಟಿಯಲ್ಲಿ ಪಾಸ್ ಮಾಡಿಕೊಂಡಿದ್ದರಿಂದ ಅದನ್ನು ಪುನಃ ಇಲ್ಲಿ ತರಬೇಕಾಯಿತು. ಆ ಆರು ಅಮೆಂಡ್‌ಮೆಂಟ್ಸ್‌ನ್ನು ಇಲ್ಲಿ ತರಬೇಕಾಯಿತು. ಯಾಕೆಂದರೆ ನಾವು ಮಾತು ಕೊಟ್ಟಿದ್ದೆವು. ನಾವು ಆರು ಅಮೆಂಡ್‌ಮೆಂಟ್ಸ್‌ನ್ನು ತರುತ್ತೇವೆ, ನಮ್ಮ ಅಭಿಪ್ರಾಯ ಕೂಡ ಇದೇ ರೀತಿಯಲ್ಲಿದೆ, ಇದನ್ನು ಯುನಾನಿಮಸ್ ಆಗಿ ಪಾಸ್ ಮಾಡಿ ಎಂದು ಕೇಳಿದೆವು. ಹಾಗೆ ತಂದು ಇಲ್ಲಿ ಇಂಟ್ರಡ್ಯೂಸ್ ಕೂಡ ಮಾಡಿದೆವು. ಅದರ ಪ್ರತಿಗಳು ಕೂಡ ನನ್ನ ಬಳಿ ಇದೆ, ಅದನ್ನು ತಮಗೆ, ಸಚಿವರಿಗೆ ಸಲ್ಲಿಸುತ್ತೇನೆ. ಇಲ್ಲಿ ಇಂಟ್ರಡ್ಯೂಸ್ ಕೂಡ ಮಾಡಿದೆವು. ಇವುಗಳು ಅಗ್ರೀಡ್ ಅಮೆಂಡ್‌ಮೆಂಟ್ಸ್. ಯಾವ ಚರ್ಚೆ ಇಲ್ಲದೆ ಯುನಾನಿಮಸ್ ಆಗಿ ಪಾಸ್ ಆಗಿದ್ದು. ಹಾಗೆಯೇ ಇಲ್ಲಿಯೂ ಕೂಡ ಆಗಬೇಕಾಗಿತ್ತು. ಆದರೆ ದುರ್ದೈವದಿಂದ ಆಗಿನ ರಾಜಕಾರಣದ ವಾತಾವರಣದಿಂದಾಗಿ ಇದರ ಕಡೆಗೆ ಯಾರೂ ಲಕ್ಷ್ಯಕೊಡಲು ತಯಾರಾಗಿದ್ದಿರಲಿಲ್ಲ. ಬೇರೆಯೇ ರಾಜಕೀಯ ನಡೆಯುತ್ತಾ ಇತ್ತು, ಹೌಸ್ ಅಡ್‌ಜರ್ನ್ ಆಯಿತು, ಇದು ಪಾಸ್ ಆಗಲಿಲ್ಲ. These are agreed amendments passed in the Upper House, introduced by me as a Minister for Panchayat Raj in the Lower House on 3rd september, 1993. ಆದ್ದರಿಂದ ಈ ಅಮೆಂಡ್‌ಮೆಂಟ್ಸ್ ನಾವು ಮಾಡಿದ್ದು, ನಮ್ಮ ಕಾಲದಲ್ಲಿ ಆಗಿದ್ದು ಎಂದು ಹೇಳಿದರೆ, ಯಾರೂ ತಪ್ಪು ತಿಳಿದುಕೊಳ್ಳಲಿಕ್ಕಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಅಮೆಂಡ್‌ಮೆಂಟ್ಸ್ ಯಾವುವು? Amendment to preamble to say that Panchayat bodies are to function as units of self-government. ಎಂದು ಹೇಳಿ, ನಾಣಯ್ಯನವರು ಬೇಕಾದಷ್ಟು... ಯಾಕೆಂದರೆ ನನ್ನ

ಪ್ರಿಯಾಂಬಲ್‌ನಲ್ಲಿ Units of self-government. ಎನ್ನುವ ಪದ ಉಪಯೋಗಿಸಿದ್ದಿಲ್ಲ. ನಾನು ಅವರಿಗೆ ಹೇಳಿದೆ, ಅದನ್ನು ಉಪಯೋಗಿಸಿದರೂ Units of self-government ಉಪಯೋಗಿಸದೇ ಇದ್ದರೂ ಕೂಡ units of self-government. ಬ್ರಿಟೀಷರ ಕಾಲಕ್ಕೆ ಈ ಪದವನ್ನು ಉಪಯೋಗಿಸುತ್ತಿದ್ದರು. unit of self-government. ಇದನ್ನು ಸೇರಿಸಿ, ನಿಮ್ಮ ಮನಸ್ಸಿಗೆ ಅಷ್ಟೊಂದು ಸಮಾಧಾನವಾಗುವುದಾದರೆ ನಮ್ಮ ಆಕ್ಷೇಪವಿಲ್ಲ, ಯಾಕೆಂದರೆ They are local bodies. Units of self-government, ಎಂದು ಪದೇ ಪದೇ ಬ್ರಿಟಿಷರ ಕಾಲಕ್ಕೆ, ಬ್ರಿಟಿಷರು ರಾಜ್ಯ ಮಾಡುವ ಕಾಲಕ್ಕೆ ಇತ್ತು. ಅದನ್ನೇ ಈವೊತ್ತು ಉಪಯೋಗಿಸುತ್ತಾ ಇದ್ದೇವೆ. ಆದಕಾರಣ ಪ್ರಿಯಾಂಬಲ್‌ನಲ್ಲಿ units of self-government ಎಂದ ತಕ್ಷಣ, ಸೆಲ್ಫ್ ಗವರ್ನ್‌ಮೆಂಟ್ ಅಂದರೆ, ಸ್ವತಂತ್ರ ರಾಜರು ಅವರು ಏನಾದರೂ ಮಾಡಬಹುದು ಎಂಬ ಅರ್ಥ ಬರುವುದಿಲ್ಲ. Units of self-government, ಅಂದರೆ ಲೋಕಲ್‌ಬಾಡೀಸ್ ಆಗಿಯೇ ಉಳಿಯುತ್ತವೆ. ಆದಕಾರಣ ನನ್ನದೇನೂ ಆಕ್ಷೇಪಣೆ ಇಲ್ಲ ಎಂದು ಹೇಳಿದೆ. ಈ ಅಮೆಂಡ್‌ಮೆಂಟ್ಸ್ ಏನಿದೆ, ಈ ಹಿನ್ನಲೆಯಲ್ಲಿ ಪಾಸ್ ಆಗಿರತಕ್ಕಂಥಾದ್ದು, ಈಗ ಅದನ್ನು ನೀವು ತಂದಿದ್ದೀರಿ, ಅದನ್ನೇ ನಾನು ಕಾಮೆಂಟ್ ಮಾಡಿ ಇದಕ್ಕೆ ವಿರೋಧ ಮಾಡುತ್ತೇನೆ. ಯಾಕೆಂದರೆ ನಾವು ಒಟ್ಟಿಗೆ ತಂದಿರತಕ್ಕಂಥಾದ್ದು. ಇನ್ನು ಎರಡನೆಯದು Definition of backward classes ಮಾನ್ಯ ನಾಣಯ್ಯನವರು ಆಗ ಮಾನ್ಯ ವಿರೋಧ ಪಕ್ಷದ ನಾಯಕರಾಗಿ ಭಾರಿ ಭಾಷಣ ಮಾಡಿದರು. ಈ definition of backward classes, Articles 16(4) & 15 (4) ಪ್ರಕಾರ, ಯಾವುದನ್ನು ಡೆಫಿನಿಷನ್‌ನಲ್ಲಿ ಉಪಯೋಗಿಸುತ್ತೀರಿ, ಅದೇ ಡೆಫಿನಿಷನ್ ಇಲ್ಲಿ ಪಂಚಾಯತ್‌ರಾಜ್ಯಕ್ಕೂ ಅನ್ವಯಿಸಬೇಕು, ಎಂಬ ವಾದ. ಅವರಿಗೆ ಏನು ಭಯ ಅಂದರೆ, ನಾವು ಆ ಕಾಲಕ್ಕೆ 16-4, 15-4, ರೆಸ್ಯುಲೇಶನ್‌ಗೆ ಒಂದು ಡೆಫಿನಿಷನ್ ಕೊಟ್ಟು ಪಂಚಾಯತ್‌ರಾಜ್‌ಗೆ ನಮ್ಮದೇ ಆದಂಥ ಡೆಫಿನಿಷನ್ ಕೊಡುವ ಹಕ್ಕು ಉಳಿಸಿಕೊಳ್ಳುತ್ತಾರೆ ಎಂಬ ಭಯ ಅವರಿಗೆ ಇತ್ತು. ಅದಕ್ಕೆ ನಾನು ಅಂಥಾದ್ದೇನೂ ಇಲ್ಲ ಎಂದು ಹೇಳಿದೆ. ಆ ಕಾರಣ ಆ ಒಂದು ಅಮೆಂಡ್‌ಮೆಂಟ್ ಕೂಡ ಮಾಡಿದ್ದೆವು. Same definition applicable to 16(4) and 15(4) should apply to reservation definition of backward classes for Panchayat Raj. ನೀವು ಅದನ್ನು ಬೇರೆ ಕಡೆ ಮಾಡಿದ್ದೀರಿ ಎಂದು ನನಗೆ ಗೊತ್ತಾಗಿದೆ. So, in principle there is no difference. Next, election to office of Adhayaksha and Upadhyaksha shall be held within 30 days from the date of application. ಇದು ಕೂಡ ನಾವು ಜಾಯಿಂಟ್ ಆಗಿ ಮಾಡಿರತಕ್ಕಂಥ ಅಮೆಂಡ್‌ಮೆಂಟ್. ನಮ್ಮ ಆಕ್ಟ್‌ನಲ್ಲಿ as soon as possible ಎಂದು ಇತ್ತು. ಅದು ಬಹಳ ವೇಗ ಆಗುತ್ತದೆ, ಸ್ವಲ್ಪ ಟೈಂ ಲಿಮಿಟ್ ಅದಕ್ಕೆ ಕೊಡೋಣ ಎಂದು ಚರ್ಚೆಯಲ್ಲಿ ಬಂದಾಗ ನಾವು ಇದನ್ನು

ಮಾಡಿದ್ದೇವೆ. ಅಧ್ಯಕ್ಷ ಉಪಾಧ್ಯಕ್ಷ ಚುನಾವಣೆ 30 ದಿನಗಳಲ್ಲಿ from the date of application. ಆಗಬೇಕೆಂದು ಎಂದು. ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಅಂದರೆ, These are unanimously approved amendments. ಜನತಾಪಾರ್ಟಿ, ಕಾಂಗ್ರೆಸ್ ಎಲ್ಲಾ ಸೇರಿ, ಕೌನ್ಸಿಲ್‌ನಲ್ಲಿ ಪಾಸ್ ಮಾಡಿರತಕ್ಕಂಥಾದ್ದು. ಇವೊತ್ತು ಮಾನ್ಯ ನಾಣಯ್ಯಯವರು ಅಧಿಕಾರಕ್ಕೆ ಬಂದ ತತ್‌ಕ್ಷಣ ಇದನ್ನು ಮಾಡಿಬಿಡಬಹುದಾಗಿತ್ತು.

5.10 ಪಿ.ಎಂ

ಇಲ್ಲಿಯತನಕ ಯಾವುದೊ ಕಾರಣಕ್ಕಾಗಿ ಕಾದಿದ್ದೀರಿ. ಉದ್ದೇಶಪೂರ್ವಕವಾಗಿ ಮಾಡಿದ್ದೀರಿ ಎಂದು ನಾನು ಹೇಳುವುದಿಲ್ಲ. ಆದರೆ ನಾವು ಮಾಡಿರತಕ್ಕಂಥದ್ದು ಎಂದು ನಾನು ಒತ್ತಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದು ಹೊಸ ಅಮೆಂಡ್‌ಮೆಂಟ್ ಅಲ್ಲ. ನಂತರ ನಾಲ್ಕನೆಯದಾಗಿ to ban moving no-confidence motion within 12 months, ಇದನ್ನು ಈಗಾಗಲೇ ಹೇಳಿದೆ. ಇದೂ ಕೂಡ ನಾವು ಅಮೆಂಡ್‌ಮೆಂಟ್‌ನಲ್ಲಿ ಸೇರಿಸಿದ್ದೇವೆ. ಒಂದು ವರ್ಷ ನೋ ಕಾನ್ಫಿಡೆಂಟ್ ಆದರೆ ಇನ್ನೊಂದು ವರ್ಷದವರೆಗೂ ನೋ ಕಾನ್ಫಿಡೆಂಟ್ ಬರಬಾರದು. ಇದೂ ಕೂಡ ಆ ಕಾಲಕ್ಕೆ ನಾವೆಲ್ಲರೂ ಒಟ್ಟಿಗೆ ಸೇರಿ ಮಾಡಿರತಕ್ಕಂಥ ಅಮೆಂಡ್‌ಮೆಂಟ್. ಈಗ 6 ತಿಂಗಳಿಗೆ ಇಳಿಸಿದ್ದಾರೆ. ಇದಕ್ಕೆ ನನ್ನ ಆಕ್ಷೇಪಣೆ ಏನೂ ಇಲ್ಲ. ಇದರ ಬಗ್ಗೆ ಕೂಡ ನಾನು ಆಗಲೇ ಹೇಳಿದೆ. CEO and inconsistent resolutions-Matters referred to the government by CEO to be decided by the government within the time limit prescribed (2months) as per 1993 amendment proposed and 15 days as per the 1997 amendment, ತಮ್ಮ ಅಮೆಂಡ್ಮೆಂಟ್ ಪ್ರಕಾರ ಈಗಲೂ ತಮಗೆ ಅನಿಸಿದರೆ ಅದರಿಂದ ತಮಗೇನೂ ಅಪಾಯವಾಗುವುದಿಲ್ಲ. ಆದರೆ ಎರಡು ತಿಂಗಳು ಇದ್ದುದ್ದನ್ನು 15 ದಿವಸಕ್ಕೆ ಇಳಿಸುವ ಅವಶ್ಯಕತೆ ಇಲ್ಲ ಎಂದು ನನ್ನ ಅಭಿಪ್ರಾಯವಿದೆ. ಅದು ಅಂಥ ಮಹತ್ವದ ವಿಷಯವಲ್ಲ. ನಿಮಗೆ ಇನ್ನೂ ಸ್ವಲ್ಪ ಟೈಮ್ ಸಿಗುತ್ತದೆ ಅಷ್ಟೆ. ಆರನೆಯದಾಗಿ Defining and making booth capturing and election offences by government servants punishable, ಇದೂ ಕೂಡ ಆರನೇ ಅಮೆಂಡ್‌ಮೆಂಟ್‌ನ್ನು ನಾವು ಮಾಡಿದ್ದುದು. Booth caputuring and election offences, ಇದೂ ಕೂಡ ಯುನಾನಿಮಸ್ ಆಗಿ ಪಾಸ್ ಆಗಿರುವಂಥ ಅಮೆಂಡ್‌ಮೆಂಟ್. ಇದನ್ನು ನೀವೂ ತಂದಿದ್ದೀರಿ, ಸಂತೋಷ. ಇದರಲ್ಲಿ ನನಗೆ ಒಂದು ಅನುಮಾನ ಇದೆ. ತಾವು ದಯಮಾಡಿ ಅದನ್ನು ನೋಡಬಹುದು. Booth capturing election offences ಬಗ್ಗೆ ಗ್ರಾಮ ಪಂಚಾಯತಿ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೀರಿ. ಅದು ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಬಗ್ಗೆ ಅದು

ಬಿಟ್ಟುಹೋಗಿದೆ. It may be oversight. ಏಕೆಂದರೆ 31ಎ ಮೂರು ಹಂತದಲ್ಲಿ ಗ್ರಾಮ ಪಂಚಾಯತಿಗಳಿಗೆ ಅನ್ವಯಿಸಬೇಕು. ಇನ್ನೂ ಎರಡು ಹಂತದಲ್ಲಿ ಅದು ಬಿಟ್ಟುಹೋಗಿದೆ. ಅದು ಉದ್ದೇಶಪೂರ್ವಕವಾಗಿ ಬಿಟ್ಟು ಹೋಗಿರಲಿಕ್ಕಿಲ್ಲ, ಹಾಗೆಯೇ ಬಿಟ್ಟುಹೋಗಿರಬಹುದು. ಬಿಟ್ಟು ಹೋಗಿದ್ದರೆ ಅದನ್ನು ತಿದ್ದಬಹುದು. ಆದರೆ ಈ ವಿಷಯ ಏನಿದೆ ಅದು ಆ ಕಾಲಕ್ಕೆ ತೀರ್ಮಾನವಾಗಿರುಪಂಥದ್ದು. ಇನ್ನೂ ಒಂದು ವಿಷಯ ಇದೆ, ಇನ್ನೂ ಒಂದು ಅಮೆಂಡ್‌ಮೆಂಟನ್ನು ನಾವು ಮಾಡಿದ್ದಂಥದ್ದನ್ನು ತಾವು ಬಿಟ್ಟುಬಿಟ್ಟಿದ್ದೀರಿ. ಅದೇನೆಂದರೆ 1993 Act proposed amendment to section 196(4) for effecting transfer of Zilla Panchayat staff according to the transfer policy laid down by government, ಅದರಲ್ಲಿ ಬಹಳ ಚರ್ಚೆಯಾಯಿತು. ಏಕೆಂದರೆ ನಮ್ಮ ಗೌರ್ನಮೆಂಟ್ ಸರ್ವೆಂಟ್ಸ್ ಟ್ರಾನ್ಸ್‌ಫರ್‌ಗೆ ನಾವು ಕೊಟ್ಟಾಗ ಯದ್ವಾತದ್ವಾ ಟ್ರಾನ್ಸ್‌ಫರ್ ನಡೆಯುವುದಾದರೆ ಅವರಿಗೆ ಅದರಿಂದ ಹಿಂಸೆಯಾಗುತ್ತದೆ. ಅದರ ಬಗ್ಗೆ ಏನಾದರೂ ಕಾನೂನಿನ ಪ್ರಕಾರ ಕ್ರಮ ಇರಬೇಕು ಎಂದು ಬಹಳ ಚರ್ಚೆ ಆದಾಗ ಈ ಟ್ರಾನ್ಸ್‌ಫರ್ ಪಾಲಿಸಿ ಅಮೆಂಡ್‌ಮೆಂಟನ್ನು ನಾನು ಪ್ರಪೋಸ್ ಮಾಡಿದೆ. ಇವೊತ್ತು ಕೂಡ ಟ್ರಾನ್ಸ್‌ಫರ್ ಪಾಲಿಸಿಯನ್ನು ನೀವು ಮಾಡಬೇಕಾಗುತ್ತದೆ. ಮೊದಲು ಗೈಡ್‌ಲೈನ್ಸ್ ಪ್ರಕಾರ ಟ್ರಾನ್ಸ್‌ಫರ್ ಎಂದು ನಾವು ಹೇಳಿದ್ದೇವೆ ಅದರ ಪ್ರಕಾರ ಅದನ್ನು ಉಪಯೋಗಿಸಿ ನಾವು ಟ್ರಾನ್ಸ್‌ಫರ್ ಪಾಲಿಸಿ ಅನ್ವಯಿಸುತ್ತೇವೆ ಎಂದು ನೀವು ಹೇಳಬಹುದು ಆದರೂ ಕೂಡ ನನಗನಿಸುತ್ತದೆ ಈ ಟ್ರಾನ್ಸ್‌ಫರ್ ಪಾಲಿಸಿಯಿಂದ ಶಿಕ್ಷಕರಿಗೆ ಮತ್ತು ಬೇರೆ ಜನರಿಗೆ ರಾಜಕೀಯದಿಂದ ವಿಪರೀತ ಹಿಂಸೆಯಾಗುತ್ತದೆ ಎಂದು. ಅದಕ್ಕೆ ಅವನು ಸರ್ಕಾರಿ ನೌಕರ ಆಗಿರುವುದರಿಂದ ಅವರು ಸಂಬಳ ಕೊಟ್ಟದ್ದಲ್ಲ, ಸರ್ಕಾರ ಸಂಬಳ ಕೊಡುತ್ತದೆ. ಆದಕಾರಣ ಸರ್ಕಾರ ಅವರ ಟ್ರಾನ್ಸ್‌ಫರ್ ಪಾಲಿಸಿ ಯಾವ ರೀತಿ ನಡೆಯಬೇಕು ಎಂಬುದನ್ನು ತೀರ್ಮಾನ ಮಾಡುವ ಹಕ್ಕು ಸರ್ಕಾರಕ್ಕಿದೆಯೇ ಹೊರತು ಆಯಾ ಪಂಚಾಯತ್ ಸಂಸ್ಥೆಗಳಿಗಿಲ್ಲ. ಆದಕಾರಣ ಈ ಟ್ರಾನ್ಸ್‌ಫರ್ ಪಾಲಿಸಿ ಬಗ್ಗೆ ನೀವು ಏನು ಕೈಬಿಟ್ಟಿದ್ದೀರಿ ಅದನ್ನು ಸೇರಿಸಿದರೆ ಬಹಳ ಸಂತೋಷ. ಅದರಿಂದ ನಿಮಗೆ ಅನುಕೂಲವಾಗುತ್ತದೆ. ಇನ್ನೂ ಒಂದು ಮಾತು, ಇದು 3ನೇ ಅಮೆಂಡ್‌ಮೆಂಟ್‌ನಲ್ಲಿ ಸೇರಿಲ್ಲ; ಹಿಂದೆ ಮಾಡಿದಂಥ ಅಮೆಂಡ್‌ಮೆಂಟ್‌ನಲ್ಲಿ ಎಕ್ಸಿಕ್ಯೂಟೀವ್ ಹೆಡ್ ಅಥವಾ ಅಧ್ಯಕ್ಷ ಎಂದು ಒಂದು ಅಮೆಂಡ್‌ಮೆಂಟ್ ಮಾಡಿದ್ದೇವೆ. ಇದರ ಬಗ್ಗೆ ಬಹಳ ಪ್ರಚಾರ ನಡೆಯಿತು. ನನ್ನ ಅಭಿಪ್ರಾಯದಲ್ಲಿ ಆ ಪ್ರಚಾರಕ್ಕೆ ಅವಕಾಶವೇ ಇರಲಿಲ್ಲ. ಆದರೆ ಈ ಅಧ್ಯಕ್ಷರಿಗೆ ಎಕ್ಸಿಕ್ಯೂಟೀವ್ ಹೆಡ್ ಎಂದು ಮಾಡಿಲ್ಲ ಎಂದು ಹೇಳಿ ಅವರ ಅಧಿಕಾರವೆಲ್ಲಾ ತೆಗೆದುಕೊಂಡುಬಿಟ್ಟಿದ್ದೀರಿ, ಅಧಿಕಾರವನ್ನು ಕಡಿಮೆ ಮಾಡಿದ್ದೀರಿ, ಅವರ ಪವರ್ ತೆಗೆದುಹಾಕಿಬಿಟ್ಟಿದ್ದೀರಿ ಎಂದು ಕರ್ನಾಟಕದಲ್ಲಷ್ಟೇ ಅಲ್ಲ ಇಡೀ ಭಾರತ ದೇಶದಲ್ಲೆಲ್ಲಾ ಪ್ರಚಾರ ನಡೆಯಿತು. ಏಕೆಂದರೆ ಅಧ್ಯಕ್ಷ ಎಂದು ಏನು ಇದೆ ಆ ಅಧ್ಯಕ್ಷ ಎಂದರೆ ಎಕ್ಸಿಕ್ಯೂಟೀವ್ ಹೆಡ್. ಅದರಲ್ಲಿ ಎರಡು

ಅಭಿಪ್ರಾಯವಿಲ್ಲ. ಆದರೆ ಎಕ್ಸಿಕ್ಯೂಟೀವ್ ಹೆಡ್ ಎಂಬ ಪದವನ್ನು ನಾವು ಉಪಯೋಗಿಸಿಲ್ಲ ಎಂದು ಇದರ ಬಗ್ಗೆ ವಿಪರೀತ ಪ್ರಚಾರ ನಡೆಯಿತು. ಪ್ರಚಾರ ನಡೆದ ನಂತರ ಈ ಸರ್ಕಾರ ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಿ ಶ್ರೀ ಪಿ.ಆರ್.ನಾಯಕ್ ಎಂಬುವರನ್ನು ಅದರ ಅಧ್ಯಕ್ಷರನ್ನಾಗಿ ಮಾಡಿದರು. ಅವರು ಹೊಸಬರೇನಲ್ಲ, 93 ಅಮೆಂಡ್‌ಮೆಂಟ್ ಮಾಡುವಾಗ ನಾನೂ ಅವರನ್ನು ಕನ್ಸಲ್ಟ್ ಮಾಡಿದ್ದೇನೆ. ಅವರು ಇದರ ಬಗ್ಗೆ ಒಂದು ಪ್ರಾಮಾಣಿಕವಾದಂಥ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇದನ್ನು ಓದುತ್ತೇನೆ,

"On this particular question the Committee was informed on 13.11.1995 that the government wish to have its views. After considering the matter in depth, the Committee came to view that there are no fundamental dissimilarities between 1985 and 1993 Acts. In fact, 1993 Act confers powers not found in the earlier enactment such as the powers to exercise control over the Chief Executive Officers for securing implementation of the decisions of the Zilla Panchayats." ಇದು ಬಹಳ ಮುಖ್ಯವಾದುದು, ಆದುದರಿಂದ ಇದನ್ನು ಇನ್ನೂ ಒಂದು ಸಲ ಓದುತ್ತೇನೆ. ಏಕೆಂದರೆ ಅವರ ಎಕ್ಸ್‌ಪರ್ಟ್ ಕಮಿಟಿಯಲ್ಲಿ ಹೇಳಿದ್ದಾರೆ, ಇದು ನಾನು ಮಂತ್ರಿಯಾಗಿ ಹೇಳುವುದಿಲ್ಲ. ಅವರು ಏನು ಹೇಳುತ್ತಾರೆ ಎಂದರೆ ನಾನು ದೆಹಲಿಗೆ ಅಥವಾ ಎಲ್ಲಿ ಹೋದರೂ ಕೂಡ 'ಏನ್ರಿ ನೀವು ಜನರ ಅಧಿಕಾರವನ್ನು ಕಸಿದುಕೊಂಡು ಅಧಿಕಾರಸ್ತರಿಗೆ ಕೊಟ್ಟಿದ್ದೀರಿ ಎಂದು ಕೇಳುತ್ತಿದ್ದರು.

ಶ್ರೀ ಡಿ.ಆರ್.ಪಾಟೀಲ್ (ಗದಗ್): ನೀವು ಪ್ರಚಾರ ಎಂದು ಏನು ಹೇಳುತ್ತೀರಿ ಅದು ಪ್ರಚಾರ ಅಲ್ಲ, ಅಪಪ್ರಚಾರ.

ಶ್ರೀ ಎಂ.ವೈಘೋರ್ಪಡೆ: ಇರಲಿ, ನಾನು ನನ್ನ ಭಾಷೆಯಲ್ಲಿಯೇ ಹೇಳಬೇಕಾಗುತ್ತದೆ. ಪ್ರಚಾರ ಎನ್ನುವುದೇ ಒಳ್ಳೆಯದು. ಇದರಿಂದ ಬಹಳ ನೋವಾಗುತ್ತದೆ. ಏಕೆಂದರೆ ಇದು ನನಗಾಗುವ ಪೆಟ್ಟಲ್ಲ, ಕರ್ನಾಟಕಕ್ಕೆ ಪೆಟ್ಟಾಗುತ್ತದೆ. ಅದಕ್ಕೆ ಕಾರಣ ಇದ್ದರೆ ನಾವು ಸಹಿಸಬಹುದು, ವಿನಾಕಾರಣ ಕರ್ನಾಟಕದ ಪ್ರತಿಷ್ಠೆಗೆ ಪೆಟ್ಟಾಗುವ ರಾಜಕೀಯ ಇದರಲ್ಲಿ ನಡೆಯಿತು. ಅದಕ್ಕೋಸ್ಕರ ಇದನ್ನು ಇನ್ನೂ ಒಂದು ಸಲ ಓದಬೇಕಾದ್ದು ಎಂದು ನನಗನಿಸುತ್ತದೆ.

"After considering the matter in depth the Committee came to the view that there were no fundamental

dissimilarities between 1985 and 1993 Acts. In fact, 1993 Act confers powers not found in the earlier enactment such as the power to exercise control over the Chief Executive Officers for securing implementation of the decisions of the Zilla Panchayats." ಅವರಿಗೆ ನಾವು ಎಕ್ಸಿಕ್ಯೂಟೀವ್ ಹೆಡ್ ಎಂದು ಕರೆದರೆ ಅದಕ್ಕೆ ನನ್ನ ಆಕ್ಷೇಪ ಏನೂ ಇಲ್ಲ, ಕರೆಯಬಹುದು ಎಂದು ಹೇಳಿದ್ದಾರೆ. ಆದರೆ ಅದರಿಂದ ಯಾವ ಅಪಾಯ ಆಗಿಲ್ಲ. On the other hand, we have given more powers. ನಿಮ್ಮ ಎಕ್ಸ್‌ಪರ್ಟ್ ಕಮಿಟಿ ಯಾವ ಆಧಾರದ ಮೇಲೆ ಇಷ್ಟೆಲ್ಲಾ ಅಮೆಂಡ್‌ಮೆಂಟ್ಸ್ ಮಾಡಿದ್ದಾರೆ, ಮಾಡುತ್ತಿದ್ದಾರೆ ಎಂದು ಅವರೇ ಹೇಳಿದ್ದಾರೆ. ಇದನ್ನು ಈ ಸಭೆ ಮತ್ತು ಕರ್ನಾಟಕದ ಜನತೆ ಸ್ಪಷ್ಟವಾಗಿ ಗಮನಿಸಬೇಕು Removal of Adhayaksha of gram panchayats, dissolution of gram panchayats.' ಇದರಲ್ಲಿ ಸ್ವಲ್ಪ ಇನ್‌ಕನ್ಸಿಸ್ಟೆನ್ಸಿ ಇದೆ. ನಮ್ಮ ಬ್ಯಿಕ್ಪ್‌ನಲ್ಲಿ ನಾವು ಡಿವಿಜನಲ್ ಕಮಿಷನರ್ ಮತ್ತು ಅಪೀಲ್ ಟು ಗೌರ್ನಮೆಂಟ್ ಎಂದು ಮಾಡಿದ್ದೇವೆ. ನೀವು ಗ್ರಾಮ ಪಂಚಾಯತಿ ಅಧ್ಯಕ್ಷರನ್ನು ತೆಗೆಯುವಾಗ ಸರ್ಕಾರ ತೆಗೆಯಬಹುದು, ತೆಗೆಯುವಾಗ ಪಂಚಾಯತಿಯ ಸಾಮಾನ್ಯ ಅಭಿಪ್ರಾಯವನ್ನು ತೆಗೆದುಕೊಳ್ಳಬಹುದು ಅಥವಾ ಬಿಡಬಹುದು. ಆದರೆ ಆ ಪಂಚಾಯತ್ ಬಾಡಿ ಏನಿದೆ ಅದನ್ನು ರದ್ದು ಮಾಡುವ ಅಧಿಕಾರವನ್ನು ಜಿಲ್ಲಾಪರಿಷತ್‌ಗೆ ಕೊಟ್ಟುಬಿಟ್ಟಿದ್ದೀರಿ. ಇದು ಸ್ವಲ್ಪ ಇನ್‌ಕನ್ಸಿಸ್ಟೆನ್ಸಿ ಅನಿಸುತ್ತದೆ. ಏಕೆಂದರೆ ಗ್ರೂಪ್ ಪಂಚಾಯತ್ ಮೆಂಬರ್ಸ್ they are more important than the Adhayaksha. ಈ ಅಧ್ಯಕ್ಷರನ್ನು ಸರ್ಕಾರ ತೆಗೆಯುವುದಾದರೆ ಗ್ರೂಪ್ ಪಂಚಾಯತ್ ಹೋಲ್ ಬಾಡಿಯನ್ನು ತೆಗೆಯುವ ಪ್ರಶ್ನೆ ಬಂದಾಗ ಅದನ್ನೂ ಕೂಡ ಸರ್ಕಾರವೇ ಮಾಡಬೇಕಾಗುತ್ತದೆ; ಮಾಡಿದರೆ ಒಳ್ಳೆಯದು. ಇಲ್ಲದಿದ್ದರೆ ಇನ್‌ಕನ್ಸಿಸ್ಟೆನ್ಸಿ ಆಗುತ್ತದೆ. ಜಿಲ್ಲಾಪರಿಷತ್ ಮಟ್ಟದಲ್ಲಿ ಮತ್ತು ಎಲ್ಲಾ ಮಟ್ಟದಲ್ಲಿ ಇವೊತ್ತು ವಿಸಗೀತ ರಾಜಕೀಯ ನಡೆಯುತ್ತಿದೆ. ನನ್ನದೆ ಸಂಡೂರಿನ ಹಳೆಯ ಕಥೆ ಹೇಳಬೇಕಾದರೆ; ಸೊಂಡೂರು ಪಂಚಾಯತಿಗೆ ರದ್ದು ಮಾಡಲಿಕ್ಕೆ ಹೊರಟಿದ್ದರು. ಆಗ ಮಾನ್ಯ ನಜೀರ್ ಸಾಬ್ ಅವರು ಮಂತ್ರಿಯಾಗಿದ್ದರು. ಸುದೈವ. ಅವರನ್ನು ನಾನು ಭೇಟಿ ಆಗಬೇಕಾಗಿತ್ತು. ಅವರು ಹೇಳಿದರು. ನಾನು ಅಲೋ ಮಾಡುವುದಿಲ್ಲ ಎಂದು. ಆದರೂ ಕೂಡ ಮಾಡಿದರು. ನಾವು ಕೋರ್ಟಿಗೆ ಹೋಗಬೇಕಾಯಿತು. ಏಕೆಂದರೆ ಜಿಲ್ಲಾ ಪರಿಷತ್ ರಾಜಕೀಯವಾಗಿ ಸೊಂಡೂರಿನಲ್ಲಿ ನಮ್ಮ ಜನ ಅಂತಹ ನಿಶ್ಚಿತ ಮಾಡುವಂತಹ ಜನ ಅಲ್ಲ ಎಂದು ತಮಗೆ ಗೊತ್ತಿದೆ. ಆದರೂ ಕೂಡ ಸೊಂಡೂರ್‌ನಲ್ಲಿ ಡಿಸಾಲ್ವ್ ಮಾಡುವಂತಹ ಪ್ರಯತ್ನ ಮಾಡಿದರು. ಅಂತಹ ಪ್ರಯತ್ನ ಮಾಡುವಂತಹ ಅವಕಾಶ ಇರಬಾರದು. ಸರ್ಕಾರದ ಕಡೆ ಅಧಿಕಾರ ಇಟ್ಟುಕೊಳ್ಳಿ. ನೀವು ಯಾರನ್ನಾದರೂ ಕನ್‌ಸಲ್ಟ್ ಮಾಡಿ. ಆದರೆ ಈ ಡಿಸಲ್ಯೂಷನ್ ಏನು ಇದೆ, ಇದನ್ನು

ಪದೇ ಪದೇ ಮಾಡುವಂತಹದ್ದು ಅಲ್ಲ. ಇದು ಆಟ ಅಲ್ಲ. ಬಹಳ ಗಂಭೀರವಾಗಿ ಸಿಚ್ಯುಯೇಷನ್ ಇದ್ದಾಗ ಮಾತ್ರ ಮಾಡತಕ್ಕದ್ದು. ಆದಕಾರಣ ಯಾವ ರೀತಿ ಪಂಚಾಯತಿ ಅಧ್ಯಕ್ಷರನ್ನು ತೆಗೆಯುವಂತಹ ಅಧಿಕಾರವನ್ನು ಇಟ್ಟುಕೊಂಡಿದ್ದೀರಿ. ಅದೇ ರೀತಿ ಆ ಬಾಡಿಯನ್ನು ರದ್ದು ಮಾಡುವ ಅಧಿಕಾರ ತಮ್ಮ ಕಡೆಯೇ ಇರಲಿ. ಜಿಲ್ಲಾ ಪಂಚಾಯತಿಗೆ ಬೇಡ. ನಿಮಗೆ ಇನ್‌ಕನ್‌ಸಿಸ್ಟೆನ್ಸ್ ಆಗುತ್ತದೆ. ರೆವಿನ್ಯೂ ಆಫೀಸರ್ಸ್ ಸಿಗದಿರುವ ಕಡೆ ಬದಲಾಗಿ ಪಂಚಾಯತ್ ರಾಜ್ ಆಫೀಸರ್ಸ್‌ನ್ನು ಹಾಕಿದ್ದೀರಿ; ಇದು ನನಗೆ ಅರ್ಥ ಆಗುತ್ತದೆ. ಇಲ್ಲಿ ಮಾತ್ರ ಸ್ವಲ್ಪ ತಪ್ಪಾಗಿದೆ ಎಂದು ನನಗೆ ಅನ್ನಿಸುತ್ತದೆ. ಅದನ್ನು ತಮ್ಮ ಕಡೇನೇ ಇಟ್ಟುಕೊಳ್ಳುವುದು ಒಳ್ಳೆಯದು. ಅಂದರೆ ತಮ್ಮ ಮೇಲೆ ತಮ್ಮ ಸರ್ಕಾರದ ಮೇಲೆ ಎಷ್ಟು ವಿಶ್ವಾಸ ಇದೆ ಎಂದು ತೋರಿಸುತ್ತದೆ. ಏಕೆಂದರೆ ಹಳ್ಳಿ ಮಟ್ಟದಲ್ಲಿ ತಮ್ಮ ಗುರಿಯಾಗಬಾರದು. After all, the government at higher level can take considerate decisions. ನಾನು ಆಗಲೇ ಹೇಳಿದೆ. Election related functions are proposed to be entrusted to the State Election Commission in place of Deputy Commissioners. ಅದನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಏಕೆಂದರೆ ನಾನು ಸಾಕಷ್ಟು ಕಾಟ ಅನುಭವಿಸಿದ್ದೇನೆ, ಈ ಡೆಪ್ಯುಟಿ ಕಮೀಷನರ್ಸ್ ಕಡೆ ಇರುವುದರಿಂದ. ರಾಜಕೀಯ ಒತ್ತಡ ಇದರಿಂದ ಕಡಿಮೆ ಆಗುತ್ತದೆ. ಒಳ್ಳೆಯ ಕೆಲಸ ಮಾಡಿದ್ದೀರಿ. Constitution of the State Panchayat Council. ಸ್ಟೇಟ್ ಪಂಚಾಯತ್ ಕೌನ್ಸಿಲ್ ಬಗ್ಗೆ ಹೇಳಿದ್ದು ಅದನ್ನೂ ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ ರಾಜ್ಯ ಮಟ್ಟದಲ್ಲಿ ಅಂತಹ ಒಂದು ಬಾಡಿ ಇರಬೇಕು. ಇವೆಲ್ಲಾ ಪ್ರಶ್ನೆ ಬಂದಾಗ ಅಲ್ಲಿ ಚರ್ಚೆ ಆಗಿ ಎಲ್ಲರ ಅಭಿಪ್ರಾಯವನ್ನು ತೆಗೆದುಕೊಂಡು ಒಂದು ತೀರ್ಮಾನಕ್ಕೆ ಬರಲಿಕ್ಕೆ ಅನುಕೂಲವಾಗುತ್ತದೆ. ಅದಕ್ಕೆ ನಾನು ಹೇಳಿದೆ. 80 ಅಮೆಂಡ್‌ಮೆಂಟ್ಸ್ ಬಹಳ ದೊಡ್ಡದಾಗಿ ಕಂಡರೂ ಕೂಡ ಇದರಲ್ಲಿ ಇರತಕ್ಕ ವಿಷಯ 7-8 ಇದೆ. ಇದರ ಬಗ್ಗೆ ನಾನು ಆಗಲೇ ಪ್ರಸ್ತಾಪ ಮಾಡಿದ್ದೇನೆ. ಈಗ ಒಂದೆರಡು ಸಲಹೆಗಳನ್ನು ಕೊಡಬೇಕು. ಸಲಹೆ ಎಂದರೆ ರೂಲ್ ಮೇಕಿಂಗ್ ಪವರ್, 1993 ಆಕ್ಟ್‌ನಲ್ಲಿ ಸಾಕಷ್ಟು ಇದೆ. ಅದನ್ನು ದಯವಿಟ್ಟು ನೀವು ಸಂಪೂರ್ಣವಾಗಿ ಉಪಯೋಗಿಸಿ. ಏಕೆಂದರೆ ಆಗಲೇ ಆಸ್ ಪರ್ ಗೈಡ್ ಲೈನ್ಸ್ ಎಂದು ಹೇಳಿದ್ದರಲ್ಲಿ. ಗೈಡ್‌ಲೈನ್ಸ್‌ನಲ್ಲಿ ಇನ್ನೂ ವಿವರವಾಗಿ ಹೇಳಲು ಸಾಧ್ಯ. ಒಂದು ಮ್ಯಾನುಯೆಲ್ ಮಾಡಲಿಕ್ಕೆ ಸಾಧ್ಯ. ಯಾವ ಒಂದು ಯೋಜನೆಯನ್ನು ಯಾವ ರೀತಿಯಿಂದ ಅನುಷ್ಠಾನ ಮಾಡಬೇಕು. ಅದರಲ್ಲಿ ಈ ಮೂರು ಹಂತದ ಪಂಚಾಯತಿಗಳ ಪಾತ್ರ ಏನು? ಇದು ಡೈನಾಮಿಕ್ ಸಿಚುಯೇಷನ್, ಬದಲಾಯಿಸುತ್ತಾ ಹೋಗುತ್ತದೆ. ಆದ ಕಾರಣ ರೂಲ್ ಮೇಕಿಂಗ್ ಪವರ್ ಅನ್ನು ನೀವು ಉಪಯೋಗಿಸಿದರೆ ಆಗ ನೀವು ಪದೇ ಪದೇ ಆಕ್ಟನ್ನು ಬದಲಾಯಿಸುವ ಪ್ರಶ್ನೆ ಬರುವುದಿಲ್ಲ. ನೀವು ಪದೇ ಪದೇ ಆಕ್ಟನ್ನು ಬದಲಾಯಿಸಿದರೆ ಆಗ ಆಕ್ಟನ್ನು ಓದಲಿಕ್ಕೆ ಯಾರೂ ಹೋಗುವುದಿಲ್ಲ. ಈಗ ಎಷ್ಟುಜನ ಓದಿಕೊಂಡು

ಬಂದಿದ್ದಾರೆ? ಆದ ಕಾರಣ ಈ ಆಕ್ಟ್ ಏನು ಇದೆ, ರೂಲ್ ಮೇಕಿಂಗ್ ಪವರ್‌ನಲ್ಲಿ ಮಾಡಲಿಕ್ಕೆ ಆಗುವುದಿಲ್ಲ ಎಂದಾಗ ಮಾತ್ರ ಆಕ್ಟ್ ಬದಲಾಯಿಸಲಿಕ್ಕೆ ಹೋಗಬೇಕು. ಏಕೆಂದರೆ ರೂಲ್ ಮೇಕಿಂಗ್‌ನಲ್ಲಿ ಕೂಡ ಆ ರೂಲ್ ಮಾಡಿದರೂ ಕೂಡ ಲೆಜಿಸ್ಲೇಚರ್ ಮುಂದೆ ಬರಬೇಕಾಗುತ್ತದೆ. ಅದರಿಂದ ಏನಾದರೂ ತಪ್ಪು ಮಾಡಿದರೆ ಅದನ್ನು ಚರ್ಚೆ ಮಾಡಲಿಕ್ಕೆ ಸಾಕಷ್ಟು ಅವಕಾಶ ಇರುತ್ತದೆ. ಈ ಅಡ್ಮಿನಿಸ್ಟ್ರೇಟೀವ್ ಮ್ಯಾನುಯಲ್ ಏನು ಇದೆ, ಅದನ್ನು ತಯಾರಿಸಿ ವರ್ಷಾವರ್ಷ ಹಳ್ಳಿ ಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ ಅವರಿಗೆ ಗೈಡೆನ್ಸ್ ಕೊಡಲಿಕ್ಕೆ ಬಹಳ ಅನುಕೂಲ ಆಗುತ್ತದೆ. ಇನ್ನೊಂದು ಸಣ್ಣ ವಿಷಯ ಇತ್ತು. ಅದು ಲ್ಯಾಟ್ರಿನ್ಸ್ ಬಗ್ಗೆ. ಲ್ಯಾಟ್ರಿನ್ಸ್ ಮಾಡದೇ ಹೋದರೆ ಅವನನ್ನು ತೆಗೆದು ಹಾಕುತ್ತೇವೆ ಎಂದು ಇತ್ತು. ಲ್ಯಾಟ್ರಿನ್ಸ್ ಬಗ್ಗೆ ನಾನು ಪ್ರತಿಪಾದನೆ ಮಾಡಿದಷ್ಟು ಇನ್ನು ಯಾರೂ ಮಾಡಿರಲಿಕ್ಕಿಲ್ಲ. ಆದರೂ ಕೂಡ ಲ್ಯಾಟ್ರಿನ್ಸ್ ಮಾಡದೇ ಇದ್ದರೆ ಅವನ ಮೆಂಬರ್‌ಶಿಪ್ ತೆಗೆದುಹಾಕುತ್ತೇವೆ, ಎಂದಲ್ಲ ಅದಕ್ಕಿಂತ ಮುಖ್ಯವಾದ ವಿಷಯಗಳು ಇವೆ. ಆದ ಕಾರಣ ಬರೇ ಲ್ಯಾಟ್ರಿನ್ಸ್ ಕಡೆ ನಿಮ್ಮ ಕಣ್ಣು ಹೇಗೆ ಹಾಯಿಸಿದಿರಿ ಎಂದು ನನಗೆ ಗೊತ್ತಾಗುವುದಿಲ್ಲ. ಆದಕಾರಣ ಏನೂ ತಪ್ಪಿಲ್ಲದೆ, it cuts both ways. ನೀರು ಇಲ್ಲ, ಮಾಡಲಿಕ್ಕೆ ಆಗುವುದಿಲ್ಲ ಎಂದು ತಕ್ಷಣ ಲ್ಯಾಟ್ರಿನ್ ಇಲ್ಲ ತೆಗೆದು ಹಾಕಲಿಕ್ಕೆ. ಇದ್ದರೂ ಕೂಡ ಏನಪ್ಪ ಕಡ್ಡಾಯವಾಗಿ ಮಾಡಿದ ಮೇಲೆ ಒಂದು ಲ್ಯಾಟ್ರಿನ್ ಮಾಡಿದ ಎಂದು ಹೇಳಿ ಅದೂ ಕೂಡ ಕೀರ್ತಿ ತರುವಂತಹ ಮಾತು ಆಗುವುದಿಲ್ಲ. ಆದ ಕಾರಣ ಇಷ್ಟೆಲ್ಲಾ ಪವರ್ಸ್ ನಿಮ್ಮ ಕಡೆ ಇರುವಾಗ, ಲ್ಯಾಟ್ರಿನ್ಸ್ ಎಲ್ಲರೂ ಮಾಡುತ್ತಿದ್ದಾರೆ. ಅದರ ಬಗ್ಗೆ ಪ್ರಚಾರ ಸಹ ಸಾಕಷ್ಟು ಆಗಿದೆ. ಸಿಂಗಲ್ ಲ್ಯಾಟ್ರಿನ್ಸ್ ಎಲ್ಲೆಲ್ಲಿ ಆಗಲಿಕ್ಕೆ ಸಾಧ್ಯ ಮಾಡುತ್ತಿದ್ದಾರೆ. ಇದನ್ನು ರದ್ದು ಮಾಡಲಿಕ್ಕೆ ಒಂದು ಆಧಾರ ಮಾಡಲಿಕ್ಕೆ ಅವಕಾಶ ಇಲ್ಲ ಎಂದು ಹೇಳಿ ನನಗೆ ಅನ್ನಿಸುತ್ತದೆ. ಆಮೇಲೆ ಕೊನೆಗೆ ಈ ಮಾತು ಕಾಗದ ಬರೆದು ತಮಗೆ ತಿಳಿಸಿದ್ದೇನೆ. To act is more important than to enact. ನಾವು ನೀವು ಸೇರಿ ಎನ್ಯಾಕ್ಟ್ ಮಾಡಿದರೂ ಕೂಡ ಎಷ್ಟರಮಟ್ಟಿಗೆ ರಾಜಕೀಯ ಇಚ್ಛಾಶಕ್ತಿ ಮತ್ತು ಆಡಳಿತದ ದಕ್ಷತೆ ಇರುತ್ತದೆ, ಅದು ಅಷ್ಟರ ಮಟ್ಟಿಗೆ ಅನುಷ್ಠಾನಕ್ಕೆ ಬರುತ್ತದೆ. Therefore, to act is more important than to enact ಎಂಬ ಮಾತು ಇದು ನನ್ನ ಸ್ವಂತದ್ದು ಅಲ್ಲ. ಬಂಗಾಲ್ ಪಂಚಾಯತ್ ರಾಜ್ ಮಿನಿಸ್ಟರ್ ಹೇಳಿದ್ದು. ಆಗ ನಾನು ಪಂಚಾಯತ್‌ರಾಜ್ ಮಂತ್ರಿ ಆಗಿದ್ದೆ. ನನಗೆ ಆ ಮಾತು ಹಿಡಿಸಿತು. ನನ್ನ ಡೈರಿಯಲ್ಲಿ ಬರೆದಿಟ್ಟೆ. ಏಕೆ ಹೇಳುತ್ತಿದ್ದೇನೆ ಎಂದರೆ ಸಾಕಷ್ಟು ಅಧಿಕಾರ ಇದೆ. ಆದರೂ ಕೂಡ ಕರಪ್ಷನ್ಸ್ ಬಗ್ಗೆ ಯಾರೂ ಕೂಡ ತಪ್ಪು ತಿಳಿದುಕೊಳ್ಳಬೇಡಿ; ಕರಪ್ಷನ್ಸ ಜಾಸ್ತಿ ಆಗುತ್ತಿದೆ. ಮೂರರಲ್ಲಿ ಒಂದು ಭಾಗ ಹಣ ಜನಕ್ಕೆ ಮುಟ್ಟುತ್ತಿಲ್ಲ ಎಂದು ಹೇಳಿ ಸರ್ವೇಸಾಮಾನ್ಯವಾಗಿ ಎಲ್ಲರೂ ಮಾತನಾಡುತ್ತಾರೆ. ಕೆಲವು ಕಡೆ ಅರ್ಧ ಕೂಡ ಮುಟ್ಟುವುದಿಲ್ಲ ಎಂದು ಇದೆ. ಒನ್ ಥರ್ಡ್ ಕೊಡವೇ ಹೋದರೆ ಕಾಂಟ್ರಾಕ್ಟೇ ಸಿಗುವುದಿಲ್ಲ. ಕಾಂಟ್ರಾಕ್ಟ್ ಬಗ್ಗೆ ತಾವು ಹೇಳಿದಿರಿ. ಫ್ಯಾಮಿಲಿ ಮೆಂಬರ್ಸ್ ಇರಬಾರದು, ಅದು ಸರಿ. ಆದರೆ ಫ್ಯಾಮಿಲಿ ಮೆಂಬರ್ಸೇ ಇರಬೇಕಾದ್ದು ಇಲ್ಲ. ಅದೆರಲ್ಲಿ ಭ್ರಷ್ಟಾಚಾರ

ನಡೆಸಲಿಕ್ಕೆ ಆದರೆ ಯಾರ ಮುಖಾಂತರವಾದರೂ ಮಾಡಿಸಬಹುದು. ಆದಕಾರಣ ಇದರಲ್ಲಿ ಐದು ಸಜೆಷನ್ಸ್ ನಾನು ಮಾಡಲಿಕ್ಕೆ ಇಚ್ಛೆ ಪಡುತ್ತೇನೆ. ಕರಪ್ಷನ್ಸ್ ತಡೆಗಟ್ಟಬೇಕಾದರೆ ಸ್ವಲ್ಪ ಮಟ್ಟಿಗೆ ಟ್ರಾನ್ಸ್‌ಪರೆನ್ಸಿ ಇರಬೇಕು. ಅಂದರೆ ತಾವು ಎಲ್ಲರಿಗೂ ಬರಹ ಮೂಲಕ ತಿಳಿಸಿ ಬಿಡಿ. ಎಲ್ಲಾ ಕಾಂಟ್ರಾಕ್ಟ್ ವಿವರಗಳು ಬೋರ್ಡಿನಲ್ಲಿ ಹಾಕಬೇಕು. ಯಾವ ಕೆಲಸ ಮಾಡಿದರೂ ಕೂಡ ಯಾವ ರೀತಿ ಅವರು ಎಸ್ಟಿಮೇಟ್ ಮಾಡಿದರು? ಎಷ್ಟು ದಿನದಲ್ಲಿ ಆ ಕೆಲಸ ಆಗಬೇಕು? ಅದಕ್ಕೆ ಖರ್ಚು ಎಷ್ಟು ಎಂದು. ಇದು ಎಲ್ಲರಿಗೂ ಅರ್ಥ ಆಗಬೇಕು. ಆಫೀಸಿಗೆ ಹೋಗಿ ಕೇಳುವ ಪ್ರಶ್ನೆ ಇಲ್ಲ. ಸಾಮಾನ್ಯ ಮನುಷ್ಯ ಅಲ್ಲಿ ಹೋದರೆ ಆ ಕೆಲಸ ಪಂಚಾಯತ್ ರಾಜ್ ವತಿಯಿಂದ ಆಗುತ್ತಿದೆ. ಇದರ ಎಸ್ಟಿಮೇಟ್ ಎಷ್ಟು ಎಂದು ಗೊತ್ತಾಗುತ್ತದೆ. ಅಂದರೆ ಅವರು ಎಸ್ಟಿಮೇಟ್ ಸರಿಯಾಗಿ ಮಾಡಿದ್ದಾರಾ ಅಥವಾ ಇಲ್ಲವಾ? ಎಸ್ಟಿಮೇಟ್ ಪ್ರಕಾರ ಕೆಲಸ ಮಾಡಿದ್ದಾರಾ? ಎಂದರೆ ಸಾಮಾನ್ಯ ಜನತೆಗೆ ಕೂಡ ಇದರಲ್ಲಿ ಆಸಕ್ತಿ ವಹಿಸಲು ಸಾಧ್ಯವಾಗುತ್ತದೆ. ಗ್ರಾಮಸಭೆ ಬಗ್ಗೆ ಹೇಳಿದ್ದೀರಿ. ಅದು ಕೂಡ ನಮ್ಮ ಆಕ್ಟನಲ್ಲಿ 6 ತಿಂಗಳಲ್ಲಿ ಒಂದು ಸಭೆ ಎಂದು ಮಾಡಿದ್ದೀರಿ. ಅದನ್ನೂ ಕೂಡ ತಾವು ಬದಲಾಯಿಸಲಿಲ್ಲ, ಧನ್ಯವಾದಗಳು. ಅದೇ ಗ್ರಾಮಸಭೆ ಇದ್ದು ಉಪಯೋಗ ಏನು? ಇದನ್ನು ಭ್ರಷ್ಟಾಚಾರದ ವಿರುದ್ಧ ಕೆಲವರಾದರೂ ಹೋರಾಟ ಮಾಡಲಿಕ್ಕೆ ಸಾಧ್ಯ ಆಗಬೇಕು. ಆದಕಾರಣ ಈ ಟ್ರಾನ್ಸ್‌ಪರೆನ್ಸಿ ಏನು ಇದೆ, ಇದು ಬರೇ ಭಾಷಣದಲ್ಲಿ ಅಲ್ಲ. ಆಡಳಿತಾತ್ಮಕವಾಗಿ ನಾವು ಅದನ್ನು ಯಾವ ರೀತಿ ಟ್ರಾನ್ಸ್‌ಫರ್ ಮಾಡಬೇಕು? ಇದರ ಬಗ್ಗೆ ಒಂದು ಚರ್ಚೆ ಇಲ್ಲಿ ನಡೆಯಲಿಕ್ಕೆ ಆಸ್ಪದ ಇದೆ. ಅದನ್ನು ಮಾಡಬೇಕು. ಏಕೆಂದರೆ ಸೊಂಡೂರಿನಲ್ಲಿ ಈ ಪ್ರಯೋಗ ನಾವು ಮಾಡಿದ್ದೇವೆ. ಪ್ರತಿಯೊಂದು ಕೆಲಸಕ್ಕೆ ನಾವು ಬೋರ್ಡಿನಲ್ಲಿ ಬರೆಯುತ್ತಿದ್ದೆವು. ಅದರಿಂದ ಜನಕ್ಕೆ ಒಂದು ಸಮಾಧಾನ ಇದೆ. ಇಲ್ಲದೇ ಹೋದರೆ ಯಾವುದೋ ಒಂದು ಊಹೆ, ಇದಕ್ಕೆ ಸರಿಯಾಗಿ ಕೆಲಸ ನಡೆದಿದೆಯೋ ಇಲ್ಲವೋ ಎಂದು. ಅದಕ್ಕೆ ಈ ಟ್ರಾನ್ಸ್‌ಪರೆನ್ಸಿ. ಇನ್ನೊಂದು ಇನ್ಸ್‌ಪೆಕ್ಷನ್ ನಮ್ಮ 1993ರ ಆಕ್ಟ್‌ನಲ್ಲಿ ಇನ್ಸ್‌ಪೆಕ್ಷನ್ ಪ್ರೊಸೀಜರ್ ಏನು ಇದೆ, ಮೇಲಿನ ಆಫೀಸರ್ಸ್ ಬಂದು ಇನ್ಸ್‌ಪೆಕ್ಟ್ ಮಾಡಬೇಕು ಎಂದು. ಇದರ ಬಗ್ಗೆ 1993ರಲ್ಲಿ ನಾವು ಬಹಳ ಒತ್ತು ಕೊಟ್ಟಿದ್ದೆವು. ತಾವೂ ಕೂಡ ಅದನ್ನು ಹಾಗೆನೇ ಉಳಿಸಿದ್ದೀರಿ. ಇನ್ನೂ ಬಲಪಡಿಸಲಿಕ್ಕೆ ಪ್ರಯತ್ನ ಮಾಡಿದ್ದೀರಿ. ಏಕೆಂದರೆ ಈ ಹೈರಾರ್ಕಿ ಆಫ್ ಆಫೀಸರ್ಸ್, ವರ್ಟಿಕಲ್ ಅವರು ಬಂದು ಇನ್ಸ್‌ಪೆಕ್ಟ್ ಮಾಡುವುದಿಲ್ಲ. ಏಕೆಂದರೆ ಪಂಚಾಯತ್ ರಾಜ್‌ಗೆ ಸಂಬಂಧಪಟ್ಟಿದ್ದು ನಮಗೆ ಸಂಬಂಧಪಟ್ಟಿದ್ದು ಅಲ್ಲ. This is a basic fundamental wrong in the Indian administration. ಏಕೆಂದರೆ ಚೀಫ್ ಇಂಜಿನಿಯರ್ ನಿಂದ ಕೆಳಗೆ ಜೂನಿಯರ್ ಇಂಜಿನಿಯರ್‌ವರೆಗೂ ಅಥವಾ ಆಯಾಯ ಇಲಾಖೆಗೆ ಸಂಬಂಧಪಟ್ಟವರು, ಮೇಲಿನ ಆಫೀಸರ್ ಬಂದು ಕೆಳಗಿನ ಆಫೀಸರ್ ಏನು ಮಾಡುತ್ತಿದ್ದಾನೆ, ಎಂಬುದನ್ನು ನೋಡಿ ಅದನ್ನು ಇನ್ಸ್‌ಪೆಕ್ಟ್ ಮಾಡಿ, ಆ ಇನ್ಸ್‌ಪೆಕ್ಷನ್ ಅನ್ನು ರೆಕಾರ್ಡ್ ಮಾಡದೇ ಹೋದರೆ ಆಗ ಇವರೇ ಇಂಡಿಪೆಂಡೆಂಟ್

ಆಫೀಸರ್ ಆಗುತ್ತಾರೆ. They are not responsible to any higher authority. I am glad that you have not disturbed inspection powers in the Act. But, I request you to act on that. Instruct the officers that you must do so many inspections. ಆ ಇನ್ಸ್‌ಪೆಕ್ಷನ್ ಮಾಡಿದ ಮೇಲೆ ಅದು ಏನಾಯಿತು ಎಂದು ಇನ್ಸ್‌ಪೆಕ್ಷನ್ ಮಾಡಿ ಅದರಲ್ಲಿ ಏನಾದರೂ ತಪ್ಪು ಸಿಕ್ಕರೆ ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಮಾಡಿ. ಡಿಪಾರ್ಟ್‌ಮೆಂಟ್‌ಲ್ ಎನ್‌ಕ್ವೈರಿ ಮಾಡಿದರೆ ಇಷ್ಟ ದಿವಸದಲ್ಲಿ ಅದು ಪೂರೈಸಬೇಕು ಎಂದು ಬರೆಯಿರಿ. ಯಾವ ರೀತಿ ಬೇರೆ ವಿಷಯಕ್ಕೆ ಬರೆದಿದ್ದೀರಿ, ಡಿಪಾರ್ಡ್‌ಮೆಂಟಲ್ ಎನ್‌ಕ್ವೈರಿ ಐದೈದು ವರ್ಷ ನಡೆಯುವುದಾದರೆ ಏನು ಪ್ರಯೋಜನ? ಆದಕಾರಣ ಈ ಟ್ರಾನ್ಸ್‌ಪರೆನ್ಸಿ, ಇನ್ಸ್‌ಪೆಕ್ಷನ್, ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಮಾಡಿ. ಅವಶ್ಯಕತೆ ಇದ್ದರೆ ಉಪಲೋಕಾಯುಕ್ತ ತರಹ ಒಂದು ವ್ಯವಸ್ಥೆ ಮಾಡಿ. ಅಲ್ಲಿ ನಡೆದಿರುವ ಅಕ್ರಮ ಏನಿದೆ ಅದು ಕೋರ್ಟಿನಲ್ಲಿ ತೀರ್ಮಾನ ಆಗುವುದಾದರೆ ಆಗಲಿ, ಇಲ್ಲದಿದ್ದರೆ ಹತ್ತುತ್ತು ವರ್ಷ ಆದರೂ ಕೋರ್ಟಿಗೆ ಹೋಗಿ ಏನೂ ಪ್ರಯೋಜನವಾಗುವುದಿಲ್ಲ. You can consider having a upa-lokayukta only for this purpose. ಇಷ್ಟು ಮಾಡಿದರೆ ನಾವು ನೀವು ಮಾಡಿದ ಆಕ್ಟ್ ಸಾರ್ಥಕವಾಗುತ್ತದೆ. ಇಲ್ಲದೇಹೋದರೆ ಭ್ರಷ್ಟಾಚಾರದ ವಿಕೇಂದ್ರೀಕರಣ ಇವರೆಲ್ಲಾ ಸೇರಿ ಮಾಡಿದರು ಎಂದು ನಮ್ಮೆಲ್ಲರ ಮೇಲೆ ಅಪವಾದ ಬರುತ್ತದೆ. ಇದು ಕಾನೂನಿನ ಪ್ರಶ್ನೆಯಲ್ಲ, ರಾಜಕೀಯ ಇಚ್ಛಾಶಕ್ತಿಯ ಪ್ರಶ್ನೆ ಇದೆ. ಮತ್ತು ಆಡಳಿತದ ದಕ್ಷತೆ ಪ್ರಶ್ನೆ ಇದೆ. ಇವೆರಡೂ ತಮಗೆ, ತಮ್ಮ ಸರ್ಕಾರಕ್ಕೆ ಸಾಕಷ್ಟು ಇದೆ ಎಂದು ನಂಬಿ ನಾನು ಈ ಮಾತನ್ನು ಹೇಳಿದ್ದೇನೆ, ವಂದನೆಗಳು.

+ ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಅಧ್ಯಕ್ಷರೇ, ಪಂಚಾಯಿತಿರಾಜ್‌ದ ಈ ಮಸೂದೆಗೆ ಮೂರನೇ ತಿದ್ದುಪಡಿಯನ್ನು ತಂದಿದ್ದೀರಿ. ಇದರಲ್ಲಿ ಸಾಕಷ್ಟು ತಮ್ಮ ಅನುಭವ ಮತ್ತು ಅಧಿಕಾರದಲ್ಲಿದ್ದವರನ್ನು ಕೇಳಿ ಇದನ್ನು ತಂದಿದ್ದೇನೆಂದು ಪ್ರಾಸ್ತಾವಿಕ ಭಾಷಣದಲ್ಲಿ ತಾವು ಹೇಳಿದ್ದೀರಿ. ಆದರೂ ನಮಗೆ ಅನೇಕ ಅನುಮಾನಗಳು ಉಳಿದೇ ಉಳಿಯುತ್ತವೆ. ಮೊದಲನೆಯದಾಗಿ ಹಿರಿಯರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಶೌಚಾಲಯ ಇಲ್ಲದವರು ಚನಾವಣೆಗೆ ನಿಲ್ಲಲಿಕ್ಕೆ ಅನರ್ಹರು ಎಂದು ಏನು ಹೇಳಿದ್ದೀರಿ ಈ ಯೋಜನೆಯಲ್ಲಿ ಸರ್ಕಾರ ಶೌಚಾಲಯಗಳನ್ನು ಕೊಟ್ಟು ಸಂಪೂರ್ಣವಾಗಿ ಎಲ್ಲಾ ಬಡವರಿಗೂ ಅದು ತಲುಪುವಂತೆ ಮಾಡಿ ಆಮೇಲೆ ತಿದ್ದುಪಡಿ ತಂದಿದ್ದರೆ ತುಂಬ ಒಳ್ಳೆಯದಾಗುತ್ತಿತ್ತೇನೋ ಎಂಬುದು ನನ್ನ ಅನಿಸಿಕೆ. ಇನ್ನೊಂದು, ಗ್ರಾಮಸಭೆಗಳು. ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಅತ್ಯಂತ ಸತ್ವಯುತವಾಗಿರಬೇಕು ಎನ್ನುವುದನ್ನು ತಾವು ಒಪ್ಪಿಕೊಂಡಿದ್ದೀರಿ ಇದು ಇವತ್ತು ಆಗುತ್ತಿಲ್ಲ. ಪ್ರತಿ ಗ್ರಾಮೀಣ ಪ್ರದೇಶದ ಪ್ರಜೆಯೂ ಕೂಡ ಸದಸ್ಯನಾಗಿರುವ ಒಂದು ಗ್ರಾಮಸಭೆಯಲ್ಲಿ ಹೋಗಿ

ಕೂತು ಗ್ರಾಮಕ್ಕೆ ಯಾವ ಕಾಮಗಾರಿಗಳು ಆಗಬೇಕೆಂದು ಕೇಳುವ ಒಂದು ಕ್ರಿಯೆ ಏನಿತ್ತು ಅದು ಇವತ್ತು ಸರಿಯಾಗಿ ನಡೆಯುತ್ತಿಲ್ಲ. ಗ್ರಾಮಸಭೆಗಳು 6 ತಿಂಗಳಿಗೊಮ್ಮೆ ನಡೆಯುವುದನ್ನು ಕಡ್ಡಾಯಪಡಿಸಬೇಕಾಗಿದೆ. ಅದು ಈ ಮೂಲ ನಿಯಮಾವಳಿಯಲ್ಲಿ ಎಲ್ಲೂ ಕೂಡ ಬರುವುದಿಲ್ಲ. ಈಗೇನಾಗಿದೆ ಏನು ಮಾಡಬೇಕಾಗಿದೆ ಎನ್ನುವುದು ಇದೆಯೇ ಹೊರತು ಮಾಡದಿದ್ದರೆ ಏನು ಅನ್ನುವುದು ಇಲ್ಲ. ಅಲ್ಲಿ ಏನಾದರೂ ನಿರ್ದಿಷ್ಟಪಡಿಸಬೇಕಲ್ಲಾ. 6 ತಿಂಗಳಿಗೊಮ್ಮೆ ಹೋಗಿ ಗ್ರಾಮದಲ್ಲಿ ಕೂತು ಗ್ರಾಮಸ್ಥರನ್ನು ಸೇರಿಸಿ ಟಾಂಟಾಂ ಹೊಡೆಸಿ ಅದನ್ನು ಮಾಡದೇ ಹೋದರೆ ಗ್ರಾಮಸಭೆ ಅಧ್ಯಕ್ಷನಿಗೆ ಕಾರ್ಯದರ್ಶಿಗೆ ಏನು ಶಿಕ್ಷೆ ಅನ್ನುವುದು ಇಲ್ಲವೇ ಇಲ್ಲ. ಈಗ ವರದಿಯನ್ನು ತರಿಸಿ ಬೇಕಾದರೆ. ರಾಜ್ಯದಲ್ಲಿ ಎಷ್ಟು ಗ್ರಾಮಪಂಚಾಯಿತಿಗಳು 6 ತಿಂಗಳಿಗೊಮ್ಮೆ ಎಷ್ಟು ಗ್ರಾಮಸಭೆಗಳನ್ನು ನಡೆಸಿವೆ ಎನ್ನುವುದಕ್ಕೆ ಉಲ್ಲೇಖವೇ ಇಲ್ಲ. ಬೇಕಾಬಿಟ್ಟಿಯಾಗಿ ನಡೆಯುತ್ತಿವೆ. ಕೆಲವು 8 ತಿಂಗಳಿಗೆ ನಡೆಯುತ್ತದೆ ಕೆಲವು ವರ್ಷಕ್ಕೊಂದು ನಡೆಸುತ್ತಿದ್ದಾರೆ ಕೆಲವು ನಡೆಯದೆ ಇರುವಂಥವು, ಬಹುಶಃ ಚುನಾವಣೆ ಆದನಂತರ ಮೊದಲನೇ ಗ್ರಾಮಸಭೆ ನಡೆದಿದೆ. ಆಮೇಲೆ ನಡೆಯಲೇ ಇಲ್ಲ. ಇಂತಹ ಪಂಚಾಯಿತಿಗಳು ಅನೇಕವು ಇವೆ. ಇದನ್ನು ಕಡ್ಡಾಯಗೊಳಿಸಿದಾಗ ಮಾತ್ರ ಅರ್ಥ ಬರುತ್ತದೆ. ಮತ್ತು ಗ್ರಾಮಸಭೆಗಳಲ್ಲಿ ಏನನ್ನು ಹೇಳಬೇಕು ಎನ್ನುವುದನ್ನೂ ಕೂಡ ರೂಲ್ಸ್‌ನಲ್ಲಾದರೂ ಸ್ಪಷ್ಟಪಡಿಸಬೇಕಾಗುತ್ತದೆ. ವರದಿಯನ್ನು ಯಾವರೀತಿ ಓದಬೇಕು ಅದರಲ್ಲಿ ಯಾವ್ಯಾವ ಅಂಶಗಳು ಇರಬೇಕು ಎಂಬ ಫಾರ್ಮ್ಯಾಟನ್ನು ಹಾಕಿಕೊಟ್ಟರೆ ತುಂಬ ಒಳ್ಳೆಯದಾಗುತ್ತದೆ. ಅಧ್ಯಕ್ಷರೇ, ನನ್ನ ಆಲೋಚನ ಇಷ್ಟೇನೆ 6 ತಿಂಗಳ ಕಾಲದಲ್ಲಿ ಪಂಚಾಯಿತಿಯಲ್ಲಿ ಯಾವ್ಯಾವ ಕಾಮಗಾರಿಗಳನ್ನು ಮಾಡಿದ್ದೇವೆ ಅವುಗಳಿಗೆ ಎಷ್ಟೆಷ್ಟು ಹಣವನ್ನು ವ್ಯಯ ಮಾಡಿದ್ದೇವೆ ಎಷ್ಟು ಅಳತೆ ಮತ್ತು ಏನೇನು ಸರಂಜಾಮುಗಳನ್ನು ಅಲ್ಲಿ ಉಪಯೋಗಿಸಿದ್ದೇವೆ ಇಂತಹ ಅನೇಕ ಮಾಹಿತಿಗಳನ್ನು ಗ್ರಾಮ ಸಭೆಗಳಿಗೆ ಕಡ್ಡಾಯವಾಗಿ ಕೊಟ್ಟಾಗ ಮಾತ್ರ ಸಭೆಯ ಪ್ರತಿ ಸದಸ್ಯನೂ ಅದನ್ನು ನೋಡಿ ನೀನು ಇದನ್ನು ಉಪಯೋಗಿಸಲಿಲ್ಲ ಇಲ್ಲಿ ಕಳಪೆಯಾಗಿದೆ ಏಕೆಂದರೆ ಪ್ರತಿನಿತ್ಯ ಅತ ನೋಡುತ್ತಾ ಇರುತ್ತಾನೆ. ಇದನ್ನು ಕಡ್ಡಾಯಪಡಿಸುವುದು ತುಂಬ ಒಳ್ಳೆಯದು. ಹಾಗೆ ದುರ್ನಡತೆ ಬಗ್ಗೆ ತಾವೊಂದು ತಿದ್ದುಪಡಿ ತಂದಿದ್ದೀರಿ. ದುರ್ನಡತೆ ಯಾವುದು ಅದನ್ನು ನಿರ್ಧಾರ ಮಾಡುವುದು ಹೇಗೆ ಅದನ್ನು ಸ್ಪಷ್ಟಪಡಿಸಬೇಕಾಗುತ್ತೆದೆ. ಏಕೆಂದರೆ ಯಾವುದೋ ರಾಜಕೀಯ ಕಾರಣಕ್ಕೋಸ್ಕರ ಏನೋ ಕುಡಿದುಬಂದಿದ್ದ ಎಂದು ಮೆಜಾರಿಟಿ ಇರುವ ಪಕ್ಷ ಅವನ ಅನರ್ಹತೆಗೆ ನಿರ್ಣಯ ಮಾಡಿಬಿಟ್ಟರೆ ತುಂಬಾ ಕಷ್ಟವಾಗುತ್ತದೆ. ಅನಾವಶ್ಯಕವಾಗಿ ಒಬ್ಬ ಸದಸ್ಯನ ಹಕ್ಕಿಗೆ ಚ್ಯುತಿಯಾಗುವ ಸಂದರ್ಭಗಳು ಇಲ್ಲಿ ಬರಬಾರದು. ಇನ್ನೊಂದು, ತಾಲ್ಲೂಕುಪಂಚಾಯಿತಿಯಲ್ಲಿ ಉಪಸಮಿತಿಗಳು ಮೂರಿವೆ; ಆ ಮೂರರಲ್ಲಿ ಎರಡಕ್ಕೆ ಅಧ್ಯಕ್ಷ - ಅಧ್ಯಕ್ಷನಾಗಿರುತ್ತಾನೆ ಒಂದರಲ್ಲಿ ಉಪಾಧ್ಯಕ್ಷ - ಅಧ್ಯಕ್ಷನಾಗಿರುತ್ತಾನೆ. ಇವುಗಳಲ್ಲಿ ಒಂದರಲ್ಲಾದರೂ ಸದಸ್ಯ ಅಧ್ಯಕ್ಷನಾಗುವ ಹಾಗೆ ಮಾಡಿದರೆ ತುಂಬ ಒಳ್ಳೆಯದು. ಉಪಸಮಿತಿಯಲ್ಲಿ ಅಧ್ಯಕ್ಷರಾಗಲು ಸದಸ್ಯನಿಗೆ ಚಾನ್ಸೂ

ಇರುವುದಿಲ್ಲ. ಜಿಲ್ಲಾಪಂಚಾಯಿತಿಗಳಲ್ಲಿ ಸದಸ್ಯ ಅಧ್ಯಕ್ಷನಾಗಲು ಬರುತ್ತದೆ. ಉಪಸಮಿತಿಗಳಲ್ಲಿ ಒಂದರಲ್ಲಾದರೂ ಸದಸ್ಯ ಅಧ್ಯಕ್ಷನಾಗಲು ಬದಲಾವಣೆ ಮಾಡುವುದು ಒಳ್ಳೆಯದು ಎಂಬುದು ನನ್ನ ಸಲಹೆ. ಇನ್ನೊಂದು ಬಹಳ ಸ್ಪಷ್ಟವಾಗಿ ಹೇಳಿದ್ದೀರಿ ಪಂಚಾಯಿತ್‌ರಾಜ್ ಸಂಸ್ಥೆಗಳು ಸ್ಥಳೀಯ ಸ್ವಯಂ ಸರ್ಕಾರದ ಘಟಕಗಳಂತೆ ಕಾರ್ಯನಿರ್ವಹಿಸತಕ್ಕದ್ದೆಂಬುದನ್ನು ಅಧಿನಿಯಮದ ಪ್ರಸ್ತಾವನೆಯಲ್ಲಿ ಸ್ಪಷ್ಟವಾಗಿ ಸೂಚಿಸುವಂತೆ ಮಾಡುವುದು ಎಂದು. ಸರ್ಕಾರಕ್ಕೆ ಏನೆಲ್ಲಾ ಅಧಿಕಾರ ಇದೆ ಎಂಬುದು ನನಗಂತೂ ಅನಿಸುವುದಿಲ್ಲ. ಏಕೆಂದರೆ ನೇಮಕಾತಿಯೇ ಇಲ್ಲ. ತಮ್ಮ ಬಳಿನೇ ನಾನು ಬಂದು ಒಬ್ಬ ಇಂಜಿನಿಯರನ್ನು ಕೊಡಿ ಅಂದರೆ ನೀವು ಉದಾಸಿಯವರ ಕಡೆ ನೋಡಬೇಕಾಗುತ್ತದೆ. ಪಂಚಾಯತ್‌ರಾಜ್ ವ್ಯವಸ್ಥೆಗೆ ಏನಾದರೂ ನೇಮಕಾತಿ ವ್ಯವಸ್ಥೆ ಅದರದ್ದೇ ಆದದ್ದು ಇರಬೇಕಾಗುತ್ತದೆ. ಇಲ್ಲದಿದ್ದರೆ ಇವತ್ತು ಎಲ್ಲವೂ ಕೂಡ ನೀವು ತಾಲ್ಲೂಕು ಜಿಲ್ಲಾಪಂಚಾಯಿತಿಗಳನ್ನು ನೋಡಿ, ಅಲ್ಲಿ ಸಿಬ್ಬಂದಿ ಕೊರತೆ ವ್ಯಾಪಕವಾಗಿದೆ. ನಾಲ್ಕನೇ ದರ್ಜೆ ಜವಾನನಿಂದ ಹಿಡಿದು ಪ್ರತಿಯೊಂದು ಹುದ್ದೆಯೂ ಖಾಲಿ ಇವೆ. ಬಿಡಿಓ ಹುದ್ದೆ ಖಾಲಿ ಇದೆ ಕೆಲವು ಕಡೆ ಅಕೌಂಟೆಂಟ್ಸ್ ಇಲ್ಲ ಇದಕ್ಕೆ ಸರ್ಕಾರದಲ್ಲಿ ಏನಾದರೂ ಒಂದು ವ್ಯವಸ್ಥೆ ಮಾಡಬೇಕಾಗುತ್ತದೆ. ಅಥವಾ ಆಕ್ಟ್‌ನಲ್ಲೇ ಇದನ್ನು ತಂದು ಆ ಸಂಸ್ಥೆಗಳು ನೇಮಕಾತಿಗೆ ಅವಕಾಶ ಮಾಡಿಕೊಳ್ಳುವುದು ಅಥವಾ ಸರ್ಕಾರದ ಮಟ್ಟದಲ್ಲಿ ಆ ಸಂಸ್ಥೆಗಳಿಗೇ ರಿಕ್ರೂಟ್ ಮಾಡುವಂಥದ್ದು ತುಂಬ ಒಳ್ಳೆಯದು. ಈಗ ಜಿಲ್ಲಾಪಂಚಾಯತಿ, ತಾಲ್ಲೂಕುಪಂಚಾಯಿತಿಯ, ಅಧಿನಿಯಮಗಳಲ್ಲಿ ಏನಿದೆ ಅಂದರೆ ಉಪಸಮಿತಿಯಲ್ಲಾಗುವ ನಿರ್ಣಯಗಳು ಪೂರ್ಣಬಾರಿಗೆ ಸಭೆಯಲ್ಲಿ ಬಂದು ಚರ್ಚೆಯಾಗಿ ಅನಂತರವೇ ಕಾರ್ಯರೂಪಕ್ಕೆ ಬರುವಂಥದ್ದು. ಇವತ್ತು ಹಾಗಿಲ್ಲ. ನಿಯನಾವಳಿಯಲ್ಲಿ ಅದಿಲ್ಲವೇ ಇಲ್ಲ. ಜಿಲ್ಲಾ ತಾಲ್ಲೂಕುಪಂಚಾಯಿತಿಗಳಲ್ಲಿ ಇವರ ಪರಿಸ್ಥಿತಿ ಏನಾಗಿದೆ ಅಂದರೆ ಉಪಸಮಿತಿಗಳಲ್ಲಿ ಮೂರು ಜನ ಕುಳಿತುಕೊಳ್ಳುವುದು ಅಧಿಕಾರಿಗಳು ಸೇರಿಕೊಳ್ಳುವುದು ಒಂದು ನಿರ್ಣಯ ಪಾಸ್ ಮಾಡಿಸಿಬಿಡುತ್ತಾರೆ ಮಾರನೇ ದಿವಸವೇ ಇಂಪ್ಲಿಮೆಂಟ್ ಮಾಡುತ್ತಾರೆ ಅಥವಾ ಮೊದಲೇ ಮಾಡಿರುವುದನ್ನು ತಂದು ಅಲ್ಲಿಟ್ಟು ಇದರಿಂದಾಗಿ ಅವಿದ್ಯಾವಂತರು, ಹೆಚ್ಚು ಜ್ಞಾನ ಇಲ್ಲದಿರುವವರೂ ಕೂಡ ಆಯ್ಕೆಯಾಗಿ ಹೋಗಿದ್ದಾರೆ. ಇದರ ದುರ್ಲಾಭ ಆಗುತ್ತಿದೆ ಆ ಸಂಸ್ಥೆಗಳಲ್ಲಿ. ಇದನ್ನು ತಡೆಯುವುದಕ್ಕಾಗಿ ಪೂರ್ಣಬಾಡಿಗೆ ಅದು ಬಂದು ಚರ್ಚೆಯಾದ ನಂತರವೇ ಅದು ಇಂಪ್ಲಿಮೆಂಟಾಗುವ ಹಾಗೆ ನಿಯಮಾವಳಿಯಲ್ಲಿ ತಿದ್ದುಪಡಿ ತರುವುದು ತುಂಬ ಒಳ್ಳೆಯದು. ಉಪಸಮಿತಿ ಸಭೆಗಳಲ್ಲಿ ಕೋರಂ ವ್ಯವಸ್ಥೆ ಏನೂ ಕೂಡ ಇಲ್ಲ. ಎಷ್ಟು ಜನ ಇದ್ದರೆ ಮಾತ್ರ ಸಭೆ ನಡೆಸಬೇಕೆನ್ನುವುದು ಇಲ್ಲ. ಬಹಳ ಪ್ರಮುಖವಾಗಿರುವಂತಹ ಅನೇಕ ನಿರ್ಣಯಗಳು ಇಲ್ಲಿ ಆಗುತ್ತವೆ. ಇಬ್ಬರಿದ್ದರೂ ನಿರ್ಣಯಗಳು ಪಾಸಾಗುತ್ತಿವೆ. ಅದು ಮೇನ್‌ಬಾಡಿಗೆ ಬರದೇನೇ ಇಂಪ್ಲಿಮೆಂಟಾಗಿರುವಂತಹ ಅನೇಕ ನಿದರ್ಶನಗಳು ಶಿವಮೊಗ್ಗ ಜಿಲ್ಲಾ ಪರಿಷತ್ತಿನಿಂದ ಹಿಡಿದು ಅನೇಕ ಜಿಲ್ಲಾಪರಿಷತ್ತುಗಳಲ್ಲಿ ಸಾಕಷ್ಟು ಸಮಸ್ಯೆ ಉಂಟು ಮಾಡಿವೆ. ಹೀಗಾಗಿ ನಿಯಮಾವಳಿಯಲ್ಲೇ ಕೋರಂ ವ್ಯವಸ್ಥೆ ಬಗ್ಗೆ

ತೋರಿಸುವುದು ಒಳ್ಳೆಯದು. ಆಮೇಲೆ ಅನೇ ಲಾಖೆಗಳನ್ನು ಬೇರೆಬೇರೆ ಸಂಸ್ಥೆಗಳಿಗೆ ಮಾಡಿದ್ದೀರಿ.

ಮಾನ್ಯ ಸದಸ್ಯರು: ಸದನದೊಳಕ್ಕೆ ಫೋನ್ ತರಬಾರದು ಎಂದು ಹಿಂದೆ ಹೇಳಿದ್ದೀರಿ ಆದರೆ ಈಗ ಸೆಲ್ಯುಲರ್ ಫೋನ್‌ನ ರಿಂಗ್ ಸದ್ದು ಬರುತ್ತಿದೆ, ಕೇಳಿ, ಏನಿದು?

ಉಪಾಧ್ಯಕ್ಷರು: ಹೌದು ಯಾರೂ ತರಬಾರದು.

5.40 ಪಿ.ಎಂ

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್: ಸನ್ಮಾನ್ಯ ಉಪಾಧ್ಯಕ್ಷರೆ, ಸದನಕ್ಕೆ ಫೋನ್ ತರಬಾರದು ಎಂದು ಕಳೆದ ಸಾರಿ ಸಭಾಧ್ಯಕ್ಷರು ಹೇಳಿದ್ದರು. ಆದರೆ ಇವತ್ತು ಫೋನಿನ ರಿಂಗ್ ಶಬ್ದ ಬರುತ್ತಾ ಇದೆ ನೋಡಿ, ಇದು ಏನಿದು? ಸದನಕ್ಕೆ ಫೋನ್ ತರುವುದು ಅಂದರೆ, ಇದರಲ್ಲಿ ಅರ್ಥವಿಲ್ಲ. ಮೊಬೈಲ್ ಫೋನ್, ಸೆಲ್ಯೂಲಾರ್ ಫೋನ್, ಒಂದು ಸಲ ಸದನಕ್ಕೆ ಫೋನ್ ತರಬಾರದು ಎಂದು ತಿರ್ಮಾನ ಆದಮೇಲೆ ಯಾರಾದರೂ ಸರಿ ಫೋನ್ ತರಬಾರದು. ಅವರು ತಂದಿದ್ದರೆ ಹೊರಗಡೆ ಹೋಗಿ ಮಾತನಾಡಿ ಬರಲಿ.

ಉಪಾಧ್ಯಕ್ಷರು: ಸದನಕ್ಕೆ ಫೋನ್ ಯಾರೂ ತರಬಾರದು.

ಶ್ರೀ ಜೆ.ಸಿ.ಮಾಧುಸ್ವಾಮಿ: ಅದು ಫೋನ್ ಯಾರದ್ದೋ, ಗ್ರಹಚಾರಕ್ಕೆ ಅವರಿಗೆ ಫೋನ್ ಆಫ್ ಮಾಡುವುದಕ್ಕೆ ಬರುತ್ತಾ ಇಲ್ಲ. ಆಫ್ ಮಾಡವುದಕ್ಕೆ ಬರದೇ ಇದ್ದ ಕಾರಣ ಇಲ್ಲಿಗೆ ತಂದರು.

ಉಪಾಧ್ಯಕ್ಷರು: ಆಯಿತು, ಆ ಫೋನ್ ತೆಗೆದುಇಟ್ಟು ಬಿಡಿ. ಹೊರಗೆ ಕಳುಹಿಸಿ. ಆಯಿತು, ಜ್ಞಾನೇಂದ್ರ ಅವರೇ, ತಾವು ಮುಂದುವರೆಸಿ. ಈಗಾಗಲೇ ಒಮ್ಮೆ ಅಧ್ಯಕ್ಷರು ಸದನದ ಒಳಗೆ ಫೋನ್ ತರಬಾರದು ಎಂದು ರೂಲಿಂಗ್ ಕೊಟ್ಟಿದ್ದಾರೆ. ಆ ಪ್ರಕಾರ ಎಲ್ಲರೂ ನಡೆದುಕೊಳ್ಳಬೇಕು. ದಯಮಾಡಿ ಎಲ್ಲರೂ ಆ ರೀತಿ ನಡೆದುಕೊಳ್ಳಬೇಕು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅಲ್ಲಿ ರಿಂಗ್ ಆಗುತ್ತಾ ಇದೆ, ಅದನ್ನು ಆಫ್ ಮಾಡುವುದಕ್ಕೆ ಗೊತ್ತಿಲ್ಲ.

ಶ್ರೀ ಹೆಚ್.ಶಿವಪ್ಪ: ಸದನಕ್ಕೆ ಫೋನ್ ತಂದರೆ ಯಾವ ರೀತಿ ಪರಿಣಾಮ ಆಗುತ್ತದೆ ಎಂದು ಗೊತ್ತಾದರೆ ಅವರು ತರುವುದನ್ನು ಬಿಡುತ್ತಾರೆ. ಬರೀ ಹೇಳಿದರೆ ಆಗುವುದಿಲ್ಲ, ಅದರ ಪರಿಣಾಮ ಏನು ಎಂಬುದು ಗೊತ್ತಾದರೆ ಅವರು ತರುವುದಿಲ್ಲ.

ಶ್ರೀ ಹೆಚ್.ಎನ್.ನಂಜೇಗೌಡ: ಸನ್ಮಾನ್ಯ ಉಪಾಧ್ಯಕ್ಷರೆ, ಸಭೆಗೆ ಬರಬೇಕು ಎಂದು ಇಟ್ಟುಕೊಳ್ಳಿ, ಆ ಸಮಯದಲ್ಲಿ ಲಕ್ಷ ಹೊಡೆದುಬಿಡುತ್ತದೆ, ಓಡಾಡುವುದಕ್ಕೆ

ಆಗುವುದಿಲ್ಲ, ಆ ಸಮಯದಲ್ಲಿ ದೊಣ್ಣೆ ಹಿಡಿದುಕೊಂಡು ಓಡಾಡಬೇಕಾಗುತ್ತದೆ; ಆದರೆ ಸಭೆಯಲ್ಲಿ ದೊಣ್ಣೆ ಅಲೋ ಮಾಡುವುದಿಲ್ಲ ಕೈಯಲ್ಲಿ ಅವರನ್ನು ಹಿಡಿದುಕೊಂಡು ಬಂದು ಕೂರಿಸುತ್ತಾರೆ. ಅಂದರೆ We have to maintain certain sanctity inside the House. ಇದೆಲ್ಲಾ ಸಭೆಗೆ ತರಬಾರದು, ಇದನ್ನು ಪರಿಗಣಿಸಬೇಡಿ. ಈ ರೀತಿ ಮಾಡಬಾರದು.

ಉಪಾಧ್ಯಕ್ಷರು: ತರಬಾರದು ಎಂದು ಹೇಳಿದ್ದಾರೆ.

ಶ್ರೀ ಉಮೇಶ್.ವಿ.ಕತ್ತಿ: ತಂದವರು ಬೇರೆ, ಅದನ್ನು ಬಿಟ್ಟು ಹೋಗಿದ್ದಾರೆ, ಅದನ್ನು ಇವರಿಗೆ ಆಫ್ ಮಾಡುವುದಕ್ಕೆ ಬರುತ್ತಾ ಇಲ್ಲ.

ಶ್ರೀ ಹೆಚ್.ಡಿ.ಬಸವರಾಜ್: ಈಗ ಅದನ್ನು ಹೊರಗಡೆ ಹಾಕಿಸಿ, ಪುನಃ ಅದು ಬಡಿದುಕೊಳ್ಳುತ್ತಾ ಇದೆ,....

(ಗೊಂದಲ)

ಶ್ರೀ ವಾಟಾಳ್ ನಾಗ್‌ರಾಜ್: ಸನ್ಮಾನ್ಯ ಉಪಾಧ್ಯಕ್ಷರೇ, ಆ ಫೋನ್ ಯಾರದ್ದು ಎಂದು ಗೊತ್ತಾಗಿಲ್ಲ, ಅದನ್ನು ತಾವು ತಮ್ಮ ವಶಕ್ಕೆ ತೆಗೆದುಕೊಳ್ಳಿ. ದಯವಿಟ್ಟು ತಮ್ಮ ವಶಕ್ಕೆ ತೆಗೆದುಕೊಂಡು ಇಟ್ಟುಕೊಳ್ಳಿ. ನಂತರ ಅದು ಯಾರದ್ದು ಎಂದು ಗೊತ್ತಾಗುತ್ತದೆ. ಉಪಾಧ್ಯಕ್ಷರೇ, ಆ ಫೋನ್ ತರಿಸಿ, ಏನು ಇದು ಹುಡುಗಾಟದ ಮಾತಾ? ಈ ಸಭೆಗೆ ಕೆಲವು ನಿಯಮಾವಳಿಗಳು ಇದೆ, ಆ ನಿಯಮಾವಳಿಗಳೆ ಉಲ್ಲಂಘನೆ ಆಗುತ್ತಿದೆ.

ಉಪಾಧ್ಯಕ್ಷರು: ಆಗ ಬಹುದು. ಸನ್ಮಾನ್ಯ ಅರಗ ಜ್ಞಾನೇಂದ್ರ ಅವರೇ, ತಾವು ಮುಂದುವರೆಸಿ.

ಶ್ರೀ ಅರಗ ಜ್ಞಾನೇಂದ್ರ: ಈ ಫೋನನ್ನು ಸೀಜ್ ಮಾಡುವುದಕ್ಕೆ ತಾವು ಆದೇಶ ಕೊಡುವುದು ತುಂಬಾ ಒಳ್ಳೆಯದೆಂದು ನನಗೆ ಅನ್ನಿಸುತ್ತದೆ.

ಶ್ರೀ ಹೆಚ್.ಡಿ.ಬಸವರಾಜ್: ಈ ಫೋನ್ ತೆಗೆದುಕೊಂಡು ತಮ್ಮ ಬಳಿ ಇಟ್ಟುಕೊಳ್ಳಿ, ಅದು ಉತ್ತಮವಾಗುತ್ತದೆ. ಇಲ್ಲಾ ಅಂದರೆ ಅದು ಮತ್ತೆ ಮತ್ತೆ ಬಡಿದುಕೊಳ್ಳುತ್ತಾ ಇರುತ್ತದೆ.

ಉಪಾಧ್ಯಕ್ಷರು: ಆಯಿತು, ತಾವು ಮುಂದುವರೆಸಿ.

ಶ್ರೀ ಸಿ.ಆರ್.ಸಗೀರ್ ಅಹಮದ್: ಬೇರೆ ಏನಾದರೂ ಇದ್ದರೆ ನಮ್ಮ ಗತಿ ಏನು? ಆದ್ದರಿಂದ ದಯಮಾಡಿ ತಾವು ತಮ್ಮ ಬಳಿ ತರಿಸಿ ಇಟ್ಟುಕೊಳ್ಳಿ.

ಉಪಾಧ್ಯಕ್ಷರು: ತರಿಸುತ್ತೇನೆ, ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ.ಆರ್.ಸಗೀರ್ ಅಹಮದ್: ಅದರಿಂದ ಏನಾದರೂ ಆಗಲಿ ಅನ್ನುವುದು ಇದ್ದರೆ, ನಮ್ಮದೇನೂ ಅಭ್ಯಂತರವಿಲ್ಲ.

ಉಪಾಧ್ಯಕ್ಷರು: ನೋಡಿ ನೀವು ಈ ರೀತಿ ಮಾತನಾಡಬೇಡಿ, ತರಿಸುವುದಕ್ಕೆ ಹೇಳಿದ್ದೇನೆ ಎಂದ ಮೇಲೆ ತಾವು ತಿಳಿದುಕೊಳ್ಳಬೇಕು.

ಶ್ರೀ ಅರಗ ಜ್ಞಾನೇಂದ್ರ: ಸನ್ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಯಾವ ಯಾವ ಇಲಾಖೆಗಳು ಯಾವ ಯಾವ ಸಂಸ್ಥೆಯ ಅಧೀನದಲ್ಲಿ ಬರಬೇಕು ಎಂದು ನಿರ್ಧಾರ ಮಾಡುವಾಗ ಸ್ವಲ್ಪ ಆಲೋಚನೆ ಮಾಡುವಂತಹದ್ದು ತುಂಬಾ ಒಳ್ಳೆಯದು ಎಂದು ನನಗೆ ಅನ್ನಿಸುತ್ತದೆ. ಏಕೆಂದರೆ, ಆರೋಗ್ಯ ಇಲಾಖೆಗೆ ಸಂಬಂಧಪಟ್ಟಿದ್ದನ್ನೆಲ್ಲಾ ತಾಲ್ಲೂಕು ಪಂಚಾಯಿತಿಗೆ ಕೊಟ್ಟರೆ ಬಹಳ ಕಷ್ಟವಾಗುತ್ತದೆ. ಅದು ಜಿಲ್ಲಾ ಪಂಚಾಯಿತಿಯಲ್ಲಿ ಇರತಕ್ಕಂತಹದ್ದು ತುಂಬಾ ಒಳ್ಳೆಯದು. ಇನ್ನು ರಸ್ತೆಗಳ ವಿಷಯದ ಬಗ್ಗೆ ಹೇಳಬೇಕು ಎಂದರೆ, ಯಾವ ರಸ್ತೆಗಳು ತಾಲ್ಲೂಕು ಪಂಚಾಯಿತಿಗೆ ಬರುತ್ತದೆ, ಯಾವ ರಸ್ತೆಗಳು ಜಿಲ್ಲಾ ಪಂಚಾಯಿತಿಗೆ ಎಂಬುದು ಗೊತ್ತೇ ಇಲ್ಲ. ಆದುದರಿಂದ ಅದನ್ನು ಎಲ್ಲಾದರು ಒಂದು ಕಡೆ ತಂದು ಸ್ಟೀಮ್ ಲೈನ್ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ಇದನ್ನು ಜಿಲ್ಲಾ ಪರಿಷತ್ ರೋಡು, ತಾಲ್ಲೂಕು ಪಂಚಾಯಿತಿ ರೋಡ್ ನೋಟಿಫಿಕೇಷನ್ ಮಾಡುವಂತಹದ್ದು ಮೊದಲು ಮಾಡಬೇಕಾಗುತ್ತದೆ. ತಾಲ್ಲೂಕು ಪಂಚಾಯಿತಿಗಳು ಯಾವ ರಸ್ತೆಗಳ ನಿರ್ವಹಣೆ ಮಾಡಬೇಕು, ಅದಕ್ಕೆ ಹಣ ಹೇಗೆ ಇಟ್ಟುಕೊಳ್ಳಬೇಕು ಎನ್ನುವಂತಹದ್ದು ಎಲ್ಲೂ ಕೂಡ ಇಲ್ಲ. ಇದನ್ನು ತಾವು ಮಾಡಿದರೆ ಅದಕ್ಕೆ ಒಂದು ಶಕ್ತಿಯನ್ನು ಕೊಟ್ಟ ಹಾಗೆ ಆಗುತ್ತದೆ. ಇನ್ನೊಂದು ಪಂಚಾಯಿತಿಗಳು ಮಾಡಿರತಕ್ಕಂತಹ ಕಾಮಗಾರಿಗಳು. ಏಕೆಂದರೆ ಇದು ಬಹಳ ಕಷ್ಟಕ್ಕೆ ಇಟ್ಟುಕೊಂಡಿದೆ, ಅಂದರೆ ಒಂದು ಕಾಮಗಾರಿ ಮಾಡಬೇಕು ಎಂದು ಹೇಳಿ ಆ ಎಸ್ಟಿಮೇಟ್ ತಯಾರು ಮಾಡುವುದಕ್ಕಾಗಿ ತಾಲ್ಲೂಕು ಮಟ್ಟದ ಜೂನಿಯರ್ ಇಂಜಿನಿಯರ್ ಅನ್ನು ಕರೆದುಕೊಂಡು ಬರುವುದು. ಒಬ್ಬ ಜೂನಿಯರ್ ಇಂಜಿನಿಯರ್ ಐದು, ಆರು, ಏಳೋ ಪಂಚಾಯಿತಿಗಳನ್ನು ನಿಯುಕ್ತಿ ಮಾಡಿರುತ್ತಾರೆ. ಆ ಜೂನಿಯರ್ ಇಂಜಿನಿಯರ್‌ಗಳ ಹುದ್ದೆಗಳು ಬಹಳ ಇಲ್ಲ. ಆದರೆ ನಿಯುಕ್ತಿ ಮಾಡಿರತಕ್ಕಂತಹ ಜೂನಿಯರ್ ಇಂಜಿನಿಯರ್ ಬರುವುದೇ ಇಲ್ಲ. ಅವನು ಎಷ್ಟು ದಿವಸಕ್ಕೆ ಬರಬೇಕು, ಯಾವಾಗ ಎಸ್ಟಿಮೇಟ್ ಮಾಡಿಕೊಡಬೇಕು, ಯಾವಾಗ ಕಾರ್ಯ ಪ್ರಾರಂಭ ಮಾಡಬೇಕು, ಇದರಿಂದಾಗಿ ಸಾಕಷ್ಟು ಹಣ ಪಂಚಾಯಿತಿಯಲ್ಲಿ ಖರ್ಚು ಮಾಡುವುದಕ್ಕೆ ಆಗುತ್ತಾ ಇಲ್ಲ. ಅವರು ದಿವಸ ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ಗೆ ಬರುವಂತಹದ್ದು, ವಾಪಸ್ಸು ಹೋಗುವಂತಹದ್ದು. ಟಿ.ಎ, ಡಿ.ಎ. ಖರ್ಚಾಗುವಂತಹ ಕಾರ್ಯ ಮಾತ್ರ ನಡೆದಿದೆ. ಅದನ್ನು ಹೋಗಲಾಡಿಸಿ, ಅದಕ್ಕೆ ಏನಾದರೂ ತಾವು ಒಂದು ವ್ಯವಸ್ಥೆಯನ್ನು ಮಾಡಬೇಕು. ಇಂಥ ಜೆ.ಇ. ಇಂತಿಷ್ಟೇ ಪಂಚಾಯಿತಿಯಲ್ಲಿ ಇರಬೇಕು;

ಮತ್ತು ಅವನು ಸೂಚನೆ ಕೊಟ್ಟ ಇಷ್ಟು ದಿವಸದೊಳಗಾಗಿ ಎಸ್ಟಿಮೇಟ್‌ನ್ನು ಮಾಡಿಕೊಡತಕ್ಕದ್ದು ಎಂದು ಜವಾಬ್ದಾರಿಯ ಚೌಕಟ್ಟನ್ನು ಹಾಕಿದಾಗ ಮಾತ್ರ ಇದು ಸರಿ ಆಗುತ್ತದೆ. ಇಲ್ಲದಿದ್ದರೆ ಪಂಚಾಯಿತಿಗಳಿಗೆ ತುಂಬಾ ಕಿರುಕುಳವಾಗುತ್ತದೆ. ಹಾಗೆ ಪಂಚಾಯತ್ ರಾಜ್ ವ್ಯವಸ್ಥೆ ಕಾಮಗಾರಿಯಲ್ಲಿ ಸಾಕಷ್ಟು ಪಾರದರ್ಶಕತೆ ಇರಬೇಕಾಗುತ್ತದೆ. ಇವತ್ತು ನಾವು ಸಾಕಷ್ಟು ವರದಿಗಳನ್ನು ಪತ್ರಿಕೆಗಳಲ್ಲಿ ಓದುತ್ತೇವೆ, ಜಿಲ್ಲಾ ಪಂಚಾಯಿತಿ ಖರೀದಿ ಸಮಿತಿಯಲ್ಲಿ ಅವ್ಯವಹಾರವಾಯಿತು, ಅದರ ಖರೀದಿಯಲ್ಲಿ ಅವ್ಯವಹಾರವಾಯಿತು ಎಂದು ದಿನನಿತ್ಯದ ಪತ್ರಿಕೆಯಲ್ಲಿ ಬರುತ್ತದೆ. ಇದು ಯಾರಿಗೂ ಗೌರವ ತರುವ ಸಂಗತಿ ಅಲ್ಲ. ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ತಾವು ಏನು ಮಾಡಿದ್ದೀರಾ? ಇದರಲ್ಲಿರುವ ಭ್ರಷ್ಟಾಚಾರವನ್ನು ತಡೆಗಟ್ಟಬೇಕು. ಆದುದರಿಂದ ಇದರ ಬಗ್ಗೆ ಪ್ರತಿಯೊಬ್ಬ ವ್ಯಕ್ತಿಗೂ ಸಂಪೂರ್ಣ ಅರಿವು ಇರಬೇಕು. ಜನರು ಸಂಪೂರ್ಣವಾಗಿ ಆಡಳಿತದಲ್ಲಿ ಭಾಗಿಗಳಾಗಬೇಕು ಎಂಬ ಮೂಲ ಕಲ್ಪನೆ, ಉದ್ದೇಶ ಏನಿತ್ತು ಅದು ಇವತ್ತು ಕಾರ್ಯಗತವಾಗಲಿಲ್ಲ ಎಂಬ ವಿಷಯ ಸಾಮಾನ್ಯ ಜನತೆಗೂ ಕೂಡ ಮೇಲ್ನೋಟಕ್ಕೆ ಅರ್ಥವಾಗುತ್ತದೆ. ಹೀಗಾಗಿ ಅದು ಪಾರದರ್ಶಕತೆಗೆ ಬರಬೇಕಾದರೆ ಉದಾಹರಣೆಗೆ ಒಂದು ಕಾಮಗಾರಿಯನ್ನು ಮಾಡುತ್ತಾರೆ, ಅದಕ್ಕೆ ಒಂದು ಎಸ್ಟಿಮೇಟ್ ಹಾಕುತ್ತಾರೆ, ಅವರು ಹಾಕುವಂತಹ ಎಸ್ಟಿಮೇಟ್ ಯಾರಿಗೂ ಕೂಡ ಗೊತ್ತಾಗುವುದಿಲ್ಲ. ಅದು ಯಾರ್ಯಾರಿಗೆ ಗೊತ್ತಾಗುತ್ತದೆ ಎಂದರೆ ಇಂಜಿನಿಯರ್‌ಗೆ ಗೊತ್ತಾಗುತ್ತದೆ, ಗುತ್ತಿಗೆದಾರನಿಗೆ ಗೊತ್ತಾಗುತ್ತದೆ, ಕಾರ್ಯದರ್ಶಿಗಳಿಗೆ ಗೊತ್ತಾಗುತ್ತದೆ. ಆದರೆ ಪಂಚಾಯಿತಿಯಲ್ಲಿ ಒಬ್ಬ ಮಹಿಳೆ ಇರುತ್ತಾರೆ, ಅವರಿಗೂ ಸಹ ಇದು ಗೊತ್ತಾಗುವುದಿಲ್ಲ. ಒಂದು ಕಾಮಗಾರಿಯನ್ನು ಮಾಡಬೇಕು ಅಂತ ಅಂದರೆ ಇಂತಿಷ್ಟು ಹಣ ಎಂದು ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿರುತ್ತಾರೆ. ನಿಜವಾಗಿಯೂ ಆ ಕಾಮಗಾರಿಯಲ್ಲಿ ಎಷ್ಟು ಹಣ ಖರ್ಚಾಯಿತು ಎಂದು ಯಾರು ಹೇಳಬೇಕು? ಎಲ್ಲಿ ಗೊತ್ತಾಗಬೇಕು? ಇಲ್ಲಿ ಹೇಳುವವರು, ಕೇಳುವವರೂ ಯಾರೂ ಇಲ್ಲ. ಯಾರಾದರು ಪಂಚಾಯಿತಿ ಸದಸ್ಯರು ಕೇಳಿದರೆ, ನಿಮಗೆ ಏನೂ ಗೊತ್ತಾಗುವುದಿಲ್ಲ ಸುಮ್ಮನೆ ಕುಳಿತುಕೊಳ್ಳಿ ಎಂದು ಹೇಳುವಂತಹ ಕಾರ್ಯದರ್ಶಿಗಳು ಕೂಡ ಇವತ್ತು ಇದ್ದಾರೆ. ಆ ರೀತಿಯಾದಂತಹ ಪಂಚಾಯಿತಿಗಳು ಇದೆ ಎಂದು ತಿಳಿದಾಗ ಅದನ್ನು ಸರಿಪಡಿಸಬೇಕು. ಇವತ್ತು ತಾಲ್ಲೂಕು ಪಂಚಾಯಿತಿಯಲ್ಲಿ ಮತ್ತು ಜಿಲ್ಲಾಪಂಚಾಯಿತಿಯಲ್ಲಿ ತಿಳಿಸುವಂತಹ ವ್ಯವಸ್ಥೆ ಇರುವುದೇ ಇಲ್ಲ. ಇದಕ್ಕಾಗಿ ಎಸ್ಟಿಮೇಟಿನ ಒಂದು ಕಾಪಿಯನ್ನು ಈಗ ಜಿಲ್ಲಾ ಪಂಚಾಯಿತಿ ಕಾಮಾಗಾರಿ ಆದರೆ ಜಿಲ್ಲಾ ಪಂಚಾಯಿತಿ ಇಂಜಿನಿಯರಿಂಗ್ ವಿಭಾಗದ ನೋಟೀಸ್ ಬೋರ್ಡ್‌ನಲ್ಲಿ ಹಾಕುವಂತಹದ್ದು. ತಾಲ್ಲೂಕು ಪಂಚಾಯಿತಿ ಕಾಮಗಾರಿ ಆಗಿದ್ದರೆ, ತಾಲ್ಲೂಕು ಪಂಚಾಯಿತಿ ಇಂಜಿನಿಯರಿಂಗ್ ವಿಭಾಗದ ನೋಟೀಸ್ ಬೋರ್ಡ್‌ನಲ್ಲಿ ಒಂದು ಎಸ್ಟಿಮೇಟ್ ಕಾಪಿಯನ್ನು ಹಾಕುವಂತಹದ್ದು. ಅಥವಾ ಅದರ ಫೈಲನ್ನು ಸಾರ್ವಜನಿಕರು ನೋಡುವುದಕ್ಕೆ ಮುಕ್ತವಾಗಿ ಇಡತಕ್ಕಂತಹದ್ದು. ಯಾರಿಗಾದರೂ

ಅನುಮಾನ ಬಂದು ಕೇಳಿದಾಗ ಅದನ್ನು ನೋಡಬೇಕಾಗುತ್ತದ. ಈ ರೀತಿಯಲ್ಲಿ ಕೆಲವು ವಿಧಾನಗಳನ್ನು ಅನುಸರಿಸಿದರೆ ಇದಕ್ಕೆ ತುಂಬಾ ಶಕ್ತಿ ಬರುತ್ತದೆ ಎಂದು ನನ್ನ ಅನಿಸಿಕೆ. ಕೊನೆಯದಾಗಿ ರಾಜ್ಯ ಪಂಚಾಯತ್ ಪರಿಷತ್, ಬಗ್ಗೆ ತಾವು ಏನು ಸೂಚನೆ ಮಾಡಿದ್ದೀರಿ, ಇದರಲ್ಲಿ ಶಾಸಕರನ್ನು ವರ್ಷಕ್ಕೆ ಒಂದು ಸಾರಿನೋ ಎರಡು ಸಾರಿನೋ ಸೇರಿಸಿ, ಕೂತು ಇದರ ಬಗ್ಗೆ ಚಿಂತನೆ ಮಾಡಿದಾಗ ಎಲ್ಲಿ ತಪ್ಪಿದ್ದೇವೆ, ಎಲ್ಲಿ ಸರಿಪಡಿಸಬೇಕು ಎಂದು ಮತ್ತು ನಾವು ಶಾಸಕರಾಗಿ ನಮ್ಮ ಚಿಂತನೆಯನ್ನೂ ಅವರ ಜೊತೆಗೆ ಜೋಡಿಸುತ್ತಾ, ಮತ್ತು ಅವರ ಸಮಸ್ಯೆಯನ್ನು ಮತ್ತು ಇಡೀ ರಾಜ್ಯದ ಸಮಸ್ಯೆಯನ್ನು ಒಟ್ಟಾರೆ ನಾವೂ ಕೂಡ ಅಧ್ಯಯನ ಮಾಡುವಂತಹ ಕೆಲಸವನ್ನು ಮಾಡಿದರೆ ಅದು ಸುಲಭವಾಗುತ್ತದೆ ಎಂದು ನನಗೆ ಅನ್ನಿಸುತ್ತದೆ. ನಾನೂ ಕೂಡ ಹಿಂದೆ ಜಿಲ್ಲಾ ಪಂಚಾಯಿತಿಯಲ್ಲಿ ಇದ್ದೆ. ಸನ್ಮಾನ್ಯ ಮಂತ್ರಿಯವರೇ, ಇವತ್ತು ಜಿಲ್ಲಾ ಪಂಚಾಯಿತಿಯಲ್ಲಿ ಏನಾಗಿದೆ ಅಂದರೆ ಬಹಳಷ್ಟು ಅಧ್ಯಕ್ಷರುಗಳಿಗೆ ಅಂದರೆ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಪಂಚಾಯಿತಿಯ ಅಧ್ಯಕ್ಷರುಗಳಿಗೆ ತರಬೇತು ಸಾಲದು. ಸನ್ಮಾನ್ಯ ಅಬ್ದುಲ್ ನಜೀರ್ ಸಾಬ್ ಅವರು ಚಿಕಿತ್ಸೆಗೆ ಹೋಗುವ ಮುನ್ನ ನಾನು ಶಿವಮೊಗ್ಗ ಜಿಲ್ಲೆಯ ಪರಿಷತ್ತಿನಲ್ಲಿ ಸ್ಥಾಯಿ ಸಮಿತಿಯ ಅಧ್ಯಕ್ಷನಾಗಿದ್ದೆ. ಸ್ಥಾಯಿ ಸಮಿತಿಯ ಅಧ್ಯಕ್ಷರುಗಳನ್ನು ಮೇಲೆ ಒಂದು ಸಭೆಗೆ ಕರೆದರು. ಬೆಳಿಗ್ಗೆ ಸುಮಾರು ಎಂಟು ಗಂಟೆಯಿಂದ ಸಂಜೆ ಆರೂವರೆ ಏಳು ಗಂಟೆಯವರೆಗೆ ನಮಗೆ ಒಂದೇ ಸಮನೆ ಒಬ್ಬನೇ ವ್ಯಕ್ತಿ ನಮ್ಮ ಸಾಕಷ್ಟು ಪ್ರಶ್ನೆಗಳಿಗೆ, ನಮ್ಮ ಅನುಮಾನಗಳಿಗೆಲ್ಲಾ ಉತ್ತರ ಕೊಡುತ್ತಾ, ಕೊಡುತ್ತಾ ಹೋದರು. ನಿಮಗೂ ಆ ಶಕ್ತಿ ಖಂಡಿತ ಇದೆ. ಇದನ್ನು ಕನಿಷ್ಠ ವರ್ಷಕ್ಕೆ ಒಂದು ಸಲನೋ, ಎರಡು ಸಲನೋ ಈಗಲೇ ಕರೆದು ಸಭೆಯನ್ನು ಮಾಡಬೇಕು. ಮತ್ತು ಬೇರೆ ಬೇರೆಯವರಿಂದ ತರಬೇತಿಯನ್ನು ಕೊಡಬೇಕು. ಏಕೆಂದರೆ, ಹೇಗೆ ಸಭೆ ನಡೆಸಬೇಕು, ಯಾವ್ಯಾವುದನ್ನು ನಾವು ಚಿಂತನೆ ಮಾಡಬೇಕು ಎಂಬುದು ಇಲ್ಲವೇ ಇಲ್ಲ. ಏಕೆಂದರೆ ಒಂದು ಸಭೆಯಲ್ಲಿ ಹೇಗಾಗಿದೆ ಎಂದರೆ, ಅಂದರೆ ನಮ್ಮ ಜಿಲ್ಲಾ ಪಂಚಾಯಿತಿ ಸಭೆಯಲ್ಲಿ, ಒಬ್ಬ ಹಿರಿಯ ಸದಸ್ಯರು ಎದ್ದುನಿಂತು ಮಾತನಾಡುವುದಕ್ಕೆ ಪ್ರಾರಂಭ ಮಾಡಿದರು. ಮಾತನಾಡುತ್ತಾ ವೆರ್ಟನರಿ ಬಗ್ಗೆ ಮಾತನಾಡಿದರು, ಹೆಲ್ತ್ ಬಗ್ಗೆ ಮಾತನಾಡಿದರು, ಕಾಮಗಾರಿ ಬಗ್ಗೆ ಮಾತನಾಡಿದರು, ಎಲ್ಲದರ ಬಗ್ಗೆ ಮಾತನಾಡಿದರು ನಾವು ಎದ್ದು ಬೊಬ್ಬೆ ಹೊಡೆಯುತ್ತೇವೆ, ಅಜೆಂಡಾ ಬಗ್ಗೆ ಮಾತನಾಡಿ ಎಂದು, ಅಧ್ಯಕ್ಷರಿಗೆ ಹೇಳಿದೆ, ಅವರಿಗೆ ಅಜೆಂಡಾ ಮೇಲೆ ಮಾತನಾಡುವುದಕ್ಕೆ ಸೂಚನೆ ಕೊಡಬೇಕು ಎಂದು. ಅಲ್ಲಿರುವ ಸದಸ್ಯರು ಏನು ಹೇಳುತ್ತಾರೆ ಅಂದರೆ, ಅಜೆಂಡಾ, ಪಜೆಂಡಾ ಅದೆಲ್ಲಾ ನಮಗೆ ಏನೂ ಗೊತ್ತಿಲ್ಲ, ನಾನು ಎಲ್ಲೋ ತುರ್ತಾಗಿ ಹೊರಗಡೆ ಹೋಗಬೇಕಾಗಿದೆ. ನಾನು ಮಾತನಾಡುತ್ತೇನೆ, ಆಮೇಲೆ ಅಜೆಂಡಾ ಬಂದಮೇಲೆ ನೀವು ಹಾಕಿಕೊಳ್ಳಿ ಎಂದು ಹೇಳಿದರು. ಹೀಗೆ ಹೇಳುವಂತಹ ಅನೇಕ ಸದಸ್ಯರು ಇವತ್ತು ಸಹ ಇದ್ದಾರೆ. ಆದುದರಿಂದ ಸಭೆ ಹೇಗೆ ನಡೆಸಬೇಕು, ಅಜೆಂಡ ಹೇಗೆ ಫಿಕ್ಸ್ ಮಾಡಬೇಕು ಇದು ಅಧ್ಯಕ್ಷರುಗಳಿಗೆ ಗೊತ್ತಿಲ್ಲದೆ ಹೋದರೆ,

ಕಾರ್ಯದರ್ಶಿಗಳು ಆಟ ಆಡಿಸಿದಂತೆ ಆಡಬೇಕು. ಇವತ್ತು ಎಲ್ಲಾ ಕಾರ್ಯದರ್ಶಿಗಳು ಒಳ್ಳೆಯವರು ಇದ್ದಾರೆ, ಯೋಗ್ಯರಿದ್ದಾರೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಇವತ್ತು ರಿಸರ್ವೇಷನ್‌ನಲ್ಲಿ ಬಂದಿರತಕ್ಕಂತಹ ಅನೇಕ ಹೆಣ್ಣು ಮಕ್ಕಳು ಹರಿಜನ-ಗಿರಿಜನರಿಂದ ಬಂದಂತಹ ಅವಿದ್ಯಾವಂತಹ ಹೆಣ್ಣು ಮಕ್ಕಳೂ ಕೂಡ ಆ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದಾಗ, ಅದು ಬಹಳ ಶಕ್ತಿಯುತವಾಗಿ ನಡೆಯದೆ ಹೋದರೆ, ಇಡೀ ಅರ್ಥವನ್ನೇ ಕಳೆದುಕೊಳ್ಳುತ್ತದೆ, ಆ ಸ್ಥಾನ ಮಾನಗಳು ಅತ್ಯಂತ ಶಕ್ತಿ ಪಡೆಯಬೇಕಾದರೆ ತಾವು ಕೊಡುವಂತಹ ತರಬೇತು ತುಂಬಾ ಅಗತ್ಯವಾಗುತ್ತದೆ. ಆದುದರಿಂದ ಆರ್.ಡಿ.ಪಿ.ಆರ್. ಇಲಾಖೆ ವತಿಯಿಂದ ಸೂಕ್ತ ರೀತಿಯಲ್ಲಿ ವ್ಯವಸ್ಥಿತವಾದಂತಹ ತರಬೇತಿಯನ್ನು ಅವರಿಗೆ ಕೊಟ್ಟು, ಈ ಗ್ರಾಮಾಂತರ ಪ್ರದೇಶದ ಕಾಮಗಾರಿಯನ್ನು ಈ ಒಂದು ವ್ಯವಸ್ಥೆಯನ್ನು ಯಶಸ್ವಿಯಾಗಿ ಮಾಡಬೇಕಾದರೆ ಏನೆಲ್ಲಾ ಮಾಡಬೇಕು ಅನ್ನುವಂತಹದ್ದನ್ನು ಅವರ ಹೃದಯದಲ್ಲಿ, ಅವರ ಮನಸ್ಸಿನಲ್ಲಿ ತುಂಬತಕ್ಕಂಥದ್ದು ತುಂಬಾ ಒಳ್ಳೆಯದು ಎಂದು ಹೇಳಿ, ತಮಗೆ ಸಲಹೆಯನ್ನು ಕೊಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಸದಲಗಾ): ಮಾನ್ಯ ಅಧ್ಯಕ್ಷರೆ, ನನ್ನ ಮತ ಕ್ಷೇತ್ರದಲ್ಲಿ ಬೇಡ್ಕಿಹಾಳ ಎಂಬ ಗ್ರಾಮ ಪಂಚಾಯಿತಿ ಇದ್ದು, ಸದರಿ ಗ್ರಾಮ ಪಂಚಾಯಿತಿಯಲ್ಲಿ ಪರಿಶಿಷ್ಟ ವರ್ಗದ ಮಹಿಳೆಗೆ ಅಧ್ಯಕ್ಷ ಸ್ಥಾನವನ್ನು ಮೀಸಲಾಗಿಡದೆ ಉಪಾಧ್ಯಕ್ಷರಿಗೆ ಸಾಮಾನ್ಯ ಸ್ಥಾನದವರಿಗೆ ಮೀಸಲಾಗಿಡಲಾಗಿದೆ. ಅಲ್ಲಿ ಏನು ಮಾಡುತ್ತಾರೆಂದರೆ, ಚುನಾವಣೆಗೆ ನಾಮಿನೇಷನ್ ತುಂಬಿದ ನಂತರ ಅಲ್ಲಿ ಒಬ್ಬರೇ ಪರಿಶಿಷ್ಟ ವರ್ಗದ ಮಹಿಳೆಯಿರುವುದರಿಂದ ಬೇರಾರೂ ಕೂಡ ಚುನಾವಣೆಗೆ ನಿಲ್ಲುವಂಥ ವ್ಯವಸ್ಥೆಯಿಲ್ಲದಿರುವುದರಿಂದ ಆ ಗ್ರಾಮ ಪಂಚಾಯಿತಿಗೆ ಅಧ್ಯಕ್ಷರಾಗಿ ಆ ವರ್ಗದ ಮಹಿಳೆ ಆರಿಸಿ ಬರುತ್ತಾರೆ, ಉಪಾಧ್ಯಕ್ಷರಾಗಿ ಸಾಮಾನ್ಯ ವರ್ಗದವರು ಬರುತ್ತಾರೆ. ಆದರೆ, 5-6 ತಿಂಗಳುಗಳಾದ ನಂತರ ಮೂರನೇ ಎರಡು ಭಾಗದ ಸಂಖ್ಯೆಯಷ್ಟು ಸದಸ್ಯರು ಅಧ್ಯಕ್ಷರಾಗಿರುವ ಆ ಮಹಿಳೆ ಮೇಲೆ ಅವಿಶ್ವಾಸ ನಿರ್ಣಯ ತಂದು ಅವರನ್ನು ಅಧ್ಯಕ್ಷ ಸ್ಥಾನದಿಂದ ಕಿತ್ತು ಹಾಕಿ ಉಪಾಧ್ಯಕ್ಷರು ಗ್ರಾಮ ಪಂಚಾಯಿತಿಯನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಐದಾರು ತಿಂಗಳು ಕಳೆದ ನಂತರ ಮತ್ತೆ ಎ.ಸಿ.ಯವರು ಚುನಾವಣೆ ಕರೆದಾಗ ಅಲ್ಲಿ ಬೇರೆ ಯಾವುದೇ ಅರ್ಜಿಗಳು ಬರುವುದಿಲ್ಲ. ಏಕೆಂದರೆ, ಅಲ್ಲಿ ಒಬ್ಬರೇ ಪರಿಶಿಷ್ಟ ವರ್ಗದ ಮಹಿಳೆಯಿರುವುದರಿಂದ ಪುನಃ ಅವರೇ ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾಗುತ್ತಾರೆ. ಆದರೆ, ನಮ್ಮ ಚುನಾಯಿತ ಪ್ರತಿನಿಧಿಗಳು ಏನು ಮಾಡುತ್ತಾರೆಂದರೆ ಉದ್ದೇಶಪೂರ್ವಕವಾಗಿ ಆಕೆಯನ್ನು ಅಧ್ಯಕ್ಷ ಸ್ಥಾನದಿಂದ ತೆಗೆದುಹಾಕಬೇಕೆಂದು ಮೂರನೇ ಎರಡು ಭಾಗದಷ್ಟು ಮೆಜಾರಿಟಿ ಮಾಡಿಕೊಂಡು ಆಕೆಯನ್ನು ಕೆಳಗಿಳಿಸುತ್ತಾರೆ ಮತ್ತು ಸಾಮಾನ್ಯ ವರ್ಗದವರಿಗಿರುವ ಉಪಾಧ್ಯಕ್ಷ ಸ್ಥಾನವೇನಿದೆ, ಅವರಿದಂಲೇ ಗ್ರಾಮ ಪಂಚಾಯಿತಿ ನಡೆದುಕೊಂಡು

ಹೋಗುವ ವ್ಯವಸ್ಥೆಯೇನಿದೆ, ಇದರ ಬಗ್ಗೆ ತಾವು ಏನು ಕ್ರಮ ಕೈಗೊಳ್ಳುತ್ತೀರೆಂಬುದನ್ನು ಹೇಳಬೇಕು. ಆ. ಗ್ರಾಮ ಪಂಚಾಯಿತಿಯಲ್ಲಿ ಮೂರು ವರ್ಷಗಳಿಂದ ಈ ತರಹದ ಪದ್ಧತಿ ನಡೆಯುತ್ತಿದೆ. ಮಹಿಳೆಯರಿಗೆ ಸೂಕ್ತ ಸ್ಥಾನಮಾನ ಕೊಡಬೇಕೆಂದು ನೀವು ಹೇಳುತ್ತೀರಿ. ಹಾಗೆ ಸ್ಥಾನ ಕೊಟ್ಟಾಗ ಇಂತಹ ಪರಿಸ್ಥಿತಿಯಿರುವುದರಿಂದ, ಅವರ ಮೇಲೆ ಎರಡು ಸಲ ಅವಿಶ್ವಾಸ ನಿರ್ಣಯ ತಂದು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸುವಂಥ ವ್ಯವಸ್ಥೆ ಮಾಡಿದ್ದಾರೆ. ಆದುದರಿಂದ, ಇವೊತ್ತು ತಾವು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ ಏನು ತರುತ್ತಿದ್ದೀರಿ, ಇದರಲ್ಲಿ ಏನು ವ್ಯವಸ್ಥೆ ಕಲ್ಪಿಸುತ್ತೀರೆಂಬುದರ ಬಗ್ಗೆ ತಿಳಿಸಬೇಕು.

ಶ್ರೀ ಎಂ.ಪಿ.ಪ್ರಕಾಶ್: ಈಗಾಗಲೇ ಈ ವಿಚಾರದಲ್ಲಿ ಹೇಳಿದ್ದೇವೆ. ಮೀಸಲಾತಿಯ ಇಡೀ ಪರಿಕಲ್ಪನೆಯನ್ನೇ ಅವರು ದುರುದ್ದೇಶಪೂರಿತವಾಗಿ ಕಡಿಮೆ ಮಾಡತಕ್ಕಂಥ ಪ್ರಯತ್ನ ಮಾಡಿ ಮೂರು ಬಾರಿ ಆ ರೀತಿ ಮಾಡಿದರೆ ಇಡೀ ಪಂಚಾಯಿತಿಯನ್ನೇ ನಾವು ರದ್ದುಗೊಳಿಸುತ್ತೇವೆಂದು ಮಾಡಿದ್ದೇವಲ್ಲಾ.

ಮಾನ್ಯ ಸದಸ್ಯರು: ಆ ರೀತಿ ಈಗಾಗಲೇ ಎಷ್ಟು ಪಂಚಾಯಿತಿಯನ್ನು ತಾವು ರದ್ದುಗೊಳಿಸಿದ್ದೀರಿ?

ಶ್ರೀ ಎಂ.ಪಿ.ಪ್ರಕಾಶ್: ಇಲ್ಲಿಯವರೆಗೆ ನಮ್ಮ ಗಮನಕ್ಕೆ ಆ ರೀತಿ ಮೂರು ಬಾರಿ ಆಗಿರುವ ಯಾವುದೇ ಪ್ರಕರಣ ಬಂದಿಲ್ಲದಿರುವುದರಿಂದ ಪಂಚಾಯಿತಿಗಳನ್ನು ರದ್ದುಗೊಳಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಈಗ ಗ್ರಾಮ ಪಂಚಾಯಿತಿಯಲ್ಲಿ ಐದು ವರ್ಷ ಅಂದರೆ ಇಪ್ಪತ್ತು ತಿಂಗಳುಗಳ ಅವಧಿ ಇದೆ. ಮೂರು ಬಾರಿ ಎಂದರೆ ಈಗಿರುವ ಪ್ರಕಾರ ವರ್ಷಕ್ಕೊಮ್ಮೆ ಇದೆ. ಈ ರೀತಿ ಇರುವುದರಿಂದ ಪ್ರತಿ ಸಾರಿಯೂ ಇದೇ ಕೆಲಸ ಮಾಡಿಕೊಂಡು ಹೋಗುತ್ತರಾದ್ದರಿಂದ ಅದರ ಬದಲು ಅದನ್ನು ಎರಡು ಸಲ ಎಂದು ಮಾಡಿ. ಆ ರೀತಿ ಮಾಡಿದರೆ ಬಹುಶಃ ಮೊದಲು ಏನೋ ಪ್ರಾಮಾಣಿಕ ಕಾರಣಕ್ಕಾಗಿ ಅವಿಶ್ವಾಸ ನಿರ್ಣಯ ತಂದರೆನ್ನಬಹುದು. ಆದರೆ, ಎರಡನೇ ಸಾರಿ ಅದೇ ಪ್ರಯತ್ನ ಮಾಡಿದರೆ ಆಗ ಗ್ರಾಮ ಪಂಚಾಯಿತಿಯನ್ನು ರದ್ದುಗೊಳಿಸುತ್ತೇವೆಂದರೆ ಭಯವಿರುತ್ತದೆ. ಇದರ ಬಗ್ಗೆ ತಾವು ಯೋಚಿಸಬೇಕು.

ಶ್ರೀ ಎಂ.ಪಿ.ಪ್ರಕಾಶ್: ಇಲ್ಲಿಯವರೆಗೆ ಇರುವ ಸಂಪ್ರದಾಯಗಳು ಇದೊಂದಕ್ಕೆ ಸಂಬಂಧಿಸಿದ್ದಲ್ಲ. ಎಲ್ಲಾ ಕಡೆಗಳಲ್ಲೂ ಕೂಡ 'ನೋಡು, ಮೂರು ಬಾರಿ ತಪ್ಪು ಮಾಡಿದರೆ ನಾನು ನಿನ್ನನ್ನು ಮುಗಿಸುತ್ತೇನೆ' ಎಂದು ಹೇಳುತ್ತಾರೆ. ಅಂದರೆ, ಆ ಸಂಪ್ರದಾಯಕ್ಕನುಗುಣವಾಗಿ ಮೂರು ಬಾರಿ ಎಂದರೆ ನಾವು ಹೆಚ್ಚು ಅವಕಾಶ ಕೊಟ್ಟಿದ್ದೇವೆ ಅವರು ಸರಿಪಡಿಸಿಕೊಳ್ಳುತ್ತಾರೆಂಬುದು ಹಿಂದಿರುವ ಉದ್ದೇಶ ತಾವು

ಹೇಳಿದಂತೆ ಎರಡು ಸಲವಾದರೂ ಆಗಬಹುದು.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ: ದಯವಿಟ್ಟು ಮೂರು ಸಲ ಇರುವುದನ್ನು ಎರಡು ಸಲ ಎಂದು ಮಾಡಿ.

ಶ್ರೀ ಎಂ.ಪಿ.ಪ್ರಕಾಶ್: ಅದರ ಬಗ್ಗೆ ಪರಿಶೀಲಿಸುತ್ತೇನೆ.

+ ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪಂಚಾಯತ್ ರಾಜ್ ವಿಧೇಯಕಕ್ಕೆ ಈಗಾಗಲೇ ಎರಡು ಬಾರಿ ತಿದ್ದುಪಡಿಗಳಾಯಿತು, ಈಗ ಮೂರನೇ ತಿದ್ದುಪಡಿಯನ್ನು ತರುತ್ತಿದ್ದಾರೆ. ನಾವು ಹಲವಾರು ಬಾರಿ ಪ್ರಸ್ತಾಪ ಮಾಡಿದ್ದೇವಲ್ಲದೆ ಒತ್ತಾಯ ಕೂಡ ಮಾಡಿದ್ದೇವೆ. ಏನೆಂದರೆ, ಕರ್ನಾಟಕ ರಾಜ್ ಪಂಚಾಯಿತಿ ನೌಕರರ ಬಗ್ಗೆ ಸದರಿ ಮೂರನೇ ತಿದ್ದುಪಡಿ ವಿಧೇಯಕದಲ್ಲಿ ಯಾವುದೇ ಒಂದು ಅಂಶವನ್ನೂ ಕೂಡ ಸೇರಿಸಿಲ್ಲ. ಇವೊತ್ತಿನ ದಿವಸ ಸಾವಿರಾರು ನೌಕರರುಗಳು ಹಲವಾರು ವರ್ಷಗಳಿಂದ ಪಂಚಾಯಿತಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಯಾವುದೇ ರೀತಿಯಾದಂಥ ನಿಗದಿತ ವೇತನವಿಲ್ಲ, ಅವರ ಕೆಲಸಕ್ಕೆ ಭದ್ರತೆಯಿಲ್ಲ. ಇದರ ಬಗ್ಗೆ ತಿದ್ದುಪಡಿಯಲ್ಲಿ ತರುತ್ತಾರೆಂದು ನಾವು ನಿರೀಕ್ಷಿಸಿದ್ದೆವು. ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುವ ಬಗ್ಗೆ ತಂದಿರುವುದು ಸ್ವಾಗತಾರ್ಹ, ಮತ್ತು ಕೆಲವು ಒಳ್ಳೆಯ ಅಂಶಗಳೂ ಕೂಡ ಇದರಲ್ಲಿದೆ. ಸ್ವಯಂ ಅಧಿಕಾರಿ ನಡೆಸುವುದಕ್ಕೆ ಬೇಕಾದಂಥ ವ್ಯವಸ್ಥೆ ನಿರ್ಮಿಸುವ ಒಳ್ಳೆಯ ಉದ್ದೇಶದಿಂದ ಸದರಿ ತಿದ್ದುಪಡಿ ವಿಧೇಯಕ ತಂದಿದ್ದಾರೆ. ಸ್ವಯಂ ಅಧಿಕಾರ ನಡೆಸತಕ್ಕಂಥ ಒಂದು ಸ್ವಾಯತ್ತ ಸಂಸ್ಥೆಯಾಗಬೇಕೆಂದರೆ ನೌಕರರುಗಳ ಪಾತ್ರ ಕೂಡ ಬಹಳ ಮುಖ್ಯ. ತಿದ್ದುಪಡಿಯಲ್ಲಿ ನೌಕರರುಗಳ ಬಗ್ಗೆ ಎಲ್ಲಿಯೂ ಒಂದು ಅಂಶ ಕೂಡ ಪ್ರಸ್ತಾಪವಾಗಿಲ್ಲ. ಅವರ ಕೆಲಸದ ಭದ್ರತೆ, ನಿಗದಿತ ವೇತನದ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಸಂಸ್ಥೆ ಬೆಳೆಯಬೇಕಾದರೆ ಇವರ ಪಾತ್ರವೂ ಬಹಳ ಮುಖ್ಯ. ಈ ದಿಸೆಯಲ್ಲಿ ನಾನು ಒಂದು ಸಲಹೆ ಕೊಡಲಿಚ್ಛಿಸುತ್ತೇನೆ. ಈಗ ಪಶ್ಚಿಮ ಬಂಗಾಳದಲ್ಲಿ ಇದಕ್ಕೆ ಪ್ರತ್ಯೇಕವಾದ ಒಂದು ಡೈರೆಕ್ಟೊರೇಟ್ ಆಫ್ ಪಂಚಾಯತ್ ರಾಜ್ ಇದೆ. ನೌಕರರುಗಳನ್ನು ನೇಮಕ ಮಾಡಿಕೊಳ್ಳುವಂಥಾದ್ದಕ್ಕೆ ಮತ್ತು ಇಡೀ ಪಂಚಾಯತ್ ವ್ಯವಸ್ಥೆ ನೋಡಿಕೊಳ್ಳುವುದಕ್ಕೆ ಒಂದು ಪ್ರತ್ಯೇಕ ನಿರ್ದೇಶನಾಲಯವಿದೆ. ಅದು ಪ್ರತ್ಯೇಕ ಸಂಸ್ಥೆಯಾಗಿ ಕೆಲಸ ನಿರ್ವಹಿಸುತ್ತಿದೆ. ಆ ರೀತಿಯಲ್ಲಿ ತಾವು ಈ ಪಂಚಾಯಿತಿಗೆ ತಿದ್ದುಪಡಿ ತಂದರೆ ಬಹುಶಃ ಪಂಚಾಯಿತಿಯನ್ನು ಹೆಚ್ಚು ಶಕ್ತಿಯುತಗೊಳಿಸುವುದಕ್ಕೆ ಸಾಧ್ಯವಾಗುತ್ತದೆ. ಆ ದೃಷ್ಟಿಯಿಂದ ಎರಡು ಅಂಶಗಳನ್ನು ತಿದ್ದುಪಡಿ ಮೂಲಕ ತರಬೇಕೆಂದು ನಾನು ತಮ್ಮ ಮುಖಾಂತರ ಒತ್ತಾಯ ಮಾಡುತ್ತಿದ್ದೇನೆ. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಪ್ರಕಾಶ್‌ರವರಿಗೆ ಗೊತ್ತಿರುವಂತೆ ಗ್ರಾಮ ಪಂಚಾಯಿತಿಯಲ್ಲಿರುವ ನೌಕರರುಗಳು ಹಲವಾರು ವರ್ಷಗಳಿಂದ ಹೋರಾಟ ಮಾಡುತ್ತಿದ್ದಾರೆ. ಅವರಿಗೆ ವೇತನವಿಲ್ಲ, ಕೆಲಸದ

ಭದ್ರತೆಯಿಲ್ಲ. ಇದರ ಜೊತೆಗೆ ಮಾನ್ಯ ಸದಸ್ಯರಾದ ಅರಗ ಜ್ಞಾನೇಂದ್ರರವರು ಹೇಳಿದಂತೆ ನೌಕರರುಗಳ ಸಂಖ್ಯೆ ಕೂಡ ಕಡಿಮೆಯಿದೆ. ನಮ್ಮ ರಾಜ್ಯಕ್ಕೆ ಹಾಗೂ ಪಶ್ಚಿಮ ಬಂಗಾಳಕ್ಕೆ ಹೋಲಿಸಿದರೆ ಅಲ್ಲಿ ನೌಕರರುಗಳ ಸಂಖ್ಯೆ ಕಡಿಮೆಯಿದೆ. ಏಕೆಂದರೆ, ನಮ್ಮಲ್ಲಿ ಕಿರುನೀರು ಸರಬರಾಜು ಯೋಜನೆಯಿದ್ದು, ಅಲ್ಲಿ ಶೇಕಡಾ 80ಕ್ಕಿಂತಲೂ ಹೆಚ್ಚು ಕಡೆ ಹ್ಯಾಂಡ್ ಪಂಪ್ಸ್ ಅಥವಾ ಎನ್.ಆರ್.ಡಬ್ಲ್ಯೂ.ಎಸ್. ಇದೆ. ಹಾಗಾಗಿ, ವಾಟರ್‌ಮನ್ ಎನ್ನುವ ಪ್ರಶ್ನೆಯೇ ಅಲ್ಲಿಲ್ಲ. ಆದರೆ, ನಮ್ಮ ರಾಜ್ಯದಲ್ಲಿ ಹೆಚ್ಚಾಗಿ ಕಿರು ನೀರು ಸರಬರಾಜು ಯೋಜನೆಯಿರುವುದರಿಂದ ಹೆಚ್ಚು ನೌಕರರುಗಳಿದ್ದಾರೆ. ನಾನು ಮೊನ್ನೆ ತಾನೆ ಪಶ್ಚಿಮ ಬಂಗಾಳಕ್ಕೆ ಅದನ್ನೇ ಅಭ್ಯಸಿಸಲು ಹೋಗಿದ್ದೆ. ಅಲ್ಲಿ ಕಿರು ನೀರು ಸರಬರಾಜು ಯೋಜನೆ ಇಲ್ಲದಿರುವುದರಿಂದ ಹ್ಯಾಂಡ್ ಪಂಪ್‌ಗಳು ಇರುವುದಕ್ಕೋಸ್ಕರ ಅವರು ಕೆಲಸಗಾರರನ್ನು ಇಟ್ಟಿಲ್ಲ. ಏಕೆಂದರೆ, ಅಲ್ಲಿ ಅಂತರ್ಜಲದ ಮಟ್ಟ ಬಹಳ ಮೇಲಿದೆ. ಹಾಗಾಗಿ, ಅಲ್ಲಿ ನೌಕರರುಗಳನ್ನು ನೇಮಿಸುವ ಪ್ರಶ್ನೆಯಿಲ್ಲ. ಅಲ್ಲಿ ಎನ್.ಆರ್.ಡಬ್ಲ್ಯೂ.ಎಸ್. ಸ್ಕೀಮ್‌ನಲ್ಲಿ ವಾಟರ್‌ಮನ್‌ಗಳಿದ್ದಾರೆ. ಐದಾರು ಹಳ್ಳಿಗಳಿಗೆ ಸೇರಿಸಿದಂತೆ ವಾಟರ್‌ಮನ್‌ಗಳಿದ್ದಾರೆ. ಇದನ್ನು ಪಂಚಾಯಿತಿ, ಮುನಿಸಿಪಾಲಿಟಿಯವರೇ ಎಲ್ಲವನ್ನೂ ನೋಡಿಕೊಳ್ಳುತ್ತಾರೆ. ಆದರೆ, ನಮ್ಮ ರಾಜ್ಯದಲ್ಲಿ ಪರಿಸ್ಥಿತಿ ಬೇರೆ ಇದೆ. ನಮ್ಮಲ್ಲಿ ಕಿರು ನೀರು ಸರಬರಾಜು ಯೋಜನೆ ನೂರಕ್ಕೆ ಶೇಕಡಾ 80ರಷ್ಟು ಇರುವ ಕಾರಣಕ್ಕೋಸ್ಕರ ವಾಟರ್‌ಮನ್‌ಗಳಿದ್ದಾರೆ. ಒಂದು ಗ್ರಾಮ ಪಂಚಾಯಿತಿಯಲ್ಲಿ 3-4 ವಾಟರ್‌ಮನ್‌ಗಳಿರುವ ಪರಿಸ್ಥಿತಿಯಿದೆ, ಅವಶ್ಯಕತೆಯೂ ಇದೆ. ಆದಕಾರಣ, ಅಲ್ಲಿರುವ ಒಳ್ಳೆಯ ಅಂಶಗಳನ್ನೂ ನಾವು ತೆಗೆದುಕೊಳ್ಳಬೇಕಾಗುತ್ತದೆ ಅಥವಾ ನಿಮಗೆ ಯಾವುದನ್ನು ಅಳವಡಿಸಿಕೊಳ್ಳಲು ಸಾಧ್ಯವಿಲ್ಲವೋ ಅದನ್ನು ಕೈಬಿಡಬೇಕಾಗುತ್ತದೆ. ಒಟ್ಟಾರೆ ಹೇಳಬೇಕೆಂದರೆ ಈಗ ತಂದಿರುವ ತಿದ್ದುಪಡಿಯಲ್ಲಿ ನೌಕರರುಗಳ ಬಗ್ಗೆ ಚಿಂತನೆ ಇಲ್ಲ. ಈಗ ಕಸ ಗುಡಿಸುವವರು, ನೀರು ಬಿಡುವವರು, ಬಿಲ್ ಕಲೆಕ್ಟರ್ ಈ ರೀತಿಯ ಮುಂತಾದ ನೌಕರರುಗಳೇನಿದ್ದಾರೆ, ಇವರುಗಳು ಸರಿಯಾದ ರೀತಿಯಲ್ಲಿ ಸಮರ್ಪಕವಾಗಿ ಕೆಲಸ ಮಾಡಿದರೆ ಮಾತ್ರ ಪರಿಪೂರ್ಣವಾಗಿ ಸ್ವಯಂ ಆಡಳಿತದ ವಿಕೇಂದ್ರೀಕರಣವಾಗುತ್ತದೆ. ನೌಕರರುಗಳನ್ನು ಬಿಟ್ಟು ಪಂಚಾಯಿತಿ ನಡೆಸುವುದಕ್ಕೆ ಸಾಧ್ಯವಿಲ್ಲ. ಆದುದರಿಂದ, ಪ್ರತ್ಯೇಕ ಪಂಚಾಯತ್ ರಾಜ್ ನಿರ್ದೇಶನಾಲಯವೆಂದು ತಂದು ಅದನ್ನು ಪ್ರತ್ಯೇಕ ಸಂಸ್ಥೆಯನ್ನಾಗಿಸಿ ಅದಕ್ಕೆ ಹೆಚ್ಚು ಸ್ವಾಯತ್ತ ಅಧಿಕಾರ ನೀಡಿ ಕೆಲಸ ಮಾಡುವುದು ಮತ್ತು ನೌಕರರುಗಳ ವೇತನ ಹಾಗೂ ಅವರಿಗೆ ಕೆಲಸದ ಭದ್ರತೆ ಒದಗಿಸಿಕೊಡುವ ಬಗ್ಗೆ ತಾವು ತಿದ್ದುಪಡಿಯಲ್ಲಿ ಸೂಚಿಸಿ ಅಂಗೀಕರಿಸಬೇಕು. ತಿದ್ದುಪಡಿಯಲ್ಲಿ ಕೆಲವು ಒಳ್ಳೆಯ ಅಂಶಗಳಿದ್ದು ಅದನ್ನು ನಾನು ಸ್ವಾಗತಿಸುತ್ತಾ ಸಲಹೆ ಕೊಡುತ್ತಿದ್ದೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜ್‌ನಗರ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪಂಚಾಯತ್ 'ರಾಜ್ ವಿಧೇಯಕ ಮೂರನೇ ಬಾರಿ ತಿದ್ದುಪಡಿಯಾಗುತ್ತಿದೆ.

ತಿದ್ದುಪಡಿಯಲ್ಲಿ ಸ್ವಾಗತಿಸುವ ಅನೇಕ ವಿಚಾರಗಳನ್ನು ತಂದಿರುವುದನ್ನು ನಾವು ಮೆಚ್ಚುತ್ತೇವೆ. ಕೆಲವೊಂದನ್ನು ತಾವು ಅತಿ ಪ್ರಾಮುಖ್ಯವಾಗಿ ಮಾಡಿದ್ದೀರಿ. ಮಾನ್ಯ ಹಿರಿಯ ಸದಸ್ಯರಾದ ಎಂ.ವೈ.ಘೋರ್ಪಡೆಯವರು ಅದನ್ನು ಹೇಳಿದ್ದಾರೆ. ಶೌಚಾಲಯಗಳ ಬಗ್ಗೆ ನಾನು ತಮಗೆ ಹಿಂದೆಯೇ ಹೇಳಿದ್ದೆ. ಕರ್ನಾಟಕ ರಾಜ್ಯದಲ್ಲಿ ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಶೌಚಾಲಯಗಳ ವ್ಯವಸ್ಥೆಯಿಲ್ಲದಿರುವುದರಿಂದ ಅತ್ಯಂತ ಘೋರವಾದ ಪರಿಸ್ಥಿತಿ ಉಂಟಾಗಿದೆ. ತಾವು ನೋಡಿದ್ದೀರಿ: ಇಡೀ ದೇಶದ ಹಳ್ಳಿಗಳಲ್ಲಿ ಮತ್ತು ಕರ್ನಾಟಕದಲ್ಲಿ ಸಂಜೆ ಆರು ಗಂಟೆ ಬಳಿಕವೇ ಶೌಚಕ್ಕೆ ಬೇಲಿ ಪಕ್ಕ ಹೋಗುತ್ತಾರೆ. ಬೆಳಿಗ್ಗೆಯಿಂದ ಸಂಜೆಯವರೆವಿಗೂ ಅವರು ಶೌಚಕ್ಕೆ ಹೋಗುವ ಸ್ವಾತಂತ್ರ್ಯವೇ ಇಲ್ಲ. ಕಾರಣವೇನೆಂದರೆ, ಹಳ್ಳಿಗಳಲ್ಲಿ ಶೌಚಾಲಯಗಳನ್ನು ನಿರ್ಮಾಣ ಮಾಡುವ ಅನೇಕ ಯೋಜನೆಗಳನ್ನು ತಾವು ಕೈಗೊಂಡಿದ್ದರೂ ಅವೆಲ್ಲವೂ ವಿಫಲವಾಗುತ್ತಿದೆ. ಇದು ಸಫಲವಾಗಬೇಕಾದರೆ ನೀರಿನ ವ್ಯವಸ್ಥೆ ಮತ್ತು ಶೌಚಾಲಯವನ್ನು ಪ್ರತಿ ಹಳ್ಳಿಗೂ ಕನಿಷ್ಠ ಒಂದು ಊರಿಗೆ ಮೂಲೆಯಲ್ಲಾದರೂ ಶೌಚಾಲಯ ವ್ಯವಸ್ಥೆ ಇರುವಂಥ ವ್ಯವಸ್ಥೆ ಬಗ್ಗೆ ತಾವು ಪ್ರಾಮಾಣಿಕವಾದ ಚಿಂತನೆ ಮಾಡಬೇಕು. ಇದಕ್ಕೆ ಎಷ್ಟು ಹಣಕಾಸಿನ ವ್ಯವಸ್ಥೆ ಬೇಕು, ಯಾವ ರೀತಿಯಲ್ಲಿ ಯೋಜನೆ ಕೈಗೊಳ್ಳಬೇಕೆಂಬ ಬಗ್ಗೆ ಚಿಂತನೆ ಮಾಡಿ. ಹಿಂದೆ ಇದರ ಬಗ್ಗೆ ಪ್ರಸ್ತಾಪವಾದಾಗ 'ನಿರ್ಮಲ ಕರ್ನಾಟಕ' ಯೋಜನೆಯಡಿ ಶೌಚಾಲಯಗಳ ನಿರ್ಮಾಣದ ಕೆಲಸ ಕೂಡ ಇರುತ್ತದೆಂದು ತಾವು ಹೇಳಿದ್ದೀರಿ, ನಾನೂ ಒಪ್ಪುತ್ತೇನೆ. ಆದರೆ, ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾದರೂ ಮಹಿಳೆಯರಿಗೆ ಹಳ್ಳಿಗಳಲ್ಲಿ ಸಾರ್ವಜನಿಕ ಪ್ರತ್ಯೇಕ ಶೌಚಾಲಯಗಳಿಲ್ಲ. ಪ್ರಸ್ತುತ ಪರಿಸ್ಥಿತಿಯಲ್ಲಿ ಅವರಿಗೆ ಶೌಚಾಲಯವೆಂದರೆ ಬೇಲಿ ಪಕ್ಕ ಬಿಟ್ಟರೆ ಬೇರೆ ಪ್ರಶ್ನೆಯೇ ಇಲ್ಲ. ಆದುದರಿಂದ, ಇದರ ಬಗ್ಗೆ ತಾವು ಪ್ರಾಮಾಣಿಕ ರೀತಿಯಲ್ಲಿ ಯಾವ ರೀತಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂಬ ಬಗ್ಗೆ ಪ್ರಾಮಾಣಿಕ ಚಿಂತನೆ ನಡೆಸಬೇಕು. ಏಕೆಂದರೆ, ಪಿ.ಆರ್.ನಾಯಕ್‌ರವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿ ಮಾಡಿದಾಗ ಇದರಲ್ಲಿ ಅನೇಕ ವಿಚಾರಗಳು, ಸಲಹೆಗಳು ಬರುತ್ತವೆಂದು ತಾವು ಅನೇಕ ಬಾರಿ ಸದನದಲ್ಲಿ ಚರ್ಚಿಸಿದಾಗ ಹೇಳಿದ್ದಿರಿ. ಈ ವಿಚಾರದಲ್ಲಿ ಅವರು ಏನೂ ಬೆಳಕು ಚೆಲ್ಲಲಿಲ್ಲ, ನನಗೆ • ಅನ್ನಿಸುತ್ತದೆ ನಾಯಕ್‌ರವರು ಕೊಟ್ಟಂತಹ ಸಲಹೆಗಳನ್ನು, ಶಿಫಾರಸ್ಸುಗಳಲ್ಲಿ ಈ ಯಾವ ವಿಚಾರಗಳೂ ಬೆಳಕಿಗೆ ಬಂದಿಲ್ಲ. ಆದ್ದರಿಂದ ನಾನು ನಿಮಗೆ ಅತ್ಯಂತ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ಅದನ್ನು ಬಹಳ ಪ್ರಾಮಾಣಿಕವಾಗಿ ಗುರುತರವಾಗಿ ಜವಾಬ್ದಾರಿಯುತವಾಗಿ ಮಹಿಳೆಯರಿಗಾಗಿ ಪ್ರತ್ಯೇಕ ಶೌಚಾಲಾಯಗಳನ್ನು ಮಾಡಿ ಅವುಗಳನ್ನು ಶುದ್ಧವಾಗಿ ಸ್ವಚ್ಛವಾಗಿ ಇಡಲು ಏನೇನು ಮಾಡಬೇಕು ಅದನ್ನು ಮಾಡಿ. ನೀರಿನ ವ್ಯವಸ್ಥೆ ಮಾಡಿ. ಎರಡನೆಯದಾಗಿ ತಮ್ಮ ಉದ್ದೇಶಗಳು ಮತ್ತು ಕಾರಣಗಳಲ್ಲಿ ಈ ''ಪಾರಿಭಾಷಿಸಲ್ಪಟ್ಟ ದುರ್ನಡತೆಗಾಗಿ'' ಯಾವುದು ದುರ್ನಡತೆ ಅದನ್ನು ತಾವು ಸ್ಪಷ್ಟಪಡಿಸಬೇಕು. ಒಬ್ಬ ಸದಸ್ಯರನ್ನು ತೆಗೆಯಲು ಕಾರಣ ದುರ್ನಡತೆ ಎಂದು ಹೇಳಿ ಬಿಟ್ಟರೆ ಸಾಲದು. ಆ ದುರ್ನಡತೆ ಎಂದರೆ ಯಾವುವು

ಎಂಬುದನ್ನು ಸ್ಪಷ್ಟವಾಗಿ ವಿಶಾಲವಾಗಿ ತಾವು ಹೇಳಬೇಕು. ಇದರ ಜೊತೆಗೆ ನಾನು ಅನೇಕ ಬಾರಿ ಈ ವಿಕೇಂದ್ರಿಕರಣದ ಬಗ್ಗೆ ಚರ್ಚೆ ಮಾಡಿದ್ದೇನೆ, ನನಗೆ ವಿಕೇಂದ್ರಿಕರಣದ ಬಗ್ಗೆ ತಕರಾರು ಇಲ್ಲ. ನೀವು ಮತ್ತು ನಮ್ಮ ವಿ.ನಜೀರ್‌ಸಾಬ್ ಮತ್ತು ಘೋರ್ಪಡೆಯವರಿಗೆ ಇದರ ಬಗ್ಗೆ ಇರುವ ಚಿಂತನೆಯನ್ನು ನಾನು ಒಪ್ಪುತ್ತೇನೆ. ಇದನ್ನು ನೀವು ಬೇರೆ ಉದ್ದೇಶದಿಂದ ಮಾಡಿದ್ದೀರಿ ಎಂದು ನಾನು ಹೇಳಲು ತಯಾರು ಇಲ್ಲ. ಇದನ್ನು ನಾವು ಮುಕ್ತಕಂಠದಿಂದ ಸ್ವಾಗತಿಸುತ್ತೇವೆ. ಇದರ ಬಗ್ಗೆ ಹಿಂದೆ ಶ್ರೀ ಡಿ.ಬಿ.ಚಂದ್ರೇಗೌಡರು ಇದ್ದಾಗ ಇದರ ಬಗ್ಗೆ ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಈ ಶಾಸಕರ ಸ್ಥಾನ-ಮಾನಗಳು ಏನು, ಗ್ರಾಮ ಪಂಚಾಯತ್‌ಗಳಲ್ಲಿ ಏನು, ತಾಲ್ಲೂಕು ಪಂಚಾಯತ್‌ಗಳಲ್ಲಿ ಏನು, ಜಿಲ್ಲಾ ಪಂಚಾಯತ್‌ಗಳಲ್ಲಿ ಏನು; ಈ ಮೂರು ಕಡೆಗಳಲ್ಲಿ ನಾವು ಶೂನ್ಯವಾಗಿದ್ದೇವೆ. ಇದು ಬಹುಶಃ ಸಚಿವರಿಗೆ ಇದರ ಕಾವು-ನೋವು ತಟ್ಟುವುದಿಲ್ಲ. ಆದರೆ, ಸಾಮಾನ್ಯ ಶಾಸಕರಿಗೆ ಅದರ ಕಾವು-ನೋವು ಎರಡು ತಟ್ಟುತ್ತದೆ. ನಾನೇನೂ ವಿಕೇಂದ್ರೀಕರಣವನ್ನು ವಿರೋಧ ಮಾಡಿ ಎಲ್ಲಾ ಅಧಿಕಾರಗಳನ್ನು ಶಾಸಕರಿಗೆ ಕೊಡಿ ಎಂದು ಹೇಳಲು ಹೋಗುವುದಿಲ್ಲ. ಇವತ್ತಿನ ಪರಿಸ್ಥಿತಿಯಲ್ಲಿ ತಾಲ್ಲೂಕು ಪಂಚಾಯತ್ ಶಾಸಕನೊಬ್ಬ ಅಲ್ಲಿ ನಡೆಯುವ ಸಭೆಗಳಲ್ಲಿ ಕೂಡುವುದು, ಅಲ್ಲಿ ನಡೆಯುವ ಚರ್ಚೆಗಳನ್ನು ಕೇಳುವುದಕ್ಕೆ, ಯಾವುದೇ ಒಂದು ಸಣ್ಣ ಕೊಳವೆ ಬಾವಿ ಕೊರೆಸುವುದಾಗಲಿ, ಅಂಗನವಾಡಿ ಕಟ್ಟಿಸುವುದಾಗಲಿ, ರಸ್ತೆಗಳ ದುರಸ್ತಿಯಾಗುವುದಾಗಲಿ ಇಲ್ಲಿ ಒಂದು ಅಭಿಪ್ರಾಯವನ್ನು ಹೇಳುವುದಕ್ಕೂ ಶಾಸಕರಿಗೆ ಅಧಿಕಾರ ಇಲ್ಲ. ಆದರೆ ಏನು ಅರ್ಥ? ಯಾವುದೇ ತಾಲ್ಲೂಕುಗಳಲ್ಲಿ, ಯಾವುದೇ ಕ್ಷೇತ್ರಗಳಲ್ಲಿ ಜನರು ನಿರೀಕ್ಷಣೆ ಮಾಡುವುದು ಈ ತಾಲ್ಲೂಕು ಪಂಚಾಯತ್‌ಗಿಂತ, ಜಿಲ್ಲಾ ಪಂಚಾಯತ್‌ಗಿಂತ, ಸದಸ್ಯರಿಗಿಂತ ನೇರವಾಗಿ ಶಾಸಕರನ್ನು ಕೇಳುತ್ತಾರೆ ರಸ್ತೆ ಕೊಡುತ್ತೀವೆ ಎಂದಿರಿ, ಕೊಳವೆ ಬಾವಿಗಳನ್ನು ಕೊಡುತ್ತೇವೆ ಎಂದಿರಿ ಆದರೆ ಯಾವುದೂ ಆಗಲಿಲ್ಲ ಎನ್ನುತ್ತಾರೆ. ಹೀಗೆ ಪ್ರತಿಯೊಂದು ಹಂತದಲ್ಲಿ ಶಾಸಕರ ಸ್ಥಾನ-ಮಾನ ಶೂನ್ಯವಾಗಿದೆ. ಒಂದು ರೀತಿಯ ಮೈಲಿಗೆ ಜನ ಎನ್ನುವಂತಹ ರೀತಿಯಲ್ಲಿ ಕಡೆಗಣಿಸಿದ್ದಾರೆ. ತಾವು ಅನೇಕ ಸಾರಿ ಈ ನಾಯಕ್‌ರವರ ವರದಿ ಬರಲಿ ಆ ವರದಿಯಲ್ಲಿ ಏನಾದರೂ ಬರಬಹುದು ಎಂದು ಹೇಳಿದ್ದೀರಿ. ಈಗ ನಾನು ನಿಮಗೆ ಸ್ಪಷ್ಟವಾಗಿ ಹೇಳುತ್ತೇನೆ, ಈಗ ಚುನಾವಣೆಗಳು ಬರುತ್ತಿವೆ, ನಾವು ಏನೂ ನಾಮಕರಣ ಸದಸ್ಯರು ಅಲ್ಲ, ನಾಮಕರಣ ಸದಸ್ಯರಾಗಿದ್ದರೆ ನಮಗೆ ತಾಲ್ಲೂಕು ಪಂಚಾಯತ್‌ಗಳು ಬೇಡ, ಜಿಲ್ಲಾ ಪಂಚಾಯತ್‌ಗಳು ಬೇಡ. ನಾವು ಚುನಾವಣೆಗೆಯಲ್ಲೆ ಗೆದ್ದು ಬಂದರೆ ಅಲ್ಲಿಯ ಜನರಿಗೆ ಬೇಕಾದ ಒಳ್ಳೆಯ ಆಡಳಿತವನ್ನು ನಡೆಸುವಂತೆ ಶಾಸಕರಿಗೆ ಒತ್ತಾಯಿಸಬಹುದು. ಇದರ ಬಗ್ಗೆ ತಾವು ಬಹಳ ಚಿಂತನೆ ಮಾಡಬೇಕು. ಈ ಆಶ್ರಯ ಕಮಿಟಿಗೆ ಕಾಲು ಇಲ್ಲ, ಕೈ ಇಲ್ಲ ಹೆಳವನ ಹಾಗೆ ಇದೆ. ಅದಕ್ಕೆ ನಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ, ಯಾವುದೇ ಚಿಂತನೆ ಮಾಡಿ ಅಧ್ಯಕ್ಷರಿಗೆ ಯಾವುದೇ ಅಧೀಕಾರ ಇಲ್ಲದ ಕಮಿಟಿ ಬೇಕಾಗಿಲ್ಲ. ಇದು ಕಣ್ಣು ಇದ್ದು ಕುರುಡರಾದ ಹಾಗೆ, ನಾವು ಅಲ್ಲಿ ಕುಳಿತುಕೊಳ್ಳುವುದು ಯಾರೋ ತಂದು ಕೊಡುವುದು ಅದಕ್ಕೆ ನಾವು

ಸಹಿ ಹಾಕುವುದು; ಫಲಾನುಭವಿಗಳನ್ನು ನೇರವಾಗಿ ಗುರುತಿಸುವಂತಹ ಅಧಿಕಾರ ಈ ಕಮಿಟಿಗೆ ಇರಬೇಕಾಗಿತ್ತು. ತಾವು ಸಚಿವರಾಗಿದ್ದೀರಿ. ಇದರ ನೋವು ತಮಗೆ ಗೊತ್ತಾಗುವುದಿಲ್ಲ, ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ಎಲ್ಲಾ ಕ್ಷೇತ್ರಗಳಿಗೆ ಒಂದೊಂದು ಕಾರ್ಯಾಲಯ ಕೊಡಬೇಕು ಎಂದು ತಾವು ಹೇಳಿದ್ದೀರಿ ಸಂತೋಷ. ಈಗ ಕಾರ್ಯಾಲಯ ಎಂದರೆ ಸತ್ತ ಹೆಣವನ್ನು ಕುಯ್ಯುವ ಮನೆಗಾದರೂ ಒಂದು ಬಲ್ಬ್ ಇದೆ ಟೇಬಲ್ ಇದೆ, ಈ ಶಾಸಕರ ಕಾರ್ಯಾಲಯದಲ್ಲಿ ಒಂದು ಬೆಂಚ್ ಇಲ್ಲ, ಖುರ್ಚಿ ಇಲ್ಲ ಒಂದು ಬಲ್ಬ್ ಇಲ್ಲ ಕೆಲವು ಕ್ಷೇತ್ರಗಳಲ್ಲಿ ಕಾರ್ಯಾಲಯವನ್ನೇ ಕೊಟ್ಟಿಲ್ಲ. ಈ ರೀತಿಯ ಧೋರಣೆ ಭೇದ ಭಾವ ಏಕೆ? ಶಾಸಕರಿಗೆ ಕಾರ್ಯಾಲಯ ಬೇಕು ಎಂದು ನಿರಂತರವಾಗಿ ಸರ್ಕಾರದ ಜೊತೆಗೆ ಒಂದು ವರ್ಷದಿಂದ ಹೋರಾಟ ಮಾಡಿದ್ದಕ್ಕೆ ಇಂತವುಗಳನ್ನು ಕೊಟ್ಟಿದ್ದೀರಿ, ಇದರ ಕೀರ್ತಿ ನಿಮಗೆ ಹೋಗಲಿ, ಇದರ ಚಿತ್ರಣವನ್ನು ತಮಗೆ ಕೊಡುತ್ತೇನೆ. ಅಧ್ಯಕ್ಷರೆ, ತಮಗೆ ಅದರ ಅನುಭವವಾಗಿದೆಯೋ ಇಲ್ಲವೋ ಎಂಬುದು ಗೊತ್ತಿಲ್ಲ ಏಕೆಂದರೆ ತಾವು ಅಧ್ಯಕ್ಷರಾಗಿದ್ದೀರಿ ಆ ಕಾರ್ಯಾಲಯಕ್ಕೆ ಹೋಗುವ ಸಂಭವ ಇಲ್ಲ. ಇವರು ಮಂತ್ರಿಗಳಾಗಿದ್ದಾರೆ ಅದಕ್ಕೆ ಇವರು ಹೋಗುವುದಿಲ್ಲ, ನಾವು ಕಾರ್ಯಾಲಯಕ್ಕೆ ಹೋಗಬೇಕು ಎಂದರೆ ನನಗೆ ಇನ್ನೂ ಕಾರ್ಯಾಲಯ ಸಿಕ್ಕಿಲ್ಲ. ಇರಲಿ, ಅದರ ಬಗ್ಗೆ ಚರ್ಚೆಗೆ ಈಗ ನಾನು ಹೋಗುವುದಿಲ್ಲ. ಎಷ್ಟೊ ಜನ ಕಾರ್ಯಾಲಯ ಕೊಡಿ ಎಂದು ಜಿಲ್ಲಾಧಿಕಾರಿಗೆ ಕೇಳಿದರೆ ಆ ಜಿಲ್ಲಾಧಿಕಾರಿ ಅವರ ಮುಖವನ್ನು ನೋಡುವುದಿಲ್ಲ. ಕಾರ್ಯಲಯಗಳಿಗೆ ಸುಣ್ಣ ಹೊಡೆಯಿರಿ ಎಂದರೆ ಕೇಳುವವರು ಇಲ್ಲ, ಲೋಕೋಪಯೋಗಿ ಇಲಾಖೆಯವರು ಇದರ ಬಗ್ಗೆ ಕೇಳುವುದಿಲ್ಲ. ಈ ರೀತಿಯಾಗಿ ಒಬ್ಬ ಶಾಸಕರನ್ನು ಈ ಪರಿಸ್ಥಿತಿಗೆ ತಂದು ಇಟ್ಟಿದ್ದೀರಿ. ಇದರ ಉದ್ದೇಶ ಏನು ನಿಮಗೆ ಶಾಸಕರ ಬಗ್ಗೆ ಒಳ್ಳೆಯ ಅಭಿಪ್ರಾಯ ಇದೆಯಾ ಇಲ್ಲವೇ; ಅಲ್ಲಿ ತಾಲ್ಲೂಕು ಪಂಚಾಯತ್ ಅಧ್ಯಕ್ಷರಿಗೆ ಕಾರ್ಯಾಲಯ ಇದೆ, ವ್ಯವಸ್ಥೆ ಇದೆ, ತಾಲ್ಲೂಕು ಪಂಚಾಯತ್ ಅಧ್ಯಕ್ಷರ ಸುತ್ತ 12 ಜನ ಅಧಿಕಾರಿಗಳು ಇರಬಹುದು. ಆದರೆ ಈ ಶಾಸಕನ ಪರಿಸ್ಥಿತಿ, ನಾನು ನನ್ನ ಬಗ್ಗೆ ಹೇಳುತ್ತಾ ಇಲ್ಲ, ಒಟ್ಟಾರೆ ಶಾಸಕರ ಬಗ್ಗೆ ಅವರ ಪರವಾಗಿ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಶಾಸಕರ ಪರಿಸ್ಥಿತಿ ಏನು ಆಗಿದೆ ಎಂದರೆ ಮನೆಯಲ್ಲಿ ಗಂಡ ಹೆಂಡರು ಜಗಳ ಮಾಡಿದರೆ ಹೆಂಡತಿ ಗಂಡನನ್ನು ಹೊಡೆದಳು ಎಂದು ಇಟ್ಟುಕೊಳ್ಳಿ. ಅದನ್ನು ನಾವು ಹೊರಗೆ ಬಂದು ಹೇಳಿಕೊಳ್ಳುವುದಿಲ್ಲ ನನ್ನ ಹೆಂಡತಿ ಹೊಡೆದಳು ಆದರೂ ನಾವು ಜೋರಾಗಿ ಇದ್ದೇವೆ ಎಂದು. ಆ ಪರಿಸ್ಥಿತಿ ನಮಗಾಗಿದೆ. ನಮಗೆ ಏನೇ ಅಗೌರವವಾದರೂ ಮಾನ ಹೋದರೂ ನಾವು ಏನೂ ಇದರಲ್ಲಿ ತಲೆ ಹಾಕುವ ಹಾಗೆ ಇಲ್ಲ. ಹೇಳಿಕೊಳ್ಳುವ ಹಾಗೆ ಇಲ್ಲ.

ಶ್ರೀ ಎಚ್.ಎಸ್.ನಂಜೇಗೌಡ: ಮಾನ್ಯ ಅಧ್ಯಕ್ಷರೆ, ನನ್ನದೊಂದು ಅಬ್ಜೆಕ್ಷನ್, ಹೆಂಡತಿಯರು ಹೊಡೆದರೆ ನಾವು ಹೇಳಿಕೊಳ್ಳುವುದಿಲ್ಲ ಎನ್ನುತ್ತಾರೆ. ಆದರೆ

ಹೆಂಡತಿಯರು ಹೊಡೆಯಬಾರದು ಎಂದು ಕಾನೂನು ಏನಾದರೂ ಇದೆಯಾ? ಅವರೇನು ಇನ್‌ಫೀರಿಯರ್ ಏನು? ಇವರು ಮಾತ್ರ ಅವರಿಗೆ ಹೊಡೆಯಬೇಕಾ; ಅವರೂ ಹೊಡೆಯಲಿ.

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರನ್ನು ಈ ವಿಷಯವನ್ನು ಸಹ ಚರ್ಚೆಯಲ್ಲಿ ತರಬೇಕು ಎಂದು ಬಹಳ ಪ್ರಯತ್ನ ಮಾಡುತ್ತಿದ್ದೇನೆ. ಆದರೆ ಅವರು ಏಕೋ ಸ್ಪಂದಿಸುತ್ತಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ನಂಜೇಗೌಡರ ಪ್ರೇರಣೆಯಿಂದ ಯಾರಾದರೂ ಇವತ್ತು ಗಂಡನನ್ನು ಹೊಡೆದು ಸಾಯಿಸೇಬಿಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರು ಏಕೋ ಸ್ಪಂದಿಸುತ್ತಿಲ್ಲ. ಇದರಿಂದ ನಮ್ಮ ಮನಸ್ಸಿಗೆ ನೋವಾಗುತ್ತದೆ. ಇಂಥ ಸಂದರ್ಭ ಬಂದಾಗ ನೀವು ಸ್ಪಂದಿಸಿ ಒಂದು ಬೆಳಕನ್ನು ಚಲ್ಲುತ್ತಿದ್ದಿರಿ; ಯಾಕೋ ಇವತ್ತು ಸ್ಪಂದಿಸುತ್ತಿಲ್ಲ. ನಾನು ಈ ಕೆಲವೊಂದು ವಿಚಾರಗಳನ್ನು ಪ್ರಕಾಶ್‌ರವರ ಗಮನಕ್ಕೆ ತಂದಿದ್ದೇನೆ, ತಾವು ಉತ್ತರ ಕೊಡುವಾಗ ಈ ತಿದ್ದುಪಡಿಯಲ್ಲಿ ಏನೇನು ಮಾಡುತ್ತೀರಿ ಎಂಬುದನ್ನು ತಿಳಿಸಬೇಕೆಂದು ತಮ್ಮಲ್ಲಿ ಕಳಕಳಿಯ ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ): ಮಾನ್ಯ ಅಧ್ಯಕ್ಷರೆ, 1993ನೆ ಕಾಯಿದೆಗೆ ಏನು ತಿದ್ದುಪಡಿ ತಂದಿದ್ದಾರೆ ಸನ್ಮಾನ್ಯ ಸಚಿವರು ಅದನ್ನು, ಸ್ವಾಗತಿಸಲೇಬೇಕಾಗುತ್ತದೆ. ಅಧಿಕಾರಿಗಳಿಗೆ ಎಲ್ಲೆಲ್ಲಿ ನಿಯಂತ್ರಣ ಹೆಚ್ಚಾಗಿತ್ತು ಅದನ್ನು ಸ್ವಲ್ಪ ಕಡಿತ ಮಾಡಿ, ಅಧಿಕಾರೇತರ ಸದಸ್ಯರಿಗೆ ಹೆಚ್ಚು ಅಧಿಕಾರ ಕೊಡಲು ಮಾಡಿರುವ ಪ್ರಯತ್ನವನ್ನು ನಾನು ಅಭಿನಂದಿಸುತ್ತೇನೆ. 31ಬಿನಲ್ಲಿ ತಾವು ಏನು ಮಾಡಿದ್ದೀರಿ, ಸರ್ಕಾರಿ ಸೇವೆಯಲ್ಲಿರುವ ನೌಕರನ ಜೊತೆಗೆ, ಏಡೆಡ್ ಇನ್ಸ್‌ಟ್ಯೂಷನ್, ಮತ್ತು ಕೋ-ಆಪ್‌ರೇಟಿವ್ ಇನ್ಸ್‌ಟ್ಯೂಷನ್‌ಗಳಲ್ಲಿ ಇರುವ ನೌಕರರನ್ನು ಸೇರಿಸಿಕೊಂಡು ಬಿಟ್ಟರೆ ಒಳ್ಳೆಯದಾಗುತ್ತದೆ. ಈ ಪ್ರೈವೇಟ್ ಸ್ಕೂಲ್‌ಗಳಲ್ಲಿ ಇರುವವರು, ಪ್ರೈವೇಟ್ ಕಾಲೇಜುಗಳಲ್ಲಿ ಮತ್ತು ಕೋ ಆಪರೇಟೀವ್ ಇನ್ಸ್‌ಸ್ಟಿಟ್ಯೂಷನ್‌ಗಳಲ್ಲಿರುವವರು ಎಲೆಕ್ಷನ್ ಪ್ರಕ್ರಿಯೆಗಳಲ್ಲಿ ಪಕ್ಷದ ಪರವಾಗಿ ಅಥವಾ ಅಭ್ಯರ್ಥಿಗಳ ಪರವಾಗಿ ಬರುವುದನ್ನು ತಾವು ತಪ್ಪಿಸಬೇಕಾಗುತ್ತದೆ. ಮತ್ತು ದುರ್ನಡತೆ ಎಂದರೆ ಏನು? ಏನೇನು ಆದಾಗ ದುರ್ನಡತೆ ಆಗುತ್ತದೆ, ಎಂದು ಸೆಕ್ಷನ್ 43ಎ ನಲ್ಲಿ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಯಾರ ಮೇಲಾದರೂ ಪಕ್ಷ ಭೇದಕ್ಕೆ ಅಥವಾ ಸಭೆನಲ್ಲಿ ಏನಾದರೂ ಕೇಳುತ್ತಾರೆ ಎನ್ನೋ ಕಾರಣಕ್ಕೆ ಸಭೆಯನ್ನು ನಡೆಸತಕ್ಕ ಅಧ್ಯಕ್ಷರು ದುರ್ನಡತೆ ಮಾಡಿದರು ಎಂದು ಯಾರೋ ಒಬ್ಬ ಸದಸ್ಯನನ್ನು ಅಮಾನತ್ತು ಮಾಡುವುದು ಅಥವಾ ಸದಸ್ಯತ್ವದಿಂದ ಕಿತ್ತು ಹಾಕುವ ಸ್ಥಿತಿ ನಿರ್ಮಾಣ ಮಾಡಬಾರದು ಎಂದು ಹೇಳಿ, ತಾವು ಏನು 49ನೇ ಪ್ರಕರಣಕ್ಕೆ ಅಮೆಂಡ್‌ಮೆಂಟನ್ನು ತಂದಿದ್ದೀರಿ, ಅದನ್ನು ಪ್ರಜಾ ಪ್ರಭುತ್ವದ

ದೃಷ್ಟಿಯಲ್ಲಿ ಯೋಚನೆ ಮಾಡಿದಾಗ, ಅವಿಶ್ವಾಸ ನಿರ್ಣಯವನ್ನು ಒಂದು ವರ್ಷ ಆರು ತಿಂಗಳೊಳಗೆ ತರಬಾರದು ಎಂದು ಇದ್ದರೂ, ಒಬ್ಬ ಅಧ್ಯಕ್ಷ ಯಾವ ಸಪೋರ್ಟ್ ಇಲ್ಲದೆ ಒಂದು ವರ್ಷ ಒಂದು ಸಂಸ್ಥೆಯ ಅಧ್ಯಕ್ಷನಾಗಿ ಮುಂದುವರೆಯುವುದು ಖಂಡಿತ ಆಗಬಾರದು. ಇದರಲ್ಲಿ ನನ್ನದು ಭಿನ್ನಾಭಿಪ್ರಾಯ ಇದೆ. ಒಂದು ಸಂಸ್ಥೆಯ ಅಧ್ಯಕ್ಷನಿಗೆ ಅವಿಶ್ವಾಸ ನಿರ್ಣಯ ತಂದು ಒಂದು ವರ್ಷ ಸಹಕಾರ ಸಿಗದಂತಹ ಸ್ಥಿತಿ ಬಂದಾಗ ಆ ಸಂಸ್ಥೆಯ ಅಭಿವೃದ್ಧಿ ಆಗುವುದು ಸ್ವಲ್ಪ ಕಷ್ಟವಾಗುತ್ತದೆ. ತಾವು ಸ್ವಲ್ಪ ಇದರ ಬಗ್ಗೆ ಯೋಚನೆ ಮಾಡಿ ಅದನ್ನು ಅರ್ಧಕ್ಕೆ ಎಂದರೆ ಮೂರು ಅಥವಾ ಆರು ತಿಂಗಳಿಗೆ ಇಳಿಸಿದರೆ ಬಹುಶಃ ಒಳ್ಳೆಯದಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಸಚಿವರು 120ನೇ ಪ್ರಕರಣಕ್ಕೆ ತಿದ್ದುಪಡಿ ತಂದು ಅಸಿಸ್ಟೆಂಟ್ ಕಮೀಷನರ್ ಎನ್ನುವ ಕಡೆ ತಾಲ್ಲೂಕು ಪಂಚಾಯತಿ ಅಧ್ಯಕ್ಷರು ಎಂದು ಮಾಡಿದ್ದೀರಿ, ಇದೊಂದು ಎಲೆಕ್ಷನ್ ಪ್ರಕ್ರಿಯೆ, ಪಂಚಾಯಿತಿ ಅಧ್ಯಕ್ಷರ ಪೈಕಿ ಮೂರನೇ ಒಂದು ಭಾಗದಷ್ಟು ಗುಂಪನ್ನು ಆರಿಸುವ ಕಡೆ ಅಸಿಸ್ಟೆಂಟ್ ಕಮೀಷನರ್ ಮಾಡುವ ಕೆಲಸವನ್ನು ತಾಲ್ಲೂಕು ಪಂಚಾಯತ್ ಅಧ್ಯಕ್ಷರಿಗೆ ಕೊಟ್ಟರೆ ಖಂಡಿತ ಇರಿಸುಮುರಿಸು ಆಗುತ್ತದೆ. ಇದರಲ್ಲಿ ಅಧಿಕಾರ ಚಲಾಯಿಸುವ ಪ್ರಶ್ನೆ ಇಲ್ಲ. ಈ ಯಾವ ಅಧಿಕಾರಿಗಳ ಕೈಯಲ್ಲಿ ಕೊಟ್ಟರೂ ಕೂಡ ಚೆನ್ನಾಗಿ ಇರುತ್ತದೆ. ಅದನ್ನು ಅಸಿಸ್ಟೆಂಟ್ ಕಮೀಷನರ್ ಕೈಯಲ್ಲಿ ಕೊಡಿ ಅಥವಾ ಎಕ್ಸಿಕ್ಯೂಟೀವ್ ಆಫೀಸರ್ ಕೈಯಲ್ಲಿ ಕೊಡಬೇಕಾಗುತ್ತದೆ. ಅಧ್ಯಕ್ಷರು ನಾನ್ ಅಫಿಷಿಯಲ್ ಎಲೆಕ್ಷನ್ ಪ್ರಕ್ರಿಯೆಗಳಲ್ಲಿ ನೇರವಾಗಿ ಭಾಗವಹಿಸುವುದಕ್ಕೆ ಸಾಧ್ಯವಿಲ್ಲ; ತಪ್ಪಾಗುತ್ತದೆ, ಅದನ್ನು ತಾವು ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಈ ಶೌಚಾಗೃಹಗಳ ಬಗ್ಗೆ ನಾನೂ ಕೂಡ ಘೋರ್ಪಡೆಯವರಿಗೆ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಇದೊಂದು ಸಭೆಯ ಸದಸ್ಯನಾಗುವುದಕ್ಕೆ ಅರ್ಹತೆ ಆಗಬಾರದು. ಅದರ ಮೇಲೆ ನಿಮಗಿರುವ ಅಭಿಪ್ರಾಯ ಮತ್ತು ಆಕಾಂಕ್ಷೆಯನ್ನು ನಿಜವಾಗಿ ಮೆಚ್ಚತಕ್ಕದ್ದು. ಆದರೆ ಅದು ಒಂದು ನಿರ್ಬಂಧನೆ ಆಗಬಾರದು. ಅದು ಇಲ್ಲ ಎನ್ನುವ ಕಾರಣಕ್ಕೆ ಒಬ್ಬ ಸದಸ್ಯನನ್ನು ಅನರ್ಹ ಮಾಡುವುದು, ಅಥವಾ ಸದಸ್ಯತ್ವದಿಂದ ಕಿತ್ತು ಹಾಕುವುದು ಆಗಬಾರದು. ಮನೆಯಲ್ಲಿ ಶೌಚಾಲಯ ಇಲ್ಲದ ಕಾರಣಕ್ಕೆ ನೀನು ಅನರ್ಹ ಎನ್ನುವುದು ನಿಜವಾಗಿ ಕೆಟ್ಟದಾಗುತ್ತದೆ. ಆನಂತರ ತಾಲ್ಲೂಕು ಪಂಚಾಯತಿ ಪ್ರಕ್ರಿಯೆಗಳನ್ನು ತಾವು ನಿಗದಿ ಮಾಡಬೇಕಾದರೆ ಸಿವಿಲ್ ಅಮೆನಿಟಿಸ್ ಅಂದಿದ್ದರೆ ಸಾಕಾಗಿತ್ತು, ಅದು ಬಿಟ್ಟು 40 ಲೀಟರ್ ನೀರು ಕೊಡಲೇಬೇಕು, ಇದನ್ನೆಲ್ಲಾ ಮಾಡದಿದ್ದರೆ, ಅವರ ಪರಿಚಾಯತ್‌ನ್ನು, ಸೊಸೈಟಿಯನ್ನು ಸೂಪರ್‌ಸೀಡ್ ಮಾಡಲಿಕ್ಕೆ ಅವಕಾಶ ಇದೆ, ಆದರೆ ಅಲ್ಲಿನ ಪರಿಸ್ಥಿತಿಗಳಿಗನುಗುಣವಾಗಿ ಪಂಚಾಯಿತಿ ನಡೆದುಕೊಳ್ಳಬೇಕಾಗುತ್ತದೆ. ನಾಗರೀಕ ಸೌಲಭ್ಯಗಳನ್ನು ಒದಗಿಸುವಂತಹ ಕಡೆ ಪಂಚಾಯತಿ ಕೆಲಸ ಮಾಡಿದ್ದರೆ ಬಹುಶಃ ಚೆನ್ನಾಗಿ ಇರುತ್ತಿತ್ತು. ಮತ್ತೆ ತಾವು 179ನೇ ಪ್ರಕರಣಕ್ಕೆ ತಿದ್ದುಪಡಿ ತಂದಿರುವುದನ್ನು ಮತ್ತೊಮ್ಮೆ ಆಲೋಚನೆ ಮಾಡಬೇಕಾಗುತ್ತದೆ ಎಂದು ಹೇಳುತ್ತೇನೆ, ಏಕೆಂದರೆ ಅಲ್ಲಿಯ ಅಧ್ಯಕ್ಷನಿಗೆ ಹಿಂಸೆ ಮಾಡಿ ಒಂದು ವರ್ಷ ಅಲ್ಲಿ

ಅಧ್ಯಕ್ಷನನ್ನಾಗಿ ಮುಂದುವರೆಸುವುದಕ್ಕೆ ಆಗುವುದಿಲ್ಲ. ತಾವು ಅಲ್ಲಿ ಅವಿಶ್ವಾಸ ನಿರ್ಣಯ ತಂದರೆ ಆ ಸಂಸ್ಥೆಯ ಆಡಳಿತಕ್ಕೆ ಪದೇ ಪದೇ ತೊಂದರೆ ಆಗುತ್ತಿದೆ ಎಂದು ಹೇಳಿದ್ದೀರಿ, ಅದೊಂದು ಬಾಧ್ಯತೆ ಆದರೆ ಅವನು ಉಳಿದುಕೊಳ್ಳುವುದು ಒಂದು ಬಾಧ್ಯತೆ ಆಗುತ್ತದೆ. ಅದರ ಬಗ್ಗೆ ಯೋಚನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಈ ರೆಸಲ್ಯೂಷನ್‌ಗಳು ಅಷ್ಟೆ, ಪಂಚಾಯತ್ ರೆಸಲ್ಯೂಷನ್‌ಗಳನ್ನು ತೆಗೆದು ಹಾಕುವುದು, ತಿದ್ದುಪಡಿ ಮಾಡುವುದೂ ಕೂಡ ತಾಲ್ಲೂಕು ಪಂಚಾಯತ್ ಅಧ್ಯಕ್ಷರಿಗೆ ಅಧಿಕಾರ ಇರುವುದಕ್ಕಿಂತ, ತಾಲ್ಲೂಕು ಪಂಚಾಯತಿಗೆ ಎಂದು ಮಾಡಿದ್ದರೆ ಚೆನ್ನಾಗಿ ಇರುತ್ತಿತ್ತು. ಸಾಮಾನ್ಯವಾಗಿ ಹಿಂದೆ ನಿಮ್ಮ ಹಳೆಯ ಕಾಯಿದೆಗಳಲ್ಲಿ ಜಿಲ್ಲಾ ಪಂಚಾಯಿತಿಯ ಸ್ಥಾಯಿ ಸಮಿತಿಗಳಲ್ಲಿ ಒಂದಾದ ಸಾರ್ವಜನಿಕ ಸ್ಥಾಯಿ ಸಮಿತಿಯ ಉಪಾಧ್ಯಕ್ಷರು ಅಲ್ಲಿ ಕುಳಿತುಕೊಂಡು ಅಲ್ಲಿ ಅಪೀಲ್‌ಗಳನ್ನು ಹಿಯರ್ ಮಾಡುತ್ತಿದ್ದರು. ಒಬ್ಬ ಮನುಷ್ಯನ ಕೈಯಲ್ಲಿ ಒಂದು ಪಂಚಾಯಿತಿಯ ಅಪೀಲನ್ನು ಕೊಡುವುದು ಅಷ್ಟು ಚೆನ್ನಾಗಿ ಕಾಣುವುದಿಲ್ಲ. ಮತ್ತೆ ಸೆಕ್ಷನ್ 237ಕ್ಕೆ ತಾವು ಏನು ತಂದಿದ್ದೀರಿ, ತಾಲ್ಲೂಕು ಪಂಚಾಯತ್ ಅಧ್ಯಕ್ಷರು ಎಂದು ಇರುವ ಕಡೆ ಅದನ್ನು ತಾಲ್ಲೂಕು ಪಂಚಾಯತ್ ಎಂದು ಮಾಡಿದ್ದರೆ ಚೆನ್ನಾಗಿ ಇರುತ್ತದೆ ಎಂದು ನನ್ನ ಒಂದು ಅಭಿಪ್ರಾಯ. ಮತ್ತೆ 4ನೇ ಉಪ ಪ್ರಕರಣದಲ್ಲೂ ಕೂಡ ಜಿಲ್ಲಾ ಪಂಚಾಯತ್ ಅಧ್ಯಕ್ಷರನ್ನು ಅನ್ನುವ ಕಡೆ ಜಿಲ್ಲಾ ಪಂಚಾಯತ್ ಎಂದು ಮಾಡಿ, ಮೂರ್ನಾಲ್ಕು ಜನ ಕೂತು ಸಿಂಗಲ್ ಬೆಂಚ್ ಆಗಿರುವುದಕ್ಕಿಂತ ಡಿವಿಶನ್ ಬೆಂಚ್‌ಗೆ ಅಪೀಲ್ ಹಾಕಿದ ಹಾಗೆ ಇರಬೇಕು. ಯಾರೋ ಒಬ್ಬರು ರಾಜಕೀಯಕೋಸ್ಕರ ಅದನ್ನು ಬಳಸುವಂತಹ ಸ್ಥಿತಿಯನ್ನು ನೀವು ನಿರ್ಮಾಣ ಮಾಡಬಾರದು. ಇನ್ನು ತಾವು ರಾಜ್ಯ ಪಂಚಾಯತ್ ಪರಿಷತ್ ಎಂದು ಏನು ಮಾಡಿದ್ದೀರಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಕಾರ್ಯದರ್ಶಿ ಬದಲು

6.10 ಪಿ.ಎಂ

ಡೆವಲಪ್‌ಮೆಂಟ್ ಕಮೀಷನವರು ಅದರ ಕಾರ್ಯದರ್ಶಿಯಾದರೆ ಒಳ್ಳೆಯದು. ಹಿಂದಿನ ಡೆವಲಪ್‌ಮೆಂಟ್ ಕಮೀಷನರ್ ಈ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳನ್ನು ರಿವ್ಯೂ ಮಾಡುತ್ತಾರೆ. ಅವರು ಸರ್ಕಾರಕ್ಕೆ ಒಂದು ವರದಿಯನ್ನು ಕೊಡುತ್ತಿದ್ದರು, ಇವತ್ತು ಡೆವಲಪ್‌ಮೆಂಟ್ ಕಮೀಷನರ್ ಅನ್ನು ಆ ಸಮಿತಿಗೆ ಪದನಿಮಿತ್ತ ಕಾರ್ಯದರ್ಶಿ ಮಾಡುವುದು ಒಳ್ಳೆಯದಾಗುತ್ತದೆ. ಆಮೇಲೆ ತಾವು ಏನು ಜಿಲ್ಲಾ ಪ್ಲಾನಿಂಗ್ ಕಮೀಷನ್ ಮಾಡಿದ್ದೀರಿ; ಮುನ್ಸಿಪಾಲಿಟಿ ಅಧ್ಯಕ್ಷ ಅಧ್ಯಕ್ಷರಾಗಿರುವುದು ಉಪಾಧ್ಯಕ್ಷರಾಗಬೇಕು ಎಂದರೆ ಸ್ವಲ್ಪ ಕಷ್ಟವಾಗುತ್ತದೆ. ಅವರು ಒಂದು ಜಿಲ್ಲೆಗೆ ಮೂರು ಮುನ್ಸಿಪಾಲಟಿಯಿಂದ ಚುನಾಯಿತರಾಗಿ ಬಂದಿರುತ್ತಾರೆ. ಅಕಸ್ಮಾತ್ ಮುಖ್ಯ ಕೇಂದ್ರದವರು ಚುನಾಯಿತರಾಗಿಲ್ಲದೆ ಹೋದರೆ, ಅಲ್ಲಿ ಉಪಾಧ್ಯಕ್ಷರನ್ನು ತಾವು ಮಾಡುವುದಕ್ಕೆ ಆಗುವುದಿಲ್ಲ. ಕಾನೂನಿನಲ್ಲಿ ಅವರೇ

ಆಗಬೇಕೆಂದು ಮಾಡಿದರೆ ಆ ಸ್ಥಾನ ತಪ್ಪಿ ಹೋಗುತ್ತದೆ. ಆದ್ದರಿಂದ ಅಮಾಂಗ್ಸ್ ಎಂದು ಮಾಡಿ, ಮುನ್ಸಿಪಾಲಿಟಿಗಳಿಂದ ಒಬ್ಬರನ್ನು ಉಪಾಧ್ಯಕ್ಷರನ್ನು ಮಾಡಲಿಕ್ಕೆ ನಮ್ಮದೇನೂ ತಕರಾರು ಇಲ್ಲ. ಇವರೆ ಆಗಬೇಕೆಂದು ಸ್ಪಷ್ಟವಾಗಿ ಹೇಳಿ, ಅವರು ಮೆಂಬರ್ ಆಗಲಿಕ್ಕೆ ಅವಕಾಶ ಇಲ್ಲದಂತಹ ಸ್ಥಿತಿಯಲ್ಲಿ ಲ್ಯಾಕೂನಾ ಸೃಷ್ಟಿ ಆಗಬಹುದು ಎಂದು ಹೇಳಿ, ನಾನು ಈ ಬಿಲ್ಲನ್ನು ಸ್ವಾಗತಿಸುತ್ತೇನೆ. ತಾವು ಏನು ಅಧಿಕಾರಿಗಳಿಗೆ ಆಬ್ಸಲ್ಯೂಟ್ ಪವರ್ಸ್ ಕೊಡಬಾರದೆಂದು ಏನು ಚಿಂತನೆ ಮಾಡಿದ್ದೀರಿ ಅಷ್ಟೇ ಸತ್ಯವಾಗಿ ಒಬ್ಬ ಮನುಷ್ಯನ ಕೈಯಲ್ಲಿ ಎಲ್ಲಾ ಅಧಿಕಾರ ಕೊಡುವುದು ಕೆಲವು ಸಮಯ ತಪ್ಪಾಗುತ್ತದೆ ಅದನ್ನು ಸ್ವಲ್ಪ ಬೈಫರ್ಕೇಟ್ ಮಾಡಿಕೊಡುವುದು ಉತ್ತಮ, ಮತ್ತು ಅವಿಶ್ವಾಸ ನಿರ್ಣಯ ಒಂದು ವರ್ಷಕ್ಕೆ ತರಬಾರದು ಎನ್ನುವುದು ಕೆಲವು ಸಾರಿ ಭಾರಿ ತಪ್ಪಾಗುತ್ತದೆ. ಇದರಿಂದ ಒಂದು ವರ್ಷ ಕಾರ್ಯಗಳು ಸ್ಥಗಿತವಾಗುವ ಸ್ಥಿತಿನೂ ಕೆಲವು ಸಲ ನಿರ್ಮಾಣವಾಗುತ್ತದೆ. ಅದರ ಪೀರಿಯೆಡ್ ಅನ್ನು ಸ್ವಲ್ಪ ಕಡಿಮೆ ಮಾಡಬೇಕೆಂದು ಕೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪಂಚಾಯತ್‌ರಾಜ್ 3ನೇ ತಿದ್ದುಪಡಿ ವಿಧೇಯಕವನ್ನು ಸ್ವಾಗತ ಮಾಡುತ್ತಾ, ನಿಜವಾದ ಪ್ರಜಾಪ್ರಭುತ್ವದ ವಿಚಾರವನ್ನು ತಾವು ಇಲ್ಲಿ ಚಿಂತನೆ ಮಾಡಿದ್ದೀರಿ, ಆದರೆ ನೀವು ಆರ್ಥಿಕವಾಗಿ ಚಿಂತನೆ ಮಾಡಿಲ್ಲ ಎನ್ನುವುದು ನನ್ನ ಅಭಿಪ್ರಾಯ. ನಿಜವಾಗಿಯೂ ಗ್ರಾಮಪಂಚಾಯಿತಿಯ ಸ್ಟೆಂಗ್ತನ್ ಮಾಡಬೇಕು. ಅಧಿಕಾರದ ವ್ಯಾಪ್ತಿ, ಮತ್ತು ಗ್ರಾಮಪಂಚಾಯತ್ ಬಗ್ಗೆ ತಾವು ತಿಳಿಸಿದ್ದೀರಿ. ಗ್ರಾಮ ಪಂಚಾಯತ್‌ನವರು ಯಾವ ಯಾವ ರೀತಿಯ ಕಾರ್ಯಕ್ರಮಗಳನ್ನು ಮಾಡಬೇಕು, ಉದಾಹರಣೆಗೆ ಜಿಲ್ಲಾಪಂಚಾಯತ್ ಮತ್ತು ಗ್ರಾಮಪಂಚಾಯತ್‌ಗಳಲ್ಲಿ, ಈ ನಾನ್ ಪ್ಲಾನಿಂಗ್ ಹಣವನ್ನು ಜಿಲ್ಲಾ ಪಂಚಾಯತ್‌ನವರು ಪಡೆಯಬೇಕು ಪ್ಲಾನಿಂಗ್ ಹಣವನ್ನು ತಾಲ್ಲೂಕು ಪಂಚಾಯತ್‌ನವರು ಪಡೆಯಬೇಕು. ಗ್ರಾಮಪಂಚಾಯತ್‌ಗೆ ಆರ್ಥಿಕವಾಗಿ ನಾವು ಏನು ಕೊಡುತ್ತೇವೆ, ಕೆಲವು ಗ್ರಾಮಪಂಚಾಯತ್‌ಗಳಿಗೆ ಜವಾಹರ್ ರೋಜ್‌ಗಾರ್ ಯೋಜನೆ, ಇ.ಎ.ಎನ್. ಎಂದು ಹೇಳಿ ಹಣ ಬರುತ್ತದೆ. ಕೆಲವು ಗ್ರಾಮಪಂಚಾಯತ್‌ಗಳಿಗೆ ಕಂದಾಯದ ಹಣ ಬರುತ್ತದೆ. ಕನಿಷ್ಟ ಪಕ್ಷ ನಾನ್ ಪ್ಲಾನಿಂಗ್ ಹಣ ಒಂದು 30-40 ಲಕ್ಷ ಬಂದರೆ, ತಾವು ಹೇಳಿದಂತೆ ಪಂಚಾಯತ್‌ಗೆ ಸಂಬಂಧಪಟ್ಟ ರಸ್ತೆಗಳು, ಮತ್ತು ಸೇತುವೆಗಳನ್ನು ಆಯಾ ಗ್ರಾಮಪಂಚಾಯತ್‌ಗಳವರು ರಿಪೇರಿ ಮಾಡತಕ್ಕಂಥದ್ದು ಮಾಡಿಕೊಳ್ಳುತ್ತಾರೆ. ಆರ್ಥಿಕ ಸಂಪನ್ಮೂಲನೇ ಇಲ್ಲದೆ ಗ್ರಾಮಪಂಚಾಯತ್ ಸ್ಟೆಂಗ್ತನ್ ಮಾಡಲಿಕ್ಕೆ ಹೇಗೆ ಸಾಧ್ಯ ನೀವೇ ಹೇಳಿ. ಆದುದರಿಂದ ನಿಜವಾದ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯತ್ ಬಹಳ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಮೊನ್ನೆ ನಮ್ಮ ಪಂಚಾಯತ್‌ನಲ್ಲಿ ಇಬ್ಬರು ನೌಕರರು ಸತ್ತರು, ಅವರು ಪರಿಶಿಷ್ಟ ವರ್ಗಕ್ಕೆ ಸೇರಿದ್ದು ಕಸವನ್ನು ಗುಡಿಸತಕ್ಕ ಕೆಲಸ ಮಾಡುತ್ತಿದ್ದರು.

ಅವರಿಗೆ ಜೀವನಕ್ಕೆ ಏನು ಭದ್ರತೆ ಇಲ್ಲ. ಅವರಿಗೆ 350 ರೂಪಾಯಿ ಸಂಬಳ ಕೊಡುತ್ತಿದ್ದರು, ಅವರು ನಮಗೋಸ್ಕರ ತಮ್ಮ ಆರೋಗ್ಯವನ್ನು ಹಾಳು ಮಾಡಿಕೊಂಡು ಅವರು ಸತ್ತರು. ನಿಜವಾಗಿ ಅವರಿಗೆ ಉದ್ಯೋಗದ ಭದ್ರತೆ ಇರಬೇಕು. ಜೊತೆಗೆ ವಿಮಾ ಭದ್ರತೆ ಕೊಡಬೇಕು, ಯಾರು ಈ ಸಮಾಜದ ಪರವಾಗಿ ಕೆಲಸ ಮಾಡುತ್ತಾರೆ, ಅವರನ್ನು ಪರಿಶಿಷ್ಟ ವರ್ಗದ ಜನರನ್ನು ತಾವು ನೇಮಕ ಮಾಡಿಕೊಂಡು, ಅವರ ಜೀವನ ಭದ್ರತೆಗೆ ಅವರಿಗೆ ಏನೂ ಕೊಡದೆ ಇದ್ದರೆ, ಸರಿಯಾಗಿಲ್ಲ. ಆದುದರಿಂದ ತಾವು ದಯವಿಟ್ಟು ಇದರ ಬಗ್ಗೆ ಚಿಂತನೆಯನ್ನು ಮಾಡಬೇಕು. ಆಮೇಲೆ ಪಂಚಾಯತ್ ಅಧ್ಯಕ್ಷರು ಸಮಯೋಚಿತವಾಗಿ, ಅಲ್ಲಿನ ಪಂಚಾಯತ್ ಕೆಲಸಕ್ಕೆ ತಕ್ಕಂತೆ ಕೆಲಸಗಾರರನ್ನು ನೇಮಿಸಿಕೊಳ್ಳತಕ್ಕ ಒಂದು ಜವಾಬ್ದಾರಿಯನ್ನು ಅವರಿಗೆ ಕೊಡಬೇಕು ಮತ್ತು ಆರೋಗ್ಯ ತಪಾಸಣೆ ಮಾಡತಕ್ಕ ವಿಚಾರದಲ್ಲಿ ಪಂಚಾಯತ್‌ನವರು ಪೂರ್ತಿ ಇನ್‌ವಾಲ್ವ್‌ಮೆಂಟ್ ಇರಬೇಕು. ಆರೋಗ್ಯ ತಪಾಸಣೆ ಮಾಡತಕ್ಕಂಥ ವಿಚಾರದಲ್ಲಿ ಪಂಚಾಯಿತಿಯವರ ಪೂರ್ತಿ ಇನ್‌ವಾಲ್ವ್‌ಮೆಂಟ್ ಇರಬೇಕು. ಅದರ ಹೊಣೆಗಾರಿಕೆಯನ್ನೂ ತಾವು ದಯವಿಟ್ಟು ಕೊಡಬೇಕು. ಅರಣ್ಯ ಬೆಳೆಸತಕ್ಕಂಥ ಹೊಣೆಗಾರಿಕೆಯಲ್ಲೂ ಆಯಾಯ ಪಂಚಾಯಿತಿಗೆ ಇನ್‌ವಾಲ್ವ್‌ಮೆಂಟ್ ಮಾಡಬೇಕು, ಅದಕ್ಕೆ ಅರಣ್ಯ ಇಲಾಖೆಯವರು ಸ್ಪಂದಿಸತಕ್ಕಂಥ ಒಂದು ಹೊಣೆಗಾರಿಕೆಯನ್ನೂ ತಾವು ಕೊಡಬೇಕು. ಪಂಚಾಯಿತಿಯಲ್ಲಿ ಈಗ ನಾವು ದಿವಸ ಜಗಳ ಕಾಯುತ್ತಿದ್ದೇವೆ, ಮರಳು ಹೀಗೆ ಆಗುತ್ತಿದೆ, ಕಲ್ಲು ಹೀಗೆ ಆಗುತ್ತಿದೆ ಎಂದು. ನಿಜವಾಗಿಯೂ ಯಾವುದೇ ನಿಯಂತ್ರಣವಿಲ್ಲ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಯಾವುದೇ ನಿಯಂತ್ರಣವಿಲ್ಲ. ಈ ಇಲಾಖೆಗೆ ಇದರಿಂದ ಯಾವುದೇ ತೆರಿಗೆ ಬರುತ್ತಿಲ್ಲ. ಆದ್ದರಿಂದ ದಯವಿಟ್ಟು ಆ ಕಲ್ಲು ಮತ್ತು ಮರಳನ್ನು ಪಂಚಾಯಿತಿಗೆ ಕೊಟ್ಟರೆ, ಅದರಿಂದ ಬರತಕ್ಕ ಹಣದ ಮೂಲಕ ಪಂಚಾಯಿತಿಯ ಕೆಲಸವನ್ನು ಮಾಡಬಹುದು ಎಂದು ಹೇಳುತ್ತೇನೆ. ಕುಟುಂಬ ಯೋಜನಾ ಕಾರ್ಯಕ್ರಮದಲ್ಲಿ ಪಂಚಾಯಿತಿಯ ಇನ್‌ವಾಲ್ವ್‌ಮೆಂಟ್ ಆಗಬೇಕು. ಶಿಕ್ಷಣದ ಬಗ್ಗೆ ಪಂಚಾಯಿತಿಯ ಇನ್‌ವಾಲ್ವ್‌ಮೆಂಟ್ ಆಗಬೇಕು. ರಾಜಕಾರಣ ಎಂದರೆ ಸೇವೆ. ಆ ಸೇವೆಗೆ ಸಂಬಂಧಪಟ್ಟಂಥ ಎಲ್ಲಾ ವಿಚಾರಗಳಲ್ಲೂ ಇನ್‌ವಾಲ್ವ್ ಮಾಡತಕ್ಕಂಥ ವಿಚಾರವನ್ನು ತಾವು ಚಿಂತನೆ ಮಾಡಬೇಕು ಎನ್ನುವುದನ್ನು ಅಧ್ಯಕ್ಷರ ಮೂಲಕ ಗ್ರಾಮೀಣಾಭಿವೃದ್ಧಿ ಸಚಿವರ ಗಮನಕ್ಕೆ ತರುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಹೆಚ್.ಶಿವಪ್ಪ (ಹರಿಹರ): ಸನ್ಮಾನ್ಯ ಅಧ್ಯಕ್ಷರೇ, ಈ ಒಂದು ಮಸೂದೆಗೆ ತಂದಿರತಕ್ಕಂಥ ತಿದ್ದುಪಡಿಗಳನ್ನು ಸಂಪೂರ್ಣವಾಗಿ ಸ್ವಾಗತಿಸಿ, ಸಚಿವರಿಗೆ ಅಭಿನಂದಿಸಿ ಒಂದೆರಡು ಸಲಹೆಗಳನ್ನು ಕೊಡಲು ಇಚ್ಛಿಪಡುತ್ತೇನೆ. ಈ ತಿದ್ದುಪಡಿಯ ಸೆಕ್ಷನ್ 12ರ ಕೊನೆಯಲ್ಲಿ ಇವರು "...If he is either directly or indirectly by himself or by his agent, partner or employee involved in obtaining or execution of any such work or contract on

behalf of the Grama Panchayat or of any contract for the supply of goods and services." ಎಂದು ಇದೆ. ಎಂದರೆ ಅದರ ಅರ್ಥ ಏನು ಎನ್ನುವುದು ಈಗ ಗೊತ್ತಾಗುವುದಿಲ್ಲ. ಕೇವಲ ಗೂಡ್ಸ್ ಎಂದಿದ್ದರೆ ಸಾಕಾಗುತ್ತಿತ್ತು. ಸರ್ವೀಸಸ್ ಎಂದರೆ ಅದು ದ್ವಂದ್ವವಾಗುತ್ತದೆ. ಅದರ ಬಗ್ಗೆ ತಾವು ಯೋಚನೆ ಮಾಡಬೇಕು.

43A: Removal of members for mis-conduct. Guilty of misconduct. ಅದನ್ನು ನೀವು ಡೆಫನಿಷನ್‌ನಲ್ಲಿ ಹೇಳಬೇಕಾಗಿತ್ತು. ಗಿಲ್ಟಿ ಆಫ್ ಮಿಸ್‌ಕಾಂಡಕ್ಟ್ ಎನ್ನುವುದನ್ನು ತೀರ್ಮಾನ ಮಾಡುವವರು ಯಾರು? ಅದರ ಬಗ್ಗೆ ಸ್ಪಷ್ಟವಾಗಿ ಹೇಳಿದರೆ ಮಾತ್ರ ಒಳ್ಳೆಯದು. "The Government if it thinks fit, on the recommendation of the Grama Panchayat, or otherwise..."

ಶ್ರೀ ಎಂ.ಪಿ.ಪ್ರಕಾಶ್: ಅಂದರೆ ಗ್ರಾಮ ಪಂಚಾಯಿತಿಯವರು ಅಲ್ಲದೇ, ಬೇರೆ ಯಾರಾದರೂ ಅದನ್ನು ಪ್ರತ್ಯಕ್ಷದರ್ಶಿಗಳಾದಂಥವರು ನೋಡಿ, ಇಂಥ ದುರ್ನಡತೆ ಮಾಡಿದ್ದಾರೆ ಎನ್ನುವುದು ಬಂದಾಗ, ಅದನ್ನು ಪರಿಗಣಿಸಬಹುದು.

ಶ್ರೀ ಹೆಚ್.ಶಿವಪ್ಪ: ಆಗ ಇದಕ್ಕೆ ಕೊನೆಯೇ ಇರುವುದಿಲ್ಲ. ಯಾರಾದರೂ ಆಗಿಂದ್ದಾಗ್ಗೆ ಪುನಃ ಪುನಃ ಅಂಥ ಬೇಡಿಕೆಗಳನ್ನು ಕೊಡಬಹುದು. ಅದಕ್ಕಾಗಿ, ಸ್ಪಷ್ಟವಾಗಿ ಇಂಥವರಿಂದ ಶಿಫಾರಸ್ಸು ಬಂದರೆ ಮಾತ್ರ ಕ್ರಮ ತೆಗೆದುಕೊಳ್ಳಬೇಕು ಎಂದು ಇದ್ದರೆ ಒಳ್ಳೆಯದು. ತಾವು ಅದರ ಬಗ್ಗೆ ಯೋಚನೆ ಮಾಡಬೇಕು. ಮಾಧುಸ್ವಾಮಿಯವರು ಹೇಳಿದ ಹಾಗೆ, ಒಂದು ವರ್ಷದವರೆಗೆ ಅವಿಶ್ವಾಸ ಸೂಚನೆಯನ್ನೇ ತರಬಾರದು ಎಂದರೆ, ಈ ಕೆಟಗರಿ ಮಾಡಿ ಒಂದು ವರ್ಷದತನಕ ಬಹುಮತವೇ ಇಲ್ಲದೆ ಈ ಸಭೆಗಳನ್ನು ನಡೆಸುವುದು ಹೇಗೆ? ಕಾರ್ಯಕ್ರಮಗಳನ್ನು ನಡೆಸುವುದು ಹೇಗೆ? ಜೊತೆಗೆ ಒಂದು ಕೆಟಗರಿಗೆ ಅಧ್ಯಕ್ಷಗಿರಿ ಕೊಟ್ಟರೆ, ಉದಾಹರಣೆಗೆ ಒಬ್ಬರೇ ಒಬ್ಬರು ಚುನಾಯಿತರಾಗಿರುತ್ತಾರೆ. ಅವರನ್ನು ತೆಗೆದುಹಾಕಿದರೆ ಬೇರೆಯವರು ಬರಲು ಸಾಧ್ಯವಿಲ್ಲ. ಆದ್ದರಿಂದ ಮುಂದಿನ ಕೆಟಗರಿಗೆ ಅಧ್ಯಕ್ಷರೆಂದಾಗಲೀ, ಉಪಾಧ್ಯಕ್ಷರೆಂದಾಗಲೀ ಕೊಡಲು ಏಕೆ ಯೋಚನೆ ಮಾಡಬಾರದು? ಇಂಥ ಸಮಯ ಪರಿಶಿಷ್ಟ ಜಾತಿಯವರಿಗೆ ಎಂದು ನಿಗದಿ ಮಾಡಿಬಿಡುತ್ತೀರಿ. ಆ ಪರಿಶಿಷ್ಟ ಜಾತಿಯ ಅಭ್ಯರ್ಥಿಯಾದ ಅಧ್ಯಕ್ಷರನ್ನು ತೆಗೆದು ಹಾಕಿದರೆ ಅಥವಾ ಅಂಥವರು ಇಲ್ಲದೇ ಇದ್ದರೆ ಪರಿಶಿಷ್ಟ ವರ್ಗದವರಿಗೆ ಕೊಡಿ. ರೊಟೇಷನ್ ಟೈಪ್ ಕೊಡಿ. ಆ ರೀತಿ ಯೋಚನೆ ಮಾಡಲು ತಾವು ಪ್ರಯತ್ನ ಮಾಡಬೇಕು. ನಂತರ, 45ನೇ ಸೆಕ್ಷನ್‌ನ ತಿದ್ದುಪಡಿಯ ಕೊನೆಯಲ್ಲಿ. ".. call for a meeting of the Grama Panchayat and preside over it, without right to vote, and in such

meeting the Adhyaksha or the upadhyaksha both, as the case may be, shall be elected." What is the mode of election? Is it by raising hands or secret ballot? ಅಲ್ಲಿ ತರಲೆ ಬರುತ್ತದೆ. ಸೀಕ್ರೆಟ್ ಬ್ಯಾಲೆಟ್ ಎಂದರೆ ಯಾವ ರೀತಿ ಮಾಡಬೇಕು ಎಂದು. ಅದನ್ನೂ ಸೇರಿಸಿದರೆ ಒಳ್ಳೆಯದು. ಇನ್ನು ಶೌಚಾಲಯಗಳ ಬಗ್ಗೆ ಹೇಳಬೇಕು ಎಂದರೆ, ನನಗನ್ನಿಸುತ್ತದೆ, ಕೆಲವು ಕಡೆ ಕುಡಿಯುವುದಕ್ಕೇ ನೀರು ಇಲ್ಲ, ತೊಳೆದುಕೊಳ್ಳುವುದಕ್ಕೆ ಎಲ್ಲಿಂದ ತರಬೇಕು? ಅಲ್ಲಿ ಕುಡಿಯುವುದಕ್ಕೇ ನೀರು ಇಲ್ಲ. ಇವತ್ತು ಅದಕ್ಕೋಸ್ಕರವಾಗಿ ಒಬ್ಬ ಚುನಾಯಿತ ಸದಸ್ಯನನ್ನು ಅನರ್ಹಗೊಳಿಸುವುದು ನಿಜವಾಗಲೂ ಒಂದು ಕಠಿಣವಾದ ಶಿಕ್ಷೆ ಎಂದು ನಾವು ಯೋಚನೆ ಮಾಡಬೇಕು. ಅದರ ಬಗ್ಗೆ ತಾವು ಚಿಂತನೆ ಮಾಡಬೇಕು. ಅದನ್ನು ಕೈ ಬಿಟ್ಟರೆ ಒಳ್ಳೆಯದು. ಏಕೆಂದರೆ, ಅವನು ಎಷ್ಟು ಕಷ್ಟಪಟ್ಟು ಚುನಾವಣೆಯಲ್ಲಿ ಗೆದ್ದು ಬಂದಿರುತ್ತಾನೆ. ಈ ಒಂದು ಕೊರತೆಗೋಸ್ಕರ, ಅವನು ಶೌಚಾಲಯಗಳನ್ನು ಕಟ್ಟಲಿಲ್ಲ ಎಂದು ಅನರ್ಹಗೊಳಿಸುವುದು ಬೇಡ. ನೀರೇ ಇಲ್ಲದಿದ್ದ ಮೇಲೆ ಅವನು ಹೇಗೆ ಶೌಚಾಲಯಗಳನ್ನು ಕಟ್ಟುವುದಕ್ಕಾಗುತ್ತದೆ? ಸಭೆ ಆದನಂತರ ವರದಿ ಕಳುಹಿಸಲು ನೀವು ಚೀಫ್ ಎಕ್ಸಿಕ್ಯುಟೀವ್ಸ್‌ಗೆ 15 ದಿವಸಗಳ ವಾಯಿದೆಯನ್ನು ಕೊಟ್ಟಿದ್ದೀರಿ. ಅದು ಬಹಳ ಅಪಾಯಕಾರಿ. ನಾವು ತಪ್ಪು ತೀರ್ಮಾನ ಮಾಡಿ, 15 ದಿವಸಗಳೊಳಗೆ ಸರ್ಕಾರದಿಂದ ಅದಕ್ಕೆ ಒಪ್ಪಿಗೆ ಬರದಿದ್ದರೆ ನಾವು ತಪ್ಪು ತೀರ್ಮಾನವನ್ನೇ ಅನುಷ್ಠಾನಕ್ಕೆ ತರಬೇಕಾಗುತ್ತದೆ. It could be manouvered, managed. ಬಹುಶಃ ನಾವು ಏನಾದರೂ ತಪ್ಪು ಮಾಡಿದ್ದನ್ನು ಸರ್ಕಾರಕ್ಕೆ ಕಳುಹಿಸಿದರೆ, ಅದು ತಕ್ಷಣವೇ 15 ದಿವಸದಲ್ಲಿ ಬರದಿದ್ದರೆ, It may go against the spirit of the Act. ಅದರ ಬಗ್ಗೆಯೂ ತಾವು ಯೋಚನೆ ಮಾಡಬೇಕು. ನಂತರ, ನೌಕರರ ಬಗ್ಗೆ ಹೇಳಬೇಕೆಂದರೆ, ಇವತ್ತು ಏನಾಗಿದೆ ಎಂದರೆ ಸರ್ಕಾರದಿಂದ ಡೆಪ್ಯುಟೇಷನ್ ಮೇಲೆ ಬರುತ್ತಿದ್ದಾರೆ. ಇದರಿಂದ ಏನಾಗಿದೆ ಎಂದರೆ ಕುದುರೆ ಓಡಿಸುವವರು ಒಬ್ಬರು, ಲಗಾಮು ಇನ್ನೊಬ್ಬರ ಕೈಯ್ಯಲ್ಲಿ ಎಂದಾಗಿದೆ. ಈಗ ಆ ಕುದುರೆ ನಮ್ಮ ಹಿಡಿತದಲ್ಲಿ ಇರುವುದಿಲ್ಲ. ಲಗಾಮು ಇದ್ದರೆ ಅತ್ತ ಇತ್ತ ತಿರುಗಿಸಿಕೊಂಡು ಹೋಗಬಹುದು. ಯಾರು ಆಡಳಿತ ಮಾಡುತ್ತಾರೆ, ಅವರು ಡಿಸಿಪ್ಲಿನರಿ ಆ್ಯಕ್ಷನ್ ತೆಗೆದುಕೊಳ್ಳುವುದಕ್ಕೆ ಅಧಿಕಾರವಿರಬೇಕು. ಹಾಗಾದರೆ ಮಾತ್ರ, transparency in administration can be ensured, stability can be ensured. ಆದ್ದರಿಂದ ಶ್ರೀರಾಮರೆಡ್ಡಿಯವರು ಹೇಳಿದ ಹಾಗೆ ಪಶ್ಚಿಮ ಬಂಗಾಳದಲ್ಲಿರುವಂತೆ ಒಂದು ಡೈರೆಕ್ಟರೇಟನ್ನು, ಇಂಡಿಪೆಂಡೆಂಟ್ ರೆಕ್ರೂಟ್‌ಮೆಂಟ್ ಕಮೀಷನ್‌ಅನ್ನು ನಾವು ಸ್ಥಾಪನೆ ಮಾಡಿದರೆ ಒಳ್ಳೆಯದು. ಇನ್ನು ಸೆಕ್ಷನ್ 197, ಜ್ಯೂರಿಸ್‌ಡಿಕ್ಷನ್ ಬಗ್ಗೆ ನಮ್ಮ ಹಿರಿಯ ಸದಸ್ಯರಾದಂಥ ಫೋರ್ಪಡೆಯವರು ಹೇಳಿದರು, ಸರ್ಕಾರದಿಂದ ಹಣವನ್ನು ಅಧಿಕಾರಿಗಳಿಗೆ ಕೊಡುವುದರಿಂದ ಅದನ್ನು ವರ್ಗಾವಣೆ ಮಾಡತಕ್ಕಂಥ ಅಧಿಕಾರಿ ಸರ್ಕಾರಕ್ಕೆ ಇರಬೇಕು ಎಂದು. ಅಲ್ಲಿ ನನ್ನದು ಸ್ವಲ್ಪ

ಭಿನ್ನಾಭಿಪ್ರಾಯವಿದೆ. ಏಕೆಂದರೆ ಆಗಲೇ ಹೇಳಿದ ಹಾಗೆ ಕುದುರೆ ಓಡಿಸುವವರು ಒಬ್ಬರು, ಲಗಾಮು ಒಬ್ಬರ ಕೈಯ್ಯಲ್ಲಿ ಇದ್ದರೆ ಸರಿಯಾಗಿ ಆಡಳಿತ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಒಂದು ಪ್ರತ್ಯೇಕವಾದ ರೆಕ್ರೂಟ್‌ಮೆಂಟ್ ಕಮಿಷನ್‌ಅನ್ನು ನೇಮಿಸಬೇಕು ಎಂದು ಹೇಳುತ್ತಾ, ಇಷ್ಟು ಸಲಹೆಗಳನ್ನು ಕೊಟ್ಟು, ಮತ್ತೊಮ್ಮೆ ಸಂಪೂರ್ಣವಾಗಿ ಈ ತಿದ್ದುಪಡಿಗಳನ್ನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಹೆಚ್.ಡಿ.ಬಸವರಾಜು: ಸನ್ಮಾನ್ಯ ಸಭಾಧ್ಯಕ್ಷರೇ, ಕರ್ನಾಟಕ ಪಂಚಾಯತ್‌ರಾಜ್ (ಮೂರನೇ ತಿದ್ದುಪಡಿ) ವಿಧೇಯಕ 1997ನ್ನು ಸ್ವಾಗತ ಮಾಡುತ್ತಿದ್ದೇನೆ. ಅದರಲ್ಲಿ 43(ಎ) ಇದರ ಬಗ್ಗೆ ಒಂದು ವಿಚಾರವನ್ನು ಈ ಸದನದಲ್ಲಿ ಮಂಡನೆ ಮಾಡಲು ಇಚ್ಛೆಪಡುತ್ತಿದ್ದೇನೆ. 'ದುರ್ನಡತೆಗಾಗಿ ಸದಸ್ಯರುಗಳನ್ನು ತೆಗೆದುಹಾಕುವುದು' ಈಗಾಗಲೇ ಸಾಕಷ್ಟು ಸದಸ್ಯರು ಅದರ ಬಗ್ಗೆ ಹೇಳಿದ್ದಾರೆ. ಆದರೆ ನಾನು ಇಲ್ಲಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಲು ಇಚ್ಛೆಪಡುವುದು ಏನೆಂದರೆ 'ಅನ್ಯಥಾ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಅಸಮರ್ಥನಾದರೆ' ಎನ್ನುವಂಥ ಒಂದು ಪದದ ಬಳಕೆಯನ್ನು ಈ ತಿದ್ದುಪಡಿಯಲ್ಲಿ ತಂದಿದ್ದಾರೆ. ಇದನ್ನು ನಾನು ಇಲ್ಲಿ ಉಲ್ಲೇಖ ಮಾಡಲು ಏಕೆ ಇಚ್ಛೆಪಡುತ್ತಿದ್ದೇನೆ ಎಂದರೆ, ಬಹುಶಃ, ಪರಿಶಿಷ್ಟರು ಯಾರು ಆಯ್ಕೆಯಾಗಿದ್ದಾರೆ, ಅವರನ್ನು ತೆಗೆದುಹಾಕಬೇಕು ಎಂದರೆ, ಅವರು ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ದುರ್ಬಲರಾಗಿರುವುದು ತಮಗೆ ಗೊತ್ತಿದೆ, ಅವರಿಗೆ ಬಹಳ ಹೊಡೆತ ಬೀಳುತ್ತದೆ. ಆದ್ದರಿಂದ ಈ ಕಾಯ್ದೆಗೆ ಈ ತಿದ್ದುಪಡಿಯನ್ನು ತರುವುದಕ್ಕೆ ಮುಂಚೆ ಇನ್ನೊಂದು ಸಲ ತಾವು ಬಹಳಷ್ಟು ಮರುವಿಮರ್ಶೆ ಮಾಡಬೇಕು ಎಂದು ಸಭಾಧ್ಯಕ್ಷರ ಮೂಲಕ ನಾನು ಕೇಳಿಕೊಳ್ಳುತ್ತಿದ್ದೇನೆ. ಇದನ್ನು ತೆಗೆದು ಹಾಕಿದರೇ ಉತ್ತಮ ಎಂದು ನನಗನ್ನಿಸುತ್ತದೆ. ಇಲ್ಲವೆಂದರೆ, ಅವರಿಗೆ ರಕ್ಷಣೆ ಇರುವುದಿಲ್ಲ. ಮಾನ್ಯ ಅಧ್ಯಕ್ಷರೆ ಇನ್ನು ಒಂದು ತಿದ್ದುಪಡಿ, ಸ್ಯಾನಿಟೇಷನ್ಸ್ ಬಗ್ಗೆ ಹೇಳಿದ್ದಾರೆ. ಆ ತಿದ್ದುಪಡಿನಲ್ಲಿ ಆರು ತಿಂಗಳೊಳಗಾಗಿ ಈ ಒಂದು ಶೌಚಾಲಯಗಳನ್ನು ಕಟ್ಟಿಸಲಿಲ್ಲ ಎಂದರೆ ಅವರ ಸದಸ್ಯತ್ವವನ್ನು ರದ್ದು ಮಾಡಬಹುದು ಎನ್ನತಕ್ಕಂಥ ನಿಬಂಧವನ್ನು ಹಾಕಿದ್ದಾರೆ, ಈ ಒಂದು ವಿಚಾರದಲ್ಲಿ ಕೂಡ ನಾನು ಪ್ರತಿಪಾದನೆ ಮಾಡತಕ್ಕಂಥದ್ದು ಏನು ಎಂದರೆ ಇದೂ ಕೂಡ ಪರಿಶಿಷ್ಟರಲ್ಲಿ ಬಹಳಷ್ಟು ಕಷ್ಟವಾಗುತ್ತದೆ. ಅವರು ಯಾವುದೋ ಒಂದು ಹಿನ್ನೆಲೆಯಿಂದ ಅವರು ಆ ಸ್ಥಾನಕ್ಕೆ ಬಂದಿರುತ್ತಾರೆ, ಅವರು ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಬಹಳ ಕಷ್ಟದಲ್ಲಿರುವುದರಿಂದ ಅವರಿಗೆ ನಾವು ಎಷ್ಟೋ ಅನುಕೂಲಗಳನ್ನು ಮಾಡಿಕೊಡಬೇಕೆಂದರೂ ಅವರ ಪರಿಸರಗಳಲ್ಲಿ ಬದಲಾವಣೆ ತರುವುದು ಅಷ್ಟೊಂದು ಸುಲಭ ಸಾಧ್ಯ ಇಲ್ಲದೇ ಇರುವುದರಿಂದ, ಅವರಲ್ಲಿ ಸಾಧ್ಯವಾಗದೇ ಇರಬಹುದು. ಇದರಿಂದ ಬಹಳಷ್ಟು ಪರಿಶಿಷ್ಟರಿಗೆ ಅನ್ಯಾಯವಾಗುತ್ತದೆ ಆದಕಾರಣ ದಯವಿಟ್ಟು ಈ ನಿರ್ಬಂಧವನ್ನು ತೆಗೆದುಹಾಕಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು 163ನೇ ತಿದ್ದುಪಡಿ ಪ್ರಕರಣ ಇದೆ. ಇದರಲ್ಲಿ ನೀವು ಹಿಂದೆ ಮಾಡಿದ್ದೀರಿ,

ಏನು ಎಂದರೆ ಒಟ್ಟು ಸಂಖ್ಯೆಯ ಶೇಕಡಾ 15ಕ್ಕಿಂತ ಕಡಿಮೆ ಇರತಕ್ಕಂಥದ್ದಲ್ಲ ಎನ್ನತಕ್ಕಂಥ ರೀತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೀವು ಮಾಡಬೇಕು ಎಂದು ಹೇಳಿದ್ದೀರಿ; ಇದರಲ್ಲಿ ಏನಾಗುತ್ತದೆ ಎಂದರೆ ನೀವು ಅನುಪಾತವನ್ನು ಮಾಡುತ್ತಿದ್ದೀರಿ ನಾನು ಇಲ್ಲ ಎಂದು ಹೇಳುವುದಿಲ್ಲ ಈ ಅನುಪಾತವನ್ನು ಎಲ್ಲಾ ಜಿಲ್ಲೆಗೆ ಸಮರ್ಪಕವಾಗಿ ಹಂಚಿಕೆ ಮಾಡಿದರೆ ಬಹಳಷ್ಟು ರೀತಿನಲ್ಲಿ ಉತ್ತಮವಾದ ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಕೆಲವು ಜಿಲ್ಲೆನಲ್ಲಿ ಪರಿಶಿಷ್ಟ ಜಾತಿಯವರೇ ಜಾಸ್ತಿ ಇದ್ದಾರೆಂದು ಆ ಜನಾಂಗದವರಿಗೆ ಹೆಚ್ಚಿನ ಸೀಟನ್ನು ಕೊಟ್ಟು ಬೇರೆ ಜಿಲ್ಲೆನಲ್ಲಿ ಕೊಡದೇ ಇರುವಂಥ ಸಂಗತಿಗಳನ್ನು ಹೋದ ಸಾರಿ ನಾವು ಈ ಸದನದಲ್ಲಿ ಉಲ್ಲೇಖ ಮಾಡಿದ್ದೇವೆ. ಆದ್ದರಿಂದ ಸಮಪಾತವಾಗಿ ಇವ್ವೊತ್ತು ಎಷ್ಟು ಜಿಲ್ಲೆಗಳನ್ನು ತಾವು ಮಾಡಿದ್ದೀರೋ ಆ 27 ಜಿಲ್ಲೆಗಳಲ್ಲೂ ಶೇ 15 ಪರಿಶಿಷ್ಟ ಜಾತಿಯವರಿಗೆ ಮತ್ತು 3 ಪರಿಶಿಷ್ಟ ಪಂಗಡದವರಿಗೆ ಮೀಸಲು ಇಡಬೇಕು. ಈ ಮೀಸಲು ಇಡುವುದರಿಂದ ಏನಾಗುತ್ತದೆ ಎಂದರೆ ಇವರಿಗೆ ನೀಡುತ್ತಿರುವಂಥ ವಿಶೇಷ ಘಟಕ ಹಣವನ್ನು ಟಿ.ಎಸ್.ಪಿ.ಯಾಗಲೀ ಎಸ್.ಸಿ.ಪಿಯಾಗಲೀ ಸರಿಯಾದ ರೀತಿಯಲ್ಲಿ ಹಂಚಿಕೆ ಮಾಡಲಿಕ್ಕೆ ಸಾಧ್ಯವಾಗುತ್ತದೆ, ಆ ಭಾಗಕ್ಕೆ ಸರಿಯಾದ ರೀತಿಯಲ್ಲಿ ತಲುಪಲಿಕ್ಕೆ ಸಾಧ್ಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಈ ಒಂದು ಸಲಹೆಯನ್ನು ನಾನು ಸರ್ಕಾರಕ್ಕೆ ಕೊಡುತ್ತಿದ್ದೇನೆ. ಹಾಗೂ ಈ ಸಂದರ್ಭದಲ್ಲಿ ತಾವು ಅನುವು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

/ + ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚು ಮಾತನಾಡುವ ಅವಶ್ಯಕತೆ ಇಲ್ಲವೆಂದು ನಾನು ಭಾವಿಸಿದ್ದೇನೆ. ಈಗಾಗಲೇ ಮಾನ್ಯ ಘೋರ್ಪಡೆಯವರು ಸಾಕಷ್ಟು ಈ ಒಂದು ಅಮೆಂಡ್‌ಮೆಂಟ್ಸ್ ಮೇಲೆ ಬೆಳಕನ್ನು ಚೆಲ್ಲಿದ್ದಾರೆ. ಸುಮಾರು ಎಂಭತ್ತು ಅಮೆಂಡ್‌ಮೆಂಟ್ಸ್ ಇವೆ. ಆದರೆ ಅವರು ಹೇಳಿದ ಹಾಗೆ ಕಾನ್ಸಿಕ್ವೆನ್ಷಿಯಲ್ ಅಮೆಂಡ್‌ಮೆಂಟ್ಸ್ ಹಲವಾರು ಇದ್ದ ಕಾರಣ ಅದರ ಮೇಲೆ ನಾನು ಹೆಚ್ಚಿಗೆ ಮಾತನಾಡತಕ್ಕಂಥ ಅವಶ್ಯಕತೆ ಇಲ್ಲ. ಒಂದು ವಿಚಾರವನ್ನು ಈಗಾಗಲೇ 2-3 ಸದಸ್ಯರು ತಮ್ಮ ಗಮನಕ್ಕೆ ತಂದಿದ್ದಾರೆ. Sec.43-A 'Removal of Members for mis-conduct' ಅಂತ ಏನು ಇದೆ ಇದು ಸ್ವಲ್ಪ ಮಿಸ್‌ಯೂಸ್ ಆಗತಕ್ಕಂಥ ಸಾಧ್ಯತೆ ಇದೆ. ಏಕೆಂದರೆ ಹಳ್ಳಿಗಳಲ್ಲಿ ಕೆಲವು ಸಲ ಅವರಿಗೆ ಆಗದೇಹೋದರೆ ಅವನ ಬಿಹೇವಿಯರ್ ಸರಿ ಇಲ್ಲ ಹಾಗಿದೆ, ಹೀಗಿದೆ ಎಂದು ತಿಳಿದುಕೊಂಡು ಅವನಿಗೆ ಡಿಸ್‌ಕ್ವಾಲಿಫೈ ಮಾಡತಕ್ಕಂಥ ಸಾಧ್ಯತೆ ಇದೆ. ತಮಗೂ ಕೂಡ ಗೊತ್ತಿದೆ ಅನೇಕ ಸಾರಿ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಅಥವಾ ಕೆಲವು ತಮಗೆ ಬೇಕಾಗದೇ ಇರತಕ್ಕಂಥ ಸದಸ್ಯನೇನಾದರು ಅಧ್ಯಕ್ಷನಾದರೆ ಅವರ ಮೀಟಿಂಗ್‌ಗೆ ಅವರು ಅಟೆಂಡ್ ಮಾಡುವುದಿಲ್ಲ. ಒಂದು ಸಾರಿ ಅಲ್ಲ ಎರಡು ಮೂರು ಸಾರಿ ಹಾಗೆ ಮಾಡುತ್ತಾರೆ. ಮೀಟಿಂಗ್‌ಗೆ ಕೋರಂ ಕೂಡ ಮಾಡುವುದಕ್ಕೆ ಬಿಡುವುದಿಲ್ಲ ಇಂತಹ ಪರಿಸ್ಥಿತಿ ನಮ್ಮ ದೇಶದೊಳಗೆ ಇದ್ದಾಗ ನ್ಯಾಚುರಲಿ ಇದರ ದುರುಪಯೋಗವನ್ನು

ಬೇರೆಯವರು ಪಡೆದುಕೊಳ್ಳುವುದಕ್ಕೆ ಸಾಧ್ಯತೆ ಇದೆ. ಇಂತಹ ಪರಿಸ್ಥಿತಿಯ ಸ್ವಲ್ಪ ಅಡ್ವಾಂಟೇಜ್ ಅನ್ನು ತೆಗೆದುಕೊಳ್ಳುತ್ತಾರೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಆದಕಾರಣ ಇದರ ಬಗ್ಗೆ ತಾವು ಪುನರ್ ಪರಿಶೀಲಿಸಬೇಕಾಗುತ್ತದೆ, ಇಲ್ಲದಿದ್ದರೆ ಇದಕ್ಕೆ ತಾವು ಡೆಫಿನಿಶನ್ ಮಾಡಬೇಕಾಗುತ್ತದೆ. ಏನೆಂದರೆ

"If deems necessary if such members has been guilty of misconduct in the discharge of his duties...." ಮಿಸ್ ಕಂಡಕ್ಟ್ ಅಂದರೆ ಏನು ಎನ್ನತಕ್ಕಂಥದ್ದಕ್ಕೆ ಡೆಫಿನಿಷನ್ ಆದರೂ ನೀವು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಮನಸ್ಸಿಗೆ ಬಂದವರು ಯಾರು ಬೇಕಾದರೂ ಒಂದು ನೋಟೀಸ್ ಕೊಟ್ಟು, ಅವ ನಮಗೆ ನಮಸ್ಕಾರ ಮಾಡಲಿಲ್ಲ ಅಥವಾ ನಾನು ಕೂಡು ಎಂದು ಹೇಳಿದ ಜಾಗದಲ್ಲೇ ಕೂಡಲಿಲ್ಲ. ಅಥವಾ ಬೇರೆ ಇನ್ನು ಯಾವುದೇ ರೀತಿಯಾಗಿ ಭಿನ್ನಾಭಿಪ್ರಾಯಗಳು ಬರಬಹುದು. ಹೀಗೆ ಅನೇಕ ರೀತಿ ಬರಬಹುದು. ನಿಮಗೊಂದು ಉದಾಹರಣೆ ಹೇಳಿದೆ ಕೆಲವು ಸದಸ್ಯರು ಕುಡಿದು ಮೀಟಿಂಗಕ್ಕೆ ಬರುತ್ತಿದ್ದಾರೆ, ಮೀಟಿಂಗ್‌ಗೆ ಯಾರ್ಯಾರು ಹೇಗೆ ಬರುತ್ತಾರೆ ಎನ್ನತಕ್ಕಂಥದ್ದನ್ನು ನಾನು ಹೇಳಬಾರದು. ಅನೇಕ ಉದಾಹರಣೆಗಳು ಇವೆ ಅದನ್ನು ಹೇಳಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಆದಕಾರಣ ಮಿಸ್‌ಕಂಡಕ್ಟ್ ಏನು ಎನ್ನತಕ್ಕಂಥದ್ದಕ್ಕೆ ನೀವು ಡೆಫಿನಿಷನ್ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಅದನ್ನು ತೆಗದು ಹಾಕಿದರೆ ಒಳ್ಳೆಯದು. ಎರಡನೆಯದು ಏನು ಎಂದರೆ ಸೆಕ್ಷನ್ 58, 14ನೇ ಅಮೆಂಡ್‌ಮೆಂಟ್ ಆದರಲ್ಲಿ ಏನು ಹೇಳಿದ್ದೀರಿ ಎಂದರೆ ಮಾನ್ಯ ಅಧ್ಯಕ್ಷರೆ, ಇದು ತಾವು ಗಮನಿಸಬೇಕಾದ ಅಂಶ, ಏನು ಎಂದರೆ ಒಬ್ಬ ಮೆಂಬರ್‌ಗೆ ಡಿಸ್‌ಕ್ವಾಲಿಫೈ ಮಾಡುವುದಕ್ಕೆ ನಾಲ್ಕೈದು ಕಾರಣಗಳನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಈಗಾಗಲೇ ನಮ್ಮ ಬಸವರಾಜುರವರು, ಜ್ಞಾನೇಂದ್ರರವರು ಮತ್ತು ಘೋರ್ಪಡೆಯವರು ಪ್ರಸ್ತಾಪಮಾಡಿದ್ದಾರೆ. Providing sanitary latrines to not less than 10% of the households every year and achieve full coverage as early as possible; Constructing adequate number of community latrines for the use of men and women, maintaining them; Maintaining water supply works either on its own or by annual.... ಹೀಗೆ ಸುಮಾರು 16 ಕಂಡೀಷನ್ಸ್ ಇವೆ. ಅನೇಕ ಪಂಚಾಯತ್ ಅಧ್ಯಕ್ಷರ ಹಾಗೂ ಸದಸ್ಯರ ಮಾತು ಕೆಲವು ಕಡೆ ನಡೆಯುವುದಿಲ್ಲ. ಇನ್ನೂ ನಾವು ಆ ಪ್ರೋಸೆಸ್‌ನಲ್ಲಿದ್ದೇವೆ. ಅವನ ಮಾತು ನಡೆಯದೇ ಇದ್ದಾಗ ಅಂತಹ ಕಡೆ ಅವನಿಗೆ ಜಾಗ ಸಿಗಲಿಲ್ಲ ಎಂದರೆ ಅಥವಾ ಅವರು ಮಾಡುವುದಕ್ಕೆ ಆಗಲಿಲ್ಲ ಎಂದರೆ ಅಥವಾ ನೀರು ಇರಲಿಲ್ಲ ಎಂದರೆ ಅಂತಹ ಕಾರಣಕ್ಕೋಸ್ಕರ ಕೆಲವು ಜನ ಕಾಯ್ದುಕೊಂಡು ಕುಳಿತಿರುತ್ತಾರೆ ಅವರನ್ನು ಡಿಸ್‌ಕ್ವಾಲಿಫೈ ಮಾಡುವುದಕ್ಕೆ, ಅವನು ಮೆಂಬರ್ ಆಗುವುದೇ

ಸಹಿಸುವುದಿಲ್ಲ, ನೀವು ಲ್ಯಾಟ್ರಿನ್ ಕಟ್ಟಿಲ್ಲ, ಅಲ್ಲಿ ನಲ್ಲಿ ಇಲ್ಲ ಅಥವಾ ನೀವು ರಿಪೇರಿ ಮಾಡಿಲ್ಲ ಎಂದು ಈ ಸಣ್ಣ ಕಾರಣಕ್ಕೋಸ್ಕರ ನೀವು ಡಿಸ್‌ಕ್ವಾಲಿಫೈ ಮಾಡಿದರೆ ಖಂಡಿತವಾಗಿ ಒಂದು ಕಡೆ ನಾವು ಅವನಿಗೆ ಅಧಿಕಾರವನ್ನು ಕೊಟ್ಟು ಇನ್ನೊಂದು ಕಡೆ ಅವರ ಅಧಿಕಾರವನ್ನು ಕಸಿದುಕೊಂಡ ಹಾಗೆ ಆಗುತ್ತದೆ. ಆದಕಾರಣ ದಯವಿಟ್ಟು ಈ ಒಂದು ಸೆಕ್ಷನ್ 58ನ್ನು ಕೂಡ ನೀವು ಪುನರ್ ಪರಿಶೀಲನೆ ಮಾಡಬೇಕು ಇಲ್ಲದಿದ್ದರೆ ಡ್ರಾಪ್ ಮಾಡಬೇಕು. ಆದಕಾರಣ ಇದನ್ನು ತೆಗೆದುಹಾಕಬೇಕು ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನೊಂದು ತಾವು 20 ತಿಂಗಳಿಗೆ ಅವನ ಅಧಿಕಾರವಧಿಯನ್ನು ಮಾಡುತ್ತಿದ್ದೀರಿ ಅದು ಪೂರ್ತಿ ಐದು ವರ್ಷ ಇರಲಿ ಇಲ್ಲದಿದ್ದರೆ, ಕನಿಷ್ಠಪಕ್ಷ 30 ತಿಂಗಳು ಇರಲಿ ಕೊನೆಯಪಕ್ಷ ಅವನು ಹೋಗಿ ಕೆಲಸ ಮಾಡಲಿಕ್ಕಾದರೂ ಅವಕಾಶ ಇರಬೇಕಲ್ಲ. ಇಲ್ಲದಿದ್ದರೆ ಮೇಯರ್ ಆದ ಹಾಗೆ ಆಗುತ್ತದೆ. ಹೋದಕೂಡಲೇ ಏನು ಮಾಡಿಕೊಳ್ಳಬೇಕು ಎನ್ನುವಂಥ ಧಾಟಿಯಲ್ಲಿ ವರ್ತನೆ ಮಾಡುತ್ತಾರೆ. ಹಾಗಾಗಬಾರದು. ಎಲ್ಲರೂ ಹಾಗೇ ಇದ್ದಾರೆ ಎಂದು ನಾನು ಹೇಳುತ್ತಿಲ್ಲ. ಆದರೆ ಇದು ಸೈಕಲಾಜಿಕಲಿ ಅವನು ಅಲ್ಲಿ ಹೋಗಿ ಕೂಡಬೇಕೆಂದರೆ ತಿಂಗಳು ಎರಡು ತಿಂಗಳು ಆಗುತ್ತದೆ, ಇಡೀ ಜಿಲ್ಲೆ ಅಥವಾ ತಾಲ್ಲೂಕು ತಿರುಗಾಡಿಕೊಂಡು ಐಡೆಂಟಿಫೈ ಮಾಡಿಕೊಳ್ಳಲು ಕಷ್ಟವಾಗುತ್ತದೆ. ಆದಕಾರಣ ದಯವಿಟ್ಟು ಇದನ್ನು ಕೂಡ ಪುನರ್ ಪರಿಶೀಲನೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನೊಂದು ಮಾನ್ಯ ಫೋರ್ಡೆಯವರು ಈಗಾಗಲೇ ಪ್ರಸ್ತಾಪವನ್ನು ಮಾಡಿದ್ದಾರೆ, ತಾವು ಒಪ್ಪಿಕೊಳ್ಳಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಏನು ಎಂದರೆ ಪಂಚಾಯತ್ ಮೆಂಬರ್ ಬಗ್ಗೆ ಡಿಸ್‌ಕ್ವಾಲಿಫೈ ಮಾಡತಕ್ಕಂಥ ಅಧಿಕಾರವನ್ನು ಜಿಲ್ಲಾಪಂಚಾಯತ್‌ನಿಂದ ತೆಗೆದುಕೊಂಡು ನೇರವಾಗಿ ಸರ್ಕಾರದವರೇ ತೆಗೆದುಕೊಳ್ಳುವುದು ಉತ್ತಮ ಎಂದು ಅವರು ಏಕೆ ಹೇಳಿದರು ಎಂದರೆ ಸರ್ಕಾರದಲ್ಲಾದರೂ ಕನಿಷ್ಟಪಕ್ಷ ಡಿಸ್‌ಪ್ಯಾಷನೇಟಲಿ ಯೋಚನೆ ಮಾಡಿ ಜ್ಯುಡಿಷಿಯಸ್ಸಾಗಿ ಒಂದು ಡಿಸಿಷನ್ ತೆಗೆದುಕೊಳ್ಳುತ್ತಾರೆ, ಆ ಡಿಸಿಷನ್ ನೀವು ಒಂದು ಸಾರಿ ತೆಗೆದುಕೊಂಡರೆ ಅದು ಪ್ರಿಸಿಡೆಂಟ್ ಆಗುತ್ತದೆ, ಎಲ್ಲಾ ಕಡೆ ಅಪ್ಲಿಕಬಲ್ ಆಗುತ್ತದೆ ಅದಕ್ಕಾಗಿ ಇನ್‌ಡಿಸ್‌ಕ್ರಿಮಿನೇಟ್ ಆಗಿ ಡಿಸಿಷನ್ ತೆಗೆದುಕೊಳ್ಳತಕ್ಕಂಥಾದ್ದಾಗಲೀ ಅಥವಾ ಸೂಪರ್‌ಸೀಡ್ ಮಾಡತಕ್ಕಂಥದ್ದಾಗಲೀ ಆಗುವುದಿಲ್ಲ. ಆದಕಾರಣ ದಯವಿಟ್ಟು ಅವರು ಹೇಳಿರುವಂಥ ಮಾತಿನ ಕಡೆ ಗಮನಕೊಡಬೇಕು ಎಂದು ಪುನಃ ನಾನು ಒತ್ತಾಯ ಮಾಡುತ್ತೇನೆ. ಆಮೇಲೆ ಸ್ಪೆಷಲ್ ಲೋಕಾಯುಕ್ತ ಬೇಕು. ಏಕೆಂದರೆ ವಿಲೇಜ್‌ಪಂಚಾಯತ್‌ದಿಂದ ಹಿಡಿದು ಜಿಲ್ಲಾಪಂಚಾಯತ್‌ನವರಿಗೆ ಸಾಕಷ್ಟು ಕಂಪ್ಲೇಂಟ್ಸ್ ಇದೆ ಇದರ ಕಡೆ ಯಾರೂ ಗಮನವನ್ನು ಕೊಡುತ್ತಿಲ್ಲ. ಇವೊತ್ತು ನಮ್ಮ ಲೋಕೋಪಯೋಗಿ ಇಲಾಖೆಯಲ್ಲಾಗಲೀ ಬೇರೆ ಯಾವುದೇ ಇಲಾಖೆಯಲ್ಲಿ ಅಷ್ಟು

ಹಣ ಇಲ್ಲ. ಇವೊತ್ತು ನಮ್ಮ ಜಿಲ್ಲಾಪರಿಷತ್‌ನಲ್ಲಿ ಎಷ್ಟು ಹಣ ಇದೆ ಎನ್ನತಕ್ಕಂಥದ್ದು ತಮಗೆಲ್ಲಾ ಗೊತ್ತಿದೆ. ಅದಕ್ಕಾಗಿ ನೇರವಾಗಿ ಜನರ ಕೆಲಸ ಮಾಡತಕ್ಕಂಥವರು ತಾಲ್ಲೂಕು ಪಂಚಾಯತ್, ಜಿಲ್ಲಾಪಂಚಾಯತ್ ಮತ್ತು ವಿಲೇಜ್ ಪಂಚಾಯತ್, ಅಂದಾಗ ಅದರ ಬಗ್ಗೆ ಒಂದ ಸ್ಪೆಷಲ್ ಲೋಕಾಯುಕ್ತ ಮಾಡತಕ್ಕಂಥದ್ದೇ ಆಗಲೀ ವಿಜಿಲೆನ್ಸ್ ಮಾಡತಕ್ಕಂಥದ್ದೇ ಆಗಲೀ, ಕಮಿಟಿ ಮಾಡತಕ್ಕಂಥದ್ದಾಗಲೀ ಮಾಡಿದರೆ ಒಳ್ಳೆಯದಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

6.40 ಪಿ.ಎಂ

ಇನ್ನೊಂದು ಪ್ರಸ್ತಾವನೆ ಇದೆ ಅದನ್ನು ನಾನು ಈ ಹಿಂದೆ ಕೂಡ ತಮ್ಮ ಗಮನಕ್ಕೆ ತಂದಿದ್ದೆ. ಏನು ಎಂದರೆ ಈ ಡಿಸ್ಟ್ರಿಕ್ಟ್ ಪ್ಲಾನಿಂಗ್‌ನಲ್ಲಿ ಪ್ರಪೋರ್ಷನೇಟ್ ರೆಪ್ರಸಂಟೇಷನ್ ಇಲ್ಲ. ಈಗ ಏನು ನೀವು ಸೋಷಿಯಲ್ ಜಸ್ಟೀಸ್ ಕಮಿಟಿ ಎಂದು ಮಾಡಿದ್ದೀರಿ. ಆದರೆ ಡಿಸ್ಟ್ರಿಕ್ಟ್ ಪ್ಲಾನಿಂಗಲ್ಲಿ ನಾನು ಮಾಡುತ್ತೇನೆ ನಾನೊಂದು ಅಮೆಂಡ್‌ಮೆಂಟನ್ನು ತರುತ್ತಿದ್ದೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಅದು ಬರಲಿಲ್ಲ. ನ್ಯಾಚುರಲಿ ಅದರಿಂದ ಇನ್‌ಜಸ್ಟೀಸ್ ಆಗುತ್ತದೆ, ಮೆಜಾರಿಟಿ ಮೆಂಬರ್ಸ್ ಇದ್ದ ಕಡೆ ಪ್ಲಾನಿಂಗ್ ಕಮಿಟಿ ಹೋಗುತ್ತದೆ. ಉದಾಹರಣೆಗೆ 49 ಪರ್ಸೆಂಟ್ ಮೆಂಬರ್ಸ್, ಒಂದು ಕಡೆ ಇದ್ದರೆ, 51 ಪರ್ಸೆಂಟ್ ಮೆಂಬರ್ಸ್ ಒಂದು ಕಡೆ ಇದ್ದರೆ ಪ್ಲಾನಿಂಗ್ ಕಮಿಟಿ ಹೋದಾಗ 51 ಪರ್ಸೆಂಟ್ ಮೆಂಬರ್ಸ್, ರೈಟ್ ಇರಲಿ ರಾಂಗ್ ಇರಲಿ ಅವರು ಏನು ಹೇಳುತ್ತಾರೆ ಅವರದ್ದೇ ನಡೆಯುತ್ತದೆ. ಅಂದಾಗ ಅಲ್ಲಿ ಟ್ರಾನ್ಸ್‌ಫರೆನ್ಸಿ ಇರುವುದಿಲ್ಲ. ನಮ್ಮ ಲೆಜಿಸ್ಲೇಚರ್‌ನಲ್ಲಿ ನಾವು ಫಾಲೋ ಮಾಡುತ್ತೇವೆ, ಬೇರೆ ಕಮಿಟಿಗಳಲ್ಲಿ ಕೂಡ ನಾವು ಫಾಲೋ ಮಾಡುತ್ತೇವೆ ಆದರೆ ಇದರಲ್ಲಿ ನಾವು ಫಾಲೋ ಮಾಡುವುದಿಲ್ಲ ಏಕೆ? ಆದಕಾರಣ ಇದರಲ್ಲೂ ಕೂಡ ನೀವು ಅಮೆಂಡ್‌ಮೆಂಟ್ ಮುಖಾಂತರ ತರುತ್ತೀರೋ ಮತ್ತೆ ಇನ್ಯಾವುದರ ಮುಖಾಂತರ ನೀವು ತರುತ್ತೀರಿ ಎಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ?

ಕೊನೆಯದಾಗಿ ಇನ್ನೊಂದು ವಿಷಯ ಏನು ಎಂದರೆ ನೀವು ಸೋಷಿಯಲ್ ಜಸ್ಟೀಸ್ ಕಮಿಟಿಯಲ್ಲಿ ನೀವು ನಾಮಿನೇಟ್ ಮಾಡುತ್ತಿದ್ದೀರಿ. "To ensure reservation for women and for SC/STs" ಈಗ ಏನಾಗುತ್ತದೆ ಎಂದರೆ ಎಸ್‌ಸಿ/ಎಸ್‌ಟಿ ಎಂದು ಆಫೆಕ್ಷನ್ ಇಟ್ಟಮೇಲೆ ಅನೇಕ ಸಾರಿ ಕೆಲವು ಕಡೆ ಏ ಅವರು ಬೇಡಪ್ಪಾ ಎಂದು ಎಸ್.ಸಿಯವರಿಗೆ ಬಿಟ್ಟುಬಿಡತಕ್ಕಂಥ ಸಾಧ್ಯತೆ ಕೂಡ ಇದೆ. ಇಪ್ಪತ್ತು ಪರ್ಸೆಂಟ್ ಪಾಪ್ಯುಲೇಷನ್ ಇದ್ದವರನ್ನು ನೀವು ಕೈ ಬಿಟ್ಟು ಹೊಸ ಪಾಪ್ಯುಲೇಷನ್ ಸೆನ್ಸಸ್ ಪ್ರಕಾರ ಮೂರು ಪರ್ಸೆಂಟ್ ಅಥವಾ ಐದು ಪರ್ಸೆಂಟ್ ಇದ್ದವರಿಗೆ ಕೊಡತಕ್ಕಂಥ ಸಾಧ್ಯತೆ ಆಗುತ್ತದೆ. ಆದಕಾರಣ ನೀವು ಬಹಳಷ್ಟು ಪ್ರಾವಿಷನ್ ಇಟ್ಟರೆ ಈ ಎಸ್‌ಸಿಯವರ ಬಗ್ಗೆ ಯಾರಿಗೆ ಪ್ರಿಜ್ಯುಡೀಸ್ ಇರುತ್ತದೆ ಅವರಿಗೆ ಇದೊಂದೇ ಸಾಕು ಇದರ ಪ್ರಕಾರ ಅವರು

ಆಕ್ಟ್ ಮಾಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ನೀವು ಏನು ಮಾಡಿ ಎಂದರೆ 27-30ಕಮಿಟಿ ಇದ್ದರೆ ಎಕ್ಸ್‌ಕ್ಲೂಸೀವ್ ಆಗಿ ಮೂರು ಕಮಿಟಿಗಳು ಅವರಿಗೆ ಹದಿನೈದು ಕಮಿಟಿಗಳು ಇವರಿಗೇ ಎಂದು ಮಾಡಿ. ಏನಾದರೂ ಮಾಡಿ. ಇಲ್ಲದಿದ್ದರೆ ಬಹಳ ಹೊಡೆತ ಬೀಳುತ್ತದೆ. ಈ ರೀತಿ ''ಆರ್'' ಎಂದು ಇರತಕ್ಕಂಥ ಪದವನ್ನು ಮಿಸ್‌ಯೂಸ್ ಮಾಡಿ ಬಿಡುತ್ತಾರೆ. ಹೋದ ಸಾರಿ ತಾಲ್ಲೂಕುಪಂಚಾಯತ್ ಹಾಗೂ ಮಂಡಲ್‌ಪಂಚಾಯತ್ ಎಲೆಕ್ಷನ್‌ನಲ್ಲಿ ತೊಂದರೆಯಾಗಿದೆ. ಅದು ಚಿತ್ರದುರ್ಗನೇ ಇರಬಹುದು, ತುಮಕೂರೇ ಇರಬಹುದು, ಬಳ್ಳಾರಿನೇ ಇರಬಹುದು. ಬೇರೆ ಕಡೆ ಕೂಡ ಆಗಿದೆ. ಅದು ತಮಗೂ ಕೂಡ ಗೊತ್ತಿದೆ. ಅದು ಎಲ್ಲಾ ಕೂಡ ಗೊತ್ತಿದ್ದರೂ ಇದನ್ನು ಏಕೆ ಮಾಡಿದ್ದಾರೆ ಎಂದು ನನಗೆ ಅರ್ಥವಾಗುತ್ತಿಲ್ಲ. ಇದೇ ಪದ್ಧತಿಯನ್ನು ಸಹಕಾರ ಇಲಾಖೆಯಲ್ಲೂ ಕೂಡ ತಂದಿದ್ದಾರೆ. ಅದು ಬಂದಮೇಲೆ ಅದರ ಬಗ್ಗೆ ಮಾತನಾಡುತ್ತೇನೆ. ಆದಕಾರಣ ಇದನ್ನೂ ಕೂಡ ನೀವು ಸರಿಪಡಿಸತಕ್ಕಂಥದ್ದು ಮಾಡಬೇಕು. ಇಲ್ಲದಿದ್ದರೆ 20 ಪರ್ಸೆಂಟ್ ಪಾಪ್ಯುಲೇಷನ್ ಇರತಕ್ಕಂಥ ಜನರಿಗೆ ಇದು ತೊಂದರೆಯಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಿ ಅವರಿಗೆ ಅವರ ಹಕ್ಕನ್ನು ಕೊಡಬೇಕು, ಇವರಿಗೆ ಸಿಗತಕ್ಕಂಥ ಹಕ್ಕನ್ನು ಕಸಿದುಕೊಳ್ಳಬಾರದು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಈ ಒಂದು ಸಂದರ್ಭದಲ್ಲಿ ನಾನೇನು ಕೆಲವು ಸಲಹೆಗಳನ್ನು ಕೊಟ್ಟಿದ್ದೇನೆ ಇದಕ್ಕೆ ತಾವು ಬೆಂಬಲ ಕೊಡುತ್ತೀರಿ ಎನ್ನತಕ್ಕಂಥ ಮಾತನ್ನು ಹೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಖರ್ಗೆಯವರು ಸಲಹೆ ಕೊಟ್ಟಂತೆ ಈ ಮಿಸ್‌ಕಂಡಕ್ಟ್‌ಗೆ ಅವನನ್ನು ಡಿಸಕ್ವಾಲಿಫೈ ಮಾಡುವಂಥದ್ದು ಏನಿದೆ ಅದನ್ನು ದಯವಿಟ್ಟು ತೆಗೆದುಹಾಕಿ. ಆ ಮಿಸ್ ಕಂಡಕ್ಟ್ ಎಂದರೇನು ಎಂದು ಡೆಫಿನಿಷನ್ ಇಲ್ಲದೇ ಇದನ್ನು ಸೇರಿಸಬೇಡಿ. ಇದರಿಂದ ಮಿಸ್‌ಯೂಸ್ ಆಗುತ್ತದೆ, ಯಾರ ಮೇಲಾದರೂ ಸೇಡು ತೀರಿಸಿಕೊಳ್ಳುವಂಥ ಪ್ರಯತ್ನ ಆಗುತ್ತದೆ. ಈ ನಿಯಮ ಎಲ್ಲೂ ಇಲ್ಲ, ಒಬ್ಬ ಶಾಸಕನಿಗೆ ಇಲ್ಲ, ಒಬ್ಬ ಎಂ.ಪಿಗೆ ಇಲ್ಲ, ಸಾಮಾನ್ಯವಾಗಿ ಆಯ್ಕೆಯಾಗುವಂಥ ಒಬ್ಬ ಸದಸ್ಯನಿಗೆ ಈ ರೀತಿಯಾಗಿ ಅವನ ಮೇಲೆ ಕಡಿವಾಣ ಹಾಕುವುದು ಸರಿಯಲ್ಲ. ಮಿಸ್‌ಕಂಡಕ್ಟ್ ಬಗ್ಗೆ ಡೆಫಿನಿಷನ್ ಇದ್ದರೆ ನೋಡೋಣ. ಆದರೆ ಅವಸರದಲ್ಲಿ ಇದನ್ನು ಸೇರಿಸಬೇಡಿ. ಎರಡನೆಯದು ಬಹಳ ದುಃಖ ತರುವಂಥದ್ದು ಅದು ನಿಮಗೆ ಹೇಗೆ ಮನಸ್ಸು ಬಂತೋ ಗೊತ್ತಿಲ್ಲ, ತಮ್ಮ ಕುಟುಂಬದ ಸದಸ್ಯರ ಉಪಯೋಗಕ್ಕಾಗಿ ಶೌಚಗೃಹವನ್ನು ಉಪಯೋಗಿಸಿದ್ದಲ್ಲಿ ಆರು ತಿಂಗಳೊಳಗಾಗಿ ಅವನು ಕಟ್ಟಿಸದಿದ್ದರೆ ಅವನು ಡಿಸ್‌ಕ್ವಾಲಿಫೈ ಆಗುತ್ತಾನೆ. ಮೊದಲನೆಯದಾಗಿ ಆ ಸದಸ್ಯನು ಏನಾದರೂ ಮಾಡಿಕೊಂಡರೆ ಸ್ವಂತಕ್ಕೆ ಮಾಡಿಕೊಂಡಿದ್ದಾನೆಂದು ಕೂಗುವಂಥ ಕಾಲ ಸಾಮಾನ್ಯ ಜನರಿಗೆ ಶೌಚಗೃಹ ಇಲ್ಲ, ಅವನಿಗೆ ಹೇಳೋರು ಕೇಳೋರು ಇಲ್ಲ ಎಂದು ಹೇಳುವಂಥ ಕಾಲದಲ್ಲಿ ಈ ಶರತ್ತು

ಹಾಕಿದರೆ ಎಲ್ಲರೂ ಅವನಿಗೆ ಶಾಪ ಹಾಕುತ್ತಾರೆ. ನೋಡೋ ಅವನ ತನ್ನ ಮನೆಗೆ ಮೊದಲು ಕಟ್ಟಿಕೊಂಡ ಎಂದು ಜನ ಹೇಳುತ್ತಾರೆ. ಅವನು ಮನೆಗೆ ಕಟ್ಟಿಕೊಳ್ಳಲಿಲ್ಲ ಎಂದರೆ ಡಿಸ್‌ಕ್ವಾಲಿಫಿಕೇಷನ್ ಆಗುತ್ತದೆ. ಬಹುಶಃ ಇದು ಎರಡೂ ಅರ್ಥ ಇಲ್ಲದೇ ಇರುವಂಥದ್ದು. ಸರ್ವಾನುಮತದಿಂದ ಈ ಬಿಲ್ ಪಾಸ್ ಆಗಬೇಕು ಎಂದರೆ ಮೊದಲು ಡಿಸ್‌ಕ್ವಾಲಿಫಿಕೇಷನ್ ಬಗ್ಗೆ ಏನು ಡೆಫಿನಿಷನ್ ಎಂದು ಮೊದಲು ತರೋಣ; ಎರಡನೆಯದು ಅವನು ಶೌಚಾಲಯ ಕಟ್ಟದೇ ಇದ್ದರೆ ಅವನು ಡಿಸ್‌ಕ್ವಾಲಿಫೈ ಆಗೋದು ನಗೆಪಾಟಲಿನ ಸಂಗತಿ, ನೀವು ದುಡ್ಡು ಕೊಡಿ, ನೀವು ದುಡ್ಡು ಕೊಟ್ಟರೆ ಮನೆ ಮನೆಗೆ ಶೌಚಾಲಯವನ್ನು ಕಟ್ಟೋಣ ಆದರೆ ಅಲ್ಲಿ ಸ್ಥಳ ಬೇಕಲ್ಲಾ. ನೀವು ಬನ್ನಿ ನಿಮಗೆ ತೋರಿಸುತ್ತೇನೆ ಎಷ್ಟೋ ಜನ ಸದಸ್ಯರು ಹದಿನೈದು ಅಡಿ ಅಗಲ, ಹದಿನೈದು ಅಡಿ ಉದ್ದ ಜಾಗದಲ್ಲಿ ಅವನು ಬದುಕುತ್ತಿದ್ದಾನೆ. ಅವನು ಶೌಚಾಲಯವನ್ನು ಎಲ್ಲಿ ಕಟ್ಟಿಕೊಡುವುದು? ಅವನು ಕುಟುಂಬದವರು ಅವರು ಎಸ್‌ಸಿ, ಬಿಸಿ ಅಥವಾ ಅವರು ಯಾವುದೇ ಜನಾಂಗದವರು ಇರಬಹುದು ಇದು ಸರಿ ಇಲ್ಲ. ಇದು ಅವನಿಗೆ ಅಗೌರವ ಮಾಡಿದ ಹಾಗೆ ಆಗುತ್ತದೆ. ಆದಕಾರಣ ಇವೆರಡನ್ನೂ ವಿಥ್‌ಡ್ರಾ ಮಾಡಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

+ ಶ್ರೀ ಡಿ.ಆರ್.ಪಾಟೀಲ್ (ಗದಗ): ಮಾನ್ಯ ಅಧ್ಯಕ್ಷರೆ, ಅಮೆಂಡ್‌ಮೆಂಟ್ ಆಫ್ ಸೆಕ್ಷನ್ 44ರೊಳಗೆ 10(1) "in sub-section(1), for the words "as soon as may be the words, figures and brackets "within one month from the date of publication of names of elected members.." ಅಂದಿದ್ದೀರಿ. "within one month from the date of election of members" ಎಂದು ಅಂದುಬಿಡಿ. ಅಲ್ಲಿ ಗೆಜೆಟ್ ಪಬ್ಲಿಕೇಷನ್‌ಗೆ ಡಿಕ್ಲೆರೇಷನ್ ಆಫ್ ರಿಸಲ್ಟಗೆ ಅಲ್ಲಿ ಡೆಪ್ಯುಟಿ ಕಮಿಷನರ್‌ಗೆ ಗ್ಯಾಪ್ ಮಾಡಲಿಕ್ಕೆ ಬಹಳ ಅವಕಾಶ ಇದೆ. ಹಿಂದೆ 1977ರಲ್ಲಿ ಮಂಡಲ್‌ಪಂಚಾಯತ್ ಚುನಾವಣೆಯಾದಾಗ ನಾಲ್ಕು ತಿಂಗಳು ಆಗಲಿಲ್ಲ ಪ್ರಧಾನರ ಎಲೆಕ್ಷನ್, ಆ ಗೆಜೆಟ್ ನೋಟಿಫಿಕೇಷನ್ ಮಾಡಿಸಿಕೊಳ್ಳಲಿಲ್ಲ ನೀವು, ಏಕೆಂದರೆ ನೀವು ಬ್ಯಾಕ್‌ವರ್ಡ್ ಕ್ಲಾಸ್ ಎಂದು ಹೇಳಿ ಇಬ್ಬರನ್ನು ನಾಮಿನೇಷನ್ ಮಾಡುವಂಥದ್ದೇನಿತ್ತಲ್ಲಾ ಅವರಿಬ್ಬರು ಜಿಲ್ಲಾಪಂಚಾಯತ್‌ನಿಂದ ನಾಮಿನೇಟ್ ಆಗುವವರೆಗೂ ಗೆಜೆಟ್ ನೋಟಿಫಿಕೇಷನ್ ಆಗಲಾರದ ಹಾಗೆ ತಾವು ನೋಡಿಕೊಂಡಿದ್ದೀರಿ. ಆದಕಾರಣ ದಯವಿಟ್ಟು ಇದು ಡೇಟ್ ಆಫ್ ಎಲೆಕ್ಷನ್ ಎಂದರೆ ಒಳ್ಳೆಯದು. ಡೇಟ್ ಆಫ್ ಗೆಜೆಟ್ ನೋಟಿಫಿಕೇಷನ್ ಬದಲು. ಆಗ ಮಿಸ್‌ಯೂಸ್ ಮಾಡಲಿಕ್ಕೆ ಅವಕಾಶ ಇರುವುದಿಲ್ಲ. ಇನ್ನು ನೀವು ತಾಲ್ಲೂಕು ಪಂಚಾಯತ್, ಜಿಲ್ಲಾಪಂಚಾಯತ್ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಅವಧಿಯನ್ನು ಇಪ್ಪತ್ತು ತಿಂಗಳಿಗೆ ಮಾಡಿಬಿಟ್ಟಿದ್ದೀರಿ ಆಗ ನೋ ಕಾನ್ಫಿಡೆನ್ಸ್ ಮೋಷನ್‌ಗೆ ಏಕೆ ಅವಕಾಶ ಇರುತ್ತದೆ? ಇಪ್ಪತ್ತು ತಿಂಗಳೊಳಗೆ ನೋ ಕಾನ್ಫಡೆನ್ಸ್ ಏನು? ಅದನ್ನು

ತೆಗೆದುಬಿಡಿ ತಾಲ್ಲೂಕು ಪಂಚಾಯತ್‌ಗೆ ಹಾಗೂ ಜಿಲ್ಲಾಪಂಚಾಯತ್‌ಗೆ. ಇನ್ನು ಪಂಚಾಯತ್‌ಗೆ ಡಿವಿಜನ್ ಮಾಡಿದಾಗ ಮೆಂಬರ್ಸ್‌ಗೆ ನಾಮಿನೇಟ್ ಮಾಡಲು ಡೆಪ್ಯೂಟಿ ಕಮಿಷನರ್‌ಗೆ ಅವಕಾಶ ಕೊಟ್ಟಿದ್ದೀರಿ. ಅದರೊಳಗೆ ಏನು ಅನ್ನುತ್ತೀರಿ "Members nominated by the Deputy Commissioner and such members shall as far as may be practicable be persons who are the members of the existing Grama Panchayat." ಎಕ್ಸಿಸ್ಟಿಂಗ್ ಗ್ರಾಮಪಂಚಾಯತ್ ಮೆಂಬರ್ಸ್‌ನ್ನು ನಾಮಿನೇಟ್ ಮಾಡಲು ಅವಕಾಶ ಕೊಡಿ. ಮತ್ತು ಅದರಲ್ಲಿ 'as far as may be practicable..' ಎಂದು ಹಾಕಿಬಿಟ್ಟಿರಿ ಎಂದರೆ ಡಿಸ್‌ಕ್ರಿಮಿನೇಷನ್ ಏಕೆ ಕೊಡುತ್ತೀರಿ ನೀವು? ಈಗ ಮೊನ್ನೆ ಹೊಸದಾಗಿ ನೀವು ಜಿಲ್ಲೆಗಳನ್ನು ಮಾಡಿದಾಗ ಜಿಲ್ಲಾಪಂಚಾಯತ್ ಕಾನ್ಸಿಟಿಟ್ಯೂಟ್ ಮಾಡುವಾಗ ಯಾರ್ಯಾರು ಎಲೆಕ್ಟೆಡ್ ಜಿಲ್ಲಾ ಪಂಚಾಯತ್ ಮೆಂಬರ್ಸ್ ಇದ್ದಾರೆ ಅವರೇ ಕೂಡಿಕೊಂಡು ಹೊಸ ಅಧ್ಯಕ್ಷರನ್ನು ಆಯ್ಕೆ ಮಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ. ಇಲ್ಲಿ ಗ್ರಾಮಪಂಚಾಯ್ತಿಗೆ ಮಾತ್ರ ಆ ಅವಕಾಶವನ್ನು ಡಿನೈ ಮಾಡುತ್ತಿದ್ದೀರಿ. ದಯವಿಟ್ಟು ಈ ಮೂರು ಸಲಹೆಗಳನ್ನು ತಾವು ಪರಿಶೀಲಿಸಬೇಕಾಗಿ ವಿನಂತಿ ಮಾಡುತ್ತೇನೆ.

+ ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಎಲ್ಲಾ ಮಾನ್ಯ ಸದಸ್ಯರುಗಳು ನಾವು ತಂದಿರತಕ್ಕಂಥ ತಿದ್ದುಪಡಿಯ ಹಿನ್ನೆಲೆಯನ್ನು, ಉದ್ದೇಶಗಳನ್ನು ಸ್ವಾಗತ ಮಾಡಿರುವುದರಿಂದ ಅವರಿಗೆ ನಾನು ಸರ್ಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಯಾವುದಾದರೂ ಕಾನೂನನ್ನು ರಚನೆ ಮಾಡಬೇಕಾದರೆ ಅದು ತನ್ನ ಸಮಾಜ ಬೆಳೆದು ಬಂದಿರತಕ್ಕಂಥ ದಾರಿ ಮತ್ತು ಅದರ ಇತಿಹಾಸದ ಪ್ರಜ್ಞೆಗಳ ಮೂಲಕ ಅದು ನಡೆಯುತ್ತದೆ. ಇವೊತ್ತು ಪ್ರಸ್ತಾಪಿಸಲ್ಪಟ್ಟಿರತಕ್ಕಂಥ ಅನೇಕ ವಿಷಯಗಳು ಹಿಂದಿನ ಒಂದು ತಲೆಮಾರಿನಲ್ಲಿರುವಂಥ ಜ್ಞಾನದ ಇತಿಮಿತಿ ಅಥವಾ ಸಂದರ್ಭಗಳ ಇತಿಮಿತಿಗಳ ಮೇಲೆ ನಡೆಯತಕ್ಕಂಥದ್ದು. ಸಮಾಜ ಪ್ರಬುದ್ಧ ಆದಂತೆ ಮತ್ತು ಹೊಸ ವಿಷಯಗಳ ಬಗ್ಗೆ ಅವರು ಹೆಚ್ಚು ಸಹಿಷ್ಣುತೆಯನ್ನು ಪಡೆದಂಥವರಾದರೆ ಆ ಕಾನೂನಿಗೆ ಒಂದು ಸ್ವರೂಪವನ್ನು ಕೊಡಲಿಕ್ಕೆ ಸಾಧ್ಯತೆ ಆಗುತ್ತದೆ. ನಮ್ಮ ಸಂವಿಧಾನದ ಪರಿಚ್ಛೇದ 41ರಲ್ಲಿ ನೀವು ಒಂದು ಸ್ವಯಂ ಆಡಳಿತಾತ್ಮಕ ಘಟಕಗಳನ್ನು ಮಾಡಬೇಕು ಎನ್ನುವಂಥ ಮಾತು ಹೇಳಿದರೂ ಕೂಡ ಆ ಕಾಲದಲ್ಲಿದ್ದಂಥ ನಮ್ಮ ಅನೇಕ ಹಿರಿಯ ನಾಯಕರುಗಳು ಪ್ರಜಾಪ್ರಭುತ್ವದ ವ್ಯವಸ್ಥೆ ಇದು ಎಷ್ಟರ ಮಟ್ಟಿಗೆ ಇಲ್ಲಿ ಬೇರು ಬಿಡಬಹುದು, ಎಷ್ಟರಮಟ್ಟಿಗೆ ದುರುಪಯೋಗ ಆಗಲಾರದಂತೆ ಜನಹಿತ ಕಾರ್ಯಗಳಿಗೆ ಅದನ್ನು ಬಳಸಬಹುದು ಎನ್ನತಕ್ಕಂಥ ಶಂಕೆಗಳು ಇದ್ದಕಾರಣ ಸುಮಾರು 40-45 ವರ್ಷಗಳ ಕಾಲ ಇದರ ಬಗ್ಗೆ ಹೆಚ್ಚಿನ ಆದ್ಯತೆಯನ್ನು ಕೊಡುವ ಪ್ರಶ್ನೆಯಾಗಲೀ ಇದನ್ನು ಅತ್ಯಂತ ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರುವಂಥ

ಪ್ರಯತ್ನ ಕೂಡ ಮಾಡಿರಲಿಲ್ಲ. ಆದರೆ ಹಿಂದೆ 1983ರಲ್ಲಿ ಶ್ರೀ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳು ಇದ್ದಂಥ ಸಂದರ್ಭದಲ್ಲಿ ರಾಜಕೀಯ ಸಂಕಲ್ಪ, ಇಚ್ಛಾಶಕ್ತಿ ಕೊಟ್ಟಿರುವುದರಿಂದ ದಿವಂಗತ ಅಬ್ದುಲ್ ನಜೀರ್‌ಸಾಬ್‌ರವರು ಅಂತಹ ಒಂದು ಪರಿಣಾಮಕಾರಿಯಾದಂಥ ಪ್ರಥಮಬಾರಿಗೆ ಕರ್ನಾಟಕದ ಒಂದು ವ್ಯವಸ್ಥೆಯಲ್ಲಿ ಇಂತಹ ರಾಜಕೀಯ ಬದಲಾವಣೆಗಳನ್ನು ಅವರು ತರತಕ್ಕಂಥ ಪ್ರಯತ್ನವನ್ನು ಅವರು ಮಾಡಿದ್ದಾರೆ. ಬೇರೆ ಬೇರೆ ಕಡೆಗೂ ಕೂಡ ಬೇರೆ ಬೇರೆ ಸಂದರ್ಭದಲ್ಲಿ ಆಗಿದೆ. ಮಾನ್ಯ ಫೋರ್ಡೆಯವರು ತಾವು ಹಿರಿಯರು ಅನೇಕ ವಿಷಯಗಳನ್ನು ತಾವು ಸ್ವಾಗತ ಮಾಡಿದ್ದೀರಿ. ಯಾವುದೇ ಸ್ಟ್ರಕ್ಚರಲ್ ಚೇಂಜಸ್, ಇಡೀ ಸ್ವರೂಪವನ್ನು ತಾವು ವಿಕೃತಗೊಳಿಸಿಲ್ಲ ಎನ್ನುವಂಥ ಮಾತನ್ನು ತಾವು ಹೇಳಿದ್ದಕ್ಕೆ ನಾನು ಅಭಿನಂದಿಸುತ್ತೇನೆ. ಕೇಶವಾನಂದ ಭಾರತಿಯವರ ಕೇಸಿನ ವಿಚಾರದಲ್ಲಿ ಸುಪ್ರೀಮ್ ಕೋರ್ಟಿನ ಹನ್ನೊಂದು ಬೆಂಚಿನ ಜನ ಇಡೀ ಪ್ರಜಾಪ್ರಭುತ್ವದ ಕ್ಯಾರೆಕ್ಟರನ್ನು ಅದಕ್ಕೆ ಸಂಬಂಧಪಟ್ಟ ವ್ಯವಸ್ಥೆಯನ್ನು ಬದಲಿಸಬಾರದು ಎನ್ನತಕ್ಕಂಥದ್ದು ಯಾವ ರೀತಿಯಾಗಿ ಒಂದು ಮುಖ್ಯವಾಗಿರತಕ್ಕಂಥ ಆದರೆ, ಅದೇ ರೀತಿ ಯಾವುದಾದರೊಂದು ಕಾನೂನು ಮಾಡಬೇಕಾದರೆ ಕೊಂಡಜ್ಜಿ ಬಸ್ಸಪ್ಪನವರ ನೇಮಕಾತಿಯಾಗಿರತಕ್ಕಂಥ ಸಮಿತಿ ಸಲಹೆಗಳಾಗಬಹುದು, ಅಶೋಕ್ ಮೆಹ್ತಾರವರು ಕೊಟ್ಟಿರತಕ್ಕಂಥ ಸಲಹೆಗಳೆ ಆಗಬಹುದು ಈ ರೀತಿಯಾಗಿ ಬೇರೆ ಬೇರೆ ಕಾಲದ ಬೇರೆ ಬೇರೆ ಸಂದರ್ಭಗಳಲ್ಲಿ ಆಯಾಕಾಲದ ರಾಜಕೀಯ ಪರಿಸ್ಥಿತಿ, ರಾಜಕೀಯ ಇಚ್ಛಾಶಕ್ತಿ ಸಂಕಲ್ಪ ಮತ್ತು ಜ್ಞಾನದ ಇತಿಮಿತಿಗಳಲ್ಲಿ ಆ ಒಂದು ಬದಲಾವಣೆಗಳನ್ನು ತಂದಿರುವುದರಿಂದ ನಾವು ಒಂದೇ ಇದನ್ನು ಮಾಡಿದ್ದೇವೆ ಎನ್ನುವಂಥ ಹೆಮ್ಮೆ ಇಲ್ಲ. ತಾವೇನು 1983ರ ಕಾನೂನನ್ನು ತಂದಿದ್ದೀರಿ ನಿಮ್ಮ ಕಾನೂನನ್ನು ತರತಕ್ಕಂಥ ಸಂಪೂರ್ಣವಾದ ಹಿನ್ನೆಲೆ, ಪರಿಣಾಮಕಾರಿಯಾದಂತಹ ವ್ಯವಸ್ಥೆ 1983ರ ನಮ್ಮ ಕಾನೂನಿನಲ್ಲಿ ಅಡಗಿದೆ. 1983ರಲ್ಲಿ ಕಾನೂನಿನಲ್ಲಿ ಬಂದಂತಹ ಸಂದರ್ಭದಲ್ಲಿ ಕೂಡ ಸ್ವತಃ ರಾಮಕೃಷ್ಣ ಹೆಗಡೆಯವರೇ ಒಂದು ಸಂದರ್ಭದಲ್ಲಿ ಹೇಳುತ್ತಿದ್ದರು. ಅವಿಭಾಜ್ಯ ಕಾಂಗ್ರೆಸ್‌ನಲ್ಲಿ ಅವರು ಮಂತ್ರಿಗಳಾಗಿ, ಮಾನ್ಯ ಮುಖ್ಯಮಂತ್ರಿಗಳಾದ ನಿಜಲಿಂಗಪ್ಪನವರು ಇದ್ದಂತಹ ಸಂದರ್ಭದಲ್ಲಿ ತಾವು ತಂದಂತಹ ತಿದ್ದುಪಡಿಯನ್ನು ಕಾಂಗ್ರೆಸ್ ಪಕ್ಷದಲ್ಲಿ, ಶಾಸಕಾಂಗ ಪಕ್ಷದಲ್ಲಿ ಒಪ್ಪಿಗೆ ಇಲ್ಲದಂತಹ ಸಂದರ್ಭದಲ್ಲಿ ನಾನು ರಾಜೀನಾಮೆಯನ್ನು ಕೊಟ್ಟೆ. ಆಗ ಅದರಲ್ಲಿ ಏನೋ ಒಂದು ನಾನು ರಾಜೀಸೂತ್ರವನ್ನು ಮಾಡಿ ಮುಂದೆ ನನಗೆ ಬೇರೆ ಇಲಾಖೆಯನ್ನು ವಹಿಸಿಕೊಟ್ಟರು ಎನ್ನುವಂತಹ ಮಾತನ್ನು ಅನೇಕ ಸಂದರ್ಭದಲ್ಲಿ ಹೇಳಿದ್ದಾರೆ. ಅವರೇ ಮುಂದೆ ಈ ಸಂದರ್ಭ ಬಂದಾಗ 1987ರಲ್ಲಿ ಮಂಡಲ್ ಪಂಚಾಯತ್, ಜಿಲ್ಲಾ ಪಂಚಾಯತ್, ಮತ್ತು ನ್ಯಾಯ ಪಂಚಾಯತ್‌ಗೆ ಇದೇ ಸದನ ಒಪ್ಪಿಗೆಯನ್ನು ಕೊಟ್ಟಿತ್ತು. ಈ ನ್ಯಾಯಪಂಚಾಯಿತಿ ಅಂತಹ ಹೊಸ ಪರಿಕಲ್ಪನೆಯನ್ನು ನಾವು ತಂದಿದ್ದೇವೆ. ಅದಕ್ಕಾಗಿ ಲಾ ಕಮಿಷನ್ ಅನೇಕ ವಿಚಾರಗಳ ಬಗ್ಗೆ ಇಂತಹ ಒಂದು ಕಾರ್ಯಾಗಾರಗಳನ್ನು ಮಾಡಿ ಗ್ರಾಮೀಣಪ್ರದೇಶದಲ್ಲಿ ಇಂತಹ ನ್ಯಾಯ ಪಂಚಾಯಿತಿಗಳನ್ನು ತರಬೇಕಾದ್ದಿದೆ.

ನೂರಾರು ಸಂಸ್ಥೆಗಳಲ್ಲಿ ದಿನದಿನವೂ ಒಂದು ಗ್ರಾಮದಿಂದ ಮತ್ತೊಂದು ಕಡೆ ಈ ರೀತಿಯಾಗಿರತಕ್ಕಂಥ ತೊಂದರೆಗಳು ಆಗುತ್ತಿರುತ್ತವೆ. ಕೋರ್ಟ್‌ನಲ್ಲಿ ಇದು ನಿರ್ಣಯವಾಗುವುದು ಬೇಡವೆಂದು ಗ್ರಾಮ ನ್ಯಾಯಾಲಯದ ಪರಿಕಲ್ಪನೆ ಬ್ರಿಟಿಷ್ ಕಾಲದಲ್ಲಿ ಕೂಡ ಇತ್ತು. ಈಗ ಅನಿರ್ಬಂಧಿತವಾಗಿರತಕ್ಕಂಥ ಸಿವಿಲ್ ಜ್ಯೂರಿಸ್‌ಡಿಕ್ಷನ್ ಇತ್ತು. ಎಷ್ಟೇ ಲಕ್ಷ ಮೊತ್ತದ ಬೆಲೆ ಬಾಳತೆಕ್ಕಂಥ ವ್ಯವಹಾರ ಇದ್ದರೂ ಕೂಡ ಅಲ್ಲಿಯ ಗ್ರಾಮ ನ್ಯಾಯಾಲಯಗಳಲ್ಲಿ ಇದನ್ನು ನಿರ್ಧಾರ ಮಾಡಬಹುದು ಎಂದು ಇತ್ತು. ಆದರೆ ಅದು ಬೇರೆ ಬೇರೆ ಕಾರಣಗಳಿಂದ ಕೋಡಿಫಿಕೇಷನ್ ಆಗುತ್ತಾ ಹೋದಂತಹ ಸಂದರ್ಭದಲ್ಲಿ ಈ ರೀತಿಯಾದಂತಹ ವ್ಯವಸ್ತೆಗಳಾಗಿವೆ. ಆದುದರಿಂದ ತಾವು ಏನು ಹೇಳಿದ್ದೀರಿ ಸ್ಟ್ರಕ್ಚರಲ್ ಚೇಂಜಸ್ ಆಗಿಲ್ಲ ಅದು. ಸ್ಟ್ರಕ್ಚರಲ್ ಚೇಂಜಸ್ ಮಾಡಬಾರದು ಕೂಡ. ಪದೇಪದೇ ಪ್ರಯೋಗಗಳನ್ನು ಮಾಡಬಾರದು. ಆದ್ದರಿಂದಲೇ ನಾನು ಈ ಸಂದರ್ಭದಲ್ಲಿ ಅತ್ಯಂತ ವಿನಯದಿಂದ ಹೇಳುವುದಿಷ್ಟೇ, 1987ರಲ್ಲಿಯೇ ಈ ಕಾನೂನನ್ನು ನಮ್ಮಂತೆ ಸಹಿಷ್ಣುತೆಯಿಂದ ಮತ್ತು ದೂರದೃಷ್ಟಿಯನ್ನು ತೋರಿಸಿ ಪ್ರಾಯಶಃ ಒಪ್ಪಿಕೊಳ್ಳಬಹುದಾಗಿತ್ತು. ಅದಕ್ಕೆ ತಿದ್ದುಪಡಿ ತರಬಹುದಾಗಿತ್ತು. ಆಗ ಏನು ಮಂಡಲ್ ಪಂಚಾಯತ್, ಜಿಲ್ಲಾ ಪರಿಷತ್, ನ್ಯಾಯ ಪಂಚಾಯತ್ ಎನ್ನುವಂತಹ ಕಾನೂನನ್ನು ತಂದಿದ್ದರು ಆ ಕಾನೂನನ್ನು ದಿಢೀರಾಗಿ ತೆಗೆದು ಹಾಕುವಂತಹ ಪ್ರಯತ್ನವನ್ನು ಮಾಡಿ ಐದು ವರ್ಷಗಳ ಒಂದು ಯಶಸ್ವಿಯಾದಂತಹ ಪ್ರಯೋಗವನ್ನು ಕತ್ತು ಹಿಚುಕಲ್ಪಟ್ಟಿತು. ಅದು ಆಗದೇ ನಾವೂ ಕೂಡ ಈ ಮಾತನ್ನು ಹೇಳಿದ್ದೆವು. ಹಿಂದೆ ನಾವೇನಾದರೂ ಅಧಿಕಾರಕ್ಕೆ ಬಂದರೆ ಕರ್ನಾಟಕ ಪಂಚಾಯತ್ ರಾಜ್ ಆ್ಯಕ್ಟ್ 1993ರನ್ನು ರದ್ದು ಮಾಡುತ್ತೇವೆ, ಹೊಸ ಕಾನೂನನ್ನು ತರುತ್ತೇವೆ ಎಂದು ಹೇಳಿದ್ದೆವು. ಇದಾದ ಮೇಲೆ ನನಗೆ ಗೊತ್ತಾಯಿತು ಚುನಾವಣೆಗಳನ್ನು ನಡೆಸಬೇಕಾದಂತಹ ಅನಿವಾರ್ಯತೆ ಸುಪ್ರೀಂ ಕೋರ್ಟ್‌ನ ಆದೇಶದಿಂದ ಆಯಿತು. ಮಾರ್ಚ್‌ನಲ್ಲಿ ಮಾಡಿದೆವು. ಪದೇಪದೇ ಪ್ರಯೋಗಗಳನ್ನು ಮಾಡಿ ಒಂದು ವ್ಯವಸ್ಥೆ ಒಂದು ಸ್ವರೂಪಕ್ಕೆ ಬಂದಿರತಕ್ಕಂಥಾದ್ದು ನಾವು ಬದಲಿಸಬಾರದು ಎನ್ನುವಂತಹ ಒಂದು ಕಾರ್ಯಕ್ರಮವನ್ನು ಉಚಿತವಾದಂತಹ ವಿವೇಕಕ್ಕೆ ಒಳಗಾಗಿ ಅದಕ್ಕೆ ನಾವು ತಿದ್ದುಪಡಿಗಳನ್ನು ತಂದಿದ್ದೇವೆ.

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೇ, 1982ರ ಕಾನ್ಸ್‌ಟಿಟ್ಯೂಷನಲ್ ಅಮೆಂಡ್‌ಮೆಂಟ್ ಪ್ರಕಾರ ಅದನ್ನು ಎಷ್ಟು ಮಾರ್ಪಾಡು ಮಾಡಲೇಬೇಕಾಗಿತ್ತು, ಅಷ್ಟು ಮಾತ್ರ ಮಾಡಿದ್ದೇವೆ. ಸುಮ್ಮಸುಮ್ಮನೆ ಆ ಕಾಲಕ್ಕೆ ಮಾಡಿರತಕ್ಕಂಥ 83 ಆ್ಯಕ್ಟ್‌ನ್ನು ಬದಲಿಸಲಿಕ್ಕೆ ನಾವು ಹೋಗಿಲ್ಲ. ನಮ್ಮ ಆ್ಯಕ್ಟನಲ್ಲಿ ಬೇಕಾದಷ್ಟು ಕ್ಲಾಸಸ್ ಆ ಕಾಲದಲ್ಲಿ ಇದ್ದಿದ್ದು, ಅದರ ಬಗ್ಗೆ ಆಕ್ಷೇಪಣೆ ಇಲ್ಲ ಎಂದು ಉಳಿಸಿದ್ದೇವೆ. ಆದಕಾರಣ 83ರ ಆ್ಯಕ್ಟ್‌ನ್ನು ಕಾನ್ಸ್‌ಟಿಟ್ಯೂಷನಲ್ ಅಮೆಂಡ್‌ಮೆಂಟ್ ಪ್ರಕಾರ ಎಷ್ಟು ಅನಿವಾರ್ಯವಾಗಿತ್ತೋ ಅಷ್ಟಕ್ಕೆ ಮಾತ್ರ ಮಾಡಿದ್ದೇವೆ. ಉದಾಹರಣೆಗೆ ಎರಡು ಲೆವೆಲ್ ಡಿಸ್ಟ್ರಿಕ್ಟ್ ಮತ್ತು ಮಂಡಲ್ ಇದ್ದಿದ್ದು ನಾವು ಮೂರು ಲೆವೆಲ್ ಮಾಡಬೇಕಾಯಿತು. ಏಕೆಂದರೆ ಇದು

ಕಾನ್ಸ್‌ಟಿಟ್ಯೂಷನಲ್ ಅಮೆಂಡ್‌ಮೆಂಟ್. ಅದಕ್ಕೋಸ್ಕರ ಇಷ್ಟೇ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಮುದ್ದಾಂ ರಾಜಕೀಯವಾಗಿ, ಅದನ್ನು ನಿರ್ಲಕ್ಷಿಸಿ ಹೊಸ ಕಾನೂನು ಮಾಡುವುದಕ್ಕೆ ಹೋಗಿಲ್ಲ. ಎಷ್ಟರಮಟ್ಟಿಗೆ ಅನಿವಾರ್ಯ ಇತ್ತು ಅಷ್ಟನ್ನು ಮಾತ್ರ ಮಾಡಿದ್ದೇವೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರು ಹೇಳಿದಂತಹ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದನ್ನು ಬದಲಿ ಮಾಡಲಿಲ್ಲ. ಅದಕ್ಕೆ ಯಾವುದೇ ಬೇರೆ ರಾಜಕೀಯ ಉದ್ದೇಶಗಳು ಇರಲಿಲ್ಲ. ಮಾನ್ಯ ಘೋರ್ಪಡೆಯವರಿಗೆ ಇಲ್ಲದೇ ಇರಬಹುದು. ಆದರೆ ಇದರ ಹಿಂದೆ ಬಸವಲಿಂಗಪ್ಪನವರು ಕೂಡ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಕಾನೂನು ಸಚಿವರಾಗಿದ್ದರು. ಅವರು ಸಂಪೂರ್ಣವಾಗಿ ಒಂದು ವ್ಯವಸ್ಥೆ ಕರಡನ್ನು ತಿದ್ದುಪಡಿ ಏನು ತಯಾರಾಗಿತ್ತು ಆ ಸಂದರ್ಭದಲ್ಲಿ ನೀವು ಒಪ್ಪಿತವಾಗಿದ್ದರೂ, ಒಪ್ಪಿಗೆ ಇಲ್ಲದೆ ಇದ್ದರೂ ಕೂಡ we are the inheritors of legacy ಆದುದರಿಂದ ಒಬ್ಬೊಬ್ಬ ವ್ಯಕ್ತಿ ತನ್ನದೇ ಆದಂತಹ ರೀತಿಯಲ್ಲಿ ದೃಷ್ಟಿ ಕೋನಗಳನ್ನು ಆ ಕಾನೂನುಗಳಿಗೆ ಇಡತಕ್ಕಂಥ ಪ್ರಯತ್ನ ಆಗಿರುತ್ತದೆ. ಅದಕ್ಕೆ ಸಂಪೂರ್ಣವಾಗಿ ತಾವೇ ಜವಾಬ್ದಾರರು ಎಂದು ಆ ಮಾತನ್ನು ನಾನು ಹೇಳುವುದಿಲ್ಲ. ಆದರೆ ಈ ಮಾತನ್ನು ಏಕೆ ಹೇಳುತ್ತೇನೆಂದರೆ ಒಟ್ಟಿನಲ್ಲಿ ನಾವು ಯಾವುದಾದರೂ ಒಂದು ಪ್ರಯೋಗಕ್ಕೆ ಬೇಕಾದಂತಹ ಪ್ರೇರಣೆಯನ್ನು ತೆಗೆದುಕೊಳ್ಳಬೇಕಾದರೆ ಆ ಪ್ರೇರಣೆಗೆ ಹಿಂದೆ ಇರತಕ್ಕಂಥ ಅನೇಕ ಶಕ್ತಿಗಳು ಕೆಲಸ ಮಾಡಿರುತ್ತವೆ. ಮತ್ತು ತಾವೂ ಕೂಡ 1993ರ ಕಾನೂನು ಏನು ತಂದಿದ್ದೀರಿ ಅದು ಸಂಪೂರ್ಣವಾಗಿ ಉಪೇಕ್ಷಿಸಲ್ಪಟ್ಟಿರತಕ್ಕಂಥಾದ್ದು ಅಲ್ಲ. ಪ್ರಯೋಗಕ್ಕೆ ಪದೇಪದೇ ಒಳಪಡಿಸಬಾರದು ಎನ್ನುವ ಕಾರಣಕ್ಕೆ ನಾವು ಈ ತಿದ್ದುಪಡಿಗಳನ್ನು ತಂದಿದ್ದೇವೆ. ಇಲ್ಲಿ ಏನು ಈ ಮಿಸ್‌ಕಾಂಡಕ್ಟಿಂಗ್ ವಿಚಾರದಲ್ಲಿ ಪ್ರಸ್ತಾಪ ಮಾಡಿರತಕ್ಕಂಥಾದ್ದು ಏನಿದೆ ಇದು 2-3 ದೃಷ್ಟಿಕೋನದಿಂದ ತಾವು ನೋಡಬಹುದು. ಒಂದನೆಯದು ಮೂಲಭೂತವಾಗಿ ಈ ಮಿಸ್ ಕಾಂಡಕ್ಟ್ ಎನ್ನುವಂಥಾದ್ದನ್ನು ಹೊಸದಾಗಿ ತಂದ ಆ ಪಕ್ಷದ ರಾಜಕಾರಣದ ಮೂಲಕ ಯಾರು ತಮಗೆ ಆಗದವರನ್ನು ನಾವು ಅನರ್ಹಗೊಳಿಸತಕ್ಕಂಥ ಪ್ರಯತ್ನ ಮಾಡಿದ್ದೇವೆ ಎನ್ನುವ ವಿಷಯ ಏನಿದೆ, ಉದ್ದೇಶ ಅದಲ್ಲ. ಕಾನೂನಿನಲ್ಲಿ ಈಗಾಗಲೇ ತಾಲ್ಲೂಕು ಪಂಚಾಯತ್, ಜಿಲ್ಲಾಪಂಚಾಯತ್‌ನಲ್ಲಿ ಈ ರೀತಿ ದುರ್ನಡತೆಗೆ ಒಳಗಾಗುವಂತಹ ಸದಸ್ಯನನ್ನು ತೆಗೆದುಹಾಕುವಂತಹ ಕಾನೂನು ಇದರಲ್ಲೇ ಇದೆ. ಆದರೆ ಗ್ರಾಮಪಂಚಾಯಿತಿಯಲ್ಲಿ ಇದು ಇರಲಿಲ್ಲ. ಆದುದರಿಂದ ನಾವು ನಮ್ಮೊಟ್ಟಿಗೆ ನಮ್ಮ ವಿವೇಕವನ್ನು ಕಡಿಮೆ ಮಾಡಿಕೊಳ್ಳುವುದಕ್ಕೆ ಏಕೆ ಪ್ರಯತ್ನ ಮಾಡಬೇಕು? ಇಲ್ಲಿ ಬಹಳ ಮುಖ್ಯವಾಗಿ ಗಮನಹರಿಸುವಂಥಾದ್ದು ಗುಬ್ಬಿ ಕ್ಷೇತ್ರದ ಶಾಸಕರಾದಂತಹ ಶ್ರೀಮಾನ್ ಶಿವನಂಜಪ್ಪನವರು ಅಲ್ಲಿಯ ಒಂದು ವಿಚಾರವನ್ನು ತೆಗೆದರು. ಅಲ್ಲಿ ಗ್ರಾಮ...

ಶ್ರೀ ಜೆ.ಎಸ್.ಶಿವನಂಜಪ್ಪ (ಗುಬ್ಬಿ): ಒಂದು ನಿಮಿಷ, ಅವನು ಕೇವಲ ಕುಡಿದು

ಬಂದಿರಲಿಲ್ಲ. ಅವನು ಚೇರ್‌ಮನ್ ಆಗಬೇಕಾಗಿತ್ತು, ವೈಸ್ ಚೇರ್‌ಮನ್ ಆಗಬೇಕಾಗಿತ್ತು. ಅವರ ಗುಂಪಿನವರು, ಸಭೆಗೆ ನುಗ್ಗಿ ರೆಸಲ್ಯೂಷನ್ ಕಿತ್ತುಕೊಂಡು ಆಗಿದ್ದಂತಹ ಪಂಚಾಯಿತಿ ಅಧ್ಯಕ್ಷನನ್ನು ಹೊಡೆದು ಪುಸ್ತಕ ಕಿತ್ತುಕೊಂಡು ಹೋಗಿಬಿಟ್ಟ. ಪೊಲೀಸ್ ಕಂಪ್ಲೇಂಟ್ ಕೊಟ್ಟರೂ ಅವನು ಕೊಡಲಿಲ್ಲ. ಅದಕ್ಕೆ ನಾನು ನಿಮಗೆ ಕಂಪ್ಲೇಂಟ್ ಕೊಟ್ಟಿದ್ದೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಹೀಗೆ ನಾವು ಅನುಭವಗಳ ಮೂಲಕವಾಗಿ ನಾವು ಪಾಠಗಳನ್ನು ಕಲಿಯುತ್ತೇವೆ. ಈಗ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಯಲ್ಲಿ ಈ ಸೆಕ್ಷನ್ ಇದೆ. ಜಿಲ್ಲಾ ಪಂಚಾಯಿತಿಯಲ್ಲಿ ನಿಮ್ಮ ಕಾನೂನಿನಲ್ಲಿ 175 ಸೆಕ್ಷನ್‌ನಲ್ಲಿ Removal of members for misconduct: "The Government if it thinks fit on the recommendations of the Zilla Panchayat, may, remove any member after giving him an opportunity of being heard and after such enquiry as it deems necessary if such member has been guilty of misconduct in the discharge of his duties or of any disgraceful conduct or as become incapable of performing his duties as a member" ಅದೇರೀತಿಯಾಗಿ ತಾಲ್ಲೂಕು ಪಂಚಾಯಿತಿಗೆ ಅಂತಹುದೇ ಅನಾಲಗಸ್ ಆಗಿ 93ರ ಆ್ಯಕ್ಟ್‌ನಲ್ಲಿ ಇದೆ. 1983ರಲ್ಲಿ ಕೂಡ ಅದೇ ಇತ್ತು. ಆದುದರಿಂದ ಈ ಕಾನೂನಿಗೆ ಗುಬ್ಬಿ ಕ್ಷೇತ್ರದ ಶಾಸಕರಾದ ಮಾನ್ಯ ಶಿವನಂಜಪ್ಪನವರು ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ನೀವು ಏನಾದರೂ ಕ್ರಮ ಕೈಗೊಳ್ಳಬೇಕೆಂದು ನೋಡಿದರೆ ಗ್ರಾಮಪಂಚಾಯಿತಿ ಸದಸ್ಯನಿಗೆ ಇದು ಇಲ್ಲ. ಅದನ್ನು ಈಗ ಗ್ರಾಮ ಪಂಚಾಯಿತಿ ಸದಸ್ಯನಿಗೆ ತಂದಿದ್ದೇವೆ. ಆದರೆ ಇದನ್ನು ಡೆಫನಿಷನ್ ಕಾಲಂನಲ್ಲಿ ಏಕೆ ತರಲಿಲ್ಲ ಎಂದರೆ ಇದು ಒಂದು ಬಹಳ ವಿಸ್ತೃತವಾಗಿರತಕ್ಕಂಥ ಶಬ್ದ. ಯಾವುದು ವಿಸ್ತೃತವಾಗಿ ಆಯಾಯ ಸಂದರ್ಭಕ್ಕೆ ಅನುಗುಣವಾಗಿ ಅರ್ಥೈಸುವುದಕ್ಕೆ ಸಾಧ್ಯವಾಗುತ್ತದೆ ಅಂಥ ಪದಗಳನ್ನು ನಾವು ಯಾವುದಾದರೂ ಒಂದು ಪದ ವಾಕ್ಯಕ್ಕೆ ಅಥವಾ ಇದೇ ರೀತಿಯಾದಂತಹ ಎನ್ನುವಂತಹ ಮಾತನ್ನು ಹೇಳಿದರೆ ಅದರಿಂದ ನೂರಾರು ಈ ರೀತಿಯಾದಂತಹ ತಕರಾರು ತಂಟೆಗಳಾಗುತ್ತವೆ. ಮತ್ತು ಈ ವಿಚಾರದಲ್ಲಿ ನ್ಯಾಯಾಲಯಗಳು ತೀರ್ಮಾನ ಕೊಡತಕ್ಕಂಥ ವಿಚಾರಗಳ ಬಗ್ಗೆ ಪ್ರಶ್ನೆ ಬರುತ್ತದೆ. ಯಾವುದೇ ಕಾನೂನು ಮಾಡುವಾಗ ಈ ವಿಚಾರವನ್ನು ಹೇಳುವುದಿಲ್ಲ. ಆದುದರಿಂದಲೇ ಲಾ ಲೆಕ್ಸಿಗಾನ್‌ನಲ್ಲಿ ಏನು ಮಿಸ್ ಕಾಂಡಕ್ಟ್ ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡುತ್ತಾರೆ.

"A misconduct is a specific word with a specific connotation. It cannot be mere inefficiency or slackness.

It is something far more positive and certainly deliberate disobedience of any order of the superior authority will be one species of misconduct. The word misconduct is a sufficiently wide experession and covers conduct which render any man unfit for office or is likely to temper or embarass on the admistration in the sense grossly improper or unbecoming conduct in public life may also become a misconduct and may render any officer liable for disciplinary action." Therefore the emphasis on the becoming of proper conduct..... ಅದನ್ನೆಲ್ಲಾ ಹೇಳುತ್ತಾರೆ. ಮಿಸ್ ಕಾಂಡಕ್ಟ್ ಎಂದರೆ ಏನು ಎಂದು. ಈ ತರಹದಲ್ಲಿ ಇದನ್ನು ಒಂದು ಯಾವುದಾದರೂ ಒಂದು ತೀರ್ಮಾನಕ್ಕೆ ಒಳಪಡಬಾರದು ಎನ್ನತಕ್ಕಂಥಾದ್ದಕ್ಕೆ ಲೆಕ್ಸಿಗಾನ್‌ನಲ್ಲಿ ಕೊಟ್ಟಿರತಕ್ಕಂಥ ಅರ್ಥ. ಹೀಗೆ ನಮ್ಮಲ್ಲಿ ಮಿಸ್ ಕಾಂಡಕ್ಟ್ ಏನು ಎನ್ನುವಂತಾದ್ದು ಕೂಡ ನಮ್ಮ ಆರ್ಡಿನರಿ ಡಿಕ್ಷನರಿಯಲ್ಲಿ ಮೀನಿಂಗ್ ಕೂಡ ಇದೆ. ಅದರಲ್ಲಿ ಎಷ್ಟು ದೂರದಲ್ಲಿ ಹೋಗುತ್ತಾರೆಂದರೆ ಅದರಲ್ಲಿ 'ಹಾದರ' ಎನ್ನುವುದನ್ನೂ ಕೂಡ ಸೇರಿಸತಕ್ಕಂಥ ಒಂದು ಪ್ರಶ್ನೆ ಇದೆ. ಆದರೆ ಇದಕ್ಕೆ ಏನೂ ಸಂಬಂಧ ಇಲ್ಲ. ಎಂದರೆ ಯಾವುದು ಮಿಸ್ ಕಾಂಡೆಕ್ಟ್ ಎನ್ನುವುದು ಆಯಾಯ ಸಂದರ್ಭ ಮತ್ತು ಘಟನೆಗೆ ಸಂಬಂಧಪಟ್ಟಿದ್ದು. ಈ ಕಾನೂನಿನಲ್ಲೇ ಇರತಕ್ಕಂಥಾದ್ದು ನಾವು ಗ್ರಾಮಪಂಚಾಯಿತಿಗೆ ತಂದಿದ್ದೇವೆ. ಇಲ್ಲಿವರೆಗೂ ಕೂಡ ಯಾವ ಸರ್ಕಾರ ಅಧಿಕಾರ ಮಾಡಿದರೂ ಕೂಡ ಯಾವ ಸದಸ್ಯನೂ ಕೂಡ ಒಂದು ದುರ್ನಡತೆಗಾಗಿ ಆತನನ್ನು ಅನರ್ಹಗೊಳಿಸಿರತಕ್ಕಂಥಾದ್ದು ಇಲ್ಲ.

ಶ್ರೀ ಹೆಚ್.ಎನ್.ನಂಜೇಗೌಡ: ಈಗ ಮಿಸ್ ಕಾಂಡಕ್ಟ್ ಎಂದರೆ misconduct of a legislator ಎಂದರೆ ಇಲ್ಲಿ ಬೇರೆ ಅರ್ಥ ಬರುತ್ತದೆ. ಮಾನ್ಯ ಅಧ್ಯಕ್ಷರೆ, Misconduct of an officer, that is different. ಅದು ಕೆ.ಸಿ.ಎಸ್.ಆರ್.ನಲ್ಲಿ ಬರುತ್ತದೆ. ಅದಕ್ಕೆ ಮಿಸ್ ಕಂಡಕ್ಟ್ ಆಫ್ ಪಂಚಾಯತ್ ಮೆಂಬರ್ಸ್ ಎಂದರೆ ಅಲ್ಲಿ ನಾವು ಸ್ಪೆಸಿಫೈ ಮಾಡಬೇಕಾಗುತ್ತದೆ, ಮಾಡಬಾರದೆಂದು ಅಲ್ಲ. But you have to specify; you can't apply the yardstick of an officer to that of an elected representative ಆದುದರಿಂದ ಅದನ್ನು ಸ್ಪೆಸಿಫೈ ಮಾಡಿದರೆ ಮಾನ್ಯ ಶಿವಪ್ಪನವರು ಒಪ್ಪುತ್ತಾರೆಂದು ಕಾಣತ್ತದೆ, ಇಲ್ಲದಿದ್ದರೆ ಸ್ಕೋಪ್ ಜಾಸ್ತಿಯಾಗುತ್ತದೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ನಾನು ಏನು ಪ್ರಶ್ನೆಯನ್ನು ಹೇಳಿದ್ದೇನೆಂದರೆ ಮಿಸ್ ಕಂಡಕ್ಟ್ ಎನ್ನುವುಂಥಾದ್ದು ದುರ್ನಡತೆ ಎಂದು ನಾವೆಲ್ಲರೂ ಸಾಮಾನ್ಯವಾಗಿ ಗ್ರಹಿಸಿದಂತೆ ಆಗುತ್ತದೆ. ನಾವು ಯಾವುದಕ್ಕೆ ಹೆಚ್ಚು ಹೆಚ್ಚು ಅರ್ಥಗಳನ್ನು

ಕೊಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ, ಅವು ಹೆಚ್ಚು ಹೆಚ್ಚು ದುರುಪಯೋಗದಿಂದ ಅನರ್ಥಕ್ಕೆ ಕಾರಣವಾಗುತ್ತದೆ. ಆದುದರಿಂದ ಯಾವುದನ್ನು ಸಾಮಾನ್ಯ ಮನುಷ್ಯ ತನ್ನ ವಿವೇಕದಿಂದ ಪರಿಭಾವಿಸಿಕೊಳ್ಳುತ್ತಾನೆ. ಯಾವುದು ದುರ್ನಡತೆ ಎಂದು ಕಣ್ಣಿಗೆ ಕಾಣುತ್ತದೆ, ಆ ದುರ್ನಡತೆ ಎನ್ನುವಂಥಾದ್ದು ಈಗಾಗಲೇ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾಪಂಚಾಯತ್ ಸದಸ್ಯರ ದುರ್ನಡತೆಗೆ ಆತನನ್ನು ಅನರ್ಹಗೊಳಿಸಬೇಕೆಂದು ವಿಧಿವಿಧಾನಗಳು ಇದರಲ್ಲಿ ಇದೆ. ಆದರೆ ಪಂಚಾಯತ್‌ರಾಜ್‌ನಲ್ಲಿ ಇದು ಇರಲಿಲ್ಲ, ಈಗ ಮಿಸ್ ಕಂಡಕ್ಟ್ ಎನ್ನುವುದನ್ನು ಗ್ರಾಮಪಂಚಾಯತ್‌ಗೆ ತಂದಿದ್ದೇವೆ. ಆದರೆ ಈ ತಿದ್ದುಪಡಿಯಾಗಿದೆ, ಮತ್ತೆ ಇನ್ನು ಬೇರೆ ಏನೂ ಅಲ್ಲ. ಆದರೆ ಇಲ್ಲಿ ತಾವು ಏನು ಆತಂಕವನ್ನು ವ್ಯಕ್ತ ಮಾಡಿದ್ದೀರಿ. ಇಲ್ಲಿ ನಾವು ಮಿಸ್‌ಕಂಡಕ್ಟ್ ಎನ್ನುವುದನ್ನು ಹೊಸದಾಗಿ ಸೇರಿಸುತ್ತೇವೆಂದು ಹೇಳುತ್ತಿದ್ದಾರೆ.

MR. SPEAKER: Is it specifying conduct or misconduct?

SRI M.P.PRAKASH: Whatever that is already there with regard to the members of higher bodies.

MR. SPEAKER: Conduct is specified. Whatever is not conduct, is misconduct. ನಮಗೆ ಮಾತ್ರ ಏಕೆ ಮಿಸ್ ಕಂಡಕ್ಟ್ ಎಂದು ಸ್ಪೆಸಿಫೈ ಮಾಡುವುದು, ನಿಮಗೂ ಮಾಡಿಕೊಳ್ಳಿ ಎಂದು ಅವರು ಹೇಳಿದರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ನಂಜೇಗೌಡರು ಹೇಳಿದಹಾಗೆ from place to place, body to body, institution to institution it differs ಮಿಸ್ ಕಾಂಡಕ್ಟ್ ಪಂಚಾಯತ್‌ನಲ್ಲಿ ಬೇರೆ ಇರಬಹುದು ಅಥವಾ ಗೌವರ್ನಮೆಂಟ್ ಸರ್ವೆಂಟ್‌ಗೆ ತಮ್ಮ ಸಿ.ಸಿ.ಎ. ರೂಲ್ಸ್ ಪ್ರಕಾರ suppose if he does not behave properly, that is a misconduct. ಎಂದು ಕನ್‌ಸ್ಟ್ರೂ ಮಾಡಬಹುದು ಅಥವಾ ಶಾಸಕರ ಹತ್ತಿರ ಹೋದಾಗ ಕೈಗೂಡಿಸಬೇಕು, ಎದ್ದು ನಿಲ್ಲಬೇಕೆನ್ನುವುದನ್ನು ಒಂದು ಸರ್ಕ್ಯೂಲರ್ ಇಷ್ಯೂ ಮಾಡಿ, ಅವನು ಹಾಗೆ ಮಾಡಲಿಲ್ಲವೆಂದರೆ ನ್ಯಾಚುರಲಿ ನೀವು ಮಿಸ್ ಕಂಡಕ್ಟ್ ಎಂದು ಕನ್‌ಸ್ಟ್ರೂ ಮಾಡಬಹುದು. ಆದರೆ ನೀವು ಕುಳಿತಾಗ ಅಥವಾ ಮಂತ್ರಿಗಳು ಕುಳಿತಾಗ ಯಾರಾದರೂ ಎದ್ದು ನಿಂತಿಲ್ಲವೆಂದು ಅದನ್ನು ಮಿಸ್ ಕಂಡಕ್ಟ್ ಎಂದು ಕನ್‌ಸ್ಟ್ರೂ ಮಾಡಬಾರದು. ಆ ದೃಷ್ಟಿಯಿಂದ ನಾನು ಹೇಳುತ್ತಿರುವಂಥಾದ್ದು, ನೀವು ಸೆಕ್ಷನ್ 43(ಎ)ನಲ್ಲಿ ಡಿಫೈನ್ ಮಾಡಿರುವುದಕ್ಕೆ ಈ ಪ್ರಶ್ನೆ ಬಂದಿದೆಯೇ ಹೊರತಾಗಿ ಮತ್ತೆ ಏನೂ ಅಲ್ಲ.

ಶ್ರೀ ಎಂ.ಪಿ.ಪ್ರಕಾಶ್: ತಾವು ಕಾನೂನನ್ನು ಪಾಸ್ ಮಾಡುವಂತಹ ಸಂದರ್ಭದಲ್ಲಿ ಏನು ಗ್ರಾಮ ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗೆ ಸೇರಿಸಿದ್ದೀರಿ ಹಾಗೂ ಮಿಸ್ ಕಂಡಕ್ಟ್ ಎನ್ನುವಂಥಾದ್ದು ಡಫನೆಷನ್ ಕಾಲಂನಲ್ಲಿ ತಾವು ತಂದಿಲ್ಲ.

ಅಧ್ಯಕ್ಷರು: ನಾನು ಅದನ್ನೇ ಹೇಳುತ್ತಿರುವಂಥದ್ದು ಅವರು ಇಪ್ಪತ್ತು ತಿಂಗಳುಗಳು ಎಂದು ಮಾಡಿದಾಗ ಸುಮಾರು ಊರುಗಳಲ್ಲಿ ಗಲಾಟೆ ಮಾಡಿದರು. ನಮಗೆ ಏಕೆ 20 ತಿಂಗಳುಗಳು ನಿಮಗೆ ಏಕೆ ಇರಬಾರದು ಎಂದು ಕೇಳಿದರು. ಅದಕ್ಕೆ ಮಿಸ್ ಕಂಡಕ್ಟ್ ಬಗ್ಗೆಯೂ ಕೇಳಿಬಿಟ್ಟಾರು ಎಂದು ಹೇಳುವುದು.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ನಾವು ದೊಡ್ಡ ಸ್ಥಾನದಲ್ಲಿದ್ದೇವೆಂದು ಅದಕ್ಕೆ ಅಹಿತವಾಗಿರುತ್ತೇವೆನ್ನುವಂಥದ್ದು ಅದು ಶಾಸನಸಭೆಯಲ್ಲಾಗಲಿ, ಅಥವಾ ಲೋಕಸಭೆಯಲ್ಲಾಗಲಿ ಅದರಲ್ಲೂ ಕೂಡ ಮಿಸ್ ಕಂಡಕ್ಟ್ ಆದರೂ ಅದು ಮಿಸ್ ಕಂಡಕ್ಟೇ ಆಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ತಾವು ಮುಂದಿನದನ್ನು ನೋಡಿ, ಅದು ಏನಿದೆ ಎಂದರೆ "or of any disgraceful conduct or has become incapable of performing his duties as a member"

SRI M.P.PRAKASH: It is already there. Whatever that has been mentioned with regard to taluka panchayat and Zilla panchayat under Section 175 and 130, we have simply repeated it and said that it is applicable to Gram panchayat. ಇದು ಬಹಳ ವಿಸ್ತೃತವಾದಂತಹ ಅರ್ಥ ವ್ಯಾಪ್ತಿಯನ್ನು ಕೊಡುವುದರಿಂದ ಅದನ್ನು ಯಾವುದಾದರೂ ಒಂದು ಕಡೆ ಸೆರೆಹಿಡಿಯುವಂತಹ ಪ್ರಯತ್ನವನ್ನು ಮಾಡಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ: ಹಾಗೆಯೇ ತಾವು ತಾಲ್ಲೂಕು ಪಂಚಾಯತ್‌ನಲ್ಲಿ, ಜಿಲ್ಲಾಪಂಚಾಯತ್‌ನಲ್ಲಿ ಹೇಗೆ ಅನ್ಯಾಯವಾಗುತ್ತದೋ ಹಾಗೆ ಇಲ್ಲೂ ಅನ್ಯಾಯವಾಗುತ್ತದೆಂದು ಹೇಳಿ,

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಈಗ ನಾವು ತಂದಿರುವಂತಹ ಕಾನೂನಿನಂದ ಗ್ರಾಮಪಂಚಾಯತ್‌ಗೆ ಅನ್ಯಾಯವಾಗುತ್ತದೆಂದು ನಾವು ಅದನ್ನೇ ಇಲ್ಲಿ ತಂದಿರುವಂಥಾದ್ದು.

ಶ್ರೀ ಹೆಚ್.ಶಿವಪ್ಪ: ಮಾನ್ಯ ಅಧ್ಯಕ್ಷರೆ, ನಾವು ಹಿಂದಿನ ಕಾನೂನಿನಲ್ಲಿ ತಪ್ಪು ಮಾಡಿದ್ದೇವೆಂಬುದು ಮನವರಿಕೆಯಾವರೆ ಏಕೆ ತಿದ್ದಿಕೊಳ್ಳಬಾರದು? Mere

because it is incorporated in the old Act ತಾಲ್ಲೂಕು ಪಂಚಾಯತ್‌ಗೆ, ಜಿಲ್ಲಾ ಪಂಚಾಯತ್‌ಗೆ ಅಪ್ಲೈ ಮಾಡುವಂಥದ್ದನ್ನು ಮಾಡಿ, ಅದನ್ನೆ ಇಲ್ಲಿ ರಿಫೀಟ್ ಮಾಡುವಂಥಾದ್ದು ಇಲ್ಲಿ ತಪ್ಪು ಎಂದು ಕಂಡು ಹಿಡಿದು ಅದನ್ನೂ ಅಮೆಂಡ್‌ಮೆಂಟ್ ಮಾಡುವ ಪ್ರಸಂಗ ಬರಬಹುದು.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಅದು ತಪ್ಪು ಎಂದು ಸರ್ಕಾರ ಭಾವಿಸಿಲ್ಲ. ಬಹುಶಃ ಎಲ್ಲರೂ ಕೂಡ ತಪ್ಪು ಎಂದು ಭಾವಿಸಿಲ್ಲವೆಂದು ಸರ್ಕಾರ ಭಾವಿಸುತ್ತದೆ. ಆದುದರಿಂದ ಈಗ ತಾವು ಮಿಸ್ ಕಂಡಕ್ಟ್ ಬಗ್ಗೆ ಏನು ಹೇಳಿದ್ದೀರಿ.

MR. SPEAKER: The apprehension is, ಸನ್ಮಾನ್ಯ ಪ್ರಕಾಶರವರೇ, ಈಗ ನಾವು ಡಿ-ಸೆಂಟ್ರಲೈಜೇಷನ್ ಮಾಡುವಂಥದ್ದು ಲೆಜಿಸ್ಲೇಟ್ ಮಾಡುತ್ತಿದ್ದೇವೆ. ಹಿಂದೆ ಮಾನ್ಯ ನಜೀರ್‌ಸಾಬ್‌ರವರು ತಂದಾಗ ಕೂಡ ಶಾಸನಸಭೆಯಲ್ಲಿ ಕೂಡ ಇದೇ ಮಾತನ್ನು ಹೇಳಿದ್ದೇವೆ, ಇದು ತಮಗೂ ನೆನಪು ಇರಬಹುದು. ನಮ್ಮಲ್ಲಿ ಕೇಡರ್ ಬೇಸ್ ಪೊಲಿಟಿಕಲ್ ಪಾರ್ಟೀಸ್ ಇಲ್ಲ, politicised masses ಇಲ್ಲ. ಇನ್ನು ನಾವು ಆ ಫ್ಯೂಡಲ್ ಸಿಸ್ಟಂನಿಂದ ಪೂರ್ಣವಾಗಿ ಹೊರಗೆ ಬಂದಿಲ್ಲ. ನಾವು ಇಷ್ಟೆಲ್ಲಾ ಲ್ಯಾಂಡೆಡ್ ರಿಫಾರ್ಮ್, ಮತ್ತೊಂದು ಎಂದು ತಂದರೂ ಕೂಡ the tentacles of feudal system exists still in a very strong way in the rural life. ಆ ರೀತಿಯ ಆ್ಯಂಬಿಗ್ವಿಟಿ ಇದ್ದರೆ ಅವರಿಗೆ ರಿವೆಂಜ್‌ಫುಲ್ ಆಗಿ ಇದನ್ನು ಉಪಯೋಗ ಮಾಡುವುದಕ್ಕೆ ಅವಕಾಶವಾಗುತ್ತದೆನ್ನುವ ಅಫ್ರೆಹೆನ್ಷನ್ ಇದೆ. That needs to be satisfied. You must understand the things as they are.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಸದನದ ಕಾರ್ಯಕಲಾಪಗಳು ನಡೆಯಬೇಕಾದರೆ ಮಲಗಬಹುದು ಆದರೆ ಗೊರಕೆ ಹೊಡೆಯುವ ಹಾಗೆ ಇಲ್ಲ. ಇಲ್ಲಿ ಮಾನ್ಯ ಪ್ರಕಾಶ್‌ರವರು ಇಷ್ಟು ಜೋರಾಗಿ ಮಾತನಾಡುತ್ತಿದ್ದಾರೆ. ಆದರೆ ಮಾನ್ಯ ಉಪ ಮುಖ್ಯಮಂತ್ರಿಯವರು ನಿದ್ದೇನೆ ಮಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಅವರು ಒಬ್ಬರೇ ನಿದ್ರೆ ಮಾಡುವುದಿಲ್ಲ, ಅನೇಕರು ನಿದ್ರೆ ಮಾಡುತ್ತಾರೆ, ಅವರೊಬ್ಬರನ್ನೇ ಏಕೆ ಹೇಳುವುದು? ಇಲ್ಲಿ ಅನೇಕರು ನಿದ್ರೆ ಮಾಡುತ್ತಾ ಇರುತ್ತಾರೆ, ಆದರೆ ನಾವು ಯಾರನ್ನೂ ಗಮನಿಸುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಈಗ ಅನೇಕ ವಿಷಯಗಳಲ್ಲಿ ಮಾನ್ಯ ಘೋರ್ಪಡೆಯವರು ಹೇಳಿದಂತೆ ಡಿಸ್ಟ್ರಿಕ್ಟ್ ಪ್ಲಾನಿಂಗ್ ಕಮಿಟಿಗಳು ಇದರ ವ್ಯವಸ್ಥೆಯ ಬಗ್ಗೆ ಕಾನೂನಿನಲ್ಲಿ ಇದೆ. ನಾವು ಇನ್ನು ಒಂದು ಉದ್ದೇಶಿತವಾದಂತಹ ತಿದ್ದುಪಡಿ ಕೂಡ ನಮ್ಮ ಮನಸ್ಸಿನಲ್ಲಿತ್ತು, ಅದನ್ನು ತಂದೆವು, ಆದರೆ ಅದಕ್ಕೆ ಒಪ್ಪಿಗೆ ಸಿಗಲಿಲ್ಲ. ಅದು

ಏನೆಂದರೆ ಆಯ್ಕೆಯಾದಂಥವರಿಗೆ ಎರಡು ಮಕ್ಕಳಿಗಿಂತ ಹೆಚ್ಚು ಮಕ್ಕಳು ಇರುವವರು ಅನರ್ಹವೆನ್ನುವಂಥಾದ್ದನ್ನು ತರಬೇಕೆಂದು ಇತ್ತು.

ಅಧ್ಯಕ್ಷರು: ಅದನ್ನು ಮಾಡಿ.

ಶ್ರೀ ವಾಟಾಳ್ ನಾಗರಾಜ್: ಆ ಕೆಲಸ ಮೊದಲು ಆಗಲಿ, ಮೊದಲು ಇಲ್ಲಿ ಮಂತ್ರಿಗಳು ಶಾಸಕರು ಈ ತೀರ್ಮಾನಕ್ಕೆ ಬರಬೇಕು.

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಒಪ್ಪಿಕೊಳ್ಳುತ್ತೇವೆ, ಆದರೆ ಏನೋ ಗ್ರಹಚಾರ ಕೆಟ್ಟು ಒಟ್ಟಿಗೆ ನಾಲ್ಕು ಮಕ್ಕಳು ಹುಟ್ಟಿದರೆ ಏನು ಮಾಡುವುದು can he be disqualified?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಸುರೇಶ್ ಕುಮಾರಣರವರೇ, ಇತ್ತೀಚಿನ ದಿವಗಳಲ್ಲಿ ನಾಲ್ಕು ಮಕ್ಕಳು, ಮೂರು ಮಕ್ಕಳು ಹುಟ್ಟುವುದು ಉಂಟು.

ಶ್ರೀಮತಿ ಪ್ರಮೀಳ ನೇಸರ್ಗಿ: ಒಂದೇ ಸಲಕ್ಕೆ ನಾಲ್ಕು ಮಕ್ಕಳು ಆಗುತ್ತವೆ. ಇಲ್ಲಿ ಡೆಲಿವರಿಯಾಗುವುದು ಲೆಕ್ಕ, ಆದುದರಿಂದ ಡೆಲಿವರಿಯನ್ನು ಎರಡು ಎಂದು ಮಾಡಿ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಎಲ್ಲಾ ಕಾನೂನಿಗೂ ಕೆಲವು ಅಪವಾದಗಳು ಇರುತ್ತದೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕಾಗುತ್ತದೆ.

ಶ್ರೀ ಹೆಚ್.ಎನ್.ನಂಜೇಗೌಡ: ಸದಸ್ಯರಾದ ಶ್ರೀಮತಿ ಪ್ರಮೀಳ ನೇಸರ್ಗಿಯವರು ಲೆಕ್ಕಕ್ಕೆ ಎರಡು ಡೆಲಿವರಿ ಎಂದು ಹೇಳಿದರು. ಈ ಎರಡು ಡೆಲಿವರಿಯಲ್ಲಿ ಮಕ್ಕಳು ಸತ್ತು ಹೋದರೆ ಏನು ಮಾಡುವುದು?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ವಿಶ್ಲೇಷಣೆ ಮಾಡುವುದಕ್ಕೆ ಹೋದರೆ ಬಹಳ ವೈಚಾರಿಕವಾಗಿ ಬರಬೇಕಾಗುತ್ತದೆ. ಆದುದರಿಂದ ಈ ವಿಷಯ ಬೇಡ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಕೆಲವರು ಈ ವಿಚಾರದಲ್ಲಿ ಧಾರ್ಮಿಕ ಅಭಿಪ್ರಾಯಗಳನ್ನು ಇಟ್ಟುಕೊಂಡಿರುತ್ತಾರೆ, ಇಂತವರು ಕುಟುಂಬ ಕಲ್ಯಾಣ ಯೋಜನೆಗೆ ಸೇರ್ಪಡೆಯಾಗುವಂಥಾದ್ದು ತಪ್ಪು ಎಂಬ ಅಭಿಪ್ರಾಯಗಳು ಇರುತ್ತವೆ, ಮತ್ತೆ ಅದು ವಿವಾದ ಆಗಬಹುದು. ಆದರೆ ಆಂಧ್ರಪ್ರದೇಶದಲ್ಲಿ ಇಂತಹ ಕಾನೂನನ್ನು ಜಾರಿಗೆ ತಂದಿದ್ದಾರೆ, ಇದರ ಬಗ್ಗೆ ಕೋರ್ಟ್‌ನಲ್ಲಿ ಯಾರೂ ಪ್ರಶ್ನೆ ಮಾಡಲಿಲ್ಲ. ಆದುದರಿಂದ

ಕೋರ್ಟ್ ಈ ವಿಚಾರದಲ್ಲಿ ನಿರ್ಣಯ ಕೊಟ್ಟಿಲ್ಲ. ಇಂತಹ ವಿಚಾರದಲ್ಲಿ ಸಭೆಯೂ ಸರ್ವಾನುಮತಕ್ಕೆ ಬರುವುದಾದರೆ ನಾವು ಅದನ್ನು ಖಂಡಿತವಾಗಿ ಸ್ವಾಗತ ಮಾಡುತ್ತಿದ್ದೆವು. ಇದನ್ನು ಈಗ ಕೈ ಬಿಟ್ಟಿದ್ದೇವೆ, ಅದನ್ನು ತರಲಿಲ್ಲ. ಆದರೆ ಶೌಚಾಲಯದ ವಿಚಾರದಲ್ಲಿ ನಾವು ಪ್ರಯತ್ನ ಮಾಡಿದ್ದೇವೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಯವರು ''ನಿರ್ಮಲ ಕರ್ನಾಟಕ'' ಎಂದು ಮಹಾತ್ಮ ಗಾಂಧೀಯವರ ಆತ್ಮಚರಿತ್ರೆಯನ್ನು ಎಲ್ಲರಿಗೂ ಕಳುಹಿಸಿಕೊಟ್ಟಿದ್ದಾರೆ. ಅದರಲ್ಲಿ ಅದ್ಭುತವಾದಂತಹ ರೀತಿಯಲ್ಲಿ ಬರೆಯುತ್ತಾರೆ. ಈ ಒಂದು ಕೊಳಕು ವ್ಯವಸ್ಥೆಯಿಂದ ಭಾರತೀಯ ವಿಮೋಚನೆ ಪಡೆಯುವುದಕ್ಕಾಗುವುದಿಲ್ಲವೆಂದು ಬರುತ್ತದೆ, ಸ್ನಾನವೆನ್ನುವುದೊಂದು ಮಾಡುವುದು ಬಿಟ್ಟರೆ ಇಷ್ಟು ಕೊಳಕಾದಂತಹ ವ್ಯವಸ್ಥೆಯಲ್ಲಿ ನಾವೆಲ್ಲರೂ ತಲೆ ತಗ್ಗಿಸುವಂತಹ ವ್ಯವಸ್ಥೆ ಇದೆ ಎನ್ನುವಂತಹ ಮಾತನ್ನು ಅವರು ಪ್ರಸ್ತಾಪ ಮಾಡುತ್ತಾರೆ.

7. 10 ಪಿ.ಎಂ

ಈ ದೃಷ್ಟಿಯಿಂದ ಒಂದು ಒಳ್ಳೆಯ ವಾತಾವರಣವನ್ನು ನಾವು ಸೃಷ್ಟಿ ಮಾಡಬೇಕು, ಒಂದು ಶುಚಿಯಾದಂತಹ ವಾತಾವರಣ ಇದ್ದಾಗ, ಅವನಿಗೆ ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಕೆಲಸ ನಿರ್ವಹಿಸಲಿಕ್ಕೆ ಅನುಕೂಲವಾಗುತ್ತದೆ. ಅದಕ್ಕೊಂದು ಸಾಂಕೇತಿಕ ಎನ್ನುವುದಕ್ಕಿಂತ ಹೆಚ್ಚಾಗಿ ಒತ್ತಡಗಳು ಇರಬೇಕು ಎನ್ನುವ ಕಾರಣಕ್ಕಾಗಿಯೇ ಇದನ್ನು ನಾವು ತಂದಿದ್ದೇವೆ. ಇದರಲ್ಲಿ ನಾವು 1650 ರೂ.ಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟವರ್ಗದವರಿಗೆ ಕೊಡುತ್ತೇವೆ. ಅವರಿಗೆ ಆರ್ಥಿಕವಾಗಿ ಸಂಪನ್ಮೂಲಗಳು ಇರುವುದಿಲ್ಲ, ಅನೇಕ ಕಡೆಗೆ ಅವರಿಗೆ ಜಾಗವೇ ಇರುವುದಿಲ್ಲ ಎನ್ನುವಂತಹ ಪ್ರಶ್ನೆ ಬಂದಿದೆ. ಈಗಾಗಲೇ ನಾವು ಇಂತಹ ಸಂದರ್ಭ ಬಂದಿರತಕ್ಕಂಥವರಿಗೆಲ್ಲಾ ಜಾಗವನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡುತ್ತೇವೆ. ತಿಪ್ಪೇಗುಂಡಿಗಳನ್ನು ರಸ್ತೆ ಬದಿಯಲ್ಲಿ ಹಾಕಿಕೊಂಡಿರತಕ್ಕಂಥವರಿಗೆ ಬೇರೆ ಭೂಮಿಯನ್ನು ಖರೀದಿ ಮಾಡಿ ಅವರಿಗೆ ಕೊಡಬೇಕು ಎನ್ನುವಂಥಾದ್ದರ ಬಗ್ಗೆ ಯೋಚನೆ ಮಾಡುತ್ತೇವೆ. ಈ ರೀತಿ ಯಾರು ಆಯ್ಕೆಯಾಗಿ ಬಂದಿರುತ್ತಾರೆ, ಆಯ್ಕೆಯಾಗುವುದಕ್ಕಿಂತ ಪೂರ್ವದಲ್ಲಿ ಇದು ಅನರ್ಹಗೊಳಿಸತಕ್ಕದ್ದೇನಿಲ್ಲ. ನಾಮ ನಿರ್ದೇಶನ ಮಾಡಿದಂಥ ಸಂದರ್ಭದಲ್ಲೂ ಕೂಡ ಆತನ ನಾಮಪತ್ರವನ್ನು ತಿರಸ್ಕರಿಸುವ ಅಧಿಕಾರ ಇಲ್ಲ. ಯಾರು ಚುನಾಯಿತನಾಗಿರುತ್ತಾನೆ, ಅವನು ಆರು ತಿಂಗಳೊಳಗಾಗಿ ಅದನ್ನು ಕಟ್ಟಿಕೊಳ್ಳಬೇಕು. ಆತ ಶೌಚಾಲಯ ಕಟ್ಟಿಕೊಳ್ಳಬೇಕು ಎಂದು ಹೇಳುವುದರ ಉದ್ದೇಶ ಏನೆಂದರೆ, ಆತ ಒಬ್ಬ ಸಾಮಾಜಿಕ ನಾಯಕನಾಗಿರುತ್ತಾನೆ ತನ್ನ ಗ್ರಾಮ ಪಂಚಾಯಿತಿಯ ಜವಾಬ್ದಾರಿಗಳಲ್ಲ ಅದನ್ನೂ ಕೂಡ ನಾವು ಸೇರಿಸಿರುತ್ತೇವೆ, ಯಾವುದನ್ನು ಗ್ರಾಮ ಪಂಚಾಯಿತಿಯ ಜವಾಬ್ದಾರಿಗಳನ್ನು ನಿರ್ವಹಿಸಬೇಕಾದಂತಹ ಒಬ್ಬ ವ್ಯಕ್ತಿಯೇ ತನ್ನದೇ ಆದಂತಹ ಒಂದು ಶೌಚಾಲಯವನ್ನು ಹೊಂದಲಿಕ್ಕೂ ಕೂಡ ಅವನಿಗೆ ಮನಸ್ಸು ಇಲ್ಲದೇ ಹೋದರೆ, ಆ ಕಾರ್ಯಕ್ರಮವನ್ನು ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸಲಿಕ್ಕೆ ಆತ

ಅಲಕ್ಷ್ಯ ಮಾಡಬಹುದು ಎಂಬ ಕಾರಣಕ್ಕಾಗಿಯೇ ನಾವು ಈ ಕಾನೂನನ್ನು ತಂದಿದ್ದೇವೆ. ಇದು ಒಳ್ಳೆಯ ಕಾನೂನು. ದಯವಿಟ್ಟು ಎಲ್ಲರೂ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೋರುತ್ತೇನೆ.

SRI KAGODU THIMAPPA: If he does not have a sanitary latrine for the use of his family members.... ಅಂದರೆ ನೀವು ಅವನು ನಾಮಿನೇಷನ್ ಫೈಲ್ ಮಾಡಬೇಕಾದರೆ He must have a latrine. ಎಂದು ಮಾಡಿದ್ದೀರಿ. ಎರಡನೆಯ ಪ್ರಾವಿಷನ್ ನೀವೇನು ಮಾಡಿದ್ದೀರಿ ಎಂದರೆ, ಈಗಾಗಲೇ ಮೆಂಬರ್ ಆಗಿರತಕ್ಕವರು ಆರು ತಿಂಗಳೊಳಗಾಗಿ ಶೌಚಾಲಯ ಕಟ್ಟಿಕೊಳ್ಳಬೇಕು, ಆದರೆ ಶೇಕಡ ಅರ್ಧದಷ್ಟು ಜನ....

ಶ್ರೀ ಬಿ.ಎಸ್.ಯಡಿಯೂರಪ್ಪ: ಅನೇಕ ಪಂಚಾಯಿತಿ ಸದಸ್ಯರು ಇವತ್ತು ಮನೆ ಇಲ್ಲದೇ ಇದ್ದಾರೆ. ಮನೆಯೇ ಇಲ್ಲದಿರುವಾಗ ಶೌಚಾಲಯ ಕಟ್ಟಿಕೊಳ್ಳುವುದು ಹೇಗೆ?

ಶ್ರೀ ಎಂ.ಪಿ.ಪ್ರಕಾಶ್: ಅವರು ಆರು ತಿಂಗಳೊಳಗಾಗಿ ಕಟ್ಟಿಕೊಳ್ಳಬೇಕೆಂದು ಮಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ: ಇದು ಆಗುವುದಿಲ್ಲ ಬಿಡಿ.

ಅಧ್ಯಕ್ಷರು: ಲಾಂಗ್ವೇಜ್ ಏನೂ ಅಷ್ಟು ಚೆನ್ನಾಗಿ ಕಾಣುತ್ತಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸೆಕ್ಷನ್ 58(1)(ಎ)ನಲ್ಲಿ ಏನಿದೆ, ಇವೆಲ್ಲಾ ಬೇಕಾಗಿಲ್ಲ. ಬೇಕಾದರೆ ಸಿವಿಲ್ ಅಮಿನಿಟೀಸ್ ಎಂದು ಹೇಳಿ ಏನಾದರೂ ಒಂದು ಡೆಫನೇಷನ್ ಕ್ರಿಯೇಟ್ ಮಾಡಿ If they don't provide civic amenities, ಇಲ್ಲದಿದ್ದರೆ ಆತ ಸದಸ್ಯತ್ವ ಕಳೆದುಕೊಳ್ಳುತ್ತಾನೆ ಎಂದು ಮಾಡಿ. ಅದನ್ನು ಬಿಟ್ಟು ನೀವು ಇಷ್ಟೆಲ್ಲಾ ಹಾಕಿದರೆ ಏನಾಗುತ್ತದೆ ಎಂದರೆ, ಯಾರಿಗೋ ನೀರು ಕೊಟ್ಟಿಲ್ಲ ಎಂದು ಹೇಳಿ ನೀವು ಅವರನ್ನು ತೆಗೆಯುವುದು,.....

ಶ್ರೀ ಎಂ.ಪಿ.ಪ್ರಕಾಶ್: ನೀವು ಹೇಳಿದಂತೆ ಚುನಾವಣೆಗೆ ನಿಲ್ಲುವಂತಹ ಸಂದರ್ಭಗಳಲ್ಲಿ ಚುನಾವಣೆಯಲ್ಲಿ ನಿಲ್ಲಬೇಕಾದ ವ್ಯಕ್ತಿ ಒಂದು ಶೌಚಾಲಯವನ್ನು ಕುಟುಂಬಕ್ಕೆ ಇಟ್ಟುಕೊಳ್ಳಬೇಕು ಎನ್ನುವಂಥಾದ್ದರ ಬಗ್ಗೆ ನಾವು ಒತ್ತಾಯ ಮಾಡುವುದಿಲ್ಲ. ಆದರೆ ಆತ ಚುನಾಯಿತನಾದ ಮೇಲೆ ಕನಿಷ್ಟ ಆರು ತಿಂಗಳೊಳಗಾದರೂ ಆತ ಒಂದು ಶೌಚಾಲಯವನ್ನು ಕಟ್ಟಿಕೊಳ್ಳಬೇಕು ಎಂಬುದಕ್ಕೆ ನಾವು ಒತ್ತಾಯ ಮಾಡುತ್ತೇವೆ. ಈ ಸರ್ಕಾರದಲ್ಲಿ ನಾವು ಅದನ್ನು ಮಾಡಿಯೇ ತೀರಬೇಕಾಗುತ್ತದೆ. ಏಕೆಂದರೆ ಅವರು ಹಳ್ಳಿಯಲ್ಲಿ ಒಂದು ಒಳ್ಳೆಯ ವಾತಾವರಣವನ್ನು ಸೃಷ್ಟಿ ಮಾಡಬೇಕಾಗುತ್ತದೆ....

ಶ್ರೀ ಅರಗ ಜ್ಞಾನೇಂದ್ರ: ಒಂದು ವೇಳೆ ಗ್ರಾಮ ಪಂಚಾಯಿತಿ ಸದಸ್ಯ ಬಾಡಿಗೆ ಮನೆಯಲ್ಲಿ ಇದ್ದರೆ ಏನು ಮಾಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಇದರ ಸಫಲತೆ ಏನು?

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಬಾಡಿಗೆ ಮನೆಯಲ್ಲಿರುವಂತಹವರಿಗೆ ಶೌಚಾಲಯ ಕಟ್ಟಿಕೊಳ್ಳಲಿಕ್ಕೆ ಪ್ರತ್ಯೇಕವಾದಂತಹ ಜಾಗ ಕೊಡಬೇಕು ಎಂಬ ಬಗ್ಗೆಯೂ ಕೂಡ ನಾವು ಯೋಚನೆ ಮಾಡಲಿಕ್ಕೆ ತಯಾರು ಇದ್ದೇವೆ. ಈಗಾಗಲೇ ಇರತಕ್ಕ ಕಾನೂನಿನಡಿ ನಾವು ಅವರಿಗೆ 1650 ರೂ.ಗಳನ್ನು ಕೊಟ್ಟಿದ್ದೇವೆ. ಆತ ಯಾವ ಜಾತಿಯವನೇ ಆಗಿರಬಹುದು, ಯಾವುದೇ ಆರ್ಥಿಕ ಸ್ವಾತಂತ್ರ್ಯ ಆತನಿಗೆ ಇದ್ದರೂ ಕೂಡ ಆತನಿಗೆ 1200 ರೂ.ಗಳ ರಿಯಾಯಿತಿಯನ್ನು ನಾವು ಈಗಾಗಲೇ ಕೊಡುತ್ತಿದ್ದೇವೆ. ಆದ್ದರಿಂದ ಆತ ಒಂದು ಶೌಚಾಲಯವನ್ನು ಕಟ್ಟಿಕೊಂಡೇ ತೀರಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ಸೈಟು ಇಲ್ಲದೇ ಇರುವ ಹಾಗೂ ಮನೆ ಇಲ್ಲದೇ ಇರುವ ಸುಮಾರು 16-18 ಜನ ಸದಸ್ಯರುಗಳು ನನ್ನ ತಾಲ್ಲೂಕಿನಲ್ಲಿದ್ದಾರೆ ಬೇಕಾದರೆ ನಾನು ಅವರ ಹೆಸರುಗಳನ್ನು ಕೊಡುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್: ನಿಮ್ಮ ತಾಲ್ಲೂಕು ಒಂದರಲ್ಲೇ ಏನು, ನಾವು ಮಾಡಿದಂತಹ ಸರ್ವೆ ಪ್ರಕಾರ ಇಡೀ ರಾಜ್ಯದಲ್ಲಿ ಅಂತಹವರು ಸುಮಾರು 11 ಲಕ್ಷ ಜನರಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಮ್ಮ ಬಡವರ ಮನೆಗಳಲ್ಲಿ ಹೊರಗಡೆ ಹೋಗುವುದೇ ಅಭ್ಯಾಸ, ನಮಗೆ ಕಟ್ಟಿಕೊಳ್ಳುವುದು ಇಷ್ಟವಿಲ್ಲ ಎನ್ನುತ್ತಾರೆ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಸಿದ್ಧರಾಮಯ್ಯನವರೇ, ತಮಗೆ ಗೊತ್ತಿದೆ, ನಿಮ್ಮ ನೀರಿನ ವ್ಯವಸ್ಥೆ ಪರಿಣಾಮಕಾರಿಯಾಗಿ ಇಲ್ಲದೇ ಇದ್ದರೆ ಯಾವ ಶೌಚಾಲಯ ನಿಮಗೆ ಅನುಕೂಲವಾಗುತ್ತದೆ? ಸುಮ್ಮನೆ ಶೌಚಾಲಯ ಎಂದು ಹೇಳಿ ಬಿಟ್ಟರೆ ಹೇಗೆ? ಅದಕ್ಕೊಂದು ಬೆಲೆ ಬೇಡವೇ? ಇದು ಹೇಳುವುದಕ್ಕೆ ಚೆನ್ನಾಗಿ ಇರುತ್ತದೆ ಹಾಗೂ ಬಹಳ ಆದರ್ಶವಾಗಿ ಕಾಣುತ್ತದೆ....

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೂ ಕೂಡ ನಾವೆಲ್ಲರೂ ಇಂತಹ ಭಾಷಣ ಪ್ರಿಯರಾಗಿ ಬರೀ ಭಾಷಣವನ್ನು ಮಾಡಿ ಅವರಿಗೆ ತತ್ವವನ್ನು ಬೋಧಿಸಿದ್ದೇವೆ. ಎಲ್ಲೋ ಒಂದು ಕಡೆಗೆ ನಾವು ಒಂದು ಕಡಿವಾಣವನ್ನು ಹಾಕಲೇಬೇಕಾಗುತ್ತದೆ. ನಮ್ಮಲ್ಲಿರತಕ್ಕಂತಹ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಹಿಂದುಳಿದಿರತಕ್ಕಂತಹವರು ಹಳ್ಳಿಗಳಲ್ಲಿರತಕ್ಕಂಥವರು ಶುಚಿಭೂತರಾಗಿ ಇರಬೇಕು

ಎಂದು ನಾವೇಕೆ ಬಯಸುವುದಿಲ್ಲ?...

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಕಾಮನ್ ಶೌಚಾಲಯಗಳಲ್ಲಿ ನೀರಿಲ್ಲ, ದುರ್ವಾಸನೆ ಹತ್ತಿಕೊಂಡು ಜನ ಅಲ್ಲಿ ಹೋಗಲಿಕ್ಕಾಗುತ್ತಿಲ್ಲ. ಬೇಕಾದರೆ ನಿಮಗೆ ಇಂತಹ ನೂರು ಜಾಗಗಳನ್ನು ನಾನು ತೋರಿಸುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಎಲ್ಲರೂ ಶುಚಿಯಾಗಿರಬೇಕು ಎನ್ನತಕ್ಕಂಥ ನಿಮ್ಮ ಉದ್ದೇಶವನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಅವರಿಗೆ ಏನೂ ಇಲ್ಲದೇ ಇರತಕ್ಕಂಥ....

SRI J.C.MADHUSWAMY: Practically it is impossible.

ಶ್ರೀ ಎಂ.ಪಿ.ಪ್ರಕಾಶ್: ದಯಮಾಡಿ ನಾನು ಮಾತನಾಡತಕ್ಕದನ್ನು ಕೇಳಿ. ತಾವು ಹೇಳಬೇಕಾದಂತಹ ವಿಷಯಗಳನ್ನು ತಾವೆಲ್ಲಾ ಹೇಳಿದ್ದೀರಿ. ನಾನು ಹೇಳತಕ್ಕಂಥ ವಿಷಯ ಇಷ್ಟೇ. ಅನೇಕ ಸಂದರ್ಭಗಳಲ್ಲಿ ಸಾಮೂಹಿಕ ಶೌಚಾಲಯಗಳನ್ನು ಕಟ್ಟತಕ್ಕಂಥ ಕಾರ್ಯಕ್ರಮ ಇದೆ. ಅದರಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕವಾದಂತಹ ಶೌಚಾಲಯಗಳನ್ನು ಕಟ್ಟಿರತಕ್ಕಂಥದ್ದೂ ಸಹಾ ಇದೆ. ಆದರೆ ಅಲ್ಲಿ ಕುಡಿಯುವ ನೀರಿನ ಅಭಾವವಿರತಕ್ಕ ಅನೇಕ ಪ್ರದೇಶಗಳಲ್ಲಿ ಸಾಮೂಹಿಕ ಶೌಚಾಲಯಗಳು ದುರ್ನಾತವಾಗಿ ಅವು ಉಪಯೋಗಕ್ಕೆ ಅನರ್ಹವಾಗಿವೆ. ಆ ದೃಷ್ಟಿಯಿಂದ ಕುಟುಂಬ ಶೌಚಾಲಯಗಳನ್ನು ತರಬೇಕೆನ್ನುವಂತಹ ಪರಿಕಲ್ಪನೆಯನ್ನು ತಂದಿದ್ದೇವೆ. ಅದು ಮೊದಲನೆಯ ಹೆಜ್ಜೆ. ಬರೇ ಒಂದು ಶೌಚಾಲಯ ಕಟ್ಟುವುದರಿಂದ ಗ್ರಾಮ ಬಹಳ ಸುಂದರವಾಗಿರುತ್ತದೆ, ಬಹಳ ಶುಚೀಭೂತವಾಗಿರುತ್ತದೆ ಎಂದೇನೂ ಅಲ್ಲ. ನಮ್ಮ ನಡವಳಿಕೆಗಳು, ನಮ್ಮ ಆಚಾರ ವಿಚಾರಗಳು, ನಮ್ಮ ಊಟ ಉಪಚಾರಗಳು, ನಮ್ಮ ಉಡಿಗೆ ತೊಡಿಗೆಗಳು, ಇವೆಲ್ಲವೂ ಕೂಡ ನನ್ನ ಶುಚಿತ್ವಕ್ಕೆ, ಇಡೀ ಸಾಮೂಹಿಕವಾಗಿರತಕ್ಕಂತಹ ಹಳ್ಳಿಯ ಶುಚಿತ್ವಕ್ಕೆ ಅದು ಕಾರಣೀಭೂತವಾಗಿರುತ್ತದೆ. ಶೌಚಾಲಯ ಒಂದು ಪ್ರಥಮ ಹೆಜ್ಜೆ. ಆ ಪ್ರಥಮ ಹೆಜ್ಜೆಯಲ್ಲಿ ನಾವು ಮಾಡಿರತಕ್ಕಂಥದ್ದು ಏನಾಗಿದೆ, ನೀವು ಒಂದು ಕುಟುಂಬ ಶೌಚಾಲಯವನ್ನು ಮಾಡಿಕೊಂಡರೆ, ಆತ ಲಭ್ಯವಾಗಿರುವಂತಹ ನೀರಿನಲ್ಲಿಯೇ ಅದನ್ನು ಉಪಯೋಗಿಸಿಕೊಳ್ಳಬೇಕು. ಗಾಂಧೀಜಿಯವರು ಹೇಳುತ್ತಿದ್ದರು, ಅದನ್ನು ತೆಗೆದುಕೊಂಡು ಹೋಗಿ ಯಾವುದೋ ಒಂದು ಹಗೇವು ಎನ್ನತಕ್ಕಂಥ ಪರಿಕಲ್ಪನೆ ಇರತಕ್ಕಂಥ ಶೌಚಾಲಯಗಳನ್ನು ಕಟ್ಟಿಸಿದ್ದಾರೆ. ಅವರು ಮನುಷ್ಯರ ಅಹಂಕಾರವನ್ನು ಮೊದಲು ತೆಗೆಯಬೇಕು ಎನ್ನುವಂತಹ ಕಾರಣಕ್ಕಾಗಿ ನೀನು ಭಂಗಿಯಾಗಿ ಕೆಲಸ ಮಾಡು ಎಂದು ಹೇಳಿ ಕಾರ್ಯಕರ್ತರಿಗೆ ಆ ಒಂದು ಜವಾಬ್ದಾರಿಯನ್ನು ಕೊಡುತ್ತಿದ್ದರು. ಇವತ್ತು

ನಾವು ಹಳ್ಳಿಗಳಲ್ಲಿ ಇಷ್ಟು ದುರ್ನಾತ ಹೊಡೆಯುತ್ತದೆ ಎಂದು ಹೇಳುತ್ತೇವೆ. ಮತ್ತೆ ಇನ್ನೊಂದು ಕಡೆಗೆ ಹೇಳುತ್ತೇವೆ, ಮಹಿಳೆಯರಿಗೆ ಮಾನವೇ ಇಲ್ಲದಂತಹ ಪರಿಸ್ಥಿತಿ ಉಂಟಾಗಿದೆ. ಎಂದು ಸೂರ್ಯ ಉದಯಕ್ಕಿಂತ ಮುಂಚಿತವಾಗಿ, ಸೂರ್ಯ ಅಸ್ತಂಗತನಾದ ಮೇಲೆ ಅವರು ಆಗ ಹೋಗಬೇಕಾಗಿರುತ್ತದೆ ಅನ್ನುವಂತಹ ಮಾತನ್ನು ಹೇಳುತ್ತೇವೆ. ಈ ರೀತಿ ಆಗಿರತಕ್ಕಂಥದ್ದರಲ್ಲಿ ಒಂದು ಉದಾಹರಣೆಯನ್ನು ನೀಡಬೇಕಾದರೆ,... ಮಹಿಳೆಯರು ತಮ್ಮ ದೇಹಬಾಧೆಯನ್ನು, ಮಲಬಾಧೆಯನ್ನು ಗರ್ಭ ಎಂದು ಹೇಳಿ ಧರಿಸಿಕೊಳ್ಳಬೇಕಾಗಿರುತ್ತದೆ. ಇಡೀ 10- 12 ತಾಸು ಅವರು ಹಾಗೆಯೇ ಇಟ್ಟುಕೊಳ್ಳಬೇಕಾಗಿರುತ್ತದೆ. ಇದು ಎಷ್ಟರಮಟ್ಟಿಗೆ ನಮ್ಮಲ್ಲಿ ಅರ್ಬನ್ ಬಯಾಸ್ಡ್ ಆಗಿದ್ದೇವೆ ಎನ್ನುವುದನ್ನು ಸೂಚಿಸುತ್ತದೆ. ಈ ನಿರ್ಮಲ ಕರ್ನಾಟಕದ ವಿಷಯದಲ್ಲಿ ಒಂದು ಧ್ವನಿ ಸುರುಳಿಯನ್ನು ಮಾಡಿ ಇದಕ್ಕೆ ಸಂಬಂಧಿಸಿರತಕ್ಕದ್ದರ ಬಗ್ಗೆ ಪದ್ಯಗಳನ್ನು, ಕವಿತೆಗಳನ್ನು ಬರೆದು ಕೊಡಿ, ಪ್ರಚಾರಕ್ಕಾಗಿ ಉಪಯೋಗಿಸುತ್ತೇವೆ ಎಂದು ಹೇಳಿ ಇಲ್ಲಿ ಕೆಲವು ಉದ್ದಾಮರಾದಂತಹ ಕೆಲವು ಸಾಹಿತಿಗಳನ್ನು ನಾವು ಬಿನ್ನವಿಸಿಕೊಂಡೆವು; ಸಂಗೀತ ನಿರ್ದೇಶಕರನ್ನು ನಾವು ಬಿನ್ನವಿಸಿಕೊಂಡೆವು. ನಾವು ಒಬ್ಬ ಒಳ್ಳೆಯ ನಿರ್ದೇಶಕರು ಮತ್ತು ಕವಿಗೆ ಈ ಸಂಗೀತವನ್ನು ಬರೆದು ಕೊಡಿ ಎಂದು ಕಳುಹಿಸಿದರೆ, 2- 3 ದಿವಸ ಅವರು ತಿಣುಕಿ, ಇದೇನ್ರಿ ನಮ್ಮ ಅನುಭವಕ್ಕೆ ಬಾರದಂತಹ ವಿಷಯ, ಇದರಲ್ಲಿ ನಾವು ಏನು ಕವಿತೆಯನ್ನು ಬರೆದುಕೊಡಬೇಕು ಎಂದು ಕೇಳಿದರು. ಮೈಸೂರಿನಲ್ಲಿ ದಲಿತ ವರ್ಗಕ್ಕೆ ಸೇರಿದ ಜನಾರ್ಧನ ಎಂಬ ಹುಡುಗನೊಬ್ಬ ಇದ್ದಾನೆ. ಅವನನ್ನು ಜೆನ್ನಿ, ಜೆನ್ನಿ ಎಂದು ಕರೆಯುತ್ತಾರೆ. ಆತ.ಒಬ್ಬ ಅದ್ಭುತವಾದ ಹಾಡುಗಾರ. ಹಾಗೆಯೇ ಪಿಚ್ಚಳ್ಳಿ ನಾಗರಾಜ್ ಎಂದು ಇದ್ದಾರೆ. ಅವರು ಗದ್ದಾರ್ ಗುಂಪಿನಲ್ಲಿದ್ದರು. ಅವರನ್ನು ಕರೆದು ಇದಕ್ಕೊಂದು ಸಂಗೀತ ಮತ್ತು ಸಾಹಿತ್ಯವನ್ನು ಸೃಷ್ಟಿ ಮಾಡಿಕೊಡಿ ಎಂದರೆ ಒಂದೇ ದಿವಸದಲ್ಲಿ ಅದ್ಭುತವಾದ ರೀತಿಯಲ್ಲಿ ಮಾಡಿಕೊಟ್ಟರು. ಇದನ್ನು ಅನುಭವಿಸದೇ ಇರತಕ್ಕಂತಹ ನಾವು ಇವೆಲ್ಲಾ ತಾಂತ್ರಿಕವಾದಂತಹ ಕಾರಣಗಳನ್ನು ಇಡುತ್ತೇವೆ. ಆದರೆ ಇಲ್ಲಿ ಅದರ ಅನುಭವವಾಗಿರತಕ್ಕಂತಹ ವ್ಯಕ್ತಿ ಏನಿದ್ದಾರೆ, ಅವನು ನಿಜವಾಗಿಯೂ ಕೂಡ ಅರಿವನ್ನು ಪಡೆದಿರುವುದಿಲ್ಲ, ರಸ್ತೆಬದಿಯಲ್ಲಿ ನಾನು ಕೂರತಕ್ಕದ್ದು, ಅಶುಚಿತ್ವ ಎಂಬುದು ಅವನಿಗೆ ತಿಳಿದಿಲ್ಲ. ಅವನಿಗೆ ತಿಳುವಳಿಕೆಯನ್ನು ಕೊಡಬೇಕಾಗಿರತಕ್ಕವರು ನಾವು. ಆದರೆ ನಾವು ತಿಳುವಳಿಕೆ ಹೇಳಿಕೊಟ್ಟಿರುವುದು ಹೇಗೆ? ಆ ವಿಚಾರಗಳಿಂದ ಅವರನ್ನು ನಾವು ಅಲ್ಲಿಯೇ ಇಟ್ಟಿದ್ದೇವೆ. ಮೂಗು ಮುಚ್ಚಿಕೊಂಡು ಹೋಗತಕ್ಕದ್ದೇ ನಮ್ಮ ಕರ್ತವ್ಯವೆಂದು ಭಾವಿಸಿಕೊಂಡಿದ್ದೇವೆ. ಆದ್ದರಿಂದ ಅರಿವನ್ನು ಮೂಡಿಸುವಂತಹ ಪ್ರಯತ್ನದಲ್ಲಿ ನಾವು ಒಂದು ಶೌಚಾಲಯವನ್ನು ಕಟ್ಟಿದರೆ, 25 ರೂ.ಗಳನ್ನು ಅರಿವು ಮಾಡಿಸಿದಂತಹ ಒಬ್ಬ ಸ್ವಯಂಸೇವಕನಿಗೆ, ಪ್ರೇರಕನಿಗೆ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದೇವೆ. ಅದೇ ರೀತಿಯಾಗಿ ತಾವು ಹೇಳಿದಂತೆ, ಹೆಣ್ಣುಮಕ್ಕಳಿಗಾಗಿ ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಇಡೀ ಸಾಮೂಹಿಕ ಶೌಚಾಲಯಗಳನ್ನು ಕಟ್ಟುವಂತಹ ಕಾರ್ಯಕ್ರಮ ಈಗಲೂ ಕೂಡ ಇದೆ. ತಾವು ಸಾಮೂಹಿಕ ಶೌಚಾಲಯಗಳನ್ನು ಕಟ್ಟಿಕೊಳ್ಳಬೇಕು. ಆದರೆ ಸಾಮೂಹಿಕ

ಶೌಚಾಲಯಗಳನ್ನು ಕಟ್ಟಿದಾಗ ಅದರ ನಿರ್ವಹಣೆಯ ಜವಾಬ್ದಾರಿಯನ್ನು ಗ್ರಾಮ ಪಂಚಾಯತಿಯವರು ಚೆನ್ನಾಗಿ ಮಾಡಬೇಕು. ಆದರೆ ಈ ಕಾನೂನಿನಲ್ಲಿ ಅದು ಇದ್ದದ್ದರಿಂದ ಈಗ ತಿದ್ದುಪಡಿ ತಂದಿದ್ದೇವೆ, ಯಾವ ಗ್ರಾಮ ಪಂಚಾಯಿತಿಗಳು ಸಾಮೂಹಿಕ ಶೌಚಾಲಯಗಳನ್ನು ಚೆನ್ನಾಗಿ ಇಟ್ಟುಕೊಂಡಿಲ್ಲ, ಅವನ್ನೂ ಕೂಡ ಅನರ್ಹಗೊಳಿಸುತ್ತೇವೆ ಅನ್ನತಕ್ಕಂಥ ಮಾತನ್ನು ಹೇಳಿದ್ದೇವೆ. ಒಂದು ಹೊಸ ವಿಚಾರಗಳು ಬಂದಾಗ ನಾವು ಮತ್ತೆ ಮಡಿವಂತಿಕೆಗೆ ಮಣಿ ಹಾಕತಕ್ಕಂತಹ ಪ್ರಯತ್ನವನ್ನು ಮಾಡಬಾರದು. ಆದರೆ ನೀವು ಹೇಳಿದಂತೆ...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಿಮ್ಮ ವಿಚಾರಕ್ಕೆ ನಾವು ಅಪೋಸ್ ಮಾಡುತ್ತಿಲ್ಲ. ಈ ಕಾರಣದಿಂದಲೇ ಡಿಸ್-ಕ್ವಾಲಿಫಿಕೇಷನ್ ಆಗಬಾರದು ಎಂದು ಹೇಳುತ್ತಿದ್ದೇನೆ. ಏಕೆಂದರೆ ತಮಗೆಲ್ಲಾ ಗೊತ್ತಿದೆ, ಶೇಕಡ 80ರಷ್ಟು ಮೆಂಬರ್....

ಶ್ರೀ ಬಿ.ಎಸ್.ಯಡಿಯೂರಪ್ಪ: ನೀವು ಈ ಕಾನೂನನ್ನು ಜಾರಿಗೆ ತಂದರೆ ನಗೆಪಾಟಲಿಗೆ ಈಡಾಗಬೇಕಾಗುತ್ತದೆ.

ಶ್ರೀ ಎಂ.ಪಿ.ಪ್ರಕಾಶ್: ಅದೇನಾಗುತ್ತದೋ ನೋಡೋಣ. ಹಾಗಾದರೆ ಆಂಧ್ರಪ್ರದೇಶದಲ್ಲಿ ಎರಡು ಮಕ್ಕಳಿಗಿಂತ ಹೆಚ್ಚು ಇರಬಾರದು ಎಂಬ ಕಾನೂನನ್ನು ತಂದಿದ್ದಾರೆ. ಈಗೇನು ಅವರು ನಗೆಪಾಟಲಿಗೆ ಈಡಾಗಿದ್ದಾರೆಯೇ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅದು ಬೇರೆಯೇ ಆಯಿತು.

ಶ್ರೀ ಎಂ.ಪಿ.ಪ್ರಕಾಶ್: ಏತಕ್ಕೆ ಸಂಬಂಧ ಇಲ್ಲ? ಸಂವಿಧಾನದಲ್ಲೇನು ಆ ತರಹದ ಎದೆಗಾರಿಕೆಯನ್ನು ತೋರಿಸಿಲ್ಲವಲ್ಲಾ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಪ್ರಕಾಶ್‌ರವರೇ, ಒಂದು ನಿಮಿಷ ಯೀಲ್ಡ್ ಆಗಿ. ತಮ್ಮ ಸಲಹೆ ತುಂಬಾ ಒಳ್ಳೆಯದಿದೆ, ತಮ್ಮ ಕಲ್ಪನೆ ಸರಿಯಿದೆ, ತಾವು ಹೇಳಿದಂತಹ ವಿಚಾರಗಳು ಸರಿ ಇದೆ. ಇಷ್ಟು ವರ್ಷವಾದರೂ ಈ ಸ್ಥಿತಿಯಲ್ಲಿ ಇಟ್ಟಿದ್ದೇವಲ್ಲಾ ಎಂಬ ನೋವನ್ನು ತಾವು ಹೇಳಿದ್ದೀರಿ. ಗಾಂಧೀಯವರ ವಿಚಾರ ಹೇಳಿದ್ದೀರಿ, ನಾನೇನು ಹೇಳಲಿಕ್ಕೆ ಹೊರಟಿದ್ದೆ ಎಂದರೆ, ನಮ್ಮ ಪಂಚಾಯಿತಿ ಸದಸ್ಯರು ಆಯ್ಕೆಯಾಗಿರುವಂತಹ ಬಹುತೇಕ ಹಳ್ಳಿಗಳಲ್ಲಿ 15 ಅಡಿ ಅಗಲ ಉದ್ದದಲ್ಲಿ ಮನೆ ಏನಿದೆ, ಅದರ ಹಿಂದುಗಡೆ; ಮಾನ್ಯ ಪ್ರಕಾಶ್‌ರವರೇ ನಾನು ನಿಮಗೆ ವಿನಂತಿ, ಮಾಡಿಕೊಳ್ಳುತ್ತೇನೆ, ಅಲ್ಲಿ ಮೂರಡಿ ಜಾಗ ಕೂಡ ಇಲ್ಲ. ಅಲ್ಲಿ ಲ್ಯಾವೆಟರಿ ಕಟ್ಟಿದರೆ ಅಕ್ಕಪಕ್ಕದಲ್ಲಿರುವವರು ವಾಸ ಮಾಡುವುದಕ್ಕೆ ಆಗುವುದಿಲ್ಲ. ಅಲ್ಲಿ ಗುಂಡಿ ಎಲ್ಲಿ ತೆಗೆಯುವುದು? ವಾಸ್ತವಿಕ ಸ್ಥಿತಿಯನ್ನು ತಮಗೆ ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಮಾನ್ಯ ಪ್ರಕಾಶ್‌ರವರು ಧ್ವನಿಸುರುಳಿ

ಬಗ್ಗೆ ಮಾತನಾಡಿದರು, ಸಾಹಿತ್ಯದ ಬಗ್ಗೆ ಮಾತನಾಡಿದರು, ಸಂತೋಷ. ಅವೆಲ್ಲಾ ಕೇಳುವುದಕ್ಕೆ ಸಂತೋಷ ಆಗುತ್ತದೆ. ನೀವು ಈಗ ಹೇಳುತ್ತಿರುವ ವ್ಯವಸ್ಥೆ, ಈ ಕ್ರಿಯೆ ಇದೆಯಲ್ಲಾ ಇದನ್ನು ಮಾಡುವುದು ಬಹಳ ಕಷ್ಟ. ಇದನ್ನು ನೀವು ಹೇಳುವಾಗಲೇ ಒಂದು ರೀತಿಯ ವಾಸನೆ ಬರುತ್ತದೆ. ಇನ್ನು ಅದನ್ನು ತೊಳೆಯುವುದು ಯಾವಾಗ? ನೀವು ಹೇಳುತ್ತಿರುವ ಪದಗಳು, ಆ ವ್ಯವಸ್ಥೆ ಬಗ್ಗೆ ಏನು ಹೇಳುತ್ತಿದ್ದೀರಿ, ಅದರ ಬಗ್ಗೆ ಈಗಲೇ ನಮಗೆ ವಾಸನೆ ಬರುತ್ತಿದೆ. ಈ ಸಂದರ್ಭದಲ್ಲಿ ಧೀಮಂತ ನಾಯಕರಾದ ಶ್ರೀಮಾನ್ ಬಸವಲಿಂಗಪ್ಪನವರನ್ನು ಇವತ್ತಿನ ದಿವಸ ನಾವು ನೆನೆದುಕೊಳ್ಳಬೇಕಾಗುತ್ತದೆ. ಅವರು ಮಲ ಹೊರುವಂಥ ಒಂದು ಪದ್ಧತಿಯನ್ನು ನಿಲ್ಲಿಸಿದಂಥ ಮಹಾನ್ ವ್ಯಕ್ತಿಯಾಗಿದ್ದಾರೆ. ಇದು ಒಂದು ಹಂತ. ಆದರೆ ತಾವು ಇವತ್ತು ಏನು ಹೇಳುತ್ತಿದ್ದೀರಿ ಅದರ ಉದ್ದೇಶ ಬಹಳ ಚೆನ್ನಾಗಿ ಇದೆ. ಅದನ್ನು ನಾನು ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಇದನ್ನು ಕಾರ್ಯಗತ ಮಾಡಬೇಕಾದರೆ ತಾವು ಸ್ವಲ್ಪ ಸರ್ಕಾರದ ಕಡೆಯಿಂದ ಚಿಂತನೆ ಮಾಡಬೇಕಾಗುತ್ತದೆ. ಧ್ವನಿಸುರುಳಿಯಿಂದ, ಸಾಹಿತ್ಯದಿಂದ ಸಂಗೀತ ಹಾಡುವುದರಿಂದ ಇದು ಆಗುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ನಾನು ಹೇಳಿದ್ದು ಏನೆಂದರೆ, ಧ್ವನಿಸುರುಳಿಯನ್ನು ಮಾಡಲಿಕ್ಕೆ ನಮ್ಮಲ್ಲಿ ಒಬ್ಬರಿಗೆ ಕೊಟ್ಟಾಗ ಅದನ್ನು ಅವರಿಂದ ಮಾಡಲಿಕ್ಕೆ ಆಗಲಿಲ್ಲ. ಆದರೆ ನೋವನ್ನು ಅನುಭವಿಸಿದಂಥ ಜನಾಂಗದವರ ಪೈಕಿ ಒಬ್ಬನ ಕೈಗೆ ಕೊಟ್ಟಾಗ ಅವರು ಕೂಡಲೇ ಧ್ವನಿಸುರುಳಿಯನ್ನು ಮಾಡಿಕೊಟ್ಟರು, ಎಂದು ನನ್ನ ವಾದ. ಸಂಗೀತ ಕೇಳುವುದಕ್ಕೆ ಸುಂದರ ಎನ್ನುವ ಪ್ರಶ್ನೆಗಿಂತ ಹೆಚ್ಚಾಗಿ ಆ ನೋವನ್ನು ಅನುಭವಿಸಿದವರಿಗೆ ಬೇಗ ಅರ್ಥವಾಗುತ್ತದೆ ಎಂಬುದಾಗಿ ಹೇಳಿದೆ. ಇನ್ನು ಮಾನ್ಯ ವಾಟಾಳ್ ನಾಗರಾಜ್ ರವರು ಒಂದು ವಿಷಯವನ್ನು ಇಲ್ಲಿ ಜ್ಞಾಪಕ ಮಾಡಿದ್ದು ಒಳ್ಳೆಯದಾಯಿತು. ಮಾನ್ಯ ಬಸವಲಿಂಗಪ್ಪನವರು ಇಂಥ ಒಂದು ಕ್ರಾಂತಿಕಾರಕ ಬದಲಾವಣೆಯನ್ನು ತಂದಾಗ ಎಷ್ಟು ವಿವಾದಗಳು ನಡೆದವು? ಜಾಡಮಾಲಿಗಳನ್ನು ತೆಗೆಯದೇ ಹೋಗಿದ್ದರೆ ಏನು ಕಷ್ಟ ಎಂದು ಹೇಳಿ ಎಷ್ಟು ಪತ್ರಿಕೆಗಳಲ್ಲಿ ಟೀಕೆಟಿಪ್ಪಣಿಗಳು ಬಂದವು, ಎಂಬುದನ್ನು ಎಲ್ಲರೂ ಗಮನಿಸಿರಬಹುದು. ಕುವೆಂಪುರವರು 'ಜಗದ ಜಲಗಾರ ನಾನು' ಎಂಬ ಶಿವನ ಮೂಲಕ ಹೇಳಿಸಿದರು. ಆತನನ್ನು ಜಲಗಾರನನ್ನಾಗಿ ಮಾಡಿದರು. ಅವನನ್ನು ಜಲಗಾರನನ್ನಾಗಿ ಮಾಡತಕ್ಕಂಥದ್ದು ಎಂದರೆ ನೀವೆಲ್ಲಾ ಜಲಗಾರರಾಗಿ, ನಮ್ಮ ಸಮಾಜದಲ್ಲಿ ಇರತಕ್ಕಂಥವರಿಗೇ ಇದು ಮೀಸಲಾತಿ ಅಲ್ಲ ಎನ್ನತಕ್ಕಂಥ ಮಾತನ್ನು ಮಾನ್ಯ ಬಸವಲಿಂಗಪ್ಪನವರು ಹೇಳಿದರು. ಅವರು ಬರೀ ಅಷ್ಟೇ ಹೇಳಿ ಅಲ್ಲಿಗೆ ನಿಲ್ಲಿಸಲಿಲ್ಲ. ನಾವು ಇಲ್ಲಿ ಸಂಸ್ಕೃತಭೂಯಿಷ್ಠವಾಗಿ ಮಲ, ಅಮೇಧ್ಯ ಎನ್ನತಕ್ಕಂಥದ್ದನ್ನು ಬಳಸುತ್ತೇವೆ. ಹೇಲು, ಉಚ್ಚೆ ಎಂದು ಹೇಳಿದರೆ ನಿಮಗೆ ನಿಜವಾಗಿ ವಾಸನೆ ಹೊಡೆಯುತ್ತದೆಯಾ ಎಂದು ಹೇಳಿದರು. ಆ ರೀತಿ ಈ ಸಾಮಾಜಿಕ ವ್ಯವಸ್ಥೆಯಲ್ಲಿ ವಾಕ್ಯ ಪದಪ್ರಯೋಗಗಳಲ್ಲಿಯೂ ಕೂಡ ನಾವು ಇಂತಹ

ಮಡಿವಂತಿಕೆಯಿಂದ ಮಾತನಾಡುತ್ತೇವೆ. ಯಾವುದು ಅಸಹ್ಯ ಎಂದು ಹೇಳಿ ನಮ್ಮ ಭಾಷೆಯಲ್ಲಿ ನಾವು ಭಾವಿಸಿಕೊಂಡಿರುತ್ತೇವೆ ಅದನ್ನು ಇಂಗ್ಲೀಷ್‌ನಲ್ಲಿ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅಥವಾ ಸಂಸ್ಕೃತದಲ್ಲಿ ಹೇಳುವ ಪ್ರಯತ್ನವನ್ನು ಮಾಡುತ್ತೇವೆ. ಆದ್ದರಿಂದ ಇಂತಹ ವಿಚಾರಗಳ ಬಗ್ಗೆ ಒಂದು ಕ್ರಾಂತಿಕಾರಕವಾದಂಥ ನಿಲುವನ್ನು ತೆಗದುಕೊಳ್ಳಬೇಕಾಗುತ್ತದೆ...

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ): ಮಾನ್ಯ ಅಧ್ಯಕ್ಷರೆ, ಈಗ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಬಿಲ್‌ಗೆ ಸಂಬಂಧಪಟ್ಟ ಹಾಗೆ ಸರ್ಕಾರದ ಉದ್ದೇಶ ನಮಗೂ ಕೂಡ ಅರ್ಥ ಆಗಿದೆ. ಅರ್ಥ ಆಗಿಲ್ಲವೆಂದು ಹೇಳುವುದಿಲ್ಲ. ಈ ವ್ಯವಸ್ಥೆ ಜಾರಿಗೆ ಬರಬೇಕು ಮತ್ತು ಪ್ರತಿಯೊಬ್ಬರೂ ಕೂಡ ಇಂಥ ಒಂದು ವ್ಯವಸ್ಥೆಯಲ್ಲಿ ಭಾಗವಹಿಸಬೇಕು ಎಂತಲೂ ಉದ್ದೇಶ ಇದೆ. ಈಗ ಒಬ್ಬ ಸದಸ್ಯನಾಗಬೇಕಾದರೆ ಅಥವಾ ಈಗ ಆಗಿದ್ದರೆ ಅವನು ಒಂದು ಶೌಚಾಲಯವನ್ನು ಹೊಂದಿರಬೇಕು ಎನ್ನುವ ಉದ್ದೇಶದಿಂದ ಇದನ್ನು ಮಾಡುತ್ತಿದ್ದೀರಿ. ಆತನಿಗೆ ಶೌಚಾಲಯ ಇಲ್ಲದಿದ್ದರೆ ಅವನು ಸದಸ್ಯತ್ವದಿಂದ ಅನರ್ಹನಾಗುತ್ತಾನೆ ಅದಕ್ಕಿಂತ ಪ್ರಬಲವಾಗಿ, ಈಗ ನಾವು ಸರ್ಕಾರದ ಮುಖಾಂತರ ಅನೇಕ ಸೌಲಭ್ಯಗಳನ್ನು ಕೊಡುತ್ತೇವೆ. ಅದು ಐ.ಆರ್.ಡಿ.ಪಿ.ಲೋನ್ ಆಗಿರಬಹುದು, ಸೈಟ್, ಮನೆ ಅಥವಾ ಇನ್ನಿತರ ಯಾವುದೇ ಆಗಿರಬಹುದು. ಇಂಥ ಶೌಚಾಲಯವನ್ನು ನೀನು ಪಡೆದರೆ ಸಾಲ ಸೌಲಭ್ಯ ಕೊಡುತ್ತೇವೆಂದು ಅಂಥದ್ದನ್ನು ಮಾಡಿ. ಆಗ ಇಡೀ ಕುಟುಂಬವೇ ಆ ಕಡೆಗೆ ಒಲಿಯುತ್ತದೆ. ಈಗ ಈ ವಿಧೇಯಕವನ್ನು ತರುತ್ತಿರುವುದರಿಂದ ಒಬ್ಬನನ್ನು ನೀವು ಡಿಸ್‌ಕ್ವಾಲಿಫೈ ಮಾಡುತ್ತೀರಿ, ಒಬ್ಬನನ್ನು ಅನೂರ್ಜಿತಗೊಳಿಸುತ್ತೀರಿ. ಅವನ ಮೇಲೆ ಒಂದು ಪರಿಣಾಮವಾಗುತ್ತದೆ. ಈಗ ಬಕರ್‌ಹುಕುಂ ಸಾಗುವಳಿ ಜಮೀನು ಕೊಡುವಾಗ, ಅವನಿಗೆ ಸಾಗುವಳಿ ಚೀಟಿ ಕೊಡಬೇಕಾದರೆ-'ನೀನು ಕಡ್ಡಾಯವಾಗಿ ಶೌಚಾಲಯವನ್ನು ಕಟ್ಟಿಕೊಳ್ಳಬೇಕೆಂದು' ಹೇಳಿ. ಆವಾಗ ಇಡೀ ಕುಟುಂಬದ ಮೇಲೆ ಪರಿಣಾಮವಾಗುತ್ತದೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಸಲಹೆಯನ್ನು ಕೊಟ್ಟಿದ್ದಾರೆ ಅದು ಸ್ವಾಗತಾರ್ಹವಾದುದಾಗಿದೆ. ಅದನ್ನೂ ಕೂಡ ಹಂತಹಂತವಾಗಿ ಮಾಡತಕ್ಕಂಥದ್ದೇ ಆಗಿದೆ. ಐ.ಆರ್.ಡಿ.ಪಿ. ಸಾಲವನ್ನು ಎಲ್ಲರಿಗೂ ಕೊಡುತ್ತೇವೆಂದರೆ ಅಲ್ಲೂ ಕೂಡ ಸಂಪನ್ಮೂಲದ ಕೊರತೆ ಇರುತ್ತದೆ. ತಾವು ಏನು ಒಂದು ಆತಂಕವನ್ನು ವ್ಯಕ್ತಮಾಡಿದ್ದೀರಿ, ಅನೇಕ ಜನಗಳಿಗೆ ಗುಡಿಸಲೇ ಇರುತ್ತದೆ. ಯಾರದ್ದೋ ಗೌಡರ ಮನೆಯ ಜಾಗಕ್ಕೆ ಅವರು ಗುಡಿಸಲುಗಳನ್ನು ಹಾಕಿಕೊಂಡಿರುತ್ತಾರೆ. ಇಂಥವರಿಗಾಗಿ ಮಾಡುವುದಾದರೆ ನಾನು ಇನ್ನೂ ಮುಂದಕ್ಕೆ ಹೋಗಿ ನಾನು ಈ ಸದನದಲ್ಲಿ ಭರವಸೆ ಕೊಡುತ್ತೇನೆ. ಮತ್ತು ಇದನ್ನು ರೆಡಿ ಮಾಡುತ್ತೇನೆ. ಆದ್ದರಿಂದ ದಯವಿಟ್ಟು ಇದಕ್ಕೆ ತಾವು ಒಪ್ಪಿಗೆ ಕೊಡಿ. ಯಾರು ಈ ರೀತಿಯಾಗಿ ಆರ್ಥಿಕ ಅಸಮಾನತೆ ಇರತಕ್ಕಂಥ ಸದಸ್ಯರು ಯಾರು ಇರುತ್ತಾರೆ ಅವರಿಗೆ ಶೌಚಾಲಯ ಕಟ್ಟಲಿಕ್ಕೆ ನಾವು ಹಳ್ಳಿಗಳಲ್ಲಿ ಜಾಗ

ಮತ್ತು ಆ ಶೌಚಾಲಯವನ್ನು ಕಟ್ಟಿಕೊಳ್ಳಲಿಕ್ಕೆ 1650 ರೂಪಾಯಿಗಳನ್ನು ಸರ್ಕಾರದಿಂದ ಕೊಡುತ್ತೇವೆ ಬೇರೆಯವರಿಗೆ ಶೌಚಾಲಯ ಕಟ್ಟಿಕೊಳ್ಳುವುದಕ್ಕೆ 1200 ರೂಪಾಯಿ ಕೊಡುತ್ತಿದ್ದೇವೆ. ಜಾಗವಿಲ್ಲದಿದ್ದರೆ ಬೇರೆ ಜಾಗದಲ್ಲಿ ನಾವು ಕಟ್ಟಿಕೊಡುತ್ತೇವೆ. ಆತನಿಗೆ ಶೌಚಾಲಯ ಕಟ್ಟುವುದಕ್ಕಾಗಿಯೇ ನಾವು ಜಾಗವನ್ನು ಕೊಡುತ್ತೇವೆ. ಆತನಿಗೆ ರಸ್ತೆ ಬದಿಯಲ್ಲಿ ಸರ್ಕಾರಿ ಜಾಗವನ್ನು ಅಕ್ವೆಯರ್ ಮಾಡಿ ಆತನಿಗೆ 5:8 ಅಡಿ ಜಾಗವನ್ನು ಶೌಚಾಲಯ ಕಟ್ಟಿಕೊಳ್ಳುವುದಕ್ಕೆ ಕೊಡುತ್ತೇವೆ.

(ಗೊಂದಲ)

ಶ್ರೀ ವಾಟಾಳ್‌ನಾಜರಾಜ್: ಈಗ ಶೌಚಾಲಯಕ್ಕೆ ರಸ್ತೆ ಬದಿಯಲ್ಲಿ ಹೋಗುವುದೇ ಸೌಖ್ಯ. ಸರ್ಕಾರ ಮನೆಯ ಹತ್ತಿರ ಒಂದು ಶೌಚಾಲಯವನ್ನು ಕಟ್ಟಿಕೊಟ್ಟು ಅದಕ್ಕೆ ನೀರು ಇಲ್ಲದೆ ಕುಲಗೆಟ್ಟು ಹೋಗಿ ವಾಸನೆ ತಡೆಯಲಾರದೆ ಅಕ್ಕಪಕ್ಕದವರು ಏನು ಆಗಬೇಕೆಂದು ತಾವು ಮಾಡಿದ್ದೀರಿ? ಇದು ಒಳ್ಳೆಯದಲ್ಲ. ಖಂಡಿತಾ ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳಿ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ನಾವು ಇಲ್ಲಿ ಮಾತನಾಡುತ್ತಿರುವಂಥದ್ದು ಒಂದು ಕಾನೂನಿನ ಬಗ್ಗೆ. ಈ ಕಾನೂನಿನಿಂದ ನಾಳೆ ಏನಾದರೂ ಸಮಸ್ಯೆಗಳು ಉದ್ಭವಿಸಿದರೆ....

ಅಧ್ಯಕ್ಷರು: ಒಂದ್ನಿಮಿಷ, ಅರಗ ಜ್ಞಾನೇಂದ್ರರವರೇ, ದಯಮಾಡಿ ಈಗ ಇದರ ಬಗ್ಗೆ ಹೇಳಿದ್ದು ಸಾಕು. ಎಲ್ಲರೂ ಇದರ ಬಗ್ಗೆ ಬಹಳ ಚರ್ಚೆ ಮಾಡಿದಿರಿ. 7 ಗಂಟೆಗೆ ಹೋಗಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ನಮ್ಮ ರೈತ ಶಾಸಕರು ಯಾರು ಇದ್ದಾರೆ ಅವರದೊಂದು ಸಭೆಯನ್ನು 3ನೇ ಮಹಡಿಯಲ್ಲಿ ನಾವು ಕರೆದಿದ್ದೆವು. ಇದನ್ನು ಎಷ್ಟು ಬೇಗ ಮುಗಿಸುತ್ತೇವೆಯೋ ಅಷ್ಟು ಒಳ್ಳೆಯದು.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಸದಸ್ಯರುಗಳ ಸಲಹೆಯನ್ನು ಗಮನದಲ್ಲಿಟ್ಟುಕೊಂಡಿದ್ದೇವೆ. ದಯಮಾಡಿ ಈ ವಿಧೇಯಕಕ್ಕೆ ಒಪ್ಪಿಗೆ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸದಸ್ಯರುಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಈ ವಿಧೇಯಕದಲ್ಲಿ ಗ್ರಾಮ ಪಂಚಾಯತಿಯ ನೌಕರರ ಬಗ್ಗೆ ಏನೂ ಹೇಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಈ ವಿಧೇಯಕದಲ್ಲಿರುವ ಎರಡು

ವಿಚಾರಗಳನ್ನು ಸರ್ಕಾರ ಹಿಂತೆಗೆದುಕೊಳ್ಳಲಿಲ್ಲ. ಒಬ್ಬ ಸದಸ್ಯನಾಗಬೇಕಾದರೆ ಅವನಿಗೆ ಒಂದು ಶೌಚಾಲಯ ಇರಬೇಕೆಂದು ಸರ್ಕಾರ ಏನು ಹೇಳಿದೆ ಅದನ್ನು ಹಿಂತೆಗೆದುಕೊಂಡಿಲ್ಲ. ಮತ್ತು 'ದುರ್ನಡೆಗಾಗಿ ಸದಸ್ಯರುಗಳನ್ನು ತೆಗೆದುಹಾಕುವುದು' ಎನ್ನುವುದರ ಬಗ್ಗೆ ಸರ್ಕಾರ ಸ್ಪಷ್ಟವಾಗಿ ಹೇಳಲಿಲ್ಲ. ಆದ್ದರಿಂದ ಅದನ್ನು ನಾನು ವಿರೋಧ ಮಾಡಿ ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ವಾಟಾಳ್‌ಪಕ್ಷದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಮತ್ತು

(ಶ್ರೀ ಬಿ.ಎಸ್. ಯಡಿಯೂರಪ್ಪನವರ ನೇತೃತ್ವದಲ್ಲಿ ಬಿ.ಜೆ.ಪಿ.ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಗ್ರಾಮಪಂಚಾಯತಿಯ ನೌಕರರ ಬಗ್ಗೆ ನಾವು ಪ್ರಾಸ್ತಪ ಮಾಡಿದೆವು, ಆದರೆ ಅದರ ಬಗ್ಗೆ ಸರ್ಕಾರ ಏನೂ ಹೇಳಲಿಲ್ಲ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ನಾನು ಒಂದು ವಿಚಾರ ಹೇಳುತ್ತೇನೆ. ನಮ್ಮಲ್ಲಿ ಹಟ್ಟಿಕುಣಿ ಎನ್ನುವ ಗ್ರಾಮ ಇದೆ. ಅಲ್ಲಿ ಒಂದು ಎಕರೆ ಭೂಮಿಗೆ 2 ಲಕ್ಷ ರೂಪಾಯಿ ಅಲ್ಲಿ ಇದೆ. ಕೊನೆಗೆ ಸರ್ಕಾರ ಮಾಕ್ಸಿಮಮ್ ಹಣ ಕೊಡತಕ್ಕಂಥದ್ದು ಎಷ್ಟು ಎಂದರೆ 40 ಸಾವಿರ ರೂ. ಒಂದು ಎಕರೆಗೆ ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೇ, ತಾವು ಬೇಕಾದರೆ ಇದರ ಡೀಟೈಲ್ಸ್‌ನ್ನು ತರಿಸಿಕೊಂಡು ನೋಡಿ. ಬಹುಶಃ ವಸತಿ ಸಚಿವರಾದ ಮಾನ್ಯ ರೇವಣ್ಣನವರು ಇಲ್ಲಿಯೇ ಸದನದಲ್ಲಿ ಇರಬಹುದು. ಕೊನೆಗೆ ನಾನು ಕಾಂಟ್ರಿಬ್ಯೂಷನ್ಸ್ ಮಾಡಿಸಿ ಎರಡು ಎಕರೆ ಜಾಗ ತೆಗೆದುಕೊಳ್ಳಬೇಕಾದರೆ 40 ಸಾವಿರ ಅವರ ಕೈಲಿ ಕೊಡಿಸಿ 20'X 30' ಸೈಟ್ಸ್ ಕೊಡಿಸಿದೆವು. ಅಂಥ ಕಡೆ ಅದರೊಳಗೆ 7 ಜನ ಮೆಂಬರ್ಸ್ ಇರುತ್ತಾರೆ.... ಮಾನ್ಯ ಪ್ರಕಾಶ್‌ರವರೇ, ತಾವು ಯೋಚನೆ ಮಾಡಿ, ನಾನು ಅದು ಬೇಡ ಎಂದು ಹೇಳುವುದಿಲ್ಲ. ನೀವು ಸುಮ್ಮಸುಮ್ಮನೆ ಏನೂ ಇಲ್ಲದೆ... ಸ್ಯಾನಿಟರಿ ಮಾಡಿಸುವುದಕ್ಕೆ ನಾವು ವಿರೋಧ ಇದ್ದೇವೆಯೇ?

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ಯಾವುದೇ ಒಂದು ಕಾನೂನನ್ನು ತಂದರೂ ಸಹ ಸ್ವಲ್ಪ ಭಾಗದ ಜನರಿಗೆ ಅನಾನುಕೂಲ ಆಗಿಯೇ ಆಗುತ್ತದೆ. ಎಲ್ಲರಿಗೂ ಕೂಡ ಅನುಕೂಲವಾಗುವಂಥ ಕಾನೂನನ್ನು ತರುವುದಕ್ಕೆ ಯಾರಿಂದಲೂ ಸಹ ಸಾಧ್ಯವಾಗುವುಲ್ಲ. ಅಂಥ ಕಾನೂನನ್ನು ಮಾಡಲಿಕ್ಕೆ ಸಾಧ್ಯವಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದನ್ನು ಹೊರಗಿನಿಂದ ಯಾರೋ ಬಂದು ಮಾಡುವುದಿಲ್ಲ. ಇದನ್ನು ನಾವಾಗಿ ಮಾಡುವುದು...

ಶ್ರೀ ಸಿ.ಬೈರೇಗೌಡ: ಎಲ್ಲರಿಗೂ ಅನುಕೂಲವಾಗುವಂಥ ಕಾನೂನನ್ನು ಮಾಡುವುದಕ್ಕೆ ಯಾರಿಂದಲೂ ಸಹ ಸಾಧ್ಯವಿಲ್ಲ. ಸ್ವಲ್ಪಮಟ್ಟಿಗೆ ಕೆಲವು ಜನರಿಗೆ ಅನಾನುಕೂಲವಾಗುತ್ತದೆ. ಆದರೆ ಒಟ್ಟಾರೆ ಇದು ಏನು ಬದಲಾವಣೆ ಮಾಡುತ್ತದೆ ಎನ್ನುವುದನ್ನು ತಾವು ಯೋಚನೆ ಮಾಡಬೇಕು.

(ಗೊಂದಲ)

ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ): ಮಾನ್ಯ ಅಧ್ಯಕ್ಷರೆ, ಒಂದು ಮಾತನ್ನು ನಾನು ಹೇಳಿಬಿಡುತ್ತೇನೆ. ನಮ್ಮ ಪಾರ್ಟಿಯವರು ವಾಕ್‌ಔಟ್ ಮಾಡಿದ್ದಾರೆ ನಾನೂ ಕೂಡ ಈಗ ಹೋಗಬೇಕು. ನಾನು 1967ನೇ ಇಸವಿಯಲ್ಲಿ ಈ ಸಭೆಗೆ ಶಾಸಕನಾಗಿ ಬಂದೆ. 1972ರಲ್ಲಿ ನಾನು ಮಂತ್ರಿಯಾದೆ. ಹಳ್ಳಿಯಲ್ಲಿ ನನ್ನ ಮನೆಯಲ್ಲಿ 1974ನೇ ಇಸವಿಯಲ್ಲಿ ನಾನು ಶೌಚಾಲಯ(ಕಕ್ಕಸು)ವನ್ನು ಮಾಡಿಸಿದೆ. ಬಹುಶಃ ಈ ಸಭೆಯಲ್ಲಿ ಇರತಕ್ಕಂಥ ಯಾರಾದರೂ ಸದಸ್ಯರ ಮನೆಯಲ್ಲೂ ಸಹ ಕಕ್ಕಸು ಮನೆ ಇಲ್ಲದೇ ಇದ್ದರೆ ಅದಕ್ಕೆ ನಾನು ಆಶ್ಚರ್ಯಪಡುವುದಿಲ್ಲ. ಆ ತರಹದ ವಾತಾವರಣ, ಪರಿಸರ ಇರುತ್ತದೆ. ನಾವೆಲ್ಲಾ ಮಲಮೂತ್ರ ಮಾಡುವುದಕ್ಕೆ ಹೊಲಕ್ಕೆ ಹೋಗುತ್ತಿದ್ದೆವು. ಅದು ಈಗ ಬೇಡ. ಈಗ ಇನ್ಸೆಂಟೀವ್ ಕೊಡಿ. ಇದು ಒಂದು ಮೂವ್‌ಮೆಂಟ್ ಆಗಲಿ. ಕಾನೂನು ಮಾಡಿ ಸದಸ್ಯರಿಗೆ ಡಿಸ್‌ಕ್ವಾಲಿಫಿಕೇಷನ್ ತರುವಂಥದ್ದು ಸೂಕ್ತ ಅಲ್ಲ. ದಯವಿಟ್ಟು ಇದನ್ನು ಮಾಡಬೇಕೆಂದು ವಿನಂತಿಸಿಕೊಂಡು ನಾನು ಹೊರಗಡೆ ಹೋಗುತ್ತೇನೆ.

(ಈ ಹಂತದಲ್ಲಿ ಬಿಜೆಪಿ ಸದಸ್ಯರಾದ ಶ್ರೀ ಹೆಚ್.ಎನ್.ನಂಜೇಗೌಡರು ಸದನದಿಂದ ನಿರ್ಗಮಿಸಿದರು)

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ನಾಯಕರು ಈಗಾಗಲೇ ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಚುನಾವಣೆಗೆ ನಾಮನಿರ್ದೇಶನ ಪತ್ರ ಹಾಕುವಾಗ ಆತ ಶೌಚಾಲಯ ಹೊಂದಿರಬೇಕು ಎನ್ನುವುದು ಏನಿದೆ ಅದನ್ನು ನಾನು ತೆಗೆಯುತ್ತೇನೆ. ಆದರೆ ಆತ ಆಯ್ಕೆಯಾಗಿ 6 ತಿಂಗಳೊಳಗೆ ಆತ ಶೌಚಾಲಯವನ್ನು ಕಟ್ಟಿಸಿಕೊಳ್ಳಬೇಕು. ಅದಕ್ಕೆ ನಾವು ವ್ಯವಸ್ಥೆ ಮಾಡುತ್ತೇವೆ. ಅದು ಮಾತ್ರ ಆಗಲೇ ಬೇಕು.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಹಠ ಹಿಡಿಯುವುದಕ್ಕೆ

ಹೋಗುವುದು ಬೇಡ. ಈ ವಿಧೇಯಕವನ್ನು ಯಾವ ರೀತಿ ಇಂಪ್ಲಿಮೆಂಟ್ ಮಾಡಬೇಕೋ ಅದಕ್ಕೆ ಸಂಪೂರ್ಣ ಸಹಕಾರ ಕೊಡೋಣ. ಇದನ್ನು ನೆಪದಲ್ಲಿ ಇಟ್ಟುಕೊಂಡು ಚುನಾಯಿತರಾದಂಥ ಸದಸ್ಯರುಗಳನ್ನು ಡಿಸ್‌ಕ್ವಾಲಿಫೈ ಮಾಡತಕ್ಕಂಥವರು ಬಹಳ ಜನ ಇದ್ದಾರೆ. ಮುಂದೆ ಎಂ.ಎಲ್.ಸಿ. ಚುನಾವಣೆಗಳು ಬರುತ್ತವೆ. ಈ ವಿಚಾರದಿಂದ ಒಂದು ದೊಡ್ಡ ಅನಾಹುತವಾಗುತ್ತದೆ. ದಯಮಾಡಿ ನಾವು ಹೇಳುವುದನ್ನು ಸ್ವಲ್ಪ ಕೇಳಿ. ಏಕೆಂದರೆ ನಿಮಗೆ ಗೊತ್ತಿದ್ದ ಹಾಗೆ 80 ಸಾವಿರ ಪಂಚಾಯತಿ ಸದಸ್ಯರು ಇದ್ದಾರೆ. ಅದರಲ್ಲಿ ಮೂರನೇ ಒಂದು ಭಾಗ ಎಂದರೆ ಸುಮಾರು 26-27 ಸಾವಿರ ಹೆಣ್ಣುಮಕ್ಕಳು ಇದ್ದಾರೆ. ಎಲ್ಲರೂ ಕೂಡ ಎಜ್ಯುಕೇಟೆಡ್ ಆದವರು ಇಲ್ಲ, ತಿಳುವಳಿಕೆ ಇದ್ದವರು ಇಲ್ಲ. ಇನ್ನೂ ಕೂಡ ಕೆಳಗಡೆ ಕುಳಿತುಕೊಳ್ಳತಕ್ಕಂಥ ಸದಸ್ಯರು ಇದ್ದಾರೆ. ಕುರ್ಚಿಮೇಲೆ, ಟೇಬಲ್ ಹತ್ತಿರ ಬಾ ಎಂದರೂ ಅವರು ಬರುವುದಿಲ್ಲ. ಬೆಂಚು ಮೇಲೆ ಕುಳಿತುಕೊಳ್ಳಿ ಎಂದು ಹೇಳಿದರೂ ಅವರು ಕುಳಿತುಕೊಳ್ಳುವುದಿಲ್ಲ. ಈ ರೀತಿ ಇರುವಂಥ ಸದಸ್ಯರು ಇದ್ದಾಗ ಸರ್ಕಾರ ಸುಮ್ಮನೆ ಡಿಸ್‌ಕ್ವಾಲಿಫೈ ಮಾಡುವುದಕ್ಕೆ ಕಾನೂನು ತರುತ್ತೇವೆ ಎನ್ನುವುದು ಸರಿಯಲ್ಲ. ಬೇಕಾದರೆ ನಮ್ಮಂಥ ಎಂ.ಎಲ್.ಎ.ಗಳಿಗೆ ಇರಲಿಲ್ಲವೆಂದರೆ, ಅವರು 74ರಲ್ಲಿ ಹೇಳಿದ ಹಾಗೆ ಅಂಥವು ಏನಾದರೂ ಇದ್ದರೆ ಮಾಡಿ. ಅದನ್ನು ಬಿಟ್ಟು, ಕೆಲವು ಸದಸ್ಯರು ಇನ್ನೂ ತಿಳಿದುಕೊಳ್ಳುವುದರಲ್ಲಿ ಇದ್ದಾರೆ. ಇನ್ನೂ ಮೇಲೆ ಬರುತ್ತಿದ್ದಾರೆ. ಇನ್ನು ಇದನ್ನು ಅಳವಡಿಸಿಕೊಂಡು ಅವರು ಮುಂದೆ ಹೋಗಬೇಕಾಗಿದೆ. ನಿಮಗೆ ಗೊತ್ತಿದ್ದ ಹಾಗೆ ಮೀಟಿಂಗ್ ಕರೆದರೆ ಕೋರಂ ಆಗಲಾರದಂಥ ಜನ ಇದ್ದಮೇಲೆ, ಶೌಚಾಲಯ ಕಟ್ಟಿಕೊಳ್ಳದಿದ್ದರೆ ಡಿಸ್‌ಕ್ವಾಲಿಫೈ ಮಾಡುತ್ತೇವೆ ಎನ್ನುವುದಕ್ಕೆ ಅರ್ಥವಾದರೂ ಎಲ್ಲಿ ಬರುತ್ತದೆ? ಆದ್ದರಿಂದ ಸರ್ಕಾರ ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಿ ಮಾಡಿದರೆ ಒಳ್ಳೆಯದು. ಇದು ಪ್ರತಿಷ್ಠೆ ಪ್ರಶ್ನೆ ಅಲ್ಲ. ಮತ್ತು ಅನರ್ಹ ಎನ್ನತಕ್ಕಂಥ ಎಸ್.ಸಿ/ಎಸ್.ಟಿ. ಏನು ಇದೆ ಅದಕ್ಕೂ ಕೂಡ ತಾವು... ನಾವು ಸುಮ್ಮನೆ ಒಪ್ಪಿಕೊಂಡು ಎಲ್ಲವನ್ನೂ ಸ್ವಾಗತ ಮಾಡಿದ ಮೇಲೆ ನೀವು ಇಷ್ಟಕ್ಕೆ ಹಠ ಮಾಡಿದ ಮೇಲೆ ಮುಂದೆ ನಾವು ಕೂಡ ಮಾಡದೇ ನಿರ್ವಾಹವಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು): ಅದಕ್ಕೆ ನಾನು ಕೃತಜ್ಞತೆಗಳನ್ನು ಅರ್ಪಿಸಿದ್ದೇನೆ. ಇದು ಪ್ರತಿಷ್ಠೆಯ ಪ್ರಶ್ನೆಯಲ್ಲ, ಇದೊಂದು ಬದ್ಧತೆಯ ಪ್ರಶ್ನೆಯಾಗಿದೆ. ಯಾವುದಾದರೂ ಹೊಸ ಕಾನೂನನ್ನು, ಹೊಸ ಪರಿಕಲ್ಪನೆಯನ್ನು ತಂದಾಗ ಅದಕ್ಕೆ ವಿರೋಧಗಳು ಬರುತ್ತವೆ. ಆ ವಿರೋಧಗಳನ್ನು ಯಾರು ಎದುರಿಸಿರುತ್ತಾರೆ ಅವರುಗಳು ಅಬ್ದುಲ್ ನಜೀರ್ ಸಾಬ್‌ರವರಂತೆ ಅವರು ಒಳ್ಳೆಯ ಜನಪರವಾದಂತಹ ಕೆಲಸವನ್ನು ಮಾಡಿದಂತಾಗುತ್ತದೆ. ಹಿಂದೇ ಇದೇ ರೀತಿಯಾದ ಒಂದು ಕಾನೂನನ್ನು ತಂದಾಗ ಇಷ್ಟು ಅಧಿಕಾರವನ್ನು ಕೊಟ್ಟರೆ ಹೇಗೆ ಎಂದು ಹೇಳಿದರು. ಕರ್ನಾಟಕ ರಾಜ್ಯದಲ್ಲಿ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಗ್ರಾಮ ಪಂಚಾಯಿತಿಗಳಿಗೆ ಇಲಾಖೆಯನ್ನು ವರ್ಗಾವಣೆ ಮಾಡಿರುವುದನ್ನು ಬಿಟ್ಟರೆ ಬೇರೆ ಯಾವ

ರಾಜ್ಯಗಳಲ್ಲಿಯೂ ಇಲಾಖೆಗಳನ್ನು ವರ್ಗಾವಣೆ ಮಾಡಿಲ್ಲ. ಇವತ್ತು ಕೇರಳ ರಾಜ್ಯದಲ್ಲಿ ಕಮ್ಯುನಿಸ್ಟ್ ಡೆಮೋಕ್ರೆಟಿಕ್ ಪಾರ್ಟಿ ಅಧಿಕಾರದಲ್ಲಿರತಕ್ಕಂತಹ ಪ್ರದೇಶದಲ್ಲಿ ಇ.ಎಂ.ಎಸ್.ನಂಬೂದರಿ ಪಾಡ್ ರವರು, ಅಲ್ಲಿಯ ಮುಖ್ಯಮಂತ್ರಿಗಳಿಗೆ ನೀವು ಅಧಿಕಾರಕ್ಕೆ ಬಂದು ಇಷ್ಟು ದಿವಸವಾದರೂ ಕೂಡ ಎಲ್ಲಾ ಇಲಾಖೆಗಳನ್ನು ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ವರ್ಗಾವಣೆ ಮಾಡಿಲ್ಲ ಎನ್ನುವಂತಹ ಮಾತನ್ನು ಹೇಳುತ್ತಾರೆ. ಬೇರೆಯವರ ಬಗ್ಗೆ ಮಾತನಾಡತಕ್ಕಂಥದ್ದು, ಕ್ರಾಂತಿಕಾರವಾಗಿ ಮಾತನಾಡತಕ್ಕಂಥದ್ದು ಸುಲಭವಾಗಿರತಕ್ಕಂಥದ್ದು. ಆದರೆ ಅದನ್ನು ಕಾನೂನಿನ ಪ್ರಕಾರವಾಗಿ ರಚನೆಯನ್ನು ಮಾಡಿದಂತಹ ಸಂದರ್ಭದಲ್ಲಿ ಕಷ್ಟವಾಗುತ್ತದೆ. ಆದುದರಿಂದ ನಾನು ಎಲ್ಲಾ ಸದಸ್ಯರಲ್ಲಿ ಬಹಳ ವಿನಯದಿಂದ ವಿನಂತಿಯನ್ನು ಮಾಡಿಕೊಳ್ಳುವುದೇನೆಂದರೆ ಅದನ್ನು ದುರುಪಯೋಗವಾಗದಂತೆ ನೋಡಿಕೊಳ್ಳುತ್ತೇವೆ. ಜೊತೆಗೆ ಅವರಿಗೆ ಏನೇನು ಸೌಲಭ್ಯಗಳು ಬೇಕೋ ಅದನ್ನು ಕಲ್ಪಿಸಿಕೊಡುತ್ತೇವೆ. ಯಾರೇ ಒಬ್ಬ ವ್ಯಕ್ತಿ ನನಗೆ ಶೌಚಾಲಯವನ್ನು ಕಟ್ಟುವುದಕ್ಕೆ ಜಾಗ ಇಲ್ಲ, ನನಗೆ ಶೌಚಾಲಯವನ್ನು ಕಟ್ಟುವುದಕ್ಕೆ ಶಕ್ತಿ ಇಲ್ಲವೆಂದು ಆಯ್ಕೆಯಾಗಿ ಬಂದ ತಕ್ಷಣ ಗ್ರಾಮ ಪಂಚಾಯಿತಿಗೆ ಅರ್ಜಿಯನ್ನು ಕೊಟ್ಟ ತಕ್ಷಣ ಆತನಿಗೆ ಜಾಗವನ್ನು ಕೊಡುತ್ತೇವೆ. ನೀವು ಹೇಳಿದಂತೆ ಎಂಟುಲಕ್ಷ ಜನ ನಿವೇಶನ ರಹಿತವಾದಂತಹ ಜನರು ಇದರಲ್ಲಿ ಇದ್ದಾರೆ. 11 ಲಕ್ಷ ಜನರಿಗೆ ಮನೆಗಳು ಇಲ್ಲ. 19,600 ಜನರಿಗೆ ತೊಂದರೆ ಇದೆ ಎಂದು ನೊಂದಾಯಿಸಲ್ಪಟ್ಟ ದಾಖಲೆಯಿಂದ ನಮಗೆ ಗೊತ್ತಾಗಿದೆ. ಆದರೆ ನೀವು ಕೇಳಬಹುದು ಜಾಗನೇ ಕೊಡಲಿಕ್ಕೆ ಸಾಧ್ಯನೇ ಆಗದಿರುವವರು ಈ ಶೌಚಾಲಯವನ್ನು ಕಟ್ಟುವುದಕ್ಕೆ ಹೇಗೆ ಕೊಡುತ್ತೀರಿ ಎಂದರೆ, ನಾವು ಭೂಮಿಯನ್ನು ಅಕ್ವೈರ್ ಮಾಡಿಕೊಂಡು ಕೊಡುತ್ತೇವೆ. ಅದು 5'X5' ಅಥವಾ 6'X6' ಈ ರೀತಿಯಾಗಿ ಜಾಗವನ್ನು ಮಾಡಿಕೊಡುತ್ತೇವೆ. ಮತ್ತು ಕಟ್ಟಿಸಿಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗಲೂ ಸಹ ತಲೆಯ ಮೇಲೆ ಮಲವನ್ನು ಹೊರುತ್ತಿದ್ದಾರೆಂದು ಪೇಪರ್‌ಗಳಲ್ಲಿ ಬರುತ್ತಿದೆ. ಇದು ಏನೂ ಪ್ರತಿಷ್ಠೆಯ ಪ್ರಶ್ನೆಯಲ್ಲ. ತಲೆಯ ಮೇಲೆ ಮಲವನ್ನು ಹೊರುವಂತೆ ಉದ್ದೇಶ ಪೂರಕವಾಗಿ ಮಾಡಿಸುವುದಕ್ಕೆ ಇದು ಸಾಧ್ಯತೆಯಾಗುತ್ತದೆಂದು ನಾವು ಹೇಳಿದರೂ ಕೂಡ ನೀವು ಇದಕ್ಕೆ ಒಪ್ಪಿಕೊಳ್ಳುತ್ತಿಲ್ಲ ಎಂದರೆ ನಾನು ಮತ್ತೇನು ಹೇಳಲಿ? ನಾನು ಹೇಳಿದಂಥ ಪಾಯಿಂಟ್‌ನಾದರೂ ಕನ್ಸಿಡರ್ ಮಾಡಿ.

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಅನೇಕ ನನ್ನ ಹಿರಿಯ ಸದಸ್ಯರುಗಳು ಏನು ಗ್ರಾಮೀಣಾ ಪ್ರದೇಶದ ಹಿನ್ನೆಲೆಯಲ್ಲಿ ಬಂದಿರತಕ್ಕಂಥರು ಇದ್ದಾರೆ ಅವರುಗಳೆಲ್ಲರೂ ಈ ವ್ಯವಸ್ಥೆಯಿಂದ ಸ್ವಲ್ಪ ಹೊರಗಡೆ ಬರತಕ್ಕಂತಹ ಪ್ರಯತ್ನವನ್ನು ಮಾಡಬೇಕಾಗುತ್ತದೆ. ನಾವು ಅವರಿಗೆ ಎಲ್ಲಾ ರೀತಿಯ ಅನುಕೂಲವನ್ನು ಮಾಡಿಕೊಡುತ್ತೇವೆಂದು ಹೇಳಿದರೂ ಕೂಡ ಏಕೆ

ಸಂಶಯವನ್ನು ವ್ಯಕ್ತಪಡಿಸುತ್ತೀರಿ? ನೀವು ಭೂಸುಧಾರಣೆಯ ಕಾನೂನನ್ನು ಜಾರಿಗೆ ತಂದಾಗ ನಾವು ವಿನೋಬಾಜಿಯ ತತ್ವವನ್ನು ಒಪ್ಪಿಕೊಳ್ಳಬಹುದಾಗಿತ್ತಲ್ಲಾ. ಮನಪರಿವರ್ತನೇಯ ಕಾನೂನನ್ನು. ನಿಮಗೆ ಗೊತ್ತಿದೆ ನಾವು ಭೂ ಸುಧಾರಣೆಯ ಕಾಯಿದೆಯ ತೆಲಂಗಾಣದ ಮೂವ್‌ಮೆಂಟ್ ಬಂದಂತಹ ಸಂದರ್ಭದಲ್ಲಿ ಈ ವ್ಯವಸ್ಥೆ ವಿನೋಭಾಜಿಯಂಥವರ ಮೂಲಕವಾಗಿ ಮನೋ ಪರಿವರ್ತನಾ ಮೂಲಕ, ಭೂಧಾನ, ಗ್ರಾಮ ದಾನ, ಜೀವನ ದಾನ ಎಂದು ತಂದು ನೀವೇ ಮಾತನಾಡಿದ್ದೀರಿ, ನಾವೂ ಸಹ ಮಾತನಾಡಿದ್ದೇವೆ. ಈ ರೀತಿಯಾಗಿ ಕಾಲ ಕಾಲಕ್ಕೆ ಕ್ರಾಂತಿಕಾರವಾದಂತಹ ಸುಧಾರಣೆಗಳನ್ನು ತಂದಾಗ ಇಂತಹ ವ್ಯಕ್ತಿಗಳ ಮೂಲಕ ಜಾರಿಗೆ ತಂದಾಗ ಜಾರಿಯಾಗುವುದಿಲ್ಲ. ತಾವು ಕಾನೂನಿನಲ್ಲಿ ಕಡ್ಡಾಯವಾಗಿ ಜಾರಿಗೆ ತಂದಾಗ ಅದು ಜಾರಿಗೆ ಬರುತ್ತದೆ. ನೀವು ಇಂತಹ ತಾರೀಖಿನೊಳಗಾಗಿ ಅಥವಾ ಡಿಸೆಂಬರ್ 1973ರ ಒಳಗಾಗಿ ಯಾರು ಗೇಣಿದಾರರು ಎಂದು ನೋಂದಾಯಿಸಲ್ಪಟ್ಟಿದ್ದಾರೆ, ಅವನಿಗೆ ನಾವು ಗೇಣಿಯ ಹಕ್ಕನ್ನು ಕೊಡುತ್ತೇವೆಂದಾಗ ಅದು ಜಾರಿಯಾಯಿತು. ಅದಕ್ಕಿಂತಲೂ ಪೂರ್ವದಲ್ಲಿ ಕಾನೂನುಗಳು ಇರಲಿಲ್ಲವೆಂದು ಅರ್ಥವಲ್ಲ. 1949ರಲ್ಲಿ ಬೊಂಬಾಯಿ ಅಧಿಪತ್ಯದಲ್ಲಿ ಶೇರ್‌ರವರು, ಮೂರಾರ್ಜಿದೇಸಾಯಿಯವರು ತಂದಿದ್ದರು, ಆದರೆ ಅಲ್ಲಿ ಇದ್ದ ಕೆಲವು ಲೋಪದೋಷಗಳ ಮೂಲಕ ಪರಿಣಾಮಕಾರಿಯಾಗಿ ಜಾರಿಗೆ ಮಾಡಲಿಕ್ಕೆ ಆಗಲಿಲ್ಲ. ರಾಜಕೀಯ ಹಿತಾಸಕ್ತಿ ಇರಲಿಲ್ಲ. ಆ ರೀತಿಯಾಗಿ ಕಾನೂನಿನ ಮೂಲಕ ಜಾರಿಗೆ ತಂದಾಗ ಮಾತ್ರ ನಾವು ಸ್ವಲ್ಪ ಬದಲಾವಣೆಯನ್ನು ತರುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಡಿಸ್‌ಕ್ವಾಲಿಫಿಕೇಷನ್ ಆಗುತ್ತೇವೆ ಎನ್ನುವಂತಹ ಭಯಕ್ಕೆ 80,000 ಜನರಾದರೂ ಶೌಚಾಲಯಗಳನ್ನು ಕಟ್ಟಿಕೊಂಡರೆ ಅದು ಒಂದು ದೊಡ್ಡದಾದಂತಹ ಹೆಜ್ಜೆ ಎಂದು ಏಕೆ ಭಾವಿಸಬಾರದು? ಆದ್ದರಿಂದ ತಾವು ದಯವಿಟ್ಟು ಇದಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಎಲ್ಲಾ ವ್ಯವಸ್ಥೆಯನ್ನು ಮಾಡಿ ಕೊಟ್ಟ ಮೇಲೂ ಶೌಚಾಲಯವನ್ನು ಕಟ್ಟದೇ ಹೋದರೆ ಡಿಸ್‌ಕ್ವಾಲಿಫೈ ಮಾಡುತ್ತೇವೆಂದರೆ ಮಾಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ನಾವು ಬಹಳ ಶಾಂತ ರೀತಿಯಲ್ಲಿ ಕೇಳಿದ್ದೇವೆ. ಇದಕ್ಕಾಗಿ ನಾವು ನಮ್ಮ ಪಕ್ಷದ ಸಭೆಯನ್ನು ಮಾಡಿ ಪ್ರತಿಯೊಂದು ಕ್ಲಾಸ್ ಬೈ ಕ್ಲಾಸ್, ನಾವು ಶ್ರೀ ಘೋರ್ಪಡೆಯವರನ್ನು ಕರೆದು ಅವರ ಜೊತೆಯಲ್ಲಿಯೂ ಕೂಡ ಮಾತನಾಡಿ, ಯಾವ ರೀತಿಯಲ್ಲಿ ಮಾಡಬೇಕೆಂದಾಗ ಸಂಪೂರ್ಣವಾಗಿ ಇದರಲ್ಲಿರತಕ್ಕಂತಹ ಅಂಶಗಳು, ಹಿಂದೆ ಅವರು ಸಚಿವರು ಇದ್ದಾಗ ಪ್ರಸ್ತಾಪ ಮಾಡಿದಂತಹ ಅಮೆಂಡ್‌ಮೆಂಟ್ಸ್, ಪಿ.ಆರ್.ನಾಯಕ್‌ರವರ ಕಮಿಟಿಯ ರಿಪೋರ್ಟ್ ಎಲ್ಲವನ್ನೂ ನೋಡಿದ ಮೇಲೆ ನಮ್ಮಲ್ಲಿ ಮತ್ತು ಇವರು ತಂದಿರುವಂತಹ ತಿದ್ದುಪಡಿಗಳಲ್ಲಿ ಸಮಾನತೆಯು ಇದೆ ಎಂದು ತಿಳಿದುಕೊಂಡು ನಾವು ಸಂಪೂರ್ಣವಾಗಿ

ಸಹಕರಿಸಿದ್ದೆವು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಇಲ್ಲಿ ಯಾವ ಸಿಸ್ಟಂ ಇದೆ ಎನ್ನುವುದು ತಮಗೆ ಗೊತ್ತಿದೆ. ಇಲ್ಲಿ ಎಲ್ಲರೂ ವಿದ್ಯಾವಂತರಿದ್ದು, ಅಥವಾ ಆರ್ಥಿಕವಾಗಿ ಒಳ್ಳೆಯವರಾಗಿದ್ದು ಎಲ್ಲರಿಗೂ ಮನೆ ಇದ್ದು, ಜಾಗ ಇದ್ದರೆ ಈ ತಿದ್ದುಪಡಿಗೆ ವಿರೋಧ ಮಾಡುತ್ತಿದ್ದೀರಿ ಎಂದರೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಎಂಥೆಂಥ ಸದಸ್ಯರು ಇದ್ದಾರೆಂದು ಮೀಸಲಾತಿಯ ಕ್ಯಾಟಗರಿಯಲ್ಲಿ ಹೆಣ್ಣು ಮಕ್ಕಳನ್ನು ಹುಡುಕಿ ಎಳೆದುಕೊಂಡು ಅಭ್ಯರ್ಥಿಗಳನ್ನಾಗಿ ಮಾಡಬೇಕು ಆ ಕ್ಯಾಟಗರಿಯಲ್ಲಿ ಸಿಗಲಿಲ್ಲ ಎಂದರೆ ಬೇರೆಯವರ ತರಬೇಕು. ಅವರಿಗೆ ಮನೆ ಇಲ್ಲ, ಕೃಷಿ ಕಾರ್ಮಿಕರು ಇದ್ದರೂ ಅವರಿಗೆ ಮೀಸಲಾತಿ ಇದೆ ಇರಲಿ ಎಂದು ಹೇಳಬೇಕು. ಇಂಥದ್ದು ಎಲ್ಲಾ ಇದ್ದರೂ ಕೂಡ ತಾವು ಮಾಡುತ್ತೇವೆಂದರೆ, ಬೇಕಾದರೆ ಇನ್ನು ಐದು ವರ್ಷಗಳ ನಂತರ ಮಾಡಿ. ನಾನು ಬೇಡ ಎನ್ನುವುದಿಲ್ಲ. ಇದು ಈ ತಕ್ಷಣದಿಂದಲೇ ಆಗಲಿ, 6 ತಿಂಗಳಿನಲ್ಲಿಯೇ ಆಗಲಿ, ಬೇಡ ಎಂದು ಯಾರು ಹೇಳುತ್ತಾರೆ? ಮೊದಲು ಇದನ್ನುಮಾಡಬೇಕೆಂದು ಹೇಳುವವರು ನಾವು. ಅವರಿಗೆ ನಾವೇ ಕಟ್ಟಿಸಿಕೊಡುತ್ತೇವೆಂದು ಹೇಳಿಬಿಡಿ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಅವರಿಗೆ ಜಾಗವನ್ನು ಕೊಟ್ಟು ಸರ್ಕಾರದಿಂದಲೇ ಶೌಚಾಲಯವನ್ನು ಕಟ್ಟಿಸಿಕೊಡುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗ ತಾವು ಹೇಳಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ನಿಮ್ಮ ಅಮೆಂಡ್‌ಮೆಂಟ್ ಹೇಳಿಬಿಡಿ. ಅದನ್ನು ನಾವು ಸ್ವಾಗತ ಮಾಡುತ್ತೇವೆ.

ಶ್ರೀ ಎಂ.ಪಿ.ಪ್ರಕಾಶ್: ನಿಯಮಾವಳಿಯ ರೂಪದಲ್ಲಿ ಹೇಳುವುದೇನೆಂದರೆ ಯಾರು ಗ್ರಾಮ ಪಂಚಾಯಿತಿಗೆ ಅರ್ಜಿಯನ್ನು ಕೊಟ್ಟು ಜಾಗ ಇಲ್ಲ, ಶೌಚಾಲಯವನ್ನು ಕಟ್ಟಿಕೊಳ್ಳುವಂತಹ ಪರಿಸ್ಥಿತಿಯಲ್ಲಿಲ್ಲ, ನಮಗೆ ಶೌಚಾಲಯವನ್ನು ಕಟ್ಟಿಸಿಕೊಡಬೇಕೆಂದರೆ ಆ ಗ್ರಾಮ ಪಂಚಾಯಿತಿಯಲ್ಲಿ ಆ ಸದಸ್ಯರಿಗೆ ನಾವು ಜಾಗವನ್ನು ಕೊಡುವುದರ ಜೊತೆ ಶೌಚಾಲಯವನ್ನು ಪುಕ್ಕಟೆಯಾಗಿ ಕಟ್ಟಿಸಿಕೊಡುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ನಾವು ಇದನ್ನು ಸ್ವಾಗತ ಮಾಡುತ್ತೇವೆ. ಇದರ ಜೊತೆಯಲ್ಲಿ ಸಂಬಂಧಪಟ್ಟಂತಹ ಚೀಫ್ ಎಕ್ಸಿಕ್ಯುಟೀವ್ ಆಫೀಸರ್, ಜಿಲ್ಲಾ ಪಂಚಾಯತ್ ಅವರಿಗೆ ಸುತ್ತೋಲೆಯನ್ನು ಕಳುಹಿಸಿ, ವಿಲೇಜ್ ಪಂಚಾಯತ್‌ಗೂ ಕೂಡ ಕಳುಹಿಸಿ, ಕೊಡುತ್ತೇವೆಂದು ಹೇಳಿದ್ದರೆ, ನಾವು ಸ್ವಾಗತ ಮಾಡುತ್ತಿದ್ದೆವು. ಇಷ್ಟೊಂದು ಚರ್ಚೆಯೇ ಆಗುತ್ತಿರಲಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಈಗ ನಮ್ಮ ಹಣಕಾಸಿನ ಸಚಿವರು ಹೇಳಿದರು ಮಾಡಿ ಕೊಡಿ ಎಂದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಮಾನ್ಯ ಎಂ.ಪಿ.ಪ್ರಕಾಶ್‌ರವರೇ, ಸಾಮಾಜಿಕ ನ್ಯಾಯ ಸಮಿತಿಗಳ ಸದಸ್ಯರುಗಳನ್ನು ನೇಮಕ ಮಾಡುವಾಗ ನಿಯಮಾವಳಿಗಳಲ್ಲಿ ಎಸ್.ಸಿ.ಅಥವಾ ಎಸ್.ಟಿ. ಎಂದು ಮಾಡಿರುತ್ತೀರಿ. ಆದುದರಿಂದ ಇದರಲ್ಲಿ ಸಾಕಷ್ಟು ಸಾರಿ ಮಿಸ್‌ಯೂಸ್ ಆಗುತ್ತಿದೆ. ಪುನಃ ಅದನ್ನು ಮಾಡುವುದು ಬೇಡ. ಅದಕ್ಕೆ ಎಸ್.ಸಿ.ಯವರು ಜಾಸ್ತಿ ಇದ್ದರೆ ಅಲ್ಲಿ ಎಸ್.ಸಿಗೆ ಎಂದು ಮಾಡಿ; ಎಲ್ಲಿ ಎಸ್.ಟಿ.ಗಳ ಜನಸಂಖ್ಯೆ ಜಾಸ್ತಿ ಇದೆ ಅಲ್ಲಿ ಎಸ್.ಟಿ.ಯವರಿಗೆ ಎಂದು ಮಾಡಿ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಇವರು ಈ ವಿಚಾರವನ್ನು ಅನೇಕ ಸಂದರ್ಭಗಳಲ್ಲಿ ಎಸ್.ಟಿ.ವರ್ಗದವರು ರಾಜಕೀಯವಾಗಿ ಪ್ರಬಲವಾಗಿರುವುದಿಲ್ಲ, ಆದ್ದರಿಂದ ಅಲ್ಲಿ ದುರುಪಯೋಗವಾಗುತ್ತದೆ ಎನ್ನುವಂತಹ ಒಂದು ಸಂಶಯವನ್ನು ಹೇಳುತ್ತಾರೆ. ಆದುದರಿಂದ ಅಲ್ಲಿ ಜಿಲ್ಲಾ ಪಂಚಾಯಿತಿ ತಾಲ್ಲೂಕು ಪಂಚಾಯಿತಿಯಲ್ಲಿ ಯಾವ ವರ್ಗದ ಜನಸಂಖ್ಯೆಯು ಎಷ್ಟು ಇದೆ, ಉದಾಹರಣೆಗೆ ಬಳ್ಳಾರಿಯಲ್ಲಿ, ರಾಯಚೂರು, ಚಿತ್ರದುರ್ಗದಲ್ಲಿ ಎಸ್.ಸಿ. ಜನಸಂಖ್ಯೆಯು ಜಾಸ್ತಿ ಇದೆ. ಆದುದರಿಂದ ಎಸ್.ಸಿಯವರಿಗೆ ಕೊಡುತ್ತೇವೆ. ಅದೇ ರೀತಿಯಲ್ಲಿ ಎಸ್.ಟಿ. ಜನಸಂಖ್ಯೆಯು ಜಾಸ್ತಿ ಇರುವಂತಹ ಕಡೆ ಎಸ್.ಟಿಯವರಿಗೆ ಕೊಡುತ್ತೇವೆ. ಎಸ್.ಸಿ.ಅಥವಾ ಎಸ್.ಟಿ. ಎಂದು ಮಾಡಿ ಕನ್ಸಿಡರ್ ಮಾಡುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನಖರ್ಗೆ: ತಮಗೆ ಗೊತ್ತಿರುವಂತೆ ಮೀಸಲಾತಿಯು 23 ಪರ್ಸೆಂಟ್ ಬಂದಿದೆ. ಅದರ ಪ್ರಕಾರ ಎಸ್.ಸಿ.ಗೆ 18 ಪರ್ಸೆಂಟ್ ಮತ್ತು ಎಸ್.ಟಿ.ಗೆ 5 ಪರ್ಸೆಂಟ್ ಅದನ್ನು ಕ್ಲೀಯರ್ ಆಗಿ ಸೂಚನೆಯನ್ನು ಕೊಟ್ಟು ಬಿಡಿ. ಇಲ್ಲದಿದ್ದರೆ ಸುಮ್ಮನೆ ಮಿಸ್‌ಯೂಸ್ ಆಗುತ್ತದೆ.

ಶ್ರೀ ಎಂ.ಪಿ.ಪ್ರಕಾಶ್: ನಮ್ಮ ಸುತ್ತೋಲೆಯ ಪ್ರಕಾರವಾಗಿ ಕ್ಲಿಯರ್ ಆಗಿ ಸ್ಪಷ್ಟೀಕರಣವನ್ನು ಕೊಡಿಸುತ್ತೇವೆ. ಅಲ್ಲಿ ಯಾರ ಸಂಖ್ಯೆಯು ಹೆಚ್ಚು ಇರುತ್ತದೆ ಅವರಿಗೆ ಕೊಡಬೇಕೆಂದು ಮಾಡುತ್ತೇವೆ.

ಮತ್ತೊಬ್ಬರು ಮಾನ್ಯ ಸದಸ್ಯರು ನೌಕರರ ಬಗ್ಗೆ ಕೇಳುತ್ತಿದ್ದರು, ಅವರ ಬಗ್ಗೆ ಹೇಳುವುದಾದರೆ ಸೆಲ್ಫ್ ಗೌರ್ನಿಂಗ್ ಯೂನಿಟ್ ಎಂದು ಕರೆಯುತ್ತೇವೆ. ಅದನ್ನು ಸ್ವಯಂ ಆಡಳಿತಕ್ಕೆ ಒಳಪಡುವಂಥದ್ದನ್ನು ಸ್ಥಾನಿಕ ಸಂಸ್ಥೆಗಳೆಂದು ಕರೆಯುತ್ತೇವೆ. ಆದ್ದರಿಂದ ಅವರನ್ನು ಸರ್ಕಾರಿ ನೌಕರರು ಎಂದು ಪರಿಗಣಿಸುವುದಕ್ಕೆ ಆಗುವುದಿಲ್ಲ. ಅದರ ಜೊತೆಗೆ ಬೇರೆ ರೀತಿಯಾದಂಥವೂ ಸಹ ಇರುತ್ತದೆ. ಆದ್ದರಿಂದ ಇಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾದುದು ಎಂದರೆ, ಸೇವಾ ನಿಯಮಾವಳಿಗಳು ಯಾವುದು ಇದೆ ಅದನ್ನು ವ್ಯವಸ್ಥಿತವಾಗಿ ಹಾಗೂ ವೈಜ್ಞಾನಿಕವಾಗಿ ಮಾಡಿಕೊಡುತ್ತೇವೆ. ಮತ್ತು ಅವರಿಗೆ ಕನಿಷ್ಟ ವೇತನದ ಬಗ್ಗೆ ಕೂಡ ಪ್ರಸ್ತಾಪ ಮಾಡಿ ಕಳುಹಿಸಿಕೊಡುತ್ತೇವೆ. ಇದರ

ಬಗ್ಗೆ ಮತ್ತೊಂದು ಸಲ ನಿಮ್ಮ ಜೊತೆಗೆ ಮತ್ತು ಮಲ್ಲಪಾಡಿಯವರ ಜೊತೆಗೆ ಇದರ ಏನು ರೆಪ್ರಜೆಂಟೇಷನ್ ಕೊಟ್ಟಿದ್ದಾರೆ ಅವರ ಜೊತೆಯಲ್ಲಿಯೂ ಕೂಡ ಮಾತನಾಡಿ ಒಪ್ಪುವಂಥ ಒಂದು ಸೂತ್ರವನ್ನು ಕಂಡು ಹಿಡಿಯುತ್ತೇವೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''1997ನೇ ಸಾಲಿನ ಕರ್ನಾಟಕ ಪಂಚಾಯತ್‌ರಾಜ್ (ಮೂರನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

7.40 ಪಿ.ಎಂ

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 34ರವರೆಗೆ

ಅಧ್ಯಕ್ಷರು: ಪ್ರಸ್ತಾಪ ಏನೆಂದರೆ ''ಖಂಡ 2 ರಿಂದ 34ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತವೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 34ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 35 (ಹೊಸ ಖಂಡ)

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, 34ನೇ ಖಂಡದ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು:

''35. 130ನೇ ಪ್ರಕರಣದ ತಿದ್ದುಪಡಿ-ಮೂಲ ಅಧಿನಿಯಮದ 130ನೇ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ 'ಸಂಖ್ಯೆ 31ರ ನಂತರ ಸಂಖ್ಯೆ 31ಎ 31ಬಿ' ಹಾಗೂ ಅಕ್ಷರಗಳನ್ನು ಸೇರಿಸತಕ್ಕದ್ದು.''

ಪ್ರಸ್ತಾವ ಮಂಡಿಸಲ್ಪಟ್ಟಿತು

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, ''35 130ನೇ ಪ್ರಕರಣದ ತಿದ್ದುಪಡಿ ಮೂಲ ಅಧಿನಿಯಮದ 130ನೇ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ 'ಸಂಖ್ಯೆ 31ರ ನಂತರ ಸಂಖ್ಯೆ 31ಎ, 31ಬಿ' ಹಾಗೂ ಅಕ್ಷರಗಳನ್ನು ಸೇರಿಸತಕ್ಕದ್ದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು 35ನೇ ಹೊಸ ಖಂಡ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಇದರಲ್ಲಿ ಶ್ರೀ ಫೋರ್ಪಡೆಯವರು ಪ್ರಸ್ತಾಪ ಮಾಡಿದ್ದರಲ್ಲಾ ಪಂಚಾಯಿತಿ ಸೂಪರ್‌ಸೀಡ್ ಮಾಡತಕ್ಕದ್ದು, ಅದು ಜಿಲ್ಲಾ ಪರಿಷತ್ತುಗಳಿಗೆ ಇರುವುದಕ್ಕಿಂತಲೂ ಸರ್ಕಾರ ಇಟ್ಟುಕೊಳ್ಳುವುದು ಒಳ್ಳೆಯದು. ವಿತ್ ಪ್ರಿಜುಡೀಸ್ ಮಾಡತಕ್ಕದ್ದು ಇರುತ್ತದೆ. ಅಲ್ಲಿ ಏನಾಗುತ್ತದೆಂದರೆ ಲೋಕಲ್ ಪಾರ್ಟೀಸ್ ಬರುತ್ತವೆ. ಈಗ ನಮ್ಮ ಗುಲ್ಬರ್ಗಾದಲ್ಲಿ ಆಗಿದೆ, ಹೀಗೆ ಅನೇಕ ಕಡೆ ಆಗಿದೆ.

ಖಂಡ 36ರಿಂದ 39ರವರೆಗೆ - ಎರಡೂ ಸೇರಿದಂತೆ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಖಂಡ 36ರಿಂದ 39ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 36ರಿಂದ 39ರವರೆಗೆ, ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 40ಕ್ಕೆ ತಿದ್ದುಪಡಿ:

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಖಂಡ 40ಕ್ಕೆ (ಕನ್ನಡ ಅವತರಣಿಕೆಯಲ್ಲಿ) ನಾನು ಈ ಕೆಳಕಂಡ ತಿದ್ದುಪಡಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ:

''40ನೇ ಖಂಡದ (1)ನೇ ಉಪ-ಖಂಡದ ಎರಡನೇ ಪರಂತುಕದಲ್ಲಿ 'ಒಂದು ವರ್ಷದೊಳಗೆ'ಎಂಬ ಪದಗಳಿಗೆ 'ಆರು ತಿಂಗಳೊಳಗೆ' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಪ್ರಸ್ತಾವ ಮಂಡಿಸಲ್ಪಟ್ಟಿತು

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''40ನೇ ಖಂಡದ (1)ನೇ ಉಪ-ಖಂಡದ ಎರಡನೇ ಪರಂತುಕದಲ್ಲಿ 'ಒಂದು ವರ್ಷದೊಳಗೆ' ಎಂಬ ಪದಗಳಿಗೆ 'ಆರು ತಿಂಗಳೊಳಗೆ' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ 40 ತಿದ್ದುಪಡಿಯಾದ ರೀತಿಯಲ್ಲಿ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಖಂಡ 40 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗು ಖಂಡ 40 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು

ಖಂಡ 41 ಮತ್ತು 42 ಎರಡೂ ಸೇರಿದಂತೆ:

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಖಂಡ 41 ಮತ್ತು 42 ಎರಡೂ ಸೇರಿದಂತೆ ವಿಧೇಯಕದ ಅಂಗವಾಗಿರುತ್ತವೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 41 ಮತ್ತು 42 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 43ಕ್ಕೆ ತಿದ್ದುಪಡಿ

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಖಂಡ 43ರ (1)ನೇ ಉಪ ಖಂಡಕ್ಕೆ ಈ ಮುಂದಿನ ತಿದ್ದುಪಡಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ:

''(1) (2)ನೇ ಉಪ-ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು:

''(2) ಪ್ರತಿಯೊಂದು ಸ್ಥಾಯೀ ಸಮಿತಿಯು, ತಾಲ್ಲೂಕು ಪಂಚಾಯಿತಿಯು ನಿರ್ದಿಷ್ಟಪಡಿಸಿದಂತೆ ತಾಲ್ಲೂಕು ಪಂಚಾಯಿತಿಯ ಸದಸ್ಯರುಗಳು ಚುನಾಯಿತ ಸದಸ್ಯರುಗಳ ಪೈಕಿಯಿಂದ ಚುನಾಯಿಸಿದ ಅಧ್ಯಕ್ಷನು ಸೇರಿ ಆರನ್ನು ಮೀರದಂಥ ಸಂಖ್ಯೆಯ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು. ಸ್ಥಾಯೀ ಸಮಿತಿಯ ಸದಸ್ಯರ ಚುನಾವಣೆಯನ್ನು ತಾಲ್ಲೂಕು ಪಂಚಾಯಿತಿಯ ಸದಸ್ಯರನ್ನು ಚುನಾಯಿಸಲು ನಡೆಸಲಾಗುವ ಪ್ರತಿಯೊಂದು ಸಾರ್ವತ್ರಿಕ ಚುನಾವಣೆಯ ತರುವಾಯ ಅಥವಾ ಈ ಅಧಿನಿಯಮದಡಿ ಅದರ ಪುನರ್ ರಚನೆ ಅಥವಾ ಸ್ಥಾಪನೆಯಾದ ಮೇಲೆ ಸಾಧ್ಯವಾದಷ್ಟು ಬೇಗನೆ ಅಥವಾ ಸ್ಥಾಯೀ ಸಮಿತಿಯ ಸದಸ್ಯರುಗಳ ಹುದ್ದೆಯ ಅವಧಿ ಮುಕ್ತಾಯವಾಗುವುದಕ್ಕೆ ನಿಕಟಪೂರ್ವದಲ್ಲಿ ನಡೆಸತಕ್ಕದ್ದು: ಪರಂತು, ಸಾಮಾಜಿಕ ನ್ಯಾಯ ಸಮಿತಿಯು ಕಡೆಯ ಪಕ್ಷ ಒಬ್ಬ ಮಹಿಳಾ ಸದಸ್ಯಳನ್ನು ಮತ್ತು ಅನುಸೂಚಿತ ಜಾತಿಗಳಿಗೆ ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಒಬ್ಬ ಸದಸ್ಯನನ್ನು ಒಳಗೊಂಡಿರತಕ್ಕದ್ದು,''

ಪ್ರಸ್ತಾವ ಮಂಡಿಸಲ್ಪಟ್ಟಿತು.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, 43ನೇ ಖಂಡದ (1)ನೇ ಉಪ-ಖಂಡದ ನಂತರ....

''(1) (2)ನೇ ಉಪ-ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು:

''(2) ಪ್ರತಿಯೊಂದು ಸ್ಥಾಯೀ ಸಮಿತಿಯು, ತಾಲ್ಲೂಕು ಪಂಚಾಯಿತಿಯು ನಿರ್ದಿಷ್ಟಪಡಿಸಿದಂತೆ ತಾಲ್ಲೂಕು ಪಂಚಾಯಿತಿಯ ಸದಸ್ಯರುಗಳು ಚುನಾಯಿತ ಸದಸ್ಯರುಗಳ ಪೈಕಿಯಿಂದ ಚುನಾಯಿಸಿದ ಅಧ್ಯಕ್ಷನು ಸೇರಿ ಆರನ್ನು ಮೀರದಂಥ ಸಂಖ್ಯೆಯ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು. ಸ್ಥಾಯೀ ಸಮಿತಿಯ ಸದಸ್ಯರ ಚುನಾವಣೆಯನ್ನು ತಾಲ್ಲೂಕು ಪಂಚಾಯಿತಿಯ ಸದಸ್ಯರನ್ನು ಚುನಾಯಿಸಲು ನಡೆಸಲಾಗುವ ಪ್ರತಿಯೊಂದು ಸಾರ್ವತ್ರಿಕ ಚುನಾವಣೆಯ ತರುವಾಯ ಅಥವಾ ಈ ಅಧಿನಿಯಮದಡಿ ಅದರ ಪುನರ್ ರಚನೆ ಅಥವಾ ಸ್ಥಾಪನೆಯಾದ ಮೇಲೆ ಸಾಧ್ಯವಾದಷ್ಟು ಬೇಗನೆ ಅಥವಾ ಸ್ಥಾಯೀ ಸಮಿತಿಯ ಸದಸ್ಯರುಗಳ ಹುದ್ದೆಯ ಅವಧಿ ಮುಕ್ತಾಯವಾಗುವುದಕ್ಕೆ ನಿಕಟಪೂರ್ವದಲ್ಲಿ ನಡೆಸತಕ್ಕದ್ದು: ಪರಂತು, ಸಾಮಾಜಿಕ ನ್ಯಾಯ ಸಮಿತಿಯು ಕಡೆಯ ಪಕ್ಷ ಒಬ್ಬ ಮಹಿಳಾ ಸದಸ್ಯಳನ್ನು ಮತ್ತು ಅನುಸೂಚಿತ ಜಾತಿಗಳಿಗೆ ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಒಬ್ಬ ಸದಸ್ಯನನ್ನು ಒಳಗೊಂಡಿರತಕ್ಕದ್ದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 43 ತಿದ್ದುಪಡಿಯಾದ ರೀತಿಯಲ್ಲಿ:

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಖಂಡ 43 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗು ಖಂಡ 43 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 44 ರಿಂದ 54 ಎರಡೂ ಸೇರಿದಂತೆ:

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಖಂಡ 44ರಿಂದ 54ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತವೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 44ರಿಂದ 54ರವರೆಗೆ ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 55 (ಹೊಸ ಖಂಡ)

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, 54ನೇ ಖಂಡದ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು:

''55. 169ನೇ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 169ನೇ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ ಸಂಖ್ಯೆ '31'ರ ನಂತರ '31ಎ, 31ಬಿ' ಸಂಖ್ಯೆ ಹಾಗು ಅಕ್ಷರಗಳನ್ನು ಸೇರಿಸತಕ್ಕದ್ದು.''

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, 54ನೇ ಖಂಡದ ನಂತರ...

''55. 169ನೇ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 169ನೇ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ ಸಂಖ್ಯೆ '31'ರ ನಂತರ '31ಎ, 31ಬಿ' ಸಂಖ್ಯೆ ಹಾಗು ಅಕ್ಷರಗಳನ್ನು ಸೇರಿಸತಕ್ಕದ್ದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗು 55ನೇ ಹೊಸ ಖಂಡ ವಿಧೇಯಕಕ್ಕೆ ಸೇರಿಸಲ್ಪಟ್ಟಿತು

ಖಂಡ 56

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''56ನೇ ಖಂಡ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 56 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 57ಕ್ಕೆ ತಿದ್ದುಪಡಿ

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಖಂಡ 57ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ:

''57ನೇ ಖಂಡದ 2ನೇ ಉಪ-ಖಂಡದ ಎರಡನೇ ಪರಂತುಕದಲ್ಲಿ 'ಒಂದು ವರ್ಷದೊಳಗೆ' ಎಂಬ ಪದಗಳಿಗೆ 'ಆರು ತಿಂಗಳೊಳಗೆ' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.''

ಪ್ರಸ್ತಾವ ಮಂಡಿಸಲ್ಪಟ್ಟಿತು

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''57ನೇ ಖಂಡದ 2ನೇ ಉಪ-ಖಂಡದ ಎರಡನೇ ಪರಂತುಕದಲ್ಲಿ 'ಒಂದು ವರ್ಷದೊಳಗೆ' ಎಂಬ ಪದಗಳಿಗೆ 'ಆರು ತಿಂಗಳೊಳಗೆ' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 57 ತಿದ್ದುಪಡಿಯಾದ ರೀತಿಯಲ್ಲಿ:

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಖಂಡ 57 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗು ಖಂಡ 57 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 58 ಮತ್ತು 59 ಎರಡೂ ಸೇರಿದಂತೆ:

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಖಂಡ 58 ಮತ್ತು 59 ಎರಡೂ ಸೇರಿದಂತೆ ವಿಧೇಯಕದ ಅಂಗವಾಗಿರುತ್ತವೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 58 ಮತ್ತು 59 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಶ್ರೀ ಎಂ.ಪಿ.ಪ್ರಕಾಶ್: ಪ್ರತಿಯೊಂದು ಸ್ಥಾಯಿ ಸಮಿತಿ ಜಿಲ್ಲಾ ಪಂಚಾಯಾತ್‌ಗೆ ನಿರ್ದಿಷ್ಟಪಡಿಸಿದಂಥ ಜಿಲ್ಲಾ ಪಂಚಾಯತ್ ಸದಸ್ಯರು ಚುನಾಯಿತ ಸದಸ್ಯರ ಪೈಕಿಯಿಂದ ಚುನಾಯಿಸಿದ ಅಧ್ಯಕ್ಷರೂ ಸಹ ಏಳನ್ನು ಮೀರದಂಥ ಸಂಖ್ಯೆಯ ಸದಸ್ಯರನ್ನು ಒಳಗೊಂಡಿರತಕ್ಕದ್ದು. ಸ್ಥಾಯಿ ಸಮಿತಿ ಸದಸ್ಯರ ಚುನಾವಣೆಯನ್ನು ಜಿಲ್ಲಾ ಪಂಚಾಯತ್ ಸದಸ್ಯರನ್ನು ಚುನಾಯಿಸಲು ನಡೆಸುವಾಗ ಪ್ರತಿಯೊಂದು ಸಾರ್ವತ್ರಿಕ ಚುನಾವಣೆ ತರುವಾಯ ಅಥವಾ ಈ ಅಧಿನಿಯಮದಡಿ ಅದರ ಪುನರ್ ರಚನೆ ಅಥವಾ ಅದರ ಸ್ಥಾಪನೆಯಾದ ಮೇಲೆ ಸಾಧ್ಯವಾದಷ್ಟು ಬೇಗನೆ ಅಥವಾ ಸ್ಥಾಯಿ ಸಮಿತಿ ಸದಸ್ಯರ ಹುದ್ದೆಯ ಅವಧಿ ಮುಗಿಯುವುದಕ್ಕಿಂತ ನಿಕಟ ಪೂರ್ವದಲ್ಲಿ ನಡೆಸತಕ್ಕದ್ದು. ಪರಂತು, ಸಾಮಾಜಿಕ ನ್ಯಾಯ ಸಮಿತಿಯ ಕಡೆಯ ಪಕ್ಷ ಒಬ್ಬ ಮಹಿಳಾ ಸದಸ್ಯರನ್ನು ಮತ್ತು

ಅನುಸೂಚಿತ ಜಾತಿಗೆ ಮತ್ತು ಅನುಸೂಚಿತ ಪಂಗಡಕ್ಕೆ ಸೇರಿದ ಒಬ್ಬ ಸದಸ್ಯರನ್ನು ಒಳಗೊಂಡಿರತಕ್ಕದ್ದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಹೇಳಿದ್ದೇನೆ. Contrary to this Rule suppose if you send the circular, how can it be followed? ಯಾವಾಗ ಅಂದರೆ, ಈ ಸೆಕ್ಷನ್ ಇಟ್ಟುಕೊಂಡು ನಾವು ಹಿಂದೆ ಏನೋ ಒಪ್ಪಿಕೊಂಡಿದ್ದು ಲೆಟ್ರಿನ್ ಕಟ್ಟಿಸಕೊಡುತ್ತೀರೆಂದು, ಎಕ್ಸಿಕ್ಯುಟಿವ್ ಆರ್ಡರ್ ಆಗಬಹುದು.... ಆದರೂ ಕೂಡ, ಡಿಸ್‌ಕ್ವಾಲಿಫಿಕೇಷನ್ ಉಳಿದೇ ಉಳಿಯುತ್ತದೆ.

ಶ್ರೀ ಎಂ.ಪಿ.ಪ್ರಕಾಶ್: ತಾವು ಹೇಳಿದ ಹಾಗೆ, ಆಕಸ್ಮಾತ್ ಕಾನೂನಿನ ಕೆಳಗೆ ಈ ರೀತಿಯ ನಿಯಮಕ್ಕೆ ವಿರುದ್ಧವಾದ ನಿಯಮ ರಚಿಸುವುದಕ್ಕೆ ಆಗುವುದಿಲ್ಲವೆಂದರೆ ನಾನು ಪರೀಕ್ಷಿಸುತ್ತೇನೆ. ಅದನ್ನು ನೋಡಿ ಮುಂದೆ ಸರಿಪಡಿಸುತ್ತೇವೆ. ಅದಕ್ಕೆ ಮುಂದಿನ ಶಬ್ದಗಳನ್ನು ಹಾಕಬೇಕಾಗುತ್ತದೆ. ಆಯಾಯ ಜನಸಂಖ್ಯೆಯ ಅನುಪಾತಕ್ಕೆ ಅನುಗುಣವಾಗಿ ಎಂಬ ಶಬ್ದವನ್ನು ಹಾಕಬೇಕಾಗುತ್ತದೆ. ಪರಂತು, ಸಾಮಾಜಿಕವಾಗಿ ನ್ಯಾಯ ಸಮಿತಿ ಕಡೆಯ ಪಕ್ಷ ಒಬ್ಬ ಮಹಿಳಾ ಸದಸ್ಯರನ್ನು ಮತ್ತು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಕ್ಕೆ ಆಯಾಯ ಜನಸಂಖ್ಯೆಯ ಅನುಪಾತಕ್ಕೆನುಗುಣವಾಗಿ ಸೇರಿದ ಒಬ್ಬ ಸದಸ್ಯರನ್ನು ಒಳಗೊಂಡಿರತಕ್ಕದ್ದು. SC or ST proportionate to their population. ಆರ್ ಎನ್ನಬೇಕಾಗುತ್ತದೆ. ಆರ್ ಎಂದರೆ ಅಥವಾನೇ.

ಖಂಡ 60ಕ್ಕೆ ತಿದ್ದುಪಡಿ

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಖಂಡ 60 (1)ನೇ ಉಪ ಖಂಡಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ:

''(1) ಮತ್ತು (2)ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ,

''(2) ಪ್ರತಿಯೊಂದು ಸ್ಥಾಯೀ ಸಮಿತಿಯು, ಜಿಲ್ಲಾ ಪಂಚಾಯಿತಿಯು ನಿರ್ದಿಷ್ಟಪಡಿಸಿದಂತೆ ಜಿಲ್ಲಾ ಪಂಚಾಯಿತಿಯ ಸದಸ್ಯರುಗಳು ಚುನಾಯಿತ ಸದಸ್ಯರುಗಳ ಪೈಕಿಯಿಂದ ಚುನಾಯಿಸಿದ ಅಧ್ಯಕ್ಷನು ಸೇರಿ ಏಳನ್ನು ಮೀರದಂಥ ಸಂಖ್ಯೆಯ ಸದಸ್ಯರು ಜಿಲ್ಲಾ ಪಂಚಾಯಿತಿಯ ಸದಸ್ಯರನ್ನು ಚುನಾಯಿಸಲು ನಡೆಸಲಾಗುವ ಪ್ರತಿಯೊಂದು ಸಾರ್ವತ್ರಿಕ ಚುನಾವಣೆಯ ತರುವಾಯ ಅಥವಾ ಈ ಅಧಿ-ನಿಯಮದಡಿ ಅದರ ಪುನರ್ ರಚನೆ ಅಥವಾ ಸ್ಥಾಪನೆಯಾದ ಮೇಲೆ ಸಾಧ್ಯವಾದಷ್ಟು ಬೇಗನೆ ಅಥವಾ ಸ್ಥಾಯೀ ಸಮಿತಿಯ ಸದಸ್ಯರುಗಳ ಹುದ್ದೆಯ ಅವಧಿ ಮುಕ್ತಾವಾಗುವುದಕ್ಕೆ ನಿಕಟಪೂರ್ವದಲ್ಲಿ ನಡೆಸತಕ್ಕದ್ದು.

ಪರಂತು, ಸಾಮಾಜಿಕ ನ್ಯಾಯ ಸಮಿತಿಯು ಕಡೆಯ ಪಕ್ಷ ಒಬ್ಬ ಮಹಿಳಾ ಸದಸ್ಯರನ್ನು ಮತ್ತು ಅನುಸೂಚಿತ ಜಾತಿಗಳಿಗೆ ಅಥವಾ ಅನುಸೂಚಿತ ಪಂಗಡಗಳಿಗೆ ಆಯಾಯ ಜನಸಂಖ್ಯೆಯ ಅನುಪಾತಕ್ಕನುಗುಣವಾಗಿ ಒಬ್ಬ ಸದಸ್ಯನನ್ನು ಒಳಗೊಂಡಿರತಕ್ಕದ್ದು.''

ಪ್ರಸ್ತಾವ ಮಂಡಿಸಲ್ಪಟ್ಟಿತು.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''(1) (2)ನೇ ಉಪ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ,

''(2) ಪ್ರತಿಯೊಂದು ಸ್ಥಾಯೀ ಸಮಿತಿಯು, ಜಿಲ್ಲಾ ಪಂಚಾಯಿತಿಯು ನಿರ್ದಿಷ್ಟಪಡಿಸಿದಂತೆ ಜಿಲ್ಲಾ ಪಂಚಾಯಿತಿಯ ಸದಸ್ಯರುಗಳು ಚುನಾಯಿತ ಸದಸ್ಯರುಗಳ ಪೈಕಿಯಿಂದ ಚುನಾಯಿಸಿದ ಅಧ್ಯಕ್ಷರು ಸೇರಿ ಏಳನ್ನು ಮೀರದಂಥ ಸಂಖ್ಯೆಯ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು. ಸ್ಥಾಯೀ ಸಮಿತಿಯ ಸದಸ್ಯರ ಚುನಾವಣೆಯನ್ನು ಜಿಲ್ಲಾ ಪಂಚಾಯಿತಿಯ ಸದಸ್ಯರನ್ನು ಚುನಾಯಿಸಲು ನಡೆಸಲಾಗುವ ಪ್ರತಿಯೊಂದು ಸಾರ್ವತ್ರಿಕ ಚುನಾವಣೆಯ ತರುವಾಯ ಅಥವಾ ಈ ಅಧಿನಿಯಮದಡಿ ಅದರ ಪುನರ್ ರಚನೆ ಅಥವಾ ಸ್ಥಾಪನೆಯಾದ ಮೇಲೆ ಸಾಧ್ಯವಾದಷ್ಟು ಬೇಗನೆ ಅಥವಾ ಸ್ಥಾಯೀ ಸಮಿತಿಯ ಸದಸ್ಯರುಗಳ ಹುದ್ದೆಯ ಅವಧಿ ಮುಕ್ತಾಯವಾಗುವುದಕ್ಕೆ ನಿಕಟಪೂರ್ವದಲ್ಲಿ ನಡೆಸತಕ್ಕದ್ದು.

ಪರಂತು, ಸಾಮಾಜಿಕ ನ್ಯಾಯ ಸಮಿತಿಯು ಕಡೆಯ ಪಕ್ಷ ಒಬ್ಬ ಮಹಿಳಾ ಸದಸ್ಯರನ್ನು ಮತ್ತು ಅನುಸೂಚಿತ ಜಾತಿಗಳಿಗೆ ಅಥವಾ ಅನುಸೂಚಿತ ಪಂಗಡಗಳಿಗೆ ಆಯಾಯ ಜನಸಂಖ್ಯೆಯ ಅನುಪಾತಕ್ಕನುಗುಣವಾಗಿ ಒಬ್ಬ ಸದಸ್ಯನನ್ನು ಒಳಗೊಂಡಿರತಕ್ಕದ್ದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ 60 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಖಂಡ 60 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ 60, ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸಲ್ಪಟ್ಟಿತು.

ಖಂಡ 61-82 ರವರೆಗೆ, ಎರಡೂ ಸೇರಿದಂತೆ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, ''ಖಂಡ 61 ರಿಂದ 82ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 61 ರಿಂದ 82ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ;

''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಕಾಯ್ದುಕೊಂಡು ಕುಳಿತಿದ್ದೇನೆ. ಪೇಜ್ 28,73 ಅಮೆಂಡ್‌ಮೆಂಟ್ ಟು ಸೆಕ್ಷನ್ 268.

ಅಧ್ಯಕ್ಷರು: ಮೊದಲನೇ ಖಂಡ ಹೆಸರು ಮತ್ತು ಅವತರಣಿಕೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: 268. ಅದು ಅಪೀಲು. For the word in the opinion of the commissioner, the word on the recommendation of the taluk panchayat or otherwise, the Zilla Panchayat is of the opinion, that shall be substituted. ಅದನ್ನು ಗೌರ್ನಮೆಂಟ್ ಎಂದು ಮಾಡಿ. Taluka Panchayat will misuse, Sir. you keep it with the Government. 2-3 ಕಡೆ ಇದಾಗಿದೆ.... ನೋಡಿದರೆ, ಗುಲ್ಬರ್ಗ ನೋಡಿದರೆ, ಬೇರೆ ಕಡೆ....

ಶ್ರೀ ಎಂ.ಪಿ.ಪ್ರಕಾಶ್: ನಮ್ಮ ಅಧಿಕಾರ ವಿಕೇಂದ್ರೀಕರಣದ ಪರಿಕಲ್ಪನೆಗೆ ಇದು ವಿರುದ್ಧವಾದುದು.

(ಗೊಂದಲ)

ಶ್ರೀ ಎಂ.ವೈ.ಘೋರ್ಪಡೆ: ನಾನು ಚೆನ್ನಾಗಿ ನೋಡಿದ್ದೇನೆ. ನಿಮ್ಮ ಅಮೆಂಡ್‌ಮೆಂಟ್ ಪ್ರಕಾರ, ಅಧ್ಯಕ್ಷರನ್ನು ತೆಗೆಯುವಾಗ ಗೌರ್ನಮೆಂಟ್ ನೇರವಾಗಿ ಅವರನ್ನು ತೆಗೆಯುತ್ತದೆ.

ಮು ಪಂಚಾಯಿತಿ ಅಧ್ಯಕ್ಷರನ್ನು ನೇರವಾಗಿ ನೀವು ತೆಗೆಯಬಹುದು. ತಾಲ್ಲೂಕು ಪಂಚಾಯಿತಿಯನ್ನು ಕನ್‌ಸಲ್ಟ್ ಮಾಡಬಹುದು ಅಥವಾ ಬಿಡಬಹುದು. ಆದರೆ, ಅಧ್ಯಕ್ಷರನ್ನು ತೆಗೆಯುವ ಅಧಿಕಾರವನ್ನು ನೀವು ಇಟ್ಟುಕೊಂಡಿದ್ದೀರಿ. ಅದಕ್ಕೆ ನಾವು ವಿರೋಧ ಮಾಡುತ್ತಿಲ್ಲ. ಆದರೆ, ಬಾಡಿಯನ್ನೇ ತೆಗೆಯುವ ಅಧಿಕಾರವನ್ನು ನೀವು ಜಿಲ್ಲಾ ಪರಿಷತ್‌ಗೆ ಕೊಟ್ಟಿದ್ದೀರಿ. It is inconsistent. ಯಾವ ತರಹವೆಂದರೆ, ಅದರ ಅಧ್ಯಕ್ಷರನ್ನು ತೆಗೆಯುವ ಅಧಿಕಾರ ನಿಮ್ಮ ಕಡೆ ಇದೆ, ಬಾಡಿಯನ್ನು ತೆಗೆಯುವ ಅಧಿಕಾರ ಅಧ್ಯಕ್ಷರ ಕಡೆ ಇದೆ. ಹಿಂದೆ ಇದರ ಬಗ್ಗೆ ಬಹಳ ಅನ್ಯಾಯ ನಡೆದಿದೆ. ನಾವು ಹೈ ಕೋರ್ಟಿಗೆ ಹೋಗಿ ನಿಲ್ಲಿಸಬೇಕಾಯಿತು. ಆಗ ಶ್ರೀ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದರು ಮತ್ತು ಶ್ರೀ ನಜೀರ್ ಸಾಬ್‌ರವರು ಮಂತ್ರಿಗಳಾಗಿದ್ದರು. ನೀವು ಕಾಲ ಕೊಡುವುದಾದರೆ ನಾನು ಎರಡು ನಿಮಿಷಗಳಲ್ಲಿ ಓದುತ್ತೇನೆ. ನಾನು ಶ್ರೀ ರಾಮಕೃಷ್ಣ ಹೆಗಡೆಯವರಿಗೆ ಕಾಗದ ಬರೆದಿದ್ದೆ. 20th December, 1987. "I am constrained to bring to your notice serious attempts being made by the Bellary Zilla Panchayat to dissolve the Sandur Interim Mandal Panchayat which was a Town Municipality till January 1986, which has an excellent record of democratic progressive functioning and social service. The Bellary Zilla Parishad has recently issued a show-cause notice to Sandur Interim Mandal Panchayat for disolving it. You will kindly appreciate that the harmony, peace and progress of Sandur should not be interfered in this manner." ಇದೇ ಧಾಟಿಯಲ್ಲಿ ಶ್ರೀ ನಜೀರ್ ಸಾಬ್‌ರವರಿಗೂ ಪತ್ರ ಬರೆದೆ. He was very sympathetic. ಅದು ಆಗಲಿಕ್ಕೆ ಸಾಧ್ಯ. ಯಾವಾಗಲೂ ಅಧ್ಯಕ್ಷರನ್ನು ತೆಗೆಯುವ ಅಧಿಕಾರವನ್ನು ಇಟ್ಟುಕೊಂಡ ಮೇಲೆ ಅದನ್ನು ನೀಮ್ಮ ಕಡೆ ಇಟ್ಟುಕೊಳ್ಳಿ, ಇಂಟರ್ನಲ್ ಕಾಂಟ್ರಡಿಕ್ಷನ್ ಆಕ್ಟ್‌ನಲ್ಲಿ ಬರುತ್ತದೆ. The body which is a bigger thing you want to hand it over to the Zilla Panchayat, it is inconsistent even structurally.

ಶ್ರೀ ಎಂ.ಪಿ.ಪ್ರಕಾಶ್: ಇದರಲ್ಲಿ ಯಾವ ತರಹದ ಇನ್‌ಕನ್‌ಸಿಸ್ಟೆನ್ಸಿ ಇಲ್ಲ. ಈ ಅಧ್ಯಕ್ಷ, ಕೆಲವು ಸಂದರ್ಭಗಳಲ್ಲಿ ಮಾಡಿರತಕ್ಕದ್ದರಲ್ಲಿ ಸರ್ಕಾರ ಅಧಿಕಾರವನ್ನು ಇಟ್ಟುಕೊಂಡಿರುವುದು. ಇಡೀ ಒಂದು ಬಾಡಿಯನ್ನು ತೆಗೆಯುವಂಥಾದ್ದು. ಇಡೀ ಚುನಾಯಿತವಾಗಿರತಕ್ಕ ಬಾಡಿಯನ್ನು ತೆಗೆಯುವಾಗ ಇದು ಒಂದು ಆಡಳಿತ ಪಕ್ಷ ಇರತಕ್ಕ ಸರ್ಕಾರ ಇದನ್ನು ದುರುಪಯೋಗಪಡಿಸಿಕೊಳ್ಳಬಹುದು ಎನ್ನುವ ಭಾವನೆಗಳ ಹಿನ್ನೆಲೆಯಲ್ಲಿ ಜಿಲ್ಲಾ ಪರಿಷತ್‌ಗೆ ನಮ್ಮಷ್ಟೇ ವಿವೇಕ, ತಿಳುವಳಿಕೆ ಇರುತ್ತದೆ, ಆಗ ಅವರು

ತಮ್ಮದೇ ಆದ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆ. ಆದುದರಿಂದ, ಒಂದು ಸರ್ಕಾರ ತೆಗೆದುಕೊಳ್ಳುವುದಕ್ಕಿಂತ ಹೆಚ್ಚಾಗಿ ಅಲ್ಲಿ ಸ್ಥಳೀಯವಾಗಿರತಕ್ಕ ಜಿಲ್ಲಾ ಪಂಚಾಯತ್, ಆ ನಿರ್ಣಯವನ್ನು ತೆಗೆದುಕೊಳ್ಳಬಹುದು ಎಂದು ಮಾಡಿದ್ದೇವೆಯೇ ವಿನಾಃ ಅದು ಇನ್‌ಕನ್‌ಸಿಸ್ಟನ್ಸಿ ಇಲ್ಲ. ನಮ್ಮಲ್ಲಿರತಕ್ಕ ನಮ್ಮ ಪರಿಣಿತ ಸಮಿತಿ ಇರತಕ್ಕ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಬಾಡಿಯನ್ನು ಡಿಸಾಲ್ವ್ ಮಾಡತಕ್ಕ ಅಧಿಕಾರವನ್ನು ತಾಲ್ಲೂಕು ಪಂಚಾಯಿತಿಗೆ ಕೊಡುತ್ತೀರಿ. ಒಬ್ಬ ಅಧ್ಯಕ್ಷರನ್ನು ತೆಗೆಯುವುದಕ್ಕೆ ಸರ್ಕಾರಕ್ಕೆ ಅಧಿಕಾರ ಕೊಡುತ್ತೀರಿ. ಹೇಗೆ?

ಶ್ರೀ ಎಂ.ಪಿ.ಪ್ರಕಾಶ್: ಕಾಂಗ್ರೆಸ್‌ನವರ ಯೋಚನಾ ಲಹರಿಯೇ ಬೇರೆ, ನಮ್ಮ, ಜನತಾದಳದವರ ಯೋಚನಾ ಲಹರಿಯೇ ಬೇರೆ ಇರುತ್ತದೆ. ವ್ಯತ್ಯಾಸ ಇಷ್ಟೆ, ನಾವು ಹೆಚ್ಚು ಅಧಿಕಾರವನ್ನು...

ಮಾನ್ಯ ಸದಸ್ಯರು: ನಾಳೆ ನಮ್ಮ ಸರ್ಕಾರ ಬರಬಹುದು. ಆವಾಗಲೂ...

ಶ್ರೀ ಎಂ.ಪಿ.ಪ್ರಕಾಶ್: ನಾವು ಅಧಿಕಾರವನ್ನು ಹೆಚ್ಚು ವಿಕೇಂದ್ರೀಕರಿಸಬೇಕು ಎಂದು ನಂಬಿದ್ದೇವೆ. ಅದು ಯಾವುದೇ ರೂಪದಲ್ಲಿ ಒಂದು ಸರ್ಕಾರದ ಕೈಯ್ಯಲ್ಲಿರಬಾರದು. ಈಗ ಇಲ್ಲಿಯವರೆಗೆ ಇರತಕ್ಕ ಅನೇಕ ಟೀಕೆ-ಟಿಪ್ಪಣಿಗಳೇನೆಂದರೆ, ಸರ್ಕಾರವೇ ಎಲ್ಲಾ ನಿರ್ದೇಶನಗಳನ್ನು ಮಾಡತಕ್ಕದ್ದು ಸರಿಯಲ್ಲ, ಸರ್ಕಾರವೇ ಇಂಥ ವಿಚಾರಗಳಲ್ಲಿ ಪ್ರವೇಶ ಮಾಡತಕ್ಕದ್ದು ಸರಿಯಾದುದಲ್ಲ. ಇಂಥವೇನಾದರೂ ನಿರ್ಣಯಗಳನ್ನು ನಾವು ತೆಗೆದುಕೊಂಡರೆ ಮುಂದೆ ಅನೇಕ ಸಂದರ್ಭಗಳಲ್ಲಿ ನಮ್ಮ ವಿಧಾನ ಸಭೆಯನ್ನು ವಿಸರ್ಜನೆ ಮಾಡುವ ಅಧಿಕಾರದ ವಿಚಾರದಲ್ಲಿ ಕೂಡ ಸರ್ಕಾರಕ್ಕೆ ಒಂದು ಮಾರ್ಗಸೂಚನೆಯಾದರೂ ಆಗಬಹುದು. ಏಕೆಂದರೆ, ಈಗ ನಾವು ನೋಡುತ್ತಿದ್ದೇವೆ, ರಾಷ್ಟ್ರಪತಿ ಆಳ್ವಿಕೆ ಇರುವಂಥಾದ್ದು, ಯಾವುದೋ ಕಾರಣಗಳ ಮೂಲಕ ವಿಸರ್ಜನೆ ಮಾಡತಕ್ಕದ್ದು. ಈ ರೀತಿಯಿಂದ ಏನಿರುತ್ತದೆ, ಆದರಿಂದ ಅವರಿಗೆ ಮಾರ್ಗದರ್ಶನ ಆಗಬಹುದೆಂದು ಭಾವಿಸುತ್ತೇವೆ. ಯಾವ ಇನ್‌ಕನ್‌ಸಿಸ್ಟನ್ಸಿ ಅಲ್ಲ. ದಯಮಾಡಿ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವೈ.ಘೋರ್ಪಡೆ: ಅಧ್ಯಕ್ಷರನ್ನು ತೆಗಯುವ ಅಧಿಕಾರ ಸರ್ಕಾರಕ್ಕೆ ಇದ್ದರೆ, ಬಾಡಿಯನ್ನು ತೆಗೆಯುವ ಅಧಿಕಾರ ಜಿಲ್ಲಾ ಪರಿಷತ್‌ಗೆ ಹೇಗೆ ಕೊಡಲಿಕ್ಕೆ ಆಗುತ್ತದೆ? ಅದರಲ್ಲಿ...

ಶ್ರೀ ಎಂ.ಪಿ.ಪ್ರಕಾಶ್: ಅಧ್ಯಕ್ಷರನ್ನು ತೆಗೆಯುವ ಅಧಿಕಾರವನ್ನೂ ಬಾಡಿಗೇ ಬಿಡುತ್ತೇವೆ. It is not vice versa. We are prepared to see that power is also given to the Zilla Panchayat. We will give that power to the Zilla Panchayat.

ಶ್ರೀ ಎಂ.ವೈ.ಘೋರ್ಪಡೆ: ಜಿಲ್ಲಾ ಪಂಚಾಯಿತಿಗೆ ಕೊಟ್ಟರೆ ಟೆಕ್ನಿಕಲ್ ಇನ್‌ಕನ್‌ಸ್ಟಿಸ್ಟೆನ್ಸಿ ಹೋಗಲಾಡಿಸಿದಂತಾಗುತ್ತದೆ. But appeal to the Government is very important. This is a very serious matter.

ಶ್ರೀ ಎಂ.ಪಿ.ಪ್ರಕಾಶ್: ಅಪೀಲ್‌ಗೆ ಅವಕಾಶ ಕೊಡುವುದು, ಅದನ್ನು ನೋಡೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೋಡೋಣ ಅಲ್ಲ.

ಶ್ರೀ ಎಂ.ಪಿ.ಪ್ರಕಾಶ್: ನೋಡಿ, ನಾವು ಕಾನೂನು ತಂದಮೇಲೆ ಯಾವುದನ್ನು ಪುನರ್ ವಿಮರ್ಶೆ ಮಾಡುವುದಕ್ಕಾಗುತ್ತದೆ? ಈಗ ಹೇಳಿದಂತೆ ಅಧ್ಯಕ್ಷರನ್ನು ತೆಗೆದುಹಾಕುವ ಅಧಿಕಾರ ಸರ್ಕಾರಕ್ಕೆ ಇಟ್ಟುಕೊಂಡಿದ್ದೇವೆ. ಅದನ್ನು ಜಿಲ್ಲಾ ಪಂಚಾಯಿತಿಗೆ ಕೊಡುವುದಕ್ಕೆ ನಾವು ತಯಾರಿದ್ದೇವೆ. There can't be any inconsistency at all.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಪೀಲ್‌ಗೆ ಮಾಡಿ.

ಅಧ್ಯಕ್ಷರು: ಪ್ರಕಾಶ್ ಅವರೇ, ಅವರು ಏನು ಹೇಳುತ್ತಾರೆಂದರೆ you are anyway giving the authority to remove the President which hither-to vested in the Government, to Zilla Panchayat. Supposing the Zilla Panchayat acts erroneously while passing its judgment. ಅದಕ್ಕೆ ಪ್ರಾವಿಷನ್ ಇರಬೇಕು ಎಂದು ಹೇಳುತ್ತಾರೆ.

ಶ್ರೀ ಎಂ.ಪಿ.ಪ್ರಕಾಶ್: ಆಗಬಹುದು. ನಾನು ಅದನ್ನು ಆಗಲೇ ಹೇಳಿದೆ. ಅಪೀಲಬಲ್ ಪ್ರಾವಿಷನ್ ಕೂಡ ತರುತ್ತೇವೆ ಅದಕ್ಕೆ.

MR. SPEAKER: He is giving an assurance. ಚರ್ಚೆ ಇಲ್ಲಿಗೆ ಸಾಕು.

ಅನುಮೋದನಾ ಪ್ರಸ್ತಾವ

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೇ,

''1997ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (3ನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸಬೇಕೆಂದು ಕೋರುತ್ತೇನೆ.''

ಅಧ್ಯಕ್ಷರು: ಪ್ರಸ್ತಾವ ಏನೆಂದರೆ ''1997ನೇ ಸಾಲಿನ ಕರ್ನಾಟಕ ಪಂಚಾಯತ್‌ರಾಜ್ (3ನೇ ತಿದ್ದುಪಡಿ) ವಿಧೇಯಕವನ್ನು, ತಿದ್ದುಪಡಿಯಾದರೀತಿಯಲ್ಲಿ ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು. ಮತ್ತು ವಿಧೇಯಕಕ್ಕೆ ಅನುಮೋದನೆ ನೀಡಲಾಯಿತು.

(8) ಪ್ರಕಟಣೆಗಳು:

ಅಧ್ಯಕ್ಷರು: (i) ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ವಿಧಾನಪರಿಷತ್ತು ದಿನಾಂಕ 11ನೇ ಸೆಪ್ಟೆಂಬರ್ 1997ರಂದು ಈ ಕೆಳಕಂಡ ವಿಧೇಯಕಗಳಿಗೆ ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ.

1) ಕೂಡಲಸಂಗಮ ಅಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕ 1996

2) ಕರ್ನಾಟಕ ಸ್ಟ್ಯಾಂಪ್ (ಎರಡನೇ ತಿದ್ದುಪಡಿ) ವಿಧೇಯಕ 1997

3) ಮಾನವ ನೇತ್ರಗಳ ಚಿಕಿತ್ಸೆ ಮತ್ತು ಸಂಶೋಧನಾ ಉದ್ದೇಶಗಳಿಗೆ ಬಳಸಿಕೊಳ್ಳುವುದಕ್ಕೆ ಅಧಿಕಾರ ನೀಡುವುದು ಮತ್ತು ಇತರ ಕಾನೂನುಗಳ ನಿರಸನ ಕರ್ನಾಟಕ ವಿಧೇಯಕ 1996

(ii) ಕರ್ನಾಟಕ ವಿಧಾನಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 120ರ ಮೇರೆಗೆ ವಿಧಾನಪರಿಷತ್ತು 11ನೇ ಸೆಪ್ಟೆಂಬರ್ 1997ರಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ 1997ನ್ನು ತಿರಸ್ಕರಿಸಲಾಯಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ.

ಅಧ್ಯಕ್ಷರು: ಈಗ ಸದನವನ್ನು ಮುಂದೂಡಲಾಗಿದೆ. ಪುನಃ ನಾಳೆ ಬೆಳಗ್ಗೆ 10 ಗಂಟೆಗೆ ಸಭೆ ಸಮಾವೇಶಗೊಳ್ಳುತ್ತದೆ.

(ರಾತ್ರಿ 8 ಗಂಟೆ 05 ನಿಮಿಷಕ್ಕೆ ಸದನವು ಮುಂದೂಡಲ್ಪಟ್ಟು 12-9-1997ರಂದು ಬೆಳಗ್ಗೆ 10 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣಗಳನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಕರ್ನಾಟಕ ವಿಧಾನ ಸಭೆ

ಶುಕ್ರವಾರ 12ನೇ ಸೆಪ್ಟೆಂಬರ್ 1997ರಂದು ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ: 10-20 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರು: ಮಾನ್ಯ ರೋಷನ್ ಬೇಗ್ ಅವರ ಕ್ಷೇತ್ರದಲ್ಲಿ ಮಳೆ ಜಾಸ್ತಿ ಬಂದು ಕೆಲವು ಮನೆಗಳು ಕೊಚ್ಚಿಹೋಗಿವೆಯೆಂದು, ಅಲ್ಲಿ ಹೋಗಿ ನೋಡಿಕೊಂಡು ಬರುತ್ತೇನೆಂದು ಅವರು ನನ್ನ ಅನುಮತಿಯನ್ನು ಪಡೆದುಕೊಂಡು ಹೋಗಿದ್ದಾರೆ.

(1) ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ.ಸಿ.ನಾಣಯ್ಯ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)ರವರು ಶ್ರೀ ಆರ್.ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ, ದಂತ ಚೋರ ವೀರಪ್ಪನ್ ಸಹಚರರಾದ ಅರ್ಜುನ್, ಆಯ್ಯನ್‌ದೊರೈ ಮತ್ತು ರಂಗಸ್ವಾಮಿ ಇವರುಗಳ ಸಾವಿನ ಬಗ್ಗೆ ಶ್ರೀ ಎನ್.ಎನ್.ಸಂಗೊಳ್ಳಿ ವಿಚಾರಣಾ ವರದಿ ಹಾಗೂ ಮೆಮೊರಾಂಡಮ್‌ಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

(2) ವರದಿಯನ್ನೊಪ್ಪಿಸುವುದು

ಶ್ರೀ ವಿ.ಎಸ್.ಕೌಜಲಗಿ (ಅರಭಾವಿ): ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಅಧ್ಯಕ್ಷನಾದ ನಾನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಡಿಯಲ್ಲಿ ಬರುವ ನವದೆಹಲಿಯ ಕರ್ನಾಟಕ ಭವನದ ಕಾರ್ಯವೈಫಲ್ಯತೆಯ ಬಗ್ಗೆ ಸಮಿತಿಯು ತನ್ನ 31ನೇ ವರದಿಯನ್ನು ಈಗ ನಾನು ಸದನದ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ವರದಿಯನ್ನೊಪ್ಪಿಸಲಾಯಿತು.

(3) ಅಧ್ಯಕ್ಷರ ಅಪ್ಪಣೆ ಮೇರೆಗೆ:

ವಿಷಯ: ಅಪ್ಪರ್ ಕೃಷ್ಣ ಬಗ್ಗೆ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾವ ಮಾಡಲಿಕ್ಕೆ ಕೊಟ್ಟಂಥ ನೋಟೀಸ್‌ನ ಬಗ್ಗೆ, ಆ ಮೇಲೆ ತಮಗೆ ಅವಕಾಶ ಕೊಡುತ್ತೇನೆ. ಇವತ್ತು ನಿಮಗೆ ಅವಕಾಶ ಕೊಡುತ್ತೇನೆಂದು ನಾನು ಮೊದಲೇ ಮಾತು ಕೊಟ್ಟುಬಿಟ್ಟಿದ್ದೇನೆ. ಮೊದಲು ನಮ್ಮ ಸ್ನೇಹಿತರಿಗೆಲ್ಲಾ ಮಾತನಾಡುವುದಕ್ಕೆ ಅವಕಾಶಕೊಟ್ಟುಬಿಡೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ ಮಾನ್ಯ ಸದಸ್ಯರುಗಳಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಅದಕ್ಕೆ ನನ್ನದೇನೂ ಅಭ್ಯಂತರ ಇಲ್ಲ. ನಾನು ಈಗ ಪ್ರಸ್ತಾಪ ಮಾಡುತ್ತೇನೆ, ಬೇಕಾದರೆ ಅದನ್ನು ನೀವು ಕನ್‌ವರ್ಟ್ ಮಾಡುವುದಾದರೆ ನನ್ನದೇನೂ ಅಭ್ಯಂತರ ಇಲ್ಲ.

ಅಧ್ಯಕ್ಷರು: ಕನ್‌ವರ್ಟ್ ಮಾಡುತ್ತೇನೆ. ನನ್ನ ಚೇಂಬರ್‌ನಲ್ಲಿ ನಿಮಗೆ ಮಾತು ಕೊಟ್ಟು ಬಿಟ್ಟಿದ್ದೇನೆ ಅಲ್ಲವೇ? ಅಪ್ಪರ್ ಕೃಷ್ಣಗೆ ಸಂಬಂಧಪಟ್ಟ ಹಾಗೆ ಪ್ರಸ್ತಾಪ ಮಾಡಲು ನಂತರ ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಚರ್ಚೆ ಮಾಡಲು ಕೊನೆಯಲ್ಲಿ ಅವಕಾಶ ಕೊಟ್ಟರೆ ಇದಕ್ಕೆ ಸರ್ಕಾರದಿಂದ ಉತ್ತರ ಕೊಡಲು ಕೊನೆಯಲ್ಲಿ ಯಾರೂ ಇರುವುದಿಲ್ಲ.

ಅಧ್ಯಕ್ಷರು: ಇವತ್ತು ಯಾರೂ ಸಹ ಬೇಗ ಹೋಗುವುದಿಲ್ಲ. ಪತ್ರಿಕೆಯವರು, ನಾನು, ನೀವು ಹೀಗೆ ಎಲ್ಲರೂ ಇಲ್ಲಿ ಇದ್ದು ಎಲ್ಲಾ ಕೆಲಸ ಮುಗಿಸಿ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಪತ್ರಿಕೆಯವರಿಗಿಂತಲೂ ಮಂತ್ರಿಗಳು ಇಲ್ಲಿ ಇದ್ದರೆ ಒಳ್ಳೆಯದು.

ಅಧ್ಯಕ್ಷರು: ಮಂತ್ರಿಗಳೂ ಸಹ ಕೊನೆಯವರೆಗೆ ಸದನದಲ್ಲಿ ಇರುವ ಹಾಗೆ ಮಾಡುತ್ತೇನೆ ಹಾಗೆಯೇ ಈ ಕಡೆ ಸದಸ್ಯರೂ ಸಹ ಇರುವ ಹಾಗೆ ಹೇಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಂತ್ರಿಗಳು ಇರಬೇಕೆಂದು ಏಕೆ ಹೇಳುತ್ತಿದ್ದೇನೆ ಎಂದರೆ ಮಹಾರಾಷ್ಟ್ರದವರು ಭೀಮಾ ರಿವರ್‌ನ ಡೈವರ್ಷನ್‌ಗೆ ನಿನ್ನೆಯ ದಿವಸ ಇನಾಗ್ಯುರೇಷನ್ ಮಾಡಿದ್ದಾರೆ. ಮತ್ತು ಕೃಷ್ಣಯ್ಯ ಎನ್ನುವವರು ಆಂಧ್ರಪ್ರದೇಶದ ಹೈಕೋರ್ಟ್‌ನಲ್ಲಿ ಏನು ಕೇಸ್ ಹಾಕಿದ್ದರು ಅವರ ಅಪೀಲ್ ಸೆಪ್ಟೆಂಬರ್ 30ರಂದು ಹಿಯರಿಂಗ್ ಬರುತ್ತಿದೆ. ಅದಕ್ಕೆ ಕೌಂಟರ್ ಅಫಿಡೆವಿಟ್‌ನ್ನು ನಮ್ಮ ಸರ್ಕಾರದಿಂದ

ಹಾಕಬೇಕು. ಆ ದೃಷ್ಟಿಯಿಂದ ಕೆಲವು ವಿವರಗಳನ್ನು ಕೇಳತಕ್ಕಂಥದ್ದು ಅಷ್ಟೇ ಹೊರತಾಗಿ ಮತ್ತೆ ಇನ್ನೇನೂ ಇಲ್ಲ.

ಅಧ್ಯಕ್ಷರು: ತೆಗೆದುಕೊಳ್ಳೋಣ, we will take it up. ಮಾನ್ಯ ಶಿವಪ್ಪನವರೇ, ತಾವು ಶೂನ್ಯ ವೇಳೆಯಲ್ಲಿ ಏನೋ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಕೇಳಿದ್ದೀರಿ. ತಾವು ಈಗ ಪ್ರಸ್ತಾಪ ಮಾಡಿ.

(ಅ) ಕೊಡಲಿಪೇಟೆ ಸೊಸೈಟಿಯಲ್ಲಿನ ಅವ್ಯವಹಾರಗಳು

+ ಶ್ರೀ ಬಿ.ಬಿ.ಶಿವಪ್ಪ (ಸಕಲೇಶಪುರ): ಮಾನ್ಯ ಅಧ್ಯಕ್ಷರೆ, ಕಳೆದ ಸದನದಲ್ಲಿ ಕೊಡಲಿಪೇಟೆ ಸೊಸೈಟಿ ಬಗ್ಗೆ ನಾನು ಗಮನ ಸೆಳೆಯುವ ಸೂಚನೆಯಲ್ಲಿ ಪ್ರಸ್ತಾಪ ಮಾಡಿದ್ದೆ. ಮಾನ್ಯ ಸಹಕಾರ ಮಂತ್ರಿಗಳು ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಆ ಉತ್ತರದಲ್ಲಿ ಅವರು ಏನು ಹೇಳಿದ್ದಾರೆಂದರೆ- ಇದರಲ್ಲಿ ಅವ್ಯವಹಾರ ನಡೆದಿರುವುದು ಸರಿ, ನಿಯಮ 64ರ ಪ್ರಕಾರ ಶಾಸನಬದ್ಧ ವಿಚಾರಣೆಗೆ ಆದೇಶ ನೀಡಿದ್ದರೂ, ಕ್ರಮಬದ್ಧತೆಯನ್ನು ಪ್ರಶ್ನೆ ಮಾಡಿ ಆದೇಶವನ್ನು ಮಾನ್ಯ ಉಚ್ಚನ್ಯಾಯಾಲಯ ರದ್ದುಪಡಿಸಿದೆ. ಅದಕ್ಕೆ ಬೇರೆ ವ್ಯವಸ್ಥೆ ಮಾಡುತ್ತೇವೆಂದು ಮಂತ್ರಿಗಳು ಹೇಳಿದ್ದಾರೆ. ಈ ಹೇಳಿಕೆಯನ್ನು ತಾವು ಫೆಬ್ರವರಿ 2ನೇ ತಾರೀಖಿನಂದು ಕೊಟ್ಟಿದ್ದೀರಿ. ಅದರ ನಂತರ ಇಲ್ಲಿಯವರೆಗೆ ಏನಾಯಿತು ಎಂಬುದು ಗೊತ್ತಾಗಲಿಲ್ಲ. ಇವರು ರಾಜಕೀಯವಾಗಿ ತುಂಬಾ ಪ್ರಬಲರಾಗಿದ್ದಾರೆಂದು ನಾನು ಹೇಳಿದಾಗ ಮಾನ್ಯ ಸಹಕಾರ ಸಚಿವರು ಒಂದು ಮಾತನ್ನು ಹೇಳಿದರು. ಹಾಗೆಯೇ 'ಅವರು ಯಾವ ಪಾರ್ಟಿಯವರು ಎಂದು ಹೇಳಿ' ಆ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರೂ ಸಹ ಆವಾಗ ಪ್ರವೇಶ ಮಾಡಿದ್ದರು. ಆ ಪ್ರಬಲರು ದಳದ ಪ್ರಮುಖರು ಎಂದು ನಾನು ಆ ಸಂದರ್ಭದಲ್ಲಿ ಹೇಳಿದ್ದೇನೆ. ಆಗ ಮಾನ್ಯ ಅಧ್ಯಕ್ಷರು ''ಜವಾಬ್ದಾರಿಕೆ ಇನ್ನೂ ಹೆಚ್ಚಾಯಿತು'' ಎನ್ನುವ ಮಾತನ್ನು ಹೇಳಿದ್ದಾರೆ. ಸತ್ಯ ಹೊರಕ್ಕೆ ಬರಲಿ ಎಂದು ಮಾನ್ಯ ಅಧ್ಯಕ್ಷರು ಆಗ ಸರ್ಕಾರಕ್ಕೆ ಸೂಚನೆ ಕೊಟ್ಟಿದ್ದಾರೆ. ನಂತರ ''ಮಾನ್ಯ ಗೌರವಾನ್ವಿತ ಸದಸ್ಯರು ತಂದಂಥ ಗಮನಸೆಳೆಯುವ ಸೂಚನೆ ಮೇಲೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ, ಬಹುಶಃ ನಾನು ಹಲವಾರು ಸಂದರ್ಭಗಳಲ್ಲಿ ಹೇಳಿದ್ದೇನೆ, ಯಾವ ಯಾವ ಪಕ್ಷದವರು ಇದ್ದಾರೆಂದು ಅವರ ಮುಖ ನೋಡುವುದಿಲ್ಲ, ತಪ್ಪು ಇದ್ದರೆ ಕ್ರಮ ತೆಗೆದುಕೊಳ್ಳುತ್ತೇನೆ, ಆದರೆ ದುರ್ದೈವ ಏನಾಗಿದೆಯೆಂದರೆ, ನಿಯಮ 64ರ ಪ್ರಕಾರ ವಿಚಾರಣೆ ಮಾಡಿದ ಮೇಲೆ ನಾವು ರದ್ದು ಮಾಡಬೇಕಾಗುತ್ತದೆ. ಯಾವುದೇ ಸಂಘವನ್ನು ಸುಮ್ಮನೆ ಹೋಗಿ ರದ್ದು ಮಾಡಿದರೆ, ಅವರು ಹೈಕೋರ್ಟಿಗೆ ಹೋಗಿ ಸ್ಟೇ ತರುತ್ತಾರೆ'' ಈ ರೀತಿಯಾಗಿ ಮಾನ್ಯ ಮಂತ್ರಿಗಳು ಕಾನೂನಿನ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಸರ್ಕಾರ 64ನೇ ನಿಯಮದ ಪ್ರಕಾರ ವಿಚಾರಣೆ ಮಾಡಲಿಕ್ಕೆ ಆ ಸೊಸೈಟಿಗೆ ಯಾವ ಅಧಿಕಾರಿಯನ್ನು ಹಾಕಿದ್ದರೋ, ಆ ಅಧಿಕಾರಿ ಇದನ್ನು ವಿಚಾರಣೆ ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ರೀತಿಯಲ್ಲಿ ಆ ಸೊಸೈಟಿಯವರು ಸ್ಟೇ

ತಂದರು. ಆದ್ದರಿಂದ ಅಲ್ಲಿಗೆ ಬೇರೆ ಅಧಿಕಾರಿಯನ್ನು ನೇಮಕ ಮಾಡಿ ಸರ್ಕಾರ ವಿಚಾರಣೆ ಮಾಡಿಸಬೇಕಾಗುತ್ತದೆ. ಪುನಃ ವಿಚಾರಣೆಗೆಂದು ತಾವು ನೇಮಿಸಿದ ಅಧಿಕಾರಿಯೂ ಕೂಡ ಅದೇ ಗ್ರೇಡ್‌ನವನು ಆಗಿರುವುದರಿಂದ 2ನೇ ಬಾರಿಯೂ ಸಹ ಆ ಸೊಸೈಟಿಯವರು ಸ್ಟೇ ತಂದಿದ್ದಾರೆ. ಅಲ್ಲಿ ಸುಮಾರು ಲಕ್ಷಾಂತರ ರೂಪಾಯಿ ಅವ್ಯವಹಾರ ಆಗಿರತಕ್ಕಂಥದ್ದಾಗಿದೆ. ಫೆಬ್ರವರಿ ತಿಂಗಳಲ್ಲಿ ಇದನ್ನು ಪ್ರಸ್ತಾಪ ಮಾಡಿದ್ದೆ ಈಗ ಸೆಪ್ಟೆಂಬರ್ ತಿಂಗಳಿನಲ್ಲಿ ಇದ್ದೇವೆ, 2ನೇ ಸಲವೂ ಸಹ ಅವರು ಸ್ಟೇ ತಂದಿದ್ದಾರೆ ಬಹುಶಃ ಇದು ಮಾನ್ಯ ಸಚಿವರ ಗಮನಕ್ಕೇ ಬರಲಿಲ್ಲವೆಂದು ತೋರುತ್ತದೆ. ಆದ್ದರಿಂದ ಈಗ ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮನ್ನು ಕೇಳಿಕೊಳ್ಳುವುದೇನೆಂದರೆ ಈ ತರಹ ಸೊಸೈಟಿಗಳಲ್ಲಿ ಆದರೆ ತುಂಬಾ ಕಷ್ಟವಾಗುತ್ತದೆ. 9 ತಿಂಗಳಾದರೂ ವಿಚಾರಣೆ ಮಾಡಿರುವಂಥದ್ದು ಸರಿಯಿಲ್ಲವೆಂದು ಪುನಃ ಅದೇ ತರಹದ ಅಧಿಕಾರಿ ಹೋಗಿ ವಿಚಾರಣೆ ಮಾಡುವುದಾದರೆ, ಅದೇ ತರಹದ ಅಧಿಕಾರಿಯನ್ನು ಯಾರು ನೇಮಕ ಮಾಡಿ ಕಳುಹಿಸಿದರೋ ಅವರ ಮೇಲೆಯೂ ಸಹ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈ ಸೊಸೈಟಿಯ ಸಂಬಂಧಪಟ್ಟವರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಈ ಸಾಲದ ಹಣ ವಾಪಸ್ಸು ಬರುವುದಿಲ್ಲ. ಮತ್ತು ಆ ವ್ಯಕ್ತಿ ಪುನಃ ಈ ಸಲ ಸಾಲ ತೆಗೆದುಕೊಂಡಿದ್ದಾನೆ ಎಂಬ ವದಂತಿ ನನಗೆ ಬಂದಿದೆ. ಇಷ್ಟೆಲ್ಲಾ ಅವ್ಯವಹಾರಗಳು ನಡೆದಿದ್ದರೂ ಕೂಡ ಅದೇ ವ್ಯಕ್ತಿ ಮತ್ತೆ ಮಾರ್ಚ್ ಏಪ್ರಿಲ್ ತಿಂಗಳಲ್ಲಿ ಸಾಲ ತೆಗೆದುಕೊಂಡಿದ್ದಾನೆ ಎನ್ನುವ ವದಂತಿ ಹಬ್ಬಿದೆ. ಆದರೆ ಅದರ ಸರಿಯಾದಂಥ ಮಾಹಿತಿ ನನ್ನಲ್ಲಿ ಇಲ್ಲ. ಆದರೂ ಅವರು ಸಾಲ ತೆಗೆದುಕೊಂಡಿದ್ದಾರೆ. ಸರ್ಕಾರ ತಕ್ಷಣ ಆ ಸೊಸೈಟಿ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್: ಮಾನ್ಯ ಅಧ್ಯಕ್ಷರೆ, ನಾನೂ ಕೂಡ ಆ ಸೂಚನೆಗೆ ಸಹಿ ಮಾಡಿದ್ದೇನೆ.

ಅಧ್ಯಕ್ಷರು: ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವಂಥ ವಿಷಯಗಳಿಗೆ ಸಹಿ ಮಾಡಿರುವವರೆಲ್ಲಾ ಮಾತನಾಡಬೇಕು ಎನ್ನುವ ಪ್ರಶ್ನೆ ಬರುವುದಿಲ್ಲ... ಆದ್ದರಿಂದ ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಆ ಸೊಸೈಟಿಗೆ ಪುನಃ ಅಂಥ ಅಧಿಕಾರಿಯನ್ನೇ ಹಾಕಿ, ಸೊಸೈಟಿಯವರು ಸ್ಟೇ ತರುವಂಥ ವ್ಯವಸ್ಥೆ ಮಾಡಿದ್ದಾರೆಂದು ಮಾನ್ಯ ಗೌರವಾನ್ವಿತ ಸದಸ್ಯರು ಹೇಳಿದ್ದಾರೆ. ನಾನು ಅದರ ಬಗ್ಗೆ ವಿವರವಾದ ವರದಿಯನ್ನು ತರಿಸಿಕೊಂಡು ಯಾರೇ ಆದರೂ ಕೂಡ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್: ಮಾನ್ಯ ಅಧ್ಯಕ್ಷರೆ, ಕಳೆದ ಸಲವೂ ಸಹ ಸನ್ಮಾನ್ಯ ಮಂತ್ರಿಗಳು ಇದೇ ಉತ್ತರವನ್ನು ಕೊಟ್ಟಿದ್ದರು. ಸುಮಾರು 43 ಸಾವಿರ ರೂಪಾಯಿ

ದುರುಪಯೋಗವಾಗಿದೆ. ಅಲ್ಲಿ ಚಿನ್ನಪ್ಪ ಎನ್ನುವವರು ಇವತ್ತಿನ ದಿವಸ ಡಿ.ಸಿ.ಸಿ ಬ್ಯಾಂಕಿನ ಡೈರೆಕ್ಟರ್ ಸ್ಥಾನಕ್ಕೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾರೆ.

ಅಧ್ಯಕ್ಷರು: ಅದರ ಮೇಲೂ ಕ್ರಮ ಜರುಗಿಸಲಿಕ್ಕೆ ಹೇಳಲಾಗುವುದು.ಸ. ಮಾನ್ಯ ಎಸ್.ಎಸ್.ಪಾಟೀಲರು, ಶ್ರೀ ಅಪ್ಪಚ್ಚುರಂಜನ್ ರವರು ಹೇಳಿದ ವಿಷಯದ ಕಡೆಗೂ ತಾವು ಗಮನಕೊಡಬೇಕು. ಸಂಬಂಧಪಟ್ಟ ಸದಸ್ಯರುಗಳು ಕೆಲವು ವಿಚಾರಗಳ ಮೇಲೆ ಈ ಸದನದಲ್ಲಿ ಹೇಳಿ ಅದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಲಿಲ್ಲವೆಂದರೆ....

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೆ, ಏಕೆಂದರೆ ಈ ಡಿ.ಸಿ.ಸಿ. ಬ್ಯಾಂಕ್‌ನಲ್ಲಿ ಅವರೇ ಡೈರೆಕ್ಟರ್ ಆಗಿ ಬಂದರೆ ಪುನಃ ಸೊಸೈಟಿಯ ಆಡಳಿತವನ್ನು ಅವರೇ ಮಾಡುತ್ತಾರೆ....

ಅಧ್ಯಕ್ಷರು: ಅಪ್ಪಚ್ಚುರಂಜನ್‌ರವರೇ, ಒಂದ್ನಿಮಿಷ ಇರಿ, ನಿಮ್ಮ ಪರವಾಗಿ ನಾನೇ ಮಾತನಾಡುತ್ತೇನೆ. ಸದಸ್ಯರು ಇಲ್ಲಿ ಒಂದು ವಿಚಾರ ಪ್ರಸ್ತಾಪ ಮಾಡಿ ಅದರ ಮೇಲೆ ಸರ್ಕಾರ ಏನೂ ಕ್ರಮ ಜರುಗಿಸಲಿಲ್ಲವೆಂದರೆ ಸದನಕ್ಕೆ ಸದಸ್ಯರು ಹೇಳಿದ ಮಾತಿಗೆ ಬೆಲೆ ಬರುವುದಿಲ್ಲ. ಮಾನ್ಯ ಸಹಕಾರ ಸಚಿವರಾದ ತಾವು ಇಂಥ ವಿಚಾರಗಳಲ್ಲಿ ಬಹಳ ಪ್ರಾಮಾಣಿಕರು ಇದ್ದೀರಿ. ದಯಮಾಡಿ ಮಾನ್ಯ ಸದಸ್ಯರಾದ ಅಪ್ಪಚ್ಚುರಂಜನ್ ರವರು ಹೇಳಿರುವ ವಿಚಾರದ ಕಡೆಗೂ ಕೂಡ ಗಮನಕೊಟ್ಟು ತಾವು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು): ಆಯಿತು, ಅದನ್ನು ಮಾಡುತ್ತೇವೆ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೆ....

ಅಧ್ಯಕ್ಷರು: ಆಯಿತು, ನಿಮ್ಮ ಕೆಲಸವನ್ನು ನಾನು ಮಾಡಿದ್ದೇನೆ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೆ, ಮೊನ್ನೆಯ ವಿಷಯದ ಬಗ್ಗೆ ಸಚಿವರು ಹೇಳಿಕೆಯನ್ನು ಕೊಡಲಿಲ್ಲ.

ಅಧ್ಯಕ್ಷರು: ಆನಂತರ ಮಾನ್ಯ ಸಚಿವರ ಹೇಳಿಕೆಯನ್ನು ಕೊಡಿಸುತ್ತೇನೆ.

ಇ) ಹುಣಸೂರು ವಿಧಾನ ಸಭಾಕ್ಷೇತ್ರದಲ್ಲಿ ಖಾಯಂ ಸಾಗುವಳಿ ಪತ್ರವನ್ನು ನೀಡದೇ ಇರುವ ಬಗ್ಗೆ

+ ಶ್ರೀ ಸಿ.ಹೆಚ್.ವಿಜಯಶಂಕರ್ (ಹುಣಸೂರು): ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ಕುಪ್ಪೆಕೊಳಗೊಟ್ಟ ಎನ್ನುವಂಥ ಒಂದು ಗ್ರಾಮದಲ್ಲಿ 1991ರಲ್ಲಿ ಕೇಂದ್ರ ಸರ್ಕಾರದ್ದ ಯೋಜನೆ ಮುಖಾಂತರ ಅಂದಾಜು 837 ಎಕರೆ 27 ಗುಂಟೆ ಜಮೀನನ್ನು ಸರ್ಕಾರ

ಸ್ವಾಧೀನಪಡಿಸಿಕೊಂಡಿತು. ಹಾಗೆ ಸ್ವಾಧೀನ ಮಾಡಿಕೊಂಡಂಥ ಜಮೀನಿನ ರೈತರು ಯಾರು ಇದ್ದಾರೆ ಅವರು ಈ ಹಿಂದೆ 1924ರಲ್ಲಿ ಕನ್ನಂಬಾಡಿ ಕಟ್ಟೆ ಕಟ್ಟತಕ್ಕಂಥ ಸಮಯದಲ್ಲಿ ಸಾಗರಕಟ್ಟೆ ಎನ್ನುವಂಥ ಗ್ರಾಮದಿಂದ ತೆರವು ಮಾಡಿದಂಥ ಜನರು ಇವರಾಗಿರುತ್ತಾರೆ. ಇವರೆಲ್ಲರೂ ಸಹ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದಂಥ ಜನರಾಗಿದ್ದಾರೆ. ಇವರಿಗೆ ಪರಿಹಾರಾರ್ಥವಾಗಿ 837 ಎಕರೆ 27 ಗುಂಟೆ ಜಮೀನನ್ನು ಆಗ ಸರ್ಕಾರ ಇವರಿಗೆ ಕೊಟ್ಟಿರುವಂಥದ್ದಾಗಿರುತ್ತದೆ. ಯಾರ್ಯಾರು ಬುದ್ಧಿವಂತ ರೈತರು ಇದ್ದಾರೆ, ಅವರು ಅಂದಾಜು 702 ಎಕರೆ ಜಮೀನಿಗೆ ಹಕ್ಕುಪತ್ರವನ್ನು ಪಡೆದರು. ಉಳಿದಂಥ 135 ಎಕರೆ ಜಮೀನಿಗೆ ಹಕ್ಕುಪತ್ರ ಪಡೆಯುವಂಥ ಕೆಲಸ ಆ ರೈತರಿಂದ ಆಗಲಿಲ್ಲ. ಅದರಲ್ಲಿ 47 ಎಕರೆ 37 ಗುಂಟೆ ಜಮೀನಿನಲ್ಲಿ ಹಂಗಾಮಿ ಸಾಗುವಳಿ ಕಳೆದ 40 ವರ್ಷದಿಂದ ನಡೆಯುತ್ತಿದೆ. ಇವರಿಗೆ ನೋಟಿಫಿಕೇಷನ್ 4: 1, 6: 1, 9: 1 ಮತ್ತು 10: 1 ಕೂಡ ಆಗಿದೆ. ಇದರಲ್ಲಿ 837 ಎಕರೆ 27 ಗುಂಟೆ ಯಲ್ಲಿ 702 ಎಕರೆಗೆ ಮಾತ್ರ ಸರ್ಕಾರ ಪರಿಹಾರ ಕೊಟ್ಟಿದ್ದು, ಉಳಿದಂಥ 135 ಎಕರೆ ಜಮೀನಿಗೆ ಇಲ್ಲಿಯವರೆಗೆ ಕೂಡ ಸರ್ಕಾರ ಪರಿಹಾರ ಕೊಡಲಿಲ್ಲ. 47 ಎಕರೆ 37 ಗುಂಟೆ ಜಮೀನಿನಲ್ಲಿ ಹಂಗಾಮಿ ಸಾಗುವಳಿ ಮಾಡುವಂಥವರಿಗೆ 1993ರಲ್ಲಿ ಅಕ್ರಮ ಸಕ್ರಮ ಸಮಿತಿಯ ಮುಂದೆ ಇವರಿಗೆ ಖಾಯಂ ಹಕ್ಕುಪತ್ರವನ್ನು ನೀಡಲಾಗಿದೆ. ಮತ್ತು ಉಳಿದಂಥ ರೈತರೂ ಕೂಡ 1991ರಲ್ಲಿ ಖಾಯಂ ಹಕ್ಕುಪತ್ರಕ್ಕೆ ಅಕ್ರಮ-ಸಕ್ರಮ ಸಮಿತಿಯ ಮುಂದೆ ಅರ್ಜಿಯನ್ನು ಸಲ್ಲಿಸಿದ್ದಾರೆ. ಈ ರೈತರಿಗೆ ಸ್ವಾಧೀನ ತೆರವು ಮಾಡುವಂಥ ಸಮಯದಲ್ಲಿ ನಮ್ಮ ಸ್ಪೆಷಲ್‌ಲ್ಯಾಂಡ್ ಅಕ್ವಿಸಿಷನ್ ಆಫೀಸರ್‌ರವರು ಮತ್ತು ಆ ರಕ್ಷಣಾ ಇಲಾಖೆಯ ಅಧಿಕಾರಿ ಹೀಗೆ ಇಬ್ಬರೂ ಸ್ಥಳಕ್ಕೆ ಹೋಗಿ-'ನಿಮಗೆ ಬೇಕಾದಂಥ ಹಣವನ್ನು ಈಗಾಗಲೇ ಸ್ಪೆಷಲ್ ಲ್ಯಾಂಡ್ ಅಕ್ವಿಸಿಷನ್ ಆಫೀಸರ್‌ಗೆ ನಾವು ಡಿಫಾಸಿಟ್ ಮಾಡಿದ್ದೇವೆ,' 'ನಿಮ್ಮ ದಾಖಲಾತಿಗಳನ್ನು ಸರಿಮಾಡಿಕೊಂಡು ನೀವು ಪರಿಹಾರವನ್ನು ತೆಗೆದುಕೊಳ್ಳಿ ಎನ್ನುವಂಥ ಮಾತನ್ನು ಭರವಸೆ ಕೊಟ್ಟಿದ್ದಾರೆ. ಈಗಾಗಲೇ ಕೂಡ ಕೇಂದ್ರ ಸರ್ಕಾರ ಆ ಹಣವನ್ನು ನಮ್ಮ ಸ್ಪೆಷಲ್ ಲ್ಯಾಂಡ್ ಅಕ್ವಿಸಿಷನ್ ಆಫೀಸರ್‌ರವರ ಕಛೇರಿಯಲ್ಲಿ ಡಿಫಾಸಿಟ್ ಮಾಡಿದ್ದಾರೆ. ಇವರ ದಾಖಲಾತಿಯಲ್ಲಿ ಇವರು ಬಗರ್ ಹುಕುಂ, ಹಂಗಾಮಿ ಸಾಗುವಳಿದಾರರು ಎಂಬ ಏಕೈಕ ಕಾರಣಕೋಸ್ಕರವಾಗಿ ಕೊಟ್ಟಿರುವುದಿಲ್ಲ. ಇವರು ಅತಿ ಸಣ್ಣ ಹಿಡುವಳಿದ್ದಾರರು. ಇವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಈ ಜನರಿಗೆ ಇದುವರೆಗೂ ಸಹ ಸರ್ಕಾರ ಪರಿಹಾರವನ್ನು ಕೊಟ್ಟಿಲ್ಲ. ಹೀಗಾಗಿ ಈ ಜನರು ಬೀದಿಪಾಲಾಗಿದ್ದಾರೆ. ಆದ್ದರಿಂದ ನಾನು ಸರ್ಕಾರದವರಲ್ಲಿ ವಿನಂತಿಯನ್ನು ಮಾಡುವುದೇನೆಂದರೆ ಈಗಾಗಲೇ ಡೆಪಾಸಿಟ್ ರೆಡಿ ಇದೆ. ಇವರುಗಳು ಕಳೆದ 40 ವರ್ಷಗಳಿಂದ ಹಂಗಾಮಿ ಸಾಗುವಳಿದಾರರಾಗಿದ್ದಾರೆ; ಕಳೆದ 60 ವರ್ಷಗಳಿಂದ ಈ 135 ಎಕರೆ ಜಮೀನನ್ನು ಸಾಗುವಳಿ ಮಾಡುತ್ತಿರತಕ್ಕಂತಹ ಜನರಿಗೆ ಅನುಭವ ಇದೆ. 30 ವರ್ಷಗಳಿಗಿಂತಲೂ ಹೆಚ್ಚು ಅನುಭವ ಇರತಕ್ಕಂಥವರಿಗೆ ಅವರು ಖಾಯಂ ಹಕ್ಕುದಾರರಾಗುತ್ತಾರೆಂದು

ಸರ್ಕಾರದ ನೀತಿ ಇದೆ. 12 ವರ್ಷಗಳಿಗಿಂತಲೂ ಹೆಚ್ಚು ಖಾಸಗಿ ಜಮೀನನ್ನು ಸಾಗುವಳಿ ಮಾಡುತ್ತಿದ್ದರೆ ಅವರಿಗೆ ಖಾಯಂ ಹಕ್ಕು ಪತ್ರವನ್ನು ಕೊಡಬೇಕೆಂಬ ಸರ್ಕಾರದ ನೀತಿ ಇದೆ. ನಾನು ಅಕ್ರಮ ಸಕ್ರಮ ಸಮಿತಿಯ ಅಧ್ಯಕ್ಷನಾಗಿದ್ದರೂ ಕೂಡ, ಈ ಸರ್ಕಾರದ ನಿಲುವಿನಿಂದ ಅವರಿಗೆ ಖಾಯಂ ಸಾಗುವಳಿ ಪತ್ರವನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ, ಪರಿಹಾರವನ್ನೂ ಕೂಡ ಸರ್ಕಾರ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಮಾನವೀಯತೆಯ ದೃಷ್ಟಿಯಿಂದ ಸರ್ಕಾರ ಎಲ್ಲಾ ವಿಚಾರಗಳನ್ನು ಪರಿಗಣನೆಗೆ ತೆಗೆದುಕೊಂಡು ಆ ವರ್ಗಕ್ಕೆ ನ್ಯಾಯವನ್ನು ಒದಗಿಸಿ ಈಗ ಏನು ಕೇಂದ್ರ ಸರ್ಕಾರದವರು ಡೆಪಾಸಿಟನ್ನು ಮಾಡಿದ್ದಾರೆ ಅದನ್ನು ರೈತರಿಗೆ ಪರಿಹಾರವನ್ನೂ ಕೊಡುವುದರ ಸಹಾಯಕ್ಕೆ ಬರಬೇಕು, ಬೀದಿ ಪಾಲಾಗಿರತಕ್ಕಂತಹ ಜನರ ರಕ್ಷಣೆಯನ್ನು ಸರ್ಕಾರ ಮಾಡಬೇಕು. ಇದರ ಬಗ್ಗೆ ಸ್ಪಷ್ಟ ಭರವಸೆಯನ್ನು ಸರ್ಕಾರ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೇ, ಹುಣಸೂರು ತಾಲ್ಲೂಕಿನ ಗ್ರಾಮದಲ್ಲಿ 135 ಎಕರೆ ಜಮೀನಿನ ವಿಚಾರದಲ್ಲಿ ರೈತರು ಬಗರ್ ಹುಕುಂ ಸಾಗುವಳಿಯನ್ನು ಮಾಡುತ್ತಿರುವುದರಿಂದಾಗಿ ಇನ್ನೂ ಹಕ್ಕು ಪತ್ರಗಳನ್ನು ಕೊಟ್ಟಿಲ್ಲ. ಕೇಂದ್ರ ಸರ್ಕಾರದವರು ಹಣವನ್ನು ಬಿಡುಗಡೆ ಮಾಡಿದ್ದಾರೆ ಆದರೂ ಸಹ ರಾಜ್ಯ ಸರ್ಕಾರದವರು ಹಣವನ್ನು ಕೊಡುವುದರಲ್ಲಿ ಅಡ್ಡಿ ಬಂದಿದ್ದಾರೆ ಎನ್ನುವಂತಹ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಇದರ ಬಗ್ಗೆ ಸಂಬಂಧಪಟ್ಟಂತಹ ಜಿಲ್ಲಾಧಿಕಾರಿಗಳಿಂದ ವರದಿಯನ್ನು ತರಿಸಿಕೊಂಡು ಮಾನ್ಯ ಕಂದಾಯ ಸಚಿವರಿಂದ ಹಾಗೂ ಸರ್ಕಾರದ ವತಿಯಿಂದ ಆ ಪರಿಹಾರ ನ್ಯಾಯಬದ್ಧವಾಗಿ ಬರುವುದಿದ್ದರೆ ಕೊಡಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ.

(ಈ) ವಿಷಯ: ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಜವಳಿನಗರ ಸ್ಥಾಪನೆ,

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿಗ್ರಾಮಾಂತರ): ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಜವಳಿ ನಗರವನ್ನು ಸ್ಥಾಪನೆಯನ್ನು ಮಾಡಬೇಕೆಂದು ಹಿಂದೆ ಅಧಿಕಾರದಲ್ಲಿದ್ದ ಸರ್ಕಾರ ಕೂಡ ನಿರ್ಧಾರ ಮಾಡಿತ್ತು ಹಾಗೂ ಈಗಿನ ಸರ್ಕಾರ ಕೂಡ ನಿರ್ಧಾರವನ್ನು ಮಾಡಿದೆ, ಇದರ ಸುತ್ತಮುತ್ತಲಿನಲ್ಲಿರುವ ನಗರ ಪ್ರದೇಶಗಳು ಗದಗ್ ಇರಲಿ, ಬೈಲಹೊಂಗಲ ಇರಲಿ, ಗೋಕಾಕ್, ಸವದತ್ತಿ ಈ ಎಲ್ಲಾ ಕಡೆಗಳಲ್ಲಿಯೂ ಹತ್ತಿಯ ವ್ಯವಹಾರ ಏನಿದೆ ಅದು ಅತ್ಯಂತ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಹೀಗಾಗಿ ಹುಬ್ಬಳ್ಳಿಯಲ್ಲಿ ಜವಳಿ ನಗರವನ್ನು ಸ್ಥಾಪನೆ ಮಾಡುವಂಥದ್ದು ಅತಿ ಅವಶ್ಯಕತೆ ಇದೆ. ಆದರೆ ಇತ್ತೀಚಿನ ಕೆಲವೊಂದು ವರದಿಗಳನ್ನು ನೋಡಿದಾಗ, ಇತ್ತೀಚಿನ ಕೆಲವು ವದಂತಿಗಳನ್ನು ಕೇಳಿದರೆ ಸರ್ಕಾರ ಏನು ಜವಳಿ ನಗರವನ್ನು ಸ್ಥಾಪನೆ ಮಾಡಬೇಕೆಂದು ನಿರ್ಧಾರ ಮಾಡಿತ್ತು ಅದನ್ನು ಕೈಬಿಡಲಾಗುತ್ತಿದೆ ಎನ್ನುವಂಥದ್ದು

ಬರುತ್ತಿದೆ. ಆದುದರಿಂದ ದಯವಿಟ್ಟು, ಸರ್ಕಾರ ಇದನ್ನು ಕೈಬಿಡಬಾರದು. ಜವಳಿ ನಗರವನ್ನು ಮಾಡದೇ ಇದ್ದರೆ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಮಾರಕವಾಗುತ್ತದೆ, ಆರ್ಥಿಕ ಅಭಿವೃದ್ಧಿಗೂ ಸಹ ಮಾರಕವಾಗುತ್ತದೆ. ಆದುದರಿಂದ ದಯವಿಟ್ಟು ಸರ್ಕಾರ ಜವಳಿ ನಗರವನ್ನು ಮಾಡುವುದನ್ನು ಕೈಬಿಡುವುದಿಲ್ಲ ಮತ್ತು ಆದಷ್ಟು ಬೇಗ ಸ್ಥಾಪನೆ ಮಾಡುತ್ತೇವೆಂಬ ಒಂದು ಸ್ಪಷ್ಟ ಭರವಸೆಯನ್ನು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿಯಲ್ಲಿ ಜವಳಿ ನಗರವನ್ನು ಮಾಡಬೇಕೆಂಬ ವಿಚಾರ ಸರ್ಕಾರದ ಮುಂದೆ ಇದ್ದು ಇದನ್ನು ಮಾಡುವುದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

(ಉ) ಮಹದೇವ ಜವಳಿ ಮಿಲ್ ಮುಚ್ಚದೇ ಇರಲು ಕ್ರಮ.

ಶ್ರೀ ಅಶೋಕ್ ಕಾಟ್ವೆ (ಹುಬ್ಬಳ್ಳಿ): ಮಾನ್ಯ ಅಧ್ಯಕ್ಷರೆ, ಮಹದೇವ ಜವಳಿ ಮಿಲ್, ಉತ್ತರ ಕರ್ನಾಟಕದಲ್ಲಿ ಸುಮಾರು 100 ವರ್ಷಗಳ ಹಿಂದೆ ಸ್ಥಾಪನೆಯಾಗಿರತಕ್ಕಂತಹ ಒಂದು ದೊಡ್ಡ ಮಿಲ್ ಆಗಿದೆ. ಧಾರವಾಡ ಜಿಲ್ಲೆ, ಬೆಳಗಾಂ ಜಿಲ್ಲೆ, ರಾಯಚೂರು ಜಿಲ್ಲೆ, ಈ ಭಾಗದಲ್ಲಿ ಬೆಳೆಯತಕ್ಕಂತಹ ಹತ್ತಿಯನ್ನು ಉಪಯೋಗ ಮಾಡುವುದಕ್ಕೆ ಈ ಮಿಲ್‌ನ್ನು ತೆರೆಯಲಾಗಿತ್ತು. ಈಗ ಆ ಮಿಲ್ಲನ್ನು ಮುಚ್ಚುವುದರಿಂದ ನೂರಾರು ಕಾರ್ಮಿಕರು ಬೀದಿ ಪಾಲಾಗುತ್ತಿದ್ದಾರೆ. ಆದುದರಿಂದ ಸರ್ಕಾರ ಆ ಮಿಲ್‌ನ್ನು ಮುಚ್ಚಬೇಕೆಂದು ಏನು ಕ್ರಮವನ್ನು ತೆಗೆದುಕೊಂಡಿರುತ್ತೀರಿ ಆ ನಿರ್ಧಾರವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಆ ಮಿಲ್‌ಗೆ ಹುಬ್ಬಳ್ಳಿ ನಗರದ ಮಧ್ಯ ಭಾಗದಲ್ಲಿ 45 ಎಕರೆ ಜಮೀನು ಇರುವುದರಿಂದ, ಆ 45 ಎಕರೆ ಜಮೀನಿನ ಮೌಲ್ಯ ನೂರಾರು ಕೋಟಿ ರೂಪಾಯಿಗಳಾಗುತ್ತದೆ. ಈಗ 45 ಎಕರೆ ಜಮೀನಿನಲ್ಲಿ ಅರ್ಧ ಭಾಗ ಜಮೀನನ್ನು ಮಾರಿ ಅದನ್ನು ಮತ್ತೆ ಪುನಶ್ಚೇತನಗೊಳಿಸಿದರೆ ಹೆಚ್ಚಿನ ಹೊಸ ಯಂತ್ರಗಳನ್ನು ಆ ಮಿಲ್‌ನಲ್ಲಿ ಹಾಕಿ ಬಳಸಿದ್ದೇ ಆದರೆ ಆ ಭಾಗಗಳಲ್ಲಿ ರೈತರು ಬೆಳೆಯುವಂತಹ ಹತ್ತಿಗೆ ಯೋಗ್ಯ ಬೆಲೆಯೂ ಸಹ ಸಿಗುವುದು; ಎರಡನೆಯದಾಗಿ ಅಲ್ಲಿ ಕೆಲಸಕ್ಕೆ ಇರುವಂತಹ ಕಾರ್ಮಿಕರನ್ನೂ ಸಹ ಉಳಿಸಬಹುದೆಂದು ಸರ್ಕಾರಕ್ಕೆ ಸಲಹೆಯನ್ನು ಕೊಡುತ್ತಿದ್ದೇನೆ. ಈ ಮಿಲ್‌ನ್ನು ಮುಚ್ಚದೇ ಯೋಗ್ಯ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತಹ ಮಿಲ್ ಅದು ಮೊದಲು ಸಹಕಾರಿ ಗಿರಣಿಯಾಗಿತ್ತು, ತದನಂತರ ಅದನ್ನು ಮುಚ್ಚುವಂತಹ ಪ್ರಸಂಗ ಬಂದಿದ್ದಾಗ ಸರ್ಕಾರ ಅದನ್ನು ತೆಗೆದುಕೊಂಡಿತ್ತು, ನಂತರ ಅದನ್ನು ಬೇರೆಯವರಿಗೆ ಕೊಟ್ಟಿತ್ತು. ಹೀಗಾಗಿ ಹಿಂದೆ ಇದ್ದಂತಹ ಸರ್ಕಾರ ಮತ್ತು ನಮ್ಮ ಸರ್ಕಾರ ಪ್ರಯತ್ನವನ್ನು ಮಾಡಿದ್ದರೂ ಕೂಡ ಅದು ಲಾಭದಾಯಕವಾಗುವಂತಹ ಸ್ಥಿತಿಗೆ

ಬರುವುದಿಲ್ಲ ಎನ್ನುವಂತಹ ದೃಷ್ಟಿಯಿಂದ ಅದನ್ನು ಮುಚ್ಚಬೇಕೆಂದು ತೀರ್ಮಾನವಾಗಿ ಈಗಾಗಲೇ ಬಿ.ಆರ್.ಎಫ್.ನ ಮುಂದೆ ಇದೆ. ಇಲ್ಲಿ ಏನು ನಿರ್ಣಯವಾಗುತ್ತದೆ ಅದರ ಪ್ರಕಾರವಾಗಿ ಕ್ರಮವನ್ನು ಕೈಗೊಳ್ಳುತ್ತೇವೆಂದು ಭರವಸೆಯನ್ನು ಕೊಡುತ್ತಿದ್ದೇನೆ.

(ಊ) ಮೈಸೂರಿನಲ್ಲಿ ಆಕ್ಸಿಡೆಂಟಿಲ್ ಆಸ್ಪತ್ರೆ ತೆರೆಯುವ ಬಗ್ಗೆ.

ಶ್ರೀ ಇ.ಮಾರುತಿ ರಾವ್ ಪವಾರ್ (ನರಸಿಂಹರಾಜ): ಮಾನ್ಯ ಅಧ್ಯಕ್ಷರೇ, ಮೈಸೂರು ಮಂಡ್ಯ, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಯೂ ಸಹ ಒಳಗೊಂಡಂತೆ ಒಂದು ಆಕ್ಸಿಡೆಂಟಲ್ ಆಸ್ಪತ್ರೆಯ ಅವಶ್ಯಕತೆ ಇದೆ. ಕಳೆದ ವಾರ ನಮ್ಮ ಮೈಸೂರು ನಗರಪಾಲಿಕೆ ಸದಸ್ಯರಾದಂತಹ ಶ್ರೀಮತಿ ಸರಸ್ವತಿಯವರು ಅಪಘಾತದಲ್ಲಿ ತಲೆಗೆ ಏಟು ಬಿದ್ದು ಅಲ್ಲಿ ಚಿಕಿತ್ಸೆಗೆ ಸರಿಯಾದಂತಹ ಆಸ್ಪತ್ರೆಯೂ ಇಲ್ಲದೇ ಇರುವುದರಿಂದ ಬೆಂಗಳೂರಿಗೆ ಕಳುಹಿಸಿಕೊಟ್ಟರು. ಅವರು ಇಲ್ಲಿ ಸಾವನ್ನು ಅಪ್ಪಬೇಕಾಯಿತು. ಈಗಾಗಲೇ ನಮ್ಮ ಮೈಸೂರು ನಗರದ ತಿಲಕ್ ನಗರದಲ್ಲಿ ಇ.ಡಿ.ಆಸ್ಪತ್ರೆ ಎಂದು ಇತ್ತು. ಇದು ಈಗಾಗಲೇ ಕೆ.ಆರ್.ರಸ್ತೆಗೆ ಅದನ್ನು ಬದಲಾಯಿಸಲಾಗಿದೆ. ಅಲ್ಲಿರತಕ್ಕಂತಹ ನಾಲ್ಕು ಎಕರೆ ಪ್ರದೇಶ ಏನಿದೆ ಆ ಪ್ರದೇಶದಲ್ಲಿ ಆಸ್ಪತ್ರೆಯನ್ನು ಕಟ್ಟಲು 120 ಲಕ್ಷ ರೂಪಾಯಿಗಳಿಗೆ ಎರಡು ಮೂರು ವರ್ಷಗಳ ಹಿಂದೆ ಲೋಕೋಪಯೋಗಿ ಇಲಾಖೆಯಿಂದ ಅಂದಾಜನ್ನು ಮಾಡಿ, 2-3 ವರ್ಷಗಳ ಹಿಂದೆ ಬಜೆಟ್‌ನಲ್ಲಿ 40 ಲಕ್ಷ ರೂಪಾಯಿಗಳನ್ನು ಎತ್ತಿಟ್ಟಿದ್ದಾರೆ. ಆದರೆ ಇಲ್ಲಿಯವರೆಗೆ ಇದರ ಕೆಲಸ ಪ್ರಾರಂಭವಾಗಿಲ್ಲ. ನಾನು ಈ ವಿಚಾರವನ್ನು ಏಕೆ ಪ್ರಮುಖವಾಗಿ ಹೇಳುತ್ತಿದ್ದೇನೆಂದರೆ ಮೈಸೂರಿನ ಸುತ್ತಮುತ್ತಲಿನಲ್ಲಿರುವ ಯಾವುದಾದರೂ ಜಿಲ್ಲೆಯವರಿಗೆ ಆಕ್ಸಿಡೆಂಟ್ ಆಗಿ ತಲೆಗೆ ಪೆಟ್ಟು ಬಿದ್ದರೆ ಅವರನ್ನು ಬೆಂಗಳೂರಿಗೆ ಕರೆದುಕೊಂಡು ಬಂದು ಅಡ್ಮಿಟ್ ಮಾಡಿ ಚಿಕಿತ್ಸೆಯನ್ನು ಪಡೆಯುವಂತಹ ಒಂದು ವ್ಯವಸ್ಥೆಯಾಗುತ್ತಿದೆ. ಇದು ಮೈಸೂರಿನಲ್ಲಿ ಒಂದು ಆಸ್ಪತ್ರೆಯಾದರೆ ಮೈಸೂರಿನ ಸುತ್ತಮುತ್ತ ಇರತಕ್ಕಂತಹ ಜಿಲ್ಲೆಗಳಲ್ಲಿ ಆಕ್ಸಿಡೆಂಟ್ ಆಗಿ ತಲೆಗೆ ಪೆಟ್ಟು ಬಿದ್ದರೆ ತುರ್ತಾಗಿ ಚಿಕಿತ್ಸೆಯನ್ನು ನೀಡಿ ಅವರ ಜೀವವನ್ನು ಉಳಿಸುವುದಕ್ಕೆ ಅನುಕೂಲವಾಗುತ್ತದೆ. ಬೆಂಗಳೂರಿಗೆ ಕರೆದುಕೊಂಡು ಬರುವಂತಹ ಸಂದರ್ಭದಲ್ಲಿ ಮಧ್ಯದಲ್ಲಿ ಪ್ರಾಣವನ್ನು ಕಳೆದುಕೊಂಡಿರುವಂತಹ ಉದಾಹರಣೆಗಳು ಸಾಕಷ್ಟು ಇದೆ. ಆದ್ದರಿಂದ ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ ಈಗಾಗಲೇ ಹಣವನ್ನು ಇಟ್ಟಿರುವುದರಿಂದ ತಕ್ಷಣ ಆಸ್ಪತ್ರೆಯನ್ನು ಕಟ್ಟಿ ಅನುಕೂಲವನ್ನು ಮಾಡಿಕೊಡಬೇಕು.

ಎ) ಮೈಸೂರು ಕೆ.ಆರ್.ಆಸ್ಪತ್ರೆ ಕಟ್ಟಡ ನಿರ್ಮಾಣದ ಬಗ್ಗೆ.

ಶ್ರೀ ಹೆಚ್.ಎನ್.ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ಅಧ್ಯಕ್ಷರೇ, ಈ ಆಸ್ಪತ್ರೆ ಮೈಸೂರಿನಲ್ಲಿ ತುಂಬಾ ಅವಶ್ಯಕ ಇದೆ.

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು): ಮಾನ್ಯ ಸಭಾಧ್ಯಕ್ಷರೇ,

ಮಾನ್ಯ ಸದಸ್ಯರು ಮೈಸೂರಿನಲ್ಲಿ ಆಸ್ಪತ್ರೆಯ ಕಟ್ಟಡ ವಿಳಂಬವಾಗಿರುವಂಥದ್ದರ ಬಗ್ಗೆ ಅತ್ಯಂತ ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಅದರ ಬಗ್ಗೆ ಆರೋಗ್ಯ ಸಚಿವರ ಜೊತೆಯಲ್ಲಿ ಚರ್ಚಿಸಿ ಶೀಘ್ರವಾಗಿ ಹಣವನ್ನು ಒದಗಿಸಿಕೊಂಡು ಕೆಲಸವನ್ನು ಪ್ರಾರಂಭ ಮಾಡುವಂತಹ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಇ.ಮಾರುತಿರಾವ್ ಪವಾರ್: ಮಾನ್ಯ ಅಧ್ಯಕ್ಷರೇ, ಇದಕ್ಕೆ ಆರೋಗ್ಯ ಸಚಿವರಿಂದ ಏನು ಉತ್ತರ ಬರುತ್ತದೆಂದು ತಿಳಿಸಬೇಕು.

ಅಧ್ಯಕ್ಷರು: ಆರೋಗ್ಯ ಸಚಿವರು ಸದನದಲ್ಲಿದ್ದಾರೆ, ಅವರಿಬ್ಬರು ಸೇರಿಯೇ ಕ್ರಮವನ್ನು ತೆಗೆದುಕೊಳ್ಳುವಂಥದ್ದು. ಅವರಿಬ್ಬರ ಸಂಬಂಧ ಚೆನ್ನಾಗಿದೆ. ಶ್ರೀ ಹೆಚ್.ಸಿ.ಮಹದೇವಪ್ಪನವರ ಪರವಾಗಿ ನಾನೇ ಹೇಳಿದ್ದೇನೆ.

(ಏ) ಕುಣಿಗಲ್‌ನ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಜ್ಞಾನ ವಿಷಯದಲ್ಲಿ ಉಪನ್ಯಾಸಕರು ಇಲ್ಲದೇ ಇರುವುದು.

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್): 1994-95ರಲ್ಲಿ ಪ್ರಾರಂಭವಾದಂಥ ಕುಣಿಗಲ್‌ನ ಪ್ರಥಮ ದರ್ಜೆ ಕಾಲೇಜಿನಲ್ಲಿ ವಾಣಿಜ್ಯ ವಿಷಯದಲ್ಲಿ ಇದುವರೆಗೂ ಒಬ್ಬ ಉಪನ್ಯಾಸಕರನ್ನೂ ನೇಮಿಸಿರುವುದಿಲ್ಲ. ಕಳೆದ ಮೂರು ದಿವಸಗಳಿಂದ ವಿದ್ಯಾರ್ಥಿಗಳು ಚಳುವಳಿ ಮಾಡುತ್ತಿದ್ದು, ಉಪನ್ಯಾಸಕರುಗಳನ್ನು ತರಗತಿಗಳಿಗೆ ಹೋಗಲು ಬಿಡುತ್ತಿಲ್ಲ. ಅಲ್ಲದೆ ರಸ್ತೆಯಲ್ಲಿ ಬಸ್ಸುಗಳನ್ನು ತಡೆಹಿಡಿಯುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯುಂಟಾಗುತ್ತಿದೆ. ಈ ಕೂಡಲೇ ಶಿಕ್ಷಣ ಸಚಿವರು ಏನಾದರೊಂದು ವ್ಯವಸ್ಥೆ ಮಾಡದಿದ್ದರೆ ನಾನು ನನ್ನ ಕ್ಷೇತ್ರಕ್ಕೆ ಹೋಗಲು ತೊಂದರೆಯಾಗುತ್ತದೆ. ನಾನು ಧರಣಿ ಮಾಡಬೇಕಾಗುತ್ತದೆ. ತುಮಕೂರಿನಿಂದ ಇಲ್ಲಿಗೆ ಕರೆಸಲು ಕ್ರಮ ಕೈಗೊಳ್ಳಬೇಕು.

ಅಧ್ಯಕ್ಷರು: ನೀವು ಧರಣಿ ಮಾಡುವುದು ಬೇಡ. ಈಗ ಅವರು ಹೈಸ್ಕೂಲು ಮುಗಿಸಿ ಕಾಲೇಜಿಗೆ ಬಂದಿದ್ದಾರೆ. ನಿಮಗೆ ಉತ್ತರ ಹೇಳುತ್ತಾರೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸ್ನೇಹಿತರಾಗಿರತಕ್ಕ ಶ್ರೀ ಮುದ್ದುಹನುಮೇಗೌಡರು ನನ್ನ ಹತ್ತಿರ ಬಂದು 15 ನಿಮಿಷ ಮುಂಚಿತವಾಗಿ ಇದರ ಬಗ್ಗೆ ವಿಷಯ ಹೇಳಿದರು; ಖಂಡಿತ ಒಪ್ಪುತ್ತೇನೆ. ನೀವು ಒಂದು ಪತ್ರ ಬರೆದು ಕೊಡಿ, ಡೆಪ್ಯುಟೇಷನ್ ಮಾಡುವುದಕ್ಕೆ ಅವಕಾಶ ಇದ್ದರೆ ತುಮಕೂರಿನಿಂದ ಡೆಪ್ಯುಟೇಷನ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದೆ. ಈಗ ಶೂನ್ಯವೇಳೆಯಲ್ಲಿ ಪುನಃ ಪ್ರಶ್ನೆ ಕೇಳಿದ್ದಾರೆ. ಅವರಿಗೆ ನಾನು ಏನು ಮೊದಲು ಹೇಳಿದ್ದೆ ಆ ರೀತಿ ತುಮಕೂರಿನಲ್ಲಿ ಏನಾದರೂ ಎಕ್ಸ್‌ಸ್ ಟೀಚರ್ಸ್

ಇದ್ದರೆ ಕೂಡಲೇ ಅಲ್ಲಿಗೆ ನಿಯೋಜನೆ ಮಾಡುವುದಕ್ಕೆ ಆದೇಶ ಕೊಡುವುದಕ್ಕೆ ಹೇಳುತ್ತೇನೆ.

(ಐ) ಕುಂದಾಪುರ ವಿಧಾನಸಭಾ ಕ್ಷೇತ್ರದಲ್ಲಿ ನಡೆದ ಕೊಲೆ ಪ್ರಕರಣಗಳು

+ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ಅಧ್ಯಕ್ಷರೆ, ಕುಂದಾಪುರ ವಿಧಾನಸಭಾಕ್ಷೇತ್ರದಲ್ಲಿ ಕಳೆದ ಕೆಲವು ವರ್ಷಗಳ ಹಿಂದೆ ಆಗಿರತಕ್ಕ ಲಿಲ್ಲಿ ಡಿಸೋಜ, ಮಂಗಳೂರು, ಗುರುರಾಜ ಭಟ್, ಕೋಟೇಶ್ವರ, ಗಣಪ, ಮಡಿವಾಳ ಇವರ ಕೊಲೆ ಪ್ರಕರಣಗಳನ್ನು ಸಿ.ಓ.ಡಿ. ತನಿಖೆಗೆ ಒಪ್ಪಿಸಲಾಯಿತು. ಸಿ.ಒ.ಡಿ ತನಿಖೆ ಯಾವ ಹಂತಕ್ಕೆ ಬಂತು ಎಂಬ ವಿಚಾರ ಇನ್ನೂ ಗೊತ್ತಿಲ್ಲ. ಏಕೆಂದರೆ ನಾವು ಸಿ.ಒ.ಡಿ. ತನಿಖೆಗೆ ಒಪ್ಪಿಸತಕ್ಕ ಮೂಲೋದ್ದೇಶ, ಯಾವುದೇ ರೀತಿಯಲ್ಲಿ ತನಿಖೆಯಾಗಿ ಅಪರಾಧಿಗಳನ್ನು ಪತ್ತೆಹಚ್ಚಬೇಕೆಂಬುದು. ಸಿ.ಒ.ಡಿ. ತನಿಖೆಯಿಂದ ಏನೂ ಪ್ರಯೋಜನವಾಗಿಲ್ಲವೆಂದು ಜನರ ಮನಸ್ಸಿಗೆ ಬಂದಿದೆ. ಏಕೆಂದರೆ ಸಿ.ಒ.ಡಿ ಬಂದರೆ ಮಾತ್ರ ಅಲ್ಲಿ ಕ್ರಮ ಕೈಗೊಳ್ಳುವುದು. ಸಿ.ಒ.ಡಿ.ಯವರು ಬರುತ್ತಾರೆ, ನಾವು ಇಲ್ಲಿ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದ ಮೇಲೆ ಹೋಗುತ್ತಾರೆ. ಆನಂತರ ಬರುತ್ತಾರೆ. ಅವರ ಬಗ್ಗೆ ಪ್ರಾಮಾಣಿಕವಾದ ಕಾಳಜಿ ಇಲ್ಲ. ಅದರ ನಂತರ, ಕರಿಯ ಎಂಬ ಹರಿಜನ ಕೊಲೆಯಾಯಿತು. ಅದರ ಬಗ್ಗೆ ಕಳೆದ ಸಾರಿ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದೆ. ಮೊನ್ನೆ 4ನೇ ತಾರೀಕು ಪುಷ್ಪ ಕೋಟಿ ಎಂಬ ಮಹಿಳೆಯ ಕೊಲೆಯಾಯಿತು. ಅದರ ಮೂರನೇ ದಿವಸ 5ನೇ ತಾರೀಖು ಪ್ರಕಾಶ್ ಎಂಬುವವರ ಕೊಲೆಯಾಯಿತು. ಹಾಡುಹಗಲಲ್ಲೆ ಒಂದೂವರೆ ಗಂಟೆ ಸಮಯದಲ್ಲಿ ಕೊಲೆಯಾಯಿತು. ಇವತ್ತಿನವರೆಗೆ ಅಪರಾಧಿಗಳನ್ನು ಪತ್ತೆಹಚ್ಚುವುದಕ್ಕೆ ಆಗಿಲ್ಲ. ಹಾಡುಹಗಲು ಎಲ್ಲರ ಸಮ್ಮುಖದಲ್ಲಿ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲೇ ಆಗಿದೆ. ಆದುದರಿಂದ ಇಂಥ ಪ್ರಕರಣಗಳನ್ನು, ಒಂದು ಕೊಲೆ ಆದಮೇಲೆ ಮತ್ತೊಂದು ಕೊಲೆ ಆಗತಕ್ಕದ್ದನ್ನು ಮುಚ್ಚಿಹಾಕತಕ್ಕ ವ್ಯವಸ್ಥೆ ಆಗಬಾರದು. ಈ ಬಗ್ಗೆ ತಾವು ಏನು ಉದ್ದೇಶ ಇಟ್ಟುಕೊಂಡಿದ್ದೀರಿ? ಪ್ರಾಮಾಣಿಕವಾಗಿ ಕೊಲೆಗಾರರನ್ನು ಬಂಧಿಸತಕ್ಕ ಪ್ರಯತ್ನ ಮಾಡಬೇಕೆಂಬ ಮಾತನ್ನು ಮಾನ್ಯ ಅಧ್ಯಕ್ಷರ ಮೂಲಕ ಹೇಳುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಹಾಗು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಸಿ.ಒ.ಡಿ.ಗೆ ಒಪ್ಪಿಸಿರತಕ್ಕ ಪ್ರಕರಣಗಳಲ್ಲಿ ತನಿಖೆ ಮುಂದುವರಿದಿಲ್ಲ, ಅದು ಹಂತವನ್ನು ತಲುಪಿಲ್ಲವೆಂದು ಹೇಳುತ್ತಾರೆ. ನಿಜ, ಸ್ಥಳೀಯವಾಗಿರತಕ್ಕ ಪೊಲೀಸರು ಅದರಲ್ಲಿ ಯಾವ ಸಫಲತೆಯನ್ನು ಕಾಣಲಿಲ್ಲ; ನಾವು ಅದನ್ನು ಸಿ.ಒ.ಡಿಗೆ ಒಪ್ಪಿಸಿದೆವು. ಸಿ.ಒ.ಡಿ.ಗೆ ಒಪ್ಪಿಸಿ ಆದಮೇಲೆ ಅದಕ್ಕೆ ಇರತಕ್ಕ ಒಂದು ಟಾಸ್ಕ್‌ಫೋರ್ಸ್‌ನವರು ನೋಡಿ ಸಿ.ಒ.ಡಿ ಇಲಾಖೆಗೆ ಕಳುಹಿಸುತ್ತಾರೆ. ಅದು ಆದಮೇಲೆ ಒಂದು ಪ್ರಿಲಿಮಿನರಿ ಎನ್‌ಕ್ವೈರಿಗೆ ಬಂದಮೇಲೆ ಅಲ್ಲಿ ಅದನ್ನು

ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ತಾವು ಹೇಳಿರತಕ್ಕ ವಿಚಾರ ಯಾವುದು ಇದೆ ಅದನ್ನು ಸಿ.ಒ.ಡಿ. ಪೊಲೀಸರಿಗೆ ತಿಳಿಸಿ ಬೇಗನೆ ವಿಚಾರಣೆ ಮುಗಿಸಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುವ ಹಾಗೆ ಮಾಡುತ್ತೇವೆ. ಬಾಕಿ ಇರತಕ್ಕ ಸರಣಿ ಕೊಲೆ ಪ್ರಕರಣ ಯಾವುದು ಇದೆ ಅದು ನಿಜ. ಕೆಲವು ಸಂದರ್ಭಗಳಲ್ಲಿ ಕೊಲೆ ಆಗುತ್ತದೆ. ಕೊಲೆ ಆದಾಗ ಕೆಲವು ಸಂದರ್ಭಗಳಲ್ಲಿ ಪತ್ತೆ ಹಚ್ಚುವುದಕ್ಕೆ ಕಷ್ಟ ಎಂಬುದು ನಮಗೆ ಗೊತ್ತಿದೆ. ಆ ಭಾಗದಲ್ಲಿರತಕ್ಕವರು ಆಗುವುದಿಲ್ಲ, ಹೊರಭಾಗದಿಂದ ಬರುತ್ತಿರತಕ್ಕದ್ದು, ಹೊರರಾಜ್ಯದಿಂದ ಬರುತ್ತಿರತಕ್ಕದ್ದು ಇರತಕ್ಕ ಸಂದರ್ಭಗಳಲ್ಲಿ ನಾವು ಈ ಚಾಲನೆಯನ್ನು ವ್ಯಾಪಕವಾಗಿ ಹಬ್ಬಿಸಬೇಕಾಗುತ್ತದೆ. ಈ ವಿಚಾರದಲ್ಲಿ ನಮ್ಮ ಸೌತ್ ಕೆನರಾದಲ್ಲಿರತಕ್ಕ ಎಸ್.ಪಿ.ಮತ್ತು ಡಿ.ಐ.ಜಿ. ಇವರಿಬ್ಬರಿಗೆ ನೀವು ಎತ್ತಿರತಕ್ಕ ವಿಚಾರವನ್ನು ಅವರ ಗಮನಕ್ಕೆ ತಂದು ಇದರ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಬೇಕೆಂಬ ಸೂಚನೆಯನ್ನು ಸರ್ಕಾರದ ಪರವಾಗಿ ಕೊಡುತ್ತೇನೆ.

ಒ) ಎಲೇಜ್ ನೋಟಿಫೈ ಆಗದೇ ಇರುವುದರಿಂದ ಗೇಣಿದಾರರಿಗೆ ಆಗುತ್ತಿರುವ ತೊಂದರೆ

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಅಧ್ಯಕ್ಷರೆ, ಮೈಸೂರು ಪರ್ಸನಲ್ಸ್ ಅಂಡ್ ಮಿಸಲೇನಿಯಸ್ ಇನಾಮ್ಸ್ ಅಬಾಲಿಷನ್ ಆ್ಯಕ್ಟ್ 1954 ಜಾರಿಗೆ ಬಂದ ಸಂದರ್ಭದಲ್ಲಿ ಸೆಕ್ಷನ್ 3(1)ರ ಪ್ರಕಾರ 'the consequences of vesting of inam land with the state' ಎಂಬ ಕಲಮ್‌ನಲ್ಲಿ ಇವತ್ತು ಮೈಸೂರು ಗೆಜಿಟ್‌ನಲ್ಲಿ ಯಾವ ಹಳ್ಳಿ ಎಂದು ನೋಟಿಫೈ ಮಾಡುತ್ತಾರೆ ಆ ಹಳ್ಳಿ ನೋಟಿಫೈ ಆಗಬೇಕು. It is a mandatory provision. ಒಂದು ಹಳ್ಳಿ ನೋಟಿಫೈ ಆದಮೇಲೆ ಆ ಹಳ್ಳಿ ಆ ವ್ಯಾಪ್ತಿಯಲ್ಲಿ ಬರತಕ್ಕದ್ದು; ಇನಾಂ ರದ್ದಿಯಾತಿ ಅಪ್ಲೈ ಆಗತಕ್ಕ ಸಂದರ್ಭ ಇರುವುದರಿಂದ ಸರ್ಕಾರದವರು ಒಂದು ನೋಟಿಫಿಕೇಷನ್ ಇಶ್ಯೂ ಮಾಡಿದರು. 15-9-1956ರಲ್ಲಿ ನೋಟಿಫಿಕೇಷನ್ ಇಷ್ಯೂ ಮಾಡಿ ಇಡೀ ರಾಜ್ಯಾದ್ಯಂತ ಅನೇಕ ಹಳ್ಳಿಗಳು ಯಾವುದು ಆ ಕಾನೂನು ವ್ಯಾಪ್ತಿಯಲ್ಲಿ ಬರುತ್ತದೆಂಬ ಹಳ್ಳಿಗಳನ್ನು ನೋಟಿಫೈ ಮಾಡಿದ ಸಂದರ್ಭದಲ್ಲಿ, ಬೆಂಗಳೂರು ಕಸಬದಲ್ಲಿ ಬರತಕ್ಕ ಕೆ.ಜಿ.ಬ್ಯಾಡರಹಳ್ಳಿ ಎಂಬುದು ಒಂದು ನೋಟಿಫೈ ಆಗಿದೆ. ಕೆ.ಜಿ.ಬ್ಯಾಡರಹಳ್ಳಿ ಅಂದರೆ ಬೆಂಗಳೂರು ಕಸಬದಲ್ಲಿ 4 ಕೆ.ಜಿ.ಬ್ಯಾಡರಹಳ್ಳಿಗಳು ಬಂದು, ಒಂದು ಹಳ್ಳಿ ಸುಬೇದಾರ್ ಮೈಖೇಲ್ ಎಂಬುವವರು ಜೋಡಿದಾರರಾಗಿರತಕ್ಕದ್ದು, ಇನ್ನೊಂದು ರಾಜಮಹಲ್ ಬ್ಯಾಡರಹಳ್ಳಿ ಎಂದು. ಹೀಗೆ ಅನೇಕ ರೀತಿಯ ಬ್ಯಾಡರಹಳ್ಳಿಗಳು ಇರುವುದರಿಂದ ಯಾವ ಹಳ್ಳಿ ಸುಬೇದಾರ್ ಮೈಖೇಲ್ ಜೋಡಿದಾರರಾಗಿದ್ದ ವ್ಯಾಪ್ತಿಯಲ್ಲಿ ಬರತಕ್ಕ ಹಳ್ಳಿ ನೋಟಿಫೈ ಆಗಿದೆಯೇ ಇಲ್ಲವೇ ಎಂಬುದು ಅನುಮಾನಾಸ್ಪದವಾಗಿದೆ. ಆ ಸಂದರ್ಭದಲ್ಲಿ ಜೋಡಿದಾರರಾಗಿರತಕ್ಕ ಮೈಖೇಲ್ ಅವರು ಹೈಕೋರ್ಟ್‌ನ್ನು ಅಪ್ರೋಚ್ ಮಾಡಿದ ಸಂದರ್ಭದಲ್ಲಿ ಹೈಕೋರ್ಟ್ ಆದೇಶ ಈ ರೀತಿ ಇದೆ:

"If the entry does not relate to the inam village of the petitioner, he will not be affected thereby." ಜ: ಗೋವಿಂದ ಭಟ್ ಅವರ ಬೆಂಚ್‌ನಲ್ಲಿ ತೀರ್ಮಾನವಾಗಿ ಈ ಒಂದು ಆದೇಶ ಆಗಿದೆ. ಅದೇ ರೀತಿ ಅದಕ್ಕನುಗುಣವಾಗಿ ಬೆಂಗಳೂರಿನ ಜಿಲ್ಲಾಧಿಕಾರಿಗಳೂ ಕೂಡ ಒಂದು ಆರ್ಡರ್ ಬರೆಯಬೇಕಾದರೆ:

"K.G.Byadralli is not vested village for which Jodidar Subhedar Michael ಹೆಸರಿನಲ್ಲಿ ಜಿಲ್ಲಾಧಿಕಾರಿಗಳಿಂದ ಆದೇಶವಾಗಿದೆ. ಈಗ ನನ್ನ ಪ್ರಶ್ನೆ ಇರತಕ್ಕದ್ದು ಇವತ್ತು ಇದರ ಪರಿಣಾಮ ಏನಾಗಿದೆ? ವಿಲೇಜ್ ನೋಟಿಫೈ ಆಗಿಲ್ಲದೆ ಇರುವುದರಿಂದ ಅಲ್ಲಿ ಅರ್ಹಗೇಣಿದಾರರಿಗೆ ಅವರ ಹಕ್ಕನ್ನು ಪಡೆಯುವುದಕ್ಕೆ ಸಾಧ್ಯವಾಗಿಲ್ಲ. ಇವತ್ತು ಅಲ್ಲಿ ಸುಮಾರು 114 ಸರ್ವೆ ನಂಬರ್‌ನಲ್ಲಿ ಇರತಕ್ಕ ನೂರಾರು ಎಕರೆ ಇರತಕ್ಕ ಜಮೀನು, more than 50 percent of the area comes under the Government's purview. ಕೆರೆ ಇದೆ, ಕಟ್ಟೆ ಇದೆ. ಇವತ್ತು ಆ ಕೆರೆಕಟ್ಟೆಯನ್ನು ಬೇರೆಯವರು ಯಾರೋ ಒಬ್ಬರು ಆಕ್ಯುಪೈ ಮಾಡಿಕೊಂಡು ಇಲ್ಲದ ಡಾಕ್ಯುಮೆಂಟ್ ಕ್ರಿಯೇಟ್ ಮಾಡತಕ್ಕ ಪ್ರಕಾರ ನಡೆಯುತ್ತಿರತಕ್ಕದ್ದು. ಇವತ್ತು ಕೋಟ್ಯಾಂತರ ರೂಪಾಯಿಗಳ ಬೆಲೆಬಾಳತಕ್ಕ ಆಸ್ತಿ ಸರ್ಕಾರಕ್ಕೆ ಸಲ್ಲಬೇಕಾಗಿರತಕ್ಕ ಆಸ್ತಿ ಏನಿದೆ ಇದನ್ನು ತಾವು ಯಾವ ರೀತಿ ನೋಟಿಫೈ ಮಾಡುತ್ತೀರೆಂಬುದನ್ನು ವಿಚಾರ ಮಾಡಬೇಕು. ಜೋಡಿದಾರರಾಗಿರತಕ್ಕ ಕೆ.ಜಿ.ಬ್ಯಾಡರಹಳ್ಳಿಯನ್ನು ನೀವು ನೋಟಿಫೈ ಮಾಡಿ ಅರ್ಜಿ ಹಾಕುವುದಕ್ಕೆ ಇನಾಂ ಅಬಾಲಿಷನ್ ಆ್ಯಕ್ಟ್ ಪ್ರಕಾರ ಅವಕಾಶ ಮಾಡಿಕೊಡದಿದ್ದರೆ ಗೇಣಿದಾರರಿಗೆ ಸಹಾಯವಾಗುವುದಿಲ್ಲ, ಮತ್ತು ಸರ್ಕಾರಕ್ಕೆ ಕೂಡ ಅನುಕೂಲವಾಗುವುದಿಲ್ಲ. ಆದುದರಿಂದ ದಯಮಾಡಿ ತಾವು ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ಕಂದಾಯ ಇಲಾಖೆಯ ಕಾರ್ಯದರ್ಶಿಗಳಿಂದ ವರದಿ ತರಿಸಿ ಒಂದು ವಾರದೊಳಗೆ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವ ಹಾಗೆ ಮಾಡಿ, ಸಾರ್ವಜನಿಕರ ಆಸ್ತಿ ಖಾಸಗಿಯವರಿಗೆ ಹೋಗದೆ ಇರುವ ಹಾಗೆ ಕ್ರಮ ತೆಗೆದುಕೊಳ್ಳುತ್ತೇವೆ.

(ಓ) ಬನ್ನೇರುಘಟ್ಟ ರಸ್ತೆಯಲ್ಲಿ ಖಾಸಗೀಯವರ ಜಾಗದಲ್ಲಿ ನಿರ್ಮಿಸಿದ್ದ ಕಟ್ಟಡಗಳನ್ನು ಒಡೆದುಹಾಕಿರುವ ಬಗ್ಗೆ

+ ಶ್ರೀ ರಾಮಲಿಂಗಾರೆಡ್ಡಿ (ಜಯನಗರ): ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ತಾವರೆಕರೆ ಗ್ರಾಮದ ಸರ್ವೆ ನಂಬರ್ 50:51:52ರಲ್ಲಿ ಸುಮಾರು 20 ಎಕರೆ ಜಮೀನನ್ನು 1977ರಲ್ಲಿ ಬಿ.ಡಿ.ಎ.ಯಿಂದ ನೋಟಿಫಿಕೇಷನ್ ಮಾಡಿದರು. ಮತ್ತೆ 1984ರಲ್ಲಿ ಫೈನಲ್ ನೋಟಿಫಿಕೇಷನ್ ಮಾಡಿದರು; ಅವಾರ್ಡ್ ಮಾಡಿದರು. 20 ಎಕರೆ ಜಮೀನಿಗೆ 3 ಲಕ್ಷ

ರೂಪಾಯಿ ಹಣ ಕೊಟ್ಟರು. ಅದಾದ ಮೇಲೆ ಏನಾಯಿತು? ಅದಕ್ಕೆ ಮುಂಚೆ ಅಬ್ಬಯ್ಯ ಎಂದು ಯಾರು ಲ್ಯಾಂಡ್‌ಲಾರ್ಡ್ ಇದ್ದಾರೆ ಅವರು ಅದನ್ನು ಬಹಳ ಜನರಿಗೆ ಹೂರಿದ್ದರು ಮತ್ತು ಸಾಕಷ್ಟು ಜನರಿಗೆ ಲೀಸ್‌ಗೆ ಕೊಟ್ಟಿದ್ದರು. ಅಲ್ಲಿ ಏನು ಕಟ್ಟಡಗಳು ಬಂದಿವೆ, ನಿನ್ನೆ ಏನು ಒಡೆದುಹಾಕಿದ್ದಾರೆ ಇದೆಲ್ಲಾ 1977ಕ್ಕೆ ಮುಂಚೆ ಬಂದದ್ದು. ಅದಾದಮೇಲೆ ಸ್ವಲ್ಪ ಬಂದಿರಬಹುದು, ಇಲ್ಲವೆಂದು ಹೇಳುವುದಿಲ್ಲ. 78 ಗ್ಯಾರೇಜ್‌ಗಳು ಇದ್ದವು, 4 ಸಾಮಿಲ್‌ಗಳು ಇದ್ದವು, ಒಂದು ಥಿಯೇಟರ್ ಇತ್ತು, ಒಂದು ಟೆಂಟ್ ಇತ್ತು. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಗಳು 10 ಇದ್ದವು, 70 ಅಂಗಡಿಗಳು ಇದ್ದವು. ಇವರೆಲ್ಲರೂ ಸೇಲ್ಸ್‌ಟ್ಯಾಕ್ಸ್ ಕಟ್ಟುತ್ತಿದ್ದರು, ಇನ್‌ಕಂ ಟ್ಯಾಕ್ಸ್ ಕೊಡುತ್ತಿದ್ದರು. ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ನಲ್ಲಿ ರಿಜಿಸ್ಟ್ರೇಷನ್ ಮಾಡಿಸಿದ್ದರು. ಸುಮಾರು ನೂರು ವರ್ಷಗಳಿಂದ ಅಲ್ಲಿ 5 ಮನೆಗಳು ಇದ್ದವು. ಅಬ್ಬಯ್ಯ ಎಂದು ಯಾರು ಲ್ಯಾಂಡ್ ಲಾರ್ಡ್ ಇದ್ದಾರೆ ಅವರ ಜಮೀನಿನಲ್ಲಿ ನೂರು ವರ್ಷಕ್ಕಿಂತ ಹಳೆಯ ಮನೆಗಳು ಇವೆ. ನೂರು ವರ್ಷಕ್ಕಿಂತ ಹಳೆಯ ಮನೆಗಳನ್ನು ಡೆಮಾಲಿಷನ್ ಮಾಡುತ್ತೇವೆಂದು ನಿನ್ನೆ ಹೋಗಿದ್ದರು. ಅವರೆಲ್ಲಾ ಸೇರಿ 1977ರಿಂದ ಮತ್ತು ಅದಕ್ಕಿಂತ ಮುಂಚಿನಿಂದ ಸುಮಾರು 50 ಕೋಟಿ ರೂಪಾಯಿಗಳ ಮೇಲೆ ಇನ್‌ವೆಸ್ಟ್‌ಮೆಂಟ್ ಮಾಡಿದ್ದಾರೆ. ಎರಡು ಸಾವಿರ ಜನ ಅಲ್ಲಿ ಕೆಲಸ ಮಾಡುತ್ತಿದ್ದವರು ಇದ್ದರು. ಅಲ್ಲಿ ಇನ್‌ವೆಸ್ಟ್ ಮಾಡಿರತಕ್ಕವರು ಇದ್ದರು. ಇಷ್ಟೆಲ್ಲ ಇದ್ದರೂ, ಹೈಕೋರ್ಟಿನಲ್ಲಿ ಕೇವಲ 100-120 ಅಡಿ ಜಾಗಕ್ಕೆ ಅಂಚೆ ಲಿಂಗಣ್ಣ ಎಂಬುವವರ ಕೇಸ್ ಇದ್ದು ಅದು ವಿಚಾರಣೆಯಾಯಿತು. ಅದು ಡೆಮಾಲಿಷನ್‌ಗೆ ಆರ್ಡರ್ ಆಯಿತು. ಬಿ.ಡಿ.ಎ.ಗೆ. ಡೆಮಾಲಿಷನ್ ಮಾಡುವುದಕ್ಕೆ ಹೈಕೋರ್ಟ್ ಆರ್ಡರ್ ಮಾಡಿತ್ತು. ಅದು ಒಂದೇ ಒಂದು ಕೇಸು 100-120 ಅಡಿಗೆ ಸಂಬಂಧಪಟ್ಟದ್ದು ಆದರೆ ಇವರು ಏಕಾಏಕಿ ಹೋಗಿ ಸಂಪೂರ್ಣ 13 ಎಕರೆ ಜಾಗದಲ್ಲಿದ್ದ ಕಟ್ಟಡಗಳನ್ನೆಲ್ಲಾ ಡೆಮಾಲಿಷನ್ ಮಾಡಿದ್ದಾರೆ. 20 ಎಕರೆ ಜಾಗ ನೋಟಿಫಿಕೇಷನ್ ಆಗಿತ್ತು. ಅದರಲ್ಲಿ 7 ಎಕರೆ ಜಾಗವನ್ನು ಎನ್.ಐ.ಆರ್.ಗೆ ಎಂದು ಕೊಟ್ಟಿದ್ದಾರೆ. 13 ಎಕರೆ ಜಾಗದಲ್ಲಿ ಇದ್ದ ಕಟ್ಟಡಗಳನ್ನೆಲ್ಲ ಒಡೆದು ಹಾಕಿದ್ದಾರೆ. ಮತ್ತೆ ಥಿಯೇಟರ್ ಸಭಾಧ್ಯಕ್ಷರೆ, ಅದಕ್ಕೆ ಡಿ.ಸಿ.ಯವರು ಪರ್ಮಿಷನ್ ಕೊಟ್ಟಿರುತ್ತಾರೆ, ಎಲ್ಲಾ ಕೊಟ್ಟಿರುತ್ತಾರೆ. ಅದನ್ನೂ ಕೂಡ ನಿನ್ನೆ ಒಡೆಯುವುದಕ್ಕೆ ಹೋಗಿದ್ದಾರೆ. ಆ ಥಿಯೇಟರ್‌ನ್ನು ಬಿಡಿಎ ಯವರೇ ಇಟ್ಟುಕೊಳ್ಳಬಹುದಿತ್ತು. ಅಕ್ಚೆರ್ ಆದ ಪ್ರಾಪರ್ಟಿಯಾಗಿದ್ದರೆ ಅವರೇ ಇಟ್ಟುಕೊಳ್ಳಬಹುದಿತ್ತು. ಒಂದು ಥಿಯೇಟರ್ ಕಟ್ಟುವುದಕ್ಕೆ ಸುಮಾರು 40-50 ಲಕ್ಷ ರೂಪಾಯಿ ಬೇಕಾಗುತ್ತದೆ. ಅದನ್ನು ಬಿ.ಡಿ.ಯವರೇ ಇಟ್ಟುಕೊಳ್ಳಬೇಕಾಗಿತ್ತು. ಅಲ್ಲಿ 3 ಲಕ್ಷ ರೂಪಾಯಿ ಲ್ಯಾಂಡ್ ಲಾರ್ಡಿಗೆ ಕೊಟ್ಟಿರುವುದು ಬಿಟ್ಟರೆ ಬಿ.ಡಿ.ಎಯದು ಒಂದು ಪೈಸೆ ಇನ್‌ವೆಸ್ಟ್‌ಮೆಂಟ್ ಇಲ್ಲ. ಮುಖ್ಯ ರಸ್ತೆಗೆ ಇದ್ದ 100-120 ಅಡಿ ಜಾಗ ಮೊನ್ನೆ ಹರಾಜಾಯಿತು. ಅದರಲ್ಲಿ ವಾಟರ್ ಸಪ್ಲೈ ಇಲ್ಲ, ಸ್ಯಾನಿಟರಿ ಇಲ್ಲ; ಬಿ.ಡಿ.ಎ.ಒಂದು ಪೈಸೆ ಕೂಡ ಖರ್ಚು ಮಾಡಿಲ್ಲ. ಒಂದು ಕೋಟಿ 57 ಲಕ್ಷ ರೂಪಾಯಿಗೆ ಅದು ಹರಾಜಾಯಿತು. ಲ್ಯಾಂಡ್ ಲಾರ್ಡ್‌ಗೆ 1984ರಲ್ಲಿ ಅಂದರೆ 13 ವರ್ಷಕ್ಕೆ ಮುಂಚೆ 20

ಎಕರೆಗೆ ಕೊಟ್ಟದ್ದು 3 ಲಕ್ಷ ರೂಪಾಯಿಗಳು. ಇವರು 100-120 ಅಡಿ ಜಾಗ ಹರಾಜು ಮಾಡಿ ಒಂದು ಕೋಟಿ 57 ಲಕ್ಷ ರೂಪಾಯಿಗಳನ್ನು ಬಿಡಿಎ. ಖಜಾನೆಗೆ ತುಂಬಿಸಿಕೊಳ್ಳುತ್ತಿದ್ದಾರೆ. ಇದು ನ್ಯಾಯವೆ? ಮತ್ತೆ ಕೋರ್ಟ್ ಡೈರೆಕ್ಷನ್ ಇಲ್ಲ, 100-120 ಅಡಿ ಜಾಗ ಬಿಟ್ಟು ಉಳಿದ ಜಮೀನು ಒಡೆಯುವುದಕ್ಕೆ. ನಿನ್ನೆಯ ದಿವಸ ಏಕಾಏಕಿಯಾಗಿ ಹೋಗಿ ಒಡೆದಿದ್ದಾರೆ. ಸುಮಾರು 50 ಕೋಟಿ ರೂಪಾಯಿನಷ್ಟು ನಷ್ಟವಾಗಿದೆ. ಸುಮಾರು 2 ಸಾವಿರ ಕುಟುಂಬಗಿಳು ಸಫರ್ ಆಗುತ್ತಿವೆ.

+ ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ): ಮಾನ್ಯ ಅಧ್ಯಕ್ಷರೆ, ಅಲ್ಲಿ ಏನು ಒಡೆದಿದ್ದಾರೆ ಅದು ಬನ್ನೇರುಘಟ್ಟ ರಸ್ತೆಗೂ ಈಸ್ಟರ್ನ್ ರಸ್ತೆಗೂ ಮಧ್ಯೆ ಇದೆ. ನಾನು ವಾಸಿಸುವ ಮನೆಯ ಎದುರಿಗೆ ಇದೆ. ನಾನು ಏನು ಹೇಳುವುದಕ್ಕೆ ಹೊರಟಿ ಎಂದರೆ ನೀವು ಒಂದು ರೀಹ್ಯಾಬಿಲಿಟೇಷನ್ ಸ್ಕೀಂ ಹಾಕಬೇಕು. ಯಾವುದಕ್ಕೆ ಅಂದರೆ, 22 ಎಕರೆ ಜಮೀನನ್ನು ಏನು ತೆಗೆದುಕೊಂಡಿದ್ದೀರಿ, ಆ ಜಮೀನ್ದಾರನ ಮನೆಯನ್ನು ಸಾರಿಸಿ ನೆಲಸಮ ಮಾಡಿದ್ದೀರಿ. ಅವನಿಗೆ ವಾಸ ಮಾಡುವುದಕ್ಕೆ ಸ್ಥಳ ಇಲ್ಲ; ಬನಶಂಕರಿಯಲ್ಲಿ ಇದೇ ತರಹ 24 ಎಕರೆ ಜಾಗವನ್ನು ಅಕ್ವೈರ್ ಮಾಡಿಕೊಂಡರು. ಬಿ.ಡಿ.ಎಯವರು 16 ಎಕರೆಗೆ ದುಡ್ಡು ಕೊಟ್ಟರು. ಉಳಿದ 8 ಎಕರೆಗೆ ಕೊಡಲಿಲ್ಲ. ಅವರು 4 ಜನ ಅಣ್ಣ ತಮ್ಮಂದಿರು. 36 ಚದರ ಅಡಿಯಲ್ಲಿ ವಾಸವಾಗಿದ್ದಾರೆ. ಅದನ್ನೂ ಒಡೆಯುವುದಕ್ಕೆ ಹೋಗುತ್ತಾರೆ ಇವರು. ಬಹುಶಃ ಇಂಥ ಆ್ಯಂಟಿ ಸೋಷಿಯಲ್ ಆ್ಯಕ್ಟಿವಿಟೀಸ್ ಬಿ.ಡಿ.ಎ.ಯಲ್ಲಿ ಏನಾಗುತ್ತಿದೆ ಎಂದರೆ ಮಾಲೀಕನಿಗೆ ಏನೂ ಕೊಡುವುದಿಲ್ಲ. ಭಿಕ್ಷಾಟನೆಗೆ ಕಳುಹಿಸುತ್ತಾರೆ. ಅಲ್ಲಿ 22 ಎಕರೆಗೆ 80 ಕೋಟಿ ರೂಪಾಯಿ ಆಗುತ್ತದೆಂದು ಹೇಳುತ್ತೇನೆ. ನೂರು ಕೋಟಿ ರೂಪಾಯಿ ಆಸ್ತಿ ಯಾರ ಅಪ್ಪನದು? ಬಿ.ಡಿ.ಎ. ಅಪ್ಪನದೆ? ಆ ಜಮೀನ್ದಾರನ ಅಪ್ಪ ಯಾವನಿಗೆ ಹುಟ್ಟಿದ್ದಾನೆ ಆ ಮಕ್ಕಳು ಬೀದಿಯಲ್ಲಿ ನಿಂತಿದ್ದಾರೆ. ಪಂಚೆ ಉಡುವವರು ಒಬ್ಬರೂ ಇಲ್ಲ; 4 ಜನ ಅಣ್ಣತಮ್ಮಂದಿರಲ್ಲಿ ಎಲ್ಲರೂ ನಿಕ್ಕರ್ ಹಾಕುತ್ತಾರೆ. ಅವರಿಗೆ ಬೇರೆ ಆದಾಯ ಇಲ್ಲ. ಇದ್ದದ್ದು ಇದೊಂದೇ. ನೂರು ಕೋಟಿ ರೂಪಾಯಿ ಆಸ್ತಿ. ನೂರು ಕೋಟಿ ರೂಪಾಯಿ ಆಸ್ತಿಯನ್ನು ಕಳೆದುಕೊಂಡು ಬೀದಿಪಾಲಾಗಿದ್ದಾರೆ. ಅಂದಾಗ ಅವರಿಗೆ ರಿಹ್ಯಾಬಿಲಿಟೇಷನ್ ಸ್ಕೀಂ ಆದರೂ ಮಾಡಬೇಕಲ್ಲಾ. ಅವರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಸ್ಥಳ ಬಿಟ್ಟಿಲ್ಲ. ಅವರ ಅಪ್ಪನದೆಲ್ಲವನ್ನೂ ಕಿತ್ತುಕೊಳ್ಳುತ್ತಾರೆ. ಅವರ ಅಪ್ಪನದರಲ್ಲಿ ವಾಸಿಸುವುದಕ್ಕೆ ಸ್ಥಳ ಇಲ್ಲ. ಆ ಮಾಲೀಕರಿಗೆ ಸ್ಥಳ ಕೊಡಬೇಕು. ಆ ಸ್ಥಳದಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ದುಡ್ಡು ಬೇಕಲ್ಲಾ. ಆ ದುಡ್ಡು ಬರುವುದಕ್ಕೆ ಇನ್ನು ಒ.ಸಿ.ಜಮೀನಾದರೂ ಕೊಡಬೇಕು. ಜಮೀನು ಮಾರಿ ದುಡ್ಡು ಪಡೆದುಕೊಳ್ಳುವುದಕ್ಕೆ ಕನಿಷ್ಟ ಎರಡು ಎಕರೆಯಾದರೂ ಕೊಡಬೇಕಲ್ಲಾ 22 ಎಕರೆ ಕಿತ್ತುಕೊಂಡಮೇಲೆ, ಅದು ಆಗದೆ ಹೋದರೆ, ಇದು ಏನು ಹೈ ಹ್ಯಾಂಡೆಡ್‌ನೆಸ್ ಅಂದರೆ ಹೈಯಸ್ಟ್ ಆರ್ಡರ್. ಬಿ.ಡಿ.ಎ. ಏತಕ್ಕೆ ಬೇಕು ನಿಮಗೆ?

10.50 ಎ.ಎಂ.

ಅವರಿಗೆ ದುಡ್ಡು ಏಕೆ ಬೇಕು? ಅವರೇನು ಕಮಿಷನ್ ಏಜೆಂಟ್ಸ್‌ಗಳೇ? 3 ಲಕ್ಷ ರೂಪಾಯಿ ಕೊಟ್ಟು ತೆಗೆದುಕೊಂಡು 100 ಕೋಟಿ ರೂಪಾಯಿಗೆ ಮಾರಿಕೊಳ್ಳುತ್ತೀರಿ, rob better pay pauk ಯಾರದ್ದೋ ಕಿತ್ತುಕೊಂಡು ಯಾರಿಗೋ ಲಾಭ ಮಾಡಿಕೊಡುವುದು, ಎನ್.ಎ.ಎಲ್. ಸೊಸೈಟಿಗೆ, ಕೇಂದ್ರಸರ್ಕಾರದವರಿಗೆ ಕೊಡಬೇಕು, ಇಲ್ಲಿ ಯಾರದೋ ಬಡರೈತನದು ಕಿತ್ತುಕೊಂಡರು. ಅವನಿಗೆ ಮಾರ್ಕೆಟ್ ರೇಟ್‌ನಲ್ಲಿ ದುಡ್ಡು ಕೂಡ ಕೊಡುವುದಿಲ್ಲ. ಅವರಿಗೆ ಕೊಡಬೇಕಾಗಿರುವ ಮೂರು ಲಕ್ಷ ರೂಪಾಯಿಗಳನ್ನು ಅವರಿಗೆ ಕೊಡದೆ ಅದನ್ನು ಕೋರ್ಟಿನಲ್ಲಿ ಡೆಪಾಸಿಟ್ ಮಾಡಿದ್ದಾರೆ. ಇದು ಏಕಪಕ್ಷೀಯ. unilateral action on the part of the BDA, ಇದರಿಂದಾಗಿ ಮಾಲೀಕರು ಬೀದಿ ಪಾಲುಗುತ್ತಾರೆ, ಅವರಿಗೆ ರಕ್ಷಣೆ ಕೊಡುವುದು ಎನ್ನತಕ್ಕಂಥ ಮಾನವೀಯತೆಯ ದೃಷ್ಟಿ ಕೂಡ ಕೋರ್ಟಿನಲ್ಲಿ ಇಲ್ಲ; ಬಿ.ಡಿ.ಎ.ಗೆ ಇಲ್ಲ, ಸರ್ಕಾರಕ್ಕೂ ಇಲ್ಲ,...

+ ಶ್ರೀ ವಾಟಾಳ್ ನಾಗಾರಜ್ (ಚಾಮರಾಜನಗರ): ಅಧ್ಯಕ್ಷರೆ, ಜಮೀನುದಾರರನ್ನು ಕರೆಹಿಸಿ ಅಭಿವೃದ್ಧಿ ಪ್ರಾಧಿಕಾರದವರು ಸ್ವಲ್ಪ ಸೌಜನ್ಯಕ್ಕಾದರೂ ಮಾತುಕತೆ ಆಡಬೇಕಲ್ಲಾ. ಅದು ಏನು ಆದರೂ ಆಗಲಿ, ಸೌಜನ್ಯಕ್ಕೆ ಮಾತುಕತೆ ಆಡಿ, ನಿಮ್ಮ ಜಾಗ ಇಷ್ಟು ಬೇಕು, ಆದ್ದರಿಂದ ನಾವು ಇದನ್ನು ಒಡೆಯುತ್ತಿದ್ದೇವೆ ಎಂದು ಹೇಳುವುದು ಬೇಡವೆ? ಇದು ಯಾವುದೂ ಇಲ್ಲ. ಇವತ್ತು ಮಿಲ್ಟ್ರಿ ರೂಲ್.. ನೀವು ಬೇಕಾದರೆ ನಿನ್ನೆ ಬನ್ನೇರುಘಟ್ಟದಲ್ಲಿ ಆಗಿರುವುದನ್ನು ನೋಡಿಕೊಂಡು ಬನ್ನಿ, ಅಲ್ಲಿಯ ಜನಗಳೆಲ್ಲರೂ ಕಣ್ಣೀರು ಹಾಕುತ್ತಿದ್ದಾರೆ. ಅಲ್ಲಿನ ನಿವಾಸಿಗಳು, ಹೆಂಗಸರು, ಮಕ್ಕಳು, ಎಲ್ಲರೂ ಸುಮಾರು ರಾತ್ರಿವೇಳೆ ಎಲ್.ಹೆಚ್. ಹತ್ತಿರ ಬಂದು ಗೋಳಾಡುತ್ತಿದ್ದಾರೆ. ಅವರಿಗೆ ಅಲ್ಲಿ ಕುಳಿತುಕೊಳ್ಳುವುದಕ್ಕೂ ಕೂಡ ಸ್ಥಳವಿಲ್ಲ, ಮನೆಯಿಲ್ಲ, ಹಾಗೂ ಮನೆಯಲ್ಲಿನ ಎಲ್ಲಾ ಸಾಮಾನುಗಳನ್ನು, ಪಾತ್ರೆಗಳನ್ನು ಹೊರಗೆ ಹಾಕಿದ್ದಾರೆ. ಲೂಟಿ, ದರೋಡೆ ಮಾಡುವ ರೀತಿಯಲ್ಲಿ ಈ ಅಭಿವೃದ್ಧಿ ಪ್ರಾಧಿಕಾರದವರು ಮಾಡುತ್ತಿದ್ದಾರೆ. ಅಧ್ಯಕ್ಷರೆ ತಮಗೆ ದಯಮಾಡಿ ನಾನು ಹೇಳುವುದೇನೆಂದರೆ, ಸಾಧ್ಯವಾದರೆ ಈ ಸಭೆ ಮುಗಿದ ನಂತರ ತಮ್ಮ ನಾಯಕತ್ವದಲ್ಲಿ ಅಲ್ಲಿಗೆ ಹೋಗೋಣ, ಆಗ ನಮಗೆ 'ಅಲ್ಲಿ ಏನು ನಡೆದಿದೆ, ದುರಂತ, ಆ ಪರಿಸ್ಥಿತಿ ಏನಾಗಿದೆ ಎನ್ನುವುದು ಗೊತ್ತಾಗುತ್ತದೆ. ಅವರಿಗೆ ಒಂದು ವಿವೇಚನೆ ಬೇಡವೆ? ಅಲ್ಲಿ ಹೋಗಿ ಆ ಮಾಲೀಕರನ್ನು ಕೇಳಿ ಬಿ.ಡಿ.ಎ ಪ್ರಾಪರ್ಟಿಯನ್ನು ಇಷ್ಟು ತೆಗೆದುಕೊಳ್ಳಬೇಕಾಗಿದೆ, ಇಷ್ಟು ಒಡೆದುಹಾಕುತ್ತೇವೆ ಎನ್ನುವ ವಿಷಯವನ್ನು ಅವನಿಗೆ ತಿಳಿಸದೆ, ಯಾವ ವಿವೇಚನೆಯೂ ಇಲ್ಲದೆ ಏಕಪಕ್ಷೀಯವಾಗಿ ದುರಂತ ಮಾಡಿದ್ದಾರೆ.

ಅಧ್ಯಕ್ಷರು: ಮಾನ್ಯ ಕಾನೂನು ಮಂತ್ರಿಗಳು ಸರ್ಕಾರದ ಪರವಾಗಿ ಏನು ಹೇಳುತ್ತಾರೋ ನೋಡೋಣ.

ಶ್ರೀ ಎಂ.ಸಿ.ನಾಣಯ್ಯ: ಅಧ್ಯಕ್ಷರೆ, ಎನ್.ಎ.ಎಲ್.ಗೆ ಜಮೀನು ಕೊಟ್ಟಾದ ಮೇಲೆ

ಬಾಕಿ ಇರುವ 13 ಎಕರೆ ಜಮೀನು ಇದು ಬಿ.ಡಿ.ಎ. ಫೈನಲ್ ನೋಟಿಫಿಕೇಷನ್ ಮಾಡಿದಾದ ಮೇಲೆ ಇದು ಬಿ.ಡಿ.ಎ ಆಸ್ತಿ. ನಂತರ ಅದೇ ಜಮೀನನ್ನು ಬೇರೆ ಯಾರ್ಯಾರಿಗೆ ಮಾರಾಟ ಮಾಡಿ, ಅಲ್ಲಿ ಇರುವ ಬೇರೆ ಯಾರೋ ಅಲ್ಲಿ ಕಟ್ಟಿಕೊಂಡರು. ಈ ಪರಿಸ್ಥಿತಿಯಾಗಿ ಒಂದು ವರ್ಷದ ನಂತರ ಒಂದು ಪ್ರಕರಣಕ್ಕೆ, ನೋಟಿಫಿಕೇಷನ್ ಅಕ್ವಿಜಿಷನ್‌ಗೆ ಸಂಬಂಧಪಟ್ಟಹಾಗೆ ಹೈಕೋರ್ಟಿಗೆ ಹೋದ ನಂತರ ಈ ನೋಟಿಫಿಕೇಷನ್ ಕೂಡ ಚಾಲೆಂಜ್ ಮಾಡಿದರು. ನಂತರ ಬಹಳ ವರ್ಷ ಕಳೆದಾದ ಮೇಲೆ ಹೈಕೋರ್ಟ್‌ನವರು ಒಂದು ತೀರ್ಪನ್ನು ಕೊಟ್ಟರು. ನೋಟಿಫಿಕೇಷನ್ ಮಾಡಿರುವುದು ಬಿ.ಡಿ.ಎ.ಯದು ಆಗಿದೆ ಸ್ವಾಧೀನ ಪಡಿಸಿಕೊಂಡಿರುವುದು ಅದು ಸರಿಯಾಗಿದೆ ಎಂದು, ಈ ಹಿನ್ನೆಲೆಯಲ್ಲಿ ಅದರ ಸಿಂಧುತ್ವವನ್ನು ಎತ್ತಿಹಿಡಿದಿದೆ. ನಂತರ ಸುಮಾರು ಹತ್ತಾರು ವರ್ಷಗಳಿಂದಲೂ ನೋಟೀಸ್ ಕೊಡುತ್ತಿದ್ದರೂ, ಅವರು ಹೈಕೋರ್ಟ್‌ನಲ್ಲಿ ಚಾಲೆಂಜ್ ಮಾಡಿಕೊಂಡಿರುವುದರಿಂದ ಇಲ್ಲಿ ಆ ಕ್ರಮವನ್ನು ಕೈಗೊಂಡಿರಲಿಲ್ಲ. ಈ ಹಿನ್ನೆಲೆಯಲ್ಲಿ ನಿನ್ನೆ ಬಿ.ಡಿ.ಎನವರು ಆ ಕ್ರಮವನ್ನು ಕೈಗೊಂಡಿದ್ದಾರೆ. ಅಲ್ಲಿ ಕೈಗೊಂಡಿರುವ ಕ್ರಮ ಅವು ಎಲ್ಲಾ ಅನ್ ಅಥಾರೈಸ್ಡ್ ಆಕ್ಯುಪೇಷನ್ ಆಗಿದೆ, ಹಾಗೂ ಅನ್‌ಅಥಾರೈಸ್ಡ್ ಕನ್‌ಸ್ಟ್ರಕ್ಷನ್ ಆಗಿದೆ. ಜಮೀನನ್ನು ಬಿ.ಡಿ.ಎದವರು ಒಂದುಸಲ ಅಕ್ವೆರ್ ಮಾಡಿಯಾರ ಮೇಲೆ, ಅಂತಹ ಜಮೀನುಗಳನ್ನು ಬೇರೆಯವರಿಗೆ ಮಾರಾಟ ಮಾಡಿರುವುದೂ ಕೂಡ ಕಾನೂನಿನ ಅಡಿಯಲ್ಲಿ ಹೇಳಬೇಕಾದರೆ ಆ ಎಲ್ಲಾ ಕ್ರಮಗಳು ಅಸಿಂಧುವಾಗುತ್ತದೆ. ಅದಕ್ಕೆ ಏನು ಕಾನೂನಿನ ಅಡಿಯಲ್ಲಿ ಲೀಗಲ್ ಸ್ಯಾಂಕ್ಟಿಟಿ ಬರುವುದಿಲ್ಲ. ಹೈಕೋರ್ಟ್ ಕೊಟ್ಟಿರುವ ತೀರ್ಪಿನನ್ವಯ ಬಿ.ಡಿ.ಎ.ನವರು ಕೈಗೊಂಡಿರುವ ಕಾರ್ಯಕ್ರಮ ಕಾನೂನಿನಡಿಯಲ್ಲಿ ಬರುತ್ತದೆ. ಆದರೆ ತಾವು ಪ್ರಸ್ತಾಪ ಮಾಡಿರುವ ಒಂದು ಅಂಶ ಅಲ್ಲಿರುವ ಮಾಲೀಕನಿಗೆ ಸಂಬಂಧಪಟ್ಟಹಾಗೆ ಏನೂ ಇಲ್ಲವೆಂದು ಏನು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಇದರ ಬಗ್ಗೆ ಸರ್ಕಾರ ಪರಿಶೀಲಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರೆ, ಹಿಂದೆ ಸೋಮಣ್ಣ ಅಧ್ಯಕ್ಷರಾಗಿದ್ದಾಗ, ಆ ಮಾಲೀಕರ ಹತ್ತಿರ ಸೌಹಾರ್ದದಿಂದ ಮಾತನಾಡಿ ಆ ಮಾಲೀಕರಿಗೆ ಸೈಟ್‌ಬಿಟ್ಟುಕೊಡುತ್ತಿದ್ದರು, ಹಿಂದೆ ಒಂದು ಎಕರೆಗೆ ಒಂದು ಸೈಟ್‌ನ್ನು ಬಿಟ್ಟು ಕೊಡುತ್ತಿದ್ದರು.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ವಾಟಾಳ್ ನಾಗರಾಜ್‌ರವರೆ, ನೀವು ಹೇಳುವುದು ನಿಜ, ಕೆಲವು ಸಂದರ್ಭದಲ್ಲಿ ಮಾಲೀಕರ ಜಮೀನನ್ನು ಅಕ್ವೆರ್ ಮಾಡಿಕೊಳ್ಳುವ ಸಂದರ್ಭದಲ್ಲಿ ಅವರಿಗೆ ಕೂಡ ಒಂದಿಷ್ಟು ಕೊಡುತ್ತಿರುವುದು ಇತ್ತು, ನಾನು ಇದನ್ನು ಇಲ್ಲ ಎಂದು ಹೇಳಲಿಲ್ಲ. ಮಾನ್ಯ ನಂಜೇಗೌಡರು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಹೈಕೋರ್ಟ್‌ಗೆ ಹೋಗಿ ಆದಮೇಲೆ ಸ್ವಾಧೀನಪಡಿಸಿಕೊಂಡನಂತರ, ನೋಟಿಫಿಕೇಷನ್ ಮಾಡಿರತಕ್ಕಂಥದ್ದು ಸರಿ, ಅಲ್ಲಿರುವ ಎಲ್ಲರೂ ಕೂಡ ಅಕ್ರಮವಾಗಿ ಮನೆಗಳನ್ನು ಕಟ್ಟಿದ್ದಾರೆ ಎಂದು ತೀರ್ಮಾನ ಮಾಡಿದಾದ ಮೇಲೆ, ಕಾನೂನಿನ ಪ್ರಕಾರ

ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ, ತಮಗೆ ಗೊತ್ತಿರುವ ಹಾಗೆ ಬೆಂಗಳೂರಿನಲ್ಲಿ ಕೆಲವು ಸಂದರ್ಭದಲ್ಲಿ ಈ ಒಂದು ಭಾಗದಲ್ಲಿ ಮಾತ್ರವಲ್ಲವೆ ಎಲ್ಲಾ ಭಾಗದಲ್ಲಿ ಸರ್ಕಾರದ ಜಮೀನುಗಳಲ್ಲಿ ಯಾರ್ಯಾರೋ ಕಟ್ಟಿಕೊಂಡಿರುವುದನ್ನು ನಾವು ನೋಡಿದ್ದೇವೆ. ಆದ್ದರಿಂದ ತಾವು ಈಗಾಗಲೇ ಮಾಲೀಕರಿಗೆ ಸಂಬಂಧಪಟ್ಟಹಾಗೆ ಪ್ರಸ್ತಾಪ ಮಾಡಿರುವ ವಿಚಾರದ ಬಗ್ಗೆ, ನಾವು ಇದನ್ನು ಚರ್ಚೆ ಮಾಡಬೇಕಾಗುತ್ತದೆ. ಬಿ.ಡಿ.ಎ. ಅಧಿಕಾರಿಗಳ ಜೊತೆಯಲ್ಲಿ ಈ ವಿಚಾರವಾಗಿ ಚರ್ಚೆ ಮಾಡಿ ಇದರ ಬಗ್ಗೆ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳುವಂತಹ ಪ್ರಯತ್ನಕ್ಕೆ ಪರಿಶೀಲನೆ ಮಾಡುತ್ತೇವೆ.

೫) ಬೆಂಗಳೂರಿನ ಚಿಕ್ಕಪೇಟೆ ವಿಧಾನ ಸಭಾಕ್ಷೇತ್ರದಲ್ಲಿ ಅಸಮರ್ಪಕ ನೀರು ಸರಬರಾಜು.

ಶ್ರೀ ಪಿ.ಹೆಚ್.ಪ್ರಕಾಶ್ (ಚಿಕ್ಕಪೇಟೆ): ಅಧ್ಯಕ್ಷರೆ, ಬೆಂಗಳೂರು ಮಹಾನಗರದಲ್ಲಿ ಬೆಂಗಳೂರು ಜಲಮಂಡಳಿಯವರು ನಗರದಲ್ಲಿ ದಿನ ಬಿಟ್ಟು ದಿನ ನೀರನ್ನು ಸರಬರಾಜು ಮಾಡುತ್ತಿದ್ದಾರೆ. ಆದರೆ ಹಳೆಯ ಸಿಟಿಯಲ್ಲಿ ಕಳೆದ ಒಂದು ತಿಂಗಳಿಂದ ನೀರು ಸರಬರಾಜು ವ್ಯವಸ್ಥೆ ಸರಿಯಾಗಿಲ್ಲ. ನಮ್ಮ ಹಬ್ಬಹರಿದಿನಗಳು ಬಂದಾಗ ಆ ದಿನ ಸಂಪೂರ್ಣ ನೀರನ್ನು ನಿಲ್ಲಿಸತಕ್ಕಂಥ ಒಂದು ವಾತಾವರಣ ಅಲ್ಲಿ ಸೃಷ್ಟಿಯಾಗಿದೆ. ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೆಂಪಾಪುರ ಅಗ್ರಹಾರದಲ್ಲಿ ಒಂದು ಗುಂಡಿ ನೀರಿಗೆ 50 ಪೈಸೆಯಂತೆ ಮಾರಾಟವಾಗಿದೆ. ಇದರ ಬಗ್ಗೆ ಅನೇಕ ದೂರುಗಳನ್ನು ಕೊಟ್ಟರೂ ಕೂಡ ವಾಟರ್ ಸಪ್ಲೈನವರು, ಪಂಪ್ ಕೆಟ್ಟು ಹೋಗಿರುವುದರಿಂದ ಅದನ್ನು ರಿಪೇರಿ ಮಾಡಿದಾದ ಮೇಲೆ ನೀರು ಸರಬರಾಜು ಮಾಡುತ್ತೇವೆ ಎನ್ನುವ ಉತ್ತರ ನೀಡುತ್ತಾರೆ. ಸುಮಾರು ಕಳೆದ ಎರಡು ವರ್ಷಗಳಿಂದಲೂ ಮನೆಗಳಿಗೂ ನೀರು ಬರುತ್ತಿಲ್ಲ. ಬೀದಿ ನಲ್ಲಿಗಳಲ್ಲಿ ರಾತ್ರಿ ಸುಮಾರು ಎರಡು ಗಂಟೆಗೆ ನೀರು ಸರಬರಾಜು ಮಾಡಿ ಬೆಳಿಗಿನ ಜಾವ 5 ಗಂಟೆಗೆ ನೀರು ನಿಲ್ಲಿಸುತ್ತಾರೆ, ಇಂತಹ ಸಮಯದಲ್ಲಿ ಹೆಣ್ಣು ಮಕ್ಕಳು ಹೇಗೆ ನೀರು ಹಿಡಿಯುವುದಕ್ಕೆ ಸಾಧ್ಯ? ಕೊನೆ ಪಕ್ಷ ನೀರು ಹಿಡಿಯುವುದಕ್ಕೆ ಬಂದಂಥ ಸಮಯದಲ್ಲಿ ದರೋಡೆಕಾರರು, ರೌಡಿಗಳ ಹಾವಳಿಯಿಂದ ಬಹಳ ತೊಂದರೆಪಡುತ್ತಾರೆ. ಮಿನಿ ವಾಟರ್ ಟ್ಯಾಂಕ್ ಎಂದು ಏನು ಇದೆ ಬೋರ್‌ವೆಲ್‌ಗಳೆಲ್ಲ ಮಿನಿ ವಾಟರ್ ಟ್ಯಾಂಕ್ ಸ್ಕೀಮ್ ಎಂದು ಮಾಡಿದ್ದಾರೆ. ಆ ಬೋರ್‌ವೆಲ್‌ಗಳೆಲ್ಲಾ ಕೆಟ್ಟು ಹೋಗಿದೆ, ಅದನ್ನು ರಿಪೇರಿ ಮಾಡಿಲ್ಲ. ವಾಟರ್ ಸಪ್ಲೈನವರು ಕೆ.ಇ.ಬಿ.ಗೆ ಸುಮಾರು ಲಕ್ಷಾಂತರ ರೂಪಾಯಿ ಬ್ಯಾಲೆನ್ಸ್ ಇರುವುದರಿಂದ, ವಾಟರ್ ಟ್ಯಾಂಕಿನ ಫ್ಯೂಸ್ ಎಲ್ಲಾ ಕಿತ್ತು ಕೊಂಡು ಹೋಗಿ, ಕರೆಂಟ್ ಸರಬರಾಜು ನಿಲ್ಲಿಸಿದ್ದಾರೆ. ಇದರಿಂದಾಗಿ ಬೆಂಗಳೂರು ನಗರದ ಹಳೆಯ ಸಿಟಿಗಳಾದ ಚಿಕ್ಕಪೇಟೆ, ಚಾಮರಾಜನಗರ, ಗಾಂದಿನಗರ, ಈ ಕಡೆ ಬಹಳ ನೀರಿನ ತೊಂದರೆಯಾಗಿದೆ. ಸುಮಾರು 30 ವರ್ಷಗಳ ಹಿಂದೆ ಕಟ್ಟಿರುವ ವಾಟರ್ ಟ್ಯಾಂಕ್ ಬಹಳ ಚಿಕ್ಕದಾಗಿರುವುದರಿಂದ ಬಹಳಷ್ಟು ನೀರಿನ ಶೇಖರಣೆ ಆಗುವುದಿಲ್ಲ, ವಾಟರ್ ಟ್ಯಾಂಕ್ ಚಿಕ್ಕದಾಗಿರುವುದರಿಂದ ಕೇವಲ 20 ನಿಮಿಷಕ್ಕೆ ಒಂದು ಬಡಾವಣೆಗೆ ನೀರು

ಎಲ್ಲಾ ಖಾಲಿಯಾಗುತ್ತಿದೆ. ಆದ್ದರಿಂದ ಆ ವಾಟರ್ ಟ್ಯಾಂಕ್‌ನ್ನೂ ಕೂಡ ಜನಸಂಖ್ಯೆಗೆ ಅನುಗುಣವಾಗಿ, ಅದನ್ನು ಬದಲಾವಣೆಯನ್ನಾಗಿ ಮಾರ್ಪಡಿಸಬೇಕು. ಇದರ ಜೊತೆಗೆ ಮೊನ್ನೆ ಅವಿನ್ಯೂರಸ್ತೆಯಲ್ಲಿ ನಾಮ ಫಲಕಗಳನ್ನು ಹೊಡೆದು ಹಾಕಿರುವ ಪರಿಣಾಮದಿಂದಾಗಿ ಬಹಳ ದೊಡ್ಡ ಗಲಾಟೆಯಾಯಿತು ಎನ್ನುವ ವಿಷಯವನ್ನೂ ಕೂಡ ನಾನು ಕೇಳಿದ್ದೇನೆ. ತಾವು ಇದರ ಬಗ್ಗೆ ಉತ್ತರ ಕೊಡಿಸುತ್ತೇನೆಂದು ಹೇಳಿದಿರಿ, ಇನ್ನು ಆ ಬಗ್ಗೆ ಉತ್ತರ ಕೊಡಿಸಿಲ್ಲ... ದಯಮಾಡಿ ಅದರದು ಹಾಗೂ ಈ ವಾಟರ್ ಸಪ್ಲೈದು ಎರಡಕ್ಕೆ ಉತ್ತರ ಕೊಡಿಸಿ.

ಅಧ್ಯಕ್ಷರು: ನೋಡಿ ಆ ವಿಷಯವೇ ಬೇರೆ ಈ ವಿಷಯವೇ ಬೇರೆ. ಅದನ್ನೂ ಕೂಡ ಉತ್ತರ ಕೊಡಿಸುತ್ತೇನೆ. ಈಗ ಮೊದಲನೆಯದಾಗಿ ವಾಟರ್‌ದ್ದು ನಂತರ ನಾಮಫಲಕದ್ದು ನಿಧಾನಕ್ಕೆ ಕೊಡಿಸೋಣ.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು): ಅಧ್ಯಕ್ಷರೆ ಮೂರು ವಿಧಾನ ಸಭಾ ಕ್ಷೇತ್ರಗಳಾದ ಚಾಮರಾಜಪೇಟೆ, ಚಿಕ್ಕಪೇಟೆ, ಗಾಂದಿನಗರದಲ್ಲಿ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ಈ ವಿಷಯವನ್ನು ತಂದಿದ್ದಾರೆ. ಇದು ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟ ಖಾತೆ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಹಾಗೂ ಜಲಮಂಡಳಿ ಅಧ್ಯಕ್ಷರ ಜೊತೆ ನಾನು ಖುದ್ದಾಗಿ ಮಾತನಾಡಿ, ಈ ಮೂರು ಕ್ಷೇತ್ರಗಳಿಗೆ ಕುಡಿಯುವ ನೀರಿನ ಸರಬರಾಜಿಗೆ ತುರ್ತಾಗಿ ಕ್ರಮ ಕೈಗೊಳ್ಳುವಂತೆ ಪ್ರಯತ್ನ ಮಾಡುತ್ತೇನೆ. ಹಾಗೂ ಮಾನ್ಯ ಸದಸ್ಯರು, ಮಿನಿವಾಟರ್ ಸ್ಕೀಮ್ ಹಾಗೂ ಬೋರ್‌ವೆಲ್‌ಗಳ ರಿಪೇರಿ ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಕೂಡ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಬಿ.ಡಬ್ಲ್ಯೂ.ಎಸ್.ಎಸ್.ಬಿ.ನವರು ಕೆ.ಇ.ಬಿ.ಗೆ ಸುಮಾರು 128 ಕೋಟಿ ರೂ.ಗಳನ್ನು ಬಾಕಿ ಕೊಡತಕ್ಕಂಥದ್ದು ಇದೆ. ಹೀಗಿದ್ದರೂ ಕೂಡ ನಾವು ವಿದ್ಯುತ್ ಸರಬರಾಜು ನಿಲ್ಲಿಸಿಲ್ಲ, ಒಂದು ಪಕ್ಷ ಆ ರೀತಿ ಆಗಿದ್ದರೆ ಅದನ್ನು ಸರಿಪಡಿಸಿ ಕೊಡುತ್ತೇನೆ ಎನ್ನುವ ಭರವಸೆ ಕೊಡುವುದಷ್ಟೇ ಅಲ್ಲದೆ ಅದನ್ನು ಮಾಡಿಸುತ್ತೇನೆ.

(ಕ) ಶಿಕಾರಿಪುರ ವಿಧಾನ ಸಭಾಕ್ಷೇತ್ರದಲ್ಲಿ ಫಸ್ಟ್ ಗ್ರೇಡ್ ಕಾಲೇಜಿನಲ್ಲಿ ಉಪನ್ಯಾಸಕರನ್ನು ನೇಮಿಸುವ ಬಗ್ಗೆ

+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಅಧ್ಯಕ್ಷರೆ, ನನಗೆ ಇದನ್ನು ಮಾತನಾಡುವುದಕ್ಕೆ ಸಂಕೋಚವಾಗುತ್ತದೆ. ಮಾನ್ಯ ಗೋವಿಂದೇಗೌಡರಿಗೆ ಕೂಡ ಹೇಳಿದ್ದೇನೆ. ನನ್ನ ಕ್ಷೇತ್ರದಲ್ಲಿ ಫಸ್ಟ್ ಗ್ರೇಡ್ ಕಾಲೇಜಿನಲ್ಲಿ ಸೈನ್ಸ್ ವಿಭಾಗ ಕೊಟ್ಟು ಒಂದು ವರ್ಷವಾಯಿತು. ಈ ವಿಭಾಗದಲ್ಲಿ ಒಬ್ಬ ಲೆಕ್ಚೆರರ್ ಇಲ್ಲ. ಇದರ ಬಗ್ಗೆ ಎಜ್ಯುಕೇಷನ್ ಸೆಕ್ರೆಟರಿಯವರಿಗೆ ಈಗಾಗಲೇ ಮೂರು ಬಾರಿ ದೂರವಾಣಿ ಮೂಲಕ ಮಾತನಾಡಿ ಹೇಳಿದ್ದೇನೆ. ಹಾಗೂ ಇದರ ಜೊತೆಗೆ ಪತ್ರ ಕೂಡ ಬರೆದಿದ್ದೇನೆ. ನಾನು

ಹೇಳುವುದು ನನ್ನ ಕ್ಷೇತ್ರ ಮಾತ್ರ ಎಂದಲ್ಲ ಯಾವುದೇ ಕ್ಷೇತ್ರ ಇರಬಹುದು, ಒಂದು ವಿಭಾಗಕ್ಕೆ ಸುಮಾರು ವರ್ಷಗಟ್ಟಲೆ, ನಾಲ್ಕೈದು ತಿಂಗಳು ಗಟ್ಟಲೆ ಪೂರ್ಣವಾಗಿ ಒಬ್ಬ ಲೆಕ್ಚರ್ ಇಲ್ಲದೆ ಇದ್ದರೆ, ಆ ಗ್ರಾಮೀಣ ಮಕ್ಕಳ ಭವಿಷ್ಯ ಏನು? ಅವರು ಓದಿ ಪಾಸ್ ಮಾಡುವುದಕ್ಕೆ ಸಾಧ್ಯನಾ? ನಗರದ ಬುದ್ಧಿವಂತ ಮಕ್ಕಳ ಜೊತೆಗೆ ಕಾಂಪಿಟ್ ಮಾಡುವುದಕ್ಕೆ ಸಾಧ್ಯವೇ? ನಾನು ತಮಗೆ, ಹಿಂದಿನದ ಮಂತ್ರಿಗಳಿಗೆ, ಸೆಕ್ರೆಟರಿಗಳಿಗೆ ವಿನಂತಿ ಮಾಡಿದ್ದೆ. ಆದರೆ ಇದುವರೆವಿಗೂ ಏನೂಕ್ರಮ ಕೈಗೊಂಡಿಲ್ಲ; ಕೊನೆಪಕ್ಷ ಒಬ್ಬ ಲೆಕ್ಚರರನ್ನು ಪರ್ಮನೆಂಟಾಗಿ ಹಾಕದೇ ಇದ್ದರೂ ಪಕ್ಕದಲ್ಲಿರುವವರನ್ನು ಡೆಪ್ಯುಟೇಷನ್ ಮೇಲೆ ಹಾಕಿ ವಾರಕ್ಕೆ ಮೂರು ದಿನವಾದರೂ ತರಗತಿಗಳು ನಡೆಯುವಂತೆ ಮಾಡಿ ಎಂದು ಕಳೆದ ಒಂದು ತಿಂಗಳಿನಿಂದ ಹೇಳಿ ಹೇಳಿ ಸಾಕಾಗಿದೆ. ಉತ್ತರ ನಮಗೆ ಸರಿಯಾದ ರೀತಿಯಲ್ಲಿ ಬಂದಿಲ್ಲ. ಮೊನ್ನೆ ಆ ವಿದ್ಯಾರ್ಥಿಗಳೆಲ್ಲರೂ ನನ್ನ ಮನೆಯ ಮುಂದೆ ಧರಣಿ ಕುಳಿತ ಪರಿಣಾಮವಾಗಿ ನನ್ನ ಮನೆಯವರು ಎಲ್ಲರೂ ಮನೆಗೆ ಬೀಗ ಹಾಕಿಕೊಂಡು ಶಿವಮೊಗ್ಗದಿಂದ ಬಂದು ಇಲ್ಲಿ ಇದ್ದಾರೆ. ಸರ್ಕಲ್ ಇನ್ಸ್‌ಪೆಕ್ಟರ್ ಎಲ್ಲಾ ಬಂದು ಅಲ್ಲಿ ಪಂಚಾಯಿತಿ ಮಾಡಿದ್ದಾರೆ. ನಾನು ಕಳೆದ ವಾರ ಹೋಗಿ ಬಂದು...

ಅಧ್ಯಕ್ಷರು: ಧರಣಿಯ ಕಷ್ಟ ತಮಗೆ ಈಗ ಗೊತ್ತಾಯಿತೇ?

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಅನುಭವಿಸುತ್ತಿದ್ದೇನೆ.

ಅಧ್ಯಕ್ಷರು: ಅವರು ನಿಮ್ಮ ಮನೆಗೆ ಬಂದು ಧರಣಿ ಮಾಡಿದಾಕ್ಷಣ ನೀವು ಶಿವಮೊಗ್ಗಕ್ಕೆ ಹೋದಿರಿ, ನೀವು ಇಲ್ಲಿ ಧರಣಿ ಕುಳಿತರೆ ನಾನು ಎಲ್ಲಿಗೆ ಹೋಗಬೇಕು ಹೇಳಿ? ಈಗ ಧರಣಿ ಕಷ್ಟ ಏನು ಎಂಬುದು ತಮಗೆ ಗೊತ್ತಾಯಿತಾ?

ಶ್ರೀ ಬಿ.ಬಿ.ಶಿವಪ್ಪ: ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ, ನಮ್ಮಲ್ಲಿ ಸುಮಾರು 13 ವರ್ಷದಿಂದ ಇಂಗ್ಲೀಷ್ ಲೆಕ್ಚರರ್ ಇಲ್ಲ.

ಅಧ್ಯಕ್ಷರು: ನಿಮ್ಮಲ್ಲಿ ಕಾಫಿ ಪ್ಲಾಂಟೇಷನ್ ಇರುವುದರಿಂದ, ಯೂರೋಪಿಯನ್ ಇನ್‌ಫ್ಲೂಯೆನ್ಸ್ ಇರುವುದರಿಂದ ಅಲ್ಲಿ ಇಂಗ್ಲೀಷ್ ಲೆಕ್ಚರರ್ ಬೇಡ ಎಂದು ಹಾಕಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಮ್ಮ ಒಬ್ಬ ಸ್ನೇಹಿತರು ಡಾಕ್ಟರ್ ಇದ್ದಾರೆ ಅವರು ಪಾಠಮಾಡುತ್ತೇನೆಂದರು, ಅದೂ ಕೂಡ ಆಗಲಿಲ್ಲ.

ಶ್ರೀ ಮಾಲಾಳ್ ನಾಗರಾಜ್: ಈಗ ನಾನು ಕೂಡ ಆ ಪರಿಸ್ಥಿತಿಯನ್ನು ಪ್ರಸ್ತಾಪ ಮಾಡಿದರೆ, ನಿಮ್ಮ ಹಣೆಬರಹ ಕೂಡ ಹೀಗೆ ಆಯಿತಾ ಎಂದು ನೀವು ಹೇಳುತ್ತೀರಿ. ಅದಕ್ಕೆ ನಾನು ಏಕೆ ನಿಮ್ಮ ಕೈಯಲ್ಲಿ ಬೈಸಿಕೊಳ್ಳಬೇಕೆಂದು ಗಂಭೀರವಾಗಿದ್ದೇನೆ. ಏನೆಂದರೆ ಏನೂ ಇಲ್ಲ, ರಸ್ತೆ, ನೀರು, ಆಸ್ಪತ್ರೆ, ಯಾವುದೂ ಇಲ್ಲ ಈ ಅವ್ಯವಸ್ಥೆ ನಮ್ಮ ಕ್ಷೇತ್ರದಲ್ಲಿ ನಿರಂತರವಾಗಿ ನಡೆಯುತ್ತಿದೆ.

ಅಧ್ಯಕ್ಷರು: ಇಲ್ಲ. ಅವರೇನೂ ಉಪ್ಪಿನವರು ಅಳುತ್ತಾರೆ, ನೀವು ತೆಂಗಿನಕಾಯಿಯವರು ಆದ್ದರಿಂದ ಅಳಬೇಕಾಗಿಲ್ಲ.

ಶ್ರೀ ಸಿ.ಬೈರೇಗೌಡ: ಅಧ್ಯಕ್ಷರೆ, ವಾಟಾಳ್ ನಾಗರಾಜ್‌ರವರು ಕೇಳಿದ್ದನ್ನೆಲ್ಲಾ ಕೊಟ್ಟರೂ ಕೂಡ ಅವರು ಈ ರೀತಿ ಮಾತನಾಡುತ್ತಿದ್ದಾರೆ. ಜಿಲ್ಲೆ ಬೇಕು ಎಂದರು ಜಿಲ್ಲೆ ಕೊಟ್ಟಿದ್ದು ಆಯಿತು, ಅವರಿಗೆ ಸರ್ವಸ್ವವನ್ನು ಕೊಟ್ಟರೂ ಕೂಡ ಅವರಿಗೆ ತೃಪ್ತಿ ಆಗುವುದಿಲ್ಲ...

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಗೋವಿಂದೇಗೌಡರೆ, ನಾನಂತೂ ನನ್ನ ಕ್ಷೇತ್ರದಲ್ಲಿ ನಿಲ್ಲುವ ಸ್ಥಿತಿಯಲ್ಲಿ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರೆ, ಮುಖ್ಯಮಂತ್ರಿಗಳು ಹಾಗೂ ತಾವು ಅಲ್ಲಿಗೆ ಬಂದು ಬಿಡಿ ಏನಾಗಿದೆ ಎಂಬುದನ್ನು ಪ್ರಾಮಾಣಿಕವಾಗಿ ನೋಡಿ.

(ಖ) ಬೈಂದೂರಿನಲ್ಲಿರುವ ವಿಜ್ಞಾನ ಕಾಲೇಜಿನಲ್ಲಿ ಉಪನ್ಯಾಸಕರುಗಳನ್ನು ನೇಮಿಸುವ ಕುರಿತು.

ಶ್ರೀ ಐ.ಎಂ.ಜಯರಾಮಶೆಟ್ಟಿ: ಅಧ್ಯಕ್ಷರೆ, ನನ್ನ ಕ್ಷೇತ್ರ ಬೈಂದೂರಿನಲ್ಲಿ ಒಂದು ವಿಜ್ಞಾನ ಕಾಲೇಜು ಇದೆ. ಹಿಂದಿನ ವರ್ಷ ಈ ಕಾಲೇಜಿಗೆ ಅನುಮತಿ ಕೊಟ್ಟಿದ್ದಾರೆ. ಆದರೆ ಕಾಲೇಜು ಇದುವರೆವಿಗೂ ಪ್ರಾರಂಭವಾಗಿಲ್ಲ. ಇವತ್ತಿಗೂ ಲೆಕ್ಚರರ್ ಇಲ್ಲ. ನಾನು 10 ಕಾಗದಗಳನ್ನು ಬರೆದಿದ್ದೇನೆ. ಇವತ್ತಿನವರೆವಿಗೆ ಒಂದು ಸರಿಯಾದ ಉತ್ತರವಿಲ್ಲ. ದಯಮಾಡಿ ಗ್ರಾಮೀಣ ಪ್ರದೇಶದ ಮಕ್ಕಳ ಭವಿಷ್ಯದ ಬಗ್ಗೆ ಯೋಚನೆ ಮಾಡಬೇಕು. ದಯಮಾಡಿ, ಗ್ರಾಮೀಣ ಪ್ರದೇಶದ ಮಕ್ಕಳ ಭವಿಷ್ಯದ ಪ್ರಶ್ನೆ ಇದು...

ಅಧ್ಯಕ್ಷರು: ಒಂದು ನಿಮಿಷ. ಎ.ಆರ್.ಕೃಷ್ಣಮೂರ್ತಿಯವರು.

(ಗ) ಚಾಮರಾಜನಗರದಲ್ಲಿನ ಫಸ್ಟ್‌ಗ್ರೇಡ್ ಕಾಲೇಜಿಗೆ ಉಪನ್ಯಾಸಕರ ನೇಮಕಾತಿ ಕುರಿತು

ಶ್ರೀ ಎ.ಆರ್.ಕೃಷ್ಣಮೂರ್ತಿ (ಸಂತೇಮಾರಹಳ್ಳಿ): ಮಾನ್ಯ ಸಭಾಧ್ಯಕ್ಷರೇ, ನಮ್ಮ ಚಾಮರಾಜನಗರದಲ್ಲಿ ಫಸ್ಟ್‌ಗ್ರೇಡ್ ಕಾಲೇಜು ಪ್ರಾರಂಭವಾಗಿ ಬಹಳ ವರ್ಷಗಳಾಯಿತು. ಆದರೆ ಇಲ್ಲಿಯವರೆಗೂ ಆ ಕಾಲೇಜಿಗೆ ಲೆಕ್ಚರರ್‌ಗಳನ್ನು ನೇಮಕ ಮಾಡಿಲ್ಲ. ಕಾಂಟ್ರಾಕ್ಟ್ ಬೇಸಿಸ್‌ಮೇಲೆ ಕೆಲಸ ಮಾಡತಕ್ಕಂಥ ಲೆಕ್ಚರರ್‌ಗಳನ್ನೂ ಕೂಡ ಇವತ್ತಿನ ದಿವಸ ಇಲಾಖೆಯವರು ವಿತ್‌ಡ್ರಾ ಮಾಡಬೇಕು ಎಂದು ಆದೇಶ ಮಾಡಿರುವುದರಿಂದ ಲೆಕ್ಚರರ್ಸ್ ಇಲ್ಲದೆ ಅಲ್ಲಿ ಪಾಠಪ್ರವಚನಗಳಿಗೆ ಬಹಳ ತೊಂದರೆಯಾಗಿದೆ. ಚಾಮರಾಜನಗರ ಮಾನ್ಯ ವಾಟಾಳ್ ನಾಗರಾಜ್ ಅವರ ಕ್ಷೇತ್ರಕ್ಕೆ ಬರತಕ್ಕಂಥ ಕೇಂದ್ರಸ್ಥಾನ. ಆದರೆ ಇಲ್ಲಿಯವರೆಗೆ ಕೂಡ ಅಲ್ಲಿ ಕಾಲೇಜಿನಲ್ಲಿ

ಪರ್ಮನೆಂಟ್ ಲೆಕ್ಚರರ್ಸ್‌ನ್ನು ನೇಮಕ ಮಾಡಿಲ್ಲವಾದ್ದರಿಂದ ಆದಷ್ಟು ಬೇಗ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅಧಿವೇಶನ ಮುಗಿದಮೇಲೆ ಎರಡು-ಮೂರು ದಿವಸಗಳಾದರೂ ಬಾರದೇ ಇದ್ದರೆ ಆ ವಿದ್ಯಾರ್ಥಿಗಳನ್ನು ತಮ್ಮ ಮನೆ ಹತ್ತಿರ ಆದರೂ ಕರೆದುಕೊಂಡು ಬರುತ್ತೇನೆ.

ಅಧ್ಯಕ್ಷರು: ನಾನು ಊರಿಗೆ ಹೋಗಿರುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಮಗೆ ರಕ್ಷಣೆ ಕೊಡಲಿಲ್ಲವೆಂದರೆ ತಮ್ಮ ಹತ್ತಿರ ನಾವು ಬರಬೇಕಾಗುತ್ತದೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ (ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ನನ್ನ ಹತ್ತಿರ ಈ ಬಗ್ಗೆ ಎರಡುಮೂರು ಸಾರಿ ಮಾತನಾಡಿದ್ದಾರೆ. ನಾನು ಈ ಕೂಡಲೇ ಅವರಿಗೆ ಫೋನ್ ಮಾಡಿ ಇದು ಏನು ವಿಷಯ ಡಿಟೇಲ್ಸ್ ಕೊಡಿ ಎಂದು ಹೇಳಿದ್ದಕ್ಕೆ ಅವರು ಕೊಟ್ಟ ಡಿಟೇಲ್ಸ್ ಅನ್ನು ಓದುತ್ತಿದ್ದೇನೆ. ಮತ್ತೆ ಸಮಸ್ಯೆ ಏನಿದೆ ಎಂದು ತಿಳಿದುಕೊಂಡು ಅದರ ಬಗ್ಗೆ ನಾನು ಖಂಡಿತ ಸ್ಪಂದಿಸುತ್ತೇನೆ ಎಂದು ಹೇಳುತ್ತಿದ್ದೇನೆ.

'ಶಿಕಾರಿಪುರ ಪ್ರಥಮದರ್ಜೆ ಕಾಲೇಜಿನಲ್ಲಿ 12 ಉಪನ್ಯಾಸಕರುಳ ಹುದ್ದೆಗಳು ಮಂಜೂರಾಗಿದ್ದು ಈ ಜಾಗದಲ್ಲಿ 12 ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದಾರೆ.' ಎಂದು ಹೇಳಿದ್ದಾರೆ. ಆಮೇಲೆ- 'ಇತ್ತೀಚೆಗೆ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗಿದ್ದು ಹೆಚ್ಚುವರಿ ಹುದ್ದೆಗಳ ಅವಶ್ಯಕತೆ ಉಂಟಾಗಿದೆ. ಈ ಬಗ್ಗೆ ಹೆಚ್ಚುವರಿ ಹುದ್ದೆಗಳನ್ನು ಸೃಷ್ಟಿಸಿ ಉಪನ್ಯಾಸಕರುಗಳನ್ನು ನೇಮಿಸಲು ಕ್ರಮಕೈಗೊಳ್ಳಲಾಗುತ್ತಿದೆ'' ಎಂದು ಅವರು ಹೇಳಿದ್ದಾರೆ. 12 ಉಪನ್ಯಾಸಕರು ಅಲ್ಲಿ ಇದ್ದಾರೆ. 12 ಹುದ್ದೆಗಳು ಖಾಲಿಯಾಗಿವೆ ಎಂದರೆ, ಅಲ್ಲಿ 12 ಜನರು ಇದ್ದಾರೆ. ತಮ್ಮ ವಿಷಯದ ಬಗ್ಗೆ ನನಗೆ ದುಃಖ ಇದೆ. ಆದರೆ ಕೆಲವು ಸ್ನೇಹಿತರು ಏನು ಹೇಳುತ್ತಿದ್ದಾರೆ ಎಂದರೆ, ಪೋಸ್ಟ್ ಸ್ಯಾಂಕ್ಷನ್ನೇ ಆಗಿಲ್ಲ. ಅಲ್ಲಿ ಹುಡುಗರು ಕ್ಲಾಸ್‌ಗೆ ಕೂಡ ಬರುತ್ತಿದ್ದಾರೆ. ನನಗೆ ಒಂದೊಂದು ಸಲ ಕಣ್ಣಲ್ಲಿ ನೀರು ಬರುತ್ತದೆ. ನಿಮ್ಮೆಲ್ಲರ ಸಹಕಾರದಿಂದ ಈ ಇಲಾಖೆ ಬಗ್ಗೆ ಸಾಧ್ಯವಾದಷ್ಟು ಒಳ್ಳೆ ಕೆಲಸ ಮಾಡಬೇಕು ಎಂಬ ಆಸೆಯನ್ನು ಇಟ್ಟುಕೊಂಡಿದ್ದೇನೆ. ಪೋಸ್ಟ್‌ಗಳು ಸ್ಯಾಂಕ್ಷನ್ ಆಗಿಲ್ಲ. ಉಪನ್ಯಾಸಕರುಗಳು ಇಲ್ಲ. ಒಂದು-ಒಂದೂವರೆ ವರ್ಷಗಳಿಂದ ಹಂಗಾಮಿಯಾಗಿ ತಿಂಗಳಿಗೆ ಒಂದಿಷ್ಟು ಎಂದು ಕೊಟ್ಟು ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳುವ ವ್ಯವಸ್ಥೆ ನಿರ್ಮಾಣವಾಗಿದೆ. ಸಾಧ್ಯವಾದಷ್ಟು ಜಾಗ್ರತೆಯಾಗಿ....

ಶ್ರೀ ಬಿ.ಎಸ್.ಯಡಿಯೂರಪ್ಪ: ನನ್ನ ಇನ್‌ಫರ್ಮೇಷನ್ ತಪ್ಪಾಗಿದ್ದರೆ ವೆರಿಫೈ

ಮಾಡಿಸಿ. ಸೈನ್ಸ್ ವಿಭಾಗಕ್ಕೆ ಒಬ್ಬರೂ ಇಲ್ಲ.

ಅಧ್ಯಕ್ಷರು: ಯಡಿಯೂರಪ್ಪನವರೇ, ಅವರು ಈಗಷ್ಟೇ ಹೈಸ್ಕೂಲ್‌ನಿಂದ ಕಾಲೇಜಿಗೆ ಬಂದಿದ್ದಾರೆ. ಮಾಡಿಸಿಕೊಡುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಪರ್ಸನಲ್ ಆಗಿ ಮಾತನಾಡಿದ್ದೇನೆ.

ಶ್ರೀ ಹೆಚ್.ಬಿ.ಗೋವಿಂದೇಗೌಡ: ಅವರು ಎರಡು-ಮೂರು ಬಾರಿ ಬಂದು ನನ್ನ ಹತ್ತಿರ ಮಾತನಾಡಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಸೈನ್ಸ್‌ಗೆ ಒಬ್ಬರೇ ಒಬ್ಬರೂ ಇಲ್ಲ. ನಾನು ಹೇಳಿದ್ದನ್ನು ನೀವು ನಂಬುತ್ತಾ ಇಲ್ಲ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ನಿಜ ನಾನು ನಂಬಿದ್ದೇನೆ. ನಂಬಿದ್ದರಿಂದಲೇ ನಾನು ಹೇಳಿದ್ದು.

ಶ್ರೀ ಬಿ.ಎಸ್.ಯಡಿಯೂರಪ್ಪ: ಡೆಪ್ಯುಟೇಷನ್ ಮೇಲೆಯಾದರೂ ಕೂಡಲೇ ಹಾಕಿಕೊಡಿ. ಅಲ್ಲಿಮೂರು ದಿವಸ, ಇಲ್ಲಿ ಮೂರು ದಿವಸ ಎಂದು ಭದ್ರಾವತಿಯಲ್ಲಿ ಮಾಡಲಿ. ನಮ್ಮ ಮಕ್ಕಳು ಪೂರ್ತಿಯಾಗಿ ಹಾಳಾಗಿ ಹೋಗುತ್ತಿದ್ದಾರೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಮುದ್ದುಹನುಮೇಗೌಡರೂ ಇದನ್ನು ಕೇಳಿದ್ದರು. ಇಲ್ಲಿ ಬಂದು ಹೇಳಿ ಹೋಗಿದ್ದರು. ಶೂನ್ಯವೇಳೆಯಲ್ಲಿ ಕೇಳಿದರೆ ಅನುಕೂಲವಾಗುತ್ತದೆ ಎಂಬ ಭಾವನೆಯಿಂದ ಅವರು ಕೇಳಿದ್ದರು. ನಾನು ತುಮಕೂರಿಗೆ ಫೋನ್ ಮಾಡಿ ಕೇಳಿದೆ. ಅಲ್ಲಿ ಎಕ್ಸಸ್ ಇದ್ದರೆ ದಯವಿಟ್ಟು ಅಲ್ಲಿಗೆ ಏನಾದರೂ ಕಳುಹಿಸಿ ಎಂದು ಭದ್ರಾವತಿಯದ್ದೂ ಹೇಳುತ್ತಿದ್ದಾರಲ್ಲಾ, ಅಲ್ಲಿಗೂ ಕೇಳುತ್ತಿದ್ದೇನೆ. ಅಲ್ಲಿ ಅಕಸ್ಮಾತ್ ಎಕ್ಸ್‌ಸ್ ಇದ್ದರೆ....

ಶ್ರೀ ಬಿ.ಎಸ್.ಯಡಿಯರೂರಪ್ಪ: ಎಕ್ಸಸ್ ಇಲ್ಲ ಸರ್. ಅಲ್ಲಿ ಮೂರು ದಿವಸ, ಇಲ್ಲಿ ಮೂರು ದಿವಸ ಮಾಡಲಿ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ವಿಚಾರಿಸುತ್ತೇನೆ.

ಅಧ್ಯಕ್ಷರು: ಮಾಡಿಸುತ್ತಾರೆ. ಪ್ರಕಾಶ್ ಹುಕ್ಕೇರಿ, ಕಾಟ್ಟೆ ಸುಭಾಶ್ ಜೋಶಿ - ನಿಮ್ಮ ಮೂವರಲ್ಲಿ ಯಾರಾದರೂ ಒಬ್ಬರು ಹೇಳಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಈಗ ಬಯಲುಸೀಮೆ ಬಗ್ಗೆ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೀರಿ...

ಅಧ್ಯಕ್ಷರು: ಜಿರೋ ಅವರ್ ಇನ್ನೂ ಕ್ಲೋಸ್ ಆಗಿಲ್ಲ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ: ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಎರಡನೇ ಸಾರಿ ನನಗೆ ಚಿಕ್ಕೋಡಿ ಜಿಲ್ಲೆ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ತಮಗೆ ವಂದನೆಗಳನ್ನು ಅರ್ಪಿಸಿ....

ಅಧ್ಯಕ್ಷರು: ಮಾತನಾಡುವ ಹಾಗಿಲ್ಲ. ಪ್ರಸ್ತಾಪ ಮಾಡುವುದು.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ: ನಿನ್ನೆ ನನ್ನ ಕಡೆಯಿಂದ ಮಾತನಾಡುವಾಗ ಏನಾದರೂ ತಪ್ಪಾಗಿದ್ದರೆ ದಯವಿಟ್ಟು ಕ್ಷಮಿಸಬೇಕು. ಅಮವಾಸ್ಯೆಗೋ ಹುಣ್ಣಿಮೆಗೋ ಒಮ್ಮೆ ಮಾತನಾಡುವವರು ನಾವು...

ಅಧ್ಯಕ್ಷರು: ನನ್ನ ಸಮಸ್ಯೆ ಏನು ಎಂದರೆ, ಅಮವಾಸ್ಯೆ, ಹುಣ್ಣಿಮೆ ದಿವಸ ನಾನು ಸರಿಯಾಗಿ ಇರುವುದಿಲ್ಲ. ಬೇರೆ ದಿವಸ ಎಲ್ಲಾ ನಾನು ಚೆನ್ನಾಗಿ ಇರುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಿನ್ನೆ ದಿವಸ ಹಾಗಿದ್ದಿರಿ. ಇವತ್ತು ಏನೂ ತೊಂದರೆ ಇಲ್ಲ.

(ಘ) ಚಿಕ್ಕೋಡಿಯನ್ನು ಜಿಲ್ಲೆಯನ್ನಾಗಿ ಪರಿವರ್ತಿಸುವ ಬಗ್ಗೆ:

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ: ದಯವಿಟ್ಟು ನಾವು ಮಾತನಾಡುವಾಗ ಎದ್ದರೆ ನಮಗೆ ಸಹಕಾರ ಕೊಡಬೇಕು, ನಮ್ಮ ರಕ್ಷಣೆಗೆ ಬರಬೇಕು ಎಂದು ತಮ್ಮಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ಚಿಕ್ಕೋಡಿ ಜಿಲ್ಲೆ ಆಗಬೇಕು ಎಂದು ಎರಡು-ಮೂರು ತಾಲ್ಲೂಕಿನ ರಾಯಭಾಗ್, ಚಿಕ್ಕೋಡಿ, ಅಥಣಿ ತಾಲ್ಲೂಕಿನ ಎಲ್ಲಾ 12 ಲಕ್ಷ ಜನರು ಇವತ್ತು ಸತ್ಯಾಗ್ರಹ ಮಾಡುತ್ತಿದ್ದಾರೆ. ನಿನ್ನೆ ಅಂಗಡಿಗಳನ್ನು ಮುಚ್ಚಿದ್ದಾರೆ. ರಸ್ತೆಗಳನ್ನು ಬಂದ್ ಮಾಡಿದ್ದಾರೆ. ಇವತ್ತು ನ್ಯಾಷನಲ್ ಹೈವೇ ರಸ್ತೆಯನ್ನು ಸಹ ಬಂದ್ ಮಾಡುವಂಥ ಪ್ರಸಂಗ ಬಂದಿದೆ. ಆಮೇಲೆ ಚಿಕ್ಕೋಡಿ ಜಿಲ್ಲೆಯ ಹೋರಾಟ ಸಮಿತಿಯ ಅಧ್ಯಕ್ಷರಾದ ಕಿವುಡ ವಕೀಲರು ಮತ್ತು ಚಿಕ್ಕೋಡಿ ತಾಲ್ಲೂಕಿನ ಶಾಸಕರಾದ ಶ್ರೀ ಬಾಳಾಸಾಹೇಬ ವಡ್ಡರ್ ಕೂಡ ಅಮರಣಾಂತ ಉಪವಾಸವನ್ನು ಕೈಗೊಂಡಿದ್ದಾರೆ. ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಇವತ್ತಿನ ದಿವಸ ಉಪಮುಖ್ಯಮಂತ್ರಿಗಳು ಇಲ್ಲಿ ಇದ್ದಾರೆ. ದಯವಿಟ್ಟು ಚಿಕ್ಕೋಡಿ ಜಿಲ್ಲೆ ಮಾಡಿದರೆ ಮಹಾಜನ್ ವರದಿಗೆ ಏನೂ ಸಂಬಂಧ ಬರುವುದಿಲ್ಲ. ಮಹಾಜನ ವರದಿ ಜಾರಿಗೆ ಬಂದರೂ ಕೂಡ ಚಿಕ್ಕೋಡಿ ತಾಲ್ಲೂಕು, ರಾಯಭಾಗ ತಾಲ್ಲೂಕು, ಅಥಣಿ, ತಾಲ್ಲೂಕು-ಈ ಮೂರು ತಾಲ್ಲೂಕುಗಳು ಏನೂ ಮಹಾರಾಷ್ಟ್ರಕ್ಕೆ ಹೋಗುವುದಿಲ್ಲ. ಈ ದೃಷ್ಟಿಯಿಂದ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಹೇಳಿದ್ದಾರೆ. ನಾವು ಜಿಲ್ಲೆ ಮಾಡಬೇಕಾದರೆ ಹಣಕಾಸಿನ ತೊಂದರೆಯಾಗಬಾರದು,

ಸರ್ಕಾರದ ಮೇಲೆ ಹೊರೆ ಬೀಳ ಬಾರದು ಎಂದು ಹೇಳಿ. ಈಗಾಗಲೇ ನಮ್ಮ ಚಿಕ್ಕೋಡಿಯಲ್ಲಿ ಡಿ.ವೈ.ಎಸ್.ಪಿ ಆಫೀಸು ಇದೆ, ಅಸಿಸ್ಟೆಂಟ್ ಕಮೀಷನರ್ ಅವರ ಆಫೀಸು ಇದೆ, ಎಕ್ಸಿಕ್ಯೂಟಿವ್ ಇಂಜಿನಿಯರ್ ಕೆ.ಇ.ಬಿ.ಅವರ ಆಫೀಸು ಇದೆ. ಜಿಲ್ಲೆ ಬೇಕಾದಂಥ ಎಲ್ಲಾ ಆಫೀಸುಗಳು ನಮ್ಮಲ್ಲಿ ಇರುವುದರಿಂದ ಜಿಲ್ಲೆ ಆಗುವುದಕ್ಕೆ ಇದರಿಂದ ಸರ್ಕಾರದ ಮೇಲೆ ಹೊರೆ ಬೀಳುವುದಿಲ್ಲ. ಈ ದೃಷ್ಟಿಯಿಂದ ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದು ಏನೆಂದರೆ ಚಿಕ್ಕೋಡಿ ಜಿಲ್ಲೆ ಆಗುವವರೆಗೆ ನಾನು ಧರಣ ಮಾಡಬೇಕೆಂದು ಹೇಳಿ....

ಶ್ರೀ ಬಿ.ಎಸ್.ಯಡಿಯೂರಪ್ಪ: ಅಲ್ಲೆಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಬಿ.ಜೆ.ಪಿ. ಎಂದೂ ಸಹ ಚಿಕ್ಕೋಡಿ ಜಿಲ್ಲೆ ಆಗುವುದಕ್ಕೆ ವಿರೋಧ ಮಾಡಿಲ್ಲ. ಇವತ್ತೇ ಸರ್ಕಾರ ಘೋಷಣೆ ಮಾಡಿದರೆ ನಾವು ಅದನ್ನು ಸ್ವಾಗತ ಮಾಡುತ್ತೇವೆ. ಅದು ಹೇಗೋ ಏನೋ ಗೊತ್ತಿಲ್ಲ, ಪತ್ರಿಕೆಗಳ ಮುಖಪುಟಗಳಲ್ಲಿ ಬರೆದಿದ್ದಾರೆ. ಯಡಿಯೂರಪ್ಪನವರು, ಬಿ.ಜೆ.ಪಿ.ಯವರು ಚಿಕ್ಕೋಡಿ ಜಿಲ್ಲೆ ಮಾಡುವುದನ್ನು ವಿರೋಧ ಮಾಡಿದರು ಎಂದು ಬಂದಿದೆ. ಖಂಡಿತ ಹಾಗೆ ಇಲ್ಲ. ಅಲ್ಲಿ ಜಿಲ್ಲೆ ಆಗುವುದಕ್ಕೆ ಎಲ್ಲಾ ಅನುಕೂಲತೆಗಳೂ ಇವೆ. ಉಪಮುಖ್ಯಮಂತ್ರಿಗಳು ಈಗಲೇ ಘೋಷಣೆ ಮಾಡಲಿ, ನಾವೆಲ್ಲರೂ ಸ್ವಾಗತ ಮಾಡುತ್ತೇವೆ. ನಮ್ಮದೇನೂ ಅಭ್ಯಂತರವಿಲ್ಲ. ದಯಮಾಡಿ ನಮ್ಮ ಹೆಸರು ಅಲ್ಲಿ ಬರುವಂಥ ಅವಶ್ಯಕತೆ ಇಲ್ಲ. ಮಹಾಜನ್ ಆಯೋಗದ ವರದಿ ವಿಷಯ ಬೇರೆ ಆಗುತ್ತದೆ. ಅದನ್ನು ಯಾವರೀತಿ ಬೇಕೋ ಆ ರೀತಿ ಹ್ಯಾಂಡಲ್ ಮಾಡಿ. ಆದರೆ ನಮ್ಮನ್ನು ಇದರಲ್ಲಿ ತರಬೇಡಿ.

ಶ್ರೀ ವಾಟಾಳ್‌ನಾಗರಾಜ್: ಇದರಲ್ಲಿ ಯಾರದ್ದೂ ವಿರೋಧ ಇಲ್ಲ. ತಪ್ಪು ಅಭಿಪ್ರಾಯ ಬರುತ್ತಿದೆ. ಮಹಾಜನ್ ಆಯೋಗದ ವರದಿಯಿಂದ ಅಪಾಯ ಕಾದಿದೆ ಎನ್ನುವುದೊಂದು ಬಿಟ್ಟರೆ ಈ ಜಿಲ್ಲೆ ಬಗ್ಗೆ ಯಾರದ್ದೂ ವಿರೋಧ ಇಲ್ಲ. ಇದರಲ್ಲಿ ಬೇರೆಬೇರೆ ವ್ಯಾಖ್ಯಾನ ಆಗುವುದು ಬೇಡ. ಬೆಳಗಾವಿ ಜಿಲ್ಲೆ ವಿಭಜನೆ ಮಾಡುವುದರಿಂದ ಮಹಾಜನ್ ವರದಿ ಮತ್ತು ಮರಾಠಿಯವರಿಗೆ ಒಂದು ಜಿಲ್ಲೆ ಆಗಿಹೋಯಿತು ಎಂಬ ಅಪಾಯ ಇದೆ.

ಅಧ್ಯಕ್ಷರು: ಆಯಿತು. ಗೊತ್ತಾಗಿದೆ...

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ: ಈಗ ಜಮಖಂಡಿ ಜಿಲ್ಲೆಯಾಗಬೇಕು ಎಂದು...

ಅಧ್ಯಕ್ಷರು: ನಿಮ್ಮ ಗೆಳೆಯರೂ ಮಾತನಾಡಲಿ. ಸುಭಾಶ್ ಜೋಶಿ....

ಶ್ರೀ ಸುಭಾಶ್ ಶ್ರೀಧರ್ ಜೋಷಿ: ಚಿಕ್ಕೋಡಿ ಜಿಲ್ಲೆಯದ್ದು ವಿರೋಧ ಇಲ್ಲ. ಇಂಟಲಿಜೆನ್ಸ್ ರಿಪೋರ್ಟ್ ಪ್ರಕಾರ ಚಿಕ್ಕೋಡಿ ಜಿಲ್ಲೆ ಮಾಡಬೇಕು ಎಂಬ ವರದಿ ಇದೆ.

ಮಹಾಜನ್ ಅವಾರ್ಡ್‌ಗೂ ಮತ್ತು ಚಿಕ್ಕೋಡಿ ಜಿಲ್ಲೆಗೂ ಏನೇನೂ ಸಂಬಂಧ ಇಲ್ಲ. ಅದಕ್ಕೆ ಇವತ್ತು ಮಾನ್ಯ ಉಪ ಮುಖ್ಯಮಂತ್ರಿಯವರು ಇಲ್ಲಿ ಘೋಷಣೆ ಮಾಡಿ ಚಿಕ್ಕೋಡಿ ಜಿಲ್ಲೆಯನ್ನು ಮಾಡಬೇಕು. ಮತ್ತೆ ನಮ್ಮ ಸನ್ಮಾನ್ಯ ಸದಸ್ಯರಾದ ಶ್ರೀ ಬಾಳಾಸಾಹೇಬ ವಡ್ಡರ್ ಅವರದ್ದು ಇವತ್ತು ಆಮರಣ ಉಪವಾಸದ್ದು ನಾಲ್ಕನೇ ದಿನ. ಅದಕ್ಕೆ ಸನ್ಮಾನ್ಯ ಜಿಲ್ಲಾ ಮಂತ್ರಿಗಳಾದ ಶ್ರೀ ಉಮೇಶ್ ಕತ್ತಿಯವರು ಚಿಕ್ಕೋಡಿಗೆ ಹೋಗಿ ಅವರಿಗೆ ವಿನಂತಿ ಮಾಡಿ ಉಪವಾಸವನ್ನು ವಿತ್‌ಡ್ರಾ ಮಾಡುವುದಕ್ಕೆ ಹೇಳಬೇಕು ಎಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

(ಚ) ಗೋಕಾಕ್ ಜಿಲ್ಲೆಯನ್ನಾಗಿ ಮಾಡುವ ಬಗ್ಗೆ.

+ ಶ್ರೀ ಚಂದ್ರಶೇಖರ ಸದಾಶಿವ ನಾಯಕ್ (ಗೋಕಾಕ್): ಮಾನ್ಯ ಅಧ್ಯಕ್ಷರೇ, ಗೋಕಾಕ್ ನಗರ ಶ್ರೀ ಗದ್ದೇಗೌಡರ ಸಮಿತಿಯೊಳಗೆ ಇದು ಜಿಲ್ಲೆ ಆಗಬೇಕು ಎಂದು ಇದೆ. ಕನ್ನಡ ಚಳುವಳಿಗಾರರು ಮಹಾಜನ ವರದಿ ಜಾರಿಗೆ ಆಗುವತನಕ ಇದನ್ನು ತರಬೇಡಿ ಎನ್ನುವ ಮಾತನ್ನು ಹೇಳಿದ್ದಾರೆ. ಬೆಳಗಾವಿ ಒಳಗೆ ಇದ್ದಂಥ ಕನ್ನಡಿಗರೇ ಒಂದಾಗಿಲ್ಲ. ಇದರ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್ ಅವರಿಗೆ ತಿಳಿಸಿದ್ದೇನೆ. ಮಾಲತೇಶ ನಗರದಲ್ಲಿ 80 ಪರ್ಸೆಂಟ್ ಜನ ಕನ್ನಡಿಗರು ಇದ್ದಾರೆ. ಅಲ್ಲಿ ಹೋದ ಸಾರಿ ಎಂ.ಇ.ಎಸ್.ನವರು ಆರಿಸಿ ಬಂದರು. ಏಕೆಂದರೆ ನಮ್ಮಲ್ಲಿ ಆರು ಜನರು ನಿಂತುಬಿಟ್ಟರು. ಎಂ.ಇ.ಎಸ್.ನವರು ಒಬ್ಬರನ್ನೇ ನಿಲ್ಲಿಸುತ್ತಾರೆ. ಕನ್ನಡದವರಾದ ನಮ್ಮವರು ಆರಾರು ಜನ ನಿಲ್ಲುತ್ತಾರೆ. ಇದು ಕಾರ್ಪೊರೇಷನ್ ಒಳಗೂ ನಡೆಯುತ್ತದೆ. ಆಮೇಲೆ ಬೆಳಗಾವಿ ಮಹಾರಾಷ್ಟ್ರಕ್ಕೆ ಹೋಗುತ್ತದೆ ಎನ್ನುವುದು ಇದು ಒಂದು ಭ್ರಮೆ. ಸೊಲ್ಲಾಪುರ ಅಕ್ಕಲಕೋಟೆ ಬರುತ್ತದೆ ಎನ್ನುವಂಥದ್ದರ ಬಗ್ಗೆ ಯಾರೂ ಮಾತನಾಡುವುದಿಲ್ಲ. ಆದರೆ ಬೆಳಗಾವಿ ಹೋಗುತ್ತದೆ ಎಂದರೆ ಎಷ್ಟು ಬೇಗ ಹೋಗುತ್ತದೆ, ಯಾವಾಗ ಹೋಗುತ್ತದೆ ಎಂಬುದನ್ನು ಯಾರೂ ಹೇಳುತ್ತಾ ಇಲ್ಲ. ಹೇಗೆ ಹೋಗುತ್ತದೆ? ಆಮೇಲೆ ಗೋಕಾಕ್ ಜಿಲ್ಲೆ ಆಗುವುದರಿಂದ ಮಹಾಜನ್ ವರದಿ ಮೇಲೆ ಯಾವ ಪರಿಣಾಮವೂ ಆಗುವುದಿಲ್ಲ. ಏಕೆ ಆಗುವುದಿಲ್ಲ ಎಂದರೆ ಈ ಮಹಾಜನ್ ವರದಿ ಪ್ರಕಾರ ಗೋಕಾಕ್, ಮತ್ತು ಸವದತ್ತಿ, ರಾಮದುರ್ಗದೊಳಗೆ ಯಾವುದೇ ಮಹಾರಾಷ್ಟ್ರದೊಳಗೆ ಸೇರತಕ್ಕಂಥ ಭಾಗಗಳು ಇಲ್ಲ. ಇದನ್ನು ಎಲ್ಲಾ ಜನತಾದಳ ಶಾಸಕರು ಸೇರಿಕೊಂಡು ಮೀಟಿಂಗ್ ಮಾಡಿ ಮಾನ್ಯ ಮುಖ್ಯಮಂತ್ರಿಗಳು ಮುಖಾಂತರ ನಾವು ಒಪ್ಪಿಗೆ ಪಡೆದು ಆ ನಿರ್ಣಯವನ್ನು ಕೈಗೊಂಡಿತ್ತು. ಆದರೆ ಈಗ ಕೆಲವು ಜನ ಇದಕ್ಕೆ ಹಿತಾಸಕ್ತಿ ಬಯಸುವುದು ಬಿಟ್ಟು ಈ ಜಿಲ್ಲೆ ಪುನರ್‌ವಿಂಗಡಣೆ ಆಗಬಾರದು ಎನ್ನುವಂಥ ವಿಚಾರವನ್ನು ಎತ್ತಿದ್ದಾರೆ. ಅದಕ್ಕಾಗಿ ಗೋಕಾಕ್ ಜಿಲ್ಲೆಯಾಗಿ ಮಾಡಬೇಕು ಎನ್ನುವ ವಿಚಾರವನ್ನು ತಮ್ಮ ಮುಖಾಂತರ ಹೇಳಬಯಸುತ್ತೇನೆ.

+ ಶ್ರೀ ವಿ.ಎಸ್.ಕೌಜಲಗಿ: ಮಾನ್ಯ ಅಧ್ಯಕ್ಷರೇ, ಈ ಊಹಾಪೋಹದ ಬಿರುಗಾಳಿ

ಏನಿದೆ, ಬೆಳಗಾವಿ ಜಿಲ್ಲೆಯ ಬೆಳವಣಿಗೆಗೆ ಒಂದು ಮಾರಕ ಆಗಿದೆ. ಸುಮಾರು 25 ವರ್ಷಗಳಿಂದ ನಾನು ಆ ಭಾಗದ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದೇನೆ. ಮಹಾಜನ್ ವರದಿ ಬಗ್ಗೆ ಏನು ಅಭ್ಯಾಸ ಮಾಡಿದ್ದೇವೆ, ಇದನ್ನು ಈ ಭೂತಾಕಾರವಾಗಿ ಜನರ ಮುಂದೆ ನಿಲ್ಲಿಸಿಬಿಟ್ಟಿದ್ದಾರೆ. ಮಹಾಜನ್ ವರದಿಯ ಪ್ರಕಾರ, ಬೆಳಗಾಂ ಮಹಾರಾಷ್ಟ್ರಕ್ಕೆ ಹೋಗುತ್ತದೆ ಎಂದು ಇದಲ್ಲ. ಒಂದು ಸಿದ್ಧಾಂತದ ಮೇಲೆ, ಸರ್ಕಾರ ಒಂದು ನಿರ್ಣಯ ತೆಗೆದುಕೊಂಡ ಮೇಲೆ, ಆ ಸಿದ್ಧಾಂತಕ್ಕೆ ಸರ್ಕಾರ ಬದ್ಧವಾಗಿರಬೇಕಾಗುತ್ತದೆ. ವರದಿ ಆಧಾರದ ಮೇಲೆ 5 ಜಿಲ್ಲೆಗಳನ್ನು ಮಾಡಿದರು. ಅದರಲ್ಲಿ ಗೋಕಾಕ್ ಶಿಫಾರಸ್ ಇತ್ತು. ಗೋಕಾಕನ್ನು ಜಿಲ್ಲೆ ಮಾಡಬೇಕೆಂದು ನಾವು ಕೇಳಿದೆವು, ಹೋರಾಟ ಮಾಡಿದೆವು, ಉಪವಾಸ ಮಾಡಿದೆವು. ಸರ್ಕಾರ ಅದಕ್ಕೆ ಒಪ್ಪಿಕೊಂಡು ಏನು ಮಾಡಿದ್ದಾರೆಂದರೆ, ಚಿಕ್ಕೋಡಿ ಮತ್ತು ಗೋಕಾಕ್ ಎರಡೂ ಮಾಡಿದ್ದಾರೆ. ಅದಕ್ಕೆ ನಾವು ವಿರೋಧ ಮಾಡಿದೆವು. ಅದನ್ನು ಜಾರಿಯಲ್ಲಿ ತರುವುದಕ್ಕಿಂತ ಮೊದಲು ಏನಾಯಿತೆಂದರೆ, ಒಂದು ಭೂತಾಕಾರದ ಬಿರುಗಾಳಿ ಬಂತು. ಗೋಕಾಕನ್ನು ಬೇರೆ ಮಾಡುವುದರಿಂದ ಬೆಳಗಾವಿ ಮಹಾರಾಷ್ಟ್ರಕ್ಕೆ ಹೋಗುತ್ತದೆ ಎಂದು. ಸ್ವಾಮಿ ಒಂದಿಂಚೂ ಈ ದೇಶದ ಕನ್ನಡ ನಾಡಿನ ಭಾಗ ಮಹಾರಾಷ್ಟ್ರ ರಾಜ್ಯಕ್ಕೆ ಹೋಗುವುದಿಲ್ಲ. ಮಹಾಜನ್ ವರದಿಯನ್ನು ಸಂಪೂರ್ಣವಾಗಿ ನಾವು ಒಪ್ಪುತ್ತೇವೆಂದು ಹೇಳಿದ್ದೇವೆ. ಇವತ್ತು ಮಹಾಜನ್ ವರದಿಯನ್ನು ಒಪ್ಪಿಕೊಳ್ಳುವ ಮುಂಚೆ, ಬೆಳಗಾಂ ವಿಭಜನೆಯಾಗುತ್ತದೆ, ಕೆಲವು ಭಾಗಗಳು ಹೋಗುತ್ತವೆ. ಚಿಕ್ಕೋಡಿ, ನಿಪ್ಪಾಣಿ ಮತ್ತು ಬೆಳ್ಳುಳ್ಳಿಯಂಥ ಪ್ರದೇಶ ಹಾಗೂ ಅರಣ್ಯ ಸಂಪತ್ತು ಹೋಗುತ್ತದೆ. ಅದೂ ಅಲ್ಲದೆ, ನನ್ನ ಒಂದು ಪ್ರಶ್ನೆ, ಯಾರು ಬೆಳಗಾವಿ ಬಗ್ಗೆ ಮಾತನಾಡಿದರು, ಬೆಳಗಾವಿಯಲ್ಲಿ ಕನ್ನಡದ ಬೆಳವಣಿಗೆ ಬಗ್ಗೆ ಏನು ಮಾಡಿದರು? ಕನ್ನಡ ಭಾಷೆಯನ್ನು ಬೆಳೆಸಬೇಕು, ಕನ್ನಡಿಗರನ್ನು ಸಂಘಟನೆ ಮಾಡಬೇಕೆಂಬ ಬಗ್ಗೆ ಏನೂ ಆಗಿಲ್ಲ. ಅದೇ ದೇವರಾಜ ಅರಸರ ಕಾಲದಲ್ಲಿ ನಾವಿದ್ದಾಗ, ಅಲ್ಲಿ ಕನ್ನಡದ ಬೆಳವಣಿಗೆಯಾಗಬೇಕೆಂದು ಡಿವಿಜನಲ್ ಹೆಡ್‌ಕ್ವಾರ್ಟರ್ಸ್‌ನೆಲ್ಲಾ 8 ದಿವಸದಲ್ಲಿ ಷಿಫ್ಟ್ ಮಾಡಿದೆವು. ಇವತ್ತು ಕಾರ್ಪೊರೇಷನ್‌ನಲ್ಲಿ ಅವರು ಮೆಜಾರಿಟಿಯಲ್ಲಿದ್ದಾರೆ. ಅದಕ್ಕೇನು ಮಾಡಿದಿರಿ? ಕಾರ್ಪೊರೇಷನ್ ಮಾಡಬೇಕಾದರೆ ಕನ್ನಡ ಹಳ್ಳಿಗಳನ್ನು ಅದಕ್ಕೆ ಜೋಡಿಸಿಕೊಂಡು ನಾವು ಬೆಳಗಾಂ ಕಾರ್ಪೊರೇಷನ್ ಮಾಡಿದೆವು. ಆದರೆ, ಇವತ್ತು ಅಂಥ ಮಹತ್ವದ ಕೆಲಸ ಮಾಡುತ್ತಿಲ್ಲ. ನಾವೆಲ್ಲರೂ ಕನ್ನಡಿಗರೇ, ಬೆಳಗಾವಿ ಕನ್ನಡ ನಾಡಿನ ರಾಣಿ ಇದ್ದಹಾಗೆ ಇದ್ದಾಳೆ. ಅದನ್ನು ರಕ್ಷಣೆ ಮಾಡತಕ್ಕ ಕರ್ತವ್ಯ ನಮ್ಮದೂ ಇದೆ. ಆದರೆ, ತಾವೇನು ಈಗ ನಿರ್ಣಯ ತೆಗೆದುಕೊಂಡಿದ್ದೀರಿ. ಮಾಡುತ್ತೇನೆಂದು ಜನಗಳಿಗೆ ಆಶ್ವಾಸನೆ ಕೊಟ್ಟಿರಿ, ಮತ್ತೆ ಪುನಃ ಬೆಳಗಾಂ ಜಿಲ್ಲೆ ವಿಭಜನೆ-ಮಾಡುವುದಿಲ್ಲ, ಮಹಾಜನ್ ವರದಿ ಜಾರಿಗೆ ಬರುವವರೆಗೂ ಎಂದು. ಆದರೆ 20 ವರ್ಷವಾದರೂ ಮಹಾಜನ್ ವರದಿ ಜಾರಿಗೆ ಬಂದಿಲ್ಲ. ನಮ್ಮ ಅವಧಿಯೊಳಗೆ ಬರುತ್ತದೆಂದು ನನಗೂ ಅನಿಸುವುದಿಲ್ಲ. ನಿಜವಾಗಿ ಜನರ ಹಿತದೃಷ್ಟಿಯಿಂದ ಮುಖ್ಯಮಂತ್ರಿಗಳು ಏನು ಹೇಳಿದರು. ಸಣ್ಣ ಸಣ್ಣ ಜಿಲ್ಲೆ ಮಾಡುವುದರಿಂದ ಬೆಳವಣಿಗೆಯಾಗುತ್ತದೆ, ನಾನು

ಮಾಡುತ್ತೇನೆಂದು ಹೇಳಿದರು. ನೀವು ಮಾತನಾಡಿದ್ದನ್ನು ಈಗ ನೀವೇ ಹಿಂತೆಗೆದುಕೊಳ್ಳುತ್ತಿದ್ದೀರಿ. ಪ್ರಜಾಪ್ರಭುತ್ವದೊಳಗೆ, ಈ ಹೋರಾಟ, ಪರ-ವಿರೋಧ ಎಲ್ಲಾ ಇದ್ದೇ ಇರುತ್ತದೆ. ಇವತ್ತು ಸವದತ್ತಿಯವರು ಬೇಡ ಎಂದು ಹೇಳುತ್ತಾರೆ, ಬೈಲಹೊಂಗಲದವರು ಬೇಡ ಎಂದು ಹೇಳುತ್ತಾರೆ. ಅವರು ಏಕೆ ಆಗ ಕೇಳಲಿಲ್ಲ. ಯಾವಾಗ ಜಿಲ್ಲೆ ಮಾಡಬೇಕೆಂಬ ವಿಷಯ ಬಂತು, ಆಗ ಅವರು ಯಾರೂ ಬಂದು ಕೇಳಲಿಲ್ಲ. ಈಗ ಅದೆಲ್ಲಾ ಆದನಂತರ, ಅದು ಬೇಡ, ಇದುಬೇಕು ಎಂದು ಹೇಳಿದರೆ ಅದು ತಪ್ಪು. ಅದಕ್ಕೆ ಸರ್ಕಾರ, ಇನ್ನೊಮ್ಮೆ ತಮ್ಮ ನಿಲುವನ್ನು ಪರಿಶೀಲನೆ ಮಾಡಿ ಎಲ್ಲಾ ತರಹದಿಂದ ಗೋಕಾಕ್ ಜಿಲ್ಲೆಗೆ ಯೋಗ್ಯವಾದ ಸ್ಥಳ. ಆ ಸ್ಥಳವನ್ನು ಜಿಲ್ಲೆಯನ್ನಾಗಿ ಮಾಡಿ ಆ ಭಾಗದ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

+ ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ವಿಚಾರಕ್ಕೆ ಸಂಬಂಧಪಟ್ಟಂತೆ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಸದನದಲ್ಲಿ ಕೊಟ್ಟಿದ್ದಾರೆ. ಬೆಳಗಾಂ ಜಿಲ್ಲೆಯನ್ನು ಮೂರು ಭಾಗಗಳಾಗಿ ಮಾಡಿದಮೇಲೆ, ಬೆಳಗಾಂ ಗೋಕಾಕ್ ಮತ್ತು ಚಿಕ್ಕೋಡಿ. ಬೆಳಗಾವಿ ಜಿಲ್ಲೆಯನ್ನು ಹೆಚ್ಚು ಬೆಳವಣಿಗೆ ಮಾಡಬೇಕೆಂಬ ಜನರ ಭಾವನೆ ಹಾಗೂ ಕನ್ನಡಿಗರ ಭಾವನೆ ಕೂಡ ಆಗಿದೆ. ಆ ಹಿನ್ನೆಲೆಯಲ್ಲಿ ಸದನದಲ್ಲಿಯೂ ಕೂಡ ಪ್ರಸ್ತಾವವಾಯಿತು. ಆ ರೀತಿ ಮಾಡುತ್ತೇವೆ. ಮಹಾಜನ್ ವರದಿಯನ್ನು ನಾವು ಒಪ್ಪಿಕೊಂಡಿದ್ದೇವೆ, ಇನ್ನೂ ಕೂಡ ಜಾರಿಯಾಗಿಲ್ಲ. ಆದರಂತೆ ಬೆಳಗಾಂ ನಮ್ಮಲ್ಲೇ ಇರಬೇಕು. ಇದು ಕನ್ನಡಿಗರ ಎಲ್ಲರ ಆಶಯ. ಆ ಕಾರಣದಿಂದ ಈ ತರಹ ವಿಭಾಗ ಮಾಡುವುದರಿಂದ ತೊಂದರೆ ಆದೀತು ಎಂಬ ಆತಂಕವನ್ನು ಎಲ್ಲರೂ ವ್ಯಕ್ತಪಡಿಸಿರುವುದರಿಂದ ಮುಖ್ಯಮಂತ್ರಿಗಳು ಏನು ಹೇಳಿದರು. ಈಗೇನು ಮೂರು ಭಾಗ ಮಾಡಿದ್ದೇವೆ, ಅದನ್ನು ಸಧ್ಯಕ್ಕೆ ಸ್ಥಗಿತ ಮಾಡೋಣ, ಮಹಾಜನ್ ವರದಿ ಜಾರಿಯಾಗುವವರೆಗೂ ಹೀಗೆಯೇ ಇರಲಿ ಎಂಬ ಮಾತನ್ನು ಅವರು ಹೇಳಿದ್ದಾರೆ. ಈ ಮಧ್ಯ ನಮ್ಮ ಶಾಸಕರಾದ ಬಾಳಾ ಸಾಹೇಬ ವಡ್ಡರ್‌ರವರು ಗೋಕಾಕನ್ನು ಜಿಲ್ಲೆ ಮಾಡಬೇಕೆಂದು ಹಾಗೂ ಚಿಕ್ಕೋಡಿಯನ್ನು ಜಿಲ್ಲೆ ಮಾಡಬೇಕೆಂದು ಹೇಳಿ ಅಮರಣಾಂತ ಸತ್ಯಾಗ್ರಹವನ್ನು ಪ್ರಾರಂಭ ಮಾಡಿದ್ದಾರೆ. ಅವರು ಏಕೆ ಮಾಡಿದರೋ ಗೊತ್ತಿಲ್ಲ. ಅದರ ಬಗ್ಗೆ ಯಾವುದೂ ಒಂದು ಅಂತಿಮವಾದ ತೀರ್ಮಾನ ಬಂದಿಲ್ಲ. ಮತ್ತು ಇವರದು ಮೊದಲಿಂದಲೂ ಚಿಕ್ಕೋಡಿ ಜಿಲ್ಲೆಯಾಗಬೇಕೆಂಬ ಒತ್ತಾಯವೂ ಇರಲಿಲ್ಲ. ಬೇರೆ ಜಿಲ್ಲೆಗಳನ್ನೂ ವಿಭಾಗ ಮಾಡುವುದರಿಂದ, ಈ ಜಿಲ್ಲೆ ಏನೋ ದೊಡ್ಡಜಿಲ್ಲೆ ಇದೆ. ಹಾಗಾಗಿ, ಆಡಳಿತ ದೃಷ್ಟಿಯಿಂದ ಇದನ್ನೂ ವಿಭಾಗ ಮಾಡಬೇಕೆಂಬ ಕಾರಣದಿಂದ ಮಾಡಿದ್ದು. ಇದಕ್ಕೆ ವಿರೋಧ ಬಂದದ್ದರಿಂದ, ಅನೇಕ ಜನ ಕನ್ನಡ ಹೋರಾಟಗಾರರು, ಕನ್ನಡ ಸಂಘಸಂಸ್ಥೆಗಳು ಈ ತರಹ ಮಾಡುವುದಕ್ಕೆ ಆತಂಕ ವ್ಯಕ್ತಪಡಿಸಿರುವುದರಿಂದ, ಇದನ್ನು ಸ್ಥಗಿತಗೊಳಿಸಿದೆ. ಆದ್ದರಿಂದ, ಇನ್ನೊಮ್ಮೆ

ನಾವು ಆ ಭಾಗದ ಎಲ್ಲಾ ಶಾಸಕರುಗಳನ್ನು, ಬೇರೆ ಬೇರೆ ಪ್ರತಿನಿಧಿಗಳನ್ನು ಕರೆದು ಚರ್ಚೆ ಮಾಡುತ್ತೇವೆ. ಇದಕ್ಕೋಸ್ಕರ ಅಲ್ಲಿ ಏನೋ ಭಾರಿ ಅನಾಹುತವಾಗಿದೆ, ಎಂದು ದೊಡ್ಡ ಚಳುವಳಿ ಮಾಡಬೇಕಾದ, ಅನ್ನಸತ್ಯಾಗ್ರಹ ಮಾಡಬೇಕಾದ ಕಾರಣ ಇಲ್ಲ. ನಾನು ಶಾಸಕರಾದ ಬಾಳಾ ಸಾಹೇಬ ವಡ್ಡರ್ ಅವರಿಗೆ ಮನವಿ ಮಾಡುತ್ತೇನೆ. ಅವರು ಚಳುವಳಿ ಬಿಟ್ಟು ಮಾತುಕತೆ ಮಾಡುವುದಕ್ಕೆ ಬೇಕಾದರೆ ಬರಲಿ. ಇಲ್ಲಿ ಯಾವುದೇ ದೊಡ್ಡ ಅನಾಹುತ, ಸಾರ್ವಜನಿಕರಿಗೆ ತೊಂದರೆ ಯಾಗತಕ್ಕಂಥ, ಜನರಿಗೆ ತೊಂದರೆಯಾಗತಕ್ಕ, ರಾಜ್ಯಕ್ಕೆ ತೊಂದರೆಯಾಗತಕ್ಕಂಥ ಯಾವುದೇ ತೀರ್ಮಾನ ಆಗಿಲಿಲ್ಲವೆಂಬ ಮಾತನ್ನು ನಾನು ಈ ಸದನದ ಮೂಲ ಅವರಿಗೆ ತಿಳಿಸಲಿಕ್ಕೆ ಬಯಸುತ್ತೇನೆ. ಮುಖ್ಯಮಂತ್ರಿಗಳ ಕಚೇರಿಯಿಂದಲೂ ಅವರಿಗೆ ಸತ್ಯಾಗ್ರಹ ನಿಲ್ಲಿಸುವುದಕ್ಕೆ ಕಾಗದ ಹೋಗಿದೆ. ನಾನೂ ಕೂಡ ಈ ಸದನದ ಮೂಲಕ ಮನವಿ ಮಾಡುತ್ತೇನೆ. ಅನ್ನ ಸತ್ಯಾಗ್ರಹ ಬಿಟ್ಟು ಬರಲಿ. ಬೆಳಗಾಂ ಜಿಲ್ಲೆಯ ಎಲ್ಲಾ ಶಾಸಕರ ಜೊತೆ ಚರ್ಚೆ ಮಾಡುವುದಕ್ಕೆ ಸರ್ಕಾರ ಸಿದ್ಧವಿದೆ ಎಂಬ ಮಾತನ್ನು ಹೇಳುತ್ತೇನೆ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ಮಹಾಜನ್ ವರದಿ ಹಲವಾರು ವರ್ಷಗಳಿಂದ ಇದೆ. ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಎಲ್ಲಾ ಗೊತ್ತಿದೆ. ಮಹಾಜನ್ ವರದಿಯಿಂದ ಯಾವ ಹಳ್ಳಿಗಳು ಹೋಗುತ್ತವೆ, ಯಾವ ಹಳ್ಳಿಗಳು ಹೋಗುವುದಿಲ್ಲವೆಂಬುದು ಅವರಿಗೆ ಗೊತ್ತಿದೆ.

ಅಧ್ಯಕ್ಷರು: ತಾವು ಹೇಳಿದ್ದನ್ನೆಲ್ಲಾ ಕೇಳಿದ ಮೇಲೆ, ಸನ್ಮಾನ್ಯ ಸದಸ್ಯರಾದ ಕೌಜಲಗಿಯವರು ಹೇಳಿದಂತೆ ಪುನರ್ ಪರಿಶೀಲನೆ ಮಾಡಬೇಕು ಎನ್ನುವ ತೀರ್ಮಾನಕ್ಕೆ ನಾವು ಬಂದಿದ್ದೇವೆ, ಜಿಲ್ಲೆಯ ಎಲ್ಲಾ ಶಾಸಕರನ್ನು ಕರೆದು, ಮತ್ತೊಮ್ಮೆ ತಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಚರ್ಚೆ ಮಾಡಿ ಒಂದು ತೀರ್ಮಾನ ತೆಗೆದುಕೊಳ್ಳುತ್ತೇವೆ, ಎಂದು ಹೇಳಿದ್ದಾರೆ. ಮಾನ್ಯ ವಡ್ಡರ್‌ರವರಿಗೂ ಕೂಡ ಇಲ್ಲಿಂದ ವಿನಂತಿ ಮಾಡಿಕೊಳ್ಳುತ್ತೇವೆ, ಅವರ ಆಮರಣಾಂತ ಉಪವಾವನ್ನು ನಿಲ್ಲಿಸಬೇಕೆಂದೂ ಸಹ ಹೇಳಿದ್ದಾರೆ.

ಶ್ರೀ ವಿ.ಎಸ್.ಕೌಜಲಗಿ: ಸದನದಲ್ಲಿ ಮುಖ್ಯಮಂತ್ರಿಗಳು ಏನು ಪ್ರಸ್ತಾಪ ಮಾಡಿದರೆಂದರೆ, ಮಹಾಜನ್ ವರದಿ ಜಾರಿಯಾಗುವವರೆಗೆ ಬೆಳಗಾಂ ಜಿಲ್ಲೆಯ ವಿಭಜನೆ ಇಲ್ಲವೆಂದು ಹೇಳಿದರು.

ಅಧ್ಯಕ್ಷರು: ಸರಿ, ಅದು ಮೊನ್ನೆ ಪೊಸಿಷನ್. ತಾವು ಇವತ್ತು ಹೇಳಿದ ಮಾತನ್ನು ಕೇಳಿದ ಮೇಲೆ ಅವರು ಆ ತೀರ್ಮಾನಕ್ಕೆ ಬಂದಿದ್ದಾರೆ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ಅವರು ಒಂದು ತಾರೀಖು ಹೇಳಲಿ. ಯಾವ ತಾರೀಖಿಗೆ ಎಲ್ಲಾ ಶಾಸಕರನ್ನು ಎಂ.ಪಿ.ಗಳನ್ನು ಭೇಟಿ ಮಾಡುತ್ತಾರೆ?

ಅಧ್ಯಕ್ಷರು: ಅದೆಲ್ಲಾ ಇಲ್ಲಿಯೇ ಹೇಳುವುದಕ್ಕಾಗುವುದಿಲ್ಲ. ಯಾವತಾರೀಖಿಗೆ, ಎಷ್ಟು ಗಂಟೆಗೆ ಎಂಬುದನ್ನು ಹೇಳುತ್ತಾರೆಯೇ? ಅವರು ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿ ತಮಗೆ ತಿಳಿಸುತ್ತಾರೆ. ಈಗ ಶ್ರೀರಾಮರೆಡ್ಡಿಯವರು ಬಯಲುಸೀಮೆಗೆ ಬಹಳ ಜಾಸ್ತಿ ಹಣ ಕೊಟ್ಟಿದ್ದಾರೆ, ನಮಗೆ ಅಷ್ಟು ಹಣ ಬೇಡ ಎಂದು ಗಲಾಟೆ ಮಾಡುತ್ತಿದ್ದೀರಿ... ನೀವು ನಿನ್ನೆ ಎಲ್ಲಾರೂ ಬಂದು ಗಲಾಟೆ ಮಾಡಿದ್ದು ಬಯಲುಸೀಮೆ ಅಭಿವೃದ್ಧಿಗೆ ಅಷ್ಟೊಂದು ಹಣ ಕೊಟ್ಟಿದ್ದಾರೆ, ನಮಗೆ ಅಷ್ಟೊಂದು ಬೇಕಾಗಿಲ್ಲವೆಂದು ಹೇಳಿ....

ಛ) ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ಹೆಚ್ಚಿನ ಹಣ ಬಿಡುಗಡೆ.

+ ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ 76 ತಾಲ್ಲೂಕುಗಳನ್ನು ಬಯಲುಸೀಮೆ ಅಭಿವೃದ್ಧಿಗೆ ಸೇರಿಸಿದ್ದಾರೆ. 1995-96ರಿಂದ ಸೇರಿಸಿ, ಅದನ್ನು ಮಂಡಳಿ ಮಾಡಿದ್ದಾರೆ. ಆದರೆ, ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಮೂರು ಮಂಡಳಿಗಳು ಇವೆ. ಹೆಚ್.ಕೆ.ಡಿ.ಬಿ, ಮಲೆನಾಡು ಅಭಿವೃದ್ಧಿ ಮಂಡಳಿ ಇನ್ನೊಂದು ಬಯಲುಸೀಮೆ ಅಭಿವೃದ್ಧಿ ಮಂಡಳಿ ಎಂದು ಮಾಡಿದ್ದಾರೆ. ಹೈದರಾಬಾದ್ ಕರ್ನಾಟಕಕ್ಕೆ ಸೇರಿಸಿರತಕ್ಕಂಥಾದ್ದು 4 ಜಿಲ್ಲೆಗಳು. ಬಯಲುಸೀಮೆ ಅಭಿವೃದ್ಧಿಗೆ 76 ತಾಲ್ಲೂಕುಗಳು, ಬೇರೆ ಬೇರೆ ಜಿಲ್ಲೆಗಳಲ್ಲಿರತಕ್ಕ ಎಲ್ಲವೂ ಕೂಡ ಸೇರಿ 76 ಅಸೆಂಬ್ಲಿ ಕ್ಷೇತ್ರಗಳನ್ನು ಸೇರಿಸಿದ್ದಾರೆ. ಆದರೆ, ನಮಗೆ ಹಣ ಕೊಟ್ಟಿರತಕ್ಕಂಥಾದ್ದು 1995-96ರಲ್ಲಿ 5 ಕೋಟಿ 92 ಲಕ್ಷ ಬಿಡುಗಡೆ ಮಾಡುತ್ತೇವೆಂದು ಹೇಳಿ, ನಮಗೆ ವಾಸ್ತವವಾಗಿ ಬಿಡುಗಡೆ ಮಾಡಿರತಕ್ಕಂಥದ್ದು 3 ಕೋಟಿ 72 ಲಕ್ಷದ 75 ಸಾವಿರ ರೂಪಾಯಿ. 1996-97ರಲ್ಲಿ 6 ಕೋಟಿ 47 ಲಕ್ಷ ಬಿಡುಗಡೆ ಮಾಡಿದ್ದೇವೆಂದು ಹೇಳಿ, ವಾಸ್ತವವಾಗಿ ಬಿಡುಗಡೆಯಾಗಿರುವುದು 4 ಕೋಟಿ 18 ಲಕ್ಷ. 1997-98ರಲ್ಲಿ 7 ಕೋಟಿ 40 ಲಕ್ಷ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದರು. ಆದರೆ, ಸಧ್ಯಕ್ಕೆ ಬಿಡುಗಡೆ ಮಾಡಿರುವುದು ಒಂದು ಕೋಟಿ 85 ಲಕ್ಷ ಮಾತ್ರ. ಇದು ಬಹಳ ಅನ್ಯಾಯ 76 ವಿಧಾನಸಭಾ ಕ್ಷೇತ್ರಗಳಿಗೆ ಕೇವಲ 4-5-6 ಕೋಟಿ ಕೊಟ್ಟಿದ್ದಾರೆ. ಬೇರೆ ಮಂಡಳಿಗಳಿಗೆ ಸಾಕಷ್ಟು ಹಣ ಕೊಟ್ಟಿದ್ದಾರೆ. ಅವರಿಗೆ ಕೊಡಲಿ, ನಾವೇನೂ ಅವರಿಗೆ ಕೊಡುವುದು ಬೇಡ ಎಂದು ಹೇಳುವುದಿಲ್ಲ.

11.20 ಎ.ಎಂ

ಕೊಟ್ಟಿದ್ದಾರೆ. ಎಚ್.ಕೆ.ಡಿ.ಬಿ.ಗೆ 1990-91ರಲ್ಲಿ 5ಸಾವಿರದ 9.54 ಲಕ್ಷ, 1991-92ರಲ್ಲಿ 6 ಸಾವಿರದ 130.74 ಲಕ್ಷ, 1992-93ರಲ್ಲಿ 64 1/2 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. 1993-94ರಲ್ಲಿ 63 ಕೋಟಿ 72 ಲಕ್ಷ, 1994-95ರಲ್ಲಿ 66 ಕೋಟಿ ರೂಪಾಯಿಗಳನ್ನು, 1995-96ರಲ್ಲಿ 60 ಕೋಟಿ ರೂಪಾಯಿಗಳನ್ನು, 1996-97ರಲ್ಲಿ [illegible] ಕೋಟಿ ರೂಪಾಯಿಗಳನ್ನು 1997-98ರಲ್ಲಿ 60 ಕೋಟಿ

ರೂಪಾಯಿಗಳನ್ನು ಕೊಟ್ಟಿದ್ದಾರೆ. ಮಲೆನಾಡು ಅಭಿವೃದ್ಧಿಗೆ 1990-91ರಲ್ಲಿ 10 ಕೋಟಿ ರೂಪಾಯಿಗಳನ್ನು, 1992-93ರಲ್ಲಿ 35 ಕೋಟಿ ರೂಪಾಯಿಗಳನ್ನು, 1993-94ರಲ್ಲಿ 33 ಕೋಟಿ ರೂಪಾಯಿಗಳನ್ನು, 1994-95ರಲ್ಲಿ 35 ಕೋಟಿ ರೂಪಾಯಿಗಳನ್ನು 1995-96 ರಿಂದ 1997-98ನೇ ಸಾಲಿಗಾಗಿ 30 ಕೋಟಿ ರೂಪಾಯಿಗಳನ್ನೂ 30 ಕೋಟಿ, 30 ಕೋಟಿ ರೂಪಾಯಿಗಳೆಂದು ಸರಾಸರಿಯಾಗಿ ಕೊಡುತ್ತಾ ಬಂದಿದ್ದಾರೆ. ಅವರು ಕೊಡಲಿ, ನಮ್ಮದೇನೂ ತಕರಾರಿಲ್ಲ. ಆದರೆ, ಹೈದರಾಬಾದ್-ಕರ್ನಾಟಕದಲ್ಲಿರತಕ್ಕದ್ದು ಕೇವಲ 4 ಎಚ್.ಕೆ.ಡಿ.ಬಿ. ಜಿಲ್ಲೆಗಳು ಮತ್ತು ಮಲೆನಾಡು ಅಭಿವೃದ್ಧಿಗೆ 8 ಜಿಲ್ಲೆಗಳು. ನಮ್ಮದು 76 ವಿಧಾನಸಭಾ ಕ್ಷೇತ್ರಗಳು ಸೇರುತ್ತದೆ. ಕರ್ನಾಟಕದ 3ನೇ 2 ಭಾಗದಷ್ಟು ಭೌಗೋಳಿಕ ಇರುವ ಬಯಲು ಸೀಮೆ ಅಭಿವೃದ್ಧಿಗೆ 3 ವರ್ಷಗಳಲ್ಲಿ ಒಟ್ಟಿಗೆ ಸೇರಿ ಪೂರ್ತಿಯಾಗಿ 10 ಕೋಟಿ ರೂಪಾಯಿಗಳನ್ನೂ ಕೂಡ ಕೊಟ್ಟಿಲ್ಲ. ಇದರಿಂದ, ನಾವು ಏನು ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯ? ನಮ್ಮಲ್ಲಿ ಯಾವುದೇ ಡ್ಯಾಮ್, ನದಿ ಇಲ್ಲ. ಇಲ್ಲದಿರುವ ಪ್ರದೇಶಗಳನ್ನು ಬಯಲು ಸೀಮೆ ಎಂದು ಗುರುತಿಸಲಾಗಿದೆ. ಸರಾಸರಿ ಮಳೆಯ ಪ್ರಮಾಣವನ್ನು ತೆಗೆದುಕೊಂಡರೆ ನಮಗೆ ಇಡೀ ಕರ್ನಾಟಕ ರಾಜ್ಯದಲ್ಲಿ ಅತೀ ಕಡಿಮೆ ಮಳೆ ಬರುವ ಪ್ರದೇಶಗಳಿವು. ಕೆರೆ ಇರುವ, ಬೇರ್ಯಾವುದೇ ಜೀವನಕ್ಕೆ ಆಧಾರವಿಲ್ಲದಿರುವ ವಿಧಾನ ಸಭಾ ಕ್ಷೇತ್ರ. ಹಾಗಾಗಿ, 10 ಕೋಟಿ ರೂಪಾಯಿಗಳನ್ನು ಒಟ್ಟಿಗೆ 3 ವರ್ಷಗಳಲ್ಲಿ ಬಿಡುಗಡೆ ಮಾಡಿದ್ದಾರೆ. ಇದು ಸರ್ಕಾರದವರು ನಮಗೆ ಮಾಡಿರುವ ಬಹಳ ಅನ್ಯಾಯ. ಮಾನ್ಯ ಶ್ರೀ ದೇವೇಗೌಡರವರು ಮುಖ್ಯಮಂತ್ರಿಗಳಾಗಿದ್ದಾಗ ನಾವೆಲ್ಲರೂ ಸಭೆ ಸೇರಿ ಅವರನ್ನು ಕರೆದುಕೊಂಡು ಬಂದು ಅವರು ಆಶ್ವಾಸನೆ ಕೊಟ್ಟು ಕನಿಷ್ಠ 20-25 ಕೋಟಿ ಕೊಡುತ್ತೇನೆಂದು ಹೇಳಿದ್ದರು. ಅವರು ಕೊಡಲಿಲ್ಲ. ಮತ್ತೆ ಸನ್ಮಾನ್ಯ ಶ್ರೀ ಜೆ.ಹೆಚ್.ಪಟೇಲರು ಮುಖ್ಯಮಂತ್ರಿಗಳಾದಾಗ ನಾವು ಸಭೆ ಸೇರಿ ಅವರನ್ನು ಅದಕ್ಕೆ ಆಹ್ವಾನಿಸಿ ನಮ್ಮೆಲ್ಲರ ಅಳಲನ್ನು ತೋಡಿಕೊಂಡಾಗ, ಹಣವನ್ನು ಕೊಡುತ್ತೇನೆಂದು ಆಶ್ವಾಸನೆ ನೀಡಿದ್ದರು. ಆದರೆ, ಇದುವರೆಗೆ ಕೊಟ್ಟಿಲ್ಲ. ಹೋಗಲಿ, 1997-98ರಲ್ಲಿ ಏನಾದರೂ ಕೊಡುತ್ತಾರೆಂದು ನಿರೀಕ್ಷಿಸಿದರೆ ನಮ್ಮೆಲ್ಲಾ ಶಾಸಕರಿಗೂ ಬಯಲು ಸೀಮೆಯಿಂದ ಪತ್ರ ಬಂತು; 34 ಲಕ್ಷಕ್ಕೆ ನೀವು ಕ್ರಿಯಾ ಯೋಜನೆಯನ್ನು ಮಾಡಿ ಕಳುಹಿಸಿ ಎಂದು. ನಾವೆಲ್ಲರೂ ಕಷ್ಟಬಿದ್ದು 34 ಲಕ್ಷರೂಪಾಯಿಗೆ ಕ್ರಿಯಾ ಯೋಜನೆಯನ್ನು ಮಾಡಿ ಕೊಟ್ಟರೆ, ಮೊನ್ನೆ ಬಯಲುಸೀಮೆ ಮೀಟಿಂಗ್‌ಗೆ ಹೋದರೆ, ಹಣ ಬಿಡುಗಡೆ ಮಾಡಿಲ್ಲ, ಸಧ್ಯಕ್ಕೆ ನೀವು 5-6ಲಕ್ಷಕ್ಕೆ ಮಿತಗೊಳಿಸಿ ಕ್ರಿಯಾ ಯೋಜನೆಯನ್ನು ಕೊಡಿ ಎಂದು ಹೇಳಿದರು. ಏಕೆಂದರೆ, ಹಣ ಬಿಡುಗಡೆ ಮಾಡಿಲ್ಲವೆನ್ನುತ್ತಾರೆ. ಇಡೀ ಕರ್ನಾಟಕ ಸರ್ವತೋಮುಖ ಅಭಿವೃದ್ಧಿಗೆ ಮಾಡುತ್ತೇವೆನ್ನುವ ಬಗ್ಗೆ ಪ್ರಾಮಾಣಿಕ ಕಾಳಜಿ ಇದ್ದರೆ, ಅದರಲ್ಲಿ 76 ವಿಧಾನಸಭಾ ಕ್ಷೇತ್ರಗಳು ಸೇರಿರುವ ಬಯಲುಸೀಮೆ ಅಭಿವೃದ್ಧಿ ಬಗ್ಗೆ ಏನಾದರೂ ಕಾಳಜಿ ಇದ್ದರೆ, ಸರ್ಕಾರ ಇವತ್ತು ಸ್ಪಷ್ಟಪಡಿಸಬೇಕಾಗಿದೆ. ಯಾವ ಕಾರಣದಿಂದ ನಮಗೆ ಈ ಹಣವನ್ನು ಇಷ್ಟು ಕಡಿಮೆ ಕೊಡುತ್ತಿದ್ದೀರಿ? ಈ ಬಗ್ಗೆ ಸಂಬಂಧಿಸಿದ ಮಂತ್ರಿಗಳು ಉತ್ತರ

ಇಲ್ಲದಿರುವ ಪ್ರದೇಶಗಳು, ಮಳೆ ಪ್ರಮಾಣ ಕಡಿಮೆ ಇರುವ ಪ್ರದೇಶಗಳು, ಅಭಿವೃದ್ಧಿಯಾಗದಿರುವ ಪ್ರದೇಶಗಳು, ಕಾಡು ಬೆಳೆಸಲು ಸಾಧ್ಯವಾಗದಿರುವ ಇಂಥ ಹಿಂದುಳಿದ ಪ್ರದೇಶಗಳಿಗೆ ಇಷ್ಟು ಕಡಿಮೆ ಹಣವನ್ನು ಕೊಡುತ್ತಿರುವುದನ್ನು ನೋಡಿದರೆ ಬಯಲು ಸೀಮೆ ಪ್ರದೇಶಕ್ಕೆ ಬರತಕ್ಕ ಯಾವುದೇ ಕ್ಷೇತ್ರಗಳನ್ನೂ ಅಭಿವೃದ್ಧಿ ಮಾಡಬೇಕೆನ್ನುವ ಪ್ರಾಮಾಣಿಕ ಕಾಳಜಿ ಇಲ್ಲವೆನ್ನುವುದು ಗೊತ್ತಾಗುತ್ತದೆ. ಆದರೆ, ಕಣ್ಣೊರೆಸುವುದಕ್ಕೆ, ನಿಮಗೊಂದು ಮಂಡಳಿ ಮಾಡಿದ್ದೇವೆ ಎಂದು ಹೇಳಿದ ಹಾಗೆ ಆಗುತ್ತದೆ. ಇವರು ಕೊಡುತ್ತಿರುವ ಹಣವೇನಿದೆ ಅದು ಅವರ ಸಂಬಳ ಸಾರಿಗೆಗೇ ಸಾಕಾಗುತ್ತಿಲ್ಲ. ಅಲ್ಲಿರುವ ಅಧ್ಯಕ್ಷರು, ಮೊನ್ನೆ ಆ ಅಧ್ಯಕ್ಷರು ಮೀಟಿಂಗ್‌ನಲ್ಲಿ ಅಜೆಂಡಾ ಇಟ್ಟು, ಕಾರುಬೇಕು, ವ್ಯವಸ್ಥೆಬೇಕು, ಆಡಳಿತ ಸುಧಾರಣೆಯಾಗಬೇಕು, ಹೆಚ್ಚು ಸ್ಟಾಫ್ ಬೇಕು ಎಂದರು. ಪ್ರತ್ಯೇಕವಾಗಿ ಅದಕ್ಕೆ ಸೆಕ್ರೆಟರಿ ಇಲ್ಲ. ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ಸ್ವತಂತ್ರವಾದ ಒಬ್ಬ ಕಾರ್ಯದರ್ಶಿ ಇಲ್ಲ. ಅದಕ್ಕೆ ಸ್ಟಾಫ್ ಇಲ್ಲ, ಸ್ಟೆನೋ ಇಲ್ಲ. ಇರತಕ್ಕ ಸ್ಟಾಫ್‌ಗೆ ನೀವು ಏನು ಹಣವನ್ನು ಬಿಡುಗಡೆ ಮಾಡಿದ್ದೀರಿ, ಅದು ಅವರ ಸಂಬಳ, ಸಾರಿಗೆಗೇ ಮಾತ್ರ ಸರಿಹೋಗುತ್ತದೆಯೇ ಹೊರತು ಬಯಲು ಸೀಮೆ ಅಭಿವೃದ್ಧಿ ಮಾಡಲಿಕ್ಕೆ ಯಾವುದೇ ಹಣ ಬಿಡುಗಡೆ ಮಾಡಲಿಕ್ಕೆ ಸಾಧ್ಯವಿಲ್ಲದಿರುವ ಪರಿಸ್ಥಿತಿ ಬಂದಿದೆ. 3 ವರ್ಷಗಳಿಂದ ನಾವೇನು ಕ್ರಿಯಾ ಯೋಜನೆಯನ್ನು ಮಾಡಿಕೊಟ್ಟಿದ್ದೇವೆ ಅದರಲ್ಲಿ ಅರ್ಧ ಹಣವನ್ನೂ ಇಲ್ಲಿಯವರೆಗೆ ಸರ್ಕಾರ ಬಿಡುಗಡೆ ಮಾಡಿಲ್ಲ. ಆದ್ದರಿಂದ, ನಾನು ತಮ್ಮ ಮೂಲಕ ಇವತ್ತು ಸರ್ಕಾರವನ್ನು ಕೇಳುತ್ತಿದ್ದೇನೆ, ನಿಮಗೆ ಬಯಲು ಸೀಮೆ ಅಭಿವೃದ್ಧಿ ಮಾಡಬೇಕೆಂಬ ಪ್ರಾಮಾಣಿಕ ಕಾಳಜಿ ಇದೆಯೇ? ಅಥವಾ ಹೆಸರಿಗೆ ನಾವೊಂದು ಅಭಿವೃದ್ಧಿ ಮಂಡಳಿಯನ್ನು ಮಾಡಿದ್ದೇವೆ, ನಾವು ಹಣ ಕೊಡುತ್ತೇವೆಂದು ಹೇಳಿ ಪ್ರಚಾರಕ್ಕೋಸ್ಕರ ಈ ಮಂಡಳಿಯನ್ನು ಇಟ್ಟುಕೊಂಡಿದ್ದೇವೆಂದು ಸರ್ಕಾರ ಸ್ಪಷ್ಟನೆ ನೀಡಬೇಕಾಗುತ್ತದೆ. ಇಲ್ಲ, ಸರ್ಕಾರಕ್ಕೆ ಬಯಲು ಸೀಮೆ ಅಭಿವೃದ್ಧಿ ಮಾಡಬೇಕೆಂಬ ಪ್ರಾಮಾಣಿಕ ಕಾಳಜಿ ಇದ್ದರೆ, ನಾವು ಇಡೀ ಹೆಚ್ಚಿನ ಭಾಗೋಳಿಕ ಪ್ರದೇಶಕ್ಕೆ ಸೇರಿರತಕ್ಕ, ಕರ್ನಾಟಕದಲ್ಲಿ ಎಚ್.ಕೆ.ಡಿ.ಬಿಗೆ ಎಷ್ಟು ಕೊಡುತ್ತಿದ್ದಿರೋ, ಮಲೆನಾಡು ಅಭಿವೃದ್ಧಿ ಮಂಡಳಿಗೆ ಎಷ್ಟು ಹಣ ಕೊಡುತ್ತಿದ್ದೀರೋ, ಅವರಿಗೆ ಕೊಡಿ, ಇನ್ನೂ ಜಾಸ್ತಿ ಕೊಡಿ. ನಮ್ಮದೇನೂ ತಕರಾರಿಲ್ಲ. ಆದರೆ, ಅವರಿಗಿಂತ ಹೆಚ್ಚು ಹಣ ನಮಗೆ ಬೇಕಾಗಿದೆ. ಕರ್ನಾಟಕ ರಾಜ್ಯದಲ್ಲಿರುವ ಪ್ರದೇಶಗಳಲ್ಲಿ 3ನೇ 2 ಭಾಗದಷ್ಟಿರುವ ನಮಗೆ ಅಷ್ಟೂ ಹಣವನ್ನು ಕೊಡದಿದ್ದರೆ, ಅವರಿಗೇನು ಕೊಡುತ್ತಿದ್ದೀರೋ ಅಷ್ಟು ಹಣವನ್ನು ಕೊಡದಿದ್ದರೆ, ನಮ್ಮ ಬಯಲು ಸೀಮೆಯನ್ನು ಅಭಿವೃದ್ಧಿ ಮಾಡಲಿಕ್ಕೆ ಖಂಡಿತಾ ಸಾಧ್ಯವಿಲ್ಲ. ತಕ್ಷಣ ಇವತ್ತು ಸರ್ಕಾರ ಪ್ರತಿಯೊಂದು ಕ್ಷೇತ್ರಕ್ಕೂ ಕನಿಷ್ಠವೆಂದರೆ, 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡದೇ ಹೋದರೆ ನೀವು ಆ ಬಯಲು ಸೀಮೆ ಮಂಡಳಿಯನ್ನು ಇಟ್ಟುಕೊಳ್ಳಬೇಡಿ, ಅದನ್ನು ರದ್ದುಮಾಡಿ ಎಂದು ಹೇಳುತ್ತಿದ್ದೇನೆ. ಸುಮ್ಮನೆ, ಹೆಸರಿಗೆ, ಚಿತ್ರದುರ್ಗದಲ್ಲಿ ಬೋರ್ಡ್ ಇಟ್ಟುಕೊಂಡು ಅದು ಏನೂ ಕೆಲಸಕ್ಕೆ ಬಾರದಿರುವ ಬೋರ್ಡಾಗಿ, ಅದಕ್ಕೆ ಹಣ ಕೊಡದಿರುವುದು ಸಾಧುವಲ್ಲ. ನೀವು 50

ಲಕ್ಷ ರೂಪಾಯಿಗಳನ್ನಾದರೂ ಪ್ರತಿಯೊಂದು ಕ್ಷೇತ್ರಕ್ಕೆ ತಕ್ಷಣ ಬಿಡುಗಡೆ ಮಾಡಬೇಕೆಂದು ಸರ್ಕಾರವನ್ನು ನಾನು ತಮ್ಮ ಮೂಲಕ ಒತ್ತಾಯಿಸುತ್ತಿದ್ದೇನೆ.

+ ಶ್ರೀ ಡಿ.ಆರ್.ಪಾಟೀಲ (ಗದಗ್): ಕಳೆದ 3 ವರ್ಷಗಳಿಂದ ನಾವು ಈ ಪ್ರಯತ್ನ ಮಾಡುತ್ತಿದ್ದೇವೆ. ನಮಗೆ ಶ್ರೀ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ, ಶ್ರೀ ಸಿ.ಬೈರೇಗೌಡರ ಮನೆಗೆ ಊಟಕ್ಕೆ ಕರೆದಿದ್ದರು. ಆಗ ಶ್ರೀ ದೇವೇಗೌಡರು ನಿಮಗೂ 25 ಕೋಟಿ ಕೊಡೋಣವೆಂದು ಹೇಳಿ ಆಶ್ವಾಸನೆ ಕೊಟ್ಟರು. ಮುಂದೆ, ಶ್ರೀ ಜೆ.ಹೆಚ್.ಪಟೇಲ್ ಸಾಹೇಬರು ಮುಖ್ಯಮಂತ್ರಿಗಳಾದ ಮೇಲೆ ಅವರು ಹೋದವರ್ಷ ನಮ್ಮ ಮೀಟಿಂಗ್‌ಗೆ ಬಂದಿದ್ದರು. 25 ಕೋಟಿ ಕೊಡೋಣವೆಂದು ಆಶ್ವಾಸನೆ ಕೊಟ್ಟರು. ಈ ಸಾರಿ ಬಜೆಟ್ ಮಂಡನೆಯಾದಾಗ ನೋಡಿದರೆ ಯಥಾಸ್ಥಿತಿ ಮುಂದುವರೆದಿದೆ. ಜೊತೆಗೆ, ಈ ಸರ್ಕಾರದಲ್ಲಿ ಸಬಲರಿಗೆ ಬೆಂಬಲ ಹೆಚ್ಚು, ಅಬಲರಿಗೆ ಕಡಿಮೆ ಇರುವುದು ಕಾಣಿಸುತ್ತದೆ. ನಾವು ಮಲತಾಯಿ ಮಕ್ಕಳಾಗದಿದ್ದರೂ ಸಹ ನಮ್ಮನ್ನು ಆಳು ಮಕ್ಕಳಿಗಿಂತ ಹೆಚ್ಚಾಗಿ ಟ್ರೀಟ್ ಮಾಡುವ ಪ್ರಯತ್ನ ಮಾಡಬೇಡಿ. ನಿಮ್ಮ ಚೊಚ್ಚಲು ಮಕ್ಕಳು ನಾವಾಗುವುದಿಲ್ಲ. ನಿಮ್ಮ ಚೊಚ್ಚಲು ಮಕ್ಕಳು ಯಾರೆಂದರೆ ನೀರಾವರಿ ಪ್ರದೇಶದಿಂದ ಬಂದ ಜನರು. ಅವರಿಗೆ 18 1/2 ಪರ್ಸೆಂಟ್ ಬಡ್ಡಿ ಕೊಟ್ಟಾದರೂ ನೀವು ಸಾವಿರಾರು ಕೋಟಿ ರೂಪಾಯಿಗಳನ್ನು ಮೀಸಲಿಡುತ್ತೀರಿ. ನಾವು ಮಳೆಯಾಶ್ರಿತ ಕೃಷಿ ಮಾಡುವಂತಹ ಜನರು, ನಿಮ್ಮ ಆಳು ಮಕ್ಕಳಿಗೆ, ಜೀತದಾಳು ಎಂದು ನಿಮ್ಮ ಮನೆಯಲ್ಲಿರುತ್ತಾರಲ್ಲಾ, ಅವರೇ ಹೆಚ್ಚು ಸುಖವಾಗಿರುತ್ತಾರೆ. ನೀರಾವರಿ ಪ್ರದೇಶ ಹೊಂದಿರುವವರ ಮನೆಯಲ್ಲಿರುತ್ತಾರಲ್ಲಾ, ಅವರು ಬಹಳ ಸುಖವಾಗಿರುತ್ತಾರೆ. ಅವರಿಗೆ ಪ್ರತಿ ತಿಂಗಳು ಸಂಬಳ ಸಿಗುತ್ತದೆ. ನಮಗಿಲ್ಲ ಸ್ವಾಮಿ. ಮಳೆ ಬಿದ್ದರೆ ಮಾತ್ರ ನಾವೇನಾದರೂ ಉತ್ತು-ಬಿತ್ತು ಮಾಡಿದರೆ ಅನುಕೂಲ. ಈ ವರ್ಷ ಬಹಳ ಪ್ರದೇಶಗಳಲ್ಲಿ ಮಳೆಯೇ ಇಲ್ಲ. ನಮ್ಮ ಪರಿಸ್ಥಿತಿ ಜೀತದಾಳಿಗಿಂತ ಕನಿಷ್ಠವಾಗಿದೆ. ಇವರಿಗೆ ನೀವು ಯಾವುದೇ ಆದ್ಯತೆಯನ್ನು ಕೊಟ್ಟಿಲ್ಲ. ಈಗ ಶ್ರೀ ಶ್ರೀರಾಂರೆಡ್ಡಿಯವರು ಹೇಳಿದರು ನಾವು 77 ಮಂದಿ ಶಾಸಕರು ಪ್ರತಿನಿಧಿಸುವಂತಹ ಕ್ಷೇತ್ರ ಇದೆಂದು. ಸುಮಾರು ಪ್ರತಿಶತ 60ಕ್ಕೂ ಹೆಚ್ಚು ಜಮೀನನ್ನು ಉಳುವಂತಹ ಜನ ಇವರು. ನೀರಾವರಿಯನ್ನು ಎಷ್ಟೇ ಮಾಡುತ್ತೇವೆಂದರೂ 32 ಪರ್ಸೆಂಟ್ ಮಾಡುತ್ತೀರಿ. ಅವರಿಗೆ ವರ್ಷಕ್ಕೆ ಒಂದೂವರೆ ಸಾವಿರ ಕೋಟಿ ಇಡುತ್ತೀರಿ. ನಮಗೆ 68 ಪರ್ಸೆಂಟ್ ಇರುವವರಿಗೆ 10 ಕೋಟಿ ರೂಪಾಯಿ ಇಡುತ್ತೀರಿ. ನಮಗೂ ಅವರಿಗೂ ಸಮ ಬೇಡ. ಅವರ ಅರ್ಧ ಬೇಡ, ಅವರ ಕಾಲು ಭಾಗವೂ ನಮಗೆ ಬೇಡವೇ? ನಾವು ಸರಿಯಾಗಿ ಮಾಡಿಕೊಂಡರೆ ನಮ್ಮಲ್ಲಿ ಸಾಯಿಲ್ ಕನಸರ್‌ವೇಷನ್ ಸರಿಯಾಗಿ ಆದರೆ, ನಿಮಗೆ ನೀರಾವರಿ ಪ್ರದೇಶದಲ್ಲಿರುವ ಜನರಿಗೆ ನೀರು ಸಿಗುತ್ತದೆ. ನಿಮ್ಮ ಡ್ಯಾಮ್‌ಗೆ ಹೂಳು ಬೀಳುವುದಿಲ್ಲ. ನಮಗೆ ಅನುಕೂಲ ಮಾಡುವುದರಿಂದ, ನಿಮಗೂ ಅನುಕೂಲವಾಗುತ್ತದೆ. ನಮ್ಮ ಹೊಟ್ಟೆ ಮೇಲೆ ಹೊಡೆದು ನೀವೇನಾದರೂ ಹೊಟ್ಟೆ

ತುಂಬಿಕೊಳ್ಳುತ್ತೇವೆಂದು ಹೇಳಿದರೆ, ಇನ್ನು 10-15 ವರ್ಷ ಆಮೇಲೆ ನೀವು ನಮ್ಮ ಜಾಗಕ್ಕೆ ಬರುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ದಯವಿಟ್ಟು ಅದಕ್ಕೆ ಇನ್ನು ಮೇಲೆ ನಾವು ಏನೂ ಆಶ್ವಾಸನೆಯನ್ನು ಕೇಳುವುದಕ್ಕೆ ಹೋಗುವುದಿಲ್ಲ, ಯಾವ ಭರವಸೆಯನ್ನೂ ನಾವು ನಂಬಲಿಕ್ಕೆ ಹೋಗುವುದಿಲ್ಲ. ನಾವು ನಿನ್ನೆ, ಮೊನ್ನೆ ಬಯಲು ಸೀಮೆ ಪ್ರದೇಶದ ಜನ ಇವತ್ತು ನಾವೆಲ್ಲರೂ ಕೂಡ ಪಕ್ಷಭೇದ ಮರೆತು ಧರಣಿ ಮಾಡತಕ್ಕದ್ದು. ಈ ಬಜೆಟ್‌ನೊಳಗೆ ಹಣವೇನು ಕೊಡುತ್ತೀರಿ ಎಂಬುವ ಸ್ಪಷ್ಟ ಭರವಸೆ ಕೊಡುವುದರ ಜೊತೆಗೆ ಅದು ಕಾರ್ಯಾನುಷ್ಠಾನವಾಗುವಂತೆ ಕನ್‌ವಿನ್ಸ್ ಮಾಡುವ ಬಗ್ಗೆ ಶ್ರೀ ಸಿದ್ಧರಾಮಯ್ಯನವರು ನಮಗೆ ಭರವಸೆ ಕೊಡಬೇಕು. ಈ ರೀತಿ ಮಾಡುತ್ತೇನೆ, ಅವರ ಜೊತೆ ಮಾತನಾಡಿ ಮಾಡಿಸುತ್ತೇನೆಂಬ ಜವಾಬ್ದಾರಿಯನ್ನು ಬಯಲು ಸೀಮೆ ಪ್ರದೇಶದಿಂದ ಬಂದಂಥ ಸ್ಪೀಕರ್‌ರವರು, ಶ್ರೀ ಸಿ.ಬೈರೇಗೌಡರು ಜವಾಬ್ದಾರಿಯನ್ನು ಹೊತ್ತರೆ ನಾವು ಏನಾದರೂ ಹಿಂದೆ ಬರುತ್ತೇವೆ. ಇಲ್ಲ ಅಂದರೆ ನಮ್ಮ ಜೊತೆಗೆ ನೀವು ಬರಬೇಕು. ಬಯಲು ಪ್ರದೇಶ ಪ್ರತಿನಿಧಿಸುವಂತಹ ಮಂತ್ರಿಗಳು, ಬಯಲು ಪ್ರದೇಶ ಪ್ರತಿನಿಧಿಸುವಂತಹ ಅಧ್ಯಕ್ಷರು, ಬಯಲು ಪ್ರದೇಶದ ಶಾಸಕರ ಜೊತೆ ನೀವು ಇರಬೇಕು. ನಾವು ತೇಲಿದರೆ ನೀವೂ ತೇಲುವುದು, ನಾವು ಮುಳುಗಿದರೆ ನೀವು ಮುಳುಗುವುದು, ಇವರ ಮೇಲೆ ನಾವು ಯಾವ ರೀತಿ ಒತ್ತಾಯ ತರಬೇಕೋ ತಿಳಿಯದು. ಎರಡು ವರ್ಷ ಕಾದು ನೋಡಿದ್ದೇವೆ ಸ್ವಾಮಿ, ಇನ್ನು ಮಾತ್ರ ನಾವು ಕಾದು ನೋಡುವುದಿಲ್ಲ. ನಾವೆಲ್ಲರೂ ಪಕ್ಷ ಭೇದ ಮರೆತು ಒಗ್ಗಟ್ಟಾಗಿ ಇದಕ್ಕೆ ಪ್ರತಿರೋಧ ಮಾಡಬೇಕು ಎನ್ನುವಂತಹ ಒಂದು ನಿರ್ಣಯಕ್ಕೆ ನಾವು ಬಂದಿದ್ದೇವೆ. ನಿಮ್ಮ ಯಾವ ಕಾರ್ಯಕಲಾಪವನ್ನು ನಾವು ನಡೆಸಿಕೊಡುವುದಿಲ್ಲ. ಆದ್ದರಿಂದ ತಾವು ಆದಷ್ಟು ಬೇಗನೇ ಆ ಪರಿಸ್ಥಿತಿಗೆ ನಾವು ಹೋಗುವುದಕ್ಕಿಂತ ಪೂರ್ವದಲ್ಲಿಯೇ ಒಂದು ನಿರ್ದಿಷ್ಟವಾದ ಆಶ್ವಾಸನೆ ಮಾನ್ಯ ಹಣಕಾಸಿನ ಸಚಿವರಿಂದ ಬರಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

+ ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೇ, ನಾನು ಸಿದ್ಧರಾಮಗೊಂಡಿ ನೋಡಿದ್ದೇನೆ. ಶ್ರೀನಿವಾಸಪುರ ನೋಡಿದ್ದೇನೆ, ವೇಮಗಲ್ ನೋಡಿದ್ದೇನೆ; ಚಿಕ್ಕನಾಯಕನಹಳ್ಳಿಯಲ್ಲಿ ಬದುಕಿದ್ದೇನೆ. ಯಾವುದೇ ವ್ಯತ್ಯಾಸ ನಮ್ಮ ನಾಲ್ಕು ಜನರ ಮಧ್ಯ ಇಲ್ಲ. ಮಾನ್ಯ ಸಿದ್ಧರಾಮಯ್ಯನವರ ಕೃಪೆ ಏಕೆ ನಮ್ಮ ಕಡೆ ಬಂದಿಲ್ಲ ಅಥವಾ ನಿಮ್ಮದು ಅನುಕಂಪ ಏಕೆ ಬಂದಿಲ್ಲ, ಅಥವಾ ಭೈರೇಗೌಡರ ಕಾರ್ಯಕ್ರಮಗಳು ಏಕೆ ನಮಗೆ ಬಂದಿಲ್ಲ ಎನ್ನುವುದು ಅರ್ಥವಾಗುತ್ತಿಲ್ಲ. ಮಾನ್ಯ ಸಿದ್ಧರಾಮಯ್ಯನವರು ಏನೋ ಮಲೆನಾಡಿನಲ್ಲಿ ಸುಭಿಕ್ಷವಾದ ಜಾಗದಿಂದ ಏನಾದರೂ ಬಂದಿದ್ದರೆ ಅವರಿಗೆ ಅರ್ಥವಾಗಿಲ್ಲ ಎಂದು ನಾನು ಭಾಷಣ ಮಾಡಬಹುದಾಗಿತ್ತು, ನಮಗಿಂತ ಕಷ್ಟವಾಗಿದೆ ಅವರು ಇರುವ ಊರು. ಪ್ರಶ್ನೆ ಏನಾಗಿದೆ ಅಧ್ಯಕ್ಷರೇ ಈಗ ಮಲೆನಾಡು ಅಭಿವೃದ್ಧಿ ಮಂಡಲಿಗೆ ಹಣ ಕೊಟ್ಟರೆ, ರಸ್ತೆಗಳ ನಿರ್ವಹಣೆಗೆ ಹೋಗುತ್ತದೆ. ನಾವು ದುಡ್ಡು ಕೇಳುತ್ತಿರುವುದು ನಮ್ಮ ಕೆರೆ ಹೂಳು ತೆಗೆಯಬೇಕಾಗಿದೆ, ನಾವು ರಾಷ್ಟ್ರೀಯ ಅಭಿವೃದ್ಧಿ

ಜಲಾನಯನ ಪ್ರದೇಶದ ಕೆಲಸಗಳು ಮಾಡಬೇಕಾಗಿದೆ, ಸ್ವಾಮಿ ಇವತ್ತು ತುಮಕೂರು ಜಿಲ್ಲೆಯಲ್ಲಿ 33 ಪರ್ಸೆಂಟ್ ಇದ್ದ ಕಾಡು 8 ಪರ್ಸೆಂಟ್‌ಗೆ ಇಳಿದಿದೆ. ರಾಜಾಸ್ಥಾನ ಬಿಟ್ಟರೆ ಅತ್ಯಂತ ಭೀಕರವಾದ ಬರ ಇರುವುದು ನೆಲಮಂಗಲದಲ್ಲಿ. ಇಲ್ಲಿ ಅತ್ಯಂತ ಭೀಕರವಾದ ಬರ ಪರಿಸ್ಥಿತಿ ನಿರ್ಮಾಣವಾಗಿದೆ. ಇಲ್ಲಿ ನೀವು ಏನು ಓಡಾಡುತ್ತೀರಿ ಸ್ವಲ್ಪ ತಂಪಾಗಿ ಓಡಾಡಬೇಕು. ಮಂತ್ರಿಗಳು ಅವರು ಇವರು ಓಡಾಡುವಾಗ ಒಂದಷ್ಟು ಮರಗಳು ಇದ್ದರೆ ವಾತಾವರಣ ತಣ್ಣಗೆ ಇದ್ದರೆ ಏನೋ ಕರ್ನಾಟಕ ಸುಖವಾಗಿದೆ ಎಂದು ಓಡಾಡುವುದಕ್ಕೆ ಅನುಕೂಲವಾಗುತ್ತದೆ. ಈ ಅರಣ್ಯ ಕಾರ್ಯಕ್ರಮ ಮಾಡುವುದಕ್ಕೆ ಡಿಸಿಲ್ಪ್ ಮಾಡುವುದಕ್ಕೆ ನಮ್ಮ ಜಲಾನಯನ ಪ್ರದೇಶದ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ತಾವು ಆದ್ಯತೆ ಕೊಡಬೇಕಾಗುತ್ತದೆ. ಮೊದಲು ಒಣಭೂಮಿ ಅಭಿವೃದ್ಧಿ ಎಂದು ಮಾಡಿದ್ದರು. ಮಾನ್ಯ ಭೈರೇಗೌಡರಿಗೆ ಗೊತ್ತು, ಹೈದ್ರಾಬಾದ್ ಕರ್ನಾಟಕ ಮಂಡಲಿ ಮಾಡಿದಾಗ ನಾವೆಲ್ಲಾ ಇಲ್ಲಿ ಕುಳಿತು ಕೇಳಿದೆವು, ಆಗ ನಮ್ಮದು ಒಂದು ಬೋರ್ಡ್ ಆಗಬೇಕು ಬಯಲುಸೀಮೆ ಅಭಿವೃದ್ಧಿ ಬೋರ್ಡ್ ಎಂದು. ಅವರಿಗೆ ಅಡುಗೆ ಮಾಡಿ ಇಟ್ಟಿರಿ, ನಮಗೆ ಬೊಟ್ಟು ಇಟ್ಟಿರಿ, ಹೋಗಿ ಬರುತ್ತೀಯೆನಕ್ಕ ಕುಂಕುಮ ಇಟ್ಟುಕೊಂಡು ಹೋಗು ಎಂದು. ಬರೀ ಕುಂಕುಮಕೋಸ್ಕರ ನಾವು ಇಷ್ಟೆಲ್ಲಾ ಹೋರಾಟ ಮಾಡಬೇಕಾಗಿತ್ತೇ ಮಾನ್ಯ ಭೈರೇಗೌಡರೇ. ಇಲ್ಲಿ ಕುಳಿತುಕೊಂಡಾಗ ತಾವು ಭಾರಿ ಮಾತನಾಡಿದ್ದೀರಿ ಬಯಲು ಸೀಮೆ ಅಭಿವೃದ್ಧಿ ಮಂಡಲಿ ಮಾಡಬೇಕು ಎಂದು ಹೇಳಿ. ಈಗ ಅಲ್ಲಿ ಕುಳಿತಾಗ ಏನಾಯಿತು ನಿಮ್ಮ ಮನೋಸ್ಥೈರ್ಯ ಎಂಬುದು ಅರ್ಥವಾಗಿಲ್ಲ. ಬೊಟ್ಟು ಇಟ್ಟು ದೊರೆ ಮುಟ್ಟಿ ನಮ್ಮನ್ನು ಅಲ್ಲಿ ನಿಲ್ಲಿಸಿ ಹೋಗಿಬಿಟ್ಟಿದ್ದಾರೆ. ನಾವು ಕಾಯುತ್ತಿದ್ದೇವೆ ದೊರೆ ಏನಾದರೂ ವಾಪಸ್ಸು ಬರುತ್ತಾರೋ ಏನೋ ನಮ್ಮ ಜೊತೆ ಸಂಸಾರ ಮಾಡುತ್ತಾರೋ ಏನೋ ನಮಗೂ ಏನಾದರೂ ಊಟ ಬಟ್ಟೆ ಕೊಡುತ್ತಾರೋ ಎಂದು. ಮುಟ್ಟಿಹೋಗಿ ಬಿಟ್ಟಿರಿ ನೀವು. ಈ ಮುಟ್ಟಿಹೋಗುವ ಕೆಲಸವನ್ನು ತಾವು ಮಾಡಬಾರದು. ನಮಗೆ ಏನಾದರೂ ಸ್ವಲ್ಪ ಹೊಟ್ಟೆಗೆ ಕೊಡಬೇಕು. ನಾವೀಗ ಭಾರಿ ಶೋಷಣೆಗೆ ಒಳಗಾಗಿದ್ದೇವೆ. ಕರ್ನಾಟಕದ ಪ್ರಗತಿ ಅಂದರೆ ಮೂರನೇ ಒಂದು ಭಾಗ 75 ಜನ ಶಾಸಕರ ಭಾಗ ಪ್ರಗತಿಯಾಗದೇ ನೀವು ಯಾವುದೇ ಅಂಕಿಅಂಶಗಳನ್ನು ಬರೆಸಿದರೂ ಕರ್ನಾಟಕ ಅಭಿವೃದ್ಧಿ ಆದಂತೆ ಆಗುವುದಿಲ್ಲ. ಮತ್ತು ಅತ್ಯಂತ ಹೆಚ್ಚು ಜನಸಂಖ್ಯೆ ಇರುವಂತಹ ಜಾಗ ನಮ್ಮದು. ಅತ್ಯಂತ ಜಮೀನನ್ನು ಒತ್ತುವರಿ ಮಾಡಿ ಜಮೀನನ್ನು ಉಳುಮೆ ಮಾಡಿ ಇದ್ದ ಕಾಡೆಲ್ಲಾ ಕಡಿಮೆ ಮಾಡಿ ಇವತ್ತು ಏನು ದನಕರುಗಳು ಮೇವಿಗೆ ಗ್ರೇಸಿಂಗ್ ಲ್ಯಾಂಡ್ ಇಲ್ಲದಂತೆ ಆಗಿರುವ ಜಾಗ ಇದು. ಈ ಎಲ್ಲಾ ದೃಷ್ಟಿಯಲ್ಲಿ ನಾವು ನಮ್ಮ ಭಾಗದ ಅಭಿವೃದ್ಧಿ ಕೇಳುತ್ತಿದ್ದೇವೆ. ನೀವು ಆ ಕಡೆ ನಿರ್ವಹಣೆಗೆ ಮಾಡುತ್ತಿದ್ದೀರಿ. ನಮ್ಮ ಊರಿನಲ್ಲಿ ರಸ್ತೆ ಚೆನ್ನಾಗಿಲ್ಲ ಸ್ವಾಮಿ ಅಂದರೆ ಚಿಕ್ಕಮಂಗಳೂರಿಗೆ ಹೋಗಿ ಬರುವ ರಸ್ತೆಚೆನ್ನಾಗಿಲ್ಲ ಆ ರಸ್ತೆ ಮಾಡಿ ಎನ್ನುವ ಪರಿಸ್ಥಿತಿ ಆಗಿದೆ. ಇವೆರಡರಲ್ಲಿ ತಾವು ಯಾವುದಕ್ಕೆ ಆದ್ಯತೆ ಕೊಡಬೇಕು ಎನ್ನುವುದನ್ನು ಯೋಚನೆಮಾಡಬೇಕು, ಅವರಿಗೆ ಕೊಡುವುದಕ್ಕೆ ನಮ್ಮದು ಏನೂ ಇಲ್ಲ. ನಮ್ಮದು

ಏನಾದರೂ ಅಭಿವೃದ್ಧಿ ಆಗಿ ಒಂದು 20 ಪರ್ಸೆಂಟ್ 30 ಪರ್ಸೆಂಟ್ ಕಾಡು ಏನಾದರೂ ಬೆಳೆದರೆ ನಿಮ್ಮ ಮಲೆನಾಡು ಅಷ್ಟೆ ಒಳ್ಳೆಯ ಜಾಗ ಆಗುತ್ತದೆ ಮಳೆ ಬರಬಹುದು ಎಂದು ಭಾವಿಸಿದ್ದೇವೆ. ಈಗ 10 ವರ್ಷದಿಂದ ನಮಗೆ ಸರಿಯಾಗಿ ಮಳೆ ಆಗಿಲ್ಲ. ಈ ಕಡೆ ಕಾರ್ಯಕ್ರಮಗಳು ಇಲ್ಲ ನಮಗೆ, ಆ ಕಡೆ ನಿಮ್ಮ ಸೌಲಭ್ಯ ಬೇಡ ನಾವು ಹೊಲ ಗದ್ದೆ ಗೇಯಿಕೊಂಡು ಇರುತ್ತೇವೆ ಅಂದರೆ ಮಳೆ ಬರುವುದಿಲ್ಲ. ಈ ಸ್ಥಿತಿಯಲ್ಲಿದ್ದೇವೆ. ಈಗ ಕೊಟ್ಟಿರುವುದರಲ್ಲಿ ಕನಿಷ್ಟ 10 ಪರ್ಸೆಂಟ್ ಜಾಸ್ತಿ ಮಾಡಬೇಕು ಇಲ್ಲವಾದರೆ ಡಿ.ಆರ್.ಪಾಟೀಲ್ ಹೇಳಿದ ಕಾರ್ಯಕ್ರಮ ಹಮ್ಮಿಕೊಳ್ಳುವುದು ಅನಿವಾರ್ಯವಾಗುತ್ತದೆಂದು ಹೇಳುತ್ತೇನೆ.

ಶ್ರೀ ಆರ್.ಜಿ.ವೆಂಕಟಾಚಲಯ್ಯ: ಮಾನ್ಯ ಅಧ್ಯಕ್ಷರೇ, ಮಾನ್ಯ ಭೈರೇಗೌಡರು ಚಿತ್ರದುರ್ಗದಲ್ಲಿ ಒಂದು ಮೀಟಿಂಗ್ ಕರೆದಿದ್ದರು. ನಾವು ಶಾಸಕರೆಲ್ಲರೂ ಅವರ ಮೇಲೆ ಬಿದ್ದೆವು. ಏನು 25 ಲಕ್ಷ ರೂ.ಕೊಟ್ಟು ಕಡೆಗೆ 2 ಲಕ್ಷಕ್ಕೆ ಇಳಿಸಿದ್ದೀರಿ ಎಂದು ಕೇಳಿದ್ದಕ್ಕೆ ನಾನೇನು ಮಾಡುವುದಕ್ಕೆ ಆಗುತ್ತದೆ ನಿಮ್ಮ ಸರ್ಕಾರದಲ್ಲಿ ಗಲಾಟೆಮಾಡಿ ಹಣ ತೆಗೆದುಕೊಳ್ಳಿ ಎಂದು ಹೇಳಿದರು. ಆದ್ದರಿಂದ ನನಗನ್ನಿಸುತ್ತದೆ ಬಯಲುಸೀಮೆಯಲ್ಲಿ ಮಂತ್ರಿಗಳು ಜಾಸ್ತಿ ಇದ್ದಾರೆ ಏನು ಬೇಕಾದರೂ ಮಾಡುತ್ತಾರೆ ಎನ್ನುವ ಒಂದು ಅಭಿಪ್ರಾಯ ಸರ್ಕಾರಕ್ಕೆ ಇದೆಯೇ?

ಶ್ರೀ ಎಚ್.ಎನ್.ನಂಜೇಗೌಡ: ಭೈರೇಗೌಡರು ಸರ್ಕಾರ ತೆಗೆಯಿರಿ ಎಂದು ಹೇಳಿದ್ದಾರಾ?

ಅಧ್ಯಕ್ಷರು: ಸರ್ಕಾರ ತೆಗೆಯಲು ನೀವು ಬಿಟ್ಟುಬಿಡುತ್ತೀರೋ? ವಾಟಾಳ್‌ರವರು ನೀವು.

ಶ್ರೀ ಆರ್.ಜಿ.ವೆಂಕಟಾಚಲಯ್ಯ: ಮಾನ್ಯ ಅಧ್ಯಕ್ಷರೇ, ಭೈರೇಗೌಡರು ನಮ್ಮ ಜೊತೆಗೆ ಇದ್ದಾರೆ. ಅದರಲ್ಲಿ ಏನೂ ಅನುಮಾನ ಇಲ್ಲ. ಏನೋ ಬಯಲುಸೀಮೆ ವಿಷಯ ಬಂದಾಗ ಮಾತನಾಡುತ್ತೇವೆ. ಸರ್ಕಾರ ಒಂದು ಭರವಸೆ ಕೊಡುತ್ತದೆ ಸುಮ್ಮನೆ ಆಗುತ್ತೇವೆ. ಮಾನ್ಯ ದೇವೇಗೌಡರು ಇದ್ದಾಗ 25 ಕೋಟಿ ಕೊಡುತ್ತೇನೆ ಹೋಗ್ರಿ ಏಕೆ ಗಲಾಟೆ ಮಾಡುತ್ತೀರಿ ಅಂದರು. 25 ಕೋಟಿ ಇಲ್ಲ 5 ಕೋಟಿಗೆ ನಿಲ್ಲಿಸಿಬಿಟ್ಟರು. ಪಟೇಲರನ್ನು ಒಂದು ಸಲ ಭೇಟಿ ಮಾಡಿದೆವು ಅವರೂ ಸಹ ಅದೇ ತರಹ ಕೊಡುತ್ತೀವಾ ಕೆ. ನಾವು ಶಾಸಕರಾದವರು ಹಳ್ಳಿಗೆ ಹೋಗಿ ಹೇಳುತ್ತೇವೆ ಬಯಲುಸೀಮೆ ಅಭಿವೃದ್ಧಿ ಮಂಡಳಿಯಿಂದ ಈ ಕೆರೆ ತೆಗೆದುಕೊಳ್ಳಿ ಆ ಕೆರೆ ತೆಗೆದುಕೊಳ್ಳಿ ಎಂದು. ಇಲ್ಲಿ ಹೂಳು ಎತ್ತುತ್ತಿದ್ದೇವೆ ಅಲ್ಲಿ ಹೂಳು ಎತ್ತುತ್ತಿದ್ದೇವೆ ಎಂದು; ಇಲ್ಲಿ ಕಾಡು ಬೆಳೆಸುತ್ತೇವೆ ಎಂದು ನಾವು ಭರವಸೆ ಕೊಡುತ್ತೇವೆ. ಆಮೇಲೆ ನಾವು ಪುನಃ ಹಳ್ಳಿಗಳಿಗೆ ಹೋದಾಗ ಉಗಿಸಿಕೊಳ್ಳುತ್ತೇವೆ ಜನಗಳಿಂದ. ಆದ್ದರಿಂದ ಸರ್ಕಾರ ನಿರ್ದಿಷ್ಟವಾದ ಒಂದು ಉತ್ತರ ಕೊಡಲೇಬೇಕು. ಇಲ್ಲದೇ ಹೋದರೆ ಈ ಬಯಲುಸೀಮೆ ಅಭಿವೃದ್ಧಿ ಮಂಡಳಿಯನ್ನು

ತೆಗೆದುಬಿಡಿ. 3-4 ಲಕ್ಷ ರೂಪಾಯಿಗಳಲ್ಲಿ ಒಂದು ಕ್ಷೇತ್ರದಲ್ಲಿ ಕೆಲಸ ಮಾಡಿಸಲು ನಮಗೂ ಮರ್ಯಾದೆ ಇಲ್ಲ. ಇದರ ಬಗ್ಗೆ ಸರ್ಕಾರ ಒಂದು ನಿರ್ದಿಷ್ಟವಾದ ಉತ್ತರವನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎ.ರವೀಂದ್ರನಾಥ್: ಮಾನ್ಯ ಅಧ್ಯಕ್ಷರೇ, ನನ್ನದು ಬಯಲುಸೀಮೆಗೆ ಒಳಪಟ್ಟಿರತಕ್ಕಂಥಾದ್ದು ನನ್ನದು ಮಲೆನಾಡು ಅಭಿವೃದ್ಧಿ ಆಗಲಿ, ಹೈದ್ರಾಬಾದ್ ಅಭಿವೃದ್ಧಿ ಆಗಲಿ ಯಾವುದರಲ್ಲೂ ನಮ್ಮ ದಾವಣಗೆರೆ ತಾಲ್ಲೂಕನ್ನು ಸೇರಿಸಿಲ್ಲ. ನಮ್ಮ ಭಾಗದವರನ್ನೇ ಬಯಲುಸೀಮೆ ಪ್ರದೇಶದ ಮಂಡಲಿ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಹಾಗಾಗಿ ನನ್ನ ಸ್ಥಿತಿ ಏನಾಗಿದೆ ಅಂದರೆ ಬಯಲುಸೀಮೆ ಪ್ರದೇಶಕ್ಕೆ ಸೇರಿಸಿ ನಮ್ಮ ಅಧ್ಯಕ್ಷರ ಮುಖಾಂತರ ಕೆಲಸ ಮಾಡಿಸಬೇಕೆಂದು ನಾನು ಕೇಳುತ್ತೇನೆ.

ಶ್ರೀ ಸಿ.ಚನ್ನಿಗಪ್ಪ: ಮಾನ್ಯ ಅಧ್ಯಕ್ಷರೇ, ನಮ್ಮ ತುಮಕೂರು ಜಿಲ್ಲೆಯಲ್ಲಿ 70 ಪರ್ಸೆಂಟ್ ಬಯಲುಸೀಮೆ ಪ್ರದೇಶ ಸೇರಿದೆ. ಶಿರಾ ತಾಲ್ಲೂಕು, ಬಾಗಲೂರು ತಾಲ್ಲೂಕು, ಕೊಡುಗೆ ತಾಲ್ಲೂಕು, ಮಧುಗಿರಿ, ಚಿಕ್ಕನಾಯಕನಹಳ್ಳಿ, ಗುಬ್ಬಿ ತ್ಲಾಲೂಕುಗಳಲ್ಲಿ ನೀರಾವರಿ ಪ್ರದೇಶ ಬಹಳ ಕಡಿಮೆ ಇದೆ. ಯಾವುದೇ ನೀರಾವರಿ ಸೌಕರ್ಯ ಅಲ್ಲಿ ಇಲ್ಲ. ಬಯಲುಸೀಮೆ ಅಭಿವೃದ್ಧಿ ಮಂಡಳಿ ಎಂದು ಏನು ಸರ್ಕಾರ ಮಾಡಿದೆ ಅದಕ್ಕೆ ಸರ್ಕಾರ ಹೆಚ್ಚು ಹಣ ಬಿಡುಗಡೆ ಮಾಡಿಕೊಡಬೇಕು. ಮಾನ್ಯ ಭೈರೇಗೌಡರು ಹಾಕಿಕೊಂಡಿರುವ ಕಾರ್ಯಕ್ರಮಗಳಾದ ಡಿ.ಎ.ಪಿ.ಪಿ. ಕಾರ್ಯಕ್ರಮಕ್ಕೆ ಹೆಚ್ಚು ಹಣವನ್ನು ಕೊಟ್ಟು ಸಹಾಯ ಮಾಡಬೇಕು. ಪಾವಗಡ ಮತ್ತು ಮಧುಗಿರಿ ತಾಲ್ಲೂಕುಗಳಲ್ಲಿ ಮಳೆ ಇಲ್ಲ. ಈಗ ಸರ್ಕಾರ ಏನು 10 ಕೋಟಿ ರೂಪಾಯಿಗಳನ್ನು ಬಯಲುಸೀಮೆ ಅಭಿವೃದ್ಧಿ ಮಂಡಲಿಗೆ ಕೊಟ್ಟಿದೆ ಅದು ಸಾಲದು ಅದಕ್ಕಿಂತ ಹೆಚ್ಚು ಹಣ ಕೊಡಬೇಕು. ಮಾನ್ಯ ಹಣಕಾಸಿನ ಸಚಿವರಾದ ಸಿದ್ದರಾಮಯ್ಯನವರು, ಭೈರೇಗೌಡರು ಹೆಚ್ಚು ಕಾಳಜಿ ವಹಿಸಿ ಬಡರೈತರಿಗೆ ಹೆಚ್ಚು ಹಣ ಬಿಡುಗಡೆ ಮಾಡಿಕೊಟ್ಟು ಅಲ್ಲಿರುವ ಜನರಿಗೆ ಉದ್ಯೋಗ ಒದಗಿಸುವ ಕಾರ್ಯಕ್ರಮ ಹಾಕಿಕೊಡಬೇಕು. ಈ ಪ್ರದೇಶದ ಜನರಿಗೆ ಸರ್ಕಾರ ಉದ್ಯೋಗಗಳಲ್ಲಿ ಪರ್ಸೆಂಟೇಜ್ ಕೊಡಬೇಕೆಂದು ನಾನು ಕೇಳುತ್ತೇನೆ. ಮಾನ್ಯ ಭೈರೇಗೌಡರು ಹೂಳು ತೆಗೆಯುವ ಕಾರ್ಯಕ್ರಮವನ್ನು ಬಯಲುಸೀಮೆ ಅಭಿವೃದ್ಧಿ ಮಂಡಳಿಯಿಂದ ಹಾಕಿಕೊಂಡು ಹಣ ಬಿಡುಗಡೆ ಮಾಡುತ್ತಿದ್ದಾರೆ. ಅದು ಕೇವಲ 2-3 ಲಕ್ಷ ಮಾತ್ರ. ಈ ಹಣದಲ್ಲಿ ನಾವು ಯಾವುದೇ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ಇನ್ನೂ ಹೆಚ್ಚು ಹಣ ಕೊಡಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಬಿ.ಚಂದ್ರಣ್ಣ: ಮಾನ್ಯ ಅಧ್ಯಕ್ಷರೇ, ಬಯಲುಸೀಮೆ ಅಭಿವೃದ್ಧಿ ಮಂಡಲಿ ಎಂದು ಸ್ಥಾಪನೆ ಮಾಡಿದ್ದಾರೆ ಅಷ್ಟೇ. ಈ ಹಿಂದೆ ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ 25 ಕೋಟಿ ಕೊಡುತ್ತೇನೆಂದು ಹೇಳಿದ್ದರು. ಆಮೇಲೆ ಬಂದ

ಪಟೇಲ್ ಅವರೂ ಸಹ 25 ಕೋಟಿ ಕೊಡುತ್ತೇನೆಂದು ಹೇಳಿದರು.

ಅಧ್ಯಕ್ಷರು: ಭೈರೇಗೌಡರನ್ನು ಯಾರೂ ಹೊಗಳಬೇಡಿ, ಅವರು ಇದ್ದೇ ಇದ್ದಾರೆ. ಸಿದ್ದರಾಮಯ್ಯನವರ ಬಗ್ಗೆ ಒಳ್ಳೆಯ ಮಾತು ಹೇಳಿ. ಅವರು ತಾನೇ ಹಣ ಕೊಡುವವರು.

ಶ್ರೀ ಬಿ.ಚಂದ್ರಣ್ಣ: ಮಾನ್ಯ ಅಧ್ಯಕ್ಷರೇ, ವಿಶೇಷವಾಗಿ ಕೋಲಾರ, ಬೆಂಗಳೂರು ಗ್ರಾಮಾಂತರ ದೊಡ್ಡಬಳ್ಳಾಪುರ ಸಬ್‌ಡಿವಿಜನ್‌ನಲ್ಲಿ ಬರತಕ್ಕಂಥ ಭಾಗಗಳು. ಇವತ್ತು ವಿಶೇಷವಾಗಿ 75 ತಾಲ್ಲೂಕುಗಳಲ್ಲಿ ಬರ ನಮ್ಮನ್ನು ಕಾಡುತ್ತಿದೆ. ತಾವು ಬೇರೆ ಬೇರೆ ಮಂಡಲಿಗಳಿಗೆ ಏನು ಹಣ ಬಿಡುಗಡೆ ಮಾಡುತ್ತೀರಿ ಅದಕ್ಕಿಂತ ಹೆಚ್ಚು ಹಣ ನಮಗೆ ಕೊಡಬೇಕಾಗುತ್ತದೆ. ನಮಗೆ ನೀರಾವರಿ ಇಲ್ಲ. ನಮ್ಮ ಪಕ್ಷದ ಸರ್ಕಾರ ಬಂದ ತಕ್ಷಣ ಬಯಲು ಸೀಮೆ ಅಭಿವೃದ್ಧಿಗಾಗಿ ಹೆಚ್ಚಿನ ಹಣವನ್ನು ಕೊಡುವ ಬಗ್ಗೆ ಪ್ರಯತ್ನ ಮಾಡಲಾಗುತ್ತದೆಂದು ನಾವು ಜನತೆಗೆ ಆಶ್ವಾಸನೆ ಕೊಟ್ಟಿದ್ದೇವೆ. ಮಾನ್ಯ ಭೈರೇಗೌಡರು, ಈ ಬಗ್ಗೆ ಒತ್ತಾಯ ಮಾಡಿ ಕಾರ್ಯಕ್ರಮಗಳನ್ನು ಜಾರಿ ಮಾಡಿಸಿರುವುದಕ್ಕಾಗಿ ನಾವು ಅದನ್ನು ಸ್ವಾಗತ ಮಾಡುತ್ತೇವೆ. ಹೆಚ್ಚು ಹಣ ಕೊಡುವ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳಾಗಿರುವ ಸಿದ್ಧರಾಮಯ್ಯನವರು ಮನಸ್ಸು ಮಾಡಬೇಕು. ಒಂದು ಪಕ್ಷ ಹಣವನ್ನು ಕೊಡದೇ ಹೋದರೆ ಬಯಲು ಸೀಮೆಯಲ್ಲಿ ಬರುವ 75 ಶಾಸಕರುಗಳೆಲ್ಲಾ ಒಟ್ಟಾಗಿ ಸೇರಿ ಪಕ್ಷಾತೀತವಾಗಿ ಧರಣಿ ಕುಳಿತುಕೊಂಡು ಕೆಲಸ ಮಾಡುತ್ತೇವೆ ಎನ್ನುವ ಎಚ್ಚರಿಕೆಯನ್ನು ತಮ್ಮ ಮೂಲಕ ಸರ್ಕಾರಕ್ಕೆ ಕೊಡುವುದರ ಮೂಲಕ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಆರ್.ಶ್ರೀನಿವಾಸ್ (ಮುಳುಬಾಗಿಲು): ಸನ್ಮಾನ್ಯ ಸಭಾಧ್ಯಕ್ಷರೆ, ರಾಜ್ಯದಲ್ಲಿ ನೀರಾವರಿ ಬಗ್ಗೆ ಎರಡು ಘಟಕಗಳನ್ನು ಮಾಡಲಾಗಿದೆ. ಅದರಲ್ಲಿ ತುಂಗಭದ್ರಾ, ಮಲಪ್ರಭಾ, ಕಾವೇರಿ ಜಲಾನಯನ, ಕೃಷ್ಣ ಮೇಲ್ದಂಡೆ ಯೋಜನೆಗಳು ಬರುತ್ತವೆ. ಈ ಯೋಜನೆಗಳಿಗೆ 1995-96ನೇ ಸಾಲಿನಲ್ಲಿ 1300 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿರುವ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕೋಲಾರ, ತುಮಕೂರು, ಬೆಂಗಳೂರು ಗ್ರಾಮಾಂತರ, ಹಾಸನ, ಚಿತ್ರದುರ್ಗ, ಧಾರವಾಡ, ಬೆಳಗಾಂ, ಬಿಜಾಪುರ ಈ ಜಿಲ್ಲೆಗಳ 87 ತಾಲ್ಲೂಕುಗಳು ಬಯಲು ಸೀಮೆಗೆ ಬರುತ್ತವೆ. ಈ ಬಯಲು ಸೀಮೆ ಅಭಿವೃದ್ಧಿಗೆಂದು ಹೋದ ವರ್ಷದ ಬಜೆಟ್‌ನಲ್ಲಿ ಒಂದು ಸಾರಿ 4 ಕೋಟಿ ಇನ್ನೊಂದು ಸಾರಿ 6 ಕೋಟಿ ಅಂದರೆ ಒಟ್ಟು 10 ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ. ಆಮೇಲೆ, ಈ ಜಿಲ್ಲೆಗಳಲ್ಲಿ ಸುಮಾರು 36,660 ಕೆರೆಗಳು ಬರುತ್ತವೆ. ಈ ಕೆರೆಗಳಲ್ಲಿ ಹೂಳು ಎತ್ತಿಸಿ ಮೇನ್‌ಟೇನ್ ಮಾಡುವುದಕ್ಕಾಗಿ 1995-96ನೇ ಸಾಲಿನಲ್ಲಿ ಸಣ್ಣ ನೀರಾವರಿ ಬಾಬತ್ತು ಎಂದು 43 ಕೋಟಿ ರೂಪಾಯಿಗಳನ್ನು ಯೋಜನೇತರದಲ್ಲಿ ಕೊಡಲಾಗಿದೆ. ಈ ಯೋಜನೇತರವಾಗಿ ಕೊಟ್ಟಿರುವ ಹಣದಲ್ಲಿ ಬಹಳಷ್ಟು ಹಣ

ಸಂಬಳಸಾರಿಗೆಗೆ ಖರ್ಚಾಗಿ ಹೋಗುತ್ತದೆ. ಮಾನ್ಯ ಭೈರೇಗೌಡರು ಹಾಗೂ ತಾವುಗಳೂ ಸಹಾ ಬಯಲು ಸೀಮೆಯಿಂದ ಬಂದಿರತಕ್ಕವರೇ ಆಗಿದ್ದೀರಿ. ನಿಮ್ಮಗಳೆಲ್ಲರ ಪ್ರಯತ್ನದಿಂದ ಈ ಬಯಲು ಸೀಮೆ ಅಭಿವೃದ್ಧಿ ಮಂಡಳಿ ರಚನೆಯಾಗಿದೆ. ಆದರೆ, ಈ ಮಂಡಳಿಗೆ ಸರಿಯಾದ ಪ್ರಮಾಣದಲ್ಲಿ ಹಣವನ್ನು ಬಿಡುಗಡೆ ಮಾಡುತ್ತಿಲ್ಲ. ಮಲೆನಾಡು ಅಭಿವೃದ್ಧಿ ಮಂಡಳಿಗೆ ಇದುವರೆಗೆ 206 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ, ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ 235 ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ಆದರೆ, ನಮ್ಮ ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ಇದುವರೆಗೆ ಕೇವಲ 10 ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಲಾಗಿದೆ. ನಮ್ಮ ಕಡೆ ಬಹಳ ಹೊಟ್ಟೆ ಹಸಿದಿರತಕ್ಕಂಥ ಜನ ಇದ್ದಾರೆ. ನಾವು ಸಹಾ ಇನ್ನು ಮುಂದೆ ಪ್ರತಿಭಟನೆ ಮಾಡುವ ಸಂದರ್ಭ ಬರುತ್ತಿದೆ. ನಾವೆಲ್ಲಾ ಹೋರಾಟ ಮಾಡುವಂಥ ಸಂದರ್ಭದಲ್ಲಿ ತಾವುಗಳು ಮತ್ತು ಮಾನ್ಯ ಭೈರೇಗೌಡ ಸಾಹೇಬರು ಹಾಗೂ ಬಯಲು ಸೀಮೆಯಿಂದ ಆರಿಸಿ ಬಂದು ಮಂತ್ರಿಗಳಾಗಿರತಕ್ಕಂಥವರೂ ತಮ್ಮ ತಮ್ಮ ಸ್ಥಾನಗಳನ್ನು ಬಿಟ್ಟು ಮಾಡತಕ್ಕಂಥ ಪ್ರತಿಭಟನೆ ಚಳುವಳಿಯಲ್ಲಿ ಭಾಗವಹಿಸಬೇಕು. ಬಯಲು ಸೀಮೆಯಲ್ಲಿರತಕ್ಕಂಥ ಜನರಾದ ನಾವು 50 ವರ್ಷಗಳಿಂದ ತುಳಿತಕ್ಕೆ ಸಿಕ್ಕಿದ್ದೇವೆ. ನಾವು ಯಾವ ಮಟ್ಟದ ಚಳುವಳಿಗೆ ಹೋಗುತ್ತೇವೆಂದು ಈಗ ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ, ಇದರ ಬಗ್ಗೆ ಪ್ರತ್ಯೇಕವಾದ ಗಮನವನ್ನು ಕೊಟ್ಟು ಬಯಲು ಸೀಮೆ ಅಭಿವೃದ್ಧಿ ಮಾಡುವ ಬಗ್ಗೆ ಸರ್ಕಾರ ಸ್ಪಷ್ಟವಾದ ನಿಲುವನ್ನು ಘೋಷಣೆ ಮಾಡಬೇಕು. ಈ ಸಾರಿ ಮಾತ್ರ ಟೋಟಲ್ ಆಗಿ 25 ಕೋಟಿ ರೂಪಾಯಿಗಳನ್ನು ಈ ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಲಿ. ಮುಂದಿನ ವರ್ಷದಿಂದ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ 2 ಕೋಟಿ ರೂಪಾಯಿಗಳಂತೆ ಬಿಡುಗಡೆ ಮಾಡಬಹುದು. ಕೇಳಿರುವ 25 ಕೋಟಿ ರೂಪಾಯಿಗಳಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಈ ತಕ್ಷಣದಲ್ಲಿ 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದಲ್ಲಿ ಒತ್ತಾಯಪಡಿಸುತ್ತೇನೆ.

ಅಧ್ಯಕ್ಷರು: ಇದೇ ವಿಚಾರದಲ್ಲಿ ಮಾತನಾಡತಕ್ಕಂಥವರು ಇನ್ನೂ 15 ಸದಸ್ಯರುಗಳು ಕಾಯುತ್ತಿದ್ದಾರೆ. ಸಾಮಾನ್ಯವಾಗಿ ಎಲ್ಲಾ ಮಾನ್ಯ ಸದಸ್ಯರುಗಳೂ ಹಣವನ್ನು ಹೆಚ್ಚಿಗೆ ಬಿಡುಗಡೆ ಮಾಡಿ ಎಂದೇ ಕೇಳುತ್ತಿದ್ದಾರೆ. ಸದನ ಕಲಾಪ ನಡೆಸುವ ಹಿತದೃಷ್ಟಿಯಿಂದ ಮತ್ತು ಸಮಯದ ಅಭಾವದಿಂದ ಹಾಗೂ ಮಾನ್ಯ ಸದಸ್ಯರುಗಳೆಲ್ಲರ ಉದ್ದೇಶ ಅರ್ಥವಾಗಿರುವುದರಿಂದ ಈ ಚರ್ಚೆಯನ್ನು ಇಲ್ಲಿಗೇ ಮುಕ್ತಾಯಗೊಳಿಸೋಣ. ಯಾರು ಯಾರು ಮಾನ್ಯ ಸದಸ್ಯರುಗಳು ಇನ್ನೂ ಮಾತನಾಡಬೇಕೆಂದು ಬಯಸಿದ್ದರು ಎನ್ನುವವರ ಹೆಸರುಗಳನ್ನು ಈಗ ಹೇಳಿಬಿಡುತ್ತೇನೆ. ಮಾನ್ಯ ಜಗದೀಶ್ ಶೆಟ್ಟರ್‌ರವರು, ಮಾನ್ಯ ನಾರಾಯಣರವರು, ಮಾನ್ಯ ಅಶೋಕ್ ಕಾಟ್ವೆಯವರು, ಮಾನ್ಯ ಜಗದೀಶ್ ಪಾಟೀಲ್‌ರವರು, ಮಾನ್ಯ ಬಿ.ಬಿ.ಚಿಮ್ಮನಕಟ್ಟಿಯವರು, ಶ್ರೀಮತಿ ಜ್ಯೋತಿ ರೆಡ್ಡಿಯವರು,

ಮಾನ್ಯ ಚಂದ್ರಶೇಖರ್ ನಾಯಕ್‌ರವರು, ಮಾನ್ಯ ಕೃಷ್ಣಮೂರ್ತಿಯವರು, ಮಾನ್ಯ ಶ್ರೀಶೈಲಪ್ಪ-ಬಿದನೂರು, ಮಾನ್ಯ ಚಂದ್ರಪ್ಪ-ಭರಮಸಾಗರ ಅವರು, ಇಷ್ಟೂ ಜನ ಈ ವಿಚಾರದಲ್ಲಿ ಮಾತನಾಡಬೇಕೆಂದು ಇದ್ದರು.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಅಕ್ಟೋಬರ್ 2ನೇ ತಾರೀಖಿನೊಳಗೆ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ 35 ಕೋಟಿ ರೂಪಾಯಿಗಳನ್ನು ಕೊಡಲಾಗುತ್ತದೆ ಎನ್ನುವ ಬಗ್ಗೆ ಭರವಸೆಯನ್ನು ಸರ್ಕಾರದಿಂದ ತಾವು ಕೊಡಿಸಬೇಕು. ಇಲ್ಲವೆಂದರೆ, ನಾವೆಲ್ಲರೂ ಅನಿವಾರ್ಯವಾಗಿ ಧರಣಿ ಮಾಡಬೇಕಾಗುತ್ತದೆ.

ಅಧ್ಯಕ್ಷರು: ಏನೇನಾಗುತ್ತದೆ ಬೆಳವಣಿಗೆಯೆಂದು ನೋಡೋಣ. ಈಗ ಶ್ರೀಮತಿ ಜ್ಯೋತಿ ರೆಡ್ಡಿಯವರು ಮಾತನಾಡುತ್ತಾರೆ.

ಶ್ರೀಮತಿ ಎನ್.ಜ್ಯೋತಿ ರೆಡ್ಡಿ (ಗೌರಿಬಿದನೂರು): ಮಾನ್ಯ ಅಧ್ಯಕ್ಷರೆ, ಇದುವರೆಗೆ ಮಾತನಾಡಿದಂಥ ಸದಸ್ಯರುಗಳೆಲ್ಲಾ ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ಹೆಚ್ಚು ಹಣವನ್ನು ಕೊಡಬೇಕೆಂದು ಕೇಳಿದ್ದಾರೆ. ಆ ಪ್ರಾಬ್ಲಮ್ ನನ್ನದಲ್ಲ. ಒಟ್ಟು 76 ಕಾನ್ಸ್‌ಟ್ಯುಯೆನ್ಸಿಗಳನ್ನು ಬಯಲು ಸೀಮೆ ಅಭಿವೃದ್ಧಿ ಮಂಡಳಿ ವ್ಯಾಪ್ತಿಯಲ್ಲಿ ಸೇರಿಸಲಾಗಿದೆ.. ನಮ್ಮ ಕೋಲಾರ ಜಿಲ್ಲೆಯಲ್ಲಿ ಬರುವ ತಾಲ್ಲೂಕುಗಳ ಪೈಕಿ ಗೌರಿಬಿದನೂರು ತಾಲ್ಲೂಕು ಒಂದನ್ನು ಮಾತ್ರ ಹೊರತುಪಡಿಸಿ ಉಳಿದ ಎಲ್ಲಾ ತಾಲ್ಲೂಕುಗಳನ್ನು ಬಯಲು ಸೀಮೆ ಅಭಿವೃದ್ಧಿ ಮಂಡಳಿ ವ್ಯಾಪ್ತಿಗೆ ಸೇರಿಸಲಾಗಿದೆ. ಇದರ ಬಗ್ಗೆ ನಾನು ಎರಡು ವರ್ಷಗಳಿಂದ ಸತತವಾಗಿ ಕೇಳುತ್ತಲಿದ್ದರೂ ಯಾವ ಸ್ಪೆಸಿಫಿಕ್ ಕಾರಣದಿಂದ ಗೌರಿಬಿದನೂರು ತಾಲ್ಲೂಕನ್ನು ಹೊರತುಪಡಿಸಲಾಗಿದೆಯೆಂದು ಇದುವರೆಗೆ ನನಗೆ ಉತ್ತರವನ್ನು ಕೊಟ್ಟಿಲ್ಲ. ತಮಗೆಲ್ಲಾ ಗೊತ್ತಿರುವ ಹಾಗೆ ನಮ್ಮ ತಾಲ್ಲೂಕಿನಲ್ಲಿ ರೈನ್ ಫಾಲ್ ಸರಿಯಾಗಿಲ್ಲ ಹಾಗೂ ಅದನ್ನು ಡ್ರಾಟ್ ಏರಿಯಾ ಎಂದು ಘೋಷಣೆ ಕೂಡ ಮಾಡಲಾಗಿದೆ. ಆದುದರಿಂದ, ಯಾವ ಕಾರಣಕ್ಕಾಗಿ ಗೌರಿಬಿದನೂರು ತಾಲ್ಲೂಕನ್ನು ಬಯಲು ಸೀಮೆ ಅಭಿವೃದ್ಧಿ ಮಂಡಳಿಯಿಂದ ಹೊರತುಪಡಿಸಲಾಗಿದೆ ಎಂಬ ಕಾರಣವನ್ನು ಸರ್ಕಾರ ಕೊಡಬೇಕು. ಯಾವುದೇ ಕಾರಣಗಳಿದ್ದರೂ ನಮ್ಮ ತಾಲ್ಲೂಕನ್ನು ಈ ಅಭಿವೃದ್ಧಿ ಮಂಡಳಿ ವ್ಯಾಪ್ತಿಯೊಳಗೆ ಸೇರಿಸಿಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಈ ಅಭಿವೃದ್ಧಿಮಂಡಳಿಗೆ ಹೆಚ್ಚು ಹಣವನ್ನು ಕೊಡದೇ ಇದ್ದರೆ ಧರಣಿ ಮಾಡುತ್ತೇವೆಂದು ಆಗಲೇ ಮಾತನಾಡಿದ ಮಾನ್ಯ ಸದಸ್ಯರಗಳು ಹೇಳುತ್ತಿದ್ದರು. ಆದರೆ, ನಾನು ಈ ಬಗ್ಗೆ ''ನಿರಾಹಾರ ಧೀಕ್ಷೆ'' ಮಾಡುತ್ತೇನೆ.

ಅಧ್ಯಕ್ಷರು: ತಾವು ನಿರಾಹಾರ ಧೀಕ್ಷೆ ಏಕೆ ಮಾಡುತ್ತೀರೆಂಬುದು ನಮಗೆ ಗೊತ್ತು. ತಾವು ಸ್ವಲ್ಪ ಸ್ಲಿಮ್ ಆಗಬೇಕೆಂದು. ಇದೆಲ್ಲಾ ನಡೆಯುವುದಿಲ್ಲ.

ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ): ಮಾನ್ಯ ಅಧ್ಯಕ್ಷರೆ, ಈ ಸಭೆಯಲ್ಲಿ ಮಾನ್ಯ ಗೋಪಾಲಗೌಡರು ಮಾತನಾಡಿದ ಒಂದು ಮಾತು ನೆನಪಿಗೆ ಬರುತ್ತಿದೆ. ಅದನ್ನು ಅವರು ಬಹಳ ಗಂಭೀರವಾಗಿಯೇ ಹೇಳಿದ್ದರು. ಒಂದು ರೀತಿ ನಾವು ತಿಳಿದೋ ತಿಳಿದೆಯೋ ತಾರತಮ್ಯ ಮಾಡುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ ನೀರಾವರಿ ಅಭಿವೃದ್ಧಿಯಾಗಲೇ ಬೇಕು, ಅದಕ್ಕೆ ನಾವು ಖರ್ಚು ಮಾಡೇ ಮಾಡುತ್ತೇವೆ. ಅದು ಆಕಸ್ಮಿಕವಾಗಿ ಕೆಲವು ಪ್ರದೇಶಗಳಿಗೆ ಮಾತ್ರ ಅನುಕೂಲವಾಗುತ್ತದೆ. ಮಲೆನಾಡು ಕೂಡಾ ಅಭಿವೃದ್ಧಿಯಾಗಬೇಕು. ಬಯಲು ಸೀಮೆ ಎಂದರೆ ಅದು ಬರಡು ಪ್ರದೇಶ. ಆ ಪ್ರದೇಶಗಳ ಬಗ್ಗೆ ಮೊದಲಿನಿಂದಲೂ ಏಕೋ ಆಸ್ಥೆ ಕಡಿಮೆ. ಆದ್ದರಿಂದ ಇದರ ಬಗ್ಗೆ ಎರಡು ಸಲಹೆ ಕೊಡುತ್ತೇನೆ, ಒಂದನೆಯದು, ಈ ಪ್ರದೇಶಗಳ ಅಭಿವೃದ್ಧಿಗಾಗಿ ಸರ್ಕಾರವು ಕಡ್ಡಾಯವಾಗಿ ಹಣವನ್ನು ಕೊಡಲೇಬೇಕಾಗುತ್ತದೆ. ಏಕೆಂದರೆ, ಕೆಲವು ಪ್ರದೇಶಗಳಲ್ಲಿ ನೋಡಿದರೆ, ಜನರು ಬಹಳ ತೊಂದರೆಯಲ್ಲಿದ್ದಾರೆ. ಇದನ್ನು ಲಘುವಾಗಿ ಎಣಿಸತಕ್ಕಂಥ ಪರಿಸ್ಥಿತಿ ಇಲ್ಲ.

11.50 ಎ.ಎಂ

ಕೆಲವು ಪ್ರದೇಶಗಳಲ್ಲಿ, ಕೆಲವು ತಾಲ್ಲೂಕುಗಳಲ್ಲಿ ಕೆಲವು ಹೋಬಳಿಗಳು ಭಾರಿ ಬಯಲು ಸೀಮೆಯಾಗಿವೆ, ಅವುಗಳನ್ನು ಇದರಲ್ಲಿ ಸೇರಿಸಬೇಕು. ಇನ್ನೊಂದು ಏನು ಅಂದರೆ ನಾನು ಚರ್ಚೆ ಮಾಡುವಾಗ ನೋಡಿದೆ ನಾನು ಕೇಳಿದೆ ಎಷ್ಟು ಜನ ಇದ್ದಾರೆಂದು ಆಳುವ ಪಕ್ಷದಲ್ಲಿ 56ಜನ ಬಯಲು ಸೀಮೆಯವರಿದ್ದಾರಂತೆ. ಅವರು ಮನಸ್ಸು ಮಾಡಿದರೆ ಸರ್ಕಾರ ಉಳಿಯುವುದಿಲ್ಲ. ನಮ್ಮ ಮುಳಬಾಗಿಲು ಶಾಸಕರು ಹೇಳಿದ್ದಾರೆ ಅವರು ಯಾವ ಹಂತಕ್ಕೆ ಹೋಗುತ್ತೇವೆ ಎಂದು. ಅವರು ಬಂದು ಖರ್ಗೆಯವರನ್ನು ತಬ್ಬಿಕೊಂಡು ಬಿಟ್ಟರೆ ಬಹಳ ಕಷ್ಟ, ದುಡ್ಡು ಕೊಟ್ಟುಬಿಡಿ ಬಯಲುಸೀಮೆಯವರಿಗೆ. ಕೊನೆಯ ಪಕ್ಷ 45 ಕೋಟಿ ರೂಪಾಯಿ ಕೊಡಬೇಕಾಗುತ್ತದೆ ನನ್ನ ಅಂದಾಜಿನ ಪ್ರಕಾರ. ಗೋಪಾಲಗೌಡರು ಏನು ಹೇಳಿದರು ಅಂದರೆ ನಾವು ಒಂದು ಮೂವ್‌ಮೆಂಟ್ ಸ್ಟಾರ್ಟ್ ಮಾಡಬೇಕಾಗುತ್ತದೆ, ಹಣವನ್ನು ಕೆಲವೇ ಜಿಲ್ಲೆಗಳಿಗೆ ನೀರಾವರಿ ಹಾಗೂ ಕೆಲವೊಂದು ಅಭಿವೃದ್ಧಿ ಹೆಸರಿನಿಂದ ಹಾಕಿಕೊಡುತ್ತಿದ್ದೀರಿ. ಬಯಲು ಸೀಮೆಗೆ ಏನು ಕೊಡುತ್ತಿಲ್ಲ, ಒಂದು ಮೂವ್‌ಮೆಂಟ್ ಆಗಬೇಕಾಗುತ್ತದೆಂದು ಆಗ ಅವರು ಎಚ್ಚರಿಕೆಯನ್ನು ಕೊಟ್ಟಿದ್ದರು. ಅದಕ್ಕೆ ಅವಕಾಶ ಮಾಡಿಕೊಡುವುದು ಬೇಡ ಜನಗಳಿಗೆ.

+ ಶ್ರೀ ಆರ್.ನಾರಾಯಣ್ (ಬೆಳ್ಳಾವಿ): ಮಾನ್ಯ ಅಧ್ಯಕ್ಷರೆ, ಬಹುಶಃ ನಾನು ವೈಯಕ್ತಿಕವಾಗಿ ಈ ಬೋರ್ಡಿನ ಕಾನ್ಸೆಪ್ಟ್‌ಗೆ ವಿರೋಧ. ಏತಕ್ಕೆಂದರೆ ಈ ಒಂದು ತಾರತಮ್ಯವನ್ನು ನಾವು ಎತ್ತಿ ತೋರಿಸುತ್ತಿದ್ದೇವೆ. ಡಿ.ಆರ್.ಪಾಟೀಲ್‌ರು ಏನು ಹೇಳಿದರು... ನಂಜೇಗೌಡರು ಹೇಳಿದರು. ಇದರಿಂದ ಒಂದು ರೀತಿಯಲ್ಲಿ ನಮಗೆ ಹೊಟ್ಟೆ ಉರಿ ಶುರು ಆಗಿ ಬಿಟ್ಟಿದೆ. ಬಯಲು ಸೀಮೆಯ ಅಭಿವೃದ್ಧಿ ಮಂಡಳಿ

ರಚನೆಯಾಗಬೇಕೆಂದು ಬಹಳ ವರ್ಷಗಳಿಂದ ನಾವು ಒತ್ತಾಯ ಮಾಡಿದ ಕಾರಣ ಹೈದ್ರಾಬಾದ್ ಕರ್ನಾಟಕ ಮಂಡಳಿ ಆಯಿತು, ಮಲೆನಾಡು ಅಭಿವೃದ್ಧಿ ಮಂಡಳಿ ಆಯಿತು, ನಮ್ಮ ಭಾಗದಲ್ಲಿ ಏನೂ ಆಗಿಲ್ಲವೆಂದು ಬಹಳ ಒತ್ತಾಸೆಯಿಂದ ಏನೋ ಕಡೆನಲ್ಲಿ ನಮ್ಮ ವೀರಪ್ಪ ಮೊಯ್ಲಿಯವರು ಹೋಗತಕ್ಕಂಥ ಸಂದರ್ಭದಲ್ಲಿ ಈ ಬಯಲು ಸೀಮೆ ಮಾಡಬೇಕೆಂದು ಒಂದು ಘೋಷಣೆ ಮಾಡಿದ ನಂತರ ಅದಕ್ಕೆ ಶಕ್ತಿಯನ್ನು ಕೊಟ್ಟರು. ಒಂದೇ ಒಂದು ವಿಷಯವನ್ನು ತಮ್ಮ ಮೂಲಕ ಸರ್ಕಾರಕ್ಕೆ ತರಲು ಇಚ್ಛೆಪಡುತ್ತೇನೆ. ಬಯಲು ಸೀಮೆ ಮುಂದೆ ಇರತಕ್ಕಂಥ ಸಮಸ್ಯೆಗಳನ್ನು ನಾವು ನೋಡಿದಂಥ ಕಾಲದಲ್ಲಿ ಮಳೆಯನ್ನೇ ಆಧರಿಸಿದಂಥ ಈ ಪ್ರದೇಶಗಳು ಮತ್ತು ಅದರ ಹಿಂದೆ ಇರತಕ್ಕಂಥ ಚಾಲೆಂಜ್‌ಸ್‌ನ್ನು ನೋಡಿದಂಥ ಕಾಲದಲ್ಲಿ ಅದಕ್ಕೆ ಸರ್ವಶಕ್ತಿಯನ್ನು ಕೊಡುವುದರಲ್ಲಿ ಸರ್ಕಾರದ ಏನೇನೂ ಕ್ರಮಗಳಿಲ್ಲ. ಬಯಲು ಸೀಮೆ ಸಮಸ್ಯೆಗಳು ಎಲ್ಲರಿಗೂ ಗೊತ್ತಿದೆ, ಅಧ್ಯಕ್ಷರಾದ ತಾವು ಅಲ್ಲಿಂದ ಬಂದಿರುತ್ತೀರಿ. ಈ ವಿಷಯವಾಗಿ ಅನೇಕ ಸದಸ್ಯರುಗಳು ಕೂಡ ಹೇಳಿದ್ದಾರೆ. ಅಲ್ಲಿ ಏನಾಗಿದೆ ಈ ಬೋರ್ಡ್‌ನ್ನ ಮಾಡುವುದು ಮೂಲತಹ ಇದು ತಪ್ಪು. ನಾವು ನಿಜವಾಗಲೂ ಸಹ ಒಂದು ಸಮಗ್ರವಾದ ಬೆಳವಣಿಗೆಯ ದೃಷ್ಟಿಯಿಂದ ಪ್ರತಿ ತಾಲ್ಲೂಕನ್ನು ಗುರುತು ಮಾಡಿ ಆ ತಾಲ್ಲೂಕು ಯಾವ ಕ್ಷೇತ್ರದಲ್ಲಿ ಬರುತ್ತದೆ. ಕೈಗಾರಿಕೆ ಇರಬಹುದು, ನೀರಾವರಿ ಇರಬಹುದು, ಇದರಲ್ಲಿ ಯಾವುದು ಹಿಂದುಳಿದಿರತಕ್ಕಂಥದ್ದು ಎಂಬುದನ್ನು ಗುರುತಿಸಿ ಅದಕ್ಕೆ ಸೂಕ್ತೆವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. ಇದನ್ನು ನಂಜೇಗೌಡರು ಬಹಳ ಸ್ಪಷ್ಟವಾಗಿ ಬಹಳ ಮಾರ್ಮಿಕವಾಗಿ ಮತ್ತು ನೇರವಾಗಿ ಹೇಳಿದ್ದಾರೆ. ಈ ರೀತಿಯಾಗಿ ಒಂದು ಸಮತೋಲನ ಏನು ಇದೆ, ಬೇದಭಾವ ಇರತಕ್ಕಂಥದ್ದು ಮತ್ತು ಇಡೀ ಕರ್ನಾಟಕ ಒಂದು ಒಗ್ಗಟ್ಟಾಗಿ, ಕೆಲವು ಸಲ ಬೆದರಿಕೆ ಹಾಕುತ್ತಾರೆ. ಉತ್ತರ ಕರ್ನಾಟಕಕ್ಕೆ ತಾವು ಮಾಡದೆ ಹೋದರೆ... ಬಯಲು ಸೀಮೆಗೆ ಇರುವ ಆ ಒಂದು ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಯಾವ ಉದ್ದೇಶದಿಂದ ಬಯಲು ಸೀಮೆ ಅಭಿವೃದ್ಧಿ ಮಂಡಳಿ ರಚನೆ ಮಾಡಿದ್ದೀರಿ ಅದಕ್ಕೆ ಸರ್ವಶಕ್ತಿ ಹಣದ ಮೂಲಕ ಕೊಡದೆ ಹೋದರೆ ಇಂತಹ ಬೋರ್ಡ್ ರಚನೆ ಮಾಡಿದ್ದು ಏನು ಸಾರ್ಥಕವಾಗುತ್ತದೆ ಎಂದು ನಾನು ನೇರವಾಗಿ ಪ್ರಶ್ನೆ ಮಾಡಬೇಕಾಗುತ್ತದೆ. ಇದು ಅನೇಕ ಅನರ್ಥಗಳಿಗೆ ಅವಕಾಶವಾಗುತ್ತದೆ. ದಯಮಾಡಿ ಈ ಸರ್ಕಾರದ ಸ್ಥಿಥಿ ಏನಾಗಿದೆ ಎಂದರೆ ಇತ್ತೀಚೆಗೆ ಮೀಟಿಂಗ್‌ಗಳನ್ನು ಬಹಳಷ್ಟು ಮಾಡುತ್ತಾರೆ, ಯಾವುದೂ ಸೀರಿಯಸ್‌ನೆಸ್ ಇರುವುದಿಲ್ಲ. ಬರ ಪರಿಹಾರ ಮೀಟಿಂಗ್ ಮಾಡುವುದು, ಮುಖ್ಯಮಂತ್ರಿಗಳು ಬರುತ್ತೇನೆಂದರು ಬರಲಿಲ್ಲ. ಬೆಳಗ್ಗೆ ಬನ್ನಿ ಅಂದರು, ಸಾಯಂಕಾಲ ಬನ್ನಿ ಅಂದರು, ಇದನ್ನು ಏಕೋ ಒಂದು ತರಹ ಲಘುವಾಗಿ ಇಂತಹ ಗಂಭೀರವಾದಂಥ ಸಮಸ್ಯೆಗಳನ್ನು ಕಾಣತಕ್ಕಂಥ ಒಂದು ದೃಷ್ಟಿ ನಮ್ಮ ಮೇಲೆ ಇದೆಯೆಂದು ಶಾಸಕರ ಮನಸ್ಸಿನಲ್ಲಿ ಇದೆ. ಆದ್ದರಿಂದ ಸರ್ಕಾರ ಇಂತಹ ಗಂಭೀರವಾದ ಸಮಸ್ಯೆಗಳ ಬಗ್ಗೆ ಬಹಳ ಲಘುವಾಗಿ ಪರಿಗಣಿಸಬಾರದು. With all seriousness at your command, ಫೈನಾನ್ಸಿಯಲ್ ಏನು ಪೊಸಿಷನ್ ಇದೆ

ಎಂದು ನೋಡಿಕೊಂಡು ನಿಜವಾಗಿಯೂ ಎಲ್ಲರ ನೀರಿಕ್ಷೆಗೆ ತಕ್ಕಂತೆ ಈ ಸರ್ಕಾರ ಸ್ಪಂದಿಸಬೇಕಾಗುತ್ತದೆ. ದಯಮಾಡಿ ಈ ಅಭಿವೃದ್ಧಿ ಮಂಡಲಿಯನ್ನು ಮುಚ್ಚಿಬಿಡಬೇಕೆಂದು ನಮ್ಮ ಅಭಿಪ್ರಾಯಗಳನ್ನು ಈಗಾಗಲೇ ನಾವು ಕೊಟ್ಟಿದ್ದೇವೆ. ಕಳೆದ ಮೀಟಿಂಗ್‌ನಲ್ಲಿ ಎಲ್ಲರೂ ಹೇಳಿದರು ಅಭಿವೃದ್ಧಿ ಮಂಡಳಿ ಇಲ್ಲದೇ ಹೋದರೂ ಪರವಾ ಇಲ್ಲ ಅದನ್ನು ಕ್ಲೋಸ್ ಮಾಡಿಬಿಡಿ ಎಂದು ಹೇಳಿದರು. ಆ ಅಜೆಂಡಾದಲ್ಲಿ ಅಧ್ಯಕ್ಷರಿಗೆ ಕಾರು ಪರಚೇಸ್ ಮಾಡಲಿಕ್ಕೆ ಅದಕ್ಕೊಂದು ಅಜೆಂಡಾ. ಇಲ್ಲಿ ಏನೂ ಆಗಲಿಲ್ಲ ಅಧ್ಯಕ್ಷರಿಗೆ ಒಂದು ಕಾರು... ಇದು ವಿಫಲವಾಗಿದೆ ಎಂದು ನಾನು ಕಳಕಳಿಯಿಂದ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

+ ಶ್ರೀ ಕಾಗೋಡು ತಿಮ್ಮಪ್ಪ (ಸಾಗರ): ಈ ಚರ್ಚೆಯ ಸ್ವರೂಪವನ್ನು ನಾವು ನೋಡಿದರೆ ಒಂದು ರೀತಿಯ ಅಸಹನೆಗಳು ಎದ್ದು ಕಾಣುತ್ತದೆ. ಮಲೆನಾಡು ಬೋರ್ಡ್ ಆಯಿತು, ಹೈದ್ರಾಬಾದ್ ಬೋರ್ಡ್ ಆಯಿತು ಬಯಲು ಸೀಮೆ ಬೋರ್ಡ್ ಆಯಿತು. ಅದಕ್ಕೆ ಜಾಸ್ತಿ ದುಡ್ಡು ಇದೆ; ಇದಕ್ಕೆ ಕಡಿಮೆ ಇದೆ. ನಾನು ಹೇಳುವವರೆಗೆ ಸ್ವಲ್ಪ ಕೇಳಿ. ಈ ಬೋರ್ಡ್‌ಗಳನ್ನು ಈಗ ಮಾಡಿಯಾಗಿದೆ. ಶ್ರೀಮಾನ್ ನಂಜೇಗೌಡರು ಹೇಳುವುದು, ಮಾನ್ಯ ಗೋಪಾಲಗೌಡರು ಯಾವಾಗಲೂ ಒಂದು ಮಾತು ಹೇಳಿದ್ದಾರೆ. ಏನು ನನ್ನಂಥವನು ಒಂದು ತಾಲ್ಲೂಕು ಅಭಿವೃದ್ಧಿ ಮಾಡುವುದು ಕಷ್ಟವಾಗುವುದಿಲ್ಲ. ನನ್ನ ದೃಷ್ಟಿಯಲ್ಲಿ ಇಡೀ ಕರ್ನಾಟಕ ಒಂದಾಗಿ ಅಭಿವೃದ್ಧಿಯಾಗಬೇಕು. ಅದನ್ನೇ ಅವರು ಅಪೇಕ್ಷೆ ಪಡುತ್ತಿದ್ದರು. ಅಂತಹ ದೊಡ್ಡ ಅಪೇಕ್ಷೆ ಇರುವಂಥವರು ರಾಜಕೀಯವಾಗಿ ದೊಡ್ಡ ಸೋಲನ್ನು ಕಾಣಬೇಕಾದಂಥ ಪರಿಸ್ಥಿತಿ ಕೂಡ ಬಂದಿದೆ. ಈಗ ಯಾರ್ಯಾರಿಗೆ ಯಾವ ಸಂದರ್ಭದಲ್ಲಿ ರಾಜಕೀಯಶಕ್ತಿ ಬಲ ಬರುತ್ತದೆ ಅದನ್ನು ಉಪಯೋಗಿಸಿಕೊಂಡು ಮಾಡುತ್ತಾರೆ ಎಂಬ ಭಾವನೆ ಯಾರಿಗೂ ಬರಕೂಡದು. ಇಡೀರಾಜ್ಯ ಒಂದೇ ಎಲ್ಲಾ ತಾಲ್ಲೂಕುಗಳೂ ಒಂದೇ ಎನ್ನುವ ದೃಷ್ಟಿಯಿಂದ ಅಭಿವೃದ್ಧಿ ಆಗಬೇಕು. ಕನಿಷ್ಟ ಪ್ರಮಾಣದಲ್ಲಿ ರಸ್ತೆ, ಕುಡಿಯುವ ನೀರು ಒಂದು ಕೆರೆ ಆಗಲೇಬೇಕು. ಇವತ್ತು ಇದಕ್ಕೆ ಸಾಕಷ್ಟು ಹಣ ಆ ಪ್ರದೇಶದಲ್ಲಿ ಸಿಗದೇ ಇರಬಹುದು, ಇವತ್ತು ಇದು ನಮ್ಮ ಹಾರ್ಟಬರ್ನಿಂಗ್ ಇದಾಗಿದೆ. ಅದಕ್ಕೆ ನಾನು ಏನು ಹೇಳುತ್ತೇನೆ ಯಾವ ಪ್ರತಿಷ್ಟೆ ಬೇಡ. ಪ್ರತಿಯೊಬ್ಬ ಶಾಸನಸಭಾ ಕ್ಷೇತ್ರಕ್ಕೆ ಆ ಶಾಸಕರು ಹೇಳುವಂತೆ ಅಭಿವೃದ್ಧಿ ಕಾರ್ಯಗಳು ಆ ಕ್ಷೇತ್ರಗಳ ಕಾರ್ಯಗಳಿಗೆ ನಾವು ಒಂದು ಕ್ರೀಯಾ ಯೋಜನೆ ಮಾಡಿದ್ದೇವೆ, ಅದಕ್ಕೆ ನೀವು 200 ಕೋಟಿ ರೂಪಾಯಿ ಪ್ರತಿಯೊಂದು ಕ್ಷೇತ್ರಕ್ಕೆ ಅಂದರೆ 225 ಶಾಸಕರ ಕ್ಷೇತ್ರಕ್ಕೆ 225 ಕೋಟಿ ರೂಪಾಯಿಯಾಗುತ್ತದೆ. ನಿಮಗೆ ಆವಾಗ ಯಾವ ಬೋರ್ಡ್ ಅಗತ್ಯ ಇರುವುದಿಲ್ಲ. ಅಂತಹ ಏನಾದರೂ ಹೊಸ ಆಯಾಮವನ್ನು ನಾವು ಕಂಡು ಹಿಡಿಯಬೇಕಾಗುತ್ತದೆ. ಈ ವಾತಾವರಣ ಸೃಷ್ಟಿಯಾಗತಕ್ಕಂಥದ್ದು ಒಳ್ಳೆಯದಲ್ಲ. ಏಕೆಂದರೆ ನಮ್ಮ ಬಾಂಬೆಪ್ರದೇಶದ ಅನೇಕ ಮಿತ್ರರು ನಮ್ಮನ್ನು ಕಡೆಗಣಿಸುವುದಾಗಲಿ, ಅವರು ಹೇಳುವಂತೆ ಇನ್ನೊಬ್ಬರು ಹೇಳುವುದಾಗಲಿ ಒಂದು ರಾಜ್ಯದ

ಸಮತೋಲನವಾಗಿ ಅಭಿವೃದ್ಧಿಯಾಗಬೇಕಾದರೆ ಹೊಸ ಆಯಾಮವನ್ನು ಇಟ್ಟುಕೊಂಡು ನಾವು ಅಭಿವೃದ್ಧಿ ಕಡೆ ಲಕ್ಷ ಕೊಡಬೇಕಾದಂಥದ್ದು ಅಗತ್ಯ ಇವತ್ತು ಜಾಸ್ತಿ ಇದೆ. ಅದಕ್ಕೆ ಸರ್ಕಾರ ಪಕ್ಷಾತೀತವಾಗಿ ಎಲ್ಲರೂ ಸೇರಿ ಒಂದು ನಿರ್ಣಯಕ್ಕೆ ಬರಬೇಕು. ವಿರೋಧ ಪಕ್ಷದ ನಾಯಕರೆಲ್ಲರೂ, ಇದು ಎಲ್ಲರೂ ಸೇರಿ ನಡೆಸುವಂಥ ಒಂದು ಜವಾಬ್ದಾರಿ ಇದೆ. ಎಲ್ಲರೂ ಪಕ್ಷಾತೀತವಾಗಿ ತೆಗೆದುಕೊಂಡು ಆಲೋಚನೆ ಮಾಡಿ ಇಂತಹ ಒಂದು ಹೊಸ ಕಾರ್ಯಕ್ರಮವನ್ನು ರೂಪಿಸುವುದಾದರೆ ಈ ಎಲ್ಲಾ ಸಣ್ಣ ಪ್ರಮಾಣದ ಚರ್ಚೆಗೆ ಅವಕಾಶ ಸಿಗುವುದಿಲ್ಲ. ನಾನು ಮಲೆನಾಡು ಅಭಿವೃದ್ಧಿ ಮಂಡಲಿ ಚರ್ಚೆಯಾದಾಗ ಇದ್ದೆ. ಶಿವಮೂರ್ತಿ ಶಾಸಕರು ಮತ್ತು ದಾವಣಗೆರಿ ಶಾಸಕರು ಅವರು ಒಂದು ಮಾತನ್ನು ಹೇಳಿದರು ಆ ಸಂದರ್ಭದಲ್ಲಿ ಅದು ನನಗೆ ನೆನಪು ಇದೆ. ಅದಕ್ಕೋಸ್ಕರ ಇಂತಹ ದೃಷ್ಟಿಗೆ ತಾವು ಮುಂದಾಗಿ ಸ್ವಲ್ಪ ಇದನ್ನು ಮಾಡಿದರೆ ಈ ಮನಸ್ಸಿನ ನೋವು ಎಲ್ಲಾ ದೂರು ಆಗಬಹುದು. ಎಲ್ಲಾ ಶಾಸಕರು ಒಂದೇ ರಾಜ್ಯದ ಅಭಿವೃದ್ಧಿ ಆಗಬೇಕಾಗಿದೆ ಅನ್ನುವ ಭಾವನೆ ನಿಮಗೆ ಇದೆ, ಎಂದು ತಿಳಿದುಕೊಂಡಿದ್ದೇನೆ. ಇದು ಮಾಡುವುದು ಬಹಳ ಒಳ್ಳೆಯದೆಂದು ತಮ್ಮ ಮುಖಾಂತರ ನಮ್ಮ ಮಾನ್ಯ ಸದಸ್ಯರನ್ನು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ನಾನು ಇಡೀ ಚರ್ಚೆಯನ್ನು ಕೇಳಿದ್ದೇನೆ. ಒಂದು ನಿಮಿಷ ರೆಡ್ಡಿಯವರೆ,

ಶ್ರೀ ಬಿ.ಎಸ್.ಯಡಿಯೂರಪ್ಪ: ಶಾಸಕರು ಹೇಳಿದಂತೆ ತಾವು 30-40 ಕೋಟಿರೂಪಾಯಿ ಕೊಡುತ್ತೇವೆಂದು ನೀವು ಹೇಳಿಬಟ್ಟರೆ ಅವರು ಡಿಸ್ಟ್ರಿಬ್ಯೂಷನ್ ಮಾಡುವುದು ಹೇಗೆ ಎಂದು ಅವರಿಗೆ ಆಮೇಲೆ ಹೇಳೋಣ.

+ ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಅನೇಕ ಮಾನ್ಯ ಸದಸ್ಯರು ಬಯಲು ಸೀಮೆಯಲ್ಲಿ ಬರತಕ್ಕಂಥ ಬಯಲು ಸೀಮೆ ಮಂಡಲಿ ಬಗ್ಗೆ ಏನು ಮಾಡಿದ್ದಾರೆ. ಇದರಲ್ಲಿ ಎಷ್ಟು ಜನರಾದರೂ ಇರಲಿ, ಅಲ್ಲಿ ಬರತಕ್ಕಂಥ ಶಾಸಕರು ಇದನ್ನು ಅನೇಕ ದಿನಗಳಿಂದಲೇ ಹೇಳುತ್ತಲೇ ಇದ್ದಾರೆ. ಅಗ್ರಿಕಲ್ಚರ್ ಮಿನಿಸ್ಟರ್ ಅವರೂ ಕೂಡ ಇದರ ಬಗ್ಗೆ ಅನೇಕಸಾರಿ ಶಾಸಕರನ್ನು ಕರೆದು ಸಭೆಗಳನ್ನು ಮಾಡಿದ್ದಾರೆ. ಆದರೆ ನಮಗೆ ಯೋಜನೆ ಮಾಡುವಾಗ ಆಲೋಕೇಷನ್ ಆಫ್ ಫಂಡ್ಸ್ ಬೇರೆ ಡಿಪಾರ್ಟ್‌ಮೆಂಟ್‌ಗಳಿಂದ ಮಾಡುವಾಗ ಅಲ್ಲಿ ಪ್ಲೇಯರಿಟಿ ಸೆಕ್ಟರ್‌ಗಳು ಅದಕ್ಕೆ ಹೆಚ್ಚು ಹಚ್ಚು ಹಣ ಹೋಗಿ ಬಿಟ್ಟದೆ. ನೀರಾವರಿಗೆ 21 ಪರ್ಸೆಂಟ್ ಎದ್ಯುಚ್ಛಕ್ತಿಗೆ 17 ಪರ್ಸೆಂಟ್, ವಿದ್ಯಾಭ್ಯಾಸಕ್ಕಾಗಿ 8 ಪರ್ಸೆಂಟ್, ಅಗ್ರಿಕಲ್ಚರ್‌ಗೆ 7 ಪರ್ಸೆಂಟ್ ಜಿಲ್ಲಾ ಪಂಚಾಯತಿಗೆ ಹೋಗತಕ್ಕಂಥದ್ದು, ಕಾರ್ಯಕ್ರಮಗದ ಬಗ್ಗೆ ಇವೆಲ್ಲಾ ಆಗುತ್ತವೆ. ಈಗ ಆಲೋಕೇಷನ್ ಆಗಿದೆ, ಈ ಹಂತದಲ್ಲಿ ಈಗಾಗಲೇ ಬಜೆಟ್ ಮಂಡನೆ, ಈ ವರ್ಷ ಖರ್ಚು ಕೂಡ ಆಗಿದೆ ಸುಮಾರು 6 ತಿಂಗಳು ಆಗುತ್ತಾ ಬರುತ್ತದೆ, ಅಕ್ಟೋಬರ್ ತಿಂಗಳು ಮುಗಿದರೆ 6 ತಿಂಗಳಾಗುತ್ತದೆ. ಬಜೆಟ್‌ದಲ್ಲಿರತಕ್ಕಂಥದ್ದು ಬಯಲು ಸೀಮೆ ಅಭಿವೃದ್ಧಿ ಮಂಡಲಿಗೆ ಸುಮಾರು 7 ಕೋಟಿ 40 ಲಕ್ಷ ರೂಪಾಯಿ ಏನು ಇಟ್ಟಿದ್ದಾರೆ ಪ್ಲಾನಿನಲ್ಲಿ,

ಅದು ಸಾಲುವುದಿಲ್ಲವೆನ್ನುವುದು ನಾನು ಒಪ್ಪಿಕೊಳ್ಳುತ್ತೇನೆ. ಕ್ಷೇತ್ರಗಳ ಅಭಿವೃದ್ಧಿ ಯಾಗಬೇಕೆನ್ನುವಂಥಾದ್ದು ಇದೆ. ಒಂದು ವಿಚಾರ ಮಾನ್ಯ ಕಾಗೋಡು ತಿಮ್ಮಪ್ಪನವರು ಸಲಹೆ ಮಾಡಿದ್ದಾರೆ. ಇದನ್ನು ಹೇಗೆ ಎಂದು ಮುಂದಿನ ವರ್ಷದಲ್ಲಿ ವಿಚಾರ ಮಾಡೋಣ. ಅದನ್ನು ಮಾಡುವುದರಿಂದ ರಾಜ್ಯದ ಒಟ್ಟಾರೆ ಅಭಿವೃದ್ಧಿಗೆ ಅನುಕೂಲವಾಗುತ್ತದೋ ಇಲ್ಲವೋ ಎಂಬುದನ್ನು ನೋಡಬೇಕು. ನಮ್ಮ ಆದ್ಯತಾವಲಯಗಳಿಗೆ ಅದು ಸರಿ ಹೋಗುತ್ತದೆಯೋ ಇಲ್ಲವೋ ಎಂಬುದನ್ನೂ ಸಹ ನೋಡಬೇಕಾಗುತ್ತದೆ.

ಅಧ್ಯಕ್ಷರು: ನಾನು ಏನು ಹೇಳುತ್ತಿದ್ದೇನೆ ಅಂದರೆ, ಅವರು ಹೇಳಿದರು ಮತ್ತು ತಾವು ಹಿನ್ನಲೆ ಒಪ್ಪಿಕೊಂಡಿದ್ದೀರಿ, ನಿಜ. ಎಲ್ಲಾ ಜಿಲ್ಲೆಗಳವರು ತೆರಿಗೆ ಕೊಟ್ಟಂತೆ, ಈ ಪ್ರದೇಶದ ಶಾಸಕರು ಯಾರು ಮಾತನಾಡಿದರು, ಇವರೂ ಸರಕಾರಕ್ಕೆ ಬರತಕ್ಕಂಥ ಎಲ್ಲಾ ತೆರಿಗೆಗಳನ್ನೂ ಏಕರೂಪದಲ್ಲಿ ಕಟ್ಟುತ್ತಾ ಇದ್ದಾರೆ. ನಮಗೆ ಒಂದು ಸಣ್ಣ ಕೆರೆಗೆ ಕಾಲುವೆಯನ್ನು ಮಾಡಿಸಬೇಕು ಅಂದರೆ, ನಿಮ್ಮ ಮೈನರ್ ಇರಿಗೇಷನ್ ಮಿನಿಸ್ಟರ್ ಹತ್ತಿರ ಹಣವಿಲ್ಲ. ವೆಂಕ್ಟೇಶ್‌ರವರಿಗೆ ಕೇಳಿದರೆ ಒಂದು ಕ್ಷೇತ್ರಕ್ಕೆ ಇಡೀ ವರ್ಷಕ್ಕೆ ಒಂದೂವರೆ, ಎರಡು ಲಕ್ಷಗಳಷ್ಟು ಮಾತ್ರ ಹಣ ಇದೆ ಎಂದು ಹೇಳುತ್ತಾರೆ. ಭೈರೇಗೌಡರು ಐದು ಲಕ್ಷದ್ದು ಕಳುಹಿಸಿ ಎಂದು ನನಗೆ ಆರಾರು ಸರ್ಕುಲರ್‌ಗಳನ್ನು ಕಳುಹಿಸುತ್ತಾರೆ. ಇದಕ್ಕೊಂದು ಪ್ರೋಗ್ರಾಂ ಕೊಡಿ ಎಂದು ಕೇಳುತ್ತಾರೆ. ಏನು ಪ್ರೋಗ್ರಾಂ ಕೊಡಬೇಕೋ ನಮಗೆ ಗೊತ್ತಿಲ್ಲ. ಒಟ್ಟಿನಲ್ಲಿ ನಮಗೆ ಏನಾಗುತ್ತದೆ ಅಂದರೆ ಒಂದು ಕೆರೆಗೆ ತೂಬು ಮಾಡಿಸಲು ಆಗುವುದಿಲ್ಲ. ಕೆರೆಕಟ್ಟೆ ರಿಪೇರಿ ಮಾಡಿಸಲು ಆಗುವುದಿಲ್ಲ. ನೀವು ಕೋಟ್ಯಾಂತರ ರೂ.ಗಳನ್ನು ಬೇರೆ ಕಡೆಗಳಿಗೆ ಹಾಕುತ್ತೀರಿ. ಅಲ್ಲಿಯೂ ಅಭಿವೃದ್ಧಿ ಆಗಲಿ, ಅದು ನಮಗೆ ಸಂತೋಷವೇ. ಅದೂ ನಮ್ಮ ರಾಜ್ಯದ ಒಂದು ಭಾಗ, ಅದನ್ನು ಬೇಡ ಎಂದು ನಾವು ಹೇಳುವುದಿಲ್ಲ. ಆದರೆ ನಮಗೆ ಸಣ್ಣ ಕಾಲುವೆ, ಕೆರೆ ರಿಪೇರಿ ಮಾಡಬೇಕೆಂದರೆ ಹಣವಿಲ್ಲ. ಜಿಲ್ಲಾಪಂಚಾಯಿತರವರನ್ನು ಕೇಳಿದರೆ ಎಂಐ ನವರಿಗೆ ಕೇಳಿ ಎಂದು ಹೇಳುತ್ತಾರೆ. ಇನ್ನೂ ಕೆಲವು ಜಿಲ್ಲಾಪಂಚಾಯತಿಗೆ ಸೇರುವುದಿಲ್ಲ, ಎಂಐಗೂ ಸೇರುವುದಿಲ್ಲ. ಕುಂಟೆಗಳು ನಮ್ಮಲ್ಲಿವೆ. ಅದರಿಂದ 10-15 ಎಕರೆ ಸಾಗುವಳಿ ಮಾಡಲಾಗುತ್ತದೆ. ಅದನ್ನು ಒಂದೊಂದು ಕ್ಷೇತ್ರದಲ್ಲಿ 20 ಮಾಡಿಕೊಟ್ಟರೂ ಕೂಡ ನಮ್ಮ ಜನರಿಗೆ ಎಷ್ಟೋ ಅನುಕೂಲವಾಗುತ್ತದೆ.

ಶ್ರೀ ಸಿದ್ಧರಾಮಯ್ಯ: ತಾವು ಹೇಳುವುದು ಬಹಳ ಸಮಂಜಸವಾಗಿದೆ.

ಶ್ರೀ ಚಂದ್ರಪ್ಪ (ಭರಮಸಾಗರ): ಮಾನ್ಯ ಅಧ್ಯಕ್ಷರೇ, ನಮ್ಮ ಬಯಲುಸೀಮೆ ಏರಿಯಾದಲ್ಲಿ ಈ ವರ್ಷ ಮಳೆ ಇಲ್ಲದೆ ಹುಲ್ಲೂ ಕೂಡ ಹುಟ್ಟಿಲ್ಲ. ಇಂಥ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ದಯಮಾಡಿ ಮಾನ್ಯ ಹಣಕಾಸಿನ ಸಚಿವರು ಈ ಬಗ್ಗೆ ಹೆಚ್ಚು ಗಮನ ಹರಿಸಬೇಕೆಂಬುದು ನಮ್ಮ 73 ಶಾಸಕರುಗಳ ಮನವಿ.

ಅಧ್ಯಕ್ಷರು: ಮೊನ್ನೆ ಮಂಡ್ಯದ ವಿಸಿ ಕೆನಾಲ್ ಮಾಡರ್ನೈಸೇಷನ್‌ಗೆ ಎಷ್ಟು ಕೊಟ್ಟಿದ್ದೀರಿ?

ಶ್ರೀ ಸಿದ್ಧರಾಮಯ್ಯ: ಅದು ಇನ್ನೂ ಲೆಕ್ಕ ಸರಿಯಾಗಿ ಕೊಟ್ಟಿಲ್ಲ....

ಅಧ್ಯಕ್ಷರು: ಒಂದು ಅಂದಾಜು ಎಷ್ಟು ಕೊಟ್ಟಿದ್ದೀರಿ? ಹಾಗಾದರೆ ನಾವು ಈ ರಾಜ್ಯದಲ್ಲಿ ಸೆಕೆಂಡ್‌ರೇಟ್ ಸಿಟಿಜನ್ಸ್..? ತಾವೇ ಹೇಳಿ? ಈ ಬಯಲುಸೀಮೆ ಪ್ರದೇಶದಿಂದ ಬರತಕ್ಕಂಥವರು ಇವರು ತೆರಿಗೆ ಕಟ್ಟುತ್ತಾ ಇಲ್ಲವೇ? ವಾಹನ ತೆರಿಗೆ ಕಟ್ಟುವುದಿಲ್ಲವೇ? ಸೇಲ್ಸ್‌ಟ್ಯಾಕ್ಸ್ ಕಟ್ಟುವುದಿಲ್ಲವೇ? ರಾಜ್ಯದ ಬೊಕ್ಕಸಕ್ಕೆ ದುಡ್ಡು ತುಂಬುತ್ತಾ ಇಲ್ಲವೇ? ಹೀಗೆ ಮಾಡಿದರೆ ಹೇಗೆ? ನ್ಯಾಯ ಬೇಡವೇ? ನೀವು ನ್ಯಾಯಕ್ಕೆ, ನಿಷ್ಪುರಕ್ಕೆ, ಪ್ರೀತಿವಾತ್ಸಲ್ಯಕ್ಕೆ ಹೆಸರಾದವರು; ನೀವು ಹಣಕಾಸಿನ ಮಂತ್ರಿಗಳಾಗಿ ಈ ತರಹ ಮಾತನಾಡಿದರೆ ಈ ರಾಜ್ಯದಲ್ಲಿ ನಮಗೆ ಇನ್ನೂ ಯಾರು ನ್ಯಾಯ ಕೊಡಬೇಕು?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಉಪ-ಮುಖ್ಯಮಂತ್ರಿಯವರ ಮೇಲೆ ನಮಗೆ ಬಹಳ ಅಭಿಮಾನ ಇದೆ. ನಿಮ್ಮಿಂದ ನಾವು ಈ ರೀತಿಯಲ್ಲಿ ನಿರೀಕ್ಷೆ ಮಾಡಿರಲಿಲ್ಲ.

ಶ್ರೀ ಸಿದ್ಧರಾಮಯ್ಯ: ಈಗ 40-50 ಕೋಟಿಗಳನ್ನು ಕೊಡುವುದಕ್ಕೆ ನಮ್ಮದೇನೂ ತಕರಾರು ಇಲ್ಲ. ಈ ಹಂತದಲ್ಲಿ ಎಲ್ಲಿಂದ ಕಟ್ ಮಾಡಿಕೊಡಬೇಕೆಂಬುದು ನಮ್ಮ ಮುಂದಿರುವ ಪ್ರಶ್ನೆ. ಇನ್ನೊಂದು ಇಲಾಖೆಗೆ ಕೊಟ್ಟಿರತಕ್ಕಂಥ ಹಣವನ್ನು ಕಡಿಮೆ ಮಾಡಿ ಇದಕ್ಕೆ ಕೊಡಬೇಕಾಗುತ್ತದೆ. ಆದ್ದರಿಂದ ಯಾವರೀತಿಯಲ್ಲಿ ಕೊಡಬೇಕೆಂಬುದನ್ನು ವಿಚಾರ ಮಾಡಬೇಕು. ಇರಿಗೇಷನ್‌ಗೆ ಕೊಟ್ಟಿರುವುದನ್ನು ಕಡಿಮೆ ಮಾಡಬೇಕೇ ಅಥವಾ ಇನ್ನಾವುದೇ ಇಲಾಖೆಗೆ ಕೊಟ್ಟಿರತಕ್ಕಂಥಾದ್ದನ್ನು ಕಡಿಮೆ ಮಾಡಬೇಕೇ ಎಂಬುದನ್ನು ನೋಡಬೇಕು. ಯಾಕೆಂದರೆ ಬಜೆಟ್‌ನಲ್ಲಿ ನಮಗೆ expected receipt and expenditure ಎಷ್ಟು ಎಂಬುದನ್ನು ಸ್ಟೇಟ್‌ಮೆಂಟ್‌ನಲ್ಲಿ ಕೊಟ್ಟಿರುತ್ತೇವೆ. ನಾವು ಎಕ್ಸ್‌ಪೆಕ್ಟೆಡ್ ರಿಸೀಟ್ಸ್‌ಗಿಂತ ಹೆಚ್ಚಾಗಿ ಬರುವುದು ಬಹಳ ಕಡಿಮೆ. ಖರ್ಚು ಬೇಕಾದರೆ ಯಾವಾಗಲೂ ಹೆಚ್ಚಾಗಿ ಬರುತ್ತಿರುತ್ತದೆ. ಎಕ್ಸ್‌ಪೆಕ್ಟೆಡ್ ರಿಸೀಟ್ಸ್‌ಗಿಂತ ಆದಾಯ ಬರುವುದು ಕಡಿಮೆ ಇರುತ್ತದೆ. ಆ ಕಾರಣದಿಂದ ಅವರೆಲ್ಲರ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು, ನಾವು ಸಚಿವಸಂಪುಟದಲ್ಲಿ ಚರ್ಚಿಸಿ ಎಲ್ಲಿ ಕಟ್ ಮಾಡಲು ಸಾಧ್ಯವಾಗುತ್ತದೆ? ಎಷ್ಟು ಕೊಡಲು ಸಾಧ್ಯವಾಗುತ್ತದೆ ಎಂಬ ಬಗ್ಗೆ ಚರ್ಚೆ ಮಾಡಿ ಒಂದು ತೀರ್ಮಾನ ಮಾಡುತ್ತೇವೆ ಎಂಬ ಮಾತನ್ನು ಹೇಳಬಯಸುತ್ತೇನೆ. ಇಷ್ಟೇ ಕೊಡುತ್ತೇನೆ ಎಂದು ಹೇಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು: ಕನಿಷ್ಟ ಎಷ್ಟು ಕೊಡುತ್ತೀರಿ ಎಂದು ಹೇಳಿ...

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೇ,...

(ಗೊಂದಲ)

ಶ್ರೀ ಸಿದ್ಧರಾಮಯ್ಯ: ಬಜೆಟ್ ಇಲ್ಲ, ಆದ್ದರಿಂದ ಇಷ್ಟೇ ಕೊಡುತ್ತೇನೆ ಎಂದು ಹೇಳಲು ಸಾಧ್ಯವಾಗುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವು ಇಲ್ಲಿ ಕನ್ವಿನ್ಸ್ ಮಾಡಿ, ಎಲ್ಲಾ ಕನ್ವಿನ್ಸ್ ಆಗುತ್ತಾರೆ.

(ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಭಾವಿಯತ್ತ ಧಾವಿಸಿದರು)

ಶ್ರೀ ಸಿದ್ಧರಾಮಯ್ಯ: ತಾವುಗಳು ಕುಳಿತುಕೊಳ್ಳಿ. ನಾನು ಇನ್ನೂ ಹೇಳಿಕೆಯನ್ನು ಪೂರ್ತಿ ಮಾಡಿಲ್ಲ. ತಾವು ಹೀಗೆ ಒತ್ತಾಯ ತಂದರೆ ಕೊಡುವುದಕ್ಕೆ ಆಗುವುದಿಲ್ಲ.... ಬಜೆಟ್ ಆಗಿಹೋಗಿ ಬಿಟ್ಟಿದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಹಾಗೆಲ್ಲಾ ತಾವುಗಳು ಸಿಟ್ಟು ಮಾಡಿಕೊಳ್ಳಬೇಡಿ...

ಅಧ್ಯಕ್ಷರು: ಮಾನ್ಯ ಸದಸ್ಯರುಗಳು ತಮ್ಮ ಸ್ಥಳಗಳಿಗೆ ಹೋಗಿ ಕುಳಿತುಕೊಳ್ಳಿ. ನಿಮ್ಮ ಕೆಲಸ ಆಗುತ್ತದೆ. ಸುಮ್ಮನೆ ಮಾತು ಏಕೆ? ಯಾಕೆ ತಮಗೆ ಮಾತಿನ ಚಪಲ?

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈಗ ನಾವು ಯಾರೂ ಹೆಚ್ಚು ಮಾತನಾಡಬೇಕಾದ ಅಗತ್ಯವಿಲ್ಲ. ಹಣಕಾಸು ಅಂದರೆ ವ್ಯವಹಾರ. ಆವಾಗ ಮಾತುಕತೆ ಬೇಕಾಗಿಲ್ಲ. ಉಪಾಯದಿಂದ ಕೆಲಸ ಮಾಡಿಕೊಳ್ಳಬೇಕು. ಅವರು ಕ್ಯಾಬಿನೆಟ್‌ನಲ್ಲಿ ಕುಳಿತು ಚರ್ಚೆ ಮಾಡುತ್ತೇವೆ, ಎಲ್ಲಿ ಖೋತಾ ಮಾಡಬೇಕೋ ಎಂಬುದನ್ನು ನೋಡಿ ಕೊಡುವುದಕ್ಕೆ ಸಿದ್ಧವಾಗಿದ್ದೇನೆ, ಇಷ್ಟೇ ಕೊಡುತ್ತೇನೆ ಎಂದು ಹೇಳುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ಅದು ನಿಜವಾದ ಮಾತು. ಆಡಳಿತದಲ್ಲಿರುವವರು ಯಾರೂ ಕೂಡ ಇಷ್ಟು ಕೋಟಿ ರೂಪಾಯಿ, ಇಷ್ಟು ಪೈಸೆಗಳನ್ನು ಇಲ್ಲೇ ಕೊಡುತ್ತೇವೆಂದು ಹೇಳುವುದಕ್ಕೆ ಬರುವುದಿಲ್ಲ. ನಾನು ಒಂದು ಕನಿಷ್ಟ ಅಂದಾಜು ಎಷ್ಟು ಸಿಗಬಹುದು ಎಂದು ಕೇಳಿದೆ. ಅದಕ್ಕೆ ಅವರು ಆಲೋಚನೆ ಮಾಡುವಷ್ಟರಲ್ಲಿ ನೀವು ಗಲಾಟೆ ಮಾಡುತ್ತಿದ್ದೀರಿ. ನೀವು ಅವರಿಗೆ ಹೇಳಲು ಬಿಡುವುದಿಲ್ಲ. ಅವರು ಸಹಾಯ ಮಾಡಬೇಕೆಂದಿರುವಾಗ ನೀವು ಗಲಾಟೆ ಮಾಡಿದರೆ, ಅವರು ಸಿಟ್ಟಾಗಿ ಹೋಗಿಬಿಟ್ಟರೆ ಏನು ಮಾಡುತ್ತೀರಿ? ಸಿದ್ಧರಾಮಯ್ಯನವರೇ ತಾವು ಬೇಸರ ಮಾಡಿಕೊಳ್ಳಬೇಡಿ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ಈ ವರ್ಷ ಎಷ್ಟು ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ನೋಡಿ ಅಷ್ಟು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು: ವೆರಿಗುಡ್... ವೆರಿಗುಡ್...

ಶ್ರೀ ಹೆಚ್.ಶಿವಪ್ಪ: ಮಾನ್ಯ ಅಧ್ಯಕ್ಷರೆ, ನನ್ನದು ಒಂದು ಕ್ಲಾರಿಫಿಕೇಷನ್ ಇದೆ. ನೀರಾವರಿ ಇರತಕ್ಕಂಥ ಪ್ರದೇಶವನ್ನು ಈ ಬಯಲುಸೀಮೆ ಪ್ರದೇಶದ ವ್ಯಾಪ್ತಿಯಲ್ಲಿ ತಂದಿಲ್ಲ ಅದಕ್ಕೆ ನಾವು ಪಾಪ ಮಾಡಿದ್ದೇವೆಯೇ? ತಾವೇ ಹೇಳಿದ್ದೀರಿ. ನಾವು ಕೂಡ ಎಲ್ಲರೂ ಕೊಟ್ಟ ಹಾಗೆ ತೆರಿಗೆ ಕೊಡುತ್ತಾ ಇದ್ದೇವೆ. ಬಯಲು ಸೀಮೆಯಲ್ಲಿ ಏನು ಆಹಾರದ ಕೊರತೆ ಇದೆ, ಅದಕ್ಕೆ ನಾವು ಉತ್ಪತ್ತಿ ಮಾಡಿ ಅದನ್ನೂ ಮಾಡುತ್ತಾ ಇದ್ದೇವೆ. ನಮ್ಮಲ್ಲಿ ರಸ್ತೆ ಮಾಡಿಸಬೇಕು. ನೀರಾವರಿ ಪ್ರದೇಶಗಳಲ್ಲಿ ರಸ್ತೆಗಳು ಜಾಸ್ತಿ ಹಾಳಾಗುತ್ತವೆ. ಆದ್ದರಿಂದ ಈ ವ್ಯಾಪ್ತಿಯಲ್ಲಿ ನಮ್ಮ ಭಾಗವನ್ನೂ ಸೇರಿಸಬೇಕು.

ಅಧ್ಯಕ್ಷರು: ಈಗ ವಿವರದ ಅಗತ್ಯವಿಲ್ಲ... ನೀವು ಹೇಳಿದ್ದನ್ನು ಮಾಡಿಸೋಣ...

ಶ್ರೀ ಕಾಗೋಡು ತಿಮ್ಮಪ್ಪ: ನಮ್ಮಲ್ಲಿ 8 ಕ್ವಿಂಟಾಲ್ ಭತ್ತಕ್ಕಿಂತ ಜಾಸ್ತಿಯಾಗುವುದಿಲ್ಲ. ನಿಮ್ಮಲ್ಲಿ 30 ಕ್ವಿಂಟಾಲ್ ಬೆಳೆಯುತ್ತೀರಲ್ಲಾ ಹಾಗಾದರೆ ಎರಡೆರಡು ಕ್ವಿಂಟಾಲ್ ಭತ್ತದ್ದು ಕಾಂಟ್ರಬ್ಯೂಷನ್ ಮಾಡಿ ಎಲ್ಲರೂ...

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಉಪ-ಮುಖ್ಯಮಂತ್ರಿಯವರ ಗಮನಕ್ಕೆ ಒಂದು ವಿಷಯ. ನಮ್ಮ ಮಾಯಕೊಂಡದ ರವೀಂದ್ರನಾಥ್‌ರವರು ಹೇಳಿದರು, ಅಲ್ಲಿ 30 ಪರ್‌ಸೆಂಟ್ ನೀರಾವರಿ ಇದೆ. ಅದು ಇದುವರೆಗೂ ಸೇರಿಲ್ಲ. ಅವರಿಗೆ ವಂಚನೆಯಾಗಿದೆ. ಮಾಯಾಕೊಂಡ ಕ್ಷೇತ್ರವು ಮಲೆನಾಡಿಗೂ ಇಲ್ಲ, ಬಯಲುಸೀಮೆಗೂ ಇಲ್ಲ...

ಅಧ್ಯಕ್ಷರನ: ಮಾಯಕೊಂಡ ಮತ್ತು ಗೌರಿಬಿದನೂರು ಕ್ಷೇತ್ರಗಳಲ್ಲಿ ಆ ಒಂದು ವಿಶಿಷ್ಟವಾದ ಪರಿಸ್ಥಿತಿಯು ಇದೆ.

ಶ್ರೀ ಬಿ.ಎಸವ್.ಯಡಿಯೂರಪ್ಪ: ಮಾನ್ಯ ಭೈರೇಗೌಡರವರೇ, ಮಾಯಕೊಂಡ ಕ್ಷೇತ್ರದಲ್ಲಿ ಶೇಕಡ 30ಭಾಗ ಮಾತ್ರ ನೀರಾವರಿ ಇದೆ. ನಾವು ಆವೊತ್ತಿನಿಂದ ಹೇಳುತ್ತಾ ಇದ್ದೇವೆ. ಆದರೆ ಇದುವರೆಗೂ ಆ ಕ್ಷೇತ್ರ ಸೇರಿಲ್ಲ. ಬೇಕಾದರೆ ಅಲ್ಲಿನ ವಿವರಗಳನ್ನು ತರಿಸಿಕೊಳ್ಳಿ.

ಶ್ರೀ ಕೆ.ವೆಂಕಟೇಶ್ (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಸಚಿವರು): ಸನ್ಮಾನ್ಯ ಅಧ್ಯಕ್ಷರೇ ಶ್ರೀಮತಿ ಜ್ಯೋತಿರೆಡ್ಡಿಯವರು ಮತ್ತು ಶ್ರೀ ಯಡಿಯೂರಪ್ಪನವರು ಎರಡೂ ಕ್ಷೇತ್ರಗಳನ್ನು ಸೇರಿಸಬೇಕೆಂದು ಪ್ರಸ್ತಾಪ ಮಾಡಿದ್ದಾರೆ. ನಮ್ಮ ಬಯಲುಸೀಮೆ ಆಕ್ಟ್‌ನಲ್ಲಿ 30 ಪರ್‌ಸೆಂಟ್‌ಗಿಂತ ಹೆಚ್ಚಾಗಿ ನೀರಾವರಿ ಇರತಕ್ಕಂಥ ಪ್ರದೇಶಗಳನ್ನು ಬಯಲುಸೀಮೆ ಆಕ್ಟ್‌ನಲ್ಲಿ ಸೇರಿಸಿಕೊಳ್ಳಬಾರದು ಎಂದು ಇದೆ. 30 ಪರ್ಸೆಂಟಿಗಿಂತ ಕಡಿಮೆ ಇರತಕ್ಕಂತಹ ತಾಲ್ಲೂಕುಗಳನ್ನು ಸೇರಿಸಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಆ

ಪ್ರಕಾರ ಹಿಂದೆ ಮಾಡುವಾಗ ಮಾನ್ಯ ಬೈರೇಗೌಡರು ಇದನ್ನೆಲ್ಲಾ ಗಮನವಹಿಸಿ ನೋಡಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ತಾವು ಗೌರಿಬಿದನೂರು ಮತ್ತು ಮಾಯಕೊಂಡವೆಂದು ಏನು ಹೇಳಿದ್ದೀರಿ 30 ಪರ್ಸೆಂಟಿಗಿಂತ ಕಡಿಮೆ ಇದೆ ಎಂದು ತಾವು ಹೇಳುತ್ತಿದ್ದೀರಿ. ಇದನ್ನು ಪರಿಶೀಲನೆ ಮಾಡುತ್ತೇನೆ. 30 ಪರ್ಸೆಂಟಿಗಿಂತ ಕಡಿಮೆ ಬಂದರೆ ಅದನ್ನು ಸೇರಿಸುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಎಸ್.ಎ.ರವೀಂದ್ರನಾಥ್: 30 ಪರ್ಸೆಂಟ್ ನೀರಾವರಿ ಇದ್ದರೆ ಇನ್ನು ಉಳಿದ 70 ಪರ್ಸೆಂಟ್ ಜನ ಎಲ್ಲರೂ ಬರಗಾಲದಲ್ಲಿದ್ದಾರೆ. ಅವರು ಏನು ಮಾಡಬೇಕು ಹೇಳಿ.

(ಜ) ರಾಜ್ಯ ರಸ್ತೆ ಸಾರಿಗೆ ಬಸ್‌ದರಗಳನ್ನು ಏರಿಸುವ ಬಗ್ಗೆ

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಮೊದಲೇ ಪ್ರಸ್ತಾಪ ಮಾಡಬೇಕೆಂದು ಇದ್ದೆ. ಆದರೆ ಬಯಲು ಸೀಮೆಯ ಬಗ್ಗೆ ನಿನ್ನೆಯಿದಲೇ ಕಸರತ್ತು ನಡೆದಿದೆ. 74 ಜನ ಶಾಸಕರು ಹಾಗೂ ನೇರವಾಗಿ ತಮ್ಮ ಮತ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಇದ್ದ ಕಾರಣ ಚರ್ಚೆ ನಡೆಯಲಿ ಎಂದು ಸುಮ್ಮನೆ ಕುಳಿತೆ. ಮಾನ್ಯ ಸಿಂಧ್ಯ ಅವರಿಗೆ ಯಾವಾಗಲೂ ಸುಮ್ಮನೆ ಕುಳಿತುಕೊಳ್ಳತಕ್ಕಂತಹ ಚಟ ಕಡಿಮೆ. ಏನಾದರೂ ಒಂದು ಅವರಿಗೆ ಆಗಬೇಕು.

ಅಧ್ಯಕ್ಷರು: ಮಾಧವ್‌ರಾವ್ ಸಿಂಧ್ಯ ಎಂದು ಹೇಳಿದಿರಾ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾಧವರಾವ್ ಸಿಂಧ್ಯ ಅವರು ಬಹಳ ಶಾಂತವಾಗಿ ಇರುತ್ತಾರೆ.

ಅಧ್ಯಕ್ಷರು: ಇನ್ನು ಯಾರು; ಮಾನ್ಯ ಪಿ.ಜಿ.ಆರ್.ಸಿಂಧ್ಯ ರವರೇ;

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಮ್ಮ ಪಿ.ಜಿ.ಆರ್.ಸಿಂಧ್ಯ ಇದ್ದಾರಲ್ಲಾ ಇವರು ಪ್ರೈಮ್ ಗೌವರ್ನ್‌ಮೆಂಟ್ ರೆಪ್ರಸೆಂಟೇಟಿವ್. ಪಿ.ಜಿ.ಆರ್.ಎಂದರೆ ಪ್ರೈಮ್ ಗವರ್ನ್‌ಮೆಂಟ್ ರೆಪ್ರೆಸೆಂಟೇಟಿವ್

MR. SPEAKER: You are really correct.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವು ನೋಡಿ ಬೇಕಿದ್ದರೆ. ಪ್ರಧಾನ ಮಂತ್ರಿಗಳದ್ದು ಯಾವುದಾದರೂ ಉತ್ತರ ಇದ್ದರೆ ಅಲ್ಲಿಗೆ ಹೋಗುತ್ತಿದ್ದರು ನನ್ನ ಪರವಾಗಿ ನೀನು ಕೊಡು ಎಂದು. ಮಾನ್ಯ ನಾಣಯ್ಯನವರಿಗೆ ಕಡಿಮೆ ಮಾಡಿ ಆ ಕಡೆ ಸ್ವಲ್ಪ ಕಳುಹಿಸಿ. ಪರವಾಗಿಲ್ಲ ಕಳುಹಿಸಿ

ಅಧ್ಯಕ್ಷರು: ಮಾನ್ಯ ನಾಣಯ್ಯನವರು ಕೃಷ್ಣ ನದಿ ವಿವಾದದಲ್ಲಿ distress

formula ಮಾಡಿಕೊಂಡಿದ್ದಾರಲ್ಲಾ. ಹಾಗೆ ಡಿಸ್ಟೈಸ್ ಇದ್ದಾಗ ಮಾತ್ರ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನ್ಯಾಚುರಲ್ ಕೆಲಾಮಿಟಿ ಡಿಸ್ಟೈಸ್ ಇದ್ದಾಗ ಅದನ್ನು ಅವರು ವಹಿಸಿಕೊಂಡಿದ್ದಾರೆ. ಆದರೆ ನೀವು ಯಾವುದೇ ಕೊಡಿ ಸರಿಯಾಗಿ ಅದನ್ನು ಸಮರ್ಥವಾಗಿ ಮಾಡುತ್ತಾರೆ. ಕೇಸ್ ಸರಿ ಇರಲಿ ತಪ್ಪು ಇರಲಿ ವಾದ ಮಾಡುವುದರಲ್ಲಿ ಬಹಳ ಪ್ರಾಂಪ್ಟ್ ಆಗಿ ಸಿನ್ಸಿಯರ್ ಆಗಿ ಮಾಡುತ್ತಾರೆ. ಅದಕ್ಕೋಸ್ಕರ ಇಟ್ಟುಕೊಂಡಿದ್ದಾರೆಂದು ನಾನು ಹೇಳುವುದಿಲ್ಲ.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಖರ್ಗೆಯವರಿಗೆ ನಾನು ಹೊರಗೆ ಬರಬೇಕೆಂಬ ಆಸೆ ಇದೆಯೇ? ಇಲ್ಲ ತಾನೇ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಏನು ಮಾಡುವುದು ತಾವು ಒಂದೊಂದು ಸಾರಿ ಬಹಳ ಹಠ ಹಿಡಿಯುತ್ತೀರಿ ತಪ್ಪು ಹೇಳಿದರೂ ಕೂಡ ಅದೇ ಸರಿ ಎಂದು ಹೇಳುತ್ತೀರಿ ಆಗ ನಮಗೆ ತೊಂದರೆಯಾಗುತ್ತದೆ. ಮಾನ್ಯ ಸಿಂಧ್ಯರವರು ಬೈಫರ್‌ಕೇಷನ್ ಮಾಡಿದರು. ಅದರ ಬಗ್ಗೆ ನಾವೇನೂ ಮಾಡಲಿಲ್ಲ. ಲೇಬರ್ ಮ್ಯಾನೇಜ್‌ಮೆಂಟ್ ಜಗಳ ಇತ್ತು ಅದರಲ್ಲಿ ನಾವು ಕೈ ಹಾಕಲಿಲ್ಲ. ಶಾಂತ ರೀತಿಯಲ್ಲಿ ನಡೆಯಲಿ ಕೆ.ಎಸ್.ಆರ್.ಟಿ.ಸಿ. ಲಾಸ್‌ನಲ್ಲೆ ನಡೆಯುತ್ತಿದೆ ಎಂದು ಇಡೀ ಸದನ ಅವರಿಗೆ ಸಹಕರಿಸಿತು. ಅವರಿಗೇಕೆ ತೊಂದರೆ ಕೊಡಬೇಕೆಂದು ಬಹುಶಃ ಅವರಿಗೆ ಇಡೀ ಸದನ ಸಹಕರಿಸಿದೆ. ಅವರು ಮಾಡಿದಂತಹ ಜನರಿಗೆ ಅನ್ಯಾಯ, ಬಸ್‌ನಲ್ಲಿ ಪ್ರಯಾಣಿಸುವವರಿಗೆ. ಬಹುಶಃ ಬೇರೆ ಯಾರೂ ಮಾಡಿರಲಿಕ್ಕಿಲ್ಲ. ಮೊದಲೇ 25-30-40 ಹೀಗೆ ಇನ್ನೂ ಕೆಲವು ಕಡೆಗಳಲ್ಲಿ 100 ಪರ್ಸೆಂಟ್ ಅನ್ನು ಲಕ್ಸುರಿಯಲ್ಲಿ ದರವನ್ನು ಏರಿಸಿದರು. ಅಷ್ಟಾದರೂ ಕೂಡ ಜನರು ಪ್ರತಿಭಟಿಸುತ್ತೇವೆಂದು ಎಲ್ಲರೂ ಪ್ರತಿಭಟಿಸಿದರು. ಇಷ್ಟೆಲ್ಲಾ ಮಾಡಿದರೂ ಕೂಡ ತನ್ನದೇ ಹಠ ಹಿಡಿದು ದರವನ್ನು ಏರಿಸತಕ್ಕಂಥ ಕೆಲಸ ಮಾಡಿದ್ದಾರೆ. ಜನ ಮರೆತು ಹೋದ ಹಾಗೆ ಈಗ ಆದರೂ ಕೂಡ ಅದರ ನೋವು ಮರೆತಿಲ್ಲ. ಹಣ ಕೊಡುವಾಗ ಎಲ್ಲಾ ನೋವು ಇದೆ. ಆದರೆ ಸ್ವಲ್ಪ ಅದು ತಣ್ಣಗಾಗುತ್ತಿದೆ. ಈ ಮಧ್ಯದಲ್ಲಿ ಮತ್ತೆ ಎರಡು ದಿನದ ಹಿಂದೆ 15-20 ಪರ್ಸೆಂಟ್ ದರವನ್ನು ಏರಿಸಬೇಕಾಗುತ್ತದೆ. ಈ ಒಂದು ಕೆ.ಎಸ್.ಆರ್.ಟಿ.ಸಿ.ಸಂಸ್ಥೆ ಪುನಃ ಲಾಭದಲ್ಲಿ ಬರಬೇಕು ಅದು ಉಳಿಯಬೇಕೆಂದು ಹೇಳುತ್ತಿದ್ದಾರೆ. ಬಸ್ ದರವನ್ನು ಏರಿಸಿದಾಗ ಮಾತ್ರ ಆ ಸಂಸ್ಥೆ ಉಳಿಯುತ್ತದೆ ಇತ್ತೀಚೆಗೆ ಡೀಸೆಲ್ ಪೆಟ್ರೋಲ್ ದರವನ್ನು ಹೆಚ್ಚಿಸಲಾಗಿದೆ ಆದ್ದರಿಂದ ನಾವೂ ಕೂಡ ಹೆಚ್ಚು ಮಾಡಲೇ ಬೇಕಾಗುತ್ತದೆಂದು ಹೇಳಿದ್ದಾರೆ. ಅವರು ಇದರ ಕಡೆಗೆ ತಮ್ಮ ಇಲಾಖೆಯಲ್ಲಿ ಈಗಾಗಲೇ ಈ ಚಿಂತನೆ ನಡೆಸಿದ್ದಾರೆ ಮತ್ತು ಈ ಮಾತನ್ನು ಬೇರೆ ಕಡೆಯೂ ಹೇಳಿದ್ದಾರೆ. ಆದ್ದರಿಂದ ಇಡೀ ರಾಜ್ಯದಲ್ಲಿ ಕೆಟ್ಟ ವಾತಾವರಣ ಮೂಡಿ ಬರುತ್ತದೆ. ತಮ್ಮ ಇಲಾಖೆಯ ವಿರುದ್ಧ ಇದ್ದ ಆಂದೋಲನ ಕಡಿಮೆಯಾಗಿದ್ದು ನಡೆಯಲಿ ಎಂದು ಹೇಳುತ್ತಿದ್ದರು. ಆದರೆ ಪುನಃ ಪದೇ

ಪದೇ ಜನರಿಗೆ ಕೊಡತಕ್ಕಂತಹ ತೊಂದರೆಯನ್ನು ನೋಡಿದಾಗ ಪುನಃ ಇದನ್ನು ನಾವು ಪ್ರತಿಭಟಿಸಬೇಕಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಪ್ರತಿಭಟನೆಯನ್ನು ಹೇಗೆ ಮಾಡುವುದು ಎಂದರೆ ತಮ್ಮ ಮೂಲಕ ಅವರಿಗೆ ಮನವರಿಕೆ ಮಾಡಿಕೊಟ್ಟು ಇದು ಸರಿಯಲ್ಲವೆಂದು ಹೇಳಬಹುದು ಆರ್ಗ್ಯುಮೆಂಟ್ ಮಾಡಬಹುದು. ಇಲ್ಲವೇ ವಾಕ್‌ಔಟ್, ಧರಣ ಮಾಡಬಹುದು. ಇಷ್ಟಾದರೂ ನಾವು ಮಾಡಿದ್ದೇ ಮಾಡುತ್ತೇವೆಂದು ಹೇಳಿದರೆ ವರ್ತನೆ ಮಾಡಿದರೆ ಇದಕ್ಕೆ ಚುನಾವಣೆ ಬಂದಾಗ ಜನರು ಪಾಠ ಕಲಿಸುತ್ತಾರೆ. ಅಲ್ಲಿಯವರೆಗೆ ನಾವು ಕೊಡತಕ್ಕಂಥಾದ್ದು ನಿಲ್ಲುವ ಹಾಗಿಲ್ಲ ನಾವು ಅನುಭವಿಸತಕ್ಕಂತಹ ತೊಂದರೆಗಳು ಕಷ್ಟಗಳು ನಿಲ್ಲುವುದಿಲ್ಲ. ಅಂತಹ ಒಂದು ಕೆಟ್ಟ ಆಲೋಚನೆಯನ್ನು ತಾವೇನು ಮಾಡುತ್ತಿದ್ದೀರಿ ಅದನ್ನು ತಾವು ಕೈ ಬಿಡಬೇಕು ಇದನ್ನು ಮಾಡಬಾರದು. ಈಗಾಗಲೇ ಕೆ.ಇ.ಬಿ.ಯವರು ದರ ಜಾಸ್ತಿ ಮಾಡಿದ್ದಾರೆ. ಹಾಲಿನ ದರವನ್ನು ಜಾಸ್ತಿ ಮಾಡಿದ್ದೀರಿ ಪಟ್ಟಣದಲ್ಲಿ ನೀರಿನ ದರವನ್ನು ಜಾಸ್ತಿ ಮಾಡಿದ್ದೀರಿ. ಇವೆಲ್ಲವೂ ಸೇರಿ ನಿಮ್ಮ ಸರಕಾರದ ಮೇಲೆ ಬಹಳ ಪರಿಣಾಮ ಬೀಳಬಹುದು. ಇವೆಲ್ಲವೂ ತಮ್ಮ ಸರಕಾರ ಬಂದ ಮೇಲೆ ಆಗಿದಂಥಾದ್ದಾಗಿದೆ. ಪುನಃ ಹೊಡೆತದ ಮೇಲೆ ಹೊಡೆತ ಪ್ರಯಾಣಿಕರಿಗೆ ಹೊಡೆಯ ಬೇಡಿ. ಈಗಾಗಲೇ ಹೊಡೆದಿದ್ದೀರಿ ಸಾಕಷ್ಟು ಹೊಡೆತವನ್ನು ಜನರು ತಾಳಿಕೊಂಡು ಸುಮ್ಮನೆ ಇದ್ದಾರೆ. ಇನ್ನೂ ಹೆಚ್ಚಿನ ಹೊಡೆತ ಹಾಕುವುದಕ್ಕೆ ಹೋದರೆ ಜನ ಕುಸಿದು ಬಿದ್ದು ಸತ್ತು ಹೋಗುತ್ತಾರೆ. ಏರಿಸುವುದಿಲ್ಲವೆಂಬ ಇದರ ಬಗ್ಗೆ ಸ್ಪಷ್ಟವಾಗಿ ಹೇಳಿಕೆ ಕೊಡಿ. ತಾವು ಯಾವಾಗಲೂ ಸದನ ಸೇರುವುದಕ್ಕಿಂತ ಮೊದಲು ಜಾಸ್ತಿ ಮಾಡುವುದು ಇಲ್ಲವೇ ಸದನ ಮುಗಿದ ತಕ್ಷಣ ಜಾಸ್ತಿ ಮಾಡುವುದನ್ನು ಮಾಡುತ್ತಿದ್ದೀರಿ ಇದು ಸರಿಯಲ್ಲ. ನಾಳೆ ಸದನ ಅಡ್ಜರ್ನ್ ಆದ ತಕ್ಷಣ ಅನೌನ್ಸ್ ಮಾಡುತ್ತೀರಿ ನನಗೆ ಗೊತ್ತಿದೆ. ಅಶಾಂತಿಗೆ ಮತ್ತು ಲಾ ಅಂಡ್ ಅರ್ಡರ್ಸ್ ಪರಿಸ್ಥಿತಿ ಕೆಡುವುದಕ್ಕೆ ತಾವೇ ಕಾರಣಕರ್ತರಾಗುತ್ತೀರಿ ಎಂಬ ಒಂದು ವಾರ್ನಿಂಗ್ ಮಾತನ್ನು ನಾನು ಇಲ್ಲಿ ಹೇಳುತ್ತೇನೆ. ಒಂದು ವೇಳೆ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕೆಟ್ಟರೆ ಅದಕ್ಕೆ ಸಂಪೂರ್ಣವಾದ ಜವಾಬ್ದಾರಿಯನ್ನು ಮಾನ್ಯ ಸಿಂಧ್ಯರವರು ಹೊತ್ತುಕೊಳ್ಳಬೇಕಾಗುತ್ತದೆ. ಒಂದು ಕಡೆ ಕೆ.ಎಸ್.ಆರ್.ಟಿ.ಸಿ, ಇನ್ನೊಂದು ಕಡೆ ಕೆ.ಇ.ಬಿ, ಮತ್ತೊಂದು ಕಡೆ ಲಾ ಅಂಡ್ ಆರ್ಡರ್ ಡಕಾಯಟ್ಸ್ ಇವೆಲ್ಲವೂ ಇದ್ದೇ ಇದೆ. ಇವೆಲ್ಲವೂ ಕೂಡ ಇದ್ದಾಗ ಜನ ಕೊನೆಗೆ ರೊಚ್ಚಿಗೆ ಎದ್ದು ನಿಮ್ಮ ಮೇಲೆ ಬೀಳತಕ್ಕಂತಹ ಪರಿಸ್ಥಿತಿ ಆಗಬಾರದು. ಇದರ ಬಗ್ಗೆ ಸ್ಪಷ್ಟವಾದ ತಮ್ಮ ಹೇಳಿಕೆಯನ್ನು ಕೊಡಬೇಕೆಂದು ತಮ್ಮ ಮೂಲಕ ಸರಕಾರವನ್ನು ಕೇಳುತ್ತಿದ್ದೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಡೀಸೆಲ್ ದರ ಜಾಸ್ತಿಯಾಗಿದೆ. ಇದರಿಂದಾಗಿ ರಾಜ್ಯದ ಜನತೆ ಹೊರಲಾರದಷ್ಟು ತೆರಿಗೆಯನ್ನು ರಾಜ್ಯದ ಜನರು ಹೊರುತ್ತಿದ್ದಾರೆ. ವಿಮರ್ಶೆ ಮಾಡಿ ನೋಡಿ. ಯಾವುದೋ ಕೆಟ್ಟ ಧೈರ್ಯ ನಿಮ್ಮದು. ಕಳೆದ ಹತ್ತಾರು ವರ್ಷಗಳಲ್ಲಿ ನೀವು ಏರಿಸಿದಷ್ಟು ತೆರಿಗೆಯನ್ನು ಬೇರೆ ಯಾರೂ ಹಾಕಿರಲಿಕ್ಕೆ ಸಾಧ್ಯವಿಲ್ಲ. ನಮ್ಮ ದೇಶದಲ್ಲಿ

ಬೇರೆ ಯಾವುದೇ ರಾಜ್ಯ ಏರಿಸದೇ ಇರುವಷ್ಟು ತೆರಿಗೆಯನ್ನು ನಮ್ಮ ರಾಜ್ಯದ ಜನರ ಮೇಲೆ ಹಾಕಿದ್ದೀರಿ. ಕಳೆದ ಎರಡು ವರ್ಷದಲ್ಲಿ ಇದನ್ನು ಏರಿಸಿದ್ದೀರಿ. ಆದರೆ ಆ ಫಲ ಯಾರಿಗೂ ಸಿಕ್ಕಿಲ್ಲ. ಕೆ.ಇ.ಬಿ. ಇಲಾಖೆಯಲ್ಲಿ 1000 ಕೋಟಿ ಹೆಚ್ಚಿನ ತೆರಿಗೆಯನ್ನು ನಮ್ಮ ರಾಜ್ಯದ ಜನರು ಕೊಡಬೇಕಾಗಿ ಬಂತು. ಸಾರಿಗೆ ದರವನ್ನು ಮೊನ್ನೆ ಏರಿಸಿದ್ದೀರಿ. ಜನರು ಹೊರಲಾರದ ಭಾರವನ್ನು ಹೊರುವಂತಹ ಕಾಲದಲ್ಲಿ ಮತ್ತೆ ಏರಿಸುವುದು ಬೇಡ. ಚುನಾಯಿತ ಪ್ರತಿನಿಧಿಗಳು ಅದು ಆಡಳಿತ ಪಕ್ಷ ವಿರೋಧ ಪಕ್ಷ ಇರಲಿ, ಇವರುಗಳು ನಮ್ಮ ಸಂಕಷ್ಟವನ್ನು ಅರ್ಥ ಮಾಡಿಕೊಳ್ಳದೆ ಕೈ ಕಟ್ಟಿಕೊಂಡು ಕುಳಿತಿದ್ದಾರೆಂಬ ಭಾವನೆ ನಮ್ಮ ಬಗ್ಗೆ ಒಂದು ರೀತಿಯ ಆಕ್ರೋಶ ಜನರಲ್ಲಿ ಮೂಡಿದೆ.

12.20 ಪಿ.ಎಂ

ಅದಕ್ಕೋಸ್ಕರ ಅದು ಎಷ್ಟೇ ಕಷ್ಟವಾದರೂ ಶ್ರೀ ಸಿಂಧ್ಯ ಅವರು ಅನುಭವ ಇರುವಂಥ ಒಬ್ಬ ಸಚಿವರು ಆಲ್ಲಿರುವುದರಿಂದ ಏನಾದರೂ ಮಾಡಿ ಈ ಇಲಾಖೆಯನ್ನು ಸರಿದೂಗಿಸಿಕೊಂಡು ಹೋಗುವ ಒಂದು ಪ್ರಾಮಾಣಿಕ ಪ್ರಯತ್ನ ಮಾಡಿ. ಇದುವರೆಗೆ ಏನೇನು ಬದಲಾವಣೆ ಮಾಡತಕ್ಕಂಥ ಪ್ರಯತ್ನ ಮಾಡಿದ್ದೀರಿ. ಬೇರೆ ಬೇರೆ ಕಾರಣಕ್ಕೋಸ್ಕರ ಕಾರ್ಮಿಕರು ನಿಮ್ಮ ಮೇಲೆ ತಿರುಗಿ ಬಿದ್ದಂಥ ಕಾಲದಲ್ಲಿ ಸಹ ನಾವು ಸಂಪೂರ್ಣವಾಗಿ ನಿಮ್ಮ ಪರವಾಗಿ ನಿಂತುಕೊಂಡೆವು. ನೀವು ಒಂದು ಧೈರ್ಯ ಮಾಡಿ ಆ ಇಲಾಖೆಯಲ್ಲಿ ಸುಧಾರಣೆ ಮಾಡುವಂಥ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೀರಿ ಎನ್ನುವ ಒಂದೇ ಒಂದು ಕಾರಣಕ್ಕೋಸ್ಕರ ನಾವು ನಿಮ್ಮ ಪರವಾಗಿ ನಿಂತೆವು. ಮತ್ತೊಮ್ಮೆ ಈ ರೀತಿ ಹೆಚ್ಚು ತೆರಿಗೆ ಹೊರುವಂಥ ಶಕ್ತಿ ಈ ರಾಜ್ಯದ ಜನರಿಗಿಲ್ಲ. ಅದಕ್ಕಾಗಿ ಯಾವುದೇ ಕಾರಣಕ್ಕೋಸ್ಕರ ಕೆ.ಎಸ್.ಆರ್.ಟಿ.ಸಿ ದರವನ್ನು ತಾವು ಜಾಸ್ತಿ ಮಾಡಬೇಡಿ. ಶ್ರೀ ಖರ್ಗೆಯವರು ಹೇಳಿದಂತೆ ಸಾಮಾನ್ಯವಾಗಿ ಬಂದಿರುವ ವಾಡಿಕೆ ಏನೆಂದರೆ ಅಧಿವೇಶನ ಪ್ರಾರಂಭವಾಗುವ 10 ದಿನ ಮುಂಚೆ ಅಥವಾ ಅಧಿವೇಶನ ಮುಗಿದ 10 ದಿವಸಗಳನಂತರ ಈ ರೀತಿ ತೆರಿಗೆಯನ್ನು ಜಾಸ್ತಿ ಮಾಡುವುದು ಒಂದು ಪರಿಪಾಠವಾಗಿದೆ. ಜನತಾದಳ ಎಂದರೆ ತೆರಿಗೆ ಹಾಕುವುದಕ್ಕೆ ಬಂದಿರುವ ಒಂದು ಪಾರ್ಟಿಯೇನೋ ಎನ್ನುವಂಥ ಭಾವನೆ ಇವ್ವೊತ್ತು ಜನರಲ್ಲಿ ಮೂಡಿದೆ. ತಾವು ಜನರ ಅಭಿಪ್ರಾಯವನ್ನೂ ತಿಳಿದುಕೊಳ್ಳುವಂಥ ಪ್ರಾಮಾಣಿಕ ಪ್ರಯತ್ನ ಮಾಡಿ. ಅದಕ್ಕಾಗಿ ನಾನು ತಮಗೆ ಇಷ್ಟಂತೂ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅಕಸ್ಮಾತ್ ಕೊನೆಯ ದಿವಸ ನಾವು ಕೊಡುತ್ತಿರುವ ಸಲಹೆ ರಾಜ್ಯದ ಹಿತದೃಷ್ಟಿಯಿಂದ, ಜನರ ಹಿತದೃಷ್ಟಿಯಿಂದ ನಿಮ್ಮ ಇಲಾಖೆ [illegible]ಯಾಗಿ ನಡೆಯಬೇಕು ಎನ್ನುವ ದೃಷ್ಟಿಯಿಂದ ನಾವು ಕೊಡುತ್ತಿರುವ ಸಲಹೆ ಸರಿಯಲ್ಲ ಎಂದು ನಿರ್ಲಕ್ಷ್ಯ ಮಾಡಿ ತಾವೇನಾದರೂ ಯಾವುದಾದರೂ ಕಾರಣ ಒಡ್ಡಿ ಕೆ.ಎಸ್.ಆರ್.ಟಿ.ಸಿ.ದರವನ್ನು ಜಾಸ್ತಿ ಮಾಡುವಂಥ ಪ್ರಯತ್ನ ಮಾಡಿದರೆ ಅನಿವಾರ್ಯವಾಗಿ ರಾಜ್ಯಾದ್ಯಂತ ಜನ ಬೀದಿಗಿಳಿಯುತ್ತಾರೆ, ಹೋರಾಟಕ್ಕೆ ತೊಡಗುತ್ತಾರೆ, ಅಶಾಂತಿ ವಾತಾವರಣ ನಿರ್ಮಾಣವಾಗುತ್ತದೆ. ತಮಗೆ

ಗೊತ್ತಿರಬಹುದು ಕಳೆದ ಹತ್ತಾರು ವರ್ಷಗಳಿಗೆ ಹೋಲಿಸಿದರೆ ಇತ್ತೀಚೆಗೆ ಬಹಳ ಶಾಂತ ರೀತಿಯಲ್ಲಿ ಜನ ಸಹಕಾರವನ್ನು ಕೊಡುತ್ತಿದ್ದಾರೆ. ಅದನ್ನು ಅವರ ದುರ್ಬಲತೆ ಎಂದು ತಿಳಿದು ದುರುಪಯೋಗ ಮಾಡಿಕೊಳ್ಳುವಂಥ ಪ್ರಯತ್ನವನ್ನೇನಾದರೂ ತಾವು ಮಾಡಿ ಕೆ.ಎಸ್.ಆರ್.ಟಿ.ಸಿ.ಯಲ್ಲಿ ತೆರಿಗೆಯನ್ನು ಏರಿಸುವಂಥ ಪ್ರಯತ್ನವನ್ನು ತಾವು ಮಾಡಿದರೆ ಬಹುಶಃ ಜನ ಕ್ಷಮಿಸುವುದಿಲ್ಲ, ರಾಜ್ಯ ಬೆಂಕಿ ಹತ್ತಿಕೊಂಡು ಉರಿಯುವಂಥ ಪರಿಸ್ಥಿತಿ ಬರಬಹುದು. ಅಶಾಂತಿ ನೆಲೆಸಬಹುದು. ಅನಿವಾರ್ಯವಾಗಿ ನಾವೂ ಸಹ ಆ ಜನರ ಹಿತದೃಷ್ಟಿಯಿಂದ ಆ ಹೊರಲಾಗದ ತೆರಿಗೆಯನ್ನು ಹೊರಲು ಅವರಿಗೆ ಸಾಧ್ಯವಿಲ್ಲ ಎಂದು ನಾವೇ ಜನರಿಗೆ ಸಹಕಾರ ಕೊಟ್ಟು ಬೀದಿಗಿಳಿಸುವಂಥ ಪ್ರಯತ್ನ ಬರಬಾರದು. ಆದುದರಿಂದ ತಾವು ಈ ಬಗ್ಗೆ ಗಮನ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಡೀಸಲ್ ದರ ಏರಿಕೆ ಬಗ್ಗೆ ಇವೊತ್ತು ಮುಖ್ಯಮಂತ್ರಿಗಳು ಒಂದು ಹೇಳಿಕೆ ಕೊಟ್ಟಿದ್ದಾರೆ. ಈ ಪರಿಷ್ಕೃತ ಸರ್ಚಾರ್ಜ್ ಏನು ಜಾಸ್ತಿಯಾಗಿದೆ ಅದನ್ನು ಪರಿಶೀಲನೆ ಮಾಡುವುದಕ್ಕೆ ಅಧಿಕಾರಿಗಳ ಮಟ್ಟದ ಒಂದು ಸಭೆಯನ್ನು ಕರೆದಿದ್ದಾರೆ. ಆದುದರಿಂದ ಈಗ ದಯಮಾಡಿ ನೀವು ಬಸ್‌ಚಾರ್ಜನ್ನು ಜಾಸ್ತಿ ಮಾಡುವ ಅವಶ್ಯಕತೆ ಇಲ್ಲ. ದಯಮಾಡಿ ಮಾಡಬೇಡಿ, ಅದಕ್ಕೆ ಜನ ಗಂಭೀರವಾದ ಪ್ರತಿಭಟನೆ ಮಾಡುತ್ತಾರೆ ಎಂದು ನಾನು ಹೇಳಬಯಸುತ್ತೇನೆ.

ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ): ನನಗೆ ವಿಷಯ ಅರ್ಥವಾಗಿದೆ. ವಾದಕ್ಕೋಸ್ಕರ ವಾದ ಮಾಡಿದರು ಎಂದು ಶ್ರೀ ಸಿಂಧ್ಯಾ ಅವರು ಅಂದುಕೊಳ್ಳುವುದು ಬೇಡ. ಸಿಂಧ್ಯ ಅವರು ದಯಮಾಡಿ ಒಂದು ಮಾಹಿತಿ ಕೊಡಲಿ. ವರ್ಷಂಪ್ರತಿ ಎಷ್ಟು ಡೀಸಲ್ ಉಪಯೋಗಿಸುತ್ತಿದ್ದಾರೆ, ಡೀಸಲ್ ಏರಿಕೆಯಿಂದ ಎಷ್ಟು ದುಡ್ಡನ್ನು ಜಾಸ್ತಿ ಖರ್ಚು ಮಾಡಬೇಕಾಗುತ್ತದೆ. ಇನ್ನೊಂದು ಬಹಳ ಮುಖ್ಯವಾದ ಮಾಹಿತಿ ಏನೆಂದರೆ ನಮ್ಮ ಆಜುಬಾಜಿನ ರಾಜ್ಯಗಳಲ್ಲಿ ಅಂದರೆ ಪ್ರಮುಖವಾಗಿ ತಮಿಳುನಾಗಿನಲ್ಲಿ ಪರ್ ಸೀಟ್ ಎಷ್ಟು ಟ್ಯಾಕ್ಸ್ ಹಾಕಿದ್ದಾರೆ, ಪರ್ ಕಿಲೋಮೀಟರ್‌ಗೆ ಏನು ರೇಟ್ ಹಾಕಿದ್ದಾರೆ ಎಂದು. ಏಕೆಂದರೆ ನನಗೆ ಗೊತ್ತಾಗಿದೆ, ಅಲ್ಲಿ ಟ್ಯಾಕ್ಸ್ ಕಡಿಮೆ, ಪ್ರತಿ ಸೀಟ್‌ಗೆ ಇಷ್ಟು ಟ್ಯಾಕ್ಸ್ ಎಂದು ಹಾಕುವಂಥ ತೆರಿಗೆಯೂ ಕಡಿಮೆ, ಜನಗಳಿಗೆ ಟಿಕೆಟ್ ರೇಟ್ ಕೂಡ ಕಡಿಮೆ. ಆದರೆ ಲಾಭದಾಯಕವಾಗಿ ನಡೆಯುತ್ತಿದೆ. ಇಲ್ಲಿ ಟ್ಯಾಕ್ಸ್ ಜಾಸ್ತಿ, ಟಿಕೆಟ್ ರೇಟ್ ಕೂಡ ಜಾಸ್ತಿ, ಆದರೆ ನಷ್ಟದಲ್ಲಿ ನಡೆಯುತ್ತಿದೆ. ಆದುದರಿಂದ ಇದರಲ್ಲಿ Why can't you improve the efficiency and without passing the burden of this raise to the commuter, can you not manage? ಇದರಲ್ಲಿ ಸ್ವಲ್ಪ ಪ್ರಾಮಾಣಿಕವಾದ ಪ್ರಯತ್ನ ಮಾಡಿ. ತಾವು ದಯವಿಟ್ಟು ಪ್ರಯತ್ನ ಮಾಡಬೇಕು. ಆ ದಿಸೆಯಲ್ಲಿ ಏನು ಮಾಡುತ್ತೀರಿ ಎಂಬುದನ್ನು ದಯಮಾಡಿ ಹೇಳಿ.

+ ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು, ಶ್ರೀಮಾನ್ ಯಡಿಯೂರಪ್ಪನವರು, ಶ್ರೀಮಾನ್ ಶ್ರೀರಾಮರೆಡ್ಡಿಯವರು ಮತ್ತು ಹಿರಿಯ ಸದಸ್ಯರಾದಂಥ ಶ್ರೀಮಾನ್ ನಂಜೇಗೌಡರು ಮತ್ತು ಇತರ ಸ್ನೇಹಿತರುಗಳು ಇವೊತ್ತು ಏನು ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ಪ್ರಜಾತಂತ್ರದಲ್ಲಿ ಯಾವುದೇ ಒಬ್ಬ ಮಂತ್ರಿಯಾಗಲಿ, ಶಾಸಕರಾಗಲಿ ಖಂಡಿತವಾಗಿಯೂ ಸಹ ನಾನು ಹೇಳುವುದೇ ಸರಿ ಎಂದು ಹೇಳುವ ನನ್ನದೇ ಆದ ಹಠ ಇಲ್ಲ. ಯಾವತ್ತೂ ಸಹ ಪ್ರಜಾಪ್ರಭುತ್ವದಲ್ಲಿ ಜನಗಳ ಒಟ್ಟಾರೆ ಅಭಿಪ್ರಾಯವನ್ನು ತೆಗೆದುಕೊಂಡು ನಾವೆಲ್ಲರೂ ಹೋಗತಕ್ಕಂಥ ಕೆಲಸವನ್ನು ಮಾಡಬೇಕಾಗುತ್ತದೆ. ತಮ್ಮ ಗಮನಕ್ಕೆ ಬಂದಿರುವಂತೆ ನಾನು ಜಿಲ್ಲಾವಾರು ಶಾಸಕರನ್ನು ಕರೆದು ಅಂದರೆ ಸುಮಾರು 120 ಜನ ಶಾಸಕರನ್ನು ಕರೆದು ಸಾರಿಗೆ ವ್ಯವಸ್ಥೆ ಬಗ್ಗೆ ಕಳೆದ ಮೂರು ದಿವಸಗಳಲ್ಲಿ ಸಮಾಲೋಚನೆ ಮಾಡಿದ್ದೇನೆ. ಸಾರಿಗೆ ಸಂಸ್ಥೆಯಲ್ಲಿ ಆಗತಕ್ಕಂಥ ಕೆಲಸ ಬಹಳ ಇದೆ ಎಂಬ ಅಭಿಪ್ರಾಯವನ್ನು ಎಲ್ಲರೂ ಸಹ ಹೇಳುತ್ತಾರೆ. ಆದರೆ ಸಾರಿಗೆ ಸಂಸ್ಥೆ ಸ್ವಲ್ಪ ಸರಿಯಾದ ದಾರಿಯಲ್ಲಿ ಹೋಗಲಿಕ್ಕೆ ಮುಖ್ಯಮಂತ್ರಿಗಳ ಮತ್ತು ಉಪಮುಖ್ಯಮಂತ್ರಿಗಳ ಸಹಕಾರದಿಂದ ಆಗಿದೆ ಎನ್ನತಕ್ಕಂಥ ಮಾತನ್ನು ಈ ಸದನದ ಎಲ್ಲ ಪಕ್ಷಗಳ ಸದಸ್ಯರುಗಳು, ನಾಯಕರುಗಳೂ ಸಹ ಒಪ್ಪುತ್ತಾರೆ. ಆ ಒಂದು ಅಭಿಪ್ರಾಯ ಈ ಸಭೆಯಲ್ಲಿ ಮೂಡಿ ಬಂದಿದೆ. ನಾವು ಕಳೆದ ಬಾರಿ ಬೆಲೆಗಳನ್ನು ಹೆಚ್ಚು ಮಾಡಿದಾಗ ಜನಗಳಿಗೆ ಅನ್ಯಾಯ ಮಾಡಬೇಕು ಎಂಬ ಉದ್ದೇಶ ಖಂಡಿತವಾಗಿಯೂ ಇಲ್ಲ. ಸಾರಿಗೆ ಸಂಸ್ಥೆಯನ್ನು ಏನಾದರೂ ಮಾಡಿ ಉಳಿಸಬೇಕು, ಇದು ಸಾರ್ವಜನಿಕ ವಲಯದಲ್ಲಿರುವಂಥ ಒಂದು ಸಂಸ್ಥೆ. ಏನಾದರೂ ಮಾಡಿ ಅದನ್ನು ನಡೆಸಬೇಕು ಎಂಬ ದೃಷ್ಟಿಯಿಂದ ಹಾಗೆ ಮಾಡಿದ್ದೇವೆಯೇ ಹೊರತು ಜನಗಳಿಗೆ ಅನ್ಯಾಯ ಮಾಡಬೇಕೆಂಬ ದೃಷ್ಟಿಯಿಂದ ಹಾಗೆ ಮಾಡಿಲ್ಲ. ತಾವು, ನಾವು ಎಲ್ಲ ಸದಸ್ಯರುಗಳೂ ಸಹ ಕುಳಿತು ಯೋಚನೆ ಮಾಡಿದ್ದೇವೆ. 25 ಪರ್ಸೆಂಟ್ ನಿಂದ 100 ಪರ್ಸೆಂಟ್‌ಗೆ ಎಲ್ಲೂ ಸಹ ಏರಿಸಿಲ್ಲ. ಸರಾಸರಿ ಸುಮಾರು ಪರ್ ಕಿಲೋಮೀಟರ್‌ಗೆ 22 ರಿಂದ 23 ಪರ್ಸೆಂಟ್‌ನಷ್ಟು ಏರಿಸಿ ಎಕ್ಸ್‌ಪ್ರೆಸ್‌ಗಿಷ್ಟು, ಆರ್ಡಿನರಿಗಿಷ್ಟು, ಲಗ್ಸುರಿಗೆ ಇಷ್ಟು ಎಂಬುದನ್ನು ನಾವು ಕುಳಿತುಕೊಂಡು ಚರ್ಚೆ ಮಾಡಿ ನಿಮ್ಮ ಒಪ್ಪಿಗೆ ತೆಗೆದುಕೊಂಡು ಎಂದು ನಾನು ಹೇಳುವುದಕ್ಕೆ ಬಯಸುವುದಿಲ್ಲ. ಆಡಳಿತಪಕ್ಷದವರು ಸರ್ಕಾರ ಮತ್ತು ನಾವೆಲ್ಲರೂ ಸಹ ಇದರ ಬಗ್ಗೆ ತೀರ್ಮಾನ ಮಾಡಿದ್ದೇವೆ ಎಂಬುದನ್ನು ನಾನು ಒಪ್ಪುತ್ತೇನೆಯೇ ಹೊರತು, ಅದಕ್ಕೆ ತಾವು ಒಪ್ಪಿಗೆ ಕೊಟ್ಟಿಲ್ಲ ಅಥವಾ ನನಗೂ ಸಹ ಹಠ ಇಲ್ಲ. ಸಮಾಲೋಚನೆ ಮಾಡಿ ಇದರ ಬಗ್ಗೆ ತಾವೆಲ್ಲರೂ ಕೂಡ ಇಲ್ಲ ಹೆಚ್ಚಿಸುವುದು ಸರಿಯಲ್ಲ. ಈ ರೀತಿ ಸಾರ್ವಜನಿಕ ಪ್ರತಿನಿಧಿಗಳಿಂದ, ಸಾರ್ವಜನಿಕರಿಂದ ಪ್ರತಿಭಟನೆಯಾದ ಹಿನ್ನೆಲೆಯಲ್ಲಿ ಸರ್ಕಾರ ಮಣಿಯಿತು. ಅದರಲ್ಲಿ ಯಾವುದೇ ರೀತಿಯ ಹಠವನ್ನು ಸರ್ಕಾರ ಮಾಡಲಿಲ್ಲ ಎಂಬುದು ತಮಗೂ ಸಹ ಗೊತ್ತಿದೆ. ಮತ್ತು ಈಗ 10 ರಿಂದ 15 ಪರ್ಸೆಂಟ್‌ನಷ್ಟು ಏರಿಸಬೇಕು ಎಂದು ಇದ್ದಾರೆ, ಕೆ.ಎಸ್.ಆರ್.ಟಿ.ಸಿ ಲಾಭಗಳಿಸಬೇಕು ಎನ್ನುವ

ಉದ್ದೇಶದಿಂದ ಮಾಡಿದ್ದೀರಿ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಖಂಡಿತವಾಗಿಯೂ ಸಹಿತ ಸರ್ಕಾರ ಸಾರಿಗೆ ಸಂಸ್ಥೆ ಲಾಭ ಗಳಿಸಬೇಕು ಎನ್ನುವ ಉದ್ದೇಶವನ್ನು ಇಟ್ಟುಕೊಂಡಿಲ್ಲ. ಅಥವಾ ಸಾರಿಗೆ ಸಂಸ್ಥೆಯ ಮೂಲಕ ಮೋಟಾರ್ ವೆಹಿಕಲ್ ಟ್ಯಾಕ್ಸ್‌ನ್ನು ಹೆಚ್ಚು ಮಾಡಿಕೊಂಡು ಸಾರಿಗೆ ಸಂಸ್ಥೆಯನ್ನು ಒಂದು ಹಾಲನ್ನು ಕರೆಯುವಂಥ ಹಸುವನ್ನಾಗಿ ಮಾಡಿಕೊಳ್ಳಬೇಕು ಎನ್ನುವಂಥ ಉದ್ದೇಶ ಸಹ ಇಲ್ಲ. ಇದೇ ಸಂದರ್ಭದಲ್ಲಿ ಹಾಲಿನ ಬೆಲೆಯನ್ನು ಜಾಸ್ತಿ ಮಾಡಿದ್ದೀರಿ, ಕೆ.ಇ.ಬಿ.ದರವನ್ನು ಜಾಸ್ತಿ ಮಾಡಿದ್ದೀರಿ ಎನ್ನುವ ಮಾತನ್ನೂ ಹೇಳಿದ್ದೀರಿ. ನಾನು ಹೇಳುವುದೇನೆಂದರೆ ಆ ಸಂಸ್ಥೆಗಳಿಗೆ ಅನುಕೂಲವಾಗಬೇಕು ಎನ್ನುವ ದೃಷ್ಟಿಯಿಂದ ಹಾಗೆ ಮಾಡಿದ್ದೇವೆಯೇ ಹೊರತು ಬೇರೆ ಯಾವ ದೃಷ್ಟಿಯಿಂದಲೂ ಸಹ ನಾವು ಅದನ್ನು ಮಾಡಿಲ್ಲ. ಸದನವನ್ನು ಮುಂದೂಡಿದ ಮೇಲೆ ದರವನ್ನು ಹೆಚ್ಚು ಮಾಡಿದ್ದೀರಿ ಅಥವಾ ಮಾಡಬೇಕು ಎನ್ನುವ ಉದ್ದೇಶ ಇಟ್ಟುಕೊಂಡಿದ್ದೀರಿ ಅಥವಾ ಸದನ ಪ್ರಾರಂಭ ಮಾಡುವುದಕ್ಕೆ ಮುಂಚೆಯೇ ಅದನ್ನು ನೀವು ಹೆಚ್ಚು ಮಾಡುತ್ತೀರಿ ಎಂದು ತಾವು ಮತ್ತು ಶ್ರೀಮಾನ್ ಯಡಿಯೂರಪ್ಪನವರು ಈ ವಿಚಾರವನ್ನು ಹೇಳಿದ್ದೀರಿ. ಮಾನ್ಯ ಅಧ್ಯಕ್ಷರೆ, ಖಂಡಿತವಾಗಿಯೂ ತಮಗೆ ಗೊತ್ತಿದೆ, ಸದನ ನಡೆಯುವಾಗ ಡೀಸಲ್ ಬೆಲೆ ಹೆಚ್ಚಾಗುತ್ತದೆ ಎಂದು ನಮಗೆ ಯಾರಿಗೂ ಸಹ ಗೊತ್ತಿರಲಿಲ್ಲ. ಇದನ್ನು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಯಡಿಯೂರಪ್ಪನವರು ಹೇಳಿದರು, ಡೀಸಲ್ ಬೆಲೆ ಜಾಸ್ತಿಯಾಗಿದೆ ಎಂಬ ಒಂದೇ ಕಾರಣದಿಂದ ಇದನ್ನು ಹೆಚ್ಚು ಮಾಡಬೇಡಿ, ಇದರಿಂದ ಜನಗಳಿಂದ ಪ್ರತಿಭಟನೆ ಬರುತ್ತದೆ ಎಂದು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಜನಗಳಿಗೆ ಇದರಿಂದ ಹೊರೆಯಾಗುತ್ತದೆ, ಇವೊತ್ತು ಕೇಂದ್ರ ಸರ್ಕಾರ ವಿಶೇಷವಾಗಿ ಕೇರಳ ಮತ್ತು ಕರ್ನಾಟಕದಲ್ಲಿ ಡೀಸಲ್, ಪೆಟ್ರೋಲ್ ಗ್ಯಾಸ್ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ವಿಪರೀತ ಹೆಚ್ಚು ಮಾಡಿರುವುದರಿಂದಾಗಿ ರಾಜ್ಯ ಸರ್ಕಾರಕ್ಕೆ ಮತ್ತು ಎರಡೂ ರಾಜ್ಯಗಳ ಜನಗಳಿಗೆ ಬಹಳ ತೊಂದರೆಯಾಗುತ್ತದೆ ಎಂಬ ವಿಷಯವನ್ನು ಕೇಂದ್ರ ಸರ್ಕಾರದ ಗಮನಕ್ಕೆ ನಿನ್ನೆ ದಿವಸ ನಮ್ಮ ಮುಖ್ಯಮಂತ್ರಿಗಳು ತಂದಿರತಕ್ಕಂಥ ವಿಚಾರವನ್ನು ತಾವೆಲ್ಲರೂ ಸಹ ಪತ್ರಿಕೆಗಳಲ್ಲಿ ಓದಿದ್ದೀರಿ. ಅಲ್ಲಿಗೆ ಹೋಗುವುದಕ್ಕೆ ಮುನ್ನ ಮುಖ್ಯಮಂತ್ರಿಗಳು ನಮ್ಮ ಜೊತೆಯಲ್ಲಿ ಮಂತ್ರಿಗಳ ಜೊತೆಯಲ್ಲಿ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಇದರ ಬಗ್ಗೆ ಅವರು ಚರ್ಚೆ ಮಾಡಿ ಅಲ್ಲಿಗೆ ಹೋಗಿ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೆ, ಒಂದು ನಿಮಿಷದಲ್ಲಿ ನಾನು ಕೆಲವು ಅಂಕಿಅಂಶಗಳನ್ನು ಕೊಡಬಯಸುತ್ತೇನೆ. ಕಳೆದ ಬಾರಿ ಸಾರಿಗೆ ಸಂಸ್ಥೆಗೆ 23 ಪರ್ಸೆಂಟ್‌ನಷ್ಟು ನಾವು ಬೆಲೆಗಳನ್ನು ಜಾಸ್ತಿ ಮಾಡಿದ್ದರಿಂದ ನಮಗೆ ಎಷ್ಟು ಹೆಚ್ಚು ಆದಾಯ ಬರಬಹುದು, ಹೆಚ್ಚು ಹಣ ಬರಬಹುದು ಎಂಬುದನ್ನು ವಿಚಾರ ಮಾಡಿದಾಗ 140 ಕೋಟಿ ರೂಪಾಯಿ ಎಂಬುದೂ ತಮಗೆ ಗೊತ್ತಿರುವ ವಿಚಾರ. ಕಳೆದ ಸಲ ನಾವು ಫೇರ್ ರಿವಿಜನ್ ಮಾಡಿದ್ದರಿಂದ ಅಡಿಷನಲ್ ಆಗಿ 140 ಕೋಟಿ ರೂಪಾಯಿ ಕೆ.ಎಸ್.ಆರ್.ಟಿ.ಸಿ.ಗೆ ಬರಬಹುದು ಎಂದು

ಅಂದಾಜು ಮಾಡಿದ್ದೇವೆ. ಸುಮಾರು 23 ಪರ್ಸೆಂಟ್‌ನಷ್ಟು ಇನ್‌ಕ್ರೀಸ್ ಮಾಡಿದ್ದೇವೆ. 21 ಪರ್ಸೆಂಟ್ ರಿಯಲೈಸ್ ಆಗುತ್ತದೆ. ಫೇರ್ ರಿವಿಜನ್ 23 ಪರ್ಸೆಂಟ್ ಎಂದು ಏನು ಮಾಡಿದ್ದೇವೆ ಅದರಲ್ಲಿ 21 ಪರ್ಸೆಂಟ್ ರಿಯಲೈಸ್ ಆಗಿದೆ. ಕೆ.ಎಸ್.ಆರ್.ಟಿ.ಸಿ.ಯಲ್ಲಿ 23 ಪರ್ಸೆಂಟ್ ನಾವು ಹೆಚ್ಚು ಮಾಡಿ 21 ಪರ್ಸೆಂಟ್ ರಿಯಲೈಸ್ ಆಗಿರುವುದು ಇದೇ ಮೊದಲ ಸಲ. ಮತ್ತು ಅದಕ್ಕಾಗಿ ನಾನು ಹಣಕಾಸು ಮಂತ್ರಿಗಳಿಗೆ ಮತ್ತು ಮುಖ್ಯಮಂತ್ರಿಗಳಿಗೆ ಈ ಸಂದರ್ಭದಲ್ಲಿ ಧನ್ಯವಾದಗಳನ್ನರ್ಪಿಸಬಯಸುತ್ತೇನೆ. ಮೋಟಾರ್ ವೆಹಿಕಲ್ ಟ್ಯಾಕ್ಸನ್ನು ಹೆಚ್ಚು ಮಾಡಿದ್ದೀರಿ ಎಂದು ತಾವು ಹೇಳಿದ್ದೀರಿ. ಈ ವರ್ಷ ನಮ್ಮ ರಾಜ್ಯದಲ್ಲಿ ನಾವು ಮುಂಚೆ ಟೋಟಲ್ ಟ್ರಾಫಿಕ್ ಕಲೆಕ್ಷನ್ ಮೇಲೆ ರೇಟನ್ನು ಫಿಕ್ಸ್ ಮಾಡುತ್ತಿದ್ದೆವು. ಈ ಸಾರಿ ಮಾನ್ಯ ಹಣಕಾಸಿನ ಮಂತ್ರಿಗಳು ಏನು ಆ ಟೋಟಲ್ ಟರ್ನ್ ಓವರ್ ಮೇಲೆ ಟ್ರಾಫಿಕ್ ಕಲೆಕ್ಷನ್ ಟ್ಯಾಕ್ಸ್‌ನ್ನು ಹಾಕುತ್ತಿದ್ದೆವು ಅದನ್ನು ಕಡಿಮೆ ಮಾಡಿ ರೂರಲ್ ಏರಿಯಾಕ್ಕೆ 8 ಪರ್ಸೆಂಟ್ ಮತ್ತು ಅರ್ಬನ್ ಏರಿಯಾಕ್ಕೆ 5 ಪರ್ಸೆಂಟ್ ಎಂದು ಮಾಡಿದ್ದಾರೆ. ಇದರಿಂದಾಗಿ ಸಾರಿಗೆ ಸಂಸ್ಥೆಗೆ ಸುಮಾರು 60 ಕೋಟಿ ರೂಪಾಯಿ ರಿಲೀಫ್ ಸಿಕ್ಕಿದೆ. ಅದಲ್ಲದೆ ಸ್ಟೂಡೆಂಟ್ ಕನ್ಸಿಷನ್‌ಗೆಂದು ಸರ್ಕಾರ ಸಾರಿಗೆ ಸಂಸ್ಥೆಗೆ ಕೊಡುತ್ತಿದ್ದಂಥ ಸುಮಾರು 10 ಕೋಟಿ ರೂಪಾಯಿಗಳಷ್ಟು ಹಣವನ್ನು ಹೆಚ್ಚಿಗೆ ಕೊಡಲೂ ಸಹ ಹಣಕಾಸು ಇಲಾಖೆ ಒಪ್ಪಿಕೊಂಡಿದೆ. ಇದರಿಂದಾಗಿ ಈ ವರ್ಷ 2000 ಹೊಸ ಬಸ್ಸುಗಳನ್ನು ಮತ್ತು 120 ಹೈಟೆಕ್ ಬಸ್ಸುಗಳನ್ನು ತೆಗೆದುಕೊಳ್ಳುವುದಕ್ಕೆ ಸಾರಿಗೆ ಸಂಸ್ಥೆಗೆ ಅನುಕೂಲವಾಗುತ್ತಿದೆ. ಇಷ್ಟು ಮಾತುಗಳನ್ನು ನಾನು ಈ ಸಂದರ್ಭದಲ್ಲಿ ಹೇಳಿ ಕೊನೆಯದಾಗಿ ಶ್ರೀಮಾನ್ ಹೆಚ್.ಎನ್.ನಂಜೇಗೌಡರು ಪಕ್ಕದ ರಾಜ್ಯಗಳಲ್ಲಿರತಕ್ಕಂಥ ಟ್ಯಾಕ್ಸ್ ಏನಿದೆ, ಅಲ್ಲಿ ಬಸ್ಸಿನ ರೇಟ್ ಏನಿದೆ ಎಂಬುದನ್ನು ಕೇಳಿದ್ದಾರೆ. ಅದರ ನಿಖರವಾದಂಥ ಅಂಕಿಅಂಶಗಳು ನನ್ನ ಹತ್ತಿರ ಇಲ್ಲ. ಆದರೆ ನಾನು ಸದನದಲ್ಲಿ ಈ ಪ್ರಶ್ನೆ ಬರಬಹುದು ಎಂಬ ದೃಷ್ಟಿಯಿಂದ ಬೇರೆ ರಾಜ್ಯಗಳಲ್ಲಿ ಯಾವ ದರ ಇದೆ ಎಂಬುದನ್ನು ತಿಳಿದುಕೊಂಡಿದ್ದೇನೆ. ಮಾನ್ಯ ಅಧ್ಯಕ್ಷರೆ, ನಾನು ಈ ಸದನದ ಗಮನಕ್ಕೆ ತರಬಯಸುವುದೇನೆಂದರೆ ಇಡೀ ರಾಷ್ಟ್ರದಲ್ಲಿ ಆಂಧ್ರ ಪ್ರದೇಶ ಮತ್ತು ರಾಜಾಸ್ಥಾನ ಈ ಎರಡೂ ರಾಜ್ಯಗಳಲ್ಲಿರತಕ್ಕಂಥ ಸ್ಟೇಟ್ ಟ್ರಾನ್ಸ್‌ಪೋರ್ಟ್ ಅಂಡರ್‌ಟೇಕಿಂಗ್‌ಗಳು ನಮಗಿಂತ ಸ್ವಲ್ಪ ಉತ್ತಮವಾಗಿ ಕೆಲಸ ಮಾಡುತ್ತಿವೆ ಎಂಬುದನ್ನು ನಾನು ಒಪ್ಪುತ್ತೇನೆ. ಇನ್ನು ಒಂದೆರಡು ವರ್ಷಗಳಲ್ಲಿ ನಾವೂ ಸಹ ಸಾರಿಗೆ ಸಂಸ್ಥೆಯನ್ನು ಅದೇ ಸ್ಥಿತಿಗೆ ತೆಗೆದುಕೊಂಡು ಹೋಗುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದ್ದೇವೆ. ಆಂಧ್ರದಲ್ಲಾಗಲಿ, ರಾಜಸ್ಥಾನದಲ್ಲಾಗಲಿ, ಮಹಾರಾಷ್ಟ್ರದಲ್ಲಾಗಲಿ, ತಮಿಳುನಾಡಿನಲ್ಲಾಗಲಿ ಎಲ್ಲೂ ಸಹ ಅಲ್ಲಿನ ದರಗಳನ್ನು ನಮ್ಮ ಬೆಲೆಗಳಿಗೆ ಹೋಲಿಕೆ ಮಾಡಿದಾಗ ನಮಗಿಂತ ಕಡಿಮೆ ಇಲ್ಲ. ನಮಗೆ ಸಮವಾಗಿದ್ದಾರೆ ಅಥವಾ 0.5 ಪೈಸೆಯಷ್ಟು ಕಡಿಮೆ ಇದೆ. ಸಾಮಾನ್ಯವಾಗಿ ಜನರು ಪ್ರಯಾಣ ಮಾಡತಕ್ಕಂಥ ಬಸ್ ಏನಿದೆ ಅದಕ್ಕೆ ನಾವು 19 1/2 ಪೈಸೆ ಹೆಚ್ಚು ಮಾಡಿದ್ದೇವೆ. ತಮಿಳುನಾಡಿನವರು 22 ಪೈಸೆ ಮಾಡಿದ್ದಾರೆ. ಮೋಟಾರ್ ವೆಹಿಕಲ್ ಟ್ಯಾಕ್ಸ್ ಬಗ್ಗೆ ತಾವು ಏನು ಹೇಳಿದ್ದೀರಿ ಕೆಲವು

ರಾಜ್ಯಗಳಲ್ಲಿ ವಿಶೇಷವಾಗಿ ತಮಿಳುನಾಡಿನಲ್ಲಿ ಅರ್ಬನ್ ಟ್ರಾನ್ಸ್‌ಪೋರ್ಟ್ ಅಂದರೆ ಸಿಟಿ ಸರ್ವಿಸಸ್‌ಗೆ ನಮಗಿಂತ ಸ್ವಲ್ಪ ಕಡಿಮೆ ಇತ್ತು. ಆದರೆ ಅದೇ ರೇಟಿಗೆ ಈಗ ನಾವೂ ಸಹ ತೆಗೆದುಕೊಂಡು ಹೋಗಿದ್ದೇವೆ. ಅದರಿಂದ ಉಳಿದಿರತಕ್ಕಂಥ ನಿರ್ದಿಷ್ಟ ಅಂಕಿಅಂಶಗಳನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ಇವೊತ್ತು ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಅದು ಆಂಧ್ರ ಇರಬಹುದು, ಗುಜರಾತ್ ಇರಬಹುದು, ಮಹಾರಾಷ್ಟ್ರ ಇರಬಹುದು ರಾಜಸ್ಥಾನ ಇರಬಹುದು ತಮಿಳುನಾಡು ಇರಬಹುದು ಎಲ್ಲಾ ರಾಜ್ಯಗಳೂ ಸಹ ಈ ಡೀಸಲ್ ಬೆಲೆ ಏರಿಕೆಯಿಂದ ಬಹಳ ತೊಂದರೆಯಾಗುತ್ತದೆ ಇದರಿಂದ ಅನಿವಾರ್ಯವಾಗಿ ಬೆಲೆಗಳನ್ನು ಏರಿಸಬೇಕು ಎಂಬ ನಿರ್ಧಾರಕ್ಕೆ ಎಲ್ಲರೂ ಸಹ ಬಂದಿದ್ದಾರೆ. ಈಗಾಗಲೇ ತಮಿಳುನಾಡಿನವರು ಬೆಲೆಗಳನ್ನು ಹೆಚ್ಚು ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ನಾವು 140 ಕೋಟಿ ರೂಪಾಯಿ ಹೆಚ್ಚುವರಿ ಹಣ ಮೊಬಲೈಸ್ ಆಗಬಹುದು ಎಂಬ ದೃಷ್ಟಿಯಿಂದ 23 ಪರ್ಸೆಂಟ್ ಮಾಡಿದ್ದೇವೆ. ಡೀಸಲ್ ಬೆಲೆಗಳನ್ನು 3.20 ರೂಪಾಯಿಗಳಷ್ಟು ಹೆಚ್ಚು ಮಾಡಿರುವುದರಿಂದ ಸಾರಿಗೆ ಸಂಸ್ಥೆಗೆ ಇದೇ ವರ್ಷದಲ್ಲಿ 78 ಕೋಟಿ ರೂಪಾಯಿ ಅಡಿಷನಲ್ ಬರ್ಡನ್ ಆಗುತ್ತದೆ. ಡೀಸಲ್ ಒಂದು ಐಟಂನಲ್ಲಿ ಮಾತ್ರ ನಾನು ಹೇಳುತ್ತಿದ್ದೇನೆ, ಬಾಕಿ ಪೆಟ್ರೋಲಿಯಂ ಪ್ರಾಡಕ್ಟ್‌ನ್ನು ನಾವು ಏನು ಉಪಯೋಗಿಸುತ್ತೇವೆ ಅದನ್ನೆಲ್ಲಾ ನಾವು ಲೆಕ್ಕ ಹಾಕಿಲ್ಲ. ಅದರಿಂದಾಗಿ ಅನಿವಾರ್ಯವಾಗಿ ಸ್ವಲ್ಪ ಬೆಲೆಗಳನ್ನು ಹೆಚ್ಚು ಮಾಡಬೇಕು ಎನ್ನುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ. ಆದ್ದರಿಂದ ನಿನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಜನತೆಯ ಪರವಾಗಿ, ರಾಜ್ಯಸರ್ಕಾರದ ಪರವಾಗಿ ಕೇಂದ್ರಸರ್ಕಾರದ ಗಮನಕ್ಕೆ ತಂದು ಅಧಿಕಾರಿಗಳ ಹಂತದಲ್ಲೊಂದು ಸಭೆಯನ್ನು ಮಾಡಿ ಡೀಸಲ್ ಬೆಲೆಗಳನ್ನು ಸ್ವಲ್ಪ ಕಡಿಮೆ ಮಾಡಬೇಕು ಎನ್ನುವ ದೃಷ್ಟಿಯಿಂದಾಗಿ ಟ್ಯಾಕ್ಸೇಷನ್‌ನಲ್ಲಿ ರಾಜ್ಯಸರ್ಕಾರಕ್ಕೆ ಮತ್ತು ಕೇರಳಕ್ಕೆ ತೊಂದರೆಯಾಗಿದೆ ಎನ್ನುವುದನ್ನು ಗಮನಕ್ಕೆ ತಂದಿದ್ದಾರೆ. ಅದರಿಂದಾಗಿ ನಾವು ಯಾವ ಪ್ರಮಾಣದಲ್ಲಿ ಇದನ್ನು ಹೆಚ್ಚು ಮಾಡಬೇಕು ಎನ್ನುವುದರ ಬಗ್ಗೆ ನಿರ್ದಿಷ್ಟವಾದ ನಿರ್ಧಾರವನ್ನು ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಜನಗಳಿಗೆ ಯಾವುದೇ ರೀತಿಯಲ್ಲೂ ಹೆಚ್ಚು ಭಾರ ಆಗದೇ ಇರುವ ಹಾಗೆ, ನಮಗೆ ಅರ್ಥವಾಗುತ್ತದೆ. ಆರು ತಿಂಗಳ ಹಿಂದುಗಡೆ ಮಾಡಿದ್ದೇವೆ. ಜನರಿಗೆ ಸ್ವಲ್ಪಮಟ್ಟಿನ ತೊಂದರೆಯನ್ನು ಕೊಡುವ ಒಂದು ಅನಿವಾರ್ಯವಾದ ಪ್ರಸಂಗ ಬಂದಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

SRI M.MALLIKARJUNA KHARGE: You should not enhance the tariff, because you have already done it. ಈ ವರ್ಷ ಮಾಡಬೇಡಿ ಎಂದು ನಾವು ಹೇಳುತ್ತಿರುವುದು.

ಶ್ರೀ ವಾಟಾಳ್ ನಾಗರಾಜ್: ಇವರು ಹೇಳಿದ್ದುದು ಹಿಂದೆ ನಾನು ಯಾವುದೇ ದೃಷ್ಟಿಯಿಂದ ದರವನ್ನು ಏರಿಸುವುದಿಲ್ಲ ಎಂದು ಇಲ್ಲಿ ಹೇಳಿದ್ದರು. ಯಾವತ್ತೂ

ಏರಿಸುವುದಿಲ್ಲ, ದರ ಏರಿಸುವ ಕೆಲಸಕ್ಕೆ ಕೈ ಹಾಕುವುದಿಲ್ಲ ಎಂದು ಸ್ಪಷ್ಟಪಡಿಸಿದ್ದೀರಿ. ಅದರ ಬಗ್ಗೆ ನಿಮ್ಮ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸಭಾಧ್ಯಕ್ಷರೇ, he should give firm assurance. ಈ ವರ್ಷ ನಾವು ಏರಿಸುವುದಿಲ್ಲ ಎಂದು ಹೇಳಬೇಕು. ಏಕೆಂದರೆ ಡೆವಲಪ್‌ಮೆಂಟ್ ಬಗ್ಗೆ ತಾವು ಹೇಳುತ್ತಿದ್ದೀರಿ, ಬಜೆಟ್ ಎಲ್ಲಾ ಮುಗಿದಿದೆ, ಈಗ ನಾವು ಹೆಚ್ಚಿಗೆ ಹಣವನ್ನು ಕೊಡುವುದಕ್ಕಾಗುವುದಿಲ್ಲ, ಎಲ್ಲಿಂದಾದರೂ ಕಟ್ ಮಾಡಿ. ಇದಕ್ಕೆ ಮಾತ್ರ ದರವನ್ನು ಏರಿಸುವುದಕ್ಕೆ ಮಾತ್ರ ಹೀಗೆ ಮಧ್ಯದಲ್ಲಿಯೇ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆಂದರೆ ಹೇಗೆ?

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಕೇಂದ್ರಸರ್ಕಾರದವರು ಎಲ್ಲಾ ಬೆಲೆಗಳನ್ನು ಹೆಚ್ಚು ಮಾಡಿರತಕ್ಕಂಥದ್ದು, ಈ ಪ್ರಮಾಣದಲ್ಲಿ ಹೆಚ್ಚು ಮಾಡತಕ್ಕಂಥದ್ದು ನಮಗೆ ಗೊತ್ತಿರಲಿಲ್ಲ.

ಶ್ರೀ ವಾಟಾಳ್ ನಾಗರಾಜ್: ನಮಗೆ ಹೊರೆ ಬರುತ್ತದೆ ಎಂದು ಹೇಳುತ್ತಿದ್ದಾರೆ. ಆ ಹೊರೆಯನ್ನೆಲ್ಲಾ ಜನಗಳ ಮೇಲೆ ಹಾಕುತ್ತೇವೆಂಬ ನೀತಿ ಏನು ಇದೆ, ಅದು ಸರಿಯಲ್ಲ. ವೈಜ್ಞಾನಿಕವಾಗಿ ನೀವು ಮಾಡುತ್ತಿಲ್ಲ. ದರ ಏರಿಸುವುದು ಪ್ರಾಮಾಣಿಕ ಚಿಂತನೆ ಇಲ್ಲ, ವೈಜ್ಞಾನಿಕವಾಗಿ ನಿಮಗೆ ನಷ್ಟವಾಗುತ್ತದೆ. ಅದನ್ನು ತುಂಬಿಕೊಳ್ಳಬೇಕು. ಅದನ್ನು ಜನಗಳ ಮೇಲೆ ಹಾಕತಕ್ಕಂಥ ನೀತಿ ಏನು ಇದೆ, ಅದು ಸರಿಯಲ್ಲ ಇವರದೊಂದು ಸಮಿತಿಯ ವರದಿಯಲ್ಲಿ ದರ ಏರಿಸುವ ಬಗ್ಗೆ ಹೇಳುತ್ತಿಲ್ಲ. ಹೆಜ್ಜೆ ಹೆಜ್ಜೆಗೂ ಪ್ರತಿವರ್ಷ ವರ್ಷಕ್ಕೆ ಎರಡೆರಡು ಬಾರಿ ದರ ಏರಿಸುವುದು ಹೇಳಿಲ್ಲ.

ಅಧ್ಯಕ್ಷರು: ಅವರೂ ಕೂಡ ಏರಿಸಿಬಿಡುತ್ತೇವೆ ಎಂದು ಅಲ್ಲ. ಏರಿಸಬೇಕಾದ ಅನಿವಾರ್ಯತೆ ಇದೆ. ಡೀಸಲ್ ಬೆಲೆ ಕಡಿಮೆ ಮಾಡಬೇಕು ಎಂದು ಹೇಳಿದ್ದೇವೆ, ಅದನ್ನೆಲ್ಲಾ ನೋಡಿಕೊಂಡು ಎಷ್ಟು ಕಡಿಮೆ ಮಾಡುವುದಕ್ಕೆ ಸಾಧ್ಯವೋ ಅಷ್ಟನ್ನು ಮಾಡುತ್ತೇವೆ. ನಮಗೂ ಕೂಡ ಬೇಸರವಾಗುತ್ತಿದೆ. ಜನರಿಗೆ ಈ ರೀತಿ ಹೆಚ್ಚಿನ ದರ ಏರಿಸುವುದು ಮುಖ್ಯಮಂತ್ರಿಗಳು ದೆಹಲಿಯಿಂದ ಬಂದ ಮೇಲೆ ಮಾತನಾಡಿಕೊಂಡು ಹೇಳುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಈಗ ಶಾಸನರಚನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಏಕೆಂದರೆ ಜನರು ರೊಚ್ಚಿಗೇಳುತ್ತಾರೆ. ನಾವು ಪದೇ ಪದೇ, we have to instigate the people. ಜನರು ಏನು ಅನ್ನುತ್ತಾರೆ? ನೀವೇನು ಮಾಡಿದಿರಿ ಎಂದು ಕೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ಇದು ನವೆಂಬರ್ ಅಥವಾ ಮಾರ್ಚಿಗೋ ಈ ಸದನ ಸೇರುವುದು. ಅಷ್ಟರೊಳಗೆ ನಾಳೆ ನಾಡಿದ್ದು ಇವರು ದರ ಏರಿಸಿದರೆ ಇದಕ್ಕೆ ಯಾರು ಹೊಣೆ? ಈ ಸದನಕ್ಕೆ ಒಂದು ಭರವಸೆಯನ್ನು ಕೊಡಲಿ, ನಾವು ದರ ಏರಿಸುವುದಿಲ್ಲ

ಎನ್ನುವ ಭರವಸೆಯನ್ನು ಈ ಸದನಕ್ಕೆ ಕೊಡಲಿ. ಅದು ಇಲ್ಲ ಎಂದರೆ ಏನಾಗುತ್ತದೆ ಎಂದರೆ ತಮಗೆ ಗೊತ್ತಿದೆ. ಹೋದಸಾರಿ ಈಗಾಗಲೇ ನಮ್ಮ ಸ್ನೇಹಿತರು ಹೇಳಿದರು ಹೋದ ಸಾರಿ ರಾತ್ರೋರಾತ್ರಿ ಶಾಸನಸಭೆ ಮುಗಿಯಿತು, 12 ಗಂಟೆ ರಾತ್ರಿಗೆ ಎಲ್ಲಾ ಹೊಸ ಟಿಕೆಟ್‌ಗಳೆಲ್ಲಾ ಮುದ್ರಣವಾಗಿ 12 ಗಂಟೆಯ ಮೇಲೆ ಬಿಡುಗಡೆಮಾಡಿದರು. ಆ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದ್ದರಿಂದ ದಯಮಾಡಿ ಸರ್ಕಾರ ಒಂದು ಸ್ಪಷ್ಟವಾದ ಭರವಸೆಯನ್ನು ಕೊಡಬೇಕು. ನಾವು ದರ ಏರಿಸುವುದಿಲ್ಲ ಎಂದು ಜೊತೆಗೆ ತಾವು ಹೇಳಿದಿರಿ, ಆ ಕಾರ್ಮಿಕ ಮುಖಂಡರನ್ನು ಕರೆದು ಮಾತುಕತೆಯಾಡುತ್ತೇವೆ ಎಂದು ಹೇಳಿ...

ಅಧ್ಯಕ್ಷರು: ಬಿಲ್ಸ್ ಇದ್ದಾವೆ. ಅದು ಇರಲಿ ಕಾರ್ಮಿಕ ಮುಖಂಡರು ಇರಲಿ. ಈಗ ಬಿಲ್ಸ್ ಇದ್ದಾವೆ. ಹಾಗಾದರೆ ಶಾಸಕರ ಸಂಬಳದ್ದು ಅದೆಲ್ಲಾ ಹಾಗೆಯೇ ಇಟ್ಟುಬಿಡೋಣವೇ? ಹೇಳಿ. ಬಿಲ್ಸ್ ಎಲ್ಲಾ ಈಗ ಪಾಸಾಗಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅದಕ್ಕೂ ಇದಕ್ಕೂ ಸಂಬಂಧ ಇಲ್ಲ. ಅದನ್ನು ಹೇಳಿಕೊಂಡು ಇದನ್ನು ನಾವು ಬಿಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು: ನನ್ನ ಕೆಲಸವನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೆಕ್ಸ್ಟ್ ನಾವೇನು ಅಧಿವೇಶನ ಸೇರುತ್ತೇವೆ, ಆಗ ಬೇಕಾದರೆ ಒಂದು ಸದನ ಸಮಿತಿ ಮಾಡಿ ಎಷ್ಟು ಮಾಡಬೇಕು, ಎಷ್ಟಿಲ್ಲ ಬೇಕಾದರೆ ಕೇಳಿಕೊಂಡು ನೋಡೋಣ. ನೀವೇನು ನೆಕ್ಸ್ಟ್ ಆರು ತಿಂಗಳ ಮೇಲೆ ಕರೆಯುತ್ತೀರಿ. ಅಥವಾ ಐದು ತಿಂಗಳಿಗೆ ಕರೆಯಬಹುದು. ಈಗ ಮಾಡುವುದು ಬೇಡ.

ಶ್ರೀ ವಾಟಾಳ್ ನಾಗರಾಜ್: ನಾವು ದರ ಏರಿಸುವುದಿಲ್ಲ ಎನ್ನುವ ಭರವಸೆಯನ್ನು ಸ್ಪಷ್ಟ ಭರವಸೆಯನ್ನು ಕೊಡಲಿ.

SRI M.MALLIKARJUNA KHARGE: Alright Sir. That he can do it. ವರ್ಕ್‌ಔಟ್ ಮಾಡುವುದಕ್ಕೆ ಈಗಾಗಲೇ ಎಂ.ಡಿ.ಗೆ ಎಲ್ಲಾರಿಗೂ ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಈಗಾಗಲೇ 78 ಕೋಟಿ ರೂಪಾಯಿಗಳಷ್ಟು ಆದಾಯವನ್ನು ಯಾವ ರೀತಿಯಾಗಿ ಹೆಚ್ಚಿಸಬೇಕು, ಯಾವ ರೀತಿ ದರ ಏರಿಸಬೇಕು ಎನ್ನುವ ಬಗ್ಗೆ ಈಗಾಗಲೇ ಸಿದ್ಧತೆ ನಡೆಯುತ್ತಾ ಇದೆ. ನನಗೆ ಒಂದು ಬಹಳ ಭಯ ಇದೆ ನಾಳೆ ನಾಡಿದ್ದರಲ್ಲಿ ಇವರು ದರವನ್ನು ಏರಿಸುತ್ತಾರೆ.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಸಭಾಧ್ಯಕ್ಷರೇ, ಸಾರಿಗೆ ಸಚಿವರು ಕೊಟ್ಟಿರುವ

ಇಂಗಿತವನ್ನು ನೋಡಿದರೆ ಅಕಸ್ಮಾತ್ ಇವರು ಇನ್ನೂ ಕೂಡ ಜಾಸ್ತಿ ಮಾಡಿದರೆ ನಾನು ಡಿ.ಟಿ.ಸಿ. (ಡೆಲ್ಲಿ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್) ಬಸ್ ಮೇಲೆ ಯಾರೋ ಬರೆದಿರುವುದು ನೋಡಿದೆ. ''ಆನ ಫ್ರೀ, ಜಾನ ಫ್ರೀ, ಪಕಡ್‌ಜಾಯೇತೋ ಖಾನಾ ಫ್ರೀ ಎಂದು''. ಇದು ಆನಾ ಫ್ರೀ, ಜಾನಾ ಫ್ರೀ, ಪಕಡ್‌ಜಾಯೇತೋ ಖಾನಾ ಫ್ರೀ ಆಗುತ್ತದೆ. ಈಗ ಕೆ.ಎಸ್.ಆರ್.ಟಿ.ಸಿ. ಬಗ್ಗೆ ಜನರು ಏನು ಮಾತನಾಡುತ್ತಿದ್ದಾರೆ, ಕೆ.ಎಸ್.ಆರ್.ಟಿ.ಸಿ.ಯಲ್ಲಿ ಲೇನಾ ಫ್ರೀ, ಖಾನಾ ಫ್ರೀ, ಪಕಡ್‌ಗಯೆತೋ ಜಾನಾ ಫ್ರೀ ಎಂದು. ಯಾವುದೇ ಶಿಕ್ಷೆ ಇಲ್ಲದೆ ಆಚೆ ಬರುತ್ತಾನೆ. ಆ ಸ್ಥಿತಿಗೆ ಇವರು ತರುವುದು ಬೇಡ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ದಯಮಾಡಿ ಅನಿವಾರ್ಯವಾಗಿ ಯಾವುದೇ ಸರ್ಕಾರ ನಡೆಸಬೇಕಾದರೂ ಅನಿವಾರ್ಯ ಬಂದಾಗ ತೆರಿಗೆಯನ್ನು ಜಾಸ್ತಿಮಾಡಬೇಕಾಗುತ್ತದೆ ಅದನ್ನು ಮಾಡುವುದಕ್ಕಾಗುವುದಿಲ್ಲ ಎಂದು ನಾವು ಹೇಳುವುದಕ್ಕೆ ಬರುವುದಿಲ್ಲ. ಆದರೆ ನಾನು ಹೇಳುತ್ತೇನೆ, ತಾವು ದಯಮಾಡಿ ತಮಗೆ ಗೊತ್ತಿರುವಂಥದ್ದು, ಎಷ್ಟು ಟಿಕೆಟ್‌ಕಳ್ಳತನದಲ್ಲಿ ಪ್ರಿಂಟ್ ಆಗುತ್ತಿದೆ, ಈಗ ಅದು ಮುಂದುವರಿಯುತ್ತಿದ್ದರೆ ಅದನ್ನು ಬಿಗಿ ಮಾಡುವ ಕೆಲಸ, ಡೀಸಲ್ ಕಳ್ಳತನವಾಗುತ್ತಿದೆ, ಅದನ್ನು ಸರಿಪಡಿಸುವ ಕೆಲಸ, ಟಿಕೆಟ್ ಇಲ್ಲದೆ ಪ್ರಯಾಣ ಮಾಡುವಂಥವರು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ, ಕಂಡಕ್ಟರ್ ಅವರ ಶಾಮೀಲಾಗಿ ಇದು ನಡೆಯುತ್ತಿದೆ. ಮತ್ತು ಅನೇಕ ಸ್ಪೇರ್ ಪಾರ್ಟ್ಸ್‌ಗಳು ಹೋಗುತ್ತಿವೆ, ಇದನ್ನೆಲ್ಲಾ ಸರಿಪಡಿಸಿ ನಿಮ್ಮ ಇಲಾಖೆಯನ್ನು ಸರಿಪಡಿಸಬೇಕೇ ಹೊರತು ಆದಾಯ ತುಂಬಿಕೊಳ್ಳಬೇಕೇ ಹೊರತು ಅದೆಲ್ಲೂ 3 ರೂಪಾಯಿ ಡೀಸಲ್ ಬೆಲೆ ಜಾಸ್ತಿಯಾಯಿತು, ತೆರಿಗೆ ಹಾಕು. ಇವೇ ಮಾಡಿಕೊಂಡು ಹೋದರೆ ಬದುಕುವುದಕ್ಕಾಗುವುದಿಲ್ಲ ಎಂದೆ. ದಯಮಾಡಿ ಆ ಕೆಲಸ ಮಾಡುವುದಕ್ಕೆ ಹೋಗಬೇಡಿ ಯಾವುದೇ ಕಾರಣಕ್ಕೆ.

ಅಧ್ಯಕ್ಷರು: ಅಷ್ಟೆ. ಈಗ ರಿಪ್ಲೈ ಮಾಡಿದ್ದೇ ಲಾಸ್ಟ್. ಬಿಲ್ಸ್ ತೆಗೆದುಕೊಳ್ಳಬೇಕು ನಾನು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ಯಡಿಯೂರಪ್ಪನವರು ಹೇಳಿರುವ ವಿಚಾರದಲ್ಲಿ ಅತ್ಯಂತ ಪ್ರಾಮಾಣಿಕವಾಗಿ ಡೀಸಲ್ ಕಳ್ಳತನ ಕಡಿಮೆ ಮಾಡಲಿಕ್ಕೆ ಟಿಕೆಟ್ ಕದ್ದು ಪ್ರಿಂಟ್ ಮಾಡತಕ್ಕಂಥದ್ದನ್ನು ಎಲ್ಲೂ ಸಹಿತ ಆಗದೇ ಇರುವ ಹಾಗೆ ಮತ್ತು ಟಿಕೆಟ್‌ಗಳಲ್ಲಿ ಸೋರಿಕೆ ಇಲ್ಲದೆ ಇರುವ ಹಾಗೆ ಪ್ರಾಮಾಣಿಕವಾಗಿ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಅದಕ್ಕೋಸ್ಕರ ಸ್ವಲ್ಪ ಇಂಪ್ರೂವಮೆಂಟ್ ಆಗುತ್ತಿದೆ. ಶ್ರೀಮಾನ್ ಸುರೇಶ್‌ಕುಮಾರ್‌ರವರು ಏನು ಹೇಳಿದರು, ಅದು ವಾಸ್ತವಾಂಶವಲ್ಲ. ಇದೆ. ನಾನು ತಪ್ಪಿಲ್ಲ, ಎಲ್ಲಾ ಸರಿ ಇದೆ ಎನ್ನುವ ಮಾತನ್ನು ಹೇಳುವುದಿಲ್ಲ. ಸ್ವಲ್ಪ ಮಟ್ಟಿಗೆ ತಾವು ಹೇಳುವ ವಿಚಾರದಲ್ಲಿ ಸತ್ಯ ಇದೆ, ಅದನ್ನು ಸರಿಮಾಡಿಸಲಿಕ್ಕೆ ಪ್ರಯತ್ನಮಾಡುತ್ತೇನೆ.

ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಹೇಳಿದರು, ಕಾರ್ಮಿಕ ಮುಖಂಡರುಗಳನ್ನು ಕರೆಸುವ ವಿಚಾರದಲ್ಲಿ ಈಗಾಗಲೇ ಕಾರ್ಮಿಕ ಆಯುಕ್ತರು ಅವರಿಗೆ ಒಂದು ಪತ್ರವನ್ನು ಬರೆದಿದ್ದಾರೆ. ಒಂದು ಸಭೆಯನ್ನೂ ಸಹಿತ ಸಧ್ಯದಲ್ಲೇ ಮಾಡುವವರಿದ್ದಾರೆ. ಅದಾದನಂತರ ಕಾರ್ಮಿಕ ಮಂತ್ರಿಗಳು ಸಹಿತ ಅವರ ಜೊತೆಯಲ್ಲಿ ಮಾತನಾಡುತ್ತಾರೆ. ಅದಕ್ಕಿಂತ ವೈಜ್ಞಾನಿಕವಾಗಿ ತಾವು ವಿಚಾರ ಮಾಡಬೇಕು ಎಂದು ಹೇಳುತ್ತಿದ್ದೀರಿ. ಇದಾದತಕ್ಷಣವೇ ನಾವೆಲ್ಲಾ ಲೆಕ್ಕಾಚಾರವನ್ನು ಸಹಿತ ಹಾಕಿದ್ದೇವೆ. ನಾನು ಹೇಳುತ್ತಿರುವುದು ಇವತ್ತಿನ ರೇಟಿನಲ್ಲಿ ಸುಮಾರು 75 ಕೋಟಿ ರೂಪಾಯಿ ಬರ್ಡನ್ ಜಾಸ್ತಿಯಾಗುತ್ತದೆ ಎನ್ನುವ ಮಾತನ್ನು ಹೇಳಿದ್ದೇವೆ ಮತ್ತು ಅಡಿಷನಲ್ ಬರ್ಡನ್ 75 ಕೋಟಿ ರೂಪಾಯಿಯಾಗುತ್ತದೆ. ಕಳೆದ ಸಾರಿ ನಾವು ನಾಲ್ಕು ವರ್ಷದ ನಂತರ ಡೀಸಲ್ ಬೆಲೆಗಳನ್ನು ನಾವು ಬಸ್ಸಿನ ಬೆಲೆಗಳನ್ನು ಜಾಸ್ತಿ ಮಾಡಿದಾಗ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: 3 ರೂಪಾಯಿ ಹೆಚ್ಚಿಗೆ ಡೀಸಲ್ ಬೆಲೆ ಹೆಚ್ಚಾದುದಕ್ಕೆ 78 ಕೋಟಿ ರೂಪಾಯಿ ಇವತ್ತು ಕೆ.ಎಸ್.ಆರ್.ಟಿ.ಸಿ.ಗೆ ಲುಕ್ಸಾನಾಗುತ್ತದೆ ಎನ್ನುವ ಮಾತನ್ನು ಹೇಳಿದಿರಿ, ಈಗ ಮಾನ್ಯ ಮಂತ್ರಿಗಳು ದೆಹಲಿಯಿಂದ ಬಂದಿದ್ದಾರೆ. ಈ ಪೆಟ್ರೋಲಿಯಂ ಮತ್ತು ಡೀಸಲ್ ಬಗ್ಗೆ ಕಡಿಮೆ ಮಾಡುವ ಬಗ್ಗೆ ಮಾತುಕತೆಯಾಡಿಕೊಂಡು ಬಂದಿದ್ದಾರೆ ಎನ್ನುವುದು ಪತ್ರಿಕೆಯಲ್ಲಿ ಬಂದಿದೆ. ಎಷ್ಟರಮಟ್ಟಿಗೆ ಅವರು ಕಡಿಮೆ ಮಾಡಿದ್ದಾರೆ ಎಂಬುದು ಗೊತ್ತಾಗುತ್ತದೆ. ಅದಾದಮೇಲೆ ನೀವು 78 ಕೋಟಿ, 100 ಕೋಟಿ, 200 ಕೋಟಿ ಎಂದು ಹೇಳಿ. ನಿಮಗೇನಾಗಿದೆ ಎಂದರೆ ನೀವು ಬಹಳ ಆತುರದಲ್ಲಿ ಇದ್ದೀರಿ ಏರಿಸುವುದಕ್ಕೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಸರ್ಕಾರ ಯಾವುದೇ ರೀತಿಯ ಆತುರದಲ್ಲಿ ಇಲ್ಲ. ಇದೊಂದು ದೊಡ್ಡ ಸರ್ಕಾರದ ಸಾಧನೆ ಎನ್ನುವ ಮಾತನ್ನು ಸಹಿತ ನಾನು ಹೇಳಲಿಕ್ಕೆ ಬಯಸುವುದಿಲ್ಲ. ಸರ್ಕಾರಕ್ಕೆ ಬಹಳ ನೋವು ಇದೆ. ಆದರೆ ಕಳೆದ ಸಾರಿ ನಾವು ನಾನು ಹೇಳಿದೆ, 23 ಪರ್‌ಸೆಂಟ್ ಜಾಸ್ತಿ ಮಾಡಿದೆವು, 21 ಪರ್‌ಸೆಂಟ್ ರಿಯಲೈಸ್ ಆಗಿದೆ. ಎಫಿಷಿಯನ್ಸಿ ಪ್ಯಾರಾ ಮೀಟರ್‌ಗಳನ್ನು, ಬ್ರೇಕ್‌ಡೌನ್ ಇರಬಹುದು, ಕ್ಯಾನ್ಸಲೇಷನ್ ಆಫ್ ಷೆಡ್ಯೂಲ್ಸ್ ಇರಬಹುದು, ಅಕ್ಸಿಡೆಂಟ್‌ಗಳು ಇರಬಹುದು, ಎಲ್ಲವನ್ನೂ ಸಹಿತ 50 ಪರ್‌ಸೆಂಟಷ್ಟು ಎಫಿಷಿಯೆನ್ಸಿಯನ್ನು ನಾವು ಇಂಪ್ರೂವ್ ಮಾಡಿದ್ದೇವೆ. ಆದರೆ ಇದರಿಂದಾಗುವುದಿಲ್ಲ. ಈಗ ಇರುವ ಬೆಲೆಗಳಲ್ಲಿ 78 ಕೋಟಿ ರೂಪಾಯಿ ಅಡಿಷನಲ್ ಬರ್ಡನ್ ಆಗುತ್ತದೆ. ಈಗ ಮಾನ್ಯ ಮುಖ್ಯಮಂತ್ರಿಗಳು ಪ್ರಯತ್ನವನ್ನು ಮಾಡುತ್ತಿದ್ದಾರೆ. ಆ ಪ್ರಯತ್ನ ಯಶಸ್ವಿಯಾಗಬೇಕೆನ್ನುವುದೇ ನಮ್ಮ ಆಸೆ. ಸಾರ್ವಜನಿಕರಿಗೆ ತೊಂದರೆ ಕೊಡಬಾರದು ಎನ್ನುವುದೇ ನಮ್ಮ ಆಸೆ. ಏನೇ ಮಾಡಿದರೂ ಸಹಿತ ವೈಜ್ಞಾನಿಕವಾಗಿ ವಿಚಾರ ಮಾಡುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗ ಗೊತ್ತಾಗಲಿ ಅಟ್‌ಲೀಸ್ಟ್ ಮಾನ್ಯ

ಮುಖ್ಯಮಂತ್ರಿಗಳು ಬಂದಿದ್ದಾರೆ. ಡೀಸಲ್ ಮತ್ತು ಪೆಟ್ರೋಲ್ ಬಗ್ಗೆ ಏನು ಹೇಳುತ್ತಾರೋ ನೋಡೋಣ.

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಪೆಟ್ರೋಲಿಯಂ ಮಿನಿಸ್ಟರ್‌ನ್ನು ಭೇಟಿಯಾಗಿದ್ದೆ. ಅವರ ಸೀನಿಯರ್ ಆಫೀಸರ್ಸ್ ಬಂದಿದ್ದರು. ನಾನು ಅವರಿಗೆ ಏಕೆ ಕರ್ನಾಟಕ ಮತ್ತು ಕೇರಳಕ್ಕೆ ಏಕೆ ಈ ರೀತಿ ಆಗಿದೆ ಎಂದು ಕೇಳಿದೆ, ಅದಕ್ಕೆ ಅವರು ಕೆಲವು ಕಾರಣಗಳನ್ನು ಕೊಟ್ಟರು. ಆ ಕಾರಣಗಳೇನು ಅಷ್ಟೊಂದು ಸಮಂಜಸವಾಗಿರಲಿಲ್ಲ. ಅದಕ್ಕೆ ನಾನು ಮತ್ತೆ ಚೀಫ್ ಸೆಕ್ರೆಟರಿ ಅವರ ಜೊತೆ ನಿನ್ನೆಯೇ ಮಾತನಾಡಿದೆ. ಸ್ಟೇಟ್ ಗವರ್ನಮೆಂಟ್ ಸರ್‌ಛಾರ್ಜ್ ಇಲ್ಲ. Tax on crude oil, ಬರುತ್ತದೆಲ್ಲಾ ಅದು. ಮಹಾರಾಷ್ಟ್ರದಲ್ಲಿ ಎಷ್ಟು ಇದೆಯೋ ಅದರ ಹತ್ತು ಪಟ್ಟು ಜಾಸ್ತಿ ಮಾಡಿದ್ದೀರಿ. ಅದಕ್ಕೆ ಹೀಗೆ ಆಗಿದೆ ಎಂದು ಹೇಳಿದರು. ಆದರೆ ಅದು ನಿಜವಾದ ಕಾರಣ ಅಲ್ಲ. ನಾನು ಹೇಳಿದೆ, ಇದರ ಬೆಲೆ ಕಡಿಮೆ ಮಾಡುವುದಕ್ಕೆ ಕರ್ನಾಟಕ ಸರ್ಕಾರದಿಂದ ಏನು ನಿಮ್ಮ ಜೊತೆಗೆ ಬರಬಹುದು, ಬರುತ್ತೇವೆ. ಆದರೆ ನೀವ್ಯಾಕೆ ಜಾಸ್ತಿ ಮಾಡಿದಿರಿ ಎಂದು ಕೇಳಿದೆ. ಅವರು ಎರಡು ದಿವಸ ಟೈಮ್ ತೆಗೆದುಕೊಂಡಿದ್ದಾರೆ. ಬೇಕಾದರೆ ಕೆ.ಎಸ್.ಆರ್.ಟಿ.ಸಿ.ಬೆಲೆ ಏರಿಸುವುದಾದರೆ ಅದನ್ನು ತಿಳಿದುಕೊಂಡ ಮೇಲೆ ಮಾಡೋಣ. ಅವಸರದಲ್ಲಿ ಬೇಡ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾವು ಬೆಲೆ ಜಾಸ್ತಿ ಮಾಡಬೇಡಿ ಎಂದು ಹೇಳಿದ್ದೇವೆ.

SRI J.H.PATEL: Don't you want us to run the Corporation?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮೊನ್ನೆ ತಾನೇ ಕೆ.ಎಸ್.ಆರ್.ಟಿ.ಸಿ. ದರವನ್ನು ತಾವು ಏರಿಸಿದ್ದೀರಿ. ಈಗ ಇದೇ ಒಂದು ನೆಪದಲ್ಲಿ ಪುನಃ ಏರಿಸತಕ್ಕದ್ದು ಬೇಡ. ಅಟಲೀಸ್ಟ್ ಈ ಬಜೆಟ್ ಇಯರ್ ಹೋಗಲಿ. ಮುಂದಿನ ವರ್ಷ ಬೇಕಾದರೆ ಯೋಚನೆ ಮಾಡಿ. ನಾವು ಹೇಗೂ ಸೇರುತ್ತೇವಲ್ಲಾ. ಇನ್ನು ನಾಲ್ಕೈದು ತಿಂಗಳಲ್ಲಿ ಸೇರುತ್ತೇವೆ. ಆಗ ಬೇಕಾದರೆ ಕುಳಿತು ಯೋಚನೆ ಮಾಡಿ ನಂತರ ನೀವು ನಿರ್ಣಯ ತೆಗೆದುಕೊಳ್ಳಿ. ಸಡನ್ ಆಗಿ ಇವತ್ತು ಸೆಷನ್ ಕ್ಲೋಸ್ ಆದ ಮೇಲೆ ಇಮ್ಮೀಡಿಯೆಟ್ ಆಗಿ ದರವನ್ನು ಹೆಚ್ಚು ಮಾಡುವುದಕ್ಕೆ ಹೋಗಬೇಡಿ.

ಶ್ರೀ ಜೆ.ಎಚ್.ಪಟೇಲ್: ಸಾಕಷ್ಟು ಕುಳಿತು, ನಿಂತು ಎಲ್ಲಾ ಯೋಚನೆ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಸರ್ಕಾರ ಬರೇ ದರ ಏರಿಸುವ ಸರ್ಕಾರ ಎಂದು ಕೆಟ್ಟ ಹೆಸರು ಬರುತ್ತದೆ. ದಯವಿಟ್ಟು ಮಾಡಬೇಡಿ.

ಶ್ರೀ ಜೆ.ಎಚ್.ಪಟೇಲ್: ಅದಕ್ಕೇ ಈಗ ಎಂ.ಎಲ್.ಎಗಳ ವೇತನ ಜಾಸ್ತಿ ಮಾಡುತ್ತಿದ್ದೇವೆ. ಎಲ್ಲಾ ದರ ಏರಿದ್ದಾವಲ್ಲ, ಇದನ್ನು ಏಕೆ ಕಡಿಮೆ ಮಾಡಬೇಕು ಎಂದು ಏರಿಸಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಕೆ.ಇ.ಬಿ.ದರ, ಬಸ್‌ದರ ಹೀಗೆ ಏರುತ್ತಾ ಹೋದರೆ ಪಟೇಲರ ಸರ್ಕಾರ ದರ ಏರಿಸುವ ಸರ್ಕಾರ ಎಂದು ಹೆಸರು ಬಂದು ಬಿಡುತ್ತದೆ.

ಅಧ್ಯಕ್ಷರು: ಈಗ ಶಾಸನ ರಚನೆ.

ಶ್ರೀ ಜೆ.ಎಚ್.ಪಟೇಲ್: ನಾವು ಈಗ ಕೆ.ಎಸ್.ಆರ್.ಟಿ.ಸಿ.ಯನ್ನು ಎಫಿಷಿಯೆಂಟ್ ಆಗಿ ನಡೆಸಬೇಕೋ ಬೇಡವೋ. ಈಗ ನೀವು ಬೇಕಾದರೆ ಬೊಂಬಾಯಿಗೆ ಹೋಗಿ, ದೆಹಲಿಗೆ ಹೋಗಿ, ಅಲ್ಲಿನ ರೇಟ್ ಏನು, ಇಲ್ಲಿನ ರೇಟ್ ಏನು ಸ್ವಲ್ಪ ನೋಡಿ. ಆದಷ್ಟು ಅದನ್ನು ನಾವು ಇಂಪ್ರೂವ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ನೀವು ಸಪೋರ್ಟ್ ಮಾಡಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವು ಇಂಪ್ರೂವ್ ಮಾಡಿ. ಆದರೆ ಆರಾರು ತಿಂಗಳು ಮೂರು ತಿಂಗಳಿಗೆ ದರ ಏರಿಸಿದರೆ ಹೇಗೆ?

ಶ್ರೀ ಬಿ.ಎಸ್.ಯಡಿಯೂರಪ್ಪ: ಕೆ.ಎಸ್.ಆರ್.ಟಿ.ಸಿ.ದರ ಒಂದು ವರ್ಷ ಏರಿಸಬೇಡಿ. ಅದನ್ನಾದರೂ ಮಾಡಿ. ದಯಮಾಡಿ ಅದನ್ನು ಮಾಡಿ. ಮೊನ್ನೆ 140 ಕೋಟಿ ರೂಪಾಯಿ ಜಾಸ್ತಿ ಮಾಡಿದ್ದೀರಿ. ಇನ್ನೂ ಆರು ತಿಂಗಳಾಗಿಲ್ಲ, ಮತ್ತೆ ದರ ಏರಿಸುವುದಕ್ಕೆ ಹೊರಟಿದ್ದೀರಿ ಎಂದರೆ ನಾವೇನು ಮಾಡಬೇಕು?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಆಮೇಲೆ ಮೀಟಿಂಗ್ ಕರೆದು ಬೇಕಾದರೆ ಮಾಡಿ.

ಶ್ರೀ ಜೆ.ಎಚ್.ಪಟೇಲ್: ಕರೆದು ಮಾತನಾಡುತ್ತೇವೆ.

(ಕ) ಕಂಠೀರವ ಸ್ಟೇಡಿಯಂ ಬಳಿ ಇರತಕ್ಕ ಜಾಗವನ್ನು ಮಲ್ಯ ಆಸ್ಪತ್ರೆಗೆ ನೀಡಿರುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್: ತಮ್ಮ ಗಮನಕ್ಕೆ ಒಂದು ಮಾತು ತರುತ್ತಿದ್ದೇನೆ. ಮೊನ್ನೆ ಕಂಠೀರವ ಸ್ಟೇಡಿಯಂದು ಆಜ್ಞೆ ಆಗಿಲ್ಲ ಎಂದು ಹೇಳಿದರು. ಒಂದು ಆದೇಶ ಬಂದಿದೆ. ದಯಮಾಡಿ ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು: ಕಳುಹಿಸಿಕೊಡಿ.

ಶ್ರೀ ವಾಟಾಳ್ ನಾಗರಾಜ್: ಕಂಠೀರವ ಸ್ಟೇಡಿಯಂ ಜಾಗವನ್ನು ಮಲ್ಯ ಆಸ್ಪತ್ರೆಗೆ ಕೊಟ್ಟಿರುವ ಬಗ್ಗೆ ಇಲ್ಲೊಂದು ಆದೇಶವನ್ನು ಸರ್ಕಾರ ಹೊರಡಿಸಿದೆ. ಪಾಪ

ಮುಖ್ಯಮಂತ್ರಿಗಳಿಗೆ ಗೊತ್ತಿಲ್ಲ ಎಂದು ಕಾಣುತ್ತದೆ. ದಯಮಾಡಿ ಈ ಬಗ್ಗೆ ಹೇಳಬೇಕು.

ಶ್ರೀ ಜೆ.ಎಚ್.ಪಟೇಲ್ (ಮುಖ್ಯಮಂತ್ರಿಗಳು): ಮಾನ್ಯ ವಾಟಾಳ್‌ರೆ, ಈಗ ತಾನೇ ಅದನ್ನು ನೋಡಿಕೊಂಡು ಬಂದಿದ್ದೇನೆ, ಹತ್ತು ನಿಮಿಷದ ಕೆಳಗೆ. ಅಲ್ಲಿ ಏನಾಗಿದೆ ಎಂದರೆ ಈ ಸ್ಟೇಡಿಯಂ ಸುತ್ತಮುತ್ತ ಪ್ರಾಕ್ಟೀಸ್‌ಗೆ ಎಂದು ಎಂದು ಏರಿಯಾ ಮಾಡಿಕೊಂಡಿದ್ದಾರೆ. ಈಕಡೆಯಿಂದ ಒಂದು ದೊಡ್ಡ ಚರಂಡಿ ಹೋಗುತ್ತಿದೆ ಮತ್ತು ಆ ಕಡೆಯಿಂದ ಒಂದು ಚರಂಡಿ ಹೋಗುತ್ತಿದೆ. ಚರಂಡಿ ಮುಚ್ಚಿಲ್ಲ. ಬಹಳ ವಾಸನೆ ಇದೆ. ಅಲ್ಲಿ ಪಕ್ಕದಲ್ಲಿ ಆಸ್ಪತ್ರೆಯಲ್ಲಿರುವವರಿಗೂ ಬಹಳ ಅಪಾಯ ಇದೆ. ಅದಕ್ಕೆ ಅವರೇನು ಪ್ರಪೋಸ್ ಮಾಡಿದ್ದಾರೆ, ನಾವು ಈ ಚರಂಡಿಯನ್ನು ಈ ಕಡೆಯದ್ದು ಆ ಕಡೆಯದು ಪೂರ್ಣವಾಗಿ ಮುಚ್ಚುತ್ತೇವೆ. ಈವನ್ ಕಾರ್ನರ್ ಏನು ಇದೆ, ಇದನ್ನು ಯಾವುದಾರೂ ಟಮ್ಸ್ ಅಂಡ್ ಕಂಡೀಷನ್ ಮೇಲೆ ನಮಗೆ ಕೊಡಿ, ನಾವು ಅದನ್ನು ಯೂಸ್ ಮಾಡಿಕೊಳ್ಳುತ್ತೇವೆ. ಅದು ಆಸ್ಪತ್ರೆಗೂ ಅನುಕೂಲ ಆಗುತ್ತದೆ. ಆ ಸ್ಟೇಡಿಯಂ ಮೇಂಟೇನ್ ಮಾಡುವುದಕ್ಕೆ ನಿಮಗೆ ಎಷ್ಟು ಹಣ ಬೇಕಾಗುತ್ತದೆ, ಅದನ್ನು ನಾವು ಉತ್ಪತ್ತಿ ಬರುವ ಹಾಗೆ ಮಾಡುತ್ತೇವೆ ಎಂದು ಈಗ ಡಾಕ್ಟರ್ ಅವರು ಮಾತನಾಡಿದರು. ಅದಕ್ಕೆ ನಾನು, ಡಿ.ಸಿ.ಎಂ. ಅಥವಾ ಸೀನಿಯರ್ ಕಲೀಗ್ಸ್, ಕಮೀಷನರ್ ಸ್ಪೋರ್ಟ್ಸ್ ಮಂತ್ರಿಗಳು ಅವರೂ ಕೂಡಿ ಮಾತನಾಡುತ್ತೇವೆ. ಕ್ರೀಡೆಯ ಇನ್‌ಫ್ರಾಸ್ಟ್ರಕ್ಚರ್ ಮೇಂಟೇನ್ ಮಾಡುವುದಕ್ಕೆ ನಮಗೆ ಕನಿಷ್ಟ ಪಕ್ಷ 15ರಿಂದ 20 ಲಕ್ಷ ಬೇಕು ತಿಂಗಳಿಗೆ ಪುನಃ ಅವನ್ನೆಲ್ಲಾ ಮಾಡಿ ಅದನ್ನು ಯಾರೂ ನೋಡಿಕೊಳ್ಳುವವರಿಲ್ಲ. ಸುಮಾರು 130 ಕೋಟಿ ಬೆಲೆಯ ಪ್ರಾಪರ್ಟಿಯನ್ನು ನಾವು ಮಾಡಿದ್ದೇವೆ. ನೀವು ಪ್ರಾರಂಭ ಮಾಡಿದ್ದುದು ಮಾನ್ಯ ಮೊಯಿಲಿಯವರೆ, ಅದನ್ನು ನಾವು ಅಟ್‌ಲೀಸ್ಟ್ ಪೂರ್ಣ ಮಾಡಿದ್ದೇವೆ. ಪೂರ್ಣ ಮಾಡಿ ಅದನ್ನು ಮೇಂಟೇನ್ ಮಾಡಬೇಕೋ ಬೇಡವೋ? ಸುಮ್ಮನೇ ಹಾಗೆಯೇ ಯಾರಾದರೂ ನೋಡಿಕೊಳ್ಳಲಿ ಎಂದು ಹೇಳಿದರೆ. ಅದಕ್ಕೆ ಬೇಕಾದರೆ ಇಬ್ಬರೂ ಜೊತೆಗೆ ಹೋಗೋಣ. ಅವರೇನು ಹೇಳುತ್ತಾರೆ, ಇದು ಯಾವ ಕಾರಣಕ್ಕೂ ಉಪಯೋಗ ಬರುವುದಿಲ್ಲ, ಗಟಾರ ಇದೆ ಅಲ್ಲಿ. ಇಂತಹವಕ್ಕೆಲ್ಲಾ ನೀವು ಮೋಟೀವ್ಸ್ ಅಟ್ರಿಬ್ಯೂಟ್ ಮಾಡಬಾರದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ನಾನು ಓದಿ ಬಿಡುತ್ತೇನೆ. ಶ್ರೀ ಕಂಠೀರವ ಹೊರಾಂಗಣ ಕ್ರೀಡಾಂಗಣದ ಆವರಣದ ಹೊರವಲಯದಲ್ಲಿನ ತಾತ್ಕಾಲಿಕ ವಾಹನ ನಿಲುಗಡೆಗೆ ಕೆಲವು ಕಾಮಗಾರಿಗಳನ್ನು ಕೈಗೊಳ್ಳಲು ಸಾಮಗ್ರಿಗಳನ್ನು ದಾಸ್ತಾನು ಮಾಡಿಕೊಳ್ಳುವ ಸಲುವಾಗಿ ಅವಕಾಶವನ್ನು ನೀಡುವಂತೆ ಆಯುಕ್ತರ ಮೌಖಿಕ ಆದೇಶದ ಮೇರೆಗೆ ಅನುಮತಿಯನ್ನು ನೀಡಲಾಗಿದೆ. ಸದರಿ ವಿಷಯದಲ್ಲಿ ಆಸ್ಪತ್ರೆಯ ಅಡಳಿತವರ್ಗದವರಿಗೆ ಅವಕಾಶ ಕಲ್ಪಿಸಲು ತಿಳಿಸಲಾಗಿದೆ. ನಾನು ತಮ್ಮಲ್ಲಿ ಏನು

ಹೇಳುತ್ತಿದ್ದೇನೆಂದರೆ ಒಂದು ಸಾರಿ ಸರ್ಕಾರದವರು ಈ ಅವಕಾಶ ಕೊಟ್ಟರೆ, ನಾವು ಆ ಜಾಗವನ್ನು ಬಿಡಿಸಿ ಕೊಳ್ಳುವುದಕ್ಕೆ ಆಗುವುದಿಲ್ಲ. ಆ ಜಾಗವನ್ನು ನೋಡಿ, ತಾವು ಒಂದು ಸಾರಿ ನೋಡಿ ತಮ್ಮ ಮನಸ್ಸಿಗೆ ಸರಿಯಾಗುತ್ತದಾ ನೋಡಿ.

ಅಧ್ಯಕ್ಷರು: ವಾಟಾಳ್‌ರವರೇ, ಆ ಜಾಗ ಎಂದರೆ ಸ್ಟೇಡಿಯಂ ಎಲ್ಲಾ ಬಿಟ್ಟು ಕೊಡುತ್ತಿದ್ದಾರೆಯೇ?

ಶ್ರೀ ವಾಟಾಳ್ ನಾಗರಾಜ್: ಸ್ಟೇಡಿಯಂ ಅಲ್ಲ ಸ್ವಾಮಿ, ಒಂದು ಎಕರೆ ಜಾಗ. ನಾನು ಸ್ಟೇಡಿಯಂ ಬಿಟ್ಟು ಕೊಡುತ್ತಾರೆ ಎಂದು ಹೇಳಿದನೇ? ಅದನ್ನು ಹೇಳಲಿಲ್ಲ.

ಶ್ರೀ ಅಜಯ್ ಕುಮಾರ್ ಸರ್‌ನಾಯಕ್: ಆದೇಶದಲ್ಲಿ ಏನು ಇದೆ ಎಂದರೆ ಸಾಮಗ್ರಿಗಳನ್ನು ದಾಸ್ತಾನು ಮಾಡಲು ಎಂದು ಇದೆ. ಸಾರ್ ನಾನು ಮೊನ್ನೆಯೇ ಉತ್ತರ ಕೊಡುವಾಗ ಹೇಳಿದ್ದೇನೆ. ನಾವು ರಾಷ್ಟ್ರೀಯ ಕ್ರೀಡಾ ಕೂಟವನ್ನು ನಡೆಸುವಂತಹ ಸಂದರ್ಭದಲ್ಲಿ ಮಲ್ಯ ಆಸ್ಪತ್ರೆಯನ್ನು ಅಫಿಷಿಯಲ್ ಹಾಸ್ಪಿಟಲ್ ಆಫ್ ಫೋರ್ತ್ ನ್ಯಾಷನಲ್ ಗೇಮ್ಸ್ ಎಂದು ಹೇಳಿ ಕನ್ಸಿಡರ್‌ಡ್ ಮಾಡಿದ್ದೇವೆ. ಆ ಸಂದರ್ಭದಲ್ಲಿ ಆ ರ್ಯಾಂಪನ್ನು ಅವರು ಮಾಡಿಕೊಡಬೇಕೆಂದು ನಾವು ಅವರ ಹತ್ತಿರ ಒಪ್ಪಂದ ಮಾಡಿಕೊಂಡಿದ್ದೇವೆ. ಆ ರ್ಯಾಂಪ್ ಕನ್‌ಸ್ಟ್ರಕ್ಷನ್ ಮಾಡುವುದಕ್ಕೆ ಸಾಮಾನುಗಳನ್ನು ದಾಸ್ತಾನು ಮಾಡುವುದಕ್ಕೆ ಅಲ್ಲೇನು ಮೆಟೀರಿಯಲ್ ತಂದಿಟ್ಟಿದ್ದಾರೆ. ಆ ಮೆಟೀರಿಯಲ್ ಇಟ್ಟುಕೊಳ್ಳುವುದಕ್ಕೆ ನಮ್ಮ ಡೆಪ್ಯುಟಿ ಡೈರೆಕ್ಟರ್ ಅವರಿಗೆ ಆರ್ಡರ್ ಕೊಟ್ಟಿದ್ದಾರೆ. ನಾನು ಮೊನ್ನೆಯೇ ಹೇಳಿದ್ದೇನೆ. ಆ ಜಾಗ ಅವರಿಗೆ ಕೊಟ್ಟಿಲ್ಲ. ಆ ತರಹ ಯಾವುದೇ ಆದೇಶ ಇಲ್ಲ. ಒಂದು ವೇಳೆ ಸ್ಥಳ ಕೊಟ್ಟಿರುವ ಆದೇಶ ಇದ್ದರೆ ಅದನ್ನು ವಿತ್ ಡ್ರಾ ಮಾಡುತ್ತೇವೆಂದು ಹೇಳಿದ್ದೇನೆ. ಅವರು ಕೇಳಿದ್ದು ಏನು? ಅವರು ಜಾಗ ಕೇಳಿಲ್ಲ. ನಮ್ಮ ಜೊತೆ ಓರಲ್ ಡಿಸ್ಕಷನ್ ನಡೆದಂತಹ ಸಂದರ್ಭದಲ್ಲಿ ಆ ಆಸ್ಪತ್ರೆಗೆ ಏನು ಪೇಷಂಟ್ಸ್ ಬರುತ್ತಾರೆ, ಅಥವಾ ಪೇಷಂಟ್ಸ್ ಅಡ್ಮಿಟ್ ಮಾಡಲಿಕ್ಕೆ ಅಥವಾ ನೋಡಲಿಕ್ಕೆ ಬರುತ್ತಾರೆ, ಅವರ ವಾಹನಗಳನ್ನು ನಿಲುಗಡೆ ಮಾಡಲಿಕ್ಕೆ ನಮಗೆ ಅವಕಾಶ ಮಾಡಿಕೊಡಿ ಎಂದು ಅವರು ಕೇಳಿದ್ದರು. ನಾನು ಅವರಿಗೆ ಹೇಳಿದ್ದೆ. ಒಂದು ವೇಳೆ ವಾಹನಗಳನ್ನು ಅಲ್ಲಿಗೆ ನಿಲುಗಡೆ ಮಾಡಲಿಕ್ಕೆ ಅವಕಾಶ ಮಾಡಿ ಕೊಟ್ಟರೆ ನೀವೇನು ನಮಗೆ ಇನ್‌ಟರ್ನ್ ಕೊಡುತ್ತೀರಿ ಎಂದು ಸನ್ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಕೆಲವು ಕಂಡೀಷನ್ಸ್ ಹೇಳಿದರು. ಅವರೇನು ಹೇಳಿದರು. ಕಂಠೀರವ ಸ್ಟೇಡಿಯಂ ಸುತ್ತಲೂ ಏನು ಗಾರ್ಡ್‌ನ್ ಇದೆ, ಅದನ್ನು ಮೇಂಟೇನ್ ಮಾಡುತ್ತೇವೆ. ಅದರ ಜೊತೆಗೆ ನಮ್ಮದೊಂದು ಸ್ಪೋರ್ಟ್ಸ್ ಹಾಸ್ಟೆಲ್ ಇದೆ. ಅದರಲ್ಲಿ 80 ಜನ ವಿದ್ಯಾರ್ಥಿಗಳು ಇದ್ದಾರೆ. ಆ ವಿದ್ಯಾರ್ಥಿಗಳಿಗೆ ಆ ಸ್ಪೋರ್ಟ್ಸ್ ಹಾಸ್ಟೆಲ್ ಪೂರ್ಣ ನಾವು ಅಡಾಪ್ಟ್ ಮಾಡಿಕೊಳ್ಳುತ್ತೇವೆ. ಆ ಪೂರ್ಣ ವಿದ್ಯಾರ್ಥಿಗಳ ಆರೋಗ್ಯದ ಬಗ್ಗೆ ನಾವು ನೋಡಿಕೊಳ್ಳುತ್ತೇವೆ. ಅದರ ಜೊತೆಗೆ ಕಂಠೀರವ ಸ್ಟೇಡಿಯಂನಲ್ಲಿ ಒಂದು ಸ್ಪೋರ್ಟ್ಸ್ ಮೆಡಿಸಿನ್ ಸೆಂಟರ್ ಓಪನ್

ಮಾಡುತ್ತೇವೆಂದು ಹೇಳಿದರು. ಒಂದು ಸ್ಪೋರ್ಟ್ಸ್ ಮೆಡಿಸಿನ್ ಸೆಂಟರ್ ಎಂದರೆ ಕನಿಷ್ಟ ಮೂರು ಕೋಟಿ ರೂಪಾಯಿ ಅಲ್ಲಿ ಇನ್‌ವೆಸ್ಟ್ ಮಾಡಬೇಕಾಗುತ್ತದೆ. ಅಂತೂ ಅದನ್ನು ಮಾಡುತ್ತೇವೆಂದು ಹೇಳಿದ್ದರು. ನಾನು ಅದನ್ನೂ ಒಪ್ಪಿಕೊಂಡಿದ್ದೇನೆ. ಈ ತರಹ ನಾವು ಡಿಸ್ಕಷನ್ ಮಾಡಿದ್ದೇವೆ. ಆದರೆ ಅವರಿಗೆ ನಾನು ಹೇಳಿದ್ದೆ. ಈ ವಿಷಯವನ್ನು ಕ್ಯಾಬಿನೆಟ್ ಮುಂದೆ ತಂದು ಸರ್ಕಾರ ಒಪ್ಪಿಗೆ ಕೊಟ್ಟರೆ ನಾನು ಕೊಡುತ್ತೇನೆ. ಇಲ್ಲದಿದ್ದರೆ ಕೊಡುವುದಿಲ್ಲ ಎಂದು ಮೊನ್ನೆಯೇ ಹೇಳಿದ್ದೇನೆ. ಆ ತರಹ ನಾವು ಯಾವುದೇ ಜಾಗವನ್ನು ಅವರಿಗೆ ಕೊಟ್ಟಿಲ್ಲ.

ಶ್ರೀ ಎಸ್.ಸುರೇಶ್ ಕುಮಾರ್: ಸನ್ಮಾನ್ಯ ಸಭಾಧ್ಯಕ್ಷರೆ, ಇಲ್ಲಿ ಒಂದು ವಿಚಾರ ಇದೆ. ಮಲ್ಯ ಆಸ್ಪತ್ರೆ ಕಟ್ಟುತ್ತಿದ್ದ ಸಮಯದಿಂದ ನಾವೊಂದು ಸ್ಟ್ಯಾಂಗ್ ಅಬ್ಜೆಕ್ಷನ್ಸ್ ತೆಗೆದಿದ್ದೇವೆ. ಈಗ ಮಾನ್ಯ ಸಚಿವರು ಹೇಳಿದರು. ನಮ್ಮ ಆಸ್ಪತ್ರೆಗೆ ಬಹಳ ಜನ ನೋಡುವುದಕ್ಕೆ ಬರುತ್ತಾರೆ. ವೆಹಿಕಲ್ಸ್ ಇರುತ್ತದೆ ಎಂದು ಹೇಳಿದರು. ಮಲ್ಯ ಆಸ್ಪತ್ರೆಯ ಪಾರ್ಕಿಂಗ್ ಸ್ಪೇಸ್ ಏನಾಗಿದೆ? ಅವರ ಪಾರ್ಕಿಂಗ್ ಸ್ಪೇಸ್‌ನಲ್ಲಿ ವೆಹಿಕಲ್ಸ್ ಇಡದೇ ಕಂಠೀರವ ಸ್ಟೇಡಿಯಂ ಪಾರ್ಕಿಂಗ್ ಸ್ಪೇಸ್ ಕೊಡುವುದಕ್ಕಾ ನಾವಿರುವುದು? ರಸ್ತೆಯ ಮೇಲೆಲ್ಲಾ ನಿಲ್ಲುವುದಕ್ಕಾ ನಾವು ಬಿಡುವುದು?

ಶ್ರೀ ವಾಟಾಳ್ ನಾಗರಾಜ್: ಅದಕ್ಕೆ ತಾವು ಯೋಚನೆ ಮಾಡಿ ಸಾರ್. ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕಳಕಳಿಯ ಮನವಿ ಮಾಡುತ್ತಿದ್ದೇವೆ. ತಾವು ದಯಮಾಡಿ ಯೋಚನೆ ಮಾಡಿ. ಹೆಜ್ಜೆ ಇಡುವುದಕ್ಕೆ ಮುಂಚೆ ತಾವು ದಯಮಾಡಿ ಯೋಚನೆ ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ: ಗ್ರೌಂಡ್ ಫ್ಲೋರ್ ಪಾರ್ಕಿಂಗ್‌ಗೋಸ್ಕರವೇ ರಿಸರ್ವ್ ಆಗಿರತಕ್ಕದ್ದು. ನಾನು ಈಗ ಒಂದು ಪ್ರಶ್ನೆ ಹಾಕಿದಂತಹ ಸಂದರ್ಭದಲ್ಲಿ ಅವರು ಅದನ್ನು ದುರುಪಯೋಗ ಮಾಡಿಕೊಂಡಿದ್ದಾರೆ ಎನ್ನತಕ್ಕ ಉತ್ತರವನ್ನು ಕೊಟ್ಟಿದ್ದಾರೆ. ಆ ಹಿನ್ನೆಲೆಯಲ್ಲಿ ಆ ಉತ್ತರವನ್ನು ಇಟ್ಟು ಇತ್ತೀಚಿನ ದಿನಗಳಲ್ಲಿ ಕಮಿಷನರ್ ಅವರಿಗೆ ಒಂದು ಪತ್ರವನ್ನೂ ಬರೆದಿದ್ದೇನೆ. ಯಾವ ಪ್ಲಾನನ್ನು ಅಪ್ರೂವ್ ಮಾಡತಕ್ಕ ಸಂದರ್ಭದಲ್ಲಿ ಗ್ರೌಂಡ್ ಫ್ಲೋರನ್ನು ಪಾರ್ಕಿಂಗ್‌ಗೆ ರಿಸರ್ವ್ ಮಾಡಿ, ಈಗ ಅದನ್ನು ಮಿಸ್ ಯೂಸ್ ಮಾಡಿಕೊಂಡಿದ್ದಾರೆ.

ಶ್ರೀ ಜೆ.ಎಚ್.ಪಟೇಲ್: ನಾವು ಯಾರಿಗೂ ಜಾಗ ಕೊಟ್ಟಿಲ್ಲ, ಏನೂ ಬರೆಸಿಕೊಂಡಿಲ್ಲ. ತಾವು ಬೇಕಾದರೆ, ತಾವು ವಿರೋಧಪಕ್ಷದ ನಾಯಕರು, ವಾಟಾಳರು ಹೋಗಿ ನೋಡೋಣ. ಅವರು ಕೊಟ್ಟಿರತಕ್ಕ ಪ್ರಪೋಸಲ್ ಏನು ಇದೆ? ನಾವು ಹಾಕಿರತಕ್ಕ ಕಂಡೀಷನ್ಸ್ ಏನು ಇದೆ, ಅದನ್ನು ನೋಡೋಣ. ನೀವು ಸರಿ ಇದೆ ಕೊಡಬಹುದು ಎಂದರೆ ಕೊಡೋಣ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಅವರ ಪಾರ್ಕಿಂಗ್ ಸ್ಪೇಸ್ ಬಗ್ಗೆ ನಮಗೆ ಬೇಡ,

ಶ್ರೀ ಜೆ.ಎಚ್.ಪಟೇಲ್: ಈಗ ಅವರು ಪಾರ್ಕಿಂಗ್ ಸ್ಪೇಸ್ ಏನು ಮಾಡಿದರು, ಅದನ್ನು ಅಲ್ಲ ನಾವು ಎನ್‌ಕ್ಯೂರಿ ಮಾಡುತ್ತಿರುವುದು. There is some place that can be used.

ಶ್ರೀ ಎಂ.ಶ್ರೀನಿವಾಸ್: ಅವರ ಪಾರ್ಕಿಂಗ್ ಸ್ಪೇಸ್‌ನಲ್ಲಿ ಪಾರ್ಕಿಂಗ್ ಮಾಡಿದ್ದರೆ ಈ ಪ್ರಶ್ನೆ ಬರುತ್ತಿತ್ತಾ?

ಶ್ರೀ ಜೆ.ಎಚ್.ಪಟೇಲ್: ತಾವು ಒಂದು ಸಾರಿ ನೋಡಿ. ಇನ್ನೂ ಕ್ಯಾಬಿನೆಟ್‌ಗೇ ಬಂದಿಲ್ಲ. ಕೊಟ್ಟು ಬಿಟ್ಟಿದ್ದಾರೆ, ಆದೇಶ ಆಗಿದೆ ಎಂದು ಹೇಳಿದರೆ? ಇನ್ನೂ ಕ್ಯಾಬಿನೆಟ್‌ಗೆ ಬಂದೇ ಇಲ್ಲ.

ಶ್ರೀ ಬಿ.ಬಿ.ಶಿವಪ್ಪ: ನಾನು ಮೇಲ್ಮನೆಯ ಸದಸ್ಯನಾಗಿದ್ದಾಗ ಆಸ್ಪತ್ರೆ ಕಟ್ಟಲು ಪ್ರಾರಂಭ ಆದಾಗ ಆವತ್ತು ಮನೋರಮಾ ಮಧ್ವರಾಜ್ ಅವರೇ ಆರೋಗ್ಯ ಮಂತ್ರಿಗಳು ಆಗಿದ್ದರು. ಆಗ ನಾನು ಪ್ರಶ್ನೆಯನ್ನು ಕೇಳಿದ್ದೆ. ಆಸ್ಪತ್ರೆಯನ್ನು ನೀವು ಅಲ್ಲಿ ಕಟ್ಟುವುದಕ್ಕೆ ಅವಕಾಶ ಮಾಡಿ ಕೊಡುತ್ತಿದ್ದೀರಿ. ಮುಂದೆ ಅಲ್ಲಿ ಟ್ರಾಫಿಕ್‌ನ ಬಹಳ ತೊಂದರೆ ಬರಬಹುದು. ಪಾರ್ಕಿಂಗ್‌ಗೆ ಅಲ್ಲಿ ಅವಕಾಶ ಇಲ್ಲ. ಅದರ ಬದಲು ಆಸ್ಪತ್ರೆ ಹೊರವಲಯದಲ್ಲಿ ಕಟ್ಟಲಿಕ್ಕೆ ಕೊಟ್ಟರೆ ಆರೋಗ್ಯ ವಿಷಯದಲ್ಲಿ ಒಳ್ಳೆಯದಾಗುತ್ತದೆ ಎಂದು ಹೇಳಿದ್ದೆ.

12.50 ಪಿ.ಎಂ

ಇಲ್ಲದಿದ್ದರೆ ಪಾರ್ಕಿಂಗ್ ವ್ಯವಸ್ಥೆಗೆ ಏನು ಮಾಡುತ್ತೀರಿ ಎಂದು ಕೇಳಿದಾಗ, ಅವರು ಹೇಳಿಕೆ ಮಾಡಿದ್ದಾರೆ. ಮೇಲ್ಮನೆಯಲ್ಲಿ ಆ ಹೇಳಿಕೆ ಇದೆ. ಆ ಅಂಡರ್ ಗ್ರೌಂಡ್ ಏನಿದೆ, ಗ್ರೌಂಡ್ ಲೆವೆಲ್‌ನಲ್ಲಿ ಸೆಲ್ಲರ್ ಫ್ಲೋರ್‌ನಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಿಕೊಳ್ಳುತ್ತೇವೆ, ರೋಡಿನಲ್ಲಿ ಪಾರ್ಕಿಂಗ್ ಮಾಡುವುದಿಲ್ಲ ಎಂದು ಹೇಳಿಕೆ ಕೊಟ್ಟಿದ್ದರು, ಅದು ನನಗೆ ಚೆನ್ನಾಗಿ ನೆನಪಿದೆ. ನಾನೇ ಸದನದಲ್ಲಿ ಅದರ ಬಗ್ಗೆ ಬಹಳ ಹೊತ್ತು ಪ್ರಸ್ತಾಪ ಮಾಡಿ, ಇದರ ಬಗ್ಗೆ ಚರ್ಚೆ ಮಾಡಿದ್ದೇನೆ. ಮೇಲ್ಮನೆಯಲ್ಲಿ ಅವರು ಸೆಲ್ಲರ್ ಫ್ಲೋರ್‌ನಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದ್ದರು. ಆದರೆ ಸೆಲ್ಲರ್ ಫ್ಲೋರ್‌ನಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಿಲ್ಲ. ಆದರೆ ಈಗ ರೋಡ್ ಕಂಪ್ಲೀಟ್ ಕ್ಲೋಸ್ ಆಗುತ್ತದೆ. ನಾನು ಇದರ ಪರಿಹಾರಕ್ಕಾಗಿ ಒಂದು ಸಲಹೆಯನ್ನು ಕೊಡುತ್ತೇನೆ. ಅದೇನೆಂದರೆ, ಮಲ್ಯ ಆಸ್ಪತ್ರೆಯವರು ಆ ಸ್ಥಳಕ್ಕೆ ಮೂರ್ನಾಲ್ಕು ಕೋಟಿ ರೂ. ಕೊಡುತ್ತೇವೆ ಎಂದು ಹೇಳಿದರೆ, ಅದನ್ನು ನೀವು ತೆಗೆದುಕೊಳ್ಳಬೇಡಿ, ಅದರ ಬದಲು ಈ ರಸ್ತೆಯ ಮೇಲೆ ಫ್ಲೈ ಓವರ್ ಮಾಡಿ ಕೆಳಗಡೆ ಅವರು ಎಲ್ಲಾ ವ್ಯವಸ್ಥೆ ಮಾಡುವುದಕ್ಕೆ ಸರ್ಕಾರ ಅವರಿಗೆ ಸೂಚನೆ ಕೊಟ್ಟರೆ ಟ್ರಾಫಿಕ್ ಕನ್‌ಜೆಷನ್ ಕಡಿಮೆ ಆಗುತ್ತದೆ. ನಂತರ ಅವರಿಗೆ ಪಾರ್ಕಿಂಗ್

ಸೌಲಭ್ಯ ಸಿಗುತ್ತದೆ.

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯ ಮಂತ್ರಿಗಳು): ಈ ರೀತಿ ಯಾವ ಯಾವುದು ಮಾಡುವುದಕ್ಕೆ ಸಾಧ್ಯವೋ ಆ ರೀತಿ ಮಾಡೋಣ. ಅಲ್ಲಿ ಟ್ರಾಫಿಕ್ ಕನ್‌ಜೆಷನ್ ಬಹಳ ಇದೆ. ಇದರಿಂದ ಅಲ್ಲಿ ಇರತಕ್ಕಂತಹ ರೋಗಿಗಳಿಗೆ ಬಹಳ ಚಿತ್ರ ಹಿಂಸೆ ಆಗುತ್ತಿದೆ. ಆದುದರಿಂದ ನೀವು ಹೇಳಿದ ಹಾಗೆ, ಫ್ಲೈ ಓವರ್ ಮಾಡುವುದೋ ಅಥವಾ ಆ ಕಡೆ ಪಾರ್ಕಿಂಗ್ ಲಾಂಜ್ ಕಟ್ಟಿಸುವುದೋ ಅದೆಲ್ಲವನ್ನೂ ಆಲೋಚನೆ ಮೊಡುತ್ತಿದ್ದೇವೆ. ಇದು ಇನ್ನು ಕ್ಯಾಬಿನೆಟ್ ಮುಂದೆ ಬಂದಿಲ್ಲ. ಅವರು ಏನು ಹೇಳಿದರು, ಮೆಟೀರಿಯಲ್ ಡಂಪ್ ಮಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳಿರುವುದು, ಮನೆ ಕಟ್ಟುವುದಕ್ಕಲ್ಲ.

ಶ್ರೀ ಹೆಚ್.ಎನ್.ನಂಜೇಗೌಡ: ಇದು ಒಂದು ಪಾಲಿಸಿ ಮ್ಯಾಟರ್ ಆಗಿದೆ. ಈ ರೀತಿ, ಬೆಂಗಳೂರಿನಲ್ಲಿ ಇರತಕ್ಕಂತಹ ಸರ್ಕಾರದ ಜಮೀನು, ಆಯಕಟ್ಟಿನ ಪ್ರದೇಶನ ಪರಭಾರೆ ಮಾಡಬೇಕೋ, ಬೇಡವೋ ಎಂದು.... ಈಗ ನಮಗೆ ಖರ್ಚಿಗೆ ದುಡ್ಡು ಬೇಕು. ವಿಧಾನ ಸೌಧವನ್ನು ನಿರ್ವಹಣೆ ಮಾಡುವುದಕ್ಕೆ ವರ್ಷಕ್ಕೆ ಹದಿನೈದು ಕೋಟಿ ರೂಪಾಯಿ ಬೇಕು. ಕೊಡಿ ಒಂದು ಭಾಗ, ಎಲ್ಲಾದರೂ ಕೊಟ್ಟುಬಿಡಿ, ಅದನ್ನು ನಿರ್ವಹಣೆ ಮಾಡುವುದಕ್ಕೆ ಯಾರನ್ನಾದರೂ ಕರೆದುಕೊಂಡು ಬರುತ್ತೇನೆ ನಾನು. That is not the argument. Why I am telling you sir, ಫುಟ್ ಬಾಲ್ ಸ್ಟೇಡಿಯಂನ ಕಟ್ಟಿಸಿ ಎಂದು ರಹೇಜಾದವರಿಗೆ ಬಿಟ್ಟು ಕೊಟ್ಟಿರಿ, ಆದರೆ ಅವರು ಏನು ಮಾಡಿದರು? ಸುತ್ತ ಕಾಂಪ್ಲೆಕ್ಸ್ ಕಟ್ಟಿಕೊಂಡು ಬಿಟ್ಟರು. ಇದನ್ನು ಹಿಂದೆ ಸನ್ಮಾನ್ಯ ಶ್ರೀ ರಾಮಕೃಷ್ಣ ಹೆಗಡೆ ಅವರೇ ಕೊಟ್ಟಿದ್ದುದು. ರಹೇಜಾಸ್, ತುತೈಜಾಸ್, ಎಲ್ಲರೂ ದೆಹಲಿಯಿಂದ ವಲಸೆ ಬಂದಿದ್ದೆ ಆಗ. ಅಲ್ಲಿ ಏನಾಯಿತು? ಪ್ಲಾನ್ ಅಪ್ರೂವ್ ಆಗದೆ ಇರುವಷ್ಟು ಬಿಲ್ಡಿಂಗ್ ಕಟ್ಟಿಕೊಂಡು ಹಣ ಮಾಡಿಕೊಂಡರು. ಕೊನೆಗೆ ಏನಾಯಿತು, ಫುಟ್ ಬಾಲ್ ಸ್ಟೇಡಿಯಂ ಅನ್ನು ಚೆನ್ನಾಗಿ ಸರ್ಕಾರಿ ವೆಚ್ಚದಲ್ಲೇ ಕಟ್ಟಬೇಕಾಯಿತು. ಈಗ ಅದು ಯಾರದು ಫುಟ್ ಬಾಲ್ ಸ್ಟೇಡಿಯಂ? ಅದಕ್ಕೆ ಸರ್ಕಾರ ಖರ್ಚು ಮಾಡಬೇಕಾಯಿತು. ಆದರೆ ರಹೇಜಾದವರು ಕಾಂಪ್ಲೆಕ್ಸ್ ಕಟ್ಟಿಕೊಂಡು ಅವರಿವರಿಗೆ ಬಾಡಿಗೆಗೆ ಕೊಟ್ಟುಕೊಂಡು, ಲೀಸ್‌ಗೆ ಕೊಟ್ಟುಕೊಂಡು, ಕೋಟ್ಯಾಂತರ ರೂಪಾಯಿ ಲಾಭ ಮಾಡಿಕೊಂಡ. ಈಗ ನಿಮ್ಮ ಮಲ್ಯ ಆಸ್ಪತ್ರೆಗೆ, ನಿಮ್ಮ ಊರಿನಲ್ಲಿ ಯಾರು ಹರಕಲು ಚಡ್ಡಿ ಹಾಕಿಕೊಂಡು ಇರುತ್ತಾರಲ್ಲಾ, ಅವರು ಅಲ್ಲಿಗೆ ಬರುತ್ತಾರಾ? ಸೀರೆ ಹರಿದುಕೊಂಡಿರುವಂತಹ ಮಹಿಳೆಯರು ಅಲ್ಲಿಗೆ ಬರುತ್ತಾರಾ? ಅಂಥವರು ಖಾಯಿಲೆ ಬಿದ್ದರೆ ಇಂತಹ ಆಸ್ಪತ್ರೆಗೆ ಬರುವುದಿಲ್ಲ. ಅಲ್ಲಿ ಬರುವವರು ಎಂಥವರು ಎಂದರೆ, ಫೈವ್ ಸ್ಟಾರ್ ಹೋಟೆಲಿನಲ್ಲಿ ಉಳಿದುಕೊಂಡು ಅಲ್ಲಿಗೆ ಔಷಧಿ ತೆಗೆದುಕೊಳ್ಳುವುದಕ್ಕೆ ಬರುತ್ತಾರೆ. ಆ ಆಸ್ಪತ್ರೆಯಲ್ಲಿ ಫೈವ್ ಸ್ಟಾರ್ ಹೋಟೆಲಿನಲ್ಲಿ ಏನು ಬೆಲೆ ಹಾಕುತ್ತಾರೋ, ಅಷ್ಟೇ ಬೆಲೆಯನ್ನು ಈ ಆಸ್ಪತ್ರೆಯಲ್ಲಿ ಹಾಕುತ್ತಾರೆ. ಈ ರೀತಿಯ ರೋಗಿಗಳು ಅಲ್ಲಿಗೆ ಹೋಗುವುದು. ಇಲ್ಲಿ ಇಲ್ಲ ಅಂದರೆ ಮದ್ರಾಸಿನ ಅಪೋಲೋಗೆ ಹೋಗುತ್ತಾರೆ, ನಾನು ಹೇಳುವುದು.....

ಶ್ರೀ ಜೆ.ಎಚ್.ಪಟೇಲ್: ಶ್ರೀಮಂತ ರೋಗಿ ಆದರೆ ಅವನು ವಾಸನೆ ಕುಡಿಯಬಹುದು....

(ಗೊಂದಲ)

ಅಲ್ಲಿ ತಾವು ನೋಡಿದ್ದೀರಾ? ಅಲ್ಲಿ ಇರುವಷ್ಟು ಗಲೀಜು, ಅಲ್ಲಿ ಇರುವಷ್ಟು ಇನ್‌ಸೆಕ್ಟ್....

(ಗೊಂದಲ)

ಶ್ರೀ ಹೆಚ್.ಎನ್.ನಂಜೇಗೌಡ: ಈಗ ಒಂದು ಕೆಲಸ ಮಾಡಿ...

ಶ್ರೀ ಜೆ.ಹೆಚ್.ಪಟೇಲ್: ಈಗ ಉದ್ದೇಶ ಏನು?

ಶ್ರೀ ಎಂ.ಶ್ರೀನಿವಾಸ್: ಹಿಂದೆ ಶಿವಾಜಿ ಥಿಯೇಟರ್ ಎದುರುಗಡೆ ಬ್ರಿಡ್ಜ್ ಮೇಲೆ ಮನೆ ಕಟ್ಟಿದ್ದಾರೆ, ಆ ಬ್ರಿಡ್ಜ್ ಕ್ಲೀನ್ ಮಾಡುವುದಕ್ಕೆ ಆಗುತ್ತಿಲ್ಲ.

ಶ್ರೀ ಜೆ.ಹೆಚ್.ಪಟೇಲ್: ಈಗ ಅದಕ್ಕೋಸ್ಕರ, ಅದನ್ನು ಯಾರ ಯಾರ ಕಾಲದಲ್ಲಿ ಕಟ್ಟಿದ್ದರೋ ಅದನ್ನು ಈಗ ಕೆಡವಿಸುತ್ತಾ ಇದ್ದೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನೀವು ಹೇಳಬೇಕು. ಇದೂ ಕೂಡ ಅದೇ ರೀತಿ ಆಗುತ್ತದೆ, ಆದಕಾರಣ ಬೇಡ ಎಂದು ಹೇಳಬೇಕು.

ಶ್ರೀ ಹೆಚ್.ಎನ್.ನಂಜೇಗೌಡ: ಪ್ರಾಂಗಣವನ್ನು ಕ್ಲೀನಾಗಿ ಇಡಬೇಕಾದರೆ, ಸರ್ಕಾರದವರು ಇಡೀ ಕ್ಲೀನಾಗಿ. ಈಗ ಕಂಠೀರವ ಸ್ಟೇಡಿಯಂನಲ್ಲಿ, ಆ ಪ್ರದೇಶದಲ್ಲಿ, ಬೇರೆಯವರಿಗೆ, ಏಕೆ ಕೊಡುತ್ತೀರಾ?

ಅಧ್ಯಕ್ಷರು: ಸನ್ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು. ಏನೆಂದರೆ, ತಾವೆಲ್ಲರೂ ಬಂದು ನೋಡಬಹುದು, ಮತ್ತು ನಾವು ಇದೂವರೆವಿಗೂ ಯಾವ ನಿರ್ಣಯ ಸಹ ನೀಡಿಲ್ಲ, ಯಾವ ಆದೇಶವನ್ನು ನೀಡಿಲ್ಲ, ತಾವೆಲ್ಲರೂ ಬಂದು ನೋಡಬಹುದು ಎಂದು ಹೇಳಿದ್ದಾರೆ....

ಶ್ರೀ ಹೆಚ್.ಎನ್.ನಂಜೇಗೌಡ: ಅವರು ಆ ಆದೇಶವನ್ನು ಓದಿದರು, ತಾವು ಏಕೆ ಹಾಗೆ ಹೇಳುತ್ತೀರಿ?

ಶ್ರೀ ವಾಟಾಳ್‌ನಾಗರಾಜ್: ಇದು ಆದೇಶ ಅಲ್ಲವಾ ಸ್ವಾಮಿ? ಬೇಕಾದರೆ ತಮಗೆ ಕಳುಹಿಸಿಕೊಡಲೇ? ಇದು ಮೌಖಿಕ ಆದೇಶವಾಗಿದೆ. ಇದನ್ನು ಆಯುಕ್ತರು ನೀಡಿದ್ದಾರೆ. ಅಲ್ಲಿ ಸಾಮಾನು ಹಾಕಿಕೊಳ್ಳಬಹುದು, ಲಾರಿ ನಿಲ್ಲಿಸಬಹುದು, ಡೆಬ್ರೀಸ್

ಹಾಕಬಹುದು ಎಂದು ಆದೇಶ ನೀಡಿದ್ದಾರೆ. ಹಾಗಾದರೆ ಇದು ಆದೇಶ ಅಲ್ಲವೇ? ಈ ವಿಷಯ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿಲ್ಲ ಎಂದು ನಾನು ಹೇಳುತ್ತೇನೆ. ಅವರ ಸಲಹೆಯನ್ನು ನಾನು ಒಪ್ಪುತ್ತೇನೆ. ಆ ಸ್ಥಳವನ್ನು ನೋಡಿ ಪ್ರಾಮಾಣಿಕವಾದ ಚಿಂತನೆಯನ್ನು ತಾವು ತೆಗೆದುಕೊಳ್ಳಿ, ಅಧ್ಯಕ್ಷರಿಗೆ ಅವರು ಕೊಟ್ಟಿರುವ ಆದೇಶ ಕೊಡಿ.

ಅಧ್ಯಕ್ಷರು: ನನಗೆ ಅರ್ಥವಾಗಿದೆ, ನಾನೇನೂ ನೋಡುವುದು ಬೇಕಾಗಿಲ್ಲ. ಅವರು ಹೇಳಿದ್ದುದನ್ನು ನಾನು ಕೇಳಿಸಿಕೊಂಡೆ.

ಶ್ರೀ ಅಜಯ್ ಕುಮಾರ್ ಸರ್‌ನಾಯಕ್: ಸನ್ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಹೇಳಿದ್ದೇನೆ, ಇನ್ನೊಮ್ಮೆ ಹೇಳುತ್ತೇನೆ. ಆ ಆದೇಶ ಸಾಮಗ್ರಿಗಳನ್ನು ದಾಸ್ತಾನು ಮಾಡುವುದಕ್ಕೆಂದು ಇದೆ. ಸಾಮಗ್ರಿಗಳು ಎಂದರೆ ಯಾವುದು ಕಾರು ಅಥವಾ ಟ್ರಕ್ ನಿಲುಗಡೆ ಮಾಡುವುದಕ್ಕೆ...

SRI S.SURESH KUMAR: Let us put the records straight. ಇಲ್ಲಿ ಇರುವುದು ತಾತ್ಕಾಲಿಕ ವಾಹನಗಳ ನಿಲುಗಡೆಗೆ, ಕೆಲವು ಕಾಮಗಾರಿಗಳನ್ನು ಕೈಗೊಳ್ಳಲು ಸಾಮಗ್ರಿಗಳನ್ನು ದಾಸ್ತಾನು ಮಾಡಿಕೊಳ್ಳುವ ಸಲುವಾಗಿ ಎಂದು, ತಾತ್ಕಾಲಿಕ ಎಂದರೆ ಎಲ್ಲಿ ಮಾಡುತ್ತಾರೆ?

ಶ್ರೀ ಅಜಯ್ ಕುಮಾರ್ ಸರ್‌ನಾಯಕ್: ಸರ್, ಇನ್ನೊಮ್ಮೆ ಹೇಳುತ್ತೇನೆ, ನಾವು ನ್ಯಾಷನಲ್ ಗೇಮ್ಸ್ ಮಾಡಿದೆವಲ್ಲಾ, ಆ ಸಮಯದಲ್ಲಿ ಅವರು ಪ್ಲೇಯರ್ಸ್ ಎನ್‌ಟ್ರಿಗೆ ರ್‍ಯಾಂಪ್ ಕನ್‌ಸ್ಟ್ರಕ್ಷನ್ ಮಾಡುವುದಕ್ಕೆ ಅವರು ಪರ್‌ಮಿಷನ್ ಕೇಳಿದ್ದರು. ಅದಕ್ಕೆ ನಾವು ಪರ್‌ಮಿಷನ್ ಕೊಟ್ಟಿದ್ದೇವೆ.

ಶ್ರೀ ಹೆಚ್.ಎನ್.ನಂಜೇಗೌಡ: ನ್ಯಾಷನಲ್ ಗೇಮ್ಸ್‌ಗೋಸ್ಕರ ಎಷ್ಟು ಕೋಟಿ ರೂ. ಖರ್ಚು ಮಾಡಿದ್ದೀರಿ, ಅಂತಹದರಲ್ಲಿ ಒಂದು ರ್‍ಯಾಂಪ್ ಅವರ ಕೈಯಲ್ಲಿ ಮಾಡಿಸಿದ್ದೇವೆ ಎಂದು ಹೇಳುತ್ತೀರಲ್ಲಾ, ಏನು ಮಾತನಾಡುತ್ತೀರಿ? That is not the argument. Or else, you admit that you are going to patronage them and you are going to donate ಎಂದು ಹೇಳಿ. ಸುಮ್ಮನೆ ಯಾವ ನೆಪ ಹೇಳುವುದು ಬೇಡ ಎಂದು ಹೇಳಿ. ರ್‍ಯಾಂಪ್, ರ್‍ಯಾಂಪ್....

ಶ್ರೀ ಅಜಯ ಕುಮಾರ್ ಸರ್‌ನಾಯಕ್: ನ್ಯಾಷನಲ್ ಗೇಮ್ಸ್, ನಡೆಯುವಂತಹ ಸಂದರ್ಭದಲ್ಲಿ ಎಂ.ಇ.ಜಿ.ರವರ ಕಡೆಯಿಂದ ಮಾಡಿಸಿದ್ದೇವೆ.

ಶ್ರೀ ಎಂ.ಶ್ರೀನಿವಾಸ್: ಕಂಟ್ರಾಕ್ಟರ್ ಅವರಿಂದ ಎಪ್ಪತ್ತು ಲಕ್ಷ ರೂ. ಬರಬೇಕಾಗಿತ್ತು ಅದನ್ನು ವಸೂಲಿ ಮಾಡಿ.

ಅಧ್ಯಕ್ಷರು: ಏನಪ್ಪ, ಬೆಂಗಳೂರು ಜಮೀನು ಅಂದರೆ ಸನ್ಮಾನ್ಯ ಶ್ರೀನಿವಾಸ್ ಅವರಿಗೆ ಮೈ ಮೇಲೆ ಬಂದು ಬಿಡುತ್ತದಲ್ಲ, ಅದು ಹಾಳು ಬಿದ್ದೋಗಲಿ ಬಿಡಿ, ಏಕೆ ಅಷ್ಟು ಸಿಟ್ಟಿಗೇಳುತ್ತೀರಿ? ಬೆಂಗಳೂರು ಜಮೀನು ಮೇಲೆ ಏಕೆ ಸಿಟ್ಟಿಗೆ ಬೀಳುತ್ತೀರಲ್ಲಾ, ಎಲ್ಲಾದರೂ ಹೋಗಲಿ ಬಿಡಿ, ಅದೇನು, ಬೆಂಗಳೂರು ಜಮೀನು ಅಂದರೆ ಎಲ್ಲರೂ ಆವೇಶಕ್ಕೆ ಬರುತ್ತಾರೆ?

ಶ್ರೀ ಎಂ.ಶ್ರೀನಿವಾಸ್: ಒಂದು ದಿವಸಕ್ಕೆ ಐವತ್ತು ಸಾವಿರ ರೂಪಾಯಿ ವಸೂಲಿ ಮಾಡುತ್ತೇವೆ ಎಂದು ಈ ಸದನದಲ್ಲಿ ಹೇಳಿದ್ದರು. ಆದರೆ ಆರು ತಿಂಗಳಾದರೂ ಮೂರು ಕಾಸೂ ಸಹ ವಸೂಲಿ ಮಾಡಿಲ್ಲ.

ಅಧ್ಯಕ್ಷರು: ಸರ್ಕಾರದವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ, ನಾವು ಯಾವ ಆದೇಶ ಕೊಟ್ಟಿಲ್ಲ, ಯಾವ ನಿರ್ಣಯವನ್ನು ಮಾಡಿಲ್ಲ, ಯಾವ ಪರಭಾರೆಯನ್ನು ಮಾಡಿಲ್ಲ ಎಂದು...

ಶ್ರೀ ಬಿ.ಎಸ್.ಯಡಿಯೂರಪ್ಪ: ಆಯಿತು ಸ್ವಾಮಿ, ಅವರು ಅದರ ಬಗ್ಗೆ ಕ್ಲಾರಿಫಿಕೇಷನ್ ಕೊಟ್ಟಿದ್ದಾರಲ್ಲಾ. ನಾನೂ ಕೇಳಿದ್ದೇನೆ, ಅವರು ಹೇಳಿರುವಂತಹದ್ದು ತಾತ್ಕಾಲಿಕವಾಗಿ ನಾವು ಪ್ರಕಟಿಸಿದ್ದೇವೆ ಎಂದು.

(ಗೊಂದಲ)

ಅಧ್ಯಕ್ಷರು: ಮಂತ್ರಿಗಳು ಸ್ಪಷ್ಟೀಕರಣ ಕೊಟ್ಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ: ಆರ್ಡರ್ ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರಲ್ಲಾ, ತೆಗೆದುಕೊಳ್ಳಿ.

ಶ್ರೀ ಎಸ್.ಆರ್.ಲಕ್ಷ್ಮಯ್ಯ: ಒಂದು ಗಂಟೆಯಿಂದ ಹೇಳಿದ್ದೇ ಹೇಳುತ್ತಾ ಇದ್ದರೆ, ಜವಾಬ್ದಾರಿ ಇಲ್ಲವಾ? ಮುಖ್ಯ ಮಂತ್ರಿಗಳು ಹೇಳಿದ್ದಾರಲ್ಲಾ....

(ಗೊಂದಲ)

ಶ್ರೀ ಮಾಟಾಳ್ ನಾಗರಾಜ್: ಸನ್ಮಾನ್ಯ ಮುಖ್ಯ ಮಂತ್ರಿಗಳ ಬಗ್ಗೆ ನಮಗೆ ಗೌರವ ಇದೆ, ದಾರಿ ತಪ್ಪಿಸುವುದು ಬೇಡ.

ಶ್ರೀ ಎಸ್.ಆರ್.ಲಕ್ಷ್ಮಯ್ಯ: ಅವರು ಹೇಳುತ್ತಲೇ ಇದ್ದಾರೆ, ಪುನಃ ಅದನ್ನೇ ಮಾತನಾಡುತ್ತಾ ಇದ್ದರೆ....

ಅಧ್ಯಕ್ಷರು: ಸನ್ಮಾನ್ಯ ಸುರೇಶ್ ಅವರೆ, ಯಾವುದಕ್ಕೂ ರ್ಯಾಷನಲ್ ಇರಬೇಕು. No

less a person than the Chief Minister has told that all the Members including opposition leaders will go there and take a decision. Even then, you want to debate over that? Where is any rational; please tell me. ಸನ್ಮಾನ್ಯ ಮುಖ್ಯಮಂತ್ರಿಗಳು, ಸಭಾನಾಯಕರು ಹೇಳುತ್ತಾರೆ, ತಮ್ಮೆಲ್ಲರನ್ನೂ ಕರೆದುಕೊಂಡು ಹೋಗಿ, ಅಗತ್ಯ ಇದ್ದರೆ, ಔಚಿತ್ಯವೆಂದು ಕಂಡುಬಂದರೆ ಮಾಡೋಣ ಇಲ್ಲದಿದ್ದರೆ ಬೇಡ ಎಂದು ಹೇಳಿದ ಮೇಲೆ, ಅವರು ತಾತ್ಕಾಲಿಕವಾಗಿ ಮಾಡಿಕೊಟ್ಟಿರುವುದು ಎಂದು ಹೇಳಿದ ಮೇಲೆ why do you debate over that matter?

ಶ್ರೀ ವಾಟಾಳ್ ನಾಗರಾಜ್: ಆಯಿತು ಸ್ವಾಮಿ, ತಾವು ಸಿಟ್ಟು ಮಾಡಿಕೊಳ್ಳಬೇಡಿ.

ಅಧ್ಯಕ್ಷರು: ಸಿಟ್ಟಾಗುವುದಲ್ಲ, ಯಾವ ವಿಚಾರಕ್ಕಾದರೂ ಸಹ ನಮ್ಮ ತಾಳ್ಮೆಗೆ ಒಂದು ಮಿತಿ ಇರುತ್ತದೆ ಅಲ್ಲದೇ? There should be some reason.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರು ಏಕೆ ಸಿಟ್ಟು ಮಾಡಿಕೊಳ್ಳುತ್ತೀರಿ?

ಅಧ್ಯಕ್ಷರು:ಇಡೀ ದಿವಸ ಅದೇ ವಿಷಯವನ್ನು ಮಾತನಾಡುತ್ತಾ ಇರಿ, ನಾನು ತಾಳ್ಮೆಯಿಂದ ಇಲ್ಲೇ ಕುಳಿತಿರುತ್ತೇನೆ, I don't understand ಹೇಳಿದ್ದನ್ನೇ ಹೇಳಿಕೊಂಡು ಅದನ್ನೇ ಪುನಃ ಪುನಃ ಮಾತನಾಡುತ್ತಾ ಇದ್ದರೆ ಹೇಗೆ? He is the leader of the House; He says, all of you can go there and you can see it. ತಾವು ಒಪ್ಪಿಕೊಂಡರೆ ಆಗಬಹುದು ಇಲ್ಲದಿದ್ದರೆ ಇಲ್ಲ ಎಂಬ ಮಾತನ್ನು ಹೇಳುತ್ತಿದ್ದಾರೆ, ಅದನ್ನು ತಮ್ಮ ವಿವೇಚನೆಗೆ ಬಿಟ್ಟಾದಮೇಲೆ, ಚರ್ಚೆ ಎಂದರೆ ನಾವು ಏನು ಹೇಳಬೇಕು?

ಶ್ರೀ ವಾಟಾಳ್ ನಾಗರಾಜ್: ಮುಖ್ಯ ಮಂತ್ರಿಗಳಿಗೆ ಈ ವಿಷಯ ಗೊತ್ತಿಲ್ಲ, ಅವರಿಗೆ ಗೊತ್ತಿದ್ದರೆ ಎಂದೋ ನಿಲ್ಲಿಸುತ್ತಿದ್ದರು, ಇದು ಮುಖ್ಯ ಮಂತ್ರಿಗಳ ಗಮನಕ್ಕೆ ಬಂದಿಲ್ಲ.

MR. SPEAKER: I don't understand. It is only waste of time. Today is the last day. Bills are pending and we have to take up the matter under rule 69 also along with other things. I am not defending the Government. It is not my duty. I am not here to defend. If the Governmnent is capable they can defend; otherwise they will face the fate. I am only worried about the business of the House. Today is the last day.

ಶ್ರೀ ವಾಟಾಳ್ ನಾಗರಾಜ್: ಸ್ವಾಮಿ, ತಾವು ಏಕೆ ಸಿಟ್ಟುಕೊಮಾಡಿಕೊಳ್ಳುತ್ತೀರಾ? ಏನಾಗಿದೆ ಎಂದು ತಾವು ಸಿಟ್ಟು ಮಾಡಿಕೊಳ್ಳುತ್ತೀರಾ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇವರು ಆದೇಶ ಏನು ತಂದರು, ಆ ಆದೇಶ ಇದೆ ಎಂದು ಮುಖ್ಯ ಮಂತ್ರಿಗಳಿಗೂ ಸಹ ಗೊತ್ತಿಲ್ಲ.

ಮಾನ್ಯ ಸದಸ್ಯರು: ಗೊತ್ತಿತ್ತು.

MR. SPEAKER: Bills are there. Let them go like that.

(INTERRUPTIONS)

ಶ್ರೀ ಜೆ.ಹೆಚ್.ಪಟೇಲ್: ಅದರಲ್ಲಿ ತಪ್ಪೇನಿದೆ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ತಪ್ಪೋ ಸರಿಯೋ, ಆ ಮಾತು ಬೇರೆ, ನಾನು ಹೇಳಿದ್ದು ತಮಗೂ ಸಹ ಗೊತ್ತಿಲ್ಲ ಎಂದು.

ಶ್ರೀ ಜೆ.ಹೆಚ್.ಪಟೇಲ್: ಅದರಲ್ಲಿ ಏನಿದೆ? ಅದು ಕಾನೂನಿಗೆ ಏನಾದರೂ ವಿರುದ್ಧವಾಗಿ ಇದೆಯೇ?

(ಗೊಂದಲ)

ಶ್ರೀವಾಟಾಳ್ ನಾಗರಾಜ್: ತಾವು ಕೋಪಿಸಿಕೊಳ್ಳುವುದು ಬೇಡ.

ಶ್ರೀ ಜೆ.ಹೆಚ್.ಪಟೇಲ್: ಈ ಬಿಲ್ಸ್ ನೋಡೋಣ.

ಅಧ್ಯಕ್ಷರು: ನಾವು 10.25 ಕ್ಕೆ ಸದನ ಪ್ರಾರಂಭ ಮಾಡಿದ್ದು ಒಂದು ಗಂಟೆ ಆಗುತ್ತಾ ಇದೆ, we have not come to the Agenda. I am not taking up bills now. ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆ ಅವರು 69ನೇ ಡಿಸ್‌ಕಷನ್ ತಾವು ಪ್ರಾರಂಭ ಮಾಡಿ. We are not taking up those bills today. We have no time. We can take up them on some other day.

(ಗ) ಏಕಹುದ್ದೆಯನ್ನು ಭರ್ತಿ ಮಾಡುವಾಗ ಮೀಸಲಾತಿಯನ್ನು ಅನುಸರಿಸುವುದು

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೆ, ಇವತ್ತು ನಾನು ನಿಯಮ 69ರ ಅಡಿಯಲ್ಲಿ, ಅನೇಕ ಸಾರಿ ಈ ವಿಷಯವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ, ಮಾನ್ಯ ಅಧ್ಯಕ್ಷರೆ, ಇದನ್ನು ತಮ್ಮ ಗಮನಕ್ಕೂ ಕೂಡ ಇದನ್ನು ನಾನು ಮೂರನೇ ಸಲ ತರುತ್ತಿರುವಂಥಾದ್ದು, ಮಾನ್ಯ

ಮುಖ್ಯಮಂತ್ರಿಗಳಿಗೆ ಈ ವಿಷಯ ಸಂಬಂಧ ಪಟ್ಟಿದ್ದು. ಹೋದ ಸಲ ಫೆಬ್ರವರಿ ಸೆಷನ್‌ನಲ್ಲಿ ಕೂಡ ಇದರ ಬಗ್ಗೆ ನಾನು ಮಾತನಾಡಿದ್ದೆ. ಹಿಂದೆ ಪ್ರಥಮ ಬಾರಿಗೆ ನವೆಂಬರ್ ಡಿಸೆಂಬರ್‌ನಲ್ಲಿ ಕೂಡ ಈ ವಿಷಯವನ್ನು ಪ್ರಸ್ತಾವ ಮಾಡಿದೆ. ನಾವು ಆದಷ್ಟು ಬೇಗನೇ ಇದನ್ನು ಮಾಡುತ್ತೇವೆ ಎನ್ನತಕ್ಕ ಮಾತನ್ನು, ಸಮಾಧಾನವನ್ನು ಹೇಳಿದ್ದೀರಿ. ನಾನು ಎರಡು ಸಾರಿ ಬಹಳಷ್ಟು ಹೆಸಿಟೇಟ್ ಮಾಡಿದ ಮೇಲೆ ಹೇಳಿದ್ದೀರಿ. ಇಲ್ಲಿ ಏನು ವಿಷಯ ಎಂದರೆ ರಿಸರ್ವೇಷನ್ ವಿಚಾರ. ಏಕ ಹುದ್ದೆಯನ್ನು ಭರ್ತಿ ಮಾಡುವಾಗ ಸರ್ಕಾರವು ಮೀಸಲಾತಿಯನ್ನು ಅನುಸರಿಸದೇ ಇರುವುದರಿಂದ ಉಂಟಾಗಿರುವ ಗೊಂದಲ ವಿಚಾರವನ್ನು ಸದನದಲ್ಲಿ ಚರ್ಚಿಸಲು ದಿನಾಂಕ 11.09.97ರಂದು ನಿಯಮ 69ರ ಅಡಿಯಲ್ಲಿ ಅನುಮತಿಯನ್ನು ನೀಡಬೇಕು ಎಂದಾಗ ಮಾನ್ಯ ಅಧ್ಯಕ್ಷರು ಇದರ ಬಗ್ಗೆ ಅನುಮತಿಯನ್ನು ನೀಡಿದ್ದಾರೆ. ತಮ್ಮ ಗಮನಕ್ಕೂ ಕೂಡ ನಾನು ತಂದಿದ್ದೇನೆ. ಇದರಲ್ಲಿ 1978ರಲ್ಲಿ ಕರ್ನಾಟಕ ರಾಜ್ಯದಲ್ಲಿ ಒಂದು ಐತಿಹಾಸಿಕ ನಿರ್ಣಯವನ್ನು ಶ್ರೀಮಾನ್ ದೇವರಾಜ್ ಅರಸ್ ಅವರು ತೆಗೆದುಕೊಂಡು ರಿಸರ್ವೇಷನ್ ಇನ್ ಪ್ರಮೋಷನ್ ನಿರ್ಣಯ ಮಾಡಿದರು. ಹಿಂದುಳಿದಂತಹವರಿಗೆ, ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೂ ಕೂಡ ಬಡ್ತಿ ಕೊಡಬೇಕೆಂದು ಪ್ರಾರಂಭ ಮಾಡಿದರು. ಪ್ರಾರಂಭ ಮಾಡಿದ ಮೇಲೆ ಮುಂದೆ ಸರ್ಕಾರ 78ರಲ್ಲಿ ಏನು ಆರ್ಡರ್ ಹೊರಡಿಸಿತ್ತು, ಅದೇ ರೀತಿಯಾಗಿ ಮುಂದೆ ಆ ರಿಸರ್ವೇಷನ್ ಇನ್ ಪ್ರಮೋಷನ್ ಮತ್ತು ಸಿಂಗಲ್ ಪೋಸ್ಟ್‌ನಲ್ಲಿ ಕೂಡ ಇವರಿಗೆ ರಿಕ್ರೂಟ್‌ಮೆಂಟ್ ಮಾಡಬೇಕು ಎನ್ನತಕ್ಕ ನೀತಿ ಇತ್ತು. ಆದರೆ ಮಧ್ಯಂತರದಲ್ಲಿ ಅಂದರೆ ಸುಮಾರು 95ರಲ್ಲಿ ಒಂದು ಹೊಸ ಆಜ್ಞೆಯನ್ನು ನಮ್ಮ ಕರ್ನಾಟಕ ಸರ್ಕಾರದವರು ಹೊರಡಿಸಿದರು. 16.11.95ರಲ್ಲಿ ಒಂದು ಆದೇಶವನ್ನು ಹೊರಡಿಸಿದರು. ಈ ಆದೇಶವನ್ನು ಏಕೆ ತಂದರು? ನಾವು ಅನೇಕ ಸಾರಿ ಪ್ರಸ್ತಾಪ ಮಾಡಿದಾಗ ಚಕ್ರಧರ ಎನ್ನತಕ್ಕ ಒಬ್ಬ ವ್ಯಕ್ತಿ ಅವನು ಏನು ಒಂದು ಹುದ್ದೆ ನೀವು ರಿಸರ್ವೇಷನ್ ಕೊಟ್ಟರೆ ಅದು ನೂರಕ್ಕೆ ನೂರು ಮೀಸಲಾತಿ ಆಗುತ್ತದೆ. ಅದನ್ನು ಅನ್ವಯಿಸಬಾರದು ಎಂದು ಹೇಳಿದ್ದಾರೆ ಎನ್ನತಕ್ಕ ಮಾತಿನ ಆಧಾರದ ಮೇಲೆ ಸರ್ಕಾರದವರು ಈ ಆಜ್ಞೆಯನ್ನು ಹೊರಡಿಸಿದರು. ಅದನ್ನು ಹೊರಡಿಸತಕ್ಕ ಅವಶ್ಯಕತೆ ಇರಲಿಲ್ಲ. ಏಕೆಂದರೆ ಅದು ಸಂಪೂರ್ಣವಾದಂತಹ ಜಡ್ಜ್‌ಮೆಂಟ್ ನೋಡದೇ ಕಣ್ಣು ಮುಚ್ಚಿ ಈ ಒಂದು ದಲಿತ ವಿರೋಧಿ ಸರ್ಕಾರಿ ಆರ್ಡರನ್ನು ಹೊರಡಿಸಿದರು. ಅದಕ್ಕಾಗಿ ಇವತ್ತು 1995ರಿಂದ ಇಲ್ಲಿಯವರೆಗೆ ಅನೇಕ ಸರ್ಕಾರೀ ನೌಕರರು ತೊಂದರೆಯನ್ನು ಅನುಭವಿಸುತ್ತಿದ್ದಾರೆ ಮತ್ತು ರಿಕ್ರೂಟ್‌ಮೆಂಟಿನಲ್ಲಿ ಕೂಡ ಇವತ್ತು ಅನ್ಯಾಯ ಆಗುತ್ತಿದೆ. ಇವರಲ್ಲಿ ನಿಮಗೆ ಹೇಳಬೇಕಾದರೆ ಚಕ್ರಧರ ಎನ್ನತಕ್ಕ ಬಿಹಾರದ ಒಬ್ಬ ಅಭ್ಯರ್ಥಿ ಇದ್ದ, ಅವನದ್ದು ಏನು ವಿಚಾರ? ಪಟ್ನಾ ಹೈಕೋರ್ಟಿನಲ್ಲಿ ಕೇಸ್ ಹಾಕಿದ್ದ. ಅದರ ಆಧಾರದ ಮೇಲೆ ಪುನಃ ಅದಕ್ಕೆ ವಿರುದ್ಧವಾಗಿ ಸುಪ್ರೀಂ ಕೋರ್ಟಿನಲ್ಲಿ ಏನು ಪುನಃ ಕೇಸನ್ನು ಹಾಕಿದ್ದರು, ಆ ಒಂದು ಕೇಸ್‌ನಲ್ಲಿ ಏನಾಗಿದೆ ಎನ್ನತಕ್ಕ ಬಗ್ಗೆ ಸವಿಸ್ತಾರವಾಗಿ ಕೆ.ಎ.ಟಿ.ನಲ್ಲಿ ಒಂದು ತೀರ್ಪನ್ನು ನೀಡಿದ್ದಾರೆ. ನಮ್ಮ ಕೆ.ಎ.ಟಿಯವರು ಏನು ತೀರ್ಪು ನೀಡಿದ್ದಾರೆ

ಎಂದರೆ ಚಕ್ರಧರ ತೀರ್ಪಿಗೂ ಮತ್ತು 1978ರ ರೋಸ್ಟರ್ ಅನ್ವಯ ನೀಡಿದ ಬಡ್ತಿಗೂ ಯಾವುದೇ ಸಂಬಂಧ ಇಲ್ಲ. ಒಂದು ಹುದ್ದೆ ಇದ್ದಾಗಲೂ ರೋಸ್ಟರ್ ಅನ್ವಯಿಸಿ ಬಡ್ತಿ ನೀಡಿದಾಗ ಚಕ್ರಧರ ತೀರ್ಪಿನಲ್ಲಿ ಹೇಳಿರುವಂತೆ ಶೇಕಡಾ 100ರಷ್ಟು ಮೀಸಲಾತಿ ನೀಡಿದಂತೆ ಆಗುವುದಿಲ್ಲ. ಹಾಗೂ 1978ರ ಕರ್ನಾಟಕ ರೋಸ್ಟರ್ ಪ್ರಶ್ನಾತೀತ ಎಂದು 1989ರಲ್ಲಿ ತೀರ್ಪು ನೀಡಿತ್ತು. ಈ ತೀರ್ಪನ್ನು ಅಧಿಕಾರಿಗಳ ಗಮನಕ್ಕೆ ಕಾನೂನು ಇಲಾಖೆ ಸಿಬ್ಬಂದಿ ಇಲಾಖೆಯ ಗಮನಕ್ಕೆ ತಂದಾಗಲೂ ಇದನ್ನು ಪರಿಗಣಿಸಲಿಲ್ಲ. ಇವೆಲ್ಲ ಕೂಡ ಪುನಃ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಎಲ್ಲಾ ತೀರ್ಪಿಗೆ ಒಂದೇ ಉತ್ತರ ಇವತ್ತು ಆನರ್‌ಬಲ್ ಜಸ್ಟೀಸ್ ಕೆ.ರಾಮಸ್ವಾಮಿಯವರು, ಜಸ್ಟೀಸ್ ಫೈಜುದ್ದೀನ್ ಆಮೇಲೆ ಜಸ್ಟೀಸ್ ಜಿ.ಬಿ.ಪಟ್ನಾಯಕ್, ಈ ಮೂರು ಜಡ್ಜಸ್ ಒಂದು ಹೊಸ ತೀರ್ಪನ್ನು 18.09.96ರಲ್ಲಿ ಕೊಟ್ಟಿದ್ದಾರೆ. ಯೂನಿಯನ್ ಆಫ್ ಇಂಡಿಯಾ ಅಂಡ್ ಅದರ್ಸ್ ವರ್ಸಸ್ ಮಹದೇವ್ ಸನ್ ಆಫ್ ಗಜಾನನ್ ಚೌಗಲ್ ಮತ್ತು ಇತರರು. ಈ ಒಂದು ಕೇಸ್‌ನಲ್ಲಿ ಇಲ್ಲಿಯವರೆಗೆ ಸುಪ್ರೀಂ ಕೋರ್ಟಿನಲ್ಲಿ ಎಷ್ಟು ಡಿಸಿಷನ್ಸ್, ಈ ರಿಸರ್ವೇಷನ್ಸ್ ಬಗ್ಗೆ ಆಗಿದೆ, ಡಾ: ಚಕ್ರಧರ್ ಪಾಸ್ವಾನ್ ಹಿಡಿದುಕೊಂಡು ಜನರಲ್ ಮ್ಯಾನೇಜರ್, ಸದರನ್ ರೈಲ್ವೆ ವರ್ಸಸ್ ರಂಗಾಚಾರಿ, ಮೂರನೇ ಕೇಸ್ ಸ್ಟೇಟ್ ಆಫ್ ಕೇರಳ ವರ್ಸಸ್ ಥಾಮಸ್. ನಾಲ್ಕನೆಯದು ಸ್ಟೇಟ್ ಆಫ್ ಪಂಜಾಬ್ ವರ್ಸಸ್ ಹಿರಾಲಾಲ್ ಐದನೆಯದು ಎ.ಬಿ.ಎಸ್.ಎಸ್.ಸಿಂಗ್ ವರ್ಸಸ್ ಯೂನಿಯನ್ ಆಫ್ ಇಂಡಿಯಾ. ಆರನೆಯದು ಕಂಟ್ರೋಲರ್ ಅಂಡ್ ಆಡಿಟರ್ ಜನರಲ್ ವರ್ಸಸ್ ಎಸ್.ಕೆ.ಜಗನ್ನಾಥ್. ಏಳನೆಯದು ಇಂದ್ರ ಸಹಾನಿ ವರ್ಸಸ್ ಯೂನಿಯನ್ ಆಫ್ ಇಂಡಿಯಾ. ಎಸ್.ಆರ್.ಬೊಮ್ಮಾಯಿ ವರ್ಸಸ್ ಯೂನಿಯನ್ ಆಫ್ ಇಂಡಿಯಾ. ಎಲ್.ಐ.ಸಿ.ಆಫ್ ಇಂಡಿಯಾ ವರ್ಸಸ್ ಕನ್ಸೂಮರ್ ಎಜ್ಯುಕೇಶನ್, ಶ್ರೀಮತಿ ಎಚ್.ಬಿ.ಉಪಾ ವರ್ಸಸ್ ವಿ.ಎಸ್.ರಾಮಚಂದ್ರ. ಆಮೇಲೆ 11ನೇಯದು ಕಮೀಷನರ್ ಆಫ್ ಕಮರ್ಷಿಯಲ್ ಟ್ಯಾಕ್ಸಸ್ ವರ್ಸಸ್ ಬಿ.ಸೇತು ಮಾಧವರಾವ್. ಹೀಗೆ ಇನ್ನೂ 5-6 ಕೇಸಸ್ ಇದೆ. ಇವೆಲ್ಲ ಸೇರಿ 17 ಕೇಸಸ್. ಅಧ್ಯಕ್ಷರೆ, ಇದು ಡಿ.ಪಿ.ಎ.ಆರ್.ಗೆ ಸಂಬಂಧಪಟ್ಟಂತಹ ವಿಷಯ. ಮಾನ್ಯ ಮುಖ್ಯಮಂತ್ರಿಗಳು ಇಷ್ಯೂ ಮಾಡಬೇಕು. ಅದಕ್ಕೆ ಸುಮಾರು 17 ಕೇಸಸ್ ಅನ್ನು ಸಂಪೂರ್ಣವಾಗಿ ಅಭ್ಯಾಸ ಮಾಡಿ ಕೊನೆಗೆ ಈ ತೀರ್ಪನ್ನು ಕೊಟ್ಟಿದ್ದಾರೆ. ಯಾರು ಅಂದರೆ ರಾಮಸ್ವಾಮಿಯವರು, ಆಮೇಲೆ ಮಿ: ಫೈಜುದ್ದೀನ್ ಮತ್ತು ಜೆ.ಬಿ.ಪಟ್ನಾಯಕ್. ಇದರಲ್ಲಿ ಸಹ ಅವರು ಸ್ಪಷ್ಟಪಡಿಸಿದ್ದಾರೆ. ಒಂದೇ ಹುದ್ದೆಗೆ ರಿಸರ್ವೇಷನ್ ಕೊಟ್ಟರೆ ನ್ಯಾಚುರಲಿ ಅದನ್ನು ಪಾಯಿಂಟ್ ಫಿಕ್ಸ್ ಮಾಡುತ್ತಾರೆ. ಈಗೇನು ಮಾಡುತ್ತಿದ್ದಾರೆ ಅಂದರೆ ಪ್ರೈವೇಟ್ ಕಾಲೇಜಸ್‌ನಲ್ಲಿ ಪ್ರೈವೇಟ್ ಇನ್‌ಸ್ಟಿಟ್ಯೂಷನ್ಸ್‌ನಲ್ಲಿ, ಕಾರ್ಪೊರೇಷನ್ಸ್‌ನಲ್ಲಿ, ಬೋರ್ಡ್‌ನಲ್ಲಿ ಒಂದೊಂದು ಹುದ್ದೆಗಳನ್ನೆ ಅನೌನ್ಸ್ ಮಾಡುವುದು. ಈಗ ಉದಾಹರಣೆಗಾಗಿ ಪ್ರೊಫೆಸರ್ ಆಫ್ ಕೆಮಿಸ್ಟ್ರಿ, ಪ್ರೊಫೆಸರ್ ಆಫ್, ಫಿಸಿಕ್ಸ್, ಪ್ರೊ:ಆಫ್ ಮ್ಯಾಥಮೆಟಿಕ್ಸ್, ಹೀಗೆ ಇರುತ್ತವೆ. ಮೂರು ಕ್ಲಬ್ ಮಾಡುವುದಿಲ್ಲ ಅಥವಾ ರೋಸ್ಟರ್

ಫಿಕ್ಸ್ ಮಾಡಿ, ಫಸ್ಟ್ ಪೋಸ್ಟ್ ಶೆಡ್ಯೂಲ್ಡ್ ಕಾಸ್ಟ್‌ಗೆ ಹೋದರೆ ಸೆಕೆಂಡ್ ಪೋಸ್ಟ್ ಜನರಲ್, ಥರ್ಡ್ ಪೋಸ್ಟ್, ನಾಲ್ಕನೆಯ ಹುದ್ದೆ ಎಸ್.ಟಿ. ಹೀಗೆ ಬರುತ್ತದಲ್ಲಾ, ಹಾಗೆ ಅವರು ರೋಸ್ಟರ್ ಫಿಕ್ಸ್ ಮಾಡುವುದಿಲ್ಲ. ಒಂದೇ ಅನೌನ್ಸ್ ಮಾಡುವುದು. ಪ್ರೊ: ಆಫ್ ಕೆಮಿಸ್ಟ್ರಿ. ಪ್ರೊ: ಆಫ್ ಕೆಮಿಸ್ಟ್ರಿ ಅನೌನ್ಸ್ ಮಾಡಿದರು ಅಂದರೆ ಒಂದು ಪೋಸ್ಟ್ ಇದೆ, ಇದು 100 ಪರ್ಸೆಂಟ್ ರಿಸರ್ವೇಷನ್ ಆಗುತ್ತದೆ. ಆದ್ದರಿಂದ ಇದಕ್ಕೆ ರಿಸರ್ವೇಷನ್ ರೂಲ್ ಅಪ್ಲಿಕಬಲ್ ಇಲ್ಲ. ಇದು ಯಾರು ಕರ್ನಾಟಕದವರೇ ಮಾಡಿದ್ದು. ಇವರಿಗೆ ಏಕೆ ಹೀಗೆ? ನಾನು ಯಾವತ್ತೂ ಹೇಳುತ್ತೇನೆ ಈ ಡಿ.ಪಿ.ಎ.ಆರ್.ನಲ್ಲಿ ಏನು ಆಂಟಿ ಶೆಡ್ಯೂಲ್ಡ್ ಕ್ಯಾಸ್ಟ್ ಜನ ಇದ್ದಾರೋ, ಏನು ಇದನ್ನು ಓದುವುದಿಲ್ಲವೋ, ಏನು ಪರ್ಪಸ್‌ಲಿ ಮಾಡುತ್ತಾರೋ ಗೊತ್ತಿಲ್ಲ. ಇದು 1996ರಲ್ಲಿ ಸುಪ್ರೀಂ ಕೋರ್ಟಿನ ಡಿಸಿಷನ್ ಬಂದರೂ ಕೂಡ ಇದರ ಆಧಾರದ ಮೇಲೆ ಹೊಸ ಜಿ.ಓ. ತನ್ನಿ ಎಂದರೆ ತರಲಿಲ್ಲ. ಹಿಂದೆ ಚಕ್ರಧರ ಆಗಲಿ ಅಥವಾ ಇನ್ನೊಂದು ಕೇಸ್ ಇದೆ. ಇನ್ನೊಂದು ಕೇಸ್ ನಮ್ಮ ರೋಸ್ಟರ್ ಪ್ರಕಾರ ನೀಡತಕ್ಕಂಥಾದ್ದು. ಅಂದರೆ, ಚಕ್ರಧರ ಅಲ್ಲದೆ ಭಾಗ್ಯೇಶ್ವರಿ ಪ್ರಸಾದ್ ಕೇಸ್‌ನಲ್ಲೂ ಸಂಪೂರ್ಣವಾಗಿ ವಿಶ್ಲೇಷಿಸಿ ಯಾವ ರೀತಿಯಾಗಿ, ಎಷ್ಟು ಪಾಯಿಂಟ್ ಮಾಡಬೇಕೆಂಬ ಬಗ್ಗೆ ಹೇಳಿದ್ದಾರೆ. ಇವ್ರೊತ್ತು ನಮ್ಮಲ್ಲಿ 33 ಪಾಯಿಂಟ್ಸ್ ಇದೆ, ಅವರು 40 ಪಾಯಿಂಟ್ಸ್ ಮಾಡಿದ್ದಾರೆ. ಅಂದರೆ, ಫಸ್ಟ್ ಪಾಯಿಂಟ್ ಯಾರಿಗೆ ಹೋಗಬೇಕು? ಈಗ ಒಂದು ಕೆಮೆಸ್ಟ್ರಿ ಪೋಸ್ಟ್ ಬಂದರೆ ಸೆಕೆಂಡ್ ಪೋಸ್ಟ್ ಯಾರಿಗೆ ಹೋಗಬೇಕು? ಫಿಸಿಕ್ಸ್ ಇರಬಹುದು, ಮ್ಯಾಥಮೆಟಿಕ್ಸ್ ಇರಬಹುದು. ಹೀಗೆ ಅನೇಕ ಈಕ್ವಲೆಂಟ್ ಪೋಸ್ಟ್‌ಗೆ ಒಂದು ರೋಸ್ಟರ್ ಮಾಡಿ ಒಂದು ಪೋಸ್ಟ್ ಬಂದರೂ ಕೂಡ ಕೊಡಬಹುದೆನ್ನುವುದಿದೆ. ಆ ರೀತಿ ಇದ್ದರೂ ಸಹ ಇವ್ರೊತ್ತಿನ ದಿವಸ ಇವರು ಅದನ್ನು ಬದಿಗೊತ್ತಿ ತಮ್ಮಿಚ್ಛೆ ಬಂದಂತೆ ಅದೇ ರೀತಿ ರಿಕ್ರೂಟ್‌ಮೆಂಟ್ ಮಾಡುತ್ತಿದ್ದಾರೆ, ಪ್ರಮೋಷನ್‌ನಲ್ಲೂ ಕೂಡ ಅದೇ ರೀತಿ ಮಾಡುತ್ತಿದ್ದಾರೆ. ಇವರ ಆರ್ಡರ್ ನೆಪದಲ್ಲಿ ಅನೇಕ ಏಡೆಡ್ ಇನ್‌ಸ್ಟಿಟ್ಯೂಷನ್ಸ್, ಕಾರ್ಪೊರೇಷನ್ಸ್, ಬೋರ್ಡ್‌ಗಳವರೂ ಕೂಡ ಸಿಂಗಲ್ ಪೋಸ್ಟ್‌ಗೆ ಇದು ಅಪ್ಲಿಕೆಬಲ್ ಇಲ್ಲವೆಂದು ತಿಳಿದುಕೊಂಡು ಅಲ್ಲದೆ ಎಲ್ಲಾ ಕಾಲೇಜುಗಳಲ್ಲಿ, ಯೂನಿವರ್ಸಿಟಿಗಳಲ್ಲೂ ತಳ್ಳಿಹಾಕುತ್ತಿದ್ದಾರೆ ಮತ್ತು ಸಿಂಗಲ್ ಪೋಸ್ಟನ್ನು ಅನೌನ್ಸ್ ಮಾಡಿಕೊಂಡು ಹೋಗುತ್ತಿದ್ದಾರೆ. ಪ್ರತಿ ತಿಂಗಳು ಒಂದು ಪೋಸ್ಟನ್ನು ಅನೌನ್ಸ್ ಮಾಡಿ ರಿಕ್ರೂಟ್ ಮಾಡುವುದು, ಮತ್ತೆ ಇನ್ನೊಂದು ಪೋಸ್ಟ್‌ನ್ನು ಅದೇ ರೀತಿ ಅನೌನ್ಸ್ ಮಾಡಿ ರಿಕ್ರೂಟ್ ಮಾಡುವುದು, ಈ ರೀತಿಯಾಗಿ ಇವ್ರೊತ್ತು ಅನ್ಯಾಯ ಮಾಡುತ್ತಿದ್ದಾರೆ. ನಿಮಗೆ 25ನೇ ಜುಲೈ, 1996ರಲ್ಲಿ ನ್ಯಾಶನಲ್ ಕಮೀಷನ್ ಫಾರ್ ಎಸ್.ಸಿ./ಎಸ್.ಟಿ ಅವರಿಂದ ಪತ್ರ ಬಂದಿದೆಯಲ್ಲದೆ 23ನೇ ಜುಲೈ, 96ರಲ್ಲೂ, ಕೂಡ ಸದರಿ ಕಮೀಷನ್ ಅಧ್ಯಕ್ಷರಾದ ಹನುಮಂತಪ್ಪನವರು ಒಂದು ಪತ್ರ ಬರೆದರು. ಇಷ್ಟೆಲ್ಲಾ ಪತ್ರಗಳನ್ನು ಬರೆದರೂ ಕೂಡ 18.9.96ರ ಜಡ್ಜ್‌ಮೆಂಟ್ ಕಾಪಿ ಕೂಡ ನಿಮ್ಮಲ್ಲಿದೆ. ಇವ್ರೊತ್ತು ಸಿಂಗಲ್ ವೇಕೆಂಟ್ ಕೇಡರ್‌ಗೆ ರೋಸ್ಟರ್ ಫಾರ್ ರಿಸರ್ವೇಷನ್ ಅಪ್ಲಿಕೇಬಲ್ ಆಗುತ್ತದೆಂದು

ಜಡ್ಜ್‌ಮೆಂಟ್‌ನಲ್ಲಿ ಹೇಳಿದರೂ ಕೂಡ ನೀವು ಇಂಪ್ಲಿಮೆಂಟ್ ಮಾಡುತ್ತಿಲ್ಲ. ಏಕೆ ಇಂಪ್ಲಿಮೆಂಟ್ ಮಾಡುತ್ತಿಲ್ಲ? ನಿಮಗೆ ಏಕೆ ಅನಾಸಕ್ತಿ ಇದೆ? ಯಾವಾಗಲೂ ಸೋಷಿಯಲ್ ಜಸ್ಟೀಸ್ ಎನ್ನುವ ನೀವು ಇವರ ಬಗ್ಗೆ ಹೆಚ್ಚು ಕಡಿಮೆ ಕಾನೂನಿನಲ್ಲಿ ವ್ಯವಸ್ಥೆ ಇಲ್ಲದಿದ್ದರೂ ಕೂಡ ವ್ಯವಸ್ಥೆ ಮಾಡಿ ಕೊಡಬೇಕು, ಇವರ ಬಗ್ಗೆ ಅನುಕಂಪವಿರಬೇಕು. ಈ ಕುರಿತು ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್, ಕೇಂದ್ರ ಸರ್ಕಾರದ ಸುತ್ತೋಲೆಗಳಿದ್ದರೂ ಸಹ ಇವೊತ್ತು ನೀವು ಡಿಲೇ ಮಾಡುತ್ತಿದ್ದೀರಿ ಎಂದರೆ ಸಹಜವಾಗಿ ನಿಮಗೆ ಇದರ ಬಗ್ಗೆ ಆಸಕ್ತಿಯಿಲ್ಲವೆಂಬ ಮಾತನ್ನು ನಾವು ಹೇಳಬೇಕಾಗುತ್ತದೆ. ಅವರ ಜಡ್ಜ್‌ಮೆಂಟ್‌ನಲ್ಲೇ ಹೇಳಿದ್ದಾರೆ. "SC/ST reservation. Isolated post, single post cadre, rule of rotation, roster consisted of single post, no other equivalent post which could be clubbed for application of roster by rotation, fourth point, ST held, when a fourth vacancy arises, it shall be filled as per reservation roster." ಅಂದರೆ, ಈ ಮಾತು ಜಡ್ಜ್‌ಮೆಂಟ್‌ನಲ್ಲಿ ಬಂದಿದೆ, ಮತ್ತು ಸದರಿ ಜಡ್ಜ್‌ಮೆಂಟ್‌ನಲ್ಲಿ 17 ಜಡ್ಜ್‌ಮೆಂಟ್‌ಗಳನ್ನೂ ಕೂಡ ಕೋಟ್ ಮಾಡಿಕೊಂಡು ಅವರು ಈಗಾಗಲೇ ಒಂದು ಆರ್ಡರ್ ಕೊಟ್ಟಿದ್ದಾರೆ. ಆರ್ಡರ್ ಕೊಟ್ಟ ನಂತರವೂ ತಾವು ಇವೊತ್ತು ಇಂಪ್ಲಿಮೆಂಟ್ ಮಾಡುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ ನನಗೆ ತಿಳಿಯುವುದಿಲ್ಲ. ಕೊನೇ ಪಕ್ಷ ಈಗಲಾದರೂ ನಿಮ್ಮ ನಜರಿಗೆ ಕೆಲವು ಪೋಸ್ಟ್‌ಗಳನ್ನು ತರುತ್ತಿದ್ದೇನೆ. ಜಡ್ಜ್‌ಮೆಂಟ್ ಬಗ್ಗೆ ನಾನು ಈಗಾಗಲೇ ಹೇಳಿದೆ. ನಿಮ್ಮ ಕೆ.ರಾಮಸ್ವಾಮಿ, ಫೈಜುದ್ದೀನ್, ಜಿ.ಬಿ.ಪಟ್ನಾಯಕ್ ಇವರ ಯೂನಿಯನ್ ಆಫ್ ಇಂಡಿಯಾ ವರ್ಸಸ್ ಮಾಧವ್ ಅಂಡ್ ಗಜಾನನರವರ ಕೇಸ್‌ನಲ್ಲಿ ಅವರು ಈ ಮಾತನ್ನು ಹೇಳಿದ್ದಾರೆ.

(MR. DEPUTY SPEAKER (SRI CHANDRASHEKAR M.MAMANI) IN THE CHAIR)

"In this case it is seen that the post of Secretary is carrying the scale of pay of Rs.2.200/- to Rs.4,000/-. The Government have decided to apply the 40%, roster maintained for the post of Secretary. The vacancy available at the time of point No.4 of the roster was reserved for the scheduled tribe. When the Department had sought for the clarification from the Dapartment of Personnel & Training, the Government of India had stated thus: 'There is no change in the position.

'However, it may be stated that unless this Department changes the earlier instructions, the old order will remain in force. Thus, the Supreme Court judgment cannot be made applicable to the cases automatically. Thus the Government have adhered to the rule of rotation to a single post and the 40 point roster to the single post was applied and vacancies reserved for the scheduled castes and scheduled tribes as and when had arisen was sought to be filled up when the candidates were available. Thus we hold that the roster point No.4 in the vacancy of the Secratary reserved for scheduled tribe was valid and constitutional. When the officer available...." ಅಂದರೆ, ಅಲ್ಲಿ ಒಂದೇ ವೇಕೆನ್ಸಿ ಇದೆಯೆಂದು ನೀವು ರಿಜೆಕ್ಟ್ ಮಾಡುವುದಕ್ಕಾಗುವುದಿಲ್ಲ ಅಥವಾ ಶೇಕಡಾ 100 ರಷ್ಟು ರಿಸರ್ವೇಶನ್ ಆಗುತ್ತದೆಂಬುದನ್ನೂ ಹೇಳುವುದಕ್ಕಾಗುವುದಿಲ್ಲ. ಆ ಒಂದು ವೇಕೆನ್ಸಿ ಇದ್ದರೂ ಸಹ ಅದು ಯಾವ ಎಸ್.ಟಿ.ಕ್ಯಾಂಡಿಟೇಟ್‌ಗೆ ಹೋಗಬೇಕೋ ಅವರಿಗೇ ಕೊಡಬೇಕೆಂಬುದು ಜಡ್ಜ್‌ಮೆಂಟ್‌ನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಮುಂದುವರಿಯುತ್ತಾ ಏನು ಹೇಳುತ್ತಿದ್ದಾರೆಂದರೆ, "The Tribunal, therefore, was not right in directing that the rule of rotation to the single post could not be aplied." ಏಕೆಂದರೆ, ಇಲ್ಲಿ ಕೆಲವು ಜನ ಹೇಳಿದ್ದಾರಲ್ಲಾ, ಸಿಂಗಲ್ ಪೋಸ್ಟ್‌ಗೆ ಬರುವುದಿಲ್ಲವೆಂದು ಲೋಯರ್ ಕೋರ್ಟ್, ಟ್ರಿಬ್ಯೂನಲ್ ಹೇಳಿದ ನಂತರ ಇವೊತ್ತು ಲ್ಯಾಂಡ್ ಮಾರ್ಕ್ ಜಡ್ಜ್‌ಮೆಂಟ್ ಬಂದಿದೆ ಮತ್ತು ಇದನ್ನು ಇವೊತ್ತು ಎಲ್ಲಾ ರಾಜ್ಯಗಳೂ ಕೂಡ ಒಂದು ರೋಸ್ಟರ್ ಪದ್ಧತಿ ಪ್ರಕಾರ ಫಾಲೋ-ಅಪ್ ಮಾಡುತ್ತಿವೆ. ಆದರೆ, ಇಲ್ಲಿ ಮಾತ್ರ ಜಿ.ಓ. ಅನ್ನು ವಾಪಸ್ಸು ತೆಗೆದುಕೊಂಡು ನಾವು ಹೊಸ ಜಿ.ಓ. ಇಶ್ಯೂ ಮಾಡುತ್ತೇವೆಂದು ಹೇಳಿ ಒಂದು ವರ್ಷವಾಯಿತು. ನಾನು ಪದೇ ಪದೇ ಕೇಳುತ್ತಿದ್ದರೂ ಇಲ್ಲಿಯವರೆಗೂ ಮಾಡುತ್ತಿಲ್ಲ. ಬ್ಯಾಕ್‌ಲಾಗ್ ಫಿಲ್‌ಅಪ್ ಮಾಡುವ ಬಗ್ಗೆ ಮಾತ್ರ ಒಂದು ಆರ್ಡರ್ ಮಾಡಿದರು. ಆದರೆ, ಇದರ ಬಗ್ಗೆ ಇದುವರೆವಿಗೂ ಮಾಡುತ್ತಿಲ್ಲವೆಂದರೆ ಇದಕ್ಕೆ ಯಾರು ತೊಂದರೆಪಡಿಸುತ್ತಿದ್ದಾರೋ, ಅಡ್ಡಿಪಡಿಸುತ್ತಿದ್ದಾರೋ ಅಥವಾ ಏನು ಅಡಚಣೆಯಿದೆಯೋ ಅಥವಾ ಸರ್ಕಾರಕ್ಕೆ ಮನಸಿಲ್ಲವೋ ಅಥವಾ ಇದು ಹೀಗೆ ನಡೆಯಲಿ ಯಾರೋ ಒಬ್ಬೊಬ್ಬರು ಕೇಳುತ್ತಾರೆ, ನಾವು ಹೀಗೇ ಕಾಲ ಕಳೆದರೆ ಸಾಕು ಎನ್ನುವ ಮನೋಭಾವವಿಟ್ಟುಕೊಂಡಿದ್ದಾರೋ ಏನೋ ಎನ್ನುವ ಬಗ್ಗೆ ನನಗೆ ಸ್ವಲ್ಪ ಬೇಸರವಾಗಿದೆ. ಮುಂದೆ ಏನು ಹೇಳಿದ್ದಾರೆಂದರೆ, "It is brought to our notice that the original promotion pending the

proceedings and therefore when vacancy arises as per rule of the rotation as per the roster, the same will be filled up in accordance with law. The Appeal is accordingly allowed but in the circumstances, without cost." ಅಂದರೆ, ಸರ್ಕಾರ ಸ್ವತಃ ಇವ್ಹೊತ್ತು ಅಪೀಲ್‌ಗೆ ಹೋದಂಥಾದ್ದು, ಅವರ ಅಪೀಲ್ ಅನ್ನು ಅಪ್‌ಹೆಲ್ಡ್ ಮಾಡಿ ಅದರ ಆಧಾರದ ಮೇಲೆ ನೀವು 95ರ ಆರ್ಡರ್ ಸರಿಯಿಲ್ಲವೆಂದು ವಾಪಸ್ಸು ತೆಗೆದುಕೊಂಡು ಪ್ರೆಷ್ ಆರ್ಡರ್ ಕೊಡಿ. ಇವ್ಹೊತ್ತು ಲಕ್ಷಾಂತರ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ:ವರ್ಗದ ಬಡ ಜನರೇನಿದ್ದಾರೆ, ನಮ್ಮಲ್ಲೂ ಬ್ಯಾಕ್‌ವರ್ಡ್ ಕ್ಲಾಸ್‌ಗೂ ರಿಸರ್ವೇಶನ್ ಇದೆ, ಇತರೆ ಓ.ಬಿ.ಸಿ.ಯವರಿಗೂ ಇದು ಅಪ್ಲಿಕಬಲ್ ಆಗುತ್ತದೆ, ಅದಕ್ಕೋಸ್ಕರ ದಯವಿಟ್ಟು ಇದನ್ನು ಮಾಡಿಸಿಕೊಡಬೇಕೆಂದು ನಾನು ಪದೇ ಪದೇ ಕೇಳುತ್ತಿದ್ದೇನೆ. ಆದರೆ, ಇವ್ಹೊತ್ತು ನಮ್ಮ ಮಾತಿಗೆ ಬೆಲೆ ಕೊಡದೆ ಇದರಲ್ಲಿ ಲಾ ಡಿಪಾರ್ಟ್‌ಮೆಂಟ್ ಡಿಲೇ ಮಾಡುತ್ತಿದೆಯೇ ಅಥವಾ ಡಿ.ಪಿ.ಎ.ಆರ್. ಡಿಲೇ ಮಾಡುತ್ತಿದೆಯೇ ಅಥವಾ ಎರಡೂ ಇಲಾಖೆಯವರೂ ಸೇರಿ ಇದನ್ನು ಹೀಗೆ ತಳ್ಳಬೇಕೆಂಬ ಪ್ರಯತ್ನ ನಡೆದಿದೆಯೇನೋ ನನಗೆ ಗೊತ್ತಾಗುತ್ತಿಲ್ಲ. ಆ ಕುರಿತು ನಾನು ಹೆಚ್ಚಿಗೆ ಪ್ರಸ್ತಾಪಿಸುವುದಿಲ್ಲ, ಈಗಾಗಲೇ ಇದರ ಬಗ್ಗೆ ಕಾನೂನು ಹಾಗೂ ಸಂಸದೀಯ ಸಚಿವರಾದ ನಾಣಯ್ಯನವರು ವಿಚಾರ ಮಾಡಿರಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ, ತಕ್ಷಣ ಈ ಬಗ್ಗೆ ಒಂದು ಹೊಸ ಆರ್ಡ್ಲ್ ಇಶ್ಯೂ ಮಾಡಿ ಪರಿಶಿಷ್ಟ ಜಾತಿ/ವರ್ಗದ ಜನರಿಗೆ ಅನುಕೂಲವಾಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತಾ, ಮುಖ್ಯಮಂತ್ರಿಗಳು ಕೂಡ ಇದರಲ್ಲಿ ಆಸಕ್ತಿವಹಿಸಿ ಮಾಡಬೇಕು. ಇಲ್ಲದಿದ್ದರೆ, ನಾನು ಕೊನೆಗೆ ಧರಣಿ ಕುಳಿತುಕೊಳ್ಳಬೇಕಾಗುತ್ತದೆ. ಏಕೆಂದರೆ, ಬೇರೆಯವರ ಸಮಯವನ್ನು ನಾನು ಹಾಳು ಮಾಡುವುದಿಲ್ಲ. ಬೇರೆಯವರ ಸಮಯ ಹಾಳು ಮಾಡಿದರೆ, ನೋಡಿ ಪರಿಶಿಷ್ಟ ಜಾತಿಯ ಕಾರಣಕ್ಕೋಸ್ಕರ ಇವರೊಬ್ಬರೇ ಪದೇ ಪದೇ ಮಾತನಾಡುತ್ತಿದ್ದಾರೆಂಬ ಮಾತು ಬರುವುದು ಬೇಡ. ನಾನು ಇದನ್ನು ಮೂರನೇ ಸಲ ಪ್ರಸ್ತಾಪಿಸುತ್ತಿದ್ದೇನೆ. ಒಂದೆರಡು ಬಾರಿ ಎಂದರೆ ಪರವಾಗಿಲ್ಲ, ಕಳೆದ ಒಂದೂವರೆ ವರ್ಷದಲ್ಲಿ ಸತತವಾಗಿ ನಾನು ಮೂರು ಸಲ ಪ್ರಸ್ತಾಪಿಸಿದರೂ ಅದಕ್ಕೆ ಸರ್ಕಾರ ಸ್ಪಂದಿಸಲಿಲ್ಲವೆಂದರೆ ಕೊನೆಗೆ ನಾನು ಆ ಅಸ್ತ್ರವನ್ನು ಉಪಯೋಗಿಸಬೇಕಾಗಿದೆ, ನಿಮ್ಮ ಕಾರ್ಯಕ್ರಮಗಳನ್ನು ನೀವು ನಡೆಸಿಕೊಳ್ಳಿ, ನಾನು ನಿಮಗೆ ಅಡ್ಡಿಪಡಿಸುವುದಿಲ್ಲ. ದಯವಿಟ್ಟು ಇದರ ಬಗ್ಗೆ ದೃಢವಾದ ನಿರ್ಣಯ ತೆಗೆದುಕೊಂಡು ತಕ್ಷಣ ಹೊಸ ಆರ್ಡರ್ ಮಾಡಿ ಅದನ್ನುಜಾರಿಗೆ ಕೊಟ್ಟು ಬಡವರಿಗೆ ಅನುಕೂಲ ಮಾಡಿಕೊಡಬೇಕು. ಇದರಿಂದ ಮತ್ತೆ ನಾಳೆ ಕೋರ್ಟಿಗೆ ಹೋಗಿ ಸ್ಟ್ರಕ್‌ಡೌನ್ ಆಗಬಾರದೆಂಬ ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ: ಯುವಕರಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಅವರು ಪ್ರಸ್ತಾವ ಮಾಡಿದ್ದಾರೆ. 39ಜನ ಭಾರತೀಯ ಜನತಾ ಪಾರ್ಟಿಯವರ ಇದರ ಅಭಿಪ್ರಾಯ ಏನು ಖಿರ್ಗೆಯವರು ಹೇಳಿದ್ದಕ್ಕೆ ಸಂಪೂರ್ಣ ಸಹಮತ ಇದೆ. ಇಮ್ಮಿಡಿಯೇಟ್ ಆಗಿ ಅವರಿಗೆ ನ್ಯಾಯ ಸಿಗಬೇಕೆಂದು ನಾನೂ ಕೂಡ ಒತ್ತಾಯ ಮಾಡುತ್ತೇನೆ.

ಉಪಾಧ್ಯಕ್ಷರು: ಅವರು ಮಾತನಾಡುವುದಕ್ಕೆ ಪ್ರಾರಂಭ ಮಾಡಿದರೆ ಬೇಗ ಮುಗಿಸುವುದಿಲ್ಲ. 5 ನಿಮಿಷದಲ್ಲಿ ಮುಗಿಸಬೇಕು. ಪ್ರಾರಂಭ ಮಾಡಿದ ಮೇಲೆ ಬೇಗ ಮುಗಿಸದಿದ್ದರೆ, ನಾವು ಪದೇ ಪದೇ ಹೇಳುವುದಿಲ್ಲ.

ಶ್ರೀ ಹೆಚ್.ಡಿ.ಬಸವರಾಜು (ವೀರಾಜಪೇಟೆ): ಉಪಾಧ್ಯಕ್ಷರೆ, ತಾವು ಎಷ್ಟು ನಿಮಿಷ ಅನುಮತಿಯನ್ನು ಕೊಡುತ್ತೀರಿ ನಾನು ಅಷ್ಟೇ ವೇಳೆಯಲ್ಲಿ ಮುಗಿಸುತ್ತೇನೆ. ತಾವು 10 ನಿಮಿಷವನ್ನು ಕೊಟ್ಟರೆ ನಾನು 10 ನಿಮಿಷದಲ್ಲಿಯೇ ಮುಗಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: 10 ನಿಮಿಷ ಮಾತನಾಡುವುದು ಮುಖ್ಯವಲ್ಲ, ಆ ವಿಷಯದ ಮಹತ್ವ ಮತ್ತು ಆ ಹಿನ್ನಲೆಯಲ್ಲಿ ಸರ್ಕಾರ ಇದು ಆಗಬೇಕು ಅನ್ನುವ ಒಂದು ಒತ್ತಾಯ ತರುವಂತದ್ದು.

ಉಪಾಧ್ಯಕ್ಷರು: ಪ್ರಮುಖ ವಿಷಯವನ್ನು ಮಾತ್ರ ತಾವು ಪ್ರಸ್ತಾಪ ಮಾಡಬೇಕು.

+ ಶ್ರೀ ಹೆಚ್.ಡಿ.ಬಸವರಾಜು: ಸನ್ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ಮಲ್ಲಿಕಾರ್ಜುನ ಖಿರ್ಗೆಯವರು ತಂದಿರುವಂಥ, ಅಲ್ಪಕಾಲಾವಧಿ ಚರ್ಚೆಯಲ್ಲಿ ಸರ್ಕಾರ ಏಕಹುದ್ದೆಯನ್ನು ಭರ್ತಿ ಮಾಡುವಾಗ ಮೀಸಲಾತಿಯನ್ನು ಅನುಸರಿಸದೆ ಇರುವ ಬಗ್ಗೆ ಆಗಿರುವ ಗೊಂದಲದ ಬಗ್ಗೆ ಈಗಾಗಲೇ ಅವರು ಸವಿಸ್ತಾರವಾಗಿ ಮಾತನಾಡಿದ್ದಾರೆ. ಅದರ ಬಗ್ಗೆ ನಾನೂ ಕೂಡ ಸಹಮತ ವ್ಯಕ್ತಪಡಿಸುತ್ತಾ ಕೆಲವು ಅಂಶಗಳನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಈ ಸರ್ಕಾರ ಸಾಮಾನ್ಯವಾಗಿ ಪರಿಶಿಷ್ಟ ಜಾತಿಯ ವಿಚಾರದಲ್ಲಿ ಬಹಳಷ್ಟು ಮುಕ್ತಕಂಠದಿಂದ ಹೇಳುತ್ತ ಅವರನ್ನು ಮುಂದಕ್ಕೆ ತರಬೇಕು. ಆರ್ಥಿಕವಾಗಿಯಾಗಲಿ ಶೈಕ್ಷಣಿಕವಾಗಿಯಾಗಲಿ ಯಾವುದೇ ಒಂದು ಯೋಜನೆ ಇದ್ದರೂ ಅದನ್ನು ನಾವು ಸಂಪೂರ್ಣವಾಗಿ ಕಾರ್ಯಗತ ಮಾಡಿ 50 ವರ್ಷಗಳು ಕಳೆದಿರುವ ಈ ಸಂದರ್ಭದಲ್ಲಿ ಇನ್ನುಮುಂದಾದರೂ ಅವರಲ್ಲಿ ವಿಳಂಬವಾಗುವುದು ಬೇಡ ಆ ಜನ ಮುಂದೆ ಬರಬೇಕೆಂದು ಹೇಳಿಕೊಂಡು ಬರುತ್ತಿದ್ದಾರೆ. ಆದರೆ ನಿಜವಾಗಿ ನಾವು ಕಾರ್ಯರೂಪ ಆಗಿರುವುದನ್ನು ನೋಡಿದರೆ ನಮಗೆ ಸಂದೇಹ ಬರುವಂತದ್ದು ಆಗುತ್ತಿದೆ. ನಾನು ಒಂದು ವಿಚಾರದಲ್ಲಿ ಅಂಕಿ ಅಂಶವನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರಕ್ಕೆ ನೀಡಲಿಕ್ಕೆ ಇಚ್ಛೆಪಡುತ್ತೇನೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಇದುವರೆಗೂ ನಮ್ಮ ಕರ್ನಾಟಕ ರಾಜ್ಯದಲ್ಲಿ

ನೋಂದಾವಣಿ ಮಾಡಿಸಿಕೊಂಡಿರುವ ನಿರುದ್ಯೋಗಿಗಳ ಸಂಖ್ಯೆ, 39,814 ಅದರ ಜೊತೆಗೆ ಸರ್ಕಾರದಲ್ಲಿ ಈಗ 39,814 ಮಂದಿಯನ್ನು ಯಾವಾಗ ಅವರು ಭರ್ತಿ ಮಾಡುತ್ತಾರೆ. ಅದರ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತನೆ ಮಾಡಬೇಕು. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಸರ್ಕಾರದಲ್ಲಿ ಈಗಾಗಲೇ 25,980 ಹುದ್ದೆಗಳು ಖಾಲಿ ಇವೆ. 25,980 ಹುದ್ದೆಗಳು ಖಾಲಿ ಇವೆ ಅಂದರೆ ಇದನ್ನು ಈ ನಿರುದ್ಯೋಗಿಗಳು ನೋಂದಾವಣಿ ಮಾಡಿಕೊಂಡಿರುವ ಕಡೆ ಗಮನಿಸಿ ಈಗಾಗಲೇ ಖಾಲಿ ಇರುವುದನ್ನು ಗಮನಿಸಿ ಸರ್ಕಾರ ಏನಾದರೂ ಕ್ರಮ ಕೈಗೊಂಡಿದ್ದರೆ ನಿಜವಾಗಿಯೂ ಸರ್ಕಾರವನ್ನು ಪ್ರಶಂಸೆ ಮಾಡಬಹುದಾಗಿತ್ತು ಈಗಾಗಲೇ ಸರ್ಕಾರ ಈ ಒಂದು ಏಕಹುದ್ದೆಯನ್ನು ಭರ್ತಿ ಮಾಡುವುದರಲ್ಲಿ ವಿಳಂಬ ಅನುಸರಿಸುತ್ತಿರುವ ರೀತಿಯಲ್ಲಿ ಇನ್ನು ಇಲ್ಲಿ ಒಂದು ವಿಚಾರವನ್ನು ನಾನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಈ ಒಂದು ಸರ್ಕಾರಿ ಗೌರ್ನಮೆಂಟ್ ಆರ್ಡರ್ ನಂ: ಡಿ.ಪಿ.ಎ.ಆರ್. 11 ಎಸ್.ಪಿ.ಸಿ.-94, 22ನೇ ಫೆಬ್ರುವರಿ 1994. ಈ ಒಂದು ಆದೇಶದಲ್ಲಿ ನಾನು ಹೇಳುವುದೇನೆಂದರೆ ಯಾವುದೇ ಒಂದು ಹುದ್ದೆ ಇರುವಂಥದ್ದನ್ನು ಪ್ರೊಫೆಸರ್ ಆಗಲಿ, ರೀಡರ್ಸ್ ಆಗಲಿ ಅದನ್ನು ನಾನು ಇಲ್ಲಿ ಸಂಪೂರ್ಣವಾಗಿ ಓದಲಿಕ್ಕೆ ಓದಿ ಸಮಯವನ್ನು ಹಾಳು ಮಾಡುವುದಕ್ಕೆ ಇಚ್ಛಿಪಡುವುದಿಲ್ಲ. ಆದರೆ ಅದರ ಸಾರಾಂಶವನ್ನು ಇಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಇದರಲ್ಲಿ ನಾನು ಹೇಳಿದ್ದೇನೆಂದರೆ ಒಂದು ಹುದ್ದೆಯನ್ನು ನೀವು ನೇರವಾಗಿ ಆ ಒಂದು ಕೆಟಗರಿಯಲ್ಲಿ ಅಂದರೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಭರ್ತಿ ಮಾಡಬಹುದೆಂದು ಒಂದು ಆದೇಶವನ್ನು ಅವರು 1994ರಲ್ಲಿ ನೀಡಿದ್ದಾರೆ. ಆದರೆ ಇದನ್ನು ಕಾರ್ಯಗತ ಮಾಡಲಿಲ್ಲ ಎನ್ನುವಂತಹ ನೋವು ಇದನ್ನು ಏಕೆ ಕಾರ್ಯಗತ ಮಾಡಲಿಲ್ಲ ಎನ್ನುವ ವಿಷಯವನ್ನು ಇಲ್ಲಿ ಹೇಳಬೇಕಾಗಿದೆ. ಆದರೆ ಯಾವ ಕಾರಣದಿಂದ ಅವರು ಈ ಒಂದು ಆದೇಶವನ್ನು ಹೊರಡಿಸಿದರು, ಯಾವ ಕಾರಣದಿಂದ ಆದೇಶವನ್ನು ತಡೆಹಿಡಿದರು ಎಂಬ ಬಗ್ಗೆ ಈ ಸದನದಲ್ಲಿ ಮಾನ್ಯ ಮಂತ್ರಿಗಳು ಉತ್ತರಿಸಬೇಕೆಂದು ನಾನು ಇಚ್ಛಿಪಡುತ್ತಿದ್ದೇನೆ. ಆದರೆ ಈ ಒಂದು ಸಂದರ್ಭದಲ್ಲಿ ಇನ್ನೊಂದು ವಿಚಾರವನ್ನು ಮಾನ್ಯ ಖರ್ಗೆಯವರು ಹೇಳಿದರು. ಸರ್ಕಾರಿ ಆದೇಶ ಸಂಖ್ಯೆ ಸಿ.ಆಸು.ಇ.-ಇ20 ಸಹಿಮಾ 20, ಬೆಂಗಳೂರು ದಿನಾಂಕ: 16ನೇ ನವಂಬರ್ 1995ರಲ್ಲಿ ಒಂದು ಆದೇಶವನ್ನು ಹೊರಡಿಸಿದ್ದಾರೆ. ಆ ಆದೇಶದ ಪ್ರಕಾರ ನಾನು ಹೇಳುವುದೇನೆಂದರೆ ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದ ಭಾರತ ಸಂವಿಧಾನ ಅನುಚ್ಛೇದ 16ರ ಅಡಿಯಲ್ಲಿ ಹೊರಡಿಸಿದ ಮೀಸಲಾತಿ ಅನ್ವಯಿಸತಕ್ಕಂಥದ್ದರಲ್ಲಿ ಒಂದು ಆದೇಶವನ್ನು ಹೊರಡಿಸಿದ್ದಾರೆ. ಆದರೆ ಆ ಆದೇಶವನ್ನು ಹೊರಡಿಸಲಿಕ್ಕೆ ಯಾವೊಂದು ಸುಪ್ರೀಮ್ ಕೋರ್ಟ್ ಪ್ರಕಾರ ಬಂತು ಆ ಸುಪ್ರೀಮ್ ಕೋರ್ಟಿನಲ್ಲಿ ಇನ್ನೊಂದು ನಿರ್ಧಾರವಾಯಿತು. ಸುಮಾರು 17 ಕೇಸುಗಳನ್ನು ಈಗ ಮಾನ್ಯ ಖರ್ಗೆಯವರು ಉಲ್ಲೇಖ ಮಾಡಿದರು, ಅದನ್ನು ಮತ್ತೆ ಇಲ್ಲಿ ಉಲ್ಲೇಖ ಮಾಡಲಿಕ್ಕೆ ಇಚ್ಛಿಪಡುವುದಿಲ್ಲ. ಆದರೆ ಆ 17 ಕೇಸುಗಳನ್ನು ಉಲ್ಲೇಖ ಮಾಡಿ ಮಾನ್ಯ ಕೆ.ಆರ್.ರಾಮಸ್ವಾಮಿ ಮತ್ತು

ಜಿ.ಪಿ.ಪಟ್ನಾಯಕ್ ಜಿ.ಎಸ್.ಜಿಲ್ ಅಂಡ್ ಅದರ್ಸ್ ಸ್ಟೇಟ್ ಆಫ್ ಪಂಜಾಬ್ ಅಂಡ್ ಅದರ್ಸ್ ಎನ್ನುವಂಥ ಒಂದು ಕೇಸಿನಲ್ಲಿ ನಂ:ಸಿವಿಲ್ ಅಪೀಲ್ ನಂ: 3005 ಆಫ್ 1997. ಅವರು ಒಂದು ತೀರ್ಪನ್ನು ನೀಡಿದ್ದಾರೆ. ಆ ತೀರ್ಪು ಯಾವಾಗೆಂದರೆ 27-3-1997ರಲ್ಲಿ ಆ ತೀರ್ಮಾನವನ್ನು ನಾನು ಇಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತಿದ್ದೇನೆ. "Constitution of India, Article, 14, 16/1 & 16/4, reservtion for scheduled castes and tribes, reservation in promotion to a single post, reservation to a single post if roster applied, not unconstitutional." ಅಂತ ಉಲ್ಲೇಖ ಮಾಡಿ ತಿಳಿಸಿದ್ದಾರೆ. ಆದರೆ ನಾನು ಇಲ್ಲಿ ಕೇಳುತ್ತಿರುವುದೇನೆಂದರೆ ತಮಗೆ ಒಂದು ಆದೇಶ ಬಂದ ತಕ್ಷಣ 1995ರಲ್ಲಿ ಸರ್ಕಾರ ಅದನ್ನು ಅನುಸರಿಸಬೇಕೆಂದು ತಾವು ಏನು ಹೇಳಿದಿರಿ ಆದರೆ ಈ ಆದೇಶ ಬಂದು 27-3-1997ರಲ್ಲಿ ಆದರೂ ಇದನ್ನು ಅಪ್ಲೈ ಮಾಡಬೇಕು, ಇದನ್ನು ಇಂಪ್ಲಿಮೆಂಟ್ ಮಾಡುವ ಬಗ್ಗೆ ಈ ಸರಕಾರ ಏಕೆ ಜಾಗೃತಿ ವಹಿಸಲಿಲ್ಲ. ನಿಲ್ಲಿಸುವುದರಲ್ಲಿ ತೋರಿಸಿದಂಥ ಅಸಹಕಾರವನ್ನು ಮತ್ತೆ ಒಂದು ಸುಪ್ರೀಮ್‌ಕೋರ್ಟ್ ಇನ್ನೊಂದು ಆದೇಶ ಹೊರಡಿಸಿದ ನಂತರ ನವೀಕರಿಸಿ ನಡೆಸಬೇಕಾದಂಥದನ್ನು ರದ್ದು ಪಡಿಸಿದ್ದಾರೆ. ಈಗಾಗಲೇ ಯಾವ ಪ್ರಕರಣಗಳು ನಡೆಸುತ್ತಿದ್ದಾರೆ ಅದನ್ನು ನಿಲ್ಲಿಸಿ ಈ ಆದೇಶ ಹೊರಡಿಸಿದ ನಂತರ ರಿಕ್ರೂಟ್‌ಮೆಂಟ್ ಪ್ರಕಾರ ಮತ್ತೆ ಈ ಸರ್ಕಾರ ಏತಕ್ಕೆ ಮಾಡಲಿಲ್ಲ ಎಂದು ಈ ಸಂದರ್ಭದಲ್ಲಿ ನಾನು ಕೇಳಿಕೊಂಡು ಈಗಾಗಲೇ ಈ ಒಂದು ಸರ್ಕಾರದ ಮೇಲೆ ಪರಿಶಿಷ್ಟ ಪಂಗಡದವರಿಗೆ ಅಪನಂಬಿಕೆಯ ವ್ಯವಸ್ಥೆ 1994ರಿಂದ ಆಗಿದೆ. ಈಗಾಗಲೇ ನಾನು ಬೇಡಿಕೆ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಕೂಡ ಅಂಕ ಅಂಶಗಳ ಸಮೇತ ನಾನು ಹೇಳಿದ್ದೆ, ಈ ಒಂದು ಸಂದರ್ಭದಲ್ಲಿ ಕೂಡ ಸರ್ಕಾರ ಏನಾದರೂ ಪ್ರಾಮಾಣಿಕವಾಗಿ ಅವರ ಬಗ್ಗೆ ನಿಜವಾದ ಕಾಳಜಿ ವಹಿಸಿದ್ದೇವೆ, ಕಳಕಳಿ ಇಟ್ಟುಕೊಂಡಿದ್ದೇವೆ ಅಂದರೆ ಈಗಾಗಲೇ ನಿರುದ್ಯೋಗಿಗಳಾಗಿರತಕ್ಕಂಥವರ ಸಂಖ್ಯೆಯನ್ನು ಕಡಿಮೆ ಮಾಡಿಸುವುದು ಮತ್ತು ಹಾಲಿ ಸರ್ಕಾರದಲ್ಲಿರುವಂತ 25,980 ಹುದ್ದೆಗಳನ್ನು ಭರ್ತಿ ಮಾಡುವುದರ ಜೊತೆಗೆ ಸುಪ್ರೀಮ್ ಕೋರ್ಟ್ ಆದೇಶವನ್ನು ಶೀಘ್ರವಾಗಿ ಅನುಸರಿಸಬೇಕು. ಏಕೆಂದರೆ ಈಗಾಗಲೇ ಎಷ್ಟು ವಿಳಂಬವಾಗಿದೆ, ಮತ್ತೆ ಸರ್ಕಾರ ಇನ್ನೊಂದು ಸುತ್ತೋಲೆಯನ್ನು ಹೊರಡಿಸಬೇಕು. ಯಾವುದಾದರೊಂದು ಸಿಂಗಲ್ ಪೋಸ್ಟ್‌ಗೆ ನೇಮಕ ಮಾಡಿಕೊಂಡಿದ್ದರೆ ತತ್‌ಕ್ಷಣ ಅದನ್ನು ನಿಲ್ಲಿಸಬೇಕು. ಸರ್ಕಾರ ಇನ್ನೊಂದು ಸುತ್ತೋಲೆ ಹೊರಡಿಸುವವರೆಗೆ ಆ ಆದೇಶದ ಪ್ರಕಾರ ಮತ್ತೆ ಚಾಲನೆ ಕೊಡುತ್ತೇವೆನ್ನುವ ಹೇಳಿಕೆಯನ್ನು ಸರ್ಕಾರ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಂಡು ತಾವು ನೀಡಿದ 10 ನಿಮಿಷ ವೇಳೆಯೊಳಗೆ ನಾನು ನನ್ನ ಮಾತನ್ನು ಮುಗಿಸಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರು 7 ನಿಮಿಷದಲ್ಲಿ ಮುಗಿಸಿದ್ದಾರೆ. ಇನ್ನೊಂದು

5 ನಿಮಿಷ ಕೊಟ್ಟರೆ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಲೀಗಲ್ ಬಗ್ಗೆ ಏನೋ ಹೇಳುತ್ತಾರೆ. ಉಪಾಧ್ಯಕ್ಷರು ಸಮಯ ಕೊಡದಿದ್ದರೆ ಬೇಡಾ?

ಅಧ್ಯಕ್ಷರು: ಸಾಕಷ್ಟು ಬಿಲ್ಸ್‌ಗಳು ಇವೆ, ಇದು ಕೊನೆಯ ದಿನವಾಗಿ ಇರುತ್ತದೆ. ಮತ್ತೆ ಬಿಲ್ಸ್ ಬೇಡವಾದರೆ ಬಿಟ್ಟು ಬಿಡಿ. ಇಲ್ಲಾ ನಾನು ಅಧ್ಯಕ್ಷರನ್ನು ಕೇಳಿದ್ದೇನೆ. ಅವರು ಒಬ್ಬರೇ ಸಹಿಯನ್ನು ಮಾಡಿದ್ದಾರೆ. ಆ ಒಬ್ಬರಿಗೆ ಮಾತ್ರ ಅವಕಾಶವನ್ನು ಕೊಡಲು ಹೇಳಿದರು, ತಾವು ಹೇಳಿದ ಮೇಲೆ ಅವರಿಗೂ ಅವಕಾಶವನ್ನು ಕೊಟ್ಟಿದ್ದಾಗಿದೆ ತಾವು ಮತ್ತೆ ಆ ಮೇಲೆ ಮತ್ತೊಬ್ಬರು ಕೇಳುತ್ತಾರೆ. ತಾವು ಬೇಗ ಮಾತನಾಡಿ ಮುಗಿಸಿ.

+ ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ): ಮಾನ್ಯ ಅಧ್ಯಕ್ಷರು ಹೇಳಿದ್ದು, ಎರಡು ಜಡ್ಜ್‌ಮೆಂಟಗಳನ್ನು ಮಾನ್ಯ ಖರ್ಗೆಯವರು ಮತ್ತು ಬಸವರಾಜುರವರು ತಮ್ಮ ಮುಂದೆ ಹೇಳಿದ್ದಾರೆ. ಈ ಎರಡು ಜಡ್ಜಮೆಂಟ್‌ಗಳು ಇಬ್ಬರು ಮತ್ತು ಮೂರು ಜನ ಜಡ್ಜಗಳು ಕೊಟ್ಟಿರುವ ತೀರ್ಮಾನ. ಅದಕ್ಕಿಂತ ಮುಂಚೆ ಅಂದರೆ 5 ಜಡ್ಜ್‌ಗಳು ಅಂದರೆ ವಸಂತ-ಕುಮಾರ ಮತ್ತು ಸ್ಟೇಟ್‌ದವರು ಜಡ್ಜ್ ಚಿನ್ನಪ್ಪರೆಡ್ಡಿಯವರು ಒಂದು ತೀರ್ಮಾನವನ್ನು ಕೊಟ್ಟರು. ನಮ್ಮಲ್ಲಿ ಈಗ ಏನು ಕಾನೂನು ಇದೆ ಎಂದು ಹೇಳಿದರೆ ಮೆಜಾರಿಟಿ ಜಡ್ಜಮೆಂಟ್ shall prevail. ಅನ್ನುವುದು ಕಾನೂನು. 5 ಜನ ಜಡ್ಜಮೆಂಟ್‌ಗಳು ಕೊಟ್ಟಿರತಕ್ಕಂಥ ಜಡ್ಜಮೆಂಟ್ ಇವತ್ತು ಯಾರು ಕೂಡ ರಿವರ್ಸ್ ಮಾಡಿಲ್ಲ. ಅದನ್ನು ಯಾರೂ ಕೂಡ ತೆಗೆದು ಹಾಕಿಲ್ಲ. ಈಗ ಎರಡು ಜಡ್ಜ್‌ಮೆಂಟ್‌ಗಳು ಇವೆ. ಇದರಲ್ಲಿ 3 ಜನ ಜಡ್ಜ್‌ಮೆಂಟ್ ಕೊಟ್ಟಿರತಕ್ಕಂಥದ್ದು ನ್ಯಾಯಮೂರ್ತಿಗಳು ಮತ್ತು ಬಸವರಾಜುರವರು ಹೇಳಿದ್ದು ಇಬ್ಬರು ಜಡ್ಜ್‌ಗಳು ಕೊಟ್ಟಿರತಕ್ಕಂಥದ್ದು. ಈ ಒಂದು ಸಂದರ್ಭದಲ್ಲಿ ಕಾನೂನು ಮಂತ್ರಿಗಳು ತೀರ್ಮಾನ ತೆಗೆದುಕೊಳ್ಳಬೇಕಾದರೆ ನಾವು ಇಲ್ಲಿ ಶಾಸನಸಭಾದಲ್ಲಿ ತೀರ್ಮಾನ ತೆಗೆದುಕೊಳ್ಳಬೇಕಾದರೆ 5 ಜನ ಜಡ್ಜ್‌ಗಳು ಕೊಟ್ಟಿರತಕ್ಕಂಥ ಜಡ್ಜ್‌ಮೆಂಟ್‌ನ್ನು ನಾವು ವಿರುದ್ಧ ಮಾಡುವುದಕ್ಕೆ ಬರುವುದಿಲ್ಲ. ಇದರ ಬಗ್ಗೆ ತಾವು ಕಾನೂನು ತಜ್ಞರನ್ನು ವಿಚಾರ ಮಾಡಬೇಕಾಗುತ್ತದೆ. ಯಾವುದಾದರೊಂದು ನಿರ್ಣಯ ಮಾಡಬೇಕಾದರೆ ನಾವು ಬರೀ ಷೆಡ್ಯೂಲ್ ಕಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ ಬಗ್ಗೆ ಮಾತ್ರ ಅಲ್ಲ. ಮಂಡಲ್ ಕಮೀಷನ್ ಜಡ್ಜ್‌ಮೆಂಟ್‌ದಲ್ಲಿ ಹಾರಿಜಾಂಟಲ್ ರಿಜರ್ವೇಷನ್ ಆಗಬೇಕು ಮಹಿಳೆಯರಿಗೆ ಎಂದು ಹೇಳಿದ್ದಾರೆ. ತಾವು ಕೂಡ ಹೇಳಿದ್ದೀರಿ 33 ಪರ್ಸೆಂಟು ಅಂತ ಆದ್ದರಿಂದ ಇದನ್ನು ಸಮಗ್ರವಾಗಿ ಚಿಂತನೆ ಮಾಡಿ ಯಾರಿಗೆ ಕೊಡಬೇಕಾಗುತ್ತದೆ ಎಸ್.ಸಿ./ಎಸ್.ಟಿ ಕೊಡಬೇಕಾದರೂ ಕೂಡ ಅವರಿಗೂ ಕೊಡಬೇಕಾಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದನ್ನು ಮೊದಲು ಸೆಟ್ಲ್ ಮಾಡಿ. ಏಕೆಂದರೆ ಒಂದೊಂದು ಇಷ್ಯೂ ಬರಲಿ, ಮಹಿಳೆಯರಿಗೆ ಕೊಡುವುದು ಕೊಡಲಿ ಅದು ಬೇರೆ, ಬಸವರಾಜು ಹಾಗೂ ನಾನು ಹೇಳಿದ್ದೇವಲ್ಲಾ ಗೌರ್ನಮೆಂಟ್ ಆರ್ಡರ್ ಬಗ್ಗೆ ಸ್ವಲ್ಪ

ಸಿಮೀತವಾಗಿ ಇದ್ದರೆ ಸ್ವಲ್ಪ ಸರಿ ಇರುತ್ತದೆ. ಇಲ್ಲದಿದ್ದರೆ ಇದು ಡಿವಿಯೇಟ್ ಆಗುತ್ತಾ ಹೋಗುತ್ತದೆ. ಬೇಕಾದರೆ ಜನರಲ್ ರಿಜರ್ವೇಷನ್ ಬಗ್ಗೆ ಮತ್ತು ಮಂಡಲ್ ಕಮಿಷನ್ ಬಗ್ಗೆ ಬೇರೆ ಮಾತನಾಡೋಣ. ಅದರ ಓಬಿಸಿ but this is pertaining only to the Government Order which you have issued. ಸಿಂಗಲ್ ಹುದ್ದೆಗೆ ಆಗುವುದಿಲ್ಲವೆನ್ನುವುದನ್ನು ಅದನ್ನು ಸ್ವಲ್ಪ ಸರಿಪಡಿಸಿದರೆ ಸಾಕಷ್ಟು ಪ್ರಾಬ್ಲಮ್ ಸಾಲ್ವ್ ಆಗುತ್ತದೆ. ಇಲ್ಲದಿದ್ದರೆ ಗೊಂದಲ ಉಂಟಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಸೀಮಿತವಾಗಿ ಆ ಒಂದು ಪ್ರಮೋಷನ್ ಏನು ಕೊಡಬೇಕಾಗಿದೆ ತೀರ್ಮಾನದ ಆಧಾರದ ಮೇಲೆ ಇದು ಆಗುತ್ತಾ ಇಲ್ಲ ಇಂಪ್ಲಿಮೆಂಟ್ ಆಗುತ್ತ ಇಲ್ಲ. ಅದನ್ನು ಮಾಡಬೇಕು. ಇನ್ನಾವುದಾದರೂ ಅವರು ಬೇರೆ ಪಾಯಿಂಟ್ ಬೇಕಾದರೆ ಸೇರಿಸಿದ್ದರೆ ಅದಕ್ಕೆ ಉತ್ತರ ಕೊಡಿ. ಆದರೆ ಎಸ್.ಸಿ./ಎಸ್.ಟಿಗೆ ಸಂಬಂಧಪಟ್ಟಂತೆ ಆಜ್ಞೆ ಏನು ಇದೆ ಅದನ್ನು ಇಂಪ್ಲಿಮೆಂಟ್ ಮಾಡಬೇಕು ಎನ್ನುವ ಒತ್ತಾಯ ನಮ್ಮದು.

ಶ್ರೀಮತಿ ಪ್ರಮೀಳಾ ನೇಸರ್ಗಿ: ಸಿಂಗಲ್ ಪಾಯಿಂಟ್ ಬಗ್ಗೆ ನಾನು ಹೇಳಿದ್ದು. ಅದನ್ನು ಏಕೆ ಮಿಸ್ಟೇಕ್ ಮಾಡಿಕೊಳ್ಳುತ್ತಿದ್ದೀರಿ? ದಯವಿಟ್ಟು ನಾನು ವಿಷಯಾಂತರ ಮಾಡುವುದಿಲ್ಲ. 5 ಜನ ನ್ಯಾಯಮೂರ್ತಿಗಳು ಇದರ ಬಗ್ಗೆ ತೀರ್ಮಾನ ಕೊಟ್ಟಿದ್ದು. ಇವಾಗ ತಾವು ಏನು ಸಿಂಗಲ್ ಪಾಯಿಂಟ್ ಅಂತ ಹೇಳಿದಿರಲ್ಲಾ ಒಂದೇ ಒಂದು, ಪೋಸ್ಟ್ ಇರುವಂತ ಸಂದರ್ಭದಲ್ಲಿ ಕ್ಯಾರಿಓವರ್ ಮಾಡಬಹುದಾ ಇದರ ಬಗ್ಗೆ ಎರಡು ನ್ಯಾಯ ಮೂರ್ತಿಗಳು ತೀರ್ಪು ಕೊಟ್ಟಿದ್ದಾರೆ. ಅದರ ಬಗ್ಗೆ, 5 ಜನ ಏನು ಕೊಟ್ಟಿದ್ದಾರೆಂದು ಹೇಳಬೇಕಲ್ಲಾ, ಚಿನ್ನಪ್ಪರೆಡ್ಡಿ ವರದಿ ಬಗ್ಗೆ ಏನು ಹೇಳಿದ್ದಾರೆಂದು ಹೇಳಬೇಕಲ್ಲಾ. ಅವರೇನು ಹೇಳಿದ್ದಾರೆಂದರೆ... ಮಂಡಲ ಕಮಿಷನ್ ಬಗ್ಗೆ ಅಲ್ಲಾ ಸರ್ ತಾವು ಇದನ್ನು ಏಕೆ ಮಿಸ್ಟೇಕ್ ಮಾಡಿಕೊಳ್ಳುತ್ತಿದ್ದೀರಿ. ಐದು ಜನ ನ್ಯಾಯಮೂರ್ತಿಗಳು ಇದರ ಬಗ್ಗೆಯೇ ತೀರ್ಮಾನ ಕೊಟ್ಟಿರುವುದು. ತಾವೇನು ಸಿಂಗಲ್ ಪಾಯಿಂಟ್ ಎಂದು ಹೇಳಿದ್ದೀರಲ್ಲಾ, ಒಂದೇ ಒಂದು ಪೋಸ್ಟ್ ಇರತಕ್ಕ ಸಂದರ್ಭದಲ್ಲಿ, ಕ್ಯಾರಿಓವರ್ ಮಾಡಬಹುದೇ ರಿಸರ್ವೇಷನ್ ಮಾಡಬಹುದೇ ಇದರ ಬಗ್ಗೆ ಎರಡು ಜಡ್ಜ್‌ಮೆಂಟ್‌ಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಐದು ಜನ ನ್ಯಾಯಮೂರ್ತಿಗಳು, ನ್ಯಾಯಮೂರ್ತಿ ಚಿನ್ನಪ್ಪರೆಡ್ಡಿಯವರು ಏನು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ ಎಂಬ ಬಗ್ಗೆ ಹೇಳಬೇಕಲ್ಲಾ. ವಸಂತಕುಮಾರ್ ಮತ್ತು ಸ್ಟೇಟ್‌ನಲ್ಲಿ ಚಿನ್ನಪ್ಪರೆಡ್ಡಿಯವರು ಏನು ಹೇಳಿದ್ದಾರೆಂದರೆ Extent of reservation..

SRI M.MALLIKARJUNA KHARGE: I am very sorry ಚಿನ್ನಪ್ಪರೆಡ್ಡಿಯವರು ನಿವೃತ್ತಿಯಾದಮೇಲೆ, ಇತ್ತೀಚೆಗೆ ಕೆ.ರಾಮಸ್ವಾಮಿ, ಫೈಜುದ್ದೀನ್ ಮತ್ತು ಪಟ್ನಾಯಕ್‌ರವರು ಏನು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ ಅದರ ಬಗ್ಗೆ ನಾನು ಇಲ್ಲಿ

ಉಲ್ಲೇಖ ಮಾಡುತ್ತಿರುವುದು. ಇವರು ಹಿಂದಿನ 17 ಜಡ್ಜ್‌ಮೆಂಟ್ ಬಗ್ಗೆ ಸಹ ಉಲ್ಲೇಖ ಮಾಡಿದ್ದಾರೆ. ಅನಲೈಸ್ ಮಾಡಿದ್ದಾರೆ. ಆ 17 ಜಡ್ಜ್‌ಮೆಂಟ್‌ಗಳನ್ನು ಉಲ್ಲೇಖ ಮಾಡಿಕೊಂಡೇ ಇವರು ಅಂತಿಮ ಜಡ್ಜಮೆಂಟ್ ಕೊಟ್ಟಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇದರ ಬಗ್ಗೆ ಸುಪ್ರೀಮ್‌ಕೋರ್ಟ್‌ನ ತೀರ್ಮಾನವಿದೆ. ಡಿ.ಪಿ.ಎ.ಆರ್.ನಲ್ಲಿ ಇದರ ಬಗ್ಗೆ ಆಸಕ್ತಿ ವಹಿಸುತ್ತಿಲ್ಲ. ಪ್ರಮೋಷನ್ ಅವಕಾಶ ಆ ಜನರಿಗೆ ಸಿಗುತ್ತಿಲ್ಲ. ಅದು ಆಗಬೇಕೆಂದು ಇಲ್ಲಿರುವ ಎಲ್ಲರ ಒಮ್ಮತದ ತೀರ್ಮಾನ. ಸುಪ್ರೀಮ್ ಕೋರ್ಟ್ ತೀರ್ಮಾನವನ್ನು ವೈಲೇಷನ್ ಮಾಡಲು ತಾವ್ಯಾರು? ಅದಕ್ಕೆ ನಿರ್ದೇಶನ ಕೊಟ್ಟು ಅವರಿಗೆ ಬಡ್ತಿ ಸಿಗುವಲ್ಲಿ ವ್ಯವಸ್ಥೆ ಮಾಡಬೇಕು. ಒಂದು ದಿನ ವಿಳಂಬವಾದರೆ ಅವರಿಗೆ ಸಿಗಬೇಕಾದಂಥ ಸಾಮಾಜಿಕ ನ್ಯಾಯ ಸಿಗುವುದಿಲ್ಲ. ಇದನ್ನೇಕೆ ಜಾರಿಗೆ ತರಲು ಹಿಂದುಮುಂದು ನೋಡುತ್ತಿದ್ದೀರಿ ಎಂಬ ಬಗ್ಗೆ ಸ್ಪಷ್ಟಮಾಡಿ.

ಶ್ರೀ ಹೆಚ್.ಡಿ.ಬಸವರಾಜ್: ಮಾನ್ಯ ಉಪಸಭಾಪತಿಯವರೆ, ಇದರಲ್ಲಿ ಗೊಂದಲ ಬೇಡ. ಇದರಲ್ಲಿ 17 ಕೇಸ್‌ಗಳ ಬಗ್ಗೆ ಉಲ್ಲೇಖ ಮಾಡಿ ಸುಪ್ರೀಮ್ ಕೋರ್ಟ್‌ನ ನ್ಯಾಯಮೂರ್ತಿಗಳಾದ ಮಾನ್ಯ ಕೆ.ರಾಮಸ್ವಾಮಿಯವರು ಮತ್ತು ಜಿ.ಬಿ.ಪಟ್ನಾಯಕ್‌ರವರು GS GILL & OTHERS -VS- STATE OF PUNJAB ಎನ್ನತಕ್ಕ ಪ್ರಕರಣದಲ್ಲಿ ಕ್ಲಿಯರ್ ಆಗಿ ಹೇಳಿದ್ದಾರೆ. ಇದನ್ನು ತಾವು ಜಾರಿಗೆ ತರಲು ತಾವು ಆದೇಶವನ್ನು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

+ ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ಸರ್ಕಾರದ ಲಿಖಿತವಾಗಿರುವ ಹೇಳಿಕೆಯನ್ನು ಇಲ್ಲಿ ಮಂಡಿಸುತ್ತಿದ್ದೇನೆ.

(ಹೇಳಿಕೆಯ ಪ್ರತಿ ಲಗತ್ತಿಸಿದೆ)

ಸಂವಿಧಾನದ ಅನುಚ್ಛೇದ 16(4) ರನ್ವಯ ರಾಜ್ಯ ಸಿವಿಲ್ ಸೇವೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಂಬಂಧಿಸಿದಂತೆ ನೇಮಕಾತಿಯಲ್ಲಿ ಮೀಸಲಾತಿಯನ್ನು ಕಲ್ಪಿಸಲಾಗಿದೆ.

ಸರ್ವೋಚ್ಚ ನ್ಯಾಯಾಲಯ ಚಕ್ರಧರ್ ಪಾಸ್ವಾನ್-ವಿರುದ್ಧ-ಬಿಹಾರ್ ರಾಜ್ಯ, ಡಾ: ಸಂಜೀವ್ ಶರ್ಮ - ವಿರುದ್ಧ - ಹಿಮಾಚಲ ಪ್ರದೇಶ ಹಾಗು ಇತರೆ ತೀರ್ಪುಗಳಲ್ಲಿ ಮತ್ತು ರಾಜ್ಯ ಉಚ್ಚ ನ್ಯಾಯಾಲಯದ ಪೂರ್ಣ ಪೀಠ ಡಾ: ರಾಜಕುಮಾರ್ - ಮತ್ತಿತರರು - ವಿರುದ್ಧ - ಗುಲ್ಬರ್ಗಾ ವಿಶ್ವವಿದ್ಯಾಲಯ, ಈ ಎಲ್ಲಾ ಪ್ರಕರಣಗಳಲ್ಲಿ

ಒಂದು ವೃಂದದಲ್ಲಿ ಒಂದೇ ಹುದ್ದೆಯಿದ್ದಲ್ಲಿ ಅದಕ್ಕೆ ಮೀಸಲಾತಿ ಅನ್ವಯಿಸುವಂತಿಲ್ಲ ಮತ್ತು ಈ ರೀತಿ ಒಂದೇ ಹುದ್ದೆಗಳಿರುವ ವೃಂದಗಳನ್ನು ಒಟ್ಟುಗೂಡಿಸಿ ಮೀಸಲಾತಿ ಅನ್ವಯಿಸುವುದು ನ್ಯಾಯ ಸಮ್ಮತವಲ್ಲವೆಂದು ತೀರ್ಪುಗಳನ್ನು ನೀಡಿದವು. ಈ ತೀರ್ಪುಗಳ ಹಿನ್ನೆಲೆಯ ಬಗ್ಗೆ ಕಾನೂನು ಇಲಾಖೆ ಹಾಗೂ ಅಡ್ವೋಕೇಟ್ ಜನರಲ್ ಅವರ ಅಭಿಪ್ರಾಯ ಪಡೆದು, ಸರ್ಕಾರ ಪ್ರಕರಣವನ್ನು ಕೂಲಂಕುಷವಾಗಿ ಪರಿಶೀಲಿಸಿ, ಅಂತಿಮವಾಗಿ ಒಂದು ವೃಂದದಲ್ಲಿ ಒಂದೇ ಹುದ್ದೆ ಇರುವಂತಹ ಸಂದರ್ಭದಲ್ಲಿ, ನೇರ ನೇಮಕಾತಿಯಲ್ಲಿ ಮತ್ತು ಪದೋನ್ನತಿಯಲ್ಲಿ ಮೀಸಲಾತಿ ಪಾಲಿಸುವಂತಿಲ್ಲವೆಂದು ದಿನಾಂಕ: 16-11-1995ರ ಆದೇಶ ಹೊರಡಿಸಿತು. ಈಗ ಈ ಆದೇಶ ಜಾರಿಯಲ್ಲಿದೆ.

ಒಂದು ವೃಂದದಲ್ಲಿ ಒಂದೇ ಹುದ್ದೆ ಇದ್ದಾಗ ಮೀಸಲಾತಿ ಕುರಿತಂತೆ ಸರ್ವೋಚ್ಚ ನ್ಯಾಯಾಲಯ ಬಿಹಾರ್ ರಾಜ್ಯ ಮತ್ತಿತರರು-ವಿರುದ್ಧ-ಬಾಗೇಶ್ವರಿ ಪ್ರಸಾದ್ ಮತ್ತಿತರರು ಪ್ರಕರಣದಲ್ಲಿ ದಿನಾಂಕ: 6-10-1994. ರಂದು ನೀಡಿದ ತೀರ್ಪಿನಲ್ಲಿ, ಮೀಸಲಾತಿಯನ್ನು ಎತ್ತಿ ಹಿಡಿಯಿತು. ತದನಂತರ ಐವರು ನ್ಯಾಯಾಧೀಶರ ಸಂವಿಧಾನ ಪೀಠವು ಆರ್.ಕೆ.ಸಬರವಾಲ - ವಿರುದ್ಧ - ಪಂಜಾಬ್ ರಾಜ್ಯ ಪ್ರಕರಣದಲ್ಲಿ ಮೀಸಲಾತಿ ಒಂದು ವೃಂದದಲ್ಲಿನ ಹುದ್ದೆಗಳಿಗೆ ಅನ್ವಯಿಸಬೇಕೆಂದು ಮತ್ತು ಅದನ್ನು ರಿಕ್ತ ಸ್ಥಾನಗಳಿಗೆ ಅನ್ವಯಿಸುವುದು ಸೂಕ್ತವಲ್ಲವೆಂದು ತೀರ್ಮಾನಿಸಿತು.

ಪ್ರಸ್ತುತ, ಸರ್ವೋಚ್ಚ ನ್ಯಾಯಾಲಯದ ಮೂವರು ನ್ಯಾಯಾಧೀಶರ ಪೀಠವು, ಮಾಧವ ಮತ್ತಿತರರು - ವಿರುದ್ಧ - ಭಾರತ ಸರ್ಕಾರ ಪ್ರಕರಣದಲ್ಲಿ ದಿನಾಂಕ: 18-09-1996ರಂದು ನೀಡಿದ ತೀರ್ಪಿನಲ್ಲಿ ಒಂದು ವೃಂದಲ್ಲಿ ಒಂದೇ ಹುದ್ದೆ ಇದ್ದಲ್ಲಿಯೂ ಅದರಲ್ಲಿನ ರಿಕ್ತ ಸ್ಥಾನಕ್ಕೆ ರೋಸ್ಟರನ್ನು ಅನ್ವಯಿಸಿದ್ದಲ್ಲಿ ಅದು ಸಂವಿಧಾನ ಬಾಹಿರವಲ್ಲವೆಂದು ತೀರ್ಪು ನೀಡಿರುತ್ತದೆ.

ಸರ್ವೋಚ್ಚ ನ್ಯಾಯಾಲಯದ, ಮಾಧವ - ವಿರುದ್ಧ - ಭಾರತ ಸರ್ಕಾರ, ಹಾಗೂ ಆರ್.ಕೆ.ಸಬರವಾಲ್ - ವಿರುದ್ಧ - ಪಂಜಾಬ್ ರಾಜ್ಯ - ಈ ತೀರ್ಪುಗಳ ಹಿನ್ನೆಲೆಯಲ್ಲಿ, ದಿನಾಂಕ: 16-11-1995ರಲ್ಲಿ ಸರ್ಕಾರಿ ಆದೇಶವು ಸರ್ಕಾರದ ಪುನರ್ ಪರಿಶೀಲನೆಯಲ್ಲಿದೆ. ಮಾನ್ಯ ಉಪಾಧ್ಯಕ್ಷರೆ, ಅದನ್ನು ಯಾರೋ ತಡೆಹಿಡಿಯುತ್ತಾರೆ, ಯಾರೋ ಡಿ.ಪಿ.ಎ.ಆರ್. ಇಲಾಖೆಯಲ್ಲಿ ಇದನ್ನು ಮಾಡುತ್ತಾರೆಂದು ಮಾನ್ಯ ಖರ್ಗೆಯವರು ಹೇಳಿದರು. ಸಾಮಾಜಿಕ ನೀತಿಯೆನ್ನತಕ್ಕ ಮಾತು ಯಾವುದು ಇದೆ ಇದನ್ನು ಯಾವ ಸರ್ಕಾರವೇ ಅಧಿಕಾರದಲ್ಲಿರಲಿ ಅದನ್ನು ಮಾಡಲೇ ಬೇಕಾಗುತ್ತದೆ. ಇದು ಖರ್ಗೆಯವರ, ನಾಣಯ್ಯನವರ, ಜೆ.ಹೆಚ್.ಪಟೇಲರ ಮತ್ತೊಬ್ಬರ ಪ್ರಶ್ನೆಯಲ್ಲ. ಇದು ನೀತಿಯ ಪ್ರಶ್ನೆ ಮತ್ತು ನೀತಿಯ ಪ್ರಶ್ನೆಯಾಗಿಯೇ ನಡೆದುಕೊಂಡು ಬಂದಿರತಕ್ಕದ್ದು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಬ್ಯಾಕ್‌ಲಾಗ್ ಹುದ್ದೆಗಳ ಪರಿಸ್ಥಿತಿ ಬಂದಾಗ, ಅಲ್ಲಿ ಹುದ್ದೆಗಳು ಇಲ್ಲದಿದ್ದರೂ ಸಹ ಬ್ಯಾಕ್‌ಲಾಗ್ ಎನ್ನತಕ್ಕದನ್ನು

ನಾವು ಅಳವಡಿಸಿಕೊಂಡು ಇರತಕ್ಕ ಹುದ್ದೆಗಳಿಗಿಂತ ಹೆಚ್ಚು ಹುದ್ದೆಗಳನ್ನು ನಿರ್ಮಾಣ ಮಾಡಿ ಕೊಟ್ಟಿದ್ದೇವೆ. ಹಿಂದೆ ತಮ್ಮ ಕಾಲದಲ್ಲೂ ಇದನ್ನು ಮಾಡಿದ್ದೀರಿ, ನಮ್ಮ ಕಾಲದಲ್ಲೂ ಮಾಡಿಕೊಂಡು ಬಂದಿದ್ದೇವೆ. ಒಂದು ಕೇಡರ್‌ನಲ್ಲಿ ಹತ್ತು ಹುದ್ದೆಗಳಿದ್ದಾಗ ಅದರಲ್ಲಿ ಮೀಸಲಾತಿ ದೊರೆಯಬೇಕಾದ ಹುದ್ದೆ 3 ಇದ್ದರೆ ಬ್ಯಾಕ್‌ಲಾಗ್ ಹುದ್ದೆಗಳಲ್ಲಿ 7 ಹುದ್ದೆಗಳನ್ನು ಮಾಡಿರತಕ್ಕದ್ದು ಬಂತು. ಈ ವಿಚಾರ ಸುಪ್ರೀಮ್ ಕೋರ್ಟ್‌ಗೆ ಹೋದಾಗ, ಯಾವಾಗ ಒಂದು ವೃಂದದಲ್ಲಿ ಹತ್ತು ಹುದ್ದೆಗಳು ಮಾತ್ರವಿದ್ದಾಗ ಮೀಸಲಾತಿ ಅನ್ವಯ 15 ಪರ್‌ಸೆಂಟ್ ಮತ್ತು ಮೂರು ಪರ್‌ಸೆಂಟ್‌ಗಿಂತ ಹೆಚ್ಚು ಹುದ್ದೆಗಳು ಬಂತು, ಈ ಪ್ರಶ್ನೆ ಬಂದಾಗ ಏನು ಮಾಡಬೇಕು ಎನ್ನತಕ್ಕ ಪರಿಸ್ಥಿತಿ ಬಂತು ಮತ್ತು ಬಾಕಿ ಇರತಕ್ಕವರನ್ನು ರಿವರ್ಷಸ್ ಮಾಡಬೇಕು ಎನ್ನತಕ್ಕ ಪರಿಸ್ಥಿತಿ ಬಂದಾಗ ರಾಜ್ಯ ಸರ್ಕಾರ ಆ ಕೆಲಸವನ್ನು ಮಾಡಲಿಲ್ಲ, ಈ ವಿಚಾರದಲ್ಲಿ ಹೆಚ್ಚುವರಿ ಹುದ್ದೆಯನ್ನು ತುಂಬಿದ್ದಾರೆಂದು ಇತರ ವರ್ಗಕ್ಕೆ ಸೇರಿರತಕ್ಕವರು ಟ್ರಬ್ಯುನಲ್ ಮತ್ತು ಸುಪ್ರೀಮ್‌ಕೋರ್ಟ್‌ಗೆ ಅಪೀಲನ್ನು ತೆಗೆದುಕೊಂಡು ಹೋದಾಗ ಸುಪ್ರೀಮ್‌ಕೋರ್ಟ್‌ನವರು ಏನು ಹೇಳಿದರೆಂದರೆ, ಒಂದು ವೃಂದದಲ್ಲಿ ಇಷ್ಟೇ ಮೀಸಲಾತಿ ಇದ್ದರೂ ಸಹ ಅದಕ್ಕಿಂತ ಹೆಚ್ಚು ಬ್ಯಾಕ್‌ಲಾಗ್‌ನ್ನು ತುಂಬತಕ್ಕ ಕೆಲಸವನ್ನೆಲ್ಲಾದರೂ ಮಾಡಿದರೆ ಅದಕ್ಕೆ ಒಂದು ಗೈಡ್‌ಲೈನ್ಸ್‌ನ್ನು ಮಾಡಿ ಮತ್ತು ಅವರನ್ನು ರಿವರ್ಟ್ ಮಾಡಬೇಡಿ, ಹೊಸದಾದ ಮಾರ್ಗಸೂಚಿ ಮಾಡಿಯೆಂದು ಅವರು ಸಲಹೆಯನ್ನು ಕೊಟ್ಟರು. ಭಕ್ತರಾಮೇಗೌಡರ ಕೇಸ್‌ನಲ್ಲಿ ಆ ವಿಚಾರವನ್ನು ಸಲಹೆಯನ್ನು ಕೊಟ್ಟರು. ಇದರ ಬಗ್ಗೆ ಸಹ ಮಾನ್ಯ ಖರ್ಗೆಯವರು ಹಿಂದೆ ಪ್ರಸ್ತಾಪ ಮಾಡಿದ್ದರು. ಬ್ಯಾಕ್‌ಲಾಗ್ ಎನ್ನತಕ್ಕದ್ದನ್ನು ನಿರ್ಮಾಣ ಮಾಡಿಕೊಂಡು ಬಂದರು. ಬಹಳಷ್ಟು ಹುದ್ದೆಗಳು ಒಂದು ವೃಂದದಲ್ಲಿ ಇಲ್ಲದಿದ್ದರೂ ಸಹ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವ ದೃಷ್ಟಿಯಿಂದ ಶೇಖಡ 15ಕಿಂತಲೂ ಜಾಸ್ತಿಯಾಗಿ, ಶೇಖಡ 3ಕಿಂತಲೂ ಜಾಸ್ತಿಯಾಗಿ, ಆಗ ಏನು ಮಾಡಬೇಕು ಎನ್ನತಕ್ಕ ಪರಿಸ್ಥಿತಿ ಬಂದಾಗ ಸುಪ್ರೀಮ್‌ಕೋರ್ಟ್‌ನವರು ಕೆಲವು ಗೈಡ್‌ಲೈನ್ಸ್‌ನ್ನು ಕೊಟ್ಟರು, ಅದಕ್ಕೆ ಅನುಗುಣವಾಗಿ ನಾವು ಕಳೆದ ಸಚಿವಸಂಪುಟದ ಸಭೆಯಲ್ಲಿ ಗೈಡ್‌ಲೈನ್ಸ್‌ನ್ನು ಮಾಡಿ ಹೊಸದಾದ ಸೂಚನೆಯನ್ನೇ ಕೊಟ್ಟೆವು. ಆ ರೀತಿ ಸೂಚನೆ ಕೊಡುವುದರ ಮೂಲಕ ಹೆಚ್ಚುವರಿ ಹುದ್ದೆಗಳನ್ನು ಆ ವೃಂದದಲ್ಲಿ ತುಂಬಿದ್ದರೂ ಸಹ ಅವರನ್ನು ರಿವರ್ಷಸ್ ಮಾಡಕೂಡದೆಂದು ತೀರ್ಮಾನ ತೆಗೆದುಕೊಂಡೆವು. ಎರಡನೆಯದಾಗಿ ಆ ವೃಂದದಲ್ಲಿ ಹುದ್ದೆಗಳೇ ಇಲ್ಲದಿದ್ದಾಗ, ಒಂದು ಕೇಡರ್‌ನಲ್ಲಿ ಐವತ್ತು ಹುದ್ದೆಗಳಿದ್ದಾಗ ಅದರಲ್ಲಿ 7 ಮೀಸಲಾತಿ ಬಂದರೆ, ಮೀಸಲಾತಿ ವರ್ಗಕ್ಕೆ ನಾವು ಕೊಟ್ಟಿರುವ ಹುದ್ದೆಗಳು 11, ಹಾಗಿದ್ದರೆ ನಾಲ್ಕು ಹುದ್ದೆಗಳನ್ನೇನು ಮಾಡಬೇಕು? ಆಗ ನಾವು ಸೂಪರ್‌ನ್ಯೂಮರರಿ ಪೋಸ್ಟ್‌ನ್ನು ಕ್ರಿಯೇಟ್ ಮಾಡಿ ಆದೇಶವನ್ನು ಹೊರಡಿಸಿದೆವು. ನಾವು ಎಲ್ಲಿ ನೇಮಕಾತಿಯನ್ನು ಯಾವುದೋ ಒಂದು ಸಂದರ್ಭದಲ್ಲಿ ಕೊಟ್ಟಿದ್ದೆವೋ ಅದನ್ನು ರಕ್ಷಣೆ ಮಾಡಬೇಕೆಂದು ಸುತ್ತೋಲೆಯನ್ನು ಹೊರಡಿಸಿದ ಮೇಲೆ ಇವರು ಆ ರೀತಿ

ಮಾಡುತ್ತಾರೆ, ಈ ರೀತಿ ಮಾಡುತ್ತಾರೆ ಎಂದು ಹೇಳುವುದು ಸರಿಯಲ್ಲ. ಈ ವಿಚಾರವನ್ನು ಮಾನ್ಯ ಉಗ್ರಪ್ಪನವರು ಮೇಲ್ಮನೆಯಲ್ಲಿ ಸಹ ಎತ್ತಿದ್ದರು, ಆಗ ನಾವು ಮಾನ್ಯ ರಾಮಸ್ವಾಮಿ ಮತ್ತು ಇತರ ಇಬ್ಬರು ಅಂದರೆ ಮೂರು ಸದಸ್ಯರ ನ್ಯಾಯಪೀಠ ನೀಡಿರುವ ತೀರ್ಪಿನ ಬಗ್ಗೆ ಹೇಳಿದ್ದೇವೆ. ಆರ್.ಕೆ.ಸಬರವಾಲ್‌ರವರ ಐದು ಮಂದಿ ಸದಸ್ಯರ ಜಡ್ಜ್‌ಮೆಂಟ್ ನಲ್ಲಿ ಏನು ಹೇಳುತ್ತಾರೆಂದರೆ ಮೀಸಲಾತಿಯನ್ನು ಮಾಡುವಾಗ ಒಂದು ವೃಂದದಲ್ಲಿರುವ ಹುದ್ದೆಗೆ ಮಾತ್ರ ಹೊರತು ಖಾಲಿ ಇರುವ ಹುದ್ದೆಗೆ ಮಾಡುವುದಲ್ಲ ವೆಂದು ಹೇಳುತ್ತಾರೆ. There cannot reservation for vacancies. ಸಬರವಾಲ್‌ರವರ ಐದು ಮಂದಿ ಸದಸ್ಯರ ನ್ಯಾಯಪೀಠವು ಆ ರೀತಿ ತೀರ್ಮಾನ ಕೊಟ್ಟುಬಿಟ್ಟರು. ಆದರೆ ಈಗ ಮಾನ್ಯ ರಾಮಸ್ವಾಮಿಯವರು ತಮ್ಮ ಜಡ್ಜ್‌ಮೆಂಟ್‌ನಲ್ಲಿ ಒಂದೇ ಹುದ್ದೆ ಇದ್ದರೆ ರೊಟೇಷನ್‌ನ್ನು ಅಪ್ಲೈ ಮಾಡಿ ಎನ್ನತಕ್ಕ ಹೊಸ ಕಾನ್‌ಸೆಪ್ಟ್‌ನ್ನು ತಂದರು. 1996ರ ಮಹದೇವ್‌ರವರ ಪ್ರಕರಣದಲ್ಲಿ ಅವರು ಸಬರವಾಲ್ ಜಡ್ಜಮೆಂಟ್‌ನ ವಿರುದ್ಧವಾಗಿ ಹೇಳುವುದಿಲ್ಲ, ಒಂದೇ ಹುದ್ದೆ ಇದ್ದರೆ ಮೀಸಲಾತಿ ಇಲ್ಲವೆಂದು ಅವರು ಹೇಳುವುದಿಲ್ಲ, ಒಂದೇ ಹುದ್ದೆ ಇದ್ದರೆ ಅದನ್ನು ಮೀಸಲಾತಿ ಇರುವ ನಿಮ್ಮ ರೋಸ್ಟರ್ ಒಳಗೆ ತಂದು ಬಿಂದುವನ್ನು ನಿಗದಿ ಮಾಡಿದರೆ it does not become unconstitutional, ಎಂದು ಹೇಳಿದ್ದಾರೆ. ಇವೆಲ್ಲವನ್ನೂ ನೋಡಿಯೇ ನಾವು ಇದು ಸಚಿವಸಂಪುಟದ ಪರಿಗಣನೆಯಲ್ಲಿದೆಯೆಂದು ಹೇಳಿದ್ದೇವೆ. ನಾವು ಏನಾದರೂ ಒಂದು ತೀರ್ಮಾನವನ್ನು ತೆಗೆದುಕೊಂಡರೆ ಅದರ ವಿರುದ್ಧವಾಗಿ ಇನ್ನೊಬ್ಬರು ಕೋರ್ಟ್‌ಗೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಬಾರದು. ನೀವು ಎಷ್ಟು ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುತ್ತೀರಿ ಅಷ್ಟೇ ಸಾಮಾಜಿಕ ನ್ಯಾಯದ ಬಗ್ಗೆ ಕಳಕಳಿ ನಮಗಿದೆ ಅದರ ಬಗ್ಗೆ ನಮ್ಮ ಸರ್ಕಾರ ಕ್ರಮ ತೆಗೆದುಕೊಂಡಿದೆ. ಭಕ್ತರಾಮೇಗೌಡರ ಪ್ರಕರಣದಲ್ಲಿ ಸುಪ್ರೀಮ್‌ಕೋರ್ಟ್‌ನವರು ಕೊಟ್ಟಿರುವುದು ಕೇವಲ ಗೈಡ್‌ಲೈನ್ಸ್. But immediately we put into practice by issuing NOtification. Supernumerary posts we have created. WE have taken decision not to revert any officers. But strictly speaking, they are all additional posts in that particular cadre. Therefore, this is under the consideration of the Cabinet. Certainly, we will look into that. Why should we not give justice, Sir? ಶ್ರೀಮತಿ ಪ್ರಮೀಳಾರವರು ಎತ್ತಿರತಕ್ಕಂಥ ವಿಚಾರಕ್ಕೆ ಬಂದರೆ, ಈಗ ಎರಡು ಜಡ್ಜ್‌ಮೆಂಟ್‌ಗಳಿವೆ. ಒಂದು 5 ಜನ ಸದಸ್ಯರ ಬೆಂಚ್ ಜಡ್ಜ್‌ಮೆಂಟ್, ಇನ್ನೊಂದು 3ಜನ ಸದಸ್ಯರ ಬೆಂಚ್ ಜಡ್ಜ್‌ಮೆಂಟ್. I also agree. If there are two judgments, the majority judgment will prevail over the minority judgment; even if there are two judgments of the same

Court, in regard to Supreme Court judgments. In respect of the High Court, if there is a Division Bench judgment and if there is a judgment of the Full Court 3-Judge Bench, that will prevail. ಆದ್ದರಿಂದ, ಇದೆಲ್ಲವನ್ನೂ ನೋಡಿ, ಕಾನೂನಿನ ಅಂಶವನ್ನು ಅಳವಡಿಸಿಕೊಂಡು, ನಾನು ಇದನ್ನು ಮೇಲ್ಮನೆಯಲ್ಲೂ ಹೇಳಿದ್ದೇನೆ, ಇಲ್ಲೂ ಹೇಳುತ್ತಿದ್ದೇನೆ, the cabinet is seized of the matter; the department is seized of the matter. We will certainly look into the matter. We will everything within the framework. ಕೊಡಲಿಕ್ಕೆ ಇರತಕ್ಕಂಥ ವಿಚಾರ ಇದ್ದರೆ ನಾವು ಏಕೆ ಕೊಡಬಾರದು? ಆದರೆ ಒಂದು ತೀರ್ಮಾನ ತೆಗೆದುಕೊಳ್ಳುತ್ತಾ ಇರತಕ್ಕಂಥ ಸಂದರ್ಭದಲ್ಲಿ let us also apply the rule of law. ಆದ್ದರಿಂದ, ಈ ಹಿನ್ನಲೆಯಲ್ಲಿ ನಾನು ಹೇಳುತ್ತಿದ್ದೇನೆ, ಇದು ಪರಿಶೀಲನೆಯಲ್ಲಿ ಇದೆ. It is being worked out. ತಾವು ಇದನ್ನು ಎತ್ತಿದ್ದೀರಿ. ಅದಕ್ಕೋಸ್ಕರ ಕೊಟ್ಟಿದ್ದೇವೆ. The cabinet will certainly take up this matter and these judgments will be looked into and decision wil be taken after consulting the Advocate General. ಎಲ್ಲರಿಗೂ ಸಾಮಾಜಿಕ ನ್ಯಾಯವನ್ನು ಕೊಡಬೇಕು ಎಂದರೆ ಯಾರು ಅಡ್ಡಬರುತ್ತಾರೆ? ಆದ್ದರಿಂದ ಮಾನ್ಯ ಖರ್ಗೆಯವರು, ಇಲ್ಲ ನೀವು ಇದನ್ನು ಯಾವುದೋ ಒಂದು ಕಾರಣಕ್ಕೋಸ್ಕರ ಇದನ್ನು ದೂರ ಮಾಡಿಕೊಂಡು ಹೋಗುತ್ತಿದ್ದೀರಿ, ಇದಕ್ಕೆ ಕಾರಣವೇ ಇಲ್ಲ ಎಂದು ಹೇಳುವುದಾದರೆ, ಈ ಹಿಂದೆ ನಾವು ತೆಗೆದುಕೊಂಡಿರತಕ್ಕಂಥ Number of posts are there, which are far in excess of the cadre strength, but we have regularised. We have already deviced the method by which we need have to create Supernumerary posts. ಆ ಪೋಸ್ಟನ್ನು ಮುಂದುವರೆಸಿಕೊಂಡು ಹೋಗಬೇಕು ಎನ್ನುವ ತೀರ್ಮಾನವನ್ನು ಕಳೆದ ಸಚಿವ ಸಂಪುಟದಲ್ಲಿ ತೆಗೆದುಕೊಂಡಿದ್ದೇವೆ. It is only in the last Cabinet meeting we have taken the decision. ಆದ್ದರಿಂದ, ಇದನ್ನು ನಾವು ಪುನಃ ಪರಿಶೀಲನೆ ಮಾಡುತ್ತೇವೆ, ಈ ಜಡ್ಜ್‌ಮೆಂಟ್‌ಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಸಾಮಾಜಿಕ ನ್ಯಾಯವನ್ನು ಒದಗಿಸಿ ಕೊಡುವಲ್ಲಿ ನಮ್ಮ ಸರ್ಕಾರ ಯಾರಿಗೂ ಹಿಂದೆ ಬೀಳುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬಹುಶಃ ಮಾನ್ಯ ಖರ್ಗೆಯವರು ಇದರಿಂದ ಸ್ವಲ್ಪಮಟ್ಟಿಗೆ ಸಮಾಧಾನವಾಗುತ್ತಾರೆ ಎಂದು ನಾನು ಭಾವಿಸುತ್ತೇನೆ. ತಾವು ನೇರವಾಗಿ ಕೆಲವು ಆಪಾದನೆಗಳನ್ನು ಮಾಡಿಬಿಡುತ್ತೀರಿ. ಆಪಾದನೆ ಮಾಡುತ್ತಿರತಕ್ಕಂಥ ಸಂದರ್ಭದನಲ್ಲಿ ಹೇಳಿರುವಂತೆ, ಸಮಾಜದಲ್ಲಿ ಇರತಕ್ಕಂಥ ಮೀಸಲಾತಿ ಇವತ್ತು ಹಲವಾರು ವರ್ಗಗಳಿಗೆ ಇದೆ. ಹಲವು ವರ್ಗಗಳಿಗೆ

ಮೀಸಲಾತಿಯನ್ನು ಮಾಡುತ್ತಾರೆ. ಆದ್ದರಿಂದ ಈ ಸಾಮಾಜಿಕ ನ್ಯಾಯ ಎನ್ನುವುದು ಎಲ್ಲರಿಗೂ ಸಿಗಬೇಕು ಎನ್ನುವುದು ಎಲ್ಲರ ಕಲ್ಪನೆ. ಅದಕ್ಕೆ ಅನುಗುಣವಾಗಿ ಈ ಸರ್ಕಾರ ಕೆಲಸವನ್ನು ಮಾಡುತ್ತಿದೆ, ಅದಕ್ಕೆ ಸರ್ಕಾರ ಬದ್ಧವಾಗಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಸವಿಸ್ತಾರವಾಗಿ ಉತ್ತರ ಕೊಟ್ಟರು. ಅವರದೇ ಆದಂಥ ಧಾಟಿಯಲ್ಲಿ, ಅವರು ಮಾಡಿದಂಥ ಕೆಲಸವನ್ನು ಸಮರ್ಥನೆ ಮಾಡಿಕೊಂಡರು. ಆದರೆ ಈ ವಾದವನ್ನು ನಾನು ಇವತ್ತು ಮಂಡಿಸುತ್ತಿಲ್ಲ. ಇದನ್ನು ಇವತ್ತು ಎತ್ತಿದ್ದಾರೆ, ನಾವು ಪರಿಶೀಲನೆ ಮಾಡಿಸುತ್ತೇವೆ, ನೋಡುತ್ತೇವೆ, ಎನ್ನತಕ್ಕಂಥಾದ್ದು ಇದ್ದರೆ ಸರಿ. 1996ರಲ್ಲೇ ಜಡ್ಜ್‌ಮೆಂಟ್ ಬಂದಿದೆ. ಅದನ್ನು ಅವರೇ ಹೇಳಿದ್ದಾರೆ. 18-9-1996ರಲ್ಲಿ ಜಡ್ಜ್‌ಮೆಂಟ್ ಬಂದಿದೆ. ಹಿಂದೆಯೂ ಕೂಡ ಇವರು ಯಾವುದೇ ಜಡ್ಜ್‌ಮೆಂಟಿಗೂ ಒಂದು ವರ್ಷ, ಎರಡು ವರ್ಷವಾದ ಮೇಲೆ ತಿದ್ದುಪಡಿ ಮಾಡಿಲ್ಲ. ಯಾವುದಾದರೂ ಅವರಿಗೆ ಬೇಕಾಗದೇ ಇರತಕ್ಕಂಥಾದ್ದು ಬಂದಿದ್ದರೆ ತಕ್ಷಣವೇ ಮಾಡುತ್ತಿದ್ದರು. 1995ರಲ್ಲಿ ಸಿಂಗಲ್ ಪೋಸ್ಟ್‌ಗೆ ರಿಸರ್ವೇಷನ್ ಅಪ್ಲಿಕೆಬಲ್ ಆಗುವುದಿಲ್ಲ ಎಂದು ತಿದ್ದುಪಡಿ ಆರ್ಡರನ್ನು ಇಷ್ಯೂ ಮಾಡಿದರು. ಸರ್ಕಾರದ ಆದೇಶ ಸಂಖ್ಯೆ ಡಿ.ಪಿ.ಎ.ಆರ್.29 ಎಸ್.ಡಿ.ಸಿ.77, ದಿನಾಂಕ 27ನೇ ಏಪ್ರಿಲ್ 1978 ಮತ್ತು ತದನಂತರದ ಅಧಿಕೃತ ಜ್ಞಾಪನಾ ಪತ್ರ ಇತ್ಯಾದಿ. ಸರ್ಕಾರ ಆದೇಶ ಸಂಖ್ಯೆ ಸಿ.ಅ.ಸು.ಇ.8ಸೇ ಇ.ಮ.95 ದಿನಾಂಕ 20-6-95. ಈ ತಿದ್ದುಪಡಿಯನ್ನು ಬೇಗನೆ ಮಂಡಿಸುವುದಕ್ಕೆ ಆಯಿತು. ಇದು ಬಂದು ಒಂದು ವರ್ಷವಾಯಿತು. ಆಮೇಲೆ ಕೇಂದ್ರದಿಂದ ಕಮೀಷನ್‌ರವರೂ ಕೂಡ ಇದರ ಬಗ್ಗೆ ಪತ್ರ ಬರೆದರು. ನಾನು ಕೇಳುತ್ತಿದ್ದೇನೆ, ಇಷ್ಟು ಜನ ನಿಮ್ಮ ಗಮನಕ್ಕೆ ತಂದರೂ ಕೂಡ ಒಂದೂವರೆ ವರ್ಷ ಬೇಕೇ ಇದನ್ನು ಪರಿಶೀಲನೆ ಮಾಡಲು? ಬೇರೆ ಕಾನೂನುಗಳನ್ನು ಎಷ್ಟು ತರಾತುರಿಯಲ್ಲಿ ತರುತ್ತೀರಿ, ತಿದ್ದುಪಡಿ ಮಾಡುತ್ತೀರಿ, ಇದಕ್ಕೆ ಏಕೆ ಹಾಗೆ ಆಸಕ್ತಿ ವಹಿಸಿ ಮಾಡುವುದಿಲ್ಲ? ನಾವು ಹೇಳಿದ ಕೂಡಲೇ ಇವರಿಗೆ ಸಿಟ್ಟು ಬರುತ್ತದೆ. ನಾವು ಏನು ಮಾಡಿಲ್ಲ, ಅವರು ಏನು ಮಾಡಿದ್ದಾರೆ ಎಂದು ಹೇಳುತ್ತಾರೆ. ಈಗ ಏನಾಗಿದೆ ಎಂದರೆ, ಈ ಪರಿಶಿಷ್ಟ ಜಾತಿಯವರು ರಾಜ್ಯದ ಒಂದು ಭಾಗವಲ್ಲ, ಈ ದೇಶದವರೇ ಅಲ್ಲ, ಈ ಸಮಾಜದವರೇ ಅಲ್ಲ, ಅವರಿಗೆ ಏನೋ ಒಂದು ದೊಡ್ಡ ಉಪಕಾರ ಮಾಡುತ್ತಿದ್ದೇವೆ ಎನ್ನುವ ಹಾಗೆ ಆಗಿದೆ. ಅವರನ್ನು ಒಂದು ಅನುಕಂಪದಿಂದ ನೋಡಿ, ಅವರೂ ಈ ದೇಶದ ಪ್ರಜೆಗಳಾಗಿದ್ದಾರೆ ಎನ್ನುವಂಥ ದೃಷ್ಟಿಯಿಂದ ನೋಡಿ. ಮತ್ತು ನಾವು ಅವರಿಗೆ ಕೊಡತಕ್ಕಂಥಾದ್ದನ್ನು ತಕ್ಷಣ ಕೊಟ್ಟರೆ ಅವರಿಗೆ ಉಪಯೋಗ ಆಗುತ್ತದೆ ಎನ್ನುವ ದೃಷ್ಟಿಯಿಂದ ನೋಡಬೇಕೇ ಹೊರತಾಗಿ, ಇದಕ್ಕೆ ತಿದ್ದುಪಡಿ ಮಾಡಲು ನೀವು ಒಂದು ವರ್ಷ ಇಟ್ಟುಕೊಳ್ಳುವುದಾದರೆ ನಿಮಗೆ ಇದರ ಬಗ್ಗೆ ಕಾಳಜಿ ಇದೆ ಎಂದು ನಾನು ಹೇಳಬಹುದೇ? ಬೇರೆ ರೂಲ್ಸ್‌ಗಳನ್ನು, ಕಾಂಟ್ರಾಕ್ಟರ್ ರೂಲ್ಸ್ ಗಳೆಲ್ಲವೂ ಕೂಡಲೇ

ತಿದ್ದುಪಡಿಯಾಗುತ್ತವೆ. ಇದಕ್ಕೆ ಮಾತ್ರ ಒಂದು ಸುತ್ತೋಲೆಯನ್ನು ಜಿ.ಎ.ಡಿ.ಯಿಂದ ಅಥವಾ ಡಿ.ಪಿ.ಎ.ಆರ್.ನಿಂದ ಮಾಡಲು ಎಷ್ಟು ದಿವಸ ಬೇಕು? ಅಡ್ವೊಕೇಟ್ ಜನರಲ್‌ರವರನ್ನು ಕರೆದು ಕೂಡಿಸಿ, ನೋಡಿ ಇಂಥ ತೀರ್ಪು ಬಂದಿದೆ, ಬೇರೆ ಕಡೆಯೂ ಇದನ್ನು ಹೇಳುತ್ತಿದ್ದಾರೆ. ಅದಕ್ಕಾಗಿ ಈ ಸುತ್ತೋಲೆಯನ್ನು ನೀವು ಯಾವ ರೀತಿಯಾಗಿ ತಂದಿರಿ, ಅದೇ ರೀತಿಯಾಗಿ ಇದನ್ನು ಮಾಡಿಫೈ ಮಾಡಿ ಇಷ್ಯೂ ಮಾಡಿ ಎಂದು ನಾವು ಹೇಳಬೇಕು. ಅದನು ಬಿಟ್ಟು ವಾದಕ್ಕೆ ವಾದ ಮಾಡುತ್ತಾ, ಅವರ ಕೇಸ್‌ನಲ್ಲಿ ಈ ರೀತಿಯಾಗಿತ್ತು, ಅದಕ್ಕೆ ಈ ಆರ್ಡರ್ ಬಂತು, ಇವರ ಕೇಸ್‌ನಲ್ಲಿ ಈ ರೀತಿಯಾಗಿ ಬಂತು ಎಂದು ಡಿಫೆಂಡ್ ಮಾಡಿಕೊಂಡು ಹೋಗುವುದು ಸರಿಯಲ್ಲ. ನಾನು ಹೋದ ಸಲವೇ ಇದನ್ನು ಸದನದಲ್ಲಿ ಹೇಳಿದೆ. ಸದನ ಮುಗಿದ ತಕ್ಷಣವೇ ಇದನ್ನು ಇಷ್ಯೂ ಮಾಡುತ್ತೇವೆ ಎಂದು ಹೇಳಿದರು. ಆದರೆ ಅದನ್ನು ಇಲ್ಲಿಯವರೆಗೆ ಮಾಡಿಲ್ಲ. ಅದಕ್ಕಾಗಿ ತಾವು ದಯವಿಟ್ಟು ಇದನ್ನು ತಕ್ಷಣವೇ, ಇನ್ನು ಒಂದೆರಡು ದಿವಸಗಳಲ್ಲಿ ಇಷ್ಯೂ ಮಾಡುತ್ತೇವೆ ಎನ್ನತಕ್ಕಂಥ ಆಶ್ವಾಸನೆಯನ್ನು ಕೊಡಬೇಕು. ಸುಮ್ಮನೆ ಮತ್ತೆ ಪರಿಶೀಲನೆ ಮಾಡುತ್ತೇವೆ ಎಂದು ಹೇಳಬೇಡಿ. ಈಗಾಗಲೇ ಒಂದು ವರ್ಷವಾಯಿತು. ಮತ್ತೆ ಅದೇ ರೀತಿ ಆಗಬಾರದು. ನಾನು ಪುನಃ ಪುನಃ ಅದನ್ನೇ ಹೇಳುವುದಿಲ್ಲ. ಈ ಜಡ್ಜ್‌ಮೆಂಟ್ ಆಗಿ ಒಂದು ವರ್ಷವಾಯಿತು, ಕೇಂದ್ರ ಸರ್ಕಾರದವರು ಪತ್ರ ಬರೆದೂ ಆಯಿತು. ನಾವು ಕೇಳಿಯೂ ಒಂದು ವರ್ಷವಾಗಿದೆ. ಮತ್ತು ಇದಕ್ಕಿಂತ ಜಾಸ್ತಿ ತಾಳ್ಮೆಯಿಂದ ಇರಲು ಆಗುವುದಿಲ್ಲ. ಅದಕ್ಕಾಗಿ ತಾವು ದಯವಿಟ್ಟು ಇದನ್ನು ಒಂದೆರಡು ದಿವಸಗಳಲ್ಲಿ ಇಷ್ಯೂ ಮಾಡುತ್ತೇವೆ ಎಂದು ಹೇಳಿದರೆ ನಮಗೆ ಸಮಾಧಾನವಾಗುತ್ತದೆ. ಇಲ್ಲವೆಂದರೆ ನಾನು ಆಗಲೇ ಹೇಳಿದ್ದೇನೆ, ನಾನು ಇಲ್ಲೇ ಕುಳಿತುಕೊಳ್ಳುತ್ತೇನೆ, ನಿಮ್ಮ ಕಾರ್ಯಕಲಾಪಗಳನ್ನು ನೀವು ನಡೆಸಿ, ನನ್ನ ಕಾರ್ಯಕಲಾಪಗಳನ್ನು ನಾನು ನಡೆಸುತ್ತೇನೆ.

ಶ್ರೀ ಹೆಚ್.ಡಿ.ಬಸವರಾಜು: ಸನ್ಮಾನ್ಯ ಉಪಾಧ್ಯಕ್ಷರೇ, ಇಲ್ಲಿನ ವಿಚಾರವನ್ನು ನಾವು ಈಗಾಗಲೇ ಸವಿಸ್ತಾರವಾಗಿ ಚರ್ಚೆ ಮಾಡಿದ್ದೇವೆ. ಇಲ್ಲ ಎಂದು ಹೇಳಲಿಲ್ಲ. 1995ರಲ್ಲಿ ನೀವು ಆದೇಶವನ್ನು ಕೊಟ್ಟಿರಿ, ಸ್ಟಾಪ್ ಮಾಡಲು. ಈಗ 96ಕ್ಕೆ ಬಂದರೂ, ಇಲ್ಲಿಯವರೆಗೆ ಪರಿಶೀಲನೆಯಲ್ಲಿದೆ, ಅದರ ಇಂಟರ್‌ಪ್ರಿಟೇಷನ್ ಯಾವ ರೀತಿ ಇದೆ ಎನ್ನುವುದರ ಬಗ್ಗೆ ತಾವು ಹೇಳಿದ್ದೀರಿ. ಆದರೆ ಈ ಆರ್ಡರ್ ಬಂದ ತಕ್ಷಣ ನೀವು ಯಾವಯಾವ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ಇತ್ತು, ಅವುಗಳನ್ನು ಏಕೆ ಪೆಂಡಿಂಗ್ ಇಡಲಿಲ್ಲ? ಅದಕ್ಕೇ ಈಗ ನಾನು ಹೇಳುತ್ತಿರುವುದೇನೆಂದರೆ, ಈಗಾಗಲೇ ವಿಳಂಬವಾಗಿ ಹೋಗಿದೆ. ನಿಮ್ಮ ಆದೇಶ ಬರುವವರೆಗೆ ಯಾವಯಾವ ಒಂದೊಂದು ಪೋಸ್ಟ್‌ಗಳನ್ನು ಭರ್ತಿ ಮಾಡಬೇಕು ಎಂದು ಇದೆಯೋ, ಅವುಗಳನ್ನು ಪೆಂಡಿಂಗ್‌ನಲ್ಲಿ ಇಡಿ. ಏಕೆಂದರೆ 1994ರಲ್ಲಿ ನೀವು ಡಿ.ಪಿ.ಎ.ಆರ್.ನಿಂದ ಆದೇಶವನ್ನು ಹೊರಡಿಸಿದಿರಿ. ಆದರೆ ಆ ಆದೇಶವನ್ನು ಇಂಪ್ಲಿಮೆಂಟ್ ಮಾಡಲಿಲ್ಲ. ಒಂದು ನಿಮಿಷ ತಾವು ಅವಕಾಶ ಕೊಡಬೇಕು, ಅದನ್ನು ಓದುತ್ತೇನೆ. Government Order No. DPAR 11

SBC 94 dt. 22-2-94. Government are pleased to direct that in the direct recruitment to the posts of Reader, and Professors in the Universities, all posts of Reader/ Professors as the case may be, shall be clubbed and treated as a combined cadre for the purpose of application of the roster prescribed in Government Order No. DPAR 28 SBC 86 dt. 12-12-86. Candidates will be selected from the various reserved categories on the basis of inter merit regardless of the subject concerned to the extent that posts have been reserved for each category.' ಏಕೆಂದರೆ, ನಾಣಯ್ಯನವರು ಹೇಳಿದರು, ನಾವು ಯಾವುದೇ ಒಂದು ರೀತಿಯಲ್ಲೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ನೇಮಕಾತಿ ಪ್ರಕ್ರಿಯೆಯಲ್ಲಿ ನಾವು ಒತ್ತಡ ತಂದು ನಿಲ್ಲಿಸಿಲ್ಲ ಎಂದು ಹೇಳಿದರು. ಆದರೆ ಈ ಸರ್ಕಾರಿ ಆದೇಶವನ್ನು ತಾವು ತಡೆಹಿಡಿದಿರಿ. ಈ ಆದೇಶದ ಪ್ರಕಾರ ಒಂದೇ ಒಂದು ನೇಮಕಾತಿ ನಡೆಯಲಿಲ್ಲ. ಆದ್ದರಿಂದ ನಾನು ಕೇಳಿಕೊಳ್ಳುವುದು ಏನೆಂದರೆ, ಅವರು ಉತ್ತರ ಕೊಡುವುದಕ್ಕೆ ಮುಂಚೆ, ಈಗ ಯಾವಯಾವುದಕ್ಕೆ ಪ್ರಕ್ರಿಯೆ ನಡೆಯಬೇಕು ಎಂದು ಇದೆಯೋ, ಅದಷ್ಟನ್ನೂ ನಿಲ್ಲಿಸಿ, ನಿಮ್ಮ ಆದೇಶ ಬಂದ ನಂತರ ಆ ಪ್ರಕ್ರಿಯೆಯನ್ನು ಪ್ರಾರಂಭ ಮಾಡಲು ಇಲ್ಲಿ ಒಂದು ಸೂಕ್ತವಾದಂಥ ಭರವಸೆಯನ್ನು ನೀಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಬಸಪ್ಪ: ಮಾನ್ಯ ಉಪಾಧ್ಯಕ್ಷರೇ, ಈ ಆದೇಶವನ್ನು ವಿಳಂಬ ಮಾಡಿದ್ದರಿಂದ ಒಬ್ಬ ಪರಿಶಿಷ್ಟ ಪಂಗಡದ ಅಧಿಕಾರಿಗೆ ಆಗಿರತಕ್ಕಂಥ ತೊಂದರೆಯನ್ನು ನಾನು ಈ ಸಭೆಯ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕಳೆದ ವರ್ಷ ಒಂದು ಲೈಬ್ರರಿಯನ್ ಹುದ್ದೆಯನ್ನು ಅನೌನ್ಸ್ ಮಾಡಿದರು. ಅದು ಜನರಲ್ ಪೋಸ್ಟ್ ಆಗಿಯೇ ಬಂತು. ಒಬ್ಬ ಪರಿಶಿಷ್ಟ ವರ್ಗದ ಅತ್ಯಂತ ಪ್ರಭಾವಿತನಾಗಿರತಕ್ಕಂಥ ಮತ್ತು ಮೇಲಾಗಿ ಗ್ರೇಟ್ ಬ್ರಿಟನ್, ಇಂಗ್ಲೆಂಡ್‌ನಲ್ಲಿ ಡಾಕ್ಟರೇಟ್ ಡಿಗ್ರಿ ಮತ್ತು ಎಂ.ಎಸ್. ಡಿಗ್ರಿ ತೆಗೆದುಕೊಂಡಿರತಕ್ಕಂಥ, ಲೈಬ್ರರಿ ಸೈನ್ಸ್‌ನಲ್ಲಿ ಶಿಕ್ಷಣ ಪಡೆದಿದ್ದಂಥ ಒಬ್ಬ ಪರಿಶಿಷ್ಟ ವರ್ಗದ ಅಭ್ಯರ್ಥಿ ಅದಕ್ಕೆ ಅಪ್ಲೈ ಮಾಡಿದ. He stood first in the interview. ಅಲ್ಲಿ ಕೆಲಸಮಾಡತಕ್ಕ ಒಬ್ಬ ಲೆಕ್ಚರರ್ ರಿಟೈರ್ ಆಗುತ್ತಾರೆ ಎನ್ನುವ ದೃಷ್ಟಿಯಿಂದ ಈ ಮೊದಲನೇ ಆ ಪರಿಶಿಷ್ಟ ವರ್ಗದ ಅಭ್ಯರ್ಥಿಯನ್ನು ವೈಟಿಂಗ್ ಲಿಸ್ಟ್‌ನಲ್ಲಿ ಇಟ್ಟರು. ರಿಟೈರ್ ಆದಮೇಲೆ ಪುನಃ ಹೊಸ ಅಪ್ಲಿಕೇಷನ್ ಕಾಲ್‌ಫಾರ್ ಮಾಡಿದರು. ಎರಡನೆಯ ಸಲದ ಸಂದರ್ಶನದಲ್ಲಿ ಅವರ ಹೆಸರೇ ಇಲ್ಲ. ಮೊದಲನೆಯ ಸಲ ಸಂದರ್ಶನವಾದಾಗ ಅವರನ್ನು ವೈಟಿಂಗ್ ಲಿಸ್ಟ್‌ನಲ್ಲಿಟ್ಟರೂ ಕೂಡ ಈಗ ಅವರ ಹೆಸರು ಪರಿಗಣೆಯಲ್ಲಿ ಇಲ್ಲವೇ ಇಲ್ಲ. ಅದು

ಬಹಳ ಅನ್ಯಾಯ. ಈ ಆದೇಶವನ್ನು ನೀವು ಮೊದಲೇ ಮಾಡಿದ್ದರೆ ಒಬ್ಬ ಪರಿಶಿಷ್ಟ ವರ್ಗದ ಮೇಧಾವಿ ಅಭ್ಯರ್ಥಿಗೆ ಈ ಕೆಲಸ ಸಿಗುತ್ತಿತ್ತು ಎನ್ನುವುದು ನನ್ನ ಭಾವನೆ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಸರ್ಕಾರದ ವತಿಯಿಂದ ನಾನು ನೇರವಾದ ಉತ್ತರವನ್ನು ಈ ಸದನಕ್ಕೆ ಹೇಳಿದ್ದೇನೆ. ಇದನ್ನು ಸರ್ಕಾರ ತೀವ್ರವಾಗಿ ಪರಿಶೀಲನೆ ಮಾಡುತ್ತಿದೆ. ಬಹುಶಃ ಅವರ ಮನಸ್ಸಿನಲ್ಲಿ ಯಾವಾಗ ಮಾಡುತ್ತಾರೋ ಎನ್ನುವುದು ಇರಬಹುದು, ನಾನು ಈ ಸಂದರ್ಭದಲ್ಲಿ ಮಾನ್ಯ ಖರ್ಗೆಯವರಿಗೆ ಮತ್ತು ಈ ಸದನಕ್ಕೆ ತಿಳಿಸಬಯಸುತ್ತೇನೆ, ನಾವು ಈಗ ತೆಗೆದುಕೊಳ್ಳತಕ್ಕ ತೀರ್ಮಾನ ನಾಳೆ ಕಾನೂನಿನ ಅಡಿಯಲ್ಲಿ ಸಿಂಧುವಾಗಬೇಕಾಗಿದೆ. ಈ ಹಿನ್ನೆಲೆಯಲ್ಲಿ ಎಲ್ಲಿಯಾದರೂ ಒಂದು ಹುದ್ದೆ ಇದ್ದರೆ ಈ ತೀರ್ಮಾನ ತೆಗೆದುಕೊಳ್ಳುವವರೆಗೆ ಅದನ್ನು ತಡೆಹಿಡಿಯುವಂತೆ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೆ, ವಿಶ್ವವಿದ್ಯಾನಿಲಯಗಳಲ್ಲಿ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್‌ಗೆ ಒಂದೊಂದು ಪೋಸ್ಟ್ ಇರುತ್ತದೆ. ಹತ್ತು ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಪೋಸ್ಟ್‌ಗಳು ಇದ್ದರೆ ಅವೆಲ್ಲವುಗಳನ್ನೂ ಒಂದೇ ಸಮಯಕ್ಕೆ ತೆಗೆದುಕೊಳ್ಳುವುದಿಲ್ಲ, ಅವರು, ಒಂದೊಂದೇ ತೆಗೆದುಕೊಳ್ಳುತ್ತಾರೆ. ಹೀಗೆ ಅವರಿಗೆ ಎಲ್ಲೆಲ್ಲಿ ಡಿರಿಸರ್ವ್ ಮಾಡಬೇಕೆಂದು ಮನಸ್ಸಿನಲ್ಲಿ ಇರುತ್ತದೆಯೋ ಅಲ್ಲಿ ಸಿಂಗಲ್ ಪೋಸ್ಟ್ ಬಿಡುತ್ತಾ ಹೋಗುತ್ತಾರೆ.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಉಪಾಧ್ಯಕ್ಷರೆ, the reason I will tell you, why? For example: Horticulture is one department, Agriculture is one department where there are posts of Director, Additional Directors, Deputy Directors, Joint Directors. There are many posts. In the University in Chemistry department, Physics department, Biology department, even there there is one single post in a particular cadre. "Cadre" that is all the more important. ಕೇಡರ್ ಅಂದರೆ ಏನು ಎನ್ನತಕ್ಕಂಥದ್ದು ಎಲ್ಲಾ ಡಿಪಾರ್ಟ್‌ಮೆಂಟ್‌ಗೆ ಬರತಕ್ಕಂಥದ್ದು ಆದ್ದರಿಂದ ಇದನ್ನೂ ಕೂಡ ನಾವು ಕೂಲಂಕಷವಾಗಿ ಪರಿಶೀಲನೆ ಮಾಡುತ್ತೇವೆ. The intention of the government is to help as much as possible. This is the intention of the government. ಆದ್ದರಿಂದ ಇದಕ್ಕೆ ಸಂಬಂಧಪಟ್ಟ ಹಾಗೆ ಎಲ್ಲಿ ಈ ಪೊಸಿಷನ್ ಬರುತ್ತಾ ಇದೆ we will see we will withold it till such time we look into the

whole matter and do that.

SRI M.MALLIKARJUNA KHARGE: Time is moving on like this. Already one year is over. At least you put a time limit of 8 days or one month. You can take some time and do it.

SRI M.C.NANAIAH: We are already making the exercise. It may be one month or two months. But let us look into it within the consititutional framework.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೆ, ಈಗ ನಾವು ಜಿಲ್ಲಾ ಪರಿಷತ್ ರೂಲ್ಸ್ ಮಾಡುವುದಿಲ್ಲವೇ ಇದು ಜಿ.ಓ.

ಶ್ರೀ ಎಂ.ಸಿ.ನಾಣಯ್ಯ: ಸಭಾಧ್ಯಕ್ಷರೇ, What records you have, the same records are with us also. It is a question of interpretation. ಈಗ ನಾವು ಮಾಡುವುದು ನಾಳೆ ಏನಾದರೂ ಅದರ ಸಿಂಧುತ್ವದ ಪ್ರಶ್ನೆ ಬರಬಾರದು ಎನ್ನುವುದು ನಮ್ಮ ಭಾವನೆ. For the first time, the new concept of applying roster to a single post has come. This is a new concept altogether. This concept of applying roster to one single post is absolutely against the constitution. He says no, it cannot be done. It is a question of vacancy. It is a question of promotion. What he says, there cannot be a vacancy unless there is a post. If there is one post, there is no question of vacancy and it is not relevant. Therefore, let us look into it. These things are being exercised now.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಹೀಗಾಗೆಯೇ ಇವತ್ತು ಎಲ್ಲಾ ಪ್ರೈವೇಟ್ ಇನ್‌ಸ್ಟ್ಯೂಷನ್ಸ್‌ನವರು ಮಾಡಿಕೊಳ್ಳುತ್ತಿದ್ದಾರೆ, ಈಗ ಅವರ ಹತ್ತಿರ ಹತ್ತು ಹೆಡ್ ಮಾಸ್ತರ್ ಪೋಸ್ಟ್ ಇದ್ದರೂ ಕೂಡ ಸಿಂಗಲ್ ಮಾಡಿಕೊಂಡು ಬಿಡುತ್ತಾರೆ, ಉದಾಹರಣೆಗೆ ತಮ್ಮ ಕೆ.ಎಲ್.ಎಸ್. ಸೊಸೈಟಿಯಲ್ಲಿ ಹತ್ತು ಹೈಸ್ಕೂಲ್ ಇವೆ ಎಂದು ತಿಳಿದುಕೊಳ್ಳಿ ಅಲ್ಲಿ ಒಂದೊಂದು ಮಾಡುತ್ತಾರೆ; ಶೇ 33 ರೋಸ್ಟ್ ಎಲ್ಲದಕ್ಕಿಂತ ಮುಂದೆ ನಮ್ಮಲ್ಲಿ ಬಂದಿದೆ.

SRI M.C.NANAIAH: If there is any single post anywhere, we will see that we will keep it in abeyance till such time we finalise the whole thing. I hope it will staisfy him.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಜಿ.ಓ.ಇಶ್ಯೂ ಮಾಡಲು ಎಷ್ಟು ಸಮಯಬೇಕು?

ಶ್ರೀ ಎಂ.ಸಿ.ನಾಣಯ್ಯ: ಇದೊಂದು ಮಾಡಿ ಅದರ ಜೊತೆಗೆ It will be done immediately. That also we will do.

SRI M.MALLIKARJUN KHARGE: In the last session also we raised it.

SRI M.C.NANAIAH: In the last session this question was not raised. You spoke about backlog. For backlog, the government guidelines are there.

MR. DEPUTY SPEAKER: Now the House is adjourned for one hour-to meet at 3.00 P.M.

(1-55 ನಿಮಿಷಕ್ಕೆ ಸದನವು ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ 3-00 ಗಂಟೆಗೆ ಸೇರಲು ತೀರ್ಮಾನಿಸಿತು)

(ಸದನವು 3-30 ಗಂಟೆಗೆ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರಾದ ಶ್ರೀ ರಮೇಶ್ ಕುಮಾರ್ ಅವರು ಪೀಠವನ್ನು ಅಲಂಕರಿಸಿದರು)

(4) ಶಾಸನ ರಚನೆ

(ಎ) ವಿಧೇಯಕಗಳನ್ನು ಮಂಡಿಸುವುದು

ಅ) ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 1997

ಅನುಮತಿ ಮಂಡನೆ ಕೋರಿಕೆ

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ): ಮಾನ್ಯ ಅಧ್ಯಕ್ಷರೇ, 1997ರ ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, '19 ... ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ'ವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ವಾರ್ತಾ ಮತ್ತು ಪ್ರಚಾರ ಮಂತ್ರಿ): ಮಾನ್ಯ ಅಧ್ಯಕ್ಷರೇ, '1997ರ ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ'ವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: **ವಿಧೇಯಕವನ್ನು ಮಂಡಿಸಲಾಗಿದೆ.**

(ಆ) ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ವಿಧೇಯಕ, 1997

ಅನುಮತಿ ಮಂಡನೆ ಕೋರಿಕೆ

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, 1997ರ ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ '1997ರ ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ವಿಧೇಯಕ'ವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, '1997ರ ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: **ವಿಧೇಯಕವನ್ನು ಮಂಡಿಸಲಾಗಿದೆ.**

(ಇ) ಕರ್ನಾಟಕ ವಿಧಾನಮಂಡಲದ ವೇತನಗಳ, ನಿವೃತ್ತಿ, ವೇತನಗಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 1997.

(ಅನುಮತಿ ಮಂಡನೆ ಕೋರಿಕೆ)

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಹಾಗೂ ವಾರ್ತಾ ಮತ್ತು ಪ್ರಚಾರ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ, '1997ನೇ ಸಾಲಿನ

---

* ಅನುಬಂಧ I - II

ಕರ್ನಾಟಕ ವಿಧಾನಮಂಡಲದವರ ವೇತನಗಳ, ನಿವೃತ್ತಿ ವೇತನಗಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ'ವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ '1997ನೇ ಸಾಲಿನ ಕರ್ನಾಟಕ ವಿಧಾನ ಮಂಡಲದವರ ವೇತನಗಳ, ನಿವೃತ್ತಿ ವೇತನಗಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ'ವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ವಾರ್ತಾ ಮತ್ತು ಪ್ರಚಾರ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ, '1997ನೇ ಸಾಲಿನ ಕರ್ನಾಟಕ ವಿಧಾನ ಮಂಡಲದವರ ವೇತನಗಳ, ನಿವೃತ್ತಿ ವೇತನಗಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ'ವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: **ವಿಧೇಯಕವನ್ನು ಮಂಡಿಸಲಾಗಿದೆ.**

(ಬ) ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(ಅ) ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 1997 ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ವಾರ್ತಾ ಮತ್ತು ಪ್ರಚಾರ ಮಂತ್ರಿ): ಮಾನ್ಯ ಅಧ್ಯಕ್ಷರೇ, 1997ರ ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಅಧ್ಯಕ್ಷರೇ, ಇದೊಂದು ಸರಳವಾಗಿರತಕ್ಕಂಥ ತಿದ್ದುಪಡಿ. ಇದರಲ್ಲಿ ಇವತ್ತಿನ ಬೆಲೆಯೇರಿಕೆಗೆ ಅನುಗುಣವಾಗಿ ಸ್ವಲ್ಪ ಮಟ್ಟಿಗೆ ನಮ್ಮ ಮಂತ್ರಿಗಳಿಗೆ ಕೊಡಬೇಕಾದಂಥ ಅಲೋಯೆನ್ಸ್ ಯಾವುದು ಇದೆ, ಅದನ್ನು ಸ್ವಲ್ಪಮಟ್ಟಿಗೆ ಏರಿಸಬೇಕು ಎಂದು ನಾವು ತೀರ್ಮಾನ ಮಾಡಿದ್ದೇವೆ. ಇದಕ್ಕೆ ಕಾರಣ ಏನೆಂದರೆ ಅಲ್ಲಿ ಪಾರ್ಲಿಮೆಂಟ್‌ನಲ್ಲಿ ಕೂಡ ಇದರ ಬಗ್ಗೆ ಚರ್ಚೆಗೆ ಬಂದಾಗ, ಪಾರ್ಲಿಮೆಂಟಿನ ಸಭಾಧ್ಯಕ್ಷರುಗಳು ಈಗ ಇರತಕ್ಕಂಥ ಈ ಸಾರಿಗೆ ಭತ್ಯ ಯಾವುದಿದೆ,

---

* ಅನುಬಂಧ III

ಇದರ ನಾಲ್ಕು ಪಟ್ಟು ಹೆಚ್ಚಿಸಬೇಕು, ಇವತ್ತಿನ ಈ ಏರಿಕೆಯನ್ನು ನೋಡಿದಾಗ ಎಂದು ಅವರು ವಿಚಾರ ಮಾಡಿರತಕ್ಕಂಥ ಹಿನ್ನಲೆಯಲ್ಲಿ ಕೆಲವು ಅಲೋಯೆನ್ಸ್‌ಗಳನ್ನು ಏರಿಸಬೇಕು ಎನ್ನುವುದಕ್ಕೆ ನಾವು ಈ ವಿಧೇಯಕವನ್ನು ಮಂಡಿಸುತ್ತಿದ್ದೇನೆ. ಇದಕ್ಕೆ ಸದನ ಸಂಪೂರ್ಣವಾದ ಅನುಮತಿಯನ್ನು ಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ 1997ನೇ ಸಾಲಿನ ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 11ವರೆಗೆ

ಅಧ್ಯಕ್ಷರು: 'ಖಂಡ 2 ರಿಂದ 11 ವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 11 ವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ 'ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ವಾರ್ತಾ ಮತ್ತು ಪ್ರಚಾರ ಮಂತ್ರಿ): ಮಾನ್ಯ ಅಧ್ಯಕ್ಷರೇ, '1997ರ ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ'ವನ್ನು ಅಂಗೀಕರಿಸಬೇಕೆಂದು

ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, '1997ರ ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಇ) ಕರ್ನಾಟಕ ವಿಧಾನ ಮಂಡಲದವರ ವೇತನಗಳ, ನಿವೃತ್ತಿ ವೇತನ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 1997

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮತ್ತು ವಾರ್ತಾ ಸಚಿವರು): ಮಾನ್ಯ ಅಧ್ಯಕ್ಷರೇ, 1997ನೇ ಸಾಲಿನ ಕರ್ನಾಟಕ ವಿಧಾನ ಮಂಡಲದವರ ವೇತನಗಳ, ನಿವೃತ್ತಿ ವೇತನ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

+ ಶ್ರೀ ಎಂ.ಸಿ.ನಾಣಯ್ಯ (ಕಾನೂನು ಸಚಿವರು): ಅಧ್ಯಕ್ಷರೇ ಎಲ್ಲಾ ಶಾಸಕರಿಗೂ, ಹಾಗೂ ಎಲ್ಲಾ ಮಂತ್ರಿಗಳಿಗೂ ಸೇರಿ ನಾವು ಒಟ್ಟಾಗಿ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇದು ಸ್ವಲ್ಪ ಮಟ್ಟಿಗೆ ಹೆಚ್ಚಿಗೆ ಮಾಡಲೇಬೇಕಾಗಿತ್ತು. ಏಕೆಂದರೆ 1994ರಲ್ಲಿ ನಾವು ಇದನ್ನು ಮಾಡಿದಾದ ಮೇಲೆ 1997 ಇಲ್ಲಿಯವರೆಗೆ ಎಲ್ಲವೂ ಕೂಡ ಬಹಳಷ್ಟು ಬೆಲೆಗಳು ಏರಿವೆ. ಇವತ್ತು ಪ್ರತಿ ಶಾಸಕರು ತಮ್ಮ ತಮ್ಮ ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಬೇಕಾದರೆ, ಪ್ರಸ್ತುತ ಇರತಕ್ಕಂಥ ವೇತನ ಹಾಗೂ ಭತ್ಯೆಗಳು ಸಾಕಾಗುವುದಿಲ್ಲ. ಜೇಬಿನಿಂದ ಖರ್ಚು ಮಾಡಿಕೊಂಡು ಕೆಲಸ ಮಾಡತಕ್ಕಂಥ ಆ ಒಂದು ಪರಿಸ್ಥಿತಿ ಇವತ್ತು ಶಾಸಕರಿಗೆ ಬಂದಿದೆ. ಏಕೆಂದರೆ ದೂರವಾಣಿ ವೆಚ್ಚವೇ ಸುಮಾರು 4000 ರೂ.ಗಳಿಂದ 6000 ರೂ.ವರೆಗೆ ಬರತಕ್ಕಂಥ ಪರಿಸ್ಥಿತಿಯನ್ನೂ ನಾವು ನೋಡಿದ್ದೇವೆ. ಇವತ್ತು ದೂರವಾಣಿ ದರ ಸುಮಾರು ಮೂರು ಪಟ್ಟು, ನಾಲ್ಕು ಪಟ್ಟು ಹೆಚ್ಚಾಗಿದೆ, ಹಾಗೂ ಪೆಟ್ರೋಲ್ ದರ 1994ನೇ ವರ್ಷದಲ್ಲಿ 18 ರೂಪಾಯಿ ಇದ್ದದ್ದು ಈಗ 30 ರೂಪಾಯಿಯಾಗಿದೆ. ಇಂತಹ ಸನ್ನಿವೇಶದಲ್ಲಿ ಶಾಸಕರು ತಮ್ಮ ತಮ್ಮ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂಥದ್ದು, ಹಾಗೂ ಬೆಂಗಳೂರಿಗೆ ಬರತಕ್ಕಂಥದ್ದು, ಜನರ ಕೆಲಸಗಳನ್ನು ಮಾಡತಕ್ಕಂಥದ್ದು, ಹೀಗಾಗಿ ಅವರಿಗೆ ಎಷ್ಟು ವೆಚ್ಚವಾಗುತ್ತದೋ ಅದನ್ನು ನಾವು ಕೊಡದೇ ಹೋದರೆ ಕೆಲಸ ಮಾಡುವುದು ಕಷ್ಟವಾಗುತ್ತದೆ. ಹಾಗೂ ಇದರ ಜೊತೆಗೆ ಪ್ರಾಮಾಣಿಕವಾಗಿ ಯಾರಿಗೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಅಲ್ಲಲ್ಲಿ ಒಂದು ಕೂಗು ಅದೇನೆಂದರೆ ಮಂತ್ರಿಗಳ ಹಾಗೂ ಶಾಸಕರ ಭತ್ಯೆಗಳನ್ನು ಏರಿಸಿದ್ದಾರೆ ಎಂದು ಕೇಳಿ ಬರುತ್ತದೆ. ಸಾರ್ವಜನಿಕರಿಗೆ ಈ ಸಂದರ್ಭದಲ್ಲಿ

ನಾವು ಹೇಳಬೇಕೆಂದರೆ, ನೇರವಾಗಿ ಶಾಸಕರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಹಿತದೃಷ್ಟಿಯಿಂದ ವೇತನ ಹಾಗೂ ಭತ್ಯೆಗಳನ್ನು ಏರಿಸಲೇಬೇಕಾದ ಅನಿವಾರ್ಯ ಪರಿಸ್ಥಿತಿ ಇದೆ ಎಂದು ನಾವು ಸಾರ್ವಜನಿಕರಿಗೆ ಹೇಳಬೇಕಾಗುತ್ತದೆ. ಇದು ಕೇವಲ ಏಕಪಕ್ಷೀಯ ಅಲ್ಲ, ವಿರೋಧ ಪಕ್ಷದವರು ಹಾಗೂ ಆಡಳಿತ ಪಕ್ಷದವರು ಎಲ್ಲರೂ ಕುಳಿತುಕೊಂಡು ಚರ್ಚೆ ಮಾಡಿ ನಾವು ಈ ಒಂದು ನಿರ್ಧಾರವನ್ನು ಮಾಡಿದ್ದೇವೆ. ಪ್ರತಿಯೊಬ್ಬ ಮಂತ್ರಿ ಹಾಗೂ ಶಾಸಕರು ತಮ್ಮ ಕ್ಷೇತ್ರಗಳಲ್ಲಿ ಚೆನ್ನಾಗಿ ಕೆಲಸ ಮಾಡಬೇಕು ಎನ್ನುವ ಹಿನ್ನೆಲೆಯಲ್ಲಿ ಕನಿಷ್ಠ ಪ್ರಮಾಣ ಎಷ್ಟು ಕೂಡಬೇಕು ಎಂಬುದನ್ನು ಚಿಂತನೆ ಮಾಡಿ ನಾವು ಈ ನಿರ್ಧಾರವನ್ನು ಕೈಗೊಂಡಿದ್ದೇವೆ. ಮಾನ್ಯ ಸಭಾಧ್ಯಕ್ಷರೂ ಕೂಡ ಈ ವಿಷಯದಲ್ಲಿ ತಮ್ಮ ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಮತ್ತೊಂದು ವಿಷಯ ಏನೆಂದರೆ, ಈ ವಿಷಯವನ್ನು ತೀರ್ಮಾನ ಮಾಡುವುದಕ್ಕಿಂತ ಮುಂಚೆ, ನಮ್ಮ ಬಹಳಷ್ಟು ಜನ ಕೆಳಮನೆ ಹಾಗೂ ಮೇಲ್ಮನೆ ಸದಸ್ಯರೂ ಕೂಡ ಬೇರೆ ರಾಜ್ಯಗಳಲ್ಲಿ ಶಾಸಕರಿಗೂ ಹಾಗೂ ಮಂತ್ರಿಗಳಿಗೆ ಕೊಡುತ್ತಿರುವ ಸಂಬಳ, ಭತ್ಯೆ, ಹಾಗೂ ಸಂಪೂರ್ಣವಾದ ವಿವರಗಳನ್ನು ತಂದಿದ್ದರು. ಆ ವಿವರವನ್ನು ನಾನು ಸಂಪೂರ್ಣವಾಗಿ ನೋಡಿದಾದ ನಂತರ ಬೇರೆ ಒಂದು ಮೂರು ರಾಜ್ಯಗಳಿಗೆ ಸಂಬಂಧಪಟ್ಟ ಹಾಗೆ ಹೋಲಿಸಿ ನೋಡಿದಾಗ ನಾವು ಏರಿಸಿರುವ ವೇತನ ಹಾಗೂ ಭತ್ಯೆದ ಪ್ರಮಾಣ ಕಡಿಮೆ ಇದೆ. ಬೇರೆ ರಾಜ್ಯದವರು ಇನ್ನು ಆ ಪ್ರಮಾಣವನ್ನು ಹೆಚ್ಚು ಮಾಡಿದ್ದಾರೆ. ಶಾಸಕರು ತಮ್ಮ ಕ್ಷೇತ್ರಗಳಿಗೆ ಹೋಗಿ, ಕೆಲಸ ಮಾಡಬೇಕಾಗುತ್ತದೆ, ಹೀಗೆ ಮಾಡುವುದಕ್ಕೆ ಹಣ ಖರ್ಚು ಆಗುತ್ತಿದೆ, ದೂರವಾಣಿ ವೆಚ್ಚ ಕೂಡ ಖರ್ಚಾಗುತ್ತಿದೆ, ಪೆಟ್ರೋಲ್ ಕೂಡ ಖರ್ಚಾಗುತ್ತಿದೆ. ತಮ್ಮ ಸ್ವತಃ ಜೇಬಿನಿಂದ ಖರ್ಚು ಮಾಡತಕ್ಕ ಸಾಮರ್ಥ್ಯ ಬಹಳಷ್ಟು ಶಾಸಕರಿಗೂ ಇಲ್ಲ. ಹಾಗೂ ಜೇಬಿನಿಂದ ಖರ್ಚು ಮಾಡಿ ಕೆಲಸ ಮಾಡುತ್ತೇವೆ ಎನ್ನುವುದು ಬರಬಾರದು ಎನ್ನುವ ಹಿನ್ನೆಲೆಯಲ್ಲಿ ನಾವು ಇದನ್ನು ತಂದಿದ್ದೇವೆ. ನಾವು ಇದನ್ನು ತರುವಾಗ ಎಲ್ಲರೂ ಅಂದರೆ ಮಾನ್ಯ ಖರ್ಗೆಯವರು ಯಡಿಯೂರಪ್ಪನವರು ಹಾಗೂ ನಾನು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಎಲ್ಲರೂ ಸೇರಿ ಇದನ್ನು ತಂದಿದ್ದೇವೆ. ಈ ಸಂದರ್ಭದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ, ಈ ಕ್ರಮದಿಂದ ಸರ್ಕಾರಕ್ಕೆ ಸ್ವಲ್ಪ ಮಟ್ಟಿಗೆ ಹೊರೆ ಆದರೂ ಕೂಡ ಶಾಸಕರಿಗೆ ಕನಿಷ್ಟ ಪ್ರಮಾಣದ ವೇತನ ಹಾಗೂ ಭತ್ಯೆ ಕೊಡಬೇಕೆಂದು ಅವರನ್ನು ಕೇಳಿಕೊಂಡಾಗ ಅವರು ಕೂಡ ಬಹಳ ಧಾರಾಳ ಮನಸ್ಸಿನಿಂದ ಒಪ್ಪಿದ್ದಾರೆ. ಈ ವಿಷಯವನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದಾಗ ಅವರು ಕೂಡ, ಶಾಸಕರಿಗೆ ಕೊಡಬೇಕಾದುದು ಅಗತ್ಯವಿದೆ ಎಂದು ಅವರು ಒಪ್ಪಿದ್ದಾರೆ. ಆದ್ದರಿಂದ ನಾವು ಈ ವಿಧೇಯಕವನ್ನು ಎಲ್ಲರೂ ಸೇರಿ ತಂದಿರುವುದರಿಂದ,.. ಇದು ಸದನದ ವಿಧೇಯಕ, ಸರ್ಕಾರದ ವತಿಯಿಂದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿ ಈ ವಿಧೇಯಕವನ್ನು ತಂದಿದ್ದರೂ ಕೂಡ ಇದು ಸದನದ ವಿಧೇಯಕವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಾ, ಇದರಲ್ಲಿ ಒಂದು ಟೈಪೊಗ್ರಫಿಕಲ್ ಎರರ್ ಆಗಿದೆ. ಸ್ವಲ್ಪ ಮಟ್ಟಿಗೆ ನಾವು ತೀರ್ಮಾನ ಮಾಡಿದ್ದು

ಎಂದು ಕಾಣುತ್ತದೆ... ಅಮೆಂಡ್‌ಮೆಂಟ್ ಆಫ್ ಸೆಕ್ಷನ್ 2ರಲ್ಲಿ ಅದು ಪುಟ 4 ಕರ್ನಾಟಕ ಲೆಜಿಸ್ಲೇಚರ್ಸ್ ಸ್ಯಾಲರೀಸ್ ಬಿಲ್‌ನಲ್ಲಿ ಒಂದು ಟೈಪಿಂಗ್ ಎರರ್ ಆಗಿದೆ.. In clause (a) for the words Rs. 4.50, the word Rs. 5-00 is stated. It should be read as Rs. 6-00 There is some error. It should be read as Rs. 6/- only. ಆದ್ದರಿಂದ, ಈ ಸದನ ಇದಕ್ಕೆ ಬೇಕಾಗಿರತಕ್ಕ ಸಂಪೂರ್ಣ ಬೆಂಬಲವನ್ನು ಈ ಹಿಂದೆಯೇ ಸೂಚಿಸಿದ್ದಾರೆ. ಆದ್ದರಿಂದ ಇದಕ್ಕೆ ಮಂಜೂರಾತಿಯನ್ನು ಕೊಡಬೇಕಾಗಿ ವಿನಂತಿ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, ''1997ನೇ ಸಾಲಿನ ಕರ್ನಾಟಕ ವಿಧಾನ ಮಂಡಲದವರ ವೇತನಗಳ, ನಿವೃತ್ತಿ ವೇತನ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ರಿಂದ 13 ರವರೆಗೆ.

ಅಧ್ಯಕ್ಷರು: ''ಖಂಡ 2 ರಿಂದ 13 ರವರೆಗೆ, ಎರಡು ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.''

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

(ಖಂಡ 2 ರಿಂದ 13ರವರೆಗೆ, ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ ''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ, ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವ ಅಂಗೀಕಾರ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ವಿಧಾನಮಂಡಲದವರ ವೇತನಗಳ, ನಿವೃತ್ತಿ ವೇತನಗಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೊರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ 1997ರ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿಗಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಈ) ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ವಿಧೇಯಕ, 1997 ಪರ್ಯಾಲೋಚನಾ ಪ್ರಸ್ತಾವ

+ ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಈ ವರ್ಷದ ನನ್ನ ಬಜೆಟ್ ಭಾಷಣದಲ್ಲಿ ಹೇಳಿದ್ದೇನೆ. ಮೊದಲನೆ ತಿದ್ದುಪಡಿ ಏನೆಂದರೆ, ಮದ್ಯಪಾನೀಯಗಳಿಗೆ 60 ಪರ್ಸೆಂಟ್ ಎಂದು 1-4-97ರ ಬಜೆಟ್ ಭಾಷಣದಲ್ಲಿ ಹೇಳಿದ್ದೇನೆ. ಏಕೆಂದರೆ 50 ಪರ್ಸೆಂಟ್ ಹಾಗೂ ಏಳೂವರೆ ಪರ್ಸೆಂಟ್ ಸರ್ಚಾರ್ಜ್ ಇತ್ತು. ಸರ್ಚಾರ್ಜ್ ತೆಗೆದುಹಾಕಿದ ಮೇಲೆ ಅದನ್ನು 60 ಪರ್ಸೆಂಟ್ ಎಂದು ಟ್ಯಾಕ್ಸ್ ಮಾಡಿದ್ದೇವೆ. ಅದು ತಿದ್ದುಪಡಿಯಾಗಿರಲಿಲ್ಲ. 50 ಪರ್ಸೆಂಟ್ ಎನ್ನುವುದು ಹಾಗೆ ಉಳಿದುಕೊಂಡಿತ್ತು, 60 ಪರ್ಸೆಂಟ್ ಎಂದು ಮಾಡಿದ್ದೇವೆ, ಇದನ್ನು ಬಜೆಟ್‌ನಲ್ಲಿ ಹೇಳಿದ್ದೇನೆ. ಇದಕ್ಕೆ ಸಂಬಂಧಪಟ್ಟಂತೆ. ನಂತರ ಎರಡನೇಯದು, 5ಲಕ್ಷದವರೆಗೆ ಸಣ್ಣ ವ್ಯಾಪಾರಗಾರರಿಗೆ ಕಾಂಪೋಸಿಷನ್ ಸ್ಕೀಮ್ ತೆಗೆದುಕೊಂಡು ಬಂದು, ಆ ಸ್ಕೀಮ್ ಮಾಡುವಾಗ ಇದರಲ್ಲಿ ಪರ್ಚೇಸ್ ಟ್ಯಾಕ್ಸ್ ಬಿಟ್ಟು ಹೋಗಿತ್ತು. ಇದನ್ನು ಸೇರಿಸುವ ಸಲುವಾಗಿ ಸೆಕ್ಷನ್ 6ರಲ್ಲಿ ಅಳವಡಿಸತಕ್ಕದ್ದು. ಇದು ಕೂಡ ಬಜೆಟ್‌ನಲ್ಲಿ ಹೇಳಿರುವಂತೆ ಅನುಗುಣವಾಗಿ ಮಾಡಲಾಗಿದೆ. ಮತ್ತೊಂದು ಮೂರನೇ ತಿದ್ದುಪಡಿ ಏನೆಂದರೆ, ಪಬ್ಲಿಕ್ ಅಂಡರ್ ಟೇಕಿಂಗ್, ಸ್ಟೇಟ್ ಗೌರ್ನಮೆಂಟ್ ಅಂಡರ್ ಟೇಕಿಂಗ್, ಸೆಂಟ್ರಲ್ ಗೌರ್ನಮೆಂಟ್ ಅಂಡರ್ ಟೇಕಿಂಗ್, ಕಾಂಟ್ರಾಕ್ಟ್ ಟ್ಯಾಕ್ಸ್ ಬಗ್ಗೆ ಅದರಲ್ಲಿ ಜಾಯಿಂಟ್ ಸೆಕ್ಟರ್ ಎನ್ನುವ ಪದ ಬಿಟ್ಟು ಹೋಗಿತ್ತು, ಈ ತಿದ್ದುಪಡಿಯಲ್ಲಿ ಅದನ್ನು ಸೇರಿಸಲಾಗಿದೆ. ನಂತರ ಫಾರಂ ನಂಬರ್ 39, ಇದಕ್ಕೆ ಕಾಟನ್ ಮತ್ತು ರೆಕ್ಟಿಫೈಡ್ ಸ್ಪಿರಿಟ್ ಇದರಲ್ಲಿ

ಇರಲಿಲ್ಲ. ಇವುಗಳನ್ನು ಕೂಡ ಇದರಲ್ಲಿ ಸೇರಿಸಿದ್ದೇವೆ. ಹಾಗೂ ಫೈನ್ 250 ರೂಪಾಯಿಂದ 500 ರೂಪಾಯಿವರೆಗೆ ಮಾಡಿರುವುದು ಇದು ಬಿಟ್ಟು ಹೋಗಿರುವುದರಿಂದ ಅದನ್ನು ಬಿಲ್‌ನಲ್ಲಿ ತಂದಿದ್ದೇವೆ. ನಾವು ಕಾಫಿಗೆ 6 ಪರ್ಸೆಂಟ್‌ನಿಂದ 4 ಪರ್ಸೆಂಟ್ ಕಡಿಮೆ ಮಾಡಿದ್ದೇವೆ, ಅದು ಥರ್ಡ್ ಶೆಡ್ಯೂಲ್‌ನಲ್ಲಿ ಅಮೆಂಡ್‌ಮೆಂಟ್ ಆಗಲಿಲ್ಲ. ಇದಕ್ಕಾಗಿ ಇದರಲ್ಲಿ ಈ ತಿದ್ದುಪಡಿಯನ್ನು ಸೇರಿಸಲಾಗಿದೆ. ಸಿನಿಮಾಕ್ಕೆ ಸಂಬಂಧಪಟ್ಟ ಹಾಗೆ ಸೀಲಿಂಗ್ ಸಿಸ್ಟಮ್‌ನ್ನು ನಾವು ತೆಗೆದುಕೊಂಡು ಬಂದೆವು. ಹಿಂದೆ ಎರಡು ವರ್ಷಗಳಿಂದಿದ್ದ ಸ್ಲ್ಯಾಬ್ ಸಿಸ್ಟಮ್‌ನ್ನು ತೆಗೆದು ಹಾಕಿ ಸೀಲಿಂಗ್ ಸಿಸ್ಟಮ್‌ನ್ನು ತೆಗೆದುಕೊಂಡು ಬಂದೆವು. ಹಳೆಯ ಪದ್ಧತಿ ಸೀಲಿಂಗ್ ಸಿಸ್ಟಂ ಎಷ್ಟಿತ್ತು, ಅದರಲ್ಲಿ 55 ಪರ್ಸೆಂಟ್ ಸರ್‌ಚಾರ್ಜ್ ಮತ್ತು 55 ಪರ್ಸೆಂಟ್ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಇವೆರಡೂ ಸೇರಿ 110 ಪರ್ಸೆಂಟ್ ಟ್ಯಾಕ್ಸ್ ಆಯಿತು. ಹಾಗಾಗಿ ಇವತ್ತು ಸರ್ಚಾರ್ಜ್ ಎಲ್ಲಾ ತೆಗೆಯಬೇಕೆಂಬುದು ನೀತಿಯಾದುದರಿಂದ, ಸರ್ಚಾರ್ಜನ್ನು ತೆಗೆದು ಹಾಕಿ, ಬೇಸಿಕ್ ಟ್ಯಾಕ್ಸ್‌ನ್ನೇ, ಎಂಟರ್‌ಟೈನ್‌ಮೆಂಟ್ ಟ್ಯಾಕ್ಸನ್ನೇ 70 ಪರ್ಸೆಂಟ್ ಮಾಡಬೇಕೆನ್ನತಕ್ಕಂಥಾದ್ದು. 110 ಪರ್ಸೆಂಟ್ ಇದೆ, ಅದು 70 ಪರ್ಸೆಂಟ್. ಕಾರಣ ಏನೆಂದರೆ, ಇವತ್ತು ಕನ್ನಡ ಮತ್ತು ತುಳು ಇದಕ್ಕೆಲ್ಲಾ ಸಂಪೂರ್ಣತೆರಿಗೆ ವಿನಾಯಿತಿಯನ್ನು ಕೊಟ್ಟಿದ್ದೇವೆ. ಬೇರೆ ಭಾಷೆಯ ಚಿತ್ರಗಳಿಗೆ, 110 ಪರ್ಸೆಂಟ್ ಟ್ಯಾಕ್ಸ್ ಬಹಳ ದುಬಾರಿಯಾಗುತ್ತದೆಂದು, ಜನರಿಂದ ಮನವಿಗಳು ಮತ್ತು ಎಕ್ಸಿಹಿಬಿಟರ್ಸ್ ಅಸೋಸಿಯೇಷನ್‌ನಿಂದ ಮನವಿಗಳು ಬಂದವು. ಇವತ್ತು ಸಿನಿಮಾ ಥಿಯೇಟರುಗಳಿಗೆ ಹೋಗತಕ್ಕಂಥವರು ಕಡಿಮೆಯಾಗಿದ್ದಾರೆ. ಏಕೆಂದರೆ ಸುಮಾರು 40-45 ರೂಪಾಯಿ ಆಗುತ್ತದೆ. 25 ರೂಪಾಯಿ, ಟಿಕೆಟ್ ಬೆಲೆಯಾದರೆ, ಅದಕ್ಕಿಂತ ಹೆಚ್ಚಾಗಿ ಟ್ಯಾಕ್ಸ್ ಆಗುತ್ತದೆ ಎನ್ನುವ ಕಾರಣಕ್ಕಾಗಿ ಮಾಡಿರುತ್ತೇವೆ. ಬೇರೆ ರಾಜ್ಯಗಳಲ್ಲೂ ಕೂಡ ಬೇಸಿಕ್‌ಟ್ಯಾಕ್ಸ್ 70 ಪರ್ಸೆಂಟ್ ಇದೆ. ಆ ಕಾರಣಕ್ಕೋಸ್ಕರವಾಗಿ, ಅದಕ್ಕೆ ಪ್ಯಾರಿಟಿ ತರಬೇಕೆಂಬ ಕಾರಣದಿಂದ ಮತ್ತು ಈ ಎಲ್ಲಾ ಕಾರಣಕ್ಕೋಸ್ಕರ ಇದನ್ನು 110 ಪರ್ಸೆಂಟ್‌ನಿಂದ ಸರ್ಚಾರ್ಜ್ ತೆಗೆದುಹಾಕುತ್ತಿದ್ದೇವೆ. 55 ಪರ್ಸೆಂಟ್ ಸರ್ಚಾರ್ಜ್ 55ಪರ್ಸೆಂಟ್ ಬೇಸಿಕ್ ಚಾರ್ಜ್. ಆ ಬೇಸಿಕ್ ಚಾರ್ಜ್‌ನ್ನು 70ಕ್ಕೆ ಮಾಡಿ, ಸರ್ಚಾರ್ಜನ್ನು ತೆಗೆದು ಹಾಕುತ್ತಿದ್ದೇವೆ. ಹಾಗಾಗಿ, ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಬಗ್ಗೆ ಇದೂ ಒಂದು ತಿದ್ದುಪಡಿ. ಇದಕ್ಕೆ ಸಂಬಂಧಪಟ್ಟಂತೆ ಬೇರೆ ತಿದ್ದುಪಡಿಗಳೂ ಇವೆ. ಅಗ್ರಿಕಲ್ಚರ್ ಇನ್‌ಕಮ್ ಟ್ಯಾಕ್ಸ್‌ಗೆ ಹೈಕೋರ್ಟಿನಿಂದ ಇತ್ತೀಚೆಗೆ ಒಂದು ತೀರ್ಮಾನ ಬಂದಿದೆ. ಈ ಪಾರ್ಟ್‌ನರ್‌ಷಿಫ್ ಫರ್ಮ್‌ಗಳು ಡಿಸ್‌ಕಂಟಿನ್ಯೂ ಆದರೆ, ಡಿಸ್‌ಕಂಟಿನ್ಯೂಡ್ ಎನ್ನುವ ಪದ ಇತ್ತು. ಡಿಸಾಲ್ವ್ಡ ಎನ್ನುವ ಪದ ಸೇರಿರಲಿಲ್ಲ. ಈ ಪದ ಪ್ರಯೋಗದಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇತ್ತು. ಆ ಕಾರಣದಿಂದ, ಹೈಕೋರ್ಟ್ ತೀರ್ಮಾನದ ಪ್ರಕಾರ, ಡಿಸ್ಸಾಲ್ವ್ಡ ಎನ್ನುವ ಪದವನ್ನು ಸೇರಿಸುತ್ತಾ ಇದ್ದೇವೆ. ಇದು ಹೈಕೋರ್ಟಿನಿಂದ ಉದ್ಭವವಾಗಿರತಕ್ಕಂತಾದ್ದು. ಇವಿಷ್ಟೂ ಸರಳವಾದಂಥ ತಿದ್ದುಪಡಿಗಳು. ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಮಾನ್ಯ ಸದಸ್ಯರುಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

(ಉಪಾಧ್ಯಕ್ಷರಾದ ಶ್ರೀ ಚಂದ್ರಶೇಖರ್ ಎಂ.ಮಾಮನಿ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಎಂಟರ್ ಟೈನ್‌ಮೆಂಟ್ ಟ್ಯಾಕ್ಸ್ ರಿಡಕ್ಷನ್ ಮಾಡಿರುವ ಬಗ್ಗೆ ಏನು ಹೇಳಿದ್ದಾರೆ, ಅದರ ಜೊತೆಯಲ್ಲಿ ಉಳಿದಂಥ ಸಮಸ್ಯೆ ಏನಿತ್ತು, ಇದನ್ನು ನೀವು ಮಾಡಿದಿರಿ. ಇದನ್ನು ಒಂದು ವರ್ಷ ಪೂರ್ಣ ಪ್ರಾಯೋಗಿಕವಾಗಿ ಮುಂದುವರಿಸಿ ಆಮೇಲೆ ಬೇರೆಯವರಿಗೆ ಏನಾದರೂ ಇಳಿಸತಕ್ಕಂತಾದ್ದು ಮಾಡಬೇಕು. ಹಿಂದಿ ಚಿತ್ರ ನಡೆಸತಕ್ಕಂಥವರು, ಬೇರೆ ಬೇರೆ ಥಿಯೇಟರಿನವರ ಸಮಸ್ಯೆ ಏನಿತ್ತು, ಅದರ ಬಗ್ಗೆಯೂ ಯೋಚನೆ ಮಾಡಬೇಕು. ಅವರ ಮಾತು ಕೇಳಿ, ಪುನಃ ಇದಕ್ಕೆ ವ್ಯತ್ಯಾಸ ಮಾಡಬೇಡಿ ಎಂಬ ಒಂದು ಬೇಡಿಕೆ ಇತ್ತು. ಅದಕ್ಕಾಗಿ, ಅದನ್ನು ದಯವಿಟ್ಟು ಪುನರ್ ಪರಿಶೀಲನೆ ಮಾಡುವುದಕ್ಕೆ ಹೋಗಬಾರದು. ಪರ್ಟಿಕ್ಯುಲರ್ಲಿ ಬಾರ್ಡರ್ ಏರಿಯಾದಲ್ಲಿ ಏನಾಗಿದೆ ಎಂದರೆ, ನೀವು ಅದನ್ನು ಈಗ ತರುತ್ತೀರೋ, ಮತ್ತೊಮ್ಮೆ ವಿಚಾರ ಮಾಡುತ್ತೀರೋ ಹೇಳಿ. ಉದಾಹರಣೆಗೆ ಬಾರ್ಡರ್ ಏರಿಯಾದಲ್ಲಿರತಕ್ಕ ಮಾರ್ಕೆಟಿಂಗ್ ಎ.ಪಿ.ಎಂ.ಸಿ.ಗಳೇನಿವೆ, ಅಲ್ಲಿ ಅನೇಕ ಟ್ಯಾಕ್ಸ್‌ಗಳು ಬರುತ್ತವೆ. ಬೆಲ್ಲ ಇರಬಹುದು, ತೊಗರಿ ಇರಬಹುದು, ಅಥವಾ ಬೇರೆ ಇತರೆ ಸಾಮಾನುಗಳು ಯಾವುದು ಮಾರ್ಕೆಟ್ಟಿಗೆ ಬರುತ್ತವೆ, ಆ ಮಾರ್ಕೆಟ್ಟಿನಲ್ಲಿ ನಾವು ಹಾಕಿದಂಥ ಟ್ಯಾಕ್ಸ್‌ಸ್, ನಮ್ಮ ಪಕ್ಕದಲ್ಲಿ ಅಂದರೆ ಸೋಲಾಪುರ ಇರಬಹುದು, ಕೊಲ್ಲಾಪುರ ಇರಬಹುದು, ಸಾಂಗ್ಲಿ ಇರಬಹುದು, ಉಸ್ಮಾನಾಬಾದ್ ಇರಬಹುದು, ಲಾತೂರು ಇರಬಹುದು ಈ ಕಡೆ ಇರತಕ್ಕಂಥ ಮಾರ್ಕೆಟ್‌ಗಳನ್ನು, ಮಹಾರಾಷ್ಟ್ರಕ್ಕೆ ಹೋಲಿಸಿದಾಗ ಸುಮಾರು ನೂರಕ್ಕೆ 2-3 ರೂಪಾಯಿ ವ್ಯತ್ಯಾಸ ಇದೆ. ಆಗ ಏನಾಗುತ್ತದೆ, ಎಲ್ಲಾ ಜನರೂ ಆ ಕಡೆ ಮಾರ್ಕೆಟ್ಟಿಗೆ ಹೋಗತಕ್ಕಂತಾದ್ದು, ಅಥವಾ ಖರೀದಿ ಮಾಡಿಕೊಂಡು ಹೋಗತಕ್ಕಂತಾದ್ದು ನಡೆದಿದೆ. ಅದರಿಂದ ನಮಗೆ ಕೋಟ್ಯಾಂತರ ರೂಪಾಯಿ ಲುಕ್ಸಾನಾಗುತ್ತದೆ. ನಿಮಗೆ ಅಷ್ಟೊಂದು ಆಗುವುದಿಲ್ಲವೆಂದು ಅನ್ನಿಸುತ್ತಿರಬಹುದು. ಏಕೆಂದರೆ, ಅವರು ಹೆಚ್ಚು ಖರೀದಿ ಏಕೆ ಮಾಡುತ್ತಾರೆಂದರೆ, ಅಲ್ಲಿ 3 ರೂಪಾಯಿ ಕಡಿಮೆ ಸಿಗುತ್ತದೆಂದರೆ, ನ್ಯಾಚುರಲಿ ಅಲ್ಲಿಂದಲೇ ಖರೀದಿ ಮಾಡಿಕೊಂಡು ಬರುತ್ತಾರೆ. ಹೀಗಾಗಿ ಮಾರ್ಕೆಟ್‌ಗಳಿಗೆ ಸ್ವಲ್ಪ ಅಫೆಕ್ಟ್ ಆಗಿ ಟ್ರಾನ್ಸ್‌ಕ್ಷನ್‌ಗೆ ತೊಂದರೆಯಾಗಿದೆ. ಅದಕ್ಕಾಗಿ ಕೊನೇಪಕ್ಷ, ಈ ಫುಡ್ ಗ್ರೈನ್ಸ್ ಮೇಲೆ ಏನು 2 ಪರ್ಸೆಂಟ್ 1 ಪರ್ಸೆಂಟ್ ಟ್ಯಾಕ್ಸಸ್ ಹಾಕಿದ್ದೇವೆ, ಇದರಿಂದ ಅಂತಹ ಜಾಸ್ತಿ ಹಾನಿಯೇನೂ ಇಲ್ಲ. ಇದೇ ಸಮಯದಲ್ಲಿ ನಮ್ಮ ಬಿಸಿನೆಸ್ ಕೂಡ ಡೈವರ್ಟ್ ಆಗಬೇಕು. ಆ ದೃಷ್ಟಿಯಿಂದ ತಾವೇನಾದರೂ ಇದರ ಬಗ್ಗೆ ಪುನರ್ ಪರಿಶೀಲನೆ ಮಾಡುತ್ತೀರಾ ಅಥವಾ ಹೇಗೆ ಎಂದು ನಾನು ಕೇಳುತ್ತೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಉಪಾಧ್ಯಕ್ಷರೆ, ಈ ತಿದ್ದುಪಡಿಯಲ್ಲಿ ಒಂದು ಆಶ್ಚರ್ಯ ತರುವಂಥಾದ್ದು ಏನೆಂದರೆ, ಈ ಉದ್ದೇಶಿತ

ಕ್ರಮದಿಂದ ಸುಮಾರು ಪ್ರತಿ ವರ್ಷ 22 ಕೋಟಿ ರೂಪಾಯಿ ಆದಾಯ ನಷ್ಟವಾಗುತ್ತದೆ ಎಂದು ಹೇಳಿದ್ದಾರೆ. ನಿಮ್ಮ ಬಜೆಟ್‌ನಲ್ಲೂ ಕೂಡ ಇಷ್ಟು ದೊಡ್ಡ ಪ್ರಮಾಣದಲ್ಲಿ ಅವರಿಗೆ ರಿಯಾಯಿತಿ ಕೊಡುವುದರಿಂದ, ಬೊಕ್ಕಸಕ್ಕೆ ಬರುವುದು ನಷ್ಟವಾಗುತ್ತದೆ ಎನ್ನುವುದಿಲ್ಲ. ಇದರಬಗ್ಗೆ ಅಂಕಿ ಅಂಶಗಳನ್ನು ಕೊಡುತ್ತೀರಾ? 22ಕೋಟಿ ರೂಪಾಯಿ ನೀವು ಹೇಗೆ ರಿಯಾಯಿತಿ ಕೊಡುತ್ತೀರಿ, ಇದು ಹೇಗೆ ಸಾಧ್ಯವಾಗುತ್ತದೆ ಎಂಬುದು ಅರ್ಥವಾಗುತ್ತಿಲ್ಲ.

ಶ್ರೀ ಸಿದ್ಧರಾಮಯ್ಯ: ಮೊದಲು ಸ್ಲ್ಯಾಬ್ ಸಿಸ್ಟಂನಲ್ಲಿ 25 ರಿಂದ 35 ಪರ್ಸೆಂಟ್‌ವರೆಗೆ ಟ್ಯಾಕ್ಸ್ ಇತ್ತು. ಈ ವರ್ಷ ನಾವು ಎಲ್ಲಾ ಕಮಾಡಿಟೀಸ್ ಮೇಲೆ ಸರ್ಚಾರ್ಜ್ ತೆಗೆದುಹಾಕಿದೆವು. ಇದರಿಂದ ಒಟ್ಟು 200 ಕೋಟಿ ನಷ್ಟವಾಗುತ್ತದೆಂದು ನಮ್ಮ ಬಜೆಟ್ಟಿನಲ್ಲಿಯೇ ಹೇಳಿದ್ದೇವೆ. ಈ ಸರ್‌ಚಾರ್ಜ್, ಎಂಟರ್‌ಟೈನ್‌ಮೆಂಟ್ ಟ್ಯಾಕ್ಸನಲ್ಲಿದ್ದಂಥ, ಸಿನಿಮಾ ಟಿಕೆಟ್ ಮೇಲೆ, ಇದ್ದಂಥ ಸರ್ಚಾರ್ಜ್ ತೆಗೆದಿಲ್ಲ. ಏಕೆಂದರೆ, ನಮ್ಮ ಹಳೆಯ ಪದ್ಧತಿ, ಕಳೆದ ಮೂರು ವರ್ಷದಿಂದ ಇದ್ದ ಪದ್ಧತಿ ಹೋದಮೇಲೆ, 110 ಪರ್ಸೆಂಟ್ ಟ್ಯಾಕ್ಸ್ ಇದೆ. ಬೇರೆ ಯಾವ ರಾಜ್ಯದಲ್ಲೂ ಇಷ್ಟು ಪರ್ಸೆಂಟ್ ಇಲ್ಲ. ಬೇರೆ ರಾಜ್ಯಗಳಲ್ಲಿ 60-70 ಪರ್ಸೆಂಟ್ ಟ್ಯಾಕ್ಸ್ ಇದೆ. ಇದು ಇದ್ದಕ್ಕಿದ್ದ ಹಾಗೆ 25-30 ಪರ್ಸೆಂಟ್ ದುಬಾರಿಯಾಯಿತು. ಮತ್ತು ಟಿಕೆಟ್ ಬೆಲೆ ಕೂಡ ಎರಡು ಪಟ್ಟು ಜಾಸ್ತಿಯಾಯಿತು ಹಾಗಾಗಿ, ದೊಡ್ಡ ಮನವಿಗಳು, ಇದನ್ನು ಕಡಿಮೆ ಮಾಡಬೇಕೆಂದು ಬೇರೆ ಬೇರೆ ಕಡೆಯಿಂದ ಗಲಾಟೆಗಳೂ ನಡೆದವು. ಇದು ಬಂದಮೇಲೆ, ಇವತ್ತಿನಿಂದ ಈಚೆಗೆ ಜಾರಿಗೆ ಬರುತ್ತದೆ. ಬಾಕಿ ಹೇಳಿದ್ದೆಲ್ಲಾ 1-4-97ನಿಂದ ಬರುತ್ತವೆ. ಏಕೆಂದರೆ, ಅದು ಬಜೆಟ್‌ನಲ್ಲಿಯೇ ಹೇಳಿದ್ದು. ಇದು ಮಾತ್ರ ಮುಂದಿನ ತಿಂಗಳಿಂದ ಜಾರಿಗೆ ಬರುತ್ತದೆ. ಆದ್ದರಿಂದ ಇದು 22 ಕೋಟಿ ನಷ್ಟವಾಗಬಹುದು ಎನ್ನತಕ್ಕಂತಾದ್ದು ಅಷ್ಟು ಅಂದಾಜು ಮಾಡಬಹುದು. ಏಕೆಂದರೆ, 110 ಪರ್ಸೆಂಟ್‌ನಿಂದ 40 ಪರ್ಸೆಂಟ್ ಕಡಿಮೆಯಾಗಿ, 70 ಪರ್ಸೆಂಟ್ ಆಗುತ್ತದೆ; ಇದರಿಂದ ಅಷ್ಟು ಆಗಬಹುದು, ಉಳಿದ ಆರು ತಿಂಗಳಲ್ಲಿ ಎಂಬ ಎಕ್ಸ್‌ಪೆಕ್ಟೇಷನ್ ಇದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ): ಪುಟ-2, 3ನೇ ಷೆಡ್ಯೂಲ್‌ನಲ್ಲಿ 6 ಪರ್ಸೆಂಟ್‌ನಿಂದ 4 ಪರ್ಸೆಂಟ್‌ಗೆ ರೆಡ್ಯೂಸ್ ಮಾಡಿದ್ದೀರಿ, ಇದಕ್ಕೆ ಕಾರಣ ಕೊಟ್ಟಿಲ್ಲ. ಇದಕ್ಕೆ ವಿವರಣೆಯನ್ನೂ ಕೊಟ್ಟಿಲ್ಲ. In Page, 2, Clause 6 3rd Schedule, entries relating to Serial Number 3, in Col.3 for the word 6%, the word 4% shall deem to have been substituted w.e.f the first day of April 1997.

ಶ್ರೀ ಸಿದ್ಧರಾಮಯ್ಯ: ಕಾಫಿಗೆ 6 ಪರ್ಸೆಂಟಿನಿಂದ 4 ಪರ್ಸೆಂಟಿಗೆ ಇಳಿಸಿದ್ದೆವು. ಇದು ಆಕ್ಟ್‌ನಲ್ಲಿ ತಿದ್ದುಪಡಿಯಾಯಿತು; ಷೆಡ್ಯೂಲ್‌ನಲ್ಲಿ ತಿದ್ದುಪಡಿಯಾಗಲಿಲ್ಲ. It is already in force With effect from 1.4.97 only it is in force.

ಶ್ರೀಮತಿ ಪ್ರಮೀಳಾ ನೇಸರ್ಗಿ: ಸಭಾಧ್ಯಕ್ಷರೇ, Amendment of Section 30 of Karnataka Entertainment Tax Act, 1958, ಇದರಲ್ಲಿ ನಮಗೇನು ಆಶ್ಚರ್ಯವಾಗುತ್ತದೆಂದರೆ, ನೀವು ಎಲ್ಲಾದಕ್ಕೂ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಹಾಕಿದಿರಿ. ಸಂಗೀತಕ್ಕೆ, ನಾಟಕಕ್ಕೆ, ಸಿನಿಮಾಗೆ ಹಾಕಿದಿರಿ. ಆದರೆ, ಆ ಫ್ಯಾಷನ್ ಪರೇಡ್ ಬಂತಲ್ಲಾ, ಆಗ ನಾವು ಲೆಟರ್ ಕೊಟ್ಟರೆ, ನಿಮ್ಮ ಸೇಲ್ಸ್ ಟ್ಯಾಕ್ಸ್ ಆಫೀಸರು, ಇದು ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಆಗುವುದಿಲ್ಲ; ಹಾಕುವುದಕ್ಕೆ ಬರುವುದಿಲ್ಲ. It does not come within the definition ಎಂದು ಕೊಟ್ಟರು. ಬಾಂಬೆಯಲ್ಲಿ ಜಾಕ್‌ಸನ್ ಮ್ಯೂಸಿಕ್ ಹಾಕಿದಾಗ, ಅಲ್ಲಿ ದುಡ್ಡು ವಸೂಲು ಮಾಡಿದರು. ಇದು ಏನೆಂದು ನಮಗೆ ಅರ್ಥವಾಗುವುದಿಲ್ಲ. ಯಾರು ಬೇಕಾದರೂ ಬಂದು, ಏನು ಬೇಕಾದರೂ ಪ್ರದರ್ಶನ ಮಾಡಿಕೊಂಡು ಹೋಗಬಹುದು. ಅವರಿಗೆ ಟ್ಯಾಕ್ಸ್ ಇಲ್ಲ. You call it an entertainment. You give exemption. ಅದಕ್ಕೆ ತಾವು ಟ್ಯಾಕ್ಸೇ ಹಾಕುವುದಿಲ್ಲವೇ?

ಶ್ರೀ ಸಿದ್ಧರಾಮಯ್ಯ: ಕಾನೂನು ಪ್ರಕಾರ ಮಾಡುವುದಕ್ಕೆ ಮತ್ತು ಅದು ನಡೆಸುವುದಕ್ಕೆ ಆಗತಕ್ಕ ಖರ್ಚು ಬಿಲ್ಸ್‌ನಲ್ಲಿ ಕೊಟ್ಟಿದ್ದೇವೆ. ಆ ತರಹ ಸನ್ನಿವೇಶ ಬಂದರೆ, ಟ್ಯಾಕ್ಸ್ ಹಾಕುವುದಕ್ಕೆ ನಮ್ಮ ಅಡ್ವೈಸ್ ತೆಗೆದುಕೊಳ್ಳುತ್ತಾರೆ.

4.00 ಪಿ.ಎಂ

ಶ್ರೀಮತಿ ಪ್ರಮೀಳಾ ನೇಸರ್ಗಿ: ಫ್ಯಾಷನ್ ಪೆರೇಡ್ ಎಂದು ಮಾಡುತ್ತಲೇ ಇದ್ದಾರೆ ಅದಕ್ಕೂ ಸಹ ತೆರಿಗೆಯನ್ನು ಹಾಕಬೇಕು.

ಶ್ರೀ ಸಿದ್ಧರಾಮಯ್ಯ: ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಪಕ್ಕದ ರಾಜ್ಯದಲ್ಲಿ ತೆರಿಗೆ ಕಡಿಮೆ ಇದೆ,

ಉಪಾಧ್ಯಕ್ಷರು: ಕೆಲವು ಆಹಾರಧಾನ್ಯಗಳು ಮಹಾರಾಷ್ಟ್ರದ ಮಾರುಕಟ್ಟೆಗೆ ಇದರಿಂದಾಗಿ ವರ್ಗವಾಗಿಬಿಟ್ಟಿವೆ. ಆದ್ದರಿಂದ ಅಕ್ಕಪಕ್ಕದ ರಾಜ್ಯಗಳಲ್ಲೇನು ತೆರಿಗೆ ಇರುತ್ತದೆ ಸ್ವಲ್ಪಹೆಚ್ಚು ಕಮ್ಮಿ ನಮ್ಮಲ್ಲೂ ಇರಬೇಕಾಗುತ್ತದೆ.

ಶ್ರೀ ಸಿದ್ಧರಾಮಯ್ಯ: ಮಹಾರಾಷ್ಟ್ರದವರು ಉದ್ದೇಶಪೂರ್ವಕವಾಗಿಯೇ ತೆರಿಗೆಯನ್ನು ಕಡಿಮೆ ಮಾಡುತ್ತಾರೆ. ಎಲ್ಲಾ ವ್ಯಾಪಾರ ಅಲ್ಲಿ ಆಗಬೇಕೆಂದು ಮಾಡುತ್ತಾರೆ. ಬೇರೆ ಮೂಲಗಳಿಂದ ಅವರಿಗೆ ಸಾಕಷ್ಟು ಆದಾಯವಿದೆ. ಇದರ ಆದಾಯದ ಬಗ್ಗೆ ಅವರು ಅಷ್ಟಾಗಿ ಪರಿಗಣಿಸುವುದಿಲ್ಲ. ಆದರೂ ಸಹ ನಾವು ಅಕ್ಕಪಕ್ಕದ ರಾಜ್ಯಗಳಲ್ಲಿನ ತೆರಿಗೆಗೆ ಹೆಚ್ಚುಕಮ್ಮಿ ಸಮಾನವಾಗಿರುವ ಪ್ರಯತ್ನ ಮಾಡಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಆಂಧ್ರ ಮತ್ತು ಮಹಾರಾಷ್ಟ್ರ ಈ ಎರಡು

ಅಕ್ಕಪಕ್ಕದ ರಾಜ್ಯದಲ್ಲಿರುವ ತೆರಿಗೆಯೊಂದಿಗೆ ಸಮನ್ವಯಗೊಳಿಸಿದರೆ ಸುಮಾರು 12 ಜಿಲ್ಲೆಗಳು ನಮ್ಮ ರಾಜ್ಯದ್ದು ಕವರ್ ಆಗುತ್ತದೆ.

ಶ್ರೀ ಸಿದ್ಧರಾಮಯ್ಯ: ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ): ಮಾನ್ಯ ಉಪಾಧ್ಯಕ್ಷರೆ, ನಮ್ಮ ರಾಜ್ಯದ ಆದಾಯ ಜಾಸ್ತಿಯಾಗಬೇಕು ಎಂಬ ಉದ್ದೇಶದಿಂದ ನಾವು ಹೇಳುತ್ತೇವೆ. ಇದರ ಜೊತೆಗೆ ರಾಜ್ಯದಲ್ಲಿ ವ್ಯವಹಾರದ ಬೆಳವಣಿಗೆಯಾಗಬೇಕು ಎಂಬ ದೃಷ್ಟಿಯಿಂದ ಹೇಳುವುದೇನೆಂದರೆ, ನಮ್ಮ ರಾಜ್ಯದ ಸುತ್ತಲಿರುವ ಗೋವಾ, ಆಂಧ್ರ, ತಮಿಳುನಾಡು, ಮಹಾರಾಷ್ಟ್ರ, ಕೇರಳಾ ರಾಜ್ಯದ ತೆರಿಗೆ ಪಾಲಿಸಿಯಿಂದಾಗಿ ನಮ್ಮ ಗಡಿಭಾಗದ ಬಹಳಷ್ಟು ವ್ಯವಹಾರ ಅಕ್ಕಪಕ್ಕದ ರಾಜ್ಯಗಳಿಗೆ ಹೋಗುತ್ತಿದೆ. ಅದನ್ನು ತಪ್ಪಿಸುವ ನಿಟ್ಟಿನಲ್ಲಿ ತೆರಿಗೆ ಪಾಲಿಸಿಯನ್ನು ಮಾಡುವುದು ಸೂಕ್ತ. ಬೆಲ್ಲದ ಬಗ್ಗೆ, ಡೀಸೆಲ್, ಲೂಬ್ರಿಕೇಟೆಡ್ ಆಯಿಲ್ ಬಗ್ಗೆ ತಾವು ವಿಚಾರ ಮಾಡಬೇಕಾಗಿದೆ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ ''1997ರ ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು'' ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ರಿಂದ 5ರವರೆಗೆ

ಉಪಾಧ್ಯಕ್ಷರು: ''ಖಂಡ 2ರಿಂದ 5ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 5ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ ''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ, ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು ಮತ್ತು ಹಣಕಾಸು ಸಚಿವರು): ಮಾನ್ಯ ಉಪಾಧ್ಯಕ್ಷರೆ, 1997ರ ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ ''1997ರ ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಊ) ಕರ್ನಾಟಕ ಶಿಕ್ಷಣ (ತಿದ್ದುಪಡಿ) ವಿಧೇಯಕ, 1996

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಉಪಾಧ್ಯಕ್ಷರೆ, '1996 ಕರ್ನಾಟಕ ಶಿಕ್ಷಣ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಕೇಂದ್ರ ಸರ್ಕಾರವು ಕೆಲವೊಂದು ತಿದ್ದುಪಡಿಯನ್ನು ಸೂಚಿಸಿ 1990ರ ಮಸೂದೆಯನ್ನು ವಾಪಸ್ ಕಳುಹಿಸಿದೆ. ಇದರಲ್ಲಿ ಕೇಂದ್ರ ಸರ್ಕಾರ ಸೂಚಿಸಿದ ತಿದ್ದುಪಡಿಯನ್ನು ಸೇರಿಸಲಾಗಿದೆ. ಕೇಂದ್ರ ಸರ್ಕಾರವು ಎ.ಪಿ.ಸಿ.ಟಿ; ಸಿ.ಬಿ.ಎಸ್.ಇ., ಐ.ಸಿ.ಎನ್.ಇ, ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ, ಎನ್.ಸಿ.ಟಿ.ವಿ. ಮುಂತಾದ ಕೇಂದ್ರ ಸ್ವಾಮ್ಯಕೊಳಪಟ್ಟ ಶಿಕ್ಷಣ ಸಂಸ್ಥೆಗಳನ್ನು ಈ ವಿಧೇಯಕದಿಂದ ಹೊರತುಪಡಿಸಿದೆ. ಕೇಂದ್ರ ಸರ್ಕಾರದ ನಿರ್ದೇಶನದ ಪ್ರಕಾರ ಇವನ್ನು ಎಕ್ಸಕ್ಲೂಡ್ ಮಾಡುತ್ತಿದ್ದೇವೆ. ಯಾವುದೇ ಖಾಸಗಿ ಸಂಸ್ಥೆಯನ್ನು ಸರ್ಕಾರ ವಹಿಸಿಕೊಳ್ಳುವ ಬಗ್ಗೆ ಒಂದು ವರ್ಷವೆಂದು ಇತ್ತು ಅದನ್ನು ಎರಡು ವರ್ಷವೆಂದು ಮಾಡಿದ್ದೇವೆ. ದಯವಿಟ್ಟು ಇದಕ್ಕೆ ಒಪ್ಪಿಗೆ ನೀಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೆ, ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡದಿದ್ದಾಗ

ಅದನ್ನು ತಾವು ವಹಿಸಿಕೊಂಡ ಮೇಲೆ ಒಂದು ಅಥವಾ ಎರಡು ವರ್ಷಗಳವರೆಗೆ ಅಡ್ಮಿನಿಸ್ಟ್ರೇಟರ್‌ನ್ನು ಇಟ್ಟುಕೊಳ್ಳಬೇಕಾಗುತ್ತದೆ. ಏಕೆಂದರೆ, ಅಲ್ಲಿ ಅನೇಕ ಸಮಸ್ಯೆಗಳು ಇರುತ್ತದೆ. ಶಿಕ್ಷಕರ ನೇಮಕಾತಿಯಿರಬಹುದು, ಪಠ್ಯಕ್ರಮದ ಬಗ್ಗೆ ಇರಬಹುದು, ಗ್ರಾಂಟ್ಸ್‌ನ್ನು ತೆಗೆದುಕೊಳ್ಳುವ ಬಗ್ಗೆ ಇರಬಹುದು, ಇವೆಲ್ಲಾ ಸಮಸ್ಯೆ ಇರುತ್ತದೆ. ಆದ್ದರಿಂದ ಕೇವಲ ಅಡ್ಮಿನಿಸ್ಟ್ರೇಟರ್ ಆಗಿ ನೋಡಿಕೊಂಡು ಸುಮ್ಮನೆ ಕಾಲಕಳೆದು ಅದನ್ನು ಹ್ಯಾಂಡ್ ಓವರ್ ಮಾಡತಕ್ಕದಲ್ಲ. ಅದನ್ನು ಸರಿಯಾದ ರೀತಿಯಿಂದ ನಡೆಸಿ, ಆಡಿಟ್ ಮಾಡಿಸಿ, ನೋಂದಾವಣಿಯನ್ನು ಸರಿಯಾಗಿ ನೋಡಿಕೊಂಡು ಕೆಲಸ ಮಾಡಬೇಕು. ಬಹಳಷ್ಟು ಜನರು ಕಮರ್ಷಿಯಲ್ ಬೇಸಿಸ್‌ನಲ್ಲೇ ಶಾಲಾಕಾಲೇಜುಗಳನ್ನು ನಡೆಸುತ್ತಿದ್ದಾರೆ. ಆದ್ದರಿಂದ ಕನಿಷ್ಟ ಎರಡು ವರ್ಷಕ್ಕೊಮ್ಮೆಯಾದರೂ ಸೊಸೈಟೀಸ್ ಆಫ್ ರೆಜಿಸ್ಟ್ರೇಷನ್ ಆ್ಯಕ್ಟ್‌ನ ಅಡಿಯಲ್ಲಿ ರ‍್ಯಾಂಡಂ ಆಗಿ ಆಡಿಟ್ ಮಾಡಬೇಕು. ಇಂತಹ ಶಿಕ್ಷಣಸಂಸ್ಥೆಗಳ ಲೆಕ್ಕಪತ್ರಗಳನ್ನು ಆಡಿಟ್ ಮಾಡಬೇಕು. ಸೊಸೈಟಿ ರಿಜಿಸ್ಟರ್ಡ್ ಆಗಿದೆಯೋ ಇಲ್ಲವೋ, ಸದಸ್ಯರು ಜೀವಂತವಾಗಿದ್ದಾರೋ ಇಲ್ಲವೋ, ವಾರ್ಷಿಕ ಸಾಮಾನ್ಯ ಸಭೆ ಆಗುತ್ತದೋ ಇಲ್ಲವೋ, ಅಧ್ಯಕ್ಷರು, ಉಪಾಧ್ಯಕ್ಷರು ಕಾನೂನಿನ ಪ್ರಕಾರ ಆಯ್ಕೆಯಾಗಿದ್ದಾರೋ ಇಲ್ಲವೋ, ಎಂಬ ಬಗ್ಗೆ ಚೆಕ್ ಮಾಡಿದರೆ ಸಾಕಷ್ಟು ಬೋಗಸ್ ಸಂಸ್ಥೆಗಳು ನಿಂತು ಹೋಗುತ್ತದೆ, ಬೇನಾಮಿ ವ್ಯವಹಾರಗಳು ನಿಂತು ಹೋಗುತ್ತದೆ, ಆ ಕೆಲಸವನ್ನು ಮಾಡಬೇಕು. ಅಡ್ಮಿನಿಸ್ಟ್ರೇಟರ್ ಅಲ್ಲಿ ಹೋಗಿ ತನ್ನದೇ ಕೆಲಸವನ್ನು ಮಾಡಿಕೊಂಡು ಬರುವುದಾದರೆ ಸುಧಾರಣೆಯಾಗುವುದಿಲ್ಲ. ನ್ಯಾಯಯುತವಾದ ತೊಂದರೆಗಳಿದ್ದರೆ ನೇರವಾಗಿ ಸರ್ಕಾರದ ಜೊತೆ ಸಂಪರ್ಕ ಮಾಡಿ ಆ ಸಮಸ್ಯೆ ಪರಿಹಾರ ಮಾಡುವಲ್ಲಿ ಕ್ರಮ ತೆಗೆದುಕೊಳ್ಳಬೇಕು. ಜಗಳವಾಗುತ್ತದೆಂದು ಒಬ್ಬರು ಅಡ್ಮಿನಿಸ್ಟ್ರೇಟರ್‌ನ್ನು ನೇಮಕ ಮಾಡಿ ಅವರು ಕೇವಲ ಅಲ್ಲಿ ತಿಂದು ಉಂಡು, ಲಂಚ ತೆಗೆದುಕೊಂಡು ವರದಿಕೊಟ್ಟು ಅದನ್ನು ಹ್ಯಾಂಡ್ ಓವರ್ ಮಾಡಿದರೆ ಪ್ರಯೋಜನವಾಗುವುದಿಲ್ಲ. ಹಿಂದೆ ಅಡ್ಮಿನಿಸ್ಟ್ರೇಟರ್ ಹಾಕತಕ್ಕ ಪ್ರಾವಿಷನ್ ಇರಲಿಲ್ಲ. ನಾನು ಪ್ರಯತ್ನ ಮಾಡಿ, 1985-86ರಲ್ಲಿ ದೇವರಾಜ್‌ಅರಸುರವರಿದ್ದಾಗ ಸೊಸೈಟೀಸ್ ಆಫ್ ರಿಜಿಸ್ಟ್ರೇಷನ್ ಆ್ಯಕ್ಟ್‌ಗೆ ತಿದ್ದುಪಡಿಯನ್ನು ತಂದು, ಮ್ಯಾನೇಜ್‌ಮೆಂಟಿನಲ್ಲಿ ಡಿಸ್‌ಪ್ಯೂಟ್ ಇದ್ದಾಗ, ಸಂಸ್ಥೆಯನ್ನು ನಡೆಸಲು ಸಾಧ್ಯವಿಲ್ಲದಿದ್ದಾಗ, ಮಕ್ಕಳ ವಿದ್ಯಾಭ್ಯಾಸವನ್ನು ನೋಡಿಕೊಳ್ಳಲು ಅವರಿಂದ ಸಾಧ್ಯವಾಗದಿದ್ದಾಗ ಅಂಥ ಸಮಯದಲ್ಲಿ ಅಡ್ಮಿನಿಸ್ಟ್ರೇಟರ್‌ನ್ನು ಹಾಕಬೇಕೆಂದು ಮಾಡಿದ್ದೆವು. ಅದಕ್ಕೂ ಬಹಳ ವಿರೋಧ ಬಂದಿತ್ತು. ಆದರೆ ಈಗ ಕಾನೂನಿನಲ್ಲೇ ಇದಕ್ಕೆ ಅವಕಾಶವಿದೆ. ಇದು ಎಲ್ಲರಿಗೂ ಅನ್ವಯವಾಗಬೇಕು. ತಾವು ಕೇಂದ್ರ ಸರ್ಕಾರಿ ಸ್ವಾಮ್ಯದ ಶಿಕ್ಷಣ ಸಂಸ್ಥೆಗಳನ್ನು ಮಾತ್ರ ಇಲ್ಲಿ ಎಕ್ಸ್‌ಕ್ಲೂಡ್ ಮಾಡುತ್ತಿದ್ದೀರಿ. ಕೆಲವು ಶಿಕ್ಷಣ ಸಂಸ್ಥೆಯವರು ತಮ್ಮ ಹತೋಟಿಯಿಂದ ಬಿಟ್ಟುಹೋಗಬೇಕೆಂದೇ ಸಿ.ಬಿ.ಎಸ್.ಐ, ಕೇಂದ್ರ ಸರ್ಕಾರದ ಸಿಲೆಬಸ್‌ನ್ನು ಅಡ್ಯಾಪ್ಟ್ ಮಾಡಿಕೊಳ್ಳುತ್ತಿದ್ದಾರೆ. ಏಕೆಂದರೆ ತಮ್ಮ ಮಧ್ಯಪ್ರವೇಶ ವಿರಬಾರದು, ಇನ್ಸ್‌ಪೆಕ್ಷನ್ ಆಗಬಾರದು, ಎನ್ನುವ ದುರುದ್ದೇಶದಿಂದ ಆ ರೀತಿ

ಮಾಡುತ್ತಿದ್ದಾರೆ. ಏನೋ ಹೇರ್ಯಾಸ್‌ಮೆಂಟ್ ಆಗಿದೆ, ಮಕ್ಕಳಿಗೆ ಒಳ್ಳೆಯ ಶಿಕ್ಷಣವನ್ನು ಕೊಡಬೇಕು ಆದ್ದರಿಂದ ಕೇಂದ್ರ ಸರ್ಕಾರದ ಸಿಲಬಸ್‌ನ್ನು ಅಡ್ಯಾಪ್ಟ್ ಮಾಡಿಕೊಳ್ಳುತ್ತೇವೆಂದು ಹೇಳಿದರೆ ಅದೊಂದು ರೀತಿ. ಆದರೆ ಇಲ್ಲಿ ಕೆಲವು ಜನ ಏನು ಮಾಡುತ್ತಿದ್ದಾರೆ ಎಂದರೆ ನಿಮ್ಮ ಪವ್ಯೂನಿಂದ ತಪ್ಪಿಸಿಕೊಳ್ಳತಕ್ಕಂಥ ಉದ್ದೇಶ ಏನು ಎಂದರೆ ಈ ಸರ್ಕಾರದ ಕಿರಿಕಿರಿಯೇ ಬೇಡ, ಈ ರೋಸ್ಟರ್ ಸಿಸ್ಟಮ್, ರಿಸರ್ವೇಷನ್ ಮತ್ತು ಮಕ್ಕಳನ್ನು ಅಡ್ಮಿಷನ್ ಮಾಡಿಸತಕ್ಕಂಥದ್ದು ಇದೆಲ್ಲದರಿಂದಲೂ ತಪ್ಪಿಸಿಕೊಳ್ಳಬೇಕು ಎಂಬ ದೃಷ್ಟಿಯಿಂದ ಸಿ.ಬಿ.ಎಸ್.ಇ.ಗೆ ಹೋಗಿ ಇದು ಸೆಂಟ್ರಲ್ ಗೌರ್ನಮೆಂಟ್ ಕಾನೂನಿನ ಪ್ರಕಾರ ಸ್ಕೂಲ್ ನಡೆದಿದೆ. ಇದಕ್ಕೆ ತಾವು ನಿಮ್ಮ ಮಕ್ಕಳನ್ನು ಅಡ್ಮಿಶನ್ ಮಾಡಬೇಕು ಎಂಬುದೇನೂ ಇಲ್ಲ, ನಿಮ್ಮ ಕಾನೂನನ್ನು ನಾನು ಆ್ಯಕ್ಷನ್‌ನಲ್ಲಿ ತೆಗೆದುಕೊಳ್ಳಬೇಕು ಎಂಬುದೇನೂ ಇಲ್ಲ. ಅದಕ್ಕಾಗಿ ದಯಮಾಡಿ ನಮ್ಮನ್ನು ಕ್ಷಮಿಸಿ ಎಂದು ಹೇಳಿ ಒಂದು ದೊಡ್ಡ ನಮಸ್ಕಾರ ಹೊಡೆದು ಸುಮ್ಮನಿರುತ್ತಾರೆ. ನೀವೂ ಕೂಡ ಏನೂ ಮಾಡುವಂತಿಲ್ಲ. ಆದುದರಿಂದ ಕನಿಷ್ಠಪಕ್ಷ ಅವರು ಅಡ್ಮಿಷನ್ ಮಾಡಿಕೊಳ್ಳತಕ್ಕಂಥದನ್ನಾದರೂ ಹಿಡಿತದಲ್ಲಿಡತಕ್ಕಂಥದ್ದು ಆಗಬೇಕು. ನಾನು ಅವರ ಅಡ್ಮಿನಿಸ್ಟ್ರೇಷನ್‌ನಲ್ಲಿ ಇಂಟರ್‌ಫಿಯರ್ ಮಾಡಬೇಕು ಅಥವಾ ಅವರ ಕಲಿಸುವಂಥ ವ್ಯವಸ್ಥೆಯಲ್ಲಿ ಇಂಟರ್‌ಫಿಯರ್ ಮಾಡಬೇಕು ಎಂಬುದೇನೂ ಇಲ್ಲ. ಯಾವುದೇ ಏರಿಯಾದಲ್ಲಿ ತೆಗೆದುಕೊಳ್ಳಿ, ಉದಾಹರಣೆಗೆ ತಾವು ರಾಜಾಜಿನಗರದಲ್ಲಿರುತ್ತೀರಿ, ಅಲ್ಲಿ ಒಂದು ಸಿ.ಬಿ.ಎಸ್.ಇ. ಸ್ಕೂಲ್ ಇದೆ ಎಂದಿಟ್ಟುಕೊಂಡರೆ ರಾಜ್ಯದಲ್ಲಿ ಒಂದು ಸ್ಕೂಲ್ ಇದ್ದರೆ ಅಥವಾ ಒಂದು ಕಿಲೋಮೀಟರ್ ಅಕ್ಕಪಕ್ಕದಲ್ಲಿ ಅಥವಾ ಎರಡು ಕಿಲೊಮೀಟರ್ ಪಕ್ಕದಲ್ಲಿ ಇನ್ನೂ ಒಂದು ಸ್ಕೂಲ್ ಕೊಡಲಾಗುವುದಿಲ್ಲ. ಅಂದಾಗ ಕನಿಷ್ಠ ಪಕ್ಷ ಆ ಲೋಕ್ಯಾಲಿಟಿ ಹುಡುಗರಿಗಾದರೂ ಅದು ಅನುಕೂಲವಾಗಬೇಕು. ಪಕ್ಕದ ಮನೆಯವರಿಗೇ ಅವರು ಅಡ್ಮಿಷನ್ ಮಾಡಿಕೊಳ್ಳಲಿಲ್ಲ ಎಂದರೆ ಅವರು ಎಲ್ಲಿ ಹೋಗಬೇಕು? ಅದಕ್ಕೆ ಪೂನಾದಲ್ಲಿ ಮಹಾರಾಷ್ಟ್ರ ಸರ್ಕಾರದವರು ಏನು ಮಾಡಿದ್ದಾರೆ ಎಂದರೆ ಮೊದಲ ಆದ್ಯತೆ ಏನೆಂದರೆ ವಿಸಿನಿಟಿಯಲ್ಲಿರತಕ್ಕಂಥವರಿಗೆ 50 ಪರ್ಸೆಂಟ್, ಸರ್ಕಾರಿ ನೌಕರರು ಟ್ರಾನ್ಸ್‌ಫರ್ ಈ ರೀತಿಯಾಗಿ ಬಂದಂಥವರಿಗೆ 25 ಪರ್ಸೆಂಟ್ ಮತ್ತು ಇನ್ನುಳಿದ 25 ಪರ್ಸೆಂಟನ್ನು ದೂರದಿಂದ ಬರತಕ್ಕಂಥವರಿಗೆ ಎಂಬುದಾಗಿ ಅವರು ಮಾಡಿದ್ದಾರೆ. ಅಂದಾಗ ಮಾತ್ರ ನಾವು ಕೂಡ ಸ್ವಲ್ಪ ನ್ಯಾಯ ಕೊಟ್ಟಂತೆ ಆಗುತ್ತದೆ. ಇಲ್ಲದಿದ್ದರೆ ದೀಪದ ಕೆಳಗೆ ಕತ್ತಲಿದ್ದಂತೆ ಈ ಒಂದು ವ್ಯವಸ್ಥೆಯಾಗುತ್ತದೆ. ದಯವಿಟ್ಟು ಅದನ್ನು ಹಿಡಿತದಲ್ಲಿಡಿ. ಯಾವುದೇ ರೀತಿಯಾಗಿ ಅಂಥ ಸಂಸ್ಥೆಗಳಲ್ಲಿ ನಮ್ಮ ಮಕ್ಕಳಿಗೆ ಪ್ರೈಯಾರಿಟೀಸ್ ಕೊಡುವುದಕ್ಕೆ ತಾವು ಯೋಚನೆ ಮಾಡುತ್ತೀರಾ? ಇದರ ಬಗ್ಗೆ ತಾವು ಸ್ವಲ್ಪ ಹೇಳಬೇಕು ಎನ್ನತಕ್ಕಂಥ ಮಾತನ್ನು ಹೇಳಿ ಈ ಸರ್ಕಾರದ ಈ ಕಾನೂನಿನ ಅಡಿಯಲ್ಲಿ ತಪ್ಪಿಸಿಕೊಳ್ಳಬೇಕೆಂಬ ದೃಷ್ಟಿಯಿಂದ ಕೆಲವು ಜನ ಏನು ಮಾಡುತ್ತಿದ್ದಾರೆ ಅದನ್ನೂ ಕೂಡ ತಾವು ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕಾಗುತ್ತದೆ. ಇಲ್ಲದಿದ್ದರೆ ಒಂದೊಂದೇ ತಪ್ಪು ಹೋಗಿ ಕೊನೆಗೆ ಕಾನೂನು ಪುಸ್ತಕ ಮಾತ್ರ ನಮ್ಮಲ್ಲಿ ಉಳಿಯುತ್ತದೆ

ಜ್ಯೂರಿಸ್ಡಿಕ್ಷನ್ ಮಾತ್ರ ನಮ್ಮಲ್ಲಿ ಉಳಿಯುವುದಿಲ್ಲ. ಹಾಗೆ ಆಗಬಾರದು. ಅದಕ್ಕೆ ದಯಮಾಡಿ ಅದನ್ನು ನೋಡಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ): ಮಾನ್ಯ ಅಧ್ಯಕ್ಷರೆ ಮೊನ್ನೆ ಕಾನೂನು ಮಂತ್ರಿಗಳು ಹೇಳಿದರು, ನಾವು ಕನ್ನಡವನ್ನು ಮಾತ್ರ ಅಫೀಷಿಯಲ್ ಆಗಿ ಗಣನೆಗೆ ತೆಗೆದುಕೊಳ್ಳುತ್ತೇನೆ ಇಂಗ್ಲಿಷನ್ನು ನೋಡಬೇಡಿ ಎಂದು. ಇವೊತ್ತು ಕನ್ನಡದಲ್ಲಿ ಪುಟ 3ರಲ್ಲಿ ತಾವು ನೋಡಬೇಕು. ಇದೇನು ಕನ್ನಡವೂ ಅಥವಾ ನನಗೆ ಕನ್ನಡ ಅರ್ಥ ಆಗುತ್ತಿಲ್ಲವೋ ಏನೋ ಗೊತ್ತಿಲ್ಲ. ಒಂದನೇ ಉಪ ಪ್ರಕರಣದ ಅಡಿ ನಿರ್ದಿಷ್ಟಪಡಿಸಲಾದ ದಿನಾಂಕದಂದು ಮತ್ತು ಆ ದಿನಾಂಕದಿಂದ ಶಿಕ್ಷಣ ಸಂಸ್ಥೆಯ ಆಡಳಿತವನ್ನು ಯಾವುದೇ ನ್ಯಾಯಾಲಯದ ಯಾವುದೇ ಆದೇಶ ಇದ್ದರೆ ಅದಕ್ಕನುಸಾರವಾಗಿ ವರ್ಗಾಯಿಸತಕ್ಕದ್ದು ಮತ್ತು ಅಂಥ ಯಾವುದೇ ಆದೇಶವಿರದಿದ್ದಲ್ಲಿ ಶಿಕ್ಷಣ ಸಂಸ್ಥೆಯ ಆಡಳಿತ ಪರಿಷತ್ತು ಅಥವಾ ಆಡಳಿತ ಸಮಿತಿಗೆ (ಯಾವುದೇ ಹೆಸರಿನಿಂದ ಕರೆಯಲಾಗಿರಲಿ) ಅಥವಾ ಅದಕ್ಕೆ ಹಕ್ಕುಳ್ಳಂಥ ಯಾವುದೇ ಇತರ ''ನಿಖಾಯ'' ಎಂದರೆ ಅರ್ಥವೇನು ಎಂದು ನನಗೆ ಗೊತ್ತಾಗಿಲ್ಲ. ನಿಖಾಯ ಅಥವಾ ಸಂದರ್ಭಾನುಸಾರ ವ್ಯಕ್ತಿಗೆ ವರ್ಗಾಯಿಸತಕ್ಕದ್ದು ಎಂದಿದೆ. ನಾನು ಮಂತ್ರಿಗಳನ್ನು ಕೇಳುತ್ತೇನೆ, ನನಗೆ ಕನ್ನಡ ಗೊತ್ತಾಗುವುದಿಲ್ಲ ಅದರ ಅರ್ಥ ಏನು ಎಂದು ನನಗೂ ಗೊತ್ತಾಗಿಲ್ಲ. ಮೊನ್ನೆ ಇಂಗ್ಲೀಷ್‌ನಲ್ಲಿ ಹೀಗಾಯಿತು. ಇವೊತ್ತು ಕನ್ನಡದಲ್ಲಿ ಆಗಿದೆ. ಅಧ್ಯಕ್ಷರೆ ತಾವಾದರೂ ಅದರ ಅರ್ಥವನ್ನು ಹೇಳಬೇಕು. ಬಿಲ್ ತರಬೇಕಾದರೆ ಅದು ಏನು ಎಂದು ನಮಗೆ ಗೊತ್ತಾಗಬೇಕಲ್ಲವೆ? ಅದು ಏನು ಎಂದು ಗೊತ್ತಿಲ್ಲ.

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ನಿಖಾಯ ಎಂದರೆ ಟ್ರಸ್ಟ್ ಅಥವಾ ಮಂಡಳಿ ಎಂದು ಹೇಳಬಹುದು.

ಶ್ರೀಮತಿ ಪ್ರಮೀಳಾ ನೇಸರ್ಗಿ: ಇಲ್ಲ, ಇಂಗ್ಲೀಷ್‌ನಲ್ಲಿ ಟ್ರಸ್ಟ್‌ಎಂದೂ ಇಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗ ಇಂಗ್ಲಿಷ್‌ನಲ್ಲಿರುವುದನ್ನು ತೆಗೆದುಕೊಳ್ಳಿ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಒಂದನ್ನು ಮಾಡೋಣ ಇಲ್ಲ, ಇಂಗ್ಲಿಷ್‌ನಲ್ಲಿದ್ದರೆ ಇಂಗ್ಲಿಷ್‌ನಲ್ಲೇ ಓದುತ್ತೇವೆ, ಇಲ್ಲದಿದ್ದರೆ ಕನ್ನಡದಲ್ಲಿದ್ದರೆ ಅದಕ್ಕೆ ಏನಾದರೂ ಅರ್ಥ ಬೇಕಲ್ಲವೇ? ಆದ್ದರಿಂದ ದಯವಿಟ್ಟು ಅದನ್ನು ಸ್ವಲ್ಪ ಸರಿಪಡಿಸಿ ಮಾಡಿ ಎಂದು ಹೇಳುತ್ತಿದ್ದೇನೆ. ಏಕೆಂದರೆ ನಾವು ಬಿಲ್ ಪಾಸ್ ಮಾಡುವಾಗ ಸರಿಪಡಿಸಬೇಕಲ್ಲವೇ? ಕನ್ನಡದಲ್ಲಿ ಯಾವುದು ಸರಿ ಎಂದಾದರೂ ಹೇಳಬೇಕಲ್ಲವೇ? ಅವರು ಏನೋ ಟ್ರಸ್ಟ್ ಎಂದು ಹೇಳುತ್ತಾರೆ. ನಾವು ಹಾಗೆ ಎಲ್ಲೂ ಕೇಳಿಲ್ಲ. ಏಕೆಂದರೆ ಕನ್ನಡ ರಾಜ್ಯದಲ್ಲಿ ನಾವು ಈ ತರಹದ ಬಿಲ್‌ಗಳನ್ನು ಪಾಸ್ ಮಾಡಿಕೊಂಡು ಹೋದರೆ ಅದನ್ನು ಯಾರು ತರುತ್ತಾರೆ ಏನು ಎಂಬುದು ಗೊತ್ತಾಗುವುದಿಲ್ಲ.

ಉಪಾಧ್ಯಕ್ಷರು: ಆಡಳಿತದ ದೃಷ್ಟಿಯಿಂದ ಕೆಲವು ಇಂಗ್ಲೀಷ್ ಶಬ್ದಗಳನ್ನು ಕನ್ನಡದಲ್ಲಿ ಹೇಳಬೇಕು, ಎಂದು ಹೇಳಿ ಇಂಗ್ಲಿಷ್‌ನಲ್ಲಿದ್ದರೂ ಸಹ ಕನ್ನಡದಲ್ಲಿ ಅದೇ ಶಬ್ದದಲ್ಲಿ ಮಾತನಾಡಬೇಕು ಎಂದು ಹೇಳಲಾಗಿದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಸ್ವಲ್ಪ ಇಂಗ್ಲೀಷ್ ಟ್ರಾನ್ಸ್‌ಲೇಷನ್ ನೋಡಿ "or such other body" ಎಂದರೆ ಕಾರ್ಪೋರೇಟ್ ಬಾಡಿ ಆಗುತ್ತದೆಯೆ? ಅದರ ಅರ್ಥವೂ ಆಗುವುದಿಲ್ಲ. ಇಂಗ್ಲೀಷಿನಲ್ಲೂ ಸರಿಯಿಲ್ಲ. ಕನ್ನಡದಲ್ಲೂ ಸರಿಯಿಲ್ಲ. ಇದು ಏನು ಅಧ್ಯಕ್ಷರೆ?

ಶ್ರೀ ಕಾಗೋಡು ತಿಮ್ಮಪ್ಪ: ಅಂಥ ಸಂಸ್ಥೆ ಎಂದು ಹೇಳಿದ್ದರೆ ಆಗುತ್ತಿತ್ತು.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಅದಕ್ಕೆ ಬೇರೆ ಒಂದು ಶಬ್ದ ಇಲ್ಲ ಎಂದು ಆ ರೀತಿ ಹೇಳಲಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ: ಹಾಗೆಂದು ಯಾರು ಹೇಳಿದರು? ಸಚ್ ಅದರ ಬಾಡಿ ಅಂತಹ ಸಂಸ್ಥೆ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗ ನಾವು ಏನು ಬಿಲ್ ಪಾಸ್ ಮಾಡುತ್ತೇವೆ ಅದರಲ್ಲಿ "with effect from" ಎನ್ನುವ ಪದಕ್ಕೆ ''ಇಲ್ಲಿನ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ'' ಹೀಗೆ ಅವರು ಹೇಳಿದ್ದಾರೆ. ಎಫೆಕ್ಟ್ ಎನ್ನುವ ಪದದ ಟ್ರಾನ್ಸ್‌ಲೇಷನ್ ಇದು.

ಶ್ರೀಮತಿ ಪ್ರಮಿಳಾ ನೇಸರ್ಗಿ: ಮಾನ್ಯ ಉಪಸಭಾಪತಿಯವರೆ, ಮೊನ್ನೆ ಕೇರಳದಲ್ಲಿ ಒಂದು ಹೊಸ ಎಜ್ಯುಕೇಷನ್ ಸಿಸ್ಟಂ ತಂದಿದ್ದಾರೆ. ಮಕ್ಕಳಿಗೆ ಹೊರೆ ಜಾಸ್ತಿ, ಬ್ಯಾಗ್‌ಗಳನ್ನು ತೆಗೆದುಕೊಂಡು ಹೋಗುವುದು ಕಷ್ಟ ಎಂದು ಹೇಳಿ ಎಕ್ಸ್‌ಪೆರಿಮೆಂಟಲ್ ಬೇಸಿಸ್‌ನಲ್ಲಿ ಕೇರಳದಲ್ಲಿ ಈ ಸಿಸ್ಟಮ್ ತಂದಿದ್ದಾರೆ. 4 ವರ್ಷಗಳವರೆಗೆ ಮಕ್ಕಳಿಗೆ ಒಂದೇ ಒಂದು ಪುಸ್ತಕ ಇದ್ದು ಕೇವಲ ಪಿಕ್ಚರ್ಸ್ ಮುಖಾಂತರ ಹೇಳಿಕೊಡುವುದಕ್ಕೋಸ್ಕರ ತಂದಿದ್ದಾರೆ. ತಾವೇನಾದರೂ ಕರ್ನಾಟಕದಲ್ಲಿ ಅದನ್ನು ತರುವುದಕ್ಕೆ ಪ್ರಯತ್ನ ಪಡುತ್ತೀರಾ? ಅದನ್ನು ತರುವುದಕ್ಕೋಸ್ಕರ ಏನಾದರೂ ವ್ಯವಸ್ಥೆ ಮಾಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಮಾನ್ಯ ಉಪಾಧ್ಯಕ್ಷರೆ, ಈಗ ಸಮಗ್ರ ಶಿಕ್ಷಣ ಮಸೂದೆಯಲ್ಲಿ ಏನಿದೆ ಅದರಲ್ಲಿ ಬದಲಾವಣೆ ತಂದಿರುವುದು ಇವೆರಡಕ್ಕೆ ಮಾತ್ರ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಏನು ಹೇಳಿದರು, ತಮಗೆ ಕೇಂದ್ರ ಸರ್ಕಾರ

ಸೂಚಿಸಿರುವಂತೆ ಎಂದರೆ ಕೇಂದ್ರ ಸರ್ಕಾರದವರು ಎ.ಐ.ಸಿ.ಇ, ಸಿ.ಜಿ.ಎಸ್.ಇ, ಐಸಿಎಸ್ಇ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ, ಎನ್.ಸಿ.ಟಿ.ಇ ಇದರದ್ದು ಮಾತ್ರ ನಾವು ಅಮೆಂಡ್‌ಮೆಂಟ್ ತಂದಿದ್ದೇವೆಯೇ ಹೊರತು ಬಾಕಿ ಯಾವುದಕ್ಕೂ ನಾನು ಅಮೆಂಡ್‌ಮೆಂಟ್ ತಂದಿಲ್ಲ. ಅದರ ಬಗ್ಗೆ ಇದು ಅನ್ವಯಿಸುವುದೂ ಇಲ್ಲ. ತಾವು ಏನು ಹೇಳಿದ್ದೀರಿ ಅದನ್ನು ನಾವು ಅನುಷ್ಠಾನಕ್ಕೆ ತಂದು, ರೂಲ್ಸ್ ಮಾಡತಕ್ಕಂಥ ಸಂದರ್ಭದಲ್ಲಿ ನಾವು ಅದನ್ನೆಲ್ಲಿ ಸೇರಿಸಿ ಮಾಡುತ್ತೇವೆ. ಇದಿಷ್ಟಕ್ಕೆ ಮಾತ್ರ ಅದು ಇರತಕ್ಕಂಥದ್ದು. ಅಲ್ಲಿಂದ ಡೈರೆಕ್ಷನ್ಸ್ ಬಂದ ಮೇಲೆ ನಾವು ಅದನ್ನು ಮಾಡುತ್ತೇವೆ. ತಾವು ಒಂದು ಮಾತನ್ನು ಹೇಳಿದಿರಿ, ಅದು ಬಹಳ ಒಳ್ಳೆಯ ಸಲಹೆ. ಅದು ಯಾವುದೇ ಸಂಸ್ಥೆ ಇದ್ದರೂ ಸಹ ವಿಸಿನಿಟಿ ಇಷ್ಟು ಎಂದು ನಾವು ಫಿಕ್ಸ್ ಮಾಡಬೇಕು. ಅದರೊಳಗೆ ಆ ಪ್ರದೇಶದಲ್ಲಿ ಇರತಕ್ಕಂಥ ಮಕ್ಕಳನ್ನು ಅಲ್ಲೇ ಸೇರಿಸತಕ್ಕಂಥ ವ್ಯವಸ್ಥೆ ಮಾಡಬೇಕು ಎಂದು ಹೇಳಿದ್ದೀರಿ. ಇದನ್ನೂ ಸಹ ರೂಲ್ಸ್‌ನಲ್ಲಿ ಅಳವಡಿಸಿಕೊಂಡು ಈ ರೀತಿ ವ್ಯವಸ್ಥೆ ಮಾಡಿ ಮಕ್ಕಳಿಗೆ ಯಾವುದೇ ರೀತಿಯಲ್ಲಿ ಅನ್ಯಾಯವಾಗದೆ ಇರತಕ್ಕಂಥ ರೀತಿಯಲ್ಲಿ ನೋಡಿಕೊಳ್ಳತಕ್ಕಂಥ ಜವಾಬ್ದಾರಿಯನ್ನು ಸರ್ಕಾರ ವಹಿಸುತ್ತದೆ ಎಂದು ನಾನು ಹೇಳುತ್ತೇನೆ.

ಉಪಸಭಾಧ್ಯಕ್ಷರು: ಈಗ ಅವರು ಸೀಮಿತವಾಗಿ ಮಾತನಾಡಿದ್ದಾರೆ. ಇದರಲ್ಲೇನಿದೆ ಅಷ್ಟರ ಬಗ್ಗೆ ಮಾತನಾಡುತ್ತೀರೋ ಅಥವಾ ಬೇರೆ ವಿಚಾರವಾಗಿ ಮಾತನಾಡುತ್ತೀರೋ?

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ): ಇದು ಬಹಳ ಗಂಭೀರವಾಗಿ ವಿಚಾರ ಮಾಡುವಂಥಾದ್ದು. ಇದು 1995ರಲ್ಲೇ ರಾಷ್ಟ್ರಪತಿಗಳಿಂದ ಅಂಗೀಕಾರವಾಗಿದೆ. ಅಂಗಿಕಾರ ಕೊಡುವಂಥ ಸಂದರ್ಭದಲ್ಲಿ ಈ ಕೆಲವು ತಿದ್ದುಪಡಿಗಳನ್ನು ಮಾಡಬೇಕೆಂದು ಸಲಹೆ ಕೊಟ್ಟಿದ್ದಾರೆ. 1995ರಲ್ಲೇ ಅಂಗೀಕಾರವಾದಂಥದ್ದನ್ನು 1995ರ ಜೂನ್ 1ನೇ ತಾರೀಖಿನಿಂದ ಜಾರಿಗೆ ಕೊಟ್ಟಿದ್ದಾರೆ. ಈ ರಾಷ್ಟ್ರದ ರಾಷ್ಟ್ರಪತಿಗಳು ಅಂಗೀಕಾರದ ಮುದ್ರೆ ಒತ್ತಿ ಕೊಡುವಂಥ ಕಾಲದಲ್ಲಿ ನಿಮಗೆ ಕೆಲವು ಷರತ್ತುಗಳನ್ನು ಹಾಕಿ ಕೊಟ್ಟಂಥದ್ದನ್ನು ಜಾರಿಗೆ ಕೂಡಬೇಕಾದರೆ ಎರಡು ವರ್ಷ ಬೇಕೇ? ನಿಮಗೆ ನಾಚಿಕೆಯಾಗುವುದು ಬೇಡವೆ?

SRI C.BYREGOWDA: Better late than ever....

ಶ್ರೀ ಕಾಗೋಡು ತಿಮ್ಮಪ್ಪ: ಬೈರೇಗೌಡರೆ, ತಾವು ಕೆಲಸಕ್ಕೆ ಬಾರದ್ದನ್ನು ಹೇಳಬೇಡಿ. This is the type of administration it is going on.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಮಾನ್ಯ ಉಪಸಭಾಧ್ಯಕ್ಷರೆ, ನಾನು ಇದನ್ನು ಒಪ್ಪಿಕೊಳ್ಳುತ್ತೇನೆ. ತಡವಾಗಿದೆ; ಅದು ಆ ಸಂದರ್ಭದಲ್ಲಿ ಬರದೇ ಇರುವುದಕ್ಕೆ ಹಲವಾರು ಕಾರಣಗಳಿವೆ. ಅದರಿಂದಾಗಿ ತರದೇ ಇರುವುದಕ್ಕೆ ಬೇರೆ ಉದ್ದೇಶವೇನೂ

ಇಲ್ಲ. ಈ ಸಲ ಅದನ್ನು ತಂದಿದ್ದೇವೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ ''1996ರ ಕರ್ನಾಟಕ ಶಿಕ್ಷಣ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ಕ್ಕೆ ತಿದ್ದುಪಡಿ

SRI H.G.GOVINDA GOWDA (MINISTER FOR PRIMARY & SECONDARY EDUCATION): Sir I move

"That In sub-section (2) of clause 2 after sub-section (d-b) the following shall be inserted namely;

"(d-c) the National Council of Teachers Education Act, 1993, (Central Act 73 of 1993.)"

DEPUTY SPEAKER: I will now put the amendment moved by the Hon'ble Minister to the vote of the House. The question is:

"That In sub-section (2) of clause 2 after sub-section (d-b) the following shall be inserted namely;

"(d-c) the National Council of Teachers Education Act, 1993, (Central Act 73 of 1993)".

Motion was adopted

ಉಪಾಧ್ಯಕ್ಷರು: ''ತಿದ್ದುಪಡಿಯಾದ 2ನೇ ಖಂಡ ಈ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ತಿದ್ದುಪಡಿಯಾದ 2ನೇ ಖಂಡವನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 3 ರಿಂದ 6

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಖಂಡ 3 ರಿಂದ 6 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 3 ರಿಂದ 6 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು).

ಖಂಡ 1 ಇತ್ಯಾದಿ

ಉಪಸಭಾಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗು ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೇ, 1996ರ ಕರ್ನಾಟಕ ಶಿಕ್ಷಣ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ,

''1996ರ ಕರ್ನಾಟಕ ಶಿಕ್ಷಣ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಊ) ಕರ್ನಾಟಕ ಹೆದ್ದಾರಿಗಳ (ತಿದ್ದುಪಡಿ) ವಿಧೇಯಕ, 1997

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿ. ಎಂ. ಉದಾಸಿ (ಸನ್ಮಾನ್ಯ ಲೋಕೋಪಯೋಗಿ ಸಚಿವರು): ಸನ್ಮಾನ್ಯ

ಉಪಾಧ್ಯಕ್ಷರೇ, ''ಕರ್ನಾಟಕ ಹೆದ್ದಾರಿಗಳ (ತಿದ್ದುಪಡಿ) ವಿಧೇಯಕ, 1997ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

(ಪ್ರಸ್ತಾವ ಮಂಡಿಸಲ್ಪಟ್ಟಿತು)

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು): ಮಾನ್ಯ ಅಧ್ಯಕ್ಷರೇ, ಈ ರಾಜ್ಯ ಹೆದ್ದಾರಿಗಳ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಯಾರೇ ವ್ಯಕ್ತಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲು ರಾಜ್ಯ ಸರಕಾರಕ್ಕೆ ಸಾಧ್ಯವಾಗುವಂತೆ ಮಾಡಲು ಮತ್ತು ಅಂಥ ವ್ಯಕ್ತಿಯು ಸಲ್ಲಿಸಿದ ಸೇವೆ ಹಾಗೂ ನೀಡಿದ ಸೌಲಭ್ಯಕ್ಕಾಗಿ ನಿರ್ದಿಷ್ಟಪಡಿಸಬಹುದಾದಂಥ ದರಗಳಲ್ಲಿ ಶುಲ್ಕವನ್ನು ವಸೂಲು ಮಾಡಲು ಮತ್ತು ಇಟ್ಟುಕೊಳ್ಳಲು ಅವನಿಗೆ ಅಧಿಕಾರ ನೀಡಲು ಮತ್ತು ಮೋಟಾರು ವಾಹನಗಳ ನಿಯಮ 1988ರ ಉಪ-ಅಧಿನಿಯಮಗಳಿಗನುಸಾರವಾಗಿ ವಾಹನ ಸಂಚಾರವನ್ನು ವಿನಿಮಯಿಸಲು ಹಾಗೂ ನಿಯಂತ್ರಿಸಲು ಮತ್ತು ದುಷ್ಕೃತ್ಯವನ್ನು ಮಾಡುವ ಯಾವುದೇ ವ್ಯಕ್ತಿಗೆ ಐದು ವರ್ಷಗಳ ಕಾರಾಗೃಹ ವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರೆಡರಿಂದಲೂ ದಂಡನೆ ವಿಧಿಸಲು ಈ ತಿದ್ದುಪಡಿಯನ್ನು ತರಲಾಗಿದೆ. ಇದು ಕೇಂದ್ರ ಸರಕಾರದವರು ರಾಷ್ಟ್ರೀಯ ಹೆದ್ದಾರಿಗಳಿಗೆ ಮಾಡಿದ ತಿದ್ದುಪಡಿಯಾಗಿದ್ದು ಅದನ್ನು ನಮ್ಮ ರಾಜ್ಯದ ಹೆದ್ದಾರಿಗಳಿಗೂ ಅದೇ ರೀತಿಯ ತಿದ್ದುಪಡಿಗಳನ್ನು ನಮ್ಮ ರಾಜ್ಯದಲ್ಲಿಯೂ ತರುವಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಈ ರಸ್ತೆಗಳ ನಿರ್ವಹಣೆಗಾಗಿ ಬೇಕಾಗಿರುವಂಥ ಸಂದರ್ಭದಲ್ಲಿ ಅವನು ಹೂಡಿರುವಂಥ ಬಂಡವಾಳವನ್ನು ಗಮನದಲ್ಲಿಟ್ಟುಕೊಂಡು ತೆರಿಗೆಯನ್ನು ವಸೂಲು ಮಾಡುವಲ್ಲಿ ಅನುಕೂಲ ಕಲ್ಪಿಸುವ ಸಲುವಾಗಿ ಇದನ್ನು ತಂದಿದ್ದೇವೆ. ಇದನ್ನು ರಾಷ್ಟ್ರದಾದ್ಯಂತ ರಾಷ್ಟ್ರೀಯ ಹೆದ್ದಾರಿಗೆ ಮಾಡಿದ್ದಾರೆ. ಇದನ್ನು ರಾಜ್ಯದ ಹೆದ್ದಾರಿಗಳಿಗೂ ಮಾಡಲು ಅವಕಾಶವನ್ನು ಕಲ್ಪಿಸಿಕೊಡುವ ಸಲುವಾಗಿ ಈ ತಿದ್ದುಪಡಿಯನ್ನು ತರಲಾಗಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಇದು ಹೀಗೆಯೇ ಒಪ್ಪಿಕೊಳ್ಳಲು ಆಗುವುದಿಲ್ಲ. ಏಕೆಂದರೆ, ಈಗಾಗಲೇ ತಾವು ಎಕ್ಸ್‌ಪ್ರೆಸ್ ಹೈವೇಯನ್ನು ಬೆಂಗಳೂರಿನಿಂದ ಮೈಸೂರಿಗೆ ಮಾಡುತ್ತಾ ಇದ್ದೀರಿ. ನಾಳೆ ಇದು ಎಲ್ಲಾ ಕಡೆಗಳಿಗೂ ಅನ್ವಯವಾಗುತ್ತದೆ. ರಾಷ್ಟ್ರಮಟ್ಟದಲ್ಲಿ ನ್ಯಾಶನಲ್ ಹೈವೇಗ ಇರತಕ್ಕಂಥಾದ್ದು ಸ್ಟೇಟ್‌ನಲ್ಲಿಯೂ ಆದಾಗ ಅದರ ರಿಪರ್‌ಕಷನ್ ಏನು ಎಂದು ನಾವು ನೋಡಬೇಕಲ್ಲವೇ? ನಾಳೆ ಅದರ ಮೇಲೆ ನಮ್ಮ ರೈತರು, ಅವರ ಬಂಡಿಗಳು ಅಡ್ಡಾಡತಕ್ಕಂಥಾದ್ದು ಇರುತ್ತದೆ. ಜನರು ಓಡಾಡತಕ್ಕಂಥಾದ್ದು ಇರುತ್ತದೆ. ಹೀಗೆ ನಮಗೆ ಏನೂ ಪೂರ್ಣವಾದ ಮಾಹಿತಿಗಳು ಇಲ್ಲದೇ, ಸಡನ್ ಆಗಿ ನೀವು ಇಲ್ಲಿ ಇಂಟ್ರಡ್ಯೂಸ್ ಮಾಡಿ, ಅವನಿಗೆ 6 ತಿಂಗಳ ಶಿಕ್ಷೆ, ಇಷ್ಟು ರೂಪಾಯಿಗಳ ಜುಲ್ಮಾನೆ ಅಂದರೆ, ಹೇಗೆ? ಇದನ್ನು ಹೀಗ ಸಡನ್ ಆಗಿ ತಂದರೆ ಹೇಗೆ? ಆದ್ದರಿಂದ ಇದಕ್ಕೆ ಸ್ವಲ್ಪ

ಸಮಯ ಕೊಡಬೇಕು. ಇದು ಅಂಥ ಅರ್ಜೆಂಟ್ ಏನೂ ಇಲ್ಲ. ಇದು ಲ್ಯಾಪ್ಸ್ ಆಗುವಂಥಾದ್ದೂ ಅಲ್ಲ. ನೀವು ಇದನ್ನು ಸರ್ಕುಲೇಟ್ ಮಾಡಿದ್ದೀರಾ?

ಶ್ರೀ ಸಿ.ಎಂ.ಉದಾಸಿ: ಮಾನ್ಯ ಅಧ್ಯಕ್ಷರೇ, ಈ ಬಿಲ್‌ನ್ನು ಸರ್ಕುಲೇಟ್ ಮಾಡಿದ್ದೇವೆ. ಕೇಂದ್ರಸರಕಾರದಲ್ಲಿಯೂ ಸಹಿತ ಇದೇ ರೀತಿಯ ತಿದ್ದುಪಡಿ ಇದೆ. ಆ ತಿದ್ದುಪಡಿಗೂ ಈ ತಿದ್ದುಪಡಿಗೂ ಯಾವುದೇ ರೀತಿಯ ವ್ಯತ್ಯಾಸವಿಲ್ಲ. ಇವೊತ್ತು ನ್ಯಾಶನಲ್ ಹೈವೇ ಅಥಾರಿಟಿ ಆಫ್ ಇಂಡಿಯಾದವರು ಇಲ್ಲಿಗೆ ಬಂದಾಗ ಕರ್ನಾಟಕ ರಾಜ್ಯದಾದ್ಯಂತ ಅನೇಕ ರಸ್ತೆಗಳ ಬಗ್ಗೆ ರಾಷ್ಟ್ರೀಯ ಹೆದ್ದಾರಿ-4ರಲ್ಲಿಯೂ ಸಹಿತ ಸೇತುವೆಗಳನ್ನು ನಿರ್ಮಾಣ ಮಾಡಬೇಕಾದಾಗ ರೈಲ್ವೇ ಓವರ್‌ಬ್ರಿಡ್ಜ್‌ಗಳನ್ನ ನಿರ್ಮಾಣ ಮಾಡಬೇಕಾದಾಗ, ಮತ್ತು ರಸ್ತೆಗಳನ್ನು ಖಾಸಗಿಯವರಿಗೆ ಕೊಟ್ಟು ಅವರು ನಿರ್ಮಾಣ ಮಾಡಿದಂಥ ಸಂದರ್ಭದಲ್ಲಿ ನಿರ್ವಹಣೆ ಮಾಡಿದಂಥ ಸಂದರ್ಭದಲ್ಲಿ ಅವರಿಂದ ತೆರಿಗೆಯನನ್ನು ವಸೂಲು ಮಾಡುವ ಸಲುವಾಗಿ ಅನುಕೂಲ ಕಲ್ಪಿಸುವ ಸಲುವಾಗಿ ಕೇಂದ್ರ ಸರಕಾರವೂ ಕೂಡ ಇದೇ ರೀತಿಯಾದ ಒಂದು ತಿದ್ದುಪಡಿಯನ್ನು ತಂದಿದೆ, ಅದೇ ತಿದ್ದುಪಡಿಯನ್ನು ನಾವು ಕರ್ನಾಟಕ ರಾಜ್ಯದಾದ್ಯಂತ ತರಲೇ ಬೇಕಾಗಿದೆ. ಕರ್ನಾಟಕ ರಾಜ್ಯದ ರಸ್ತೆಗಳ ಸುಧಾರಣೆಗಾಗಿ, ಇನ್‌ಫ್ರಾಸ್ಟ್ರಕ್ಚರ್ ಇವೊತ್ತು ಇಲ್ಲದಿದ್ದರೆ, ಅಭಿವೃದ್ಧಿಗಳನ್ನು ಮಾಡಲು ಸಾಧ್ಯತೆಗಳು ಆಗುವುದಿಲ್ಲ. ಇದನ್ನು ರಾಷ್ಟ್ರದಾದ್ಯಂತ ಒಪ್ಪಿಗೆಯನ್ನು ಮಾಡಿಸಿಕೊಂಡಿರುವ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿಯೂ ಸಹಿತ ಇದನ್ನು ಜಾರಿಗೆ ತರಬೇಕಾಗಿದೆ. ಮಾನ್ಯ ಸದಸ್ಯರು ಇದನ್ನು ಒಪ್ಪಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಎಂದು ನಾನು ಸಲಹೆ ಮಾಡುತ್ತೇನೆ. ಏಕೆಂದರೆ ಇದರಲ್ಲಿ ಪನಿಷ್‌ಮೆಂಟ್ ಮುಂತಾಗಿ ಇದೆ. ದಯಮಾಡಿ ತಾವು ನೋಡಿ... ನಾಳೆ ನಿಮಗೇ ತೊಂದರೆ ಆಗಬಹುದು.

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ): ಮಾನ್ಯ ಅಧ್ಯಕ್ಷರೇ, ಇದರಲ್ಲಿ ಏನಾದರೂ ತಪ್ಪು ಮಾಡಿದವರಿಗೆ ಐದು ವರ್ಷಗಳ ಪನಿಷ್‌ಮೆಂಟ್ ಎಂದು ಇದೆ. ಇದು ಬೆಂಗಳೂರು-ಮೈಸೂರು ಹೆದ್ದಾರಿಯನ್ನು ತರುವುದಕ್ಕೋಸ್ಕರ 2000ಕೋಟಿ ರೂ.ಗಳ ಪ್ಲಾನ್ ಏನು ಹಾಕಿಕೊಂಡಿದ್ದಾರೆ, ಅದಕ್ಕೆ ಅವಕಾಶ ಮಾಡಿಕೊಡುವುದಕ್ಕೆ ಪ್ರೈವೇಟ್ ನೆಗೋಷಿಯೇಷನ್‌ನಲ್ಲಿ ತೆಗೆದುಕೊಳ್ಳಬಹುದಂತೆ. ಇದರಲ್ಲಿ ಅಕಸ್ಮಾತ್ ಏನಾದರೂ ಹೆಚ್ಚು ಕಡಿಮೆ ಆಯಿತು ಅಂದರೆ, ಐದು ವರ್ಷಗಳವರೆಗೆ ಜೈಲಿಗೆ ಹಾಕಬಹುದಂತೆ. ಅಂದರೆ ಇವರು ನೆಗೋಸಿಯೇಷನ್ ಮಾಡಿ ಕೊಟ್ಟು, ಜೈಲ್‌ನ ಹೆದರಿಕೆ ಹಾಕಿದ್ದಾರೆ. ಇದರಲ್ಲಿ ದುರುದ್ದೇಶವಿದೆ. ಹಾಗಾಗಿ ಇದನ್ನು ಅಷ್ಟು ಸುಲಭವಾಗಿ ಒಪ್ಪುವುದಕ್ಕಾಗುವುದಿಲ್ಲ. ನೀವು ಒಪ್ಪುತ್ತೀರಾ ಹೇಳಿ? ನೀವು ಏನಾದರೂ ಆ ಕಡೆ

ಹೆದ್ದಾರಿ ಮಾಡುವುದಾದರೆ, ಯಾರ ಜೊತೆಗೆ ನೆಗೋಶಿಯೇಟ್ ಮಾಡುತ್ತೀರಿ? ಅದನ್ನು ಸಭೆಯ ಮುಂದೆ ತರುತ್ತೀರಾ? ನಮಗೆ ಅದನ್ನು ಹೇಳುತ್ತೀರಾ? ಯಾರಿಗಾದರೂ ಐದು ವರ್ಷಗಳ ಪನಿಷ್‌ಮೆಂಟ್ ಮಾಡುವುದೆಂದರೆ ಏನು ಇದು?

ಶ್ರೀ ಸಿ.ಎಂ.ಉದಾಸಿ: ಸನ್ಮಾನ್ಯ ಸಭಾಧ್ಯಕ್ಷರೇ, ಕೇಂದ್ರ ಸರಕಾರದಲ್ಲಿಯೂ ಸಹಿತ ಇದೇ ರೀತಿಯ ತಿದ್ದುಪಡಿಯನ್ನು ತಂದಿದ್ದಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಕೇಂದ್ರ ಸರಕಾರದವರ ತಿದ್ದುಪಡಿಯನ್ನು ನಮಗೆ ನೋಡಲು ಕೊಡಿ. ಆ ಮೇಲೆ ನೋಡೋಣ. ಇದೇನು ಅಂಥ ಅರ್ಜೆಂಟ್ ಬಿಲ್ ಏನೂ ಅಲ್ಲ. ಇದನ್ನು ಡೆಫರ್ ಮಾಡಿ.

ಉಪಾಧ್ಯಕ್ಷರು: ಮಾನ್ಯ ಸದಸ್ಯರುಗಳ ಆತಂಕ ಏನೆಂದರೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಈ ನಿಯಮಗಳನ್ನು ಅನ್ವಯಿಸಿದಲ್ಲಿ ನಮ್ಮ ರೈತರಿಗೆ ಏನಾದರೂ ತೊಂದರೆ ಉಂಟಾಗ ಬಹುದು ಎಂದು.

ಶ್ರೀ ಸಿ.ಭೈರೇಗೌಡ (ಕೃಷಿಸಚಿವರು): ಇದು ಹೊಸದಾಗಿ ರಸ್ತೆ ಮಾಡಿದರೆ ಮಾತ್ರ ಅನ್ವಯವಾಗುತ್ತದೆ. ಇಲ್ಲದಿದ್ದರ ಇಲ್ಲ. ಇರತಕ್ಕಂಥ ರಸ್ತೆಗಳಿಗೆ ಇದು ಅನ್ವಯವಾಗುವುದಿಲ್ಲ. ಇದರಲ್ಲಿ ಬೇರೇನೂ ಇಲ್ಲ. ದಯಮಾಡಿ ಇದನ್ನು ಅರ್ಥ ಮಾಡಿಕೊಳ್ಳಿ.

ಶ್ರೀ ಸಿ.ಎಂ.ಉದಾಸಿ: ಈಗ ಹುಬ್ಬಳ್ಳಿ-ಧಾರವಾಡ ರಸ್ತೆಗೆ ನಾವು ಇವೊತ್ತು ಮಾಡಬೇಕಾದರೆ ಅಕಸ್ಮಾತ್ ಶರಾವತಿಗೆ ಮತ್ತೊಂದು ಸೇತುವೆಯನ್ನು ನಿರ್ಮಾಣ ಮಾಡಬೇಕಾದಾಗ ಖಾಸಗಿಯವರಿಗೆ ಅದನ್ನು ನಿರ್ಮಾಣ ಮತ್ತು ನಿರ್ವಹಣೆಗೆ ಕೊಟ್ಟಾಗ, ಅವರು ಮಾಡಿರುವಂಥ ಬಂಡವಾಳದ ಮೇಲೆ ಖರ್ಚು ಮಾಡಿದಂಥ ಹಣವನ್ನು ಹಿಂದಕ್ಕೆ ಪಡೆಯ ಬೇಕಾದಾಗ ಅವರು ಖರ್ಚು ಮಾಡಿದ ಹಣವನ್ನು ಟೋಲ್ ಮುಖಾಂತರ ವಸೂಲಿ ಮಾಡಲು ಈ ತಿದ್ದುಪಡಿಯ ಅವಶ್ಯಕತೆ ಇದೆ. ಈ ಕಾನೂನು ಅತ್ಯಂತ ಅವಶ್ಯಕವಾಗಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗ ವಸೂಲು ಮಾಡುತ್ತಿದ್ದೀರಿ, ಅದನ್ನು ಯಾವ ಕಾನೂನಿನ ಕೆಳಗೆ ಮಾಡುತ್ತಿದ್ದೀರಿ?

ಶ್ರೀ ಸಿ.ಎಂ.ಉದಾಸಿ: ಸರಕಾರ ವಸೂಲು ಮಾಡುತ್ತಾ ಇದೆ. ಖಾಸಗಿಯವರು ಅಲ್ಲ....

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ): ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ, ನಂಜನಗೂಡು ಸೇತುವೆಗಾಗಿ ವಸೂಲು ಮಾಡಿದ್ದೀರಿ. ಅದಕ್ಕೆ ಯಾವ

ಕಾನೂನು ತಂದಿರಲಿಲ್ಲ. ಸುತ್ತೂರು ಹತ್ತಿರ ಒಂದು ಸೇತುವೆ ಮಾಡಿದ್ದೀರಿ, ಅದಕ್ಕೂ ಕಾನೂನು ತಂದಿಲ್ಲ. ಈಗ ಕಾನೂನು ತಂದು ತಪ್ಪು ಮಾಡಿದರೆ ಐದು ವರ್ಷಗಳ ಜೈಲು ಶಿಕ್ಷೆ ತಂದಿದ್ದೀರಿ. ಇದು ಸರಿಯಲ್ಲ. ನೀವು ಪ್ರಗತಿಯಾಗಿ ಹೋಗ ಬೇಕೇ ಹೊರತು ಕ್ರಾಂತಿಕಾರವಾದಂಥ ನಿರ್ಣಯಗಳು ಮತ್ತು ಮಸೂದೆಗಳನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿದರೆ, ನೀವು ಜನಗಳ ಮೇಲೆ ಕರಬಾರ ಹೇರಿ, ಕೊಡಲಿಲ್ಲ ಅಂದರೆ ಅವರನ್ನು ಐದು ವರ್ಷ ಜೈಲಿಗೆ ಹಾಕತಕ್ಕಂಥದ್ದು ಸರಿಯೇ? ಇದರಲ್ಲಿ ಮಿಲಿಟರಿ ಪ್ರಭುತ್ವದ ದಿಕ್ಕಿನಲ್ಲಿ ಹೋಗುತ್ತಾ ಇದ್ದೀರಲ್ಲಾ? ಇದು ಒಳ್ಳೆಯದಲ್ಲ. ಇವರ ಉದ್ದೇಶ ಏನು ಗೊತ್ತೇ? ನಾಳೆ ಮೈಸೂರು-ಬೆಂಗಳೂರು ಹೆದ್ದಾರಿ ಮಾಡತಕ್ಕಂಥ ಜನರಿಗೆ ಅವರು ಅನುಕೂಲ ಮಾಡಿಕೊಡತಕ್ಕಂಥಾದ್ದು. ಇದರಲ್ಲಿ ಬೇರೆ ಮಾತು ಇಲ್ಲವೇ ಇಲ್ಲ. ಈ ವಿಚಾರದಲ್ಲಿ ಬಹಳ ಅಪಮ್ರಮಾಣಿಕವಾಗಿ ಸರಕಾರದವರು ಹೋಗುತ್ತಾ ಇದ್ದಾರೆ. ಇದನ್ನು ಹಿಂದೆ ತೆಗೆದುಕೊಳ್ಳಬೇಕು. ಈ ಮಸೂದೆಯನ್ನು ಖಂಡಿತವಾಗಿ ಮಂಡಿಸಬಾರದು. ಇದು ಜನದ್ರೋಹಿ ಮಸೂದೆ. ಇದು ಪ್ರಜಾತಂತ್ರ ವಿರೋಧಿ ಮಸೂದೆ. ಜನಸಾಮಾನ್ಯರಿಗೆ, ಬಡಬಗ್ಗರಿಗೆ ಅನ್ಯಾಯವಾಗತಕ್ಕಂಥ ಮಸೂದೆ ಇದು. ರೈತರಿಗೆ, ಸಾಮಾನ್ಯರಿಗೆ ಮುಂತಾಗಿ ಪ್ರತಿಯೊಬ್ಬರಿಗೂ ಮೋಸ ಮಾಡತಕ್ಕಂಥ ಮಸೂದೆ ಇದು. ಇದು ಬೇಕಾಗಿಲ್ಲ. ಈಗಾಗಲೇ ವಸೂಲು ಮಾಡುತ್ತಾ ಇದ್ದಾರೆ. ಅದಕ್ಕೆ ಇವರು ಯಾವ ಕಾನೂನುಗಳನ್ನು ತಂದಿಲ್ಲ. ಅದನ್ನು ಬಿಟ್ಟು ಈಗ ಇದಕ್ಕಾಗಿ ಕಾನೂನು ತಂದಿದ್ದಾರೆ. ತಾವುಗಳು ಇದನ್ನು ಓದಿ ನೋಡಿ. ಯಾರಾದರೂ ತಪ್ಪಿತಸ್ಥರಾದರೆ ಅವರಿಗೆ ಐದು ವರ್ಷಗಳ ಜೈಲು. ಎಲ್ಲಾದರೂ ಉಂಟೆ? ಯಾವುನೋ ಒಬ್ಬ ಐದು ರೂ.ಗಳನ್ನು ರಸ್ತೆ ಕರ ಕೊಡಲಿಲ್ಲ ಅಂದರೆ, ಅವನ ಹತ್ತಿರ ದುಡ್ಡು ಇಲ್ಲ ಎಂದಾಗ, ಅವನು ತಪ್ಪಿಸಿಕೊಂಡು ಬಿಟ್ಟರೆ, ನೀನು ಕೊಡಲಿಲ್ಲ ಎಂದು ಅವನನ್ನು ಐದು ವರ್ಷಗಳ ಕಾಲ ಜೈಲಿಗೆ ಹಾಕತಕ್ಕಂಥಾದ್ದು ಅಂದರೆ ಇದು ಸರಕಾರವೇ? ಇದು ಯಾವ ನೀತಿ? ಇದಕ್ಕೆ ಒಂದು ಬೆಲೆ ಬೇಡವೇ?

4.30 ಪಿ.ಎಂ

ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ): ರೈತ ತನ್ನ ಹೊಲ ಮನೆಗಳಿಗೆ ಹೋಗಬೇಕಾಗುತ್ತದೆ. ತನ್ನ ವಾಹನಗಳ ಮೂಲಕ ಹೊಲಮನೆಗಳಿಗೆ ಹೋಗಲು ಸಾಮಾನ್ಯ ಜನರು ಅಡ್ಡಾಡಬೇಕಾಗುತ್ತದೆ. ಅಂತಹ ರೀತಿಯಲ್ಲಿ ಇಷ್ಟೊಂದು ಕರ ಹಾಕಿದರೆ ಅದು ಸರಿಯಲ್ಲ. ಅವರಿಗೆಲ್ಲ ಜೈಲು ವಾಸ ಇಟ್ಟಿದ್ದೀರಿ. ಒಳ್ಳೆಯ ರಸ್ತೆ ಕೊಟ್ಟು ವಸೂಲು ಮಾಡಿ. ಎಲ್ಲೆಲ್ಲಿ ಬ್ರಿಡ್ಜ್ ಇದೆ ಅಲ್ಲಿ ವಸೂಲು ಮಾಡುತ್ತಿದ್ದೀರಿ ಹಾಗೆಯೇ ಇದನ್ನು ಇಟ್ಟುಕೊಳ್ಳಿ. ಈಗ ಕಂಪಲ್ಸರಿ ಜೈಲು ಮಾಡುತ್ತಿದ್ದೀರಿ. ಜೈಲುಶಿಕ್ಷೆ ಕೊಡುವುದು ಸರಿಯಾದುದಲ್ಲ. ಬಡವರಿಗೆ, ರೈತರಿಗೆ ಇದರಿಂದ ಸಾಮಾನ್ಯ ಜನರಿಗೆ ತೊಂದರೆಯಾಗುತ್ತದೆ. ಸಾಮಾನ್ಯ ಜನರಿಗೆ ಅನ್ಯಾಯವಾಗುತ್ತದೆ.

+ ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ): ಈಗ ಹಾಲಿ ಇರುವ ಕಾನೂನು ಸುಂಕವನ್ನು ವಿಧಿಸುವುದು. ರಾಜ್ಯ ಸರಕಾರವು ಸರಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ ಅಂತಹ ಸೇತುವೆಗಳು ಒಟ್ಟು ದಾರಿಗಳು ಮತ್ತು ಸುರಂಗ ಮಾರ್ಗಗಳನ್ನು ಪ್ರವೇಶಿಸುವ ಎಲ್ಲಾ ಮೋಟಾರು ವಾಹನಗಳ ಮೇಲೆ ವಾಹನವೊಂದಕ್ಕೆ 15 ರೂಪಾಯಿಗಳನ್ನು ಮೀರದ ದರದಲ್ಲಿ ನಿಯಮಿಸಬಹುದಾದ ಸುಂಕವನ್ನು ವಿಧಿಸಬಹುದು ಮತ್ತು ಬೇರೆ ಬೇರೆ ವರ್ಗಗಳ ವಾಹನಗಳಿಗಾಗಿ ಮತ್ತು ಬೇರೆ ಬೇರೆ ವರ್ಗಗಳ ಸೇತುವೆಗಳು, ಒಡ್ಡು ದಾರಿಗಳು ಮತ್ತು ಸುರಂಗ ಮಾರ್ಗಗಳಿಗೆ ಸುರಂಗ ಮಾರ್ಗಗಳಿಗೆ ನಿಯಮಿಸಬಹುದಾದ ಬೇರೆ ಬೇರೆ ದರಗಳ ಸುಂಕವನ್ನು ವಿಧಿಸಲಾಗುವುದು. ರಾಜ್ಯ ಸರಕಾರವು, ಅಧಿಸೂಚನೆ ಮೂಲಕ ಮತ್ತು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಯಾವುದೇ ವರ್ಗದ ವಾಹನಗಳಿಗೆ ಸಂಬಂಧಪಟ್ಟಂತೆ ಸುಂಕವನ್ನು ಸಂದಾಯ ಮಾಡುವುದರಿಂದ ವಿನಾಯಿತಿ ನೀಡುವುದು ಸಾರ್ವಜನಿಕ ಹಿತ ದೃಷ್ಟಿಯಿಂದ ಅವಶ್ಯಕವೆಂದು ಅಭಿಪ್ರಾಯ ಪಟ್ಟಲ್ಲಿ ಅದು ಹಾಗೆ ಮಾಡಬಹುದು. ಉಳಿದದ್ದು ಏನಾದರೂ ಇರಲಿ. ಈಗ ಇರುವ ಪ್ರಕಾರ ರಸ್ತೆಯಾಗಲೀ ಸೇತುವೆಯಾಗಲೀ, ಸುರಂಗವಾಗಲೀ ಒಂದು ವೆಹಿಕಲ್‌ಗೆ ಹಾಕಬಹುದು. ಇದರಲ್ಲಿ ಇರುವಂತಹ ಉದ್ದೇಶ ಮತ್ತು ಕಾರಣಗಳನ್ನು ಓದಿದರೆ ಇದರ ಅವಶ್ಯಕತೆಯೇ ಇಲ್ಲವೆಂದು ಅನ್ನಿಸುತ್ತದೆ. ಇದನ್ನು ಓದೋಣ. ಉದ್ದೇಶ ಮತ್ತು ಕಾರಣಗಳು. ರಾಜ್ಯ ಹೆದ್ದಾರಿಗಳ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಯಾರೇ ವ್ಯಕ್ತಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲು ರಾಜ್ಯ ಸರಕಾರಕ್ಕೆ ಸಾಧ್ಯವಾಗುವಂತೆ ಮಾಡಲು ಮತ್ತು ಅಂತಹ ವ್ಯಕ್ತಿಯು ಸಲ್ಲಿಸಿದ ಸೇವೆ ಅಥವಾ ನೀಡಿದ ಸೌಲಭ್ಯಗಳಿಗಾಗಿ ನಿರ್ದಿಷ್ಟಪಡಿಸಬಹುದಾದಂಥ ದರಗಳಲ್ಲಿ ಶುಲ್ಕವನ್ನು ವಸೂಲಿ ಮಾಡಲು ಮತ್ತು ಇಟ್ಟುಕೊಳ್ಳಲು ಅವನಿಗೆ ಅಧಿಕಾರ ನೀಡಲು ಮತ್ತು ಮೋಟಾರು ವಾಹನಗಳ ಅಧಿನಿಯಮ, 1988ರ ಉಪಬಂಧಗಳಿಗೆ ಅನುಸಾರವಾಗಿ ವಾಹನ ಸಂಚಾರವನ್ನು ವಿನಿಮಯಿಸಲು ಹಾಗೂ ನಿಯಂತ್ರಿಸಲು ಮತ್ತು ದುಷ್ಕೃತ್ಯವನ್ನು ಮಾಡುವ ಯಾರೇ ವ್ಯಕ್ತಿಗೆ ಐದು ವರ್ಷಗಳವರೆಗಿನ ಕಾರಾವಾಸ ಅಥವಾ ಜುಲ್ಮಾನೆ ವಿಧಿಸಲು ಎಂದು ಇಲ್ಲಿ ಇದೆ. ಈಗ ಟನಲ್ಸ್‌ಗಳು ಬ್ರಿಡ್ಜ್‌ಗಳು ಇಲ್ಲವೇ ಇದನ್ನು ಇಲ್ಲಿ ತರುವುದಕ್ಕೆ ಉದ್ದೇಶವೇನು ಎಂಬುದು ಅರ್ಥವಾಗಬೇಕಲ್ಲಾ. 5 ವರ್ಷ ಶಿಕ್ಷೆ ಕೊಡುವುದು ಯಾರಿಗೆ ಐ.ಪಿ.ಸಿ.ಯಲ್ಲಿ ಯಾರಿಗೆ ಶಿಕ್ಷೆ ಕೊಡಬಹುದು?

ಶ್ರೀಮತಿ ಪ್ರಮೀಳಾ ನೇಸರ್ಗಿ: ಕೊಲೆ ಮಾಡಿದವರಿಗೆ ಮಾಡಬಾರದ ಕೆಲಸ ಮಾಡಿದವರಿಗೆ....

ಶ್ರೀ ಹೆಚ್.ಎನ್.ನಂಜೇಗೌಡ: ದುಷ್ಕೃತ್ಯವೆಂದನರೆ ಏನು ಎಂದು ಡಿಫೈನ್ ಮಾಡಬೇಕಾಗುತ್ತದೆ. ಇದು ಹಾಫ್ ಬೇಕ್ಡ್ ಫುಡ್ ಇದ್ದ ಹಾಗೆ ಇದೆ. ಇದನ್ನು ಚಿಂತನೆ ಮಾಡಿ ಡ್ರಾಫ್ಟ್ ಮಾಡಿಲ್ಲ. ನಾವು ಮೈಸೂರು ಬೆಂಗಳೂರು ಹೆದ್ದಾರಿ ವಿರುದ್ಧ ಇಲ್ಲ,

ಇನ್ನೊಂದು ಹೆದ್ದಾರಿ ಮಾಡಿದರೆ ವಿರುದ್ಧ ಇಲ್ಲ. ಆದರೆ ಒಂದು ಕಾನೂನು ಮಾಡತಕ್ಕಂತಹ ಕಾಲದಲ್ಲಿ ಮತ್ತು ಇದನ್ನು ಅನುಷ್ಠಾನಕ್ಕೆ ತಂದಾಗ ಇದರಿಂದ ಯಾರಿಗೂ ವಿನಾ ಕಾರಣ ತೊಂದರೆಯಾಗಬಾರದು. ಇದು ಹಾಫ್ ಬೇಕ್ಡ್ ಫುಡ್ ಇದ್ದ ಹಾಗೆ ಇದೆ. ನೀವು ಬೇಕಾದರೆ ಆರ್ಡಿನೆನ್ಸ್ ಹೊರಡಿಸಿ. But this is not the way. ನೀವು ದುಷ್ಕೃತ್ಯವೆನ್ನುವುದನ್ನು ಡಿಫೈನ್ ಮಾಡಿಲ್ಲ.

ಶ್ರೀ ಸಿ.ಎಂ.ಉದಾಸಿ: 19(ಬಿ)ಯಲ್ಲಿ ಡಿಫೈನ್ ಮಾಡಿದೆ.

ಶ್ರೀ ಹೆಚ್.ಎನ್.ನಂಜೇಗೌಡ: ನಾನು ಇದನ್ನು ಓದಿದೆ. ಒಂದನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಹೆದ್ದಾರಿಯನ್ನು ಪ್ರಯಾಣಕ್ಕೆ ಅಥವಾ ಸ್ವತ್ತಿನ ಸಾಗಣೆಗೆ ದುರ್ಗಮವಾಗಿಸುವಂಥ ಅಥವಾ ಹೆಚ್ಚು ಸುರಕ್ಷಿತವಲ್ಲದಂತೆ ಮಾಡುವ ಅಥವಾ ಹಾಗೆ ದುರ್ಗಮಗೊಳಿಸುವ ಕಾರ್ಯ ಎಂದು ಇಲ್ಲಿ ಇದೆ. ಹೀಗ ಮಾಡಿ ಒಂದು ಅಮೆಂಡ್‌ಮೆಂಟ್ ತನ್ನಿ. ಇಂತಿಂತಹ ದಾರಿಗಳಲ್ಲಿ ಮಂತ್ರಿಗಳು ಬರುತ್ತಿದ್ದರೆ ಅವರ ಕೊಲೆ ಸುಲಿಗೆಗೆ ಪ್ರಯತ್ನ ಪಟ್ಟರೆ 5 ವರ್ಷವೆಂದು ಮಾಡಿ ಹಾಳಾಗಿ ಹೋಗಲಿ. ''ರಸ್ತಾ ರೋಕೋ'' ಮಾಡುತ್ತಾರೆಂದು ಇಟ್ಟುಕೊಳ್ಳಿ. ಪ್ರಜಾಪ್ರಭುತ್ವದಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ, ''ರಸ್ತಾ ರೋಕೋ'' ಎನ್ನುವುದನ್ನು ನಾವು ಒಪ್ಪಿಕೊಂಡಿರತಕ್ಕಂತಹ ಮಾರ್ಗ ಸರಕಾರ ಮಾಡಿರತಕ್ಕಂಥದನ್ನು ಸರಿಯಲ್ಲ ಎಂದು ಹೇಳುವುದಕ್ಕೆ. ಇವರು ತಂದಿರುವುದು ಎಷ್ಟು ವ್ಯಾಪಕವಾಗಿದೆ ಎಂದರೆ ''ರಸ್ತಾ ರೋಕೋ'' ಮಾಡಿದರೂ ಕೂಡ ಅವರನ್ನು ಜೈಲಿಗೆ ಕಳುಹಿಸಬಹುದು. ನ್ಯೂಸೆನ್ಸ್ ಮಾಡಿದಾಗ ಕಳುಹಿಸಬಹುದು ಅದು ಅಲ್ಲಿರುವವರೆಗೆ, ಈ ಕಡೆ ಬಂದಾಗ ಅನ್ನಿಸುವುದಿಲ್ಲ. ಇದು ಸರಿ ಇಲ್ಲ. ಈ ಬಿಲ್ ಅನ್ನು ವಾಪಸ್ ಪಡೆಯಬೇಕು...

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): 5 ವರ್ಷ ಜೈಲಿಗೆ ಕಳುಹಿಸಬೇಕೆಂದು ಮಾನ್ಯ ಉದಾಸಿಯವರು ಹೇಳಿದ್ದಾರೆ. ಅವರಿಗೆ ಯಾವತ್ತೂ ಜೈಲಿಗೆ ಹೋದ ಅನುಭವ ಇಲ್ಲ. ತುರ್ತು ಪರಿಸ್ಥಿತಿಯಲ್ಲಿ ಜೈಲಿಗೆ ಹೋಗಲಿಲ್ಲ. ಸ್ವಾತಂತ್ರ್ಯ ಹೊರಾಟದಲ್ಲಿ ಜೈಲಿಗೆ ಹೋಗಲಿಲ್ಲ. ತುರ್ತು ಪರಿಸ್ಥಿತಿ ಕಾಲದಲ್ಲಿ ಈ ಕಡೆ ಕುಳತಿರತಕ್ಕಂತಹ ಅನೇಕ ಮುಖಂಡರುಗಳು ಆವತ್ತು ಕೇಂದ್ರ ಸರಕಾರ ಮಾಡಿದಂತಹ ಕೃತ್ಯಗಳ ವಿರುದ್ಧ ಹೋರಾಟ ಮಾಡಿ ಆ ಕಾನೂನು ಸರಿಯಲ್ಲವೆಂದು ಹೇಳಿ ಜೈಲಿಗೆ ಹೋಗಿದ್ದಾರೆ. ರಸ್ತೆ ರೋಕೋ ಮಾಡಿದರೂ ಕೂಡ ಜೈಲಿಗೆ ಹಾಕುತ್ತೀರಿ. ಬಂದ್ ಮಾಡಿದರೂ 5 ವರ್ಷ ಜೈಲಿಗೆ ಹಾಕುತ್ತೀರಿ. ಆವತ್ತು ಅದನ್ನೆಲ್ಲಾ ವಿರೋಧ ಮಾಡಿ ಜೈಲಿಗೆ ಹೋದಂತಹ ಜನ ಇವತ್ತು ಜೈಲಿಗೆ ಹೋಗುವುದಕ್ಕೆ ಕಾನೂನು ಮಾಡುತ್ತಿದ್ದೀರಿ. ಹೆದ್ದಾರಿಯಲ್ಲಿ ಬರೀ ಸುಂಕ ವಸೂಲಿ ಮಾಡುವುದಷ್ಟೆ ಅಲ್ಲ. ರಸ್ತಾ ರೋಕೋ ಬಂದ್ ಮಾಡಿದವರಿಗೆ ನಮ್ಮ ರೈತ ಸಂಘದ ಪುಟ್ಟಣ್ಣಯ್ಯನವರು ಮಂಡ್ಯದಲ್ಲಿ ಬಂದ್ ಮಾಡಿದರೆ 5 ವರ್ಷ ಜೈಲಿಗೆ ಕಳುಹಿಸಿ ಎಂದು ಹೇಳತಕ್ಕಂಥಾದ್ದು ಸರಿಯಲ್ಲ. ರಾಷ್ಟ್ರೀಯ ಹೆದ್ದಾರಿ ಎಂದರೆ

ತುಮಕೂರು ರಾಷ್ಟ್ರೀಯ ಹೆದ್ದಾರಿ ಅಲ್ಲವೇ, ಅಲ್ಲಿ ಬಂದ್ ಮಾಡುವುದಿಲ್ಲವೇ? ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇನ್ನು ನಾವು ಇದನ್ನು ಚರ್ಚೆ ಮಾಡಿಲ್ಲ. ನಂತರ ತಾವು ಉತ್ತರ ಕೊಟ್ಟರೆ ಒಳ್ಳೆಯದು.

ಶ್ರೀ ಸಿ.ಆರ್.ಸಗೀರ್ ಅಹಮದ್: ವೋಟಿಗೆ ಹಾಕಿ....

ಉಪಾಧ್ಯಕ್ಷರು: ನೀವು ಹೇಳಿದ ಹಾಗೆ ಇಲ್ಲಿ ಮಾಡುವುದಕ್ಕಾಗುವುದಿಲ್ಲ. ನಿಯಮದ ಪ್ರಕಾರ ಹೋಗಬೇಕಾಗುತ್ತದೆ. ಸಗೀರ್ ಅಹಮದ್ ಹೇಳಿದಂತೆ ಹೋಗುವುದಕ್ಕಾಗುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾವು ಇದನ್ನು ಒಪ್ಪುವುದಕ್ಕಾಗುವುದಿಲ್ಲ. ಇದರಲ್ಲಿ ಏನು ಇದೆ ಹೇಳಿ ಎಂದು ಹೇಳಿದ ಮೇಲೆ ನಾನು ಅಬ್ಜೆಕ್ಷನ್ ತೆಗೆದೆ. ಎಲ್ಲಾ ಗಲಾಟೆ ಶುರುವಾಯಿತು. ಮಾನ್ಯ ಬೈರೇಗೌಡರವರಿಗೆ ಅರ್ಧ ಮನಸ್ಸು ಈ ಕಡೆ ಇನ್ನು ಅರ್ಧ ಮನಸ್ಸು ಆ ಕಡೆ. ನೀವು ಸರಿಯಾಗಿ ಇದನ್ನು ನೋಡಿಲ್ಲ. ಅದನ್ನು ನೋಡಿದ್ದರೆ ನೀವು ಹೇಳುತ್ತಿದ್ದಿರಿ. ಮಾನ್ಯ ನಂಜೇಗೌಡರು ಇದರಲ್ಲಿ ಇದ್ದುದ್ದನ್ನು ಆಗಲೇ ಓದಿದರು. ಕರ್ನಾಟಕ ಹೆದ್ದಾರಿಗಳ ಅಧಿನಿಯಮ 1964 ಕರ್ನಾಟಕ ಅಧಿನಿಯಮ (44) ಅದರ ಭಾಗವನ್ನು ಅವರು ಸ್ಪಷ್ಟವಾಗಿ ಓದಿದರು. ಅದರಲ್ಲಿ ಯಾವುದೂ ಕೂಡ ಇಲ್ಲ. ಅದರಲ್ಲಿ ಕೇವಲ 15 ರೂಪಾಯಿ ಸುಂಕವನ್ನು ವಸೂಲು ಮಾಡುವುದನ್ನು ಬಿಟ್ಟರೆ ಬೇರೆ ಯಾವುದೂ ಇಲ್ಲ. ಅದಕ್ಕೆ ತಿದ್ದುಪಡಿ ತಂದು ತಮ್ಮ ಅಧ್ಯಾಯ 3 (ಎ) ಒಪ್ಪಂದ ಮಾಡಿಕೊಳ್ಳಲು ಅಧಿಕಾರ ಮತ್ತು ದುರ್ವರ್ತನೆಗಾಗಿ ದಂಡ. ಹೆದ್ದಾರಿಗಳ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಒಪ್ಪಂದ ಮಾಡಿಕೊಳ್ಳಲು ರಾಜ್ಯ ಸರಕಾರಕ್ಕೆ ಅಧಿಕಾರ. ಈ ಅಧಿನಿಯಮದಲ್ಲಿ ಏನೇ ಇದ್ದರೂ ಹೆದ್ದಾರಿಯ ಪೂರ್ಣ ಅಥವಾ ಭಾಗಶಃ ಅಭಿವೃದ್ಧಿ ಮತ್ತು ನಿರ್ವಹಣೆಗೆ ಸಂಬಂಧಪಟ್ಟಂತ ರಾಜ್ಯ ಸರಕಾರವು ಯಾವೊಬ್ಬ ವ್ಯಕ್ತಿಯೊಂದಿಗೆ ಒಪ್ಪಂದ ಮಾಡಿಕೊಳ್ಳಬಹುದು. ಆ ಅಧಿಕಾರವನ್ನು ಅದರಲ್ಲೇ ತೆಗೆದುಕೊಳ್ಳುತ್ತಿದ್ದಾರೆ ನಾಳೆ ಇಲ್ಲಿ ನಾವು ಯಾರೂ ಕೇಳುವ ಹಾಗಿಲ್ಲ. ಯಾರ ಜೊತೆಯಲ್ಲಿ ಕೂಡ ಒಪ್ಪಂದ ಮಾಡಿಕೊಳ್ಳಬಹುದು. ನಿಮ್ಮ ಅಗ್ರಿಮೆಂಟ್ ಏನು ಎಂದು ಕೇಳುವ ಹಾಗಿಲ್ಲ. ಕಾನೂನಿನಲ್ಲೇ ಪವರ್ಸ್ ಕೊಟ್ಟ ಮೇಲೆ ನಾಳೆ ಯಾರೂ ಕೂಡ ಇದರಲ್ಲಿ ಹೆಚ್ಚಿನ ಪ್ರಶ್ನೆ ಮಾಡತಕ್ಕಂಥಾದ್ದು ಇಲ್ಲ. ನಮ್ಮ ಶ್ರೀಮಾನ್ ನಂಜೇಗೌಡರು ಏನು ಓದಿದರು ಅದಕ್ಕೆ ಇದಕ್ಕೆ ಏನು ವ್ಯತ್ಯಾಸ ಅನ್ನತಕ್ಕಂಥದ್ದು ತಾವು ಸ್ವಲ್ಪ ನೋಡಿಕೊಳ್ಳಬಹುದು. 48(ಎ) ಪ್ರಕರಣದಲ್ಲಿ ಏನೇ ಇದ್ದರೂ ಒಂದನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಯಾವೊಬ್ಬ ವ್ಯಕ್ತಿ ತಾನು ಸಲ್ಲಿಸಿದ ಸೇವೆಗಳು, ಅದರ ಕನ್‌ಸ್ಟ್ರಕ್ಷನ್ ಇರಬಹುದು ಅಥವಾ ನೀಡಿದ ಸೌಲಭ್ಯಗಳಿಗೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರವು ಅಂತಹ ಹೆದ್ದಾರಿಯ ಪೂರ್ಣ ಅಥವಾ ಭಾಗಶಃ ನಿರ್ಮಾಣ, ನಿರ್ವಹಣೆ, ಮೇಲ್ವಿಚಾರಣೆ ಮತ್ತು ಪರಿವರ್ತನೆಗೆ

ತಗಲುವ ವೆಚ್ಚ ಹೂಡಿದ ಬಂಡವಾಳದ ಮೇಲಿನ ಬಡ್ಡಿ, ಸೂಕ್ತ ಉತ್ಪತ್ತಿ ವಾಹನ ಸಂಚಾರದ ಸಾಂದ್ರತೆ ಮತ್ತು ಅಂತಹ ಒಪ್ಪಂದಗಳ ಅವಧಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸಿದ ಮೂಲಕ ನಿರ್ದಿಷ್ಟಪಡಿಸಬಹುದಾದ ದರದ ಪ್ರಕಾರ ಶುಲ್ಕವನ್ನು ವಸೂಲಿ ಮಾಡಬಹುದು. ಮತ್ತು ಇಟ್ಟುಕೊಳ್ಳಬಹುದು. ಅಲ್ಲಿ 15ರೂಪಾಯಿ ನಿಗದಿತವಾಗಿ ಹಣ ಇತ್ತು, ಇಲ್ಲಿ ಅದು ಇಲ್ಲ. ಎಷ್ಟು ಬೇಕು ಅಷ್ಟು ಅವರು ಇಲ್ಲಿ ಡಿಸ್‌ಕ್ರಿಷನ್ ಯ್ಯೂಸ್ ಮಾಡಬಹುದು. ನಾಳೆ ಅಧ್ಯಕ್ಷರೆ, ನೀವು ನ್ಯಾಷನಲ್ ಹೈವೆ ಮೇಲೆ ಹೋಗುವವರು ಬೆಂಗಳೂರಿನಿಂದ ಪೂನಾ ಈ ಹೆದ್ದಾರಿಯನ್ನು ನಾಳೆ ಅವರು ರಿಪೇರಿ ಮಾಡುವುದಕ್ಕೆ ಯಾರಿಗಾದರೂ ಕೊಟ್ಟರೆ ಅಥವಾ ಇದನ್ನು ಮೇನ್‌ಟೇನ್ ಮಾಡಿ ಎಂದು ಯಾರಿಗಾದರೂ ವಹಿಸಿಕೊಟ್ಟರೆ ನ್ಯಾಚುರಲಿ ಅದರ ಮೇಲೆ ತನ್ನ ಮನಬಂದಂತೆ ಅವನು ಎಷ್ಟನ್ನು ಕೂಡ ಹಾಕಬಹುದು. ಏಕೆಂದರೆ ಕಾನೂನಿನಲ್ಲಿ ಇವತ್ತು ಅದಕ್ಕೆ ಲಿಮಿಟ್ ಇಲ್ಲ. ಹಿಂದಕ್ಕೆ ಕಾನೂನಿನಲ್ಲಿ ಲಿಮಿಟ್ ಇತ್ತು 15 ರೂಪಾಯಿಗಳೆಂದು, ಈಗ ಅದು ಲಿಮಿಟ್ ಇಲ್ಲ. ಅದನ್ನು ತೆಗೆದುಕೊಂಡು ನಮ್ಮ ಪರ್ವ್ಯೂನಿಂದ ಅವರು ಫುಲ್ ಪವರ್ ತೆಗೆದುಕೊಂಡು ರೂಲ್ಸ್ ಪ್ರಕಾರ ಅಥವಾ ಒಂದು ಸರ್ಕಾರಿ ಜಿ.ಓ.ಪ್ರಕಾರ ಎಷ್ಟು ಹಣ ಆ ರಿಪೇರಿ ಮಾಡಿದಂತವನಿಗೆ, ಮೇನ್‌ಟೇನ್ ಮಾಡಿದಂತವನಿಗೆ, ಕನ್‌ಸ್ಟ್ರಕ್ಟ್ ಮಾಡಿದಂತವನಿಗೆ ವಿಧಿಸತಕ್ಕಂಥ ಅಧಿಕಾರವನ್ನು ಇವರು ಅವರು ಒಂದಾಗಿ ಕೊಡುವುದಕ್ಕೆ ಇದರಲ್ಲಿ ಅವಕಾಶ ಇದೆ. ಇದೆಯೋ ಇಲ್ಲವೋ ತಾವೇ ನೋಡಿ. ಎರಡನೆಯದು 3:1 ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಒಬ್ಬ ವ್ಯಕ್ತಿ ಅಂತಹ ಒಪ್ಪಂದದ ವಿಷಯವಾಗುವ ಹೆದ್ದಾರಿಯ ಸೂಕ್ತ ನಿರ್ವಹಣೆಗಾಗಿ ಅದರಲ್ಲಿನ ವಾಹನ ಸಂಚಾರವನ್ನು 1988ರ ಮೋಟಾರು ವಾಹನ ಅಧಿನಿಯಮ 1989ಕ್ಕೆ ಕೇಂದ್ರ ಅಧಿನಿಯಮ 59 ಅಧ್ಯಾಯ 8ರಲ್ಲಿರುವ ಉಪಬಂಧಗಳಿಗೆ ಅನುಸಾರವಾಗಿ ವಿನಿಮಯಿಸಲು ಮತ್ತು ನಿಯಂತ್ರಿಸಲು ಅಧಿಕಾರ ಹಂಚತಕ್ಕದ್ದು. ಆಮೇಲೆ 9(ಬಿ)ಯಲ್ಲಿ ಫುಲ್ ಬ್ಲಾಂಕೆಟ್ ಪವರ್ ತೆಗೆದುಕೊಂಡಿದ್ದಾರೆ. ಹೆದ್ದಾರಿಯಲ್ಲಿ ಹಾನಿ ಉಂಟು ಮಾಡುವ ದುಷ್ಕೃತ್ಯಕ್ಕೆ ದಂಡನೆ.. ಈ ಪವರ್ ಕೂಡ ಎಲ್ಲವನ್ನೂ ಕೊಡುತ್ತಾರೆ. ಸ್ವಲ್ಪ ತಡೆದುಕೊಳ್ಳಿ ಸರ್, ನೀವು ಎಲ್ಲಾ ಸೆಂಟ್ರಲ್ ಆ್ಯಕ್ಟ್ ಪ್ರಕಾರ ಮಾಡಿಕೊಳ್ಳಿ, ನಾವು ಬೇಡ ಅನ್ನುವುದಿಲ್ಲ. ನಾಳೆ ನಿಮಗೆ ಬೆಂಗಳೂರಿನಿಂದ, ಮುಂದೆ ಮೈಸೂರಿನಿಂದ ಊಟಿಗೆ ನ್ಯಾಷನಲ್ ಹೈವೆ ಆಗುತ್ತದಲ್ಲಾ, ಆವಾಗ ನಿಮ್ಮ ಜನ ಹಿಡಿದುಕೊಂಡರೆ ಬಿಡಿಸಿರಿ ಎಂದು ನಿಮ್ಮ ಹತ್ತಿರ ಆವಾಗ ಬರುತ್ತಾರೆ ಆವಾಗ ನಿಮಗೆ ಗೊತ್ತಾಗುತ್ತದೆ. ಈ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೋ ಹೆದ್ದಾರಿಯಲ್ಲಿ ಪ್ರಯಾಣಕ್ಕೆ ಅಥವಾ ಸಾಗಾಣಿಕೆಗೆ ದುರ್ಗಮವಾಗಿರುವ ಅಥವಾ ಹೆಚ್ಚು ಸುರಕ್ಷಿತವಲ್ಲದೆ ಮಾಡುವ ಮತ್ತು ಹಾಗೆ ದುರ್ಗಮಗೊಳಿಸುವುದರೊಳಗೆ ಅಥವಾ ಸುರಕ್ಷಿತವಲ್ಲದ ಹಾಗೆ ಮಾಡುವ ಸಂಭವ ಇದೆ ಎಂದು ನನಗೆ ತಿಳಿದಿರುವ ಯಾವುದೇ ಕಾರ್ಯದ ಮೂಲಕ ದುಷ್ಕೃತ್ಯ ಮಾಡುವ ಪ್ರತಿಯೊಬ್ಬ ವ್ಯಕ್ತಿಗೂ 5 ವರ್ಷದವರೆಗೆ ಅವಧಿ ಇದು ಎಲ್ಲಾ ಕೂಡ

ಮುಂದಿದೆ ಮತ್ತು ಎಲ್ಲಾ ರೀತಿಯಲ್ಲಿ ಇಲ್ಲಿ ಮುಂದೆ ಏನು ಮಾಡಬೇಕು ಅಂದರೆ 5 ವರ್ಷ ಜೈಲಿಗೆ ಹಾಕಬೇಕು ಎನ್ನುವಂತದ್ದು ಕೂಡ ಇದೆ. ಅಂದರೆ ತಮಗೆ ಗೊತ್ತಿದೆ ಅನೇಕ ಅಜಿಟೇಷನ್ಸ್ ಆಗುತ್ತವೆ ನೀವು ನೋಡಿದಿರಿ ಹೆದ್ದಾರಿಯಲ್ಲಿ ಅನೇಕ ಕಡೆ ವಾಹನ ಹೋಗಬಾರದೆಂದು ಕುಳಿತಿರುತ್ತಾರೆ. ಅದು ಮಾಡಬೇಕು ಅನ್ನತಕ್ಕಂಥ ನಮ್ಮ ಉದ್ದೇಶ ಇಲ್ಲ, ನಿಮ್ಮದೂ ಇರುವುದಿಲ್ಲ. ಅನೇಕ ಸಾರಿ ಹಳ್ಳಿಯ ಜನ ತಿಳಿಯದೆ ಇರತಕ್ಕಂಥ ರೀತಿಯಲ್ಲಿ ಇದು ಮಾಡಿದರೆ ಸರಿ, ರೈಲು ರೋಕೋ ಎಂದು ಮಾಡುತ್ತಾರೆ, ತಮಗೆ ಗೊತ್ತಿದೆ. ನಾವೆ ಅನೇಕ ಸಾರಿ ಮಾಡಿದ್ದೇವಲ್ಲಾ ಕೇಂದ್ರ ಸಮಸ್ಯೆಗಳು ಏನು ಇದ್ದರೂ ರೈಲು ರೋಕೋ ಮಾಡುತ್ತೇವೆ ಅಥವಾ ಪೆಟ್ರೋಲ್ ಬಂಕ್‌ಗಳನ್ನು ಕ್ಲೋಸ್ ಮಾಡುತ್ತೇವೆ. ಪೋಸ್ಟ್ ಆಫೀಸ್ ಮೇಲೆ ಧಾಳಿ ಮಾಡುತ್ತೇವೆ. ಕೇಂದ್ರ ಸರ್ಕಾರದ ಯಾವ ಯಾವ ಇಲಾಖೆಗಳು ಇರುತ್ತವೆ ಅದು ಟಾರ್ಗೆಟ್ ಆಗುತ್ತದೆ; ಸ್ಟೇಟ್ ಗೌರ್ನ್‌ಮೆಂಟ್ ಅಂದಾಗ ಅನೇಕ ಸಾರಿ ಇಂತಹವುಗಳು ನಡೆಯುತ್ತಿರುತ್ತವೆ, ಅದನ್ನು ನೀವು ಒಮ್ಮೆ 5 ವರ್ಷದ ಸಜಾ ನಿಮ್ಮ ಅಧಿಕಾರ ಕೈಯಲ್ಲಿ ತೆಗೆದುಕೊಂಡು ಎಂಟೈರ್ ಪವರ್ ಆ ಒಬ್ಬ ವ್ಯಕ್ತಿ ಯಾರೋ ಒಬ್ಬ ದುಡ್ಡು ಕಾಸು ಹಾಕಿ ಒಂದು ರೋಡ್ ಮಾಡಿದ್ದಾನೆ, ಅಥವಾ ಮೈನ್‌ಟೇನ್ ಮಾಡುತ್ತಾನೆ ಅನ್ನತಕ್ಕಂಥದ್ದು ಇದ್ದರೆ ಅಂತವರಿಗೆ ನಾವು ಅಧಿಕಾರ ಕೊಡತಕ್ಕಂಥ ಹಕ್ಕನ್ನು ಸರ್ಕಾರ ಇಟ್ಟುಕೊಂಡು ಗೌರ್ನಮೆಂಟ್ ಆರ್ಡರ್ ಪ್ರಕಾರ ಅಥವಾ ರೂಲ್ಸ್ ಪ್ರಕಾರ ನೀವು ಕೊಟ್ಟರೆ ಖಂಡಿತವಾಗಿ ದೊಡ್ಡ ಅನ್ಯಾಯವಾಗುತ್ತದೆ. ಇದು ಮಿಸ್‌ಯೂಸ್ ಆಗತಕ್ಕಂಥ ಸಾಧ್ಯತೆ ನೂರಕ್ಕೆ ನೂರು ಇದೆ ಅದು ನಾಳೆ ಯಾರೋ ಇದರಲ್ಲಿ ಹಣವನ್ನು ಒದಗಿಸಿ ತನ್ನ ಇಚ್ಛೆ ಬಂದಂತೆ ಟ್ಯಾಕ್ಸ್ ಹಾಕುತ್ತಾನೆ. ಅವನಿಗೆ ನಾವು ಎಲ್ಲರೂ ಬಲಿ ಆಗಬೇಕಾಗುತ್ತದೆ. ನೀವು ಇರಬಹುದು, ಹೋಗಬಹುದು ಮತ್ತು ನಾಳೆ ಯಾರಾದರೂ ಬರಬಹುದು ಕಾನೂನು ಮಾತ್ರ ಶಾಶ್ವತ ಇರುತ್ತದೆ. ಆವಾಗ ತೊಂದರೆಗಳಾದರೂ ಆವಾಗ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಅಟಲೀಸ್ಟ್ ಹಿಂದೆ ಏನು ಇತ್ತು 15 ರೂಪಾಯಿ ಇದ್ದಲ್ಲಿ ನೀವು ಬೇಕಾದರೆ 20 ರಿಂದ 30 ರೂಪಾಯಿ ಇಟ್ಟುಕೊಳ್ಳಿ ಅಡ್ಡಿಯಿಲ್ಲ. ಆದರೆ ಈ ರೀತಿಯಾದ ಅಥವಾ ಸರ್ಕಾರ ಇದರ ಪ್ರಕಾರ ಹಣ ಹೆಚ್ಚು ಕಡಿಮೆ ಮಾಡುವುದಕ್ಕೆ ಮತ್ತು ಅದನ್ನು ಮೈನ್‌ಟೇನ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದರೆ ಇಂಪ್ರಿಸಿನ್‌ಮೆಂಟ್ ಮಾಡತಕ್ಕಂಥದ್ದು ಸರಿಯಲ್ಲ. ನಿಮಗೆ ಗೊತ್ತಿದೆ ಅಸಾಲ್ಟ್ ಮಾಡಿದರೆ ಅಥವಾ 323 ರಲ್ಲಿ ಕೂಡ ಇದರಷ್ಟು ದೊಡ್ಡ ಶಿಕ್ಷೆ ಇಲ್ಲ. ಮರ್ಡರ್ ಮಾಡಿದರೆ 14 ವರ್ಷ, ಈ ರಸ್ತೆಯಲ್ಲಿ ಕುಳಿತವನಿಗೆ 5 ವರ್ಷ; ಇದು ಏನು ಅಧ್ಯಕ್ಷರೇ? ಅದಕ್ಕಾಗಿ ದಯಮಾಡಿ ಕೇಳಿ; ಆತ ಪೆಗ್ಗು ಹೊಡೆದವನು ಎಂದು ತಿಳಿದುಕೊಳ್ಳಿ ಅಥವಾ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಎಮರ್‌ಜೆನ್ಸಿನಲ್ಲಿ ಪ್ರೊಟೆಸ್ಟ್ ಮಾಡುವುದಕ್ಕೆ ಶಿವಮೊಗ್ಗಕ್ಕೆ ಹೋಗುತಕ್ಕಂತ ಟ್ರೈನಿಗೆ ಅಥವಾ ಸೇತುವೆಗೆ ಬಾಂಬ್ ಇಟ್ಟಿರತಕ್ಕಂಥದ್ದು ಮಾಡಿದರಲ್ಲಾ ಅಂತವುಗಳನ್ನು ಏನು ಮಾಡುತ್ತಾರೆ, ಅವರಿಗೆ ಶಿಕ್ಷೆಯಾಗುವುದಿಲ್ಲ. ಪಾಪ, ರೈತರು ಅನೇಕ ಜನ ತಮ್ಮ ಗೋಳನ್ನು ಹೇಳಿಕೊಳ್ಳುವುದಕ್ಕೋಸ್ಕರ ಈರುಳ್ಳಿ

ತಂದು ಆಮೇಲೆ ನಿಮ್ಮ ಆಲುಗಡ್ಡೆ ತಂದು ಬಿಸಾಕಿರತಕ್ಕಂಥವರಿಗೆ, ಸ್ಟ್ರೈಕ್ ಮಾಡತಕ್ಕಂಥವರಿಗೆ ಹೋಗತಕ್ಕಂಥ ವಾಹನಗಳನ್ನು ನಿಲ್ಲಿಸತಕ್ಕಂಥವರಿಗೆ ಟೊಮೆಟೋಗೆ ಹೆಚ್ಚು ಪ್ರೈಸ್ ಕೊಡಿ ಎಂದು ಹೆದ್ದಾರಿಯಲ್ಲಿ ನಿಲ್ಲತಕ್ಕಂಥ ಎಲ್ಲರಿಗೂ ತೊಂದರೆ ಕೊಟ್ಟರೆ ಇದು ಹೇಗೆ? ಅದಕ್ಕಾಗಿ ದಯಮಾಡಿ ವಾಪಸ್ಸು ತೆಗೆದುಕೊಳ್ಳಿ ಇಲ್ಲದಿದ್ದರೆ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಡಿ, ಅಲ್ಲಿ ಎಲ್ಲ ವಿಚಾರ ಬರುತ್ತದೆ, ಸೂಕ್ತ ಅನ್ನತಕ್ಕಂಥದ್ದು ಕಂಡು ಬಂದರೆ ಬೇಕಾದರೆ ಪುನಃ ಈ ಸದನದ ಮುಂದೆ ಬರಲಿ.

+ ಶ್ರೀ ವಾಟಾಳ್ ನಾಗರಾಜ್: ಐದು ವರ್ಷ ಎಂದು ಇವರು ಮಾಡಿದ್ದಾರೆ ಇದರ ಉದ್ದೇಶ ಏನು? ನನಗೆ ಅನ್ನಿಸುತ್ತದೆ, ಇದರ ಶಿಲ್ಪಿ ಯಾರು ಎಂದು. ಈ ಮಸೂದೆಯನ್ನು ತಯಾರು ಮಾಡಿದ ಶಿಲ್ಪಿ ಬೇಕಲ್ಲಾ ಅವರ ಉದ್ದೇಶ ಈಗ ಗೊತ್ತಾಯಿತು. ನಾನು ಸುಮ್ಮನೆ ಕುಳಿತು ಲೆಕ್ಕಾಚಾರ ಹಾಕಿದೆ ಈ ಮಸೂದೆ ಏನಾದರೂ ಕಾರ್ಯಗತವಾದರೆ ಕನಿಷ್ಟ ಒಂದು ದಿನಕ್ಕೆ ನೀವು 100 ಜನರ ಮೇಲೆ ಕೇಸ್ ಹಾಕುತ್ತೀರಿ, ಕನಿಷ್ಟ 100 ಜನ ಸಿಗುತ್ತಾರೆ. ಆ 100 ಜನ ಪ್ರತಿದಿನ ತೆಗೆದುಕೊಂಡು ಹೋಗಿ ಅವರನ್ನು ಯಾವ ನ್ಯಾಯಾಲಯದ ಮುಂದೆ ನಿಲ್ಲಿಸುತ್ತೀರಿ? ಇದಕ್ಕೆ ಒಂದು ವಿಶೇಷ ನ್ಯಾಯಾಲಯ ಈ ಜನರನ್ನು ತುಂಬುವುದಕ್ಕೆ ಒಂದು ವಿಶೇಷ ಜೈಲು ಎಲ್ಲಾದರೂ ಉಂಟೆ ಇದು ಇದಕ್ಕೆ ಬೆಲೆ ಇದೆಯಾ? ಇದಕ್ಕೇನಾದರೂ ಉಂಟೆ. ಯಾರ ಮೇಲೆ ಇದು 5 ವರ್ಷ ಎಂದು ಇದೆಯಲ್ಲಾ ಇದು ಏನಾದರೂ ತಪ್ಪಾಗಿದೆಯಾ ಅಥವಾ ಯಾರು ಇದನ್ನು ಮಾಡಿದರು, ಯಾರಿಗೋಸ್ಕರ ಯಾರ ಹಿತಕ್ಕೋಸ್ಕರ ಇದನ್ನು ಮಾಡುತ್ತಿದ್ದೀರಿ. ನೀವು ಆ ಹೆದ್ದಾರಿಯನ್ನು ಮಾಡುವಾಗ ನಿಮ್ಮ ಅಗ್ರಿಮೆಂಟ್ ಆಗುವಾಗ ಈ ಒಪ್ಪಂದವೇನಾದರೂ ನೀವು ಮಾಡಿಕೊಂಡಿದ್ದೀರಾ? ನಿಮ್ಮ ರಸ್ತೆಯನ್ನು ಕೆಡಿಸಿದ ರೀತಿ ನಾವು ಎಲ್ಲವನ್ನೂ ನೋಡಿಕೊಳ್ಳುತ್ತೇವೆ ಯಾರೂ ಏನೂ ಮಾಡುವುದಿಲ್ಲ ಅಲ್ಲಿ ಉಸಿರಾಡುವಂತೆ ಇಲ್ಲ, ಮೂತ್ರ ವಿಸರ್ಜನೆ ಮಾಡುವಂತೆ ಇಲ್ಲ ತಿರುಗಾಡುವಂತೆ ಇಲ್ಲ ಇದಕ್ಕೆ ನೀವು ಒಪ್ಪಂದವೇನಾದರೂ ಮಾಡಿಕೊಂಡಿದ್ದೀರಾ? ಇದು ಏನು ಹುಡುಗಾಟ, ಇದು ಎಲ್ಲಾದರೂ ಉಂಟೆ? ಮಾನ್ಯ ಅಧ್ಯಕ್ಷರೆ, ನಾಳೆ ಅನೇಕ ಸತ್ಯಾಗ್ರಹಗಳು ನಡೆಯುತ್ತದೆ ಮಂಡ್ಯದಲ್ಲಿ ಬಹಳಷ್ಟು, ರೈತರ ಕಬ್ಬಿನ ಬೆಲೆ ಇಳಿದಾಗ ಅನೇಕ ಸಂದರ್ಭ ಬಂದಾಗ ತಮಗೆ ಇದರ ಅಪಾಯ ಬಹಳ ಒದಗತಕ್ಕಂಥದ್ದು. ಯಾಕೆ ತಾವು ಇದನ್ನು ಒಪ್ಪಿಕೊಂಡು ಕುಳಿತುಕೊಂಡಿದ್ದೀರಿ? ಹಳೆಯ ರೋಡ್ ಹೊಸ ರೋಡ್ ಎಂದು ಅಲ್ಲ; ನಾನು ಟೋಟಲ್ಲಾಗಿ ನೇರವಾಗಿ ಹೇಳುತ್ತೇನೆ, ಬಹಳ ಅಪಾಯಕಾರಿಯಾದಂಥ ಮಸೂದೆ. ಆದ್ದರಿಂದ ದಯಮಾಡಿ ಹೇಳುತ್ತೇನೆ ನನಗೇನಿಲ್ಲ, ನಿಮಗೆ ಅಪಾಯ. ಬೇರೆ ಯಾರಿಗೂ ಇಲ್ಲ. ನಾನು ಉದಾಸಿಯವರಿಗೆ ಹೇಳುತ್ತೇನೆ ತಾವು ಏನೂ ರಸ್ತೆಯಲ್ಲಿ ಓಡಾಡುವುದಿಲ್ಲ ಬಿಡಿ, ನಿಮಗೆ ಅನುಭವ ಇಲ್ಲ, ರಸ್ತೆಯಲ್ಲಿ ಓಡಾಡುವುದಿಲ್ಲ ಆ ಪ್ರಶ್ನೆ ಬೇರೆ. ತಮಗೂ ಇದು ಒಪ್ಪಿಗೆಯಾಗುವುದಿಲ್ಲ ನಾನು ತಿಳಿದುಕೊಂಡಿರುವಂತೆ. ದಯಮಾಡಿ ತಾವು ಇದಕ್ಕೆ ಅವಕಾಶ ಕೊಡಬೇಡಿ, ಇದು ನಿಜವಾಗಿಯೂ

ಪ್ರಗತಿದಾಯಕವಾದಂಥ ಮಸೂದೆ ಅಲ್ಲ. ಇದು ನಿಜವಾಗಿಯೂ ಕೆಟ್ಟ ರೀತಿಯಾದಂಥ ಮಸೂದೆ. ಇತ್ತೀಚಿನ ದಿನಗಳಲ್ಲಿ ಈ ಶಾಸನಸಭೆಯಲ್ಲಿ ಬಂದಿರತಕ್ಕಂಥ ಮಸೂದೆಯಲ್ಲಿ ಇಂತಹ ಮಸೂದೆ ಬಹಳ ಕೆಟ್ಟದ್ದು, ಅದು ಸಮಾಜವಾದದ ಸಿದ್ಧಾಂತವನ್ನು ಹೊಂದಿರತಕ್ಕಂಥ ಜೆ.ಹೆಚ್.ಪಟೇಲರ ಸರ್ಕಾರದಲ್ಲಿ ಇಂತಹ ಒಂದು ಮಸೂದೆಯನ್ನು ನೀವು ತರುತ್ತಿದ್ದೀರಲ್ಲಾ ಇದು ನಿಜವಾಗಲೂ ಒಳ್ಳೆಯ ಲಕ್ಷಣವಲ್ಲ. ಒಳ್ಳೆಯ ರೀತಿ ಅಲ್ಲ ಅನ್ನತಕ್ಕಂಥದ್ದನ್ನು ಹೇಳುತ್ತೇವೆ. ನೀವು ಹೇಗೂ ಒತ್ತಾಯ ಮಾಡಿ ತರುವುದಾದರೆ ನಾವು ತೀವ್ರವಾದ ಪ್ರತಿಭಟನೆ ಮಾಡತಕ್ಕಂಥದ್ದು ಮತ್ತೊಂದು ತಮಗೆ ಬೆಂಗಳೂರು ಮೈಸೂರು ಹೆದ್ದಾರಿ ನಮಗಂತೂ ಬೇಕಾಗಿಲ್ಲ. ನಾವು ಜನಸಾಮಾನ್ಯರು ನಮಗೆ ಯಾರಿಗೆ ಬೇಕಾದರೆ ಸಾಮಾನ್ಯ ಜನರಿಗೆ ಬೇಕಾಗಿಲ್ಲ. ನಾನು ತೀವ್ರವಾಗಿ ವಿರೋಧಿಸುತ್ತೇನೆ, ಈ ಸದನ ಮುಗಿದ ನಂತರ ಮೈಸೂರಿನಿಂದ ಬೆಂಗಳೂರಿನವರೆಗೆ ನಿರಂತರವಾದ ಚಳುವಳಿಯನ್ನು ಮಾಡುತ್ತೇವೆ ಆ ರಸ್ತೆ ನಮಗೆ ಬೇಡವೆಂದು, ಆ ರಸ್ತೆ ನಮಗ ಬೇಕಾಗಿಲ್ಲ ಅದು ಬಡವರ ರಸ್ತೆ ಅಲ್ಲ ಶ್ರೀಮಂತರಿಗಾಗಿ ಯಾರೋ ಒಬ್ಬರಿಗೆ ದೊಡ್ಡ ದೊಡ್ಡ ಶ್ರೀಮಂತರಿಗಾಗಿ ಇರುವ ರಸ್ತೆ ಬಡವರಿಗಾಗಿ ಅಲ್ಲ. ಬೆಂಜ್ ಕಾರುಗಳು ಓಡಾಡುವಂಥ ರಸ್ತೆ ಹೊರತು ಸಾಮಾನ್ಯ ಜಟಕಾ ಗಾಡಿಯಾಗಲಿ ಎತ್ತಿನ ಗಾಡಿಯಾಗಲಿ ಓಡಾಡತಕ್ಕಂಥ ರೈತರ ರಸ್ತೆ ಅಲ್ಲ. ಆದ್ದರಿಂದ ಈ ಶ್ರೀಮಂತರ ರಸ್ತೆಯನ್ನು ವಿರೋಧ ಮಾಡತಕ್ಕಂಥದ್ದು, ನಾವು ಈ ಅಧಿವೇಶನ ಮುಗಿದ ನಂತರ ನಿರಂತರವಾದ ಚಳುವಳಿಯನ್ನು ಮಾಡುತ್ತೇವೆ.

ಉಪಾಧ್ಯಕ್ಷರು: ಮಾನ್ಯ ಸಗೀರ್‌ರವರೇ, ನಿಮ್ಮ ಲೀಡರ್ ನಿಂತಿದ್ದಾರೆ, ನೀವು ಅಷ್ಟು ರೆಸ್ಪೆಕ್ಟ್ ಕೊಡುವುದಿಲ್ಲವೇ? ಮೊಯ್ಲಿಯವರು ಹಿಂದಿನ ಮುಖ್ಯಮಂತ್ರಿಗಳು ಅವರು.

ಶ್ರೀ ಸಿ.ಆರ್.ಸಗೀರ್ ಅಹಮದ್: ಅವರು ಎತ್ತಿದಂಥ ವಿಚಾರ ಏನೆಂದರೆ 'Tresspassers will be prosecuted. ಅದೆಲ್ಲಾ ಆಗಿದೆ. ಈಗ ರಾಷ್ಟ್ರೀಯ ಹೆದ್ದಾರಿ ಮೇಲೆ ಹೋಗುವ ಜನರ ಮೇಲೆ ದಂಡವನ್ನು ಹಾಕುತ್ತಾರೆ ಎಂದರೆ ತಮಗೂ ಆಯಿತು. ಉಪಾಧ್ಯಕ್ಷರೇ, ತಮ್ಮ ಮೇಲೆ ಏನಾದರೂ ಕೋಪ ಇದ್ದು ಉಪಾಧ್ಯಕ್ಷರ ಕಾರನ್ನು ಹಿಡಿದುಕೊಂಡು ದಂಡ ವಿಧಿಸಿದರೆ ಹೇಗೆ?

ಶ್ರೀ ಹೆಚ್.ಶಿವಪ್ಪ: ಮಾನ್ಯ ಉಪಾಧ್ಯಕ್ಷರೇ, ನೀವು ಯಾವಾಗಲೂ ಸಗೀರ್ ಅಹಮದ್ ಹೇಳಿದಂತೆ ಕೇಳಬೇಕು ಅಷ್ಟೇ.

ಉಪಾಧ್ಯಕ್ಷರು: ಯಾರೂ ಹೇಳಿದಂತೆ ಕೇಳುವುದಕ್ಕೆ ನಾನು ಇಲ್ಲಿಗೆ ಬಂದಿಲ್ಲ. ಇಲ್ಲಿ ಸದನದಲ್ಲಿ ನಿಯಮಾವಳಿಗಳಿವೆ. ಆ ನಿಯಮಗಳ ಪ್ರಕಾರ ನಡೆದುಕೊಳ್ಳುತ್ತೇನೆ.

+ ಶ್ರೀ ಎಂ.ವೀರಪ್ಪಮೊಯಿಲಿ (ಕಾರ್ಕಳ): ಮಾನ್ಯ ಉಪಾಧ್ಯಕ್ಷರೇ, ಈಗ ಈ ಒಂದು ವಿಧೇಯಕ ಏನು ಈ ಸದನದ ಮುಂದೆ ಮಾನ್ಯ ಸಚಿವರು ತಂದಿದ್ದಾರೆ, ಇದು ಬಹಳ

ಅವಸರ ಅವಸರವಾಗಿ ತಂದಿದ್ದಾರೆ. ಸರಿಯಾದಂಥ ವಿವೇಚನೆಯಿಂದ ತಂದಿಲ್ಲ ಎನ್ನುವುದಕ್ಕೆ ಇಲ್ಲಿ ಸರ್ಕ್ಯುಲೇಟ್ ಮಾಡಿದಂಥ ಮೂಲ ತಿದ್ದುಪಡಿ, ತಿದ್ದುಪಡಿಯ ಮೇಲೆ ಇನ್ನೊಂದು ತಿದ್ದುಪಡಿ ಅದಕ್ಕಿಂತಲೂ ಜಾಸ್ತಿಯಾಗಿದೆ. ತಾವು ಇನ್ನೊಂದು ತಿದ್ದುಪಡಿಯನ್ನು ತಂದಿರಲ್ಲಾ, ತಿದ್ದುಪಡಿ ಮೇಲೆ ಅದರ ಮೇಲೊಂದು ತಿದ್ದುಪಡಿ ತಂದಿದ್ದಾರೆ, ಅದು ಇದಕ್ಕಿಂತಲೂ ಉದ್ದ, ವಿಸ್ತಾರ, ಅದು ನೋಡಲಿಲ್ಲ ನೀವು. ಇದೇನು ತೋರಿಸುತ್ತದೆ ಎಂದರೆ ಬಹಳ ಅತ್ಯವಸರ, ಅವಸರ ಅವಸರವಾಗಿ ಇಲ್ಲಿ ತಂದಿದ್ದೀರಿ. ಇವರ ಉದ್ದೇಶ, ಗೊಂದಲ ವಿಪರೀತವಾಗಿ ಒಂದು ತರಹ ಜಂಗಲ್ ಆಗಿಬಿಟ್ಟಿದೆ. ಕ್ಷಮಿಸಿ ಏಕೆಂದರೆ ನಾವು ಆ ಕಡೆಯಲ್ಲಿ ಕುಳಿತುಕೊಂಡು ಸಾಕಷ್ಟು ವರ್ಷ ಅಧಿಕಾರ ಮಾಡಿದ್ದೇವೆ ಮತ್ತು ಈ ತರಹ ಬಿಲ್ ನೀವು ಬಹುಶಃ ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ ನಿಮ್ಮ ಉದ್ದೇಶವನ್ನು ನಾನು ಇವತ್ತು ಪ್ರಶ್ನೆ ಮಾಡುತ್ತಿಲ್ಲ. ಏಕೆಂದರೆ ಇವತ್ತು ಖಾಸಗಿಯವರಿಗೆ ರಸ್ತೆಗಳ ನಿರ್ವಹಣೆಗೆ ಅಭಿವೃದ್ಧಿಗೆ ಕೊಡತಕ್ಕಂಥ ಮೂಲಭೂತ ಸಿದ್ಧಾಂತದಲ್ಲಿ ನನಗೆ ನಂಬಿಕೆ ಇತ್ತು. ಏಕೆಂದರೆ ಇದು ನಡೆಯಬೇಕಾಗುತ್ತದೆ. ಏಕೆಂದರೆ ಸರ್ಕಾರವೇ ಎಲ್ಲವನ್ನೂ ನಿರ್ವಹಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಇದನ್ನು ಖಾಸಗಿ ಸಂಸ್ಥೆಯವರಿಗೆ ಕೊಡಬೇಕಾಗುತ್ತದೆ. ನಿರ್ವಹಿಸಬೇಕಾಗುತ್ತದೆ. ಅಭಿವೃದ್ಧಿ ಮಾಡಬೇಕಾಗುತ್ತದೆ. ಈ ಮೂಲ ಸಿದ್ಧಾಂತದಲ್ಲಿ ನನ್ನದು ವ್ಯತ್ಯಾಸ ಇಲ್ಲ. ಇದನ್ನು ನಾನು ಟೀಕೆ ಮಾಡಲಿಕ್ಕೆ ಇವತ್ತು ನಿಂತಿಲ್ಲ. ಆದರೆ ಅದು ಕೊಡುವಾಗ ಹೇಗೆ ಕೊಡಬೇಕು ಎಂದು ಹೇಳುವುದಕ್ಕೆ ಮಾತ್ರ ನನ್ನದು ವಿಚಾರ ಬೇರೆ ಇದೆ. ಬಹಳ ವಿರೋಧಾಭಾಸದ ವಿಧೇಯಕವನ್ನು ಇವತ್ತು ತಾವು ತಂದಿದ್ದೀರಿ. ಬಹುಶಃ ತಮಗೆ ಅವಕಾಶ, ಸಾಕಷ್ಟು ಸಮಯ ಸಿಗಲಿಲ್ಲ ಎಂದು ಹೇಳಿ ನನಗೆ ಅನ್ನಿಸುತ್ತಿದೆ. ಇಲ್ಲದಿದ್ದರೆ ಈ ಬಿಲ್ ಇವತ್ತು ಬರುತ್ತಿರಲಿಲ್ಲ. ನೀವು ಕ್ಯಾಬಿನೆಟ್‌ನಲ್ಲಿ ಇದನ್ನು ಕನ್‌ಸಿಡರ್ ಮಾಡಿದ್ದೀರೋ ಇಲ್ಲವೋ? ಏಕೆಂದರೆ Cabinet must have approved this. ಮಾನ್ಯ ಬೈರೇಗೌಡರೇ, ನಿಮಗೆ ಎಲ್ಲಾ ಗೊತ್ತಿದೆ. ನಿಮ್ಮ ತಿಳಿವಳಿಕೆಯ ಬಗ್ಗೆ ನಾನು ಪ್ರಶ್ನೆ ಮಾಡುತ್ತಿಲ್ಲ.

ಶ್ರೀ ಸಿ.ಬೈರೇಗೌಡ: ನಿಮಗೆ ಗೊತ್ತಿದೆ ಎಂದು ನಾನು ಹೇಳಿದ್ದುದು.

ಶ್ರೀ ಎಂ.ವೀರಪ್ಪಮೊಯಿಲಿ: ನನಗೆ ಗೊತ್ತಿಲ್ಲ.

ಶ್ರೀ ಸಿ.ಬೈರೇಗೌಡ: ತಾವು ಮುಖ್ಯಮಂತ್ರಿಗಳಾಗಿದ್ದಿರಿ. ಬಿಲ್ ಇಲ್ಲಿ ಬರಬೇಕಾಗಿದ್ದರೆ ಏನು ಪ್ರೊಸೀಜರ್ ಎಂದು ನಿಮಗೆ ಗೊತ್ತಿಲ್ಲವೇ?

ಶ್ರೀ ಎಂ.ವೀರಪ್ಪಮೊಯಿಲಿ: ನೀವು ಅದಕ್ಕೆ ಪ್ರಶ್ನೆ ಹಾಕುವಂಥ ಪ್ರಶ್ನೆ ಎಲ್ಲಿದೆ?

ಶ್ರೀ ಸಿ.ಬೈರೇಗೌಡ: ಪ್ರೊಸೀಜರ್ ನಿಮಗೆ ಗೊತ್ತಿದೆ ಎಂದು ನಾನು ಅಷ್ಟೇ ಹೇಳಿದ್ದುದು.

ಶ್ರೀ ಎಂ.ವೀರಪ್ಪಮೊಯಿಲಿ: ನನಗೆ ಗೊತ್ತಿದೆ, ಗೊತ್ತಿಲ್ಲ ಇದು ಏಕೆ? ನನಗೆ ಇದು ಅರ್ಥವೇ ಆಗುವುದಿಲ್ಲ. ಏಕೆ ಈ ಪ್ರಚೋದನೆ? ನೀವು ಎದ್ದುನಿಂತು ಹೇಳುವ ಪ್ರಚೋದನೆ? ನಾನು ಇಷ್ಟೇ ಕೇಳಿದ್ದು. ಏಕೆಂದರೆ ಈ ಒರಿಜಿನಲ್ ಬಿಲ್ ನೀವು ಇಂಟ್ರಡ್ಯೂಸ್ ಮಾಡುತ್ತೀರಿ. ಇದು ಕ್ಯಾಬಿನೆಟ್‌ನಲ್ಲಿ ಅಪ್ರೂವ್ ಆಗಬೇಕು. ಇದು ತಿದ್ದುಪಡಿ ಇವತ್ತು ಒಂದು ಬಂದಿದೆ. ಆ ತಿದ್ದುಪಡಿ ಇದಕ್ಕಿಂತಲೂ ಒರಿಜಿನಲ್ ಬಿಲ್‌ಗಿಂತಲೂ ಜಾಸ್ತಿ ಇದೆ, ಉದ್ದ ಇದೆ. ಆ ತಿದ್ದುಪಡಿ ಕ್ಯಾಬಿನೆಟ್‌ನಲ್ಲಿ ಅಪ್ರೂವ್ ಆಗಿದೆಯೋ ಅಥವ ಇಲ್ಲವೋ ಎಂದು ಹೇಳಿ ನಾನು ಪ್ರಶ್ನೆ ಹಾಕುತ್ತಿದ್ದೇನೆ ಅಷ್ಟೆ. ತಿದ್ದುಪಡಿ ಏನು ಇಂಟ್ರಡ್ಯೂಸ್ ಮಾಡಿದ್ದೀರಿ, ಏಕೆಂದರೆ ಈ ತಿದ್ದುಪಡಿ ಮೂಲಭೂತವಾಗಿ ತಾವೇನು ಮೊದಲು ಮಂಡನೆ ಮಾಡಿದ್ದೀರಿ, ಆ ವಿಧೇಯಕದ ಉದ್ದೇಶದಿಂದ ದೂರ ಇದೆ ಮತ್ತು ವಿಸ್ತಾರ ಆಗಿದೆ. ಆದ್ದರಿಂದ I think, this cannot be passed. ಎರಡನ್ನೂ ಕೂಡ ಕನ್‌ಸಿಡರ್ ಮಾಡಿದ್ದೀರೋ ಇಲ್ಲವೋ ಎನ್ನುವ ಸಂಶಯ. ಇದನ್ನು ನಾನು ನನ್ನ ಅನುಭವದಿಂದ ಹೇಳುವುದು. ಏಕೆಂದರೆ ಕನ್‌ಸಿಡರ್ ಮಾಡದಿದ್ದರೆ ಕ್ಯಾಬಿನೆಟ್, ಇದನ್ನು ಮಾಡಬೇಕಾಗುತ್ತದೆ. ನಾನು ಹೇಳುವುದು ಇನ್ನೊಂದು ತಿದ್ದುಪಡಿ. ತಿದ್ದುಪಡಿಗೆ ತಿದ್ದುಪಡಿಯನ್ನು ತಂದಿದ್ದೀರಲ್ಲಾ ಅದನ್ನು ಇದರಲ್ಲಿ ಇದಕ್ಕೊಂದು ಒರಿಜಿನಲ್ ಆ್ಯಕ್ಟ್ ಇದೆ. ಒರಿಜಿನಲ್ ಆ್ಯಕ್ಟ್‌ಗೆ ಯಾವಾಗಲೂ ಕೂಡ ತಿದ್ದುಪಡಿಯನ್ನು ನಾನು ಯಾವುದಕ್ಕೆ ತರಬೇಕು, ಒರಿಜಿನಲ್ ಆ್ಯಕ್ಟ್‌ಗೆ ತರಬೇಕು. ಒರಿಜಿನಲ್ ಆ್ಯಕ್ಟ್‌ಗೆ ತರುವುದು ಇದ್ದರೆ ಆ ಇಡೀ ಒಂದು ಕಾನೂನಿನ ಮೂಲ ಉದ್ದೇಶಕ್ಕೆ ಅನುಗುಣವಾಗಿರಬೇಕೇ ಹೊರತು ವಿರೋಧವಾಗಿರಬಾರದು. ಇಲ್ಲದಿದ್ದರೆ ಅದು ಇಂಡಿಪೆಂಡೆಂಟ್ ಆ್ಯಕ್ಟ್ ಆಗುತ್ತದೆ. ಸ್ವತಂತ್ರ ಒಂದು ಕಾನೂನಾಗುತ್ತದೆ. ಕಾಯ್ದೆಯಾಗುತ್ತದೆ. ಅಮೆಂಡ್‌ಮೆಂಟ್ ಆಗುವುದಿಲ್ಲ. ಆದರೆ ತಾವು ಮೂಲಭೂತವಾಗಿ ಏನು ನಿಮ್ಮ ಮೊದಲನೇ ಕಾನೂನು ಇದೆ, ಈಗ ತಿದ್ದುಪಡಿ ಏನು ತಂದಿದ್ದೀರಿ, ತಿದ್ದುಪಡಿಗೆ ತಿದ್ದುಪಡಿಯೇನು ತಂದಿದ್ದೀರಿ, ಅದು ಒಂದು ರೀತಿಯಲ್ಲಿ ಸಮಾನಾಂತರವಾಗಿ ಹೋಗುತ್ತದೆಯೇ ಹೊರತು ಅದು ಜೊತೆಯಲ್ಲಿ ಹೋಗುವುದಿಲ್ಲ. ಇದು ಮುಂದೆ ಕೋರ್ಟಿಗೆ ಹೋಗುತ್ತದೆ. ಕೋರ್ಟುಗಳಿಗೆ ಹೋದಾಗ ಒಂದುರೀತಿ ಏನಪ್ಪ ವಿಧಾನಸಭೆಯಲ್ಲಿ ಯಾರೂ ಕೂಡ ಏನು ಬುದ್ಧಿಗಿದ್ದಿ ಇಲ್ಲದೆ ಒಂದು ಮಸೂದೆ ತಂದು ಪಾಸು ಮಾಡಿಕೊಂಡು ಹೋಗಿದ್ದಾರೆ ಎಂದು ಹೇಳಿ ಆ ರಿಪ್ಲೆಕ್ಷನ್ ಬರೀ ನಿಮ್ಮ ಕ್ಯಾಬಿನೆಟ್ ಮೇಲೆ ಬರುವುದಿಲ್ಲ, ನಮ್ಮೆಲ್ಲರ ಮೇಲೆ ಬರುತ್ತದೆ. ಇದನ್ನು ಸ್ವಲ್ಪ ಆಲೋಚನೆ ಮಾಡಿ. ಏಕೆಂದು ಹೇಳಿದರೆ ತಾವು ಇವತ್ತು ಹೊಸ ವಿಚಾರವನ್ನು ತರುತ್ತಿದ್ದೀರಿ. ಒಮ್ಮೆ ಯಾವುದೇ ಒಂದು ಹೊಸ ವಿಚಾರವನ್ನು, ಒಂದು ಹೊಸಕಾಯ್ದೆಯನ್ನು ಅಥವಾ ಒಂದು ಹೊಸ ಸುಧಾರಣೆಯನ್ನು, ಒಂದು ರಾಜ್ಯದಲ್ಲಿ ಅಥವಾ ಒಂದು ಸಮಾಜದಲ್ಲಿ ನೀವು ತರುವಾಗ ಅದು ಸರಿಯಾದ ದಾರಿಯಲ್ಲಿ ಹೋಗಬೇಕಾಗುತ್ತದೆ. ಅದರ ಬಗ್ಗೆ ಸಾಕಷ್ಟು ವಿವೇಚನೆ ಹೋಗಬೇಕಾಗುತ್ತದೆ. ಒಂದು ಒಳ್ಳೆಯ ಕರ್ನಾಟಕವನ್ನು ಒಂದು ಮಾದರಿಯ ಇಂಥ

ಕಾನೂನನ್ನು ತಂದು ದೇಶಕ್ಕೆ ತೋರಿಸಿಕೊಡಿ. ಆದರೆ ಇದು ಯಾವ ಮಾದರಿಯ ಒಂದು ನೆರಳು ಕೂಡ ಈ ಕಾನೂನಿನಲ್ಲಿ ಇಲ್ಲ. ಇದನ್ನು ಯಾವುದೇ ರಾಜ್ಯ ಕೂಡ ಅನುಸರಿಸಬೇಕಾದಂಥ ಮಾರ್ಗದಲ್ಲಿ ಇಲ್ಲವೇ ಇಲ್ಲ. Most haphazard, most arbitrary, ಇನ್ನು ಯಾವುದೇ ರೀತಿಯಾದಂಥ ಒಂದು ಮಾರ್ಗದಲ್ಲಿ ನೀವು ಹೋಗುವ ಕ್ರಮವನ್ನು ಮಾಡಿದ್ದೀರಿ. ಇದು ಹೆದ್ದಾರಿಯ ಕಾನೂನು ಹೆದ್ದಾರಿಯಲ್ಲಿ ಹೋಗುತ್ತಿಲ್ಲ, ಯಾವುದೋ ಒಂದು ಗಲ್ಲಿ ಮೂಲೆಗೆಲ್ಲಾ ಹೋಗಿಬಿಟ್ಟಿದೆ ಈ ಕಾನೂನು. ಇದರ ಬಗ್ಗೆ ತಾವು ಆಲೋಚನೆ ಮಾಡಿ. ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹಾಕಿ. ಅಥವಾ ಇದನ್ನು ವಿತ್‌ಡ್ರಾ ಮಾಡಿ. ಪುನಃ ವಿಚಾರ ಮಾಡಿ. ಒಂದು ಸಂಕೀರ್ಣ ರೀತಿಯ ಇದರ ಬಗ್ಗೆ ತಜ್ಞರ ಒಂದು ಸಭೆಯೊ, ಒಂದು ವರ್ಕ್‌ಷಾಪ್ ಮಾಡಿ ಆ ಕಾನೂನನ್ನು ತನ್ನಿ. ಆಮೇಲೆ ಜಾಯಿಂಟ್ ಸೆಲೆಕ್ಟ್ ಕಮಿಟಿಗೋ ಹಾಕಿ. ಒಂದು ಒಳ್ಳೆಯ ಮಾದರಿಯ ಕಾನೂನನ್ನು ತನ್ನಿ. ಯಾರೂ ಮೂಲ ಉದ್ದೇಶಕ್ಕೆ ವಿರೋಧವಾಗುವುದಿಲ್ಲ. ಆದರೆ ಇಲ್ಲಿ ಏನು ನೀವು ಹಿಂದೆ 1964ರ ಒಂದು ವಿಧೇಯಕ ಇದೆ, ಆ ವಿಧೇಯಕದ ಉದ್ದೇಶವೇ ಬೇರೆ. ಅದು ಬರೀ ಸೇತುವೆಗೆ ಸಂಬಂಧಪಟ್ಟಿದ್ದು. ಸೇತುವೆಗೆ ಸುಂಕ ಹೇರತಕ್ಕಂಥದ್ದು ಅಷ್ಟೇ ಆ ವಿಧೇಯಕದ ಒಂದು ಉದ್ದೇಶ. ಮಾರ್ಗವನ್ನು ಇವತ್ತು ಖಾಸಗೀಕರಣ ಮಾಡಬೇಕಾದದ್ದು ಅದು ಸೈದ್ಧಾಂತಿಕವಾದ ಮಾರ್ಗವನ್ನು ಹೆದ್ದಾರಿಗಳನ್ನು ಖಾಸಗೀಕರಣ ಮಾಡುವ ಒಂದು ವಿಧೇಯಕ ನಿಜವಾಗಿ. ಹೆದ್ದಾರಿಗಳನ್ನು ಖಾಸಗೀಕರಣ ಮಾಡಬೇಕಾದಂಥ ನೀತಿ ಏನು ಇದೆ, ಒಂದು ಸರ್ಕಾರದ ನೀತಿ ಇವತ್ತು ನೀವು ತೆಗೆದುಕೊಂಡಿದ್ದೀರಿ. ಯಾವ ರೀತಿಯಲ್ಲಿ ಆ ಖಾಸಗೀಕರಣ ಆಗಬೇಕು, ಯಾವುದೇ ಒಂದು ರೀತಿಯ್ಲಾದಂಥ ಸಾರ್ವಜನಿಕ ಸ್ವತ್ತು ಇದು. ಹೆದ್ದಾರಿ ಎಂದು ಹೇಳಿದರೆ ಇದು ಒಂದು ಸಾರ್ವಜನಿಕ ಸ್ವತ್ತು. ಒಂದು ಸಾರ್ವಜನಿಕ ಸ್ವತ್ತನ್ನು ಇವತ್ತು ಖಾಸಗೀಕರಣ ಮಾಡಬೇಕಾದರೆ ಅದಕ್ಕೂ ನಿಮ್ಮ 1964 ರ ಕಾನೂನಿಗೂ ಏನು ಸಂಬಂಧ? ಏನೇನೂ ಸಂಬಂಧವಿಲ್ಲ. ಇವತ್ತು ಖಾಸಗೀಕರಣ ಮಾಡಬೇಕೆಂಬ ಒಂದು ನೀತಿ ಇಡೀ ರಾಷ್ಟ್ರದ ನೀತಿ. ಇವತ್ತು, ಆ ರಾಷ್ಟ್ರದ ನೀತಿಯನ್ನು ಇವತ್ತು ರಾಜ್ಯದ ನೀತಿಯನ್ನಾಗಿ ಮಾಡತಕ್ಕಂಥದ್ದು ಸ್ವಾಗತಾರ್ಹ. ಆದರೆ ಯಾವ ಸ್ವರೂಪದಲ್ಲಿ ಖಾಸಗೀಕರಣವಾಗಿ ಆ ರಸ್ತೆಗಳನ್ನು ಮಾಡುತ್ತೀರಿ? ಯಾವ ರೀತಿಯ ಹತೋಟಿಯನ್ನು ಇಡಬೇಕಾಗುತ್ತದೆ? ಯಾವ ರೀತಿ ರೂಪರೇಷೆ ಇರಬೇಕಾಗಿದೆ? There should be vision behind that. ಒಂದು ನೀತಿ. ಯಾವುದೇ ಒಂದು ರಾಜ್ಯ ಅಥವಾ ಒಂದು ರಾಷ್ಟ್ರದ ನೀತಿಯನ್ನು ತೆಗೆಯಬೇಕಾದರೆ there should be a vision. ಮುಂದಿನ ಭವಿಷ್ಯವನ್ನು ನಾವು ಕಾಣಬೇಕಾಗುತ್ತದೆ. ಯಾವ ರೀತಿಯಲ್ಲಿ ಆ ನೀತಿ ಸ್ವರೂಪವಾಗಬೇಕಾಗುತ್ತದೆ, ಈ ನೀತಿಯ ಒಂದು ಪ್ರಿಯಾಂಬಲ್‌ನಲ್ಲಾಗಲಿ ಅಥವಾ ಒಂದು ಉದ್ದೇಶದಲ್ಲಾಗಲಿ ಅಥವಾ ನಿಮ್ಮ ಕಾನೂನಿನ ಚೌಕಟ್ಟಿನಲ್ಲಾಗಲಿ ಆ ಪ್ರಮುಖವಾದಂಥ ಒಂದು ನೀತಿಯ ಒಂದು ಸ್ವರೂಪ ನೀವು ಕಾಣಿಸಲೇ ಇಲ್ಲ. It is totally absent. ಏಕಾಗಿ ನೀವು ಖಾಸಗೀಕರಣ ಮಾಡುತ್ತಿದ್ದೀರಿ? ಯಾವ

ಸ್ವರೂಪದಲ್ಲಿ ಖಾಸಗೀಕರಣ ಮಾಡುತ್ತೀರಿ, ಒಂದು ಶಬ್ದ ಎಲ್ಲಿಯಾದರೂ ಇದೆಯಾ ಅಥವಾ ಈ ರಸ್ತೆಗಳನ್ನು ಖಾಸಗೀಕರಣ ಮಾಡುತ್ತಿದ್ದೇವೆ ಇವತ್ತು ಎಂದು ಹೇಳಿ Declaration of intention of the government, that itself is absent. ಒಂದು ನೀತಿಯ ಡಿಕ್ಲರೇಷನ್ ಮಾಡುವಾಗ ಏಕೆಂದರೆ ಅದು ಇದ್ದ ನೀತಿಗೆ ನೀವು ವಿರುದ್ಧವಾಗಿ ಅಥವಾ ಇದ್ದ ನೀತಿಯನ್ನು ಬದಲಾಯಿಸುವ ಒಂದು ಟ್ರಾನ್ಸಫರ್ಮೇಷನ್ ಇವತ್ತು ಎಲ್ಲಿಯೂ ಕೂಡ ಇಲ್ಲಿ ಕಾನೂನಿನಲ್ಲಿ ನಮಗೆ ಕಾಣುತ್ತಿಲ್ಲ.

5.00 ಪಿ.ಎಂ

ಆ ಉದ್ದೇಶವನ್ನು ನೀವು ಹೇಳದೇ ಇದ್ದರೆ, ಉದ್ದೇಶದಲ್ಲಿಯೇ ಸ್ಪಷ್ಟ ಇಲ್ಲದೇ ಇದ್ದರೆ ಗುರಿ ಹೇಗೆ ನೀವು ತಲುಪುತ್ತೀರಿ? ಯಾವ ದಿಕ್ಕಿನಲ್ಲಿ ಆ ಗುರಿಯನ್ನು ತಲುಪಲಿಕ್ಕೆ ನೀವು ಹೋಗುತ್ತೀರಿ? ಇದು ಯಾವುದೂ ಕೂಡ ನನಗೆ ಇಲ್ಲಿ ಕಾಣುತ್ತಾ ಇಲ್ಲ. ನಾನು ಇವತ್ತು ಇಲ್ಲಿಯೇ ನೋಡಿದೆ. ನಿಜವಾಗಿ ಸ್ವಲ್ಪ ಅಧ್ಯಯನ ಮಾಡಿಕೊಂಡು ಬಂದಿದ್ದರೆ ಇನ್ನೂ ವಿಶೇಷವಾಗಿ ಹೇಳುತ್ತಿದ್ದೆ. ನೀವು ಹೇಳುತ್ತಿದ್ದೀರಿ, ನಾವು ನ್ಯಾಷನಲ್ ಪಾಲಿಸಿ ಪ್ರಕಾರ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ. What is that national policy? ನೀವು ಸರ್ಕ್ಯುಲೇಟ್ ಮಾಡಿ. ನೀವು ಬೇರೆ ಭಾಷಣ ಮಾಡಿದರೆ ಸಾಲದು. ನಮ್ಮೆಲ್ಲಾ ಸದಸ್ಯರಿಗೆ ಅದರ ಅನುಭವ ಬೇಕಾಗುತ್ತದೆ. ಆ ಉದ್ದೇಶವನ್ನು ತಿಳಿಯಬೇಕಾಗುತ್ತದೆ. ರಾಜ್ಯದ ನೀತಿ, ಅದಕ್ಕೆ ಅನುಗುಣವಾಗಿ ಯಾವ ರೀತಿಯಲ್ಲಿ ಹೊಂದಿಸಿ ಕೊಂಡು ಹೋಗಬಹುದು. ಇದನ್ನು ಇವತ್ತು ಮಾಡಬೇಕಾಗಿದೆ. ನೀವು ದಯಮಾಡಿ ಅವಸರ ಮಾಡಬೇಡಿ. ಇದು ಬಹಳ ಪ್ರಮುಖವಾದಂತಹದು. ಇದು ಬಹಳ ಅರ್ಬಿಟ್ರರಿ ಆಗುತ್ತದೆ. ಮುಂದೆ ಬಹಳ ಒಂದು ದೊಡ್ಡ ಆಪಾದನೆಗೆ ತಾವು ಗುರಿ ಆಗಬಹುದು. ಇಂತಹ ಅರ್ಬಿಟ್ರರಿ ಆಗಿ ತಾವು ಒಂದು ಕಾನೂನನ್ನು ಮಾಡಿದರೆ ಅದರಿಂದ ನಿಮಗೆ ಯಾವ ಹತೋಟಿ ಕೂಡ ಸಿಗುವುದಿಲ್ಲ. That can be at the most a jungle law. ಯಾರು ಏನು ಬೇಕಾದರೂ ಮಾಡಬಹುದು. ಯಾರು ಯಾವ ರೀತಿಯ ದಾರಿಯಲ್ಲಾದರೂ ಕೂಡ ಖಾಸಗಿಯವರು ಇದರ ಲಾಭ ಪಡೆಯುವುದಕ್ಕೆ ಸಾಧ್ಯ ಆಗುತ್ತದೆ. ಖಾಸಗೀಕರಣ ಮಾಡುವಾಗ ರಾಷ್ಟ್ರೀಕರಣವಾಗಿದ್ದಂತಹ ಒಂದು ಹೆದ್ದಾರಿಯನ್ನು ನೀವು ಖಾಸಗೀಕರಣ ಎಂದು ಮಾಡುವಾಗ ರಾಜ್ಯದ ಸ್ವತ್ತನ್ನು ಮತ್ತೊಬ್ಬರಿಗೆ ತಾವು ಕೊಡುತ್ತಿದ್ದೀರಿ. as a trustee. ಒಬ್ಬ ಧರ್ಮದರ್ಶಿ ಕರ್ತವ್ಯದ ಹಾಗೆ ಸಮಾಜವನ್ನು ಸುಧಾರಿಸುವಂತಹ ಜವಾಬ್ದಾರಿ ನಿರ್ವಹಿಸಬೇಕಾದ ಒಂದು ಪರಿಸ್ಥಿತಿ ಇರುತ್ತದೆ. ಆ ಬಗ್ಗೆ ನಾವು ವಿಶೇಷವಾದಂತಹ ಜಾಗ್ರತೆ ವಹಿಸಬೇಕು. ಇದು ನಿಮ್ಮ ರಾಜ್ಯ ಸರ್ಕಾರದ ಸ್ವತ್ತಲ್ಲ. ರಾಷ್ಟ್ರೀಯ ಹೆದ್ದಾರಿ ಇದ್ದರೂ ಕೂಡ ಅದು ಬರೀ ಸರ್ಕಾರದ ಸ್ವತ್ತು ಎಂದು ತಿಳಿದುಕೊಳ್ಳಬೇಡಿ. ಅದು ಇಡೀ ಒಂದು ರಾಜ್ಯದ ಜನರ ಸ್ವತ್ತು. ಆ ಜನರ ಸ್ವತ್ತನ್ನು ಒಬ್ಬನಿಗೆ ನೀವು ಧರ್ಮದರ್ಶಿಯಾಗಿ ಉಪಯೋಗ ಮಾಡುವುದಾದರೆ ಅರ್ಡಿನರಿ ಟ್ರಸ್ಟ್

ಡೀಡ್‌ನಲ್ಲಿ ಕೂಡ ನಾವು ಉದ್ದೇಶವನ್ನು ಕಾಣಿಸುತ್ತೇವೆ. ಯಾವ ದಾರಿಯಲ್ಲಿ ಹೋಗಬೇಕೆಂದು ಹೇಳುತ್ತೇವೆ. ಸರಿಯಾದಂತಹ ಹತೋಟಿಯನ್ನು, ಒಂದು ಚೌಕಟ್ಟನ್ನು ಹಾಕಿ ಬಿಡುತ್ತೇವೆ. ಆ ಒಂದು ಕನಿಷ್ಟ ಪ್ರೈವೇಟ್ ಟ್ರಸ್ಟ್ ಡೀಡ್‌ನಲ್ಲಿರತಕ್ಕ ಮಾತುಗಳು, ಒಂದು ಉದ್ಧರಣೆ ಕೂಡ ಈ ಒಂದು ನಿಮ್ಮ ಕಾನೂನಿನಲ್ಲಿ ಇಲ್ಲ ಎಂದು ಹೇಳಿದರೆ ಇದಕ್ಕೆ ಯಾವ ರೀತಿಯಲ್ಲಿ ನಾವು ಒಪ್ಪಿಗೆ ಕೊಡಬೇಕು, ಅನುಮತಿ ಈ ಸದನ ಕೊಡಬೇಕು. ಯಾವ ಜವಾಬ್ದಾರಿಯಿಂದ ನಮ್ಮ ಕಾರ್ಯವನ್ನು ಈ ಒಂದು ಸದನ ನಿರ್ವಹಿಸದ ಹಾಗೆ ಆಗುತ್ತದೆ ಎಂಬುದನ್ನು ತಾವು ದಯಮಾಡಿ ಆಲೋಚನೆ ಮಾಡಿ. ಏಕೆಂದರ ಇದು ಒಂದು ಶಾಶ್ವತವಾಗಿ ಉಳಿಯತಕ್ಕಂಥ ನೀತಿ. ಮುಂದೆ ಅದು ಸಫಲವಾಗಿರಬೇಕಾದಂತಹ ಒಂದು ನೀತಿ ಆಗುತ್ತದೆ. ಅದು ಅಸಫಲ ಆಗಬಾರದು. ಇದರಲ್ಲಿ ಮುಖ್ಯ ಸಫಲತೆ. ಆದುದರಿಂದ ನಾನು ಹೇಳುತ್ತಿದ್ದೇನೆ ಮೂಲ ಕಾನೂನಿಗೂ ಇದಕ್ಕೂ ಸಂಬಂಧನೇ ಇಲ್ಲ. ನೀವು ಇದನ್ನು ಪ್ರತ್ಯೇಕವಾದಂತಹ ಕಾನೂನಾಗಿ ಸಮಗ್ರವಾದಂತಹ ಒಂದು ನೀತಿಯ ಸ್ವರೂಪವನ್ನು ಉಳ್ಳಂತಹ ಕಾನೂನನ್ನು, ಒಂದು ವಿಧೇಯಕವನ್ನು ಸ್ವತಂತ್ರವಾಗಿ ತರಬೇಕಾಗುತ್ತದೆ. ಅದಕ್ಕೆ ತಿದ್ದುಪಡಿ ಪ್ಯಾಚ್‌ಆಫ್ ವರ್ಕ್ ಆಗುವುದಿಲ್ಲ. ಪ್ಯಾಚ್‌ಅಪ್ ವರ್ಕ್‌ನಿಂದ ಈ ಕೆಲಸ ಆಗುವುದಿಲ್ಲ ಸ್ವತಂತ್ರವಾದ ಕಾನೂನಿನಲ್ಲಿ ಅಳವಡಿಸಿದರೆ ಮಾತ್ರ ಇದು ಸರಿ ಹೋಗಬಹುದೇ ಹೊರತು ಅನ್ಯತಾ ಇದು ಖಂಡಿತವಾಗಿಯೂ ಸರಿಹೋಗುವುದಿಲ್ಲ. ಯಾವ ಕಾನೂನು ಪಂಡಿತರು ಈ ಕಾನೂನನ್ನು ಮಾಡಲು ನಿಮಗೆ ಒಪ್ಪಿಗೆ ಕೊಟ್ಟರೋ ನನಗೆ ಬಹಳ ಅನುಮಾನ. ಏಕೆ ಮಾಡಿದರು? ಹೆಚ್ಚಾಗಿ ಡ್ರಾಫ್ಟಿಂಗ್‌ನಲ್ಲಿ ನಮ್ಮ ಕರ್ನಾಟಕದ ಒಂದು ಲೀಗಲ್ ಡಿಪಾರ್ಟ್‌ಮೆಂಟ್ ಒಳ್ಳೆಯ ಪರಂಪರೆ ಉಳ್ಳದ್ದು. ಈ ಪರಂಪರೆ ಪೂರ್ತಿ ತಿರುಗಿ ಮುರುಗಿ ಆಗಿ ಹೋದಂತಹ ಒಂದು ವಿಷಾದಕರವಾದ ವಾತಾವರಣ ಈ ಕಾನೂನಿನ ಡ್ರಾಫ್ಟಿಂಗ್‌ನಲ್ಲಿ ಆಗಿರುವುದನ್ನು ನಾನು ವಿಶೇಷವಾಗಿ ಕಾಣುತ್ತಿದ್ದೇನೆ. ಇನ್ನು ಮುಖ್ಯವಾಗಿ ನಮ್ಮ ನಾಯಕರು ಹೇಳಿದ ಪ್ರಕಾರ ಆ ಸೇತುವೆ ಸುಂಕ ವಿಧಿಸುವಾಗಲೂ ನಾವು ಒಂದು ಅಪ್ಪರ್ ಲಿಮಿಟ್ ಹಾಕಿದ್ದೇವೆ. 15 ರೂಪಾಯಿಗಿಂತ ಮೀರಬಾರದು ಎಂದು ಹೇಳಿದ್ದೇವೆ. ಇದರಲ್ಲಿ ಕೂಡ ನೀವು ಅಪ್ಪರ್ ಲಿಮಿಟ್ ಮಾಡಬಹುದು. ಏಕೆಂದು ಹೇಳಿದರೆ ಈಗ ಎಷ್ಟು ವರ್ಷ ಆ ರಸ್ತೆಗಳನ್ನು build, own and transfer ಎಂದು ಮಾಡುತ್ತೀರೋ ಅಥವಾ ಅವರೇ ಓನ್ ಮಾಡತಕ್ಕ ಪರಿಸ್ಥಿತಿ ಇದೆಯೋ ಇದರಲ್ಲಿ ಸ್ಪಷ್ಟವಾಗಿ ಇವತ್ತು ಕಾಣುತ್ತಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಏನು ದೇಶಪಾಂಡೆಯವರನ್ನು ಮಾಡುತ್ತೀರೋ ಅಥವಾ ಇಬ್ರಾಹಿಂ ಅವರನ್ನು ಮಾಡುತ್ತೀರೋ?

ಶ್ರೀ ಎಂ.ವೀರಪ್ಪ ಮೊಯಿಲಿ: ದೇಶಪಾಂಡೆಯವರನ್ನು ಮಾಡುತ್ತೀರೋ ಅಥವಾ ಇಬ್ರಾಹಿಂ ಅವರನ್ನು ಮಾಡುತ್ತೀರೋ ಎಂದು ಅವರು ಹೇಳುತ್ತಿದ್ದಾರೆ.

SRI M.MALLIKARJUNA KHARGE: Build, own and transfer.

SRI M.VEERAPPA MOILY: Build, own, transfer or build, own, operate. ನೀವು ಬಿಲ್ಡ್ ಓನ್ ಆಪರೇಟ್ ಮಾಡುತ್ತೀರಿ ಎಂದು ನಮಗೆ ಕಾಣುತ್ತಿದೆ. That means, you are permanently transferring the assets. ಶಾಶ್ವತವಾಗಿ ಈ ರಾಜ್ಯದ ಹೆದ್ದಾರಿಗಳನ್ನು ನೀವು ವರ್ಗಾವಣೆ ಮಾಡುತ್ತಿದ್ದೀರಿ. It is permanent, I think. ಇದು ಇನ್ನೂ ಡೇಂಜರ್ ಇರುತ್ತದೆ. ಏಕೆಂದರೆ ನೀವು ವಸೂಲಿ ಮಾಡಬೇಕಾದರೆ ಒಂದು ವೇಳೆ ಏನು ಸೇತುವೆ ಇದೆ, ಆ ಸೇತುವೆಯಲ್ಲಿ ವಸೂಲಿ ಮಾಡಲಿಕ್ಕೆ ಮಾತ್ರ ಅಲ್ಲಿ ಅಧಿಕಾರ ಇರತಕ್ಕದ್ದು. ಸೇತುವೆ ಹಸ್ತಾಂತರ ಮಾಡಿಲ್ಲ. ಒರಿಜಿನಲ್ ಕಾನೂನು ಪ್ರಕಾರ ಸೇತುವೆ ರಚನೆ ಮಾಡಿದ್ದು ಸರ್ಕಾರವೇ. ಆದರೆ ಸುಂಕ ವಸೂಲಿ ಮಾಡಲಿಕ್ಕೆ ಮಾತ್ರ ಅಧಿಕಾರ ಅಲ್ಲಿ ಕೊಟ್ಟಂತಹದು. ಸೇತುವೆ ರಚನೆ ಮಾಡಿದ್ದು ಸುಂಕ ವಸೂಲಿ ಮಾಡಲಿಕ್ಕೆ ಅಲ್ಲ. ಆದರೆ ಇಲ್ಲಿ ಹೆದ್ದಾರಿ ರಚನೆ ಮಾಡಿ ಸುಂಕ ಕೂಡ ಅವರೇ ವಸೂಲಿ ಮಾಡುವುದು ಅವರೇ ಅಪ್ರೋಪ್ರಿಯೇಟ್ ಮಾಡತಕ್ಕದ್ದು. ಇದು ಬಹಳ ಅಪಾಯ-ಇದೆ. ಇದಕ್ಕೆ ಖಾಸಗಿಯವರಿಗೆ ಹಾಗೇ ಆಗುತ್ತಿದೆ. Practically, it is a transferring perception. ಈ ಪರಿಸ್ಥಿತಿ ಇಲ್ಲಿ ನಮ್ಮ ಈ ಕಾನೂನಿನಲ್ಲಿ ಕಾಣುತ್ತಿದೆ. ಇಲ್ಲ ಎಂದರೆ ನೀವು ಹೇಳಬಹುದು. ಇಲ್ಲ ನಮ್ಮ ಉದ್ದೇಶ ಬೇರೆ ಇದೆ ಎಂದು ನೀವು ವ್ಯಾಖ್ಯಾನ ಮಾಡಬಹುದೇ ಹೊರತು ಕಾನೂನಿನಲ್ಲಿ ಆ ವ್ಯಾಖ್ಯಾನ ಕಾಣಬೇಕಾಗುತ್ತದೆ. ರೂಲ್ಸ್‌ಗಳಲ್ಲಿ ಕಾಣುವುದಿಲ್ಲ. ಅಥವಾ ನಿಮ್ಮ ಮೆಮೋರ್ಯಾಂಡಮ್ ಆಫ್ ಅಸೋಸಿಯೇಷನ್‌ನಲ್ಲಿ ಅಲ್ಲ. ಮೆಮೋರ್ಯಾಂಡಮ್ ಆಫ್ ಅಂಡರ್‌ಸ್ಟ್ಯಾಂಡಿಂಗ್‌ನಲ್ಲಿ ಕಾಣುವುದಲ್ಲ. ಕಾನೂನಿನಲ್ಲಿ ನಮಗೆ ಸ್ಪಷ್ಟವಾಗಿ ಕಾಣಬೇಕು. ಅಥವಾ ಬಿಲ್ಡ್ ಆಪರೇಟ್, ಬಿಲ್ಡ್ ಓನ್ ಟ್ರಾನ್ಸ್‌ಫರ್ ಎಂದು ಹೇಳಿ ಕಾನೂನಿನಲ್ಲಿ ಕಾಣಬೇಕಾಗುತ್ತದೆ. ಇದು ನಿರ್ವಹಣೆ ಎಂದು ತಾವು ಬಹಳ ಉಪಾಯದಿಂದ ಇವತ್ತು ಶಬ್ದ ಉಪಯೋಗ ಮಾಡಿದ್ದೀರಿ. ಇದು ನಿರ್ವಹಣೆ ಮಾತ್ರ ಅಲ್ಲ. ಅಭಿವೃದ್ಧಿ ಮಾತ್ರವಲ್ಲ. It is a total transfer of these roads, total transfer of the assets. ಇದನ್ನು ಇವತ್ತು ಸ್ಪಷ್ಟವಾಗಿ ಇಲ್ಲಿ ಕಾಣುತ್ತಿದ್ದೇವೆ. It is only a mischievous couching of the words. ಪ್ರಾಮಾಣಿಕವಾಗಿ ಯಾವುದಾದರೂ ಒಂದು ಕಾನೂನು ಮಿಸ್‌ಚೀಫ್ ಇರಬಾರದು. ಯಾವುದೇ ಒಂದು ಕಾನೂನು ರಾಜ್ಯದ ಹಿತಾಸಕ್ತಿಯನ್ನು ರಕ್ಷಣೆ ಮಾಡತಕ್ಕಂಥ ಕಾನೂನು-ಅದು, not open for anybody to play any mischief or circumvent the provisions of the law ಅದಕ್ಕೆ ಒಂದು ಕಾನೂನನ್ನು ಸರ್‌ಕಂವೆಂಟ್ ಮಾಡಲಿಕ್ಕೆ ಅಥವಾ ಕಾನೂನಿನ ಮೂಲಕ ತಮಗೆ ಲಾಭ ಮಾಡಿಕೊಳ್ಳಲಿಕ್ಕೆ ಅಥವಾ ಕಾನೂನಿನ

ಮೂಲಕ ತಮಗೆ ಲಾಭದಾಯಕವಾಗಿ ಉಪಯೋಗ ಮಾಡಲಿಕ್ಕೆ ಅಥವಾ ಸಮಾಜವನ್ನು ಅಥವಾ ರಾಜ್ಯದ ಸ್ವತ್ತಿನ ಮೇಲೆ ಶೋಷಣೆ ಮಾಡಲಿಕ್ಕೆ ಕಾನೂನು ಸಹಕಾರಿ ಆಗಬಾರದು. ಕಾನೂನು ಅಪ್ರಾಮಾಣಿಕ ಆಗಬಾರದು. ಕಾನೂನು ಪ್ರಾಮಾಣಿಕವಾಗಿ ಆಗಬೇಕಾಗುತ್ತದೆ. ಅದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೇಳಬೇಕಾದರೆ ಅದು ನಿಸ್ಪೃಹವಾದಂತಹ, ಟ್ರಾನ್ಸ್‌ಪೆರೆನ್ಸಿ ಕಾನೂನಿನಲ್ಲಿರಬೇಕಾಗುತ್ತದೆ. ಆ ಟ್ರಾನ್ಸ್‌ಪರೆನ್ಸಿ ಇಲ್ಲವೇ ಇಲ್ಲ. ಇದರ ಹಿಂದುಗಡೆ ಏನು ಇದೆ, ಕಾಣದೇ ಇದ್ದಂತಹದು Invisible factors are more than the visible factors. ಇದು ಕಾನೂನಿನಲ್ಲಿ ಇರಲೇ ಬಾರದಿತ್ತು. ಅದು ಇದ್ದರೆ ಬಹಳ ಅಪಾಯ ಇದೆ. ಬಹಳ ಅವಸರದಲ್ಲಿ ತಾವು ಪಾಸ್ ಮಾಡಿಕೊಂಡು ಹೋಗಬೇಕು ಎಂದು ತಮ್ಮ ಅಭಿಪ್ರಾಯ ಇದ್ದರೆ ನಾನು ಇಲ್ಲಿ ಮಾತನಾಡುವುದಿಲ್ಲ. ಏಕೆಂದರೆ ತಮ್ಮ ಮೆಜಾರಿಟಿ ಇದೆ, ತಾವು ಪಾಸ್ ಮಾಡಿಕೊಳ್ಳಬಹುದು. ನಾನು ಏಕೆ ಇವತ್ತು ಒತ್ತಾಯಮಾಡಿ ಹೇಳುತ್ತಿದ್ದೇನೆ ಎಂದರೆ ದಯಮಾಡಿ ಅವಸರದಲ್ಲಿ ತಾವು ಪಾಸ್ ಮಾಡಬೇಡಿ. ಇದನ್ನು ಜಂಟಿ ಸಲಹಾ ಸಮಿತಿಗೆ ರೆಫರ್ ಮಾಡಿ. ನಿಮ್ಮ ಸದುದ್ದೇಶದಿಂದಲೇ ಇವತ್ತು ಹೇಳುತ್ತಿದ್ದೇನೆ. ನಾವು ಟೀಕೆ ಮಾಡಬೇಕು ಎಂದು ಹೇಳಿ ಕಾನೂನನ್ನು ಟೀಕೆ ಮಾಡುವುದಲ್ಲ. ಆ ಉದ್ದೇಶ ನಮಗೆ ಇಲ್ಲವೇ ಇಲ್ಲ. ನಾನು ಅದಕ್ಕೆ ಹೇಳಿದ್ದು ಮೂಲ ಉದ್ದೇಶ ಏನು ಖಾಸಗೀಕರಣ ಮಾಡತಕ್ಕದ್ದು, ಆ ಸಿದ್ಧಾಂತಕ್ಕೆ ನಾನು ಒಪ್ಪುತ್ತೇನೆ. ಒಪ್ಪುವುದಿಲ್ಲ ಎಂದು ಅಲ್ಲ. ಆದರೆ ಅದಕ್ಕೂ ಸಹ ಸ್ವಲ್ಪ ಮೆಥಡ್ ಇರಬೇಕಾಗುತ್ತದೆ. ಮ್ಯಾಡ್‌ನೆಸ್‌ಗೂ ಕೂಡ ಒಂದು ಮೆಥಡ್ ಇದೆ. ಇದರಲ್ಲಿ ಮ್ಯಾಡ್‌ನೆಸ್‌ಗೂ ಮೆಥಡ್ ಇಲ್ಲದೇ ಇರತಕ್ಕಂಥ ಒಂದು ಓತಪ್ರೋತವಾಗಿ ಇವತ್ತು ಹುಚ್ಚಾಪಟ್ಟೆ ರಾಜ್ಯದ, ಒಂದು ಸಮಾಜದ ಸ್ವತ್ತನ್ನು ಅಪಹರಣ ಮಾಡತಕ್ಕಂಥ ಒಂದು ಸಾಧನವಾಗಿ ಈ ಕಾನೂನು ಪರಿವರ್ತನೆ ಮಾಡಬೇಡಿ-ದಯಮಾಡಿ ಮಾಡಬೇಡಿ. The law is not meant for this. ಈ ಸದನ ಅದಕ್ಕೆ ಸಹಕಾರ ಕೊಡಲಿಕ್ಕೆ ಆಗುವುದಿಲ್ಲ. ಬಹಳ ವಿರೋಧ ಮಾಡಬೇಕಾಗುತ್ತದೆ. ಆದ್ದರಿಂದ ಈ ಕಾನೂನಿನಲ್ಲಿ ತಾವು ತಿದ್ದುಪಡಿ ಕ್ಲಾಸ್-2 ನೋಡಿದರೇನೋ? ತಿದ್ದುಪಡಿಯ ತಿದ್ದುಪಡಿಯಲ್ಲಿ ಸಾಟಿಲೈಟ್ ಟೌನ್, ರಸ್ತೆ, ಹೆದ್ದಾರಿ, ರಾಜ್ಯ ಅಥವಾ ಹೆದ್ದಾರಿಯನ್ನು ಬಿಟ್ಟು ಕೂಡ ಬೇರೆ ಬೇರೆ ಕಾರ್ಯಕ್ರಮ ಮಾಡಲಿಕ್ಕೆ ಕೂಡ ಇಲ್ಲಿ ತಿದ್ದುಪಡಿಯಲ್ಲಿ ಅವಕಾಶ ಕಲ್ಪಿಸಿದ್ದಾರೆ. ತಿದ್ದುಪಡಿಯ ತಿದ್ದುಪಡಿಯಲ್ಲಿ ಹೆದ್ದಾರಿ ಮಾತ್ರವಲ್ಲ-ಬೇರೆ ಹೆದ್ದಾರಿಗೆ ಸಂಬಂಧಪಟ್ಟಿದ್ದು ಇದೆ. ಈ ನೆಪವನ್ನು ಇಟ್ಟುಕೊಂಡು ಇನ್ನು ಅನೇಕ ಚಟುವಟಿಕೆಗಳನ್ನು ಮಾಡತಕ್ಕಂಥ ಒಂದು ಅಮಿನಿಬಸ್ ಕ್ಲಾನ್‌ಅನ್ನು ಇಟ್ಟುಕೊಂಡು ತಾವು ಅದನ್ನು ತಿದ್ದುಪಡಿಯ ತಿದ್ದುಪಡಿಯಲ್ಲಿ ಇವತ್ತು ಕಾಣಿಸುತ್ತಿದ್ದೀರಿ. ತಾವು ಇನ್ನು ನಾಲ್ಕು ಥಿಯೇಟರ್ಸ್ ಮಾಡಬಹುದು, ಅಥವಾ ಎಂಟರ್‌ಟೇನ್‌ಮೆಂಟ್ ಪಾರ್ಕ್ಸ್ ಮಾಡಬಹುದು, ತಾವು ಇನ್ನು ಏನು ಬೇಕಾದರೂ ಮಾಡಬಹುದು. ಉದ್ದಕ್ಕೂ ಸಬ್‌ಲೀಸ್ ಮಾಡಬಹುದು, ಅವನೇ ಸ್ವತಃ, ನಿರ್ಮಾಣ ಮಾಡತಕ್ಕ ಅವಶ್ಯಕತೆ ಇಲ್ಲ. ಸೇರಿದ ಮತ್ತು ಅರ್ಜಿಸಬೇಕಾದ ಯಾವುದೇ

ಭೂಮಿಯನ್ನು ಅಂತಹ ಒಪ್ಪಂದದಲ್ಲಿ ಮೂಲಕ ಒಪ್ಪಂದದ ಅವಧಿಯಲ್ಲಿ, ಗುತ್ತಿಗೆಯ ಮೂಲಕ ಅಥವಾ ಅನ್ಯತಾ ವರ್ಗಾಯಿಸಲು ಒಂದು ಉಪಬಂಧವನ್ನು ಕಲ್ಪಿಸಬಹುದು. ಈ ಕಾನೂನಿನ ಕವಲು ದಾರಿ ಯಾವ ರೀತಿಯಲ್ಲಿ ಎಲ್ಲಿಗೆ ಹೋಗಬೇಕೋ ಅಲ್ಲಿಗೆ, under the sky, that kind of a flexibility has been introduced in this Bill. ತಮ್ಮ ಕಾನೂನಿನಲ್ಲಿ ಇದನ್ನೆಲ್ಲಾ ತಾವು ಉಪಯೋಗ ಮಾಡಿದ್ದೀರಿ. ನಾನು ಹೇಳಿದ ಪ್ರಕಾರ ಒಂದು ಅಪ್ಪರ್ ಲಿಮಿಟ್ ಕೂಡ ಇದಕ್ಕೆ ಇರಬೇಕಾಗುತ್ತದೆ. ಒಂದು ಐಡಿಯಲ್ ಮೆಮೊರ್ಯಾಂಡಮ್‌ನ ಅಂಡರ್‌ಸ್ಟಾಂಡಿಗ್ ಅನ್ನು ತೆಗೆದುಕೊಂಡು, ಅದು ಈ ರಾಷ್ಟ್ರದಲ್ಲಿ ಎಲ್ಲಿಯಾದರೂ ಆಗಿದ್ದರೆ, ಅದನ್ನೆಲ್ಲಾ ಸ್ಟಡಿ ಮಾಡಿ, ಅದರ ರೂಪುರೇಖೆ ಇದರಲ್ಲಿ ಬರಬೇಕಾಗುತ್ತದೆ. ಮತ್ತು ರೂಲ್‌ನಲ್ಲಿ ಏನು ಕಾಣಿಸಬೇಕು ಅದನ್ನು ಕಾಣಿಸಬೇಕಾಗುತ್ತದೆ. ಏಕೆಂದರೆ ಅವರು ಹತ್ತು ವರ್ಷದಲ್ಲಿ ಎಷ್ಟು ಖರ್ಚು ಮಾಡಿದ್ದಾರೆ, ಮತ್ತು ಅದರ ನಿರ್ವಹಣೆಗೆ ಎಷ್ಟು ಹಣಬೇಕು ಎಂಬುದನ್ನು ಕಂಪ್ಯೂಟರ್‌ನಲ್ಲಿ ಕಂಪ್ಯೂಟ್ ಮಾಡಿ ಲೆಕ್ಕ ಹಾಕಿ, ಅದರ ಮೇಲೆ ಒಂದು ವರ್ಷಕ್ಕೆ ಇಷ್ಟು ವಸೂಲು ಮಾಡಬಹುದು ಅಥವಾ ಒಂದು ವೆಹಿಕಲ್‌ಗೆ ಎಷ್ಟು ವಸೂಲು ಮಾಡಬಹುದು ಎಂಬುದನ್ನು ಕಂಡುಹಿಡಿದು ಹಾಕಲಿಕ್ಕೆ ಏನೂ ಕಷ್ಟ ಇಲ್ಲ. ಅದರ ಲೆಕ್ಕವನ್ನು ಸುಲಭವಾಗಿ ಹಾಕಬಹುದು. ಇದು ಯಾವ ಲೆಕ್ಕಕ್ಕೂ ಕೂಡ, ಯಾವ ಲೆಕ್ಕದ ಒಂದು ಮಿತಿಗೂ ಕೂಡ, ಯಾವ ಲೆಕ್ಕದ ಒಂದು ಲಕ್ಷ್ಮಣ ರೇಖೆಗೂ ಕೂಡ, ಒಳಪಡದ ರೀತಿಯಲ್ಲಿ, ಒಂದು ರೀತಿಯ ಪರ್‌ಮಿಸೀವ್‌ನೆಸ್ ಒಂದು ಲೈಸೆನ್ಸಿಯಸ್, ಕಾನೂನನ್ನು ತಾವು ಈ ಸದನದ ಮುಂದೆ ತರುವುದಿದ್ದರೆ, ನಾವು ಅದನ್ನು ಖಂಡಿತವಾಗಿ ಒಪ್ಪುವುದಕ್ಕೆ ಆಗುವುದಿಲ್ಲ. ಇಂತಹ ಕಾನೂನನ್ನು ಮಾಡಿದರೆ ಇದೊಂದು ಐತಿಹಾಸಿಕ ದುರಂತವಾಗುತ್ತದೆ, ಆದುದರಿಂದ ತಾವು ಈ ಎರಡು ಕಾನೂನನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿ ಅಥವಾ ವಿತ್‌ಡ್ರಾ ಮಾಡಿಯೆಂದು ನಾನು ಒತ್ತಾಯ ಮಾಡುತ್ತೇನೆ. ಇದರ ಬಗ್ಗೆ ಸಾಕಷ್ಟು ವಿವೇಚನೆ ಮತ್ತು ಚರ್ಚೆಯನ್ನು ಮಾಡಿ ಈ ಕಾನೂನನ್ನು ನೀವು ತರಬೇಕೆಂದು ನಾನು ತಮ್ಮ ಮುಖೇನ ಸಚಿವರನ್ನು ವಿನಂತಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಸನ್ಮಾನ್ಯ ಅಧ್ಯಕ್ಷರೇ, 50ನೇ ಸ್ವಾತಂತ್ರ್ಯೋತ್ಸವ ಪ್ರಯುಕ್ತ ಉದಾಸಿಯವರು ಒಂದು ಬಹಳ ಉದಾರಭಾವದಿಂದ ಒಂದು ಕರಾಳ ಕಾನೂನನ್ನು ತಂದಿದ್ದಾರೆ. ಅದನ್ನು ವಿರೋಧ ಮಾಡುವುದಕ್ಕಿಂತ ಮುಂಚೆ ಬಹಳ ಗಂಭೀರವಾಗಿ ಅದರ ಬಗ್ಗೆ ಚಿಂತನೆ ಮಾಡಿದರೆ, ಈ ಕಾನೂನಿನ ಅಪಾಯ ನಮ್ಮ ಮೇಲೆ ಜಾಸ್ತಿ ಇದೆ. ಅದರಿಂದ ಒಂದ ರೀತಿಯ ಅನುಕೂಲ ಸಹ ಆಗುತ್ತಿದೆ, ಒಂದು ಐವತ್ತು ಸಾವಿರ ಜನ ಐದು ವರ್ಷ ಜೇಲು ಸೇರಿಬಿಟ್ಟರೆ ಊಟ ತಿಂಡಿ ಮಾಡಿಕೊಂಡು ಅಲ್ಲಿ ಆರಾಮವಾಗಿ ಇರಬಹುದು. ಬಹಳ ದೊಡ್ಡ ಕಾನೂನು ತಂದಿದ್ದೀರಿ. ಅದರಲ್ಲಿ ತಾವು ಉದ್ದೇಶ ಮತ್ತು ಕಾರಣಗಳ ಹೇಳಿಕೆ ಬಗ್ಗೆ ತಾವು ಏನು

ಹೇಳಿದ್ದೀರಿ ಎಂದರೆ, ವಿನಿಮಯಿಸಲು ಹಾಗೂ ನಿಯಂತ್ರಿಸಲು, ದುಷ್ಕೃತ್ಯವನ್ನು ಮಾಡುವ ಯಾವುದೇ ವ್ಯಕ್ತಿಗೆ, ಅಂದರೆ ಯಾವುದೇ ವ್ಯಕ್ತಿ ಚಳುವಳಿ ಮಾಡಿದಾಗ, ಅಂದರೆ ಅವರು ಪೂರಾ ವಾಹನಗಳನ್ನೇ ನಿಲ್ಲಿಸಿದರೆ ಆಗ ತಾವು ಏನು ಮಾಡುತ್ತೀರಿ? ರಸ್ತೆಯಲ್ಲಿ ವಾಹನ ಚಳುವಳಿ ಮಾಡಿ, ವಾಹನ ನಿಲ್ಲಿಸಿದಾಗ, ಆ ವಾಹನದ ಸಮೇತ ಡ್ರೈವರ್‌ಗಳನ್ನು ಮಾಲೀಕರನ್ನು ಎಲ್ಲರನ್ನೂ ಜೈಲಿಗೆ ಹಾಕುತ್ತೀರಾ ನೀವು? ಯಾವ ಉದ್ದೇಶಕ್ಕೆ ಈ ಕಾನೂನನ್ನು ನೀವು ತಂದಿದ್ದೀರಿ ಎಂಬುದು ಅರ್ಥವಾಗುತ್ತಿಲ್ಲ. ಬಹಳ ಆತುರದಿಂದ ತಾವು ಇಂತಹ ಕಾನೂನನ್ನು ತಂದಿರುವುದು ಬಹಳ ಆಶ್ಚರ್ಯ. ಆಮೇಲೆ ಯಾರೋ ಗಣೇಶ ದೇವಾಸ್ಥಾನಕೋಸ್ಕರ ರಸ್ತೇಲೆಲ್ಲಾ ಚಪ್ಪರ ಹಾಕಿರುತ್ತಾರೆ, ಅವರನ್ನು ಗಣೇಶನ ಸಮೇತ ತಂದು ಜೈಲಿಗೆ ಹಾಕುತ್ತೀರಾ ಮತ್ತು ಮಂತ್ರಿಗಳನ್ನು ಸ್ವಾಗತ ಮಾಡುವುದಕ್ಕೆ ಜನ ಕಮಾನ್‌ಗಳನ್ನು ಕಟ್ಟಿ, ಚಪ್ಪರ ಹಾಕಿರುತ್ತಾರೆ, ಅವರನ್ನೆಲ್ಲಾ ಜೈಲಿಗೆ ಹಾಕುತ್ತೀರಾ? ಬಹಳ ಜನ ಇದನ್ನು ಜಾಯಿಂಟ್ ಸೆಲೆಕ್ಟ್‌ಗೆ ಹಾಕಿ ಎಂದು ಬಹಳ ಜನ ವಿರೋಧ ಪಕ್ಷದ ನಾಯಕರು ತಮ್ಮ ಅಭಿಪ್ರಾಯವನ್ನು ಹೇಳಿರುವಾಗ ನಾನು ಪುನಃ ಇದರ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಆಮೇಲೆ ರೈತರ ವಾಹನಗಳು ಗದ್ದೆಗಳಿಗೆ ಹೋಗುತ್ತಿರುತ್ತವೆ; ಬರುತ್ತಿರುತ್ತವೆ, ಆಹಾರ ಪದಾರ್ಥಗಳನ್ನು ತರುತ್ತಿರುತ್ತಾರೆ, ಅದಕ್ಕೆ ನೀವು 15 ರೂಪಾಯಿಯನ್ನು ಫಿಕ್ಸ್ ಮಾಡಿದ್ದೀರಿ. ನೀವು ರೈತರಿಗೆ ವಿನಾಯಿತಿಯನ್ನು ಕೊಡಬೇಕು. ನೀವು ಯಾವುದೇ ಕಾನೂನನ್ನು ತಂದರೂ ರೈತರಿಗೆ ಸುಂಕವನ್ನು ವಿಧಿಸತಕ್ಕದ್ದು ಮಾಡಬಾರದು, ರೈತರ ತರತಕ್ಕೆ ಆಹಾರಧಾನ್ಯಗಳನ್ನು ಎಲ್ಲಾ ಹೇಗೆ ಊಟ ಮಾಡುತ್ತೀರಿ ಹಾಗೆ ರೈತರು ಎಲ್ಲಾ ರಸ್ತೆಗಳಲ್ಲೂ ಓಡಾಡಬಹುದು, ಆದುದರಿಂದ ಈ ಕಾನೂನನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಯನ್ನು ತಂದು ಅದಕ್ಕೆ ಪುನರ್‌ಪರಿಶೀಲನೆ ನಡೆಸಿ ಸರಿಯಾದಂಥ ರೀತಿಯಲ್ಲಿ ತಿದ್ದುಪಡಿ ತರಬೇಕೆಂದು ಮನವಿ ಮಾಡಿಕೊಳ್ಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಇದೇ ವಿಷಯದ ಬಗ್ಗೆ ಎಲ್ಲಾ ಪಕ್ಷದವರು ಮಾತನಾಡಿದ್ದಾರೆ, ಇದು ಅಧಿವೇಶನದ ಕೊನೆಯ ದಿನ, ಸಮಯದ ಅಭಾವ ಇದೆ, ಇನ್ನು ಅನೇಕ ಬಿಲ್ಲುಗಳಿವೆ. ಅದನ್ನು ತಾವು ದಯಮಾಡಿ ಅರ್ಥ ಮಾಡಿಕೊಳ್ಳಿ.

(ಗೊಂದಲ)

+ ಶ್ರೀ ಸಿ.ಹೆಚ್.ವಿಜಯಶಂಕರ್ (ಹುಣಸೂರು): ಸನ್ಮಾನ್ಯ ಉಪಾಧ್ಯಕ್ಷರೇ, ನನ್ನ ಅಭಿಪ್ರಾಯ ಇಷ್ಟೆ, ದೇಶದ ಯಾವುದೇ ಭಾಗಗಳಲ್ಲಿ ಈ ರೀತಿ ರಾಜ್ಯದ ಹೆದ್ದಾರಿಗಳನ್ನು, ರಾಷ್ಟ್ರದ ಹೆದ್ದಾರಿಗಳನ್ನು ಖಾಸಗೀಕರಣಗೊಳಿಸತಕ್ಕ ವ್ಯವಸ್ಥೆ ಇದೆಯೇ? ಇದ್ದಂತಹ ಪಕ್ಷದಲ್ಲಿ ಅಲ್ಲಿ ಯಾವ ನಿಯಮವನ್ನು ಅಳವಡಿಸಲಾಗಿದೆ? ಖಾಸಗೀಕರಣದ ಸಮಯದಲ್ಲಿ ಜೈಲು ವಾಸವನ್ನು ಕಾಣಿಸಿರುವುದು ಬಹುಶಃ ದೇಶದ ಇತಿಹಾಸದಲ್ಲೇ, ಅಥವಾ ಜಗತ್ತಿನ ಯಾವುದೇ ಪ್ರಜಾತಂತ್ರ್ಯ ವ್ಯವಸ್ಥೆಯಲ್ಲಿ ಎಲ್ಲಿ ಈ ರೀತಿ ಸಾಧ್ಯವಿದೆ?

ಮಾನ್ಯ ಸಚಿವರು ಮಾತನಾಡುತ್ತಾ, ಹೇಳಿದರು ಇದರಲ್ಲಿ ನಿರ್ದಿಷ್ಟ ಕಾಲಾವಧಿಯನ್ನು ಸೂಚಿಸದೆ ಇರುವುದರಿಂದ, ಸಂಪೂರ್ಣವಾಗಿ ಮತ್ತು ಶಾಶ್ವತವಾಗಿ ಇದನ್ನು ಖಾಸಗೀಕರಣಕ್ಕೆ ಒಳಪಡಿಸುವಂತಹ ವ್ಯವಸ್ಥೆ ನಿರ್ಮಾಣ ಆಗುತ್ತದೆ ಎಂದು ಹೇಳಿದರು. ಈ ವಿಷಯದಲ್ಲಿ ನನ್ನ ವಾದ ಇಷ್ಟೆ, ಈ ರೀತಿ ಜೈಲು ವಾಸದ ಪ್ರಶ್ನೆ ಏನು ಬಂದಿದೆ, ದೇಶದಲ್ಲಾಗಲಿ, ಅಥವಾ ಪ್ರಜಾತಂತ್ರ್ಯದ ಯಾವುದೇ ವ್ಯವಸ್ಥೆಯಲ್ಲಾಗಲೀ, ರಸ್ತೆಗಳನ್ನು ದುರಸ್ತೀಕರಣಗೊಳಿಸುವುದಕ್ಕೆ ಖಾಸಗಿಯವರಿಗೆ ವಹಿಸಿದಂತಹ ಸಂದರ್ಭದಲ್ಲಿ, ಅಥವಾ ರಸ್ತೆಗಳ ದುರಸ್ತಿ ಆದ ಮೇಲೆ ಅಲ್ಲಿನ ಅವ್ಯವಸ್ಥೆ ಬಗ್ಗೆ ದುಷ್ಕೃತ್ಯ ಭಾಗಿಯಾದ ಒಂದೇ ಕಾರಣಕ್ಕೋಸ್ಕರ, ಅವನೇನಾದರೂ ಕೊಲೆ ಮಾಡಿದರೆ, ರಸ್ತೆ ರಾಬರಿ ಮಾಡಿದರೆ ಅಥವಾ ಅವನು ಬೇರೆ ಯಾವುದಾದರೂ ಕೆಟ್ಟ ವ್ಯವಹಾರದಲ್ಲಿ ಭಾಗಿಯಾಗಿದ್ದರೆ ಅವನಿಗೆ ಕಾನೂನು ಶಿಕ್ಷೆ ಆಗಬೇಕೆಂಬ ಕಾನೂನು ಈ ದೇಶದಲ್ಲಿದೆ, ಆದರೆ ದುಷ್ಕೃತ್ಯ ಎನ್ನುವುದಕ್ಕೆ ಸ್ಪಷ್ಟ ವಿವರಣೆ ಆಗಿಲ್ಲ ಎನ್ನುವುದನ್ನು ಮಾನ್ಯ ಹಿರಿಯ ಸದಸ್ಯರುಗಳು ಮಾತನಾಡುವ ಸಂದರ್ಭದಲ್ಲಿ ಸ್ಪಷ್ಟಮಾಡಿದ್ದಾರೆ. ಇದರಲ್ಲಿ ನೀವು ಐದು ವರ್ಷಗಳ ಜೈಲು ವಾಸವನ್ನು ನೀವು ಕಾಣಿಸುತ್ತಿದ್ದೀರಿ, ದೇಶದ ಯಾವುದೇ ಭಾಗದಲ್ಲಿ ಈ ರೀತಿಯ ಕಾನೂನಿನ ವ್ಯವಸ್ಥೆ ಇದೆಯೇ ಎಂಬುದನ್ನು ತಾವು ಸ್ಪಷ್ಟ ಮಾಡಬೇಕಾಗುತ್ತದೆ. ಆ ಕಾರಣಕ್ಕೋಸ್ಕರ ನಾನು ಇಲ್ಲಿ ನಿಂತಿದ್ದೇನೆ. ನಾನು ಒಂದು ಮಾತನ್ನು ಸ್ಪಷ್ಟಮಾಡುತ್ತೇನೆ, ಏನಾದರೂ ನನ್ನ ಭಾಗದಲ್ಲಿ ಅಸಹಜವಾದಂತಹ ಘಟನೆ ಸಂಭವಿಸಿದಂತಹ ಸಂದರ್ಭದಲ್ಲಿ ನಮ್ಮ ರೈತರು ಸಾಮಾನ್ಯವಾಗಿ ಪ್ರತಿಭಟನೆ ಮಾಡುವುದು, ರಸ್ತೆ ತಡೆ ಮಾಡುವುದು ಸಹಜ. ಹಂಪ್ಸನ್ನು ಆ ಸಂದರ್ಭಗಳಲ್ಲೂ ಕೂಡ ಈ ಒಂದು ಕಾನೂನು ಅಪ್ಲೈ ಆಗುತ್ತದೆ. ರೈತರನ್ನು ಜೈಲಿಗೆ ಹಾಕುವಂತಹ ಸಂದರ್ಭ ಇದರಿಂದ ನಿರ್ಮಾಣ ಆಗುತ್ತದೆ, ಆದುದರಿಂದ ಇದರ ಬಗ್ಗೆ ಆಳವಾಗಿ ಯೋಚನೆಯನ್ನು ಮಾಡಿ, ಅದರಲ್ಲೂ ಹಿರಿಯ ಸದಸ್ಯರುಗಳು ಒಳ್ಳೆಯ ಉಪಯುಕ್ತವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ, ಖಾಸಗಿಯವರಿಗೆ ವಹಿಸುವ ಸಂದರ್ಭದಲ್ಲಿ ಯಾವ ನಿಯಮವನ್ನು ಅಳವಡಿಸಬೇಕು ಎಂದ ಸ್ಪಷ್ಟೀಕರಣ ಮಾಡಿದ್ದಾರೆ. ಆದುದರಿಂದ ನಾನು ಈ ಸಮಯದಲ್ಲಿ ಎಲ್ಲಾ ಹಿರಿಯ ಸದಸ್ಯರ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು, ಸನ್ಮಾನ್ಯ ಮಂತ್ರಿಯವರು ಈ ಕಾನೂನನ್ನು ಯೋಚನೆ ಮಾಡಿ ಜಾರಿಗೊಳಿಸಬೇಕೆಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು): ಸನ್ಮಾನ್ಯ ಉಪಾಧ್ಯಕ್ಷರೇ, ರಾಜ್ಯ ಸರ್ಕಾರದ ಉದ್ದೇಶ, ರಾಜ್ಯ ಹೆದ್ದಾರಿಗಳ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ, ಯಾರೇ ಖಾಸಗಿ ವ್ಯಕ್ತಿಗಳು ಹಣಕಾಸು ಹಾಕಿ ರಸ್ತೆಗಳನ್ನು ಸುಧಾರಣೆ ಮಾಡುವುದಕ್ಕೆ ಮುಂದೆ ಬರಬೇಕು ಎನ್ನುವ ಉದ್ದೇಶದಿಂದ ಈ ಕಾನೂನನ್ನು ಜಾರಿಗೆ ತಂದಿದ್ದೇವೆ. ತಮಗೆ ಗೊತ್ತಿರುವಂತೆ ಇಡೀ ರಾಜ್ಯದಲ್ಲಿ ಮೊದಲನೇ ಪಂಚವಾರ್ಷಿಕ ಯೋಜನೆಯಿಂದ ರಸ್ತೆಗಳಿಗಾಗಿ ಶೇಕಡ 6.70ರಷ್ಟು ಹಣ ದೊರೆಯುತ್ತಿದೆ. ಆದರೆ

8ನೇ ಪಂಚವಾರ್ಷಿಕ ಯೋಜನೆಯಲ್ಲಿ ಶೇಕಡ ಮೂರರಷ್ಟು ಹಣ ದೊರೆಯುತ್ತಿದೆ, ಈ ವರ್ಷದಲ್ಲಿ ಶೇಕಡ ಒಂದರಷ್ಟು ಮಾತ್ರ ಹಣ ನಮಗೆ ದೊರೆಯುತ್ತಿದೆ. ಆಯವ್ಯಯದಲ್ಲಿ ಶೇಕಡ ಒಂದರಷ್ಟು ಹಣ ಮಾತ್ರ ರಸ್ತೆಗಳ ದುರಸ್ತಿಗೆ ಮತ್ತು ನಿರ್ವಹಣೆಗೆ ದೊರೆಯುತ್ತಿದೆ. ಇಂತಹ ಸಂದರ್ಭದಲ್ಲಿ ಮೂಲಭೂತ ಸೌಕರ್ಯಗಳು ಇಲ್ಲದೆ ಹೋದರೆ ರಸ್ತೆ ಮತ್ತು ಸೇತುವೆಗಳು ಆಗದೇ ಹೋದರೆ ಇಡೀ ರಾಜ್ಯಾದ್ಯಂತ ಆಗಬೇಕಾದ ಅಭಿವೃದ್ಧಿಗಳು, ಆರ್ಥಿಕ ಅಭಿವೃದ್ಧಿಗೆ ಆಗಲಿ, ಉದ್ಯಮಗಳು ಬೆಳೆಯಬೇಕಾದಂಥ ವಿಚಾರದಲ್ಲೇ ಆಗಲಿ ಹಿಂದುಳಿದ ವ್ಯವಸ್ಥೆಗಳನ್ನು ಸುಧಾರಣೆ ಮಾಡತಕ್ಕ ಸಂದರ್ಭದಲ್ಲಿ ಖಾಸಗಿ ವ್ಯಕ್ತಿಗಳು ಇದರಲ್ಲಿ ಹಣ ಹೂಡಲು ಮುಂದೆ ಬಂದಾಗ, ಅದಕ್ಕೆ ಬೇಕಾದಂಥ ಕಾನೂನನ್ನು ತಿದ್ದುಪಡಿ ಮಾಡಬೇಕಾಗಿದ್ದು ಅತ್ಯಂತ ಅವಶ್ಯ ಎಂದು ನಾನು ಭಾವಿಸುತ್ತೇನೆ. ಈ ರೀತಿ ತಿದ್ದುಪಡಿ ಮಾಡದೇ ಇದ್ದರೆ ಇವತ್ತು ಅನೇಕ ಜನ ಹಣ ಹೂಡಲಿಕ್ಕೆ ಮುಂದೆ ಬರದಂಥ ಸಂದರ್ಭಗಳು ಇದೆ. ಈ ವಿಷಯವಾಗಿ ಹೇಳುತ್ತಿರುವಾಗ ಮೊದಲಿದ್ದಂತಹ ಕಾನೂನಿನ ಬಗ್ಗೆ ಮಾನ್ಯ ನಂಜೇಗೌಡರು ಓದಿದಾಗ 48ಎ ನಲ್ಲಿ ಇರುವಂಥದ್ದು ಏನು ಎಂದರೆ, ರಾಜ್ಯ ಸರ್ಕಾರಗಳು ನಿರ್ಮಾಣ ಮಾಡಿದಂಥ ಸೇತುವೆಗಳಿಗೆ ಮಾತ್ರ, ಸರ್ಕಾರ ಹಣ ಹೂಡಿದಂಥ ಸೇತುವೆಗಳಿಗೆ ಮಾತ್ರ ಸುಂಕ ವಸೂಲಿ ಮಾಡುವಂತಹ ಕಾನೂನು ಇತ್ತು. ಖಾಸಗಿಯವರು ಬಂಡವಾಳ ತೊಡಗಿಸಿದಾಗ ಅದರಲ್ಲಿ ವಸೂಲು ಮಾಡುವ ಸಲುವಾಗಿ ಕಾನೂನಿನಲ್ಲಿ ಅವಕಾಶ ಇದೆ. ಇಂತಹ ಕಾನೂನನ್ನು ಕೇಂದ್ರ ಸರ್ಕಾರ ಈ ರೀತಿಯಾಗಿ ತಿದ್ದುಪಡಿ ಮಾಡಿತ್ತು. ಆ ಮಾದರಿಯಲ್ಲೇ ನಾವೂ ಮಾಡಿದ್ದೇವೆಯೇ ಹೊರತು ಬೇರೆ ಬದಲಾವಣೆ ನಾವು ಮಾಡಲಿಕ್ಕೆ ಹೋಗಿಲ್ಲ. ತಾವು ಏನು 48ಎ ಪ್ರಕರಣದ ಬಗ್ಗೆ ಹೇಳುತ್ತಿದ್ದೀರಿ; ಇದಕ್ಕೆ ಸಂಬಂಧಪಟ್ಟಂತೆ ವಾಹನ ಸಂಚಾರದ ಸಾಂದ್ರತೆಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸುವ ಮೂಲಕ ನಿರ್ದಿಷ್ಟಪಡಿಸಬಹುದಾದಂತಹ ದರದ ಪ್ರಕಾರ ಶುಲ್ಕವನ್ನು ವಸೂಲು ಮಾಡಬಹುದು. ಇದನ್ನು ಮಾಡಬೇಕಾದಾಗ ಸರ್ಕಾರ, ಈ ಪ್ರಕರಣದಲ್ಲಿ ಉಲ್ಲೇಖಿಸಲಾದಂತಹ ಯಾವ ವ್ಯಕ್ತಿಯು ತಾನು ಸಲ್ಲಿಸಿದ ಸೇವೆಗಳು ಅಥವಾ ನೀಡಿದ ಸೌಲಭ್ಯಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಅಂತಹ ಹೆದ್ದಾರಿಯ ಪೂರ್ಣ ಅಥವಾ ಭಾಗಶಃ ನಿರ್ಮಾಣ ನಿರ್ವಹಣೆ ಮತ್ತು ಹೆಚ್ಚಿಸಾರಣೆ ಪ್ರವರ್ತನೆಗಳಿಗೆ ತಗಲುವ ವೆಚ್ಚ, ಹೂಡಿದ ಬಂಡವಾಳದ ಮೇಲಿನ ಬಡ್ಡಿ ಮತ್ತು ಸೂಕ್ತ ಉತ್ಪತ್ತಿ ಇವುಗಳ ಬಗ್ಗೆ ಗಮನದಲ್ಲಿಟ್ಟುಕೊಂಡು ದರ ನಿಗದಿ ಮಾಡಬೇಕು. ಅಂದರೆ ಬೇಕಾಬಿಟ್ಟಿಯಾಗಿ ದರ ಗೊತ್ತುಪಡಿಸುವ ಅಧಿಕಾರ ಅವರಿಗಿಲ್ಲ. ಒಂದು ಕೋಟಿ ಖರ್ಚುಮಾಡಿದ್ದರೆ ಬೇರೆ ರೀತಿ, ನೂರು ಕೋಟಿ ಖರ್ಚು ಮಾಡಿದ್ದರೆ ಅದು ಬೇರೆ ರೀತಿ ಆ ರೀತಿ ವ್ಯವಸ್ಥೆಗಳ ಬಗ್ಗೆ ಚಿಂತನೆ ಮಾಡಬೇಕಾಗಿದೆಯೇ ಹೊರತು ಬೇಕಾಬಿಟ್ಟಿ ದರ ಗೊತ್ತುಪಡಿಸುತ್ತಾರೆ ಎಂದು ದಯವಿಟ್ಟು ತಿಳಿದುಕೊಳ್ಳಲು ಹೋಗಬಾರದು. ಇದು ಜನರಲ್ ವಿಧೇಯಕ, ಕೇಂದ್ರ ಸರ್ಕಾರ ಏನು ಮಾಡಿದೆ ಆ ತದ್ರೂಪದಲ್ಲಿ ರಾಜ್ಯ ಸರ್ಕಾರವು ತಂದಿದೆ, ಈಗ ಅದು

ತಮ್ಮ ಮುಂದಿದೆ. ಇದರಲ್ಲಿ ಬಹಳ ಜನ ಆಕ್ಷೇಪ ವ್ಯಕ್ತಪಡಿಸುತ್ತಿರುವುದು, ಜೈಲಿಗೆ ಹೋಗುವಂತಹ ಸಂದರ್ಭ ಯಾವಾಗ ಬರುತ್ತದೆಂದರೆ.... ಉಲ್ಲೇಖಿಸಲಾದ ಯಾವುದೇ ಹೆದ್ದಾರಿಯನ್ನು ಪ್ರಯಾಣಕ್ಕೆ ಅಥವಾ ಸರಕಿನ ಸಾಗಣೆಗೆ ದುರ್ಲಭವಾಗಿಸುವಂತಹ ಅಥವಾ ಹೆಚ್ಚು ಸುರಕ್ಷಿತವಲ್ಲದಂತೆ ಮಾಡುವ ಸಂಭವವಿದೆಯೆಂದು ತನಗೆ ತಿಳಿದಿರುವ ಯಾವುದೇ ಕಾರ್ಯದ ಮೂಲಕ ದುಷ್ಕೃತ್ಯ ಮಾಡುವ ಪ್ರತಿ ವ್ಯಕ್ತಿಗೂ ಐದು ವರ್ಷ ಸೆರೆವಾಸ ಅಥವಾ ಜುಲ್ಮಾನೆ ಮೂಲಕ ದಂಡಿಸಲಾಗುವುದು ಎಂದಿದೆ. ಆದರೆ ಇದು ಕೇಂದ್ರ ಸರ್ಕಾರದ ಕಾನೂನೇ. ಇಂಗ್ಲಿಷಿನಲ್ಲಿ ಅದು, "Whoever commits mischief by doing any act which render or which he knows likely to render any national Highway referred to in sub-section (1) of Section (8).... imprisonment of either discreption... extended for five years with fine or with both" ರಸ್ತೆಗಳನ್ನು ಮಾಡಬೇಕಾದಾಗ ಅವರು ಖರ್ಚುಮಾಡಿರುವಂತಹ ಹಣವನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ದರ ಗೊತ್ತುಪಡಿಸಬೇಕಾಗಿದೆ. ದಯವಿಟ್ಟು ಇದಕ್ಕೆ ಮಂಜೂರಾತಿ ಕೊಡಬೇಕು. ಕೇಂದ್ರಸರ್ಕಾರದ ರಾಷ್ಟ್ರೀಯ ಹೆದ್ದಾರಿ ನಿಗಮದ ಅಧಿಕಾರಿಗಳು ಇಲ್ಲಿಗೆ ಬಂದಾಗ ಈ ಯೋಜನೆಯನ್ನು ಇಡೀ ರಾಜ್ಯದಲ್ಲಿ ಜಾರಿಗೊಳಿಸಬೆಕೆಂಬ ಕೇಂದ್ರದ ಪ್ರಸ್ತಾವವನ್ನು ನಮ್ಮ ಗಮನಕ್ಕೆ ತಂದರು. ಜೊತೆಗೆ ಕರ್ನಾಟಕದಲ್ಲಿ ಅನೇಕ ರಾಷ್ಟ್ರೀಯ ಹೆದ್ದಾರಿ ಮಾಡುವ ಜೊತೆಗೆ ಅನೇಕ ರೈಲ್ವೆ ಓವರ್‌ಬ್ರಿಡ್ಜ್‌ಗಳಿಗೆ ಖಾಸಗಿಯವರು ಯಾರಾದರೂ ಬಂದು ಹಣ ತೊಡಗಿಸಲಿಕ್ಕೆ ಮುಂದೆ ಬಂದಾಗ ಈ ಯೋಜನೆ ಬೇಕಾಗುತ್ತದೆ. ಈವತ್ತು ಹನುಮನಮಟ್ಟಿ ರೈಲ್ವೆ ಓವರ್‌ಬ್ರಿಡ್ಜ್ ಕೆಲಸ ನಿಂತಿದೆ, ಹುಬ್ಬಳ್ಳಿ ಧಾರವಾಡ ಬೈಪಾಸ್ ಇದೆ, ಹುಬ್ಬಳ್ಳಿಯಿಂದ ಬಳ್ಳಾರಿಗೆ ಹೋಗುವಂತಹ ರಸ್ತೆ ಮಾಡಬೇಕಾಗಿದೆ. ನೆಲಮಂಗಲದಿಂದ ತುಮಕೂರು ನಾಲ್ಕು ರಸ್ತೆ ಮಾಡುವ ಸಂದರ್ಭಗಳಲ್ಲಿ ಖಾಸಗಿಯವರು ಹಣ ತೊಡಗಿಸಲು ಮುಂದೆ ಬಂದಾಗ ಸರ್ಕಾರ ನಿಗದಿಪಡಿಸಿದ ಅಲ್ಲಿ ಖರ್ಚುಮಾಡಿದ ಹಣವನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ಬರಬೇಕಾದ ರಿಟರ್ನ್ ಗಮನದಲ್ಲಿಟ್ಟುಕೊಂಡು ನಿರ್ದಿಷ್ಟಪಡಿಸಿದ ಹಣಕ್ಕೆ ಮಾತ್ರ ದರ ಗೊತ್ತುಪಡಿಸಬೇಕಾಗುತ್ತದೆಯೇ ಹೊರತು ಬೇರೆ ರೀತಿಯಿಂದ ಮಾಡಲು ಸಾಧ್ಯವಾಗುವುದಿಲ್ಲ. ಇದಕ್ಕೆ ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗಾಗಲೇ ಹೇಳಿರುವಂತೆ ಈಗ ತಂದಿರುವ ತಿದ್ದುಪಡಿ ಮೊದಲಿನ ತಿದ್ದುಪಡಿಗಿಂತಲೂ ಭಾರಿ ಇವೆ. 5 ವರ್ಷ ಶಿಕ್ಷೆ ಕೊಡುವಂಥದ್ದು, ಮೊದಲಿನ ಆಕ್ಟ್ ಹಾಗೂ ಇದನ್ನು ನೋಡಿದಾಗ ಅಜಗಜಾಂತರ ವ್ಯತ್ಯಾಸ ಇದೆ, ಇದು ಹೆರಾಸ್ಮೆಂಟಾಗುತ್ತದೆ. ರಾಜ್ಯದ ರಸ್ತೆಗಳನ್ನು ಖಾಸಗಿಯವರಿಗೆ ಬಹಳಷ್ಟು ಕೊಡಬೇಕೆಂಬ ವಿಚಾರ ನಮ್ಮ ಮುಂದಿದೆ. ಅದರಿಂದ ಇದು ದುರುಪಯೋಗವಾಗುತ್ತದೆ. ಆದ್ದರಿಂದ

ಕೂಲಂಕಷವಾಗಿ ವಿಚಾರ ಮಾಡಿ ಬೇಕಾದರೆ ತನ್ನಿ, ತರಾತುರಿಯಿಂದ ತರುವಂಥದ್ದಲ್ಲ, ಸುಗ್ರಿವಾಜ್ಞೆ ಲ್ಯಾಪ್ಸ್ ಆಗುವಂಥದ್ದಲ್ಲ ಆದ್ದರಿಂದ ಇದನ್ನು ಜಂಟಿ ಸದನ ಸಮಿತಿಗೆ ಕಳುಹಿಸಿ, ಒಂದು ತಿಂಗಳಿನಲ್ಲಿ ತರಿಸಿಕೊಳ್ಳಿ, ಬೇಡ ಎಂದು ಯಾರು ಹೇಳುತ್ತಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ತಾವೆಲ್ಲರೂ ಹೇಳಿರುವಂಥದ್ದು, ರಸ್ತೆರೋಕೋ ನಾವು ಮಾಡಬೇಕಾದಾಗ ಅಂತಹ ಸಂದರ್ಭದಲ್ಲಿ ನ್ಯಾಯಬದ್ಧವಾಗಿ ಪ್ರತಿಭಟನೆ ಮಾಡಿದರೆ 5 ವರ್ಷ ಶಿಕ್ಷೆ ಹಾಕುತ್ತೀರಿ ಎಂಬುದು ಒಂದಭಿಪ್ರಾಯ. ಇನ್ನೊಂದು ಎಲ್ಲಾ ರಸ್ತೆಗಳಲ್ಲೂ ಇದನ್ನು ಮಾಡುವುದಕ್ಕೆ ಹೊರಟಿದ್ದೀರಿ ಅನ್ನುವುದು, ಅಲ್ಲ, ತಮಗೆಲ್ಲಾ ಗೊತ್ತಿದೆ, ಮೊಯ್ಲಿಯವರು ತಾವೂ ಓದಿದ್ದೀರಿ, ಕೇಂದ್ರಸರ್ಕಾರ ಖಾಸಗಿ ಬಂಡವಾಳ ಮಾಡಿಸಬೇಕಾದರೆ ಎಲ್ಲಿ ರಸ್ತೆಗಳನ್ನು ಮಾಡಿದ್ದಾರೆ ಅಲ್ಲಿ ಟೋಲ್ ಹಾಕಲಿಕ್ಕೆ ಆಕ್ಟ್ ಮಾಡಿದ್ದಾರೆ. ಅದೇರೀತಿಯಲ್ಲಿ ಖಾಸಗಿಯವರು ಮಾಡಿರುವ ರಸ್ತೆಗಳನ್ನು ಯಾರಾದರೂ ನಾಶ ಮಾಡಿದರೆ ಆಗ ಶಿಕ್ಷೆಗೆ ಒಂದು ಪ್ರಾವಿಷನ್ ಇಟ್ಟುಕೊಂಡಿದ್ದಾರೆ. ಉದಾಹರಣೆಗೆ ಕುಡಿದು ಡ್ರೈವ್ ಮಾಡಿದವರಿಗೆ ಎರಡು ವರ್ಷ ಕಠಿಣಶಿಕ್ಷೆ ಎಂದು ಹೇಳಿದ್ದೇವೆ, ಎಷ್ಟು ಜನಕ್ಕೆ 40 ವರ್ಷದಲ್ಲಿ ಮಾಡುವುದಕ್ಕೆ ಆಗಿದೆ? ಆದ್ದರಿಂದ ಸರ್ಕಾರದ ಉದ್ದೇಶ ಇಷ್ಟೇ: ಖಾಸಗಿ ಬಂಡವಾಳ ತರಬೇಕೆಂಬ ಉದ್ದೇಶ ಇರುವಾಗ ಟೋಲ್ ಮಾಡುವುದಕ್ಕೆ ಅವಕಾಶ ಮಾಡಿಕೊಂಡಿದ್ದೇವೆಯೇ ಹೊರತು ಇನ್ನೇನೂ ಇದರಲ್ಲಿ ದುರುದ್ದೇಶ ಇಲ್ಲ. ಶ್ರೀಮತಿ ಪ್ರಮೀಳಾ ಅವರು ಹೇಳಿದರು, ಬೇರೆ ಯಾರಿಗೋ ಪ್ರೈವೇಟ್‌ನವರಿಗೆ ಕೊಡುವುದಕ್ಕೆ ಮಾಡುತ್ತಿದ್ದೀರಿ ಎಂದು. That is absolutely not there ಇದಕ್ಕೆ ಸಂಬಂಧವೇ ಇಲ್ಲ. ಬಹಳ ಸರಳವಾದ ವಿಧೇಯಕ ಇದು.

ಶ್ರೀ ವಾಟಾಳ್ ನಾಗರಾಜ್: ನಾನು ಮತ್ತೊಮ್ಮೆ ತಮ್ಮನ್ನು ಕೈಮುಗಿದು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ: 5 ವರ್ಷ ಜೈಲುವಾಸ ಅನ್ನುವುದನ್ನು ಖಂಡಿತ ತೆಗೆಯಿರಿ. ಯಾರಿಗೂ ಶೋಭೆ ತರತಕ್ಕಂಥದಲ್ಲ. ರಸ್ತೆ ತಿರುಗಾಡುವವರಿಗೆಲ್ಲಾ ಜೈಲಿಗೆ ಹಾಕುತ್ತೇವೆ ಅಂದರೆ ಇದಕ್ಕೇನು ಬೆಲೆ ಬೇಡವೆ?

ಶ್ರೀ ಸಿ.ಎಂ.ಉದಾಸಿ: ಕೇಂದ್ರ ಕಾನೂನಿನಂತೆ ಇದೆಯೇ ಹೊರತು ಬೇರೆ ಏನೂ ಇಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಓದಿ ನಿಮ್ಮ ಒರಿಜಿನಲ್ ಆಕ್ಟ್‌ನಲ್ಲಿ ಏನಿದೆ ಎಂದು ಅನುಬಂಧ ಪುಟ 5,48 (ಎ): ರಾಜ್ಯಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ಮೂಲಕ ಅಂತಹ ಸೇತುವೆಗಳು, ಒಟ್ಟು ದಾರಿಗಳು ಸುರಂಗಮಾರ್ಗಗಳನ್ನು ಪ್ರವೇಶಿಸುವ ಎಲ್ಲಾ ಮೋಟಾರುವಾಹನಗಳ ಮೇಲೆ, ವಾಹನವೊಂದಕ್ಕೆ 15 ರೂ.ಗಳನ್ನು ಹಾಕಬೇಕೆಂದು ಇದೆ. ಆದರೆ ಹೊಸ ತಿದ್ದುಪಡಿ ಏನು ತಂದಿದ್ದಾರೆ ಇದರಲ್ಲಿ ಕನ್‌ಸ್ಟ್ರಕ್ಟ್ ಮಾಡುವವರಿಗೇ ಅಧಿಕಾರ ಕೊಡುವಂಥದ್ದು ಡೆವಲಪ್ ಮಾಡುವವರಿಗೆ ಅಧಿಕಾರ

ಕೊಡುವಂಥದ್ದು, ಒಂದು ಸಾರಿ ಅದರಲ್ಲಿ ವಯಲೇಟ್ ಮಾಡಿದರೆ ಐದು ವರ್ಷ ಶಿಕ್ಷೆ ವಿಧಿಸುವಂಥದು ಇದೆಲ್ಲಾ ಇದೆ. ಇದನ್ನೆಲ್ಲಾ ಕೂಲಂಕಷವಾಗಿ ಚರ್ಚೆ ಮಾಡಲಿಕ್ಕೆ ಈಗ ಸಮಯ ಇಲ್ಲ. ಒಂದು ತಿಂಗಳಿನಲ್ಲೇ ಜಂಟಿ ಸದನ ಸಮಿತಿಗೆ ಕಳುಹಿಸಿ ತರಿಸಿಬಿಡಿ.

+ ಶ್ರೀ ಎಚ್.ಎನ್.ನಂಜೇಗೌಡ: ಮುಖ್ಯಮಂತ್ರಿಗಳು ಬಂದಿದ್ದಾರೆ, ಅವರಲ್ಲಿ ವಿನಂತಿ. ಅವರು ಹೇಳುತ್ತಿದ್ದಾರೆ ಕೇಂದ್ರಸರ್ಕಾರ ಎಂದು. ನಾನು ಪಾರ್ಲಿಮೆಂಟಿನಲ್ಲಿದ್ದಾಗ ಮೂರು ನಿಮಿಷದಲ್ಲಿ ಐದು ಕಾನೂನು ಪಾಸ್ ಮಾಡಿದ್ದೇವೆ.

5.30 ಪಿ.ಎಂ

ಇದೆಲ್ಲಾ ಬೇಡ, ಅದು ರಿಫ್ಲೆಕ್ಷನ್ ಆಗುತ್ತದೆ. elected representatives ಬಗ್ಗೆ ಹಾಕಲ್ಲ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ನೋಡಿಲ್ಲ ಎಂದು ಕಾಣುತ್ತದೆ. 5 ವರ್ಷ ಜೈಲಿಗೆ ಹಾಕುತ್ತೀರಾ ನೀವು? ನ್ಯಾಷನಲ್ ಹೈವೇ ಗೌರ್ನಮೆಂಟ್ ಆಫ್ ಇಂಡಿಯಾ ಮಾಡಿದ್ದು, ರೋಡಿಗೆ ಏನೇ ಅನಾಹುತ ಮಾಡಿದರೂ ಈ ಕಾನೂನು ಅನ್ವಯಿಸುವುದಿಲ್ಲ. ಉದಾಸಿಯವರೇ, ಇದು ಸರಿಯಾ? ಯಾರೋ ಖಾಸಗಿಯವರು ಕಾಂಟ್ರಾಕ್ಟ್ ಮಾಡುತ್ತಾರಲ್ಲಾ, ಆ ರೋಡ್ ಏನೂ ಆಗಕೂಡದು, ಯಾರೂ ಮುಟ್ಟಕೂಡದು, ಏನೂ ಮಾಡುವಂತಿಲ್ಲ, 5 ವರ್ಷ ಜೈಲು ಶಿಕ್ಷೆ ಅಂದರೆ ಹಾಗಾದರೆ ಎಷ್ಟು ವರ್ಷ ಜೆ.ಹೆಚ್.ಪಟೇಲರಿಗೆ? ಅವರು ಮುಖ್ಯಮಂತ್ರಿಗಳೇ ಆಗುವಂತಿರಲಿಲ್ಲ. ಇದನ್ನು ಹೋಲಿಸಿಕೊಂಡರೆ ಅವರು ಮಾಡಿರುವ ಅಪರಾಧಗಳಿಗಾಗಿ ಲೈಫ್ ಇಂಪ್ರಿಸನ್‌ಮೆಂಟ್ ಅವರು ಜೈಲಿನಲ್ಲಿ ಕಾಲವನ್ನು ಕಳೆಯಬೇಕಾಗಿತ್ತು. ನಾವು ವಾದಕ್ಕೋಸ್ಕರ ವಿರೋಧ ಮಾಡುತ್ತಿಲ್ಲ. ಇದರಲ್ಲಿ ಏನು ಮಾಡಿದಿರಿ, ಯಾರು ಹೆದ್ದಾರಿ ಮಾಡುತ್ತಾರೋ ಮೋಟಾರು ವೆಹಿಕಲ್ ಆಕ್ಟ್ ಪ್ರಕಾರ ಇರುವ ಪ್ರಾವಿಷನ್ ಎಲ್ಲಾ ಅವನಿಗೆ ಕೊಟ್ಟು ಬಿಟ್ಟಿದ್ದೀರಿ. He can function like an RTO ಇಲ್ಲೇ ಇದೆಯಲ್ಲಾ? ಅದನ್ನು ನಾನೇ ಓದುತ್ತೇನೆ ನೋಡಿ. ಒಂದನೇ ಉಪ ಪ್ರಕರಣದಲ್ಲಿ ಇದಕ್ಕೆ ನೀವು ಡಿಲೀಟ್ ಮಾಡಿಲ್ಲವಲ್ಲಾ? 1 ಮತ್ತು 2ಕ್ಕೆ substitute ಮಾಡಿ ಅಮೆಂಡ್‌ಮೆಂಟ್ ಕೊಟ್ಟಿದ್ದೀರಿ. To replace it. 3ನ್ನು 4 ಮಾಡಿಕೊಂಡು ಓದಿಕೊಳ್ಳಿ ಎಂದು ಹೇಳಿದ್ದೀರಿ. 3 ಏನು ಹೇಳುತ್ತದೆ? ಒಂದನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಒಬ್ಬ ವ್ಯಕ್ತಿಯು ಅಂತಹ ಒಪ್ಪಂದದ ವಿಷಯದ ಸೂಕ್ತ ನಿರ್ವಹಣೆಗಾಗಿ ಅದರಲ್ಲಿ ವಾಹನ ಸಂಚಾರವನ್ನು 1988ರ ಮೋಟಾರು ವಾಹನಗಳ ಅಧಿನಿಯಮದ (1989ರ ಕೇಂದ್ರದನ ಅಧಿನಿಯಮ 59 ಅಧ್ಯಾಯ 8ರಲ್ಲಿರುವ ಉಪ ಬಂಧಗಳಿಗೆ ಅನುಸಾರವಾಗಿ) ವಿನಿಮಯಿಸಲು ಮತ್ತು ನಿಯಂತ್ರಿಸಲು ಅಧಿಕಾರ ಹೊಂದಿರತಕ್ಕಂಥದ್ದು, ಆ ವ್ಯಕ್ತಿ ಎಂದು ಬರೆದಿರುತ್ತೀರಿ. ಅಂತಹ ಒಬ್ಬ ವ್ಯಕ್ತಿ ಮತ್ತೆ ನೀವು ಯಾರಿಗೆ ಪವರ್ಸ್ ಕೊಟ್ಟಿದ್ದೀರಿ?

ಶ್ರೀ ಸಿ.ಎಂ.ಉದಾಸಿ: ಸರ್ಕಾರ ಅದನ್ನು ಗಮನದಲ್ಲಿಟ್ಟುಕೊಂಡು, ವಾಹನ ಸಂಚಾರದ ಸಾಂದ್ರತೆಯನ್ನು ಮತ್ತು ಒಪ್ಪಂದವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸುವ ಮೂಲಕ
ನಿರ್ದಿಷ್ಟಪಡಿಸಬಹುದಾದ ದರದ ಪ್ರಕಾರ 3- 1ರಲ್ಲಿಯೇ ಇದೆ.

ಶ್ರೀ ಹೆಚ್.ಎನ್.ನಂಜೇಗೌಡ: ನೀವು ಪ್ರಿಂಟ್ ಮಾಡಿಸಿ ತಂದಿರುವ ವಿಧೇಯಕದಲ್ಲಿರುವ 2ನೇ ಪೇಜಿನಲ್ಲಿರುವ ನಿಯಮ 3: 1ನ್ನು ಓದಿ. ಅಮೆಂಡ್ಮೆಂಟ್ ಕೊಟ್ಟಿದ್ದು ಈಗ 4 ಮಾಡಿದ್ದೀರಿ, ಈಗ ನಾನು ಅದನ್ನೇ ಓದಿದ್ದು ಈ ನೀವು ಅದರ ಅರ್ಥ ಹೇಳಿಬಿಡಿ, ಆ ಕಂಟ್ರಾಕ್ಟರಿಗೆ ಅಧಿಕಾರ ಕೊಡುತ್ತೀರೋ ಅಥವಾ ಇಲ್ಲವೋ?

ಶ್ರೀ ಸಿ.ಎಂ.ಉದಾಸಿ: 3: 1 ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಒಬ್ಬ ವ್ಯಕ್ತಿಯು ಒಪ್ಪಂದದ ವಿಷಯವಾಗಿ...

ಶ್ರೀ ಹೆಚ್.ಎನ್.ನಂಜೇಗೌಡ: ಆ ವ್ಯಕ್ತಿ ಯಾರು? ಗೌರ್ನಮೆಂಟ್ ಅಂತೂ ಅಲ್ಲ ಅವನಿಗೆ ಅಧಿಕಾರ ಕೊಟ್ಟಿದ್ದೀರೆಂದು ನಾನು ಹೇಳುತ್ತೇನೆ. ಮುಂದಕ್ಕೆ ಓದಿ....

ಶ್ರೀ ಸಿ.ಎಂ.ಉದಾಸಿ: ದರವನ್ನು ಗೊತ್ತು ಮಾಡುವ ಅಧಿಕಾರ ಏನು ಇದೆ, ಅದೆಲ್ಲಾ ಸಂಪೂರ್ಣ....

ಶ್ರೀ ಹೆಚ್.ಎನ್.ನಂಜೇಗೌಡ: ಇದು ಕ್ಲೀನಾಗಿ ಮಾಡಿದಂತಾಗುತ್ತದೆ. ನೀವು ಯೋಚನೆ ಮಾಡಿ ಆರ್ಡಿನೆನ್ಸ್ ತನ್ನಿ ಆತುರ ಬೇಡ.

ಶ್ರೀ ಸಿ.ಎಂ.ಉದಾಸಿ: ಮಾನ್ಯ ನಂಜೇಗೌಡರೇ, ಒಂದು ನಿಮಿಷ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳಲು ಅಧಿಕಾರ ಇದೆ ಎಂದು ಹೇಳಿದರೂ ಸಹಿತ, ಮುಂದೆ ಕಾನೂನು ಏನು ಬರಬೇಕು ಅದು ಸ್ಪಷ್ಟವಾಗಿದೆಯಲ್ಲಾ. ಸೆಕ್ಷನ್ 19(ಬಿ) ಯಲ್ಲಿ ಏನು ಹೇಳುತ್ತದೆ. ಪ್ರಯಾಣಕ್ಕೆ ಅಥವಾ ಸ್ವತ್ತಿನ ಸಾಗಾಣಿಕೆಗೆ ದುರ್ಗಮವಾಗಿರುವ ಅಥವಾ ಹೆಚ್ಚು ಸುರಕ್ಷತೆ ಅಲ್ಲದಂತೆ ಮಾಡುವ ಸಮಯದಂದು ನನಗೆ ತಿಳಿದಿರುವ ಹಾಗೆ ಕಾರ್ಯದ ಮೂಲಕ ದುಷ್ಕೃತ್ಯವನ್ನು ಮಾಡಿದ ಪ್ರತಿಯೊಬ್ಬ ವ್ಯಕ್ತಿಗೆ ಐದು ವರ್ಷಗಳವರೆಗೆ ಜೈಲು ಶಿಕ್ಷೆ. ಏನಾಗುತ್ತದೆ ಎಂದರೆ ಅವರಿಗೆ ಎನ್‌ಕ್ರೋಚ್‌ಮೆಂಟ್ ಮಾಡಿದರೆ ಅಥವಾ ಅದನ್ನು ಡೆಸ್ಟ್ರಾಯ್ ಮಾಡಿದರೆ ಆವಾಗ ಅವರಿಗೆ ಅಧಿಕಾರ ಬರುತ್ತದೆ. ಕಂಪ್ಲೇಂಟ್ ಕೊಡುವ ಅರ್ಥದಲ್ಲಿ ಇದೆ, ನನಗೆ ಸ್ಪಷ್ಟವಾಗಿ ಅರ್ಥವಾಗುತ್ತದೆ. ಆದಕಾರಣ ಇದನ್ನು ನೋಡಿ ಎಂದು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್: ಒಂದು ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ... ಅವರು ಸ್ವಲ್ಪ ಹೆಚ್ಚು ಕಡಿಮೆ ಬಳ್ಳಾರಿ ಜೈಲಿನಲ್ಲಿ ಇದ್ದವರು. ಹಿಂದೆ ಭೂ ಚಳುವಳಿ ಆದಾಗ ತಾವು ಕೂಡ ಅನೇಕ ಚಳುವಳಿಗಳನ್ನು ಮಾಡಿದ್ದೀರಿ. ನಿಮಗೆ ಜೈಲಿನ

ಅನುಭವ ಆಗಿದೆ. ಹೊರಗೆ ಹೋರಾಟ ಮಾಡಿದ್ದು ಆಗಿದೆ. ಆದರೆ ಇದು ಬಹಳ ಅತ್ಯಂತ ಸೂಕ್ಷ್ಮವಾದ ವಿಚಾರ. ನಾಳೆ ನಾವು ರಸ್ತೆ ಚಳುವಳಿಯನ್ನು ಮಾಡಿದೆವು ಎಂದು ಇಟ್ಟುಕೊಳ್ಳಿ. ವಾಹನಗಳನ್ನು ತಡೆ ಹಿಡಿದೆವು 500 ಜನ ಅಲ್ಲಿ ಕುಳಿತುಕೊಂಡು ಸತ್ಯಾಗ್ರಹ ಮಾಡಿದರೆ ಅವರಿಗೆ 5 ವರ್ಷ ಜೈಲು ಶಿಕ್ಷೆ ಅದರ ಜೊತೆಗೆ ಜುಲ್ಮಾನೆ ಇದು ಯಾವ ಪ್ರಪಂಚದಲ್ಲೂ ಇಲ್ಲ. ನಮಗೆ ನಂಜೇಗೌಡರು ಹೇಳಿದ್ದು ಏನು ಅಂದರೆ, ಹಿಂದೆ ಚಳುವಳಿ ಮಾಡಿದಾಗ ನಿಮ್ಮ ಮೇಲೆ ಹಾಕಿದಂಥ ಮೊಕದ್ದಮೆಗಳು ಅವೆಲ್ಲಾ ನಿಜವೆಂದು ತೀರ್ಮಾನವಾದರೆ, ಎಲ್ಲರೂ ಜೈಲಿನಲ್ಲಿರಬೇಕಾದ ಪರಿಸ್ಥಿತಿ ಇದೆ. ಈ ತರಹ ಕಾನೂನು ಆದರೆ ತೊಂದರೆಯಾಗುತ್ತದೆ. ದಯಮಾಡಿ, ತಾವು ಸ್ವಲ್ಪ ಇದನ್ನು ಮುಂದಕ್ಕೆ ಹಾಕಿ ಇದರ ಬಗ್ಗೆ ಪ್ರಾಮಾಣಿಕವಾಗಿ ಚಿಂತನೆ ಮಾಡಿ, ತರಾತುರಿಯಲ್ಲಿ ಇವತ್ತು ತರುವುದು ಬೇಡ. ಚಿಂತನೆ ಮಾಡಿ ತರಲೇಬೇಕೆಂದು ನಿಮ್ಮ ಮನಸ್ಸು ಒಪ್ಪಿದರೆ ತೆಗೆದುಕೊಂಡು ಬನ್ನಿ ಎಂದು ನಿಮಗೆ ನೇರವಾಗಿ ಹೇಳುತ್ತೇನೆ. ನಿಮ್ಮ ಮನಸ್ಸಿಗೆ, ನಿಮ್ಮ ಧರ್ಮಕ್ಕೆ, ನಿಮ್ಮ ನೀತಿಗೆ, ನಿಮ್ಮ ತತ್ವಕ್ಕೆ ಇದು ಖಂಡಿತವಾಗಿ ನೂರಕ್ಕೆ ನೂರರಷ್ಟು ವಿರುದ್ಧವಾದುದು. ತಾವು ಅನೇಕ ಚಳುವಳಿಯನ್ನು ಮಾಡಿದ್ದೀರಿ. ಸುಮಾರು 4 ದಶಕಗಳ ಕಾಲ ನಿರಂತರವಾದ ಚಳುವಳಿ ಮಾಡಿದ್ದೀರಿ. ಅನೇಕ ಜೈಲಿಗೆ ಹೋಗಿದ್ದೀರಿ, ಅದನ್ನು ನಾನು ನೋಡಿದ್ದೇನೆ. ಮೈಸೂರಿನಲ್ಲಿ ಮಾಡಿದ್ದೀರಿ, ಬಳ್ಳಾರಿಯಲ್ಲಿ, ತೀರ್ಥಹಳ್ಳಿಯಲ್ಲಿ ಮಾಡಿದ್ದೀರಿ, ಭೂ ಚಳುವಳಿಯನ್ನು ಮಾಡಿದ್ದೀರಿ. ಆದರೆ ನಿಮಗೆ ಈ ಪರಿಸ್ಥಿತಿ ನೋಡಿದಾಗ ಇದು ಒಳ್ಳೆಯದಲ್ಲ, ಒಳ್ಳೆಯ ನೀತಿ ಬರತಕ್ಕಂಥದ್ದಲ್ಲ, ದಯಮಾಡಿ ತಾವು ಇದನ್ನು ಓದಿ ನೀವು ಒಂದು ತೀರ್ಮಾನಕ್ಕೆ ಬಂದು ಇದನ್ನು ತರಲೇಬೇಕೆಂದರೆ ಈ ಸದನ ಒಪ್ಪಿಗೆ ಕೊಟ್ಟರೆ, ನಾನು ಒಪ್ಪುತ್ತೇನೆ.

(ಗೊಂದಲ)

ಶ್ರೀ ಡಿ.ಟಿ.ಜಯಕುಮಾರ್: ರೋಡ್ ಹಾಳು ಮಾಡಿದರೆ ಮಾತ್ರ, ಅದು ಚಳುವಳಿ ಮಾಡಿದವರಿಗೆ ಅಪ್ಲೈ ಆಗುವುದಿಲ್ಲ.

(ಗೊಂದಲ)

ಶ್ರೀ ಡಿ.ಟಿ.ಜಯಕುಮಾರ್: ಕೇಂದ್ರ ಸರ್ಕಾರದಲ್ಲಿ ಒಂದು ನಿಯಮ ಇದೆ; ಕೇಂದ್ರ ಸರ್ಕಾರ ಮಾಡಿರುವ ರೂಲ್ಸ್ ಅದನ್ನು ಇಲ್ಲಿ ಕ್ಯಾನ್ಸಲ್ ಮಾಡುತ್ತೀರಾ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಮುಖ್ಯಮಂತ್ರಿಗಳೇ, ಮೊದಲು ಇದ್ದಂಥ Extract of Karnataka Highway Act 1964 ಅದರಲ್ಲಿ ಏನು ಇತ್ತು Levy of toll; The State Government may, by notification in the official gazette, levy toll of all motor vehicles entering such bridges, causeways and tunnels and at such

rate not exceeding fifteen rupees per vehicle as may be prescribed, and different rates may be prescribed for different classes of vehicles and different classes of bridges, causeways and tunnels. ಇದಕ್ಕೆ ಏನು ಅಮೆಂಡ್ಮೆಂಟ್ ತಂದಿರುತ್ತೀರಿ ಈಗ, ಇದಕ್ಕೆ ತಂದಂಥ ಅಮೆಂಡ್‌ಮೆಂಟ್ ಕೂಡ ಈ ರೀತಿಯಾಗಿದೆ. "Power of the State Government to enter into agreement for development and maintenance of Highways: (1) Notwithstanding anything contained in this Act, the State Government may enter into an agreement with any person in relation to the development and maintenance of the whole or any part of highway. (2) Notwithstanding anything contained in Section 48A the person referred to in sub-section (1) is entitled to collect and retain fees at such rate, for service or benefits rendered by him as the State Government may by notification in the official gazette, specify having regard to the expenditure involved in building, maintainance, management and operation of the whole or part of such highway, interest on the capital invested, reasonable return, the volume of traffic and the period of such agreement.

(3) A person referred to in sub-section (1) shall have powers to regulate and control the traffic in accordance with the provisions contained in chapter VII of the Motor Vehicles Act, 1988 (Central Act 59 of 1989) on the highway forming subject matter of such agreement, for proper management thereof.

Punishment for mischief by injury to highway:

"whoever commits mischief by doing any act which renders or which he knows to be likely to render any highway referred to in sub-section (1) of section 19A impassable or less safe for travelling or conveying

property shall be punished with imprisonment of either description for a term which may extend to five years or with a fine or with both. They have brought an amendment to the amendment. "Notwithstanding contained in this Act or any other Act. For the time being in force, the State Government may, enter into an agreement with any person in relation to the construction, development maintenance of the whole or any part of the highway to facilitate or secure such construction, development, maintenance and the agreement may subject to the such terems and conditions as may be prescribed, provide for the transfer of any land belonging to or acquired by the State Government under this Act or any other Act for the time being in force to such person or persons by way of lease or otherwise during the period of such agreement." ಈ ನೆಪದಲ್ಲಿ ಇದೆಲ್ಲಾ ಕೂಡ ಅವರಿಗೆ ವಹಿಸಿಕೊಡುವುದು, ಅಕ್ವೈರ್ ಮಾಡುವುದು ಎಲ್ಲವೂ ಕೂಡ ಇದರಲ್ಲಿ ಬಂದಿದೆ. ಅದಕ್ಕೆ ಇಷ್ಟೊಂದು ಗೊಂದಲದಲ್ಲಿ, ಆತುರದಲ್ಲಿ ಇರತಕ್ಕಂತಹ ಅವಶ್ಯಕತೆ ಬೇಡ. ಅದಕ್ಕೆ ನೇರವಾಗಿ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿಬಿಡಿ, ಅಲ್ಲಿ ಕುಳಿತು ಚರ್ಚೆಯಾಗಲಿ, ಅದರಲ್ಲಿ ಪನಿಷ್‌ಮೆಂಟ್ ಎಷ್ಟು ಇಡಬೇಕು, ಇಲ್ಲ ಎಂಬುದನ್ನು ಕನ್‌ಸೆನ್ಸ್ ಮೇಲೆ ಒಪ್ಪಿಕೊಳ್ಳೋಣ ಬೇಕಾದರೆ. ಆರು ತಿಂಗಳೋ, ಮೂರು ತಿಂಗಳೋ, ಒಂದು ವರ್ಷನೋ, ಬೇಕೋ ಬೇಡವೋ ಅಥವಾ ರೇಟ್ ಹಿಂದೆ 15.ರೂ. ಇತ್ತು. ಆದರೆ ನ್ಯಾಷನಲ್ ಹೈವೇ ಆಯಿತು ಅಂದರೆ ನೂರು ರೂಪಾಯಿ ಮಾಡಿ, ಇನ್ನೂರು ರೂಪಾಯಿ ಮಾಡಿ, ಸಾವಿರ ರೂಪಾಯಿ ಮಾಡಿ ಅದು depends upon the circumstances. ಅದಕ್ಕೆ ನೀವು ಎಲ್ಲರೂ ಕೂಡಿ ಒಂದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿದರೆ ಇದು ಕೊಡತಕ್ಕಂಥದ್ದು, ತೆಗೆದುಕೊಳ್ಳತಕ್ಕಂತಹ ಅಧಿಕಾರ, ಅಕ್ವೈರ್ ಮಾಡತಕ್ಕಂತದ್ದು ನಿರ್ವಹಣೆ ಮಾಡುವುದಕ್ಕೆ ನಿಮಗೆ ಎಷ್ಟು ದುಡ್ಡು ಬೇಕು, ಇವೆಲ್ಲವನ್ನೂ ನೀವು ವಿಚಾರ ಮಾಡಿದರೆ, ನೀವೇ ಅಧಿಕಾರ ಇಟ್ಟುಕೊಂಡರೂ ಕೂಡ, ಹಿಂದೆ 15 ರೂ. ಸ್ಟೇಟ್ ಹೈವೇ ನಲ್ಲಿ ಇತ್ತು ಎಂದು ತಿಳಿದುಕೊಳ್ಳಿ. ನಿಮಗೆ ನೂರು ರೂಪಾಯಿ ಮಾಡಬೇಕಾದರೆ, ಇನ್ನೂರು ರೂಪಾಯಿ ಮಾಡಬೇಕಾದರೆ, Depends upon that ಮಾಡುವುದಕ್ಕೆ ಬರುತ್ತದೆ. ಆದರೆ ತರಾತುರಿಯಲ್ಲಿ ನೀವು ಎಲ್ಲಾ ಕಾನೂನನ್ನು ತೆಗದುಕೊಳ್ಳುವುದಕ್ಕೆ ಹೋಗಬೇಡಿ. ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿ, ಇದನ್ನು ಒಂದೇ ತಿಂಗಳಲ್ಲಿ ಮಾಡಬೇಕೆಂದು ಇದ್ದರೆ ಒಂದೇ ತಿಂಗಳಲ್ಲಿ

ಆರ್ಡಿನೆನ್ಸ್ ಇಷ್ಯೂ ಮಾಡಿ, ಇಲ್ಲ ಅಂದರೆ ಸುಮ್ಮನೆ ಇದು ಏನಾಗುತ್ತದೆ ಎಂದರೆ ಇಷ್ಟೊಂದೆಲ್ಲಾ ತೊಂದರೆ....

ಉಪಾಧ್ಯಕ್ಷರು: ಮುಖ್ಯಮಂತ್ರಿಗಳು ಏನೋ ಹೇಳುತ್ತಾರೆ ಕೇಳಿ.

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು): ಸನ್ಮಾನ್ಯ ಉಪಾಧ್ಯಕ್ಷರೇ, ಇದರ ಉದ್ದೇಶದ ಬಗ್ಗೆ ಮಾನ್ಯ ನಾಯಕರುಗಳು ಇದರ ವಿರುದ್ಧ ಏನೂ ಹೇಳಲಿಲ್ಲ. ಇದು ಅವಶ್ಯಕ. ಈ ಉದ್ದೇಶದ ಬಗ್ಗೆ ನೀವು ಯಾರೂ ಏನೂ ಹೇಳಲಿಲ್ಲ. ಆದರೆ ನಾವು ಕೆಲವು ರಸ್ತೆಗಳನ್ನು ಖಾಸಗೀಕರಣ ಮಾಡದೆ ಅವುಗಳನ್ನು ನಾವು ಇವತ್ತು ಸುಧಾರಣೆ ಮಾಡುವುದಕ್ಕೆ ಸಾಧ್ಯ ಇಲ್ಲ ಎಂಬ ತತ್ವವನ್ನು ಕೇಂದ್ರ ಸರ್ಕಾರ ಒಪ್ಪಿಕೊಂಡ ಮೇಲೆ ಕೇಂದ್ರ ಸರ್ಕಾರ ಹೆಚ್ಚು ಕಡಿಮೆ ಹದಿಮೂರು ಸಾವಿರ ಕಿ.ಮೀ. ರಸ್ತೆಯನ್ನು ಇಡೀ ದೇಶದಲ್ಲಿ ಇದನ್ನು ಮಲೇಷಿಯನ್ ಕಂಪನಿಗೆ ಕೊಡಬೇಕೆಂದು ಪ್ರಯತ್ನ ಮಾಡಿದಾಗ, ನಾವು ಹಿಂದೆ ಸರ್‌ಪೇಸ್ ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಹತ್ತಿರ ಮಾತನಾಡಿದಾಗ ಅವರು ಏನು ಹೇಳಿದರು ಅಂದರೆ, ಕೇಂದ್ರಸರ್ಕಾರದವರು ಈಗ ಸ್ವತಃ ರಾಜ್ಯ ಸರ್ಕಾರವಾಗಲಿ, ಕೇಂದ್ರ ಸರ್ಕಾರವಾಗಲಿ, ರಸ್ತೆಗಳನ್ನು ನಾವೇ ಸ್ವತಃ ಮಾಡಬೇಕು ಎಂಬ ಉದ್ದೇಶ ಇದ್ದರೂ ಸಹ ಮಾಡುವುದಕ್ಕೆ ಆಗುವುದಿಲ್ಲ ಎಂಬ ಕಾರಣಕ್ಕೋಸ್ಕರ, we are inviting private capital. ಈಗ ಪ್ರೈವೇಟ್ ಅವರು ಒಂದು ರಸ್ತೆಯನ್ನು ಮಾಡುವಾಗ ಅವನಿಗೆ ಬೇಕಾದಂತಹ ಸೇಫ್ ಗಾರ್ಡ್ಸ್ ನಾವು ಕೊಡದೇ ಹೋದರೆ ಅವನು ಏಕೆ ಇನ್‌ವೆಸ್ಟ್ ಮಾಡುತ್ತಾನೆ? ಆದರೆ ಒಂದು power of punishment should never be given to any private individual. I agree with that principle. ಆದರೆ ಅವನು ಸ್ವತಃ ಏನು ಪನಿಷ್ ಮಾಡುವ ಹಾಗೆ ಇಲ್ಲ. ಅವನು ಕಂಪ್ಲೇಂಟ್ ಮಾಡಬಹುದು, ಈ ನ್ಯಾಷನಲ್ ಹೈವೇಗಳನ್ನು ಅಥವಾ ನ್ಯಾಷನಲ್ ಹೈವೇಗೆ ಸಂಬಂಧಪಟ್ಟ ಹಾಗೆ ಕೇಂದ್ರಸರ್ಕಾರದ ಪ್ರಾವಿಷನ್ಸ್ ಏನಿದೆ, ಅದಕ್ಕೆ ವಿರುದ್ಧವಾಗಿಲ್ಲ ಇದು. ಆದರೆ ಈ ವಿಷಯದಲ್ಲಿ ತಾವೆಲ್ಲರೂ ಇಷ್ಟಪಟ್ಟರೆ ನಾವೆಲ್ಲ ಸೇರಿ ಈ ವಿಷಯದ ಬಗ್ಗೆ ಆಲೋಚನೆ ಮಾಡುವುದನ್ನು ಪುನಃ ಬೇಕಾದರೆ ಮುಂದಕ್ಕೆ ಹಾಕೋಣ. ಆದರೆ ಈ ಪ್ರಿನ್ಸಿಪಲ್ ಇವತ್ತು ನಾವು ಕೆಲವು...

SRI M.MALLIKARJUNA KHARGE: Nobody objected.

ಶ್ರೀ ಜೆ.ಹೆಚ್.ಪಟೇಲ್: ನಾನು ನಿಮ್ಮ ಮಾತುಗಳನ್ನು ಕೇಳಿದ್ದೇನೆ, ಅಂದರೆ, ಅದಕ್ಕೆ ಕೆಲವು ಅಗ್ರಿಮೆಂಟ್ ಆಗುತ್ತದೆ. ತಾವು ದಯವಿಟ್ಟು ಸ್ವಲ್ಪ ಕೇಳಿ, ಅವರು ಕೆಲಸ ಪ್ರಾರಂಭ ಮಾಡುವುದಕ್ಕೆ ಮುಂಚೆ, ಕೇಂದ್ರಸರ್ಕಾರದವರು ಏನು ಪ್ರೊಟೆಕ್ಷನ್

ಕೊಟ್ಟಿದ್ದಾರೋ ಅದನ್ನು ಅವರಿಗೆ ನಾವು ಕೊಟ್ಟರೆ, ಅವರು ಇವತ್ತು ಸಾವಿರಾರು ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡುತ್ತಾರೆ.

ಶ್ರೀ ಹೆಚ್.ಎನ್.ನಂಜೇಗೌಡ: ನಾವು ಅವರಿಗೆ ರಕ್ಷಣೆ ಕೊಡಬಹುದು.

ಶ್ರೀ ಜೆ.ಹೆಚ್.ಪಟೇಲ್: ಹೇಗೆ?

ಶ್ರೀ ಹೆಚ್.ಎನ್.ನಂಜೇಗೌಡ: ಈ ಆಕ್ಷನ್‌ನಲ್ಲಿ ನಾವು ಕೊಡತಕ್ಕಂತಹ ಪ್ರೊಟೆಕ್ಷನ್ ಸರಿ ಬರಲಿಕ್ಕಿಲ್ಲ. ಅದಕ್ಕೆ ಕೆಲವೊಂದು ರೂಪು ರೇಷೆಗಳನ್ನು ಕೊಡಬೇಕಾಗಿದೆ. ನಾವು ಟೀಕೆಗಾಗಿ ಟೀಕೆ ಮಾಡುವಂತಹದ್ದಲ್ಲ. ಸೈದ್ಧಾಂತಿಕವಾಗಿ ನಾವು ಒಪ್ಪುತ್ತೇವೆ. ಆದರೆ ಅದನ್ನು ಯಾವ ರೀತಿ ಮಾಡಬೇಕು ಆ ರೀತಿ ಮಾಡಿದರೆ ಒಳ್ಳೆಯದು. ಆದರೆ ಇದನ್ನು ಬಹಳ ಅವಸರ, ಅವಸರವಾಗಿ ಮಾಡಿದ್ದಾರೆ. ನಾವೂ ಸಹ ಕಾನೂನನ್ನು ನೋಡಿದ್ದೇವೆ, ಆದರೆ ಈ ರೀತಿಯ ಕಾನೂನು ಮಾಡುವುದಕ್ಕೆ ಆಗುವುದಿಲ್ಲ. ಆದರೆ...

ಶ್ರೀ ಜೆ.ಹೆಚ್.ಪಟೇಲ್: ಕೇಂದ್ರ ಸರ್ಕಾರದ ಕಾನೂನನ್ನು....

ಶ್ರೀ ಹೆಚ್.ಎನ್.ನಂಜೇಗೌಡ: ಅದನ್ನು ನೋಡೋಣ, ಬೇರೆ ರಾಜ್ಯದವರು ಮಾಡಿರುವುದನ್ನು ನೋಡೋಣ. ಏಕೆಂದರೆ, I don't think.

ಶ್ರೀ ಜೆ.ಹೆಚ್.ಪಟೇಲ್: ಮಾನ್ಯ ವಿರೋಧ ಪಕ್ಷದ ನಾಯಕರು, ಮಾಜಿ ಮುಖ್ಯಮಂತ್ರಿಗಳು ಹೇಳಿದಾಗ ಅದಕ್ಕೆ ಮನ್ನಣೆ ಕೊಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳಿಹಿಸೋಣ.

ಶ್ರೀ ಜೆ.ಹೆಚ್.ಪಟೇಲ್: ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸುವುದು ಬೇಡ.

ಶ್ರೀ ಬಿ.ಎಸ್.ಯಡಿಯೂರಪ್ಪ: ಈ ರೀತಿ ಹೆದ್ದಾರಿ ಮಾಡುವಂತಹ ಕಾಲದಲ್ಲಿ ಕೇಂದ್ರ ಸರ್ಕಾರ ಯಾವ ರೀತಿ ಮಾಡಿತ್ತು, ನಾವು ಯಾವ ರೀತಿ ಮಾಡಬೇಕು ಎಂಬುದನ್ನು ತಿಳಿದುಕೊಳ್ಳಬೇಕು. ಈ ವಿಷಯದ ಬಗ್ಗೆ ಅವಸರ ಏಕೆ? ಇನ್ನೂ ಕೆಲಸ ಪ್ರಾರಂಭವಾಗಿಲ್ಲ. ಇದನ್ನು ಯಾರಾದರೂ ತಡೆಯ ಬಹುದು, ಅಡ್ಡಿ ಮಾಡಬಹುದು ಎಂಬ ಭಯ ಏಕೆ ಆಗ ಅವನಿಗೆ ಐದು ವರ್ಷ ಜೈಲಿಗೆ ಕಳುಹಿಸಬೇಕಾಗುತ್ತದೆ? ಒಳ್ಳೆಯ ಕೆಲಸ ಮಾಡಿದರೆ ಜನ ಸ್ವಾಗತ ಮಾಡುತ್ತಾರೆ, ಅದನ್ನು ತಡೆಯುವುದಕ್ಕೆ ಬಂದವರಿಗೆ ಆ ಜನರೇ ಹಿಡಿದುಕೊಂಡು ಬಡಿಯುತ್ತಾರೆ. ನೀವು ಏಕೆ ಜೈಲಿಗೆ ಕಳುಹಿಸುತ್ತೀರಾ?

ಶ್ರೀ ಜೆ.ಹೆಚ್.ಪಟೇಲ್: ಯಾರು ಯಾರನ್ನೂ ಬಡಿಯುವುದಕ್ಕೆ ಆಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ದಯಮಾಡಿ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಡಿ.

(ಗೊಂದಲ)

ಶ್ರೀ ಜೆ.ಹೆಚ್.ಪಟೇಲ್: ನೀವು ಹೇಳಿರುವ ತತ್ವವನ್ನು ಒಪ್ಪಿಕೊಂಡಿದ್ದೇನೆ. ಯಾರಿಗೆ ನಾವು ಇವತ್ತು ಖಾಸಗೀಕರಣ ಮಾಡಿದರೆ ಜನರಿಗೆ ಶಿಕ್ಷೆ ಮಾಡುವ ಬಗ್ಗೆ ಅವರು ಹೇಳಿದರಲ್ಲಾ, ರಸ್ತಾರೋಖ ಮಾಡಿದ ಕೂಡಲೇ ಅವರನ್ನು ಜೈಲಿಗೆ ಕಳುಹಿಸುತ್ತೀರಾ ಎಂದು, ಆ ಅಧಿಕಾರ ಯಾರಿಗೂ ಕೊಡುವುದಕ್ಕೆ ಬರುವುದಿಲ್ಲ, ಬರುವುದೂ ಇಲ್ಲ. ಆದರೆ ಸನ್ಮಾನ್ಯ ಖರ್ಗೆ ಅವರು ಮತ್ತು ಸನ್ಮಾನ್ಯ ಮೊಯಿಲಿ ಅವರು ಕೇಂದ್ರ ಸರ್ಕಾರ ಈ ಬಗ್ಗೆ ಮಾಡಿರುವ ಕಾನೂನನ್ನು ನೋಡಿ, ಆ ರೀತಿ ಮಾಡಿ ಎಂದು ಏನು ಹೇಳಿದ್ದಾರೆ, ಅದನ್ನು ಬೇಕಾದರೆ ಮಾಡುತ್ತೇನೆ. ಆದರೆ ತಕ್ಷಣ ಬೇಡ. ಅವರು ಏನು ಪ್ರಿನ್ಸಿಪಲ್, ಗೈಡ್‌ಲೈನ್ ಕೊಟ್ಟಿದ್ದಾರೆ, privatisation of National Highways even.. ಆ ಪ್ರಿನ್ಸಿಪಲ್ ವಿರುದ್ಧ ಇದ್ದರೆ ನಾನು ತೆಗೆದುಹಾಕುತ್ತೇನೆ. ಅದರ ಪ್ರಕಾರ ಇದ್ದರೆ ನೀವು ಒಪ್ಪುತ್ತೀರಾ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸಭಾಧ್ಯಕ್ಷರೇ, even if it is left with, what is there ಏನೂ ದೊಡ್ಡ ಅನಾಹುತ ಆಲ್ಲ.....

(INTERRUPTIONS)

ಶ್ರೀ ಹೆಚ್.ಎನ್.ನಂಜೇಗೌಡ: ಈ ಸೆಕ್ಷನ್ ಇರುವ ರೀತಿಯಲ್ಲಿ ಇದ್ದರೆ...

ಶ್ರೀ ಜೆ.ಹೆಚ್.ಪಟೇಲ್: ಕೆಲವು, ಕೆಲವು ಗೈಡ್‌ಲೈನ್ಸ್,...

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸದನ ನಾಳೆ ನಾಡಿದ್ದು ತೆಗೆದುಕೊಳ್ಳಿ ಎಕ್ಸ್‌ಟೆಂಡ್ ಮಾಡಿ, ಅದಕ್ಕಾದರೂ ಒಪ್ಪಿಕೊಳ್ಳಿ.

ಶ್ರೀ ಹೆಚ್.ಎನ್.ನಂಜೇಗೌಡ: ಯಾರಾದರೂ ಕೋರ್ಟಿಗೆ ಹಾಕಿದರೆ ಹೋಗುತ್ತದೆ. ಐದು ವರ್ಷ ಇದೆಯಲ್ಲಾ, because you have not specified the Mischief to be committed. ಈಗ ಐಪಿಎಸ್ ನಲ್ಲಿ ಏನಾಗಿದೆ ಅಂದರೆ, ಮರ್ಡರ್‌ಗೆ ಇಷ್ಟು, ಅಬೆಟ್ ಮಾಡತಕ್ಕವರಿಗೆ ಮಾಡಿದವರಿಗೆ ಇಷ್ಟು, ಕಳ್ಳತನಕ್ಕೆ ಇಷ್ಟು, ದರೋಡೆಗೆ ಇಷ್ಟು, ನೀವು ಜೈಲಿಗೆ ಕೂಡಬೇಕಾದರೆ you have to specify the offence.

ಶ್ರೀ ಜೆ.ಹೆಚ್.ಪಟೇಲ್: ನಾನೇ ಸ್ವತಃ ಹೇಳಿದೆನಲ್ಲಾ, ಈ ರೀತಿಯ ಮಿತಿ ಇಲ್ಲದ ಅಧಿಕಾರವನ್ನು ಯಾರಿಗೂ ಕೊಡಕೂಡದು. ಅದನ್ನು ನಾವು ಎಷ್ಟರ ಮಟ್ಟಿಗೆ ತಿದ್ದುಪಡಿ ಮಾಡಬೇಕು ಅದನ್ನು ಮಾಡುತ್ತಿದ್ದೇವೆ. ಮತ್ತು ಸದನದ ಮುಂದೆ ತರುವಾಗ ಏನು ತಿದ್ದುಪಡಿ ಮಾಡಬೇಕು ಅನ್ನುವ ವಿಚಾರವನ್ನು ಮಾಡುವುದಕ್ಕೆ ಬೇಕಾದರೆ ಸಮಯ ಕೊಡೋಣ. I am not adamant that way. There is no need for Joint Select Committee. ಅದರ ಬಗ್ಗೆ ತಮ್ಮನ್ನೇ ಕೇಳುತ್ತೇನೆ. ಈಗ ಸನ್ಮಾನ್ಯ ವೀರಪ್ಪ ಮೊಯಿಲಿ ಮತ್ತು ಸನ್ಮಾನ್ಯ ಖರ್ಗೆ ಅವರನ್ನು ಕೇಳುತ್ತೇನೆ. ಈಗ ಡೆಫರ್ ಮಾಡುವುದು. ಆ ತತ್ವವನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ತತ್ವದ ಆಧಾರದ ಮೇಲೆ ನಾವು ಇವತ್ತು ಯಾರಿಗೂ ಮಿತಿ ಇಲ್ಲದ ಅಧಿಕಾರವನ್ನು ಕೊಡುವುದಕ್ಕೆ ಬರುವುದಿಲ್ಲ, ಕೊಡಕೂಡದು. ಈ ವಿಷಯವನ್ನು ಪರಾಮರ್ಶಿಸುವುದಕ್ಕೋಸ್ಕರ, ಪುನರ್ ಪರಿಶೀಲನೆಗೋಸ್ಕರ ಬೇಕಾದರೆ ಮುಂದಕ್ಕೆ ಹಾಕೋಣ. ಈಗಲೇ ಆಗಬೇಕು ಎಂದು ಅಲ್ಲ, ಬೇಕಾದರೆ ಮುಂದಕ್ಕೆ ಹಾಕೋಣ. ಆದರೆ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸುವುದು ಬೇಡ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈ ವಿಷಯದ ಬಗ್ಗೆ ವಿಚಾರ ಮಾಡಲು ಯಾರು, ಯಾರನ್ನು ಕರೆಸಬೇಕು... ಅಂದರೆ ಏನಾದರೂ ಮಾಡಲೇ ಬೇಕಲ್ಲಾ.

ಶ್ರೀ ಜೆ.ಹೆಚ್.ಪಟೇಲ್: ಆ ರೀತಿ ಬೇಕಾದರೆ ಮಾಡೋಣ. ನಿಮ್ಮನ್ನು ಕರೆದು, ಕೇಳಿ, ಕೇಂದ್ರಸರ್ಕಾರದ ನಿಯಮಾವಳಿಗಳು ಏನು ಇದೆ, ಆ ಪ್ರಕಾರ ಬೇಕಾದರೆ ಮಾಡುವುದಕ್ಕೆ ನಾನು ಮಾನ್ಯ ಸಚಿವರಿಗೆ ಹೇಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇದರಲ್ಲಿ ನಿಮಗೆ ಏಕೆ ವಿಶ್ವಾಸ ಇಲ್ಲ? ಜಾಯಿಂಟ್ ಸೆಲೆಕ್ಟ್ ಕಮಿಟಿ ಮಾಡಿ ಅದರಲ್ಲಿ...

ಶ್ರೀ ಜೆ.ಹೆಚ್.ಪಟೇಲ್: ಸನ್ಮಾನ್ಯ ಯಡಿಯೂರಪ್ಪನವರೇ, ನೀವು ಏನು ಹೊಸದಾಗಿ ಬಂದಿದ್ದೀರಾ? ಜಾಯಿಂಟ್ ಸೆಲೆಕ್ಟ್ ಕಮಿಟಿ ಅಂದರೆ, ಮತ್ತೆ ಅದನ್ನ ಅನೌನ್ಸ್ ಮಾಡಿ ಅದಕ್ಕೆ ಒಂದು ಮೀಟಿಂಗ್....

ಶ್ರೀ ಬಿ.ಎಸ್.ಯಡಿಯೂರಪ್ಪ: ಎರಡು ತಿಂಗಳಿಗೆ ಇನ್ನೊಂದು ಅಧಿವೇಶನ ಬರುತ್ತದೆ. ಮುಂದಿನ ಅಧಿವೇಶನ ಸೇರುವುದರೊಳಗೆ ಕೊಡಬೇಕು ಎಂದು ಮಾಡೋಣ.

ಶ್ರೀ ಜೆ.ಹೆಚ್.ಪಟೇಲ್: ನಾನು ನಿಮ್ಮಗಳನ್ನು ಕೇಳಿ, ಕೇಂದ್ರ ಸರ್ಕಾರದ ನಿಯಮಾವಳಿಗಳನ್ನು...

ಶ್ರೀ ಬಿ.ಎಸ್.ಯಡಿಯೂರಪ್ಪ: ಜಾಯಿಂಟ್ ಸೆಲೆಕ್ಟ್ ಕಮಿಟಿ ಮಾಡಿ ಕೇಂದ್ರ

ಸರ್ಕಾರದಲ್ಲಿ ಏನಾಗಿದೆ ಎಂದು ಎಲ್ಲರೂ....

ಶ್ರೀ ಜೆ.ಹೆಚ್.ಪಟೇಲ್: ಅದು ಅನಾವಶ್ಯಕ.

ಶ್ರೀ ಬಿ.ಎಸ್.ಯಡಿಯೂರಪ್ಪ: ಈಗ ಕೇಂದ್ರ ಸರ್ಕಾರದಲ್ಲಿ ಏನಾಗಿದೆ ಅಂದರೆ....

ಶ್ರೀ ಜೆ.ಹೆಚ್.ಪಟೇಲ್: ಈಗ ತಕ್ಷಣ ನೀವು ಔಷಧಿ ಕೊಡುತ್ತೀರಾ ಎಂದು ಇದ್ದಾಗ, ನೀವು ಈಗ ಆಸ್ಪತ್ರೆಗೆ ದಾಖಲು ಮಾಡು, ಡಾಕ್ಟರ್ ಬಂದು ನೋಡಿಕೊಳ್ಳಲಿ, ಅದೆಲ್ಲಾ ಬೇಡ, ಈಗ ತಕ್ಷಣಕ್ಕೆ ಏನು ಬೇಕೋ ಅದನ್ನು ನಿಮಗೆ....

ಶ್ರೀ ಬಿ.ಎಸ್.ಯಡಿಯೂರಪ್ಪ: ನಾವು ನಿಮಗೆ ಸಲಹೆ ಕೊಡುತ್ತಿದ್ದೇವೆ.

ಶ್ರೀ ಜೆ.ಹೆಚ್.ಪಟೇಲ್: ಉತ್ತರ ಹೇಳಿದ್ದೇನಲ್ಲಾ. ಸನ್ಮಾನ್ಯ ಉಪಾಧ್ಯಕ್ಷರೆ, ಈ ಸಭ್ಯಕ್ಕೆ ಬೇಕಾದರೆ ಈ ವಿಷಯವನ್ನು ಮುಂದಕ್ಕೆ ಹಾಕೋಣ.

ಉಪಾಧ್ಯಕ್ಷರು: ಈಗ ವಿಧಾನ ಪರಿಷತ್ತಿನಿಂದ ತಿರಸ್ಕೃತವಾದ 1997ನೇ ಸಾಲಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಿಗಳ, ವಿಶ್ವವಿದ್ಯಾನಿಲಯದ ತಿದ್ದುಪಡಿ ಇದನ್ನು ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಮಂಡಿಸುತ್ತಾರೆ.

(ಎ) ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ (ತಿದ್ದುಪಡಿ) ವಿಧೇಯಕ 1997

ಡಾ|| ಎಂ.ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು): ಸನ್ಮಾನ್ಯ ಉಪಾಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ತಿರಸ್ಕೃತವಾದ 1997ನೇ ಸಾಲಿನ ರಾಜೀವ್ ಗಾಂದಿ ಆರೋಗ್ಯ ವಿಜ್ಞಾನಗಳ, ವಿಶ್ವವಿದ್ಯಾನಿಲಯದ (ತಿದ್ದುಪಡಿ) ವಿಧೇಯಕವನ್ನು ಪುನರ್ ಪರಿಶೀಲಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು: ಈಗ ಇದರ ಬಗ್ಗೆ ಪರ್ಯಾಲೋಚನ ಪ್ರಸ್ತಾವವನ್ನು ಈಗ ಸಭೆಯ....

ಶ್ರೀ ಎಸ್.ಸುರೇಶ್ ಕುಮಾರ್: ಸನ್ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ಚರ್ಚೆನೇ ಇಲ್ಲ ಎಂದು ಹೇಳುತ್ತಾರಲ್ಲಾ,

ಉಪಾಧ್ಯಕ್ಷರು: ನೀವು ಪಾಸ್ ಮಾಡಿ ಕಳುಹಿಸಿದ್ದು ಪುನಃ ಅಲ್ಲಿಂದ ವಾಪಸ್ಸು ಬಂದಿದೆ.

(ಗೊಂದಲ)

ಶ್ರೀ ಎಸ್.ಸುರೇಶ್ ಕುಮಾರ್: ಇಲ್ಲಿ ನಾವು ಅಪೋಸ್ ಮಾಡಿದ್ದೆವು. ಆದರೆ ನೀವು ನಮಗೆ ಹೇಳಲು ಬಿಟ್ಟಿರಲಿಲ್ಲ, ಈಗ ಬಿಡಿ ಎಂದು ಕೇಳಿದ್ದು. ಏತಕ್ಕೆ ನಾವು ವಿರೋಧಿಸುತ್ತೇವೆ ಎಂದು.

ಶ್ರೀ ಕೆ.ಎಸ್.ಈಶ್ವರಪ್ಪ: ಅಂಗೀಕಾರವಾಗಿ ವಾಪಸ್ಸು ಬರಲಿಲ್ಲ, ತಿರಸ್ಕಾರವಾಗಿ ವಾಪಸ್ಸು ಬಂದಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರು ಮಾತನಾಡುವುದಕ್ಕೆ ಬಿಡಿ. ಏಕೆ ಅಪೋಸ್ ಮಾಡಿದೆವು ಎಂಬುದನ್ನು ಹೇಳುತ್ತೇವೆ. ಆವತ್ತು ನಮಗೆ ಅವಕಾಶ ಸಿಗಲಿಲ್ಲ ಎಲ್ಲರಿಗೂ, ದೊಡ್ಡ ಗಲಾಟೆ ಆಯಿತು. ಆವತ್ತು ನಾವೆಲ್ಲಾ ವಿರೋಧ ವ್ಯಕ್ತಪಡಿಸಿದ್ದೇವೆ.

ಮಾನ್ಯ ಸದಸ್ಯರು: ಒಪ್ಪಿಗೆ ಕೊಡಲಿಲ್ಲ, ವಿರೋಧಿಸಿದ್ದೆವು.

ಉಪಾಧ್ಯಕ್ಷರು: ಈಗಾಗಲೇ ಒಪ್ಪಿಗೆ ಕೊಟ್ಟಿದ್ದಾರಲ್ಲಾ, ಏನು ಮಾಡುವುದು?

ಪರ್ಯಾಲೋಚನಾ ಪ್ರಸ್ತಾವ

ಡಾ॥ ಎಂ.ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ, 1997ರ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಡಾ॥ ಎಂ.ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಈ ವಿಧೇಯಕವನ್ನು ಈ ಸಭೆ ಅಂಗೀಕರಿಸಿದೆ. ಈ ವಿಧೇಯಕವನ್ನು ವಿಧಾನ ಪರಿಷತ್ತಿನಲ್ಲಿ ತಿರಸ್ಕೃತ ಮಾಡಿದ್ದರಿಂದ ಪುನಃ ಈ ಸಭೆಯಲ್ಲಿ ಮಂಡಿಸಲಾಗಿದೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ ''1997ರ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಉಪಾಧ್ಯಕ್ಷರು: ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ ''ಮೊದಲನೆಯ ಖಂಡ ದೀರ್ಘಶೀರ್ಷಿಕೆ ಪ್ರಸ್ತಾವನೆ, ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಡಾ॥ ಎಂ.ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ''1997ರ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ ''1997ರ ರಾಜೀವ್‌ಗಾಂಧಿ, ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಐ) ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 1997.

ಪರ್ಯಾಲೋಚನಾ ಪ್ರಸ್ತಾವ

+ ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು): ಮಾನ್ಯ ಉಪಾಧ್ಯಕ್ಷರೇ, 1997ನೇ ಸಾಲಿನ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ

ಉಪಾಧ್ಯಕ್ಷರೇ, ಅದು ಮಂಡನೆ ಮಾಡಲಿ ಆಮೇಲೆ ಚರ್ಚೆ ಮಾಡೋಣ.

ಉಪಾಧ್ಯಕ್ಷರು: ಈಗ ಅದರ ಬಗ್ಗೆ ಏನಾದರೂ ಒಂದು ನಿರ್ಣಯ ಆಗಬೇಕಲ್ಲಾ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು, ಈ ವಿಧೇಯಕದ ಮೇಲೆ ಚರ್ಚೆ ನಡೆಯಲಿ. ಅದಕ್ಕೆ ನಾವು ಉತ್ತರ ಕೊಡುತ್ತೇವೆ. ಆಮೇಲೆ ನೋಡೋಣ. ನಾವು ಸರ್ಕಾರದ ಪರವಾಗಿ ಸಾಕಷ್ಟು ಸುಲಭವಾದ ರೀತಿಯಲ್ಲಿ ತಿದ್ದುಪಡಿಯನ್ನು ಮಾಡಿದ್ದೇವೆ. ತಾವು ಅದಕ್ಕೆ ವ್ಯತಿರಿಕ್ತವಾಗಿ ಏನಾದರೂ ಹೇಳಿದರೂ ಕೂಡ ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳಲು ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿದ್ದಾರೆ.

ಶ್ರೀ ಎಚ್.ಎನ್.ನಂಜೇಗೌಡ: ಮಾನ್ಯ ಅಧ್ಯಕ್ಷರೇ, ನಾನು ಏನು ಹೇಳುತ್ತೇನೆ ಅಂದರೆ ನಾನು ಈ ಬಿಲ್ ನೋಡಿದೆ. ನಾನು ಹೇಳುವುದನ್ನು ತಾವು ಮೊದಲು ಕೇಳಿ. ನಾನು ಉದಾಹರಣೆಗೆ ಒಂದು ಹೇಳುತ್ತೇನೆ. ಡಿಲೀಷನ್ ಆಫ್ ಸೆಕ್ಷನ್ 1(11) ಎ, ಇದನ್ನು ಏತಕ್ಕೆ ಮಾಡಿದ್ದೀರಿ? ಉದ್ದೇಶ ಹೇಳಲಿಲ್ಲ ನೀವು. ಅದಕ್ಕೆ ಕಾರಣ ಇಲ್ಲ. ಆಮೇಲೆ ಇನ್ನೊಂದು ಏನಾಗಿದೆ ಅಂದರೆ 111(ಬಿ) ಸೆಕ್ಷನ್ ಅದು ಒರಿಜನಲ್ ಆಕ್ಟ್‌ನಲ್ಲಿ ಇರುವುದು ಒಂದು,.

+ ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ನಾನು ಮೊದಲು ಈ ವಿಧೇಯಕದ ಬಗ್ಗೆ ಹೇಳುತ್ತೇನೆ. ಅವರು ಆನಂತರ ಚರ್ಚೆ ಮಾಡಲಿ ಅದಕ್ಕೆ ನಾನು ಉತ್ತರ ಹೇಳುತ್ತೇನೆ. ಈ ಒಂದು ಸಹಕಾರ ಸಂಘಗಳ ಕಾಯ್ದೆಯನ್ನು ತಿದ್ದುಪಡಿ ಮಾಡಬೇಕೆಂದು ಹೇಳಿ ಕೆ.ಎಚ್.ಪಾಟೀಲರ ಸಮಿತಿ, ಜಯರಾಜ್ ಅವರ ಸಮಿತಿ ಹಾಗೂ ಇನ್ನೂ ಹಲವಾರು ಸಮಿತಿಗಳೂ ಕೂಡ ವರದಿಯನ್ನು ಒಪ್ಪಿಸಿದ್ದವು. ಅದರ ಒಂದು ಆಧಾರದ ಮೇಲೆ ಸರ್ಕಾರದ ಹಸ್ತಕ್ಷೇಪ ಕಡಿಮೆ ಆಗಬೇಕು ಎನ್ನುವ ದೃಷ್ಟಿಯಿಂದ ಸಹಕಾರಿ ಕ್ಷೇತ್ರ ಮುಕ್ತವಾಗಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ಚಳುವಳಿಯಾಗಿ ಮಾಡಬೇಕೆನ್ನುವ ದೃಷ್ಟಿಯಿಂದ ಈ ಒಂದು ತಿದ್ದುಪಡಿಯನ್ನು ನಾವು ತರುತ್ತಿದ್ದೇವೆ. ಈ ತಿದ್ದುಪಡಿಯಲ್ಲಿರುವ ಮೂಲ ಮುಖ್ಯಾಂಶಗಳನ್ನು ನಾನು ಹೇಳುತ್ತೇನೆ. ಅವರು ಅದರ ಮೇಲೆ ಚರ್ಚೆಮಾಡಲಿ. ಅದರ ನಂತರ ನಾನು ಉತ್ತರ ಕೊಡುತ್ತೇನೆ. ಮೂಲತಹಃ ಈ ಸಹಕಾರಿ ಕಾಯ್ದೆಯ ಮೂಲಕ ಜನರ ಚಳುವಳಿ ಆಗಬೇಕೆನ್ನುವ ದೃಷ್ಟಿಯಿಂದ ಹೆಚ್ಚು ಅವ್ಯವಹಾರಗಳು ನಡೆಯುತ್ತವೆ ಅವು ಬೆಳಕಿಗೆ ಬರುವುದಿಲ್ಲ, ಮುಚ್ಚಿ ಹಾಕಿಬಿಡುತ್ತಾರೆ ಎನ್ನುವ ಕೆಲವು ವಿಚಾರಗಳು ಇರುವುದರಿಂದ ಈ ಕಾಯ್ದೆಯಲ್ಲಿರುವ ಕೆಲವು ಅಂಶಗಳನ್ನು ನಾನು ಹಂತ ಹಂತವಾಗಿ ಹೇಳುತ್ತೇನೆ. ಇವತ್ತು ಏನು ಇದೆ ಅಂದರೆ ಒಬ್ಬ ಸಹಕಾರಿ ಸಂಘದ ಸೆಕ್ರೆಟರಿ ಆ ದಫ್ತರ್ ಮುಳುಗಿಸಿ ಹೋಗಿಬಿಟ್ಟರೆ ಆ ದಫ್ತರ್ ಕೊಡದಿದ್ರೆ ಆ ದಫ್ತರ್ ಸಿಗುವುದೇ ಇಲ್ಲ ನಮಗೆ. ಆ ರಿಜಿಸ್ಟರ್‌ಗಳನ್ನು ನಾವು ಹುಡುಕುವುದಕ್ಕೆ ಆಗುತ್ತಿರಲಿಲ್ಲ. ಆ ಒಂದು ದೃಷ್ಟಿಯಿಂದ

ಅದನ್ನು ಕೂಡ ನಾವು ಇದರಲ್ಲಿ ಅಳವಡಿಸಿಕೊಂಡು, ಪ್ರತಿ 15 ದಿವಸಕ್ಕೆ ಒಮ್ಮೆ ಆ ಒಂದು ದಫ್ತರ್‌ನ ಎಕ್ಸ್‌ಟ್ರಾಕ್ಟ್ ಕಳುಹಿಸಬೇಕು, ಅವರು ನಿರ್ಣಯದ ಕಾಪಿಯನ್ನು ಕಳುಹಿಸಬೇಕು, ಎನ್ನುವುದನ್ನೂ ಕೂಡ ನಾವು ಈ ಕಾಯ್ದೆಯಲ್ಲಿ ಅಳವಡಿಸಿಕೊಂಡಿದ್ದೇವೆ. ಒಂದು ಕಡೆ ಸೆಕ್ರೆಟರಿ ಆ ದಫ್ತರ್ ಮುಳಗಿಸಿದರೂ ಕೂಡ ಮತ್ತೊಂದು ಕಡೆ ಆ ರಿಜಿಸ್ಟರ್ ಸಿಗುತ್ತದೆ. ಅವು ಫೈನಾನ್ಸಿಂಗ್ ಆಫೀಸ್‌ನಲ್ಲಿ ಮತ್ತು ರಿಜಸ್ಟ್ರಾರ್ ಆಫೀಸ್‌ನಲ್ಲಿ. ಅವುಗಳನ್ನು ಅವನು ಕಳುಹಿಸದೇ ಇದ್ದರೆ ಶಿಕ್ಷೆ ಮತ್ತು ದಂಡ ಕೂಡ ಈ ಕಾಯ್ದೆಯಲ್ಲಿ ಇಟ್ಟಿದ್ದೇವೆ. ಇನ್ನು ಸಹಕಾರಿ ಸಂಘಗಳನ್ನು ವಿಲೀನಗೊಳಿಸುವುದು ಇದರಲ್ಲಿ ಬಹಳ ಗೊಂದಲ ಇತ್ತು. ಸೆಕ್ಷನ್ 14(ಎ) ಎಂದು ತಿಳಿದುಕೊಂಡು ರಿಜಿಸ್ಟ್ರಾರ್‌ಗೆ ಅಧಿಕಾರ ಕೊಟ್ಟುಬಿಟ್ಟಿದ್ದರು. ಆ ಸಂಘ ಒಪ್ಪಲಿ ಬಿಡಲಿ ನಾವೇ ಆ ಎರಡು ಸಂಘಗಳನ್ನು ಚಲೋ ಇದ್ದದ್ದಕ್ಕೆ ಕೆಟ್ಟದ್ದನ್ನು ಕೂಡಿಸುವುದು ಕೆಟ್ಟದ್ದಕ್ಕೆ ಹೋಗಿ ಚಲೋ ಇರುವುದನ್ನು ಕೂಡಿಸುವುದು ಇಂತಾದ್ದು ಆಗುತ್ತದೆ ಎಂದು ತಿಳಿದುಕೊಂಡು ಸರ್ಕಾರದ ಮೇಲೆ ಗೂಬೆ ಕೂರಿಸುತ್ತಿದ್ದರು. ಈ ಕಾರಣದಿಂದಲೇ ಈಗ ನಾವು ಆ ಸೆಕ್ಷನ್ ಅನ್ನು ಸಂಪೂರ್ಣವಾಗಿ ತೆಗೆದು ಎರಡೂ ಸಂಘಗಳು ಒಪ್ಪಿದರೆ ಮಾತ್ರ ಕೂಡಿಸಬೇಕು ಎನ್ನುವುದನ್ನು ನಾವು ಇಲ್ಲಿ ಹಾಕಿದ್ದೇವೆ. ಈ ಯಾವುದೇ ಒಬ್ಬ ವ್ಯಕ್ತಿ ಒಂದು ಸಂಘದಲ್ಲಿ ಮೆಂಬರ್ ಆಗುತ್ತಾನೆ. ಮುಂದೆ ಏನಾಗುತ್ತದೆ ಅಂದರೆ ನಮ್ಮ ಕೈಯಲ್ಲಿಯೇ ಆ ಸಂಘ ಉಳಿಸಿಕೊಳ್ಳಬೇಕೆಂದರೆ ಹಿಂದಿನ ರಾತ್ರಿಯಲ್ಲಿಯೇ ಸಾಕಷ್ಟು ಜನ ಮೆಂಬರ್ಸ್ ಹೆಸರುಗಳನ್ನು ಬರೆದುಕೊಂಡು ಅವರು ಮಾಡಿಬಿಡುತ್ತಿದ್ದರು. ಇಲ್ಲಿ ನಾವು ಏನು ಅಳವಡಿಸಿದ್ದೇವೆ ಅಂದರೆ ಅವನು ಕನಿಷ್ಟ ಒಂದು ವರ್ಷದ ಮೊದಲು ಮೆಂಬರ್ ಆಗಿರಬೇಕು. ಆಮೇಲೆ ಅವನಿಗೆ ಒಂದು ಅನರ್ಹತೆ ಇಟ್ಟಿದ್ದೇವೆ ಅವನು ಆ ಸಂಘದಲ್ಲಿ ಯಾವ ಉದ್ದೇಶಕ್ಕಾಗಿ ಮೆಂಬರ್ ಆಗುತ್ತಾನೋ ಆ ಉದ್ದೇಶಗಳನ್ನು ಅವನು ಮೂರು ವರ್ಷಗಳಲ್ಲಿ ಈಡೇರಿಸಿಕೊಳ್ಳದಿದ್ದರೆ ಸುಮ್ಮನೆ ಆ ಸಂಘದಲ್ಲಿ ಮೆಂಬರ್ ಆಗಿದ್ದರೆ ಆ ಮೆಂಬರ್‌ಶಿಪ್ ಸಹ ಹೋಗುವಂತಹ ಅವಕಾಶವನ್ನೂ ಸಹ ನಾವು ಈ ಕಾಯ್ದೆಯಲ್ಲಿ ಮಾಡಿದ್ದೇವೆ. ಇವತ್ತು ಸಂಘ ತಾನು ವಸೂಲಿ ಮಾಡಿದಂತಹ ಹಣವನ್ನು 50 ಪರ್ಸೆಂಟ್ ಹಣವನ್ನು ವಸೂಲಿಮಾಡಿ ಬ್ಯಾಂಕಿಗೆ ಕಟ್ಟಿದರೆ ಅವನಿಗೆ ಇವತ್ತು ಓಟಿಂಗ್ ರೈಟ್ಸ್ ಬರುತ್ತಿತ್ತು. ಅದನ್ನು ನಾವು 50 ಪರ್ಸೆಂಟ್‌ನಿಂದ 75 ಪರ್ಸೆಂಟ್‌ಗೆ ಏರಿಸಿದ್ದೇವೆ. ಇವತ್ತು 50 ಪರ್ಸೆಂಟ್‌ಗೆ ಇಟ್ಟು ಬಹಳಷ್ಟು ಸಂಘಗಳು ಹದಗೆಟ್ಟು ಹೋಗಿವೆ. ಮೊದಲು ನಾವು ಏನು ಮಾಡುತ್ತಿದ್ದೆವು ಅಂದರೆ ನೂರಕ್ಕೆ ನೂರರಷ್ಟು ವಸೂಲಾತಿಯನ್ನು ಇಟ್ಟಿದ್ದೆವು. ಅದನ್ನು 50 ಪರ್ಸೆಂಟ್‌ಗೆ ತಂದಿದ್ದರು. ಅದನ್ನು ನಾವು ಪುನಃ ಒಮ್ಮೆಲೇ 100 ಪರ್ಸೆಂಟ್ ಮಾಡುವುದು ಬೇಡ ಎಂದು ತಿಳಿದುಕೊಂಡು 75 ಪರ್ಸೆಂಟ್‌ಗೆ ಏರಿಸಿದ್ದೇವೆ. ಇದರಿಂದ ಆ ಸಂಘ ಒಳ್ಳೆಯ ರೀತಿಯಲ್ಲಿ ನಡೆದು ಅದನ್ನು ಪಾಸ್‌ಆನ್ ಮಾಡಬೇಕಾಗುತ್ತದೆ. ಈ ಸಂಘದ ಶೇರು ಕೇವಲ 10 ಸಾವಿರ ರೂಪಾಯಿಗಳಷ್ಟು ಮಾತ್ರ ತೆಗೆದುಕೊಳ್ಳಬೇಕೆಂದು ನಾವು ಇಟ್ಟಿದ್ದೆವು. ಇವತ್ತು ನಾವು ಆ ಮಿತಿಯನ್ನು ತಗೆದುಹಾಕಿದ್ದೇವೆ. ಯಾರು ಬೇಕಾದರೂ ಎಷ್ಟು ಷೇರುಗಳನ್ನು ಆದರೂ ಆ ಸಹಕಾರ

ಸಂಘದಲ್ಲಿ ತೆಗೆದುಕೊಳ್ಳಬಹುದು ಎನ್ನುವುದನ್ನು ನಾವು ಇಟ್ಟಿದ್ದೇವೆ, ವಾರ್ಷಿಕ ಮಹಾಸಭೆ. ವಾರ್ಷಿಕ ಮಹಾಸಭೆಯನ್ನು ಕರೆಯದಿದ್ದ ಕೂಡಲೇ ಸರ್ಕಾರಕ್ಕೆ ಬರುವುದು ಮುಂದೆ ಹಾಕಿಸಿಕೊಳ್ಳುವುದು ಇವುಗಳನ್ನೆಲ್ಲಾ ಇಟ್ಟಿದ್ದೆವು. ಕರೆಯದಿದ್ದರೆ ಅವನಿಗೂ ಕೂಡ ದಂಡ ಶಿಕ್ಷೆ ಆಗುವಂತಹ ಸ್ಥಿತಿ ಇದೆ. ಅಧಿಕಾರಿಗಳು ಇರಬಹುದು ಅಧಿಕಾರೇತರರು ಇರಬಹುದು, ಅವರು ಅವರ ಅವಧಿ ಮುಗಿದ ಕೂಡಲೇ ಮುಂದೆ ಹಾಕಿಸಿಕೊಂಡು ಹೋಗಿಬಿಡುತ್ತಿದ್ದರು. ಅವಧಿ ಮುಗಿದ ಕೂಡಲೇ ತಕ್ಷಣ ಅಲ್ಲಿ ಆಡಳಿತಾಧಿಕಾರಿ ಬರಬೇಕು. ಪುನಃ ಆ ಆಡಳಿತಾಧಿಕಾರಿ 6 ತಿಂಗಳ ಒಳಗಾಗಿ ಪುನಃ ಚುನಾವಣೆಯನ್ನು ಮಾಡಬೇಕೆನ್ನುವುದನ್ನೂ ಕೂಡ ಇದರಲ್ಲಿ ಹಾಕಿದ್ದೇವೆ. ಆಮೇಲೆ ಪದಾಧಿಕಾರಿಗಳ ಅವಧಿಯನ್ನು 5 ವರ್ಷಕ್ಕೆ ಏರಿಸಿದ್ದೇವೆ. ಅಲ್ಲಿರತಕ್ಕಂಥ ಆಡಳಿತ ಮಂಡಲಿಯ ಅವಧಿಯನ್ನು 3 ವರ್ಷದಿಂದ 5 ವರ್ಷಕ್ಕೆ ಮಾಡಿದ್ದೇವೆ. ಅಲ್ಲಿರತಕ್ಕಂಥ ಅಧ್ಯಕ್ಷರ ಅವಧಿಯನ್ನು ಎರಡೂವರೆ ವರ್ಷ ಎಂದು ಮಾಡಿದ್ದೇವೆ. ಈಗ ಒಂದು ವರ್ಷ ಎಂದು ಇತ್ತು ಅದನ್ನು ಎರಡೂವರೆ ವರ್ಷ ಎರಡೂವರೆ ವರ್ಷ ಎಂದು ಮಾಡಿದ್ದೇವೆ ಕಾರ್ಯಕಾರಿ ಮಂಡಲಿ ಅವಧಿ ಮುಗಿದ ತಕ್ಷಣ ಅವರು ಚುನಾವಣೆಯನ್ನು ಮಾಡದೇ ಇದ್ದರೆ ಅವರಿಗೆ ಒಂದು ದಿನ ಗಡವು ಇಲ್ಲದಂತೆ ಡಿಸ್‌ಕ್ವಾಲಿಫೈ ಮಾಡುತ್ತೇವೆ. ಅವರು ಚುನಾವಣೆಯನ್ನು ನಡೆಸಬೇಕು. ಒಂದು ವೇಳೆ ಚುನಾವಣೆಯನ್ನು ಮಾಡುವುದಕ್ಕೆ ಅವರು ವಿಫಲರಾದರೆ ಮುಂದಿನ 5 ವರ್ಷ ಯಾವುದೇ ಸಂಸ್ಥೆಯಲ್ಲಿ ಅವರು ಚುನಾವಣೆಯಲ್ಲಿ ನಿಲ್ಲುವುದಕ್ಕೆ ಬಾರದಂತೆ ಪ್ರತಿಬಂಧ ಮಾಡಿದ್ದೇವೆ. ಇದರಿಂದ ಪ್ರತಿ ವರ್ಷ ಚುನಾವಣೆಯನ್ನು ನಡೆಸುತ್ತಾರೆ. ಇದನ್ನು ಇಲ್ಲಿ ಸೇರಿಸಿದ್ದೇವೆ. ಆಮೇಲೆ 29 (ಡಿ) ಕೇವಲ 6 ವರ್ಷ ಮಾತ್ರ ಇರುವುದಕ್ಕೆ ಅವಕಾಶ ಇತ್ತು ಆಮೇಲೆ ಇರುವುದಕ್ಕೆ ಆಗುವುದಿಲ್ಲ ಎನ್ನುವ ಒಂದು ಪ್ರತಿಬಂಧ ಇತ್ತು. ಅದು ಏಕೆ ಇರಬೇಕು ಎನ್ನುವ ದೃಷ್ಟಿಯಿಂದ ಅವರು ಮೆಜಾರಿಟಿ ಇರುವವರೆಗೂ ಇರಬಹುದು ಎನ್ನುವುದನ್ನೂ ಕೂಡ ತೆಗೆದುಹಾಕಿದ್ದೇವೆ. ಅವರು 5 ವರ್ಷಕ್ಕೆ ಒಮ್ಮೆ ಚುನಾವಣೆಯನ್ನು ನಡೆಸಲು ತಪ್ಪಿದರೆ ತಕ್ಷಣ ಆಡಳಿತಾಧಿಕಾರಿ ಬರಬೇಕು ಎನ್ನುವ ದೃಷ್ಟಿಯಿಂದ ಆ ಅಧಿಕಾರವನ್ನು ರಿಜಿಸ್ಟ್ರಾರ್ ಅವರಿಗೆ ಕೊಟ್ಟಿದ್ದೇವೆ. ರಿಜಿಸ್ಟ್ರಾರ್ 6 ತಿಂಗಳ ಒಳಗಾಗಿ ಚುನಾವಣೆ ಮಾಡುವಂತಹದ್ದಕ್ಕೆ ಮಾತ್ರ ನಾವು ಅಲ್ಲಿ ಆಡಳಿತಾಧಿಕಾರಿಗಳನ್ನು ಹಾಕುತ್ತೇವೆ. ಇಲ್ಲಿ 30 (ಎ) ಎಂಬ ಒಂದು ಸೆಕ್ಷನ್ ಇತ್ತು. ಇದಕ್ಕೆ ನೋಟೀಸ್ ಬೇಕಾಗಿಲ್ಲ ಏನೂ ಬೇಕಾಗಿಲ್ಲ.

6.00 ಪಿ.ಎಂ

ಸರ್ಕಾರಕ್ಕೆ ಸಂಶಯ ಬಂದರೆ ನಾವು ತಕ್ಷಣ ಹೋಗಿ ಆಡಳಿತಾಧಿಕಾರಿಯನ್ನು ನೇಮಿಸಬಹುದಾಗಿತ್ತು. ಆ ಸೆಕ್ಷನ್ ಅನ್ನು ತೆಗೆದು ಹಾಕಿದ್ದೇವೆ. ಅವರಿಗೆ ಅವಕಾಶಕೊಟ್ಟು, ಸೂಚನೆ ಕೊಟ್ಟು, ವಿಚಾರಣೆ ಮಾಡಿ ಅದನ್ನು ಸೂಪರ್‌ಸೀಡ್ ಮಾಡಬೇಕು, ಅಲ್ಲಿಯವರೆಗೆ ಸರ್ಕಾರ ನೇರವಾಗಿ ಕ್ರಮ ತೆಗೆದುಕೊಳ್ಳುವಂಥ

ಕಾನೂನನ್ನು ಕೂಡ ಈ ಸಂದರ್ಭದಲ್ಲಿ ತೆಗೆದುಹಾಕಿದ್ದೇವೆ.

(ಈ ಹಂತದಲ್ಲಿ ಅಧ್ಯಕ್ಷರು (ಶ್ರೀರಮೇಶ್‌ಕುಮಾರ್‌ರವರು) ಪೀಠವನ್ನಲಂಕರಿಸಿದರು)

ಆ ಸಂಶಯ ಬಂದಾಗ ಅಡ್ಮಿನಿಸ್ಟ್ರೇಟರ್‌ರವರನ್ನು ನೇಮಿಸುವಂಥ ಅಧಿಕಾರವನ್ನು ರೈತರಿಗೆ ಕೊಟ್ಟಿದ್ದೇವೆ. ಅದಕ್ಕೆ ಆರು ತಿಂಗಳಲ್ಲಿ ಚುನಾವಣೆ ಮಾಡಬೇಕು ಎಂದೂ ಕೂಡ ಇದರಲ್ಲಿ ಹಾಕಿದ್ದೇವೆ. ಇನ್ನು ಚುನಾವಣೆಯ ನಿಯಮಗಳನ್ನು ಇದರಲ್ಲಿ ಸೇರಿಸಿಕೊಂಡಿದ್ದೇವೆ. ಸಾಮಾನ್ಯ ಚುನಾವಣೆಯ ನಿಯಮಗಳು ಏನಿವೆ, ಅವುಗಳನ್ನು ಇಲ್ಲಿ ಸೇರಿಸಿದ್ದೇವೆ. ಇನ್ನು ಸೆಕ್ಷನ್ 30-ಎ ಎಂದು ಒಂದು ಇತ್ತು. ಅದರಲ್ಲಿ ನಾಮಕರಣ ಮಾಡುವಂಥ ಅವಕಾಶವಿತ್ತು. ಆಡಳಿತ ಮಂಡಳಿಗೆ 5 ಲಕ್ಷ ರೂಪಾಯಿಯ ಶೇರ್ ಕೊಟ್ಟಿದ್ದರೆ ನಾಮಕರಣ ಮಾಡುವಂಥಾದ್ದು ಇತ್ತು. ಸಂಪೂರ್ಣವಾಗಿ ಆ ಸೆಕ್ಷನ್‌ಅನ್ನೇ ತೆಗೆದು ಹಾಕಿಬಿಟ್ಟಿದ್ದೇವೆ. ಯಾವ ಸಂಘಕ್ಕೆ ಸರ್ಕಾರದಿಂದ ಶೇರ್ ಆಗಲೀ, ಗ್ಯಾರಂಟಿಯನ್ನಾಗಲೀ ಕೊಟ್ಟಿರುತ್ತೇವೆ, ಉದಾಹರಣೆಗೆ ಅಪೆಕ್ಸ್ ಬ್ಯಾಂಕ್ ಇದೆ, ಸೊಸೈಟಿಗಳಿವೆ, ಇವುಗಳನ್ನೆಲ್ಲಾ ನಾವು ಆಡಿಟ್ ಡಿಪಾರ್ಟ್‌ಮೆಂಟಿನಲ್ಲಿ ಇಟ್ಟುಕೊಂಡಿದ್ದೇವೆ. ನಮ್ಮದು ಏನೂ ಶೇರ್ ಇಲ್ಲದಂಥ ಸಂಘಗಳು ಏನಿರುತ್ತವೆ, ಅವು ಚಾರ್ಟರ್ಡ್ ಅಕೌಂಟೆಂಟ್‌ಗಳಿಂದ ಆಡಿಟ್ ಮಾಡಿಸಿಕೊಳ್ಳಬಹುದು. ಆದರೆ ಆ ಆಡಿಟ್ಟನ್ನು ಮೂರು ವರ್ಷದೊಳಗೆ ನಾವು ಮಾಡಬೇಕು ಎಂದು ಇದರಲ್ಲಿ ಹೊಸದಾಗಿ ಅಳವಡಿಸಿಕೊಂಡಿದ್ದೇವೆ. ಹಿಂದೆ ಮರು ಆಡಿಟ್ ಮಾಡಲು ಅವಕಾಶವಿರಲಿಲ್ಲ. ಮರು ಆಡಿಟ್ ಮಾಡುವಂಥ ಅವಕಾಶವನ್ನೂ ಕೂಡ ನಾವು ಈ ಸೆಕ್ಷನ್‌ನಲ್ಲಿ ಹೊಸದಾಗಿ ಸೇರಿಸಿಕೊಂಡಿದ್ದೇವೆ. ಮೊದಲೇ ಹೇಳಿದೆ, ಈ ಕ್ಯಾಷ್ ಬುಕ್ ಇತ್ಯಾದಿಗಳನ್ನು ನಮಗೆ ಕೊಡುತ್ತಲೇ ಇರಲಿಲ್ಲ. ಯಾರಾದರೂ ಒಬ್ಬ ಕಾರ್ಯದರ್ಶಿ ಬುಕ್ ತೆಗೆದುಕೊಂಡು ಹೋಗಿಬಿಟ್ಟರೆ ನಮಗೆ ಆ ಬುಕ್ ಸಿಗುತ್ತಲೇ ಇರಲಿಲ್ಲ. ಪರಿಸ್ಥಿತಿ ಹೀಗೆ ಆಗುತ್ತಿತ್ತು. ಅದಕ್ಕಾಗಿ ಈಗ ಏನು ಮಾಡಿದ್ದೇವೆ ಎಂದರೆ, 15 ದಿವಸಕ್ಕೆ ಒಮ್ಮೆ ಕ್ಯಾಷ್ ಬುಕ್‌ನ ಎಕ್ಸ್‌ಟ್ರಾಕ್ಟ್ ಕಳುಹಿಸಿ ಕೊಡಬೇಕು. ಅದು ಡಿ.ಸಿ.ಸಿ. ಬ್ಯಾಂಕ್ ಇರಬಹುದು, ಯಾವುದೇ ಇರಬಹುದು. ರಿಜಿಸ್ಟರ್‌ನ ಎರಡೂ ಕಡೆಗಳನ್ನು ಕಳುಹಿಸಬೇಕು ಎಂದು ಮಾಡಿದ್ದೇವೆ. ಆಮೇಲೆ ರೆಸಲ್ಯೂಷನ್ ಕಾಪಿಯನ್ನು ಕೂಡ ಮುಖ್ಯಕಾರ್ಯ ನಿರ್ವಾಹಕರು ಕಂಪಲ್ಸರಿಯಾಗಿ ಕಳುಹಿಸಲೇ ಬೇಕು. ಕಳುಹಿಸದೇ ಇದ್ದರೆ ಅವನಿಗೆ ಕೂಡ ಶಿಕ್ಷೆ ಕೊಡುವಂಥ ಅವಕಾಶ ಮಾಡಿದ್ದೇವೆ. ಹಿಂದೆ ಏನಿತ್ತು ಎಂದರೆ ನಮ್ಮ ಆಡಿಟರ್‌ಆಗಲೀ, ಇನ್ಸ್‌ಪೆಕ್ಟರ್‌ಆಗಲೀ ಅಲ್ಲಿಗೆ ಹೋಗಿ ಆಡಿಟ್, ಇನ್ಸ್‌ಪೆಕ್ಷನ್‌ಗಳನ್ನು ಮಾಡಿದಾಗ ಅಲ್ಲಿ ತಪ್ಪು ಕಂಡುಬಂದರೂ ಸಹ ಸುಮ್ಮನೆ ಬಿಟ್ಟು ಬಂದು ಬಿಡುತ್ತಿದ್ದರು. ಯಾರೋ ತಮ್ಮಂಥವರು ಅರ್ಜಿ ಕೊಟ್ಟಮೇಲೆ ಇಂಥವು ಆಗಿವೆ ಎಂದು ತಿಳಿಯುತ್ತಿತ್ತು. ಉದ್ದೇಶಪೂರ್ವಕವಾಗಿ, ತಪ್ಪು ಕಂಡರೂ ಅದನ್ನು ಮುಚ್ಚಿಟ್ಟು ಬಂದರೆ ಅಂಥ ಅಧಿಕಾರಿಗೂ ಕೂಡ ಶಿಕ್ಷೆ ಕೊಡುವಂಥ ಅವಕಾಶವನ್ನು ನಾವು ಆ ಕಾಯಿದೆಯಲ್ಲಿ ಸೇರಿಸಿದ್ದೇವೆ. ಅಂದರೆ ಆಗ ಅವನು ನೇರವಾಗಿ ಮಾಡುತ್ತಾನೆ, ಮುಚ್ಚಿ

ಹಾಕಲು ಆಗುವುದಿಲ್ಲ. ಇದನ್ನೂ ಕೂಡ ನಾವು ಈ ಕಾಯಿದೆಯಲ್ಲಿ ಸೇರಿಸಿದ್ದೇವೆ. 111-ಎ ಎಂದು ತಾವು ಏನು ಹೇಳಿದಿರಿ, ಅದನ್ನು ಮತ್ತೊಂದು ಸೆಕ್ಷನ್‌ನಲ್ಲಿ ತೆಗೆದುಕೊಂಡ ಕಾರಣ ಇಲ್ಲಿ ಅದನ್ನು ಕೈ ಬಿಟ್ಟಿದ್ದೇವೆ. ಬೇರೆ ಸೆಕ್ಷನ್‌ನಲ್ಲಿ ಅದು ಬಂದಿದೆ. ಅನರ್ಹಗೊಳಿಸುವುದು ಮುಂತಾದ ಎಲ್ಲಾ ಅಧಿಕಾರವನ್ನು ಕೊಟ್ಟಿದ್ದರಿಂದ ಇಲ್ಲಿ ಬಿಟ್ಟಿದ್ದೇವೆ. ಇಷ್ಟು ಪ್ರಾಮುಖ್ಯವಾದಂಥ ತಿದ್ದುಪಡಿಗಳನ್ನು ನಾವು ತಂದಿದ್ದೇವೆ. ತಾವು ದಯವಿಟ್ಟು ಇದರ ಮೇಲೆ ಚರ್ಚೆ ಮಾಡಬಹುದು. ಏನಾದರೂ ಸಲಹೆಗಳಿದ್ದರೂ ಕೂಡ ತಾವು ಅವುಗಳನ್ನು ಮುಕ್ತ ಮನಸ್ಸಿನಿಂದ ಕೊಡಬಹುದು.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳೂ ಕೂಡ ಇಲ್ಲಿ ಇದ್ದಾರೆ. ನನ್ನ ಮನವಿ ಏನೆಂದರೆ, ಸುಮಾರು 71 ತಿದ್ದುಪಡಿಗಳು ಇದರಲ್ಲಿ ಇವೆ. ಒಂದೆರಡು ಅಲ್ಲ. ಅನೇಕ ಸ್ವಾಗತಾರ್ಹವಾದವುಗಳಿವೆ. ಕೆಲವು ಮಾತ್ರ ಕಾಂಟ್ರವರ್ಸಿ ಇದೆ, ಅವುಗಳು ಒಂದು ಮೂರು ಅಥವಾ ನಾಲ್ಕು ಇರಬಹುದು. ನನ್ನ ದೃಷ್ಟಿಯಿಂದ, ನನ್ನ ವಿಚಾರದ ಪ್ರಕಾರ, ನನ್ನ ಯೋಚನೆಯ ಪ್ರಕಾರ ಒಂದೆರಡು ಬರಬಹುದು. ಮತ್ತು ಈ ಸಹಕಾರ ಕ್ಷೇತ್ರದಲ್ಲಿ ಆಸಕ್ತಿ ಇರತಕ್ಕಂಥ ಒಬ್ಬಿಬ್ಬರು ಇದ್ದಾರೆ, ಅವರು ಯಾವುದಾದರೂ ಸಣ್ಣಪುಟ್ಟದ್ದನ್ನು ಹೇಳಬಹುದು. ಇದರಲ್ಲಿ ಅನೇಕ ವಿಚಾರಗಳು, ಹಿಂದೆ ಕೆ.ಹೆಚ್.ಪಾಟೀಲರ ಸಮಿತಿ ಮತ್ತು ತಜ್ಞರು ಏನು ಹೇಳಿದ್ದಾರೆ ಅದರ ಪ್ರಕಾರ ಬಂದಂಥವುಗಳು ಇವೆ. ಈ 71 ತಿದ್ದುಪಡಿಗಳ ವಿಚಾರದಲ್ಲಿ ಎಲ್ಲಾ ಸದಸ್ಯರೂ ದೀರ್ಘವಾಗಿ ಚರ್ಚೆ ಮಾಡಿ ಇದರಲ್ಲಿ ಭಾಗವಹಿಸಲು ಆಗುವುದಿಲ್ಲ. ದಯವಿಟ್ಟು ನಾನು ಅಧ್ಯಕ್ಷರ ಮುಖಾಂತರ ತಮ್ಮನ್ನು ಕೇಳಿಕೊಳ್ಳುತ್ತೇನೆ, ತಾವು ಇದನ್ನು ನೇರವಾಗಿ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿದರೆ, ಇದು ಒಂದು ಫಲಪ್ರದವಾದ ಚರ್ಚೆಯಾಗಿ, ಒಂದು ಒಳ್ಳೆಯ ಕಾಯಿದೆಯಾಗಿ ಬರುತ್ತದೆ. ನನಗನ್ನಿಸಿದ ಮಟ್ಟಿಗೆ, ಕೆಲವೊಂದು ವಿಚಾರಗಳಾದ ಮೀಸಲಾತಿಯ ಮೇಲೆ, ನಾಮಕರಣ ಮಾಡುವಂಥದ್ದರ ಮೇಲೆ ಆಕ್ಷೇಪ ಇದೆ. ಆಡಿಟ್ ಮತ್ತು ಕೋಆಪರೇಷನ್ ಡಿಪಾರ್ಟ್‌ಮೆಂಟ್‌ಗಳನ್ನು ಅಮಾಲ್ಗಮೇಷನ್ ಮಾಡತಕ್ಕಂಥದ್ದರ ಬಗ್ಗೆ ಇದೆ. ಮತ್ತು ಕೆಲವು ಮೀಸಲಾತಿಯನ್ನು ಯಾವ ರೀತಿಯಾಗಿ ಮಾಡಬೇಕು ಎನ್ನತಕ್ಕಂಥದ್ದರ ಬಗ್ಗೆ ಇದೆ. ಆಫೀಸ್ ಬೇರರ್‌ಅನ್ನು ಏಕೆ ನಾವು ಕಂಟಿನ್ಯೂ ಮಾಡಬಾರದು? ವೆಸ್ಟೆಡ್ ಇಂಟರೆಸ್ಟ್ ಯಾವ ರೀತಿಯಾಗಿ ಡೆವಲಪ್ ಆಗಿದೆ, ಈ ರೀತಾಯಿಗಿರುವವು ಅನೇಕ ಇವೆ. ಅವುಗಳು ಅಲ್ಲಿ ಕೂಲಂಕುಷವಾಗಿ ಚರ್ಚೆಯಾಗಿ, ಎಲ್ಲರ ಒಪ್ಪಿಗೆ ಪಡೆದು ಬರಬೇಕು. ಏಕೆಂದರೆ ಇದರ ಬಗ್ಗೆ ಪೊಲಿಟಿಕಲ್ ಮೈಲೇಜ್ ಏನಿಲ್ಲ, ಇದರಲ್ಲಿ ಅಕ್ಯುಮುಲೇಟೆಡ್ ಮಾಡತಕ್ಕಂಥಾದ್ದು ಏನೂ ಇಲ್ಲ. ಅಥವಾ ರಾಜಕೀಯ ಉದ್ದೇಶವೂ ಇಲ್ಲ, ದುರುದ್ದೇಶವೂ ಇದರಲ್ಲಿ ಇಲ್ಲ. ಇದರಿಂದ ನಾವು ಯಾರೂ ಅಚೀವ್‌ಮೆಂಟ್ ಮಾಡತಕ್ಕಂಥಾದ್ದೂ ಏನೂ ಇಲ್ಲ. ಎಲ್ಲರೂ ಕೂಡಿ ಒಂದು ಒಳ್ಳೆಯ ಕಾನೂನನ್ನು ಕೊಡಬೇಕು ಎನ್ನುವ ಉದ್ದೇಶ ನಮ್ಮದು. ಆದರೆ

ಕೆಲವೊಂದು ಮಾರ್ಪಾಡುಗಳನ್ನು ಮಾಡಬೇಕಾಗುತ್ತದೆ. ಆದ್ದರಿಂದ ತಾವು ಇದನ್ನು ನೇರವಾಗಿ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ. ಕಾಲಮಿತಿಯನ್ನು ಹಾಕಿ. ಒಂದು ತಿಂಗಳು ಅಥವಾ ಎರಡು ತಿಂಗಳು ಎಂದು ಕಾಲಮಿತಿಯನ್ನು ಹಾಕಿ, ಜಾಯಿಂಟ್ ಸೆಲೆಕ್ಟ್ ಕಮಿಟಿಯಿಂದ ಬಂದಾಗ ನೇರವಾಗಿ ಆರ್ಡಿನೆನ್ಸ್ ಮಾಡಿದರೂ ಕೂಡ ನನ್ನದೇನೂ ತಕರಾರಿಲ್ಲ. ಆದರೆ ನನ್ನ ವೈಯಕ್ತಿಕ ಅನಿಸಿಕೆ ಎಂದರೆ, ತಾವು ಇದನ್ನು ಜಾಯಿಂಟ್ ಸೆಲೆಕ್ಟ ಕಮಿಟಿಗೆ ರೆಫರ್ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇಲ್ಲ, ಇದಕ್ಕೆ ಚರ್ಚೆಯನ್ನೇ ಮಾಡಬೇಕು ಎಂದರೆ ಸುಮಾರು 4-5 ಗಂಟೆಗಳು ಆಗುತ್ತದೆ. ಅದನ್ನು ಮಾಡಬೇಕು ಎಂದರೆ ನಿಮ್ಮ ಇಚ್ಛೆ.

+ ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ): ಮಾನ್ಯ ಅಧ್ಯಕ್ಷರೇ, ಈಗ ಖರ್ಗೆಯವರು ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹಾಕಬೇಕು ಎಂದು ಹೇಳಿದ್ದಾರೆ. ಅದನ್ನು ನಾನು ಅನುಮೋದಿಸುತ್ತೇನೆ. ಇದರಲ್ಲಿ ಕೆಲವು ಸ್ವಾಗತಾರ್ಹವಾದಂಥವು ಇವೆ. ತಿದ್ದುಪಡಿಗಳು ಹಾಗೂ ಇನ್‌ಸರ್ಷನ್‌ಗಳೆಲ್ಲಾ ಸೇರಿ 71 ಪ್ರಾವಿಷನ್ಸ್‌ಅನ್ನು ನೀವು ಮಾಡುತ್ತಿದ್ದೀರಿ. ಮುಖ್ಯ ಮಂತ್ರಿಗಳೂ ಇದ್ದಾರೆ. ಎರಡು ಉದಾಹರಣೆಗಳನ್ನು ಹೇಳುತ್ತೇನೆ. ಸೆಕ್ಷನ್ 126-(ಎ)ಯನ್ನು ತೆಗೆದು ಹಾಕುತ್ತಿದ್ದೀರಿ. ಉದ್ದೇಶ ಏಕೆ ಎಂದು ಹೇಳಿಲ್ಲ. ಅಂದರೆ, ಕಾಯಿದೆಯಲ್ಲಿ ಡಿಸ್‌ಕ್ವಾಲಿಫಿಕೇಷನ್‌ನ ಪ್ರಾವಿಷನ್ ಇರಕೂಡದು, ಅದನ್ನು ತೆಗೆಯಬೇಕು ಎಂದರೆ ಯಾರಿಗೆ ರಕ್ಷಣೆ ಕೊಡುವುದಕ್ಕೆ ಎನ್ನುವ ಪ್ರಶ್ನೆ ಬರುತ್ತದೆ. ಅದರ ಮೇಲೆ ನಾವು ವಾದ ಮಾಡಿಕೊಂಡು ಹೋಗಬೇಕಾಗುತ್ತದೆ. ಅದಕ್ಕೆ ಎಷ್ಟು ಸಮಯವಾಗುತ್ತದೆ. ಆಮೇಲೆ ಇನ್ನೊಂದು ವಿಷಯ, ಈಗ ನನ್ನ ಹತ್ತಿರ ಇರುವುದು 1972 ರಿಂದ 74ರ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ವರದಿ. ಈ ಸಮಿತಿಯ ಶಿಫಾರಸ್ಸು ಮತ್ತು ಅಡ್ಮಿನಿಸ್ಟ್ರೇಟೀವ್ ರಿಫಾರ್ಮ್ಸ್ ಸಮಿತಿಯ ಶಿಫಾರಸ್ಸುಗಳಿವೆ. ಲೆಕ್ಕಪತ್ರಗಳ ಸಮಿತಿಗೆ ಎಸ್ ಶಿವಪ್ಪನವರು ಅಧ್ಯಕ್ಷರಾಗಿದ್ದರು, ಇನ್ನೊಂದು ಸಮಿತಿಗೆ ದೇವೇಗೌಡರು ಅಧ್ಯಕ್ಷರಾಗಿದ್ದರು. ಇವರಿಬ್ಬರೂ ಆಡಿಟ್‌ಅನ್ನು ಸೆಪರೇಟ್ ಮಾಡಬೇಕು ಎಂದು ಹೇಳಿದ್ದರು. ಅದರ ಮೇಲೆ ಆರ್ಡರ್ ಇಷ್ಯೂ ಆಯಿತು. ಹಣ ಕೊಟ್ಟಿರಲಿಲ್ಲ, ಅದರ ಮೇಲೆ ಸಮಿತಿ ಶಿಫಾರಸ್ಸು ಮಾಡಿತು. ವಿಷಯ ಸಮಿತಿಯವರೂ ಕೂಡ ಸೆಪರೇಟ್ ಆಗಿ ಇರಲಿ ಎಂದು ಹೇಳಿದ್ದಾರೆ. ಆಮೇಲೆ ಇತ್ತೀಚಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯವರೂ ಕೂಡ ಇದು ಸೆಪರೇಟ್ ಆಗಬೇಕು ಎಂದು ಹೇಳಿದ್ದಾರೆ. ಮೂಲಭೂತವಾಗಿ ಇದನ್ನು ರಿಜಿಸ್ಟ್ರಾರ್ ಪವ್ರ್ಯೂಗೆ ಕೊಟ್ಟಿದ್ದೀರಿ. ಡೈರೆಕ್ಟರ್ ತೆಗೆದು ಹಾಕಿಬಿಟ್ಟು ರಿಜಿಸ್ಟ್ರಾರ್‌ಗೆ ಕೊಟ್ಟಿದ್ದೀರಿ. ಉದಾಹರಣೆಗೆ ಹೇಳುತ್ತೇನೆ, ಸ್ವತಂತ್ರವಾಗಿ ಇದ್ದರೆ ಏನಾಗುತ್ತದೆ ಎಂದರೆ ಯಾರ ದಾಕ್ಷಿಣ್ಯ ಇರುವುದಿಲ್ಲ, ಅವರಿಗೆ ಹೆದರಿಕೆ ಇರುವುದಿಲ್ಲ. ಇಲ್ಲಿ ಕೆಲವು ಆಡಿಟ್ ರಿಪೋರ್ಟ್‌ಗಳಿವೆ. ಕೋಟಿಗಟ್ಟಲೆ ರೂಪಾಯಿ ತಿಂದಿರುವುದನ್ನು ಅವರು ನಿರ್ಭಯವಾಗಿ ಹೇಳಿದ್ದಾರೆ. ರಿಜಿಸ್ಟ್ರಾರ್ ಕೈಕೆಳಗೆ ಬಂದರೆ ಒಬ್ಬ ಅಡಿಷನಲ್ ರಿಜಿಸ್ಟ್ರಾರ್ ಬಗ್ಗೆ ಇವರು ಬರೆಯುವುದಕ್ಕೆ ಆಗುತ್ತದೆಯೇ? ಇಂಥ

ಅನೇಕ ವಿಚಾರಗಳಿವೆ. 71 ತಿದ್ದುಪಡಿಗಳಿವೆ. ಇವುಗಳನ್ನೆಲ್ಲಾ ಚರ್ಚೆ ಮಾಡಬೇಕಾದರೆ ತುಂಬ ಸಮಯ, ಖರ್ಗೆಯವರು ಹೇಳಿದ ಹಾಗೆ 4-5 ಗಂಟೆಯಾದರೂ ಬೇಕಾಗುತ್ತದೆ. ಸುಮ್ಮನೆ ತರಾತುರಿಯಿಂದ ತೆಗೆದುಕೊಂಡು ಹೋಗತಕ್ಕಂಥಾದ್ದು ಆಗಬಾರದು. ಒಳ್ಳೆಯದನ್ನೂ ಮಾಡಿದ್ದಾರೆ. 71 ಪ್ರಾವಿಷನ್‌ಗಳನ್ನು ಇವರು ಏನು ಮಾಡಿದ್ದಾರೆ, ಅವೆಲ್ಲವೂ ಕೆಟ್ಟದ್ದು ಎಂದು ಹೇಳುವುದಿಲ್ಲ. ಕೆಲವು ಮೂಲಭೂತವಾಗಿ ಪ್ರಶ್ನೆ ಮಾಡತಕ್ಕಂಥವು ಇವೆ. ಬಹುತೇಕ ಒಳ್ಳೆಯದನ್ನೇ ಮಾಡಿದ್ದಾರೆ. ಇಲ್ಲ ಎಂದು ಹೇಳುವುದಿಲ್ಲ. ಆದರೆ ಚರ್ಚೆ ಬಹಳ ಅವಶ್ಯಕವಾಗಿದೆ. ಆದ್ದರಿಂದ ದಯಮಾಡಿ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹಾಕಿ. ಇಲ್ಲ, ಚರ್ಚೆಯಾಗಬೇಕು ಎಂದರೆ ಈಗ ಡೆಫರ್ ಮಾಡಿ, ನಾವು ನಾಳೆ ಬೇಕಾದರೂ ಕೂಡುತ್ತೇವೆ, ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಚರ್ಚೆಯಂತೂ ಆಗಬೇಕು. ಇದನ್ನು ಈ ರೀತಿ ಅವಸರದಲ್ಲಿ ಪಾಸ್ ಮಾಡಲು ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೇ, ಸಾರಾಸಗಟಾಗಿ ಇದನ್ನು ತಿರಸ್ಕಾರ ಮಾಡತಕ್ಕಂಥದ್ದು ಏನಿಲ್ಲ. ತಮ್ಮ ಅನುಭವದಿಂದ ತಾವು ಮಾಡಿದ್ದೀರಿ. ಒಂದೇ ಒಂದು ನಾನು ಹೇಳುವುದೆಂದರೆ, ತುಕೋಳ್ ಪೇ ಕಮೀಷನ್‌ನವರು 1977ರಲ್ಲಿ ಒಂದು ವರದಿಯನ್ನು ಸಲ್ಲಿಸಿ ಈ ಲೆಕ್ಕಪತ್ರ ಸಮಿತಿಯನ್ನು ಬೇರ್ಪಡಿಸಬೇಕು ಎಂದು ನೇರವಾಗಿ ಹೇಳಿದ್ದಾರೆ. ಅದೊಂದೇ ನಮಗೆ ಅತಿ ಮುಖ್ಯವಾಗಿರತಕ್ಕಂಥದ್ದು. ಅದನ್ನು ಬೇರ್ಪಡಿಸಿದರೆ ಆಗ ನಿಮಗೂ ಗೌರವ ಬರುತ್ತದೆ, ಇದಕ್ಕೂ ಶಕ್ತಿ ಬರುತ್ತದೆ. ಅವರು ಹೇಳಿರುವಂತೆ ಈಗ ನೀವು ಬೇರ್ಪಡಿಸಿಲ್ಲ. ಅದಕ್ಕಾಗಿ ನಾನು ಏನು ಹೇಳುತ್ತೇನೆ ಎಂದರೆ, ಆ ವಿಚಾರವೊಂದನ್ನು ತಾವು ಸರಿಪಡಿಸಿದರೆ ನೀವು ತಂದಿರತಕ್ಕಂಥದ್ದು ನಿಜವಾಗಲೂ ಬಹಳ ಸ್ವಾಗತ ಮಾಡತಕ್ಕಂಥಾದ್ದು. ಬಹಳ ಅನುಭವದ ಮೇಲೆ ತಾವು ತಂದಿದ್ದೀರಿ. ಅದನ್ನು ಮೆಚ್ಚುತ್ತೇವೆ. ಅದರ ಬಗ್ಗೆ ಅಷ್ಟು ಹೇಳಿದರೆ ಸಾಕು ತಮಗೆ. ಇಲ್ಲವೆಂದರೆ ತಾವು ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ, ಸಮಗ್ರ ಚರ್ಚೆಯಾಗಲಿ, ಮತ್ತೊಂದು ಸಲ ಬರಲಿ.

ಶ್ರೀ ಎಸ್.ಎಸ್.ಪಾಟೀಲ್ (ಸಹಗಾರಿ ಸಚಿವರು): ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರು ಒಳ್ಳೆಯ ಸಲಹೆಗಳನ್ನು ಮಾಡಿದ್ದಾರೆ. ಅದಕ್ಕೆ ನನ್ನ ತಕರಾರು ಇಲ್ಲ. ಆದರೆ ಎರಡನ್ನು ನಾವು ಕೂಡಿಸಿಲ್ಲ. ತಮ್ಮ ಅಭಿಪ್ರಾಯ ಏನೆಂದರೆ ಎರಡನ್ನು ಮರ್ಜ ಮಾಡಿದ್ದೇವೆ ಎಂದು, ಆದರೆ ನಾವು ಮರ್ಜ ಮಾಡಿಲ್ಲ, ಹೆಡ್ ಒಬ್ಬರನ್ನೇ ಮಾಡಿದ್ದೇವೆ. ಉದಾಹರಣೆಗೆ ನನ್ನ ಇಲಾಖೆಗೆ ಒಬ್ಬರೇ ಸೆಕ್ರೆಟರಿ, ನನ್ನ ಇಲಾಖೆಯ ಎಲ್ಲಾ ಮಾರ್ಕೆಟಿಂಗ್ ಹಿಡಿದು ಎಲ್ಲದಕ್ಕೂ ಅವರೇ ಹೆಡ್, ಈ ರೀತಿಯಾಗಿ ಒಬ್ಬರ ಕಂಟ್ರೋಲ್‌ನಲ್ಲಿ ಎರಡೂ ಬರಲಿ ಎಂದು ಮಾಡಿದ್ದೇವೆಯೇ ವಿನಃ ಎರಡನ್ನೂ ಕೂಡಿಸಿಲ್ಲ, ಬೇರೆಯಾಗಿಯೇ ಇವೆ ತಾವು ನೋಡಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಪರಿವಿಧಿ 2 ಎಎನಲ್ಲಿ ಇಲ್ಲಿ ಸಹಕಾರಿ ಸಂಘದ ರಿಜಿಸ್ಟ್ರಾರ್‌ರವರೇ ಲೆಕ್ಕ ಪರಿಶೋಧನಾ ನಿರ್ದೇಶಕರಾಗಿ ಹೋಗುತ್ತಾರೆ; ಒಂದೇ ಇಲಾಖೆಯವರು ಆ ಒಂದು ಅಧಿಕಾರವನ್ನು ತೆಗೆದುಕೊಂಡಾಗ, ತನ್ನ ಇಲಾಖೆಯ ಮೇಲೆ ತನಿಖೆಯಾಗುವುದಿಲ್ಲ ಎನ್ನತಕ್ಕದ್ದು.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಇವು ಮೊದಲು ಎರಡು ಕೂಡಿದ್ದವು, ಈಗ ಕೂಡಿಲ್ಲ, ಅವುಗಳನ್ನು ನಾವು ಕೂಡಿಸುವುದಿಲ್ಲ. ಅಪ್‌ಗ್ರೇಡ್ ಮಾಡುತ್ತೇವೆ, ಡೈರೆಕ್ಟರ್ ಕೇಡರ್ ಅಪ್‌ಗ್ರೇಡ್ ಮಾಡುತ್ತೇವೆ ಇದರಿಂದ ಎರಡಕ್ಕೂ ಒಬ್ಬರೇ ಇರುತ್ತಾರೆ.

ಶ್ರೀ ಹೆಚ್.ಶಿವಪ್ಪ: ಮಾನ್ಯ ಅಧ್ಯಕ್ಷರೆ, ಇಲ್ಲಿ ಒಂದು ಮತನ್ನು ಹೇಳಬೇಕಾದರೆ ಪ್ರಾಸಿಕ್ಯೂಟರ್ ಮತ್ತು ಜಡ್ಜ್ ಇಬ್ಬರೂ ಒಂದೇ ಆದ ಹಾಗೆ ಆಯಿತು. Prosecutor will also be a Judge. That is not a fair dispensation of justice. Fair dispensation of justice cannot be expected at all.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಪ್ರಾಸಿಕ್ಯೂಟರ್ ಮತ್ತು ಜಡ್ಜ್ ಒಂದೇ ಎಂದು ಅಲ್ಲ, ಆ ರೀತಿ ಆಗುವುದಿಲ್ಲ, ಸುಮ್ಮನೆ ಯಾವುದಕ್ಕೋ ಯಾವುದನ್ನು ಹೋಲಿಸಬೇಡಿ, ಬೇಕಾದರೆ ನೀವು ಚರ್ಚೆ ಮಾಡಿ, ಉತ್ತರ ಕೊಡುತ್ತೇನೆ ನಂತರ ಒಂದು ತೀರ್ಮಾನ ತೆಗೆದುಕೊಳ್ಳೋಣ.

ಶ್ರೀ ಎಚ್.ಎನ್.ನಂಜೇಗೌಡ: ಮಾನ್ಯ ಅಧ್ಯಕ್ಷರೇ, ಮೆರಿಟ್ ಮೇಲೆ ಚರ್ಚೆ ಮಾಡುವುದಾದರೆ ಟೈಮ್ ಫಿಕ್ಸ್ ಮಾಡಿ, ಜಾಯಿಂಟ್ ಕಮಿಟಿಗೆ ಹಾಕಿದರೆ ವ್ಯಖಿಹಾರವೇ ಇಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಈ ನಾಲ್ಕಾರು ಇವೆ. ಅವು ಸರಳವಾಗಿವೆ ತಾವೆಲ್ಲರೂ ಒಪ್ಪುವಂತವು ಇವೆ, ಅವುಗಳ ಬಗ್ಗೆ ಚರ್ಚೆ ಮಾಡಿ, ಅವುಗಳನ್ನು ತಾವೆಲ್ಲರೂ ಒಪ್ಪಿಕೊಳ್ಳುತ್ತೀರಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಜಾಯಿಂಟ್ ಕಮಿಟಿಗೆ ಹಾಕಿ ಒಟ್ಟಾರೆ ಚರ್ಚೆ ಮಾಡೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನಾಲ್ಕು ಐದು ಚರ್ಚೆ ಮಾಡಬೇಕಾದರೆ ನನಗೆ ಒಂದು ತಾಸುಬೇಕು, ಏಕೆಂದರೆ ಇವಾಗ ರಿಸರ್ವೇಷನ್ ಪಾಲಿಸಿ ಇಲ್ಲ, ನಾಮಿನೇಷನ್ ಮಾಡಿದವರಿಗೆ ಓಟಿಂಗ್ ಅಧಿಕಾರ ಇಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಇದೆಲ್ಲವೂ ಆಗಬಾರದು ಎನ್ನುವುದು ನನ್ನ ಉದ್ದೇಶ, ಹಿಂದಿನ ವರದಿಯಲ್ಲಿ ಏನಿದೆ ಅವುಗಳನ್ನು ತಂದಿದ್ದೇನೆ, ಇಲ್ಲಿ ನಾನೇನೂ ಹೊಸದಾಗಿ ಏನೂ ತಂದಿಲ್ಲ, ಕೆಲವುಗಳನ್ನು ಮಾತ್ರ ಹೊಸದಾಗಿ ತಂದಿದ್ದೇನೆ. ಆಡಳಿತ ಸರಿಯಾಗಿ ನಡೆಯಲಿ ಎಂದು. ನಮ್ಮ ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ ತಂದಿದ್ದೇವೆ, ಅದು ಅರ್ಧ ಗಂಟೆಯಲ್ಲಿ ಚರ್ಚೆ ಮುಗಿಯುತ್ತದೆ. ಚರ್ಚೆ ಮಾಡಿ, ಸುಮ್ಮನೆ ಮುಂದಕ್ಕೆ ಹಾಕುವುದು ಬೇಡ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಒಂದು ತಿಂಗಳಲ್ಲಿ ಇದನ್ನು ಡಿಸ್‌ಪೋಸ್ ಮಾಡಬೇಕಾದರೆ ನೀವು 11 ಮಂದಿಯ ಸಣ್ಣ ಕಮಿಟಿ ನೇಮಕ ಮಾಡಿ. we are in favour of this, we will agree, within one month we will dispose of.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ಇದನ್ನು ನಾವು ನಂತರ ತರುತ್ತೇವೆ, ಸಧ್ಯಕ್ಕೆ ಇದನ್ನು ಮುಂದಕ್ಕೆ ಹಾಕುತ್ತೇವೆ.

ಶ್ರೀ ಜೆ.ಎಚ್.ಪಟೇಲ್ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಕೆಲವು ವಿಷಯಗಳನ್ನು ಚರ್ಚೆ ಮಾಡುವುದು ಅವಶ್ಯಕ ಎಂದು ತಾವು ಮತ್ತು ಎಲ್ಲರೂ ಹೇಳಿದ್ದೀರಿ, ಪ್ರಜಾತಂತ್ರದಲ್ಲಿ ವಿಶ್ವಾಸ ಇರುವ ನಾವು ಚರ್ಚೆ ಬೇಡ ಎಂದರೆ ತಪ್ಪಾಗುತ್ತದೆ. ಆದ್ದರಿಂದ ಚರ್ಚೆ ಮಾಡಿ ಆ ಮೇಲೆ ನೋಡೋಣ.

(ಗೊಂದಲ)

ಅಧ್ಯಕ್ಷರು: ಅದನ್ನು ಜಾಯಿಂಟ್ ಕಮಿಟಿಗೆ ಹಾಕುವುದರ ಬದಲು, ಸಬ್ಜೆಕ್ಟ್ ಕಮಿಟಿಗೆ ರೆಫರ್ ಮಾಡಬಹುದಲ್ಲಾ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಅದನ್ನು ಮುಂದಿನ ಅಧಿವೇಶನದಲ್ಲಿ ತರುತ್ತೇವೆ.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೆ, ಸಭೆಯ ಕೊನೆಯ ದಿನವಾದ ಇಂದಿಗೆ ನಾನು ನನ್ನ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ಒಂದು ತಿಂಗಳಾಯಿತು ಆ ರಾಜೀನಾಮೆಯನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಅಂಗೀಕಾರಕ್ಕೋಸ್ಕರ ಕೊಟ್ಟಿದ್ದೇನೆ. ರಾಜೀನಾಮೆ ಕೊಟ್ಟ ನಂತರ ನಾನು ನನ್ನ ಹೇಳಿಕೆಯನ್ನು ಈ ಸದನದಲ್ಲಿ ಹೇಳಬೇಕೆಂದು ಇಚ್ಛೆಪಡುತ್ತೇನೆ, ಅದಕ್ಕೆ ತಾವು ಅವಕಾಶವನ್ನು ಕೊಡಬೇಕೆಂದು ಪತ್ರವನ್ನು ಬರೆದಿದ್ದೇನೆ, ಸಭೆಯ ಅಧ್ಯಕ್ಷರಿಗೆ ನಿಯಮಾವಳಿಗಳ ಪ್ರಕಾರ ನನಗೆ ಅವಕಾಶ ಮಾಡಿ ಕೊಡುವ ಅಧಿಕಾರ ಇದೆ, ನೀವು ಅವಕಾಶವನ್ನು ಕೊಡುತ್ತೀರಿ ಎಂದು

ನಂಬುತ್ತೇನೆ, ದಯವಿಟ್ಟು ಅವಕಾಶವನ್ನು ಮಾಡಿ ಕೊಡಬೇಕು.

ಅಧ್ಯಕ್ಷರು: ನಿಮಗೆ ಖಂಡಿತವಾಗಿ ಅವಕಾಶ ಇದೆ. ಆದರೆ ನಿಯಮವನ್ನು ಮೀರಿ ನಾನು ಹೋಗಲು ಬರುವುದಿಲ್ಲ, ಇವತ್ತು ಅಧಿವೇಶನದ ಕೊನೆಯ ದಿನವಾದ್ದರಿಂದ ಅಜೆಂಡಾದಲ್ಲಿ ಇರುವ ಎಲ್ಲಾ ಕಾರ್ಯಕ್ರಮಗಳನ್ನು ಇವತ್ತೇ ಮುಗಿಸಬೇಕು. ಅಲ್ಲದೆ ತಾವು ಹೇಳಿಕೆ ನೀಡಲು ಅಪೇಕ್ಷಿಪಟ್ಟಿರುವುದರಿಂದ, ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ನಿಮ್ಮನ್ನು ನೀವು ರಕ್ಷಣೆ ಮಾಡಿಕೊಳ್ಳಲು ಅವಕಾಶ ಇರುತ್ತದೆ. ಆದ್ದರಿಂದ ಖಂಡಿತವಾಗಿ ಹೇಳಿಕೆ ನೀಡಲು ಅವಕಾಶ ಕೊಡುತ್ತೇನೆ. ಆದರೆ ನೀವು ಹೇಳಲಿರುವ ಹೇಳಿಕೆಯನ್ನು ಲಿಖಿತ ಮೂಲಕ ಕೊಡುತ್ತೀರಾ?

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೆ, ಕೆಲವು ವಿಚಾರಗಳನ್ನು ಹೇಳಬೇಕಾದರೆ ನಮ್ಮ ಅನ್ನಿಸಿಕೆಗಳನ್ನು ಹೇಳಬೇಕಾಗುತ್ತದೆ. ಯಾವ ವಿಚಾರಕ್ಕಾಗಿ ರಾಜೀನಾಮೆ ಕೊಟ್ಟಿ, ಅದರ ಹಿನ್ನೆಲೆ ಏನು, ಯಾವ ಕಾರಣಕ್ಕೆ ಎನ್ನುವುದನ್ನು ತಿಳಿಸಲು. ಇನ್ನು ಸ್ಟೇಟ್‌ಮೆಂಟ್ ತಯಾರು ಮಾಡಿಲ್ಲ ಆದ್ದರಿಂದ ನನಗೆ ಇಲ್ಲೇ ಹೇಳಲು ಅವಕಾಶ ಕೊಡಿ.

ಅಧ್ಯಕ್ಷರು: ದಯವಿಟ್ಟು ನನ್ನನ್ನು ಕ್ಷಮಿಸಿ. ಆ ವಿಷಯದಲ್ಲಿ ನಾನು ಅವಕಾಶ ಕೊಡಲು ಆಗುವುದಿಲ್ಲ. ಇಲ್ಲಿ ಟೈಮ್ ಲಿಮಿಟ್ ಇದೆ, ನಿಮ್ಮಲ್ಲಿ ತಯಾರಾದ ಸ್ಟೇಟಮೆಂಟ್ ಇದ್ದರೆ ಓದಿ.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೆ, ರಾಜೀನಾಮೆಗೆ ಸಂಬಂಧಪಟ್ಟ ವಿಚಾರಗಳನ್ನು ಹೇಳಲು ನನಗೆ ಅವಕಾಶ ಮಾಡಿ ಕೊಡಿ, ನನ್ನ ರಾಜೀನಾಮೆ ಪತ್ರವನ್ನು ಇಲ್ಲಿ ಓದುತ್ತೇನೆ.

ಅಧ್ಯಕ್ಷರು: ನಿಮಯಾವಳಿ ಏನು ಹೇಳುತ್ತದೆ ಎಂದರೆ, ಯಾರು ಸಭಾನಾಯಕರು ಇದ್ದಾರೆ, ಸಚಿವಸಂಪುಟದಲ್ಲಿ ಯಾರ ಸಹೋದ್ಯೋಗಿಗಳಾಗಿ ಕೆಲಸ ಮಾಡುತ್ತಿದ್ದೀರಿ, ಅವರಿಗೆ ತಾವು ಯಾವ ಪ್ರಮುಖವಾದ ವಿಚಾರಗಳನ್ನು ಪ್ರಸ್ತಾವ ಮಾಡಬೇಕೆಂದು ಮಾಡಿದ್ದೀರಾ, ಅದನ್ನು ಅವರಿಗೆ ತಿಳಿಸಿ ನಂತರ ನನಗೆ ತಿಳಿಸಿ. ತಾವು ಹೇಳುವುದಕ್ಕೆ ಸಮಯ ನಿಗದಿ ಇದ್ದರೆ ಅದಕ್ಕೆ ನಾನು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೇ, ನಾನು ಯಾವ ರೀತಿ ರಾಜೀನಾಮೆ ಕೊಟ್ಟಿ ಎನ್ನುವುದನ್ನು ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದೇನೆ, ಅದರ ಕಾಪಿಯನ್ನು ತಮಗೂ ಕೊಟ್ಟಿದ್ದೇನೆ, ಆ ವಿಚಾರಕ್ಕಾಗಿಯೇ ನಾನು ಇಲ್ಲಿ ಮಾತನಾಡಲು ಬಯಸುತ್ತೇನೆ.

MR. SPEAKER: I will provide you an opportunity. The restriction of time is waived off. You are permitted to make your statement. Before that, we will take this Bill.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನಾಗೇಗೌಡರು ಒಂದು ಮಹತ್ವದ ಸ್ಟೇಟ್‌ಮೆಂಟ್ ಮಾಡಲು ತಯಾರಾಗಿದ್ದಾರೆ. ಅದಕ್ಕೆ ತಾವು ಒಂದು ಅವಕಾಶವನ್ನು ಮಾಡಿ ಕೊಡಿ.

ಅಧ್ಯಕ್ಷರು: ನಾಗೇಗೌಡರು ತಾವು ಹೇಳಿದ ಸ್ಟೇಟ್‌ಮೆಂಟ್ ಮಾಡಲು ಯಾವಾಗಲೂ ತಯಾರಾಗಿಯೇ ಇರುತ್ತಾರೆ. ಇನ್ನೂ ಎಷ್ಟು ಬಿಲ್ಸ್ ಇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಇನ್ನೂ ಮೂರುನಾಲ್ಕು ಇವೆ ಲ್ಯಾಂಡ್ ರೆವಿನ್ಯೂ, ಲ್ಯಾಂಡ್ ರೆಜಿಸ್ಟ್ರೇಷನ್, ಲೇವಾದೇವಿ,

ಅಧ್ಯಕ್ಷರು: ಖರ್ಗೆಯವರೇ, ಇನ್ನು ಒಂದೆರಡು ಸ್ಟೇಟ್‌ಮೆಂಟ್ ಮಾಡಿಸುವುದು ಇದೆ, ಸೋಮಶೇಖರ್‌ಅವರು ಸ್ಟೇಟ್‌ಮೆಂಟ್ ಮಾಡುವುದು ಇದೆ, ಎಲ್ಲಾ ಕಾರ್ಯಕ್ರಮಗಳು ಇರುವುದರಿಂದ ಸ್ವಲ್ಪ ನಿಧಾನವಾಗುತ್ತದೆ. ಈ ಬಿಲ್ಸ್‌ಗಳನ್ನು ಮಾಡಿ ಮುಗಿಸೋಣವೇ, ನೀವು ವಿರೋಧ ಪಕ್ಷದವರು ಬೇಗನೇ ಬಿಲ್ಸ್ ಮುಗಿಸುವುದರಿಂದ ನಿಮಗೆ ಒಳ್ಳೆಯ ಹೆಸರು ಬರುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಇನ್ನು ಎಲ್ಲವೂ ತಮಗೆ ಬಿಟ್ಟದ್ದು. ನೀವು ಯಾವಾಗಬೇಕಾದರೆ ಕರೆಯಿರಿ.

ಅಧ್ಯಕ್ಷರು: ಈಗ ಪರ್ಯಾಲೋಚನೆ ಪ್ರಸ್ತಾವ ಆಗಿದೆಯೇ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಯಾವುದು ಆಗಿದೆ, ಯಾವುದು ಇಲ್ಲ ಎನ್ನುವುದನ್ನಾದರೂ ಸ್ವಲ್ಪ ಸರಿಯಾಗಿ ಹೇಳಿ.

ಅಧ್ಯಕ್ಷರು: Explain ಮಾಡಿ.

(ಐ) ಕರ್ನಾಟಕ ಗಿರಿವಿದಾರರ (ತಿದ್ದುಪಡಿ) ವಿಧೇಯಕ 1997 ಪರ್ಯಾಲೋಚನ ಪ್ರಸ್ತಾವ

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು): ಸನ್ಮಾನ್ಯ ಅಧ್ಯಕ್ಷರೇ,

1997ನೇ ಸಾಲಿನ ಕರ್ನಾಟಕ ಗಿರಿವಿದಾರರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೆ, ಪಾನ್ ಬ್ರೋಕರ್ಸ್‌ರಿಗೆ 100 ರೂ. ಇದ್ದರೆ 1000 ರೂ. ಮಾಡುತ್ತೇನೆ, ಅವರಿಗೆ 5 ವರ್ಷ ಮಾಡಿಕೊಡುತ್ತೇನೆ, 5 ವರ್ಷದ ಒಮ್ಮೆಗೆ ಅವರು ಲೈಸೆನ್ಸ್ ತೆಗೆದುಕೊಳ್ಳಲು ಅವಕಾಶ

ಮಾಡಿಕೊಡುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''1997ನೇ ಸಾಲಿನ ಕರ್ನಾಟಕ ಗಿರಿವಿದಾರರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಅಧ್ಯಕ್ಷರು: ''ಖಂಡ 2 ಮತ್ತು 3 ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ಮತ್ತು 3 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 4ಕ್ಕೆ ತಿದ್ದುಪಡಿ:

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರಿ ಸಚಿವರು): ಮಾನ್ಯ ಅಧ್ಯಕ್ಷರೇ, ಖಂಡ 4ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

ಸದರಿ ವಿಧೇಯಕದ 4ನೇ ಖಂಡಕ್ಕೆ ಈ ಮುಂದಿನದನ್ನು ಪ್ರತಿಯೊಜಿಸತಕ್ಕದ್ದು, ಎಂದರೆ:

''**4.4ನೇ ಪ್ರಕರಣದ ತಿದ್ದುಪಡಿ:** ಮೂಲ ಅಧಿನಿಯಮದ 4ನೇ ಪ್ರಕರಣದಲ್ಲಿ ಪರಂತುಕವನ್ನು ಬಿಟ್ಟು (5)ನೇ ಉಪ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:

(5) ಲೈಸೆನ್ಸನ್ನು ಮಂಜೂರು ಮಾಡಲು ಅಥವಾ ನವೀಕರಿಸಲು ನೀಡುವ ಪ್ರತಿಯೊಂದು ಅರ್ಜಿಯೊಂದಿಗೆ ಈ ಕೆಳಕಂಡ ದರಗಳಲ್ಲಿ ಶುಲ್ಕವು ಇರತಕ್ಕದ್ದು:

(ಎ) ಗಿರವಿದಾರನು ವ್ಯವಹಾರವನ್ನು ನಡೆಸಬೇಕಾದಂಥ ಸ್ಥಳವು ಒಂದಕ್ಕಿಂತ ಹೆಚ್ಚಾಗಿಲ್ಲದಿದ್ದರೆ	ಎರಡು ಸಾವಿರದ ಐನೂರು ರೂಪಾಯಿಗಳು

(ಬಿ) ಗಿರವಿದಾರನು ವ್ಯವಹಾರವನ್ನು ಒಂದಕ್ಕಿಂತ ಹೆಚ್ಚು ಸ್ಥಳದಲ್ಲಿ ನಡೆಸಬೇಕಾಗಿದ್ದರೆ	ವ್ಯವಹಾರದ ಮುಖ್ಯ ಸ್ಥಳಕ್ಕೆ ಎರಡು ಸಾವಿರದ ಐನೂರು ರೂ.ಗಳು ಮತ್ತು ಇತರ ಪ್ರತಿಯೊಂದು ಸ್ಥಳಕ್ಕೆ ಒಂದು ಸಾವಿರದ ಇನ್ನೂರೈವತ್ತು ರೂಪಾಯಿಗಳು''

ಪ್ರಸ್ತಾವ ಮಂಡಿಸಲಾಯಿತು.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

ಸದರಿ ವಿಧೇಯಕದ 4ನೇ ಖಂಡಕ್ಕೆ ಈ ಮುಂದಿನದನ್ನು ಪ್ರತಿ ಯೋಜಿಸತಕ್ಕದ್ದು, ಎಂದರೆ:

''**4.4ನೇ ಪ್ರಕರಣದ ತಿದ್ದುಪಡಿ:** ಮೂಲ ಅಧಿನಿಯಮದ 4ನೇ ಪ್ರಕರಣದಲ್ಲಿ ಪರಂತುಕವನ್ನು ಬಿಟ್ಟು (5)ನೇ ಉಪ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:

(5) ಲೈಸೆನ್ಸನ್ನು ಮಂಜೂರು ಮಾಡಲು ಅಥವಾ ನವೀಕರಿಸಲು ನೀಡುವ ಪ್ರತಿಯೊಂದು ಅರ್ಜಿಯೊಂದಿಗೆ ಈ ಕೆಳಕಂಡ ದರಗಳಲ್ಲಿ ಶುಲ್ಕವು ಇರತಕ್ಕದ್ದು:

(ಎ) ಗಿರವಿದಾರನು ವ್ಯವಹಾರವನ್ನು ನಡೆಸಬೇಕಾದಂಥ ಸ್ಥಳವು ಒಂದಕ್ಕಿಂತ ಹೆಚ್ಚಾಗಿಲ್ಲದಿದ್ದರೆ	ಎರಡು ಸಾವಿರದ ಐನೂರು ರೂಪಾಯಿಗಳು
(ಬಿ) ಗಿರವಿದಾರನು ವ್ಯವಹಾರವನ್ನು ಒಂದಕ್ಕಿಂತ ಹೆಚ್ಚು ಸ್ಥಳದಲ್ಲಿ ನಡೆಸಬೇಕಾಗಿದ್ದರೆ	ವ್ಯವಹಾರದ ಮುಖ್ಯ ಸ್ಥಳಕ್ಕೆ ಎರಡು ಸಾವಿರದ ಐನೂರು ರೂ.ಗಳು ಮತ್ತು ಇತರ ಪ್ರತಿಯೊಂದು ಸ್ಥಳಕ್ಕೆ ಒಂದು ಸಾವಿರದ ಇನ್ನೂರೈವತ್ತು ರೂಪಾಯಿಗಳು''

ಪ್ರಸ್ತಾವ ನವೀಕರಿಸಲ್ಪಟ್ಟಿತು.

ಖಂಡ 4 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಖಂಡ 4 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ''

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 4 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 5 ಮತ್ತು 6

ಅಧ್ಯಕ್ಷರು: ''ಖಂಡ 5 ಮತ್ತು 6 ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 5 ಮತ್ತು 6 ಎರಡೂ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್.ಎಸ್.ಪಾಟೀಲ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೇ, 1997ನೇ ಸಾಲಿನ ಕರ್ನಾಟಕ ಗಿರವಿದಾರರ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''1997ರ ಕರ್ನಾಟಕ ಗಿರವಿದಾರರ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಒ) ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕ 1997.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೇ, 1997ನೇ ಸಾಲಿನ ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೇ, 1960ನೇ ಇಸವಿಯಿಂದ ಒಂದು ವರ್ಷಕ್ಕೆ ಲೇವಾದೇವಿದಾರರಿಗೆ ಒಂದು ನೂರು ರೂ.ಗಳ ಫೀ ಇತ್ತು. ಅದನ್ನು ಒಂದು ಸಾವಿರ ರೂ.ಗಳಿಗೆ ಏರಿಸಲಾಗಿದೆ. ಅವರು ಲೈಸೆನ್ಸ್ ರಿನ್ಯೂಗೆ ಪ್ರತಿ ವರ್ಷ ಬರುತ್ತಿದ್ದರು. ಅವರ ಇಚ್ಛೆಯಂತೆ ಲೈಸೆನ್ಸಿನ ಅವಧಿಯನ್ನು ಒಂದು ವರ್ಷದಿಂದ ಐದು ವರ್ಷಗಳಿಗೆ ಹೆಚ್ಚಿಸಲಾಗಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಎಲ್ಲಾ ಐದೈದು ವರ್ಷ ಮಾಡಿದ್ದಾರೆ, ಸ್ಟಾಫ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ಲೈಸೆನ್ಸ್ ಐದು ವರ್ಷ ಮಾಡಿದ್ದಾರೆ, ಮನಿ ಲೆಂಡಿಂಗ್ ಐದು ವರ್ಷ ಮಾಡಿದ್ದಾರೆ, ಪಾನ್ ಬ್ರೋಕರ್ಸ್ ಐದು ವರ್ಷ ಮಾಡಿದ್ದಾರೆ, ಅದೂ ಅಲ್ಲದೇನೇ ನಾನು ಕೇಳುವುದೇನೆಂದರೆ, ಇದರಲ್ಲಿ ಕ್ಲಾಸ್(2) ಏನಿದೆ ನೋಡಿ,

"-to Provide for calculating the amount for security deposit on the amount invested and not on the amounts lent."

ಅಧ್ಯಕ್ಷರೇ, ಇದರಲ್ಲಿ ಏನಾಗುತ್ತದೆ, ಎಂದರೆ, ಒಬ್ಬರು ಕೊಡತಕ್ಕಂಥವರ ಸಾಲ ಟರ್ನ್ ಓವರ್ ಮೇಲೆ ನೀವು ಹಾಕಿದರೆ ಹೆಚ್ಚಿನ ಹಣ ಸರ್ಕಾರಕ್ಕೆ ಬರುತ್ತದೆ. ಅದಕ್ಕೇ ನಾನು ಕೇಳುತ್ತಿದ್ದೇನೆ; ಆದರೆ ನೀವೇನು ಇನ್‌ವೆಸ್ಟ್‌ಮೆಂಟ್ ಅಂದರೆ ಬೇಸಿಕ್ ಕ್ಯಾಪಿಟಲ್ ಎನ್ನುತ್ತೀರಿ, ಆ ಅಂಶದ ಬಗ್ಗೆ ನೀವು ಸರಿಯಾಗಿ ಹೇಳಿ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಆ ಟರ್ನ್ ಓವರ್ ಮೇಲಿನಿಂದ ಡಿಪಾಸಿಟ್ ಇಡುವ ಬದಲು ಅವರು ಎಷ್ಟು ಇನ್‌ವೆಸ್ಟ್ ಮಾಡಿದ್ದಾರೋ, ಅದರ ಮೇಲೆ ನಾವು ಡಿಪಾಸಿಟ್ ಇಡುವಂತೆ ವ್ಯವಸ್ಥೆ ಮಾಡಿದ್ದೇವೆ. ನಮ್ಮಲ್ಲಿ ಡಿಪಾಸಿಟ್ ಇಟ್ಟುಕೊಳ್ಳುವುದಷ್ಟೇ ಅದು. ಅದರಿಂದ ತೊಂದರೆಯಾಗುವುದಿಲ್ಲ, ಸರಿಯಾಗುತ್ತದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ): ಮಾನ್ಯ ಅಧ್ಯಕ್ಷರೇ, ಯಾರೇ ಆಗಲಿ ಇನ್ನೊಬ್ಬರ ಹಣವನ್ನು ಸೆಕ್ಯೂರಿಟಿ ಡಿಪಾಸಿಟ್ ಎಂದು ಎಷ್ಟೋ ಸಾವಿರ ಇಟ್ಟುಕೊಳ್ಳಬಹುದೆಂದು ಕಾನೂನು ಇಲ್ಲ. ಕೋರ್ಟ್‌ನಲ್ಲಿ ಈಗಾಗಲೇ ಆರ್ಡರ್ ಆಗಿದೆ, ಅದನ್ನು ಓವರ್ ಕಮ್ ಮಾಡುವುದಕ್ಕೋಸ್ಕರ ತಾವು ಇದನ್ನು ತಂದಿದ್ದೀರಿ, ಅದು ಆಗುವುದಿಲ್ಲ ಮತ್ತು ನಿಲ್ಲುವುದಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಆ ಕಾರಣದಿಂದ ಅದು ಬಡ್ಡಿ ಇಲ್ಲದೇ ಡಿಪಾಸಿಟ್ ಇಡಬೇಕೆಂದು ಹಾಕಿದ್ದೇವೆ. ಕೋರ್ಟ್‌ನವರು ಕೋಟಿಗಟ್ಟಲೆ ಅರಿಯರ್ಸ್ ಬಡ್ಡಿ ಕೊಡಬೇಕೆಂದು ಸರ್ಕಾರಕ್ಕೆ ಹೇಳಿದರು. ಆ ಕಾರಣದಿಂದ ಬಡ್ಡಿ ಇಲ್ಲದೇ ನಮ್ಮಲ್ಲಿ ಡಿಪಾಸಿಟ್ ಇಡಬೇಕೆಂದು ಹಾಕಿದ್ದೇವೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''1997ನೇ ಸಾಲಿನ ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 8ರವರೆಗೆ

ಅಧ್ಯಕ್ಷರು: ''ಖಂಡ 2 ರಿಂದ 8ರವರೆಗೆ ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 8ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ

ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೇ, 1997ನೇ ಸಾಲಿನ ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ), ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''1997ರ ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು: ಈಗ ಒಂದು ಕೆಲಸ ಮಾಡೋಣ, ಮಾನ್ಯ ಸೋಮಶೇಖರ್‌ರವರಿಗೆ ಹೇಳಿಕೆ ನೀಡಲು ನಾನು ಈಗ ಅವಕಾಶ ಕೊಡುತ್ತೇನೆ.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಅಜೆಂಡಾದ ಐಟಂ ನಂ.10ರಲ್ಲಿ ಎ.ಪಿ.ಎಂ.ಸಿ ಕಾಯ್ದೆ ಅಮೆಂಡ್‌ಮೆಂಟ್ ಬಿಲ್ ಇತ್ತು. ಅದು ರೈತರಿಗೆ ಮತ್ತು ದಲಾಲರಿಗೆ ಬಹಳಷ್ಟು ಅನುಕೂಲವಾಗುವಂತಹ ಬಿಲ್ ಆಗಿತ್ತು. ಅದನ್ಯಾಕೆ ಸರ್ಕಾರದವರು ಸಭೆ ಮುಂದೆ ಇಡಲಿಲ್ಲ?

ಅಧ್ಯಕ್ಷರು: ಮಾನ್ಯ ಎಸ್.ಎಸ್.ಪಾಟೀಲರೇ, ಎ.ಪಿ.ಎಂ.ಸಿ. ಅಮೆಂಡ್‌ಮೆಂಟ್ ಬಿಲ್ ಅನ್ನು ತಾವು ಈಗ ಇಂಟ್ರಡ್ಯೂಸ್ ಮಾಡುತ್ತೀರಾ?

ಶ್ರೀ ಎಸ್.ಎಸ್.ಪಾಟೀಲ್: ಇಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ರೈತರಿಗೆ ಅನುಕೂಲವಾಗತಕ್ಕ ಆ ಬಿಲ್ ಅನ್ನು ನೀವ್ಯಾಕೆ ಇಂಟ್ರಡ್ಯೂಸ್ ಮಾಡುತ್ತಿಲ್ಲ? ನೀವು ಅದನ್ನು ಈಗಾಗಲೇ ಕ್ಯಾಬಿನೆಟ್‌ನಲ್ಲಿ ಅಪ್ರೂವ್ ಮಾಡಿಸಿದ್ದೀರಿ.

ಶ್ರೀ ಎಸ್.ಎಸ್.ಪಾಟೀಲ್: ಚರ್ಚೆಯಾಗಲಿ ಎಂಬ ದೃಷ್ಟಿಯಿಂದ ಈಗ ಅದನ್ನು ತರುತ್ತಿಲ್ಲ. ಈ ವಿಧೇಯಕದ ಬಗ್ಗೆ ಬಹಳ ವಿವರವಾಗಿ ಚರ್ಚೆಯಾಗಬೇಕು ಎಂಬ ದೃಷ್ಟಿಯಿಂದ ಈಗ ತರುತ್ತಿಲ್ಲ. ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ ಮತ್ತು ಎ.ಪಿ.ಎಂ.ಸಿ. ವಿಧೇಯಕ ಎರಡೂ ಒಂದೇ ರೀತಿ ಇವೆ. ಎರಡೂ ಕೂಡಿ ಒಟ್ಟಿಗೇ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ರೈತರಿಗೆ ಅನುಕೂಲವಾಗತಕ್ಕ ಆ ಬಿಲ್ ಅನ್ನು ತನ್ನಿ, ನಾವು ಸರ್ವಾನುಮತದಿಂದ ಅದನ್ನು ಅಪ್ರೂವ್ ಮಾಡೋಣ. ನಾವು ಹೇಳಿದ್ದಕ್ಕೆ ಏನೂ ಪ್ರತಿಕ್ರಿಯಿಸದೆ ಮಾನ್ಯ ಮುಖ್ಯಮಂತ್ರಿಗಳು ದೇವರು ಕುಳಿತಂತೆ ಕುಳಿತಿದ್ದಾರಲ್ಲಾ.

ಅಧ್ಯಕ್ಷರು: ಒಂದು ಮಸೂದೆಗೆ ಚರ್ಚೆ ಎಂದರೆ ಎರಡು ಹಂತ ಇರುತ್ತದೆ. ಅದನ್ನು ಮಾನ್ಯ ಪಾಟೀಲರು ಸರಿಯಾಗಿ ಹೇಳಲಿಲ್ಲ. ಯಾವುದೇ ಒಂದು ಮಸೂದೆಯನ್ನು ಅಥವಾ ತಿದ್ದುಪಡಿ ಮಸೂದೆಯನ್ನು ಮಂಡಿಸಬೇಕಾಗಿದ್ದರೆ ಆಡಳಿತ ಪಕ್ಷದ ಶಾಸಕಾಂಗ ಪಕ್ಷದ ಸಭೆಯಲ್ಲಿ ಆ ಬಗ್ಗೆ ಚರ್ಚೆ ಮಾಡಿ ಅವರು ಸಚಿವ ಸಂಪುಟದಲ್ಲಿ ಅಪ್ರೂವ್ ಮಾಡಿಸಿಕೊಂಡು ನಂತರ ಸದನದ ಮುಂದೆ ತರಲಾಗುತ್ತದೆ. ಸದನದ ಮುಂದೆ ಅವರು ಬಿಲ್ ಏನೋ ತಂದಿದ್ದಾರೆ. ಬಹುಶಃ ನನಗೆ ಅವರ ಸ್ನೇಹಿತರು ಮತ್ತು ಲಾ ಮಿನಿಸ್ಟರ್ ಬಂದು ಹೇಳಿದ್ದರ ಅನ್ವಯ, ಅವರ ಶಾಸಕಾಂಗದ ಪಕ್ಷದ ಸಭೆಯಲ್ಲಿ ಅದು ಚರ್ಚೆಯಾಗಿಲ್ಲ. ಅವರು ಚರ್ಚೆಯಾಗಬೇಕೆಂದು ಸುಮ್ಮನೆ ಇಲ್ಲಿ ಹೇಳಿದರು ಅಷ್ಟೆ. ಅವರ ಪಕ್ಷದ ಶಾಸಕರೇ ಅವರ ಶಾಸಕಾಂಗ ಪಕ್ಷದ ಸಭೆಯಲ್ಲಿ ಇದು ಪೂರ್ಣ ಮಟ್ಟದಲ್ಲಿ ಚರ್ಚೆಯಾಗಬೇಕೆಂದು ಅಪೇಕ್ಷೆ ಪಟ್ಟಿದ್ದರಿಂದ ಸರ್ಕಾರದವರು ಆ ಇಂಗಿತವನ್ನು ನನ್ನಲ್ಲಿ ವ್ಯಕ್ತ ಮಾಡಿದರು. ನಾವು ಈಗ ಸದ್ಯಕ್ಕೆ ಅದನ್ನು ಪ್ರೆಸ್ ಮಾಡುವುದು ಬೇಡ. ನಾನು ಅವರನ್ನು ಕೇಳಿದೆ, ಬಿಲ್ ಅನ್ನು ಇಂಟ್ರಡ್ಯೂಸ್ ಮಾಡುತ್ತೀರಾ? ಇಂಟ್ರಡ್ಯೂಸ್ ಮಾಡಿ ಈ ಸದನದ ಸೊತ್ತು ಆಗುವುದಕ್ಕೆ ಬಿಟ್ಟು ಆನಂತರ ಮಾಡುತ್ತೀರಾ ಎಂದು ಕೇಳಿದೆ. ಆಗ ಅವರು ಇಲ್ಲ, ನಾವು ನಂತರ ಇಂಟ್ರಡ್ಯೂಸ್ ಮಾಡುತ್ತೇವೆ ಎಂದು ಹೇಳಿದರು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ರೈತರಿಗೆ ಅನುಕೂಲವಾಗುವಂತಹ ಆ ಬಿಲ್ ಅನ್ನು ತರಲಿಕ್ಕೆ ಇವರಿಗೆ ಏನಾಗಿದೆ? ನಾವೆಲ್ಲಾ ಒಮ್ಮತದಿಂದ ಈ ವಿಧೇಯಕ ತನ್ನಿ ಎಂದು ಹೇಳಿದರೂ ನೀವು ತರಲಿಲ್ಲವೆಂದರೆ ಹೇಗೆ?

ಅಧ್ಯಕ್ಷರು: ಮಾನ್ಯ ಖರ್ಗೆಯವರೇ, ವಿರೋಧ ಪಕ್ಷದವರೆಲ್ಲರ ಪರವಾಗಿ ನೀವು ಯುನಾನಿಮಸ್ ಆಗಬಹುದು. ಅವರ ಪಕ್ಷದ ಶಾಸಕರ ಪರವಾಗಿ ನೀವು ಹೇಗೆ ಯುನಾನಿಮಸ್ ಆಗುತ್ತೀರಿ? ತಮಗೆ ಏನು ಹೇಳಬೇಕೆಂದು ಅನ್ನಿಸುತ್ತದೋ ಅದನ್ನು ಹೇಳುವ ಹಕ್ಕು ತಮಗಿರುತ್ತದೆ. ಅದಕ್ಕೆ ನಾನು ಅಡ್ಡ ಬರುವುದಿಲ್ಲ. It is not the first time that such a thing has happened. 1985-89 ರವರೆಗೆ ನಿಜಲ್ಲಾ ಇಲ್ಲಿ ಇದ್ದಾಗ, ತಾವು ವಿರೋಧ ಪಕ್ಷದಲ್ಲಿದ್ದು, ಮಾನ್ಯ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ Codification of Privilages of Legislators Bill ಇಲ್ಲಿ ಇಂಟ್ರಡ್ಯೂಸ್ ಮಾಡಿದರು. ನಾವೆಲ್ಲಾ ಪಾರ್ಟಿ ಮೀಟಿಂಗ್‌ನಲ್ಲಿ ಗದ್ದಲ ಮಾಡಿದ ಮೇಲೆ then the Bill was withdrawn.

ನಾನೇನು ಹೇಳುತ್ತೇನೆ ಎಂದರೆ,.... I leave it to the House. ಸಭಾ ನಾಯಕರು ಏನು ಹೇಳುತ್ತಾರೆ, ಮಂತ್ರಿಗಳು ಏನು ಹೇಳುತ್ತಾರೆ, ತಾವು ಏನು ಹೇಳುತ್ತೀರೋ, ತಮ್ಮ ನಿರ್ಣಯಕ್ಕೆ ನಾನು ಬದ್ಧನಾಗಿದ್ದೇನೆ. However, I am telling you that this is not the first time that such a thing has hapened.

6.50 ಪಿ.ಎಂ

+ ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಚರ್ಚೆಯನ್ನು ಮಾಡಬೇಕು, ನಾವೆಲ್ಲರೂ ಈ ತಿದ್ದುಪಡಿಯನ್ನು ಒಪ್ಪುತ್ತೇವೆ, ಇದು ಈಗಲೇ ಆಗಬೇಕೆಂದು ಹೇಳುತ್ತೀರಲ್ಲಾ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾವು ಈ ತಿದ್ದುಪಡಿಯನ್ನು ಸ್ವಾಗತ ಮಾಡುತ್ತೇವೆ.

ಶ್ರೀ ಜೆ.ಹೆಚ್.ಪಟೇಲ್: ಮಾನ್ಯ ಅಧ್ಯಕ್ಷರೇ, ಸರ್ಕಾರಕ್ಕೆ ರೆಸ್ಪಾನ್ಸಿಬಿಲಿಟಿ, ಡ್ಯೂಟಿ ಇಲ್ವಾ? ನಾವೇ ಸ್ವಯಂ ವಿಚಾರವನ್ನು ಮಾಡಿ, ಈಗ ಈ ತಿದ್ದುಪಡಿಯನ್ನು ಪ್ರೆಸ್ ಮಾಡುವುದು ಬೇಡವೆಂದು ಕೇಳಿಕೊಂಡಿದ್ದೇವೆ. ಆದರೆ ನೀವು ಈಗಲೇ ತಿದ್ದುಪಡಿಯನ್ನು ತರಬೇಕೆಂದರೆ, ನಾವು ಚರ್ಚೆಗೆ ಇಟ್ಟಾಗ ಮಾತ್ರ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಅದರ ಮೇಲೆ ಮಾತನಾಡುವಂತಹ ಅಧಿಕಾರ ಬರುವುದು. ಒಪ್ಪಿಕೊಳ್ಳುವುದು, ಬಿಡುವುದು ಬೇರೆ. ಪ್ರಸ್ತಾವನೆಯನ್ನು ಮಾಡುವುದು ಬೇರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಬಿಲ್‌ನ್ನು ಇಲ್ಲಿ ತೆಗೆದುಕೊಳ್ಳಿ ಎಂದು ಹೇಳುವುದಕ್ಕೆ ನನಗೆ ಹಕ್ಕು ಇದೆ. This has become the property of the HOUSE. So, I am requesting to take it up. We will leave it to their discretion.

MR. SPEAKER: I am on your side.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಬಯಲು ಸೀಮೆಯ 74ಜನ ಶಾಸಕರು ಈ ಸದನದ ಸದಸ್ಯರಾಗಿದ್ದಾರೆ ಅವರುಗಳೆಲ್ಲರೂ ಎಲ್ಲಿಗೆ ಹೋದರು? ರೈತರ ಪರವಾಗಿ ನೇರವಾಗಿ ಬರುತ್ತಿದ್ದರಲ್ಲಾ.

ಅಧ್ಯಕ್ಷರು: ನಾನೂ ಸಹ ನಿಮ್ಮ ಕಡೆ ಇದ್ದೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಬಯಲು ಸೀಮೆಯ ಶಾಸಕರುಗಳು ಎಲ್ಲಿಗೂ ಸಹ ಹೋಗಿಲ್ಲ ಇಲ್ಲಿಯೇ ಇದ್ದೇವೆ.

ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ): ಮಾನ್ಯ ಅಧ್ಯಕ್ಷರೇ, ವಿಷಯ ಸಮಿತಿಯವರು ಎಲ್ಲವನ್ನೂ ಪರಿಶೀಲನೆ ಮಾಡಿ ಶಿಫಾರಸ್ಸು ಮಾಡಿದ್ದಾರೆ. ಇದು ಮಾರ್ವಾಡಿಗಳಿಗೆ ಸಿಗುವಂತಹ ಕಮೀಷನ್‌ನ್ನು ತೆಗೆದು ಹಾಕುವಂಥದ್ದು, ಅಷ್ಟೇ. ಎ.ಪಿ.ಎಂ.ಸಿ. ಮೂಲಕ ಚೆಕ್ ಕೊಟ್ಟು ರೈತರಿಗೆ ಅನುಕೂಲವನ್ನು ಮಾಡುವಂಥದ್ದು. ಇದರಲ್ಲಿ ಅವರು ನಾವು ನೀವು ಯಾರು ವಿಶೇಷವಾಗಿ ಕನ್ಸಿಡರ್ ಮಾಡುವಂತಹ ಅವಶ್ಯಕತೆ ಇಲ್ಲ. ಪಟ್ಟಭದ್ರ ಹಿತಾಸಕ್ತಿ ಇದ್ದರೆ ಈ ಆ್ಯಕ್ಟ್ ಬೇಡ. ಇದ್ದದ್ದು ನಡೆದುಕೊಂಡು ಹೋಗಲಿ. ತೆಗೆದುಹಾಕುತ್ತೇವೆಂದರೆ ಆ್ಯಕ್ಟ್ ಬರಬಹುದು. ಅಷ್ಟೇ ಇರುವಂಥದ್ದು, ಇದರಲ್ಲಿ ಏನು ಗುಟ್ಟು ಗುಮಾನಿ ಇಲ್ಲ. ಒಂದೇ ಸೆಕ್ಷನ್. ಈಗ ಹಾವೇರಿಯಲ್ಲಿ 15 ಪರ್ಸೆಂಟ್ ಕಮೀಷನ್ ವಸೂಲು ಮಾಡುತ್ತಾರೆ....

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಅವರು ಹೇಳಿದ ಹಾಗೆ ನಾವು ಅದನ್ನು ಮಾಡಬೇಕೆಂದು ಹೇಳುತ್ತೇವೆ. ಅದನ್ನು ಬಿಡುವುದಿಲ್ಲ. ಮಾರ್ವಾಡಿಗಳು ಏನಾದರೂ ತಕರಾರು ಮಾಡಿದರೆ ನಾವು ಅದಕ್ಕೆ ತಯಾರಿಯನ್ನು ಮಾಡಿಕೊಂಡು ಮಾಡಬೇಕಾಗುತ್ತದೆ. ನಾಳೆಯ ದಿವಸ ಟೆಂಡರ್ ಹಾಕುವುದಿಲ್ಲವೆಂದು ಮಾಡಿದರೆ ಅದಕ್ಕೆ ನಾವು ಬೇರೆ ತಯಾರು ಮಾಡಿಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ನಾವು ಎಲ್ಲಾ ರೆಡಿಯನ್ನು ಮಾಡಿಕೊಳ್ಳುತ್ತೇವೆ. ಇಲ್ಲದಿದ್ದರೆ ಸರ್ಕಾರದಲ್ಲಿ ನಾಳೆ ದೊಂಬರಾಟ ಆದೀತು. ರೈತರ ಮಾಲನ್ನು ಅವರು ಖರೀದಿ ಮಾಡುವುದಕ್ಕೆ ಬರದಿದ್ದಾಗ ನೀವು ಏನು ಮಾಡಿದ್ದೀರಿ ಎಂದಾಗ ನಾವು ತಯಾರಿ ಮಾಡಿಕೊಳ್ಳುತ್ತೇವೆ. ಆ ದೃಷ್ಟಿಯಿಂದ ಮುಂದಕ್ಕೆ ಹಾಕಿದ್ದೇವೆ. ಬೇರೆ ಉದ್ದೇಶದಿಂದ ಅಲ್ಲ. ನಮ್ಮದೂ ಸಹ ಅದೇ ಉದ್ದೇಶವಾಗಿದೆ. ನಿಜವಾಗಿಯೂ ರೈತರ ಹಿತರಕ್ಷಣೆಯನ್ನು ಮಾಡಬೇಕಾದುದು ನಮ್ಮ ಸರ್ಕಾರದ ಜವಾಬ್ದಾರಿಯಾಗಿದೆ.

ಶ್ರೀ ವಾಟಾಳ್ ನಾಗರಾಜ್: ಇಲ್ಲಿಯವರೆಗೆ ತಾವು ಏಕೆ ತಯಾರಾಗಿಲ್ಲ?

(5) ಪ್ರಕಟಣೆ

ಅಧ್ಯಕ್ಷರು: ಪ್ರಕಟಣೆಯು ಇದೆ ಅದನ್ನು ಓದುತ್ತೇನೆ. ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು ದಿನಾಂಕ 12ನೇ ಸೆಪ್ಟೆಂಬರ್, 1997 ರಂದು ಈ ಕೆಳಕಂಡ ವಿಧೇಯಕಗಳಿಗೆ ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ.

1. ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು

ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ವಿಧೇಯಕ, 1997

2. ಕರ್ನಾಟಕ ಕೈಗಾರಿಕಾ ಸ್ಥಾಪನೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾದಿನಗಳು) (ತಿದ್ದುಪಡಿ) ವಿಧೇಯಕ 1997

3. ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ, 1997

6. ಹೇಳಿಕೆ

(6) ವಿಷಯ (ಅ) ಶ್ರೀ ಬಿ.ಸೋಮಶೇಖರ್‌ರವರು ಉನ್ನತ ಶಿಕ್ಷಣ ಸಚಿವರ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಗ್ಗೆ

+ ಶ್ರೀ ಬಿ.ಸೋಮಶೇಖರ್ (ಮಳವಳ್ಳಿ): ಮಾನ್ಯ ಸಭಾಧ್ಯಕ್ಷರೇ, ಮೊದಲನೆಯದಾಗಿ ನಾನು ನಿಮಗೆ ಒಂದು ದಿವಸ ಮುಂಚಿತವಾಗಿ ನಿಮಗೆ ನೋಟೀಸ್ ಕೊಟ್ಟು ಹೇಳಿಕೆಯನ್ನು ಮಾಡುವುದಕ್ಕೆ ಅವಕಾಶವನ್ನು ತೆಗೆದುಕೊಳ್ಳಬೇಕಾಗಿತ್ತು. ಆದರೂ ಸಹಿತ ತಮ್ಮ ಅಧಿಕಾರವನ್ನು ಚಲಾಯಿಸಿ, ಕೆಲವೇ ಒಂದೆರಡು ಗಂಟೆಗಳಲ್ಲಿ ನನ್ನ ಹೇಳಿಕೆಯನ್ನು ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿರುತ್ತೀರಿ. ಅದಕ್ಕೆ ತಮಗೆ ನಾನು ಮೊದಲನೆಯದಾಗಿ ಅಭಾರಿಯಾಗಿದ್ದೇನೆ. ಹಾಗೂ ಕೃತಜ್ಞನಾಗಿದ್ದೇನೆ. ನಮ್ಮ ಸರ್ಕಾರದಲ್ಲಿ ಶ್ರೀಮಾನ್ ಜೆ.ಹೆಚ್.ಪಟೇಲ್ ನಾಯಕತ್ವದಲ್ಲಿ ಉನ್ನತ ಶಿಕ್ಷಣ ಸಚಿವನಾಗಿ ಒಂದು ವರ್ಷ ಮೂರು ತಿಂಗಳು ಆಯಿತು. ಆ ಒಂದು ವರ್ಷದ 3 ತಿಂಗಳಲ್ಲಿ ನನ್ನ ಅಧಿಕಾರ ಅವಧಿಯಲ್ಲಿ ನನ್ನ ಕೈಮೀರಿ, ಶಕ್ತಿಯನ್ನು ಮೀರಿ ಕೆಲಸವನ್ನು ಮಾಡಿಕೊಂಡು ಬಂದಿದ್ದೇನೆ. ಈ ನಡುವೆ ಅನೇಕ ವಿವಾದಗಳು, ಅನೇಕ ಸಮಸ್ಯೆಗಳು ನಮ್ಮ ಸರ್ಕಾರದ ಮುಂದೆ ಬಂದವು. ಒಂದು ಒಳ್ಳೆಯ ಸುಧಾರಣೆಯನ್ನು ಮಾಡತಕ್ಕಂತಹ ಅವಕಾಶ ಸಹಿ ಬಂತು. ಈ ಎಲ್ಲಾ ಸಮಸ್ಯೆಗಳ ನಡುವೆ, ನಾನು ಅಧಿಕಾರವನ್ನು ವಹಿಸಿಕೊಂಡ ತಕ್ಷಣ ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ಒಂದು ಕಡೆ ದಲಿತರು ಡಾ|| ಬಾಬಾಸಾಹೇಬ್ ಅಂಬೇಡ್ಕರ್‌ರವರ ಹೆಸರನ್ನು ಇಡಬೇಕೆಂದು, ಮತ್ತೊಂದು ಕಡೆ ಬಸವೇಶ್ವರರ ಹೆಸರನ್ನು ಇಡಬೇಕೆಂದು ಸಮಸ್ಯೆ ಬಂತು. ಆ ದಿವಸ ನಾನು ಎರಡು ಗುಂಪಿನವರಿಗೂ ಸಹ ಒಂದು ಹೇಳಿಕೆಯನ್ನು ಕೊಟ್ಟೆ. ಆಗ ಅದು ತಣ್ಣಗಾಯಿತು. ಇದು ನನಗೆ ಬಹಳ ಹೆಮ್ಮೆ ಅನ್ನಿಸಿತ್ತು. ನಮ್ಮ ಸರ್ಕಾರದ ಮೇಲೆ ಜನರು ವಿಶ್ವಾಸವನ್ನು ಇಟ್ಟು ಸಮಸ್ಯೆಯನ್ನು ಉಲ್ಬಣಗೊಳಿಸಲಿಲ್ಲ. ಆದಾದ ಮೇಲೆ ವರ್ಷ ವರ್ಷ ಮಾಡಿದ ಹಾಗೆ ಶಿಕ್ಷಕರು ಪರೀಕ್ಷೆ ವೇಳೆಯಲ್ಲಿ ಬಹಿಷ್ಕಾರವನ್ನು ಹಾಕಿದರು. ಆ ವೇಳೆಯಲ್ಲಿ ಸರ್ಕಾರ ಒಂದು ನಿಲುವನ್ನು ತೆಗದುಕೊಂಡಿತ್ತು. ಇದು ಒಂದು ಅನೈತಿಕವಾದಂತಹ ನಿಲುವು, ವಿದ್ಯಾರ್ಥಿಗಳ ದೃಷ್ಟಿಯಿಂದ ಪರೀಕ್ಷೆಯ ವೇಳೆಯಲ್ಲಿ ನೀವು ಈ ನಿಲುವವನ್ನು ತೆಗೆದುಕೊಳ್ಳಬಾರದು

ಇದು ಅನೈತಿಕವಾದಂತಹ ನಿಲುವು. ಮೊದಲು ಪರೀಕ್ಷೆಯನ್ನು ನಡೆಸಿ. ನಿಮ್ಮ ಬೇಡಿಕೆಗಳು ಏನಾದರೂ ಇದ್ದರೆ ಸರ್ಕಾರ ಪರಿಶೀಲನೆಯನ್ನು ಮಾಡುತ್ತದೆಂದು ಹೇಳಿ ನಾವು ಒಂದು ದಿಟ್ಟ ನಿಲುವನ್ನು ತೆಗೆದುಕೊಂಡೆವು. ಇದರಲ್ಲಿ ಸರ್ಕಾರ ಯಶಸ್ವಿಯಾಯಿತು. ಪ್ರತಿವರ್ಷ ಅವರು ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯನ್ನು ಇಟ್ಟುಕೊಳ್ಳದೇ ಪರೀಕ್ಷಾ ವೇಳೆಯಲ್ಲಿ ಬಾಯ್‌ಕಾಟ್ ಮಾಡತಕ್ಕಂಥಾದ್ದು, ಸರ್ಕಾರ ಅವರಿಗೆ ಹೆದರಿಕೊಂಡು ಕೆಲವು ಬೇಡಿಕೆಗಳನ್ನು ಒಪ್ಪಿಕೊಂಡು ಪರೀಕ್ಷೆಯನ್ನು ನಡೆಸಿಕೊಂಡು ಹೋಗುತ್ತಿದ್ದರು. ಈ ರೀತಿಯಾಗಿ ವರ್ಷ ವರ್ಷ ನಡೆದುಕೊಂಡು ಬರುತ್ತಿತ್ತು. ಆದರೆ ಈ ವರ್ಷ ಯಾವುದೇ ಬೇಡಿಕೆಯನ್ನು ಒಪ್ಪದೇ, ಮೊದಲು ಮುಷ್ಕರವನ್ನು ವಿತ್‌ಡ್ರಾ ಮಾಡಬೇಕು ನಂತರ ಸರ್ಕಾರ ಪರಿಗಣಿಸುತ್ತದೆ ಎನ್ನುವ ನಿರ್ಧಾರಕ್ಕೆ ಅವರು ಒಪ್ಪಿಕೊಂಡು ಸರ್ಕಾರ ಆ ನಿಲುವಿಗೆ ಬದ್ಧವಾದ ಮೇಲೆ ಅವರೇ ಸರೆಂಡರ್ ಆಗಬೇಕಾಗಿ ಬಂತು. ಅಂದರೆ ಇದು ಸರ್ಕಾರದ ಪ್ರತಿಷ್ಠೆಯ ಪ್ರಶ್ನೆ ಎಂದು ಹೇಳುತ್ತಿಲ್ಲ. ಅಥವಾ ವೈಯಕ್ತಿಕವಾದಂತಹ ಪ್ರತಿಷ್ಠೆಯ ಪ್ರಶ್ನೆ ಎಂದೂ ಸಹ ಹೇಳುತ್ತಿಲ್ಲ. ಸರ್ಕಾರ ಎಂದು ಹೇಳಿದರೆ ಸಾರ್ವಜನಿಕರ ಹಿತಕ್ಕೋಸ್ಕರವಾಗಿ ಇರತಕ್ಕಂತಹ ಒಂದು ಆಡಳಿತದ ಯಂತ್ರ. ಇಲ್ಲಿ ಸಾರ್ವಜನಿಕರ ಹಿತ ಬಹಳ ಮುಖ್ಯವೇ ಹೊರತು, ರಾಜ್ಯದ ಜನತೆಯ ಹಿತ ಬಹಳ ಮುಖ್ಯವೇ ಹೊರತು, ಕೆಲವೇ ವ್ಯಕ್ತಿಗಳ ಹಿತ ಮುಖ್ಯ ಆಗಬಾರದು ಎಂದು ನಿಲುವನ್ನು ತೆಗೆದುಕೊಂಡಾಗ ಅದರಲ್ಲಿಯೂ ಸಹ ಸರ್ಕಾರ ಯಶಸ್ವಿಯಾಯಿತು. ಹೀಗೆ ಅನೇಕ, ಪಿ.ಇ.ಟಿ.ಯ ಪರೀಕ್ಷೆಯನ್ನು ತೆಗೆದುಕೊಳ್ಳಿ ಪ್ರತಿವರ್ಷ ಸುಮಾರು 3-4 ವರ್ಷಗಳಲ್ಲಿ ನಡೆಯತಕ್ಕಂತಹ ವ್ಯವಸ್ಥೆಯಲ್ಲಿ ಪ್ರತಿವರ್ಷ ನೂರಾರು ರಿಟ್ ಪಿಟಿಷನ್‌ಗಳು ಹೈಕೋರ್ಟ್‌ಗೆ ಹೋಗುತ್ತಿತ್ತು, ಒಂದಲ್ಲ ಒಂದು ಗೊಂದಲಗಳು ಆಗುತ್ತಿತ್ತು. ಆದರೆ ನನ್ನ ಅಧಿಕಾರದ ಅವಧಿಯಲ್ಲಿ ಒಂದು ವರ್ಷದಿಂದ ಯಾವುದೇ ಇದರ ಬಗ್ಗೆ ಏನಾದಗಳು ಇಲ್ಲದೆ, ಒಂದು ರಿಟ್ ಪಿಟಿಷನ್ ಸಹ ಹೈಕೋರ್ಟ್‌ನಲ್ಲಿ ಬಾಳದೇ ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದೇವೆ. ಹೀಗೆ ಹೇಳುತ್ತಾ ಹೋದರೆ ನನ್ನ ಅವಧಿಯಲ್ಲಿ ಅನೇಕ ಬದಲಾವಣೆಗಳನ್ನು, ಸುಧಾರಣೆಗಳನ್ನು ತರುವುದಕ್ಕೆ ಪ್ರಯತ್ನವನ್ನು ಮಾಡಿದ್ದೇವೆ. ಆ ಕೀರ್ತಿಯನ್ನು ನಾನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಆ ಎಲ್ಲಾ ಕೀರ್ತಿಯು ನಮ್ಮ ಮುಖ್ಯ ಮಂತ್ರಿಗಳಿಗೆ ಸೇರಬೇಕಾದುದು. ಕಾರಣ ಏನೆಂದರೆ, ಯಾವುದೇ ಒಂದು ಸಂದರ್ಭದಲ್ಲಿ, ಯಾವುದೇ ಒಂದು ನಿಲುವನ್ನು ತೆಗೆದುಕೊಂಡಾಗ ಅವರು ನನ್ನ ಬೆನ್ನನ್ನು ತಟ್ಟಿ ನೀನು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದೀಯೆ ಮುಂದುವರಿಸು ಎಂದು ಹೇಳಿ ನನಗೆ ಸಂಪೂರ್ಣವಾದಂತಹ, ಈ ಖಾತೆಗೆ ನೀನೇ ಸಂಪೂರ್ಣವಾದಂತಹ ಜವಾಬ್ದಾರಿಯನ್ನು ತೆಗೆದುಕೊಂಡು ಮಾಡು ಎಂದು ಕೊಟ್ಟರು. ಅದು ಅವರ ವಿಶಾಲವಾದಂತಹ ಮನೋಭಾವನೆಯನ್ನು ತೋರಿಸುತ್ತದೆ. ಮತ್ತು ಅವರ ಒಂದು ದೊಡ್ಡತನವನ್ನು ತೋರಿಸುತ್ತದೆ. ಆದುದರಿಂದ ಆ ದೃಷ್ಟಿಯಿಂದ ನಾನು ಏನಾದರೂ ಹೀಗೆ ಒಳ್ಳೆಯ ಕೆಲಸವನ್ನು ಮಾಡಿದ್ದರೆ ಆ ಒಂದು ಕೀರ್ತಿ ನನಗೆ ಇಲ್ಲ, ನಮ್ಮ ಮುಖ್ಯಮಂತ್ರಿಗಳಿಗೆ ಸಲ್ಲಿಸಬೇಕೆಂದು ಪ್ರಥಮ ಬಾರಿಗೆ ಕೂಟ್ಟಂತಹ ಈ ಪುರಸ್ಕಾರ,

ಸಹಕಾರ, ಉತ್ತೇಜನ, ಮತ್ತು ಅವರು ತೋರಿಸಿದಂತಹ ಪ್ರೀತಿ ವಿಶ್ವಾಸ, ನಂಬಿಕೆ ಎಲ್ಲದ್ದಕ್ಕೂ ಮೊದಲನೆಯದಾಗಿ ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ನನ್ನ ರಾಜೀನಾಮೆಯ ಪತ್ರದಲ್ಲಿಯೂ ಸಹ ಅದೇ ರೀತಿಯಲ್ಲಿ ಬರೆದಿರುತ್ತೇನೆ. ಆದರೆ ಇಷ್ಟೆಲ್ಲಾ ಒಳ್ಳೆಯ ಕೆಲಸಗಳನ್ನು ಮಾಡಿದರೂ ಸಹ ನಾನು ಒಂದು ಪಿತೂರಿಗೆ ಬಲಿಯಾಗಬೇಕಾದಂತಹ ಪ್ರಸಂಗ ಬಂತು. ಪಿತೂರಿ ಎಂದರೆ, ಅದು ರಾಜಕೀಯ ಪಿತೂರಿ ಇರಬಹುದು, ಸಾಮಾಜಿಕವಾದಂತಹ ಪಿತೂರಿ ಇರಬಹುದು, ಅದು ವ್ಯವಸ್ಥೆ ಪಿತೂರಿ. ಅದಕ್ಕೆ ನಾನು ಯಾರನ್ನೂ ಸಹ ದೂರುತ್ತಿಲ್ಲ. ಯಾರನ್ನು ಸಹ ದೋಷಣೆಯನ್ನು ಮಾಡುತ್ತಿಲ್ಲ. ಆದರೆ ಇದು ಆ ವ್ಯವಸ್ಥೆಯಲ್ಲಿಯೇ ಬಂದಿದೆ. ಅದಕ್ಕೋಸ್ಕರವಾಗಿ ಅದನ್ನು ಅನುಭವಿಸಲೇ ಬೇಕಾಗುತ್ತದೆ. ಇದು ಎಲ್ಲಿ ಹುಟ್ಟಿತು, ಎಂದು ಹೇಳಿದರೆ ನನ್ನ ರಾಜೀನಾಮೆಯನ್ನು ಕೊಡಬೇಕಾದಂತಹ ಸನ್ನಿವೇಶ ಹೇಗೆ ಬಂತು ಎಂದರೆ, ಶಿಕ್ಷಕರು ಪರೀಕ್ಷೆಯ ವೇಳೆಯಲ್ಲೂ ವಿದ್ಯಾರ್ಥಿಗಳ ಭವಿಷ್ಯ ನಮಗೆ ಮುಖ್ಯವಲ್ಲ, ನಮ್ಮ ಬೇಡಿಕೆಗಳು ಬಹಳ ಮುಖ್ಯ ಎನ್ನುವ ನಿಲುವನ್ನು ಏನು ತೆಗೆದುಕೊಂಡರು, ನಮ್ಮ ಬೇಡಿಕೆಗಳನ್ನು ಸರ್ಕಾರ ಒಪ್ಪದೇ ಇದ್ದರೆ ನಾವು ಪರೀಕ್ಷೆಯನ್ನು ಬಹಿಷ್ಕಾರ ಹಾಕುತ್ತೇವೆ ಎಂದು ಏನು ನಿಲುವನ್ನು ತೆಗೆದುಕೊಂಡರು. ಆಗ ಇದು ನಿಮ್ಮ ಅನೈತಿಕವಾದಂತಹ ನಿಲುವು ಎಂದು ನಾನು ಹೇಳಿದೆ. ಅಲ್ಲಿ ಬಂತು ಅವರಿಗೂ ನಮಗೂ. ಅದನ್ನು ನಾನು ಸಮರ್ಥನೆ ಮಾಡಬಹುದು, ಅವರು ಮಾಡದೇ ಇರಬಹುದು. ಆಗ ನನ್ನನ್ನು ಬಲಿಪಶು ಮಾಡಿ ನನಗೆ ಕಳಂಕ ಕಟ್ಟತಕ್ಕ ಪ್ರಯತ್ನ ಮಾಡಿದರು ಕೆಲವು ಪಟ್ಟಭದ್ರಹಿತಾಸಕ್ತಿಗಳು. ಆಗ ನನ್ನ ತತ್ವಗಳು, ಮೌಲ್ಯಗಳು, ಸಿದ್ಧಾಂತಗಳು, ಚಾರಿತ್ರ್ಯ ಈ ಎಲ್ಲಾ ಬಗ್ಗೆ ಮಾತನಾಡುತ್ತಾರೆ; ಇವರು ವಿದ್ಯಾರ್ಥಿಯಾಗಿದ್ದಾಗ ಕಾಪಿ ಮಾಡಿದ್ದರು, ಇವರಿಗೆ ಯಾವ ನೈತಿಕ ಹಕ್ಕಿದೆ, ಅನೈತಿಕ ನಿಲುವು ಎಂದು ಹೇಳಬೇಕಾಗಿದೆ ಎಂದು ಒಂದು ಪತ್ರಿಕೆಯಲ್ಲಿ ಬಂತು. ಅಲ್ಲಿಂದ ಶುರುವಾಯಿತು. ಕೆಲವರು ಹೇಳುತ್ತಾರೆ, ಅದನ್ನು ನೀವು ಇಗ್ನೋರ್ ಮಾಡಬಹುದಿತ್ತು; ನೀವು ಬೆಳಸಿಕೊಂಡು ಬಂದಿರಿ; ಬೃಹದಾಕಾರವಾಗಿ ಬೆಟ್ಟದ ರೀತಿಯಲ್ಲಿ ನೀವೇ ಬೆಳಸಿಕೊಂಡುಬಂದಿರಿ ಎಂದು. ಆ ಒಂದು ಹೇಳಿಕೆ, ನಿಜವಾಗಿ ಸತ್ಯವಾಗಿದ್ದರೆ, ನಿಜವಾಗಿ ಆ ಘಟನೆ ನಡೆದಿದ್ದರೆ ಅದನ್ನು ಸಂಪೂರ್ಣ ಇಗ್ನೋರ್ ಮಾಡಬಹುದಿತ್ತು ಅಥವಾ ಅದಕ್ಕೆ ನಾನು ಒಪ್ಪಿಕೊಳ್ಳಬಹುದಿತ್ತು. ಆದರೆ ಈ ಘಟನೆ ನಡೆಯದೆ ಇರುವುದನ್ನು ಇವರು ಹುಟ್ಟುಹಾಕಿದ್ದಾರಲ್ಲಾ ಏನೋ ಇರಬಹುದು ಎಂದು. ನಾನು ಇದನ್ನು ಮಾಡಲಿಲ್ಲ, ಆದರೂ ಏನೋ ಪಿತೂರಿ ನಡೆದಿದೆ, ಇದಕ್ಕೆ ದಾಖಲೆಗಳು ಸೃಷ್ಟಿಯಾಗಿರಬಹುದು. ಆದುದರಿಂದ ವರದಿ ಕೇಳಿ ಸತ್ಯಾಂಶ ತಿಳಿಯಬೇಕೆಂಬ ಒಂದು ನಿಲುವು ತಗೆದುಕೊಂಡೆ. ಕೆಲವರು ಅದನ್ನು ಹೇಳಬಹುದು ಹೇಡಿಗಳು ಕೆಲವರು ತಪ್ಪನ್ನು ಒಪ್ಪಿಕೊಳ್ಳುವುದಿಲ್ಲ, ಕೆಲವರು ತಪ್ಪನ್ನು ಒಪ್ಪಿಕೊಳ್ಳದೆ ಸುಳ್ಳನ್ನು ಹೇಳತಕ್ಕವರಿದ್ದಾರೆ. ಆ ರೀತಿ ನಾನು ಹೇಡಿಯಲ್ಲ. ಕಾರ್ಲ್ ಮಾರ್ಕ್ಸ್ ಹೇಳುತ್ತಾನೆ: To leave the error unrefuted is to encourage intellectual

immorality ಒಂದು ತಪ್ಪಾಗಿದ್ದರೆ, ಆ ತಪ್ಪನ್ನು ರೆಪ್ಯೂಟ್ ಮಾಡದಿದ್ದರೆ ಅವನು ಇಂಟಲೆಕ್ಚುಯಲ್ immorality ಮಾಡಿದ ಹಾಗೆ. ನಾನು ಬಂದ ತಕ್ಷಣ 'ನೋ ಕಾಮೆಂಟ್ಸ್' ಎಂದು ಕುಳಿತಿದ್ದರೆ ಆಗುತ್ತಿತ್ತು, ಅಥವಾ ನಾನು ಮಾಡಿಲ್ಲವೆಂದು ಹೇಳಬಹುದಿತ್ತು, ಅಥವಾ ನಾನು ಮಾಡಿದ್ದೇನೆಂದು ಒಪ್ಪಿಕೊಳ್ಳಬಹುದಿತ್ತು. ಇವೆರಡೂ ಮಾಡಬೇಕಾದ ಕರ್ತವ್ಯ. ನಾನು ಮಾಡಿದ್ದರೆ ಏನೋ ಆಗಿದೆ, ವಿದ್ಯಾರ್ಥಿ ಜೀವನದಲ್ಲಿ 20 ವರ್ಷಗಳ ಹಿಂದೆ ಮಾಡಿರತಕ್ಕದ್ದು; ಅದಕ್ಕೂ ನಮ್ಮ ಈಗಿರತಕ್ಕ ಸ್ಥಾನಕ್ಕೂ ಯಾವುದೇ ವ್ಯತ್ಯಾಸ ಇಲ್ಲ. ಇಲ್ಲಿ ನಾನು ಮಾಲ್‌ಪ್ರಾಕ್ಟೀಸ್ ಮಾಡಿಲ್ಲ. ಶಿಕ್ಷಣ ಮಂತ್ರಿಯಾಗಿ ನಾನು ಯಾವುದೇ ಪರೀಕ್ಷೆ ತೆಗೆದುಕೊಂಡಿಲ್ಲ, ಶಿಕ್ಷಣ ಮಂತ್ರಿಯಾಗಿ ಹೋಗಿ ನಾನು ಲಾ ಪರೀಕ್ಷೆ ತೆಗೆದುಕೊಂಡು ಪಾಸ್ ಮಾಡಿಲ್ಲ ಎಂದು ನಿಲುವು ತೆಗೆದುಕೊಳ್ಳಬಹುದಿತ್ತು. ಕಾಪಿ ನಾನು ಮಾಡಿಲ್ಲವೆಂದು ಹೇಳಿದೆ; ಆದರೂ ಕೆಲವು ಪತ್ರಿಕೆಗಳು ಇದನ್ನು ನಂಬಲಿಲ್ಲ. ನಾನು ಎರಡು ಸಭೆಗಳಲ್ಲಿ ಹೇಳಿದೆ, ಪತ್ರಿಕೆಗಳಲ್ಲಿ ಹೇಳಿದೆ. ಇದನ್ನು ಯಾವ ರೀತಿ ತೇಜೋವಧೆ ಮಾಡಿದರು ಎಂದು ವಿವರಣೆ ಮಾಡುವುದಕ್ಕೆ ಹೋಗುವುದಿಲ್ಲ. ಪತ್ರಿಕೆಗಳಲ್ಲಿ, ನಾನು ಹೊರದೇಶಕ್ಕೆ ಹೋದ ಮೇಲೆ ನನ್ನ ಚಾರಿತ್ರವಧೆ ಮಾಡಿ ಪತ್ರಿಕೆಯ ಮುಖಪುಟದಲ್ಲಿ ಹಾಕಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಒಂದು ಕಡೆ ಹೇಳುತ್ತಾರೆ. ಇದು ಎಷ್ಟು ದುಃಖವಾಗುತ್ತದೆಂದರೆ, ಇದು ನನ್ನ ವೈಯಕ್ತಿಕ ಎಂದು ತಿಳಿದುಕೊಳ್ಳುವುದಿಲ್ಲ. State Education Minister was a copy-cat. ಎಂದು ಬರೆದರು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ. ಅದರ ಮುಖಪುಟದಲ್ಲಿ ನನ್ನ ಫೋಟೋ ಹಾಕಿ ಏನು ಬರೆದರು? ಮಂತ್ರಿಗಳು ಹೊರದೇಶಕ್ಕೆ ಹೋಗಿದ್ದಾರೆ, ಯಾವ ರೀತಿ ಕಾಪಿ ಮಾಡಬೇಕೆಂದು ಲೆಕ್ಚರ್ ಕೊಡುವುದಕ್ಕೆ; ಅದಕ್ಕೆ ನಾನು ಹೋಗಿದ್ದೇನೆಂದು ನನ್ನ ತೇಜೋವಧೆ ಮಾಡಿದರು. ಮತ್ತೊಂದು ಕಡೆ ಹೇಳುತ್ತಾರೆ ಪತ್ರಿಕೆಗಳವರು. ಏಕೆಂದರೆ ಯಾರು ಪಟ್ಟಭದ್ರಹಿತಾಸಕ್ತಿಗಳು ಇದ್ದಾರೆ ಕೆಲವರು, ಅವರದ್ದು ಮಾತ್ರ ಕೆಲವು ಪತ್ರಿಕೆಗಳಲ್ಲಿ ಬರೆಯುತ್ತಾರೆಯೇ ಹೊರತು ಸತ್ಯ ಇರತಕ್ಕದ್ದನ್ನು ಯಾರೂ ಬರೆಯುವುದಿಲ್ಲ. ಇನ್ನೊಂದು ಕಡೆ ಬರೆದಿದ್ದಾರೆ: Letters to the Editor. "CM NEEDS TO CAGE THIS COPY-CAT. The CM ought to recall him from Canada if he is there on official visit to study some questions concerning administration of colleges. It is naturally expected that the Chief Minister will remove him from Ministry forthwith without waiting for his return." ಅಂದರೆ ಏನು? ಮುಖ್ಯ ಮಂತ್ರಿಗಳು ಒಬ್ಬ ಅನೀತಿವಂತನನ್ನು, ಸ್ಟ್ಯಾಂಡರ್ಡ್ ಇಲ್ಲದೇ ಇರತಕ್ಕಂಥವನನ್ನು, ಕಾಪಿ ಮಾಡಿ ಪಾಸ್ ಮಾಡಿದವನನ್ನು ಶಿಕ್ಷಣ ಮಂತ್ರಿಯಾಗಿಟ್ಟಿದ್ದಾರೆ, ಪ್ರೋ-ಫಾನ್ಸಲರ್ ಎಂದು ಹೇಳಿದ್ದಾರೆ. ಇದು ನನಗೆ ಆದಂಥ ಅವಮಾನ ಅಲ್ಲ, ಇದು ಮುಖ್ಯ ಮಂತ್ರಿಗಳಿಗೆ, ನಮ್ಮ ಸರ್ಕಾರಕ್ಕೆ ಆದಂಥ ಅವಮಾನ ಎಂದು ನಾನು ತೆಗೆದುಕೊಂಡೆ, ಅದನ್ನು ನಾನು

ಪ್ರೂವ್ ಮಾಡಲೇಬೇಕೆಂಬ ನಿಲುವು ತೆಗೆದುಕೊಂಡೆ. ಏಕೆಂದರೆ ಈ ಖಾತೆಯನ್ನು ನನಗೆ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟರಬೇಕಾದರೆ ಅಥವಾ ಇದಕ್ಕಿಂತ ಹಿಂದೆ 3 ಸಾರಿ ನನಗೆ ಶಿಕ್ಷಣ ಮಂತ್ರಿ ಸ್ಥಾನ ಕೊಡಬೇಕೆಂದರೆ ಹಿಂದೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ನನ್ನಲ್ಲಿ ಏನೋ ಮೌಲ್ಯಗಳು, ಸ್ಟ್ಯಾಂಡರ್ಡ್ ಆಫ್ ಲಿವಿಂಗ್ ಸ್ವಲ್ಪ ಮಾತನಾಡತಕ್ಕ ರೀತಿ, ನಡೆಯತಕ್ಕ ದಾರಿ ಇದನ್ನೆಲ್ಲಾ ನೋಡಿ ಇವನಲ್ಲಿ ಸ್ವಲ್ಪಮಟ್ಟಿಗೆ ಮೌಲ್ಯಗಳಿವೆ, ಇಂಥವನನ್ನು ಸ್ವಲ್ಪಮಟ್ಟಿಗೆ ಶಿಕ್ಷಣ ಮಂತ್ರಿ ಮಾಡಬಹುದೆಂಬ ಭಾವನೆ ಇರಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ನನಗೆ ಈ ಖಾತೆ ಕೊಟ್ಟಿದ್ದಾರೆಂದು ತಿಳಿದುಕೊಂಡಿದ್ದೇನೆ. ಆದರೆ ಇಷ್ಟೆಲ್ಲ ಪತ್ರಿಕೆಗಳು ನನ್ನನ್ನು, ಅನೀತಿವಂತ, ಇಂಥ ಕೆಟ್ಟಕೆಲಸ ಮಾಡಿದ್ದಾನೆ, ಇಂಥವನನ್ನು ಮುಖ್ಯ ಮಂತ್ರಿಗಳು ಶಿಕ್ಷಣ ಮಂತ್ರಿ ಮಾಡಿದ್ದಾರೆ ಅಂದಾಗ ಅವರನ್ನು ನಾನು ಇಕ್ಕಟ್ಟಿಗೆ ಸಿಕ್ಕಿಸತಕ್ಕ ನೀಚ ಕೆಲಸ ಮಾಡಬಾರದೆಂಬುದು ನನ್ನ ನಿಲುವು. ಅವರನ್ನು ಇಕ್ಕಟ್ಟಿಗೆ ಸಿಕ್ಕಿಸಬಾರದು. ಅವರು ಇಟ್ಟಿರತಕ್ಕ ವಿಶ್ವಾಸಕ್ಕೆ, ಸಮಾಜಕ್ಕೆ, ರಾಜ್ಯಕ್ಕೆ, ಜನತೆಗೆ ಅಪನಂಬಿಕೆ ಬರಬಾರದೆಂಬ ದೃಷ್ಟಿಯಿಂದ ಈ ನಿಲುವು ತೆಗೆದುಕೊಂಡೆ. ಇನ್ನು ಯಾವ ದೃಷ್ಟಿಯಿಂದಲೂ ಅಲ್ಲ. ಆದರೆ ಅದಕ್ಕೋಸ್ಕರ ನಾನು ಏನು ಮಾಡಿದೆ; ಈ ಒಂದು ವಿಚಾರ ಸುಳ್ಳು ವಿಚಾರ, ಇದನ್ನು ಪರಿಶೀಲನೆ ಮಾಡಿ ಇದರ ಸತ್ಯಾಸತ್ಯತೆ ಕಂಡುಹಿಡಿಯಬೇಕು, ನೀವು ಇದರ ಬಗ್ಗೆ ವರದಿ ಕಳುಹಿಸಿಕೊಡಿ ಎಂದು ನಮ್ಮ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳಿಗೆ ಪತ್ರ ಬರೆದೆ. ಈ ರೀತಿ ಒಂದು ಪತ್ರಿಕೆಯಲ್ಲಿ ಬಂದಿದೆ, ಇದರ ಸತ್ಯಾಸತ್ಯತೆ ಬಗ್ಗೆ ವರದಿ ತರಿಸಿಕೊಡಿ ಎಂದು. ಇದನ್ನೇ ತಪ್ಪು ಕಂಡುಹಿಡಿದರು. ಏಕೆಂದರೆ, ನಾನು ಏನಾದರೂ ಮಾಡಿದ್ದರೆ, ನಾನು ಕಾಪಿ ಮಾಡಿದ್ದೇನೆ, ವರದಿ ಕಳುಹಿಸಿಕೊಡಿ ಎಂದು ಕೇಳುತ್ತಿದ್ದೆನೆ? ಯಾವ ಹುಚ್ಚ ಮಾಡುತ್ತಾನೆ ಈ ಕೆಲಸವನ್ನು, ತಾವು ಸ್ವಲ್ಪ ಯೋಚನೆ ಮಾಡಿ. ಆಕಸ್ಮಾತ್ ನಾನು ಕಾಪಿ ಮಾಡಿದ್ದು ಇದರಲ್ಲಿ ಇದ್ದಿದ್ದರೆ ಸುಮ್ಮನೆ ಬಿಟ್ಟುಬಿಡಬಹುದಿತ್ತು. ನಾನು ಕಾಪಿ ಮಾಡಿದ್ದರೆ, ಆ ರೆಕಾರ್ಡ್ಸ್ ಹುಡುಕಿ ಕಳುಹಿಸಿ, ಆ ವರದಿ ಕಳುಹಿಸಿ ಎಂದು ನಾನು ಬರೆಯುತ್ತಿರಲಿಲ್ಲ. ನಾನು ಮಾಡದೆ ಇರತಕ್ಕದ್ದು ಈ ತರಹ ಪತ್ರಿಕೆಯಲ್ಲಿ ಬಂದಿದೆಯಲ್ಲಾ, ರೆಕಾರ್ಡ್ಸ್ ನೋಡಿ ನಿಜವೋ ಸುಳ್ಳೋ ಎಂಬುದನ್ನು ತಿಳಿದು ಕಾಗದ ಬರೆಯಿರಿ, ತಿಳಿಸಿ, ವರದಿ ಕಳುಹಿಸಿಕೊಡಿ ಎಂದರೆ ವೈಸ್ ಛಾನ್ಸಲರ್ ಕೆಲವು ದಾಖಲಾತಿಗಳನ್ನು ಸೃಷ್ಟಿ ಮಾಡಿ, ಎಲ್ಲಾ ಅಂಗಗಳಲ್ಲಿ ಪರಿಶೀಲನೆ ನಡೆಸದೆ, ಕಡತಗಳನ್ನು ಪರಿಶೀಲನೆ ಮಾಡದೆ ನೇರವಾಗಿ ಶಿಕ್ಷಣ ಮಂತ್ರಿಗಳು ಕಾಪಿ ಮಾಡಿದ್ದಾರೆಂದು ಹೇಳತಕ್ಕ ಕೆಲಸ ಮಾಡಿದ್ದಾರೆ. ಇನ್ನೊಂದು ಕಡೆ ಹೇಳುತ್ತಾರೆ: Somashekhar was a copy-cat, says BU. Bangalore University confirms. ಸರಿ. ನಾನು ಇದೆಲ್ಲಾ ವರದಿಗಳನ್ನು ತರಿಸಿಕೊಳ್ಳಬೇಕೆಂದು ಮಾಡಿ, ಶಿಕ್ಷಣ ಕಾರ್ಯದರ್ಶಿಗಳಿಗೆ ಇದನ್ನು ಪರಿಶೀಲಿಸಿ ಕಳುಹಿಸಬೇಕೆಂದು ಹೇಳಿದೆ. ಅವರು ಒಂದು ವರದಿ ಕೊಟ್ಟರು. ಆದರೆ ದುರ್ದೈವ, ಶಿಕ್ಷಣ ಕಾರ್ಯದರ್ಶಿಗಳು, ಸರ್ಕಾರದ ಕಾರ್ಯದರ್ಶಿಗಳು ಕೊಟ್ಟಂಥ ವರದಿ ಅದು ತನಿಖಾ ವರದಿ ಅಲ್ಲ. ಆ ವರದಿಯಲ್ಲಿ ತಪ್ಪನ್ನು ಕಂಡುಹಿಡಿಯುವುದಕ್ಕೆ

ಬದಲಾಗಿ ಅದರಲ್ಲಿರತಕ್ಕ ಮೆರಿಟ್ ಬಗ್ಗೆ ಯೋಚನೆ ಮಾಡುವುದರ ಬದಲಾಗಿ, ಅಥವಾ ಅದರಲ್ಲಿತಕ್ಕ ನ್ಯೂನತೆಗಳನ್ನು ಕಂಡುಹಿಡಿಯುವುದರ ಬದಲಾಗಿ ಸಾರಾಸಗಟಾಗಿ ಒಂದು ಕ್ಯಾಂಪೈನ್ ನಡೆಯಿತು. ಅದೇನೆಂದರೆ, ಇವರ ಅಧೀನದಲ್ಲಿರತಕ್ಕ ಕಾರ್ಯದರ್ಶಿಗಳ ಕೈಯಲ್ಲಿ ಎನ್‌ಕ್ವೈರಿ ಮಾಡಿಸಿದ್ದಾರೆ, ಇವರು ಹೇಳಿದ ಹಾಗೆ ಬರೆಸಿದ್ದಾರೆ. ಇದನ್ನು ಹೇಳಿದ್ದರೆ ವೈಸ್ ಛಾನ್ಸಲರ್ ಕೊಟ್ಟಿರತಕ್ಕ ರೆಕಾರ್ಡ್ಸ್ ಬೇರೆ, ನಾಗರಾಜಶೆಟ್ಟಿಯವರು ಸೇರಿಸಿರತಕ್ಕ ರೆಕಾಡ್ಸ್ ಬೇರೆ. ಸೋಮಶೇಖರ್ ಹತ್ತಿರ ಯಾವುದೋ ದಾಖಲಾತಿ ತೆಗೆದುಕೊಂಡು ಕೊಟ್ಟರು ಎಂದು ಹೇಳಿದ್ದರೆ ವರದಿಯನ್ನು ರಿಜೆಕ್ಟ್ ಮಾಡಿ ಎಂದು ಹೇಳಬಹುದಿತ್ತು. ಆದರೆ ಅವರು ಕೊಟ್ಟ ದಾಖಲಾತಿಗಳ ಆಧಾರದ ಮೇಲೆ, ವಿಶ್ವ ವಿದ್ಯಾನಿಲಯದ ಅಧಿಕಾರಿಗಳು ಕೊಟ್ಟ ದಾಖಲಾತಿಗಳ ಆಧಾರದ ಮೇಲೆ ಒಂದು ವರದಿ ಕಳುಹಿಸಿದರೆ ಅದರ ಬಗ್ಗೆ ಸತ್ಯಾಸತ್ಯತೆ ನೋಡದೆ, ಅದರ ಮೆರಿಟ್ಸ್, ಡೀಮೆರಿಟ್ಸ್ ನೋಡದೆ ಅದೊಂದು ಕ್ಯಾಂಪೈನ್ ನಡೆಯಿತು. ನಾನು ಹೇಳಿದೆ ಮಾನ್ಯ ಮುಖ್ಯ ಮಂತ್ರಿಗಳಿಗೆ, ಯಾವುದು ಬೇಕು, ಯಾವ ವಿಚಾರಣೆ ಬೇಕು ನಡೆಸಿ; ಆದರೆ ಈ ಕಳಂಕ ಹೊತ್ತುಕೊಂಡು ಹೋಗತಕ್ಕ ಹೇಡಿ ನಾನಲ್ಲ, ಸತ್ಯಾಸತ್ಯತೆ ಹೊರಗಡೆ ಬರಲೇಬೇಕೆಂದು ಹೇಳಿದೆ. ಅಷ್ಟರಲ್ಲಿ ವಿಧಾನಸಭೆ ಬಂತು, ಕೌನ್ಸಿಲ್ ಶುರುವಾಯಿತು. ಕೌನ್ಸಿಲ್‌ನಲ್ಲಿ ವಿಚಾರ ಬಂದಾಗ ನಾನು ಹೇಳಿದೆ, ಮಾನ್ಯ ಮುಖ್ಯಮಂತ್ರಿಗಳೂ ಕೂಡ ಅಲ್ಲಿ ಹೇಳಿದರು. ಅಲ್ಲಿ ಚರ್ಚೆ ಆದಮೇಲೆ ಹೌಸ್ ಕಮಿಟಿ ಮಾಡಬೇಕೆಂಬ ತೀರ್ಮಾನವಾಯಿತು. ಅದಾದಮೇಲೆ ಇಲ್ಲಿ ಒಂದು ಚರ್ಚೆ ಆಯಿತು. ಇಲ್ಲಿ ಚರ್ಚೆ ಆದಮೇಲೆ ಸರ್ಕಾರದ ವತಿಯಿಂದ ತೀರ್ಮಾನ ತೆಗೆದುಕೊಳ್ಳಬೇಕಾಗಿ ಬಂತು, ಇದನ್ನು ನ್ಯಾಯಾಂಗ ತನಿಖೆಗೆ ಆದೇಶ ಮಾಡಬೇಕು ಎಂದು. ಅದಾದ ತಕ್ಷಣ ಮಾನ್ಯ ಮುಖ್ಯ ಮಂತ್ರಿಗಳು ನ್ಯಾಯಾಂಗ ತನಿಖೆಯ ಬಗ್ಗೆ ಇಲ್ಲಿ ಘೋಷಣೆ ಮಾಡಿದರು. ಅದೇ ದಿನ ರಾತ್ರಿ ನಾನು ನೈತಿಕ ಮೌಲ್ಯಗಳನ್ನು ಎತ್ತಿಹಿಡಿಯತಕ್ಕ ಉದ್ದೇಶದಿಂದ, ಪ್ರಜಾಪ್ರಭುತ್ವದಲ್ಲಿ ಮೌಲ್ಯಗಳನ್ನು ಎತ್ತಿಹಿಡಿಯಬೇಕು, ಒಂದು ತತ್ವದ ಆಧಾರದ ಮೇಲೆ ನಾವು ನಡೆಯಬೇಕು, ಕಳಂಕರಹಿತವಾಗಿರಬೇಕೆಂಬ ಉದ್ದೇಶದಿಂದ ನಾನು ರಾಜೀನಾಮೆ ಕೊಟ್ಟೆ. ಈ ರಾಜೀನಾಮೆ ಬಗ್ಗೆ ಬಹಳ ವಾದ ವಿವಾದ ನಡೆಯಿತು ನಮ್ಮ ರಾಜ್ಯದಲ್ಲಿ. ಏಕೆ ರಾಜೀನಾಮೆ ಕೊಡಬೇಕಾಗಿತ್ತು, ಇವರು ಏನು ಮಾಡಿದ್ದರು? ಬಹಳ ಜನ ನನಗೆ ಪತ್ರಗಳನ್ನು ಬರೆದರು, ಪತ್ರಿಕೆಗಳಲ್ಲಿ ಬಂತು ಎಲ್ಲಾ ಬಂತು. ಆದರೆ ನಾನು ರಾಜೀನಾಮೆ ಕೊಟ್ಟ ಸನ್ನಿವೇಶ ನೋಡಿದರೆ ಯಾವುದೇ ಒಂದು ವಿರೋಧ ಪಕ್ಷದವರೇ ಆಗಲೀ, ಯಾವುದೇ ಒಂದು ಸಾರ್ವಜನಿಕರೇ ಆಗಲೀ ದೊಡ್ಡ ಆಂದೋಳನ ಮಾಡಲಿಲ್ಲ. ವಿರೋಧ ಪಕ್ಷದವರು ರಾತ್ರಿ ಎಲ್ಲಾ ಕುಳಿತುಕೊಂಡು ಧರಣಿ ಮಾಡಲಿಲ್ಲ. ಎಷ್ಟೋ ಸಾರಿ ಧರಣಿ ಆಗಿದೆ. ರಾತ್ರಿ ಎಲ್ಲಾ ಧರಣಿಯಾಗಿ ಇಂಥವರು ರಾಜೀನಾಮೆ ಕೊಂಡಬೇಕೆಂದಾಗಲೂ ರಾಜೀನಾಮೆ ಕೊಟ್ಟಿಲ್ಲ. ದೊಡ್ಡ ದೊಡ್ಡ ಸ್ಕ್ಯಾಂಡಲ್‌ಗಳು ಆಗಿವೆ. ಆದರೆ ಅವರಿಗೆ ನಾನು ಹೋಲಿಸಿಕೊಳ್ಳುವುದಿಲ್ಲ. ಅವರಿಗೆ ಆದದ್ದು ಅವ್ರಿಗೆ, ನನಗೆ ಆದದ್ದು ನನಗೆ. ಕೆಲವರು ಹೇಳಿದರು, ನೀವು ಏತಕ್ಕೆ ರಾಜೀನಾಮೆ

ಕೊಡಬೇಕಾಗಿತ್ತು, ನಿಮ್ಮಖಾತೆಯಲ್ಲಿ ಏನೂ ನಡೆದಿಲ್ಲವಲ್ಲಾ, ನೀವು ದಕ್ಷತೆಯಿಂದ ಕೆಲಸ ಮಾಡಿದ್ದೀರಿ: ಲಾಲ್ ಬಹದ್ದೂರ್ ಶಾಸ್ತ್ರಿಯವರ ತರಹ ನೈತಿಕತೆಯನ್ನು ಎತ್ತಿಹಿಡಿಯುವುದಕ್ಕೆ ಈ ಕಾಲದಲ್ಲಿ ಯಾರಿಗೆ ಆಗುತ್ತದೆ ಎಂದು ಒಂದು ಕಡೆ ಹೇಳಿದರು. ★ ಈಗ ನೀವು ಒಳ್ಳೆಯವರಾಗಿರಬಹುದು. ಅಂದರೆ ನೀವು ಒಪ್ಪಿಕೊಳ್ಳಿ ಅದನ್ನು, ನಾನು ಮಾಡಿದ್ದೇನೆ; ಆದರೆ ಈಗ ಒಳ್ಳೆಯವನಾಗಿದ್ದೇನೆಂದು ಒಪ್ಪಿಕೊಳ್ಳು ಎಂದು. ಅದು ಅಲ್ಲ. ನಾನು ಮಹಾತ್ಮ ಗಾಂಧಿಯು ಅಲ್ಲ, ಲಾಲ್ ಬಹಾದ್ದೂರ್ ಶಾಸ್ತ್ರಿಯು ಅಲ್ಲ, ನಾನು ನನ್ನದೇ ಆದ ಒಬ್ಬ ವ್ಯಕ್ತಿ ಸೋಮಶೇಖರ್.

ಶ್ರೀ ಎಚ್.ಎನ್.ನಂಜೇಗೌಡ: ಗಾಂಧಿಯವರು ವಯಸ್ಸಾದ ಮೇಲೆ...a bad reflection.

ಶ್ರೀ ಬಿ.ಸೋಮಶೇಖರ್: ಸಾರಿ. ಅಂದರೆ ಅವರು ವಯಸ್ಸಾದ ಮೇಲೆ...

SRI M.VEERAPPA MOILY: That should not go on record. Whatever it may, be reference to Mahatma Gandhi is not in good taste. That may kindly be expunged.

MR. SPEAKER: That particular para shall not go on record.

ಶ್ರೀ ಬಿ.ಸೋಮಶೇಖರ್: ಸಾರಿ. ಅದರಲ್ಲೇನಾದರೂ ತಪ್ಪಿದ್ದರೆ I will withdraw that word, ನಂತರ, ಈ ರಾಜೀನಾಮೆಯನ್ನು ನಾನು ಕೊಡಬೇಕಾದಾಗ, ಇವತ್ತು ನಾನೇನಾದರೂ ನನ್ನ ಒಂದು ಖಾತೆಯಲ್ಲಿ ಯಾವುದಾದರೊಂದು ಸ್ಕ್ಯಾಂಡಲ್ ಆಗಿ, ಸಿ.ಇ.ಟಿ.ಯಲ್ಲೋ ಅಥವಾ ನನ್ನ ಇಲಾಖೆಯಲ್ಲೋ ಏನಾದರೊಂದು ಸಣ್ಣಪುಟ್ಟ ಅವ್ಯವಹಾರಗಳಾಗಿ, ಭ್ರಷ್ಟಾಚಾರವಾಗಿ ಏನಾದರೂ ಆಗಿದ್ದಿದ್ದರೆ, ಅದನ್ನು ಎನ್‌ಕ್ವೈರಿ ಮಾಡಿ, ಎನ್‌ಕ್ವೈರಿ ನಡೆಯಲಿ ಎನ್ನುವ ಆದೇಶ ಕೊಟ್ಟು, ಆ ಎನ್‌ಕ್ವೈರಿ ಆಗುವ ತನಕ ನಾನು ಮಂತ್ರಿ ಸ್ಥಾನದಲ್ಲಿರುವುದಿಲ್ಲವೆನ್ನತಕ್ಕದ್ದೊಂದು. ಅದು ಲಾಲ್‌ಬಹಾದ್ದೂರ್ ಶಾಸ್ತ್ರಿಯವರು ಏನು ರೈಲ್ವೆ ಆಕ್ಸಿಡೆಂಟ್ ಆದಾಗ, ಆ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು, ಎನ್‌ಕ್ವೈರಿಗೆ ಬಂದಿದ್ದರಲ್ಲಾ, ಆ ನೈತಿಕತೆ ಸಂಬಂಧಪಟ್ಟದ್ದು. ಆದರೆ, ಇದು ಈ ಖಾತೆಯಲ್ಲಿ ಯಾವುದೇ ಸಂದರ್ಭ ಅಲ್ಲ. ಖಾಸಗಿ ಜೀವನದಲ್ಲಿ, ನನ್ನ ವಿದ್ಯಾರ್ಥಿ ಜೀವನದಲ್ಲಿ ಆಗಿದೆ ಎಂದು ಹೇಳಿ ಸಣ್ಣ ಕಟ್ಟುಕತೆಯನ್ನು ಕಟ್ಟಿದಾಗ, ಅದರ ಸತ್ಯವನ್ನು ಹೊರಗಡೆ ತರಬೇಕು, ನನ್ನ ನಿಜಜೀವನದಲ್ಲೂ, ವಿದ್ಯಾರ್ಥಿ ಜೀವನದಲ್ಲೂ, ಇಂಥ

★ ಈ ಪದವನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಒಂದು ಕಳಂಕ ವ್ಯಕ್ತಿಯಾಗಿದ್ದೆ ಎಂದು ಅನ್ನಿಸಿಕೊಳ್ಳಬಾರದೆಂದು, ಅದರಲ್ಲೂ ನಾನು ಸ್ವಚ್ಛವಾದ ಜೀವನ ಮಾಡಿದ್ದೇನೆನ್ನುವುದನ್ನು ಪ್ರೂವ್ ಮಾಡುವುದಕ್ಕೋಸ್ಕರ, ಇವತ್ತು ಆ ಸ್ಥಾನಕ್ಕೆ ನಾನು ರಾಜೀನಾಮೆ ಕೊಟ್ಟಿದ್ದೇನೆ. ನಾನು ಬೇರೆಯವರಿಗೆ ಹೇಳುವುದಿಲ್ಲ. ಬಹಳ ಜನ ಹೇಳಿದರು, ಕೋಟ್ಯಾಂತರ ರೂಪಾಯಿಗಳ ಅವ್ಯವಹಾರಗಳಾಗಿ, ಜುಡಿಷಿಯಲ್ ಎನ್‌ಕ್ವೈರಿ ಆಗಿ ವರದಿಗಳು ಬಂದಿದೆ, ಅದರ ಮೇಲೆ ಯಾರೂ ಏನೂ ಕ್ರಮ ತೆಗೆದುಕೊಂಡಿಲ್ಲ. ಕೋಟ್ಯಾಂತರ ರೂಪಾಯಿಗಳ ಅವ್ಯವಹಾರಗಳಾಗಿರುವ ಬಗ್ಗೆ ಎನ್‌ಕ್ವೈರಿಗೆ ಆರ್ಡರ್ ಆಗಿಲ್ಲ. ಧರಣಿ ಮಾಡಿರತಕ್ಕದ್ದಕ್ಕೆ ಸಿ.ಓ.ಡಿ.ಗೆ ರೆಫರ್ ಆಗಿಲ್ಲ. ಲೋಕಾಯುಕ್ತಕ್ಕೆ ರೆಫರ್ ಆಗಿಲ್ಲ. ಅಂಥದ್ದರಲ್ಲಿ ನಿಮಗೆ ಏಕೆ ಮಾಡುತ್ತಿದ್ದಾರೆಂದು ಹೇಳಿದರು. ಅವರಿಗೆ ನಾನು ಹೋಲಿಸಿಕೊಳ್ಳುವುದಿಲ್ಲ. ಅದು ಅವರ ಆತ್ಮಸಾಕ್ಷಿಗೆ ಬಿಟ್ಟ ವಿಚಾರ. ಅದಕ್ಕೆ ನಾನು ಹೋಲಿಕೆ ಮಾಡಿಕೊಳ್ಳುವುದಿಲ್ಲ. ಅದು ಅವರಿಗೆ ಬಿಟ್ಟ ವಿಚಾರ. ಆದರೆ, ನನ್ನ ವಿಚಾರದಲ್ಲಿ ಕೆಲವು ಮೌಲ್ಯಗಳನ್ನು ಇಟ್ಟುಕೊಂಡು ಜೀವನ ನಡೆಸಿಕೊಂಡು ಹೋಗಬೇಕಾದರೆ, ನನ್ನದೇ ದಾರಿಯಲ್ಲಿ ಹೋಗಬೇಕಾಗುತ್ತದೆ. ಅದನ್ನು ನಾನು ಇಟ್ಟುಕೊಂಡಿದ್ದೇನೆ. ಈ ಒಂದು ವಿಚಾರದಲ್ಲಿ ನಾನು ಹೇಳಬೇಕಾಗುತ್ತದೆ. ಯಾವ ಯಾವ ರೀತಿ ವಿಚಾರಗಳು ಡೆವಲಪ್ ಆಯಿತು, ಯಾವ ಯಾವ ಹಂತದಲ್ಲಿ ಯಾವ ಯಾವ ತೀರ್ಮಾನಗಳಾಗುತ್ತವೆ, ಯಾವ ಯಾವ ರೀತಿ ಒಬ್ಬ ವ್ಯಕ್ತಿಗೂ, ಇನ್ನೊಬ್ಬ ವ್ಯಕ್ತಿಗೂ ವ್ಯವಸ್ಥೆ ತುಲನೆ ಮಾಡುತ್ತದೆ ಎನ್ನತಕ್ಕದ್ದನ್ನು ಯೋಚನೆ ಮಾಡಬೇಕಾಗುತ್ತದೆ. ನನ್ನ ರಾಜೀನಾಮೆ ಇದೇ ಮೊದಲನೆಯದಲ್ಲ. ನನ್ನ ರಾಜೀನಾಮೆ 1988ರಲ್ಲಿ ಇದೇ ರೀತಿ ಒಂದು ಸಾರಿ ಕ್ಷುಲ್ಲಕ ಆಪಾದನೆಯನ್ನು ನನ್ನ ಮೇಲೆ ಮಾಡಿದರು. ಅಲ್ಲೂ ಇದೇ ರೀತಿಯಾಗಿ ಕಿಡಗೇಡಿಗಳು ಕ್ಷುಲ್ಲಕ ಆಪಾದನೆಯನ್ನು 3 ಜನ ಮಂತ್ರಿಗಳ ಮೇಲೆ ಮಾಡಿದರು. ಆ 3 ಜನ ಮಂತ್ರಿಗಳ ಮೇಲೆ ಮಾಡಿದಾಗ, ನಾನೂ ಆ ಸಂದರ್ಭದಲ್ಲಿ ಮಂತ್ರಿಯಾಗಿದ್ದೆ. ಸಿ.ಓ.ಡಿ.ಗೆ ರೆಫರ್ ಮಾಡಿದರು. ಆದಾದಮೇಲೆ, ಲೋಕಾಯುಕ್ತಕ್ಕೆ ರೆಫರ್ ಮಾಡಿದರು. ಲೋಕಾಯುಕ್ತಕ್ಕೆ ರೆಫರ್ ಮಾಡಿದ ತಕ್ಷಣ ನಾನು ನೈತಿಕತೆಯಿಂದ ರಾಜೀನಾಮೆಯನ್ನು ಕೊಟ್ಟು, ಲೋಕಾಯುಕ್ತದ ಮುಂದೆ ಹೋದೆ. ಲೋಕಾಯುಕ್ತದ ಮುಂದೆ ಇದ್ದಾಗಲೇ ಸರ್ಕಾರದ ಬದಲಾವಣೆ ಆಯಿತು. ಲೋಕಾಯುಕ್ತದಲ್ಲಿದ್ದವರೆಲ್ಲ ಮಂತ್ರಿಗಳಾದರು. ಆದರೆ, ನನ್ನನ್ನು ಮಂತ್ರಿಯಾಗಿ ತೆಗೆದುಕೊಳ್ಳಲಿಲ್ಲ. ನಾನು ಹಾಗೇ ಉಳಿದುಕೊಂಡೆ. ಕಾರಣ, ನನಗೆ ಗೊತ್ತಿಲ್ಲ. ಆದರೆ, ಲೋಕಾಯುಕ್ತದಿಂದ ಮತ್ತೆ ಕ್ಲೀನ್‌ಚಿಟ್ ಬಂದ ಮೇಲೆ, ಮುಂದೆ ನಾನು ಮಂತ್ರಿಯಾಗಲಿಲ್ಲ. ಆದರೂ 8 ವರ್ಷಗಳ ಕಾಲ ಸತತವಾಗಿ ಇದೇ ರೀತಿಯಾಗಿ ಉಳಿದುಕೊಂಡು ಬಂದೆ. ನಂತರ, ಶ್ರೀ ಜೆ.ಎಚ್.ಪಟೇಲ್‌ರವರು ನನ್ನನ್ನು ಮಂತ್ರಿಯಾಗಿ ಮಾಡಿದರು. ಅವರ ಮಂತ್ರಿಗಳಾದ ಒಂದು ಒಂದೂಕಾಲು ತಿಂಗಳಲ್ಲೇ 88ರಲ್ಲಿ ಆಗಿದ್ದ ಅದೇ ಪರಿಸ್ಥಿತಿ ಉದ್ಭವವಾಯಿತು. ಇವತ್ತು ಮಾಡಬೇಕಾದರೆ ಬೇರೆ ಬೇರೆ ಅಳತೆ ಗೋಲುಗಳು. ಒಬ್ಬೊಬ್ಬರಿಗೆ ಒಂದೊಂದು ರೀತಿ. ನಾನು ಯಾರನ್ನೂ ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಇದೊಂದು ವ್ಯವಸ್ಥೆಯ

ಪಿತೂರಿ. ವ್ಯವಸ್ಥೆಯ ಒಂದು ಸಂಚು. ಕೆಲವು ಜನರನ್ನು ಯಾವ ರೀತಿ ನೋಡುತ್ತಾರೆ, ಕೆಲವು ಜನರನ್ನು ಯಾವ ರೀತಿ ಈ ಸಮಾಜ ನೋಡುತ್ತದೆ, ಈ ವ್ಯವಸ್ಥೆ ಹೇಗೆ ನೋಡುತ್ತದೆಂಬುದನ್ನು ನಾವು ಬಹಳ ನೋಡಬೇಕಾಗುತ್ತದೆ. ಡಾ।। ಬಿ.ಆರ್.ಅಂಬೇಡ್ಕರ್‌ರವರು 25.11.1949ರಲ್ಲಿ ನಮ್ಮ ಪಾರ್ಲಿಮೆಂಟಿನಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡಿದರು.

"On 26th June 1950 we are going to enter into a life of contradictions. In politics, we will have equality and in social Land economic life we will have inequality. In politics we will be recognising the principles of one man one vote and one vote one value. In our social and economic life, we shall be by reason of our social and economic strucure continue to deny the principles of one man one value. How long shall we continue to live with this type of contradiction? How long shall we continue to deny equality in our social and economic life? If you continue to deny for it long we will do so only by putting our political democracy in peril. We must remove this contradition at the earliest possible moment or else, those who suffer from inquality will blow up the structure of political democracy which we have so labouriously built up." ಆವತ್ತು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುತ್ತಿದೆ, ಈ ಸ್ವಾತಂತ್ರ್ಯದಲ್ಲಿ ನಮಗೆ ಎಕಾನಮಿಕ್ ಈಕ್ವಾಲಿಟಿ, ಸೋಷಿಯಲ್ ಈಕ್ವಾಲಿಟಿ ಬಂದರೆ ಸಾಕು, ಏಕೆಂದರೆ, ಪೊಲಿಟಿಕಲ್ ಈಕ್ವಾಲಿಟಿ ಬಂದ ಹಾಗೆಯೇ, ಎಲ್ಲರಿಗೆ ಒಂದೇ ಬೆಲೆ, ಒಂದು ಓಟಿಗೆ ಒಂದೇ ಬೆಲೆ ಪ್ರತಿಯೊಬ್ಬರಿಗೂ ಇದೆ ಎಂದು ಡಾ।। ಬಿ.ಆರ್.ಅಂಬೇಡ್ಕರ್‌ರವರು ತಿಳಿದುಕೊಂಡಿದ್ದರು. ಆದರೆ, ಇವತ್ತೇನಾಗಿದೆ? ಸೋಷಿಯಲ್ ಎಕಾನಮಿಕ್ ಇನ್‌ಈಕ್ವಾಲಿಟಿ ಅಲ್ಲ, ಪೊಲಿಟಿಕಲ್ ಇನ್‌ಈಕ್ವಾಲಿಟಿ ಎಷ್ಟಾಗಿದೆ ಅಂದರೆ ಹೇಳುವುದಕ್ಕೆ ಅಸಾಧ್ಯ. ಪೊಲಿಟಿಕಲ್ ಇನ್‌ಈಕ್ವಾಲಟಿ, ಒಬ್ಬೊಬ್ಬರಿಗೆ ಒಂದೊಂದು ರೀತಿ. ಒಬ್ಬರಿಗೆ ಒಂದು ರೀತಿ ತೀರ್ಮಾನ, ಮತ್ತೊಬ್ಬರಿಗೆ ಒಂದು ರೀತಿಯ ತೀರ್ಮಾನ. ಒಬ್ಬರಿಗೊಂದು ರೀತಿ ಬರೆಯತಕ್ಕದ್ದು, ಮತ್ತೊಬ್ಬರಿಗೊಂದು ರೀತಿ ಬರೆಯತಕ್ಕ ವ್ಯವಸ್ಥೆ. ಇದು ನಿಜವಾಗಲೂ ನನ್ನ ಜೀವನದಲ್ಲಿ ಆಘಾತವಾಗಿದೆ. ನನ್ನ ಮೇಲೆ ಯಾರೇ ಒಂದು ಚಾರಿತ್ರ್ಯವಧೆ, ಈಗ ಪ್ರತಿಯೊಂದು ಪೇಪರ್‌ನವರೂ, ನಾನು ಮೊದಲೇ ಹೇಳಿದೆ ಒಂದು ಸಾಮಾಜಿಕ

ವ್ಯವಸ್ಥೆಯಲ್ಲಿ, ಜಾತಿಯಲ್ಲಿ ಹುಟ್ಟುವುದೇ ಕೆಲವರಿಗೆ ಮೆರಿಟ್ ಆಗುತ್ತದೆ, ಕೆಲವರಿಗೆ ಶಾಪವಾಗುತ್ತದೆ. ಅಂಥ ಒಂದು ಸಾಮಾಜಿಕ ವ್ಯವಸ್ಥೆ ನಮ್ಮಲ್ಲಿದೆ. ಕೆಲವರಿಗೆ ಮೆರಿಟ್ಟೇ ಡೀ-ಮೆರಿಟ್ ಆಗುತ್ತದೆ. ಕೆಲವರಿಗೆ ಡೀ-ಮೆರಿಟ್ಟೇ ಮೆರಿಟ್ಟಾಗುತ್ತದೆ. ಕೆಲವರು ತಪ್ಪಿನಲ್ಲಿ ತ್ಯಾಗವನ್ನು ಕಂಡುಹಿಡಿಯುತ್ತಾರೆ. ಇಂಥ ಒಂದು ವ್ಯವಸ್ಥೆ ನಮ್ಮಲ್ಲಿದೆ. ಉದಾಹರಣೆಗೆ, ನಾನು ಒಂದು ಸ್ಟೇಟ್‌ಮೆಂಟ್ ನೋಡಿದೆ. ಒಂದು ಪತ್ರಿಕೆಯಲ್ಲಿ ಏನು ಬರೆದಿದ್ದಾರೆಂದರೆ, "Somashekar bungles his case."

"Karnataka Higher Education Minister Mr.Somashekar, who was forced to put in his papers following charges of copying in a law examination nearly two decades ago, has none but himself to blame for his predicament. For Mr.Somashekar who has always been advocating values in public life, this was an opotunity to go down as a hero, instead, he emerged as a villain of the case. When the past caught up with him, the minister bungled and dug his own grave. When newspapers reported nearly two months ago that Mr. Somashekar was debarred from appearing for examination for two years after he waas caught copying, there was two options open for him. (1) to admit guilt and apologise. (2) To deny the charge and yet resign to uphold probity in public life."

I have done it: If have upheld probity in public life by resigning from the ministership. After all, Ceasar's wife should be above suspicion.

"....but the minister did none of this. On the other hand he ordered an enquiry against himself and entrusted the job to his own subordinate Principal Secretary, Education Mr. Nagaraja Shetty. To Mr. Somashekar's charge, Bangalore University Vice-Chancellor N.R.Shetty not only confirmed the charge but also dug up documents to prove them. As a bureaucrat, Mr. Nagaraja Shetty had a limited role to play. He picked up holes in the Vice-

Chancellor's report and gave his boss a clean chit, and Mr. Somashekar went to town with a certificate issued by the Secratary and began accusing the Vice-Chancellor of enclosing concocted and fabricated documents. Not just that, he promptly ordered an enquiry against the Vice-Chancellor against..."

MR. SPEAKER: The privilege of making a statement after sending his resignation has lot of limitations. ತಾವು ಒಂದು ಲಿಖಿತವಾದ ಹೇಳಿಕೆಯನ್ನು ಓದಬಹುದಾಗಿತ್ತು ಅಥವಾ ಓರಲ್ ಆಗಿ ಹೇಳುವುದಾದರೆ ಅದರ ಮುಖ್ಯಾಂಶಗಳನ್ನು ಅವರಿಗೆ ಹೇಳಿ.. ನಾನು ಹೇಳುತ್ತಿದ್ದೇನೆ, see all that you had stated earlier, because the problem is, there will be no debate on this.

ಶ್ರೀ ಬಿ.ಸೋಮಶೇಖರ್: ಡೀಬೇಟ್ ಅಲ್ಲ.

MR. SPEAKER: Kindly understand me. ಇದರ ಮೇಲೆ ಡಿಬೇಟ್ ಇಲ್ಲ. If there are any disputable points, if other hon.members raise to seek clarifications or to say their own versions, I will be in very difficult position. I cannot set a new precedent in the House. Please understand my difficulty.

7.00 ಪಿ.ಎಂ

ಶ್ರೀ ಬಿ.ಬಿ.ಶಿವಪ್ಪ: ಸಾರ್, ನಾನು ಒಂದು ಕ್ಲಾರಿಫಿಕೇಷನ್ ಕೇಳಬೇಕಾಗುತ್ತದೆ. ಏಕೆಂದರೆ ನನ್ನ ಮೇಲೆ ಅವರು ಡೆಫಮೇಷನ್ ನಡೆಸುತ್ತಿದ್ದಾರೆ. ಡೆಫಮೇಷನ್ ಕೇಸ್ ನಡೆಯುತ್ತಿದೆ. ಸಿ.ಓ.ಡಿ. ತನಿಖೆ ಮಾಡಿಸಿದವನು ನಾನು. ಇವತ್ತು ಕಿಡಿಗೇಡಿಗಳು ಎಂದು ಹೇಳಿದ್ದಾರೆ. ಯಾರೋ ಕಿಡಿಗೇಡಿಗಳು ಮೂರು ಜನ ಮಂತ್ರಿಗಳ ಮೇಲೆ ಆಪಾದನೆ ಮಾಡಿದ್ದರು ಎಂದು ಹೇಳಿದ್ದಾರೆ. ರೆಕಾರ್ಡ್‌ನಲ್ಲಿ ಏನಿದೆ ನೋಡೋಣ.

ಶ್ರೀ ಬಿ.ಸೋಮಶೇಖರ್: ನಾನು ಏನು ಹೇಳಿದ್ದು ಎಂದರೆ ಈ ಪಿತೂರಿ ಯಾವಾಗ ನಡೆಯಿತೋ ಆ ದೃಷ್ಟಿಯಿಂದ ಹೇಳಿದ್ದೇನೆ. ಅಲಿಗೇಷನ್ ನೀವು ಮಾಡಿದ್ದೀರಿ ಎಂದು ಹೇಳಿಲ್ಲ.

ಶ್ರೀ ಬಿ.ಬಿ.ಶಿವಪ್ಪ: ಅದು ರೆಕಾರ್ಡ್‌ನಲ್ಲಿದೆ. ಡೆಫಮೇಷನ್ ಹಾಕಿದ್ದಾರೆ. ಅದು

ಇನ್ನೂ ನಡೆಯುತ್ತಿದೆ. ಮೊನ್ನೆ ಹಿಯರಿಂಗ್ ಆಗಿದೆ. ನಾವಿಬ್ಬರೂ ಜೊತೆಯಲ್ಲಿದ್ದೆವು. ನಾಡಿದ್ದು 25ನೇ ತಾರೀಖು ಮತ್ತೆ ಇದೆ. ಸಿ.ಒ.ಡಿ.ತನಿಖೆ ಬಗ್ಗೆ ಮೊನ್ನೆಯೂ ನಾನು ಮಾತನಾಡಬೇಕು ಎಂದು ಇದ್ದೆ. ಮಾನ್ಯ ರಾಮಸ್ವಾಮಿಯವರು ಎತ್ತಿದಾಗ ನಾನು ಬೇಡ ಎಂದು ಸುಮ್ಮನಾದೆ. ಕೋರ್ಟಿನಲ್ಲಿ ಡೆಫಮೇಷನ್ ನಡೆಯುತ್ತಾ ಇರುವುದರಿಂದ ಸಿ.ಓ.ಡಿ ತನಿಖೆ ಏನು ನಡೆಯಿತು ಅದನ್ನು ಇಲ್ಲಿ ಇಡಬೇಕಾಗುತ್ತದೆ. ತಾವು ನೋಡಲಿಲ್ಲ ಎಂದು ಹೇಳಿಬಿಟ್ಟರಿ ಆವತ್ತು. ನಾನು ತನಿಖೆ ಓದಿದ್ದೇನೆ, ಅದರಲ್ಲೇನೂ ಇಲ್ಲ ಎಂದು ಹೇಳಿದಿರಿ. ತಪ್ಪಾಗುತ್ತದೆ. ರೆಕಾರ್ಡ್ ಸರಿಯಾಗಿರಬೇಕಾಗುತ್ತದೆ. ಏಕೆಂದರೆ ಸಿ.ಓ.ಡಿ. ನಂಬಿಕೆ ಇರತಕ್ಕ ಒಂದು ಸಂಸ್ಥೆ. ಏನಿಲ್ಲ ಅದರಲ್ಲಿ ಅಂದುಬಿಟ್ಟರೆ ನಾಳೆ ನೀವೇ ಸಿ.ಓ.ಡಿ. ತನಿಖೆಗೆ ಹಾಕಿದಾಗ ನಿಷ್ಠಾವಂತ ಅಧಿಕಾರಿಗಳು ತನಿಖೆ ಮಾಡುವುದಕ್ಕೆ ಮುಂದೆ ಬರುವುದಿಲ್ಲ. ನಿಜ ಹೊರಗೆ ಬರುವುದಿಲ್ಲ. ಆದ್ದರಿಂದ ನಾನು ಏನು ಮೂರು ಜನರ ಮೇಲೆ ಸಿ.ಓ.ಡಿ. ತನಿಖೆ ಮಾಡಿಸಿದ್ದೇನೆ ಎಂದಿದ್ದೀರಿ ಅದನ್ನು ಇಲ್ಲಿ ಪ್ಲೇಸ್ ಮಾಡಬೇಕಾಗುತ್ತದೆ. ಮೊಯಿಲಿ ಸಾಹೇಬರ ಕಾಲದಲ್ಲಿ ವಜಾ ಆಯಿತು. ಅಲ್ಲಿಯವರೆಗೆ ಅದು ಜೀವಂತವಾಗಿತ್ತು. ಮೊಯಿಲಿ ಸಾಹೇಬರು ಆವತ್ತು ಇರಲಿಲ್ಲ. ನಾನು ಮಾತನಾಡಲಿಲ್ಲ. ಇವತ್ತು ಕೋರ್ಟಿನಲ್ಲಿ ಕೇಸ್ ಇರುವುದರಿಂದ ಅದು ಇಲ್ಲಿ ಪ್ರಸ್ತಾಪ ಆಗಿರುವುದರಿಂದ ಆ ಡಾಕ್ಯುಮೆಂಟ್ಸ್ ಇಲ್ಲಿ ಬರಬೇಕಾಗುತ್ತದೆ. ಇಲ್ಲದಿದ್ದರೆ ನನ್ನ ಕೇಸಿಗೆ ತೊಂದರೆಯಾಗುತ್ತದೆ. ನಾನು ಕೇಸ್ ಎದುರಿಸುತ್ತಿದ್ದೇನೆ.

ಶ್ರೀ ಬಿ.ಸೋಮಶೇಖರ್: ಅಧ್ಯಕ್ಷರೇ, 88ರಲ್ಲಿ ನಾನು ಒಂದು ಸಾರಿ ರಾಜೀನಾಮೆ ಕೊಟ್ಟೆ ಎಂದು ಪಾಸಿಂಗ್ ರಿಮಾರ್ಕ್ಸ್ ನನ್ನದು. ಅಂದರೆ ಅದರ ಬಗ್ಗೆ ವಿವರಣೆಗೆ ಹೋಗಿಲ್ಲ ನಾನು. ಅಂದರೆ ನಾನು ಎರಡು ಸಾರಿ....

ಅಧ್ಯಕ್ಷರು: ತಾವು ದಯಮಾಡಿ ಕನ್‌ಕ್ಲೂಡ್ ಮಾಡಿ.

ಶ್ರೀ ಬಿ.ಸೋಮಶೇಖರ್: ಆಮೇಲೆ ಅದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಅಂದರೆ ಮಾನ್ಯ ಸಭಾಧ್ಯಕ್ಷರೆ, ಇಲ್ಲಿ ಒಂದು ಹೇಳುತ್ತೇನೆ ಕೇಳಿ.

"When the issue was raised in the legislature, Mr.Somashekar lost every opportunity to Martyrdom. ಮಾನ್ಯ ಸಭಾಧ್ಯಕ್ಷರೇ, ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. "Had he announced his resignation on the Floor of the House, he would have gone down in the history as a person who sacrificed the office to uphold the moral principles." ಅಂದರೆ ನಾನು ಹೌಸ್‌ನಲ್ಲಿ ರಾಜೀನಾಮೆಯನ್ನು ಅನೌನ್ಸ್ ಮಾಡಿದ್ದರೆ ಹೀರೋ ಆಗುತ್ತಿದ್ದೆ. ನಾನು ಮುಖ್ಯಮಂತ್ರಿಗಳ ಮನೆಗೆ ತೆಗೆದುಕೊಂಡುಹೊಗಿ ಕೊಟ್ಟೆನಲ್ಲಾ ರಾಜೀನಾಮೆ, ಆ ರಾಜೀನಾಮೆ ಅಕ್ಸೆಪ್ಟ್ ಆಗುವುದಿಲ್ಲ. ಆಗ ಕೊಟ್ಟಂಥ ರಾಜೀನಾಮೆ

ಮಂತ್ರಿಗಳಾಗಿ ಮುಂದುವರೆಯತಕ್ಕ ರಾಜೀನಾಮೆ. ಅಲ್ಲಿ ಅನೌನ್ಸ್ ಮಾಡತಕ್ಕದ್ದು ರಾಜೀನಾಮೆ ಇದು. ಪತ್ರಿಕೆಗಳವರು ಕೆಲವು ಯಾವ ರೀತಿ ನನ್ನ ಮೇಲೆ ಮಾಡಿದ್ದಾರೆ ಎಂಬ ವ್ಯವಸ್ಥೆ ಬಗ್ಗೆ ನಾನು ಹೇಳಿದೆ ಅಷ್ಟೆ. ಇನ್ನೇನೂ ಯಾರ ಬಗ್ಗೆಯೂ ನಾನು ದೂಷಣೆ ಮಾಡುತ್ತಿಲ್ಲ. ಎಲ್ಲಾ ಪತ್ರಿಕೆಗಳ ಬಗ್ಗೆ ಹೇಳುತ್ತಿಲ್ಲ ನಾನು. ಕೆಲವು ಪತ್ರಿಕೆಗಳ ಬಗ್ಗೆ. ★ ಇದನ್ನು ನೋಡಿ ನನಗೆ ದಿಗ್ಭ್ರಮೆಯಾಯಿತು. ನಾನು ಯಾವಾಗಲೂ ಮುಖ್ಯಮಂತ್ರಿ ಹತ್ತಿರ ಆಗಲೀ ಅಥವಾ ಯಾವ ಮಂತ್ರಿಗಳ ಹತ್ತಿರ ಆಗಲೀ ಅಥವಾ ತಮ್ಮ ಬಗ್ಗೆಯೇ ಆಗಲೀ...

ಅಧ್ಯಕ್ಷರು: ನಾನೂ ನೋಡಿದೆ ನಿನ್ನೆ ಸಂಜೆ. ಆದರೆ ನನಗೆ ಆಶ್ಚರ್ಯ ಆಯಿತು. ನಾನು ಸಾಮಾನ್ಯವಾಗಿ ಕೊಲೆ ಮಾಡಿದರೆ ಅವರಿಗೆ ಕಂಪ್ಲೆಂಟ್ ಕೊಡುವುದಕ್ಕೆ ಛಾನ್ಸೇ ಕೊಡುವುದಿಲ್ಲ. ಹಾಗೆ ಮಾಡುವುದು ನಾನು. ಇದು ಹೇಗೆ ಬಂತು ಕಂಪ್ಲೇಂಟ್ ಎಂದು ಆಶ್ಚರ್ಯ ಆಯಿತು ನನಗೆ.

ಶ್ರೀ ಬಿ.ಸೋಮಶೇಖರ್: ನನಗೆ ನನ್ನ ಬಗ್ಗೆಯೇ ಆಗಲಿ, ಅಥವಾ ತಮ್ಮ ಬಗ್ಗೆಯೇ ಆಗಲಿ ಅಥವಾ ನಮ್ಮ ಮಂತ್ರಿಗಳ ಬಗ್ಗೆಯಾಗಲೀ ಯಾರಿಗೂ ದೂರು ಹೇಳಿಲ್ಲ. ಅದನ್ನು ಪ್ರೋಬ್ ಮಾಡಿ ಎಂದು ಆ ತರಹ ನೀಚ ಕೆಲಸಕ್ಕೆ ಹೋಗುವವನು ಅಲ್ಲ. ನಾನು ಯಾವಾಗಲೂ ಬೇರೆಯವರಿಂದ ಸಫರ್ ಆಗಿದ್ದಾನೆಯೇ ಹೊರತು ಬೇರೆಯವರನ್ನು ಸಫರ್ ಮಾಡಿಸುವ ವ್ಯಕ್ತಿ ಅಲ್ಲವೇ ಅಲ್ಲ. ನಮ್ಮ ನಮ್ಮ ಆತ್ಮಸಾಕ್ಷಿಗೆ ತಕ್ಕಂತೆ ನಡೆಯತಕ್ಕಂಥವನು. ಬೇರೆ ಆತ್ಮಸಾಕ್ಷಿಗೆ ತಕ್ಕಂತೆ ನಡೆಯತಕ್ಕಂಥವನಲ್ಲ. ಈಗೇನಾದರೂ ಇಲ್ಲಿ ಮಾಡಿರತಕ್ಕದ್ದು ನಾನು ಹಾಗೆ ಹೇಳಿದ್ದಲ್ಲ. ಆದರೆ ಇದನ್ನು ನಾನು ಜಸ್ಟಿಫೈ ಮಾಡುತ್ತೇನೆ ಎಂದು ಅಲ್ಲ. ಅದು ಅವರವರಿಗೆ ಬಿಟ್ಟ ವಿಚಾರ. ಅಕಸ್ಮಾತ್ ನಾಣಯ್ಯನವರೇನಾದರೂ ಆ ರೀತಿ ಮಾಡಿದ್ದರೆ ಅದು ಅವರಿಗೆ ಬಿಟ್ಟಂಥ ವಿಚಾರ. ನಾನು ಹೇಗೆ ನನ್ನ ಮೇಲೆ ಎನ್‌ಕ್ವೈರಿ ಮಾಡಿ ಎಂದು ಹೇಳುತ್ತೇನೋ ಆ ರೀತಿ ಅವರೂ ಅದಕ್ಕೆ ಆದೇಶ ಕೊಡಲಿ. ಅವರೇನು ತೀರ್ಮಾನ ತೆಗೆದುಕೊಂಡಿದ್ದಾರೋ ಅದಕ್ಕೆ ಆದೇಶ ಕೊಡಲಿ. ಅವರು ಎನ್‌ಕ್ವೈರಿ ಮಾಡಿಸಿಕೊಳ್ಳಲಿ, ಚಿಂತೆ ಇಲ್ಲ. ಆದರೆ ತಮ್ಮ ಮೇಲೇನಾದರೂ ಇದ್ದರೆ ಅದು ನಿಮಗೆ ಬಿಟ್ಟಂಥ ವಿಚಾರಗಳು. ನಿಮ್ಮ ನಿಮ್ಮ ಆತ್ಮಸಾಕ್ಷಿಗೆ ಬಿಟ್ಟಂಥ ವಿಚಾರಗಳು.

ಅಧ್ಯಕ್ಷರು: ನಮಗೆ ಆತ್ಮಾನೂ ಇಲ್ಲ, ಸಾಕ್ಷಿನೂ ಇಲ್ಲ, ಬಿಡಿ. I am an expert in this game. ಮುಂದಕ್ಕೆ ಹೋಗಿ. ಗೊತ್ತಾಯಿತು ನನಗೆ.

ಶ್ರೀ ಬಿ.ಸೋಮಶೇಖರ್: ಆದ್ದರಿಂದ ನಾನಂತೂ ಈ ಒಂದು ವಿಚಾರದಲ್ಲಿ ಯಾರಿಗೆ ಯಾರ ಮೇಲೂ ಮುಖ್ಯಮಂತ್ರಿಗಳ ಹತ್ತಿರ ಆಗಲೀ ಯಾರಿಗೂ ಮಾಡಿಲ್ಲ. ಆದರೆ

★ ಈ ಪದವನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಅವರವರಿಗೆ ಬಿಟ್ಟಂಥ ವಿಚಾರಗಳು. ಈಗ ಒಂದೊಂದು ವಿಚಾರದಲ್ಲಿ ಒಂದೊಂದು ತೀರ್ಮಾನಗಳು ಕೊಟ್ಟಾಗ ಒಬ್ಬೊಬ್ಬರ ವಿಚಾರದಲ್ಲಿ ಒಂದೊಂದು ಬಂದಾಗ ಅದನ್ನು ಅವರವರು ತೀರ್ಮಾನ ಮಾಡಬೇಕೇ ಹೊರತು ಅವರು ಆತ್ಮವಂಚನೆಯನ್ನು ಮಾಡಿಕೊಂಡಿರತಕ್ಕದ್ದು....

MR. SPEAKER: Please stop for a minute. I would request the the Hon'ble Leader to intervene. He takes out some paper. I don't know the creditworthiness of that paper.

SRI M.SOMASHEKAR: I clarify that I have not done that.

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ. ಅದರಲ್ಲಿ ಬರೆದಿದ್ದಾರಂತೆ. ನಾಣಯ್ಯ ಎಲ್ಲೋ ಭ್ರಷ್ಟಾಚಾರ ಮಾಡಿದ್ದಾರೆ. ರಮೇಶ್ ಕುಮಾರ್ ಎಲ್ಲೋ ಕೊಲೆ ಮಾಡಿದ್ದಾರೆ ಎಂದು. ಅವರವರಿಗೆ ಬಿಟ್ಟ ವಿಚಾರ. ಅವರಿಗೆಲ್ಲಾ ಆತ್ಮ ಇದ್ದರೆ ಅದರ ಬಗ್ಗೆ ಆತ್ಮಸಂಶೋಧನೆಗಳನ್ನು ಮಾಡಿಕೊಂಡು ನಿರ್ಣಯಕ್ಕೆ ಬರಬಹುದು ಎಂದು ಹೇಳಿ ಈ ರೀತಿಯ ವ್ಯಾಖ್ಯಾನ ನಿಮ್ಮ ಒಬ್ಬ ಸಹೋದ್ಯೋಗಿಗಳು ಮಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಸಾರ್ ಮುಂದಕ್ಕೆ ಹೋಗಬೇಡಿ ನೀವು. ಒಂದು ನಿಮಿಷ ಏನೂ ಮಾತನಾಡಬೇಡಿ.

ಅಧ್ಯಕ್ಷರು: ಸ್ವಲ್ಪ ದಯಮಾಡಿ ಸುಮ್ಮನಿರಿ. ನಾನು ಏನು ಮಾಡಬೇಕು ಎಂದು ತಾವು ಹೇಳಿ.

ಶ್ರೀ ಜೆ.ಹೆಚ್.ಪಟೇಲ್: ಅದು ಕಡತದಲ್ಲೂ ಹೋಗಬಾರದು. ಯಾವುದೋ ಒಂದು ಪತ್ರಿಕೆಯಲ್ಲಿ . ★ ಆ ಪತ್ರಿಕೆಯ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕು, ಏನು ಮಾಡಬೇಕು ಅದು ಬೇರೆ. ಅದನ್ನು ಕಡತದಿಂದ ತೆಗೆದುಹಾಕಿಸಿ. ನಮ್ಮ ಸಹೋದ್ಯೋಗಿ ನಾಣಯ್ಯನವರ ಮೇಲಾಗಲೀ ಸಭಾಧ್ಯಕ್ಷರ ಮೇಲಾಗಲೀ ಅಥವಾ ಮಾನ್ಯ ಸೋಮಶೇಖರ್ ಅವರ ಮೇಲೇ ಆಗಲೀ ಯಾವುದೇ ಒಂದು ಪತ್ರಿಕೆಯಲ್ಲಿ ಬಂದಿದ್ದನ್ನು ನಾವು ಇಲ್ಲಿ ಸದನದಲ್ಲಿ ಹೇಳುವುದು ಸರಿಯಲ್ಲ. ದಯವಿಟ್ಟು ಅದನ್ನು ತೆಗೆದುಹಾಕಿ.

ಅಧ್ಯಕ್ಷರು: ನಾನು ಹೇಳಿಬಿಡುತ್ತೇನೆ ನಿಮಗೆ. ನಾನು ಗಾಂಧಿಯೂ ಅಲ್ಲ. ಲಾಲ್‌ಬಹದ್ದೂರ್ ಶಾಸ್ತ್ರಿನೂ ಅಲ್ಲ. ಆಮೇಲೆ ಅಂಬೇಡ್ಕರೂ ಅಲ್ಲ. ನಾನು

★ ಈ ಪದವನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ರಾಜೀನಾಮೆ ಕೊಡುವುದಿಲ್ಲ. ನನ್ನನ್ನು ಈ ಸದನದ ಆಯ್ಕೆ ಮಾಡಿದೆ. ಇಡೀ ಸದನ ನನ್ನ ಮೇಲೆ ವಿಶ್ವಾಸ ಇಲ್ಲ ಎಂದು ಹೇಳಿದಾಗಷ್ಟೇ ನಾನು ಬಿಟ್ಟುಹೋಗುವುದು. ನಾನು ಖಾಯಂ ಮಾಡಿಕೊಂಡುಬಿಟ್ಟಿದ್ದೇನೆ ಬಿಡಲೇಬಾರದು ಎಂದು. ಈ ಸುಖ ನಾನು ಅನುಭವಿಸುತ್ತೇನೆ. ನಾನು ಬಿಡುವ ಪ್ರಶ್ನೆ ಇಲ್ಲ. ನನಗೆ ಆತ್ಮಾನೂ ಇಲ್ಲ. ನೀವು ಅದು ಯಾವಯಾವ ಎನ್‌ಕ್ವೈರಿ ಮಾಡಿಸುತ್ತೀರೋ ಮಾಡಿಸಿ. ಅಲ್ಲಿ ಸಾಬೀತಾಗಿ ನನಗೆ ಜೈಲಾದರೆ ಆಗ ಬಿಟ್ಟುಹೋಗುತ್ತೇನೆ. ಅಲ್ಲಿಯವರೆಗೂ ನಾನು ಬಿಟ್ಟುಹೋಗುವ ಪ್ರಶ್ನೆಯೇ ಇಲ್ಲ. ನಾನು ಇಲ್ಲೇ ಕೂತಿರುತ್ತೇನೆ.

ಶ್ರೀ ಜೆ.ಹೆಚ್.ಪಟೇಲ್: ಮಾನ್ಯ ಸಚಿವರು ರಾಜೀನಾಮೆ ಕೊಟ್ಟಿದ್ದಕ್ಕೆ he has a right to make a statement on the floor of the House. ಅದನ್ನು ಮಾಡಿದ್ದಾರೆ. ಅಷ್ಟಕ್ಕೆ ಸಾಕು. ಹೆಚ್ಚು ಅದನ್ನು ಬೆಳೆಸಿಕೊಂಡು ಹೋಗುವುದು ಬೇಡ.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಸಭಾಧ್ಯಕ್ಷರೆ, ದಯವಿಟ್ಟು ನನಗೆ ಅವಕಾಶ ಕೊಡಿ. ಅದ್ಯಾವುದೋ ಒಂದು ಪತ್ರಿಕೆಯಲ್ಲಿ ನಾಣಯ್ಯ ಅಧ್ಯಕ್ಷನಾಗಿದ್ದಾಗ 3 ಕೋಟಿ ರೂಪಾಯಿ ಯಾರಿಗೋ ಕೊಟ್ಟರಂತೆ, ಕೊಟ್ಟಿಟ್ಟು ಅದೇನೋ ಆಯಿತಂತೆ, ಅದು ಅವರ ಆತ್ಮಸಾಕ್ಷಿಗೆ ಬಿಡುತ್ತೇನೆ ಎಂದು ಹೇಳುತ್ತಾರಲ್ಲಾ, ಮಾನ್ಯ ಮುಖ್ಯಮಂತ್ರಿಗಳೇ, ತಮ್ಮ ಮಂತ್ರಿಮಂಡಲದಲ್ಲಿ ನಾನು ಮಂತ್ರಿಯಾಗಿದ್ದೇನೆ. ಅದು ಯಾವುದು ತನಿಖೆ ಮಾಡಬೇಕೋ ಮಾಡಿಸಿಬಿಡಿ ಅದನ್ನು. ಆದರೆ....

ಶ್ರೀ ಜೆ.ಹೆಚ್.ಪಟೇಲ್: ಅಲ್ಲಿಯತನಕ ಹೋಗಬಾರದು. ಇದು ನನ್ನ ಅಭಿಪ್ರಾಯ. ಇದು ಚರ್ಚಾಸ್ಪದ ವಿಷಯ ಅಲ್ಲ.

SRI M.C.NANAIAH: I do respect, you are my leader. But this is nothing but character assassination.

ಶ್ರೀಮತಿ ಪ್ರಮೀಳ ನೇಸರ್ಗಿ: ಸಾರ್, ಪಾಯಿಂಟ್ ಆಫ್ ಆರ್ಡರ್. ಸಭಾಧ್ಯಕ್ಷರ ಮೇಲೆ casting aspersions.

MR SPEAKER: He is my good friend. I can understand his position. I don't take it that way.

ಶ್ರೀ ಬಿ.ಸೋಮಶೇಖರ್: ಈ ತಪ್ಪು ವಿಚಾರಗಳಿಗೆ ನನ್ನ ಹೆಸರನ್ನು ತಂದಿದ್ದಾರೆ. ನಾನು ಆ ರೀತಿ ನೀಚ ಕೆಲಸ ಮಾಡುವವನಲ್ಲ.

ಅಧ್ಯಕ್ಷರು: ಪೇಪರ್ ರೆಫರ್ ಮಾಡಿರುವುದು ಅದೆಲ್ಲಾ need not go into

the records. That will go into the records.

ಶ್ರೀ ಬಿ.ಸೋಮಶೇಖರ್: ನಾನು ಆ ರೀತಿ ಹೇಳುವವನಲ್ಲ. ಏಕೆಂದರೆ ನಾನು ನನ್ನ ವಿಚಾರದಲ್ಲಿ ಮಾತ್ರ ನಾನು ಹೇಳಬಹುದಷ್ಟೆ. ನಾನು ನನ್ನ ವಿಚಾರದಲ್ಲಿ ಮಾತ್ರ ಹೇಳಿಕೊಳ್ಳತಕ್ಕದ್ದು. ಬೇರೆಯವರ ವಿಚಾರದಲ್ಲಿ ನಾನು ಹೇಳುವುದಿಲ್ಲ. ನಾನು ಒಟ್ಟಿನಲ್ಲಿ ಈ ಹದಿನೈದು ವರ್ಷಗಳ ಮಂತ್ರಿಸ್ಥಾನದಲ್ಲಿ, 15 ವರ್ಷಗಳಲ್ಲಿ ಎರಡು ಮೂರು ಖಾತೆಗಳನ್ನು ನಿರ್ವಹಿಸಿದ್ದೇನೆ. ಯಾವುದೇ ಖಾತೆಯಲ್ಲಾಗಲೀ ನಾನು ದುರುಪಯೋಗವನ್ನೇ ಆಗಲಿ ಅಥವಾ ಭ್ರಷ್ಟಾಚಾರವನ್ನೇ ಆಗಲಿ ಅಥವಾ ಪಕ್ಷಪಾತವನ್ನೇ ಆಗಲೀ ಯಾವುದೇ ರೀತಿಯಲ್ಲಿ ನಾನು ಮಾಡಿಲ್ಲ. ಅಥವಾ ನನ್ನ ವೈಯಕ್ತಿಕ ಜೀವನದಲ್ಲೂ ಅಷ್ಟೆ. ಇದು ಒಂದು ಕಡೆ ಹೇಳಿ ನಮ್ಮ ಮನೆಯಲ್ಲಿ ಊರಿನಲ್ಲೇ ಆಗಲೀ ಅಥವಾ ಸಮಾಜದ್ರೋಹಗಳನ್ನು ಮಾಡತಕ್ಕ ★ ನಾವು ಶುದ್ಧವಾದಂಥ ರಾಜಕೀಯ ಜೀವನವನ್ನು ನಡೆಸಿಕೊಂಡು ಬಂದಿದ್ದೇವೆ. ನನ್ನ ಅಣ್ಣನೇ ಆಗಲೀ ತಮ್ಮನೇ ಆಗಲೀ ಯಾವುದೇ ಒಂದು ಸಮಾಜಘಾತುಕ ಕೆಲಸ ಮಾಡುವವರಲ್ಲ. ಭ್ರಷ್ಟಾಚಾರ ಮಾಡತಕ್ಕಂಥದ್ದಲ್ಲ. ನಾವು ವೈಯಕ್ತಿಕವಾಗಿಯೂ ಅಷ್ಟೇ ಸಾಮಾಜಿಕ, ರಾಜಕೀಯ ಜೀವನದಲ್ಲೂ ಅಷ್ಟೇ ಒಂದು ಸಿದ್ಧಾಂತ ಅಡಿಯಲ್ಲಿ ಕೆಲಸ ಮಾಡುವವರು.

ಅಧ್ಯಕ್ಷರು: ಮತ್ತೊಮ್ಮೆ ತಮಗೆ ತಿಳಿವಳಿಕೆ ಕೊಡಬೇಕಾಗುತ್ತದೆ, ಈ ಸದನದಲ್ಲಿ ಯಾವುದೇ ಸನ್ನಿವೇಶದಲ್ಲಿ ಯಾವುದೇ ಸದಸ್ಯರು ಮಾತನಾಡುವಾಗ ಎಲ್ಲೋ ಒಂದು ಕಡೆಗೆ ನೇರವಾದಂಥ ವ್ಯಂಗ್ಯ, ಪರೋಕ್ಷವಾದಂಥ ಅಪರಾಧಗಳು ಬರಲಿಕ್ಕೆ ಸಾಧ್ಯವಿಲ್ಲ. ನನ್ನ ಅಣ್ಣ ತಮ್ಮಂದಿರು ಅಪರಾಧಿಗಳಲ್ಲ, ನನ್ನ ಅಣ್ಣ ತಮ್ಮಂದಿರು ಕೊಲೆಗಡುಕರಲ್ಲ, ನನ್ನ ಅಣ್ಣ ತಮ್ಮಂದಿರು ಭ್ರಷ್ಟಾಚಾರಿಗಳಲ್ಲ ಅಂದರೆ ಬೇರೆ ಯಾರ ಅಣ್ಣತಮ್ಮಂದಿರಾದರೂ ಇಲ್ಲಿರತಕ್ಕವರಿದ್ದರೆ, ಖಚಿತವಾಗಿ, ನಿಮಗೆ ಗೊತ್ತಿದ್ದರೆ ಅದನ್ನು ಹೇಳಬಹುದು.

ಶ್ರೀ ಬಿ.ಸೋಮಶೇಖರ್: ಅಧ್ಯಕ್ಷರೇ, ನನ್ನದು ನಾನು ಇಲ್ಲಿ ಜಸ್ಟಿಫೈ ಮಾಡಿಕೊಳ್ಳುತ್ತಿದ್ದೇನೆ. ಅಂಥಾದ್ದು ಏನಾದರೂ ರಾಜಕೀಯದಲ್ಲಿ ತಪ್ಪು ಕೆಲಸ ಮಾಡಿದ್ದರೆ, ಅದಕ್ಕೆ ನಾನು ಶಿಕ್ಷೆ ವಹಿಸಬಹುದಿತ್ತು...

MR. SPEAKER: By raising this, he is landing himself in trouble. All that will not find place in the records. ಈ Bravado statement ಏನೂ ಇರುವುದಿಲ್ಲ. Nothing will find place in the records.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅಧ್ಯಕ್ಷರೇ, ನನಗೂ ಒಂದು ನಿಮಿಷ ಅವಕಾಶ

★ ಈ ಪದವನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಮಾಡಿಕೊಡಿ.

ಶ್ರೀ ಬಿ.ಸೋಮಶೇಖರ್: ಇಷ್ಟೆಲ್ಲ ಅವಕಾಶ ನನಗೆ ಕೊಟ್ಟಿದ್ದೀರಿ. ಕೊನೆಯಲ್ಲಿ ಒಂದು ವಿಚಾರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ಒಂದು ನಿಮಿಷ ಕುಳಿತುಕೊಳ್ಳಿ, I want to know... The whole House knows, Sri G.V.Sriramareddy is an Hon'ble Member of this House, his brother is also a Communist Leader, he has involved himself in series of agitations number of cases are pending against his brother. What should be the inference? He is the Hon'ble Member who has raised that issue against...

SRI B.SOMASHEKAR: I have not pointed fingers against anybody. ಕುಂಬಳಕಾಯಿ ಕಳ್ಳ ಎಂದರೆ ಹೆಗಲುಮುಟ್ಟಿ ನೋಡಿಕೊಳ್ಳುವಂಥ ಮಾತನ್ನು ನಾನು ಹೇಳಿಲ್ಲ....

MR. SPEAKER: Under the circumstances, having all the information at my command.. Nobody should think that he is the only wise man.

ಶ್ರೀ ಬಿ.ಸೋಮೇಶೇಖರ್: ಯಾರ ಹೆಸರು ಹಿಡಿದು ನಾನು ಮಾತನಾಡಿದ್ದರೆ, ನಾನು ಅದಕ್ಕೆ ಅಪಾಲಜಿ ಕೇಳುತ್ತೇನೆ. ನಾನು ಹೇಳತಕ್ಕದ್ದು, ಇದು ಯಾವ ಕೆಲಸವನ್ನೂ ನಾನು ಮಾಡಿಲ್ಲ ಎಂದು ಹೇಳಿದ್ದೇನೆ. ನನ್ನ ಬಗ್ಗೆ ನಾನು ಮಾತನಾಡಿಕೊಂಡಿದ್ದೇನೆ. ಯಾರ ಹೆಸರು ಇಟ್ಟು ನಾನೆ ಹೇಳಿಲ್ಲ. ಹಾಗಾದರೆ ಯಾರೂ ಕೂಡ ಹಾಗೆ ಮಾತಾನಡುವುದಿಲ್ಲವೇನು? ತಾವು ನೋಡಿಲ್ಲವೇನು ಯಾರೂ ಮಾತನಾಡುವುದನ್ನು? ಕೊನೆಗೆ ಒಂದು ಮಾತು ಹೇಳಿ ಮುಗಿಸುತ್ತೇನೆ.... ಒಂದೇ ನನ್ನ ಮಾತು....

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು): ಈ ಬಗ್ಗೆ ಮಾನ್ಯಸಚಿವರು ರಾಜೀನಾಮೆ ಕೊಟ್ಟಿದ್ದಾರೆ. ಜ್ಯೂಡಿಷಿಯಲ್ ಎನ್‌ಕ್ವೈರಿ ಆರ್ಡರ್ ಆಗಿದೆ. ಮೇಲಿನ ಸದನದಲ್ಲಿ ಅವರೂ ಒಂದು ಸಮಿತಿಯನ್ನು ಮಾಡಿದ್ದಾರೆ. ಕಾನೂನಿನ ಪ್ರಕಾರ ನಾನು ಅಡ್ವೋಕೇಟ್ ಜನರಲ್ ಅವರನ್ನು ಕರೆಸಿ ಅಲ್ಲಿ ಒಂದು ಸದನದಲ್ಲಿ ಇದು ಎನ್‌ಕ್ವೈರಿ ಮಾಡುವಾಗ, ನಾವು ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಬಹುದೇ ಎಂದು ಕೇಳಿದಾಗ ಮಾಡಬಹುದು ಎಂದು ಅವರು ಹೇಳಿದರು. ಕಾನೂನಿನ ಪ್ರಕಾರ ಈಗಾಗಲೇ ಶ್ರೇಷ್ಠ ನ್ಯಾಯಾಲಯಕ್ಕೆ ಬರೆದುಬಿಟ್ಟಿದ್ದೇವೆ. ಜಡ್ಜ್ ಸಹ ಇಂತಹವರೇ ಎಂದು ಅವರು ನೇಮಕ

ಸಹ ಮಾಡಿದ್ದಾರೆ. ಆದ್ದರಿಂದ ಆ ವಿಷಯ ಚರ್ಚಾಸ್ಪದ ಅಲ್ಲ. ಇನ್ನು ನಾವು ಅದರ ಬಗ್ಗೆ ಚರ್ಚೆ ಮಾಡುವುದು ಬೇಕಿಲ್ಲ. ಆದರೆ ಅವರು ಅವರ ಬಗ್ಗೆ ಹೇಳಿರುವುದರಲ್ಲಿ ಸತ್ಯಾಂಶ ಇದೆ. Since I know him personally. ಈ ಸದನದಲ್ಲಿ ನಾವು ನಮ್ಮ ಬಗ್ಗೆ ಹೇಳಿಕೊಳ್ಳುವುದು ಏನು ಬೇಕಿಲ್ಲ. But let him prove and show to the World that he has stood by some principles. That's all. No further discussion is required.

ಶ್ರೀ ಬಿ.ಸೋಮಶೇಖರ್: ಇನ್ನು ಎರಡು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸಿಬಿಡುತ್ತೇನೆ.

ಅಧ್ಯಕ್ಷರು: ಹೇಳಿ.

ಶ್ರೀ ಬಿ.ಸೋಮಶೇಖರ್: ನ್ಯಾಯಾಂಗ ತನಿಖೆಗೆ ಕೆಲವು ಟರ್ಮ್ಸ್ ಆಫ್ ರೆಫರೆನ್ಸ್ ಕೊಟ್ಟಿದ್ದಾರೆ. ಅದರಲ್ಲಿ ನನ್ನ ಮೇಲೂ ವಿಚಾರಣೆ ನಡೆಯುತ್ತಿದೆ. ವಿಶ್ವವಿದ್ಯಾನಿಲಯದ ವೈಸ್‌ಛಾನ್ಸ್‌ಲರ್ ಅವರ ಮೇಲೆ ಕೆಲವು ಆರೋಪಗಳು ಇವೆ. ನಾನು ನೇರವಾಗಿ ಆರೋಪ ಮಾಡಿದ್ದೇನೆ, ದಾಖಲಾತಿಗಳನ್ನು ಸೃಷ್ಟಿ ಮಾಡಿದ್ದಾರೆ; ನನ್ನ ತೇಜೋವಧೆ ಮಾಡಿದ್ದಾರೆ, ಎಂದು. ಅದು ಸಹ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಬಂದಿದೆ. ಈ ಕಡತಗಳು ನನ್ನ ಕೈಯಲ್ಲಿ ಇಲ್ಲ. ನನ್ನ ಖಾತೆಯನ್ನೇ ಮುಖ್ಯಮಂತ್ರಿಗಳು ಬದಲಾವಣೆ ಮಾಡಿಬಿಟ್ಟರು. ಈಗ ನಾನು ಶಾಸಕನಾಗಿ ಉಳಿದಿದ್ದೇನೆ, ನಾಳೆಯಿಂದ. ಆದರೆ ಕಡತಗಳು ಯಾರ ಹತ್ತಿರ ಇದೆಯೋ, ಯಾರು ವೈಸ್ ಛಾನ್ಸಲರ್ ಮ್ಯಾನಿಪ್ಯುಲೇಟ್ ಮಾಡಬಹುದೋ, ಅವರನ್ನು ಹಾಗೇ ಬಿಡುವುದಾದರೆ ಸರಿಯಿಲ್ಲ. ಇವತ್ತು ನಾನು ಈ ಸಭೆ ಮುಖಾಂತರ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ. ಛಾನ್ಸಲರ್ ಅವರನ್ನು ಕೇಳಿಕೊಳ್ಳುತ್ತೇನೆ. ಕೊನೆಯಪಕ್ಷ ಯಾರು ಈ [illegible] ಯಾರ ಹತ್ತಿರ ಕಡತಗಳು ಇವೆ, ಯಾರು ಈ ಒಂದು ವಿಚಾರಣೆಯಲ್ಲಿ ಇನ್‌ಫ್ಲುಯೆನ್ಸ್ ಮಾಡಬಹುದೋ, ಅವರು ಕೊನೆಪಕ್ಷ ರಜದಲ್ಲಾದರೂ ಹೋಗಬೇಕು. Alteast he has to go on leave. I don't demand his resignation. ಅದನ್ನು ಅವರು ಮಾಡಬೇಕು. ವಿಚಾರಣೆಯಾದ ಮೇಲೆ ಯಾರು ತಪ್ಪಿತಸ್ಥರಾಗುತ್ತಾರೆ, ಅದನ್ನು ಅವರು ಬಂದುಮಾಡಲಿ ಎಂದು ಈ ಸಂದರ್ಭದಲ್ಲಿ ಹೇಳಿ, ಮತ್ತೊಮ್ಮೆ ತಾವು ಬಹಳ ವಿಶೇಷವಾದ ಪರಿಸ್ಥಿತಿಯಲ್ಲಿ ನನಗೆ ಅನುಮತಿಯನ್ನು ಕೊಟ್ಟಿದ್ದೀರಿ. ಅದಕ್ಕಾಗಿ ನಾನು ತಮಗೆ ಧನ್ಯವಾದಗಳನ್ನು ಅರ್ಪಿಸಿ, ಮುಖ್ಯಮಂತ್ರಿಗಳು, ನನ್ನ ಸಹೋದ್ಯೋಗಿಗಳು ನನ್ನ ಈ ಒಂದೂಕಾಲು ವರ್ಷಅವಧಿಯಲ್ಲಿ ಕೊಟ್ಟಂಥ ಸಹಕಾರಗಳು ಮತ್ತು ಬೆಂಬಲ, ನನ್ನ ಎಲ್ಲಾ ಶಾಸಕ ಮಿತ್ರರುಗಳು, ನಾನು ಮಾಡಿದ ಕೆಲಸದಲ್ಲಿ ಅವರುಗಳು ಕೊಟ್ಟಂಥ ಸಹಕಾರ, ಪ್ರತಿಯೊಬ್ಬರಿಗೂ ನನ್ನ ಸಚಿವ ಸಂಪುಟದ ಸಹೋದ್ಯೋಗಿಗಳಿಗೆ, ನನ್ನ ಶಾಸಕ ಮಿತ್ರರಿಗೆ, ವಿರೋಧ ಪಕ್ಷದ ನಾಯಕರುಗಳಿಗೆ, ಮತ್ತು ವಿಶೇಷವಾಗಿ ಪತ್ರಿಕೆಗಳಿಗೆ ಮತ್ತು

ನನ್ನ ಎಲ್ಲಾ ಅಧಿಕಾರಿ ಮಿತ್ರರಿಗೆ, ಎಲ್ಲರೂ ಸಹ ನನ್ನ ಕೆಲಸದಲ್ಲಿ, ಉತ್ತಮವಾದಂಥ ಕೆಲಸ ಮಾಡತಕ್ಕಂಥ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಅವರೆಲ್ಲರಿಗೂ ನನ್ನ ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸುತ್ತಾ ಇದ್ದೇನೆ. ಮತ್ತು ತಮಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಬೈರೇಗೌಡ: ನೀವು ರಾಮಸ್ವಾಮಿಯವರು ಕೇಳಿದ ದಶಲಕ್ಷ ಬಾವಿಬಗ್ಗೆ ಸ್ಟೇಟ್‌ಮೆಂಟ್ ಮಾಡಬೇಕು.

(ಅ) ಅರಕಲಗೂಡು ತಾಲ್ಲೂಕಿನಲ್ಲಿ ದಶಲಕ್ಷ ಬಾವಿಗಳಿಗೆ ಸಂಬಂಧಪಟ್ಟಂತೆ ಎರಡು ಬಾರಿ ಹಣ ಪಾವತಿಯಾಗಿರುವ ಬಗ್ಗೆ

+ ಶ್ರೀ ಸಿ.ಬೈರೇಗೌಡ: ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಮಾನ್ಯ ಅರಕಲುಗೂಡು ಶಾಸಕರಾದ ಮಾನ್ಯ ರಾಮಸ್ವಾಮಿಯವರು ಅವರ ತಾಲ್ಲೂಕಿನ ಚಿಕ್ಕಮಗ್ಗೆ ಮತ್ತು ದೊಡ್ಡಮಗ್ಗೆ ಗ್ರಾಮದಲ್ಲಿ ಒಂದೇ ಕೆಲಸಕ್ಕೆ ಎರಡು ಕಡೆ ಹಣ ಪಾವತಿಯಾಗಿದೆ ಎನ್ನುವುದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಮಾನ್ಯ ಅಧ್ಯಕ್ಷರೇ, ನನ್ನ ಹೇಳಿಕೆ ಈ ರೀತಿ ಇದ-

'ಮೇಲ್ಕಂಡ ವಿಚಾರದ ಬಗ್ಗೆ ದಿನಾಂಕ 11-9-97ರಂದು ನಾನು ಅರಕಲುಗೂಡು ತಹಸೀಲ್ದಾರರಿಗೆ ಸೂಚನೆ ನೀಡಿದ ಮೇರೆಗೆ, ಅರಕಲುಗೂಡು ತಹಸೀಲ್ದಾರರು ದಿನಾಂಕ 12-9-97ರಂದು ನನ್ನ ನಿರ್ದೇಶನದ ಮೇರೆಗೆ ಕೃಷಿ ಇಲಾಖೆಯ ಸಿಬ್ಬಂದಿ ಹಾಗೂ ಜಂಟಿನಿರ್ದೆಶಕರೊಂದಿಗೆ ಸ್ಥಳ ಪರಿಶೀಲನೆ ಮಾಡಿ ಕೆಳಕಂಡಂತೆ ವರದಿಯನ್ನು ನೀಡಿರುತ್ತಾರೆ.

ಜಾನಕಮ್ಮ ಕಮ್ ಹುಚ್ಚಯ್ಯ ಈ ಫಲಾನುಭವಿಗೆ ದಶಲಕ್ಷ ಬಾವಿ ಯೋಜನೆಯಲ್ಲಿ ಚಿಕ್ಕಮಗ್ಗೆ ಗ್ರಾಮದ ಸರ್ವೆ ನಂಬರ್ 49(1)ರಲ್ಲಿ ಒಂದು ಎಕರೆ ಇದ್ದು, ಬಾವಿ ಮಂಜೂರಾಗಿದ್ದು, ಕಲ್ಲುಕಟ್ಟಡ ಆಗಿರುತ್ತದೆ. ಕೃಷಿ ಇಲಾಖೆಯಿಂದ ಈ ಕೆಲಸ ನಡೆದಿದ್ದು ಅರಕಲುಗೂಡು ತಾಲ್ಲೂಕು ಪಂಚಾಯತಿ ವತಿಯಿಂದ ಇದೇ ಕೆಲಸಕ್ಕೆ ರಾಜಯ್ಯ ಬಿನ್ ಈರಯ್ಯ ಎಂಬುವವರಿಗೆ 25,900 ರೂಪಾಯಿ ಪಾವತಿಯಾಗಿರುವುದು ಕಂಡುಬರುತ್ತದೆ. ಇವರಿಗೆ 2 ಎಕರೆ 12 ಗುಂಟೆ ಜಮೀನಿದ್ದು ಭತ್ತದ ಬೆಳೆ ಬೆಳೆಯುತ್ತಿರುತ್ತಾರೆ. ಜಯಮ್ಮ ಕೋಮ್ ಪುಟ್ಟಸ್ವಾಮಿ, ಈ ಬಾವಿ ಕಾಮಗಾರಿಯನ್ನು ಕೃಷಿ ಇಲಾಖೆಯಿಂದ ಮಾಡಿಸಿದ್ದು, ಚಿಕ್ಕಮಗ್ಗೆ ಗ್ರಾಮದ ಸರ್ವೆ ನಂಬರ್ 49: 1ರಲ್ಲಿ ಒಂದು ಎಕರೆ ಇರುತ್ತದೆ. ಈ ಕೆಲಸಕ್ಕೆ ಅರಕಲಗೂಡು ತಾಲ್ಲೂಕು ಪಂಚಾಯಿತಿ ವತಿಯಿಂದ 27,780 ರೂಪಾಯಿ ಪಾವತಿಯಾಗಿರುವುದು ಕಂಡುಬರುತ್ತದೆ. ಕೃಷಿ ಇಲಾಖೆಯಿಂದ ಮಾಡಿರುವ ಈ ಬಾವಿ ಕೆಲಸಕ್ಕೆ ತಾಲ್ಲೂಕು ಪಂಚಾಯತಿಯಿಂದ ಚನ್ನಯ್ಯ ಬಿನ್ ಲಕ್ಷ್ಮಯ್ಯ ಎಂಬುವವರ ಹೆಸರಿಗೆ 27,809 ರೂಪಾಯಿಗಳು

ಪಾವತಿಯಾಗಿರುವುದು ಕಂಡು ಬಂದಿರುತ್ತದೆ. ಕಮಲಮ್ಮ ಕೋಮ್ ಸಂಚಿಗಯ್ಯ ಇವರು ಚಿಕ್ಕಮೊಗ್ಗ ಗ್ರಾಮದ ಸರ್ವೆ ನಂಬರ್ 31 ಸಬ್ 15ರಲ್ಲಿ ಇರುತ್ತದೆ. ಈ ಪ್ರಕರಣದಲ್ಲಿ ಕೃಷಿ ಇಲಾಖೆಯಿಂದ ಬಾವಿ ಮಂಜೂರಾಗಿದ್ದು ಕೆಲಸ ಪೂರ್ಣಗೊಂಡಿದ್ದು ಯಾವುದೇ ಅವ್ಯವಹಾರ ನಡೆದಿರುವುದಿಲ್ಲ. ಹನುಮಯ್ಯ ಬಿನ್ ಸಂಚಿಗಯ್ಯ ಇದು ಚಿಕ್ಕಮೊಗ್ಗ ಕಾವಲು ಸರ್ವೆನಂಬರ್ 1ಪಿ ಜಮೀನು ಆಗಿರುತ್ತದೆ. ಜಮೀನಿನಲ್ಲಿರುವ ಬಾವಿ ಅಂದಾಜು ಸುಮಾರು 45 ವರ್ಷಗಳ ಹಿಂದೆಯೇ ನಿರ್ಮಾಣವಾಗಿರುವುದು ಸ್ಥಳ ತನಿಖೆಯ ವೇಳೆಯಲ್ಲಿ ತಿಳಿದುಬಂದಿರುತ್ತದೆ. ಅಲ್ಲದೆ ಈ ಬಾವಿಗೆ ತಾಲ್ಲೂಕು ಪಂಚಾಯತಿ ವತಿಯಿಂದ ಲಕ್ಷ್ಮಮ್ಮ ಕೋಮ್ ಚನ್ನಯ್ಯ ಇವರಿಗೆ ಬಾವಿ ಬಾಬತ್ತು ಹಣ ಪಾವತಿಯಾಗಿರುವುದು ಸ್ಥಳದವರು ತಿಳಿಸಿರುತ್ತಾರೆ. ಉಳಿದಂತೆ ಚಿಕ್ಕಮೊಗ್ಗ ಗ್ರಾಮದ ಜವರಯ್ಯ ಕಮ್ ಹುಚ್ಚಯ್ಯ ಹಾಗೂ ಇತರರಿಗೆ ಕೆಳಕಂಡಂತೆ ಜಮೀನು ಇರುತ್ತದೆ.'' ...ಆ ಜಮೀನಿನ ವಿವರಗಳು ಎಲ್ಲಾ ಇವೆ.

''ಈಗ ಎಲ್ಲಾ ಸರ್ವೆನಂಬರುಗಳ ಪಹಣಿಯಲ್ಲಿ ಖುಷ್ಕಿ ಇದ್ದು, ಈಗ ನೀರಾವರಿಯಾಗಿದ್ದು ಭತ್ತ ಬೆಳೆಯುತ್ತಿರುತ್ತಾರೆ. ಕೃಷಿ ಇಲಾಖೆಗೆ ಸಂಬಂಧಿಸಿದಂತೆ ಯಾವುದೇ ಅವ್ಯವಹಾರಗಳು ಆಗಿದ್ದಲ್ಲಿ ಮತ್ತೊಮ್ಮೆ ತನಿಖೆ ಮಾಡಿಸಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ನಿಯಮಾನುಸಾರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಅರಕಲಗೂಡು ಇವರು ಹಣ ನೀಡಿರುವ ಬಗ್ಗೆ, ತಹಸೀಲ್ದಾರ್ ಅರಕಲಗೂಡು ಕಳಿಸಿರುವ ವರದಿಯ ಪ್ರತಿಯನ್ನು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿಗಳಿಗೆ ಕಳುಹಿಸಿ ಜರೂರಾಗಿ ಮುಂದಿನಕ್ರಮ ತೆಗೆದುಕೊಳ್ಳಲಾಗುವುದು ಎಂದು ನಾನು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಚ್ಚಿಪಡುತ್ತೇನೆ.''

ಮಾನ್ಯ ಅಧ್ಯಕ್ಷರೇ, ಇದರ ಜೊತೆಗೆ ಈಗಾಗಲೇ ಹೇಳಿದ್ದೇನೆ. ಇದು ಕೃಷಿ ಇಲಾಖೆಯಿಂದ ಅವ್ಯವಹಾರ ನಡೆದಿಲ್ಲ. ಇದು ವರದಿಯ ಪ್ರಕಾರ ಅವ್ಯವಹಾರ ನಡೆದಿರತಕ್ಕಂಥಾದ್ದು ಬೇರೆ ಇಲಾಖೆ. ಅಂದರೆ ಪಂಚಾಯತ್‌ರಾಜ್ ಇಲಾಖೆಗೆ ಸಂಬಂಧಪಟ್ಟಂಥ, ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಅಥವಾ ತಾಲ್ಲೂಕು ಪಂಚಾಯತಿ ಮೂಲಕ ನಡೆದಿದೆ ಎನ್ನುವುದು ವರದಿಯಿಂದ ಗೊತ್ತಾಗುತ್ತಾ ಇದೆ. ಆದಕಾರಣದಿಂದ ನಾನು ಕಾರ್ಯದರ್ಶಿಗಳಿಗೆ ಇವರ ಮೇಲೆ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನತಕ್ಕಂಥ ಸೂಚನೆಯನ್ನು ಅಲ್ಲದೆ ಮಾನ್ಯ ಮಂತ್ರಿಗಳಿಗೆ ಮತ್ತು ಅವರ ಕಾರ್ಯದರ್ಶಿಗಳಿಗೆ ತಿಳಿಸುವವನಿದ್ದೇನೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು): ಸನ್ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. ನಿನ್ನೆ ಶೂನ್ಯವೇಳೆಯಲ್ಲಿ ನಾನು ಗ್ರಾಮೀಣಾಭಿವೃದ್ಧಿ ಮಂತ್ರಿಗಳ

ಗಮನವನ್ನೇ ಸೆಳೆದದ್ದು. ಅವರ ಪರವಾಗಿ ತಾವು ಮಾಹಿತಿ ತರಿಸಿಕೊಡುತ್ತೇನೆ ಎಂದು ಹೇಳಿದಿರಿ. ನಾನು ತಿಳಿದುಕೊಂಡಿದ್ದೆ ನಿಮಗೆ ಜಂಟಿ ಜವಾಬ್ದಾರಿಕೆ ಇದೆ, ಸರ್ಕಾರದಲ್ಲಿ - ಮಂತ್ರಿಮಂಡಲದಲ್ಲಿ ಎಂದು ಹೇಳಿ. ನೀವು ಅವರ ಪರವಾಗಿ ಉತ್ತರ ಕೊಡುತ್ತೀರಿ ಎಂದು ತಿಳಿದುಕೊಂಡಿದ್ದೆ. ನಿಮ್ಮಿಂದ ನಾನು ಈ ಉತ್ತರವನ್ನು ನಿರೀಕ್ಷಣೆ ಮಾಡಿರಲಿಲ್ಲ. ಸನ್ಮಾನ್ಯ ಅಧ್ಯಕ್ಷರೇ ಈಗ ಕೃಷಿ ಇಲಾಖೆಯಿಂದ ಏನು ಕೃಷಿ ಹೊಂಡಗಳನ್ನು ದಶಲಕ್ಷ ಬಾವಿಯಡಿ ಮಾಡಿದ್ದರು, ಅವರು 95-96ನೇ ಸಾಲಿನಲ್ಲಿ ಹಣ ಪಾವತಿ ಮಾಡಿದ್ದರು. ಅದೇ ಬಾವಿಗಳನ್ನು ತಾಲ್ಲೂಕು ಪಂಚಾಯತಿಯವರು ತೋರಿಸಿ ಕಳೆದ ತಿಂಗಳು ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಹಣ ಪಾವತಿ ಮಾಡಿದ್ದಾರೆ. ತನಿಖೆಯಿಂದ ಇದು ನೇರವಾಗಿ ಸಾಬೀತಾಗಿದೆ. ಸರ್ಕಾರದ ಹಣ ಹಾಸನದಲ್ಲಿ ಲೂಟಿಯಾಗುತ್ತಿದ್ದರೂ ಕೂಡ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ, ನೇರವಾದ ಸಂದೇಶ ಹೋಗಿಲ್ಲ ಎಂದರೆ....

ಶ್ರೀ ಜೆ.ಎಚ್.ಪಟೇಲ್: ಈ ರೀತಿ ಅಪರಾಧ ಮಾಡಿದ್ದಾರೆ. ಅವರಿಗೆ ಶಿಕ್ಷೆ ಕೊಡಬೇಕು, ಯಾವ ತರಹ ಶಿಕ್ಷೆ ಕೊಡಬೇಕು, ಅದು ಏನು ಕ್ರಿಮಿನಲ್ ಕೇಸ್ ಹಾಕಬೇಕಾ, ಅಥವಾ ಅವರನ್ನು ಸಸ್ಪೆಂಡ್ ಮಾಡಿ ಮನೆಗೆ ಕಳುಹಿಸಿ ಡಿಸ್‌ಮಿಸ್ ಮಾಡಬೇಕಾ, ಅದನ್ನು ಯೋಚನೆ ಮಾಡುತ್ತಿದ್ದೇವೆ. ಹಾಗೆ ಸದನದಲ್ಲಿ ಏಕಾಏಕಿ ಹೇಳುವುದಕ್ಕೆ ಆಗುತ್ತದೆಯೇ?

ಶ್ರೀ ಎ.ಟಿ.ರಾಮಸ್ವಾಮಿ: ಮಾನ್ಯ ಅಧ್ಯಕ್ಷರೇ, ತಪ್ಪಾಗಿದೆ. ತಪ್ಪಾಗಿರುವುದು ಗೊತ್ತಾಗಿದೆ. ಅಥವಾ ತಪ್ಪಾಗಿರುವುದು ಗೊತ್ತಾಗಿಲ್ಲವೇ ಹೇಳಿ. ತಪ್ಪಾಗಿರುವುದು ಗೊತ್ತಾಗಿದೆ ಎಂದಮೇಲೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಏನು?

ಶ್ರೀ ಸಿ.ಭೈರೇಗೌಡ: ಅಧ್ಯಕ್ಷರೆ, ಇದು ನನ್ನ ಇಲಾಖೆಗೆ ಬರತಕ್ಕಂಥದ್ದು ಅಲ್ಲ, ಅದು ಮತ್ತೊಂದು ಇಲಾಖೆಗೆ ಬರತಕ್ಕಂಥದ್ದು ಇದಕ್ಕೆ ಸಂಬಂಧಪಟ್ಟ ಮಂತ್ರಿಗಳೂ ಸಹ ಇದ್ದಾರೆ. ಅವರು ಕ್ರಮ ತೆಗೆದುಕೊಳ್ಳುತ್ತಾರೆ. ಮುಖ್ಯ ಮಂತ್ರಿಗಳೂ ಕೂಡ ಹೇಳಿದ್ದಾರೆ. ಕೊಡತಕ್ಕಂಥ ಹಣ ದುರುಪಯೋಗವಾಗಿದ್ದರೆ ಅವರ ಮೇಲೆ ಕ್ರಿಮಿನಲ್ ಕಂಪ್ಲೇಂಟ್ ಕೊಡತಕ್ಕದ್ದರ ಜೊತೆಗೆ ಅವನನ್ನು ಅಮಾನತ್ತಿನಲ್ಲಿ ಇಡತಕ್ಕಂಥದ್ದನ್ನೂ ಕೂಡ ಪರಿಶೀಲಿಸುತ್ತೇವೆ ಎನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಕೂಡ ಹೇಳಿದ್ದಾರೆ. ಆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಹಣ ದುರುಪಯೋಗವಾಗಿದೆ. ಈ ವಿಚಾರವನ್ನು ನಾನು ಅವರಿಗೆ ತಿಳಿಸುತ್ತೇನೆ.

ಶ್ರೀ ಎ.ಟಿ.ರಾಮಸ್ವಾಮಿ: ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿ.

ಶ್ರೀ ಸಿ.ಭೈರೇಗೌಡ: ಸದನದಲ್ಲಿ ಆ ರೀತಿ ಹೇಳುವುದು ಕಷ್ಟವಾಗುತ್ತದೆ.

ಶ್ರೀ ಎ.ಟಿ.ರಾಮಸ್ವಾಮಿ: ದುರುಪಯೋಗವಾಗಿದೆ ಎಂದು ನಿಮಗೆ ತನಿಖೆ ಮಾಡಿ ವರದಿ ಬಂದಿದೆ.

SRI J.H.PATEL: The concerned persons will have to be given an opportunity to explain it. ಈಗ ನಮ್ಮ ಗಮನಕ್ಕೆ ಬಂದ ರೀತಿಯಲ್ಲಿ ಹೇಳುವುದಾದರೆ ಅದು ತಪ್ಪಾಗಿದೆ ಎಂದು ಗೊತ್ತಾಗಿದೆ. ಅದಕ್ಕೆ ಅವನನ್ನು ಕರೆದು, ಯಾವ ರೀತಿ ಶಿಕ್ಷೆ ಕೊಡಬೇಕು, ಅದನ್ನು ಕೊಡುತ್ತೇವೆ ಎಂದು ಹೇಳಿದರೆ, ಇಲ್ಲಿ ಅನೌನ್ಸ್ ಮಾಡಲಾ?..

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಸಾರ್, ಅರಣ್ಯ ಇಲಾಖೆ ಲೂಟಿ ಆಗಿರುವ ವಿಚಾರ...

ಅಧ್ಯಕ್ಷರು: ಹೌದು ಮಾಡಿಸೋಣ ಅಪ್ಪಚ್ಚುರವರೆ, ನಿನಗೋಸ್ಕರ ಇಲ್ಲಿ ಕುಳಿತಿದ್ದೇನೆ... ಈಗ ಊರಿಗೆ ಹೋಗುವ ಸಮಯದಲ್ಲಿ ಕಾಲಿಂಗ್ ಅಟೆನ್‌ಷನ್ ಹಿಡಿದುಕೊಂಡರೆ ಹೇಗೆ?

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ: ಸದನ ಮುಗಿಯುತ್ತಾ ಬಂದಿದ್ದರೂ ನಮಗೆ ಏಕೆ ಉತ್ತರ ಕೊಡುತ್ತಿಲ್ಲ?

ಅಧ್ಯಕ್ಷರು: ಈಗ ತರಿಸೋಣ... ಒಂದು ನಿಮಿಷ ಲೇಡೀಸ್‌ಗೆ ಪ್ರಥಮ ಆದ್ಯತೆ... ನೆಕ್ಸ್ಟ್ ಅವರು 33 ಪರ್ಸೆಂಟ್ ಬರುತ್ತಾರೆ. ಒಂದು ನಿಮಿಷ ಕುಳಿತುಕೊಳ್ಳಿ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ: ಇಲ್ಲ ನನಗೆ ಇವತ್ತು ಅವಕಾಶ ಕೊಡಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅದು ಏನಾಗಿದೆ ಎಂದರೆ ಸುಮಾರು 60ಎಕರೆ ಸರ್ಕಾರದ ಜಮೀನು, ಬೇರೆಯವರ ಹೆಸರಿನಲ್ಲಿ ಬೇನಾಮಿ ಮಾಡಿಕೊಂಡು,....

MR. SPEAKER: That matter also we can discuss. ಒಂದು 10 ನಿಮಿಷ ನಂತರ ಸಮಯ ಮಾಡಿಕೊಡುತ್ತೇನೆ. ಮೊನ್ನೆ ಬಿಸಿನೆಸ್‌ಗೆ ಲಿಸ್ಟ್ ಆಗಿರುವುದು ತಮಗೆ ಗೊತ್ತಿದೆ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದನ್ನು ಮುಗಿಸಿಬಿಡೋಣ.

ಅಧ್ಯಕ್ಷರು: ಒಂದು ನಿಮಿಷ, ಮೇಡಮ್ ಏಕೆ ನಿಂತಿದ್ದಾರೆ?

ಶ್ರೀಮತಿ ಪ್ರಮೀಳಾ ನೇಸರ್ಗಿ: ಅಧ್ಯಕ್ಷರೆ, ನಾವು ಮಹಿಳಾ ಶಾಸಕರು ಎಲ್ಲಾ ಸೇರಿ ಪ್ರಿವಿಲೇಜ್ ಮೋಷನ್ ಮಾಡಿದ್ದೇವೆ. ಅದು ಏನಾದರೂ ಉತ್ತರ ಕೊಟ್ಟಿದ್ದಾರೋ, ಒಂದು ಪಕ್ಷ ಉತ್ತರ ಕೊಟ್ಟಿದ್ದರೆ, ಏನು ಉತ್ತರ ಕೊಟ್ಟಿದ್ದಾರೆ ಎನ್ನುವುದು ಬೇಕು.

ಏಕೆಂದರೆ ಇವತ್ತು ಕೊನೆಯದಿವಸ ನಾವು ಈ ದಿವಸ ಆ ವಿಷಯ ಬರುತ್ತದೆ ಎಂದು ಅಂದುಕೊಂಡಿದ್ದೆವು,...

ಅಧ್ಯಕ್ಷರು: ಈ ಅಧಿವೇಶನಕ್ಕೆ ಇವತ್ತು ಕೊನೆಯ ದಿವಸ. ಅವರು ಉತ್ತರ ಕಳುಹಿಸಿ ಕೊಟ್ಟಿದ್ದಾರೆ, ನಾನು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು, ಏಕೆಂದರೆ ಸದನ ನೇರವಾಗಿ ಅವರಿಗೆ ನಿರ್ಣಯದ ಮೂಲಕ ನೋಟೀಸ್ ಕೊಡಬೇಕೆಂದು ತೀರ್ಮಾನ ಮಾಡಿದೆ. ಅದರಲ್ಲಿ ನನ್ನ ಪಾತ್ರ ಏನೂ ಇಲ್ಲ. ನಾವು ಕಳಿಸಿಕೊಟ್ಟಿರುವ ನೋಟೀಸ್‌ಗೆ ಅವರು ಉತ್ತರವನ್ನು ಕಳುಹಿಸಿಕೊಟ್ಟಿದ್ದಾರೆ. ನಂತರದ ಕ್ರಮ ಏನು ತೆಗೆದುಕೊಳ್ಳಬೇಕೆಂದು, ಎಲ್ಲಾ ಪಕ್ಷದ ಮುಖಂಡರನ್ನು ಕರೆಸಿ, ಅವರ ಅಭಿಪ್ರಾಯಗಳನ್ನು ತಿಳಿದುಕೊಂಡು ನಾನು ಹೇಳಬೇಕೇ ವಿನಾ ನಾನು ಆತುರ ಪಟ್ಟು ಏನು ಹೇಳುವುದಕ್ಕೆ ಬರುವುದಿಲ್ಲ. ಇದಕ್ಕೇನು ಕಾಲದ ನಿಗದಿ ಏನೂ ಇರುವುದಿಲ್ಲವಾದ್ದರಿಂದ, ಯಾವಾಗ ಬೇಕಾದರೂ ಮಾಡಬಹುದು.

ಶ್ರೀಮತಿ ಪ್ರಮೀಳಾನೇಸರ್ಗಿ: ನಾನು ಕೇಳಿದ್ದು ಮುಂದಿನ ಅಧಿವೇಶನ ಯಾವಾಗ ಕರೆಯುತ್ತೀರಿ. ಆಗ ಇದನ್ನು ತೆಗೆದುಕೊಳ್ಳಿ..

ಅಧ್ಯಕ್ಷರು: ಅದೇ ಮುಂದಿನ ಅಧಿವೇಶನ...

ಶ್ರೀಮತಿ ಪ್ರಮೀಳಾ ನೇಸರ್ಗಿ: ಸದನದಲ್ಲಿ ಅನೌನ್ಸ್ ಆಗಬೇಕು, ಇಲ್ಲದೇ ಇದ್ದರೆ ಜನ ನಮ್ಮನ್ನು ಕೇಳುತ್ತಾರೆ.

ಅಧ್ಯಕ್ಷರು: ಇದರ ಬಗ್ಗೆ ಸಾಕಷ್ಟು ಚರ್ಚೆ ಆಗಿದೆ, ಎಂದು ನನ್ನಗನ್ನಿಸುತ್ತದೆ, ಸುಮ್ಮನೆ ಮುಂದೆ ಅದನ್ನು ಏಕೆ ಜೀವಂತವಾಗಿ ಇಟ್ಟುಕೊಂಡು ಹೋಗಬೇಕು? ಆದರೆ ನಾನು ಹೇಳುವುದೇನೆಂದರೆ, ಇವರೆಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿತ್ತು, ತೆಗೆದುಕೊಂಡಿಲ್ಲವಾದ್ದರಿಂದ ನಾನು ಏನು ಹೇಳುವ ಸ್ಥಿತಿಯಲ್ಲಿಲ್ಲ. ಆಯಿತು. ಮುಂದಿನ ವಿಶೇಷ ಅಧಿವೇಶನ ನವೆಂಬರ್‌ನಲ್ಲಿ ಎಂದು ಏನು ಹೇಳುತ್ತಾರೆ, ಅಷ್ಟು ಹೊತ್ತಿಗೆ ಇದಕ್ಕೆ ಏನಾದರೂ ನಿರ್ಣಯ ಮಾಡೋಣ....

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್: ಸದನದಲ್ಲಿ ತೀರ್ಮಾನ ಮಾಡುತ್ತೇವೆಂದು ತಾವು ಅಲ್ಲಿ ಹೇಳಿದಿರಿ, ಇವತ್ತು ಕೊನೆಯ ದಿವಸ, ಹಾಗಾದರೆ ಅಂತಹ ವಿಷಯಗಳಿಗೆ ಸದನ ಸೇರುವವರೆಗೆ ಬೇಡವೇ?

ಅಧ್ಯಕ್ಷರು: ಸದನದ ಕೊನೆಯ ದಿವಸ... ತಾವು ಹೇಳುವುದು ನಮ್ಮ ಟರ್ಮ್ ಆಗಿ ಹೋಯಿತು ಎನ್ನುವ ರೀತಿ ಇದೆ. ಬಹಳ ದಿವಸ ಇದೆ. ಈ ಅಧಿವೇಶನಕ್ಕೆ ಕೊನೆಯ ದಿವಸ ಅಷ್ಟೇ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್: ಒಪ್ಪಿಕೊಂಡೆ, ಅದರ ಬಗ್ಗೆ ತಾವು ಏನು ರೂಲಿಂಗ್ ಕೊಡಲೇ ಇಲ್ಲ ಆವತ್ತಿನ ದಿವಸ...

ಅಧ್ಯಕ್ಷರು: ರೂಲಿಂಗ್ ಇದರಲ್ಲಿ ಕೊಡುವ ಪ್ರಶ್ನೆ ಬರುವುದಿಲ್ಲ. ಸದನದ ನಿರ್ಣಯದ ಮುಖಾಂತರ ಅವರಿಗೆ ನೋಟೀಸ್‌ನ್ನು ಜಾರಿ ಮಾಡಿದ್ದೇವೆ. ಇದಕ್ಕೆ ಸ್ಪಂದಿಸಿ ಅವರು ಉತ್ತರಗಳನ್ನು ಕಳುಹಿಸಿಕೊಟ್ಟಿದ್ದಾರೆ. ಮುಂದಿನ ಕ್ರಮ ಜರುಗಿಸಬೇಕಾಗಿದ್ದರೆ, ಸದನದ ಎಲ್ಲಾ ಮುಖಂಡರುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪುನಃ ಸದನದ ನಿರ್ಣಯದ ಮುಖಾಂತರವೇ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆಯೇ ಹೊರತು, ನಾನು ಹೇಳುವುದಕ್ಕೆ ಬರುವುದಿಲ್ಲ. ಸಮಯದ ಅಭಾವ, ಜೊತೆಗೆ ನಮಗೆ ಕೆಲಸದ ಒತ್ತಡ, ಅನೇಕ ಮಸೂದೆಗಳನ್ನು ಪಾಸ್ ಮಾಡಬೇಕಾಗಿತ್ತು, ಲಾಸ್ಟ್ ಮಿನಿಟ್‌ನಲ್ಲಿ ತೊಂದರೆಯಿದ್ದುದ್ದರಿಂದ ಅದನ್ನು ತೆಗೆದುಕೊಳ್ಳಲಿಕ್ಕೆ ಆಗಿಲ್ಲ. ಬಹುಶಃ ನವೆಂಬರ್ ಮಾಹೆಯಲ್ಲಿ ಶಾಸಕರ ದಿನಾಚರಣೆ ಮಾಡಬೇಕು; ವಿಶೇಷ ಅಧಿವೇಶನ ಎಂದು ಅಂದುಕೊಂಡಿದ್ದೇವೆ, ಆಗ ಅದನ್ನು ತೆಗೆದುಕೊಂಡರೆ ಆಯಿತು, ಏನು ಅಂತಹ ದೊಡ್ಡ ತೊಂದರೆ ಇಲ್ಲ, ದಯಮಾಡಿ ಸಹಕರಿಸಿ... ನಿಮ್ಮ ಜೊತೆಗೆ ನಾವು ಇಷ್ಟು ಜನ ಅಖಂಡ ಬೆಂಬಲವನ್ನು ವ್ಯಕ್ತಪಡಿಸಿದ್ದೇವೆ, ಏಕೆ ನೀವು ಚಿಂತೆ ಮಾಡುತ್ತೀರಿ? ಈಗ ವಿರೋಧ ಪಕ್ಷದ ನಾಯಕರಿಗೆ ಮಾತನಾಡುವುದಕ್ಕೆ ಅವಕಾಶ ಕೊಡೋಣ, ಏಕೆಂದರೆ ಬಹಳ ಹೊತ್ತಿನವರೆಗೆ ಅವರನ್ನು ಮಾತನಾಡಿಸದೆ ಸುಮ್ಮನೆ ಕೂರಿಸಿದ್ದೇವೆ.

(7) ವಿಷಯ: ಕೃಷ್ಣ ಜಲಾನಯನ ಪ್ರದೇಶದಲ್ಲಿ ಕೈಗೊಂಡಿರುವ ವಿವಿಧ ಯೋಜನೆಗಳು.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಅಧ್ಯಕ್ಷರೆ, ನಾನು ಕೃಷ್ಣಾಜಲಾನಯನ ಪ್ರದೇಶದಲ್ಲಿ ಕೈಗೊಂಡಿರುವ, ವಿವಿಧ ನೀರಾವರಿ ಯೋಜನೆಗಳ ವಿವರಗಳನ್ನು ಪರಸ್ಪರ ವಿನಿಮಯವನ್ನು ದಿನಾಂಕ: 30-9-97ರೊಳಗಾಗಿ, ಮಾಡಿಕೊಳ್ಳಬೇಕೆಂದು ಶ್ರೇಷ್ಠ ನ್ಯಾಯಾಲಯ ನಿರ್ದೇಶನ ನೀಡಿದೆ. ಇದರಂತೆ ಕರ್ನಾಟಕ ಸರ್ಕಾರವು ಸದರಿ ಜಲಾನಯನ ಪ್ರದೇಶದಲ್ಲಿ ಕೈಗೊಂಡಿರುವ ವಿವಿಧ ನೀರಾವರಿ ಯೋಜನೆಗಳ ಮಾಹಿತಿಯನ್ನು ಆಂಧ್ರ ಪ್ರದೇಶದ ರಾಜ್ಯಕ್ಕೆ ಒದಗಿಸಿದೆ. ಅದರಂತೆ ಆಂಧ್ರಪ್ರದೇಶ ತಾನು ಕೈಗೊಂಡಿರುವ ವಿವಿಧ ನೀರಾವರಿ ಯೋಜನೆಗಳ ಮಾಹಿತಿಯನ್ನು ಕರ್ನಾಟಕ ಸರ್ಕಾರಕ್ಕೆ ಇದುವರೆಗೆ ಒದಗಿಸಿಲ್ಲ ಎನ್ನುವುದು ಗೊತ್ತಾಗಿದೆ. ಹಾಗೂ ಇದರ ಜೊತೆಗೆ, 14 ವಿವಿಧ ಹೊಸ ನೀರಾವರಿ ಯೋಜನೆಗಳನ್ನು ತೆಗೆದುಕೊಂಡು ಆ ಮೂಲಕ 258 ಟಿಎಂಸಿ ನೀರನ್ನು, ಹೆಚ್ಚುವರಿಯಾಗಿ ಬಳಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದೆ. ಇದರಿಂದಾಗಿ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯದ ಬಗ್ಗೆ, ಚರ್ಚಿಸಬೇಕು ಎಂದು ನಾನು ಒಂದು ನೋಟೀಸ್‌ನ್ನು ಮಾನ್ಯ ಸ್ಪೀಕರ್‌ರವರಿಗೆ ಕೊಟ್ಟಿದ್ದೆ, ಇದನ್ನು ತಾವು ನಿಲುವಳಿಸೂಚನೆಯ ಮುಖಾಂತರ

ತೆಗೆದುಕೊಳ್ಳಬಾರದು, 69ರ ನಿಯಮದಡಿ ತೆಗೆದುಕೊಂಡು, ಚರ್ಚೆ ಮಾಡಿ, ಎರಡು ಬಿಲ್‌ಗಳು ಪಾಸ್ ಆದ ಮೇಲೆ ಇದನ್ನು ಚರ್ಚೆ ಮಾಡಿ ಎನ್ನತಕ್ಕಂಥ ಮಾತನ್ನು ಹೇಳಿದ್ದರು. ತಮಗೆ ಈಗಾಗಲೇ ಗೊತ್ತಿರಬಹುದು, ಹಿಂದೆ ಆಂಧ್ರಪ್ರದೇಶದ ಹೈಕೋರ್ಟ್‌ನಲ್ಲಿ ಕೃಷ್ಣಯ್ಯ ಎನ್ನುವವರು ಒಂದು ಪಿಟಿಷನ್ ಹಾಕಿ, ಈ ಆಲಮಟ್ಟಿ ಡ್ಯಾಮಿನ ಎತ್ತರವನ್ನು ತಡೆಹಿಡಿಯಬೇಕು, ಹೆಚ್ಚಿಗೆ ಅಂದರೆ ಸುಮಾರು 509 ಮೀಟರ್ ಮೇಲೆ ಹೋಗಬಾರದು ಎನ್ನುವುದರ ಬಗ್ಗೆ, ಅವರು ಒಂದು ಕೇಸನ್ನು ಹಾಕಿದ್ದರು. ಇದಾದ ನಂತರ ಅದು ಅಲ್ಲಿ ಡಿಸ್‌ಮಿಸ್ ಆಯಿತು, ಪುನಃ ಅವರು ಈಗ ಸುಪ್ರೀಂ ಕೋರ್ಟಿಗೆ ಹೋಗಿದ್ದಾರೆ. ಅಲ್ಲಿ ಕೇಸು ಫೆಬ್ರವರಿ ತಿಂಗಳಲ್ಲಿ ಇತ್ತು, ಅಂದರೆ ಫೆಬ್ರವರಿ ತಿಂಗಳಲ್ಲಿ ಒಂದು ಆದೇಶವನ್ನು ಕೊಟ್ಟಿದ್ದಾರೆ. ಅಂದರೆ ಆಂಧ್ರಪ್ರದೇಶದಲ್ಲಿ ಎಷ್ಟು ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡಿದ್ದಾರೆ ಅದರ ವಿವರ, ಕರ್ನಾಟಕದವರು ಎಷ್ಟು ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡಿದ್ದಾರೆ ಅದರ ವಿವರ, ಇದು ಎಲ್ಲಾ ಕೂಡ ತಾವು ಪರಸ್ಪರ ಆ ನೋಟ್ಸ್‌ನ್ನು ವಿನಿಮಯ ಮಾಡಿಕೊಳ್ಳಬೇಕು ಎಂದು ಅದರಲ್ಲಿ ಹೇಳಿದ್ದರು. ಈಗ ಅದರ ಪ್ರಕಾರ ನಾವು ಇವತ್ತು ಹೋಗಬೇಕಾಗತ್ತೇ ಹೊರತು, ಕೇವಲ ಕರ್ನಾಟಕ ಸರ್ಕಾರ ಕೆಲವು ದಾಖಲೆಗಳನ್ನು ಆಂಧ್ರಪ್ರದೇಶಕ್ಕೆ ಕೊಟ್ಟಿದೆ ಎನ್ನುವುದು ಗೊತ್ತಾಗಿದೆ. ಆದರೆ, ಆಂಧ್ರಪ್ರದೇಶದ ಸರ್ಕಾರದವರು ಯಾವುದೇ ದಾಖಲೆಗಳು, ಯಾವುದೇ ಪ್ರಾಜೆಕ್ಟ್‌ನ ವಿವರಗಳನ್ನು ಕರ್ನಾಟಕ ಸರ್ಕಾರಕ್ಕೆ ಕೊಟ್ಟಿಲ್ಲ. ನಾವು ಮಾತ್ರ ಇಂಥಿಂಥ ಪ್ರಾಜೆಕ್ಟ್‌ಗಳು ಇಷ್ಟಿಷ್ಟು ನೀರನ್ನು ಉಪಯೋಗ ಮಾಡಿಕೊಳ್ಳುತ್ತಿದ್ದೇವೆ ಎನ್ನತಕ್ಕಂಥ ಮಾಹಿತಿಯನ್ನು ಇವತ್ತು ಅವರಿಗೆ ಕೊಟ್ಟಿದ್ದೇವೆ 23ನೇ ದಿನಾಂಕದ ನ್ಯೂಸ್ ಟೈಂ ಪತ್ರಿಕೆಯಲ್ಲಿ ಕೂಡ ಈ ವಿಷಯ ವಿವರವಾಗಿ ಪ್ರಕಟವಾಗಿದೆ. ಚಂದ್ರಬಾಬು ನಾಯ್ಡು ಅವರು ಯಾವ ರೀತಿಯಾಗಿ ಈ ಒಂದು ಉಳಿದಿರುವ ಪ್ರಾಜೆಕ್ಟ್ ಅಂದರೆ ಸುಮಾರು 9 ಪ್ರಾಜೆಕ್ಟ್‌ಗಳು ಯಾವ ರೀತಿಯಾಗಿ ನೀರನ್ನು ಬಳಸಬೇಕು, ಎಷ್ಟೆಷ್ಟು ನಾವು ಅದಕ್ಕೆ ಅಲೋಕೇಷನ್ ಮಾಡಬೇಕು ಎನ್ನುವುದರ ಬಗ್ಗೆ, ಅವರು ತೀರ್ಮಾನ ತೆಗೆದುಕೊಂಡು, ಅದನ್ನು ಈಗಾಗಲೇ ಅವರು ಮಾಡುತ್ತಿದ್ದಾರೆ. ನಾನು ಪುನಃ ಅದನ್ನು ಓದಿ ಕೇಳುವ ಅವಶ್ಯಕತೆ ಇಲ್ಲವೆಂದು ತಿಳಿದುಕೊಂಡಿದ್ದೇನೆ. ತಮಗೆ ಗೊತ್ತಿರುವ ಹಾಗೆ, ತೆಲುಗು ಗಂಗಾ ಯೋಜನೆ ಪ್ರಾಜೆಕ್ಟ್ ಈಗಾಗಲೇ ಕಾರ್ಯಗತವಾಗಿದೆ. ಅದು ಸುಮಾರು 29 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಬೇಕು ಎನ್ನುವ ಪ್ರಾಜೆಕ್ಟ್ ಆಗಿದೆ. ನಂತರ ಗೇಲೂರು ನಾಗೇರಿ ಕ್ಯಾನಲ್ ಪ್ರಾಜೆಕ್ಟ್, ಅದು 42, ನಂತರ, ಹಂದರಿ, ನೀವಾ, ಸಿರಿಜಾಲ, ಸರಸ್ವತಿ, ಅದು ಸುಮಾರು 40. ವೆಲ್ಲಿಗುಂಡ ಪ್ರಾಜೆಕ್ಟ್ ಸುಮಾರು 42 ಹಾಗೂ ಕೌಂಟರ್ ಕೆನಾಲ್ ಪ್ರಾಜೆಕ್ಟ್ 30, ಭೀಮಾ ಲಿಫ್ಟ್ ಇರಿಗೇಷನ್ ಸ್ಕೀಂ 20 ಕಲವಕುರ್ತಿ ಲಿಫ್ಟ್ ಇರಿಗೇಷನ್ ಸ್ಕೀಮ್, 20, ನಂತರ ನೆಟ್ಟಂಪುಡಿ ಲಿಫ್ಟ್ ಇರಿಗೇಷನ್ ಸ್ಕೀಮ್ 20, ಕೊಯಿಲಾ ಸಾಗರ್ ಲಿಫ್ಟ್ ಇರೀಗೇಷನ್ ಸ್ಕೀಮ್ 15, ಈ ರೀತಿಯಾಗಿ ಒಟ್ಟಾರೆ 258 ಟಿ.ಎಂ.ಸಿ. ಅಂದರೆ ಬಚಾವತ್ ತೀರ್ಪಿನ ಪ್ರಕಾರ, ಈ ಸ್ಕೀಮ್‌ನಲ್ಲಿ ಅವರಿಗೆ ಬರತಕ್ಕಂಥ ನೀರು ಏನು ಇದೆ ಅದಕ್ಕಿಂತಲೂ ಹೆಚ್ಚಿನ ಯೋಜನೆಗಳನ್ನು

ಹಾಕಿಕೊಂಡು, ಈವತ್ತಿನ ದಿವಸ ಈ ಯೋಜನೆಗಳ ಕೆಲಸಗಳು ನಡೆದಿದೆ.

7.30 ಪಿ.ಎಂ

ಆದರೆ, ಇವತ್ತು ಆ ಮಾಹಿತಿಯನ್ನು ಕರ್ನಾಟಕ ಸರ್ಕಾರಕ್ಕೆ ಅವರು ಕೊಟ್ಟಿಲ್ಲ. ನೀವು ನಮ್ಮಲ್ಲಿ ನಡೆದಂಥ ಕೆಲಸದ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಕೊಟ್ಟಿದ್ದೀರಿ. ಇವತ್ತು ನಮಗೆ ಸುಮಾರು 734 ಟಿ.ಎಂ.ಸಿ. ನೀರು ಅಲೋಕೇಷನ್‌ನಲ್ಲಿ ಇರತಕ್ಕಂತಾದ್ದು. ಇದರಲ್ಲಿ ಯಾವ ಯಾವ ಕೆಲಸಗಳಿಗೆ ಎಷ್ಟೆಷ್ಟು ನೀರು ಎನ್ನತಕ್ಕಂಥಾದ್ದನ್ನು ಕೆಲವುಕಡೆ ನೀವು ತೋರಿಸಿದ್ದರೂ ಕೂಡ, ಆಂಧ್ರಪ್ರದೇಶದವರು ಹೇಳುವುದೇನೆಂದರೆ, ಅವರು ಸುಪ್ರೀಂ ಕೋರ್ಟಿನಲ್ಲಿ ವಾದ ಮಾಡಿದ್ದೇನೆಂದರೆ, 1156 ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಿದ್ದಾರೆ ಎಂಬ ಮಾತನ್ನು ಅವರು ಪ್ರಸ್ತಾಪ ಮಾಡುತ್ತಿದ್ದಾರೆ. ಅದೇರೀತಿಯಾಗಿ ಮಹಾರಾಷ್ಟ್ರದವರೂ ನಮ್ಮ ಮೇಲೆ ದೂರಿದ್ದಾರೆ. ಸುಮಾರು 1199 ಟಿ.ಎಂ.ಸಿ. ನೀರನ್ನು ಬಳಸುತ್ತಿದ್ದಾರೆ ಎನ್ನತಕ್ಕ ಮಾತನ್ನು ಅವರು ಪ್ರಸ್ತಾಪ ಮಾಡಿ ಹೇಳುತ್ತಿದ್ದಾರೆ. ಇದೆಲ್ಲಾ ನೋಡಿದಾಗ, ನನಗೇನು ಅನಿಸುತ್ತದೆಂದರೆ, ಇಂತಹ ಪರಿಸ್ಥಿತಿ ಏಕೆ ಉಂಟಾಯಿತು? ಅವರು ಏಕೆ ಈ ರೀತಿಯಾಗಿ ಮಾಡುತ್ತಿದ್ದಾರೆ ಎನ್ನತಕ್ಕಂತಾದ್ದನ್ನು ತಾವು ಸ್ಪಷ್ಟಪಡಿಸಬೇಕು. ಆಮೇಲೆ 9 ಕೆಲಸಗಳು ಹೆಚ್ಚುವರಿಯಾಗಿ ನಡೆದಿದೆ. ತೆಲುಗು ಗಂಗಾ ನಮ್ಮ ಒಪ್ಪಿಗೆಯಿಂದ ಕುಡಿಯುವ ನೀರಿಗಾಗಿ ಆಯಿತು. ಆದರೆ, ಉಳಿದ ಕೆಲಸಗಳಿಂದ ನೀರಾವರಿ ಮಾಡಿಕೊಳ್ಳತಕ್ಕ ಯೋಜನೆಗಳನ್ನೂ ಮಾಡಿಕೊಂಡಿದ್ದಾರೆ. ಶ್ರೀಶೈಲಂ ಬಲದಂಡೆ, ಎಡದಂಡೆ ಕೆನಾಲ್ ಹಿಂದಿನಿಂದ ನೋಟೀಸಿಗೆ ತಂದಿದ್ದು, ಅದೂ ಕೂಡ ಇತ್ತು. ಆದರೆ, ಉಳಿದಂಥ ಕೆಲಸಗಳೇನಿವೆ, ಜುರಾಲಾ ಪ್ರಾಜೆಕ್ಟ್ ಎತ್ತರವನ್ನು ಹೆಚ್ಚಿಗೆ ಮಾಡುವುದು ಅಥವಾ ಪುಲಿಚಿಂತಲ ಡೈವರ್ಷನ್ ಸ್ಕೀಮ್ ಪ್ರಕಾಶಂ ಬ್ಯಾರೇಜ್, ಟ್ವಿನ್ ಸಿಟಿ ವಾಟರ್ ಸಪ್ಲೈ ಸ್ಕೀಮ್, ಗೇಲೂರು ನಗರಿ ಕೆನಾಲ್ ಈ 5-6 ಯೋಜನೆಗಳು ಹೊಸದಾಗಿ ಬಂದು, ಹೆಚ್ಚಿನ ನೀರನ್ನು ಉಪಯೋಗ ಮಾಡಿಕೊಳ್ಳುವುದು ಈಗಾಗಲೇ ತಯಾರಿ ಮಾಡಿದ್ದಾರೆ. ಆದರೆ, ನಾವು ಏಕೆ ಇದನ್ನು ಗಮನಕ್ಕೆ ತೆಗೆದುಕೊಂಡು ನಿಲ್ಲಿಸುವುದನ್ನು ಮಾಡಲಿಲ್ಲ ಎನ್ನತಕ್ಕ ಪ್ರಶ್ನೆಯನ್ನು ನಿಮಗೆ ಕೇಳಬೇಕಾಗಿದೆ. ಇವತ್ತು ನಮಗೆ ಅಲೋಕೇಷನ್ ಆದ ನೀರನ್ನೇ ನಾವು ಬಳಸಿಕೊಂಡಿಲ್ಲ. ನಾವು ಸುಮಾರು 729 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಬೇಕು. ಅದರಲ್ಲಿ 5 ಟಿ.ಎಂ.ಸಿ. ನೀರನ್ನು ಕುಡಿಯುವ ನೀರಿಗಾಗಿ ಮದ್ರಾಸಿಗೆ ಕೊಟ್ಟಿದ್ದೇವೆ. ಅದನ್ನು ಬಿಟ್ಟು, ಉಳಿದಂತೆ 729 ಟಿ.ಎಂ.ಸಿ. ನೀರನ್ನು ನಾವು ಉಪಯೋಗ ಮಾಡಿಕೊಂಡಿಲ್ಲ. ಆದರೆ, ಅವರು ಅಲೋಕೇಷನ್ ಮಾಡಿಕೊಂಡೇ ಒಂದುಕಡೆ 9 ಹೊಸ ಯೋಜನೆಗಳನ್ನು ಎಕ್ಸಿಕ್ಯೂಟ್ ಮಾಡುವಾಗ ನಾವು ಸುಮ್ಮನೆ ಇದ್ದರೆ ಯಾವ ನ್ಯಾಯ? ಇದರ ಬಗ್ಗೆ ಸರ್ಕಾರ ನಿರ್ಲಕ್ಷ್ಯ ಮಾಡಿದೆ ಎನ್ನತಕ್ಕ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇದು ತಮಗೂ ಕೂಡ ಪತ್ರಿಕೆಯಲ್ಲಿ ಬಂದ ಮೇಲೆ ಮೇಲೆ ಗೊತ್ತಾಗಿದೆ. ಅವರ ಪತ್ರಿಕೆಯಲ್ಲಿ 9 ಸ್ಕೀಮುಗಳನ್ನು ಮಾಡಬೇಕೆಂಬ ಮಾತನ್ನು

ಹೇಳಿ, ಬರೆಸಿದ ಮೇಲೆ ಇವತ್ತು ಗೊತ್ತಾಗಿದೆ. ಎರಡನೆಯದು ಎಂದರೆ ಒಂದುಕಡೆ ಆಂಧ್ರಪ್ರದೇಶದವರು ಮಾಡತಕ್ಕಂತಾದ್ದು, ಇನ್ನೊಂದು ಕಡೆ ಮಹಾರಾಷ್ಟ್ರದವರು ಕೂಡ ಸೀಮಾ ಪ್ರಾಜೆಕ್ಟ್ ಎಂದು ಮಾಡಿಕೊಂಡು, ಭೀಮಾ ನದಿಯನ್ನು ಡೈವರ್ಟ್ ಮಾಡುತ್ತಿದ್ದಾರೆ. ಅವರು ಒಂದು ದೊಡ್ಡ ಟನಲ್ ತೆಗೆದು ಸುಮಾರು 200 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ, ಭೀಮಾ ಡೈವರ್ಷನ್ ಸ್ಕೀಮ್ ಎಂದು ಮಾಡಿಕೊಂಡು ಸೀಮಾ ನದಿಗೆ ಕೂಡಿಸಿ, ಅಲ್ಲೊಂದು ಪ್ರಾಜೆಕ್ಟ್ ತಯಾರು ಮಾಡುತ್ತಿದ್ದಾರೆ. ಅದಕ್ಕೆ ಈಗಾಗಲೇ ಡೆಪ್ಯೂಟಿ ಚೀಫ್ ಮಿನಿಸ್ಟರು ಮುಂಡೆಯವರು 2-3 ತಿಂಗಳ ಹಿಂದೆಯೇ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಆದೇಶ ಕೊಟ್ಟಿದ್ದಾರೆ. ಅವರು ಹಣವನ್ನೂ ಕೂಡ ಖರ್ಚು ಮಾಡುತ್ತಿದ್ದಾರೆ. ನಾವು ಇಲ್ಲಿ ಆ ವಿಷಯವನ್ನು ಪ್ರಸ್ತಾವ ಮಾಡಿದ್ದೇವೆ. ಈ ಸೀಮಾ ಎನ್ನತಕ್ಕಂಥ ಸ್ಕೀಮ್ ಕೂಡುವಾಡಿಯಲ್ಲಿ ಬಂದು ಅಲ್ಲಿಯ ಉಪ ಮುಖ್ಯಮಂತ್ರಿಗಳು ಆ ಮಾತನ್ನು ಹೇಳಿದ್ದಾರೆ. ಅವರ ಕೆಲಸ ತ್ವರಿತವಾಗಿ ನಡೆದಿದೆ. ಭೀಮಾ ಡೈವರ್ಷನ್ ಸ್ಕೀಮ್ ಆದರೆ, ಇಂಡಿ,ಸಿಂಧಗಿ, ಜೇವರ್ಗಿ, ಅಫ್‌ಜಲ್‌ಪುರ್, ಯಾದಗೀರ್, ಚಿತ್ತಾಪುರ್ ಈ ತಾಲ್ಲೂಕುಗಳಿಗೆ ಕುಡಿಯುವ ನೀರು ಕೂಡ ಇರುವುದಿಲ್ಲ. ಮತ್ತು ಮುಂದೆ ನಮ್ಮ ಪವರ್ ಪ್ರಾಜೆಕ್ಟ್‌ಗೂ ತೊಂದರೆಯಾಗುತ್ತದೆ. ಏಕೆಂದರೆ, ಅಲ್ಲಿ ಭೀಮಾ ನದಿ ಬಂದು ಕೃಷ್ಣಾಗೆ ಸೇರುತ್ತದೆ. ಇದು ಅಲ್ಲಿಯೇ ಇರತಕ್ಕಂತಾದ್ದು. ಇಷ್ಟೊಂದು ಯೋಜನೆಗಳನ್ನು ಅವರು ನಮಗೆ ಅರಿವಿಲ್ಲದೇ ಮಾಡುವಾಗ, ಇದರ ಬಗ್ಗೆ ಸರ್ಕಾರ ಏಕೆ ನಿಗಾ ಮಾಡಿಲ್ಲ? ಇಲ್ಲಿಯವರೆಗೆ ಇದರ ಬಗ್ಗೆ ನಿಮ್ಮ ಸ್ಟೇಟ್‌ಮೆಂಟೇ ಇಲ್ಲ. ಸೀಮಾ ನದಿಗೆ ಭೀಮಾ ನದಿಯನ್ನು ಕೂಡಿಸತಕ್ಕಂಥ ಡೈವರ್ಷನ್ ಸ್ಕೀಮ್‌ಗೆ ನೀವೇನು ಕಾರ್ಯಕ್ರಮ ಹಾಕಿದ್ದೀರಿ ಎಂದು ಕೇಳಿದರೆ, ತಾವೇನು ಹೇಳಿದಿರಿ. ಮಹಾರಾಷ್ಟ್ರ ಸರ್ಕಾರದ ಜೊತೆಯಲ್ಲಿ ಸಂಪರ್ಕ ಮಾಡಿ, ಇದರ ಬಗ್ಗೆ ತಿಳಿದುಕೊಂಡು ಮುಂದಿನ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ ಎನ್ನುವುದನ್ನು ಹೇಳಿದಿರಿ. ಇಲ್ಲಿಯವರೆಗೆ ಅದರ ಬಗ್ಗೆ ಏನು ಕಾರ್ಯಕ್ರಮ ಹಾಕಿದ್ದೀರಿ? ಆ ಕೆಲಸ ಎಷ್ಟರಮಟ್ಟಿಗೆ ನಡೆದಿದೆ, ಎಷ್ಟು ಹಣವನ್ನು ಅವರು ಖರ್ಚು ಮಾಡಿದ್ದಾರೆ ಎನ್ನತಕ್ಕ ಮಾಹಿತಿ ನಿಮಗೆ ಇಲ್ಲ. ಆ ಮಾಹಿತಿಯನ್ನು ಆ ಸದನದಲ್ಲಿಯೂ ಒದಗಿಸಿಲ್ಲ, ಈ ಸದನದಲ್ಲಿಯೂ ಕೊಟ್ಟಿಲ್ಲ. ಈ ರೀತಿಯಾಗಿ ತಾವು ನಿರ್ಲಕ್ಷ್ಯ ಮಾಡಿದರೆ, ಮುಂದೆ ರಾಜ್ಯಕ್ಕೆ ಕಷ್ಟವಾಗುತ್ತದೆ. 2 ಸಾವಿರ ಇಸವಿಯೊಳಗಾಗಿ, ನಮಗೆ ಅಲೋಕೇಷನ್ ಮಾಡಿದ 734 ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಿಕೊಳ್ಳುತ್ತೇವೆಂದು ಹೇಳುತ್ತೀರಿ. ಇನ್ನೊಂದು ಕಡೆ ಒಳಗ್ಗಿಂದೊಳಗೆ ಮಹಾರಾಷ್ಟ್ರದವರು ಡೈವರ್ಷನ್ ಮಾಡುತ್ತಿದ್ದಾರೆ. ಈ ಕಡೆ ಆಂಧ್ರದವರು ಅಲೋಕೇಷನ್ನಿಗಿಂತಲೂ ಹೆಚ್ಚಿನ ನೀರನ್ನು ತೆಗೆದುಕೊಂಡು, 9 ಹೊಸ ಯೋಜನೆಗಳನ್ನು ಪ್ರಾರಂಭ ಮಾಡಿದ್ದಾರೆ. ನಮ್ಮ ಸರ್ಕಾರ ಕಣ್ಣುಮಚ್ಚಿಕೊಂಡು ಕುಳಿತುಕೊಂಡರೆ, ಇದು ಅನ್ಯಾಯವಾಗುತ್ತದೆ. ಇದರ ಬಗ್ಗೆ ಇವತ್ತು ವಿಶೇಷವಾಗಿ ಚಿಂತನೆ ಮಾಡದೇ ಹೋದರೆ, ತಕ್ಷಣ ಆ ಕೆಲಸಗಳನ್ನು ನಿಲ್ಲಿಸದೇ ಹೋದರೆ, ನೀವು ಮುಂದೆ ಯಾವ ಪ್ರಾಜೆಕ್ಟ್‌ಗಳನ್ನು

ಮಾಡಿದರೂ ಈ ಕೃಷ್ಣಾ ಬೇಸಿನ್‌ನಲ್ಲಿ ಅವು ನಾನ್ ಫೀಸಿಬಲ್ ಆಗುತ್ತವೆ ಎನ್ನತಕ್ಕ ಮಾತನ್ನು ಹೇಳಬೇಕಾಗಿದೆ. ಸರ್ಕಾರ ಬರೀ ಸ್ಟೇಟ್‌ಮೆಂಟ್ ಕೊಟ್ಟು, ಇಷ್ಟು ಖರ್ಚುಮಾಡಿದ್ದೇವೆ, ಅಷ್ಟು ಖರ್ಚುಮಾಡಿದ್ದೇವೆಂದು ಹೇಳುವುದಲ್ಲ. ಇಲ್ಲಿ ಪ್ರಾಕ್ಟಿಕಲ್ ಆಗಿ ಆಗುತ್ತಿರುವುದನ್ನು ನೋಡಬೇಕು. ಅವರು ಅಲ್ಲಿ ವಿಜಿಲೆನ್ಸ್ ಕಮಿಟಿಯನ್ನು ಇಟ್ಟುಕೊಂಡಿದ್ದಾರೆ. ನಮ್ಮ ಯು.ಕೆ.ಪಿ.ನಲ್ಲಿ ಏನು ಕೆಲಸ ನಡೆದಿದೆ, ಅದರ ದಿನನಿತ್ಯದ ವರದಿ ಅವರಿಗೆ ಹೋಗುತ್ತದೆ. ಇವತ್ತು ತಮಿಳುನಾಡಿನವರೂ ಕೂಡ ಕಾವೇರಿ ಬೇಸಿನ್ ಕೆಲಸದ ಬಗ್ಗೆ ವಿಜಿಲೆನ್ಸ್ ಇಟ್ಟುಕೊಂಡಿದ್ದಾರೆ. ಆದರೆ, ನಮ್ಮದು ಮಾತ್ರ ಏನೂ ಇಲ್ಲ. ಅವರಲ್ಲಿ ನಡೆಯತಕ್ಕ ಕೆಲಸಗಳ ಬಗ್ಗೆ ಒಂದು ಮಾಹಿತಿಯೂ ನಮ್ಮಲ್ಲಿ ಇಲ್ಲ. ಇದು ಎಲ್ಲಿಯವರೆಗೆ ಹೋಗಿದೆ ಎಂದರೆ, ಕೋರ್ಟ್ ರಿಮೈಂಡ್ ಮಾಡಿ, ಡೈರಕ್ಷನ್ ಕೊಟ್ಟರೂ ಕೂಡ ಅವರು ಕೊಟ್ಟಿಲ್ಲ. ನಾವು ಮಾತ್ರ ತರಾತುರಿಯಲ್ಲಿ ಮಾಹಿತಿಯನ್ನು ಕೊಟ್ಟಿದ್ದೇವೆ. ಆದರೆ, ಅವರ ಮಾಹಿತಿ ಬರುವವರೆಗೆ ಕಾದಿರುವುದಿಲ್ಲ. ಆಂಧ್ರಪ್ರದೇಶದಲ್ಲಿ ಯಾವ ಯಾವ ಕೆಲಸಗಳನ್ನು ತೆಗೆದುಕೊಂಡಿದ್ದಾರೆ, ಎಷ್ಟು ಖರ್ಚು ಮಾಡಿದ್ದಾರೆಂಬ ಮಾಹಿತಿಯನ್ನು ನಿಮಗೆ ಕೊಟ್ಟಿದ್ದಾರೆಯೇ? ಆದರೆ, ನೀವು ಅವರಿಗಿಂತ ಮುಂಚೆ, 2-3 ತಿಂಗಳುಮುಂದೆ ಮಾಹಿತಿಯನ್ನು ಕೊಟ್ಟಿದ್ದೀರಿ. ಅಂದರೆ ನಮ್ಮ ಜನರು ಎಷ್ಟು ಆತುರ ಇದ್ದಾರೆ ಎನ್ನುವುದು ಗೊತ್ತಾಗುತ್ತದೆ. ದಯವಿಟ್ಟು ಇದರ ಬಗ್ಗೆ ಸವಿಸ್ತಾರ ಹೇಳಿಕೆಯನ್ನು ತಾವು ಕೊಡಬೇಕು. ಅಲ್ಲಿ ನಡೆಯುತ್ತಿರತಕ್ಕ ಕೆಲಸಗಳನ್ನು ನಿಲ್ಲಿಸಬೇಕು ಇಲ್ಲದೇ ಇದ್ದರೆ, ಯಾವ ಪ್ರಯೋಜನವೂ ಆಗುವುದಿಲ್ಲ. ನಾನು ನೇರವಾಗಿ ಹೇಳಬೇಕಾಗುತ್ತದೆ, ಈ ಕೆಲಸಗಳನ್ನು ನೀವು ನಿಲ್ಲಿಸದೇ ಹೋದರೆ, ಇದರಲ್ಲಿ ನೀವು ಆಸಕ್ತಿ ತೋರಿಸುತ್ತಾ ಇಲ್ಲವೆಂಬ ಮಾತನ್ನು ಸ್ಪಷ್ಟವಾಗಿ ಹೇಳಬೇಕಾಗಿದೆ.

+ ಶ್ರೀ ಕೆ.ಎನ್.ನಾಗೇಗೌಡ (ಭಾರೀ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಮಹತ್ತರವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಹೆಚ್ಚು ವಿವರಗಳನ್ನು ಹೇಳುವುದಕ್ಕೆ ಹೋಗದಿದ್ದರೂ ಸೂಕ್ಷ್ಮವಾಗಿ ಹೇಳುತ್ತೇನೆ. ಆಂಧ್ರದಲ್ಲಿ ಕೃಷ್ಣಯ್ಯ ಕೇಸ್ ಹೈಕೋರ್ಟಿಗೆ ಹೋದ ತಕ್ಷಣ ಅವರು ಸುಪ್ರೀಂಕೋರ್ಟಿಗೆ ಹೋದರು. ಈಗ ಆ ಕೇಸ್ ಸುಪ್ರೀಂಕೋರ್ಟಿನಲ್ಲಿದೆ. ನಾನು ವಿವರಗಳನ್ನು ಕೊಡುವುದಕ್ಕೆ ಅವಕಾಶ ಕೊಡಿ. ಈ ಮಧ್ಯೆ ವಿರೋಧಪಕ್ಷದ ನಾಯಕರು ಪತ್ರಿಕೆಯಲ್ಲಿ ಬಂದಿರತಕ್ಕ 9 ಪ್ರಾಜೆಕ್ಟ್‌ಗಳ ಬಗ್ಗೆ ನಮ್ಮ ಸರ್ಕಾರ ಏನೂ ಕ್ರಮ ತೆಗೆದುಕೊಂಡಿಲ್ಲವೆಂಬ ಮಾತನ್ನು ಹೇಳಿದರು. ನಮ್ಮ ಒ.ಎಸ್. 1ನಲ್ಲಿ 6 ಪ್ರಾಜೆಕ್ಟ್‌ಗಳ ಬಗ್ಗೆ ಅಬ್ಜೆಕ್ಷನ್ ಮಾಡಿದ್ದೇವೆ. ತೆಲುಗು ಗಂಗಾ ಮೇಲೆ, ಶ್ರೀಶೈಲಂ ಎಡದಂಡೆ, ಬಲದಂಡೆ ಕೆನಾಲ್ ಮೇಲೆ, ಭೀಮಾ ಲಿಫ್ಟ್ ಮೇಲೆ ಹೀಗೆ 5-6 ಪ್ರಾಜೆಕ್ಟ್‌ಗಳ ಮೇಲೆ ನಾವು ಸುಪ್ರೀಂ ಕೋರ್ಟಿನಲ್ಲಿ ತಕರಾರು ಹಾಕಿಕೊಂಡು, ಒ.ಎಸ್-1ರಲ್ಲಿ ಕೇಸ್ ನಡೆಯುತ್ತಿದೆ. ಈ ಮಧ್ಯೆ ಆಗಸ್ಟ್ 8ನೇ ತಾರೀಖಿನ ದಿವಸ ಸುಪ್ರೀಂ ಕೋರ್ಟ್ ಒಂದು ಆರ್ಡರ್ ಮಾಡಿದೆ. "The Learned Additional Solicitor General submit the

written statement of the Union of India would be filed within two weeks. Parties are requested to file all the documents on which day they relate together with the affidavit within four weeks. The parties will furnish complete set of copies of document filed by the other parties. They would exchange their notice, admissions and denial also. Take all steps necessary at the pre-trial stage in the form of discovery so that the matter could heard on merits so produced. The question whether any oral evidence is required to be or any of the affidavit is required to be called for cross-examination would be considered on merits at the next hearing. List on 30th September 97. ಅಂದರೆ ಸ್ಟೇಟ್‌ಗಳು, ಡಾಟಾಗಳು, ಡೀಟೈಲ್ ಪ್ರಾಜೆಕ್ಟ್‌ಗಳು ಎಂದು ಎಕ್ಸ್‌ಚೇಂಜ್ ಮಾಡಿಕೊಳ್ಳಬೇಕು. ಸೆಪ್ಟಂಬರ್ 30ಕ್ಕೆ ಬರಬೇಕೆಂದು ಹೇಳಿದ್ದೇವೆ. ನಾವು ವಿವರಗಳನ್ನು ಕೊಟ್ಟಿದ್ದೇವೆ. ಇದರಲ್ಲಿ ಮುಚ್ಚಿಕೊಳ್ಳತಕ್ಕ ಅವಶ್ಯಕತೆ ಏನೂ ಇಲ್ಲ ಬಚಾವತ್ ಅವಾರ್ಡಿನ ವಿರೋಧ ಮಾಡಿಲ್ಲ. ಅವರು ನಿನ್ನೆಯವರೆಗೆ ಕೊಟ್ಟಿರಲಿಲ್ಲ. ನಿನ್ನೆಯವರೆಗೆ ಒಂದು ಐ.ಎ. ಹಾಕಿಕೊಂಡು, ಏನು ಕೋರ್ಟಿನವರು ವಿವರಗಳನ್ನು ಕೇಳಿದ್ದಾರೆ, ಅದು ಬಹಳ ವಾಲ್ಯೂಮ್‌ನಸ್ ಡಿಟೇಲ್ಸ್ ಇವೆ. ರೈನ್ ಫಾಲ್ ಮತ್ತೊಂದು ಮೊಗದೊಂದು ಕೇಳಿದ್ದಾರೆ. ನಮಗೆ ಅವುಗಳನ್ನು ಕೊಡುವುದಕ್ಕೆ ಟೈಮ್ ಬೇಕು ಎಂದು ಕೇಳಿದ್ದರು. ಇವತ್ತು ಮಧ್ಯಾಹ್ನದ ಮೇಲೆ ಅವರು ನಮ್ಮ ಅಡ್ವೊಕೇಟ್ ಶ್ರೀನಾಗರಾಜನ್ ರವರಿಗೆ ಇವತ್ತು ಡಿಟೇಲ್ಸ್ ಕೊಟ್ಟಿದ್ದಾರೆ. ಸೆಪ್ಟಂಬರ್ 30ರವರೆಗೂ ಟೈಮ್ ಇದೆ. ಇವತ್ತು ಮಧ್ಯಾಹ್ನ ಆಂಧ್ರಪ್ರದೇಶದ ಅಡ್ವೋಕೇಟ್ ಅವರು ಸುಮಾರು ನೂರಾರು ಪೇಜು ಇರತಕ್ಕಂಥ ಡಿಟೇಲ್ಸ್ ಎಲ್ಲಾ ಪ್ರಾಜೆಕ್ಟ್‌ಗಳ ಬಗ್ಗೆ ವಿವರವನ್ನು ಕೊಟ್ಟಿದ್ದಾರೆ. ಇವತ್ತು ನಮ್ಮ ಕಾರ್ಯದರ್ಶಿಗಳು ಡೆಲ್ಲಿಯಲ್ಲಿ ಇದ್ದಾರೆ. ನಮ್ಮ ಅಡ್ವೊಕೇಟ್ ಡೆಲ್ಲಿಯಲ್ಲಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಆ ಪ್ರಾಜೆಕ್ಟ್‌ಗಳ ಹೆಸರುಗಳನ್ನು ಹೇಳಿ. ಈಗ ನಾಗಾರ್ಜುನ ಲೆಫ್ಟ್ ಬ್ಯಾಂಕ್ ಕೆನಾಲ್, ಅದಕ್ಕೆ ಒಂದು 30 ಟಿ.ಎಂ.ಸಿ. ಅಲೋಕೇಷನ್. ಅಥವಾ ಭೀಮಾ ಲಿಫ್ಟ್ ಇರಿಗೇಷನ್, ಅದಕ್ಕೆ ಒಂದು 20 ಹೀಗೆ ಹೇಳಿ. ನಾವು ಅವರು ಒಂದು ನೂರು ಪೇಜು ಅಬ್ಜೆಕ್ಷನ್ಸ್ ಕೊಟ್ಟಿದ್ದರೆ ಅದನ್ನು ಕೇಳುತ್ತಿದ್ದೇವೆಯೇ?

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಅಧ್ಯಕ್ಷರೇ, ಇವತ್ತು ಡಿಟೇಲ್ಸ್ ಅವರಿಗೆ ಹೋಗಿದೆ. ನನ್ನ ಹತ್ತಿರ ಆ ಟಿ.ಎಂ.ಸಿ. ವಗೈರೆ ಎಲ್ಲಾ ಬಂದಿಲ್ಲ. ಮಧ್ಯಾಹ್ನ ಒಂದು ಗಂಟೆಯವರೆಗೂ ನನಗೆ ಗೊತ್ತಿಲ್ಲ. 2 ಗಂಟೆ ಮೇಲೆ ನಮ್ಮ ಕಾರ್ಯದರ್ಶಿಯವರಿಗೆ

ಹೇಳಿದ ಮೇಲೆ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಆಂಧ್ರಪ್ರದೇಶದವರು ಬೇಕು ಎಂದು ಫ್ಯಾಕ್ಟ್ ಅಂಡ್ ಫಿಗರ್ಸ್ ಕೊಡುತ್ತಿಲ್ಲ. ನಾವೆಲ್ಲಾ ಒಂದೇ ತಿಂಗಳಲ್ಲಿ ತರಾತುರಿಯಲ್ಲಿ ಕೊಟ್ಟಿದ್ದೇವೆ. ಒಂದೇ ತಿಂಗಳಲ್ಲಿ ಕೊಡಬೇಕೆಂದು ನಮಗೇನೂ ಕೋರ್ಟಿನಿಂದ ಡೈರೆಕ್ಷನ್ ಕೊಟ್ಟಿಲ್ಲ. ಅವರು ಇದುವರೆಗೂ ಕೊಟ್ಟಿಲ್ಲ. ಅವರು ಹೊಸದಾಗಿ 9 ಸಣ್ಣ ಪುಟ್ಟ ಯೋಜನೆಗಳನ್ನು ತೆಗೆದುಕೊಂಡಿದ್ದಾರಲ್ಲಾ...

ಶ್ರೀ ಕೆ.ಎನ್.ನಾಗೇಗೌಡ: ಒಂದು ನಿಮಿಷ ಕುಳಿತುಕೊಳ್ಳಿ. ನಾನು ಹೇಳುತ್ತೇನೆ. ಶ್ರೀ ಟಿ.ವಿ.ಎಸ್.ನರಸಿಂಹಾಚಾರಿ ಎಂದು ಹೇಳಿ, "Furnishing of documents connected with OS:2/1997 between State of Andhra Pradesh Vs.State of Karnataka." ಎಂದು ಹೇಳಿ "Out of the list of documents served by the Government of Karnataka, in the above mentioned suit, Telugu Ganga Project-2 books; Sreesailam Reservior including Left Bank & Right Bank canals-3 books; Bheema Lift Scheme-1 book; Pulichintala Diversion-1 book; Jurala Project-1 book; Nagarjuna Sagara Project.. ಇವತ್ತು ವಾಲ್ಯೂಮ್ಸ್ ಆಫ್ ಬುಕ್ಸ್‌ಗಳನ್ನು ಮಧ್ಯಾಹ್ನ ಕೊಟ್ಟಿದ್ದಾರೆ. ಅವರು ಮಧ್ಯಾಹ್ನ ಕೊಟ್ಟಿದ್ದಾರೆ ಅಂದರೆ ನಾನು ತಮಗೆ ಏನು ಡಿಟೇಲ್ಸ್ ಕೊಡಲಿ ಹೇಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಎಲ್ಲಾ ಡೀಟೇಲ್ಸ್ ಅಲ್ಲ. ಒಂದು ವಾಲ್ಯೂಮ್ಸ್....

ಶ್ರೀ ಕೆ.ಎನ್.ನಾಗೇಗೌಡ: ತಾವು ದಯವಿಟ್ಟು ಸ್ವಲ್ಪ ಅರ್ಥಮಾಡಿಕೊಳ್ಳಬೇಕು. ಇವು ಪ್ರಾಜೆಕ್ಟ್ ರಿಪೋರ್ಟ್‌ಗಳು. ಅವರು ಸುಮಾರು 13-14 ಪ್ರಾಜೆಕ್ಟ್‌ಗಳ ಮೇಲೆ ಕೊಟ್ಟಿದ್ದಾರೆ. ಕಾಂಟೋರ್‌ಕೆನಾಲ್, no project has been prepared; Pulivenkatala LI scheme, no project has been prepared, in another two lift Irrigation Schemes, no project has been prepared." ಈಪ್ರಾಜೆಕ್ಟ್‌ಗಳ ಬಗ್ಗೆ 3-4 ಬುಕ್ಸ್ ಇರತಕ್ಕಂಥ ಪ್ರಾಜೆಕ್ಟ್ ಬುಕ್‌ಗಳನ್ನು, ನೂರಾರು ಪೇಜು ಇದೆಯಂತೆ, ಅದನ್ನು ಇವತ್ತು ಮಧ್ಯಾಹ್ನ 3 ಗಂಟೆಗೆ ಅವರ ಅಡ್ವೊಕೇಟ್ ನಮ್ಮ ಅಡ್ವೊಕೇಟ್‌ಗೆ ಡಿಟೇಲ್ಸ್ ಕೊಟ್ಟಿದ್ದಾರೆ. You must appreciate, since from several years we were asking those details. ಕೊಟ್ಟಿರಲಿಲ್ಲ. ಸುಪ್ರೀಂ ಕೋರ್ಟಿನವರು 30ನೇ ತಾರೀಖು ಒಳಗಾಗಿ ಎಲ್ಲಾ ಡಿಟೇಲ್ಸ್ ಕೊಟ್ಟು ನಮ್ಮ ಮುಂದೆ ಬರಬೇಕೆಂದು ಹೇಳಿದ ಮೇಲೆ

ನಿನ್ನೆಯವರೆಗೂ ಕೊಟ್ಟಿರಲಿಲ್ಲ ನಿನ್ನೆ ಮಧ್ಯಾಹ್ನದವರೆಗೂ ಕೊಟ್ಟಿರಲಿಲ್ಲ. ಇವತ್ತು ಮಧ್ಯಾಹ್ನ ನಮ್ಮ ಅಡ್ವೊಕೇಟ್‌ಗೆ ಅವರ ಅಡ್ವೊಕೇಟ್ ಶ್ರೀ ನಾಗರಾಜನ್ ಅವರಿಗೆ ಬರೆದು ಇಂತಿಂಥ ಬುಕ್ಕು ಇಂತಿಂತಹ ಪ್ರಾಜೆಕ್ಟ್‌ದ್ದು ಎಂದು ಹೇಳಿ ಇವತ್ತು ಮಧ್ಯಾಹ್ನ ಅವರ ಕೈಗೆ ತಲುಪಿಸಿದ್ದಾರೆ. ನಮ್ಮ ಆಫೀಸರ್ಸ್, ನಮ್ಮ ಲಾಯರ್ಸ್ ಎಲ್ಲಾ ಸ್ಟಡಿ ಮಾಡುತ್ತಿದ್ದಾರೆ. ನಾನು ತಮಗೆ ಬೇಕಾದರೆ ನಾಳೆ ನಾಡಿದ್ದರ ಒಳಗಡೆ ಡಿಟೇಲ್ ಆಗಿ ಯಾವ ಯಾವ ಪ್ರಾಜೆಕ್ಟ್‌ಲ್ಲಿ ಎಷ್ಟೆಷ್ಟು ಟಿ.ಎಂ.ಸಿ. ನೀರು ಉಪಯೋಗಿಸಿದ್ದಾರೆ ಎನ್ನತಕ್ಕಂಥಾದ್ದು ನಮಗೆ ಸಿಗುತ್ತದೆ. ಸಿಕ್ಕಿದ ಮೇಲೆ ಮಾನ್ಯ ಅಧ್ಯಕ್ಷರ ಮುಖಾಂತರ ತಮಗೂ ಬೇಕಾದರೆ ಕಳುಹಿಸಿಕೊಡುತ್ತೇನೆ. ಇಲ್ಲ ಅಂದರೆ ನೇರವಾಗಿ ಆದರೂ ನಿಮಗೆ ಕಳುಹಿಸಿಕೊಡುತ್ತೇನೆ. ಅವರು ಕೋರ್ಟ್ ಡೈರೆಕ್ಷನ್ ಪ್ರಕಾರವಾಗಿ ಕೊಟ್ಟಿರುವುದು. ಆಮೇಲೆ ನಮ್ಮ ಸೀಮಾ ಬಗ್ಗೆ ಮಾತನಾಡಿದರು. ಪತ್ರಿಕೆಯಲ್ಲಿ ಬಂದ ತಕ್ಷಣವೇ ನಾವು ಕಾಗದ ಬರೆದಿದ್ದೇವೆ. ನಾವು ಕಾಗದ ಬರೆದ ತಕ್ಷಣವೇ ಅವರು ಅಲ್ಲಿಂದ ನಮಗೆ ಒಂದು ಉತ್ತರ ಬರೆದರು. ಅವರ ಮುಖ್ಯಕಾರ್ಯದರ್ಶಿಗಳು ನಮ್ಮ ಮುಖ್ಯ ಕಾರ್ಯದರ್ಶಿಗಳಿಗೆ ಬರೆದರು. ನಮ್ಮ ಮುಖ್ಯಮಂತ್ರಿಗಳೇ ನಿಮಗೆ ಉತ್ತರ ಬರೆದಿದ್ದಾರೆ. ಸರ್ಕಾರ ಏನೂ ಮಾಡಿಲ್ಲ, ಸ್ಟೇಟ್‌ಮೆಂಟ್ ಮಾಡಿಲ್ಲ, ಎಂದು ಅವರು ಹೇಳಿದರು. ಮಾನ್ಯ ಅಧ್ಯಕ್ಷರೇ, ಪತ್ರಿಕೆಯಲ್ಲಿ ಬಂತು. ಉಪ ಮುಖ್ಯಮಂತ್ರಿಗಳು ಹೋಗಿ ಫೌಂಡೇಷನ್ ಆಗಿದೆ ಎಂದು ಗೊತ್ತಾಯಿತು. ತಕ್ಷಣ 22-5-97ರಲ್ಲಿ ನಮ್ಮ ಮುಖ್ಯಕಾರ್ಯದರ್ಶಿಗಳು ಮಹಾರಾಷ್ಟ್ರ ಮುಖ್ಯ ಕಾರ್ಯದರ್ಶಿಗಳಿಗೆ ಒಂದು ಪತ್ರ ಬರೆದರು. ಅದಕ್ಕೆ ಅವರು ಒಂದು ಉತ್ತರವನ್ನೂ ಸಹ ಬರೆದಿದ್ದಾರೆ. "I am in receipt of your letter dated 22.5.97 I wish to assure that Maharashtra has always been taking and will continue to take a strict care that we will not violate any clause of Krishna Water Dispute Tribunal Awartd, including the situation pertaining to utilising not more than 95 TMC water from the mainstream of Bheema river during any water years commencing from 1991." ಆ ಕಾಗದ ಬಂದ ತಕ್ಷಣ ನೀವು ನಮ್ಮ ಮುಖ್ಯಮಂತ್ರಿಗಳಿಗೆ ಒಂದು ಕಾಗದ ಬರೆದಿದ್ದೀರಿ. ನಮ್ಮ ಮುಖ್ಯಮಂತ್ರಿಗಳು ನಿಮಗೆ ಒಂದು ಕಾಗದ ಬರೆದಿದ್ದಾರೆ. ಆ ನಿಮ್ಮ ಕಾಗದ ಇಲ್ಲೇ ಇದೆ. ತಾವು ನಮಗೆ 28ನೇ ತಾರೀಖು ಪತ್ರ ಬರೆದಿದ್ದೀರಿ. ಅದಕ್ಕೆ ನಮಗೆ 29ನೇ ತಾರೀಖಿಗೆ ಮುಖ್ಯಮಂತ್ರಿಗಳು ಪತ್ರ ಬರೆದಿದ್ದಾರೆ. ನಮ್ಮ ಮುಖ್ಯಮಂತ್ರಿಗಳು ಡಿಟೇಲ್ ಆಗಿ, ಮಹಾರಾಷ್ಟ್ರ ಮುಖ್ಯ ಕಾರ್ಯದರ್ಶಿ ನಮಗೆ ಏನು ಪತ್ರ ಬರೆದಿದ್ದಾರೆ. ನಾವು ವೈಲೇಟ್ ಮಾಡುವುದಿಲ್ಲ ಎನ್ನತಕ್ಕಂಥದ್ದನ್ನು ಏನು ಹೇಳಿದ್ದಾರೆ ಅದನ್ನು ಅವರು ನಿಮಗೆ ಬರೆದಿದ್ದಾರೆ. ಆದರೂ ಸಹ ಇವತ್ತಿನ ಪರಿಸ್ಥಿತಿಯಲ್ಲಿ ಎಲ್ಲಾ ರಾಜ್ಯಗಳು ಅವರ ಡಾಟಾ, ಪ್ರಾಜೆಕ್ಟ್ ರಿಪೋರ್ಟ್‌ಗಳನ್ನು ಎಕ್ಸ್‌ಚೇಂಜ್ ಮಾಡಿಕೊಳ್ಳಬೇಕು. ನಾವು ಕೊಟ್ಟಿದ್ದೇವೆ.

ಆಂಧ್ರಪ್ರದೇಶದವರು ಕೊಟ್ಟಿದ್ದಾರೆಂದು ನಮ್ಮ ಅಡ್ವೊಕೇಟ್ ಇವತ್ತು ನನಗೆ ಒಂದು ಫ್ಯಾಕ್ಸ್ ಕಳುಹಿಸಿದ್ದಾರೆ. ಮಹಾರಾಷ್ಟ್ರದವರೂ ಕೊಡಬೇಕು. ಮೂರು ರಾಜ್ಯದವರು ಕೊಟ್ಟು ಎಕ್ಸ್‌ಚೇಂಜ್ ಮಾಡಿಕೊಂಡ ಮೇಲೆ ಸೆಪ್ಟೆಂಬರ್ 30ನೇ ತಾರೀಖು ಕೇಸ್ ಇದೆ, ಆಮೇಲೆ ಮುಂದಕ್ಕೆ ಕೇಸ್ ನಡೆಯುತ್ತದೆ ಆದ್ದರಿಂದ ಸರ್ಕಾರ ಎಲ್ಲೂ ನಿರ್ಲಕ್ಷ ಮಾಡಿಲ್ಲ. ನಾವು ಆಂಧ್ರಪ್ರದೇಶದವರಿಂದ ಡಿಟೇಲ್ಸ್ ಪಡೆಯುವುದಕ್ಕೆ ಎಲ್ಲಾ ವ್ಯವಸ್ಥೆಯನ್ನು ಮಾಡಿದ್ದೇವೆ. ಮಹಾರಾಷ್ಟ್ರದವರಿಂದ ಡಿಟೇಲ್ಸ್ ಪಡೆದುಕೊಳ್ಳುವುದಕ್ಕೆ ನಾವು ಕಾಗದ ಬರೆದಿದ್ದೇವೆ. ಆದ್ದರಿಂದ ನಾವು ಎಲ್ಲಾ ರೀತಿಯಿಂದ ಕರ್ನಾಟಕ ರಾಜ್ಯದ ಹಕ್ಕನ್ನು ರಕ್ಷಣೆ ಮಾಡಲು ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ ಸೀಮಾ ನದಿ ಇದೆಯಲ್ಲಾ ಅದಕ್ಕೆ ಭೀಮಾ ನದಿಯನ್ನು ಕೂಡಿಸತಕ್ಕಂಥ ಪ್ರಾಜೆಕ್ಟ್‌ಗೆ ಇಲ್ಲಿಯವರೆಗೂ ಅವರು ಎಷ್ಟು ಹಣ ಖರ್ಚು ಮಾಡಿದ್ದಾರೆ, ಏನು ಕೆಲಸ ಆಗಿದೆ, ಇದನ್ನು ಹೇಳಿ, ಏಕೆಂದರೆ ಇಲ್ಲಿಯವರೆಗೂ ನೀವು ಕಳುಹಿಸಿಯೇ ಇಲ್ಲ.

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಅಧ್ಯಕ್ಷರೇ, ಈಗ ಅವರೇ ಕೊಡಬೇಕಲ್ಲಾ. ಸುಪ್ರೀಂ ಕೋರ್ಟ್ ನಿರ್ದೇಶನ ಇದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ತಮಗೆ ಹೇಳುತ್ತೇನೆ. ಒಂದು ಸಾರಿ ಡೈವರ್ಟ್ ಆದರೆ ಕುಡಿಯುವುದಕ್ಕೆ ನೀರೂ ಸಹ ಸಿಗುವುದಿಲ್ಲ. ಸಿಂಧಗಿ, ಅಫಜಲ್‌ಪುರ, ಜೇವರ್ಗಿ, ಚಿತಾಪುರ್, ಯಾದಗಿರ್ ಈ 6-7 ತಾಲ್ಲೂಕುಗಳಿಗೆ ಕುಡಿಯುವುದಕ್ಕೆ ನೀರೂ ಸಹ ಸಿಗುವುದಿಲ್ಲ. ಅದನ್ನು ನೀವು ನೋಡಿ ತಿಳಿದುಕೊಳ್ಳಬೇಕು. ನಾನು ಅನೇಕ ಸಾರಿ ಹೇಳಿದ್ದೇನೆ.

ಶ್ರೀ ಕೆ.ಎನ್.ನಾಗೇಗೌಡ: ಸುಪ್ರೀಂ ಕೋರ್ಟಿನಲ್ಲಿ 8ನೇ ಆಗಸ್ಟ್‌ನಲ್ಲಿ 3 ರಾಜ್ಯಗಳು ಪರಸ್ಪರ ಅವರವರ ರಾಜ್ಯಗಳ ಪ್ರಾಜೆಕ್ಟ್ ರಿಪೋರ್ಟ್‌ಗಳ ಬಗ್ಗೆ ಡಾಟಾ ಬಗ್ಗೆ, ಎಕ್ಸ್‌ಚೇಂಜ್ ಮಾಡಿಕೊಳ್ಳಬೇಕು. ಆ ನಂತರ ಅವರು ಸೆಪ್ಟೆಂಬರ್ 30ನೇ ತಾರೀಖು ಸುಪ್ರೀಂ ಕೋರ್ಟ್ ಮುಂದೆ ಬರಬೇಕೆಂದು ಹೇಳಿದ ಮೇಲೆ ನಾವು ಕೊಟ್ಟಿದ್ದೇವೆ. ಇವತ್ತು ಆಂಧ್ರದವರು ಕೊಟ್ಟಿದ್ದಾರೆ ಮಹಾರಾಷ್ಟ್ರದವರೂ ಕೊಡುತ್ತಾರೆ. ಕೊಟ್ಟಂತಹ ಕಾಲದಲ್ಲಿ ಭೀಮಾ ಡೈವರ್‌ಷನ್‌ಗೆ ಎಷ್ಟು ಉಪಯೋಗಿಸಿಕೊಂಡಿದ್ದಾರೆ ಸೀಮಾಗೆ ಎಷ್ಟು ಉಪಯೋಗಿಸಿಕೊಟ್ಟಿದ್ದಾರೆ ಎನ್ನುವ ಡಿಟೇಲ್ಸ್ ಬರುತ್ತದೆ. 30ನೇ ಸೆಪ್ಟೆಂಬರ್‌ಗೆ ಕೇಸ್ ಪೋಸ್ಟ್ ಮಾಡಿದ್ದಾರೆ. ಬಂದ ತಕ್ಷಣ ನಾನು ಆ ಡಿಟೇಲ್ಸ್‌ನ್ನು ತಮಗೆ ತಿಳಿಸುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: 30ನೇ ತಾರೀಖು ಕೇಸ್ ಇದೆ. ಈ ಮಧ್ಯದಲ್ಲಿ ನಾನು ತಮಗೂ ಪತ್ರ ಬರೆದು ಆಯಿತು, ಅವರಿಗೂ ಪತ್ರ ಬರೆದು ಆಯಿತು. ಬರೆದ

ಮೇಲೆ ನಮ್ಮ ಅಧಿಕಾರಿಗಳು ಅಲ್ಲಿಗೆ ಹೋಗಿ ನೋಡಿಕೊಂಡು ಎಲ್ಲೆಲ್ಲಿ ಅವರು ಹೊಸದಾಗಿ ಪ್ರಾಜೆಕ್ಟ್‌ಗಳು ಮಾಡಿದ್ದಾರೆ ಸೀಮಾ ನದಿಯನ್ನು ಭೀಮಾ ನದಿಗೆ ಕೂಡಿಸಬೇಕು ಎನ್ನುವಂತಹ 200 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ನಡೆದಿದೆಯೋ ಇಲ್ಲವೋ ಎನ್ನುವುದನ್ನು ನೋಡಿಕೊಂಡು ಬರುವುದಕ್ಕೂ ಆಗುವುದಿಲ್ಲವೇ?

ಶ್ರೀ ಕೆ.ಎನ್.ನಾಗೇಗೌಡ: ನಮ್ಮ ಅಡ್ವೊಕೇಟ್ ಅವರ ಅಡ್ವೊಕೇಟ್‌ಗೆ ಬರೆದಿದ್ದಾರೆ. ಎಲ್ಲಾ ಮಾಹಿತಿ ಸುಪ್ರೀಂ ಕೋರ್ಟಿಗೆ ಬರುತ್ತದೆಯಲ್ಲಾ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಫಿಸಿಕಲ್ ವೆರಿಫಿಕೇಷನ್ ಮಾಡಿ ನಮಗೆ ಹೇಳಿ ಎಂದು ನಾವು ಅನೇಕ ಸಾರಿ ಕೇಳಿಕೊಂಡರೆ ನೀವು ಅಡ್ವೋಕೇಟ್ ಬರೆದಿದ್ದಾರೆ ಎಂದು ಹೇಳುತ್ತೀರಿ. ಏಕೆಂದರೆ ಅವರು ಬೇಗನೆ ಕೊಟ್ಟರೆ ಅವರು ರೆಕಾರ್ಡ್ ಕ್ರಿಯೇಟ್ ಮಾಡಿಕೊಳ್ಳುತ್ತಾರೆ ಎಂದು ಹೇಳಿ ತಮಗೆ ಗೊತ್ತಿದೆ. ಅವರು ತಮ್ಮ ಕೇಸಿಗೆ ಅನುಕೂಲವಾಗತಕ್ಕಂಥ ರೀತಿಯಲ್ಲಿ ರೇಕಾರ್ಡ್ ಬಿಲ್ಡ್ ಅಪ್ ಮಾಡಿ ಆಮೇಲೆ ಕೊಡತಕ್ಕಂಥಾದ್ದು. ಫೀಲ್ಡ್‌ನಲ್ಲಿ ಏನಾಗಿದೆ ಎಂದು ನೋಡಿಕೊಂಡು ಬರುವುದಕ್ಕೆ ಏನಾಗಿದೆ ಹೇಳಿ.

ಶ್ರೀ.ಕೆ.ಎನ್.ನಾಗೇಗೌಡ: ಆಯಿತು ನೋಡಿಸೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಈ ವಿಷಯವನ್ನು ಫೆಬ್ರವರಿ ತಿಂಗಳಲ್ಲಿ ಪ್ರಸ್ತಾವ ಮಾಡಿದ್ದೇನೆ.

ಶ್ರೀ ಜೆ.ಎಚ್.ಪಟೇಲ್: ನಾನು ಹೇಳುತ್ತೇನೆ ಸ್ವಲ್ಪ ಕೇಳಿ. ಇದರಲ್ಲಿ ಕೆಲವು ಪ್ರೊಪೈಟಿ ಬರುತ್ತವೆ. ಈಗ ಆ ಸರ್ಕಾರದ ಕೆಲಸಗಳು ಏನೇನು ಆಗಿವೆ ಎಂದು ಅನ್ ಅಫಿಷಿಯಲ್ ಆಗಿ ಕಳುಹಿಸಬಹುದು ತಿಳಿದುಕೊಳ್ಳಬಹುದು ಆ ಮಾತು ಬೇರೆ. ಅದರ ಬಗ್ಗೆ ಇಷ್ಟು ಚರ್ಚೆ ಮಾಡುವುದು ಬೇಕಿಲ್ಲ. ನಾವು ಮಾಹಿತಿಯನ್ನು ತರಿಸೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಬಹಳ ತಾಪತ್ರಾಯವಾಗುತ್ತದೆ ಕುಡಿಯುವ ನೀರಿಗೆ. ಆ ಪ್ರಾಜೆಕ್ಟ್ ಆಗುವುದು ಬಿಡುವುದು ಒಂದು ಕಡೆ ಉಳಿಯಿತು. ಎಲ್ಲಾ ಕಡೆ ದೇಶ ತಿರುಗಾಡುತ್ತಾರೆ ಅಲ್ಲಿ ತಿರುಗಾಡುವುದಕ್ಕೆ ಆಗುವುದಿಲ್ಲವೇ?

(8) ಗಮನ ಸೆಳೆಯುವ ಸೂಚನೆ

ವಿಷಯ: ಬೀದರ್ ತಾಲ್ಲೂಕಿನಲ್ಲಿ ಸರ್ಕಾರಿ ಜಮೀನನ್ನು ಪ್ರಭಾವಿ ವ್ಯಕ್ತಿಗಳು ಮಾರಾಟ ಮಾಡುತ್ತಿರುವ ಬಗ್ಗೆ.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ (ಬೀದರ್): ಮಾನ್ಯ ಅಧ್ಯಕ್ಷರೇ, ಬೀದರ್

ತಾಲ್ಲೂಕಿನಲ್ಲಿ ಸರ್ಕಾರಿ ಜಮೀನನ್ನು ಪ್ರಭಾವಿ ವ್ಯಕ್ತಿಗಳು ಮಾರಾಟ ಮಾಡುತ್ತಿರುವ ಬಗ್ಗೆ ಸನ್ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಕಂದಾಯ ಸಚಿವರ ಪರವಾಗಿ ನಾನು ಈ ಕೆಳಕಂಡ ಹೇಳಿಕೆಯನ್ನು ಮಾಡುತ್ತಿದ್ದೇನೆ.

The brief facts as reported by the Deputy Comissioner Bidar are as follows:

(1) The issue emanated with the application filed on 20.3.1997 by one Sri Syed Shah Yadullah Hussaini S/o Shah Osman Hussaini r/o Noor Khan Talim Bidar stating that he is the owner and Inamdar of land in Sy.Nos. 56, 57, 61 & 85 of village Haladkeri Tq Bidar and that these lands belong to Dargah Syed Shah Ali Kutub seni Bidar. He states that the issue with ragard to tenancy was before the Land Tribunal Bidar and later it was projected by the Dost Appelate Authority (Land Reforms) and that now the matter is before the Hon'ble High court. He further alleged that while the issue was pending before the Hon'ble High Court, the rival claimants have executed sale deeds and purchases have been made in violation of the law.

(2) Based upon the complaints, the available records were checked. As per the records, it is seen that the Land Tribunal Bidar vide order No.DRI/134/74-75 dated 5.6.1975, had granted these lands to certain persons. Aggrieved by this, the Karnataka Wakf Board had filed a Writ Petition before the Hon'ble High Court in W.P.No.2376/76 wherein the Hon'ble High Court had remanded the case to the Land Tribunal to make the Wakf Board as necessary party and pass suitable orders as per law.

(3) Subsequently, the remanded case was heard and the order passed by the Land Tribunal on 29.2.1988, where in the following applicants were registered as tenants in respect of Sy.No.56,57,61 & 85/1, 85/2 of Village Haladkeri Taluk Bidar. The details are as under:

	Sy.No.	Area	Village
(1) Sri Prem Kumar	61	9.00	Haladkeri
	85/1	9.31	-do-
	85/2	7.09	-do-
		25.00	
(2) Sri Swaroop	85/1	4.00	Haladkeri
Kumar &	57	17.00	
Chandamma.		21.39	
(3) Smt. Sidamma &	61	14.00	Haladkeri
Vasanthamma	56	2.00	-do-
as Joint	57	7.00	-do-
occupants,			

(4) Against the orders of the Land Tribunal one Swaroop Kumar S/o Devidas & Smt. Chandamma W/o Ningu filed two separate Appeals before the District Appellate Authority (Land Reforms), which after considering the claims of the Wakf Board, and the claims of other tenants vide order No.DALT/DDR/5/88 and No.DALT/DDR/20/88 dated 31.1.1989, set aside the order of the Land Tribunal. The Appellate Authority

while Passing such orders observed that the Land Tribunal had failed to notice that there was no personal cultivatiion being done by any of the claimants and that the land was deemed to have been vested with the Government of Karnataka as on 1.3.1974. It was further observed that as the land has been vested with the Government of Karnataka, the competent authority under Section-77 of the KLR Act 1961 should deal with the distribution of surplus land in accordance with law.

(5) In the meanwhile, while this order was challenged before the Hon'ble High Court by Chandamma (LRRP-1889/89) and was still pending adjudication sale transactions took place by those given the tenancy rights by the quashed order of the Land Tribunal. Also a compromise, petition was filed in the civil court of the Principal Civil Judge, Bidar by another daughter of Sidamma and it is seen that the case was decided within four days. Further Swaroop Kumar and Prem Kumar have also filed separate CRPs.352/90 & 1521/89 respectively. The details of the transactions are as follows:

	Sy. No	Extent	Seller	Purchaser	Amount & Dect. No.	Mutation entry.
	1	2	3	4	5	6
1.	85/1/1-A Haladkeri	9.07 Areas	S.Shah Yad-ulla Hussaini	Abdul Sattur S/o Shaik Imam r/o Bidar	Rs.95,000 2560/ 95-96	18/ 16.9.95
2.	57/AA Haladkeri	7.00 Acres	Shantkumari W/o Suresh chander	Gurupadappa S/o Sanganbasappa R/o Chintaki Tq. Aurad	Rs.50,000 3399/95-96 Dt. 8.9.95	20/29-11-95 Sale Deed Rs. 2.10 Lakhs
3.	61 Haladkeri-K	3.07 Acres	Vasantha D/o Sharanappa	Padharinath Son of Vithaldas Malani, Bidar	Rs.1,27,000 2037/95-96 Dt. 17.7.95	17/16.9.95

4.	56 Haladkeri	2.00 Acres	Vasantha Sharanappa Siddamma	Ahmed Moinuddin S/o Gulam Dastgir, Bidar	Rs.30,000 5231/92-93 Dt. 15.3.93	Tahsildar Order No: 7/94-95, Dtd: 20.1.96
5.	61 Haladkeri	2.20 Acres	-do-	Pandharinath Malani	Rs.60,000 5572/93-94 Dt. 31.3.94	10/ 12.7.94
6.	61/AA Haladikeri	5.00 Acres	Lalathi W/o Premkumar	Manayya S/o. Sangayya Katkam	No:455/96-97 Dt. 13.5.96	17/ 4.7.96

(6) The Hon'ble High Court passed orders on 13.8.1996 dismissing the appeal. But the Court re-called its order on 30.10.1996 and the case is pending adjudication. Further developments are not known as it is seen that the State is not represented despite the fact that the entire land belongs to Government. Neither the State has been made a party in the W.P before the court.

"The matter is pending before the Assistant Commissioner, Bidar who has given notices to the concerned parties to appear before him on 16.9.1997." Suitable action wil be taken as per rules. ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಿಸಿದಂತೆ ಸಂಪೂರ್ಣ ದಾಖಲೆಗಳನ್ನು ನಾನು ನೋಡಿದ್ದು, ಈ ಜಮೀನುಗಳು ಯಾವುದಿತ್ತು, ಮೊದಲು ಇದರ ಟೆನೆನ್ಸಿ ರೈಟನ್ನು ಕೇಳಿದರು. ಈ ರೀತಿ ಕೇಳಿರುವ ಸಂದರ್ಭದಲ್ಲಿ ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ಸದರಿ ಜಮೀನುಗಳನ್ನು ಕೆಲವು ಟೆನೆಂಟ್ಸ್‌ಗೆ ಕನ್‌ಫರ್ಮ್ ಮಾಡಿದ ಬಳಿಕ ಎರಡೂ ಪಾರ್ಟಿಯವರು ಡಿಸ್ಟ್ರಿಕ್ಟ್ ಅಪಲೇಟ್ ಅಥಾರಿಟಿ ಮುಂದೆ ಟೆನೆಂಟ್ಸ್‌ಗೆ ಕನ್‌ಫರ್ಮ್ ಮಾಡಿರುವುದು ತಪ್ಪು ಎಂದು ವಾದಿಸಿದರು. ಡಿಸ್ಟ್ರಿಕ್ಟ್ ಅಪಲೇಟ್ ಅಥಾರಿಟಿಯವರು ಟೆನೆಂಟ್ಸ್‌ಗೆ ಕನ್‌ಫರ್ಮ್ ಮಾಡಿರುವುದು ತಪ್ಪು. There was no personal cultivation, this land is entirely vested with the Government. ಆದುದರಿಂದ, ಆ್ಯಕ್ಟ್‌ನ ಸೆಕ್ಷನ್ 77ರಡಿ ಕ್ರಮ ತೆಗೆದುಕೊಳ್ಳಬೇಕೆಂದು ಆರ್ಡರ್ ಮಾಡಿದರು. Against that order, an appeal has been preferrd to the High Court. This is the litigation between tenants in whose favour the tenancy has been confirmed and the Land Tribunal. Subsequenlty the High Court dismissed the Appeal. After the dismissal, within a period of 10 days the High Court recalled the order. Now, the matter is pending before the High Court for adjudication. As far as the status is concerned, according to the order of the District Appellate Authority, it is the land belonging to the Government and the land is vested with the Government now. The High Court has not disposed of the application yet. ಅದರ ಮಧ್ಯದಲ್ಲಿ ಏನಾಯಿತೆಂದರೆ, ಲ್ಯಾಂಡ್ ಟ್ರಿಬ್ಯೂನಲ್‌ನವರು ಈ

ಟೆನೆಂಟ್ಸ್‌ಗೆ ಯಾರ ಪರವಾಗಿ ಸದರಿ ಜಮೀನನ್ನು ಕೊಟ್ಟಿದ್ದರು, ಅವರು ಅದನ್ನು ಸುಮಾರು 5-6 ಜನರಿಗೆ ಮಾರಾಟ ಮಾಡಿದರು; ಇದರ ಬಗ್ಗೆ ಅಸಿಸ್ಟೆಂಟ್ ಕಮೀಷನರ್ ಅವರಿಗೆ ಗೊತ್ತಾದ ಕೂಡಲೇ ಪ್ರೊಸೀಡಿಂಗ್ಸ್ ಅನ್ನು ಇನಿಷಿಯೇಟ್ ಮಾಡಿದ್ದಾರೆ. ಏಕೆ ಮಾಡಿದ್ದಾರೆಂದರೆ, there are two things in this. In the first place, according to the order of the District Appellate authority, ಈ ಜಮೀನು ಸರ್ಕಾರಕ್ಕೆ ಸೇರಿದ್ದು, ಸರ್ಕಾರಕ್ಕೆ ಸೇರಿದ ನಂತರ ಹೈಕೋರ್ಟಿನಲ್ಲಿ ಟೆನೆನ್ಸಿ ಯಾರ ಪರವಾಯಿತೋ ಅವರು ಇದನ್ನು ಈಗ ಎಜಿಟೇಟ್ ಮಾಡುತ್ತಿದ್ದಾರೆ. ಹೈಕೋರ್ಟಿನಲ್ಲಿ ಇದು ಪೆಂಡಿಂಗ್ ಇದ್ದು ಇನ್ನೂ ತೀರ್ಮಾನವಾಗಿಲ್ಲ. ಇನ್ನೊಂದು ದೃಷ್ಟಿಯೇನೆಂದರೆ, ಹೈಕೋರ್ಟಿನಲ್ಲಿ ಪೆಂಡಿಂಗ್ ಇದ್ದಂಥ ಸಂದರ್ಭದಲ್ಲಿ ಆ ಟೆನೆನ್ಸಿಯನ್ನು ಯಾವ ಟೆನೆಂಟ್ಸ್ ಕನ್‌ಫರ್ಮ್ ಮಾಡಿಸಿಕೊಂಡರೋ ಅವರು ಈ ಜಮೀನುಗಳನ್ನು ಪರಭಾರೆ ಮಾಡಿದರು, ನಂತರ ಜಮೀನುಗಳನ್ನು ಆರು ಜನರು ಖರೀದಿಸಿದ್ದಾರೆ, ಇದರ ಸೇಲ್ ಡೀಡ್ ರಿಜಿಸ್ಟರ್ ಆಗಿದೆ. ಇದು ಅಸಿಸ್ಟೆಂಟ್ ಕಮೀಷನರ್ ಅವರಿಗೆ ಗೊತ್ತಾದ ನಂತರ, ಇದರ ಟೆನೆನ್ಸಿ ಕನ್‌ಫರ್ಮ್ ಆದ ಹದಿನೈದು ವರ್ಷಗಳವರೆಗೆ ಅದನ್ನು ಮಾರಾಟ ಮಾಡುವುದಕ್ಕೆ ಅಧಿಕಾರವಿಲ್ಲ, ಆದುದರಿಂದ, ಈ ಜಮೀನುಗಳನ್ನು ಮಾರಾಟ ಮಾಡಿರುವುದನ್ನು ಏಕೆ ರದ್ದುಗೊಳಿಸಬಾರದು ಎಂಬುದಕ್ಕೆ ಒಂದು ನೋಟೀಸ್ ಕೊಟ್ಟಿದ್ದು, ಸದರಿ ಕೇಸ್ ಈಗ ಅಸಿಸ್ಟೆಂಟ್ ಕಮೀಷನರ್ ಅವರ ಮುಂದೆ ಪೆಂಡಿಂಗ್ ಇದೆ. ಇದರಲ್ಲಿ there are two issues. ' One is, as at the moment the land is vested with the Government. ಇದು ಸರ್ಕಾರಿ ಜಮೀನು, ಹೈಕೋರ್ಟಿನಲ್ಲಿ ಲಿಟಿಗೇಷನ್ ಪೆಂಡಿಂಗ್ ಇರುವುದರಿಂದ, ಇದರ ಬಗ್ಗೆ ಹೈಕೋರ್ಟಿನವರೇ, ತೀರ್ಮಾನ ಮಾಡಬೇಕು. ಎರಡನೆಯದಾಗಿ, ಸದರಿ ಕೇಸ್ ಅಸಿಸ್ಟೆಂಟ್ ಕಮೀಷನರ್ ಅವರ ಮುಂದೆ ಈಗ ಪೆಂಡಿಂಗ್ ಇದ್ದು, ಅವರೇ ನೋಟೀಸನ್ನು ಇಷ್ಯೂ ಮಾಡಿದ್ದಾರೆ. ಈ ಜಮೀನು ಯಾವುದಿದೆ, ಇದನ್ನು ಕಾನೂನುಬಾಹಿರವಾಗಿ ಮಾರಾಟ ಮಾಡಿರುವುದರಿಂದ ಏಕೆ ರದ್ದುಗೊಳಿಸಬಾರದೆಂದು ತಿಳಿಸಿ ಕ್ರಮ ಕೈಗೊಂಡಿದ್ದಾರೆ. ಮೂರನೆಯದಾಗಿ, ನಾನು ಈ ಕಡತವನ್ನು ನೋಡಿದ ನಂತರ ಈಗ ಹೈಕೋರ್ಟಿನಲ್ಲಿ ಯಾವ ಲಿಟಿಗೇಷನ್ ಇದೆ, ಇದು ಸರ್ಕಾರಿ ಜಮೀನಾಗಿರುವುದರಿಂದ, ಇದರಲ್ಲಿ ಟೆನೆಂಟ್ಸ್ ಮತ್ತು ಲ್ಯಾಂಡ್ ಟ್ರಿಬ್ಯೂನಲ್ ಮಾತ್ರ ಪಾರ್ಟಿಯಾಗಿದ್ದಾರೆ. ಆದುದರಿಂದ, ಇದಕ್ಕೆ ಸಂಬಂಧಿಸಿದಂತೆ ಸರ್ಕಾರದ ವತಿಯಿಂದ ಇಂಪ್ಲೀಡ್ ಅಪ್ಲಿಕೇಷನ್ ಹಾಕಬೇಕಾಗುತ್ತದೆ. The Action is being taken to file a petition before the High Court to implead the Government as a party with a view to protect the interests of the State Government. ಇದಿಷ್ಟು ನಡೆದಿರುವ ಸಂಗತಿ. ಈಗ ಬಹುಶಃ ಮಾನ್ಯ ಸದಸ್ಯರಾದ ಸೈಯದ್ ಜುಲ್ಫಿಕರ್ ಹಷ್ಮಿ ಯವರಿಗೆ ಮತ್ತು ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರಿಗೂ ಸಮಾಧಾನವಾಗಿರಬೇಕೆಂದು ಕಾಣುತ್ತದೆ.

ಶ್ರೀ ಸಿ.ಆರ್.ಸಗೀರ್ ಅಹಮದ್: ಕಣ್ಣೀರು ಒರೆಸಿದಂತಾಯಿದಷ್ಟೆ.

ಶ್ರೀ ಎಂ.ಸಿ.ನಾಣಯ್ಯ: ನಾವು ಕಣ್ಣೀರು ಒರೆಸುವುದಿಲ್ಲ, ನಮ್ಮವರಿಗೆ ಕಣ್ಣೀರು ಬರದಂತೆ ಮಾಡಬೇಕೆಂಬುದೇ ನಮ್ಮ ಉದ್ದೇಶ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ: ಮಾನ್ಯ ಅಧ್ಯಕ್ಷರೇ, ಅಸಿಸ್ಟೆಂಟ್ ಕಮೀಷನರ್ ಅವರ ಕಛೇರಿಯಲ್ಲಿ ಈ ಕೇಸ್ ನಡೆಯುತ್ತಿದ್ದು, ಸರ್ಕಾರಕ್ಕೆ ಸೇರಿರುವ ಭೂಮಿಯನ್ನು ಕಾನೂನು ಬಾಹಿರವಾಗಿ ವ್ಯವಹರಿಸಿರುವ ಕಾರಣಕ್ಕೆ ಅಸಿಸ್ಟೆಂಟ್ ಕಮೀಷನರ್ ಅವರು ನೋಟೀಸ್ ಕೊಟ್ಟಿದ್ದಾರೆ. ಈಗ ಅಸಿಸ್ಟೆಂಟ್ ಕಮೀಷನರ್ ಅವರು ಈ ಕೇಸ್ ನಡೆಸುತ್ತಾರೆಂದರೆ ನಮಗೆ ಅವರ ಮೇಲೆ ವಿಶ್ವಾಸ ಇಲ್ಲ. ಏಕೆಂದರೆ, ನಾನು ಎಷ್ಟೋ ಅಸಿಸ್ಟೆಂಟ್ ಕಮೀಷನರ್‌ಗಳನ್ನು ನೋಡಿದ್ದೇನೆ. ಬೀದರ್‌ನಲ್ಲಿದ್ದ ಒಬ್ಬ ಅಸಿಸ್ಟೆಂಟ ಕಮೀಷನರ್ ಈಗ ರಿಟೈರ್ಡ್ ಆಗಿದ್ದಾರೆ, ಅವರು ಲ್ಯಾಂಡ್ ಟ್ರಿಬ್ಯೂನಲ್‌ಗೆ ಸಂಬಂಧಿಸಿದಂತೆ ಒಂಭತ್ತು ಫೈಲುಗಳನ್ನು ಮನೆಯಲ್ಲಿಟ್ಟುಕೊಂಡಿದ್ದಾರೆ. ಯಾವ ಅಸಿಸ್ಟೆಂಟ್ ಕಮೀಷನರ್ ನ್ಯಾಯವಾದ ರೀತಿಯಲ್ಲಿ ನೋಟೀಸ್ ಕೊಡುತ್ತಾರೋ ಅವರನ್ನು ತಾವು ಟ್ರಾನ್ಸ್‌ಫರ್ ಮಾಡುತ್ತೀರಿ. ಆ ಜಮೀನು ಸರ್ಕಾರದ್ದು ಎಂದು ತಾವು ಹೇಳುತ್ತಿರುವುದರಿಂದ ಈಗ ಯಾರು ಆ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದಾರೆ? ಯಾರ ಅಧೀನದಲ್ಲಿ ಜಮೀನು ಇದೆಯೆಂದು ತಾವು ಹೇಳುತ್ತಿಲ್ಲ ಅದು ಹಾಗೆಯೇ ಓಪನ್ ಇದೆಯೆಂದು ಹೇಳುತ್ತಿದ್ದೀರಿ.

8.00 ಪಿ.ಎಂ

ಸರಕಾರಿ ವೇಸ್ಟ್‌ಲ್ಯಾಂಡ್‌ನಲ್ಲಿ ಕಲ್ಟಿವೇಷನ್ ಮಾಡುತ್ತಾ ಇದ್ದಾರೆ. ಇದು ಸರಕಾರದ ಪ್ರಾಪರ್ಟಿ. ಇದನ್ನು ಇವರಿಗೆ ಯಾರು ಮಾರಿದ್ದಾರೆ ಎಂಬ ವಿಚಾರವನ್ನು ಯಾರ ಕೈಯಲ್ಲಿಯೂ ಇತ್ಯರ್ಥ ಮಾಡಲು ಆಗುತ್ತಾ ಇಲ್ಲ. ನಿಮ್ಮ ಸರಕಾರ, ನಿಮ್ಮ ಕ್ಯಾಬಿನೆಟ್, ನಿಮ್ಮ ಮಿನಿಸ್ಟರ್ ಈ ಕೇಸ್‌ನಲ್ಲಿ ಇನ್‌ವಾಲ್ವ್ ಇದ್ದಾರೆ. ಅವರಿಗೆ ಎಲ್ಲವೂ ಗೊತ್ತಿದೆ. ಇದು ಸರಕಾರದ ವೇಸ್ಟ್‌ಲ್ಯಾಂಡ್, ಸರ್‌ಪ್ಲಸ್‌ಲ್ಯಾಂಡ್, ಎಂದು ಎಲ್ಲಾ ಗೊತ್ತಿದ್ದೂ ಕೂಡ, ಅವರು ಪರ್ಚೇಸ್ ಮಾಡಿ, ಗೂಂಡಾಗಿರಿ ಮಾಡಿ, ಆ ಜಾಗಕ್ಕೆ ಫೆನ್ಸಿಂಗ್ ಹಾಕಿದ್ದಾರೆ. ಇದು ಬೇರೆ ಯಾರ ಕೈಯಿಂದಲೂ ಆಗುತ್ತಾ ಇರಲಿಲ್ಲ. ಇದರಲ್ಲಿ ಯಾರ ಹೆಸರು ಇದೆ, ಅವರೆಲ್ಲಾ ಅವರ ಜನರೇ ಇದ್ದಾರೆ. ಯಾರು ಇವರಿಗೆ ರಿಜಸ್ಟರ್ ಮಾಡಿಕೊಟ್ಟಿದ್ದಾರೆ, ಅವರಿಗೆ ಓನರ್‌ಶಿಫ್ ಇಲ್ಲ. ಹಾಗಾದರೆ ಹೇಗೆ ರಿಜಿಸ್ಟರ್ ಆಯಿತು? ಆದ್ದರಿಂದ ಇದು ಎಲ್ಲಾ ಇಲ್ಲೀಗಲ್ ಆಗಿದೆ. ಇದರ ಕೇಸ್ ಹೈಕೋರ್ಟ್‌ನಲ್ಲಿಯೂ ನಡೆಯುತ್ತಾ ಇದೆ. ಇದು ಬಹಳ ಗಂಭೀರವಾದ ವಿಚಾರವಾಗಿದೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೂ ಕೂಡ ಇದರ ಬಗ್ಗೆ ಹೇಳಬಹುದು. ನಾನು ಈ ವಿಚಾರದ ಬಗ್ಗೆ ಒಂದು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೆ. ಇದು ಕೊಟ್ಟ ಮೇಲೆ ನನ್ನ ಮೇಲೆ ಏನೇನು ಆಗುತ್ತ ಇದೆ ಎಂದು ನನಗೆ

ಮಾತ್ರ ಗೊತ್ತು. ಫಸ್ಟ್ ಸೆಪ್ಟೆಂಬರ್‌ಗೆ ರಿಪೋರ್ಟ್ ಬಂದಿದೆ.

ಅಧ್ಯಕ್ಷರು: ನಿಮ್ಮ ಮೇಲೆ ಏನೇ ಬರಲಿ, ನೀವು ಕಾಳಜಿ ಮಾಡಬೇಡಿ ನಾವು ಇದ್ದೇವೆ. ವಾಟಾಳ್‌ನಾಗರಾಜ್‌ರವರೂ ಕೂಡ ನಿಮ್ಮ ಜೊತೆಗೆ ಇದ್ದಾರೆ. ನೀವು ಹೆದರ ಬೇಡಿ. .

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ: ನಮ್ಮ ಜೊತೆಗೆ ಜನರು ಇದ್ದಾರೆ ಮತ್ತು ನಿಮ್ಮ ಆಶೀರ್ವಾದವೂ ನಮಗೆ ಇದೆ. ನಾನು ಯಾರಿಗೂ ಹೆದರ ಬೇಕಾಗಿಲ್ಲ. ಸರಕಾರದಲ್ಲಿ ನನ್ನ ವಿನಂತಿ ಏನೆಂದರೆ, ಹೈಕೋರ್ಟ್‌ನಲ್ಲಿ ತಾವು ಸರಕಾರದ ವಕೀಲರನ್ನು ನೇಮಿಸಿದ್ದೀರಿ.

ಅಧ್ಯಕ್ಷರು: ಈಗ ಮಾನ್ಯ ಕಾನೂನು ಸಚಿವರು ಏನು ಹೇಳುತ್ತಾರೆಂದು ಕೇಳೋಣ. ನೀವು ಹೇಳಬೇಕಾದುದನ್ನೆಲ್ಲಾ ಹೇಳಿದ್ದೀರಲ್ಲಾ? ಸಮಸ್ಯೆಗೆ ಪರಿಹಾರವನ್ನು ಹುಡುಕಬೇಕೇ ಹೊರತು ಮಾತನಾಡುತ್ತಾ ಹೋಗಬಾರದು. ಈಗ ಮಾನ್ಯ ಕಾನೂನು ಸಚಿವರು ಮುಖ್ಯಮಂತ್ರಿಯವರ ಹತ್ತಿರ ಹೋಗಿ ಸಮಾಲೋಚನೆ ಮಾಡಿಕೊಂಡು ಬಂದರು. ಸರಕಾರದ ಪರವಾಗಿ ಅವರು ಏನೋ ಹೇಳುತ್ತಾರೆ ನೀವು ಅದನ್ನು ಕಾಯ ಬೇಕು.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ: ಮಾನ್ಯ ಅಧ್ಯಕ್ಷರೇ, ಒಟ್ಟಿನಲ್ಲಿ ಈ ಜಮೀನನ್ನು ಬಡವರಿಗೆ ಹಂಚ ಬೇಕು. ಲ್ಯಾಂಡ್‌ಲೆಸ್ ಜನರಿಗೆ ಈ ಭೂಮಿಯನ್ನು ಹಂಚಬೇಕೆಂದು ಡಿಸಿಷನ್ ಆಗಿದೆ. ಆ ಜಮೀನನ್ನು ಸರಕಾರದವರು ರಕ್ಷಣೆ ಮಾಡಬೇಕು ಮತ್ತು ಅದನ್ನು ಬಡವರಿಗೆ ಹಂಚಬೇಕು. ನಮ್ಮ ಸರಕಾರಿ ಅಧಿಕಾರಿಗಳಿಗೆ ಕ್ವಾರ್ಟರ್ಸ್ ಇಲ್ಲ, ನಮ್ಮ ಬಡಜನರಿಗೆ ಮನೆಗಳು ಇಲ್ಲ; ಸನ್ಮಾನ್ಯ ಮಿನಿಸ್ಟರ್‌ರವರು ಅದನ್ನು ಎನ್‌ಕ್ರೋಚ್ ಮಾಡುತ್ತಾ ಇದ್ದಾರೆ. ಆ ಎನ್‌ಕ್ರೋಚ್‌ಮೆಂಟ್‌ನ್ನು 24ಗಂಟೆಗಳಲ್ಲಿ ತೆಗೆದು ಹಾಕಬೇಕು. ಇಲ್ಲದಿದ್ದರೆ 18ನೇ ತಾರೀಖಿಗೆ ತಾವುಗಳು ಬರುತ್ತಾ ಇದ್ದೀರಿ. ಆಗ ಅಲ್ಲಿ ಪ್ರತಿಭಟನೆ ಪ್ರಾರಂಭವಾಗಬಹುದು. ಆದ್ದರಿಂದ ನಿಮ್ಮ ಸಲುವಾಗಿ ಈ ಮಾತನ್ನು ಹೇಳುತ್ತಾ ಇದ್ದೇನೆ. 18ನೇ ತಾರೀಖಿಗೆ ಮೊದಲು ಎಲ್ಲಾ ಎನ್‌ಕ್ರೋಚ್‌ಮೆಂಟ್ ಇದ್ದುದನ್ನು ಕಿತ್ತು ಹಾಕಬೇಕು. ಅದು ಸರಕಾರದ ಭೂಮಿ ಇರುವುದರಿಂದ ಸರಕಾರದವರೇ ಅದರ ರಕ್ಷಣೆ ಮಾಡಬೇಕು. ಅದರ ಸಲುವಾಗಿ ಸರಕಾರದಲ್ಲಿ ವಿನಂತಿ ಮಾಡಿಕೊಂಡು ಆ ಬಗ್ಗೆ ಆಶ್ವಾಸನೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದು ಫಾರೆಸ್ಟ್ ಮಿನಿಸ್ಟರ್‌ಗೆ ಸಂಬಂಧಪಟ್ಟದ್ದು. ಅವರು ಯಾಕೆ ಇಲ್ಲಿ ಬಂದಿಲ್ಲ?

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಹಷ್ಮಿಯವರು ಸ್ಥಳೀಯವಾಗಿರತಕ್ಕಂಥ ಕೆಲವು ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ನಗನೆ ಗೊತ್ತಿಲ್ಲ, ಒಟ್ಟಿನಲ್ಲಿ ಕೆಲವು ವಿಚಾರಗಳನ್ನು ಎತ್ತಿದ್ದಾರೆ. ಕಾನೂನು ಒಂದು ಇದೆ. ಅದನ್ನು ಬಿಟ್ಟು ಯಾರೂ ಏನೂ ಮಾಡುವುದಕ್ಕೆ ಆಗುವುದಿಲ್ಲ.

ಆ ಸಂದರ್ಭದಲ್ಲಿ ಈ ಜಮೀನು ಖರೀದಿ ಮಾಡತಕ್ಕಂಥ ಸಂದರ್ಭದಲ್ಲಿ ಬಹುಶಃ ಈ ತರಹದ ವಿಚಾರಗಳು ಯಾರ ಗಮನಕ್ಕೂ ಬಂದಿರುವುದಿಲ್ಲ. ಕಾರಣ ಅಂದರೆ, ಒಂದು ಕಡೆ ಲ್ಯಾಂಡ್‌ಟ್ರಿಬ್ಯುನಲ್‌ನವರು ಯಾರು ಅದರಲ್ಲಿ ಸಾಗುವಳಿ ಮಾಡುತ್ತಾ ಇದ್ದಾರೆ ಅವರಿಗೆ ಅದನ್ನು ಕೊಟ್ಟರು. ಕೊಟ್ಟಾದ ಮೇಲೆ ಅದು ಡಿಸ್ಟ್ರಿಕ್ಟ್ ಅಫಿಲೇಟ್ ಅಥಾರಿಟಿಗೆ ಬಂತು, ಬಂದಾದ ಮೇಲೆ ಮೊದಲು ಸಾಗುವಳಿದಾರರಿಗೆ ಕೊಟ್ಟಿರತಕ್ಕಂಥಾದ್ದನ್ನು ಅವರು ರದ್ದು ಮಾಡಿದರು. ಈಗ ಒಂದು ಪ್ರಕರಣ ಹೈಕೋರ್ಟ್‌ನಲ್ಲಿದೆ. ಹೈಕೋರ್ಟ್‌ನಲ್ಲಿ ಒಂದು ಪ್ರಕರಣ ಪೆಂಡಿಂಗ್ ಇರತಕ್ಕಂಥ ಸಂದರ್ಭದಲ್ಲಿ ರಾಜ್ಯ ಸರಕಾರದವರು ಕ್ರಮ ತೆಗೆದುಕೊಳ್ಳಬೇಕಾದರೆ ಸ್ವಲ್ಪಮಟ್ಟಿಗೆ ವಿಚಾರ ಮಾಡಬೇಕಾಗುತ್ತದೆ. ಇನ್ನೊಂದು ಪ್ರಕರಣ ಅಲ್ಲಿನ ಅಸಿಸ್ಟೆಂಟ್ ಕಮಿಷನರ್ ಮುಂದೆ ಇದೆ. ಅಸಿಸ್ಟೆಂಟ್ ಕಮಿಶನರ್ ಏನು ಮಾಡಿದ್ದಾರೆ ಅಂದರೆ ಕಾನೂನಿನ ಭಾಗದಲ್ಲಿ ಈ ಜಮೀನನ್ನು ಪರಭಾರೆ ಮಾಡಿರತಕ್ಕಂಥಾದ್ದು ತಪ್ಪು, ಟೆನೆಂಟ್‌ಗೆ ಕೊಟ್ಟ ಮೇಲೆ 15ವರ್ಷಗಳ ವರೆಗೆ ಪರಭಾರೆ ಮಾಡತಕ್ಕಂಥ ಅಧಿಕಾರ ಇಲ್ಲ, ಆದ್ದರಿಂದ ಈ ಜಮೀನನ್ನು ಏತಕ್ಕೋಸ್ಕರ ನಾವು ಮುಟ್ಟಗೋಲು ಹಾಕಿಕೊಂಡು ಸರಕಾರದ ವಶಕ್ಕೆ ತೆಗೆದುಕೊಳ್ಳಬಾರದು ಎಂದು ನೋಟೀಸ್ ಕೊಟ್ಟಿದ್ದಾರೆ. ಅದು ತಮಗೂ ಗೊತ್ತಿದೆ. ಅಸಿಸ್ಟಂಟ್ ಕಮಿಷನರ್ ಇರತಕ್ಕಂಥ ಈ ಕೆಲಸವನ್ನು ಮಾಡುವುದಿಲ್ಲ ಎಂದು ತಾವು ಆಪಾದನೆ ಮಾಡಿದ್ದೀರಿ. ಅಸಿಸ್ಟೆಂಟ್ ಕಮಿಷನರ್ ಕಾನೂನಿನ ಅಡಿಯಲ್ಲಿ ಕೆಲಸ ಮಾಡುತ್ತಾರೆ. ಒಂದು ವೇಳೆ ಎಲ್ಲಾದರೂ ಕಾನೂನು ತಪ್ಪಾಗಿ ಇರಬಹುದು, ಅದನ್ನು ನೋಡಬಹುದು. ಇದರಲ್ಲಿ ಪ್ರಕರಣಗಳು ಇವೆ. ಒಂದು ಹೈಕೋರ್ಟ್‌ನ ಮುಂದೆ ಇದ್ದರೆ, ಮತ್ತೊಂದು ಅಸಿಸ್ಟೆಂಟ್ ಕಮಿಷನರ್ ಮುಂದೆ ಇದೆ. ಎರಡೂ ಪ್ರಕರಣಗಳಲ್ಲಿ ನಾವು ಕಾನೂನಿನ ಅಡಿಯಲ್ಲಿ ಸೂಕ್ತ ಕ್ರಮವನ್ನು ಕೈಗೊಳ್ಳುತ್ತಾ ಇದ್ದೇವೆ. ತಾವುಗಳು ಕೆಲವು ಆಪಾದನೆಗಳನ್ನು ಮಾಡಿದ್ದೀರಿ. ದಯವಿಟ್ಟು ಆ ರೀತಿಯಲ್ಲಿ ಆಪಾದನೆ ಮಾಡಬೇಡಿ....

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ: ಯಾವ ಅಧಿಕಾರಿಗಳು ನ್ಯಾಯವಾಗಿ ಕೆಲಸ ಮಾಡುತ್ತಾರೆ ಅವರನ್ನು ಟ್ರಾನ್ಸ್‌ಫರ್ ಮಾಡಿಸುತ್ತೀರಿ. ಯಾರೂ ಅನ್ಯಾಯ ಮಾಡುತ್ತಾರೆ ಅವರನ್ನು ಅಲ್ಲಿಯೇ ಇಡುತ್ತೀರಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ತಾವು ಕಾನೂನಿನ ಸ್ಥಿತಿ ಹೇಳಿದ್ದೀರಿ. ಸರಿ ಆದರೆ ಇದರಲ್ಲಿ ಇರುವ ಎಲ್ಲಾ ಹೆಸರುಗಳನ್ನು ನೋಡಿದ್ದೀರಲ್ಲಾ? ಅಬ್ದುಲ್ ಸತ್ತಾರ್, ಗುರುಪಾದಪ್ಪ ಸಂಗಪ್ಪ, ಶರಣಪ್ಪ... ಮುಂತಾಗಿ ಎಲ್ಲವನ್ನೂ ನೋಡಿದ್ದೀರಲ್ಲಾ? ನೋಡಿದ ಮೇಲೆ ಈ 60 ಎಕರೆಗಳಲ್ಲಿ ಯಾರ್ಯಾರು ಎಷ್ಟೆಷ್ಟು ತೆಗೆದುಕೊಂಡಿದ್ದಾರೆ ಎಂಬುದು ಸ್ಪಷ್ಟವಾಗಿ ಇದೆ. ಇದನ್ನು ಓದಿದ ಮೇಲೆ ನಿಮಗೆ ಗೊತ್ತಾಗಿದೆ. ರೆಕಾರ್ಡ್ಸ್ ಪ್ರಕಾರ ಮತ್ತು ಇರತಕ್ಕಂಥ ಫೈಲ್‌ನಲ್ಲಿ. ಇಲ್ಲಿ ಎಲ್ಲಾ ಕಡೆಗಳಲ್ಲಿಯೂ ಕೂಡ Fictitious tenants create ಮಾಡಿಕೊಂಡು ಮಾಡತಕ್ಕಂಥಾದ್ದನ್ನು

ಮಾಡಿದ್ದಾರೆ-ಎಂಬುದು ಸ್ಪಷ್ಟವಾಯಿತು. ಅದಕ್ಕಾಗಿ ಟ್ರಿಬ್ಯೂನಲ್ ಕೂಡ ತಳ್ಳಿ ಹಾಕಿತ್ತು ಮತ್ತು ಹೈಕೋರ್ಟ್ ಕೂಡ ತಳ್ಳಿ ಹಾಕಿತ್ತು. ಅವರು ಸರಕಾರದ ಜಮೀನು ಎನ್ನುವುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ನೀವೂ ಕೂಡ ಒಪ್ಪಿಕೊಂಡಿದ್ದೀರಿ. ಪ್ಯಾರಾ-6ರಲ್ಲಿ, Page-3, "The Hon'ble High Court passed the orders on 13/8/1996 dismissing the appeal." ಯಾರು ಇದರಲ್ಲಿ ಸ್ವರೂಪ ಕುಮಾರ್ ಎನ್ನತಕ್ಕಂಥವರು ಇದ್ದರು, ಅವರ ಪರ ಆಗಿಲ್ಲ. ಅವನ ಅಪ್ಲಿಕೇಷನ್ ಡಿಸ್‌ಮಿಸ್ ಆಯಿತು. ಅವನು fictitious tenency create ಮಾಡಿಕೊಂಡು ಅವನೇ ಎಲ್ಲರಿಗೂ ಮಾಡಿದವನು. ಅದು ಇರಲಿ, ಈಗ ಏನೇ ಆಗಲಿ ಅದು ಸರಕಾರಕ್ಕೆ ಬಂದಿದೆ. ಈಗಾಗಲೇ ಅಸಿಸ್ಟೆಂಟ್ ಕಮಿಷನರ್ ಒಂದು ತಿಂಗಳಿಂದ ಈ ಪ್ರಯತ್ನವನ್ನು ಮಾಡಿದ್ದರಿಂದ 16-9-97ಕ್ಕೆ ಅವರು ಕರೆಸಿದ್ದು. ಒಂದು ತಿಂಗಳಿಂದ ಅವರ ಓಡಾಟ ನಡೆದಿದೆ. ಮಾನ್ಯ ಸ್ಪೀಕರ್ ಸಾಹೇಬರೂ ಕೂಡ ಇವೊತ್ತು ನಾಳೆ ಹಾಕೋಣ ಎಂದು ಹೇಳಿ, ಕೊನೆಗೆ ಅದು ಇವೊತ್ತು ಇಲ್ಲಿ ಬಂತು. ಈ ಮಧ್ಯದಲ್ಲಿ ಅವರು ಕರೆದಿದ್ದರು. ಇಲ್ಲವಾದಲ್ಲಿ ಇದರ ಬಗ್ಗೆ ಯಾರೂ ಗಮನ ಹರಿಸಿಲ್ಲ. ಇದು ಸುಮಾರು 7-8 ಕೋಟಿ ರೂ.ಗಳ ಆಸ್ತಿ. ನಗರಪ್ರದೇಶಕ್ಕೆ ಹತ್ತಿರ ಇದೆ. ಈಗಾಗಲೇ ಕೆಲವು ಜನರು ಅದನ್ನು ಕಬಳಿಸಿಕೊಂಡು ಮಾಡಿಸಿಕೊಂಡಿದ್ದಾರೆ. ಅದಕ್ಕಾಗಿ ಜಮೀನನ್ನು ಸಂಪೂರ್ಣವಾಗಿ ನಿಮ್ಮ ವಶದಲ್ಲಿ ತೆಗೆದುಕೊಳ್ಳಿ. ನೀವು ಅದನ್ನು ಕಾನೂನು ಪ್ರಕಾರ ಏನಾಗುತ್ತದೋ ನೋಡೋಣ ಅಂದರೆ, ಅವರು ಯಾವ ವಾತಾವರಣ ಕ್ರಿಯೇಟ್ ಮಾಡಿದ್ದಾರೆ ಅಂದರೆ ಒಬ್ಬರು ಅಪೀಲ್‌ಗೆ ಹೋಗುವುದು, ಇನ್ನೊಬ್ಬರು ಕೇಸ್ ಹಾಕುವುದು. ಅವರವರಲ್ಲೇ ಮಾಡಿಕೊಂಡು ಕನ್‌ಸೆಂಟ್ ಡಿಕ್ರಿಟೈಪ್ ತೆಗೆದುಕೊಂಡು ನಾಳೆ ಅದನ್ನು ಇಂಪ್ಲಿಮೆಂಟ್ ಮಾಡಲು ಪ್ರಯತ್ನ ಮಾಡಿದ್ದಾರೆ. ಕೋರ್ಟ್‌ನವರೂ ಕೂಡ ಅದನ್ನು ಡಿಸ್‌ಮಿಸ್ ಮಾಡಿದ್ದಾರೆ. ಟ್ರಿಬ್ಯೂನಲ್‌ನವರೂ ಡಿಸ್‌ಮಿಸ್ ಮಾಡಿದ್ದಾರೆ. ಈ ಮಧ್ಯದಲ್ಲಿ ಅದು ಹೌಸ್‌ನಲ್ಲಿ ಬಂತು ಎಂದು ಹೇಳಿ ಅಸಿಸ್ಟೆಂಟ್ ಕಮಿಷನರ್‌ರವರೂ ಕೂಡ ಅಲರ್ಟ್ ಆಗಿ ನೋಟೀಸ್ ಕೊಟ್ಟಿದ್ದಾರೆ. ಆದ್ದರಿಂದ ದಯಮಾಡಿ ಈ ಪ್ರಾಪರ್ಟಿಯನ್ನು ಉಳಿಸಿಕೊಳ್ಳಿ. ಸರಕಾರದವರು ಇದನ್ನು ಪೊಸಿಷನ್‌ನಲ್ಲಿ ತೆಗೆದುಕೊಂಡು ಅಲ್ಲಿ ಯಾರು ಯಾರು ಇಲ್ಲೀಗಲ್ ಆಗಿ ಕುಳಿತಿದ್ದಾರೋ ಅವರನ್ನು ಎವಿಕ್ಟ್ ಮಾಡಿ. ಇಷ್ಟೇ ನಾನು ಕೇಳಿಕೊಳ್ಳುವುದು.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಅಧ್ಯಕ್ಷರೇ, ಕಾನೂನಿನ ಅಡಿಯಲ್ಲಿ ಯಾವ ಯಾವ ಕ್ರಮಗಳನ್ನುತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. Let me tell you that in respect of eviction there are two aspects. Let us go according to law now. Why did the Assistant Commissioner issue notice? because he has violated the conditions of confirming the tenancy. Naturally he has to

pass some orders. Unless he passes orders, nothing can be done. Let us wait for passing of orders and subsequently we will take a decision and not otherwise.

SRI M.MALLIKARJUNA KHARGE: Tomorrow the Assistant Commissioner should not act under influence. ಅದಕ್ಕಾಗಿ ಅವರನ್ನು ವಿಜಿಲೆಂಟ್ ಆಗಿ ಇವಿಕ್ಟ್ ಮಾಡಿ ಎಂದು ಏಕೆ ಹೇಳಬಾರದು? ನಾಳೆ ಅವರ ಪರವಾಗಿ ಆದರೆ, ಎಲ್ಲಿ ಡಿಸ್ಪ್ಯೂಟ್ ಅರೈಸ್ ಆಗುತ್ತದೆ ಅಂಥ ಕಡೆ the Government takes the possession of the land. Like that, you take the possession. When there is a dispute between the two parties, the Government should enter there. The Assistant Commissioner should take the possession. You appoint the receiver.

SRI M.C.NANAIAH: Sir, with all respects, I disagree with the proposition of the Hon.Leader of the Opposition.

SRI M.MALLIKARJUNA KHARGE: It is the property worth Rs.10 crores.

SRI M.C.NAIAH: I know that. I am aware of it. Let us await the proceedings before the Assistant Commissioner and also before the High Court now.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇಲ್ಲ ಅಂದರೆ ಅದನ್ನು ಸೆಕ್ಷನ್ 145ರಲ್ಲಿ ಹಾಕಿ, ನಿಮ್ಮ ಇದರೊಳಗೆ ತೆಗೆದುಕೊಳ್ಳಿ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು): ಸೆಕ್ಷನ್ 145 ಬಗ್ಗೆ ಹೇಳುತ್ತೇನೆ, ಇವತ್ತು ಸೆಕ್ಷನ್ 145 ಯಾರಿಗೆ ಹಾಕಬೇಕು? ಸೆಕ್ಷನ್ 145 ಹಾಕುವುದಕ್ಕೆ ಬರುವುದಿಲ್ಲ ಸಾರ್, ಸೆಕ್ಷನ್ 145ರಲ್ಲಿ ಏನು ಬರುತ್ತದೆ ಎಂದರೆ, the person on the date of filing of the petition whoever is in possession whether it is lawful or unlawful, it is not the question. 'Whoever is in possession,' that is all Section 145. ಆದರೆ ನಾನು ಹೇಳುತ್ತೇನೆ, ಅಸಿಸ್ಟೆಂಟ್ ಕಮೀಷನರ್ ಅಲ್ಲಿ ಈ ಫೈಲ್ ಇರಬೇಕಾಗಿತ್ತು. Let the matter be disposed off. That is

the position.

(ಗೊಂದಲ)

ಅಧ್ಯಕ್ಷರು: 145 ಇಮ್ಮೀಡಿಯೇಟ್ ಆಗಿ, ಅಲ್ಲಿ ಏನಾದರೂ ಕ್ರಾಪ್, ಇನ್ನೊಂದು, ಮತ್ತೊಂದು ಪೆರಿಷಬಲ್ ಆದರೆ, ಲಾ ಅಂಡ್ ಆರ್ಡರ್ ಪ್ರಾಬ್ಲಂ ಬರುತ್ತದೆ ಎಂದು ಹೇಳಿ, ಪೋಲೀಸ್ ತಹಸೀಲ್ದಾರರು ಹೋಗಿ ಮಹಜರ್ ಮಾಡಿ, ರಿಸೀವರ್ ಮಾಡಿಕೊಳ್ಳಬೇಕು.

ಶ್ರೀ ಎಂ.ಸಿ.ನಾಣಯ್ಯ: 145ನೇ ಸೆಕ್ಷನ್‌ನಲ್ಲಿ ಏನು ಬರುತ್ತದೆ ಎಂದರೆ, ನಾರ್ಮಲಿ ಏನಾಗುತ್ತದೆ ಎಂದರೆ, ಪೊಸೆಷನ್ ಎಂದು ಹೇಳುತ್ತಿರುವಂಥ ಪ್ರಶ್ನೆ ಬಂದಾಗ, lawful, unlawful ಪ್ರಶ್ನೆ ಬರುವುದೇ ಇಲ್ಲ. Whoever is in possession of it, It is not the case under section 145. We will look into it.

SRI M.MALLIKARJUNA KHARGE: Somebody will grab it. So, you take precautions to safeguard it.

MR. SPEAKER: Alright, they will do it.

SRI M.C.NANAIAH: It is agreed, Sir.

MR. SPEAKER: We will trust him in all fairness. ರೆಡ್ಡಿಯವರೇ, ಕ್ಲೋಸ್ ಮಾಡಿ, ಆಯಿತಪ್ಪ, ಲೀಡರ್ ಮಾತನಾಡಿದ್ದಾರೆ, ಈಗಾಗಲೇ ಎಂಟೂಕಾಲು ಆಗಿದೆ, ಇನ್ನೊಂದು ಮ್ಯಾಟರ್ ಬಾಕಿ ಇದೆ, ಇವತ್ತು ಇಲ್ಲದೆ ಇದ್ದರೂ ಸಹ ನಾನು ತೆಗೆದುಕೊಂಡಿದ್ದೇನೆ, You must cooperate with me. Please be seated. ಮಂತ್ರಿಗಳು ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಾರಲ್ಲಾ

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ: ಇಂತಹ ಲ್ಯಾಂಡ್ ಗ್ರಾಬಿಂಗ್ ಮಾಡುವವರ ದಬ್ಬಾಳಿಕೆ ಹೆಚ್ಚಾಗಿದೆ ನಮ್ಮಲ್ಲಿ.

ಅಧ್ಯಕ್ಷರು: ನಿಮ್ಮ ಹೋರಾಟವನ್ನು ಮುಂದುವರೆಸಿ, ನಾವೆಲ್ಲಾ ನಿಮ್ಮ ಜೊತೆಯಲ್ಲಿ ಇದ್ದೇವೆ.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ: ಯಾರು ಮಾಡಿದ್ದಾರೆ ಅವರಿಗೆ ಶಿಕ್ಷೆ ಆಗಬೇಕು.

MR. SPEAKER: Sri Reddy, just finish it in five minutes time. Let us not take more time. Because today is the last day, all of us wil have to go. It is only to honour the commitment, I am pushing through the entire agenda. The Health Minister is ready to make the statement. ಕೇಳಿ ಪರವಾಗಿಲ್ಲ, ಇದೇನೂ ಬಹಳ ದೊಡ್ಡ ವಿಚಾರ ಅಲ್ಲ. ಮುಗಿಸಿ ಪರವಾಗಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಐದು ನಿಮಿಷ ಅಂದರೆ ಕಷ್ಟವಾಗುತ್ತದೆ.

ಅಧ್ಯಕ್ಷರು: ಆಗಲಿ, ಏಳು ನಿಮಿಷ ತೆಗೆದುಕೊಳ್ಳಿ.

(9) ವಿಷಯ: ಕೋಲಾರ ಜಿಲ್ಲಾ ಪಂಚಾಯತಿಯ ಆರೋಗ್ಯ ಇಲಾಖೆಯಲ್ಲಿ ಹಣ ದುರುಪಯೋಗ.

+ ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬ್ಯಾಗೇಪಲ್ಲಿ): ಸನ್ಮಾನ್ಯ ಅಧ್ಯಕ್ಷರೆ, ನಾನು ಒಂದು ವಾರದಿಂದ ಪ್ರಯತ್ನ ಮಾಡುತ್ತಿದ್ದೆ; ಈ ವಿಷಯವನ್ನು ಪ್ರಸ್ತಾಪ ಮಾಡಲು, ನಮ್ಮ ಕೋಲಾರ ಜಿಲ್ಲಾ ಪಂಚಾಯಿತಿಯಲ್ಲಿ, 1993-94, 94-95, 95-96, ಈ ಮೂರು ಆರ್ಥಿಕ ವರ್ಷದಲ್ಲಿ ಆರೋಗ್ಯ ಇಲಾಖೆಯಲ್ಲಿ ಸುಮಾರು ಎರಡು ಕೋಟಿ ರೂಪಾಯಿಗಳ ದುರುಪಯೋಗವಾಗಿದೆ. ಇದರ ಬಗ್ಗೆ ಕೋಲಾರ ಜಿಲ್ಲಾ ಪಂಚಾಯತ್ ಅವರು ಇದರ ಬಗ್ಗೆ ಒಂದು ತನಿಖೆ ನಡೆಸಬೇಕೆಂದು ಹೇಳಿ, ಅಲ್ಲಿನ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿ, ಅವರು ಸುಮಾರು, ಇನ್ನೂರು ಪುಟಗಳ ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಯಾವ ಯಾವ ವರ್ಷದಲ್ಲಿ ಯಾವ ಯಾವ ವಸ್ತುಗಳನ್ನು ಈ ಖರೀದಿ ಮಾಡತಕ್ಕಂತಹ ಸಂದರ್ಭದಲ್ಲಿ ಎಷ್ಟೆಷ್ಟು ದುರುಪಯೋಗವಾಗಿದೆ ಎನ್ನತಕ್ಕಂತಹ ದಾಖಲೆಗಳ ಮುಖಾಂತರ ಸ್ಪಷ್ಟವಾಗಿ ವರದಿಯಲ್ಲಿ ಹೇಳಿದ್ದಾರೆ. ಅದರ ಪ್ರಕಾರ 1993-94ರಲ್ಲಿ ಒಂದು ಐಟೆಂನಲ್ಲಿ ದುರುಪಯೋಗ ಆಗಿರುವಂತಹದ್ದು ತೊಂಬತ್ತೆಂಟು ಲಕ್ಷ, ಎಂಬತ್ತು ಸಾವಿರ, ನಲವತ್ತೆರಡು ರೂಪಾಯಿ ಒಂದು ಐಟೆಂನಲ್ಲಿ ದುರುಪಯೋಗವಾಗಿದೆ. ಇನ್ನೊಂದರಲ್ಲಿ, ಇಪ್ಪತ್ತು ಲಕ್ಷ, ನಲವತ್ತು ಸಾವಿರ, ನಾನೂರು ಹನ್ನೆರೆಡು ರೂಪಾಯಿ ದುರುಪಯೋಗವಾಗಿದೆ. 1994-95ರಲ್ಲಿ ಆರು ಲಕ್ಷ, ಐವತ್ತನಾಲ್ಕು ಸಾವಿರ, ನೂರ ಎಂಬತ್ತೊಂದು ರೂಪಾಯಿ ದುರುಪಯೋಗವಾಗಿದೆ. ಅದೇ ವರ್ಷದಲ್ಲಿ ಇನ್ನೊಂದು ಐಟೆಂನಲ್ಲಿ ಹದಿನೇಳು ಲಕ್ಷ, ಎಂಬತ್ತು ಸಾವಿರ, ಆರುನೂರ ಅರವತ್ತನಾಲ್ಕು ರೂಪಾಯಿ ದುರುಪಯೋಗವಾಗಿದೆ. 1995-96ರಲ್ಲಿ ಹತ್ತೊಂಬತ್ತು ಲಕ್ಷ, ಅರವತ್ತೊಂದು ಸಾವಿರ ಎಂಬತ್ತಮೂರು ರೂಪಾಯಿ ದುರುಪಯೋಗವಾಗಿದೆ. ಅದೇ ವರ್ಷ ಇನ್ನೊಂದು ಐಟೆಂನಲ್ಲಿ ಹದಿನಾಲ್ಕು ಲಕ್ಷ ಎಂಬತ್ತೊಂದು ಸಾವಿರ, ಆರುನೂರ ಇಪ್ಪತ್ತೈದು

ರೂಪಾಯಿಗಳು ದುರುಪಯೋಗವಾಗಿದೆ. ಈ ಮೂರು ವರ್ಷಗಳಲ್ಲಿ. ಸನ್ಮಾನ್ಯ ಅಧ್ಯಕ್ಷರೆ, ಯಾವ ಯಾವ ಸಂದರ್ಭದಲ್ಲಿ ದುರುಪಯೋಗವಾಗಿದೆ ಎಂದರೆ, ಅಲ್ಮೆರಾಗಳು, ಖರೀದಿ ಮಾಡುವಂತಹ ಸಂದರ್ಭದಲ್ಲಿ ಡಿ.ಸಿ. ಬಿಲ್ಸ್, ರಿಚಾರ್ಜ್‌ಬಲ್ ಬ್ಯಾಟರಿಗಳು, ಎಲೆಕ್ಟ್ರಿಕಲ್ ಸ್ಟೆಬಲೈಸರ್ಸ್, ಎರ್ಮಜೆನ್ಸಿ ಲೈಟ್, ಬ್ಯಾಂಡೇಜ್ ಕ್ಲಾತ್, ಮೆಡಿಕಲ್ ಐಟೆಂಸ್ ಹೇಳುತ್ತಿರುವುದು, ಔಷಧಿಗಳನ್ನು ಖರೀದಿ ಮಾಡುವಂತಹ ಸಂದರ್ಭದಲ್ಲಿ ಇಷ್ಟಿಷ್ಟು ದುರುಪಯೋಗವಾಗಿದೆ ಎಂದು ಹೇಳಿದ್ದಾರೆ. ಇದಕ್ಕಿಂತ ಮುಖ್ಯವಾದಂತಹ ಅಂಶ ಏನೆಂದರೆ, ಒಟ್ಟು ಎರಡು ಕೋಟಿ ರೂ. ದುರುಪಯೋಗವಾಗಿದೆ. ಇದಕ್ಕಿಂತ ಗಂಭೀರವಾದ ವಿಷಯವೇನೆಂದರೆ, ಕೆಲವು ಬಿಲ್‌ಗಳನ್ನು ಸ್ವತಃ ಅವರೇ ಸೃಷ್ಟಿ ಮಾಡಿದ್ದಾರೆ. ಕೆಲವು ದಾಖಲೆಗಳನ್ನು ಅವರೇ ಸೃಷ್ಟಿ ಮಾಡಿಕೊಂಡಿದ್ದಾರೆ. ಕೆಲವು ಬಿಲ್‌ಗಳನ್ನು ರದ್ದು ಮಾಡಿ, ಪುನಃ ಅದೇ ಬಿಲ್‌ಗಳಲ್ಲಿ ಹಣವನ್ನು ಉಪಯೋಗ ಮಾಡಿದ್ದಾರೆ. ಸರ್ಕಾರದ ಅನುಮತಿ ಇಲ್ಲದೇ ಇರತಕ್ಕಂಥದ್ದನ್ನು ಅನುಮತಿ ಕೊಟ್ಟಿದ್ದಾರೆ ಎಂದು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿದ್ದಾರೆ. ಆ ವರದಿಯ ಒಂದು ಪ್ಯಾರಾದಲ್ಲಿ ಈ ರೀತಿ ಹೇಳುತ್ತಾರೆ, ಮೇಲ್ಕಂಡ ರೀತಿಯ ಆದೇಶ ಇದ್ದರು, ಅಂದರೆ ಸರ್ಕಾರದಲ್ಲಿ ಈ ರೀತಿ ಆದೇಶ ಇದ್ದರೂ ಕೂಡ ಸರ್ಕಾರಿ ಸ್ವಾಮ್ಯದಲ್ಲಿರುವ ಸಂಸ್ಥೆಗಳಲ್ಲಿ ಎಲ್ಲ ವಸ್ತುಗಳು ಲಭ್ಯ ಇದ್ದರೂ ಕೂಡ ಜನತಾ ಬಜಾರ್ ಬೆಂಗಳೂರು, ಇವರಿಂದ ಖರೀದಿಸಿರುತ್ತಾರೆ, ಮತ್ತು ಔಷಧಿಗಳ ಬೆಲೆಯು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗಿಂತ ಜನತಾ ಬಜಾರಿನಲ್ಲಿ ಹೆಚ್ಚಾಗಿರುತ್ತದೆ. ಈ ಬಗ್ಗೆ ಹೆಚ್ಚಿನ ಬೆಲೆಯನ್ನು ನೀಡಿ ಖರೀದಿಸುವ ಔಷಧಿಗಳ ವೆಚ್ಚ ಎರಡು ಲಕ್ಷ ಅರವತ್ತೈದು ಸಾವಿರ ಎರಡು ನೂರ ಇಪತ್ತನಾಲ್ಕು ರೂಪಾಯಿ ಆಗಿರುತ್ತದೆ. ಅದೇ ರೀತಿಯಲ್ಲಿ ಈ ಸಂಬಂಧ ಆಸ್ಪತ್ರೆ ವೈಧ್ಯಾಧಿಕಾರಿಗಳಿಂದ ಬೇಡಿಕೆ ಪತ್ರಗಳನ್ನು ಸರಿಯಾಗಿ ಪಡೆದಿರುವುದಿಲ್ಲ. ಕೇವಲ ನಾಮಕಾವಸ್ಥೆಗೆ ಬೇಡಿಕೆ ಪತ್ರ ತೆಗೆದುಕೊಂಡಿದ್ದು ಆ ಖರೀದಿ ಮಾಡಿರುವುದಕ್ಕೂ ಬೇಡಿಕೆ ಪತ್ರಕ್ಕೂ ಅಜಗಜಾಂತರ ವ್ಯತ್ಯಾಸ ಇರುತ್ತದೆ. ಜನತಾ ಬಜಾರಿನ ಸ್ವಯಂ ತಯಾರಿಕಾ ಘಟಕಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯವರು ಜಿಲ್ಲಾ ಪಂಚಾಯತ್ ಆದೇಶವನ್ನು ಪಾಲಿಸದೆ, ಹೆಚ್ಚಿಗೆ ಎರಡು ಲಕ್ಷ ಅರವತ್ತೈದು ಸಾವಿರ ಇನ್ನೂರ ಇಪ್ಪತ್ತ ನಾಲ್ಕು ರೂಪಾಯಿ ಸರ್ಕಾರಿ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ಇದು ಸ್ಪಷ್ಟವಾಗಿ ವರದಿಯಲ್ಲಿ ಹೇಳಿರತಕ್ಕಂತಹ ವಿಚಾರ. ಸನ್ಮಾನ್ಯ ಅಧ್ಯಕ್ಷರೆ, ಅದೇ ರೀತಿಯಲ್ಲಿ ಬಿಲ್‌ಗಳನ್ನು ಸೃಷ್ಟಿ ಮಾಡಿದ್ದಾರೆ, ದಾಖಲೆಗಳನ್ನು ಸೃಷ್ಟಿ ಮಾಡಿದ್ದಾರೆ. ಅವರು ದಾಖಲೆಗಳನ್ನು ಯಾವ ರೀತಿ ಸೃಷ್ಟಿ ಮಾಡಿದ್ದಾರೆ ಎಂದು ಹೇಳಿದರೆ, ಸರ್ಕಾರ ಅನುಮತಿ ಇಲ್ಲದೆ ಇದ್ದರೂ ಸಹ ಸರ್ಕಾರ ಅನುಮತಿ ನೀಡಿದೆ ಎಂದು ದಾಖಲೆಗಳನ್ನು ಸೃಷ್ಟಿ ಮಾಡಿದ್ದಾರೆ. ಅದೇ ರೀತಿಯಲ್ಲಿ ಬಿಲ್‌ಗಳನ್ನು ಡ್ರಾ ಮಾಡಿ ಮತ್ತೆ ಕ್ಯಾನ್ಸಲ್ ಮಾಡಿ, ಅದೇ ಬಿಲ್ಲನ್ನು ಪುನಃ ಅದರಲ್ಲೇ ಅಮೌಂಟ್ ಹಾಕಿದ್ದಾರೆ. ಈ ರೀತಿ ಮಾಡಿರುವಂತಹ ಎಲ್ಲಾ ದಾಖಲೆಗಳು ಇದೆ. ಈ ರೀತಿಯಲ್ಲಿ ನಾನು ಹೆಚ್ಚಿನ ವಿವರಗಳಿಗೆ ಹೋಗುವುದಿಲ್ಲ, ಬೇಕಾದರೆ ತಮಗೆ

ಎಲ್ಲಾ ದಾಖಲೆಗಳನ್ನು ಕಳುಹಿಸುತ್ತೇನೆ. ಸರ್ಕಾರ ಆ ದಾಖಲೆಗಳನ್ನು...

ಅಧ್ಯಕ್ಷರು: ಬೇಡ, ನಿಮ್ಮ ಹತ್ತಿರ ಇದ್ದರೆ, ನನ್ನ ಹತ್ತಿರ ಇದ್ದ ಹಾಗೆ ಅಲ್ಲವಾ? ಅದು ನಿಮ್ಮ ಹತ್ತಿರವೇ ಇರಲಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಆದರೆ ಮುಖ್ಯವಾದಂತಹ ಅಂಶ ಏನೆಂದರೆ, ಯಾವ ಆರೋಗ್ಯ ಜಿಲ್ಲಾ ಅಧಿಕಾರಿಯನ್ನು ಈ ವರದಿಯಲ್ಲಿ ಸಂಪೂರ್ಣವಾಗಿ ಹೊಣೆಗಾರರನ್ನಾಗಿ ಮಾಡಿದ್ದಾರೋ, ಆ ಆರೋಗ್ಯ ಜಿಲ್ಲಾ ಅಧಿಕಾರಿಯನ್ನು ಮೇಲುನೋಟಕ್ಕೆ ಸಸ್ಪೆಂಡ್ ಮಾಡಿ, ಪುನಃ ಸರ್ಕಾರ ಆತನಿಗೆ ಪ್ರಮೋಷನ್ ಕೊಟ್ಟು ಕಳುಹಿಸಲಾಗಿದೆ. ಇದು ಸೂಕ್ತವಾಗಿ ನಡೆದಿರುವಂತಹ ಒಂದು ವಿಷಯ. ಇದು ಕೇವಲ ಒಂದು ಇಲಾಖೆಯಲ್ಲಿ, ಜಿಲ್ಲಾ ಪಂಚಾಯಿತಿಯಲ್ಲಿ, ಸುಮಾರು ಎರಡು ಕೋಟಿ ರೂಪಾಯಿಯಷ್ಟು ಅವ್ಯವಹಾರ ಮಾಡಿರುವಂತಹ ಒಬ್ಬ ವ್ಯಕ್ತಿಯನ್ನು ಪ್ರಮೋಷನ್ ಕೊಟ್ಟು ಕಳುಹಿಸುವುದಾದರೆ, ನಾಳೆ ದಿವಸ ಈ ಸರ್ಕಾರದ ಅಧಿಕಾರಿಗಳು, ಅಥವಾ ಸರ್ಕಾರದ ಇಂಟಿಗ್ರಿಟಿ ಬಗ್ಗೆ ಯಾವ ರೀತಿಯಾದಂತಹ ಅಭಿಪ್ರಾಯ ಬರಬಹುದು? ಆದಕಾರಣ ಜಿಲ್ಲಾ ಪಂಚಾಯಿತಿ ತನಿಖಾ ವರದಿ ಇದೆ, ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿದ್ದಾರೆ, ರಸೀದಿಗಳನ್ನು ಸೃಷ್ಟಿ ಮಾಡಿದ್ದಾರೆ, ಸರ್ಕಾರದ ಆಜ್ಞೆಗಳನ್ನು ಮಾಡಿದ್ದಾರೆ, ಇದೆಲ್ಲವನ್ನು ಮಾಡಿರುವಂತಹ ಒಬ್ಬ ಜಿಲ್ಲಾ ಆರೋಗ್ಯ ಅಧಿಕಾರಿ, ಮಾಡಿರುವಂತಹ ಸಂದರ್ಭದಲ್ಲಿ ಇದು ಯಾವುದನ್ನು ಪರಿಗಣನೆಗೆ ತೆಗೆದುಕೊಳ್ಳದೆ, ಆತನಿಗೆ ಪ್ರಮೋಷನ್ ಕೊಟ್ಟು ಕಳುಹಿಸುವುದು ಅಂದರೆ, ಸರ್ಕಾರದ ಬಗ್ಗೆ ಸಾರ್ವಜನಿಕರಲ್ಲಿ ಯಾವ ರೀತಿಯಾದಂತಹ ಅಭಿಪ್ರಾಯ ಬರುತ್ತದೆ, ಅದನ್ನು....

ಶ್ರೀ ಜೆ.ಹೆಚ್.ಪಟೇಲ್: ಯಾವ ಸಮಯದಲ್ಲಿ ಈ ಘಟನೆಗಳು ನಡೆದವೋ ಅದಕ್ಕಾಗಲೇ ಜನ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಎಲ್ಲಿ ಉತ್ತರ ಕೊಟ್ಟಿದ್ದಾರೆ? ನೀವು ಆ ರೀತಿ ಉತ್ತರ ಕೊಟ್ಟಿದ್ದಾರೆ ಎಂದು ಹೇಳಿದರೆ....

ಅಧ್ಯಕ್ಷರು: ಸನ್ಮಾನ್ಯ ಶ್ರೀ ರೆಡ್ಡಿಯವರೆ, ನೀವು Communists humourous ಆಗಿರುವುದಿಲ್ಲ ಅದೇ ಬರುವುದು ಸಮಸ್ಯೆ. ಅವರು ಏನು ಹೇಳಿದ್ದು ಅಂದರೆ 1992-93ರಲ್ಲಿ ಇದು ನಡೆದಿರುವುದು, ಆದ್ದರಿಂದ ಜನ ಅದಕ್ಕೆ ಆಗಲೇ ಉತ್ತರ ಕೊಟ್ಟಿದ್ದಾರೆ ಎಂದು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಸನ್ಮಾನ್ಯ ಅಧ್ಯಕ್ಷರೆ, ಇದು ನಡೆದಿರುವುದು 1992-93ರಲ್ಲಿ ಮಾತ್ರ ಅಲ್ಲ, 1994-95, 95-96, ಈ ಮೂರು ವರ್ಷಗಳಲ್ಲಿ ನಡೆದಿರತಕ್ಕಂತದ್ದು. ಇದು ಕೇವಲ ಒಂದು ವರ್ಷದಲ್ಲಿ ನಡೆದಿರುವಂತಹದ್ದಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರ ಕಿವಿಗೆ ಬೀಳುವುದು ಏನೆಂದರೆ 1989-90, 91-92, 1994ರ ತನ್ಕದ್ದು ಬೀಳುತ್ತದೆ, ಮುಂದಿನದ್ದು ಬೀಳುವುದಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಸನ್ಮಾನ್ಯ ಅಧ್ಯಕ್ಷರೆ, ನಮಗೆ ಇದರಲ್ಲಿ ಯಾವುದೇ ರಾಜಕೀಯ ಉದ್ದೇಶ ಇಲ್ಲ, ಅಥವಾ ರಾಜಕೀಯ ಉದ್ದೇಶದಿಂದ ಹೇಳುತ್ತಿಲ್ಲ.

ಶ್ರೀ ಹೆಚ್.ಎನ್.ನಂಜೇಗೌಡ: ಉತ್ತರ ಕೊಟ್ಟಿದ್ದಾರೆ ಎಂದರೆ, ಓಟು ಕೊಟ್ಟರು ಎಂದು ಅರ್ಥನಾ? ಈ ಆಫೀಸರ್ ಚುನಾವಣೆಗೆ ನಿಂತಿದ್ದಾರಾ? ಓಟು ತೆಗೆದುಕೊಳ್ಳುವುದಕ್ಕೆ ಪ್ರಮೋಷನ್ ಕೊಟ್ಟಿದ್ದಾರಲ್ಲಾ, ಅವರು ಆಪಾದನೆ ಮಾಡುವುದೇನೆಂದರೆ, ಹಣ ದುರುಪಯೋಗ ಮಾಡಿಕೊಂಡಿರುವಂತಹ ಅಧಿಕಾರಿಯನ್ನು ಸಸ್ಪೆಂಡ್ ಮಾಡುವ ಹಾಗೆ ಮಾಡಿ, ಪುನಃ ಅವರಿಗೆ ಪ್ರಮೋಷನ್ ಕೊಟ್ಟಿದ್ದೀರಿ ಎಂದು ಅವರು ಹೇಳುತ್ತಿರುವುದು. ಜನ ನಿಮ್ಮ ಪಾರ್ಟಿಗೆ ಓಟು ಕೊಟ್ಟರೆ ಆ ಅಧಿಕಾರಿ ಒಳ್ಳೆಯವರು ಎಂದು ಅರ್ಥನಾ? ಆದುದರಿಂದ ಆ ಅಧಿಕಾರಿ ಮೇಲೆ ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತೀರಾ? ಈ ರೀತಿ ಆದರೆ ಜನರಿಗೆ ಸರ್ಕಾರದ ಮೇಲೆ ಗೌರವವಾದರೂ ಹೇಗೆ ಬರುತ್ತದೆ? ನಂಬಿಕೆ ಹೇಗೆ ಬರುತ್ತದೆ?

ಶ್ರೀ ಜೆ.ಹೆಚ್.ಪಟೇಲ್: ಸರ್ಕಾರ ಎಂದರೆ ಇದು it is a continuous institution. ಯಾರೇ ಮಾಡಿರಲಿ, ಅದಕ್ಕೆ ನಾನು ಹೇಳಿದ್ದು 1992-93, 93-94, ಅದಕ್ಕೆಲ್ಲಾ ಉತ್ತರ ಸಿಕ್ಕಿದೆ ಎಂದು ನಾನು ಹೇಳಿದ್ದುದು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: 1994-95, 1995-96ರಲ್ಲೂ ಸಹ ಈ ರೀತಿ ನಡೆದಿದೆ.

ಶ್ರೀ ಜೆ.ಹೆಚ್.ಪಟೇಲ್: ಯಾವ ಸರ್ಕಾರ ಮಾಡಿದ್ದರೂ ತಪ್ಪೇ, ಆ ಸರ್ಕಾರ ಮಾಡಿರುವುದು ತಪ್ಪು, ಈ ಸರ್ಕಾರ ಮಾಡಿರುವುದು ತಪ್ಪಲ್ಲ ಎಂದು ನಾನು ಹೇಳಲಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಸನ್ಮಾನ್ಯ ಅಧ್ಯಕ್ಷರೆ, ಆ ರೀತಿ ಮಾಡಿರುವಂತಹ ತಪ್ಪಿಗೆ ನೀವು ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತೀರಾ? ಅವರಿಗೆ ಪ್ರಮೋಷನ್ ಕೊಟ್ಟಿರುವುದು, 1993-94ರಲ್ಲಿ ಅಲ್ಲ, 1995-96ರಲ್ಲಿ ಕೊಟ್ಟಿರುವಂತಹದ್ದು. ಆಗ ಅವರಿಗೆ ಪ್ರಮೋಷನ್ ಕೊಡಲಿಲ್ಲ, ಹಾಗಾಗಿ ಇದರ ಬಗ್ಗೆ ಸರ್ಕಾರ ಇಷ್ಟು ವರ್ಷಗಳಿಂದ ನಡೆದಿರುವಂಥ ಅವ್ಯವಹಾರದ ಬಗ್ಗೆ ಯಾವ ರೀತಿ ಕ್ರಮ ತೆಗೆದುಕೊಂಡಿದೆ? ಈಗಾಗಲೇ ಜಿಲ್ಲಾ ಪಂಚಾಯಿತಿಗಳ ವ್ಯವಸ್ಥೆ ಬಗ್ಗೆ, ಮತ್ತು ಯಾವ ಯಾವ ರೀತಿ ಹಣ ದುರುಪಯೋಗವಾಗುತ್ತಿದೆ ಎಂದು ಹಲವಾರು ಚರ್ಚೆ ನಡೆದಿದೆ. ಈ ರೀತಿ ಇರುವಂತಹ ಸಂದರ್ಭದಲ್ಲಿ ಸರ್ಕಾರ ಇದರ ಬಗ್ಗೆ ಯಾವ ರೀತಿ ಕ್ರಮ ತೆಗೆದುಕೊಂಡಿದೆ, ಮತ್ತು ಅತನ ಮೇಲೆ ತಕ್ಷಣ ಕ್ರಮ ತೆಗೆದುಕೊಂಡು ಕ್ರಿಮಿನಲ್ ಕೇಸ್ ಹಾಕಿ ಆತನನ್ನು ಜೈಲಿಗೆ ಕಳಿಸಬೇಕಾಗಿತ್ತು. ಆದರೆ ಆ ರೀತಿ ಮಾಡದೆ, ಅವರಿಗೆ

ಪ್ರಮೋಷನ್ ಕೊಟ್ಟಿದ್ದಾರೆ. ಆದಕಾರಣ ಅವರ ಮೇಲೆ ಸರಿಯಾದಂತಹ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ, ನಾನು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ, ಮತ್ತು ಈ ವಿಷಯದ ಬಗ್ಗೆ ಸರ್ಕಾರವು ಹೇಳಿಕೆ ಕೊಡಬೇಕು.

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮಂತ್ರಿಗಳು): ಮಾನ್ಯ ಸಭಾಧ್ಯಕ್ಷರೇ, ಕೋಲಾರ ಜಿಲ್ಲಾಪರಿಷತ್ತಿನಲ್ಲಿ ಪರ್ಚೇಸ್‌ನಲ್ಲಿ ಅದಂಥ ಅವ್ಯವಹಾರಗಳ ಬಗ್ಗೆ ಅದನ್ನು ಸಮರ್ಥನೆ ಮಾಡದೆ ಮತ್ತು ನಿರಾಕರಣೆಯನ್ನೂ ಕೂಡ ಮಾಡದೆ 1993-94 ಮತ್ತು 95-96 ರ ತನಕ ಏನು ಅವ್ಯವಹಾರಗಳು ನಡೆದಿದೆ ಎಂದು ಹೇಳಿ ಮಾನ್ಯ ಸದಸ್ಯರು ಪ್ರಶ್ನೆಯನ್ನು ಎತ್ತಿದ್ದಾರೆ, ಈ ಒಂದು ವಿಚಾರ 95ನೇ ಇಸವಿ 2-1-1995 ರಂದು ಒಂದು ದಿನಪತ್ರಿಕೆಯಲ್ಲಿ ಪ್ರಕಟವಾಯಿತು. ದಿನಪತ್ರಿಕೆಯಲ್ಲಿ ಪ್ರಕಟವಾದ ದಿನವೇ ನಾನು ನಮ್ಮ ಅಧಿಕಾರಿಗಳ ಸಮಿತಿಯೊಂದನ್ನು ರಚನೆ ಮಾಡಿ ಅದನ್ನು ತನಿಖೆ ಮಾಡಬೇಕು ಎಂದು ಹೇಳಿ ವರದಿಯನ್ನು ಕೊಡಬೇಕು ಎಂದು ಹೇಳಿದ್ದೆ. ಆ ನಂತರ 97 ರಲ್ಲಿ ಜಿಲ್ಲಾ ಪಂಚಾಯಿತಿಯಿಂದ ಮಧ್ಯಂತರ ವರದಿಯನ್ನು ಕಳುಹಿಸಿಕೊಟ್ಟರು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅದು 1997 ಅಲ್ಲ. 1995-96.

ಡಾ॥ ಹೆಚ್.ಸಿ.ಮಹದೇಚವಪ್ಪ: 15-1-97ರ ವರದಿ ನಮಗೆ ಬಂದಿರುವುದು. 15-1-97 ರಲ್ಲಿ ಆ ಸಮಿತಿ ವರದಿ ಸ್ವೀಕೃತವಾಯಿತು. ಮತ್ತು 20-4-97ರಲ್ಲಿ ತಪಿತಸ್ಥಿರ ವಿರುದ್ಧ ದೋಷಾರೋಪಣ ಪಟ್ಟಿ ಮಾಡಿ ನಮಗೆ ಕಳುಹಿಸಿಕೊಡಿ, ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಏಪ್ರಿಲ್‌ನಲ್ಲಿ ಕೇಳಿದ್ದೆವು. ಇನ್ನೂ ಕೂಡ ಅವರು ದೋಷಾರೋಪಣ ಪಟ್ಟಿಯನ್ನು ಕೊಟ್ಟಿಲ್ಲ. ಇಲ್ಲಿ ಅಧಿಕಾರಿಗಳೆಲ್ಲಾ ಸಾಚಾ ಇದ್ದಾರೆ ಎಂದು ಹೇಳಲಿಕ್ಕೂ ಸಿದ್ಧನಿಲ್ಲ. ಮತ್ತು ಸಾರಾಸಗಟು ಇಡೀ ಒಂದು ಜಿಲ್ಲಾ ಪರಿಷತ್ತಿಗೆ ಆದಂಥ ಎರಡು ಕೋಟಿ ರೂಪಾಯಿ ವ್ಯವಹಾರಗಳನ್ನು ಹೊಡೆದುಹಾಕಿಬಿಟ್ಟಿದ್ದಾರೆ ಎಂದು ಹೇಳುವುದಕ್ಕೂ ಸಿದ್ಧನಿಲ್ಲ. ಏಕೆಂದರೆ ಜಿಲ್ಲಾ ಪರಿಷತ್ತು ಎಂದರೆ ಒಂದು ಜಿಲ್ಲಾ ಪರಿಷತ್ತಿನ ಆರೋಗ್ಯ ಸ್ಥಾಯಿ ಸಮಿತಿ ಇರುತ್ತದೆ. ಅಲ್ಲಿಂದ ಒಂದು ಪರ್ಚೇಸ್ ಕಮಿಟಿ ಇದೆ ಮತ್ತು ಅದಕ್ಕೆ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಬೇಕಾಗುತ್ತದೆ. ಫೈನಾನ್ಸಿಯಲ್ ಅಪ್ರೂವಲ್ ಬೇಕಾಗುತ್ತದೆ. ಇಷ್ಟೆಲ್ಲಾ ಪ್ರೋಸೀಜರ್ ಮಾಡುವಾಗ ಯಾವ ರೀತಿ ವಯಲೇಟ್ ಆಗಿದೆ ಏನು ಎಂದು ಕೂಲಂಕುಷವಾಗಿ ಇದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ತಪಿತಸ್ಥರು ಯಾರೇ ಇದ್ದರೂ ಕೂಡ ಉಗ್ರವಾದ ಶಿಕ್ಷೆಯನ್ನು ಮಾಡಲೇಬೇಕಾಗುತ್ತದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಈಗಾಗಲೇ ಈ ವಿಚಾರವನ್ನು ಲೋಕಾಯುಕ್ತಕ್ಕೆ ನಾವು ರೆಫರ್ ಮಾಡಿದ್ದೇವೆ. ನಿರ್ದಾಕ್ಷಿಣ್ಯವಾಗಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್.ಎನ್.ನಂಜೇಗೌಡ: ಲೋಕಾಯುಕ್ತಕ್ಕೆ ಕಳುಹಿಸಿದ್ದೇವೆ ಎನ್ನುತ್ತೀರಿ, ಇರಲಿ. ಆ ಅಧಿಕಾರಿಯನ್ನು ಸಸ್ಪೆಂಡ್ ಮಾಡಿದ್ದು ನಿಜವಾ? ಸಸ್ಪೆಂಡ್ ಮಾಡಿದಮೇಲೆ

ರಿವೋಕ್ ಮಾಡಿ ಪ್ರಮೋಷನ್ ಕೊಟ್ಟಿರುವುದು ನಿಜವಾ?

ಡಾ॥ ಹೆಚ್.ಸಿ.ಮಹದೇವಪ್ಪ: ಆ ಸಂದರ್ಭದಲ್ಲಿ ಇವ್ಯಾವೂ ಬಂದಿರಲಿಲ್ಲ. 2-1-95ರಲ್ಲಿ ಪತ್ರಿಕೆಯಲ್ಲಿ ಪ್ರಕಟವಾದ ಮೇಲೆ ನಾನು ಆ ಕಮಿಟಿ ಮಾಡಿ ಮಾಡಿದ್ದು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ವರದಿಬಂದಮೇಲೆ ಸಸ್ಪೆಂಡ್ ಮಾಡಿದ್ದೀರಿ. ವರದಿ ಬಂದಮೇಲೆಯೇ ಆತನ ಮೇಲೆ ಕ್ರಮ ತೆಗೆದುಕೊಂಡು ಸಸ್ಪೆಂಡ್ ಮಾಡಿದ್ದೀರಿ. ಸಸ್ಪೆಂಡ್ ಮಾಡಿದಮೇಲೆ ಮತ್ತೆ ತದನಂತರ ಆತನಿಗೆ ಪ್ರಮೋಷನ್ ಕೊಟ್ಟಿದ್ದೀರಿ. ಅದು ನಿಜವಾ, ಸುಳ್ಳಾ?

ಡಾ॥ ಹೆಚ್.ಸಿ.ಮಹದೇವಪ್ಪ: ನಾನು ಮಾಹಿತಿ ತರಿಸಿಕೊಂಡು ನೋಡುತ್ತೇನೆ. ನನಗೆ ಸರಿಯಾಗಿ ಜ್ಞಾಪಕ ಇಲ್ಲ.

ಅಧ್ಯಕ್ಷರು: ಆರೋಗ್ಯ ಇಲಾಖೆಯಲ್ಲಿ ಸಾವಿರಾರು ಕೇಸ್ ಇರುತ್ತವೆ. ಹೇಗೆ ಎಲ್ಲಾ ನೆನಪು ಇಟ್ಟುಕೊಳ್ಳುವುದು?

ಶ್ರೀ ಹೆಚ್.ಎನ್.ನಂಜೇಗೌಡ: ನಿಮ್ಮದು ಬಾರೀ ಅನ್‌ಚಾರಿಟಬಲ್ ಸ್ಟೇಟ್‌ಮೆಂಟ್ ಸಾವಿರಾರು ಇಂಥ ಕೇಸ್‌ಗಳೇ ಸಿಕ್ಕಿಬಿಟ್ಟರೆ ಸರ್ಕಾರ ಏತಕ್ಕೆ ಇರಬೇಕು?

Dr H.C.MAHADEVAPPA: Impartially I will take action. ಇದು ನನಗೆ ಜ್ಞಾಪಕ ಇಲ್ಲ. ಆ ರೀತಿಯಾಗಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಪತ್ರಿಕಾ ವರದಿ ಆಧರಿಸಿ ಮಾಡಿದ್ದೇನೆ. ಕಡತದಲ್ಲಿ ಏನು ಇದೆ ಎಂಬುದನ್ನೂ ನೋಡಬೇಕು.

ಅಧ್ಯಕ್ಷರು: ನನ್ನ ಆತುರ ಏನೆಂದರೆ ಈಗಾಗಲೇ 8-25 ಗಂಟೆಯಾಗಿದೆ; ಲಾ ಮಿನಿಸ್ಟರ್‌ರವರನ್ನು ಇಲ್ಲಿ ಕೂಡಿಸಿಕೊಂಡಿದ್ದೇನೆ. We will have to conclude our business and relieve him. Otherwise ನಮಗೆ ತೊಂದರೆಯಾಗುತ್ತದೆ.

SRI M.C.NANAIAH: Not only time is up for me. Time is also up for the Hon'ble Speaker, because he is expected to join me.

ಡಾ॥ ಹೆಚ್.ಸಿ.ಮಹದೇವಪ್ಪ: ನನಗೆ ಗೊತ್ತಿರುವ ಪ್ರಕಾರ ಪುನಃ ಪ್ರಮೋಷನ್ ಕೊಟ್ಟಿರುವುದು ನಡೆದಿಲ್ಲ.

8.30 ಪಿ.ಎಂ

ಶ್ರೀ ವಾಟಾಳ್ ನಾಗರಾಜ್: ಗುರುತರವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ.

ನನಗೆ ಗೊತ್ತೇ ಇಲ್ಲ ಎಂದು ಹೇಳುವುದು ಇದೆಯಲ್ಲಾ, ಅದು ಒಳ್ಳೆಯ ಸಂಪ್ರದಾಯವಾಗಬಾರದು. ನೇರವಾಗಿ ಒಬ್ಬರನ್ನು ಸಸ್ಪೆಂಡ್ ಮಾಡಿ ಮತ್ತೆ ಅವನಿಗೆ ಬಡ್ತಿ ಕೊಟ್ಟು ನನಗೆ ಗೊತ್ತೇ ಇಲ್ಲ ಎಂದು ಹೇಳಿದರೆ ಹೇಗೆ?

ಡಾ॥ ಹೆಚ್.ಸಿ.ಮಹದೇವಪ್ಪ: ನನಗೆ ಗೊತ್ತಿರುವ ಪ್ರಕಾರ ಆತನಿಗೆ ಬಡ್ತಿ ಕೊಟ್ಟಿಲ್ಲ.

ಅಧ್ಯಕ್ಷರು: ಅವರು ಏನು ಹೇಳುತ್ತಿದ್ದಾರೆ ಎಂದರೆ ನನಗೆ ನೆನಪಿದ್ದ ಹಾಗೆ ಆ ರೀತಿ ಮಾಡಿಲ್ಲ. ಆದರೂ ಇನ್ನೊಂದು ಸಲ ವೆರಿಫೈ ಮಾಡುತ್ತೇನೆ ಎನ್ನುವ ಮಾತನ್ನು ಹೇಳಿದ್ದಾರೆ.

ಡಾ॥ ಹೆಚ್.ಸಿ.ಮಹದೇವಪ್ಪ: ಆ ರೀತಿ ನಡೆದಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನೆನಪು ಇಲ್ಲ ಎಂದರೆ ಹೇಗೆ?

MR. SPEAKER: Sri Reddy, please understand the language. ಅವರೇನು ಹೇಳಿದ್ದು ಎಂದರೆ ಆ ರೀತಿ ಸಸ್ಪೆಂಡ್ ಮಾಡಿ ಪುನಃ ಪ್ರಮೋಷನ್ ಕೊಟ್ಟಿದ್ದು ನನಗೆ ನೆನಪಿದ್ದ ಹಾಗೆ ನಾವು ಮಾಡಿಲ್ಲ. ಅಕಸ್ಮಾತ್ ಏನಾದರೂ ಆಗಿದ್ದರೆ ನಾನು ತಕ್ಷಣ ತಿಳಿದುಕೊಂಡು ತಮಗೆ ತಿಳಿಸುತ್ತೇನೆ ಎನ್ನುವ ಮಾತನ್ನು ಹೇಳಿದ್ದಾರೆ. ಆ ರೀತಿ ಆಗಿರುವುದಕ್ಕೆ ಸಾಧ್ಯವಿಲ್ಲ. ನಾನು ಮಾಡಿಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಆತ ಒಬ್ಬ ಸಾಮಾನ್ಯ ಗುಮಾಸ್ತನಲ್ಲ. ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್. ಅವರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರೀ ಎಂಬು ಹೇಳಬೇಕು.

MR. SPEAKER: Allright. You cannot pin down like that. You can't lead evidence.

ಡಾ॥ ಹೆಚ್.ಸಿ.ಮಹದೇವಪ್ಪ: ಲೋಕಾಯುಕ್ತಕ್ಕೆ ರೆಫರ್ ಮಾಡಿದ್ದೇನೆ. ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಯಾರನ್ನೂ ಬೆಂಬಲ ಮಾಡುವುದಿಲ್ಲ. ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪಾಟಾಳ್ ನಾಗರಾಜ್: ಈಗ ಅವರಿಗೆ ಬಡ್ತಿ ಕೊಟ್ಟಿದ್ದರೆ ಮತ್ತೆ ಅವನನ್ನು ಸಸ್ಪೆಂಡ್ ಮಾಡುತ್ತೀರಾ? ಜಿಲ್ಲಾ ಆರೋಗ್ಯಾಧಿಕಾರಿಗೆ, ನಿಮಗೆ ಗೊತ್ತಿಲ್ಲ ಎಂದು ಹೇಳುತ್ತೀರಿ. ಆ ರೀತಿ ಗೊತ್ತಿಲ್ಲದೆ ಸಸ್ಪೆಂಡ್ ಆಗಿರುವವನಿಗೆ ಬಡ್ತಿ ಕೊಟ್ಟು ನೀವು ಮತ್ತೆ ಕೂಡಿಸಿದ್ದರೆ ನೀವು ಈಗ ಜ್ಞಾಪಕ ಬಂತು ಎಂದು ಇಟ್ಟುಕೊಳ್ಳೋಣ, ನಿಮಗೆ ಗೊತ್ತಾಯಿತು ಎಂದು ಇಟ್ಟುಕೊಳ್ಳೋಣ, ಈಗ ಸಸ್ಪೆಂಡ್ ಮಾಡುತ್ತೀರಾ?

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ವಾಟಾಳರೇ, ಲೋಕಾಯುಕ್ತಕ್ಕೆ ರೆಫರ್ ಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ: ಜಿಲ್ಲಾ ಉಸ್ತುವಾರಿ ಸಚಿವರು ಇಲ್ಲೇ ಇದ್ದಾರೆ. ಪ್ರತಿಯೊಂದು ವ್ಯವಹಾರವನ್ನು ಅವರೇ ನೋಡಿದವರು. ಅವರಿಗೆ ಗೊತ್ತಿರುವುದಿಲ್ಲವೇ?

ಅಧ್ಯಕ್ಷರು: ಅವರಿಗೆ ಅವರ ವ್ಯವಹಾರ ನೋಡುವುದೇ ಟೈಮ್ ಸಾಕಾಗುತ್ತದೆ. ಇದನ್ನು ಬೇರೆ ಎಲ್ಲಿ ನೋಡುತ್ತಾರೆ.

ಶ್ರೀ ಎಂ.ಸಿ.ನಾಣಯ್ಯ: ಅದನ್ನು ಲೋಕಾಯುಕ್ತಕ್ಕೆ ವಹಿಸಿದ್ದಾರೆ. ಲೋಕಾಯುಕ್ತಕ್ಕೆ ವಹಿಸಿಯಾದಮೇಲೆ ಅವರೊಂದು ಪ್ರಿಲಿಮಿನರಿ ಎನ್‌ಕ್ವೈರಿ ಮಾಡಿದಮೇಲೆ ಏನಾದರೂ ಅವರ ಮೇಲೆ ಕ್ರಮ ಇದ್ದರೆ ಕೂಡಲೇ ಸರ್ಕಾರಕ್ಕೆ ಅವನನ್ನು ಸಸ್ಪೆಂಡ್ ಮಾಡಬೇಕು ಎಂದು ಅವರೇ ಬರೆಯುತ್ತಾರೆ. So, let us await the decision of the Lok Ayukta now.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಭೈರೇಗೌಡರು ಇದ್ದಾರೆ, ಅವರಾದರೂ ಹೇಳಲಿ. ಏನು ಅವರಿಗೆ ಗೊತ್ತಿಲ್ಲವೇ?

MR. SPEAKER: Sri Srirama Reddy, I don't know why you...

ಶ್ರೀ ಸಿ.ಭೈರೇಗೌಡ: ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಇಲಾಖೆಯ ಜವಾಬ್ದಾರಿ ಹೊತ್ತಿರುವುದರಿಂದ ಹೇಳಿಕೆಯನ್ನು ಕೊಟ್ಟಿದ್ದಾರೆ. ನಾನಂತೂ ಕೂಡ ಜಿಲ್ಲಾ ಮಂತ್ರಿಯಾಗಿರುವುದು ನಿಜ. ಇದು ಜಿಲ್ಲಾಪಂಚಾಯಿತಿಗೆ ಬಂದು. ಚರ್ಚೆಯಾಗಿ ಅಲ್ಲಿ ಕ್ರಮ ತೆಗೆದುಕೊಂಡು ಸರ್ಕಾರಕ್ಕೆ ವರದಿ ಕಳುಹಿಸಿದ್ದಾರೆ. ಆ ವರದಿಯಮೇಲೆ, ಅವರು ಈ ಇಲಾಖೆಗೆ ಸಂಬಂಧಪಟ್ಟಿರುವ ವಿಚಾರ. ನನಗೆ ನೇರವಾಗಿ ಸಂಬಂಧಪಟ್ಟಿರುವ ವಿಚಾರವಲ್ಲ.

MR. SPEAKER: Sri Nanaiah has made the situation very clear. ನಾಣಯ್ಯನವರು ಏನು ಹೇಳಿದರು ಎಂದರೆ ಲೋಕಾಯುಕ್ತಕ್ಕೆ ರೆಫರ್ ಮಾಡಿದ್ದೇವೆ. ಅವರು ಆಪಾದನೆಗಳನ್ನು ತನಿಖೆ ಮಾಡಿ ಮೇಲ್ನೋಟಕ್ಕೆ ಸ್ವಲ್ಪ ಏನಾದರೂ ಅದರಲ್ಲಿ ಸತ್ಯ ಇದೆ ಎಂದು ತಿಳಿದರೂ ಕೂಡ ತಕ್ಷಣ ಸಸ್ಪೆಂಡ್ ಮಾಡಲೇಬೇಕು ನಾವು, ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಯಾರೋ 12 ಸಾವಿರ ಅವ್ಯವಹಾರ ಮಾಡಿದ್ದಕ್ಕೆ ಬೇಡಿ

ಹಾಕಿಸಿದರು. ಇವನು 2 ಕೋಟಿ ರೂಪಾಯಿ ತಿಂದುಹಾಕಿದ್ದಾನೆ.

ಅಧ್ಯಕ್ಷರು: ನಿಮಗೇನು ಇಷ್ಟು ಖುಷಿ; ನಿಮಗೆ ಟೈಮ್ ಕಳೆಯುವುದು ಎಂದರೆ. ನನಗೆ ಅರ್ಥವೇ ಆಗುವುದಿಲ್ಲ. ಮಾನ್ಯ ನಾಣಯ್ಯನವರು ಇಷ್ಟು ಸ್ಪಷ್ಟವಾಗಿ ಹೇಳಿದ್ದಾರೆ. ಪ್ರೈಮಾಫೇಸಿ ಕೇಸ್ ಇದ್ದ ತಕ್ಷಣ ನಮಗೆ ಅವರು ತಿಳಿಸುತ್ತಾರೆ. We will keep them under suspension.' ಎಂದು ಮತ್ತೆ ಅದರ ಮೇಲೆ ಏಕೆ ಚರ್ಚೆ? ನನಗೆ ಅರ್ಥವಾಗುವುದಿಲ್ಲ.

ಶ್ರೀ ಎಂ.ಸಿ.ನಾಣಯ್ಯ: ಲೋಕಾಯುಕ್ತಕ್ಕೆ ರೆಫರ್ ಮಾಡಿದಮೇಲೆ ನಾವು ಸಸ್ಪೆಂಡ್ ಮಾಡುವುದು ಹೇಗೆ? ಲೋಕಾಯುಕ್ತಕ್ಕೆ ರೆಫರ್ ಮಾಡಿದ್ದೇ ಅದಕ್ಕೋಸ್ಕರ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರು ಪಾಪ, ಇಷ್ಟೇ ಸಿಂಪಲ್ ಕೇಳಿದ್ದು. ಅವರೇನು ಕೇಳಿದರು, ಸಸ್ಪೆಂಡ್ ಮಾಡಿದ ಮೇಲೆ ಪ್ರಮೋಷನ್ ಮಾಡಿದ್ದೀರಾ? ಇಷ್ಟು ಹೇಳಿ ಎಂದು.

ಅಧ್ಯಕ್ಷರು: ಅವರು ಹೇಳಿದರಲ್ಲಾ ಅದನ್ನು, ನನಗೆ ಗೊತ್ತಿದ್ದ ಹಾಗೆ ಮಾಡಿಲ್ಲವೆಂದು. ಮಾನ್ಯ ಮಹದೇವಪ್ಪನವರೂ ಕೂಡ ಹೇಳಿದರು, ನನಗೆ ತಿಳಿದಹಾಗೆ ನಾವು ಮಾಡಿಲ್ಲ ಹಾಗೆ ಎಂದು ಹೇಳಿ ಹೇಳಿದರು. ಮಾನ್ಯ ನಾಣಯ್ಯನವರೇ, ಈಗ ಅಪ್ಪಚ್ಚುರಂಜನ್‌ರವರ ವಿಚಾರಕ್ಕೆ ತಾವು ಉತ್ತರ ಹೇಳಿಬಿಡಿ. ಪ್ರಕಟಣೆಗಳು ಇದ್ದಾವೆ.

ವಿಷಯ: ಸೋಮವಾರ ಪೇಟೆಯಲ್ಲಿ ನಡೆದಿದೆ ಎನ್ನಲಾದ ಅರಣ್ಯದ ಅವ್ಯವಹಾರ

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಸಭಾಧ್ಯಕ್ಷರೇ, ಮೊನ್ನೆ ಅಪ್ಪಚ್ಚುರಂಜನ್‌ರವರು ಸೋಮವಾರಪೇಟೆಯಲ್ಲಿ ಸ್ವಲ್ಪಮಟ್ಟಿಗೆ ಅರಣ್ಯದ ಅವ್ಯವಹಾರ ನಡೆದಿರುವ ಬಗ್ಗೆ ವಿಚಾರ ಮಾಡಿದರು, ಮಾನ್ಯ ಮಂತ್ರಿಗಳೂ ಕೂಡ ಈ ಸಭೆಯಲ್ಲಿ ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಅದರಲ್ಲಿ ಕೆಲವು ಅಧಿಕಾರಿಗಳನ್ನು ಕೂಡಲೇ ಅಮಾನತ್ತಿನಲ್ಲಿಡಬೇಕು ಎನ್ನುವ ವಿಚಾರವನ್ನು ಎತ್ತಿದರು. ಹೆಚ್ಚಿನ ಮಾಹಿತಿ ಕೂಡ ತರಿಸುತ್ತಿದ್ದಾರೆ. ಅದರಲ್ಲಿ ಕೆಲವು ಅಧಿಕಾರಿಗಳ ವಿರುದ್ಧ ಇರುವ ಕೆಲವು ಆಪಾದನೆಗಳು ಯಾವುದು ಇದೆ, ಅದನ್ನು ಪುನಃ ಪರಿಶೀಲನೆ ಮಾಡಿ ಅಮಾನತ್ತಿನಲ್ಲಿಡಬೇಕಾದ ಪರಿಸ್ಥಿತಿ ಬಂದರೆ ಅಧಿಕಾರಿಗಳನ್ನು ಅಮಾನತ್ತಿನಲ್ಲಿ ಇಡುತ್ತೇವೆ. ಇದಕ್ಕೆ ಹಿಂದೆಮುಂದೆ ಏನೂ ನಾವು ನೋಡುವುದಿಲ್ಲ.

(10) (i) ಪ್ರಕಟಣೆಗಳು ಹಾಗೂ ತೀರ್ಪು:

ಅಧ್ಯಕ್ಷರು: ಈಗ ಪ್ರಕಟಣೆಗಳು ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ವಿಧಾನಪರಿಷತ್ತು ದಿನಾಂಕ: 12ನೇ ಸೆಪ್ಟೆಂಬರ್ 1997ರಂದು ಈ ಕೆಳಕಂಡ ವಿಧೇಯಕಗಳಿಗೆ ಯಾವುದೇ ತಿದ್ದುಪಡಿಗಳಿಲ್ಲದೆ

ಅಂಗೀಕರಿಸಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ.

(1) ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳು ತಿದ್ದುಪಡಿ ವಿಧೇಯಕ, 1997.

(2) ಕರ್ನಾಟಕ ವಿಧಾನಮಂಡಲದವರ ವೇತನಗಳ ನಿವೃತ್ತಿ ವೇತನಗಳ ಮತ್ತು ಭತ್ಯೆಗಳ ತಿದ್ದುಪಡಿ ವಿಧೇಯಕ 1997.

(3) ಕರ್ನಾಟಕ ತೆರಿಗೆ ಕಾನೂನುಗಳ 2ನೇ ತಿದ್ದುಪಡಿ ವಿಧೇಯಕ, 1997.

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ:

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 103ರ ಮೇರೆಗೆ ವಿಧಾನ ಪರಿಷತ್ತು ದಿನಾಂಕ 12ನೇ ಸೆಪ್ಟೆಂಬರ್, 1997 ರಂದು ಕರ್ನಾಟಕ ರಾಜ್ಯ ಅರಣ್ಯ ಮತ್ತು ಕೆಲವು ಇತರ ಕಾನೂನುಗಳು (ತಿದ್ದುಪಡಿ) ವಿಧೇಯಕ, 1997ನ್ನು ಯಾವುದೇ ತಿದ್ದುಪಡಿಯಿಲ್ಲದೇ ಅಂಗೀಕರಿಸಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ. ಹಾಗೂ ವಿಧಾನಸಭೆಯ ಸಹಮತಿಯನ್ನು ಕೋರುತ್ತೇನೆ.

ದಿನಾಂಕ: 12-9-97ರಂದು ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

''ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ 11ನೇ ಸೆಪ್ಟೆಂಬರ್ 97ರಂದು ಕರ್ನಾಟಕ ಧರ್ಮಾದಾಯ ದತ್ತಿಗಳು ಮತ್ತು ಹಿಂದೂ ಧಾರ್ಮಿಕ ಸಂಸ್ಥೆಗಳ ವಿಧೇಯಕ 1997ನ್ನು ಜಂಟಿ ಪರಿಶೀಲನಾ ಸಮಿತಿಗೆ ಒಪ್ಪಿಸಲಾಗಿದೆ ಹಾಗೂ ಅದರ ವರದಿಯನ್ನು ಎರಡು ತಿಂಗಳೊಳಗಾಗಿ ಸದನಕ್ಕೆ ಸಲ್ಲಿಸಲು ಸೂಚಿಸಲಾಗಿದೆ. ಆದುದರಿಂದ ಸದರಿ ಸಮಿತಿಗೆ ವಿಧಾನಸಭೆಯ 14 ಸದಸ್ಯರನ್ನು ನೇಮಕ ಮಾಡಬೇಕೆಂದು ಹಾಗೂ ವಿಧಾನಸಭೆಯ ಸಹಮತಿಯನ್ನು ಒದಗಿಸಬೇಕೆಂದು ಕೋರಿರುತ್ತಾರೆ.''

ಈ ಸದನವು ವಿಧಾನಪರಿಷತ್ತಿನವರು ಕರ್ನಾಟಕ ಧರ್ಮಾದಾಯ ದತ್ತಿಗಳು ಮತ್ತು ಹಿಂದೂ ಧಾರ್ಮಿಕ ಸಂಸ್ಥೆಗಳ ವಿಧೇಯಕ 1997ನ್ನು ಜಂಟಿ ಪರಿಶೀಲನಾ ಸಮಿತಿಗೆ ವಹಿಸಿದ್ದು ಹಾಗೂ ಈ ಕೆಳಕಂಡ ವಿಧಾನಸಭೆಯ ಸದಸ್ಯರನ್ನು ಆ ಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡಿ ಸಹಮತಿಯನ್ನು ನೀಡಿದೆ:

ಶ್ರೀಯುತರುಗಳಾದ:

(1) ಎನ್.ರಾಜಣ್ಣ

(2) ಜೆ.ಬಿ.ಶಿವಕುಮಾರ್

(3) ಪಿ.ಸಿ.ಸಿದ್ಧನಗೌಡರ್

(4) ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ

(5) ಹೆಚ್.ಕೆ.ಕುಮಾರಸ್ವಾಮಿ

(6) ಅಮರ್‌ನಾಥ್ ಶೆಟ್ಟಿ

(7) ಬಿ.ಆರ್.ಯಾವಗಲ್

(8) ಕರಡಿ ಸಂಗಣ್ಣ

(9) ಡಾ॥ ಎಂ.ಪಿ.ಕರ್ಕಿ

(10) ಶ್ರೀಮತಿ ಎಸ್.ಪ್ರಮೀಳಾ

(11) ಕೆ.ಎಸ್.ಪುಟ್ಟಣ್ಣಯ್ಯ

(12) ಪ್ರಕಾಶ್ ಬಿ.ಹುಕ್ಕೇರಿ

(13) ಎ.ಟಿ.ರಾಮಸ್ವಾಮಿ

(14) ಡಿ.ಕೆ.ಶಿವಕುಮಾರ್.

(ii) ತೀರ್ಪು

ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ದಿನಾಂಕ 27-3-1997ರಂದು ನಿಯಮ 191ರ ಮೇರೆಗೆ ಬೆಂಗಳೂರು ದೂರದರ್ಶನದ ಕೇಂದ್ರದವರ ವಿರುದ್ಧ ಹಕ್ಕುಚ್ಯುತಿ ಸೂಚನೆಯನ್ನು ನೀಡಿದ್ದರು. ಸದರಿ ಸೂಚನೆಯಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯ ಅವರು 1997-98ನೇ ಸಾಲಿನ ಆಯವ್ಯಯವನ್ನು ದಿನಾಂಕ: 18-3-1997ರಂದು ವಿಧಾನಸಭೆಯಲ್ಲಿ ಮಂಡಿಸುತ್ತಿದ್ದ ಸಂದರ್ಭದಲ್ಲಿ ವಿರೋಧ ಪಕ್ಷದವರು ವ್ಯಕ್ತಪಡಿಸುತ್ತಿದ್ದ ಪ್ರತಿಭಟನೆಯನ್ನು ಬೆಂಗಳೂರು ದೂರದರ್ಶನವರು ಕಡೆಗಣಿಸಿ ಕೇವಲ ಆಡಳಿತ ಪಕ್ಷದ ಕಡೆಗೆ ಮಾತ್ರ ಗಮನ ಕೊಟ್ಟಿದ್ದರಿಂದ ವಿರೋಧ ಪಕ್ಷದ ಸದಸ್ಯರ ಹಕ್ಕಿಗೆ ಚ್ಯುತಿ ಉಂಟಾಗಿರುವುದೆಂದು ಆಪಾದಿಸಿದ್ದರು.

1997-98ನೇ ಸಾಲಿನ ಆಯವ್ಯಯವನ್ನು ಮಾನ್ಯ ಉಪ ಮುಖ್ಯಮಂತ್ರಿಯವರು

ಮಂಡಿಸುವಂತಹ ಸನ್ನಿವೇಶವನ್ನು ಇದೇ ಪ್ರಥಮ ಬಾರಿಗೆ ಪ್ರಸಾರ ಮಾಡಲು ದೂರದರ್ಶನದವರಿಗೆ ಅನುಮತಿ ನೀಡಿಲಾಗಿತ್ತು. ಆಯವ್ಯಯದಲ್ಲಿನ ವಿಷಯಗಳು ಸಾರ್ವಜನಿಕರಿಗೆ ತಿಳಿಯಬೇಕೆಂಬ ಉದ್ದೇಶದಿಂದಾಗಿ ದೂರದರ್ಶನದವರು ಹೆಚ್ಚಾಗಿ ಉಪ ಮುಖ್ಯಮಂತ್ರಿಯವರನ್ನೇ ಕೇಂದ್ರೀಕರಿಸಿ ಪ್ರಸಾರ ಮಾಡಿರುತ್ತಾರೆ. ಹೀಗಾಗಿ ಬೆಂಗಳೂರು ದೂರದರ್ಶನದವರು ಸದನದ ಇತರ ಸದಸ್ಯರ ಕಡೆಗೆ ಬಹುಶಃ ಗಮನಹರಿಸಿರುವುದಿಲ್ಲ.

ಸದನದ ಕಾರ್ಯಕಲಾಪಗಳಲ್ಲಿ ಯಾವುದೇ ಸದಸ್ಯರು ಭಾಗವಹಿಸಿದಂಥ ಸಂದರ್ಭವನ್ನು ದೂರದರ್ಶನವಾಗಲಿ, ಆಕಾಶವಾಣಿಯಾಗಲಿ ಅಥವಾ ಇತರೆ ಪತ್ರಿಕಾ ಮಾಧ್ಯಮದವರಾಗಲೀ ಪ್ರಸಾರ ಮಾಡದೇ ಇರದಿದ್ದಲ್ಲಿ ಅದು ಹಕ್ಕುಚ್ಯುತಿ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಕೋದಂಡರಾಮಯ್ಯನವರದ್ದು ಏನಾಯಿತು ಸ್ವಾಮಿ?

ಅಧ್ಯಕ್ಷರು: ಅದು ಇನ್ನೂ ತೀರ್ಮಾನವಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್: ಅದನ್ನು ಯಾವಾಗ ಮಾಡುತ್ತೀರಿ?

ಅಧ್ಯಕ್ಷರು: ಟೈಮ್ ಕೊಡಿ.

(11) ಸದನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಹತ್ತನೇ ವಿಧಾನ ಸಭೆಯ ಆರನೇ ಮುಂದುವರೆದ ಉಪವೇಶನವು ಇಲ್ಲಿಯವರೆಗೆ ನಡೆಸಿದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ಸಭೆಯ ಮುಂದೆ ಮಂಡಿಸ ಬಯಸುತ್ತೇನೆ.

ಸೋಮವಾರ, ದಿನಾಂಕ 28ನೇ ಜುಲೈ, 1997ರಂದು ಪ್ರಾರಂಭವಾದ ಆರನೇ ಮುಂದವರೆದ ಉಪವೇಶನವು 30 ದಿನಗಳ ಕಾಲ ಕಾರ್ಯಕಲಾಪಗಳನ್ನು ನಡೆಸಿತು.

ಸದನವು 197.36 ಗಂಟೆಗಳ ಕಾಲ ಕಾರ್ಯಕಲಾಪಗಳನ್ನು ನಡೆಸಿರುತ್ತದೆ.

ಇತ್ತೀಚೆಗೆ ನಿಧನರಾದ 13 ಗಣ್ಯರುಗಳ ಗೌರವಾರ್ಥ ಸಂತಾಪ ಸೂಚನಾ ನಿರ್ಣಯವನ್ನು ಅಂಗೀಕರಿಸಲಾಯಿತು.

ಈ ಅವಧಿಯಲ್ಲಿ 2242 ಪ್ರಶ್ನೆಗಳನ್ನು ಸ್ವೀಕರಿಸಿದ್ದು, 345 ಚುಕ್ಕೆ ಗುರ್ತಿನ ಪ್ರಶ್ನೆಗಳಾಗಿ ಹಾಗೂ 1555 ಪ್ರಶ್ನೆಗಳು ಚುಕ್ಕೆ ರಹಿತ ಪ್ರಶ್ನೆಯಾಗಿಯೂ ಅಂಗೀಕಾರವಾಗಿರುತ್ತದೆ.

ಎರಡು ಅಲ್ಪ ಕಾಲಾವಧಿ ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು ಅದರಲ್ಲಿ ಒಂದು ಪ್ರಶ್ನೆಗೆ ಉತ್ತರವನ್ನು ನೀಡಲಾಯಿತು.

138 ಗಮನ ಸೆಳೆಯುವ ಸೂಚನೆಗಳನ್ನು ಸ್ವೀಕರಿಸಿ, ಆ ಪೈಕಿ 25 ಸೂಚನೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಹೇಳಿಕೆಗಳನ್ನು ನೀಡಿರುತ್ತಾರೆ.

ಅರ್ಧಗಂಟೆ ಕಾಲಾವಧಿ ಚರ್ಚೆಗೆ 5 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 4 ಸೂಚನೆಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ನಿಯಮ 351ರ ಅಡಿಯಲ್ಲಿ 196 ಸೂಚನೆಗಳನ್ನು ಸ್ವೀಕರಿಸಲಾಗಿದ್ದು ಅವುಗಳಲ್ಲಿ ಯಾವ ಸೂಚನೆಯನ್ನು ಸದನದಲ್ಲಿ ಪ್ರಸ್ತಾಪಿಸಲು ತೆಗೆದುಕೊಂಡಿರುವುದಿಲ್ಲ. ಆದರೂ ಸರ್ಕಾರದಿಂದ ಉತ್ತರಗಳನ್ನು ತರಿಸಿ ಸದಸ್ಯರಿಗೆ ಒದಗಿಸಲಾಗಿದೆ.

4 ಖಾಸಗಿ ನಿರ್ಣಯಗಳನ್ನು ಸ್ವೀಕರಿಸಿದ್ದು, ಅವುಗಳಲ್ಲಿ ಯಾವುದನ್ನೂ ಚರ್ಚೆಗೆ ತೆಗೆದುಕೊಂಡಿರುವುದಿಲ್ಲ.

ಈ ಅವಧಿಯಲ್ಲಿ 178 ಕಾಗದ ಪತ್ರಗಳನ್ನು ಸದನದ ಮುಂದೆ ಮಂಡಿಸಲಾಯಿತು.

ನಿಯಮ 69ರ ಅಡಿಯಲ್ಲಿ 33 ಪ್ರಸ್ತಾವನೆಗಳನ್ನು ಸ್ವೀಕರಿಸಲಾಗಿದ್ದು, ಅವುಗಳಲ್ಲಿ 5 ಪ್ರಸ್ತಾವನೆಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

1997-98ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ 13 ದಿನಗಳು ಚರ್ಚೆ ನಡೆಸಿ ದಿನಾಂಕ 4.9.1997ರಂದು ಮಾನ್ಯ ಮುಖ್ಯ ಮಂತ್ರಿಯವರು ಉತ್ತರಿಸಿದ ನಂತರ ಅನುದಾನ ಬೇಡಿಕೆಗಳ ಮೇಲಿನ ಪ್ರಸ್ತಾವನೆಯನ್ನು ಮತಕ್ಕೆ ಹಾಕಿ ಅಂಗೀಕರಿಸಲಾಯಿತು.

ನಿಲುವಳಿ ಸೂಚನೆಗೆ 16 ಪ್ರಸ್ತಾವನೆಗಳು ಬಂದಿದ್ದು ಅವುಗಳಿಗೆ ಅನುಮತಿಯನ್ನು ತಡೆಹಿಡಿಯಲಾಯಿತು.

ಈ ಅವಧಿಯಲ್ಲಿ ಒಟ್ಟು 21 ವಿಧೇಯಕಗಳನ್ನು ಸದನದಲ್ಲಿ ಮಂಡಿಸಲಾಯಿತು. ಇದೇ ಅವಧಿಯಲ್ಲಿ 6 ಹಳೆಯ ವಿಧೇಯಕಗಳನ್ನೊಳಗೊಂಡಂತೆ ಒಟ್ಟು 18 ವಿಧೇಯಕಗಳನ್ನು ಪರ್ಯಾಲೋಚಿಸಿ ಅಂಗೀಕರಿಸಲಾಯಿತು. ವಿಧಾನ ಪರಿಷತ್ತಿನಿಂದ ಅಂಗೀಕಾರ ರೂಪದಲ್ಲಿದ್ದ ಎರಡು ವಿಧೇಯಕಗಳನ್ನು ಪರ್ಯಾಲೋಚಿಸಿ ಅಂಗೀಕರಿಸಲಾಯಿತು.

ಈ ಅಧಿವೇಶನದ ಅವಧಿಯಲ್ಲಿ ಖಾಸಗಿ ಸದಸ್ಯರುಗಳ ವಿಧೇಯಕಗಳು ಹಾಗೂ ನಿರ್ಣಯಗಳ ಸಮಿತಿಯ ಒಂದು ವರದಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಒಂದು ವಿಶೇಷ ವರದಿ ಹಾಗೂ 8 ಸ್ಥಾಯಿ ಸಮಿತಿಗಳ ವರದಿಗಳನ್ನು ಸದನದಲ್ಲಿ ಮಂಡಿಸಲಾಯಿತು.

1987-88 ಹಾಗೂ 1988-89ನೇ ಸಾಲುಗಳ ಹೆಚ್ಚುವರಿ ಅನುದಾನ ಬೇಡಿಕೆಗಳನ್ನು

ಸಭೆಯ ಮತಕ್ಕೆ ಹಾಕಿ ಅಂಗೀಕರಿಸಲಾಯಿತು. 1997-98ನೇ ಸಾಲಿನ ಪೂರಕ ಅಂದಾಜುಗಳ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕಿ ಅಂಗೀಕರಿಸಲಾಯಿತು.

ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿ, ಸುಲಲಿತವಾಗಿ ನಡೆಸಲು ನನ್ನೊಡನೆ ಸಹಕರಿಸಿದ ಈ ಸದನದ ನಾಯಕರಾದ ಮಾನ್ಯ ಮುಖ್ಯಮಂತ್ರಿಗಳಿಗೂ, ವಿರೋಧ ಪಕ್ಷದ ನಾಯಕರಿಗೂ, ವಿಧಾನ ಸಭೆಯ ಎಲ್ಲಾ ಮಾನ್ಯ ಸದಸ್ಯರಿಗೂ ಪತ್ರಕರ್ತರಿಗೂ, ಆಕಾಶವಾಣಿ ಮತ್ತು ದೂರದರ್ಶನದವರಿಗೂ ವಿವಿಧ ಇಲಾಖಾ ಅಧಿಕಾರಿಗಳು ಹಾಗೂ ವಿಧಾನ ಮಂಡಲದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಇಡೀ ಸದನದ ಅಧಿವೇಶನ ನಡೆಯುವ ವೇಳೆಯಲ್ಲಿ ಎರಡೇ ಎರಡು ಸಂದರ್ಭಗಳಲ್ಲಿ ಮಾತ್ರ ನಾನು ಸ್ವಲ್ಪ ಸ್ಥಿಮಿತವನ್ನು ಕಳೆದುಕೊಂಡು ಸಿಟ್ಟಿಗೆದ್ದಿದ್ದೆ. ಅದೂಕೂಡ ಯಾರ ಮೇಲೆ ಪೂರ್ವಗ್ರಹಪೀಡಿತನಾಗಿ ಆಗಲಿ, ಮತ್ಸರದಿಂದಾಗಲೀ, ದ್ವೇಷದಿಂದಾಗಲೀ ಅಲ್ಲ. ಸಮಯವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಹೇಳಿ ಅದರಿಂದ ಯಾರದೇ ಸದಸ್ಯರ ಮನಸ್ಸಿಗೆ ನೋವಾಗಿದ್ದರೂ ಬೇಸರಪಟ್ಟುಕೊಳ್ಳಬಾರದು ಎನ್ನುವ ಮಾತನ್ನುಹೇಳಿ ಈ ರೀತಿ ಹೆಚ್ಚು ಉಪಯುಕ್ತವಾದ ಕೆಲಸವನ್ನು ಮಾಡಿರುವುದಕ್ಕೆ ಸಹಕರಿಸಿದ ತಮ್ಮೆಲ್ಲರನ್ನೂ ಕೂಡ ಅಭಿನಂದಿಸಿ ಈಗ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ ಎಂದು ತಿಳಿಸುತ್ತಿದ್ದೇನೆ.

(ಸದನವು ರಾತ್ರಿ 8.35 ಘಂಟೆಗೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಅನುಬಂಧ I

ಕರ್ನಾಟಕ ವಿಧಾನಸಭೆ

ಹತ್ತನೇ ವಿಧಾನಸಭೆ

(ಆರನೇ ಅಧಿವೇಶನ)

(ಮುಂದುವರಿದ ಉಪವೇಶನಗಳು)

ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳು (ತಿದ್ದುಪಡಿ) ವಿಧೇಯಕ, 1997

(1997ರ ವಿಧಾನಸಭಾ ವಿಧೇಯಕ ಸಂಖ್ಯೆ 36)

ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳು ಅಧಿನಿಯಮ 1956ನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕ.

ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956ನ್ನು (1957ರ ಕರ್ನಾಟಕ ಅಧಿನಿಯಮ 5) ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಕ್ಕಾಗಿ ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ನಲವತ್ತೆಂಟನೇ ವರ್ಷದಲ್ಲಿ ಕರ್ನಾಟಕ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ: (1) ಈ ಅಧಿನಿಯಮವನ್ನು ಕರ್ನಾಟಕ ಸಚಿವರ ವೇತನಗಳ ಮತ್ತು ಭತ್ಯೆಗಳ (ತಿದ್ದುಪಡಿ) ಅಧಿನಿಯಮ, 1997 ಎಂದು ಕರೆಯತಕ್ಕದ್ದು.

(2) ಇದು 1997ರ ಸೆಪ್ಟೆಂಬರ್ ಒಂದನೇ ದಿನಾಂಕದಿಂದ ಪರಿಣಾಮಕಾರಿ ಯಾಗುವಂತೆ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 3ನೇ ಪ್ರಕರಣದ ತಿದ್ದುಪಡಿ: ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳು ಅಧಿನಿಯಮ, 1956 (1957ರ ಕರ್ನಾಟಕ ಅಧಿನಿಯಮ5) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗುವುದು) 3ನೇ ಪ್ರಕರಣದಲ್ಲಿ ''ಇಪ್ಪತ್ತು ಸಾವಿರ ರೂಪಾಯಿಗಳ'' ಎಂಬ ಪದಗಳಿಗೆ ''ಐವತ್ತು ಸಾವಿರ ರೂಪಾಯಿಗಳ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

3. 5ನೇ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 5ನೇ ಪ್ರಕರಣದಲ್ಲಿ

(2)ನೇ ಉಪ-ಪ್ರಕರಣದಲ್ಲಿ ''ಮುನ್ನೂರು ಲೀಟರ್'' ಎಂಬ ಪದಗಳಿಗೆ ''ಐನೂರು ಲೀಟರ್'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

4. 6ನೇ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 6ನೇ ಪ್ರಕರಣದಲ್ಲಿ (1)ನೇ ಉಪ-ಪ್ರಕರಣದಲ್ಲಿ (ಎ) ಖಂಡದಲ್ಲಿ ''ಮುನ್ನೂರು ಲೀಟರ್''ಗಳ ಎಂಬ ಪದಗಳಿಗೆ ''ಐನೂರು ಲೀಟರ್‌ಗಳ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

5. 6ಎ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 6ಎ ಪ್ರಕರಣದಲ್ಲಿ ''ಹನ್ನೆರಡು ಸಾವಿರ ರೂಪಾಯಿಗಳ'' ಎಂಬ ಪದಗಳಿಗೆ ''ಮೂವತ್ತು ಸಾವಿರ ರೂಪಾಯಿಗಳ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

6. 6ಸಿ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 6ಎ ಪ್ರಕರಣದಲ್ಲಿ (2)ನೇ ಉಪ-ಪ್ರಕರಣದಲ್ಲಿ ''ಮುನ್ನೂರು ಲೀಟರ್'' ಎಂಬ ಪದಗಳಿಗೆ ''ಐದು ನೂರು ಲೀಟರ್'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

7. 6ಡಿ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 6ಡಿ ಪ್ರಕರಣದಲ್ಲಿ (1)ನೇ ಉಪ-ಪ್ರಕರಣದಲ್ಲಿ (ಎ) ಖಂಡದಲ್ಲಿ ''ಮುನ್ನೂರು ಲೀಟರ್‌ಗಳ'' ಎಂಬ ಪದಗಳಿಗೆ ''ಐದು ನೂರು ಲೀಟರ್‌ಗಳ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

8. 7ನೇ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 7ನೇ ಪ್ರಕರಣದಲ್ಲಿ ''ಹನ್ನೆರಡು ಸಾವಿರ ರೂಪಾಯಿಗಳ'' ಎಂಬ ಪದಗಳಿಗೆ ''ಮೂವತ್ತು ಸಾವಿರ ರೂಪಾಯಿಗಳ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

9. 9ನೇ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 9ನೇ ಪ್ರಕರಣದಲ್ಲಿ (2)ನೇ ಉಪ-ಪ್ರಕರಣದಲ್ಲಿ ''ಮುನ್ನೂರು ಲೀಟರ್'' ಎಂಬ ಪದಗಳಿಗೆ ''ಐದು ನೂರು ಲೀಟರ್'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

10. 10ನೇ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 10ನೇ ಪ್ರಕರಣದಲ್ಲಿ (1)ನೇ ಉಪ ಪ್ರಕರಣದಲ್ಲಿ (ಎ) ಖಂಡದಲ್ಲಿ ''ಮುನ್ನೂರು ಲೀಟರ್'' ಎಂಬ ಪದಗಳಿಗೆ ''ಐದು ನೂರು ಲೀಟರ್'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

11. 12ನೇ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 12ನೇ ಪ್ರಕರಣದಲ್ಲಿ (2)ನೇ ಉಪ-ಪ್ರಕರಣದಲ್ಲಿ,-

(i) (ಬಿ) ಖಂಡದಲ್ಲಿ ''ಆರು ರೂಪಾಯಿಯಂತೆ' ಎಂಬ ಪದಗಳಿಗೆ ''ಎಂಟು ರೂಪಾಯಿಯಂತೆ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (ಡಿ) ಖಂಡದಲ್ಲಿ ''ಇನ್ನೂರು ಐವತ್ತು ರೂಪಾಯಿಗಳ'' ಎಂಬ ಪದಗಳಿಗೆ ''ಐದು ನೂರು ರೂಪಾಯಿಗಳ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iii) (ಡಿ) ಖಂಡದ ಮೊದಲನೆಯ ಪರಂತುಕದಲ್ಲಿ ''ಮುನ್ನೂರ ಐವತ್ತು ರೂಪಾಯಿಗಳಾಗಿರತಕ್ಕದ್ದು'' ಎಂಬ ಪದಗಳಿಗೆ ''ಆರುನೂರ ಐವತ್ತು ರೂಪಾಯಿಗಳಾಗಿರತಕ್ಕದ್ದು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಉದ್ದೇಶ ಮತ್ತು ಕಾರಣಗಳ ಹೇಳಿಕೆ

1956ರ ಸಚಿವರ ವೇತನಗಳು ಮತ್ತು ಭತ್ಯೆಗಳ ಅಧಿನಿಯಮವನ್ನು ತಿದ್ದುಪಡಿ ಮಾಡುವ ಮೂಲಕ ಸಚಿವರ, ಉಪ ಸಚಿವರ ಹಾಗೂ ರಾಜ್ಯ ಸಚಿವರುಗಳ ವೇತನಗಳು ಮತ್ತು ಭತ್ಯೆಗಳನ್ನು ಹೆಚ್ಚಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮದಿಂದಾಗಿ ವಾರ್ಷಿಕ 70.00 ಲಕ್ಷ ರೂಪಾಯಿಗಳ ಅಂದಾಜು ವೆಚ್ಚ ಉಂಟಾಗುತ್ತದೆ.

ಜೆ.ಹೆಚ್.ಪಟೀಲ್
ಮುಖ್ಯಮಂತ್ರಿಗಳು.

ಯಾಕೂಬ್ ಷರೀಫ್,
ಕಾರ್ಯದರ್ಶಿ.

ಅನುಬಂಧ

1956ರ ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ತೆಗಳು ಅಧಿನಿಯಮದ (1957ರ ಕರ್ನಾಟಕ ಅಧಿನಿಯಮ (5) ಉದ್ಧೃತ ಭಾಗ.

★★ ★★ ★★

3. ಮುಖ್ಯಮಂತ್ರಿ ಮತ್ತು ಸಚಿವರ ವೇತನಗಳು: ಮುಖ್ಯ ಮಂತ್ರಿಗೆ ಪ್ರತಿ ತಿಂಗಳಿಗೆ ಮೂರು ಸಾವಿರ ರೂಪಾಯಿಗಳ ವೇತನವನ್ನು ಮತ್ತು ಪ್ರತಿ ಸಚಿವನಿಗೆ ಪ್ರತಿ ತಿಂಗಳಿಗೆ ಎರಡು ಸಾವಿರದ ಐದುನೂರು ರೂಪಾಯಿಗಳ ವೇತನವನ್ನು ಸಂದಾಯ ಮಾಡತಕ್ಕದ್ದು. ಅವರಿಗೆ ವರ್ಷ ಒಂದಕ್ಕೆ ಇಪ್ಪತ್ತು ಸಾವಿರ ರೂಪಾಯಿಗಳ ಆತಿಥ್ಯ ಭತ್ಯವನ್ನು ಸಂದಾಯ ಮಾಡತಕ್ಕದ್ದು.

★★ ★★ ★★

5. ಸಚಿವರಿಗಾಗಿ ವಾಹನ ಸೌಕರ್ಯ.- (1) ★★ ★★

(2) ಪ್ರತಿಯೊಬ್ಬ ಸಚಿವರಿಗೆ ತಿಂಗಳೊಂದಕ್ಕೆ ಮುನ್ನೂರು ಲೀಟರ್ ಪೆಟ್ರೋಲ್ ಬೆಲೆಗೆ ಸಮನಾದ ವಾಹನ ಭತ್ಯೆಯನ್ನು ಸಂದಾಯ ಮಾಡತಕ್ಕದ್ದು.

6. ಸಚಿವರು ಮತ್ತು ಸರ್ಕಾರದಿಂದ ಸಂದೇಯವಿರುವ ವೆಚ್ಚಗಳು.- (1) ಪ್ರತಿಯೊಬ್ಬ ಸಚಿವರು, 4ನೇ ಪ್ರಕರಣದ ಹಾಗೂ 5ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ತಮ್ಮ ಉಪಯೋಗಕ್ಕಾಗಿ ಹಂಚಿಕೆ ಮಾಡಲಾದ ನಿವಾಸ ಮತ್ತು ಮೋಟಾರು ಕಾರಿನ ಸಂಬಂಧದಲ್ಲಿ ಈ ಮುಂದಿನ ವೆಚ್ಚಗಳಿಗೆ ಬದ್ಧರಾಗಿರತಕ್ಕದ್ದು, ಎಂದರೆ:

(ಎ) ಮುನ್ನೂರು ಲೀಟರ್‌ಗಳ ಪೆಟ್ರೋಲ್ ಬೆಲೆಗಿಂತ ಅಧಿಕವಾಗಿ ತಮ್ಮ ತಮ್ಮ ಮೋಟಾರು ಕಾರುಗಳಿಗೆ ಅಗತ್ಯವಾಗುವ ಪೆಟ್ರೋಲಿನ ಬೆಲೆಯನ್ನು ಸರ್ಕಾರ ಸಂದಾಯ ಮಾಡತಕ್ಕುದು.

(ಬಿ) ★★ ★★

6ಎ. ರಾಜ್ಯ ಸಚಿವರ ವೇತನಗಳು: ಪ್ರತಿಯೊಬ್ಬ ರಾಜ್ಯ ಸಚಿವನಿಗೆ ಪ್ರತಿ ತಿಂಗಳಿಗೆ ಎರಡು ಸಾವಿರದ ಇನ್ನೂರ ಐವತ್ತು ರೂಪಾಯಿಗಳ ವೇತನವನ್ನು ಸಂದಾಯ ಮಾಡತಕ್ಕದ್ದು ಮತ್ತು ಒಂದು ವರ್ಷಕ್ಕೆ ಹನ್ನೆರಡು ಸಾವಿರ ರೂಪಾಯಿಗಳ ಆತಿಥ್ಯ ಭತ್ಯವನ್ನು ಸಂದಾಯ ಮಾಡತಕ್ಕದ್ದು.

★★ ★★ ★★

6ಸಿ. ಸ್ಟೇಟ್ ದರ್ಜೆ ಸಚಿವರಿಗಾಗಿ ವಾಹನ ಸೌಕರ್ಯ.- (1)

(2) ಪ್ರತಿಯೊಬ್ಬ ಸ್ಟೇಟ್ ದರ್ಜೆ ಸಚಿವರಿಗೆ ತಿಂಗಳೊಂದಕ್ಕೆ ಮುನ್ನೂರು ಲೀಟರ್ ಪೆಟ್ರೋಲಿನ ಬೆಲೆಗೆ ಸಮನಾದ ವಾಹನ ಭತ್ಯವನ್ನು ಸಂದಾಯ ಮಾಡತಕ್ಕದ್ದು.

6ಡಿ. ಸ್ಟೇಟ್ ದರ್ಜೆ ಸಚಿವರು ಮತ್ತು ಸರ್ಕಾರದಿಂದ ಸಂದೇಯವಿರುವ ವೆಚ್ಚಗಳು.- (1) 6ಬಿ ಮತ್ತು 6ಸಿ, ಪ್ರಕರಣಗಳ (1)ನೇ ಉಪ-ಪ್ರಕರಣದ ಅಡಿಯಲ್ಲಿ ಪ್ರತಿಯೊಬ್ಬ ರಾಜ್ಯ ಸಚಿವರು, ತಮ್ಮ ಉಪಯೋಗಕ್ಕಾಗಿ ಹಂಚಿಕೆ ಮಾಡಲಾದ ನಿವಾಸ ಮತ್ತು ಮೋಟಾರು ಕಾರಿನ ಸಂಬಂಧದಲ್ಲಿ ಈ ಮುಂದಿನ ವೆಚ್ಚಗಳನ್ನು ಸಂದಾಯ ಮಾಡಲು ಬದ್ಧರಾಗಿರತಕ್ಕದ್ದು, ಎಂದರೆ:

(ಎ) ಮುನ್ನೂರು ಲೀಟರ್‌ಗಳ ಪೆಟ್ರೋಲ್ ಬೆಲೆಗಿಂತ ಅಧಿಕವಾಗಿ ತಮ್ಮ ತಮ್ಮ ಮೋಟಾರು ಕಾರುಗಳಿಗೆ ಅಗತ್ಯವಾಗುವ ಪೆಟ್ರೋಲಿನ ಬೆಲೆಯನ್ನು ಸರ್ಕಾರ ಸಂದಾಯ ಮಾಡತಕ್ಕದ್ದು.

(ಬಿ) ★★ ★★ ★★

7. **ಉಪ ಸಚಿವರ ವೇತನಗಳು:** ಪ್ರತಿಯೊಬ್ಬ ಉಪ ಸಚಿವನಿಗೆ ಪ್ರತಿ ತಿಂಗಳಿಗೆ ಎರಡು ಸಾವಿರ ರೂಪಾಯಿಗಳ ವೇತನವನ್ನು ಮತ್ತು ಒಂದು ವರ್ಷಕ್ಕೆ ಹನ್ನೆರಡು ಸಾವಿರ ರೂಪಾಯಿಗಳ ಆತಿಥ್ಯ ಭತ್ಯವನ್ನು ಮಾಡತಕ್ಕದ್ದು.

★★ ★★ ★★

9. ಉಪ ಸಚಿವರಿಗಾಗಿ ವಾಹನ ಸೌಕರ್ಯ (1) ★★ ★★

(2) ಪ್ರತಿಯೊಬ್ಬ ಉಪ ಸಚಿವರಿಗೆ ತಿಂಳೊಂದಕ್ಕೆ ಮುನ್ನೂರು ಲೀಟರ್ ಪೆಟ್ರೋಲ್ ಬೆಲೆಗೆ ಸಮನಾದ ವಾಹನ ಭತ್ಯೆಯನ್ನು ಸಂದಾಯ ಮಾಡತಕ್ಕದ್ದು.

★★ ★★ ★★

10. ಉಪ ಸಚಿವರು ಮತ್ತು ಸರ್ಕಾರದಿಂದ ಸಂದೇಯವಿರುವ ವೆಚ್ಚಗಳು.- (1) 8ನೇ ಪ್ರಕರಣ ಮತ್ತು 9ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಪ್ರತಿಯೊಬ್ಬ ಉಪ ಸಚಿವರು, ತಮ್ಮ ಉಪಯೋಗಕ್ಕಾಗಿ ಹಂಚಿಕೆ ಮಾಡಲಾದ ನಿವಾಸ ಮತ್ತು ಮೋಟಾರು ಕಾರಿನ ಸಂಬಂಧದಲ್ಲಿ ಈ ಮುಂದಿನ ವೆಚ್ಚಗಳನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು, ಎಂದರೆ:

(ಎ) ಮುನ್ನೂರು ಲೀಟರ್ ಪೆಟ್ರೋಲ್ ಬೆಲೆಗಿಂತ ಅಧಿಕವಾಗಿ ತಮ್ಮ ತಮ್ಮ

ಮೋಟಾರು ಕಾರುಗಳಿಗೆ ಅಗತ್ಯವಾದ ಪೆಟ್ರೋಲಿನ ಬೆಲೆಯನ್ನು ಸರ್ಕಾರ ಸಂದಾಯ ಮಾಡತಕ್ಕದು.

(ಬಿ) ★★ ★★

12. ಪ್ರವಾಸದಲ್ಲಿರುವಾಗ ಪ್ರಯಾಣ ಮತ್ತು ಇತರ ಭತ್ಯೆಗಳು.- (1) ★★

(2) ಸರ್ಕಾರಿ ಕಾರ್ಯಕಲಾಪಗಳ ಸಂಬಂಧದಲ್ಲಿ ಪ್ರವಾಸದಲ್ಲಿರುವಾಗ ಪ್ರತಿಯೊಬ್ಬ ಸಚಿವ ರಾಜ್ಯ ಸಚಿವ ಮತ್ತು ಉಪ ಸಚಿವರು:

(ಎ) ★★ ★★

(ಬಿ) ರಸ್ತೆಯ ಪ್ರಯಾಣಗಳಿಗೆ ಪ್ರತಿ ಕಿಲೋಮೀಟರಿಗೆ ಆರು ರೂಪಾಯಿಯಂತೆ ರಸ್ತೆ ಮೈಲಿ ದರಕ್ಕೆ

(ಸಿ) ★★ ★★

(ಡಿ) ಪ್ರಯಾಣದ ದಿನಗಳಿಗೆ ಮತ್ತು ಯಾವುದೇ ಸ್ಥಳದಲ್ಲಿ ತಂಗಿದ ದಿನಗಳಿಗೆ ಒಂದು ದಿನಕ್ಕೆ ಇನ್ನೂರ ಐವತ್ತು ರೂಪಾಯಿಗಳ ದಿನಭತ್ಯಕ್ಕೆ

ಪರಂತು, ರಾಜ್ಯದ ಹೊರಗಿನ ಪ್ರವಾಸಗಳ ಸಂಬಂಧದಲ್ಲಿ, ಪ್ರಯಾಣದ ದಿನಗಳಿಗೆ ಮತ್ತು ಯಾವುದೇ ಸ್ಥಳದಲ್ಲಿ ತಂಗಿದ ದಿನಗಳಿಗೆ ದಿನನಿತ್ಯವು ಮೂರು ನೂರು ಐವತ್ತು ರೂಪಾಯಿಗಳಾಗಿರತಕ್ಕದ್ದು.

ಮತ್ತು, ಪರಂತು, ಸಚಿವರು, ರಾಜ್ಯ ಸಚಿವರು ಅಥವಾ ಉಪ ಸಚಿವರನ್ನು ರಾಜ್ಯದ ಅತಿಥಿಗಳೆಂದು ಪರಿಗಣಿಸಿದರೆ ಹಾಗೆ ರಾಜ್ಯದ ಅತಿಥಿ ಎಂದು ಸತ್ಕರಿಸಲಾದ ಅವಧಿಗೆ ಅವರು ನಾಲ್ಕನೇ ಒಂದರಷ್ಟು ದಿನಭತ್ಯವನ್ನು ಮಾತ್ರ ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

★★ ★★ ★★

ಅನುಬಂಧ II

ಕರ್ನಾಟಕ ವಿಧಾನಸಭೆ

ಹತ್ತನೇ ವಿಧಾನಸಭೆ

(ಆರನೇ ಅಧಿವೇಶನ)

(ಮುಂದುವರಿದ ಉಪವೇಶನಗಳು)

ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ವಿಧೇಯಕ, 1997

(1997ರ ವಿಧಾನಸಭಾ ವಿಧೇಯಕ ಸಂಖ್ಯೆ 35)

ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಕೆಲವು ತೆರಿಗೆ ಕಾನೂನುಗಳನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಕೆಲವು ತೆರಿಗೆ ಕಾನೂನುಗಳನ್ನು ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ನಲವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ: (1) ಈ ಅಧಿನಿಯಮವನ್ನು ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡ) ಅಧಿನಿಯಮ, 1997 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 1957ರ ಕರ್ನಾಟಕ ಅಧಿನಿಯಮ 25ರ ತಿದ್ದುಪಡಿ: ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರಲ್ಲಿ (1957ರ ಕರ್ನಾಟಕ ಅಧಿನಿಯಮ 25):

(1) 5ನೇ ಪ್ರಕರಣದ (1-ಕ) ಉಪ-ಪ್ರಕರಣದಲ್ಲಿ ''ಐವತ್ತು'' ಎಂಬ ಪದಗಳಿಗೆ ''ಆರವತ್ತು'' ಎಂಬ ಪದಗಳನ್ನು, 1997ರ ಏಪ್ರಿಲ್ ಮೊದಲನೇ ದಿನದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆಯೆಂದು ಭಾವಿಸತಕ್ಕದ್ದು;

(2) 17ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ''5, 5ಎ ಮತ್ತು 6-ಬಿ'' ಎಂಬ ಅಂಕಿಗಳು, ಪದ ಮತ್ತು ಅಕ್ಷರಗಳಿಗೆ ''5, 5-ಎ 6 ಮತ್ತು 6-ಬಿ'' ಎಂಬ

ಅಂಕಿಗಳು, ಪದ ಮತ್ತು ಅಕ್ಷರಗಳನ್ನು, 1997ರ ಏಪ್ರಿಲ್ ಮೊದಲನೇ ದಿನದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆಯೆಂದು ಭಾವಿಸತಕ್ಕದ್ದು;

(3) 19-ಎ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ''ಕೇಂದ್ರ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಉದ್ಯಮವು'' ಎಂಬ ಪದಗಳಿಗೆ ''ಅಥವಾ ಜಂಟಿ ವಲಯದಲ್ಲಿನ ಯಾವುದೇ ಅಂಥ ಉದ್ಯಮವು'' ಎಂಬ ಪದಗಳನ್ನು 1997ರ ಏಪ್ರಿಲ್ ಮೊದಲನೇ ದಿನದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆಯೆಂದು ಭಾವಿಸತಕ್ಕದ್ದು;

(4) 28-ಎ ಪ್ರಕರಣದ (2)ನೇ ಉಪ-ಪ್ರಕರಣದ (ಸಿ) ಖಂಡದಲ್ಲಿ ''ಕೊಬ್ಬರಿ'' ಎಂಬ ಪದದ ತರುವಾಯ ''ಹತ್ತಿ'' ಎಂಬ ಪದವನ್ನು ಮತ್ತು ''ಮೆಣಸು'' ಎಂಬ ಪದದ ತರುವಾಯ ''ರೆಕ್ಟಿಫೈಡ್ ಸ್ಪಿರಿಟ್'' ಎಂಬ ಪದಗಳನ್ನು ಸೇರಿಸತಕ್ಕದ್ದು;

(5) 30-ಕ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ''ಇನ್ನೂರೈವತ್ತು ರೂಪಾಯಿಗಳಿಗೆ ಆದರೆ ಐನೂರು ರೂಪಾಯಿಗಳವರೆಗಿರಬಹುದಾದ'' ಎಂಬ ಪದಗಳಿಗೆ ''ಐನೂರು ರೂಪಾಯಿಗಳಿಗೆ ಆದರೆ ಐದು ಸಾವಿರ ರೂಪಾಯಿಗಳವರೆಗಿರಬಹುದಾದ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(6) ಮೂರನೇ ಅನುಸೂಚಿಯಲ್ಲಿ, 3ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳ (3)ನೇ ಅಂಕಣದಲ್ಲಿ ''ಶೇಕಡಾ ಆರರಷ್ಟು'' ಎಂಬ ಪದಗಳಿಗೆ ''ಶೇಕಡಾ ನಾಲ್ಕರಷ್ಟು'' ಎಂಬ ಪದಗಳನ್ನು 1997ರ ಏಪ್ರಿಲ್ ಮೊದಲನೇ ದಿನದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆಯೆಂದು ಭಾವಿಸತಕ್ಕದ್ದು.

3. 1958ರ ಕರ್ನಾಟಕ ಅಧಿನಿಯಮ 30ರ ತಿದ್ದುಪಡಿ: ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958ರಲ್ಲಿ (1958ರ ಕರ್ನಾಟಕ ಅಧಿನಿಯಮ 30),-

3ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ,-

(ಎ) ''ಪ್ರವೇಶ ಪಡೆಯುವುದಕ್ಕಾಗಿನ ಪ್ರತಿಯೊಂದು ಸಂದಾಯದ ಮೇಲೆ'' ಎಂಬ ಪದಗಳ ತರುವಾಯ ''(ತೆರಿಗೆಯ ಮೊಬಲಗನ್ನು ಹೊರತುಪಡಿಸಿ)'' ಎಂಬ ಪದಗಳು ಮತ್ತು ಆವರಣಗಳನ್ನು ಸೇರಿಸತಕ್ಕದ್ದು;

(ಬಿ) ''ಈ ಕೆಳಕಂಡ ದರಗಳಲ್ಲಿ ವಿಧಿಸತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು, ಎಂದರೆ:'' ಎಂಬ ಪದಗಳಿಗೆ ''ಅಂಥ ಸಂದಾಯದ ಮೇಲೆ ಕೇಕಡಾ ಎಪ್ಪತ್ತೈದರಂತೆ ವಿಧಿಸತಕ್ಕದ್ದು ಮತ್ತು ಅದನ್ನು ರಾಜ್ಯ

ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಸಿ) ಕೋಷ್ಟಕವನ್ನು ಬಿಟ್ಟುಬಿಡತಕ್ಕದ್ದು;

(2) 3-ಎ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು;

(3) 3-ಸಿ ಪ್ರಕರಣದಲ್ಲಿ,-

(ಎ) (1)ನೇ ಉಪ-ಪ್ರಕರಣದಲ್ಲಿ ''ಮತ್ತು 3-ಎ'' ಎಂಬ ಪದ, ಅಂಕಿ ಮತ್ತು ಅಕ್ಷರವನ್ನು ಬಿಟ್ಟುಬಿಡತಕ್ಕದ್ದು;

(ಬಿ) (2)ನೇ ಉಪ-ಪ್ರಕರಣದಲ್ಲಿ:

(i) ''ಮತ್ತು 3ಎ'' ಎಂಬ ಪದ, ಅಂಕಿ ಮತ್ತು ಅಕ್ಷರವನ್ನು ಬಿಟ್ಟುಬಿಡತಕ್ಕದ್ದು

(ii) ವಿವರಣೆಯನ್ನು ಬಿಟ್ಟುಬಿಡತಕ್ಕದ್ದು.

(4) 4ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ, ''3 ಮತ್ತು 3ಎ ಪ್ರಕರಣಗಳ ಮೇರೆಗೆ ವಿಧಿಸಬಹುದಾದ ತೆರಿಗೆ ಮತ್ತು ಅಧಿಭಾರ'' ಎಂಬ ಪದಗಳು ಬರುವ ಎರಡು ಕಡೆಗಳಲ್ಲೂ ಅವುಗಳಿಗೆ ''3ನೇ ಪ್ರಕರಣದ ಮೇರೆಗೆ ವಿಧಿಸಬಹುದಾದ ತೆರಿಗೆ'' ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು:

(5) 4ಎ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ,-

(ಎ) '' ಮತ್ತು ಅಧಿಭಾರಕ್ಕೆ'' ಎಂಬ ಪದಗಳನ್ನು ಮತ್ತು ''ಮತ್ತು 3ಎ ಪ್ರಕರಣ'' ಎಂಬ ಪದಗಳು, ಅಂಕಿ ಮತ್ತು ಅಕ್ಷರವನ್ನು ಬಿಟ್ಟುಬಿಡತಕ್ಕದ್ದು;

(ಬಿ) ಕೋಷ್ಟಕಕ್ಕೆ ಈ ಕೆಳಗಿನ ಕೋಷ್ಟಕವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:

ಕೋಷ್ಟಕ

ಕ್ರಮ ಸಂಖ್ಯೆ	ಸ್ಥಳೀಯ ಪ್ರಾಧಿಕಾರಗಳು, ಅವುಗಳ ಜನ ಸಂಖ್ಯೆಯು	ತೆರಿಗೆಯ ದರ
1	2	3
(ಎ)	ಇಪ್ಪತ್ತೈದು ಸಾವಿರ ಮೀರದಿದ್ದರೆ;	ಒಟ್ಟು ಸಂಗ್ರಹಣೆಯ ಸಾಮರ್ಥ್ಯದ ಶೇಕಡಾ ಹತ್ತು
(ಬಿ)	ಇಪ್ಪತ್ತೈದು ಸಾವಿರ ಮೀರಿದ್ದು ಆದರೆ ಐವತ್ತು ಸಾವಿರ ಮೀರದಿದ್ದರೆ;	ಒಟ್ಟು ಸಂಗ್ರಹಣೆಯ ಸಾಮರ್ಥ್ಯದ ಶೇಕಡಾ ಹದಿನೇಳೂವರೆ
(ಸಿ)	ಐವತ್ತು ಸಾವಿರ ಮೀರಿದ್ದು, ಆದರೆ ಎಪ್ಪತ್ತೈದು ಸಾವಿರ ಮೀರದಿದ್ದರೆ	ಒಟ್ಟು ಸಂಗ್ರಹಣೆಯ ಸಾಮರ್ಥ್ಯದ ಶೇಕಡಾ ಇಪ್ಪತ್ತೈದು.

(6) 4ಬಿ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ''3ಎ'' ಎಂಬ ಅಂಕಿ ಮತ್ತು ಅಕ್ಷರವನ್ನು ಬಿಟ್ಟುಬಿಡತಕ್ಕದ್ದು;

(7) 4ಸಿ ಪ್ರಕರಣದ ''3ಎ'' ಎಂಬ ಅಂಕಿ ಮತ್ತು ಅಕ್ಷರವನ್ನು ಬಿಟ್ಟುಬಿಡತಕ್ಕದ್ದು;

(8) 6ಎ ಪ್ರಕರಣದ (1ಎ) ಉಪ-ಪ್ರಕರಣದಲ್ಲಿ ''ಅಧಿಭಾರ'' ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು;

(9) 7ನೇ ಪ್ರಕರಣದಲ್ಲಿ ವಿವರಣೆಯನ್ನು ಬಿಟ್ಟುಬಿಡತಕ್ಕದ್ದು;

(10) 8ಎ ಪ್ರಕರಣದಲ್ಲಿ ''ಅಧಿಭಾರ'' ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು;

(11) 9ನೇ ಪ್ರಕರಣದಲ್ಲಿ:

(ಎ) (1) (2) ಮತ್ತು (3)ನೇ ಉಪ-ಪ್ರಕರಣಗಳಲ್ಲಿ ''ಅಧಿಭಾರವನ್ನು ಒಳಗೊಂಡು'' ಎಂಬ ಪದಗಳು ಬರುವ ಕಡೆಗಳಲ್ಲೆಲ್ಲಾ ಅವುಗಳನ್ನು ಬಿಟ್ಟುಬಿಡತಕ್ಕದ್ದು;

(ಬಿ) (2)ನೇ ಉಪ-ಪ್ರಕರಣದಲ್ಲಿ (i) ಖಂಡದಲ್ಲಿ ''ಅಧಿಭಾರ'' ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು;

(12) 9ಸಿ ಪ್ರಕರಣದ ವಿವರಣೆಯಲ್ಲಿ ''ಅಧಿಭಾರ'' ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು.

4. 1957ರ ಕರ್ನಾಟಕ ಅಧಿನಿಯಮ 22ರ ತಿದ್ದುಪಡಿ.- ಕರ್ನಾಟಕ ಕೃಷಿ ಆದಾಯ ತೆರಿಗೆ ಅಧಿನಿಯಮ, 1957ರಲ್ಲಿ (1957ರ ಕರ್ನಾಟಕ ಅಧಿನಿಯಮ 22);-

(1) (2)ನೇ ಪ್ರಕರಣದಲ್ಲಿ (ಪಿ) ಖಂಡದಲ್ಲಿ ''ಕೃಷಿ ಆದಾಯವನ್ನು ಪಡೆದುಕೊಳ್ಳುತ್ತಿದ್ದಂಥ ವಿಘಟನೆಯಾದ ಅಥವಾ ವ್ಯಾಪಾರವನ್ನು ಮುಂದುವರಿಸದಿರುವ ಅಂಥ ಫರ್ಮಿನಿಂದ ಆದಾಯವನ್ನು ಪಡೆದುಕೊಳ್ಳುವವನು'' ಎಂಬ ಪದಗಳಿಗೆ ''ಕೃಷಿ ಆದಾಯವನ್ನು ಪಡೆದುಕೊಳ್ಳುತ್ತಿದ್ದಂಥ ವಿಘಟನೆಯಾದ ಅಥವಾ ವ್ಯಾಪಾರವನ್ನು ಮುಂದುವರಿಸದಿರುವ ಅಂಥ ಫರ್ಮಿನಿಂದ ಅಥವಾ ವ್ಯಕ್ತಿಗಳ ಸಂಸ್ಥೆಯಿಂದ ಆದಾಯವನ್ನು ಪಡೆದುಕೊಳ್ಳುವವನು'' ಎಂಬ ಪದಗಳನ್ನು 1975ರ ಏಪ್ರಿಲ್ ಮೊದಲನೇ ದಿನದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು.

(2) 26ನೇ ಪ್ರಕರಣದಲ್ಲಿ

(i) (1)ನೇ ಮತ್ತು (2)ನೇ ಉಪ-ಪ್ರಕರಣಗಳಿಗೆ ಈ ಮುಂದಿನದನ್ನು 1975ರ ಏಪ್ರಿಲ್ ಮೊದಲನೇ ದಿನಾಂಕದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು, ಎಂದರೆ:

''(1) 3ನೇ ಪ್ರಕರಣದಲ್ಲಿ ಏನೇ ಇದ್ದರೂ, ಯಾವುದೇ ಕಂಪನಿ, ಫರ್ಮ್ ಅಥವಾ ವ್ಯಕ್ತಿಗಳ ಸಂಸ್ಥೆಯು ಕೃಷಿ ಆದಾಯವನ್ನು ಪಡೆದಿರುವಲ್ಲಿ ಮತ್ತು ಅಂಥ ಆದಾಯವನ್ನು ಪಡೆಯಲಾದಂಥ ವ್ಯವಹಾರವನ್ನು ಯಾವುದೇ ತೆರಿಗೆ ನಿರ್ಧರಣಾ ವರ್ಷದಲ್ಲಿ ಮುಂದುವರಿಸದಿರುವಲ್ಲಿ ಅಥವಾ ಅಂಥ ಫರ್ಮ್ ಅಥವಾ ವ್ಯಕ್ತಿಗಳ ಸಂಸ್ಥೆಯು ವಿಘಟನೆಯಾದಲ್ಲಿ ಆ ತೆರಿಗೆ ನಿರ್ಧರಣಾ ವರ್ಷದ ಹಿಂದಿನ ವರ್ಷದ ಮುಕ್ತಾಯದಿಂದ ಹಾಗೆ ಮುಂದುವರಿಸದಿರುವ ಅಥವಾ ವಿಘಟನೆಯಾದ ದಿನಾಂಕದವರೆಗಿನ ಅವಧಿಯ ಆದಾಯಕ್ಕೆ ಕೃಷಿ ಆದಾಯ ತೆರಿಗೆ ಅಧಿಕಾರಿಯ ವಿವೇಚಾನುಸಾರವಾಗಿ, ಆ ತೆರಿಗೆ ನಿರ್ಧರಣಾ ವರ್ಷದಲ್ಲಿ ತೆರಿಗೆ ವಿಧಿಸಬಹುದು.

(2) ಪ್ರತಿಯೊಂದು ಪೂರ್ಣಗೊಂಡ ಹಿಂದಿನ ವರ್ಷದ ಅಥವಾ ಅಂಥ ಅವಧಿಯಲ್ಲಿ ಒಳಗೊಂಡ ಹಿಂದಿನ ವರ್ಷದ ಭಾಗದ ಒಟ್ಟು ಆದಾಯವನ್ನು ಆ ತೆರಿಗೆ ನಿರ್ಧರಣಾ ವರ್ಷದಲ್ಲಿ ಜಾರಿಯಲ್ಲಿದ್ದ ದರ ಅಥವಾ ದರಗಳಲ್ಲಿ ತೆರಿಗೆಗೆ ಒಳಪಡಿಸತಕ್ಕದ್ದು ಮತ್ತು ಅಂಥ ಪ್ರತಿಯೊಂದು ಪೂರ್ಣಗೊಂಡ ಹಿಂದಿನ ವರ್ಷದ ಅಥವಾ ಯಾವುದೇ ಹಿಂದಿನ ವರ್ಷದ ಭಾಗದ ಸಂಬಂಧದಲ್ಲಿ ಪ್ರತ್ಯೇಕ ತೆರಿಗೆ ನಿರ್ಧರಣೆಯನ್ನು ಮಾಡತಕ್ಕದ್ದು.''

(ii) (3)ನೇ ಉಪ-ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:

"(3) ಅಂಥ ವ್ಯವಹಾರವನ್ನು ಮುಂದುವರಿಸದಿರುವ ಯಾವೊಬ್ಬ ವ್ಯಕ್ತಿಯು ಅಥವಾ ವಿಘಟನೆಯಾದ ಫರ್ಮ್ ಅಥವಾ ಸಂಸ್ಥೆ ಪ್ರತಿಯೊಬ್ಬ ಸದಸ್ಯನು ಹಾಗೆ ಮುಂದುವರಿಸದಿರುವ ಅಥವಾ ವಿಘಟನೆಯಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಅದರ ಬಗ್ಗೆ ನೋಟಿಸನ್ನು ಕೃಷಿ ಆದಾಯ ತೆರಿಗೆ ಸಹಾಯಕ ಆಯುಕ್ತನಿಗೆ ಕಳುಹಿಸತಕ್ಕದ್ದು ಮತ್ತು ಅಂಥ ಯಾವೊಬ್ಬ ವ್ಯಕ್ತಿ ಅಥವಾ ಸಂದರ್ಭಾನುಸಾರ ಸದಸ್ಯನು ಈ ಉಪ ಪ್ರಕರಣದ ಮೂಲಕ ಅಗತ್ಯಪಡಿಸಿದ ನೋಟಿಸನ್ನು ನೀಡಲು ವಿಫಲನಾದಲ್ಲಿ, ಅಂಥ ಅಧಿಕಾರಿಯು, ಕಂಪನಿ, ಫರ್ಮ್ ಅಥವಾ ವ್ಯಕ್ತಿಗಳ ಸಂಸ್ಥೆಯ ಸಂಬಂಧದಲ್ಲಿ ಹಾಗೆ ಮುಂದುವರಿಸದಿರುವ ಅಥವಾ ವಿಘಟನೆಯಾದ ದಿನಾಂಕದವರೆಗೆ ತರುವಾಯ, ತೆರಿಗೆ ನಿರ್ಧರಣೆ ಮಾಡಿದ ಕೃಷಿ ಆದಾಯ ತೆರಿಗೆಯ ಮೊಬಲಗನ್ನು ಮೀರದಂಥ ಮೊತ್ತವನ್ನು ದಂಡದ ರೂಪದಲ್ಲಿ ಆತನಿಂದ ವಸೂಲು ಮಾಡತಕ್ಕದ್ದೆಂದು ನಿರ್ದೇಶಿಸಬಹುದು."

(iii) ಪರಂತುಕವನ್ನು ಒಳಗೊಂಡಂತೆ (4) ಮತ್ತು (5)ನೇ ಉಪ ಪ್ರಕರಣಗಳಿಗೆ ಈ ಮುಂದಿನದನ್ನು 1973 ಏಪ್ರಿಲ್ ಮೊದಲನೇ ದಿನದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು, ಎಂದರೆ:

"(4) ವರ್ಷದಲ್ಲಿ ಕೃಷಿ ವರಮಾನವನ್ನು ಪಡೆದಿರುವಂಥ ಯಾವುದೇ ಕಂಪನಿ, ಫರ್ಮ್ ಅಥವಾ ವ್ಯಕ್ತಿಗಳ ಸಂಸ್ಥೆಯು ವ್ಯವಹಾರವನ್ನು ಮುಂದುವರಿಸದಿರುವಲ್ಲಿ ಅಥವಾ ಅಂಥ ಫರ್ಮ್ ಅಥವಾ ವ್ಯಕ್ತಿಗಳ ಸಂಸ್ಥೆಯನ್ನು ವಿಘಟಿಸಲಾಗಿರುವಲ್ಲಿ, ಹಾಗೆ ಮುಂದುವರಿಸದಿರುವ ಅಥವಾ ವಿಘಟನೆಯಾದ ನಂತರ ಪಡೆಯುವ ಯಾವುದೇ ಮೊತ್ತವನ್ನು ಆ ವ್ಯಕ್ತಿಯ ಆದಾಯವೆಂದು ಭಾವಿಸತಕ್ಕದ್ದು ಮತ್ತು ವ್ಯವಹಾರ ನಡೆಸುತ್ತಿರುವ ವ್ಯಕ್ತಿಯು, ಹಾಗೆ ಮುಂದುವರಿಸದಿರುವುದಕ್ಕೆ ಅಥವಾ ವಿಘಟನೆಯಾಗುವುದಕ್ಕೆ ಮೊದಲು ಅಂಥ ಮೊತ್ತವನ್ನು ಪಡೆದಿದ್ದಲ್ಲಿ ಆ ಮೊತ್ತವನ್ನು ಅವನ ಒಟ್ಟು ಆದಾಯದಲ್ಲಿ ಸೇರಿಸಲಾಗುತ್ತಿದ್ದ ಹಾಗೆಯೇ ಆ ವರ್ಷದಲ್ಲಿ ಪಡೆದ ಮೊತ್ತವೆಂಬಂತೆ ತೆರಿಗೆಗೊಳಪಡಿಸತಕ್ಕದ್ದು.

ವಿವರಣೆ: ಸಂದೇಹಗಳ ನಿವಾರಣೆಗಾಗಿ, ಇಲ್ಲಿಯವರೆಗೆ ಫರ್ಮ್ ಅಥವಾ ಸಂಸ್ಥೆಯೆಂದು ನಿರ್ಧರಿಸಲಾದ ಫರ್ಮ್ ಅಥವಾ ಸಂಸ್ಥೆ ಅಥವಾ ಸಂದರ್ಭಾನುಸಾರ ಕಂಪನಿಯ ವ್ಯವಹಾರವನ್ನು ಮುಂದುವರಿಸದಿರುವುದಕ್ಕೆ ಅಥವಾ ವಿಘಟನೆಯಾಗುವುದಕ್ಕೆ ಮೊದಲು ಬೆಳೆಯನ್ನು ಕೊಯ್ಲು ಮಾಡಿ ವಿಲೆ ಮಾಡಲಾಗಿದ್ದು, ಆದರೆ ಅಂಥ ಬೆಳೆಗೆ ಪೂರ್ಣ ಹಣವನ್ನು ಪಡೆಯದೇ ಇರುವಲ್ಲಿ, ಅಥವಾ ಬೆಳೆಯನ್ನು ಕೊಯ್ಲು ಮಾಡಲಾಗಿದ್ದು ವಿಲೆ ಮಾಡದಿರುವಲ್ಲಿ ಅಂಥ ಬೆಳೆಯ ಆದಾಯವನ್ನು,

ಕಂಪನಿ, ಫರ್ಮ್ ಅಥವಾ ಸಂಸ್ಥೆಯು ಅದನ್ನು ಪಡೆದ ಅಥವಾ ಪಡೆಯಬಹುದಾಗಿದ್ದ ವರ್ಷ ಅಥವಾ ವರ್ಷಗಳ ಆದಾಯವೆಂದು ಭಾವಿಸತಕ್ಕದ್ದು ಮತ್ತು ಅಂಥ ವರ್ಷ ಅಥವಾ ವರ್ಷಗಳಿಗಾಗಿ ಫರ್ಮ್ ಅಥವಾ ಸಂಸ್ಥೆಯು ಅಸ್ತಿತ್ವದಲ್ಲಿದೆಯೆಂದು ಭಾವಿಸತಕ್ಕದ್ದು ಮತ್ತು ಹಾಗೆ ಮುಂದುವರಿಸದಿರುವುದಕ್ಕೆ ಅಥವಾ ವಿಘಟನೆಗೆ ನಿಕಟಪೂರ್ವದಲ್ಲಿ ಅದು ನಿಯತವಾಗಿ ಅನುಸರಿಸುತ್ತಿದ್ದ ಲೆಕ್ಕದ ವಿಧಾನಕ್ಕನುಸಾರವಾಗಿ ಕಂಪನಿ, ಫರ್ಮ್ ಅಥವಾ ಸಂಸ್ಥೆಯ ಆದಾಯವೆಂದು ತೆರಿಗೆ ನಿರ್ಧರಣೆ ಮಾಡತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ.

(5) (1)ನೇ ಉಪ ಪ್ರಕರಣ ಅಥವಾ (2)ನೇ ಉಪ ಪ್ರಕರಣದ ಅಡಿಯಲ್ಲಿ ತೆರಿಗೆ ನಿರ್ಧರಣೆಯನ್ನು ಮಾಡಬೇಕಾಗಿರುವಲ್ಲಿ, ಕೃಷಿ ಆದಾಯ ತೆರಿಗೆ ಅಧಿಕಾರಿಯು ಯಾವ ವ್ಯಕ್ತಿಯ ಕೃಷಿ ಆದಾಯದ ತೆರಿಗೆ ನಿರ್ಧರಣೆ ಮಾಡಬೇಕಾಗಿದೆಯೋ ಆ ವ್ಯಕ್ತಿಗೆ ಅಥವಾ ಫರ್ಮ್ ಅಥವಾ ಸಂಸ್ಥೆಯ ಸಂದರ್ಭದಲ್ಲಿ ಆ ಫರ್ಮ್ ಅಥವಾ ಸಂಸ್ಥೆಯು ವ್ಯವಹಾರವನ್ನು ಮುಂದುವರಿಸದಿರುವ ಅಥವಾ ಆ ಫರ್ಮ್ ಅಥವಾ ಸಂಸ್ಥೆಯನ್ನು ವಿಘಟಿಸಿದ ಸಮಯದಲ್ಲಿ ಅದರ ಸದಸ್ಯನಾಗಿದ್ದ ಯಾವೊಬ್ಬ ವ್ಯಕ್ತಿಗೆ ಅಥವಾ ಕಂಪನಿಯ ಸಂದರ್ಭದಲ್ಲಿ ಅದರ ಪ್ರಧಾನ ಅಧಿಕಾರಿಗೆ ಅಥವಾ ಸಂದರ್ಭಾನುಸಾರ ಆದಾಯ ಪಡೆಯುವವನಿಗೆ 18ನೇ ಪ್ರಕರಣದ (2)ನೇ ಉಪ-ಪ್ರಕರಣದ ಅಡಿಯಲ್ಲಿ ನೋಟಿಸಿನಲ್ಲಿ ಸೇರಿಸಿರುವುದು ಜಾರಿಗೊಳಿಸತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳು ಆ ನೋಟೀಸು ಆ ಉಪ ಪ್ರಕರಣದ ಅಡಿಯಲ್ಲಿ ನೀಡಲಾದ ನೋಟೀಸಾಗಿದ್ದರೆ ಹೇಗೋ ಹಾಗೆ ಅಷ್ಟರಮಟ್ಟಿಗೆ, ಅದಕ್ಕನುಸಾರವಾಗಿ ಅನ್ವಯವಾಗತಕ್ಕದ್ದು.

(6) ಇದುವರೆಗೆ ಮುಂದುವರಿಸಿರುವ ವ್ಯವಹಾರವೆಂದು ನಿರ್ಧರಿತವಾದ ಕಂಪನಿ, ಫರ್ಮ್ ಅಥವಾ ಸಂಸ್ಥೆಯ ಸಂಬಂಧದಲ್ಲಿ ಅಥವಾ ಇದುವರೆಗೆ ವಿಘಟಿತವಾಗಿಲ್ಲವೆಂದು ನಿರ್ಧರಿತವಾದ ಫರ್ಮ್ ಅಥವಾ ಸಂಸ್ಥೆಯ ಸಂಬಂಧದಲ್ಲಿ ಅಂಥ ಆದೇಶವನ್ನು ಹೊರಡಿಸದಿರುವಲ್ಲಿ, ಈ ಅಧಿನಿಯಮದ ಉದ್ದೇಶಕ್ಕಾಗಿ ಅಂಥ ಫರ್ಮ್ ಅಥವಾ ಸಂಸ್ಥೆಯನ್ನು ವಿಘಟಿತವಾಗಿದೆಯೆಂದು ಭಾವಿಸತಕ್ಕದ್ದಲ್ಲ ಅಥವಾ ಅಂಥ ಕಂಪನಿ, ಫರ್ಮ್ ಅಥವಾ ಸಂಸ್ಥೆಯ ವ್ಯವಹಾರವನ್ನು ಮುಂದುವರಿಸಿಲ್ಲವೆಂದು ಭಾವಿಸತಕ್ಕದ್ದಲ್ಲ.

(7) 32ಎ, 34, 35, 36, 37 ಅಥವಾ 55ನೇ ಪ್ರಕರಣಗಳಲ್ಲಿ ಏನೇ ಇದ್ದರೂ, ಇದುವರೆಗೆ ಫರ್ಮ್ ಅಥವಾ ಸಂಸ್ಥೆ ಅಥವಾ ಕಂಪನಿಯೆಂದು ನಿರ್ಧರಿತವಾದ ಫರ್ಮ್ ಅಥವಾ ಸಂಸ್ಥೆಯ ವ್ಯವಹಾರವನ್ನು ನಿಲ್ಲಿಸುವ ಮೊದಲು ಅಥವಾ ಅದರ ವಿಘಟನೆಯ ಮೊದಲು, ಬೆಳೆಯನ್ನು ಕೊಯ್ಲು ಮಾಡಿ ಮಾರಾಟ ಮಾಡಲಾಗಿದ್ದು ಅಂಥ ಬೆಳೆಗೆ ಪೂರ್ಣ ಹಣ ಸಂದಾಯವಾಗದೆ ಇದ್ದರೆ ಅಥವಾ

ಬೆಳೆಯನ್ನು ಕೊಯ್ಲು ಮಾಡಲಾಗಿದ್ದು ಮಾರಾಟ ಮಾಡಿಲ್ಲದಿದ್ದರೆ, ತೆರಿಗೆ ನಿರ್ಧರಣೆ, ಪುನರ್ ನಿರ್ಧರಣೆ ಅಥವಾ ತೆರಿಗೆ ನಿರ್ಧರಣೆಯ ಪುನರ್ ಪರಿಶೀಲನೆಯ ಸಂಬಂಧದಲ್ಲಿ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ನಿರ್ದಿಷ್ಟಪಡಿಸಲಾದ ಕಾಲಮಿತಿಯ ಅವಧಿಯೊಳಗೆ ಅಥವಾ ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ಅಧಿನಿಯಮ 1997 ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳೊಳಗೆ, ಇವೆರಡರಲ್ಲಿ ಯಾವುದು ತರುವಾಯವೋ, ಆ ಅವಧಿಯೊಳಗೆ ಅಂಥ ಬೆಳೆಯ ಆದಾಯವನ್ನು ನಿರ್ಧರಿಸಲು ಅಥವಾ ಪುನರ್ ನಿರ್ಧರಿಸಲು ಅಥವಾ ಅಂಥ ಆದಾಯದ ಯಾವುದೇ ನಿರ್ಧರಣೆ ಅಥವಾ ಪುನರ್ ನಿರ್ಧರಣೆಯನ್ನು ಪುನರ್ ಪರಿಶೀಲಿಸಲು ವ್ಯವಹರಣೆಗಳನ್ನು ಪ್ರಾರಂಭಿಸಬಹುದು.''

(iv) ಹಾಗೆ ಪ್ರತಿಯೋಜಿಸಲಾದ (1) ಮತ್ತು (5)ನೇ ಉಪ-ಪ್ರಕರಣಗಳಲ್ಲಿ ''ಕೃಷಿ ಆದಾಯ ತೆರಿಗೆ ಅಧಿಕಾರಿ'' ಎಂಬ ಪದಗಳು ಬರುವ ಎರಡು ಕಡೆಗಳಲ್ಲೂ ಅವುಗಳಿಗೆ ''ಕೃಷಿ ಆದಾಯ ತೆರಿಗೆ ಅಸಿಸ್ಟೆಂಟ್ ಕಮೀಷನರು'' ಎಂಬ ಪದಗಳನ್ನು 1993 ಫೆಬ್ರವರಿ 4ನೇ ದಿನದಿಂದ ಪರಿಣಾಮಕಾರಿಯಾಗುವಂತೆ ಪ್ರತಿಯೋಜಿಸಿರುವುದಾಗಿ ಭಾವಿಸತಕ್ಕದ್ದು.

5. **ತೆರಿಗೆಗಳ ಮಾನ್ಯೀಕರಣ, ಇತ್ಯಾದಿ:** (1) ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಏನೇ ಇದ್ದರೂ, 1975 ಏಪ್ರಿಲ್ ಮೊದಲನೇ ದಿನದಂದು ಅಥವಾ ಅದರ ತರುವಾಯ ಮತ್ತು ಈ ಅಧಿನಿಯಮ ಪ್ರಾರಂಭದ ಮೊದಲು (ಇಲ್ಲಿ ಇನ್ನು ಮುಂದೆ ಸದರಿ ಅಧಿನಿಯಮವೆಂದು ಉಲ್ಲೇಖಿತವಾಗುವ) ಕರ್ನಾಟಕ ಕೃಷಿ ಆದಾಯ ತೆರಿಗೆ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 22) ಉಪಬಂಧಗಳ ಅಡಿಯಲ್ಲಿ ಮಾಡಲಾದ ಅಥವಾ ಮಾಡಿದೆಯೆಂದು ತಾತ್ಪರ್ಯವಾಗುವ ಯಾವುದೇ ಕೃತ್ಯ ಅಥವಾ ಕೈಗೊಳ್ಳಲಾದ ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸಲಾದ ಯಾವುದೇ ಕ್ರಮವನ್ನು (ತೆರಿಗೆಯ ಅಥವಾ ತೆರಿಗೆಯ ಮೂಲಕವೆಂದು ತಾತ್ಪರ್ಯವಾಗುವ ಯಾವುದೇ ಮೊಬಲಗಿನ ವಿಧಿಸುವಿಕೆ, ತೆರಿಗೆ ನಿರ್ಧರಣೆ, ಪುನರ್‌ನಿರ್ಧರಣೆ, ತೆರಿಗೆ ನಿರ್ಧರಣೆಯ ಪುನರ್ ಪರಿಶೀಲನೆ ಮತ್ತು ಸಂಗ್ರಹಣೆಗಾಗಿ ನೀಡಲಾದ ಯಾವುದೇ ನೋಟಿಸು ಅಥವಾ ಮಾಡಲಾದ ಯಾವುದೇ ಆದೇಶ ಮತ್ತು ನಡೆಸಿದ ಯಾವುದೇ ವ್ಯವಹರಣೆಗಳೂ ಸೇರಿದಂತೆ) ಹಾಗೆ ಮಾಡಲಾದ ಅಥವಾ ಕೈಗೊಳ್ಳಲಾದ ಅಥವಾ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ತಾತ್ಪರ್ಯವಾಗುವ ಕೃತ್ಯ ಅಥವಾ ಕ್ರಮ ಅಥವಾ ನೀಡಲಾದ ನೋಟೀಸು ಅಥವಾ ಮಾಡಲಾದ ಆದೇಶ ಅಥವಾ ನಡೆಸಲಾದ ವ್ಯವಹರಣೆಯು, ಈ ಅಧಿನಿಯಮದ 4ನೇ ಪ್ರಕರಣದ (1)ನೇ ಉಪ-ಪ್ರಕರಣದ ಮತ್ತು (2)ನೇ ಉಪ-ಪ್ರಕರಣ (i) ಮತ್ತು (iii)ನೇ ಖಂಡಗಳ ಮೂಲಕ ತಿದ್ದುಪಡಿಯಾದಂತೆ ಈ ಅಧಿನಿಯಮದ ಉಪಬಂಧಗಳಿಗೆ

ಸುಸಂಗತವಾಗಿರುವಷ್ಟರ ಮಟ್ಟಿಗೆ, ಅಂಥ ಕ್ರಮ, ಕೃತ್ಯ, ನೋಟೀಸು, ಆದೇಶ ಅಥವಾ ವ್ಯವಹರಣೆಯನ್ನು ಈ ಅಧಿನಿಯಮದ 4ನೇ ಪ್ರಕರಣದ (1)ನೇ ಉಪ-ಪ್ರಕರಣದ ಮತ್ತು (2)ನೇ ಉಪ-ಪ್ರಕರಣದ (i) ಮತ್ತು (iii)ನೇ ಖಂಡಗಳ ಮೂಲಕ ತಿದ್ದುಪಡಿಯಾದಂತೆ ಈ ಅಧಿನಿಯಮದ ಅಡಿಯಲ್ಲಿ ಕೈಗೊಳ್ಳಲಾಗಿದ್ದರೆ, ಮಾಡಲಾಗಿದ್ದರೆ, ಹೊರಡಿಸಲಾಗಿದ್ದರೆ ಅಥವಾ ನಡೆಸಲಾಗಿದ್ದರೆ ಹೇಗೋ ಹಾಗೆ ಎಲ್ಲಾ ಉದ್ದೇಶಗಳಿಗಾಗಿ ಸಿಂಧುವೆಂದು ಮತ್ತು ಪರಿಣಾಮಕಾರಿಯೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ,-

(ಎ) ತೆರಿಗೆಯ ನಿರ್ಧರಣೆ, ಮರುನಿರ್ಧರಣೆ, ತೆರಿಗೆ ನಿರ್ಧರಣೆಯ ಪುನರ್ ಪರಿಶೀಲನೆ, ಅಂಥ ತೆರಿಗೆಯ ವಿಧಿಸುವಿಕೆ ಅಥವಾ ಸಂಗ್ರಹಣೆಯ ಸಂಬಂಧದಲ್ಲಿ ಯಾವುದೇ ಪ್ರಾಧಿಕಾರವು ಮಾಡಿದ ಅಥವಾ ನಡೆಸಿದ ಎಲ್ಲ ಕೃತ್ಯಗಳು, ಕಾರ್ಯಗಳು ಅಥವಾ ವ್ಯವಹರಣೆಗಳನ್ನು ಎಲ್ಲ ಉದ್ದೇಶಗಳಿಗಾಗಿ ಕಾನೂನಿಗೆ ಅನುಸಾರವಾಗಿ ಮಾಡಲಾಗಿದೆ, ನಡೆಸಲಾಗಿದೆ ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಯಾವಾಗಲೂ ಮಾಡಲಾಗಿದೆ, ನಡೆಸಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು;

(ಬಿ) ಅಂಥ ಯಾವುದೇ ತೆರಿಗೆಯ ಮರುಪಾವತಿಗೆ ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧೀಕರಣದಲ್ಲಿ ಅಥವಾ ಯಾವುದೇ ಪ್ರಾಧಿಕಾರದ ಮುಂದೆ ಯಾವುದೇ ದಾವೆ ಅಥವಾ ಇತರ ವ್ಯವಹರಣೆಯನ್ನು ಪುರಸ್ಕರಿಸತಕ್ಕದ್ದಲ್ಲ ಅಥವಾ ಮುಂದುವರಿಸತಕ್ಕದ್ದಲ್ಲ; ಮತ್ತು

(ಸಿ) ಯಾವುದೇ ನ್ಯಾಯಾಲಯವು ಅಂಥ ಯಾವುದೇ ತೆರಿಗೆ ಮರುಪಾವತಿಯನ್ನು ನಿರ್ದೇಶಿಸುವ ಯಾವುದೇ ಡಿಕ್ರಿ ಅಥವಾ ಆದೇಶವನ್ನು ಜಾರಿಗೊಳಿಸತಕ್ಕದ್ದಲ್ಲ.

(2) ಸಂದೇಹಗಳ ನಿವಾರಣೆಗೆ, (1)ನೇ ಉಪ-ಪ್ರಕರಣದಲ್ಲಿರುವ ಯಾವುದೂ, ಯಾವನೇ ವ್ಯಕ್ತಿಯನ್ನು:

(ಎ) (1)ನೇಯ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ತೆರಿಗೆ ನಿರ್ಧರಣೆ, ಪುನರ್ ನಿರ್ಧರಣೆ, ತೆರಿಗೆಯ ಪುನರ್ ಪರಿಶೀಲನೆ, ತೆರಿಗೆಯ ವಿಧಿಸುವಿಕೆ ಅಥವಾ ಸಂಗ್ರಹಣೆಯನ್ನು, ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಪ್ರಶ್ನಿಸುವುದನ್ನು; ಅಥವಾ

(ಬಿ) ಈ ಅಧಿನಿಯಮದಿಂದ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ತೆರಿಗೆಯ ರೂಪದಲ್ಲಿ ಅವನಿಂದ ಬಾಕಿಯಿರುವ

ಮೊಬಲಗಿಗಿಂತ ಹೆಚ್ಚಿಗೆಯಾಗಿ ಅವನು ಸಂದಾಯ ಮಾಡಿದ ಯಾವುದೇ ತೆರಿಗೆಯ ಮರು ಪಾವತಿಗಾಗಿ ಕ್ಲೇಮು ಮಾಡುವುದನ್ನು,

- ನಿವಾರಿಸುವುದಾಗಿ ಭಾವಿಸತಕ್ಕದ್ದಲ್ಲ ಎಂದು ಈ ಮೂಲಕ ಘೋಷಿಸಲಾಗಿದೆ.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

1997-98ನೇ ಸಾಲಿನ ಬಜೆಟ್ ಭಾಷಣದ ಸ್ಪಷ್ಟ ಆಶಯವನ್ನು ವ್ಯಕ್ತಪಡಿಸುವುದಕ್ಕಾಗಿ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಕರ್ನಾಟಕ ಚಲನಚಿತ್ರಗಳ ವಾಣಿಜ್ಯ ಸಂಸ್ಥೆಯು ಸಲ್ಲಿಸಿದ್ದ ಮನವಿಯನ್ನು ಪರಿಶೀಲಿಸಿದ ತರುವಾಯ, ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958ನ್ನು ಈ ಮುಂದಿನವುಗಳಿಗೆ ಅವಕಾಶ ಕಲ್ಪಿಸುವುದಕ್ಕಾಗಿ ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಯಿತು. ಎಂದರೆ:

(i) ಮನೋರಂಜನಾ ತೆರಿಗೆಯ ದರವನ್ನು ಇಳಿಸುವುದು, ಮತ್ತು

(ii) 1-4-97ರಿಂದ ಪರಿಣಾಮಕಾರಿಯಾಗುವಂತೆ ಟಿಕೆಟ್ ಸೀಲಿಂಗ್ ವ್ಯವಸ್ಥೆಯನ್ನು ಪುನಃ ಜಾರಿಗೆ ತಂದುದರ ಪರಿಣಾಮವಾಗಿ ಅಧಿಭಾರವನ್ನು ರದ್ದುಗೊಳಿಸುವುದು;

ರಿಟ್ ಅರ್ಜಿ ಸಂಖ್ಯೆ 2397/ 1988 ಮತ್ತು ಇತರ ಸಂಬಂಧಿತ ವಿಷಯಗಳಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ, ತೆರಿಗೆ ನಿರ್ಧರಣೆಯ ಸಮಯದಲ್ಲಿ ಒಂದು ಫರ್ಮ್ ವಿಘಟಿತವಾಗಿದ್ದರೂ ಸಹ, ಫರ್ಮಿನ ವಿಘಟನೆಯ ತರವಾಯ ಸ್ವೀಕರಿಸಲಾಗುವ ಆದಾಯದ ಮೇಲೂ ತೆರಿಗೆ ನಿರ್ಧರಣೆ ಮಾಡುವುದಕ್ಕೆ ಅವಕಾಶ ಕಲ್ಪಿಸುವುದಕ್ಕಾಗಿ ಕರ್ನಾಟಕ ಕೃಷಿ ಆದಾಯ ತೆರಿಗೆ, 1957ನ್ನು ದಿನಾಂಕ 1-4-1975ರಂದು ಪೂರ್ವಾನ್ವಯವಾಗುವಂತೆ ತಿದ್ದುಪಡಿ ಮಾಡುವುದು ಅಗತ್ಯವಾಗಿದೆ.

ಆದ್ದರಿಂದ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಉದ್ದೇಶಿತ ಕ್ರಮದಿಂದಾಗಿ ಪ್ರತಿ ವರ್ಷ ಸುಮಾರು 22 ಕೋಟಿ ರೂಪಾಯಿಗಳಷ್ಟು ಆದಾಯದಲ್ಲಿ ನಷ್ಟ ಉಂಟಾಗುತ್ತದೆ.

ಸಿದ್ದರಾಮಯ್ಯ,
ಉಪ ಮುಖ್ಯಮಂತ್ರಿಗಳು ಹಾಗೂ
ಹಣಕಾಸು, ಯೋಜನೆ ಮತ್ತು
ಕಾರ್ಮಿಕ ಸಚಿವರು.

ಯಾಕೂಬ್ ಪರೀಫ್
ಕಾಯದರ್ಶಿ

ಅನುಬಂಧ

ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 25) ಉದ್ಧೃತ ಭಾಗ

★★ ★★ ★★

5. ಸರಕುಗಳ ಮಾರಾಟ ಅಥವಾ ಖರೀದಿಯ ಮೇಲೆ ತೆರಿಗೆ ವಿಧಿಸುವುದು:-

(1) ★★ ★★ ★★

(1ಎ) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಪ್ರತಿಯೊಬ್ಬ ವ್ಯವಹಾರಿಯು, ತೆರಿಗೆಗೆ ಗುರಿಯಾಗುವ ಮಾರಾಟದ ತನ್ನ ಒಟ್ಟು ವಹಿವಾಟಿನ ಮೇಲೆ, ಪ್ರತಿವರ್ಷ ಮನುಷ್ಯರ ಬಳಕೆಗಾಗಿನ ಎಲ್ಲ ರೀತಿಯ ಆಲ್ಕೋಹಾಲ್ ಮಿಶ್ರಿತ ಮದ್ಯಮಗಳಿಗೆ ಸಂಬಂಧಪಟ್ಟಂತೆ ಮಾರಾಟದ ಪ್ರತಿಯೊಂದು ಹಂತದಲ್ಲಿ (ರಾಜ್ಯದಲ್ಲಿನ ಕೊನೆಯ ಮಾರಾಟವನ್ನು ಹೊರತುಪಡಿಸಿ) ಅಂಥ ವಹಿವಾಟಿನ ಶೇಕಡ ಐವತ್ತರಷ್ಟು ದರದಲ್ಲಿ ತೆರಿಗೆ ಸಂದಾಯ ಮಾಡತಕ್ಕದ್ದು.

★★ ★★ ★★

17. ತೆರಿಗೆಯ ಬಗ್ಗೆ ರಾಜಿ: (1) ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಮತ್ತು ಅಂಥ ಸಂದರ್ಭಗಳಲ್ಲಿ, ತೆರಿಗೆ ನಿರ್ಧರಣಾ ಪ್ರಾಧಿಕಾರಿಯು, ವರ್ಷದಲ್ಲಿ ಒಟ್ಟು ವಹಿವಾಟು ಐದು ಲಕ್ಷ ರೂಪಾಯಿಗಳನ್ನು ಮೀರದ ಮತ್ತು 5, 5ಎ ಮತ್ತು 6ಬಿ ಪ್ರಕರಣದ ಅಡಿಯಲ್ಲಿ ತೆರಿಗೆಗೆ ಬದ್ಧನಾದ ಒಬ್ಬ ವ್ಯವಹಾರಿಯು, ಹಾಗೆ ಆಯ್ಕೆ ಮಾಡಿಕೊಂಡರೆ, ಈ ಅಧಿನಿಯಮದ ಅಡಿಯಲ್ಲಿ ತಾನು ಸಂದಾಯ ಮಾಡತಕ್ಕ ತೆರಿಗೆ ಮೊಬಲಗಿನ ಬದಲಾಗಿ, ಯಾವುದೇ ವರ್ಷದಲ್ಲಿ, ರಾಜಿಯ ಮೂಲಕ ಈ ಮುಂದಿನ ದರಗಳ ಪ್ರಕಾರ ಮೊಬಲಗನ್ನು ಒಪ್ಪಿಕೊಳ್ಳಬಹುದು, ಎಂದರೆ:

★★ ★★ ★★

19ಎ. ಮೂಲದಲ್ಲಿ ತೆರಿಗೆಯನ್ನು ಮುರಿದುಕೊಳ್ಳುವುದು: (1) ಈ ಅಧಿನಿಯಮದಲ್ಲಿ ಏನೇ ಇದ್ದರೂ, ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಕೈಗಾರಿಕಾ, ವಾಣಿಜ್ಯ ಅಥವಾ ವ್ಯಾಪಾರ ಉದ್ಯಮ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಶಾಸನಬದ್ಧ ನಿಕಾಯವು ತಮಗೆ ನಿರ್ವಹಿಸಿಕೊಡಲಾದ ಆರನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂತಹ ಸ್ವರೂಪದ ಕಾಮಗಾರಿ ಕರಾರುಗಳಿಗೆ ಸಂಬಂಧಿಸಿದಂತೆ ಅಂಥ ವ್ಯವಹಾರಗಳಿಗೆ ತಮ್ಮಿಂದ ಸಂದಾಯವಾಗಬೇಕಾದ ಮೊಬಲಗಿನಲ್ಲಿ, ಮುಂದಿನಂತೆ ಲೆಕ್ಕ

ಹಾಕಲಾದ ಮೊಬಲಗಳನ್ನು ಕಳೆಯತಕ್ಕದ್ದು.-

★★ ★★ ★★

28ಎ. ಚೆಕ್‌ಪೋಸ್ಟ್ ಅಥವಾ ಸುಂಕದ ಕಟ್ಟೆಯ ಸ್ಥಾಪನೆ ಮತ್ತು ಸಾಗಾಣಿಕೆಯಲ್ಲಿರುವಾಗ ಸರಕುಗಳ ಪರಿಶೀಲನೆ:- (1) ★★ ★★

(2) ಸರಕು ವಾಹನ ಅಥವಾ ದೋಣಿಯ ಮಾಲೀಕ ಅಥವಾ ಅದರ ಪ್ರಭಾರ ಹೊಂದಿರುವ ವ್ಯಕ್ತಿಯು;-

(ಎ) ★★ ★★ ★★

(ಸಿ) ಸರಕು ವಾಹನ ಅಥವಾ ದೋಣಿಯಲ್ಲಿ ಸಾಗಿಸಲಾಗುವ ಸರಕುಗಳು, ಅಡಕೆ, ಏಲಕ್ಕಿ, ಗೋಡಂಬಿ, ತೆಂಗಿನಕಾಯಿ, ಕಾಫಿ, ಕೊಬ್ಬರಿ, ವನಸ್ಪತಿಯೂ ಸೇರಿದಂತೆ ಖಾದ್ಯ ತೈಲ, ಕಬ್ಬಿಣ ಮತ್ತು ಉಕ್ಕು, ಮದ್ಯ ಎಣ್ಣೆ ಬೀಜಗಳು, ಮೆಣಸು, ರಬ್ಬರ್ ಮರಮುಟ್ಟು ಅಥವಾ ಆಯುಕ್ತರು ಅಧಿಸೂಚಿಸಬಹುದಾದಂತ ಇತರ ಸರಕುಗಳಾಗಿರುವಲ್ಲಿ ಮಾರಾಟದ ಬಿಲ್ಲಿನೊಂದಿಗೆ ನಿಯಮಿಸಲಾದ ಪ್ರಾಧಿಕಾರಿಯಿಂದ ಪಡೆದ ನಿಯಮಿಸಬಹುದಾದಂಥ ವಿವರಗಳನ್ನುಳ್ಳ ರವಾನೆ ಚೀಟಿಯನ್ನು ಒಯ್ಯತಕ್ಕದ್ದು, ಮತ್ತು

★★ ★★ ★★

30ಎ. ಕೆಲವು ಪ್ರಕರಣಗಳ ಕ್ಷಿಪ್ರವಿಲೆ:- (1)

(1) 29ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳುವ ನ್ಯಾಯಾಲಯವು, ಆಪಾದಿತ ವ್ಯಕ್ತಿಗೆ ಜಾರಿ ಮಾಡಬೇಕಾದ ಸಮನ್ನಿನಲ್ಲಿ ಆರೋಪವನ್ನು ವಿಚಾರಣೆ ಮಾಡುವುದಕ್ಕೆ ಮುಂಚೆ ನಿರ್ದಿಷ್ಟಪಡಿಸಿದ ದಿನಾಂಕದೊಳಗೆ ಅವನು ನೋಂದಾಯಿತ ಪತ್ರದ ಮೂಲಕ ತಪ್ಪನ್ನು ಒಪ್ಪಿಕೊಳ್ಳಬಹುದೆಂದು ಮತ್ತು ಎರಡು ನೂರ ಐವತ್ತು ರೂಪಾಯಿಗೆ ಕಡಿಮೆಯಿಲ್ಲದಂಥ ಅದರೆ ನ್ಯಾಯಾಲಯವು ನಿರ್ದಿಷ್ಟಪಡಿಸಬಹುದಾದಂಥ ಐದು ನೂರು ರೂಪಾಯಿಗೆ ವಿಸ್ತರಿಸಬಹುದಾದ ಮೊತ್ತವನ್ನು ನ್ಯಾಯಾಲಯಕ್ಕೆ ಕಳುಹಿಸಬಹುದೆಂದು ತಿಳಿಸತಕ್ಕದ್ದು.

★★ ★★ ★★

ಮೂರನೆ ಅನುಸೂಚಿ

ಯಾವ ಸರಕುಗಳ ಸಂಬಂಧದಲ್ಲಿ 5 (3) (21) ಪ್ರಕರಣದ ಮೇರೆಗೆ ಏಕ ಹಂತದ ಖರೀದಿ ತೆರಿಗೆ ಮಾತ್ರ ವಿಧಿಸಬಹುದೋ ಆ ಸರಕುಗಳು

ಕ್ರ.ಸಂ.	ಸರಕುಗಳ ವಿವರಣೆ	ತೆರಿಗೆಯ ದರ
1	***	*** ***

3. ಕಾಫಿ ಬೀನ್ಸ್ ಮತ್ತು ಕಾಫಿ ಬೀಜಗಳು (ಕಚ್ಚಾ ಅಥವಾ ಹುರಿದದ್ದು):

(i) ಅಧಿನಿಯಮದ ಅಡಿಯಲ್ಲಿ ಶೇಕಡ ಆರು ತೆರಿಗೆಗೆ ಗುರಿಯಾಗದ ವ್ಯಕ್ತಿಗಳಿಂದ ಕಾಫಿ ಸಂಸ್ಕರಿಸುವವರು ಖರೀದಿಸಿದಾಗ

** ** **

ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958ರ (1958ರ ಕರ್ನಾಟಕ ಅಧಿನಿಯಮ 30) ಉದ್ಧೃತ ಭಾಗ

3. ಮನೋರಂಜನೆಗಳಿಗೆ ಪ್ರವೇಶಕ್ಕಾಗಿ ಸಂದಾಯ ಮಾಡುವ ಹಣದ ಮೇಲೆ ತೆರಿಗೆ: (1) 2ನೇ ಪ್ರಕರಣದ (3)ನೇ ಖಂಡದ (iii)ನೇ ಉಪಖಂಡದಲ್ಲಿ ಉಲ್ಲೇಖಿಸಲಾದ ಮನೋರಂಜನೆಯನ್ನು ಹೊರತುಪಡಿಸಿ ಇತರ ಮನೋರಂಜನೆಗೆ ಪ್ರವೇಶಕ್ಕಾಗಿ ಪ್ರತಿಯೊಂದು ಹಣ ಸಂದಾಯ ಮೇಲೆ ಈ ಮುಂದಿನ ದರಗಳಂತೆ ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು, ಎಂದರೆ:

ಕೋಷ್ಟಕ

ಕ್ರ. ಸಂಖ್ಯೆ	ಪ್ರವೇಶಕ್ಕೆ ಹಣ ಸಂದಾಯ (ತೆರಿಗೆ ಮೊಬಲಗನ್ನು ಬಿಟ್ಟು)	ತೆರಿಗೆ ದರ
1	2	3
(ಎ)	ಒಂದು ರೂಪಾಯಿ ಇಪ್ಪತ್ತೈದು ಪೈಸೆ ಮೀರದಿದ್ದರೆ;	ಅಂಥ ಹಣ ಸಂದಾಯದ ಶೇಕಡಾ ಮೂವತ್ತೈದರಷ್ಟು

(ಬಿ)	ಒಂದು ರೂಪಾಯಿ ಇಪ್ಪತ್ತೈದು ಪೈಸೆಗಿಂತ ಹೆಚ್ಚು, ಆದರೆ ಎರಡು ರೂಪಾಯಿ ಐವತ್ತು ಪೈಸೆಗಿಂತ ಕಡಿಮೆಯಿದ್ದರೆ	ಅಂಥ ಹಣ ಸಂದಾಯದ ಶೇಕಡಾ ನಲವತ್ತೈದರಷ್ಟು
(ಸಿ)	ಎರಡುರೂಪಾಯಿ ಐವತ್ತು ಪೈಸೆಯನ್ನು ಮೀರಿದರೆ	ಅಂಥ ಹಣ ಸಂದಾಯದ ಶೇಕಡಾ ಐವತ್ತೈದರಷ್ಟು

★★ ★★ ★★

3ಎ. ಉಪಕರ ವಿಧಿಸುವುದು.- 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಸಂದಾಯ ಮಾಡತಕ್ಕ ಮನೋರಂಜನಾ ತೆರಿಗೆಯೊಂದಿಗೆ, ಅಂಥ ಮನೋರಂಜನಾ ತೆರಿಗೆಯ ದರದ ಮೇಲೆ ಶೇಕಡ ನೂರರಷ್ಟು ಉಪಕರ ವಿಧಿಸತಕ್ಕದ್ದು ಮತ್ತು ಹಾಗೆ ವಿಧಿಸಲಾದ ಉಪಕರದ ಪೂರ್ಣ ಮೊಬಲಗನ್ನು ರಾಜ್ಯದ ಸಂಚಿತ ನಿಧಿಗೆ ಜಮೆ ಮಾಡತಕ್ಕದ್ದು.

★★ ★★ ★★

3ಸಿ. ಕೆಲವು ಚಲನಚಿತ್ರಗಳಿಗೆ ಸಂಬಂಧಿಸಿದಂತೆ ವಿಶೇಷ ಉಪಬಂಧ.- (1) 3 ಮತ್ತು 3ಎ ಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದಾಗ್ಯೂ:

★★ ★★ ★★

(2) 3 ಮತ್ತು 3ಎ ಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದಾಗ್ಯೂ ಕನ್ನಡ, ಕೊಡವ, ಕೊಂಕಣಿ ಅಥವಾ ತುಳು ಚಲನಚಿತ್ರವನ್ನು ಹೊರತುಪಡಿಸಿ, ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರವು ನೀಡಿದ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿಯನ್ನು 1981ರ ಏಪ್ರಿಲ್ ಒಂದನೇ ದಿನಾಂಕದ ತರುವಾಯ ಪಡೆದಿರುವ ಅಥವಾ ರಾಜ್ಯ ಸರ್ಕಾರವು ಅಧಿಸೂಚಿಸಿದ ಅಂತರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಪಡೆದ ಪ್ರಶಸ್ತಿಯನ್ನು ಪಡೆದಿರುವ ಇತರ ಚಲನಚಿತ್ರದ ಪ್ರದರ್ಶನದ ಸಂದರ್ಭದಲ್ಲಿ, ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಆರು ತಿಂಗಳ ಅವಧಿಗೆ ಈ ಉಪ-ಪ್ರಕರಣದ ಅಡಿಯಲ್ಲಿ ಯಾವುದೇ ತೆರಿಗೆಯನ್ನು ಸಂದಾಯ ಮಾಡತಕ್ಕದ್ದಲ್ಲ.

ವಿವರಣೆ: ಈ ಪ್ರಕರಣದ ಉದ್ದೇಶಕ್ಕಾಗಿ ''ಮನೋರಂಜನಾ ತೆರಿಗೆ'' ಯು 3ಎ ಪ್ರಕರಣದ ಮೇರೆಗೆ ವಿಧಿಸಬಹುದಾದ ಅಧಿಭಾರವನ್ನು ಒಳಗೊಳ್ಳುತ್ತದೆ.

★★ ★★ ★★

4. ಚಲನಚಿತ್ರ ಪ್ರದರ್ಶನಗಳ ಮೇಲೆ ಹೆಚ್ಚಿನ ತೆರಿಗೆ.- ಚಲನಚಿತ್ರ ಪ್ರದರ್ಶನಗಳ ಸಂಬಂಧದಲ್ಲಿ, 3 ಮತ್ತು 3ಎ ಪ್ರಕರಣಗಳ ಮೇರೆಗೆ ವಿಧಿಸಬಹುದಾದ ತೆರಿಗೆ ಮತ್ತು ಅಧಿಭಾರದ ಅಥವಾ 4ಎ ಪ್ರಕರಣದ ಮೇರೆಗೆ ವಿಧಿಸಬಹುದಾದ ತೆರಿಗೆಯ ಜೊತೆಗೆ, ಈ ಕೆಳಗಿನ ದರಗಳಲ್ಲಿ ಲೆಕ್ಕ ಹಾಕಲಾದ ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು, ಎಂದರೆ:

★★ ★★ ★★

ಪರಂತು ಕನ್ನಡ, ಕೊಡವ, ಕೊಂಕಣಿ ಅಥವಾ ತುಳು ಚಲನಚಿತ್ರಗಳ ಪ್ರದರ್ಶನದ ಸಂದರ್ಭದಲ್ಲಿ 3 ಮತ್ತು 3ಎ ಪ್ರಕರಣಗಳಡಿ ವಿಧಿಸಬಹುದಾದ ತೆರಿಗೆ ಹಾಗೂ ಅಧಿಭಾರದ ಜೊತೆಗೆ, ಈ ಉಪ-ಪ್ರಕರಣದಡಿ ಸಂದಾಯವಾಗತಕ್ಕ ತೆರಿಗೆಯು ಈ ಕೆಳಗಿನ ದರಗಳಲ್ಲಿರತಕ್ಕದ್ದು, ಎಂದರೆ:

4ಎ. ಕೆಲವು ಸ್ಥಳಗಳಲ್ಲಿ ಚಲನಚಿತ್ರ ಪ್ರದರ್ಶನಗಳ ಮೇಲೆ ತೆರಿಗೆ.-

(1) 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಮತ್ತು 3ಎ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಮನೋರಂಜನಾ ತೆರಿಗೆ ಮತ್ತು ಅಧಿಭಾರಕ್ಕೆ ಬದಲಾಗಿ, ಕೆಳಗಿನ ಕೋಷ್ಟಕದ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದಂತೆ ಎಪ್ಪತ್ತೈದು ಸಾವಿರ ಜನಸಂಖ್ಯೆಯನ್ನು ಮೀರದಂಥ ಸ್ಥಳೀಯ ಪ್ರಾಧಿಕಾರದ ಪರಿಮಿತಿಗಳೊಳಗೆ ಇರುವ ಚಲನಚಿತ್ರ ಮಂದಿರಗಳಲ್ಲಿ ನಡೆಯುವ ಚಲನಚಿತ್ರ ಪ್ರದರ್ಶನಗಳ ಸಂದರ್ಭದಲ್ಲಿ, ಮಾಲೀಕನು ತನ್ನ ಇಚ್ಛಾನುಸಾರ ಮತ್ತು ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಅದರ (5)ನೇ ಆವರಣದಲ್ಲಿ ನಿರ್ದಿಷ್ಟಪಲಡಿಸಲಾದಂತೆ ತೆರಿಗೆಯ ಮೊಬಲಗನ್ನು ಸಂದಾಯ ಮಾಡತಕ್ಕದ್ದು.

ಕೋಷ್ಟಕ

ಕ್ರಮ ಸಂಖ್ಯೆ	ಸ್ಥಳೀಯ ಪ್ರಾಧಿಕಾರಗಳು ಅವುಗಳ ಜನಸಂಖ್ಯೆಯು	ತೆರಿಗೆಯ ದರ
1	2	3
(ಎ)	ಹದಿನೈದು ಸಾವಿರ ಮೀರದಿದ್ದರೆ	ಒಟ್ಟು ಸಂಗ್ರಹಣೆಯ ಸಾಮರ್ಥ್ಯದ ಶೇಕಡಾ ಹದಿನೈದು
(ಬಿ)	ಹದಿನೈದು ಸಾವಿರ ಮೀರಿದ್ದು ಆದರೆ ಇಪ್ಪತ್ತು ಸಾವಿರ ಮೀರದಿದ್ದರೆ	ಒಟ್ಟು ಸಂಗ್ರಹಣೆಯ ಸಾಮರ್ಥ್ಯದ ಶೇಕಡಾ ಇಪ್ಪತ್ತು

(ಸಿ)	ಇಪ್ಪತ್ತು ಸಾವಿರ ಮೀರಿದ್ದು ಆದರೆ ಇಪ್ಪತ್ತೈದು ಸಾವಿರ ಮೀರದಿದ್ದರೆ	ಒಟ್ಟು ಸಂಗ್ರಹಣೆಯ ಸಾಮರ್ಥ್ಯದ ಶೇಕಡಾ ಇಪ್ಪತ್ತೈದು
(ಡಿ)	ಇಪ್ಪತ್ತೈದು ಸಾವಿರ ಮೀರಿದ್ದು ಆದರೆ ಐವತ್ತು ಸಾವಿರ ಮೀರದಿದ್ದರೆ	ಒಟ್ಟು ಸಂಗ್ರಹಣೆಯ ಸಾಮರ್ಥ್ಯದ ಶೇಕಡ ಮೂವತ್ತು
(ಇ)	ಐವತ್ತು ಸಾವಿರ ಮೀರಿದ್ದು ಆದರೆ ಇಪ್ಪತ್ತೈದು ಸಾವಿರ ಮೀರದಿದ್ದರೆ	ಒಟ್ಟು ಸಂಗ್ರಹಣೆಯ ಸಾಮರ್ಥ್ಯದ ಶೇಕಡಾ ಮೂವತ್ತೈದು.

★★ ★★ ★★

4ಬಿ ವೀಡಿಯೋ ಪ್ರದರ್ಶನಗಳಿಗೆ ಸಂಬಂಧಿಸಿದಂತೆ ವಿಶೇಷ ಉಪಬಂಧ- (1) 3, 3ಎ, 4ಎ ಪ್ರಕರಣಗಳ ಮೇರೆಗೆ ಸಂದಾಯ ಮಾಡಬೇಕಾದ ತೆರಿಗೆಯ ಬದಲಾಗಿ ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು ವೀಡಿಯೋ ಪ್ರದರ್ಶನದ ಪ್ರತಿ ಸಂದರ್ಭದಲ್ಲಿ ಪ್ರತಿ ತಿಂಗಳು ನೂರು ರೂಪಾಯಿಗಳ ದರದಲ್ಲಿ ಮನೋರಂಜನಾ ತೆರಿಗೆಯನ್ನು ವಿಧಿಸತಕ್ಕುದು ಮತ್ತು ರಾಜ್ಯ ಸರ್ಕಾರಕ್ಕೆ ಅದನ್ನು ಸಂದಾಯ ಮಾಡತಕ್ಕುದು.

★★ ★★ ★★

4ಸಿ. ಕೆಲವು ಮನೋರಂಜನೆಗಳಿಗೆ ಸಂಬಂಧಿಸಿದಂತೆ ವಿಶೇಷ ಉಪಬಂಧ.- 3, 3ಎ, 4, 4ಎ, ಅಥವಾ 4ಬಿ ಪ್ರಕರಣಗಳಲ್ಲಿ ಏನೇ ಇದ್ದಾಗ್ಯೂ, ಮತ್ತು ನಿಯಮಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟು ಒಬ್ಬ ದೂರದರ್ಶನ ವೀಕ್ಷಕನಿಗೆ ಯಾವುದೇ ಚಂದಾ ಅಥವಾ ವಂತಿಗೆ ಸಂದಾಯದ ಮೇಲೆ ಅಥವಾ ಸ್ಥಾಪನೆ ಅಥವಾ ಜೋಡಣೆ ವೆಚ್ಚಗಳು ಅಥವಾ ಬೇರೆ ಯಾವುದೇ ರೀತಿಯಲ್ಲಿ ಯಾವುದೇ ಇತರ ವೆಚ್ಚಗಳನ್ನು ವಸೂಲಿ ಮಾಡುವುದರ ಮೇಲೆ ಅಂಟೆನಾ ಅಥವಾ ಕೇಬಲ್ ದೂರದರ್ಶನ ಜಾಲದ ಸಹಾಯದಿಂದ ಮನರಂಜನೆಯನ್ನು ಒದಗಿಸಿದ್ದ ಸಂದರ್ಭದಲ್ಲಿ ಈ ಮುಂದಿನ ದರಗಳಲ್ಲಿ ಮನರಂಜನಾ ತೆರಿಗೆಯನ್ನು ಸಂದಾಯ ಮಾಡತಕ್ಕದ್ದು, ಎಂದರೆ:

★★ ★★ ★★

6ಎ. ವಿವರ ಪಟ್ಟಿಕೆಗಳು.- (1) ★★★ ★★★

(1ಎ) ಯಾವನೇ ಮಾಲೀಕನು (1)ನೇ ಉಪ-ಪ್ರಕರಣದಿಂದ ಅಗತ್ಯಪಡಿಸಿದ ವಿವರ ಪಟ್ಟಿಕೆಗಳನ್ನು ಒಪ್ಪಿಸುವುದಕ್ಕೆ ಮುಂಚೆ, ಅವನು ಅಂಥ ವಿವರ ಪಟ್ಟಿಕೆಗಳ ಆಧಾರದ ಮೇಲೆ ತಾನು ಸಂದಾಯ ಮಾಡಬೇಕಾದ ತೆರಿಗೆಯ ಪೂರ್ಣ ಮೊಬಲಗು,

ಅಧಿಭಾರ ಮತ್ತು ಹೆಚ್ಚಿನ ತೆರಿಗೆ ಅಥವಾ ಇತರ ತೆರಿಗೆಗಳು ಯಾವುದಾದರೂ ಇದ್ದರೆ ಅವುಗಳನ್ನು ನಿಯಮಿಸದ ರೀತಿಯಲ್ಲಿ ಸರ್ಕಾರಿ ಖಜಾನೆಗೆ ಸಂದಾಯ ಮಾಡತಕ್ಕುದು ಮತ್ತು ವಿವರ ಪಟ್ಟಿಕೆಯ ಜೊತೆಗೆ ಅಂಥ ಸಂದಾಯವನ್ನು ಸಾಕ್ಷೀಕರಿಸುವ ಖಜಾನೆಯಿಂದ ಪಡೆದ ರಸೀದಿಯನ್ನು ಒದಗಿಸತಕ್ಕದ್ದು.

7. ವಿನಾಯಿತಿಗಳು (1) ★★★ ★★★

ವಿವರಣೆ: ಈ ಪ್ರಕರಣದ ಉದ್ದೇಶಗಳಿಗಾಗಿ ಮನೋರಂಜನಾ ತೆರಿಗೆಯು ಅಧಿಭಾರವನ್ನು ಸಹ ಒಳಗೊಳ್ಳುತ್ತದೆ.

★★ ★★ ★★

8ಎ. ತೆರಿಗೆ ಇತ್ಯಾದಿಗಳನ್ನು ಪೂರ್ಣಾಂಕಕ್ಕೆ ತರುವುದು.- ಈ ಅಧಿನಿಯಮದ ಉಪಬಂಧಗಳ ಮೇರೆಗೆ ಪ್ರವೇಶ, ಅಧಿಭಾರ, ಜುಲ್ಮಾನೆ, ದಂಡ ಅಥವಾ ಸಂದಾಯ ಮಾಡಬೇಕಾಗಿರುವ ಯಾವುದೇ ಇತರ ಮೊಬಲಗು ಮತ್ತು ಬಾಕಿಯಾಗುವ ಮರುಪಾವತಿಯ ಮೊಬಲಗು ಇವುಗಳಿಗಾಗಿನ ಪ್ರತಿಯೊಂದು ಸಂದಾಯಕ್ಕೆ ಸಂಬಂಧಿಸಿದಂತೆ ತೆರಿಗೆಯ ಮೊಬಲಗನ್ನು ಐದು ಪೈಸೆಯ ಮುಂದಿನ ಹೆಚ್ಚಿನ ಗುಣಕದ ಪೂರ್ಣಾಂಕಕ್ಕೆ ತರತಕ್ಕುದು.

★★ ★★ ★★

9. ತೆರಿಗೆಯ ಸಂದಾಯ ಮತ್ತು ವಸೂಲಿ.- (1) ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡತಕ್ಕ ಅಧಿಭಾರವೂ ಸೇರಿದಂತೆ ತೆರಿಗೆಯನ್ನು ನಿಯಮಿಸಲಾದಂಥ ವಿಧಾನದಲ್ಲಿ ಮತ್ತು ಕಂತುಗಳು ಇದ್ದರೆ ಅಂಥ ಕಂತುಗಳಲ್ಲಿ ಮತ್ತು ಅಂಥ ಸಮಯದೊಳಗೆ ಸಂದಾಯ ಮಾಡತಕ್ಕದ್ದು.

(2) (1)ನೇ ಉಪ-ಪ್ರಕರಣಕ್ಕೆ ಅನುಸಾರವಾಗಿ ಹಣ ಸಂದಾಯ ಮಾಡಲು ತಪ್ಪಿದರೆ:

(i) ಬಾಕಿಯಿರುವ ಪೂರ್ಣ ಹಣವು ಹಾಗೆ ಹಣ ಸಂದಾಯ ಮಾಡಲು ತಪ್ಪಿದ ದಿನಾಂಕದಿಂದ ಕೂಡಲೇ ಬಾಕಿಯಾಗತಕ್ಕದ್ದು ಮತ್ತು ಅಂಥ ತೆರಿಗೆ, ಅಧಿಭಾರ ಅಥವಾ ಹೆಚ್ಚಿನ ತೆರಿಗೆ ಸಂದಾಯ ಮಾಡಲು ಬದ್ಧನಾದ ಮಾಲೀಕನ ಸ್ವತ್ತುಗಳ ಮೇಲೆ ಅದು ಋಣಭಾರವಾಗತಕ್ಕದ್ದು, ಮತ್ತು

(ii) ಈ ಅಧಿನಿಯಮದ ಅಡಿಯಲ್ಲಿ ಅಧಿಭಾರವೂ ಸೇರಿದಂತೆ ಅಂಥ ತೆರಿಗೆ ಸಂದಾಯ ಮಾಡಲು ಬದ್ಧವಾದ ಮಾಲೀಕನು:

(ಎ) (1)ನೇ ಉಪ-ಪ್ರಕರಣದ ಅಡಿಯಲ್ಲಿ ನಿಯಮಿಸಲಾದ ಸಮಯವು ಮುಕ್ತಾಯವಾದ ತರುವಾಯ ಮೊದಲ ಮೂರು ತಿಂಗಳಿಗೆ ಪ್ರತಿ ತಿಂಗಳಿಗೂ, ಹಾಗೆ ಸಂದಾಯ ಮಾಡದೆ ಉಳಿದ ಅಧಿಭಾರವು ಸೇರಿದಂತೆ ತೆರಿಗೆಯ ಮೊಬಲಗಿನ ಶೇಕಡ ಒಂದಕ್ಕೆ; ಮತ್ತು

(ಬಿ) ಮೇಲೆ ಹೇಳಲಾದಂತೆ ಮೂರು ತಿಂಗಳ ಅವಧಿ ತರುವಾಯ ಪ್ರತಿ ತಿಂಗಳಿಗೆ ಅಂಥ ಮೊಬಲಗಿನ ಶೇಕಡ ಎರಡೂವರೆಗೆ,

-ಸಮನಾದ ದಂಡವನ್ನು ಸಂದಾಯ ಮಾಡತಕ್ಕದ್ದು.

ವಿವರಣೆ.- (ii)ನೇ ಖಂಡದ ಉದ್ದೇಶಗಳಿಗಾಗಿ, ತಿಂಗಳಿನ ಭಾಗಕ್ಕೆ ಸಂದಾಯ ಮಾಡತಕ್ಕ ದಂಡವನ್ನು ಪ್ರಮಾಣಾನುಸಾರವಾಗಿ ನಿರ್ಧರಿಸತಕ್ಕದ್ದು.

(3) ಈ ಅಧಿನಿಯಮದ ಅಡಿಯಲ್ಲಿ ಬಾಕಿಯಿರುವ ಅಧಿಭಾರವೂ ಸೇರಿದ ಯಾವುದೇ ತೆರಿಗೆ ಮೊಬಲಗನ್ನು ಅಥವಾ ದಂಡವೂ ಸೇರಿದ ಯಾವುದೇ ಇತರ ಮೊಬಲಗನ್ನು ಇತರ ಯಾವುದೇ ರೀತಿಯ ಸಂಗ್ರಹಣೆಗೆ ಬಾಧಕವಾಗದಂತೆ ಈ ಮುಂದಿನಂತೆ ವಸೂಲು ಮಾಡಬಹುದು;-

★★ ★★ ★★

9ಸಿ.-ವ್ಯವಹಾರದ ವರ್ಗಾವಣೆಯ ಮೇಲ್ ಬಾಧ್ಯತೆ.- (1) ★★★ ★★★

ವಿವರಣೆ: ಈ ಪ್ರಕರಣದ ಮತ್ತು 9ಎ ಮತ್ತು 9ಇ ಪ್ರಕರಣಗಳ ಉದ್ದೇಶಕ್ಕಾಗಿ ''ಮನೋರಂಜನಾ ತೆರಿಗೆ'' ಎಂಬುದಲ್ಲಿ ಅಧಿಭಾರ ಚಲನಚಿತ್ರ ಪ್ರದರ್ಶನಗಳ ಮೇಲೆ ತೆರಿಗೆ, ದಂಡ ಅಥವಾ ಈ ಅಧಿನಿಯಮದ ಅಡಿ ಬಾಕಿಯಾದ ಇತರ ಮೊಬಲಗು ಒಳಗೊಳ್ಳುತ್ತದೆ.

★★ ★★ ★★

1957ರ ಕರ್ನಾಟಕ ಕೃಷಿ ಆದಾಯ ತೆರಿಗೆ ಅಧಿನಿಯಮದ (1957ರ ಕರ್ನಾಟಕ ಅಧಿನಿಯಮ 22) ಉದ್ಧೃತ ಭಾಗ.

★★ ★★ ★★

ಪರಿಭಾಷೆಗಳು.-

(ಪಿ) 'ವ್ಯಕ್ತಿ' ಎಂದರೆ ಒಡೆಯ, ನ್ಯಾಸಧಾರಿ, ರಿಸೀವರ್, ಒಬ್ಬನೇ ವ್ಯವಸ್ಥಾಪಕ ಆಡಳಿತಗಾರ ಅಥವಾ ನಿರ್ವಾಹಕನಾಗಿಯೇ ಆಗಲಿ ಅಥವಾ ಕಾನೂನು ಮೂಲಕ

ಮನ್ನಣೆ ಪಡೆದ ಯಾವುದೇ ಸಾಮರ್ಥ್ಯದಲ್ಲಿ ಅವನಿಗಾಗಿ ಅಥವಾ ಯಾವನೇ ಇತರ ವ್ಯಕ್ತಿಗಾಗಿ ಅಥವಾ ಭಾಗಶಃ ಅವನ ಪ್ರಯೋಜನಕ್ಕಾಗಿ ಮತ್ತು ಭಾಗಶಃ ಇನ್ನೊಬ್ಬನಿಗಾಗಿ ಸ್ವತ್ತಿನ ಒಡೆತನ ಹೊಂದಿರುವ ಅಥವಾ ಧಾರಣೆ ಮಾಡಿರುವ ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳ ಸಂಘ ಮತ್ತು ಅದು ಅವಿಭಕ್ತ ಹಿಂದೂ ಮಿತಾಕ್ಷರ ಕುಟುಂಬ, ಅಳಿಯ ಸಂತಾನ ಕುಟುಂಬ ಅಥವಾ ಅದರ ಶಾಖೆ, ಪ್ರತ್ಯೇಕ ಸೊತ್ತುಗಳನ್ನು ಹೊಂದಿರುವ ಮರಮ್ಮುಕತ್ತಾಯಂ ತಾರ್‌ವಾಡ್ ತವಾಯಿಗೆ ಅಥವಾ ನಂಬೂದರಿ ಅಥವಾ ಅವಿಭಾಜ್ಯತೆಯ ನಿಯಮವು ಅನ್ವಯಿಸುವ ಇತರ ಕುಟುಂಬ, ಫರ್ಮ್, ಕಂಪನಿ, ವ್ಯಕ್ತಿಗಳ ಸಂಘ ಅದು ನಿಗಮಿತವಾಗಿರಲಿ ಅಥವಾ ಇಲ್ಲದಿರಲಿ ವಿಘಟನೆಯಾದ ಅಥವಾ ವ್ಯವಹಾರವನ್ನು ಮುಂದುವರೆಸದಿರುವ ಫರ್ಮಿನಿಂದ ಕೃಷಿ ಆದಾಯವನ್ನು ಪಡೆಯುವವನು ಮತ್ತು ಸ್ವತ್ತನ್ನು ಧಾರಣ ಮಾಡುವ ಸಾಮರ್ಥ್ಯವುಳ್ಳ ಯಾವುದೇ ಸಂಸ್ಥೆಯು ಒಳಗೊಳ್ಳುತ್ತದೆ.

★★ ★★ ★★

26. ಮುಂದುವರಿಸಿದ ಕಂಪನಿ, ಫರ್ಮ್ ಅಥವಾ ಸಂಘದ ಸಂದರ್ಭದಲ್ಲಿ ತೆರಿಗೆ ನಿರ್ಧರಣೆ.- (1) 3ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ ಕಂಪನಿ, ಫರ್ಮ್, ಅಥವಾ ವ್ಯಕ್ತಿಗಳ ಸಂಘವು ಕೃಷಿ ಆದಾಯವನ್ನು ಪಡೆದಿರುವಲ್ಲಿ ಮತ್ತು ಅಂಥ ಆದಾಯವನ್ನು ಪಡೆಯಲಾದಂಥ ವ್ಯವಹಾರವನ್ನು ಯಾವುದೇ ತೆರಿಗೆ ವರ್ಷದಲ್ಲಿ ಮುಂದುವರಿಸದಿರುವಲ್ಲಿ ಆ ತೆರಿಗೆ ನಿರ್ಧರಣಾ ವರ್ಷಕ್ಕಾಗಿ ಹಿಂದಿನ ವರ್ಷದ ಅಂತ್ಯದಿಂದ ಹಾಗೆ ಮುಂದುವರಿಸದಿರುವ ದಿನಾಂಕದವರೆಗೆ ಕೃಷಿ ಆದಾಯ ತೆರಿಗೆ ಸಹಾಯಕ ಕಮೀಷನರ್‌ರ ವಿವೇಚನೆಯಲ್ಲಿ ಆ ತೆರಿಗೆ ನಿರ್ಧರಣಾ ವರ್ಷದಲ್ಲಿ ತೆರಿಗೆ ವಿಧಿಸಬಹುದು.

(2) ಪ್ರತಿಯೊಂದು ಹಿಂದಿನ ಪೂರ್ಣ ವರ್ಷದ ಅಥವಾ ಅಂಥ ಅವಧಿಯಲ್ಲಿ ಸೇರಿದ ಹಿಂದಿನ ವರ್ಷದ ಯಾವುದೇ ಭಾಗದ ಒಟ್ಟು ಆದಾಯಕ್ಕೆ ಆ ಕರ ನಿರ್ಧರಣಾ ವರ್ಷದಲ್ಲಿ ಜಾರಿಯಲ್ಲಿದ್ದ ದರ ಅಥವಾ ದರಗಳಲ್ಲಿ ತೆರಿಗೆ ವಿಧಿಸತಕ್ಕದ್ದು ಮತ್ತು ಅಂಥ ಪ್ರತಿಯೊಂದು ಹಿಂದಿನ ಪೂರ್ಣ ವರ್ಷಕ್ಕೆ ಅಥವಾ ಹಿಂದಿನ ವರ್ಷದ ಭಾಗಕ್ಕೆ ಪ್ರತ್ಯೇಕ ಕರ ನಿರ್ಧರಣೆ ಮಾಡತಕ್ಕದ್ದು.

(3) ಅಂಥ ಯಾವುದೇ ವ್ಯವಹಾರವನ್ನು ಮುಂದುವರಿಸದಿರುವ ಯಾವನೇ ವ್ಯಕ್ತಿಯು ಅಂಥ ಮುಂದುವರಿಸದಿರುವಿಕೆಯ ಬಗ್ಗೆ 30 ದಿನಗಳೊಳಗಾಗಿ ಕೃಷಿ ಆದಾಯ ತೆರಿಗೆ ಕಮೀಷನರ್‌ಗೆ ನೋಟೀಸನ್ನು ಕೊಡತಕ್ಕದ್ದು ಮತ್ತು ಈ ಉಪ ಪ್ರಕರಣದ ಮೂಲಕ ಅಗತ್ಯಪಡಿಸಿದ ನೋಟೀಸನ್ನು ಕೊಡಲು ಯಾವನೇ ವ್ಯಕ್ತಿಯು ತಪ್ಪಿದಲ್ಲಿ ಅಂಥ ಅಧಿಕಾರಿಯು ವ್ಯವಹಾರವನ್ನು ಮುಂದುವರಿಸದಿರುವಿಕೆಯ ದಿನಾಂಕದವರೆಗೆ ಕಂಪನಿ, ಫರ್ಮ್ ಅಥವಾ ವ್ಯಕ್ತಿಗಳ ಸಂಘದ ಯಾವುದೇ ಕೃಷಿ ಆದಾಯಕ್ಕೆ

ಸಂಬಂಧಿಸಿದಂತೆ ಅವನಿಗೆ ತದನಂತರ ವಿಧಿಸಿದ ಕೃಷಿ ಆದಾಯ ತೆರಿಗೆ ಮೊತ್ತವನ್ನು ಮೀರಿದ ಮೊತ್ತವನ್ನು ದಂಡದ ರೂಪದಲ್ಲಿ ಅವನಿಂದ ವಸೂಲು ಮಾಡತಕ್ಕದ್ದೆಂದು ನಿರ್ದೇಶಿಸಬಹುದು.

(4) ಕೃಷಿ ಆದಾಯದ ಮೂಲಕ ನಡೆಸುವ ಯಾವುದೇ ವ್ಯವಹಾರವನ್ನು ಯಾವುದೇ ವರ್ಷದಲ್ಲಿ ಮುಂದುವರಿಸದಿರುವಲ್ಲಿ ಹಾಗೆ ಮುಂದುವರಿಸದಿರುವಿಕೆಯ ನಂತರ ಸ್ವೀಕರಿಸಲಾದ ಯಾವುದೇ ಮೊತ್ತವನ್ನು ಸ್ವೀಕರ್ತನ ಆದಾಯವೆಂಬುದಾಗಿ ಭಾವಿಸತಕ್ಕದ್ದು ಮತ್ತು ಸ್ವೀಕೃತಿಯ ವರ್ಷದಲ್ಲಿ ತಡನುಸಾರವಾಗಿ ತೆರಿಗೆ ವಿಧಿಸತಕ್ಕದ್ದು ಯಾರು ವ್ಯವಹಾರವನ್ನು ನಡೆಸುತ್ತಿರುತ್ತಾರೋ ಅಂಥ ವ್ಯಕ್ತಿಯ ಒಟ್ಟು ಆದಾಯದಲ್ಲಿ ಅಂಥ ಮೊತ್ತವನ್ನು ಸೇರಿಸದಿದ್ದರೆ ಅಂಥ ಮೊತ್ತವನ್ನು ಅಂಥ ಮುಂದುವರೆಸದಿರುವುದಕ್ಕೆ ಮುಂಚೆ ಸ್ವೀಕರಿಸತಕ್ಕದ್ದು.

(5) (1)ನೇ ಉಪ-ಪ್ರಕರಣದ ಅಥವಾ (1)ನೇ ಉಪ-ಪ್ರಕರಣದ ಮೇರೆಗೆ ನಿರ್ಧರಣೆಯನ್ನು ಮಾಡಬೇಕಾಗಿರುವಲ್ಲಿ ಕೃಷಿ ಆದಾಯ ತೆರಿಗೆ ಸಹಾಯಕ ಕಮೀಷನರ್‌ನು ಯಾರ ಕೃಷಿ ಆದಾಯವನ್ನು ನಿರ್ಧರಣೆ ಮಾಡಬೇಕಾಗಿದೆಯೋ ಆ ವ್ಯಕ್ತಿಯ ಮೇಲೆ ಅಥವಾ ಒಂದು ಪರ್ಮ್‌ನ ಸಂದರ್ಭದಲ್ಲಿ ಅದರ ಮುಂದುವರಿಸದಿರುವಿಕೆಯ ಕಾಲದಲ್ಲಿ ಅಂಥ ಫರ್ಮಿನ ಸದಸ್ಯನಾಗಿದ್ದ ಯಾವನೇ ವ್ಯಕ್ತಿಯ ಮೇಲೆ ಅಥವಾ ಕಂಪನಿಯ ಸಂದರ್ಭದಲ್ಲಿ ಅದರ ಪ್ರಧಾನ ಅಧಿಕಾರಿಯ ಮೇಲೆ ಅಥವಾ ನಿರುಜ್ಞಾನುಸಾರ ಅದರ ಸ್ವೀಕರ್ತನ ಮೇಲೆ 18ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗಿನ ನೋಟೀರಿನಲ್ಲಿ ಒಳಗೊಳ್ಳಬಹುದಾದ ಎಲ್ಲಾ ಅಥವಾ ಯಾವುದೇ ಅಗತ್ಯಗಳನ್ನು ಒಳಗೊಂಡ ನೋಟೀಸನ್ನು ಜಾರಿ ಮಾಡಬಹುದು ಮತ್ತು ಈ ಅಧಿನಿಯಮದ ಉಪಬಂಧಗಳು ಆದಷ್ಟುಮಟ್ಟಿಗೆ ಆ ನೋಟೀಸು ಆ ಪ್ರಕರಣದ ಮೇರೆಗೆ ಕೊಟ್ಟ ನೋಟೀಸು ಆಗಿದಿದ್ದರೆ ಹೇಗೋ ಹಾಗೆ ತದನುಸಾರವಾಗಿ ಅನ್ವಯವಾಗತಕ್ಕದ್ದು.

ಪರಂತು, ಯಾವುದೇ ಕರನಿರ್ಧರಣಾ ವರ್ಷದಲ್ಲಿ ಒಂದು ಫರ್ಮಿನಿಂದ ಕೃಷಿ ಆದಾಯವನ್ನು ಪಡೆದಿರುವಲ್ಲಿ ಮತ್ತು ಫರ್ಮ್ ವಿಘಟನೆಯಾದಲ್ಲಿ ಅಥವಾ ವಿಘಟನೆಯಾಗುತ್ತಿರುವಲ್ಲಿ ಅಂಥ ವಿಘಟನೆಯಾದ ಫರ್ಮಿನ ಅಥವಾ ವಿಘಟನೆಯಾಗುತ್ತಿರುವ ಫರ್ಮಿನ ಕರ ನಿರ್ಧರಣೆಗೆ, ಅಂಥ ವಿಘಟನೆಯು ಆಗಿಲ್ಲದಿದ್ದರೆ ಹೇಗೋ ಹಾಗೆ ಈ ಪ್ರಕರಣದ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

★★ ★★ ★★

ಅನುಬಂಧ III

ಕರ್ನಾಟಕ ವಿಧಾನ ಸಭೆ

ಹತ್ತನೇ ವಿಧಾನ ಸಭೆ

(ಆರನೇ ಅಧಿವೇಶನ)

(ಮುಂದುವರಿದ ಉಪವೇಶನಗಳು)

ಕರ್ನಾಟಕ ವಿಧಾನ ಮಂಡಲದವರ ವೇತನಗಳ, ನಿವೃತ್ತಿ ವೇತನಗಳ ಮತ್ತು ಭತ್ಯಗಳ (ತಿದ್ದುಪಡಿ) ವಿಧೇಯಕ, 1997.

(1997ರ ವಿಧಾನಸಭಾ ವಿಧೇಯಕ ಸಂಖ್ಯೆ 37)

ಕರ್ನಾಟಕ ವಿಧಾನಮಂಡಲದವರ ವೇತನಗಳ, ನಿವೃತ್ತಿ ವೇತನಗಳ ಮತ್ತು ಭತ್ಯಗಳ ಅಧಿನಿಯಮ, 1956ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಕರ್ನಾಟಕ ವಿಧಾನ ಮಂಡಲದವರ ವೇತನಗಳ, ನಿವೃತ್ತಿ ವೇತನಗಳ ಮತ್ತು ಭತ್ಯಗಳ ಅಧಿನಿಯಮ, 1956ನ್ನು (1957ರ ಕರ್ನಾಟಕ ಅಧಿನಿಯಮ 2) ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ನಲವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ: (1) ಈ ಅಧಿನಿಯಮವನ್ನು ಕರ್ನಾಟಕ ವಿಧಾನಮಂಡಲದವರ ವೇತನಗಳ, ನಿವೃತ್ತಿವೇತನಗಳ ಮತ್ತು ಭತ್ಯಗಳ (ತಿದ್ದುಪಡಿ) ಅಧಿನಿಯಮ, 1997ರ ಸೆಪ್ಟೆಂಬರ್ ಮೊದಲನೇ ದಿನದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 3ನೇ ಪ್ರಕರಣದ ತಿದ್ದುಪಡಿ: ಕರ್ನಾಟಕ ವಿಧಾನಮಂಡಲದವರ ವೇತನಗಳ, ನಿವೃತ್ತಿ ವೇತನಗಳ ಮತ್ತು ಭತ್ಯಗಳ ಅಧಿನಿಯಮ, 1956ರ (1957ರ ಕರ್ನಾಟಕ ಅಧಿನಿಯಮ 2) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗುವುದು) 3ನೇ ಪ್ರಕರಣದಲ್ಲಿ.

(1) (1)ನೇ ಉಪ-ಪ್ರಕರಣದಲ್ಲಿ ''ಮೂವತ್ತು ಸಾವಿರ ರೂಪಾಯಿಗಳು'' ಎಂಬ

ಪದಗಳಿಗೆ ''ಐವತ್ತು ಸಾವಿರ ರೂಪಾಯಿಗಳು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(2) (2)ನೇ ಉಪ-ಪ್ರಕರಣದಲ್ಲಿ ''ನಲವತ್ತು ಸಾವಿರ ರೂಪಾಯಿಗಳು' ಎಂಬ ಪದಗಳಿಗೆ ''ಐವತ್ತು ಸಾವಿರ ರೂಪಾಯಿಗಳು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

3. 8ನೇ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 8ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿ:

(i) (ಬಿ) ಖಂಡದಲ್ಲಿ ''ಆರು ರೂಪಾಯಿಗಳು'' ಎಂಬ ಪದಗಳಿಗೆ ''ಎಂಟು ರೂಪಾಯಿಗಳು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (ಬಿ) ಖಂಡದಲ್ಲಿ ''ಇನ್ನೂರ ಐವತ್ತು ರೂಪಾಯಿಗಳು'' ಎಂಬ ಪದಗಳಿಗೆ ''ಐನೂರು ರೂಪಾಯಿಗಳು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(iii)(ಡಿ) ಖಂಡದ ಪರಂತುಕದಲ್ಲಿ ''ಮುನ್ನೂರ ಐವತ್ತು ರೂಪಾಯಿಗಳು'' ಎಂಬ ಪದಗಳಿಗೆ ''ಆರುನೂರ ಐವತ್ತು ರೂಪಾಯಿಗಳು'' ಎಂಬ ಪದಗಳನ್ನು ಪ್ರಯೋಜಿಸತಕ್ಕದ್ದು.

4. 10ನೇ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 10ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿ ''ಮುನ್ನೂರು ಲೀಟರುಗಳು'' ಎಂಬ ಪದಗಳಿಗೆ ''ಐನೂರು ಲೀಟರುಗಳು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

5. 10ಡಿ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 10ಡಿ ಪ್ರಕರಣದ (1)ನೇ ಉಪ ಪ್ರಕರಣದ (ಎ) ಖಂಡದಲ್ಲಿ ''ಮುನ್ನೂರು ಲೀಟರುಗಳು ಎಂಬ ಪದಗಳಿಗೆ ''ಐನೂರು ಲೀಟರುಗಳು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

6. 10ಜಿ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 10ಜಿ ಪ್ರಕರಣದ (2)ನೇ ಉಪ ಪ್ರಕರಣದಲ್ಲಿ ''ಮುನ್ನೂರು ಲೀಟರುಗಳು'' ಎಂಬ ಪದಗಳಿಗೆ ''ಐನೂರು ಲೀಟರುಗಳು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

7. 10ಐ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 10ಐ ಪ್ರಕರಣದ (1)ನೇ ಉಪ-ಪ್ರಕರಣದ (ಎ) ಖಂಡದಲ್ಲಿ ''ಮುನ್ನೂರು ಲೀಂಟರುಗಳು'' ಎಂಬ ಪದಗಳಿಗೆ ''ಐನೂರು ಲೀಟರುಗಳು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

8. 10ಎಲ್ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 10ಎಲ್ ಪ್ರಕರಣದ

(2)ನೇ ಉಪ-ಪ್ರಕರಣದಲ್ಲಿ ''ಮುನ್ನೂರು ಲೀಟರುಗಳು'' ಎಂಬ ಪದಗಳಿಗೆ ''ಐನೂರು ಲೀಟರುಗಳು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

9. 10ಎಸ್ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 10ಎನ್ ಪ್ರಕರಣದ (1)ನೇ ಉಪ-ಪ್ರಕರಣದ (ಎ) ಖಂಡದಲ್ಲಿ ''ಮುನ್ನೂರು ಲೀಟರುಗಳು'' ಎಂಬ ಪದಗಳಿಗೆ ''ಐನೂರು ಲೀಟರುಗಳು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

10. 11ನೇ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 11ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ ''ಎರಡು ಸಾವಿರ ರೂಪಾಯಿಗಳು'' ಎಂಬ ಪದಗಳಿಗೆ ''ಮೂರು ಸಾವಿರದ ಐನೂರು ರೂಪಾಯಿಗಳು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

11. 11ಎ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 11ಎ ಪ್ರಕರಣದಲ್ಲಿ.

(1) (1)ನೇ ಉಪ ಪ್ರಕರಣದಲ್ಲಿ-

(i) (ಎ) ಖಂಡದಲ್ಲಿ ''ಒಂದು ಸಾವಿರದ ಇನ್ನೂರು ರೂಪಾಯಿಗಳು'' ಎಂಬ ಪದಗಳಿಗೆ ''ಎರಡು ಸಾವಿರದ ಐದನೂರು ರೂಪಾಯಿಗಳು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) ಮೊದಲನೇ ಪರಂತುಕದಲ್ಲಿ ''ಒಂದು ನೂರು ರೂಪಾಯಿಗಲು'' ಮತ್ತು ''ಎರಡು ಸಾವಿರ ರೂಪಾಯಿಗಳು'' ಎಂಬ ಪದಗಳಿಗೆ ''ಇನ್ನೂರು ರೂಪಾಯಿಗಳು'' ಮತ್ತು ''ನಾಲ್ಕು ಸಾವಿರ ರೂಪಾಯಿಗಳು'' ಎಂಬ ಪದಗಳನ್ನು ಕ್ರಮವಾಗಿ ಪ್ರತಿಯೋಜಿಸತಕ್ಕದ್ದು;

(2) (1ಎ) ಉಪ-ಪ್ರಕರಣದಲ್ಲಿ ''ಎರಡು ಸಾವಿರ'' ಎಂಬ ಪದಗಳಿಗೆ ''ನಾಲ್ಕು ಸಾವಿರ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(3) (5)ನೇ ಉಪ ಪ್ರಕರಣದಲ್ಲಿ,-

(i) (i)ನೇ ಖಂಡದಲ್ಲಿ,

(ಎ) ''ವರ್ಗಾವಣೆ ಮಾಡಬಾರದ ಒಂದು ಪಾಸನ್ನು ನೀಡತಕ್ಕದ್ದು; ಇದರಿಂದ ಆತನು'' ಎಂಬ ಪದಗಳಿಗೆ ''ವರ್ಗಾವಣೆ ಮಾಡಬಾರದ ಒಂದು ಪಾಸನ್ನು ಅವನಿಗೆ ಮತ್ತು ಅವನ ಸಂಗಾತಿಗೆ ನೀಡತಕ್ಕದ್ದು; ಇದರಿಂದ ಅವರಿಗೆ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) ''ಅವನು ಸಾಮಾನ್ಯವಾಗಿ ವಾಸಿಸುವ ಸ್ಥಳದಿಂದ'' ಎಂಬ ಪದಗಳಿಗೆ ''ಅಂಥ ಸದಸ್ಯನು ಸಾಮಾನ್ಯವಾಗಿ ವಾಸಿಸುವ ಸ್ಥಳದಿಂದ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (ii)ಖಂಡದಲ್ಲಿ ''ರಾಜ್ಯ ಸರ್ಕಾರದಿಂದ'' ಎಂಬ ಪದಗಳ ತರುವಾಯ ''ಅಥವಾ ಕರ್ನಾಟಕ ವಿಧಾನ ಮಂಡಲವು ಅಧಿಸೂಚಿಸಿದ ಆಸ್ಪತ್ರೆಗಳಲ್ಲಿ ಅಥವಾ ಔಷಧಾಲಯಗಳಲ್ಲಿ'' ಎಂಬ ಪದಗಳನ್ನು ಸೇರಿಸತಕ್ಕದ್ದು.

12. 11ಸಿ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 11ಸಿ ಪ್ರಕರಣದಲ್ಲಿ,-

(1) (1)ನೇ ಉಪ ಪ್ರಕರಣದಲ್ಲಿ ''ಇಪ್ಪತ್ತು ಸಾವಿರ ರೂಪಾಯಿಗಳು' ಎಂಬ ಪದಗಳಿಗೆ ''ಐವತ್ತು ಸಾವಿರ ರೂಪಾಯಿಗಳು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(2) (2)ನೇ ಉಪಪ್ರಕರಣದಲ್ಲಿ ''ಹನ್ನೆರಡು ಸಾವಿರ ರೂಪಾಯಿಗಳು'' ಎಂಬ ಪದಗಳಿಗೆ ''ಮುವತ್ತು ಸಾವಿರ ರೂಪಾಯಿಗಳು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

13. 12ನೇ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 12ನೇ ಪ್ರಕರಣದಲ್ಲಿ,-

(i) (ಎ) ಖಂಡದಲ್ಲಿ ''ನಾಲ್ಕು ರೂಪಾಯಿಗಳು ಮತ್ತು ಐವತ್ತು ಪೈಸೆ'' ಎಂಬ ಪದಗಳಿಗೆ ''ಐದು ರೂಪಾಯಿಗಳು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (ಬಿ) ಖಂಡದಲ್ಲಿ ''ಎರಡು ನೂರ ಐವತ್ತು ರೂಪಾಯಿಗಳು'' ಮತ್ತು ''ಮೂರು ನೂರಾ ಐವತ್ತು ರೂಪಾಯಿಗಳು'' ಎಂಬ ಪದಗಳಿಗೆ ''ನಾನೂರು ರೂಪಾಯಿಗಳು'' ಮತ್ತು ''ಐನೂರು ರೂಪಾಯಿಗಳು'' ಎಂಬ ಪದಗಳನ್ನು ಕ್ರಮವಾಗಿ ಪ್ರತಿಯೋಜಿಸತಕ್ಕದ್ದು;

(iii) (ಸಿ) ಖಂಡದಲ್ಲಿ (i) ಉಪ ಖಂಡದಲ್ಲಿ ''ರಾಜ್ಯ ಸರ್ಕಾರ'' ಎಂಬ ಪದಗಳ ತರುವಾಯ ''ಕರ್ನಾಟಕ ವಿಧಾನ ಮಂಡಲವು ಅಧಿಸೂಚಿಸಿದ ಆಸ್ಪತ್ರೆಗಳಲ್ಲಿ ಅಥವಾ ಔಷಧಾಲಯಗಳಲ್ಲಿ'' ಎಂಬ ಪದಗಳನ್ನು ಸೇರಿಸತಕ್ಕದ್ದು.

(iv) (ಸಿಸಿಸಿ) ಖಂಡದಲ್ಲಿ ''ಇಪ್ಪತ್ತು ಸಾವಿರ'' ಎಂಬ ಪದಗಳಿಗೆ ''ಮುವತ್ತು ಸಾವಿರ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(v) (ಹೆಚ್) ಖಂಡದ (ii)ನೇ ಉಪ ಖಂಡದಲ್ಲಿ ''ಒಂದು ಸಾವಿರ ರೂಪಾಯಿಗಳು'' ಎಂಬ ಪದಗಳಿಗೆ'' ''ಎರಡು ಸಾವಿರದ ಐನೂರು ರೂಪಾಯಿಗಳು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಉದ್ದೇಶ ಮತ್ತು ಕಾರಣಗಳ ಹೇಳಿಕೆ

1956ರ ಕರ್ನಾಟಕ ವಿಧಾನಮಂಡಲದವರ ವೇತನಗಳ, ನಿವೃತ್ತಿ ವೇತನಗಳ ಮತ್ತು ಭತ್ಯಗಳ ಅಧಿನಿಯಮವನ್ನು ತಿದ್ದುಪಡಿ ಮಾಡುವ ಮೂಲಕ ಸಂಸದೀಯ ವ್ಯವಹಾರಗಳ ಸೇವೆಯಲ್ಲಿರುವವರಿಗೆ ಮತ್ತು ಶಾಸಕರಿಗೆ ಸಂದಾಯವಾಗತಕ್ಕ ವೇತನಗಳು ಮತ್ತು ಭತ್ಯೆಗಳು ಹಾಗೂ ಕೆಲವು ಇತರ ಸೌಲಭ್ಯಗಳನ್ನು ಹೆಚ್ಚಿಸುವುದು ಮತ್ತು ಮಾಜಿ ಶಾಸಕರಿಗೆ ಸಂದಾಯವಾಗತಕ್ಕ ನಿವೃತ್ತಿ ವೇತನವನ್ನು ಹೆಚ್ಚಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮದಿಂದಾಗಿ ಪ್ರಸಕ್ತವರ್ಷದಲ್ಲಿ 6.23 ಕೋಟಿ ರೂಪಾಯಿ ಅಂದಾಜು ವೆಚ್ಚ ಉಂಟಾಗುತ್ತದೆ.

ಎಂ.ಸಿ.ನಾಣಯ್ಯ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳು
ಹಾಗೂ ವಾರ್ತಾ ಮತ್ತು ಪ್ರಚಾರ ಇಲಾಖೆಯ ಸಚಿವರು.

ಯಾಕೂಬ್ ಪರೀಫ್,
ಕಾರ್ಯದರ್ಶಿ.

ಅನುಬಂಧ

ಕರ್ನಾಟಕ ವಿಧಾನ ಮಂಡಲದವರ ವೇತನಗಳ, ನಿವೃತ್ತಿ ವೇತನಗಳ ಮತ್ತು ಭತ್ಯಗಳ ಅಧಿನಿಯಮ, 1956ರ (1957ರ ಕರ್ನಾಟಕ ಅಧಿನಿಯಮ 2) ಉದ್ಧೃತ ಭಾಗ

★★ ★★

3. ಸಭಾಪತಿ ಮತ್ತು ಸಭಾಧ್ಯಕ್ಷರ ವೇತನಗಳು ಮತ್ತು ಆತಿಥ್ಯ ಭತ್ಯಗಳು:

(1) ಸಭಾಪತಿಗೆ, ಒಂದು ತಿಂಗಳಿಗೆ ಐದು ಸಾವಿರ ರೂಪಾಯಿಗಳ ವೇತನವನ್ನು ಮತ್ತು ಒಂದು ವರ್ಷಕ್ಕೆ ಮೂವತ್ತು ಸಾವಿರ ರೂಪಾಯಿಗಳ ಆತಿಥ್ಯ ಭತ್ಯವನ್ನು ಸಂದಾಯ ಮಾಡತಕ್ಕದ್ದು.

(2) ಸಭಾಧ್ಯಕ್ಷನಿಗೆ, ಒಂದು ತಿಂಗಳಿಗೆ ಐದು ಸಾವಿರ ರೂಪಾಯಿಗಳ ವೇತನವನ್ನು ಮತ್ತು ಒಂದು ವರ್ಷಕ್ಕೆ ನಲವತ್ತುಸಾವಿರ ರೂಪಾಯಿಗಳ ಆತಿಥ್ಯ ಭತ್ಯವನ್ನು ಸಂದಾಯ ಮಾಡತಕ್ಕದ್ದು.

★★★ ★★★ ★★★

8. ಸಭಾಪತಿ, ಉಪ ಸಭಾಪತಿ, ಸಭಾಧ್ಯಕ್ಷ ಉಪ ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕರು ಮತ್ತು ಸರ್ಕಾರದ ಮುಖ್ಯ ಸಚೇತಕರು ಪ್ರವಾಸದಲ್ಲಿರುವಾಗ ಪ್ರಯಾಣದಲ್ಲಿರುವಾಗ ಪ್ರಯಾಣ ಮತ್ತು ಇತರ ಭತ್ಯೆಗಳು (1) ★★ ★★ ★★

(2) ಭಾರತದೊಳಗೆ ಪ್ರವಾಸದಲ್ಲಿರುವಾಗ, ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ, ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕರು ಮತ್ತು ಸರ್ಕಾರದ ಮುಖ್ಯ ಸಚೇತಕನು;

(ಎ) ★★ ★★ ★★

(ಬಿ) ರಸ್ತೆಯ ಪ್ರಯಾಣಗಳಿಗೆ.ಪ್ರತಿ ಕಿಲೋಮೀಟರಿಗೆ ಆರು ರೂಪಾಯಿನಂತೆ ರಸ್ತೆ ಮೈಲಿ ದರಕ್ಕೆ;

★★★ ★★★ ★★★

(ಡಿ) ಪ್ರಯಾಣದ ದಿನಗಳಿಗೆ ಮತ್ತು ಯಾವುದೇ ಸ್ಥಳದಲ್ಲಿ ತಂಗುವ ದಿನಗಳಿಗೆ ಇನ್ನೂರ ಐವತ್ತು ರೂಪಾಯಿಗಳಂತೆ ದಿನ ಭತ್ಯಕ್ಕೆ;

ಪರಂತು ರಾಜ್ಯದ ಹೊರಗಡೆಯ ಪ್ರವಾಸದ ಸಂದರ್ಭದಲ್ಲಿ ಪ್ರಯಾಣದ ದಿನಗಳಿಗೆ

ಮತ್ತು ಯಾವುದೇ ಸ್ಥಳದಲ್ಲಿ ತಂಗುವ ದಿನಗಳಿಗೆ ಪ್ರತಿ ದಿನಕ್ಕೆ ಮುನ್ನೂರ ಐವತ್ತು ರೂಪಾಯಿಗಳಂತೆ ದಿನಭತ್ಯ ಸಂದಾಯ ಮಾಡತಕ್ಕದ್ದು.

10. ಉಪ ಸಭಾಪತಿ ಮತ್ತು ಉಪಾಧ್ಯಕ್ಷರ ವೇತನಗಳು.- (1)

★★ ★★ ★★

(2) ಪ್ರತಿಯೊಬ್ಬ ಉಪಸಭಾಪತಿ ಮತ್ತು ಉಪಾಧ್ಯಕ್ಷರಿಗೆ ಮುನ್ನೂರು ಲೀಟರ್ ಪೆಟ್ರೋಲ್ ಬೆಲೆಗೆ ಸಮನಾದ ವಾಹನ ಭತ್ಯವು ಸಂದಾಯವಾಗತಕ್ಕುದು.

★★ ★★ ★★

10ಡಿ. ಉಪ ಸಭಾಪತಿ ಮತ್ತು ಉಪಾಧ್ಯಕ್ಷ ಮತ್ತು ಸರ್ಕಾರದಿಂದ ಸಂದಾಯವಿರುವ ವೆಚ್ಚಗಳು:

(1) ಉಪ ಸಭಾಪತಿ ಮತ್ತು ಉಪಾಧ್ಯಕ್ಷರು 10ಬಿ ಪ್ರಕರಣದ (1)ನೇ ಉಪ-ಪ್ರಕರಣದ ಮತ್ತು 10ಸಿ ಪ್ರಕರಣದ ಅಡಿಯಲ್ಲಿ ತಮ್ಮ ಉಪಯೋಗಕ್ಕೆಂದು ಹಂಚಲಾದ ತಮ್ಮ ತಮ್ಮ ನಿವಾಸಗಳು ಮತ್ತು ಮೋಟಾರು ವಾಹನಗಳ ಸಂಬಂಧದಲ್ಲಿ ಈ ಮುಂದಿನ ವೆಚ್ಚಗಳನ್ನು ಸಂದಾಯ ಮಾಡಲು ಬದ್ಧರಾಗಿರತಕ್ಕದು, ಎಂದರೆ:

(ಎ) ಸರ್ಕಾರದಿಂದ ಸಂದಾಯವಾದ ಮುನ್ನೂರು ಲೀಟರ್ ಪೆಟ್ರೋಲಿನ ಬೆಲೆಯನ್ನು ಮೀರಿ ತಮ್ಮ ತಮ್ಮ ಮೋಟಾರು ವಾಹನಗಳಿಗೆ ಅಗತ್ಯವಾದ ಪೆಟ್ರೋಲಿನ ಬೆಲೆ ಮತ್ತು.

★★ ★★ ★★

10ಜಿ. ವಿರೋಧ ಪಕ್ಷದ ನಾಯಕರಿಗೆ ವಾಹನ ಸೌಕರ್ಯಗಳು- (1)

★★ ★★ ★★

(2) ಪ್ರತಿಯೊಬ್ಬ ವಿರೋಧ ಪಕ್ಷದ ನಾಯಕರಿಗೆ ತಿಂಗಳೊಂದಕ್ಕೆ ಮುನ್ನೂರು ಲೀಟರ್ ಪೆಟ್ರೋಲ್ ಬೆಲೆಗೆ ಸಮನಾದ ವಾಹನ ಭತ್ಯವು ಸಂದಾಯವಾಗತಕ್ಕುದು,

10ಐ. ವಿರೋಧ ಪಕ್ಷದ ನಾಯಕ ಮತ್ತು ಸರ್ಕಾರದಿಂದ ಸಂದಾಯವಾಗುವ ವೆಚ್ಚಗಳು:

★★ ★★ ★★

(1) ಪ್ರತಿಯೊಬ್ಬ ವಿರೋಧ ಪಕ್ಷದ ನಾಯಕನು 10ಎಫ್ ಪ್ರಕರಣದ (1)ನೇ

ಉಪ-ಪ್ರಕರಣದ ಮತ್ತು 10ಜಿ ಪ್ರಕರಣದ ಅಡಿಯಲ್ಲಿ ತನ್ನ ಉಪಯೋಗಕ್ಕೆಂದು ಹಂಚಲಾದ ನಿವಾಸ ಮತ್ತು ಮೋಟಾರು ಕಾರಿನ ಸಂಬಂಧದಲ್ಲಿ ಈ ಮುಂದಿನ ವೆಚ್ಚಗಳನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದು, ಎಂದರೆ:

(ಎ) ಸರ್ಕಾರದಿಂದ ಸಂದಾಯವಾದ ಮುನ್ನೂರು ಲೀಟರ್ ಪೆಟ್ರೋಲ್‌ನ ಬೆಲೆಯನ್ನು ಮೀರಿ ತಮ್ಮ ತಮ್ಮ ಮೋಟಾರು ವಾಹನಗಳಿಗೆ ಅಗತ್ಯವಾದ ಪೆಟ್ರೋಲ್‌ನ ಬೆಲೆ ಮತ್ತು

10ಎಲ್. ಸರ್ಕಾರದ ಮುಖ್ಯ ಸಚೇತಕರಿಗೆ ವಾಹನ ಸೌಕರ್ಯಗಳು.- (1)

★★ ★★ ★★

(2) ಪ್ರತಿಯೊಬ್ಬ ಸರ್ಕಾರದ ಮುಖ್ಯ ಸಚೇತಕರಿಗೆ ತಿಂಗಳಿಗೆ ಮುನ್ನೂರು ಲೀಟರ್ ಪೆಟ್ರೋಲ್ ಬೆಲೆಗೆ ಸಮಾನವಾದ ವಾಹನ ಭತ್ಯೆಯು ಸಂದಾಯವಾಗತಕ್ಕದು.

10ಎನ್. ಸರ್ಕಾರದ ಮುಖ್ಯ ಸಚೇತಕರು ಮತ್ತು ಸರ್ಕಾರದ ಸಂದಾಯಮಾಡುವ ವೆಚ್ಚಗಳು: (1) ಪ್ರತಿಯೊಬ್ಬ ಸರ್ಕಾರದ ಮುಖ್ಯ ಸಚೇತಕರು 10ಕೆ ಪ್ರಕರಣದ (1)ನೇ ಉಪ-ಪ್ರಕರಣದ ಮತ್ತು 10ಎಲ್ ಪ್ರಕರಣದ ಅಡಿಯಲ್ಲಿ ತನ್ನ ಉಪಯೋಗಕ್ಕೆಂದು ಹಂಚಲಾದ ನಿವಾಸ ಮತ್ತು ಮೋಟಾರು ಕಾರುಗಳ ಸಂಬಂಧದಲ್ಲಿ ಈ ಮುಂದಿನ ವೆಚ್ಚಗಳನ್ನು ಸಂದಾಯ ಮಾಡಲು ಬದ್ಧರಾಗಿರತಕ್ಕದು, ಎಂದರೆ:

(ಎ) ಸರ್ಕಾರದಿಂದ ಸಂದಾಯವಾದ ಮುನ್ನೂರು ಲೀಟರ್ ಪೆಟ್ರೋಲಿನ ಬೆಲೆಯನ್ನು ಮೀರಿ ತಮ್ಮ ತಮ್ಮ ಮೋಟಾರು ವಾಹನಗಳಿಗೆ ಅಗತ್ಯವಾದ ಪೆಟ್ರೋಲಿನ ಬೆಲೆ; ಮತ್ತು

★★ ★★ ★★

11. ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರ ವೇತನಗಳು:

(1) ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಪ್ರತಿಯೊಬ್ಬ ಸದಸ್ಯನಿಗೆ ಪ್ರತಿ ತಿಂಗಳಿಗೆ ಎರಡು ಸಾವಿರ ರೂಪಾಯಿ ವೇತನವನ್ನು ಸಂದಾಯ ಮಾಡತಕ್ಕದ್ದು, ಅದು ಅವನು ಯುಕ್ತವಾಗಿ ಚುನಾಯಿತನಾಗಿರುವನೆಂದು ಘೋಷಿಸಲಾದ ದಿನಾಂಕದಿಂದ, ಅಥವಾ ವಿಧಾನಸಭೆ ಅಥವಾ ವಿಧಾನ ಪರಿಷತ್ತಿನಲ್ಲಿಯ ಒಂದು ಸ್ಥಾನವನ್ನು ಭರ್ತಿ ಮಾಡಲು ಸರ್ಕಾರದಿಂದ ನಾಮನಿರ್ದೇಶಿತನಾದ ಸದಸ್ಯನಾಗಿದ್ದ ಸಂದರ್ಭದಲ್ಲಿ, ಅವನು ಹಾಗೆ ನಾಮನಿರ್ದೇಶಿತನಾದ ದಿನಾಂಕದಿಂದ ಅಥವಾ ಖಾಲಿ ಸ್ಥಾನವು ಉಂಟಾಗುವುದಕ್ಕೆ ಮುಂದೆ ಅಂಥ ಘೋಷಣೆಯನ್ನು ಅಥವಾ ನಾಮ ನಿರ್ದೇಶನವನ್ನು ಮಾಡಲಾಗಿದ್ದರೆ, ಖಾಲಿ ಸ್ಥಾನವು ಉಂಟಾದ ದಿನಾಂಕದಿಂದ ಅವನಿಗೆ ಜಮೆಯಾಗತಕ್ಕದ್ದು.

★★ ★★ ★★

11ಎ. ಸದಸ್ಯರಿಗೆ ನಿವೃತ್ತಿ ವೇತನ ಇತ್ಯಾದಿ.- (1) 1978ರ ಕರ್ನಾಟಕ ವಿಧಾನ ಮಂಡಲದವರ ವೇತನಗಳ (ತಿದ್ದುಪಡಿ) ಅಧಿನಿಯಮ 1ನೇ ಪ್ರಕರಣದ ಪ್ರಾರಂಭದಿಂದ ಪರಿಣಾಮಕಾರಿಯಾಗುವಂತೆ.-

(ಎ) (i) ವಿಧಾನ ಪರಿಷತ್ತಿನ ಸದಸ್ಯನಾಗಿ, ಅಥವಾ

(ii) ವಿಧಾನ ಸಭೆಯ ಸದಸ್ಯನಾಗಿ, ಅಥವಾ

(iii) ಭಾಗಶಃ ವಿಧಾನ ಸಭೆಯ ಸದಸ್ಯನಾಗಿ ಮತ್ತು ಭಾಗಶಃ ವಿಧಾನ ಪರಿಷತ್ತಿನ ಸದಸ್ಯನಾಗಿ 1952ರ ಜನವರಿ ಮೊದಲನೆಯ ದಿನದ ತರುವಾಯ ಐದು ವರ್ಷಗಳ ಅವಧಿಗೆ ಸೇವೆ ಸಲ್ಲಿಸಿದ ಪ್ರತಿಯೊಬ್ಬ ವ್ಯಕ್ತಿಗೂ ಪ್ರತಿ ತಿಂಗಳಿಗೂ ಒಂದು ಸಾವಿರದ ಇನ್ನೂರು ರೂಪಾಯಿಗಳ ನಿವೃತ್ತಿ ವೇತನವನ್ನು ಅವನ ಜೀವಿತದ ಉಳಿದ ಅವಧಿಯವರೆಗೆ ಸಂದಾಯ ಮಾಡತಕ್ಕದ್ದು.

ಪರಂತು, ಯಾವನೇ ವ್ಯಕ್ತಿಯು ಮೇಲೆ ತಿಳಿಸಿದಂತೆ ಐದು ವರ್ಷಗಳಿಗಿಂತಲೂ ಹೆಚ್ಚು ಸೇವೆಯನ್ನು ಸಲ್ಲಿಸಿದ್ದರೆ, ಅವನಿಗೆ ಇದರೊಂದಿಗೆ, ತರುವಾಯದ ಪೂರ್ಣಗೊಂಡ ಪ್ರತಿವರ್ಷಕ್ಕೆ ತಿಂಗಳಿಗೆ ಒಂದು ನೂರು ರೂಪಾಯಿಗಳಂತೆ ಆದರೆ ಪ್ರತಿ ತಿಂಗಳಿಗೆ ಎರಡು ಸಾವಿರ ರೂಪಾಯಿಗಳ ನಿವೃತ್ತಿವೇತನದ ಗರಿಷ್ಟಮಿತಿಗೊಳಪಟ್ಟು ಹೆಚ್ಚಿನ ನಿವೃತ್ತಿ ವೇತನವನ್ನು ಸಂದಾಯ ಮಾಡತಕ್ಕದ್ದು.

(1ಎ) (1)ನೇ ಉಪ-ಪ್ರಕರಣದ (ಎ) ಮತ್ತು (ಬಿ) ಖಂಡಗಳ ಅಡಿಯಲ್ಲಿ ಸದಸ್ಯನಿಗೆ ಸಂದಾಯವಾಗತಕ್ಕ ವಿಶ್ರಾಂತಿ ವೇತನವು ತಿಂಗಳಿಗೆ ಸರಾಸರಿ ಎರಡು ಸಾವಿರ ರೂಪಾಯಿಗಳನ್ನು ಮೀರತಕ್ಕದ್ದಲ್ಲ.

(5) (1)ನೇ ಉಪ-ಪ್ರಕರಣದ (ಎ) ಮತ್ತು (ಬಿ) ಖಂಡಗಳಡಿ ನಿವೃತ್ತಿ ವೇತನ ಪಡೆಯಲು ಹಕ್ಕುಳ್ಳವನಾಗಿರುವಂಥ ಪ್ರತಿಯೊಬ್ಬ ಸದಸ್ಯನು,-

(i) ವರ್ಗಾವಣೆ ಮಾಡಬಾರದ ಒಂದು ಪಾಸನ್ನು ನೀಡತಕ್ಕದ್ದು, ಇದರಿಂದ ಆತನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ರಸ್ತೆ ಸಾರಿಗೆ ಸೇವೆಗಳ ಮೂಲಕ ಕರ್ನಾಟಕದಲ್ಲಿನ ಆತನ ಸಾಮಾನ್ಯ ವಸತಿ ಸ್ಥಳದಿಂದ ಕರ್ನಾಟಕದಲ್ಲಿನ ಯಾವುದೇ ಸ್ಥಳಕ್ಕೆ ಯಾವುದೇ ಕಾಲದಲ್ಲಿ ಅದರಲ್ಲಿ ನಿಯಮಿಸಬಹುದಾದಂಥ, ದರ್ಜೆಯ ಸೌಲಭ್ಯದಲ್ಲಿ ಒಂದು ವರ್ಷದಲ್ಲಿ ಹನ್ನೆರಡು ಬಾರಿಗೆ ಮೀರದಂತೆ ಪ್ರಯಾಣ ಮಾಡಲು ಮತ್ತು ಅಲ್ಲಿಂದ ಹಿಂತಿರುಗಿ ಪ್ರಯಾಣ ಮಾಡುವುದಕ್ಕೆ ಹಕ್ಕುಳ್ಳವನಾಗಿರತಕ್ಕುದು.

(ii) ರಾಜ್ಯ ಸರ್ಕಾರದಿಂದ ನಿರ್ವಹಿಸಲಾಗುವ ಆಸ್ಪತ್ರೆಗಳಲ್ಲಿ ಮತ್ತು

ಚಿಕಿತ್ಸಾಲಯಗಳಲ್ಲಿ ನಿಯಮಿಸಬಹುದಾದ ಅಂಥ ಉಚಿತವಾಗಿ ಇರುವುದಕ್ಕೆ ಮತ್ತು ಅಂಥ ಉಚಿತ ವೈದ್ಯಕೀಯ ಉಪಚಾರ ಮತ್ತು ಚಿಕಿತ್ಸೆಗೆ ಹಕ್ಕುಳ್ಳವನಾಗಿರತಕ್ಕದು;

11ಸಿ. ಆತಿಥ್ಯ ಭತ್ಯ.- (1) ವಿರೋಧ ಪಕ್ಷದ ನಾಯಕರಿಗೆ ವರ್ಷ ಒಂದಕ್ಕೆ ಇಪ್ಪತ್ತು ಸಾವಿರ ರೂಪಾಯಿಗಳ ಆತಿಥ್ಯ ಭತ್ಯವನ್ನು ಸಂದಾಯ ಮಾಡತಕ್ಕದ್ದು.

(2) ಉಪ ಸಭಾಪತಿ, ಉಪಸಭಾಧ್ಯಕ್ಷ ಮತ್ತು ಸರ್ಕಾರದ ಮುಖ್ಯ ಸಚೇತಕರಿಗೆ ವರ್ಷ ಒಂದಕ್ಕೆ ಹನ್ನೆರಡು ಸಾವಿರ ರೂಪಾಯಿಗಳ ಆತಿಥ್ಯ ಭತ್ಯವನ್ನು ಸಂದಾಯ ಮಾಡತಕ್ಕದ್ದು.

12. ವಿಧಾನಸಭಾ ಮತ್ತು ವಿಧಾನಪರಿಷತ್ತಿನ ಸದಸ್ಯರಿಗೆ ಪ್ರಯಾಣ ಮತ್ತು ದಿನಭತ್ಯಗಳು ಮತ್ತು ವೈದ್ಯಕೀಯ ಹಾಗೂ ಇತರ ಸೌಲಭ್ಯಗಳು.

ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು,-

(ಎ) ವಿಧಾನ ಸಭೆಯ ಮತ್ತು ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ನಿರ್ದಿಷ್ಟಪಡಿಸಬಹುದಾದ ಅಂಥ ಷರತ್ತುಗಳಿಗೊಳಪಟ್ಟು ಮಾಡಿದ ಯಾವುದೇ ಬಗೆಯ ಪ್ರಯಾಣಕ್ಕಾಗಿ, ಒಂದು ಕಿಲೋ ಮೀಟರಿಗೆ ನಾಲ್ಕು ರೂಪಾಯಿ ಐವತ್ತು ಪೈಸೆಯ ದರದಂತೆ ಪ್ರಯಾಣ ಭತ್ಯೆಯನ್ನು ಸಂದಾಯ ಮಾಡತಕ್ಕದ್ದು ಮತ್ತು ಬಾಡಿಗೆ ಸಂದಾಯ ಮಾಡದೆ ಎಲ್ಲ ಸದಸ್ಯರಿಗೆ ಅವರು ಇರಲು ಅಗತ್ಯವಿರುವ ಸ್ಥಳದಲ್ಲಿ ಸಂಪೂರ್ಣ ಸುಸಜ್ಜಿತ ವಸತಿ ಸೌಕರ್ಯವನ್ನು ಸಹ ಒದಗಿಸತಕ್ಕದ್ದು ಮತ್ತು ಅಂಥ ವಸತಿ ಸೌಕರ್ಯವನ್ನು ಒದಗಿಸದಿದ್ದಲ್ಲಿ ಸಭೆಯ ಕಾಲದಲ್ಲಿ ದಿನವೊಂದಕ್ಕೆ ಇಪ್ಪತ್ತೈದು ರೂಪಾಯಿಗಳ ಭತ್ಯೆ ಸಂದಾಯ ಮಾಡತಕ್ಕದ್ದು ಮತ್ತು ಸಭೆಯು ಪ್ರಾರಂಭವಾಗುವುದಕ್ಕೆ ಮುಂದಿನ ಎರಡು ದಿನಗಳಿಗೆ ಮತ್ತು ಸಭೆಯು ಮುಕ್ತಾಯವಾದ ಎರಡು ದಿನಗಳ ತರುವಾಯಕ್ಕಾಗಿ ದಿನ ಭತ್ಯೆಯನ್ನು ಸಂದಾಯ ಮಾಡತಕ್ಕದ್ದು.

(ಬಿ) (i) ಸಭೆಗೆ ಹಾಜರಾದುದಕ್ಕಾಗಿ ಎಲ್ಲ ಸದಸ್ಯರಿಗೆ ದಿನಭತ್ಯೆಯನ್ನು ಮತ್ತು ಸಭೆಗಳ ಮಧ್ಯೆ ಬರುವ ನಿರ್ದಿಷ್ಟಪಡಿಸಲಾದ ಸಂಖ್ಯೆಯ ರಜಾದಿನಗಳು, ಮಧ್ಯಂತರಗಳು ಅಥವಾ ಗೈರು ಹಾಜರಿಗಾಗಿ, ರಾಜ್ಯದೊಳಗಾದರೆ ದಿನಭತ್ಯೆಯನ್ನು ಒಂದು ದಿನಕ್ಕೆ ಇನ್ನೂರ ಐವತ್ತು ರೂಪಾಯಿಗಳಂತೆ ಮತ್ತು ಭಾರತದೊಳಗೆ ಆದರೆ ರಾಜ್ಯದ ಹೊರಗಾದರೆ ಒಂದು ದಿನಕ್ಕೆ ಮುನ್ನೂರ ಐವತ್ತು ರೂಪಾಯಿಗಳನ್ನು ಸಂದಾಯ ಮಾಡತಕ್ಕದ್ದು.

(ii) ★★ ★★ ★★

(ಸಿ) ಪ್ರತಿಯೊಬ್ಬ ಸದಸ್ಯ ಮತ್ತು ಅವನೊಂದಿಗೆ ವಾಸಿಸುತ್ತಿರುವ ಮತ್ತು ಅವನ ಮೇಲೆ ಅವಲಂಬಿತರಾದ ಅವನ ಕುಟುಂಬದ ಸದಸ್ಯರು,-

(i) ರಾಜ್ಯ ಸರ್ಕಾರವು ನಿರ್ವಹಿಸುವ ಆಸ್ಪತ್ರೆಗಳು ಮತ್ತು ಔಷಧಾಲಯಗಳಲ್ಲಿ ಉಳಿದುಕೊಳ್ಳುವುದಕ್ಕೆ ಮತ್ತು ನಿಯಮಿಸಬಹುದಾದಂಥ ವೈದ್ಯಕೀಯ ಶುಶ್ರೂಷೆ ಮತ್ತು ಚಿಕಿತ್ಸೆಯನ್ನು ಉಚಿತವಾಗಿ ಪಡೆಯುವುದಕ್ಕೆ;

** ** **

(ಸಿಸಿ) ಸಚಿವರು, ರಾಜ್ಯ ಸಚಿವರು, ಉಪಸಚಿವರು, ಸಭಾಧ್ಯಕ್ಷ, ಸಭಾಪತಿ, ಉಪಸಭಾಧ್ಯಕ್ಷ, ಉಪಸಭಾಪತಿ, ವಿರೋಧ ಪಕ್ಷದ ನಾಯಕರು ಮತ್ತು ಸರ್ಕಾರದ ಮುಖ್ಯ ಸಚೇತಕರೂ ಸೇರಿದಂತೆ ಪ್ರತಿಯೊಬ್ಬ ಸದಸ್ಯರು ನಿರ್ದಿಷ್ಟಪಡಿಸಬಹುದಾದಂಥ ನಿಯಮಗಳಿಗೊಳಪಟ್ಟು ಪ್ರತಿಯೊಂದು ಹಣಕಾಸು ವರ್ಷದಲ್ಲಿ ಅಂಥ ಸದಸ್ಯರನ್ನು ಒಂಟಿಯಾಗಿ ಅಥವಾ ಇತರ ವ್ಯಕ್ತಿಯೊಂದಿಗೆ ಯಾವುದೇ ದರ್ಜೆಯಲ್ಲಿ, ಭಾರತದ ಯಾವುದೇ ಭಾಗದಲ್ಲಿ ಮಾಡಿದ ಪ್ರಯಾಣಕ್ಕೆ ಸಂದಾಯ ಮಾಡಿದ ರೈಲು ದರವನ್ನು ಇಪ್ಪತ್ತು ಸಾವಿರ ರೂಪಾಯಿಗಳ ಗರಿಷ್ಟ ಮಿತಿಗೊಳಪಟ್ಟು ತುಂಬಿಕೊಳ್ಳಲು ಹಕ್ಕುಳ್ಳವರಾಗಿರತಕ್ಕುದ್ದು ಅಂಥ ಪ್ರಯಾಣಕ್ಕಾಗಿ ಯಾವುದೇ ಪ್ರಯಾಣ ಭತ್ಯೆ ಅಥವಾ ದಿನ ಭತ್ಯೆಗೆ ಸದಸ್ಯರು ಹಕ್ಕುಳ್ಳವನಾಗಿರತಕ್ಕದ್ದಲ್ಲ.

** ** **

(ಹೆಚ್) ಪ್ರತಿಯೊಬ್ಬ ಸದಸ್ಯನಿಗೆ-

(i) *** ** **

(ii) ಸಂಚಿತ ಭತ್ಯೆ ಎಂಬುದಾಗಿ ಐದುನೂರು ರೂಪಾಯಿಗಳನ್ನು;

Printed by The Director of Printing, Stationery & Publications, Government Press, Bangalore

F - 32 LA